
ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ

ಪಿಹೆಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಯಕ್ಕೆ
ಸಾದರ ಪಡಿಸಿದ ಸಂಶೋಧನಾ ಮಹಾಪ್ರಬಂಧ











ಸಂಶೋಧಕ
ಬಿ.ಎಲ್.ಲಮಾಣಿ

ಮಾರ್ಗದರ್ಶಕರು
ನಾಡೋಜ ಡಾ. ಜೆ.ಎಸ್.ಖಂಡೇರಾವ್
ಗುಲಬರ್ಗಾ







476

ಲಲಿತಕಲಾನಿಕಾಯ
ಶಿಲ್ಪ ಮತ್ತು ವರ್ಣ ಚಿತ್ರಕಲಾವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ.
ಬಾದಾಮಿ,ಬನಶಂಕರಿ
೨೦೧೧

Shri Mahantesh

476

AKSHARA GRANTHALAYA

ACC.NO. 049368

476

476



ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ

ಸಂಶೋಧಕ
ಬಿ.ಎಲ್. ಲಮಾಣಿ

ಮಾರ್ಗದರ್ಶಕರು
ನಾಡೋಜಡಾ. ಜೆ.ಎಸ್. ಖಂಡೇರಾವ
ಗುಲಬರ್ಗಾ

ಲಲಿತಕಲಾ ನಿಕಾಯ
ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ಬಾದಾಮಿ, ಬನಶಂಕರಿ
೨೦೧೧

759.95487
LAM C

049368

ಪ್ರಮಾಣ ಪತ್ರ

ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ ಎಂಬ ಶೀರ್ಷಿಕೆಯ ಸಂಶೋಧನೆ ಮಹಾಪ್ರಬಂಧವನ್ನು ನಾಡೋಜ ಡಾ. ಜೆ. ಎಸ್. ಖಂಡೇರಾವ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಡಿಲ್ಲವೆಂದು, ಪ್ರಮಾಣೀಕರಿಸುತ್ತೇನೆ.

ಬಿ. ಎಲ್. ಲಮಾಣಿ
ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ,
ಬನಶಂಕರಿ, ಬಾದಾಮಿ.

ದಿನಾಂಕ : 19-10-2011
ಸ್ಥಳ : ಬಾದಾಮಿ.

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ ವಿಧಾನ ಮತ್ತು ವ್ಯಾಪ್ತಿ



ಮಾನವನ ಪ್ರಾಚೀನತೆಯಲ್ಲಿ ಆದಿಮಾನವ ಹಂತದ್ದಂದು ಗಮನಿಸಿದಾಗ ಅವನ ಬದುಕಿನ ಊಹಾಚಿತ್ರವನ್ನು ಕಲ್ಪಿಸಿದಾಗ ಅವನ ಭಯ, ಆತಂಕ, ರೋಗ, ರುಜಿನ, ಭೂಕಂಪನ ಪ್ರವಾಹಗಳಿಗೆ ಅವನು ತೋರುತ್ತಿದ್ದ ಪ್ರತಿಕ್ರಿಯೆ ಹೇಗಿರಬಹುದಿತ್ತು ? ಬುದ್ದಿ ಬೆಳೆದ ನಂತರ ಅವನ ಪ್ರತಿಕ್ರಿಯೆ ದೇವ ದೈವದೊಡನೆ, ಆಚಾರ ವಿಚಾರದೊಡನೆ ಹೇಗಿರಬಹುದಿತ್ತು ? ಇಂತಹ ಪ್ರಶ್ನೆ ಹಾಕಿಕೊಂಡಾಗ ತನ್ನ ಸಮಾಧಾನಕ್ಕಾಗಿ ದುಃಖದ ಪ್ರತೀಕಾರಕ್ಕಾಗಿ ವಹಿಸಿಕೊಂಡ ಕಾರ್ಯಚಟುವಟಿಕೆಗಳೇ ಚಿತ್ರಕಲೆಗಳಾದವು ಎಂಬ ಅಭಿಪ್ರಾಯ ಸರಿಯೆನಿಸುತ್ತದೆ.[೧]

ಭಾರತೀಯ ಇತಿಹಾಸದಲ್ಲಿ ಪ್ರಾಚೀನ ಕಾಲದಿಂದಲೂ ಅನೇಕ ರಾಜಮನೆತನದ ರಾಜರುಗಳು, ಅಲ್ಲಿನ ಮಂತ್ರಿಗಳು, ಲಲಿತಕಲೆಗಳ ಬಗೆಗೆ ಉನ್ನತವಾದ ಸ್ಥಾನಮಾನ ಕೊಟ್ಟು ಕಲಾವಿದರನ್ನು ಬೆಳೆಸಿಕೊಂಡು ಬಂದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.[೨] ಕರ್ನಾಟಕದ ಕಲಾಸಂಸ್ಕೃತಿಯನ್ನು ಪ್ರಾಚೀನ ಕಾಲದಿಂದಲೂ ಅವಲೋಕಿಸುತ್ತ ಬಂದಾಗ ಈ ನಾಡಿನಲ್ಲಿ ಆಳಿದಂತಹ ಎಲ್ಲ ರಾಜಮನೆತನಗಳೂ ಕಲೆಯನ್ನು ಪೋಷಿಸಿಕೊಂಡು ಬಂದಿವೆ ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯ ಹಾಗೂ ಅವರ ಹಿಂದಿನ ಅನೇಕ ಪೂರ್ವಜರು, ಮೊಘಲ ರಾಜಮನೆತನದವರು, ಕದಂಬರು, ಹೊಯ್ಸಳರು, ಮೈಸೂರು ಅರಸರು, ಚಾಲುಕ್ಯರು, ಮುಂತಾದ ಅನೇಕ ರಾಜರುಗಳು ಕಲೆಯ ಆರಾಧಕರಾಗಿದ್ದರಲ್ಲದೇ ಇಂದು ನಾವೆಲ್ಲರೂ ವೀಕ್ಷಣೆಗೆಂದು ಹೋಗುವ ಅನೇಕ ಭಾಗಗಳಲ್ಲಿ ಕಂಡುಬರುವ ಐತಿಹಾಸಿಕ ದೇವಾಲಯಗಳು ಗುಹೆಗಳು, ಸ್ಮಾರಕಗಳು, ವೀರಗಲ್ಲುಗಳು ಮುಂತಾದ ಹಲವಾರು ಕುರುಹುಗಳಿಂದ ತಿಳಿಯಬಹುದಾಗಿದೆ. ಕರುನಾಡ ಪೂರ್ವ ಭಾಗದಲ್ಲಿ ಐತಿಹಾಸಿಕ ಹಂಪಿ, ಬಳ್ಳಾರಿ ಕೋಟೆ ಕೊತ್ತಲಗಳು, ರಾಯಚೂರಿನ ಕೋಟೆ ಕೊತ್ತಲಗಳು, ಗುಲಬರ್ಗಾ ಮತ್ತು ಬೀದರ್ನ ಸ್ಮಾರಕಗಳು, ಉತ್ತರ ಭಾಗದ ಬಿಜಾಪೂರ ಆದಿಲ್‌ಷಾಹಿ ರಾಜರ ಐತಿಹಾಸಿಕ ಗೋಲಗುಂಬಜ, ಬಾರಾಕಮಾನ, ಜುಮ್ಮಾ ಮಸ್‌ಜೀದ್, ವಿವಿಧ ಸ್ಮಾರಕಗಳು, ದಕ್ಷಿಣದ ಮೈಸೂರು ರಾಜರ ಸ್ಮಾರಕಗಳು ಅರಮನೆಗಳು, ಟಿಪ್ಪು ಸ್ಮಾರಕಗಳು, ಚಿತ್ರದುರ್ಗದ ಕೋಟೆಕೊತ್ತಲಗಳು. ಪಶ್ಚಿಮ ಭಾಗದ ಕದಂಬರ

೧. ಡಾ. ಎಸ್.ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ ಪು.ಸಂ. ೧೭

೨. ಡಾ. ಎಸ್.ಸಿ. ಪಾಟೀಲ ಸಂ. ನಿತ್ಯಾನಂದ ಪಾತ್ರೋಟ ನಿಜದ ನಲೆ ಪು.ಸಂ. ೨೩

ದೇವಾಲಯಗಳು. ಸ್ಮಾರಕಗಳು, ಬೇಲೂರು, ಹಳೇಬಿಡು ದೇವಾಲಯಗಳು ಮಧ್ಯ ಕರ್ನಾಟಕದ ಗದಗನ ವೀರನಾರಾಯಣ, ತ್ರಿಕೋಟೇಶ್ವರ ದೇವಾಲಯಗಳ ಸಂಕೀರ್ಣ, ಕರಿದೇವರ ಗುಡಿ ಎಂದೇ ಪ್ರಖ್ಯಾತವಾದ ಗದಗ ನಗರದ ಮಧ್ಯವರ್ತಿ ಸ್ಥಳದಲ್ಲಿರುವ ಕರಿದೇವರ ಗುಡಿ, ಬೆಟಗೇರಿಯ ಟೆಂಗಿನಕಾಯಿ ಬಜಾರದ ಪಕ್ಕದಲ್ಲಿರು ಅನೇಕ ಸ್ಮಾರಕಗಳು, ಅಣ್ಣಿಗೇರಿಯ ಅಮೃತೇಶ್ವರ ದೇವಾಲಯ, ಸ್ಮಾರಕಗಳು ಹೀಗೆ ಹೆಸರಿಸುತ್ತ ಹೋದಂತೆ ಇನ್ನೂ ಅನೇಕ, ಸ್ಮಾರಕಗಳು ಕರ್ನಾಟಕದಲ್ಲಿ ಕಂಡಬುರತ್ತವೆ. ಇವೆಲ್ಲವೂ ಕಲೆಯನ್ನು ಕುರಿತು ಪೂರ್ವಜರಿಗಿದ್ದ ಜ್ಞಾನದ ಸಂಕೇತವೆಂದೆ ಪರಿಗಣಿಸಬೇಕಾಗುತ್ತವೆ.

ಕರ್ನಾಟಕದ ಸಂಸ್ಕೃತಿಯನ್ನು ಅಧ್ಯಯನ ಮಾಡುವಲ್ಲಿ ಸಂಸ್ಕೃತಿಯ ಬಹುಮುಖ್ಯ ಅಮಶವಾಗಿರುವ ಲಲಿತಕಲೆಗಳ ಪಾತ್ರ ತುಂಬಾ ಮೌಲಿಕವಾದದು. ಯಾವುದೇ ಒಂದು ಕಲಾ ಪರುಪರೆಯ ಬೆಳವಣಿಗೆ ಹಿಂದೆ ಆ ಸಂಸ್ಕೃತಿಯ ತಾಯಿ ಬೇರುಗಳಿರುವುದನ್ನು ಪ್ರಮುಖವಾಗಿ ಗುರುತಿಸಲಾಗುತ್ತದೆ.

ನಮ್ಮ ದೇಶದ ಅಥವಾ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಇತಿಹಾಸವನ್ನು ನೋಡಿದಾಗ ಚಿತ್ರ, ಶಿಲ್ಪ, ಸಂಗೀತ, ನೃತ್ಯ, ನಾಟಕ, ತೊಗಲು ಬೊಂಬೆಯಾಟ, ದೊಡ್ಡಾಟ, ಮುಂತಾದ ಶಿಸ್ತುಬದ್ಧ ಕಲೆಗಳಲ್ಲದೆ ಪೂರ್ವಿಕರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಮನರಂಜನೆಗಳಿಗಾಗಿ ಹಲವಾರು ಜನಪದ ಕಲೆಗಳು ವ್ಯಾಪಕವಾಗಿ ಬೆಳೆದುಬಂದಿವೆ. ಇಂತಹ ಜನಪದ ಕಲೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಜನಪದರು ತಮ್ಮ ನಿತ್ಯದ ಜೀವನದ ಜೊತೆಗೆ ಕಲೆಯನ್ನು ಪ್ರೋತ್ಸಾಹಿಸಿ ಪೋಷಿಸಿಕೊಂಡು ಬಂದುದರ ಬಗ್ಗೆ ವಿವರಣೆ ನೀಡಲಾಗಿದೆ. ಅದಲ್ಲದೆ ಕರ್ನಾಟಕದಲ್ಲಿ ಚಿತ್ರಕಲೆಯ ಬೆಳವಣಿಗೆಯ ಕುರಿತು ಇತಿಹಾಸವನ್ನು ನೋಡಿದಾಗ ಭಾರತದಲ್ಲಿ ಚಿತ್ರಕಲೆಯು ವಿವಿಧ ಆಯಾಮಗಳನ್ನು ಪಡೆದುಕೊಂಡು ಬಂದು ಇಂದು ಅತ್ಯಂತ ಮಹತ್ವದ ಕ್ಷೇತ್ರವಾಗಿದೆ ಎನ್ನಬಹುದು. ಬ್ರಿಟೀಷರು ಭಾರತದಲ್ಲಿ ಅಂದು ಪ್ರಾರಂಭಿಸಿದ ಕಲಾಶಾಲೆಗಳ ಪರಿಣಾಮವಾಗಿಯೇ ಇಂದು ಭಾರತದಲ್ಲಿ ವಿವಿಧ ಪ್ರಕಾರಗಳ ಚಿತ್ರಕಲಾ ಅಧ್ಯಯನ, ಶೈಲಿ, ಮಾಧ್ಯಮಗಳು ಬೆಳೆದು ಬಂದಿವೆ. ಅದರಲ್ಲೂ ಕಲ್ಕತ್ತಾ ಮತ್ತು ಉಂಬಯಿ ಕಲಾಶಾಲೆಗಳ ಕಲಾವಾತಾವರಣದಿಂದಾಗಿ ಭಾರತದಲ್ಲಿ ಚಿತ್ರಕಲೆಯು ಅತ್ಯಂತ ಪರಿಣಾಮಕಾರಿಯಾಗಿ ಬೆಳೆದು ಬಂದಿರುವುದನ್ನು ಅರಿತುಕೊಳ್ಳಬಹುದಾಗಿದೆ. ಅಂತೆಯೇ ಕಲ್ಕತ್ತಾ ಮತ್ತು ಮುಂಬಯಿ ಕಲಾಶಾಲೆಗಳಲ್ಲಿ ಅಧ್ಯಯನ ಮಾಡಿದ ಕರ್ನಾಟಕದ ಹಿರಿಯ ಕಲಾವಿದರು ತಮ್ಮ ನಾಡಿನ ಕಲಾಸೇವೆಗೋಸ್ಕರ ತಮ್ಮ ಜೀವನದುದ್ದಕ್ಕೂ ಅನೇಕ ಕಲಾಕೃತಿಗಳನ್ನು ರಚನೆ ಮಾಡಿ ಸಮಾಜಕ್ಕೆ ಇಂದು ಬಿಟ್ಟುಹೋಗಿದ್ದಾರೆ. ಅದರ ಪ್ರತಿಫಲವೆಂಬಂತೆ ಇಂದು ಕರ್ನಾಟಕದಲ್ಲಿ ಚಿತ್ರಕಲೆಯು ಅತ್ಯಂತ ಶ್ರೀಮಂತವಾಗಿದೆ. ಎಂದು ಹೇಳಲು ಹೆಮ್ಮೆಯಾಗುತ್ತದೆ.

ಕರ್ನಾಟಕದ ದಕ್ಷಿಣ ಭಾಗದಲ್ಲಿ ಕೆಲವು ಜನ ಹಿರಿಯ ಕಲಾವಿದರು ಕಲ್ಕತ್ತಾ ಮತ್ತು ಮುಂಬಯಿ ಕಲಾಶಾಲೆಗಳಲ್ಲಿ ಕಲಿತು ನಾಡಿಗೆ ತಮ್ಮ ಕೊಡುಗೆ ನೀಡಿದ್ದಾರೆ. ಇನ್ನು ಉತ್ತರ ಕರ್ನಾಟಕದಲ್ಲಿ ಅತ್ಯಂತ ಗಣನೀಯ ಸಂಖ್ಯೆಯಲ್ಲಿ ಕಲ್ಕತ್ತಾ ಮತ್ತು ಮುಂಬಯಿ ಕಲಾಶಾಲೆಗಳಲ್ಲಿ ಚಿತ್ರಕಲಾ ಅಧ್ಯಯನ ಮಾಡಿ ನಾಡಿಗೆ ಉತ್ತಮ ಕೊಡುಗೆ ನೀಡಿದ್ದಾರೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಹಿರಿಯ ಕಲಾವಿದರನ್ನು ನಾವು ಕಾಣಬಹುದು. ಕನ್ನಡ ನಾಡಿನ ಒಂದೊಂದು ಜಿಲ್ಲೆಯೂ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಮೈಸೂರು ರಾಜಮನೆತನಕ್ಕೆ ಹಾಗೂ ಕಲಾಕ್ಷೇತ್ರಕ್ಕೆ ಅತ್ಯಂತ ಮಹತ್ವವನ್ನು ಕೊಟ್ಟಂತಹ ಜಿಲ್ಲೆಯಾಗಿದೆ. ಬೆಂಗಳೂರು ನಮ್ಮ ಕರ್ನಾಟಕದ ರಾಜಧಾನಿಯೇ ಆಗಿದೆ. ಇಲ್ಲಿ ಎಲ್ಲ

ಕಲೆಗಳ ಸಂಗಮವಾಗಿ ಬೆಂಗಳೂರು ಜಿಲ್ಲೆಯ ತನ್ನದೆ ಆದ ಗರಿಮೆಯನ್ನು ಹೊಂದಿದೆ. ಹಾಸನ ಜಿಲ್ಲೆಯು ಹೊಯ್ಸಳರ ಐತಿಹಾಸಿಕ ಬೇಲೂರು ಮತ್ತು ಹಳೆಬೀಡುಗಳ ಸ್ಮಾರಕಗಳನ್ನು ಹೊಂದಿ ತನ್ನ ಐತಿಹಾಸಿಕ ಪರಂಪರೆಯನ್ನು ಮೆರೆದಿದೆ. ಉಡುಪಿ, ಮಂಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ಕೋಲಾರ, ಮಡಿಕೇರಿ, ಬಳ್ಳಾರಿ, ಉತ್ತರ ಕನ್ನಡ, ದಾವಣಗೆರೆ, ಬಿಜಾಪುರ, ಬಾಗಲಕೋಟೆ, ಬೀದರ, ಗುಲಬರ್ಗಾ. ಧಾರವಾಡ, ಕೊಪ್ಪಳ, ಬೆಳಗಾವಿ ಮುಂತಾದ ಜಿಲ್ಲೆಗಳು ಐತಿಹಾಸಿಕ ಪರಂಪರೆಯನ್ನು ಮೆರೆದಿವೆ. ಚಿತ್ರಕಲೆ, ಸಂಗೀತ, ಸಾಹಿತ್ಯ, ನೃತ್ಯ, ಕ್ರೀಡೆ, ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮದೆ ಆದ ಉನ್ನತ ಪರಂಪರೆಗಳನ್ನು ಹೊಂದಿ ಕರ್ನಾಟಕವನ್ನು ಶ್ರೀಮಂತವಾಗಿಸಿವೆ. ಅದರಂತೆ ಐತಿಹಾಸಿಕ ಪರಂಪರೆಯನ್ನು ಹೊಂದಿದ ಗದಗ ಜಿಲ್ಲೆಯೂ ಸಹ ವಿಶಿಷ್ಟ ಪರಂಪರೆಯನ್ನು ಹೊಂದಿ ಕರ್ನಾಟಕದ ಇತರ ಜಿಲ್ಲೆಗಳಿಗೆ ಸಮನಾಗಿ ಚಿತ್ರಕಲೆ, ಸಂಗೀತ, ಸಾಹಿತ್ಯ, ಉದ್ದಿಮೆ, ನೇಕಾರಿಕೆ, ಕ್ರೀಡೆಗಳಂತಹ ಮಹತ್ವದ ಸಾಂಸ್ಕೃತಿಕ ರಾಜಧಾನಿಯಾಗಿ ಶ್ರೀಮಂತಿಕೆಯನ್ನು ಹೊಂದಿದೆ.

ಹೀಗೆ ಹಲವಾರು ಕ್ಷೇತ್ರದಲ್ಲಿ ಹೆಸರು ಮಾಡಿದ ಗದಗ ಜಿಲ್ಲೆಯು ಚಿತ್ರಕಲಾ ಕ್ಷೇತ್ರಕ್ಕೆ ಗದ್ದುಗೆಯಾಗಿದೆ ಎಂದರೆ ತಪ್ಪಾಗಲಾರದು. ಅನೇಕ ಹಿರಿಯ ಕಲಾವಿದರು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ಬೆಳಗಿಸಿಕೊಂಡಿದ್ದಾರೆ. ಅಂಥವರ ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಈ ದೃಶ್ಯಕಲಾ ಕ್ಷೇತ್ರಗಳಲ್ಲಿ ಗಣನೀಯವಾಗಿ ತಮ್ಮನ್ನು ಅರ್ಪಿಸಿಕೊಂಡು ಸೇವೆ ಸಲ್ಲಿಸಿದ ಅನೇಕ ಜನ ಹಿರಿಯ ಕಲಾವಿದರಿದ್ದಾರೆ. ಹಲವಾರು ಕಲಾವಿದರು ತಮ್ಮ ಅಮೂಲ್ಯವಾದ ಕಲಾಕೃತಿಗಳನ್ನು ಬಿಟ್ಟು ಹೋಗಿದ್ದಾರೆ.

ಚಿತ್ರಕಲೆಯನ್ನು ಗಮನಿಸಿದಾಗ ಭಾರತೀಯ ಪರಂಪರೆ ಹಾಗೂ ಪಾಶ್ಚಾತ್ಯರ ತಂತ್ರಗಳ ಅತ್ಯುತ್ತಮ ಸಮನ್ವಯವನ್ನು ಚಿತ್ರಕೃತಿಗಳನ್ನು ಸಾಧನೆ ಮಾಡಿದ ಬಹುಜನ ಕಲಾವಿದರು ನಮ್ಮಲ್ಲಿಆಗಿದ್ದಾರೆ. ಐತಿಹಾಸಿಕ, ಪೌರಾಣಿಕ, ಧಾರ್ಮಿಕ, ಚಿತ್ರಗಳನ್ನು ರಚಿಸಿ ಕಲಾಸಿದ್ಧಿ ಪಡೆದ ಸಂಪ್ರದಾಯ ನಿಷ್ಠೆ, ಕಲಾವಿದರಿಗೆ ಸ್ಪೂರ್ತಿಯಾಗಿ ಚಿತ್ರಕಲೆಯಿಂದ ಕಲಾವಿದ ಹೇಗೆ ಬದುಕಬಹುದು ಎಂಬುದನ್ನು ತೋರಿಸಿದ ಸುಖ-ದುಃಖದ ಬಾಳನ್ನು ಕಂಡುಕೊಂಡ ಹಿರಿಯ ಕಲಾವಿದರಿದ್ದಾರೆ. ಹಾಗೆಯೇ ರಾಜಾಶ್ರಯದಲ್ಲಿ ದುಡಿದ ಅತ್ಯುತ್ತಮ ಕಲಾವಿದರು, ಅಲಂಕಾರಿಕ, ಸೂಕ್ಷ್ಮಕಲೆ ಮತ್ತು ನೈಜ ಕಲೆಗಳಲ್ಲಿ ನವ್ಯ ಕಲಾತಂತ್ರದಲ್ಲಿ ಪ್ರಯೋಗ ನಡೆಸಿದ ಹಾಗೂ ನಡೆಸುತ್ತಿರುವ ಕಲಾವಿದರ ಸಾಧನೆ ಈ ನಾಡಿಗೆ ಕೀರ್ತಿ ತರುವುದರ ಜೊತೆಗೆ ಚಿತ್ರಕಲಾ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯನ್ನು ಪರಿಚಯಿಸಿದ ದಾಖಲೆಗಳನ್ನು ಮಾಡುವುದು ತುಂಬಾ ಮಹತ್ವದ್ದಾಗಿರುತ್ತದೆ. ಇತಿಹಾಸ ರಚಿಸುವ ಸಂಬಂಧದಲ್ಲಿ ಈ ದಾಖಲೆಗಳನ್ನು ಮಾಡುವುದು ತುಂಬಾ ಮಹತ್ವದ್ದಾಗಿರುತ್ತದೆ. ಇತಿಹಾಸ ರಚಿಸುವ ಸಂಬಂಧದಲ್ಲಿ ಈ ದಾಖಲೆಗಳು ಮಹತ್ವದ ಆಕರಗಳಾಗುತ್ತವೆ. ವಿದೇಶಿಯ ಕಲಾಪರಂಪರೆಯನ್ನು ಗಮನಿಸಿದಾಗ ಅಲ್ಲಿ ದಾಖಲೆಯ ಆಕಾರಗಳು ಹೇರಳವಾಗಿ ಲಬಿಸುತ್ತವೆ. ಇದಕ್ಕೆ ಕಾರಣ ಅಲ್ಲಿ ಕಲಾತಜ್ಞರ ದೂರದೃಷ್ಟಿ, ಕಲೆಯ ಬಗೆಗಿನ ಕಳಕಳಿ, ಕಾಳಜಿಗಳು ಗಮನಾರ್ಹವಾಗಿವೆ. ನಮ್ಮ ದೇಶದಲ್ಲಿ ಕಲೆಯ ತಾಣಗಳು, ಪ್ರಮುಖವಾದ ಕಲಾಕೃತಿಗಳು ಉಪಲಬ್ಧವಾದರೂ ಅದರ ಹಿಂದೆ ದುಡಿದ ಕಲಾವಿದರ ಕುರಿತಾದ ಯಾವುದೇ ಸ್ಪಷ್ಟವಾದ ಮಾಹಿತಿಗಳು ಉಪಲಬ್ಧವಾಗಿಲ್ಲ. ಇದಕ್ಕೆ ಕಾರಣಗಳು ಹಲವಾರು ಇರಬಹುದು. ಆದರೆ ಆ ಕಾರಣಗಳಿಂದಾಗಿ ಕಲೆ ಕಲಾವಿದರನ್ನು ಕುರಿತು ಸರಿಯಾದ ರೀತಿಯಲ್ಲಿ ಸಮಗ್ರವಾಗಿ ಅಧ್ಯಯನ ಮಾಡಲು ಸಾಧ್ಯವಾಗುತ್ತಿಲ್ಲ.

ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿಯೂ ನಾವು ಈ ಕೊರತೆಯನ್ನು ನಿಭಾಯಿಸಿಕೊಳ್ಳಬೇಕಾಗಿದೆ. ಸಮಕಾಲೀನ ಕಲೆ, ಕಲಾವಿದರ ಕುರಿತಾದ ಅಮೂಲ್ಯವಾದ ಸಾಧನೆ ಮಾಹಿತಿಯನ್ನು ಅವರ ಚಿಂತನಶೀಲ ವಿಚಾರಗಳನ್ನು ಅವರ ಕುರಿತು ಪ್ರಕಟಿತ ಸಾಹಿತ್ಯ ವಿಮರ್ಶೆಗಳನ್ನು ಅರ್ಥೈಸುವ ಅದರ ಹಿಂದೆ ದುಡಿದ ಕಲಾವಿದನ ಮನಸ್ಸನ್ನು ಪರಿಭಾವಿಸುವ ಹಲವಾರು ಅಂಶಗಳನ್ನು ತುಂಬಾ ಗಂಭೀರವಾಗಿ ಇಂದು ಬಹುಮುಖ್ಯವಾಗಿ ದಾಖಲಿಸಬೇಕಾಗಿದೆ.

ಇಂದು ಬೇರೆ ಬೇರೆ ಕ್ಷೇತ್ರಗಳನ್ನು ಗಮನಿಸಿದಾಗ ಆಯಾ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿದ್ದರೂ ಚಿತ್ರಕಲಾ ಕ್ಷೇತ್ರದಲ್ಲಿಯ ಸಂಶೋಧನೆ ತೀರಾ ಕಡಿಮೆ. ಆದರೆ ಈ ಕ್ಷೇತ್ರದ ಕೊಡಗೆ ಮಾತ್ರ ಅಪಾರವಾದದು. ಬಹುಶಃ ಬಹುಪಾಲು ಕಲಾವಿದರು ಉನ್ನತ ಶಿಕ್ಷಣದ ಕೊರತೆಯಿಂದ ಮತ್ತು ಕಲಾಕೃತಿಯ ರಚನೆಯ ಕಡೆಗೆ ಹೆಚ್ಚು ಒಲವು ತೋರಿಸದ ಕಾರಣದಿಂದ ಈಕಲಾಕ್ಷೇತ್ರದ ಅಧ್ಯಯನ ಕುಂಠಿತವಾಗುತ್ತ ಬಂದಿರುವುದನ್ನು ಗುರುತಿಸಬಹುದಾಗಿದೆ. ವಿಶ್ವವಿದ್ಯಾಲಯ ಹಂತದಲ್ಲಿ ೧೯೯೦ರ ದಶಕದಿಂದೀಚೆಗೆ ಈ ವಿಷಯ ಗಂಭೀರ ಅಧ್ಯಯನದ ವಿಷಯವಾಗಿ ಪರಿಗಣಿಸಲ್ಪಟ್ಟಿದೆ. ಇತ್ತೀಚೀಗೆ ಈ ಕ್ಷೇತ್ರದಲ್ಲಿ ಸಂಶೋಧನೆ ಇನ್ನುಳಿದ ಅನ್ಯ ಶಿಸ್ತುಗಳಂತೆ ಪ್ರಾರಂಭಗೊಂಡಿರುವುದು. ಸಂತೋಷದಾಯಕವಾಗಿದೆ.

ರಾಷ್ಟ್ರ ಅಂತರಾಷ್ಟ್ರೀಯ ಖ್ಯಾತಿ ಪಡೆದ ಸಾವಿರಾರು ಕಲಾಕೃತಿಗಳನ್ನು ನಿರ್ಮಿಸಿ. ತಮ್ಮದೇ ಆದ ಬಹುಮುಖ ವ್ಯಕ್ತಿತ್ವದಿಂದ ಕರ್ನಾಟಕದ ಕಲಾಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆ ನೀಡಿದ ನೂರಾರು ಕಲಾವಿದರ ಕುರಿತು ಅಧ್ಯಯನ ಆಗಬೇಕಾಗಿದೆ. ನೂರಾರು ಈ ಕ್ಷೇತ್ರದ ಮಹತ್ವದ ಅಂಶಗಳು ಬೆಳಕಿಗೆ ಬಂದು ನಮ್ಮ ಕಲಾ ಸಂಸ್ಕೃತಿಯ ಶ್ರೀಮಂತಿಕೆಯನ್ನು ಹೆಚ್ಚಿಸಲು ಸಹಕಾರಿಯಾಗಬಹುದು. ಆದರೆ ಅವು ನಿರಂತರ ಮುಂದಿನ ಪೀಳಿಗೆಗೆ ಪರಿಚಯವಾಗಬೇಕಾದರೆ ಅವರುಗಳ ಅಧ್ಯಯನ ಮೂಲಕ ಕಾರ್ಯರೂಪಕ್ಕೆ ತರುವುದು ಇಂದು ಬಹಳ ಅವಶ್ಯಕವಾಗಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು : ಕರ್ನಾಟಕದಲ್ಲಿ ದೃಶ್ಯಕಲೆಯ ಕ್ಷೇತ್ರದಲ್ಲಿ ಸಂಶೋಧನೆಯ ಅಧ್ಯಯನ ಪ್ರಾರಂಭಗೊಂಡಿರುವುದು ತೊಂಭತ್ತರ ದಶಕದ ಇತ್ತೀಚೆಗೆ ಎಂದು ಹೇಳಬಹುದು. ಬಹಳಷ್ಟು ತಡವಾಗಿ ದೃಶ್ಯಕಲೆಗಳ ಕುರಿತು ಸಂಶೋಧನಾ ಅಧ್ಯಯನ ವಿಶೇಷವಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ಫಿಲ್., ಪಿ ಎಚ್.ಡಿಯಂತಹ ಪದವಿಯ ಹಿನ್ನೆಲಯಲ್ಲಿ ಅಧ್ಯಯನ ನಡೆಯದೆ ಇರುವುದು ಕಂಡುಬರುತ್ತದೆ. ಇಷ್ಟು ತಡವಾಗಿ ಈ ಕ್ಷೇತ್ರದಲ್ಲಿ ಸಂಶೋಧನೆ ಹಿಂದುಳಿಯಲು ಮುಖ್ಯ ಕಾರಣ ಚಿತ್ರಕಲೆಯ ಅಧ್ಯಯನದ ಕೋರ್ಸುಗಳು ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ. ಬೋರ್ಡ್‌ನಲ್ಲಿ ನಡೆಯುತ್ತಿದ್ದವು.

ವಿಶೇಷವಾಗಿ ಈ ಎಲ್ಲ ಕೋರ್ಸ್‌ಗಳು ಡಿಪ್ಲೋಮಾ ಹಂತಕ್ಕೆ ಸೀಮಿತವಾಗಿದ್ದವು. ಈ ಕೋರ್ಸ್‌ಗಳನ್ನು ಮುಗಿಸಿದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಳ್ಳುತ್ತಿದ್ದರು. ಇನ್ನುಳಿದವರು ಹವ್ಯಾಸಿ ಚಿತ್ರಕಲಾವಿದರಾಗಿ, ವಾಣಿಜ್ಯ ಕಲಾವಿದರಾಗಿ ವೃತ್ತಿಜೀವನವನ್ನು ನಡೆಸಿಕೊಂಡು ಬರುತ್ತಿದ್ದುದನ್ನು ಕಾಣುತ್ತೇವೆ. ಈ ಐದು ವರ್ಷದ

ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಪದವಿ ತರಗತಿಗೆ ಸೇರಲು ಅವಕಾಶವಿರುತ್ತಿರಲಿಲ್ಲ. ಅವರು ಪದವಿ ತರಗತಿಗೆ ಸೇರಲೇಬೇಕೆಂದರೆ ಒಂದು ವರ್ಷದ ಬ್ರಿಜ್‌ಕೋರ್ಸ್‌ನ್ನು ಕಡ್ಡಾಯವಾಗಿ ಮಾಡಿಕೊಂಡಲ್ಲಿ ಮಾತ್ರ ಸ್ನಾತಕೋತ್ತರ ಹಂತಕ್ಕೆ ಹೋಗಲು ಅವಕಾಶವಿದ್ದ ಕಾರಣ ಬಹುಪಾಲು ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ.

ಇನ್ನು ಸ್ನಾತಕೋತ್ತರ ಹಂತದಲ್ಲಿ ದೃಶ್ಯಕಲೆಗಳ ಅಧ್ಯಯನಕ್ಕೆ ಕರ್ನಾಟಕದ ಯಾವ ವಿಶ್ವವಿದ್ಯಾಲಯಗಳಲ್ಲಿಯೂ ಸ್ವತಂತ್ರವಾದ ದೃಶ್ಯಕಲಾ ಅಧ್ಯಯನದ ವಿಭಾಗಗಳು ಪ್ರಾರಂಭಗೊಳ್ಳಲಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಹಿಂದುಳಿಯಲು ಕಾರಣವಾಗಿದೆ. ಪದವಿಯ ಹಂತದಲ್ಲಿ ಬೆರಳೆಣಿಕೆಯಷ್ಟು ಲಲಿತಕಲಾ ಮಹಾವಿದ್ಯಾಲಯಗಳು ಆಗ ಪ್ರಾರಂಭಗೊಂಡಿದ್ದು ಅವು ಹೆಚ್ಚಾಗಿ ಪದವಿ ಹಂತಕ್ಕೆ ಮಾತ್ರ ಸೀಮಿತೊಂಡು ಕಾರ್ಯನಿರ್ವಹಿಸಿವೆ. ಅಲ್ಲಿ ಸ್ನಾತಕೋತ್ತರ ದೃಶ್ಯಕಲೆಗಳ ಅಧ್ಯಯನಕ್ಕೆ ಅವಕಾಶಗಳು ಲಭ್ಯವಾಗದೇ ಇರುವುದು ಇನ್ನೊಂದು ಪ್ರಮುಖ ಕಾರಣವಾಗಿದೆ ಎನ್ನಬಹುದು.

ಗದಗ, ಗುಲಬರ್ಗಾ, ಮೈಸೂರ, ಬೆಂಗಳೂರು ಈ ಕಲೆವು ಸ್ಥಳಗಳಲ್ಲಿ ಸ್ನಾತಕೋತ್ತರ ದೃಶ್ಯಕಲೆಗಳ ಪದವಿ ಕೋರ್ಸ್‌ಗಳು ಮುಂದೆ ಪ್ರಾರಂಭಗೊಂಡರೂ ಈ ಕೋರ್ಸ್‌ಗಳು ಪ್ರಾಯೋಗಿಕತೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣವಾಗಿ ಹಾಗೂ ಅಲ್ಲಿ ಬೋಧನೆ ಮಾಡಿಸುತ್ತಿದ್ದ ಅಧ್ಯಾಪಕರೆಲ್ಲರೂ ಯಾವುದೇ ಸಂಶೋಧನೆಯ ಹಿನ್ನೆಲೆಯಿಂದ ಬರದೇ ಇದ್ದುದು ಈ ಕ್ಷೇತ್ರದಲ್ಲಿ ದೃಶ್ಯಕಲೆಗಳ ಶಿಕ್ಷಣವೆಂದರೆ ಕೇವಲ ಪ್ರಾಯೋಗಿಕವಾದ ಕಲೆಗಳ ಅಧ್ಯಯನ ಎಂಬ ಪ್ರಧಾನ ದೃಷ್ಟಿಕೋನವು ಪ್ರಮುಖವಾಗಿತ್ತು. ಹೀಗಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನದ ಪ್ರಜ್ಞೆಯ ಕೊರತೆಯಿಂದಾಗಿ ಕೇವಲ ಸ್ನಾತಕೋತ್ತರ ಪದವಿಗಳನ್ನು ಮಾತ್ರ ವಿದ್ಯಾರ್ಥಿಗಳು ಪಡೆದುಕೊಳ್ಳುವಂತಾಯಿತು. ಸ್ನಾತಕೋತ್ತರ ನಂತರದ ಎಂ.ಫಿಲ್., ಪಿ ಎಚ್.ಡಿ.ಯಂತಹ ಅಧ್ಯಯನಗಳಿಗೆ ಇಲ್ಲಿ ಅವಕಾಶವಿಲ್ಲದಂತಾಗಿ ಈ ಕ್ಷೇತ್ರದ ಸಂಶೋಧನೆ ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯದಲ್ಲಿ ನಡೆಯಲಿಲ್ಲ.

ಈ ಪರಂಪರೆ ತೊಂಭತ್ತರ ದಶಕದವರೆಗೂ ಮುಂದುವರೆದುಕೊಂಡು ಬಂದಿತು. ತೊಂಭತ್ತರ ದಶಕದ ನಂತರದಲ್ಲಿ ಈ ವಾತವಾರಣ ಸ್ವಲ್ಪ ಬದಲಾಗಿ ಸ್ನಾತಕೋತ್ತರ ಹಂತದಲ್ಲಿ ಸಂಶೋಧನಾ ಅಧ್ಯಯನಕ್ಕೆ ಅವಕಾಶ ದೊರೆಯಿತು. ಕರ್ನಾಟಕ ವಿಶ್ವವಿದ್ಯಾಲಯವು ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನ ಮಾಡಲು ಮೊದಲು ಅವಕಾಶ ಕಲ್ಪಿಸಿಕೊಟ್ಟಿರುವುದು ಕಂಡುಬರುತ್ತದೆ. ೫೪ ನಂತರದಲ್ಲಿ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ದೃಶ್ಯಕಲಾ ಸಂಶೋಧನೆಯ ಅಧ್ಯನಕ್ಕೆ ಅವಕಾಶಗಳು ದೊರೆತು ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಈಗ ವಿಶ್ವವಿದ್ಯಾಲಯದ ಹಂತದಲ್ಲಿ ಗಂಭೀರವಾಗಿ ಇನ್ನುಳಿದ ವಿಷಯಗಳಂತೆ ಇಲ್ಲಿಯೂ ಕೂಡಾ ಸಂಶೋಧನೆಗೆ ಪ್ರಾಧಾನ್ಯತೆ ಸಿಕ್ಕಕಾರಣವಾಗಿ ಈಗ ಸಾಕಷ್ಟು ವಿದ್ಯಾರ್ಥಿಗಳು, ಅಧ್ಯಾಪಕರು ತಮ್ಮನ್ನು ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಕಾರಣವಾಗಿದೆ.

ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಪಿಎಚ್.ಡಿ.ಪದವಿಗಾಗಿ ನಡೆಸಿದ ಅಧ್ಯಯನಗಳು ಮತ್ತು

ನಂತರದಲ್ಲಿ ಎಂ.ಫಿಲ್. ಪದವಿಗಾಗಿ ಹಾಗೂ ಡಿ.ಲಿಟ್. ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳನ್ನು ಇಲ್ಲಿ ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಪಿ.ಎಚ್.ಡಿ, ಪ್ರಬಂಧಗಳು

೨. ಡಿ.ಲಿಟ್, ಪ್ರಬಂಧಗಳು

೩. ಎಂ.ಫಿಲ್, ಪ್ರಬಂಧಗಳು

೧. ಪಿಹೆಚ್.ಡಿ. ಪ್ರಬಂಧಗಳು :

ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ : ಒಂದು ಅಧ್ಯಯನ[೩] ಎಂಬ ಸಂಶೋಧನ ಕಿರುಪ್ರಬಂಧವು ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ರಲ್ಲಿ **ಡಾ.ಬಿ. ಕೆ. ಹಿರೇಮಠರು ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ**[೪] ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಂತೆ ಕೆಲವು ಅಧ್ಯಾಯಗಳನ್ನು ಮೀಸಲಾಗಿಟ್ಟು ಅಧ್ಯಯನ ಮಾಡಿದ್ದಾರೆ. ಇದರ ನಂತರ ೧೯೯೧ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿ.ಹೆಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ**[೫] ಈ ಮಹಾಪ್ರಬಂಧವನ್ನು ಡಾ. ಎಸ್.ಸಿ. ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ.ಲ.ನರಸಿಂಹನ್ ಅವರು ಬೆಂಗಳೂರು ವಿ.ವಿ.ಗೆ ಮಂಡಿಸಿದ ಪಿಎಚ್.ಡಿ ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು.**[೬] ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ತಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು,**[೭] ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ ಅನಿವಾಸಿ ಭಾರತೀಯ **ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು,**[೮] ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ: ಒಂದು ಅಧ್ಯಯನ್**, ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು ಇವರ

---

೩. ಡಾ. ಎಸ್.ಸಿ. ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ., ೧೯೮೩.

೪. ಡಾ. ಬಿ.ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೧೯೮೭.

೫. ಡಾ. ಎಸ್.ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ, ವಿ.ವಿ., ೧೯೯೮.

೬. ಅ.ಲ. ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೧೯೯೮.

೭ ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೧೯೯೮.

೮. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ. ೧೯೯೮.

೯. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೧.

ಕರ್ನಾಟಕ ಜನಪದ ಶಿಲ್ಪಕಲೆ: ಒಂದು ಅಧ್ಯಯನ[೧೦], ೨೦೦೨ರಲ್ಲಿ ಡಾ. ಗಿರೀಶ ಅವರ **ಬುಡಕಟ್ಟು ಚಿತ್ರಕಲೆ**[೧೧], ೨೦೦೨ರಲ್ಲಿ ಡಾ. ಲಕ್ಷ್ಮಿದೇವಿ ಗವಾಯಿಯವರ ಕಲಾವಿದ ಎಂ.ಎ.ಚೆಟ್ಟಿಯವರ **ಜೀವನ-ಕಲಾಕೃತಿಗಳು: ಒಂದು ಅಧ್ಯಯನ**[೧೨], ೨೦೦೨ರಲ್ಲಿ ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**[೧೩], ೨೦೦೨ರಲ್ಲಿ ಡಾ. ಸೌಮ್ಯ ಅವರ **ಯಂತ್ರಾದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೧೪], ೨೦೦೨ರಲ್ಲಿ ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್**[೧೫], ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦-೧೮೨೦)**[೧೬], ೨೦೦೩ರಲ್ಲಿ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್. ಎಮ್. ಹಡಪದ : ಒಂದು ಅಧ್ಯಯನ**[೧೭], ೨೦೦೩ರಲ್ಲಿ ಡಾ. ಎಸ್.ಸಿಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ್**[೧೮], ೨೦೦೪ರಲ್ಲಿ ಡಾ. ವಿ.ಎಮ್. ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ: ಒಂದು ಅಧ್ಯಯನ (೧೪೦೦-೧೮೦೦)**[೧೯], ೨೦೦೪ ರಲ್ಲಿ ಡಾ. ಶಿವಕುಮಾರ ಜಿ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೨೦], ೨೦೦೪ ರಲ್ಲಿ ಡಾ. ಪಿ. ಗೌರೀಶ ಅವರ **ಮೈಸೂರು ಜಿಲ್ಲೆಯ** ಜನಪದ ಚಿತ್ರಕಲೆ[೨೧], ೨೦೦೫ರಲ್ಲಿ ಡಾ. ಶಶಿಕಲಾ ಹೂಗಾರ ಅವರ

---

೧೦. ಡಾ. ಶಿವಾನಂದ ಬಂಟನೂರು : ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ೨೦೦೨.

೧೧. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೨. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ.ಎ. ಚೆಟ್ಟಿಯವರ ಜೀವನ – ಕಲಾಕೃತಿಗಳು : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೩. ಶರಣಪ್ಪ ಕೋಲ್ಕಾರ : ಕೊಪ್ಪಳ-ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೪. ಡಾ. ಸೌಮ್ಯ : ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೫. ಡಾ. ಪ್ರಮೀಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ.೨೦೦೨.

೧೬. ಡಾ. ವೀಣಾ ಶೇಖರ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦-೧೮೨೦) ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೩.

೧೭. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್. ಎಮ್. ಹಡಪದ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೩.

೧೮. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ೨೦೦೨.

೧೯. ಡಾ. ವಿ.ಎಮ್. ಬಾಗಾಯತ್ : ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦-೧೮೦೦), ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೦. ಡಾ. ಶಿವಕುಮಾರ ಜಿ.ಓ. : ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೪.

೨೧. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜನಪದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ೨೦೦೪.

ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ[೨೨], ೨೦೦೫ರಲ್ಲಿ ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೩], ೨೦೦೫ರಲ್ಲಿ ಡಾ. ಎಚ್.ಎನ್.ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೨೪], ೨೦೦೫ರಲ್ಲಿ ಡಾ. ಎಸ್.ವಿ.ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ**[೨೫], ೨೦೦೬ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೨೬], ೨೦೦೭ರಲ್ಲಿ ಡಾ. ಮಲ್ಲಿಕಾರ್ಜುನ ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ**[೨೭], ಡಾ. ಗೀತಾಂಜಲಿ ಬಿ.ಆರ್.ಅವರ **ಐತಿಹಾಸಿಕ ದೀಪ ಸ್ತಂಭಗಳು**[೨೮], ೨೦೦೭ರಲ್ಲಿ ಡಾ. ರಾಠೋಡ್ ಅವರ **ಅನ್ವಯಿಕ ಕಲೆ– ಹಿಂದಿನಿಂದ ಇಂದಿನವರೆಗೆ**[೨೯], ೨೦೦೮ ರಲ್ಲಿ ಮೋಹನ್ ಪಂಚಾಳ ಅವರ **ಕಲಾವಿದ ಎಸ್.ಎಮ್. ಪಂಡಿತ – ಬದುಕು ಮತ್ತು ಕಲೆ**[೩೦], ೨೦೦೮ ರಲ್ಲಿ ವಿಶ್ವನಾಥ ಎ.ಎಸ್. ಅವರ **ಕರವಾಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು**[೩೧], ಡಾ. ರವೀಂದ್ರ ಎಸ್.ಕಮ್ಮಾರ ಅವರ **ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು**[೩೨], ಡಾ. ಪ್ರೇಮಾನಂದ ಲಕ್ಕಣ್ಣನವರ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ : ಒಂದು ವೈಚಾರಿಕ ಅಧ್ಯಯನ**[೩೩], ೨೦೦೯ ರಲ್ಲಿ ಡಾ.ಜಿ. ಲಕ್ಷ್ಮೀಪತಿಯವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ**[೩೪], ಡಾ. ಸೂರ್ಯಕಾಂತ ಮಂಟಗಿಯವರ **ಕಲಾವಿದ ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ: ಒಂದು ಅಧ್ಯಯನ**[೩೫], ಡಾ. ರೆಹಮಾನ ಪಟೇಲ್ ಅವರ **ಕರ್ನಾಟಕದ ಬಿದ್ರಿ ಕಲೆ ಒಂದು ಅಧ್ಯಯನ: ವಿಶೇಷವಾಗಿ ಬೀದರ ಜಿಲ್ಲೆಯನ್ನು ಅನುಲಕ್ಷಿಸಿ**[೩೬], ೨೦೧೦ ರಲ್ಲಿ ಶ್ರೀಮತಿ ಸುನಿತಾ ಪಾಟೀಲ ಅವರ

---

೨೨. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೩. ಡಾ. ಶಿವಪ್ರಕಾಶ ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೪.

೨೪. ಡಾ. ಎಚ್.ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೨೫. ಡಾ. ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೨೬. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೬.

೨೭. ಡಾ. ಮಲ್ಲಿಕಾರ್ಜುನ ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೭.

೨೮. ಡಾ. ಗೀತಾಂಜಲಿ ಬಿ.ಆರ್. : ಐತಿಹಾಸಿಕ ದೀಪಸ್ತಂಭಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೭.

೨೯. ಡಾ. ರಾಠೋಡ್ : ಅನ್ವಯಿಕ ಕಲೆ ಹಿಂದಿನಿಂದ ಇಂದಿನವರೆಗೆ, ಪಿಹೆಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ೨೦೦೭.

೩೦. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್. ಪಂಡಿತ ಬದುಕು ಮತ್ತು ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೮.

೩೧. ವಿಶ್ವನಾಥ ಎ.ಎಸ್. : ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

೩೨. ಡಾ. ರವೀಂದ್ರ ಎಸ್. ಕಮ್ಮಾರ : ಕಲಾವಿದ ವಿ. ಬಿ. ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

೩೩. ಡಾ. ಪ್ರೇಮಾನಂದ ಲಕ್ಕಣ್ಣನವರ : ಕರ್ನಾಟಕದ ದೃಶ್ಯಕಲಾ ಸಾಹಿತ್ಯ : ಒಂದು ವೈಚಾರಿಕ ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೮.

೩೪. ಡಾ. ಜಿ. ಲಕ್ಷ್ಮೀಪತಿ : ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೯.

೩೫. ಡಾ. ಸೂರ್ಯಕಾಂತ ಮಂಟಗಿ : ಕಲಾವಿದ ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೯.

೩೬. ಡಾ. ರೆಹಮಾನ ಪಟೇಲ್ ಅವರ ಕರ್ನಾಟಕದ ಬಿದ್ರಿ ಕಲೆ ಒಂದು ಅಧ್ಯಯನ : ವಿಶೇಷವಾಗಿ ಬೀದರ ಜಿಲ್ಲೆಯನ್ನು ಅನುಲಕ್ಷಿಸಿ, ಪಿಹೆಚ್.ಡಿ. ಮಹಾಪ್ರಬಂಧ, ಗುಲ್ಬರ್ಗಾ ವಿ.ವಿ., ೨೦೦೯.

ವಿಜಯ ಸಿಂಧೂರ ಅವರ **ಕಲಾಕೃತಿಗಳ ಒಳನೋಟಗಳು**[೩೭], ಡಾ. ನಿಂಗಪ್ಪ ಎಂ.ಅಂಗಡಿ ಅವರ **ಕರ್ನಾಟಕದ ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ**[೩೮], ೨೦೧೧ ರಲ್ಲಿ ಸಣ್ಣಮದಗಪ್ಪ ಎಸ್.ಗಡ್ಡಿಯವರ **ಕಲಾವಿದ ಎಂ.ಬಿ.ಪಾಟೀಲ ಜೀವನ ಮತ್ತು ಕಲಾಕೃತಿಗಳು ಒಂದು ಅಧ್ಯಯನ**[೩೯], ೨೦೧೧ ರಲ್ಲಿ ಡಾ. ಕೀಶೂರ ಎನ್. ಡಾಟನಾಳರವರ **ಕಲಾವಿದ ಶಂಕರ ಪಾಟೀಲರ ಬದುಕು ಮತ್ತು ಕಲಾಕೃತಿಗಳು**[೪೦], ೨೦೧೧ರಲ್ಲಿ ಶ್ರೀ ಶಂಕರಪ್ಪ ಕುಂದಗೋಳರವರು **ಕರ್ನಾಟಕದ ಗಂಜೀಫಾ ಚಿತ್ರಕಲೆ**[೪೧], ಎಂಬ ವಿಷಯದ ಮೇಲೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ ಇವೆಲ್ಲವುಗಳು ಇಲ್ಲಿಯವರಿಗೆ ಕರ್ನಾಟಕದಲ್ಲಿ ದೃಶ್ಯಕಲೆಗಳ ಕುರಿತು ಸಲ್ಲಿಕೆಯಾದ ಪಿಹೆಚ್.ಡಿ ಸಂಶೋಧನಾ ಮಹಾಪ್ರಬಂಧಗಳು.

೨. ಡಿ.ಲಿಟ್. ಮಹಾಪ್ರಬಂಧಗಳು :

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್. ಪ್ರಬಂಧಗಳು ಈ ಕೆಳಗಿನಂತಿವೆ.

೨೦೦೧ರಲ್ಲಿ ಡಾ. ದೇವದಾಸ ಕಳಸದ ಅವರ **ಕನ್ನಡ ವೃತ್ತಿ ರಂಗಭೂಮಿ ಹಾಗೂ ರಂಗವಿನ್ಯಾಸ**[೪೨], ೨೦೦೫ರಲ್ಲಿ ಡಾ. ಆನಂದ ಕೆ. ಪೂಜಾರ ಅವರ **ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ**[೪೩], ೨೦೦೫ರಲ್ಲಿ ಡಾ. ಡಿ.ಎ. ಉಪಾಧ್ಯ ಅವರ **ದೃಶ್ಯಕಲೆಗಳ ತೌಲನಿಕ ಅಧ್ಯಯನ**[೪೪], ೨೦೦೯ರಲ್ಲಿ ಡಾ. ಎಂ.ಎಸ್. ಮೂರ್ತಿಯವರ **ಮಕ್ಕಳ ಮನಸ್ಸಿನ ಚಿತ್ರಗಳು**[೪೫], ಡಿ.ಲಿಟ್. ಮಹಾಪ್ರಬಂಧಗಳಾಗಿವೆ.

ಎಂ.ಫಿಲ್. ಪ್ರಬಂಧಗಳು :

ಕರ್ನಾಟಕದಲ್ಲಿ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು, ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಮೊದಲ ಬಾರಿಗೆ ಆರಂಭಗೊಂಡಿದ್ದು ಒಂದು ಗಮನಾರ್ಹ ಅಂಶವಾಗಿದೆ.

---

೩೭. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೧೦.

೩೮. ಡಾ. ನಿಂಗಪ್ಪ ಎಂ. ಅಂಗಡಿ : ಕರ್ನಾಟಕದ ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೧೦.

೩೯. ಡಾ. ಸಣ್ಣಮುದಗಪ್ಪ ಎಸ್. ಗಡ್ಡಿ : ಕಲಾವಿದ ಎಂ.ಬಿ. ಪಾಟೀಲ ಜೀವನ ಮತ್ತು ಕಲಾಕೃತಿಗಳು ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೧೦.

೪೦. ಡಾ. ಕಿಶೋರ ಎನ್. ದಾಟನಾಳ : ಕಲಾವಿದ ಶಂಕರ ಪಾಟೀಲರ ಬದುಕು ಮತ್ತು ಕಲಾಕೃತಿಗಳು ಪಿ.ಹೆಚ್.ಡಿ ಮಹಾಪ್ರಬಂಧ ಕನ್ನಡ ವಿ.ವಿ., ೨೦೧೧.

೪೧. ಶ್ರೀ ಶಂಕರಪ್ಪ ಕುಂದಗೋಳ : ಕರ್ನಾಟಕದ ಗಂಜಿಫಾ ಚಿತ್ರಕಲೆ, ಪಿ.ಹೆಚ್.ಡಿ ಮಹಾಪ್ರಬಂಧ ಕನ್ನಡ ವಿ.ವಿ., ೨೦೧೧.

೪೨. ಡಾ. ದೇವದಾಸ ಕಳಸದ : ಕನ್ನಡ ವೃತ್ತಿರಂಗ ಭೂಮಿ ಹಾಗೂ ರಂಗವಿನ್ಯಾಸ, ಡಿ.ಎಲ್‌ಟ ಮಹಾಪ್ರಬಂಧ ಕನ್ನಡ ವಿ.ವಿ., ೨೦೦೧.

೪೩. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೪೪. ಡಾ. ಡಿ.ಎ. ಉಪಾಧ್ಯ : ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೫.

೪೫. ಡಾ. ಎಮ್.ಎಸ್. ಮೂರ್ತಿ : ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೯.

ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್, ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಕರ್ನಾಟಕದ ಯಾವ ವಿಶ್ವವಿದ್ಯಾಲಯದಲ್ಲಿಯೂ ಎಂ.ಫಿಲ್, ಅಧ್ಯಯನ ನಡೆಯುತ್ತಿಲ್ಲವೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ನಡೆದುಬಂದ ಎಂ.ಫಿಲ್, ಸಂಶೋಧನಾ ಅಧ್ಯಯನದ ಸ್ಥೂಲ ನೋಟವನ್ನು ಇಲ್ಲಿ ನೋಡಬಹುದಾಗಿದೆ.

೨೦೦೨ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರು ಎಂ.ಫಿಲ್. ಪದವಿಗಾಗಿ ಮಂಡಿಸಿದ **ಚಿತ್ರಕಲಾವಿದ ಜೆ.ಎಸ್. ಖಂಡೇರಾವ – ಒಂದು ಅಧ್ಯಯನ**[೪೬], ಮತ್ತು ೨೦೦೩ರಲ್ಲಿ ಎ.ಎಸ್.ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು**[೪೭], ೨೦೦೫ರಲ್ಲಿ ಶಂಕರಪ್ಪ ಎಂ. ಕುಂದಗೋಳ ಅವರ **ಕಲಾವಿದ ಡಿ.ವಿ. ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು**[೪೮], ಸಿ.ಡಿ. ಜಟ್ಟೆಣ್ಣವರ ಅವರ **ಕಲಾವಿದ ಡಾ. ಎಂ.ವಿ.ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು**[೪೯], ೨೦೦೬ರಲ್ಲಿ ಸುಚಿತ್ರಾ ಗ. ಲಿಂಗದಳ್ಳಿ ಇವರ **ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅಧ್ಯಯನ**[೫೦], ರವಿ ವಸರಾಮ ನಾಯಕ ಇವರ **ಕಿನ್ನಾಳ ಕಲೆ ಒಂದು ಅಧ್ಯಯನ**[೫೧], ೨೦೦೭ರಲ್ಲಿ ಬಿ.ಎಮ್.ಪಾಟೀಲ ಅವರ **ನಿಪ್ಪಾಣಿ ವಾಡೆಯ ಭಿತ್ತಿಚಿತ್ರಗಳು**[೫೨], ಶೈಲಾ ಬರಡೋಲ ಅವರ **ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು**[೫೩], ಉಮೇಶ ಎಸ್. ಅವರ **ಕರ್ನಾಟಕ ಜೈನ ಚಿತ್ರಕಲೆ**[೫೪], ಶಶಿಕಾಂತ ಬಸರಿಕಟ್ಟಿ ಅವರ **ಕಲಘಟಗಿ ಕಲೆ**[೫೫], ೨೦೦೮ರಲ್ಲಿ ಕೃಷ್ಣವೇಣಿ ಅವರ **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ**[೫೬], ಯೋಗೀಶ ಹೆಚ್. ಅವರ **ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ**[೫೭], ಮಹಾಕೋಟೇಶ್ವರಗೌಡ ಪಾಟೀಲ ಅವರ **ಬೆಳಗಾವಿ ಜಿಲ್ಲೆಯ ಚಿತ್ರಕಲೆ**[೫೮], ಸುರೇಶ ಬಡಿಗೇರ ಅವರ **ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ**[೫೯], ಸಂತೋಷಕುಮಾರ ಕುಲಕರ್ಣಿ ಅವರ **ದಾವಣಗೆರೆ ಜಿಲ್ಲೆಯ ಚಿತ್ರಕಲೆ,**[೬೦]

---

೪೬. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್. ಖಂಡೇರಾವ ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೨.

೪೭. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೩.

೪೮. ಶಂಕರಪ್ಪ ಎಂ. ಕುಂದಗೋಳ : ಕಲಾವಿದ ಡಿ.ವಿ. ಹಾಲಭಾವಿಯವರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೫.

೪೯. ಸಿ.ಡಿ. ಜಟ್ಟೆಣ್ಣವರ : ಕಲಾವಿದ ಡಾ. ಎಂ.ವಿ. ಮಿಣಜಿಗಿಯವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೫.

೫೦. ಸುಚಿತ್ರಾ ಗ. ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೬.

೫೧. ರವಿ ವಸರಾಮ ನಾಯಕ : ಕಿನ್ನಾಳ ಕಲೆ ಒಂದು ಅಧ್ಯಯನ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೬.

೫೨. ಬಿ.ಎಮ್. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿಚಿತ್ರಕಲೆಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೭.

೫೩. ಶೈಲಾ ಬರಡೋಲ : ಸಂತ ಕಲಾವಿದ ಶುಭರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೭.

೫೪. ಉಮೇಸ ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೭.

೫೫. ಶಶಿಕಾಂತ ಬಸರಿಕಟ್ಟಿ : ಕಲಘಟಗಿ ಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೭.

೫೬. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೫೭. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೫೮. ಮಹಾಕೋಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೫೯. ಸುರೇಶ ಬಡಿಗೇರ : ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೬೦. ಸಂತೋಷಕುಮಾರ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

ಜಯರಾಜ ಚಿಕ್ಕಪಾಟೀಲರ ಅವರ **ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು**[೬೧], ಮಹೇಶ ಉಮತಾರ ಅವರ ಬಿ.ಪಿ.ಬಾಯಿರಿ **ಕಲೆ ಮತ್ತು ಕಲಾ ಸಾಹತ್ಯ**[೬೨], ಗಿರಿಜಾ ಬಿರಾದಾರ ಅವರ **ಬಿಜಾಪೂರ ಜಿಲ್ಲೆಯ ಚಿತ್ರಕಲೆ**[೬೩], ಬಸಯ್ಯ ಗವಿಮಠ ಅವರ **ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ**[೬೪], ಕೃಷ್ಣೇಗೌಡ ಹೆಚ್.ಎನ್.ಅವರ **ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ**[೬೫], ಮಹಾಂತೇಶ ಎಂ. ಪಲದಿನ್ನಿ ಅವರ **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು**[೬೬], ಶಾನವಾಜ ಜಮಾದರ ಅವರ **ಕಲಾವಿದ ಸಿ.ಎನ್.ಪಾಟೀಲರವ ಬದುಕು ಮತ್ತು ಕಲಾಕೃತಿಗಳು**[೬೭] ಎಂಬ ಈ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ.

ಇಲ್ಲಿಯವರೆಗೆ ಒಟ್ಟು ಮೂವತ್ತು ತೊಂಬತ್ತು ಪಿಎಚ್.ಡಿ. ಮಹಾಪ್ರಬಂಧಗಳು ಬಂದಿದ್ದು, ಅವುಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಎರಡು ಪಿಎಚ್.ಡಿ ಮಹಾಪ್ರಬಂಧಗಳು ಬಂದಿದ್ದು, ಕರ್ನಾಟಕದಲ್ಲಿ ದೃಶ್ಯಕಲೆಯಲ್ಲಿ ಮೊಟ್ಟಮೊದಲು ಪಿಎಚ್.ಡಿ ಮಹಾಪ್ರಬಂಧ ಈ ವಿಶ್ವವಿದ್ಯಾಲಯದಿಂದ ಒಟ್ಟು ನಾಲ್ಕು ಪಿಎಚ್.ಡಿ ಮಹಾಪ್ರಬಂಧಗಳು ಹೊರಬಂದಿವೆ. ಮೈಸೂರು ವಿಶ್ವವಿದ್ಯಾಲಯದಿಂದ ಎರಡು ಮತ್ತು ಗುಲಬರ್ಗಾ ವಿಸ್ವವಿದ್ಯಾಲಯದಿಂದ ಆರು ಪಿಎಚ್.ಡಿ. ಮಹಾಪ್ರಬಂಧ ಬಂದಿದ್ದು, ದೃಶ್ಯಕಲಾ ವಿಭಾಗದಿಂದ ಹದಿನೈದು ಪಿಎಚ್.ಡಿ. ಮಹಾಪ್ರಬಂಧಗಳು ಇತಿಹಾಸ ವಿಭಾಗದಿಂದ ಒಂದು, ಶಾಸನ ಶಾಸ್ತ್ರ ವಿಭಾಗದಿಂದ ಒಂದು, ಸಂಗೀತ ಮತ್ತು ನೃತ್ಯ ವಿಭಾಗದಿಂದ ಒಂದೊಂದು ಪಿಎಚ್.ಡಿ ಮಹಾಪ್ರಬಂಧಗಳು ಬಂದಿದ್ದು ಇವೆಲ್ಲ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳಾಗಿವೆ.

ಈ ಮೇಲಿನ ಅಂಕಿ–ಸಂಖ್ಯೆಗಳನ್ನು ಗಮನಿಸಿದರೆ ಒಟ್ಟು ಮೂವತ್ತ ಎಂಟು ಮಹಾಪ್ರಬಂಧಗಳು ಕರ್ನಾಟಕದಲ್ಲಿ ಇಲ್ಲಿಯವರೆಗೆ ಬಂದಿದ್ದು, ಅವುಗಳಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದಲೇ ಹದಿನೆಂಟು ಪಿಎಚ್.ಡಿ ಮಹಾಪ್ರಬಂಧಗಳು ಬಂದಿವೆ. ಉಳಿದ ವಿಶ್ವವಿದ್ಯಾಲಯಗಳಲ್ಲಿ ಒಟ್ಟು ಹನ್ನೆರಡು ಪಿಎಚ್.ಡಿ ಮಹಾಪ್ರಬಂಧಗಳು ಬಂದಿವೆ. ಸಂಶೋಧನೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಮುಂಚೂಣೆಯಲ್ಲಿದ್ದು ಸಂಶೋಧನಾ ಕಾರ್ಯವನ್ನು ನಡೆಸುತ್ತಾ ಬಂದಿದೆ.

---

೬೧. ಜಯರಾಜ ಚಿಕ್ಕಪಾಟೀಲರ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೬೨. ಮಹೇಶ ಉಮತಾರ : ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೬೩. ಗಿರಿಜಾ ಬಿರಾದಾರ : ಬಿಜಾಪೂರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೬೪. ಬಸಯ್ಯ ಗವಿಮಠ : ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೬೫. ಕೃಷ್ಣೇಗೌಡ ಹೆಚ್.ಎನ್. : ಕರ್ನಾಟಕದಲ್ಲಿ ಟಿಬೆಟಿಯನ್ನರ ಚಿತ್ರಕಲೆ, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೬೬. ಮಹಾಂತೇಶ ಎಂ. ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್. ಪ್ರಬಂಧ, ಕನ್ನಡ ವಿ.ವಿ., ೨೦೦೮.

೬೭. ಶಾನವಾಜ ಜಮಾದಾರ : ಕಲಾವಿದ ಸಿ.ಎನ್. ಪಾಟೀ ಬದುಕು ಮತ್ತು ಕಲಾಕೃತಿಗಳು ಎಂ.ಫಿಲ್. ಪ್ರಬಂಧ ಕನ್ನಡ ವಿ.ವಿ. ೨೦೦೮.

ಹೀಗೆ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ೩೯ ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ನಿಟ್ಟಿನಲ್ಲಿ ೧೫ಕ್ಕೂ ಹೆಚ್ಚು ಸಂಶೋಧಕರು ಈಗ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೪೦೦ಕ್ಕೂ ಹೆಚ್ಚಿನ ಲಘು ಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಸಂಶೋಧನ ಪ್ರಕಾರವು ದೃರ್ಶಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿಯೂ ಬಲಗೊಳ್ಳುವ ಆಶಯವನ್ನು ನಿರೀಕ್ಷಿಸಬಹುದು.

ಹೀಗೆ ಕರ್ನಾಟಕದಲ್ಲಿ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಸಂಶೋಧನಾ ಅಧ್ಯಯನವು ನಡೆದುಬಂದ ಹಿನ್ನೆಲೆಯ ಸ್ಥೂಲ ನೋಟವನ್ನು ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಒಟ್ಟಾರೆ ಕರ್ನಾಟಕದ ದೃಶ್ಯಕಲಾ ಕ್ಷೇತ್ರದ ಸಂಶೋಧನಾ ಅಧ್ಯಯನವು ಇನ್ನುಳಿದ ಕ್ಷೇತ್ರಗಳಲ್ಲಿ ನಡೆದ ಸಂಶೋಧನೆಯನ್ನು ಗಮನಿಸಿದರೆ ಈ ಕ್ಷೇತ್ರದಲ್ಲಿ ನಡೆದ ಸಂಶೋಧನಾ ಅಧ್ಯಯನ ತುಂಬಾ ಕಡಿಮೆ ಪ್ರಮಾಣದ್ದಾಗಿದೆ. ಹೀಗಾಗಿ ಇಲ್ಲಿ ನಡೆದ ಸಂಶೋಧನಾ ಅಧ್ಯಯನಗಳು ಪ್ರಾಥಮಿಕ ಆಕರಗಳ ಸಂಗ್ರಹ ಸಮೀಕ್ಷಾ ರೂಪದ ಸಂಶೋಧನಾ ಅಧ್ಯಯನಗಳೇ ಹೆಚ್ಚಾಗಿವೆ. ಅಲ್ಲಲ್ಲಿ ವಿಶ್ಲೇಷಣಾತ್ಮಕ ಅಧ್ಯಯನಗಳು ಮತ್ತು ಅಧ್ಯಯನದ ಹಿಂದಿನ ತಾತ್ವಿಕ ಸಿದ್ಧಾಂತಗಳ ಪರಿಕಲ್ಪನೆಯನ್ನು ಕಟ್ಟಿಕೊಡುವ ಪ್ರಯತ್ನದ ಸಂಶೋಧನಾ ಅಧ್ಯಯನಗಳು ಸ್ವಲ್ಪ ಪ್ರಾಮಾಣದಲ್ಲಿ ನಡೆದಿರುವುದು ಮೇಲಿನ ಸಂಶೋಧನಾ ಅಧ್ಯಯನಗಳಿಂದ ಕಂಡುಬರುತ್ತದೆ.

ಆದಾಗ್ಯೂ ಸಹ ಇಂದು ಚಿತ್ರಕಲಾ ಕ್ಷೇತ್ರದಲ್ಲಿ ಪಿಎಚ್.ಡಿ. ಪದವಿಗಾಗಿ ಸಂಶೋಧನಾ ಪ್ರಬಂಧಗಳು, ಎಂ.ಫಿಲ್., ಡಿ.ಲಿಟ್, ಪದವಿಗಾಗಿ ಸಂಶೋಧನಾ ಪ್ರಬಂಧಗಳು, ಸ್ನಾತಕೋತ್ತರ ಪದವಿಗಳಿಗಾಗಿ ಕಿರುಶೋಧ ಪ್ರಬಂಧಗಳು, ಪದವಿಗಾಗಿ ನಡೆದ ಕಿರುಪ್ರಬಂಧಗಳು ನಡೆದು ಈ ಕ್ಷೇತ್ರದಲ್ಲಿ ತೀರ್ವಗತಿಯಲ್ಲಿ ನಡೆಯುತ್ತಾ ಬರುತ್ತಿರುವುದು ಒಂದು ಉತ್ತಮ ಬೆಳವಣಿಗೆಯಾಗಿದೆ.

ಗದಗ ತನ್ನದೆಯಾದ ವಿಶಿಷ್ಟ ಸಂಸ್ಕೃತಿಕ ಪರಿಸರ ಹೊಂದಿದೆ. ಜನಪದ ಚಿತ್ರಕಲೆಗೆ ಗ್ರಾಮೀಣ ಸೊಗಡಿನ ಚಿತ್ರಗಳು, ಕಸೂತಿಗಳು, ನೇಯ್ಗೆ, ಹಚ್ಚೆ, ರಂಗೋಲಿ, ಮುಂತಾದವುಗಳು ಜಿಲ್ಲೆಯ ತುಂಬಾ, ವ್ಯಾಪಕವಾಗಿ ಪರಂಪರಿಕವಾಗಿ ಬೆಳೆದು ಬಂದಿದೆ. ಇದಕ್ಕೆ ಪ್ರಾಚೀನ ಇತಿಹಾಸವೂ ಇದೆ. ನರಗುಂದದ ಬಾಬಾಸಾಹೇಬರ ಅರಮನೆಯಲ್ಲಿ ಭಿತ್ತಿಚಿತ್ರಗಳು ಧಾರ್ಮಿಕ ಪಾರಂಪರಿಕತೆಯನ್ನು ಸಾರಿ ಹೇಳುತ್ತವೆ.

ಚಿತ್ರಕಲೆಗೆ ಗದಗ ಜಿಲ್ಲೆಯು ರಾಜ್ಯದಲ್ಲಿ ತನ್ನದೆ ಆದ ಹೆಸರು ಪಡೆದುಕೊಂಡಿದೆ. ವಿಜಯಕಲಾಮಂದಿರ ಸಂಸ್ಥೆಯು ನಾಡಿನ ಉದ್ಧಗಲಕ್ಕೂ ಅನೇಕ ಕಲಾವಿದರನ್ನು, ಚಿತ್ರಕಲಾ ಶಿಕ್ಷಕರನ್ನು ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆಸಿದ್ದು, ಅವುಗಳ ಕುರಿತು ಅಧ್ಯಯನ ಮಾಡುವುದು ಅವಶ್ಯಕವಿದೆ. ಅದರಂತೆ ಗದಗ-ಬೆಟಗೇರಿಯ ಜೆ.ಎನ್.ಕಲಾಶಾಲೆಯೂ ಸಹ ಉತ್ತಮ ಕಲಾಶಿಕ್ಷಣವನ್ನು ನೀಡುತ್ತಾ ರಾಜ್ಯದಾದ್ಯಂತ ಅನೇಕ ಕಲಾವಿದರನ್ನು ಹಗೂ ಅನೇಕ ಕಲಾ ಶಿಕ್ಷಕರನ್ನು ರೂಪಿಸಿದೆ. ಇಲ್ಲಿ ಅನೇಕ ಕಲಾ ಚಟುವಟಿಕೆಗಳು ನಡೆದು ಚಿತ್ರಕಲಾ ಕ್ಷೇತ್ರಕ್ಕೆ, ನಾಡಿಗೆ ಉತ್ತಮ ಕೊಡುಗೆಯನ್ನು ನೀಡಿದೆ.

ಈ ಜಿಲ್ಲೆಯಲ್ಲಿ ಅನೇಕ ಚಿತ್ರಕಲಾ ಶಿಕ್ಷಕರು ಪ್ರೌಢ, ಪ್ರಾಥಮಿಕ ಶಾಲಾ ಶಿಕ್ಷಕರು ರಾಜ್ಯದಲ್ಲಿ ಹೆಸರು ಪಡೆದಿದ್ದಾರೆ. ಅವುಗಳ ಕುರಿತು ಅಧ್ಯಯನ ಮಾಡುವುದು ಅವಶ್ಯವಾಗಿದೆ.

ಗದಗ ಜಿಲ್ಲೆ ತನ್ನದೆಯಾದ ಕೊಡುಗೆಯನ್ನು ನೀಡಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆದ ಕಲಾವಿದರಾದ ಶ್ರೀ ಎಂ.ಎ.ಚೆಟ್ಟಿ ರಾಜ್ಯದಲ್ಲಿ ಉತ್ತಮ ಕಲಾಶಿಕ್ಷಣ ಸಂಸ್ಥೆ ಸ್ಥಾಪಿಸಿದ ಕಲಾವಿದ ಟಿ.ಪಿ.ಅಕ್ಕಿ, ಶ್ರೇಷ್ಠ ಕಲಾವಿದ ಶ್ರೀ ಸಿ.ಎನ್.ಪಾಟೀಲ ಇನ್ನೂ ಅನೇಕ ಕಲಾವಿದರು ಸಮಕಾಲೀನ ಕಲಾವಿದರ ಕುರಿತು ಅವರ ಕಲಾಕೃತಿಗಳ ಕುರಿತು ಅಧ್ಯನ ಮಾಡುವುದು ಅವಶ್ಯವಿದೆ.

ಹೀಗೆ ಹಲವಾರು ಮುಖಗಳಿಂದ ಕನ್ನಡ ನಾಡು ನುಡಿಗಾಗಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಠ ಸೇವೆ ಸಲ್ಲಿಸಿದ ಗದಗ ಜಿಲ್ಲೆಯ ಕಲೆ ಮತ್ತು ಕಲಾವಿದರ ಕುರಿತು ಗದಗ ಜಿಲ್ಲೆಯಲ್ಲಿರುವ ಜನಪದ ಚಿತ್ರಕಲೆ ಭಿತ್ತಿಕಲೆ, ಕಲಾ ಸಾಹಿತ್ಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು ಶಿಕ್ಷಣ ಕುರಿತು ಇದುವರೆಗೂ ಸಮಗ್ರವಾದ ಯಾವುದೇ ಸಂಶೋಧನಾ ಅಧ್ಯಯನ ನಡೆಯದೇ ಇರುವ ಹಿನ್ನಲೆಯಲ್ಲಿ ಪ್ರಸ್ತುತ "ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ" ಎಂಬ ವಿಷಯದ ಸಂಶೋಧನಾ ಅಧ್ಯಯನವನ್ನು ಹೊಂದಲಾಗಿದೆ.

ಅಧ್ಯಯನದ ಉದ್ದೇಶ : ಪ್ರಾಚೀನ ಕಾಲದಿಂದ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ ಆಧ್ಯಾತ್ಮ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದ ಈ ಪ್ರದೇಶ ನಿಸರ್ಗ ಸೌಂದರ್ಯದ ನೆಲೆಬೀಡು ಹೌದು. ಮನಮೋಹಕ ಶಿಲ್ಪಕಲೆಯನ್ನೊಳಗೊಂಡು ದೇವಾಲಯಗಳು, ಬಸದಿಗಳು, ಪ್ರಾಚೀನ ಸ್ಮಾರಕಗಳು, ಅಂತರರಾಷ್ಟ್ರೀಯ ಖ್ಯಾತಿ ಪಡೆದ ಸಂಗೀತಗಾರರು. ಸಂಗೀತ ಪೋಷಕರು, ನಡೆದಾಡುವ ದೇವರೆಂದೇ ಪ್ರಖ್ಯಾತರಾದ ತ್ರಿಭಾಷಾ ಕವಿ ನಾಡೋಜ ಪ್ರಶಸ್ತಿ ಪೂರಸ್ಕೃತರಾದ ಡಾ. ಪುಟ್ಟರಾಜ ಕವಿಗವಾಯಿಗಳವರು ಶ್ರೇಷ್ಠ ಸಾಹಿತ್ಯ ರಚಿಸಿದ ಖ್ಯಾತ ಕವಿಗಳು, ಹೆಸರಾಂತ ಕವಿಗಳಾದ ಶ್ರೀ ಚೆನ್ನವೀರ ಕಣವಿ ಬರಹಗಾರರು, ನಟ-ನಿರ್ದೇಶಕರು, ಆಧ್ಯಾತ್ಮ ಜಿಜ್ಞಾಸುಗಳು, ಸಮಾಜ ಸುಧಾರಕರು ಈ ಜಿಲ್ಲೆಯಲ್ಲಿದ್ದಾರೆ. ಜನರನ್ನು ಸನ್ಮಾರ್ಗದಲ್ಲಿ ನಡೆಯಿಸುವ ಪ್ರಾಚೀನ ಮಠಗಳು ಇಲ್ಲಿವೆ. ತೋಂಟದಾರ್ಯ ಮಠದ ಕಾರ್ಯ ಕಲಾಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯಾಗಿದೆ. ಹೀಗೆ ಈ ಜಿಲ್ಲೆ ವಿಶಿಷ್ಠತೆಯನ್ನು ಪಡೆದುಕೊಂಡಿದೆ.

ಗದಗ ಜಿಲ್ಲೆಯ ಹಳ್ಳಿಗಳಿಂದ ಜನಪದ ಚಿತ್ರಕಲೆಗಳಾದ ತೊಗಲು ಗೊಂಬೆ ಚಿತ್ರಕಲೆ, ಸೂತ್ರಕಲೆ, ರಂಗೋಲಿ, ಮದರಂಗಿ, ಕೌದಿ, ಕಸೂತಿ, ಹಚ್ಚೆ, ಮುಂತಾದ ಜನಪದ ಚಿತ್ರಕಲೆಗಳು ಜಿಲ್ಲೆಯ ಯಾವ ಹಳ್ಳಿಗಳಲ್ಲಿ ಇವೆ ಎಂಬುದನ್ನು ಸಂಶೋಧನೆ ಮಾಡಿ ಕರ್ನಾಟಕ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಜನಪದ ಚಿತ್ರಕಲೆಯನ್ನು ದಾಖಲಿಸಿ ಮುಂದಿನ ಜನಾಂಗಕ್ಕೆ ಪರಂಪರಾಗತವಾಗಿ ಉಳಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಗದಗ ಜಿಲ್ಲೆಯ ನರಗುಂದ ಬಾಬಾಸಾಹೇಬರ ವಾಡೆಯಲ್ಲಿರುವ ಮತ್ತು ನರಗುಂದ ಶ್ರೀ ಗುಂಡಪ್ಪ ಹಸಬಿಯವರ ಮನೆಯಲ್ಲಿರುವ ಭಿತ್ತಿ ಚಿತ್ರಗಳು ನಸಿಸುತ್ತಿದ್ದು ಅವುಗಳನ್ನು ಮುಂದಿನ ಪೀಳಿಗೆಗೆ ನೋಡಲು ದಾಖಲಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ. ಕಲಾಕೃತಿಗಳ ವಿಷಯ ಸಂಗ್ರಹಿಸುವುದು ಈ ಅಧ್ಯಯನದ ಮೂಲ ಉದ್ದೇಶವಾಗಿದೆ.

ಗದಗ ಜಿಲ್ಲೆಯ ಕಲಾ ಸಂಸ್ಥೆಗಳಾದ ವಿಜಯ ಕಲಾಮಂದಿರ ಗದಗ, ಜೆ.ಎನ್.ಕಲಾಶಾಲೆ, ಗದಗ-ಬೆಟಗೇರಿ, ರೋಣದ ರವೀಂದ್ರ ಚಿತ್ರಕಲಾಶಾಲೆ, ಮುಂಡರಗಿ ಕಲಾಶಾಲೆ, ಲಕ್ಷ್ಮೇಶ್ವರ ಕಲಾಶಾಲೆಯ ಉಪನ್ಯಾಸಕರ ಕುರಿತು ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳ ಸಾಧನೆಯ ಕುರಿತು ಅಧ್ಯಯನ ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ.

ರಾಷ್ಟ್ರ ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದಿರುವ ಶ್ರೀ ಅಮೀನಸಾಬ ಕಮಡೊಳ್ಳಿ, ಶ್ರೀ ವೆಂಕಟಪ್ಪ ಪ್ರಶಸ್ತಿ, ಪಡೆದಿರುವ ಖ್ಯಾತಿ ಕಲಾವಿದ ಶ್ರೀ ಎಂ.ಎ.ಚೆಟ್ಟಿ ಮುಂತಾದ ಕಲಾವಿದರು ಗದಗ ಜಿಲ್ಲೆಯ ಹೆಸರನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ದಾಖಲಿಸಿದ್ದಾರೆ. ಅಮೂಲ್ಯವಾದ ಕಲಾಕೃತಿ ಕುರಿತು ಚಿತ್ರಕಲೆಯ ಬೀಡನ್ನಾಗಿ ವಿಜಯ ಕಲಾಮಂದಿರ ಸಂಸ್ಥೆಯನ್ನು ಹುಟ್ಟುಹಾಕಿದ ಕಲಾತಪಸ್ವಿ ಶ್ರೀ ಟಿ.ಪಿ.ಅಕ್ಕಿಯವರು ಲಲಿತಾ ಕಲಾ ಅಕಾಡಮಿಯ ಅಧ್ಯಕ್ಷರಾಗಿ, ಕಲಾಶಿಕ್ಷಕರಾಗಿ, ಕಲಾವಿದರಾಗಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಚಿತ್ರಕಲಾವಿದರಾದ ಶ್ರೀ ಸಿ.ಎನ್.ಪಾಟೀಲ, ಶ್ರೀ ಎಸ್.ಎಂ.ಶಿರಹಟ್ಟಿ, ಶ್ರೀ ಎಂ.ಆರ್. ಬಾಗವಾನ, ಶ್ರೀ ಜಿ.ಎನ್.ಜಾಡಗೌಡರ, ಶ್ರೀ ಎನ್.ಎ.ಹರ್ಲಾಪೂರ, ಶ್ರೀ ಎ.ಎ. ಶಿರಹಟ್ಟಿ, ಶ್ರೀ ಕೆ.ವ್ಹಿ. ಕುಂದಗೋಳ, ವಸಂತ ಅಕ್ಕಿ ಮುಂತಾದ ಹಿರಿಯ ಕಲಾವಿದರು ತಮ್ಮ ಅಮೂಲ್ಯವಾದ ಕಲಾಕೃತಿ ರಚಿಸುವುದರ ಜೊತೆಗೆ ವಿಶಿಷ್ಠವಾದ ಕೊಡುಗೆಯನ್ನು ನೀಡಿದ್ದಾರೆ. ಇವೆಲ್ಲವುಗಳ ಅಧ್ಯಯನ ಮಾಡಿ ದಾಖಲಿಸುವುದು ಈ ಅಧ್ಯಯನದ ಮೂಲ ಉದ್ದೇಶವಾಗಿದೆ.

ಗದಗ ಜಿಲ್ಲೆಯಲ್ಲಿ ಕಲಿತು ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆದಿರುವ ಕಲಾವಿದರಾದ ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ನಾಡೋಜ ಶ್ರೀ ವ್ಹಿ.ಟಿ.ಕಾಳೆ, ಕಲಾ ಸಂಶೋಧಕರಾದ ಡಾ. ಬಿ.ಕೆ.ಹಿರೇಮಠ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಎಂ.ಆರ್.ಬಾಳಿಕಾಯಿ, ಚಿತ್ರಕಲಾ ಸಂಶೋಧಕರಾದ ಡಾ. ಎಸ್.ಸಿ.ಪಾಟೀಲ ರಾಜ್ಯ ಪ್ರಶಸ್ತಿ ಪಡೆದ ಕಲಾವಿದ ಶ್ರೀ ಮಹದೇವ ಕವಿಶೆಟ್ಟಿ ಮುಂತಾದ ಕಲಾವಿದರ ಕುರಿತು ಅವರ ಕಲಾಕೃತಿಗಳ ಕುರಿತು ದಾಖಲಿಸುವ ಮೂಲ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಸಮಕಾಲೀನ ಕಲಾವಿದರ ಬಗ್ಗೆ ಅವರ ಕಲಾ ಚಟುವಟಿಕೆಗಳ ಕುರಿತು ಸಮಗ್ರವಾಗಿ ಅಧ್ಯಯನ ಕೈಕೊಳ್ಳುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಗದಗ ಜಿಲ್ಲೆಯಲ್ಲಿ ಚಿತ್ರಕಲಾ ಸಾಹಿತ್ಯ ಕುರಿತು ಸಂಸ್ಥೆಗಳು, ಮಠ-ಮಾನ್ಯರಲ್ಲಿ ಕಲಾ ಸಂಗ್ರಹಗಳಲ್ಲಿ ಅನೇಕ ಉತ್ತಮ ಕಲಾವಿದರ ಕಲಾಕೃತಿಗಳಿದ್ದು, ಅವುಗಳನ್ನು ದಾಖಲೀಕರಿಸುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ. ಇದಲ್ಲದೆ ಗದಗ ಜಿಲ್ಲೆಯ ಕಲಾವಿದರ ಚಿತ್ರಕಲೆಯ ಕುರಿತು ಕಲಾ ಚಟುವಟಿಕೆಯನ್ನು ಮಾಡುತ್ತಿರುವ ಕಲಾ ಸಂಘಟನೆಗಳು, ಕಾರ್ಯಚಟುವಟಿಕೆಗಳ ಕುರಿತು ಅಧ್ಯಯನ ಮಾಡುವ ಉದ್ದೇಶವು ಈ ಅಧ್ಯಯನ ಹೊಂದಿದೆ.

ಹೀಗೆ ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯು ತನ್ನದೆಯಾದ ಕೊಡುಗೆ ನೀಡಿದ ಜನಪದ ಚಿತ್ರಕಲೆ, ಭಿತ್ತಿಚಿತ್ರಕಲೆ, ಗದಗ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು, ಚಿತ್ರಕಲಾ ಶಿಕ್ಷಕರು, ಚಿತ್ರಕಲಾವಿದರು, ಕಲಾಕೃತಿಗಳು, ಕಲಾಸಾಹಿತ್ಯ, ಕಲಾ ಸಂಗ್ರಹಾಲಯಗಳಲ್ಲಿ ಸಂಗ್ರಹಗೊಂಡ ಕಲಾಕೃತಿಗಳ ಕುರಿತು ಅಧ್ಯಯನ ಮಾಡಿ ಮುಂದಿನ ಪೀಳಿಗೆಗೆ ಪರಿಚಯಿಸಿಕೊಡುವ ಮೂಲ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ.

ಅಧ್ಯಯನ ಸ್ವರೂಪ :

ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ ಎಂಬ ಮಹಾಪ್ರಬಂಧವನ್ನು ಸಂಶೋಧನಾ ಅಧ್ಯಯನ ಹಿನ್ನಲೆಯಲ್ಲಿ ಅದರ ಸ್ವರೂಪವನ್ನು ಹೀಗೆ ವಿವರಿಸಬಹುದಾಗಿದೆ. ಪ್ರಸ್ತುತ ಅಧ್ಯಯನವನ್ನು ಒಂಭತ್ತು ಅಧ್ಯಾಯಗಳಲ್ಲಿ ಕೈಗೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿಸುವ ವಿಷಯವನ್ನು ಕುರಿತಂತೆ ಅದರ ಸಂಕ್ಷಿಪ್ತ ಸ್ವರೂಪದ ವಿವರವನ್ನು ಇಲ್ಲಿ ನೀಡಲಾಗಿದೆ.

ಅಧ್ಯಾಯ ಒಂದು : ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿ ವೈಧಾನಿಕತೆಯನ್ನು ವಿವರಿಸಲಾಗಿದೆ. ಇದಲ್ಲದೆ ಅಧ್ಯಯನದ ಮಹತ್ವ ಹಾಗೂ ಇಲ್ಲಿಯವರೆಗೆ ಚಿತ್ರಕಲಾ ಕ್ಷೇತ್ರದ ಕುರಿತು ಸಂಶೋಧನಾ ಅಧ್ಯಯನಗಳನ್ನು ವಿವರಿಸಲಾಗಿದೆ. ಹಾಗೂ ಮೂಲ ಆಕರ ಸಾಮಗ್ರಿ ಆನುಷಂಗಿಕ ಆಕರ ಸಾಮಗ್ರಿ, ಸಂದರ್ಶನ, ಛಾಯಾ ಚಿತ್ರಗಳ, ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಮತ್ತು ಅನೇಕ ಗ್ರಂಥಗಳಲ್ಲಿಯ ಅನೇಕ ವಿಷಯಗಳನ್ನು ಕುರಿತಾದ ಸಮಗ್ರವಾದ ವಿವರಣೆಯನ್ನು ನೀಡಲಾಗಿದೆ.

ಅಧ್ಯಾಯ ಎರಡು : ಈ ಅಧ್ಯಾಯದಲ್ಲಿ ಗದಗ ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆಯ ಕುರಿತು ಲಲಿತ ಕಲೆಗಳಾದ ಚಿತ್ರಕಲೆ, ಸಂಗೀತ, ಸಾಹಿತ್ಯ ಮತ್ತು ದಾರ್ಮಿಕ ಪರಿಸರದ ಕುರಿತು ಪ್ರತಿಯೊಂದು ಘಟ್ಟಗಳ ಸ್ಥೂಲ ಅಧ್ಯಯನವನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗುತ್ತಿದೆ. ಗದಗ ಜಿಲ್ಲೆಯ ಸಾಂಸ್ಕೃತಿ ಹಿನ್ನಲೆ, ಧಾರ್ಮಿಕ ಹಿನ್ನೆಲೆ, ನಡೆಸುತ್ತಿರುವ ಸಂಘ-ಸಂಸ್ಥೆಗಳ ಕುರಿತಾಗಿ ಚರ್ಚಿಸಲಾಗುವುದು ಮತ್ತು ಅಧ್ಯಾಯಕ್ಕೆ ಸಂಬಂಧಪಟ್ಟಂತ ಛಾಯಾ ಚಿತ್ರಗಳನ್ನು ಸೇರಿಸಲಾಗುವುದು.

ಅಧ್ಯಾಯ ಮೂರು : ಈ ಅಧ್ಯಾಯದಲ್ಲಿ ಗದಗ ಜಿಲ್ಲೆಯಲ್ಲಿ ಕಂಡುಬಂದ ಜನಪದ ಚಿತ್ರಕಲೆಗಳಾದ ತೊಗಲು ಗೊಂಬೆ, ಸೋತ್ರ ಗೊಂಬೆ, ರಂಗೋಲಿ ಮೆಹಂದಿ ಕೌದಿ, ಕಸೂತಿ, ಚಿತ್ರಕಲೆ ಮತ್ತು ಜನಪದ ಕಲಾವಿದರ ಪರಿಚಯ ಹಾಗೂ ಅವರ ಕಲೆಗಳ ಕುರಿತು ಜನಪದ ಕಲಾವಿದರನ್ನು ಸಂದರ್ಶಿಸಿ ಅನೇಕ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ, ಮತ್ತು ಅವರ ಕಲೆಯ ಛಾಯಾಚಿತ್ರಗಳನ್ನು ಚಿತ್ರಿಸಿಕೊಂಡು ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ, ಮತ್ತು ಅವುಗಳನ್ನು ವಿಷಯವಾರು ವರ್ಗೀಕರಿಸಿಕೊಂಡು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ನಾಲ್ಕು : ಈ ಅಧ್ಯಾಯದಲ್ಲಿ ಗದಗ ಜಿಲ್ಲೆ ಭಿತ್ತಿಚಿತ್ರಕಲೆಯ ಕುರಿತು ಅಧ್ಯಯನ ಮಾಡಲಾಗಿದೆ. ಗದಗ ಜಿಲ್ಲೆಯಲ್ಲಿ ಕಂಡು ಬಂದಿರುವ ಭಿತ್ತಿಚಿತ್ರಕಲೆಗಳ ನೆಲೆಗಳನ್ನು ಮತ್ತು ಅಲ್ಲಿ ಕಂಡು ಬಂದ ಭಿತ್ತಿಚಿತ್ರಕಲೆಯ ಸಮಗ್ರವಾದ ಮಾಹಿತಿಗಳನ್ನು ಹಲವಾರು ಜನರನ್ನು ಸಂಪರ್ಕಿಸಿ ಅವರಿಂದ ಮಾಹಿತಿ ಸಂಗ್ರಹಿಸಿಕೊಂಡು. ಸಂಗ್ರಹಿಸಿಕೊಂಡಿರುವ ಎಲ್ಲ ಮಾಹಿತಿಗಳನ್ನು ಪ್ರಸುತ್ತ ಅಧ್ಯಾಯದಲ್ಲಿ ವಿವರಿಸಲಾಗಿದೆ. ಭಿತ್ತಿಚಿತ್ರಗಳ ನೆಲಗಳು ಮತ್ತು ಅವುಗಳ ಛಾಯಾ ಚಿತ್ರಗಳನ್ನು ಪ್ರಸ್ತುತ ಈ ಅಧ್ಯಯನದಲ್ಲಿಅಳವಡಿಸಿಕೊಳ್ಳಲಾಗಿದೆ.

ಅಧ್ಯಾಯ ಐದು : ಈ ಅಧ್ಯಾಯದಲ್ಲಿ ಗದಗ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿರುವ ಕಲಾ ಶಿಕ್ಷಣ ನೀಡುವ ಸಂಸ್ಥೆಗಳ ಕುರಿತು ಹಾಗೂ ಅವುಗಳನ್ನು ಸ್ಥಾಪಿಸಿದ ಸಂಸ್ಥಾಪಕರು, ಶಿಕ್ಷಕರು, ವಿದ್ಯಾರ್ಥಿಗಳ ಮತ್ತು ಅವರು ರಚಿಸಿದ ಕಲಾಕೃತಿಗಳು ಅವರ ಕಲಾಚಟುವಟಿಕೆಗಳ ಕುರಿತು ಹಲವಾರು

ಹಿರಿ-ಕಿರಿಯ ಕಲಾವಿದರವನ್ನು ಸಂದರ್ಶಿಸಿ ಅವರಿಂದ ಮಾಹಿತಿ ಸಂಗ್ರಹಿಸಿಕೊಳ್ಳಲಾಗಿದೆ. ಅದಲ್ಲದೆ ಗತಿಸಿಹೋಗಿರುವ ಕಲಾವಿದರ ಕುರಿತು ಹಲವಾರು ಹಿರಿಯ ಕಲಾವಿದರನ್ನು ಸಂದರ್ಶಿಸಿ ಇವರ ಕಲಾ ಬದುಕು ಮತ್ತು ಕಲಾಕೃತಿಗಳ ಮಾಹಿತಿ ಪಡೆಯಲಾಗಿದೆ. ಹಾಗೂ ಇಂದು ನಮ್ಮೊಂದಿಗಿರುವ ಹಿರಿಯ-ಕಿರಿಯ ಕಲಾವಿದರ ಕಲಾಕೃತಿ ಹಾಗೂ ಅವರ ಕಲಾ ಜೀವನ ಮತ್ತು ಕಲಾಚಟುವಟಿಕೆಗಳನ್ನು ಕುರಿತು ಪ್ರಸ್ತುತ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ ಹಾಗೂ ಅವರು ರಚಿಸಿದ ಕಲಾಕೃತಿಗಳ ಛಾಯಾ ಚಿತ್ರಗಳನ್ನು ಪಡೆದುಕೊಂಡು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅಧ್ಯಾಯ ಆರು : ಈ ಅಧ್ಯಾಯದಲ್ಲಿ ಗದಗ ಜಿಲ್ಲೆಯ ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆದಿರುವ ಕಲಾವಿದರ ಕಲಾಕೃತಿಗಳ ಕುರಿತು, ಗದಗ ಜಿಲ್ಲೆಯಲ್ಲಿ ಕಲಿತು ರಾಜ್ಯ, ರಾಷ್ಟ್ರಮಟ್ಟಲದಲ್ಲಿ ಬೆಳೆದಿರುವ ಕಲಾವಿದರ ಕುರಿತು ಮತ್ತು ಗದಗ ಜಿಲ್ಲೆಯ ಸಮಕಾಲೀನ ಕಲಾವಿದರ ಕುರಿತು ಅಧ್ಯಯನ ಮಾಡಲಾಗಿದೆ, ಹಾಗೂ ಸಂಬಂಧಿಸಿದ ಛಾಯಾ ಚಿತ್ರಗಳನ್ನು ಅಳವಡಿಸಲಾಗಿದೆ.

ಅಧ್ಯಾಯ ಏಳು : ಈ ಅಧ್ಯಾಯದಲ್ಲಿ ಗದಗ ಜಿಲ್ಲೆಯ ಕಲಾವಿದರು ರಚಿಸಿದ ಕಲಾ ಸಾಹಿತ್ಯಗಳ ಕುರಿತು ವಿವರಿಸಲಾಗಿದೆ. ಗದಗ ಜಿಲ್ಲೆಯಲ್ಲಿ ಅನೇಕ ಹಿರಿಯ ಕಲಾವಿದರು ತಮ್ಮ ಕಲಾಜೀವನದಲ್ಲಿ ಕಲಾಕೃತಿಗಳೊಂದಿಗೆ ಕಲಾಸಾಹಿತ್ಯದ ಕಡೆಗೂ ಗಮನಿಸಿದ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಅಂತಹ ಕಲಾವಿದರು ರಚನೆ ಮಾಡಿದ ಕಲಾಸಾಹಿತ್ಯ ಕುರಿತು ಮತ್ತು ಅವರು ರಚಿಸಿದ ಕಲಾಸಾಹಿತ್ಯದ ವಸ್ತುವಿಷಯ, ಸಾರವನ್ನು ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಎಂಟು : ಈ ಅಧ್ಯಾಯದಲ್ಲಿ ಗದಗ ಜಿಲ್ಲೆಯ ವಿವಿಧ ಕಡೆಗಳಲ್ಲಿನ ಮಠಮಾನ್ಯಗಳಲ್ಲಿ ಚಿತ್ರಕಲಾ ಮಹಾವಿದ್ಯಾಲಯಗಳಲ್ಲಿ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಸಂಗ್ರಹಗೊಂಡಿರುವ ಕಲಾಕೃತಿಗಳನ್ನು ಹಾಗೂ ಸರಕಾರಿ ಕಲಾಸಂಗ್ರಹಾಲಯದಲ್ಲಿ ಸಂಗ್ರಹಗೊಂಡ ಕಲಾಕೃತಿಗಳ ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಎಲ್ಲ ಅಂಶಗಳನ್ನು ಅಧ್ಯಯನಕ್ಕೊಳಪಡಿಸಿದೆ. ಮತ್ತು ಸಂಬಂಧಿತ ಛಾಯಾಚಿತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

ಅಧ್ಯಾಯ ಒಂಭತ್ತು : ಈ ಅಧ್ಯಾಯದಲ್ಲಿ ಸಮಾರೋಪವಾಗಿದ್ದು ಪ್ರಸ್ತುತ ಅಧ್ಯಯನದಿಂದ ಹೊರಬಂದಿರುವ ಒಟ್ಟು ಫಲಿತಗಳ ಕುರಿತಾದ ಸಮೀಕ್ಷೆಯ ವಿವರಗಳನ್ನು ಚರ್ಚಿಸಲಾಗಿದೆ.

ಅಧ್ಯಯನದ ವಿಧಾನ : ಈ ಅಧ್ಯಯನದ ವಿಧಾನದಲ್ಲಿ ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯು ಕೊಡುಗೆಯಾಗಿ ಏನು ನೀಡಿದೆ ಎಂಬುದರ ಕುರಿತು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಎರಡು ರೀತಿಯ ಆಕರಗಳನ್ನು ಬಳಿಸಿಕೊಳ್ಳಲಾಗಿದೆ.

೧) ಮೂಲ ಆಕರ ಸಾಮಗ್ರಿ

೨) ಆನುಸಂಗಿಕ ಆಕರ ಸಾಮಗ್ರಿ

ಈ ಎರಡೂ ಮೂಲಗಳಿಂದ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ.

ಮೂಲ ಆಕರ ಸಾಮಗ್ರಿ :

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದುದು ಕ್ಷೇತ್ರಕಾರ್ಯ, ಸ್ವತಃ ಕಲಾವಿದರ ಸಂದರ್ಶನ, ಅವರೊಂದಿಗೆ ಚರ್ಚೆಗಳ ಧ್ವನಿಗ್ರಹಣ ಅವರ ಕಲಾಕೃತಿಗಳ ಛಾಯಾ ಚಿತ್ರಣ, ಅವರ ಕುಟುಂಬದವರಿಂದ ಸಮಕಾಲೀನ ಸಂದರ್ಶನಗಳು, ಆಪ್ತವಲಯದ ಒಳನಾಡಿಗಳಿಂದ ಪ್ರಶ್ನಾವಳಿಗಳ ಮೂಲಕ ಅಭಿಪ್ರಾಯ ಸಂಗ್ರಹಿಸಲಾಗುವುದು. ಹಾಗೂ ಸಂಗ್ರಹಿತ ವಿಷಯಗಳ ಪಟ್ಟಿ ಸಿದ್ಧಪಡಿಸಿದ ವಿವಿಧ ರೂಪದಲ್ಲಿ ಅಧ್ಯಯನ ಮಾಡಲಾಗಿದೆ.

ಅ. ಸಂದರ್ಶನ ಬ. ಧ್ವನಿಗ್ರಹಣ

ಕ. ಛಾಯಾ ಚಿತ್ರಣ ಡ. ಸಂಗ್ರಹಿಸಿದ ವಿಷಯಗಳನ್ನು ಪಟ್ಟಿ ಮಾಡಿಕೊಳ್ಳುವುದು

ಅ. ಸಂದರ್ಶನ :

ಅಧ್ಯಯನದ ವ್ಯಾಪ್ತಿಗೆ ಒಳಪಡುವ ಕ್ಷೇತ್ರಗಳಿಗೆ ಭೇಟಿ ಕೊಟ್ಟು ಅಲ್ಲಿ ಲಭ್ಯವಾದ ಕಲಾವಿದರ ಕುರಿತು ಸಂದರ್ಶನ ಮಾಡಲಾಯಿತು. ಬೇರೆ ಬೇರೆ ಸ್ಥಳಗಳಿಗೆ, ಮಠ–ಮಾನ್ಯಗಳಿಗೆ ಪಾಚ್ಯವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡಲಾಯಿತು. ಅಲ್ಲಿ ಸಂಬಂಧಪಟ್ಟವರನ್ನು ಸಂದರ್ಶಿಸಿ ವಿಷಯವನ್ನು ಸಂಗ್ರಹಿಸಲಾಯಿತು. ಹಾಗೂ ಜಿಲ್ಲೆಯ ಚಿತ್ರಕಲಾ ಮಹಾವಿದ್ಯಾಲಯಗಳ ಪ್ರಾಚಾರ್ಯರು, ಉಪನ್ಯಾಸಕರು ಹಿರಿಯ ಕಲಾವಿದರನ್ನು ಸಂದರ್ಶಿಸಿ ವಿಷಯ ಪಡೆದುಕೊಳ್ಳಲಾಯಿತು ಮತ್ತು ಅವರ ಸಂದರ್ಶನ ಮಾಡಿ ಅಭಿಪ್ರಾಯವನ್ನು ತಿಳಿದುಕೊಳ್ಳಲಾಯಿತು.

ಬ. ಧ್ವನಿಗ್ರಹಣ :

ಪ್ರಸ್ತುತ ಅಧ್ಯಯನದಲ್ಲಿ ಕೆಲವು ಪ್ರಮುಖ ಹಿರಿಯ ಹಾಗೂ ಸಮಕಾಲೀನ ಕಲಾವಿದರ ಚಿತ್ರಗಳ ಕುರಿತು ಚರ್ಚೆ ಮಾಡಲಾಯಿತು. ಈ ಮಹತ್ವದ ಚರ್ಚೆ ಧ್ವನಿಗ್ರಹಣವನ್ನು ಮಾಡಿಕೊಳ್ಳಲಾಯಿತು. ಇದರಿಂದ ಹಲವಾರು ವಿಷಯಗಳನ್ನು ಪುನರಾವಲೋಕನ ಮಾಡಿ ಅಧ್ಯಯನ ಮಾಡಲು ಸಹಾಯಕವಾಯಿತು.

ಕ. ಛಾಯಾಗ್ರಹಣ :

ಕ್ಷೇತ್ರ ಕಾರ್ಯದ ಸಂದರ್ಭಗಳಲ್ಲಿ ಲಭ್ಯವಾದ ಅನೇಕ ಕಲಾಕೃತಿಗಳ ಛಾಯಚಿತ್ರ ಮಾಡಿಕೊಳ್ಳಲಾಯಿತು. ಮಠಮಾನ್ಯಗಳಲ್ಲಿರುವ ಕಲಾಕೃತಿಗಳು, ಭಿತ್ತಿಚಿತ್ರಗಳು, ವಸ್ತು ಸಂಗ್ರಹಾಲಯದಲ್ಲಿರುವ ಕಲಾಕೃತಿಗಳು, ಚಿತ್ರಕಲಾ ಮಹಾವಿದ್ಯಾಲಯದಲ್ಲಿರುವ ಕಲಾಕೃತಿಗಳನ್ನು ಛಾಯಾಚಿತ್ರ ಮಾಡಲಾಯಿತು. ಈ ಪ್ರಬಂಧ ಸಿದ್ಧಪಡಿಸುವಲ್ಲಿ ಇವು ತುಂಬಾ ಸಹಕಾರಿಯಾಗಿವೆ.

ಡ. ಸಂಗ್ರಹಿಸಿ ವಿಷಯಗಳನ್ನು ಪಟ್ಟಿ ಮಾಡಿಕೊಳ್ಳುವುದು :

ಈ ಅಧ್ಯಯನದ ಕ್ಷೇತ್ರ ಕಾರ್ಯದಲ್ಲಿ ಕೈಗೊಂಡ ಸಂದರ್ಶನ, ಧ್ವನಿಮುದ್ರಣ, ಛಾಯಾಚಿತ್ರಗಳಿಂದ ದೊರೆಯುವ ವಿಷಯಗಳನ್ನು ಪ್ರಬಂಧದ ಪ್ರತಿಯೊಂದು ಅಧ್ಯಾಯಗಳಲ್ಲಿ ವಿಷಯಕ್ಕನುಗುಣವಾಗಿ ವಿಷಯಗಳನ್ನು ಪಟ್ಟಿ ಮಾಡಿಕೊಂಡು ಪ್ರಬಂಧ ರಚನೆ ಮಾಡಲಾಗಿದೆ.

ಅನುಷಂಗಿಕ ಆಕರ ಸಾಮಗ್ರಿ :

ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಂದರ್ಶನ, ಧ್ವನಿಗ್ರಹಣ, ಛಾಯಾಚಿತ್ರಣ ಮೂಲ ಆಕರ ಸಾಮಗ್ರಿಗಳು ಇದಕ್ಕೆ ಸಹಕಾರಿಯಾಗುವಂತೆ ಆನುಸಂಗಿಕ ಆಕರ ಸಾಮಗ್ರಿಗಳಾದ ಸಂಶೋಧನಾ ಮಹಾಪ್ರಬಂಧಗಳು, ಪ್ರಕಟಿತ, ಅಪ್ರಕಟಿತ ಸಾಹಿತ್ಯ ಕೃತಿಗಳು, ನಿಘಂಟುಗಳು, ಪತ್ರಿಕೆಗಳು, ವಿಶ್ವಕೋಶಗಳು ಕಲಾವಿದರ ಕಲಾಕೃತಿಗಳನ್ನುದ್ದೇಶಿಸಿ ಪ್ರಕಟವಾದ ಕಲಾ ಲೇಕನಗಳು, ಕಲಾವಿಮರ್ಶೆಗಳು ಮತ್ತು ಅಭಿಪ್ರಾಯಗಳು ಅಭಿನಂದನಾ ಗ್ರಂಥಗಳು, ಸಂಶೋಧನಾ ಲೇಖನಗಳು, ಗ್ರಂಥಾಲಯಗಳು ಇತ್ಯಾದಿ ವಿವಿಧ ರೀತಿಯ ಆನುಷಂಗಿಕ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳುಲಾಗಿದೆ.

ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಅಧ್ಯಯನದಲ್ಲಿ ಗದಗ ಜಿಲ್ಲೆಯ ಜಾನಪದ ಚಿತ್ರಕಲೆ, ಭಿತ್ತಿಚಿತ್ರಕಲೆ, ಚಿತ್ರಕಲಾ ಶಿಕ್ಷಣ ಸಂಸ್ಥೆಗಳು, ಕಲಾವಿದರ ಕಲಾಕೃತಿಗಳು, ಕಲಾಸಂಗ್ರಹಗಳು ಎಲ್ಲಿ ಇವೆ ಎಂಬುದನ್ನು ದಾಖಲಿಸುವ ದಿಶೆಯಲ್ಲಿ ಗದಗ ಜಿಲ್ಲೆಯಲ್ಲಿ ಇರುವ ಸ್ಥಳಗಳು ಅಲ್ಲದೇ ಇನ್ನುಳಿದ ಸ್ಥಳಗಳಲ್ಲಿ ಇರುವ ಕಲಾಕೃತಿಗಳನ್ನು ಈ ಅಧ್ಯನದಲ್ಲಿ ದಾಖಲಿಸಲಾಗುತ್ತಿದೆ. ಪ್ರಸ್ತುತ ಅಧ್ಯಯನವು ಗದಗ ಜಿಲ್ಲೆಯನ್ನು ಅನುಲಕ್ಷಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ಗದಗ ಜಿಲ್ಲೆಯನ್ನು ಹೊರತು ಪಡಿಸಿ ಬೇರೆ ಪ್ರದೇಶಕ್ಕೆ ಹೋಗಿ ಅಲ್ಲಿನ ಅನೇಕ ಮಾಹಿತಿಗಳನ್ನು ಮತ್ತು ಕಲಾವಿದರ ಕಲಾಕೃತಿಗಳ ಛಾಯಾಚಿತ್ರಗಳನ್ನು ಪಡೆದುಕೊಂಡು ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಅಧ್ಯಾಯ : ಎರಡು

ಗದಗ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತಕಲೆಗಳು : ಕರ್ನಾಟಕ ಕಲಾಕ್ಷೇತ್ರದಲ್ಲಿ ಗದಗ ಜಿಲ್ಲಾ ಸ್ಥಳವು ರಾಜ್ಯದ ಮಹಾನಗರಗಳಲ್ಲೊಂದಾಗಿದೆ. ಗದಗಕ್ಕೆ ಮೊದಲು ಕೃತಮರವೆಂದು ಹೆಸರಿತ್ತು. ಕೃತಪುರ ಮಹಾತ್ಮೆಯ ಬಗ್ಗೆ ೧೮ ಅಧ್ಯಾಯಗಳ ಪುರಾಣ ಇದೆ. ಅದು ಸಂಸ್ಕೃತದಲ್ಲಿ ಬರೆಯಲ್ಪಟ್ಟಿದ್ದು, ಈ ಪುರಾಣದಲ್ಲಿ ವಿವರಸಿದಂತೆ ಈ ಕೃತಪುರದಲ್ಲಿ ಲೋಹಖಂಡಪುರ ಅಥವಾ ಲಕ್ಷಕುಂಡಲಿ ಹಾಕಿ ಮಾಡಿದ ಸ್ಥಳ, ಶಿಬಿಚಕ್ರವರ್ತಿ ರಾಜಧಾನಿ (ಈಗಿನ ಲಕ್ಕುಂಡಿ) ಇತ್ತು. ಹಾಗೂ ಕೋಟಿ ಯಜ್ಞಮಾಡಿದ ಸ್ಥಳ ಕುರ್ತಕೋಟಿ, ಅಣ್ಣಿಗೇರಿ, ಹೊಂಬಳ, ಮುನಿವೃಂದ (ಈಗಿನ ಮುಳಗುಂದ) ಮೊದಲಾದವುಗಳ ಕುರಿತು ಇತಿಹಾಸವಿದೆ.

"ಗದಗ" ಎಂಬ ಪದದ ವಿಷಯವಾಗಿ ಐತಿಹ್ಯದಲ್ಲಿರುವ ಕಥೆಯ ಹೆಚ್ಚಿನ ವಿವರಗಳನ್ನು ಒದಗಿಸುತ್ತದೆ. ಈ ಐತಿಹ್ಯದಂತೆ "ಕೃತಪುರ"ವೆಂಬ ಹೆಸರು ಹಿಂದೆ ಗದುಗಿನಲ್ಲಿ ಈಗಿರುವ ವಕ್ಕಲಗೇರಿಯ ಹೆಸರಾಗಿತ್ತೆಂದು ಶ್ರೀ ನಾರಾಯಣ ದೇವರಿರುವ ದೇವಾಲಯದ ಸುತ್ತ ಗಜಗದ ಗಿಡಗಳ ಮೊಳೆಯತ್ತೆಂದೂ, ಈ ಮೊಳೆಯಲ್ಲಿ ನಾಗಾರ್ಜುನನೆಂಬ ರಾಕ್ಷಸನು ಹೊಕ್ಕಿಕೊಂಡು ಜನರಿಗೆ ಉಪಟಳ ಕೊಡುತ್ತಿದ್ದನೆಂದು ಅವನಿಗೂ ಬದರೀ ಕ್ಷೇತ್ರದಿಂದ ಬಂದ ನಾರಾಯಣನಿಗೂ ೨೧ ದಿನಗಳ ಯುದ್ಧವಾಯಿತೆಂದೂ, ಆ ಸಮಯದಲ್ಲಿ ಸಮೀಪದಲ್ಲಿದ್ದ ಸಣ್ಣ ನದಿಯೊಂದರ ನೀರು ಅಂತರ್ಗಾಮಿಯಾಯಿತೆಂದೂ, ಯುದ್ಧವಾಯಿತೆಂದೂ, ಯುದ್ಧವೂ ನಾಗಾವಿಯವರೆಗೂ ಮುಂದುವರೆದು ಅಲ್ಲಿ ರಾಕ್ಷಸನ ಸಂಹಾರವಾಯಿತೆಂದೂ, ರಾಕ್ಷಸನ ಶಿರವು ಇಂದಿನ ಕಳಸಾಪೂರದಲ್ಲಿ ಬಿದ್ದಿತ್ತೆಂದೂ, ಆತನ ಕೀರಟ

ಬಿದ್ದ ಜಾಗವು ಕಿರೀಟಗೇರಿ (ಕಿಂಟಗೇರಿ) ಯಾಯಿತೆಂದೂ, ಆತನ ಧಡವು ಬಿದ್ದ ಸ್ಥಳ ಬೆಳದಡಿಯಾಯಿತೆಂದೂ ಕಥೆಯಿದೆ. ಆನಂತರ ಶ್ರೀ ನಾರಾಯಣನು ಈ ಗುಡಿಯಿರುವ ಗಜಗದ ಘಳಿಯ ಬಳಿ ಬಂದು ಅಲ್ಲಿ ಮೊದಲೇ ಆವಿರ್ಭವನಿದ್ದ ನರಸಿಂಹಸ್ವಾಮಿಯ ಅನುಮತಿ ಪಡೆದು ನೆಲಸಿದನೆಂದು ಐತಿಹ್ಯವಿದೆ.

ಗದಗ ಜಿಲ್ಲೆ ಕುಮಾರವ್ಯಾಸ, ಚಾಮರಸ, ನಯಸೇನ, ದುರ್ಗಸಿಂಹ, ಸೋಮನಾಥ, ಆದಯ್ಯ, ಅನುಭಾವಿ ಕಲೆ ಬಾಲಲೀಲಾ ಮಹಾಂತ ಶಿವಯೋಗಿ ಮುಂತಾದ ಕವಿ ಕೋಗಿಲೆಗಳ ನೆಲೆ, ಪಾರಂಪರಿಕೆ ಚೆಲುವನ್ನು ಪ್ರತಿನಿಧಿಸುತ್ತಿರುವ ಲಕ್ಕುಂಡಿ, ಡಂಬಳ, ಗದಗ, ಸೂಡಿ, ಲಕ್ಷೇಶ್ವರಗಳ ಸುಂದರ ಭವ್ಯ ಶಿಲ್ಪ ಸೌಧಗಳು ಸಂಗೀತ ಸಾಹಿತ್ಯ, ಚಿತ್ರಕಲೆ, ಶಿಲ್ಪಕಲೆ, ನೃತ್ಯ, ನಾಟಕ, ಜಾನಪದ ಚಟುವಟಿಕೆಗಳು ಗದುಗಿನಲ್ಲಿ ಇಂದಿಗೂ ಜೀವಂತಿಕೆಯಿಂದ ಇವೆ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿರುವ ನಿಸರ್ಗ ಸೊಬಗಿನ ತಾಣ ಕಪ್ಪತ್ತಗಿರಿ ಔಷಧ ಸಸ್ಯಗಳಿಗಾಗಿ ದೇಶದಲ್ಲೇ ಹೆಸರು ವಾಸಿಯಾಗಿದೆ. ವ್ಯಾಪಾರೋದ್ದಿಮೆ, ವಾಣಿಜ್ಯ, ಕೈಗಾರಿಕೆ, ಗುಡಿ ಕೈಗಾರಿಕೆ, ಸಹಕಾರ ಹಾಗೂ ಕೃಷಿ ಕ್ಷೇತ್ರಗಳಲ್ಲೂ ಗದಗ ಜಿಲ್ಲೆ ತನ್ನದೇ ಆದ ವಿಶಿಷ್ಟ ಸ್ಥಾನ ಹೊಂದಿದೆ.

ಗದಗ ಜಿಲ್ಲೆಯು ಲಲಿತಕಲೆಗಳ ಬೀಡು ಹೌದು, ಸಾಹಿತ್ಯ ಕ್ಷೇತ್ರಕ್ಕೆ, ಸಂಗೀತ ಕ್ಷೇತ್ರಕ್ಕೆ ಚಿತ್ರಕಲಾ ಕ್ಷೇತ್ರಕ್ಕೆ, ಧಾರ್ಮಿಕತೆಗೆ, ಕ್ರೀಡಾಲೋಕಕ್ಕೆ ನಾಟಕ ರಂಗಕ್ಕೆ ತನ್ನದೆಯಾದ ವಿಶಿಷ್ಟ ಕೊಡುಗೆಯನ್ನು ನೀಡಿದೆ.

ಸಾಹಿತ್ಯ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ ಅಪಾರವಾದುದು ಕವಿ ಕುಮಾರವ್ಯಾಸನ ಕರ್ಮಭೂಮಿ, ಕವಿ ಚಾಮರಸನ ಜನ್ಮಭೂಮಿ (ನಾರಾಯಣಪೂರ), ರೋಣ ತಾಲೂಕಿನ ಸವಡಿ ಗ್ರಾಮದ ದುರ್ಗಸಿಂಹ, ಮುಳಗುಂದದ ನಯಸೇನ, ಮಲ್ಲಿಫೇಣ, ಬಾಲಲೀಲಾ ಮಹಾಂತ ಶಿವಯೋಗಿ, ಲಕ್ಕುಂಡಿಯ ಮುಕ್ತಾಯ, ಲಕ್ಷ್ಮೇಶ್ವರದ ಆಚಣ್ಣ, ಪರಮಭಕ್ತ ಕವಿ, ಸಂಕ ಕವಿ, ಬೆಟಗೇರಿಯ ಸಿದ್ಧಿ ವಿನಾಯಕ, ದಾನಪಾರ್ಯ, ನರಗುಂದದ ಶ್ರೀಧರಾಚಾರ್ಯ ಮುಂತಾದ ಕವಿ ಕೋಗಿಲೆಗಳ ಪುಣ್ಯಧಾಮವಿದು.

ಆಧುನಿಕ ಸಾಹಿತ್ಯ ಕ್ಷೇತ್ರಕ್ಕೂ ಗದಗ ಜಿಲ್ಲೆಯ ಕೊಡುಗೆ ದೊಡ್ಡದು, ಹುಯಿಲಗೋಳ ನಾರಾಯಣರಾಯರು, ಕನ್ನಡ ಕುಲಪುರೋಹಿತ ಆಲೂರ ವೆಂಕಟರಾಯರು, ಶಾಂತಕವಿಗಳು, ಸಂಗ್ಯಾ–ಬಾಳ್ಯಾ ಖ್ಯಾತಿಯ ಪತ್ತಾರ ಮಾಸ್ತರರು, ಶ್ರೀ ಮುಗಳಿ, ಡಾ. ಆರ್.ಸಿ.ಹಿರೇಮಠ, ಕವಿ. ಸಂ. ಶಿ. ಭೂಸನೂರಮಠ, ಕವಿ ಚನ್ನವೀರ ಕಣವಿ, ಸೋಮಶೇಖರ ಇಮ್ರಾಪೂರ, ಕೋಡಿಕೊಪ್ಪದ ಬಸವರಾಜ ಶಾಸ್ತ್ರೀ, ಬಿ.ಫ್ಹಿ. ಮಲ್ಲಾಪೂರ, ನಾಟಕಕಾರ ಗರೂಡ ಸದಾಶಿವರಾಯರು, ಶ್ರೀ ಎಚ್.ಎನ್.ಹೂಗಾರ, ಪ.ಶಿ.ಭಾಂಡಗೆ, ಎನ್ಕೆ ಕುಲಕರ್ಣಿ, ಕೆ.ಬಿ. ಅಂಗಡಿ, ಎನ್.ಜಿ.ಜಾಡಗೌಡರ, ಎಂ.ಜೀವನ ಮುಂತಾದವರೆಲ್ಲ ಕನ್ನಡ ಸಾಹಿತ್ಯಕ್ಕೆ ಗದಗ ಜಿಲ್ಲೆಗೆ ಸಲ್ಲಿಸಿದ ಸಾಹಿತ್ಯದ ಕುಸುಮಗಳು.

ನರಗುಂದದ ಬಾಬಾಸಾಹೇಬನ ಅರಮನೆಯ ಭಿತ್ತಿಚಿತ್ರಗಳು ತುಂಬ ಮನಮೋಹಕವಾಗಿವೆ. ಚಿಂಚಲಿ ಗ್ರಾಮ ರಸ್ತೆಗೆ ಹೊಂದಿಕೊಂಡಿರುವ ಗುಡ್ಡದ ದಕ್ಷಿಣ ಭಾಗದಲ್ಲಿರುವ ಬೃಹತ ಕಲ್ಲಿನ **ಛಾಯಾಚಂದ್ರನಾಥ** ಇತಿಹಾಸಿಕ ಪ್ರಸಿದ್ಧಿ ಪಡೆದಿದೆ. ಅಂತರಾಷ್ಟ್ರೀಯ ಖ್ಯಾತಿಯ ಕಲಾವಿದ ಶ್ರೀ

ಅಮೀನಸಾಬ ಕಮಡೊಳ್ಳಿ, ಕೆ. ವೆಂಕಟಪ್ಪ ಪ್ರಶಸ್ತಿ ಪುರಸ್ಕೃತ ಶ್ರೀ ಎಮ್.ಎ. ಚೆಟ್ಟಿಯವರು, ಶ್ರೀ ಟಿ.ಪಿ. ಅಕ್ಕಿ, ಶ್ರೀ ಸಿ.ಎನ್. ಪಾಟೀಲ, ಶ್ರೀ ಶಿವಾನಂದ ಅಕ್ಕಿ ಗದುಗಿನ ಹೆಮ್ಮೆಯ ಕಲಾವಿದರು. ಶ್ರೀ ಎಸ್.ಎಂ. ಶಿರಹಟ್ಟಿ, ಶ್ರೀ ಎಂ.ಆರ್. ಬಾಗವಾನ, ಶ್ರೀ ಜಿ.ಎನ್. ಚಾಡಗೌಡರ, ಕೆ.ವ್ಹಿ. ಕುಂದಗೋಳ, ವಸಂತ ಅಕ್ಕಿ, ಶ್ರಿ ಎ.ಎ. ಶಿರಹಟ್ಟಿ, ಶ್ರೀ ಎನ್.ಎ. ಹರ್ಲಾಪೂರ, ಮುಂತಾದ ಕಲಾವಿದರನ್ನು ಮತ್ತು ಅನೇಕ ಯುವ ಕಲಾವಿದರನ್ನು ಗದಗ ಜಿಲ್ಲೆ ಚಿತ್ರಕಲಾ ಕ್ಷೇತ್ರಕ್ಕೆ ತನ್ನದೆಯಾದ ವಿಶಿಷ್ಠವಾದ ಕೊಡುಗೆ ನೀಡಿದೆ.

ಶಿಲ್ಪಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ ವಿಶಿಷ್ಟ ರೀತಿಯದ್ದಾಗಿದೆ. ಕಲ್ಯಾಣ, ಚಾಲುಕ್ಯ, ಹೊಯ್ಸಳ, ವಿಜಯನಗರದ ಶೈಲಿಯ ಪ್ರಾಚೀನ ದೇಗುಲಗಳ ಜಿಲ್ಲೆಯ ಸಾಂಸ್ಕೃತಿಕ ಸಂಪತ್ತು ಗದುಗಿನ ವೀರನಾರಾಯಣ, ತ್ರಿಕೋಟೇಶ್ವರ, ಸರಸ್ವತಿ ದೇವಾಲಯಗಳು, ಲಕ್ಕುಂಡಿಯಲ್ಲಿರುವ ಸೂರ್ಯದೇವಾಲಯ, ಕಾಶಿ ವಿಶ್ವೇಶ್ವರ ದೇವಾಲಯಗಳು, ದಾನ ಚಿಂತಾಮಣಿ ಅತ್ತಿಮಬ್ಬೆ ನಿರ್ಮಿಸಿದ ಬ್ರಹ್ಮ ಜಿನಾಲಯ, ಡಂಬಳದ ದೊಡ್ಡ ಬಸಪ್ಪ ದೇವಾಲಯ, ಸೂಡಿಯ ಮಲ್ಲಿಕಾರ್ಜುನ ದೇವಾಲಯ, ಸವಡಿಯ ಶಂಕರನಾರಾಯಣ ದೇವಾಲಯ, ಲಕ್ಷೇಶ್ವರದ ಸೋಮೇಶ್ವರ ದೇವಾಲಯ ಮುಂತಾದವು ಶಿಲ್ಪಕಲೆಯ ಸುಂದರ ಸೌಧಗಳಾಗಿದ್ದು, ರಾಜ್ಯ ರಾಷ್ಟ್ರಮಟ್ಟದಲ್ಲಿ ಬಿಂಬಿಸುತ್ತವೆ.

ಅಂತರಾಷ್ಟ್ರೀಯ ಖ್ಯಾತಿಯ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರ ಪಂ. ಭೀಮಸೇನ ಜೋಷಿಯವರು ಗದಗಿನವರು. ಉಭಯ ಗಾಯನ ಕಲಾವಿದ, ಆಸ್ಥಾನ ಸಂಗೀತ ವಿದ್ವಾನ ಡಾ. ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರ ಬಳಗ ನಾಡಿನ ಅನೇಕ ಹೆಸರಾಂತ ಗಾಯಕರಾಗಿದ್ದಾರೆ.

ಕ್ರೀಡಾ ಲೋಕದಲ್ಲಿ ಗದುಗ ಜಿಲ್ಲೆ ವಿಶಿಷ್ಟ ಸ್ಥಾನವನ್ನು ಪಡೆದಿದೆ ಅದರಲ್ಲಿ ಕ್ರಿಕೆಟ್ ತಾರೆ ಸುನೀಲ ಜೋಶಿ, ಹಾಕಿ ಮಾಂತ್ರಿಕನೆಂದು ಪ್ರಖ್ಯಾತರಾದ ಶ್ರೀ ರಾಜು ಬಗಾಡೆಯವರು ಮುಂತಾದ ಕ್ರೀಡಾ ಪಟುಗಳು ಗದುಗಿನ ಹೆಸರು ತಂದಿದ್ದಾರೆ.

ಗದಗ ಜಿಲ್ಲೆಯು ಧಾರ್ಮಿಕತೆಯ ಪಾರಂಪರೆಯನ್ನು ಪಡೆದುಕೊಂಡಿದೆ. ಧರ್ಮ ಸಹಿಷ್ಣುತೆಗೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಬಲ್ಲ ಜಿಲ್ಲೆ ಗದಗ, ವೈಷ್ಣವ ಸಂಪ್ರದಾಯದ ಶ್ರೀ ವೀರನಾರಾಯಣ ದೇವಾಲಯ, ಶೈವ ಸಂಪ್ರದಾಯದ ಶ್ರೀ ತ್ರೀಕೂಟೇಶ್ವರ ದೇವಾಲಯ ಹಾಗೂ ಇಸ್ಲಾಂ ಧರ್ಮದ ಜುಮ್ಮಾ ಮಸ್ಜಿದ್ ಈ ಮೂರು ಧಾರ್ಮಿಕ ಸಂಸ್ಥೆ ಸೇರಿ ಒಂದೇ ಟ್ರಸ್ಟ ಇರುವುದು ಕೋಮುಸೌಹಾರ್ದತೆಗೆ ಗದುಗು ಮಾದರಿಯಾಗಿದೆ. ಶಿರಹಟ್ಟಿಯ ಫಕೀರೇಶ್ವರ, ವರವಿಯ ಮೌನೇಶ್ವರ ಹಿಂದೂ-ಇಸ್ಲಾಂ ಎರಡೂ ಧರ್ಮಗಳ ಸಮನ್ವಯದ ಸಾಮರಸ್ಯ ಕೇಂದ್ರಗಳು ಗದುಗಿನ ಶ್ರಿ ಜಗದ್ಗುರು ತೋಂಟದಾರ್ಯ ಮಠವಂತೂ ಸರ್ವಧರ್ಮಗಳಿಗೆ ಮುಕ್ತವಾಗಿ ಬಾಗಿಲನ್ನು ತೆರೆದ ಸರ್ವಧರ್ಮೀಯರ ಸಮನ್ವಯಕ್ಕಾಗಿ ಭಾರತದ ರಾಷ್ಟ್ರಪತಿಗಳಿಂದ ಪುರಸ್ಕೃತರಾದ ದಕ್ಷಿಣ ಭಾರತದ ಮೊಟ್ಟ ಮೊದಲು ಮಠಾಧಿಪತಿ. ಲಕ್ಷೇಶ್ವರದ ದೂದಪೀರಾ ಸೂಫಿ ಗದ್ದುಗೆಯು ಹಿಂದೂ-ಮುಸ್ಲಿಮರಿಗೆ ಸಮಾನ ಪುಣ್ಯ ಸ್ಥಳ.

ಅನೇಕ ಅಂಧರ ಬದುಕಿಗೆ ಬೆಳಕಾದ ಪಂ. ಪಂಚಾಕ್ಷರ ಗವಾಯಿಗಳವರು ಹಾಗೂ ಸಂಗೀತ ವಿದ್ವಾನ್ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರು, ಶ್ರೀ ವಿರೇಶ್ವರ ಪುಣ್ಯಾಶ್ರಮವೆಂದೇ, ಖ್ಯಾತರಾದ ಗವಾಯಿಗಳ ಆಶ್ರಮ ಸಹಸ್ರಾರು ಅಂಧರಿಗೆ ಅನ್ನ, ಅರಿವೆ, ಅರಿವು-ಆಶ್ರಯ ಒದಗಿಸಿ ಸಲುಹಿದೆ.

ಶಿವಾನಂದ ಮಠವು, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದೆ ಸ್ವಾಮಿ ವಿವೇಕಾನಂದ ಆಶ್ರಮವೂ ಜನತೆಯನ್ನು ಆಧ್ಯಾತ್ಮಪಥದಲ್ಲಿ ಮುನ್ನಡೆಸುತ್ತಿವೆ. ಮುಂಡರಗಿ ಜಗದ್ಗುರು ಡಾ. ಅನ್ನದಾನೇಶ್ವರ ಮಹಾಸ್ವಾಮಿಗಳು ಕನ್ನಡ, ಸಂಸ್ಕೃತ, ಹಿಂದಿ ಹೀಗೆ ತ್ರಿಭಾಷಾ ಪಂಡಿತರಾಗಿದ್ದು ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ ವಿದ್ವಾಂಸರಾಗಿದ್ದಾರೆ.

ಹೀಗೆ ಗದಗ ಜಿಲ್ಲೆಯು ಸಾಹಿತ್ಯ, ಸಂಗೀತ, ಚಿತ್ರಕಲೆ, ಶಿಲ್ಪಕಲೆ, ಧಾರ್ಮಿಕ, ರಾಜಕೀಯ, ಕ್ರೀಡೆ, ಸಹಕಾರ, ನಾಟಕ ಮುಂತಾದ ಲಲಿತಕಲೆಗಳ ಸಂಸ್ಕೃತಿಯನ್ನು ಬಿಂಬಿಸುವ ಪರಂಪರೆಯನ್ನು ಗದಗ ಜಿಲ್ಲೆ ಹೊಂದಿದ್ದು ಇವುಗಳ ಕುರಿತು ಸಮಗ್ರವಾದ ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಮೂರು

ಗದಗ ಜಿಲ್ಲೆಯ ಜನಪದ ಚಿತ್ರಕಲೆ : ಸಾಮಾನ್ಯವಾಗಿ ಜನಪದ ಕಲೆಯು ಧಾರ್ಮಿಕ ಹಿನ್ನೆಲೆಯಲ್ಲಿ ರೂಪಗೊಂಡಿದೆ. ಹಬ್ಬ, ಉತ್ಸವ, ಜಾತ್ರೆ, ಮದುವೆಯಂತಹ ಸಂಭ್ರಮದ ದಿನಗಳಲ್ಲಿ ಸಾರಿಸಿ, ಸುಣ್ಣ ಬಣ್ಣ,ಗಳಿಂದ ಅಲಂಕರಿಸುತ್ತಾರೆ. ಗೋಡೆಗೆ ಸುಣ್ಣದಿಂದ ಇಲ್ಲವೇ ಹುರುಮಂಜಿನಿಂದ ಸಾರಿಸಿ ಅಧಿಕ, ಸ್ವಸ್ತಿಕ ಸಂಕೇತಗಳನ್ನು ಇಡುತ್ತಾರೆ. ಮನೆಯ ಗೋಡೆಗಳು ಖಾಲೀ ಇರಬಾರದೆಂದು ಹಾಗೆ ಬಿಟ್ಟರೆ ಅಮಂಗಳವೆಂದು ಹಳ್ಳಿಯ ಜನರ ಭಾವನೆ. ಮಾನವಕೃತಿಗಳು, ಹಾವು ಚೇಳು, ಸೂರ್ಯ, ಚಂದ್ರ, ವಾಲಗದವರು ಮೊದಲಾದ ಚಿತ್ರ ವಿನ್ಯಾಸಗಳು ಕಂಡುಬರುತ್ತವೆ. ಮಹಿಳೆಯರು ಬಾಗಿಲು ಪೂಜೆ ಮಾಡುತ್ತಾರೆ. ಪೂಜೆಯ ಆಚರಣೆಯಲ್ಲಿ ವಿಭೂತಿ, ಕುಂಕುಮ, ಅರಿಷಿಣಗಳಿಂದ ಚುಕ್ಕೆಗಳನ್ನು ಇಟ್ಟು ವಿವಿಧ ವಿನ್ಯಾಸಗಳಿಂದ ಪೂಜಿಸಿದರೆ, ಬಾಗಿಲು ಎದುರಿಗೆ ವಿವಿಧ ವಿನ್ಯಾಸದ ರಂಗವಲ್ಲಿಯ ರೇಖೆಗಳನ್ನು ಎಳೆಯುತ್ತಾರೆ.

ಗದಗಜಿಲ್ಲೆಯ ತೊಗಲುಗೊಂಬೆ ಚಿತ್ರಕಲೆ ಮತ್ತು ತೊಗಲುಗೊಂಬೆ ತಯಾರಿಸುವ ರೀತಿ ವಿಧಿವಿಧಾನಗಳು ಮತ್ತು ಪರಿಕರಗಳು ತೊಗಲು ಗೊಂಬೆಯ ಆಟವಾಡುವ ಜನಾಂಗ ಕುರಿತು ಯಾವ ವೇಳೆಯಲ್ಲಿ ಆಟವಾಡುತ್ತಾರೆ. ಎಂಬುದರ ಕೋರಿತು ಮತ್ತು ಸೋತ್ರಗೊಂಬೆ ಕಲೆಯ ಕುರಿತು ರಂಗವಲ್ಲಿಯು ಭಾರತದ ಅತ್ಯಂತ ಪ್ರಾಚೀನ ಜನಪದ ಕಲೆ, ಬದುಕಿನ ಖುಷಿಯನ್ನು ಸೌಭಾಗ್ಯ ಮಂಗಲಕರ ಪ್ರಸನ್ನತೆಯನ್ನು ಹೇಳುವ ಲಾಲಿತ್ಯಪೂರ್ಣ ಕಲಾಕೌಶಲ್ಯವೇ ರಂಗವಲ್ಲಿ. ಈ ಕಲೆಯಲ್ಲಿ ಶ್ರೇಷ್ಠ ಕಲೆಯ ಲಕ್ಷಣಗಳೆಲ್ಲವೂ ಇವೆ. ಈ ಜನಪದ ಕಲೆಯು ಸೌಂದರ್ಯಪ್ರಜ್ಞೆಯ ದ್ಯೋತಕವಾಗಿದೆ. ೧. ಚುಕ್ಕೆಯ ರಂಗೋಲಿ, ೨. ಚುಕ್ಕೆ ರಹಿತ ರಂಗೋಲಿ ಎಂದು ಎರಡು ವಿಧದಲ್ಲಿ ಹಾಕುವರು. ಮೊದಲನೆಯದಲ್ಲಿ ಜಾಮಿತಿ ಆಕಾರದ ಚಿತ್ರಗಳನ್ನು ತ್ರಿಕೋನ, ಚೌಕ, ವರ್ತುಲಗಳ, ಆಯತ ಇತ್ಯಾದಿ ಚಿತ್ರಿಸಿದರೆ, ಎರಡನೆಯದರಲ್ಲಿ ನೈಸರ್ಗಿಕ ವಸ್ತುಗಳ ಚಿತ್ರಣ ಎಲೆ, ಹೂವು, ಗಿಡ, ಬಳ್ಳಿ, ಪ್ರಾಣಿ, ಪಕ್ಷಿ ಮುಂತಾದವುಗಳನ್ನು ಬಿಡಿಸುತ್ತಾರೆ.

ಗದಗ ಜಿಲ್ಲಿಯಲ್ಲಿ ಮದರಂಗಿ ಚಿತ್ರ ವಿನ್ಯಾಸಗಳು ರಂಗೋಲಿಯಲ್ಲಿ ಬರುವ ಚಿತ್ರ ವಿನ್ಯಾಸಗಳನ್ನೇ ಬಳಸಿರುವುದು ಕಂಡುಬರುತ್ತದೆ. ಬಳ್ಳಿ ಪ್ರಧಾನವಿರುವ ಚಿತ್ರವಿನ್ಯಾಸಗಳು ಕಾಲಿನ ಮೇಲೆ ಕೈಗಳ ಮೇಲೆ ಹಾಕುವ ಮದರಂಗಿಯಲ್ಲಿ ಆಭರಣಗಳ ಚಿತ್ರ ವಿನ್ಯಾಸ ವಿಶೇಷವಾಗಿ ಕಂಡು ಬರುತ್ತದೆ. ಬಳ್ಳಿ ಸುಳುವುಗಳೊಂದಿಗೆ ಸ್ವಸ್ತಿಕ, ಶ್ರೀ, ಶುಭ-ಲಾಭ, ಓಂ, ಸೂರ್ಯ, ಚಂದ್ರ ಹಾಗೂ ವಿವಿಧ ಆಭರಣಗಳ

ಮಾದರಿಯ ಚಿತ್ರ ವಿನ್ಯಾಸಗಳು ಮದರಂಗಿ ಕಲೆಯಲ್ಲಿ ಕಾಣಿಸುತ್ತವೆ. ವಿಶೇಷವಾಗಿ ಕಂದುಗೆಂಪು ಬಣ್ಣದ ರೇಖಾವಿನ್ಯಾಸಗಳಿದ್ದು, ಹಬ್ಬ-ಹರಿದಿನಗಳಲ್ಲಿ ಮದುವೆ ಮುಂಜಿವೆಗಳಲ್ಲಿ ಎಲ್ಲರೂ ಈ ಭಾಗದಲ್ಲಿ ಬಳಸುತ್ತಿರುವುದು ಕಂಡು ಬರುತ್ತದೆ.

ಮದರಂಗಿ ಕಲೆಗೆ ಹೊಂದಿಕೊಂಡಿರುವ ಹಚ್ಚೆ ಚಿತ್ರಕಲೆಯೂ ಈ ಭಾಗದಲ್ಲಿ ಪ್ರಾಚೀನ ಕಾಲದಿಂದಲೇ ರೂಡಿಯಲ್ಲಿದ್ದಂತೆ ರಂಗವಲ್ಲಿಯಂತೆ ಇಲ್ಲಿಯೂ ಚಿತ್ರಕಲೆಯ ಸಂಕೇತಗಳನ್ನು ಉಪಯೋಗಿಸುತ್ತಾರೆ. ಬಹೂಪಯೋಗಿಯಾಗಿ ಈ ಕಲೆ ಬಳಸಲ್ಪಡುತ್ತದೆ. ಕೈ-ಕಾಲು ಮುಖ, ಹೊಟ್ಟೆ (ಮೈಮೇಲೆಲ್ಲ) ಸಂದರ್ಭಕ್ಕನುಸಾರವಾಗಿಯೂ ಈ ಕಲೆಯನ್ನು ಸಂಕೇತ ಪ್ರಧಾನವಾಗಿ ಬಳಸಿರುವುದು ಇತಿಹಾಸದಿಂದ ತಿಳಿದು ಬರುತ್ತದೆ.

ಗದಗ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಹಾಸು ಹೊದಿಕೆಯಾಗಿ ಬಳಸುವ ಕೌದಿಯೂ ಒಂದು ಜನಪದ ಸ್ತ್ರೀಯರ ಸೌಂದರ್ಯದ ಪ್ರಜ್ಞೆಯ ಅಭಿವ್ಯಕ್ತಿಯಾಗಿ, ಬಹೂಪಯೋಗಿ ವಸ್ತುವಾಗಿ, ಕೌದಿ ಕಂಡುಬರುತ್ತದೆ. ಮನೆಯಲ್ಲಿ ಹೆಣ್ಣುಮಕ್ಕಳ, ಗಂಡಸರ, ಮಕ್ಕಳ ಹಳೆಯ ಹರಿದ ಬಟ್ಟೆಗಳನ್ನು ಕಲಾತ್ಮಕವಾಗಿ ಕತ್ತರಿಸಿ ಒಂದರ ಮೇಲೊಂದು ತೇಪೆ ಹಚ್ಚಿ ದಾರದ ದೊಡ್ಡ ಹೊಲಿಗೆ ಹಾಕುತ್ತ ವಿವಿಧ ರೀತಿಯ ಚಿತ್ರ ವಿನ್ಯಾಸಗಳನ್ನು ತುಂಡು ಬಟ್ಟೆಯಲ್ಲಿ ಜೋಡಿಸುತ್ತ ಹೊಲಿಯುತ್ತಾರೆ. ಕೌದಿಗಳಲ್ಲಿ ವೈವಿಧ್ಯತೆಯನ್ನು ಬಳಸಿ ಚಿತ್ತಾರಗಳನ್ನು ಸೃಷ್ಟಿಸುತ್ತಾರೆ. ತಮ್ಮ ಭಾವನಗೆಳಿಂದ ಹೊರಂಹೊಮ್ಮುವ ಕಲಾತ್ಮಕತೆ ಈ ಚಿತ್ತಾರಗಳಲ್ಲಿ ಎದ್ದುಕಾಣುತ್ತದೆ.

ಕಸೂತಿ ಕಲೆ ಎಂದರೆ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಹಣೆಗೆಯ ಅಲಂಕಾರವೆಂಬ ಅರ್ಥವಿದೆ. ಬಟ್ಟೆಗಳ ಮೇಲೆ ಸೂಜಿ ದಾರಗಳಿಂದ ಹೆಣೆದು ಮಾಡುವ ಅಲಂಕಾರವನ್ನೇ ಕಸೂತಿ ಎನ್ನಬಹುದು. ಬಟ್ಟೆಗಳ ಮೇಲೆ ಚಿತ್ರಗಳ ಬಾಹ್ಯರೇಖೆಗಳನ್ನು ಗುರುತುಹಾಕಿಕೊಳ್ಳಲು ಪೆನ್ಸಿಲ್, ಇದ್ದಿಲು, ಚಾರ್ಕೂಲ್‌ಗಳನ್ನು ಬಳಸುತ್ತಾರೆ. ಕಸೂತಿಕಲೆಯಿಂದ ಧಾರ್ಮಿಕ ಚಿತ್ರಗಳೊಂದಿಗೆ ತುಳಸಿಕಟ್ಟೆ, ತೇರು, ಗೋಪುರ, ಬಾಸಿಂಗ, ನಾಯಿ, ಮೊಲ, ಬೆಕ್ಕು, ಪಶು, ಪಕ್ಷಿಗಳು, ಹೂ ಬಳ್ಳಿ, ಸೂರ್ಯ, ಚಂದ್ರ ಹಾವೂ ಭೂಮಿತಿ ಆಕೃತಿಯ ಚಿತ್ರಗಳನ್ನು ಕಸೂತಿ ಕಲೆಯಿಂದ ರಚಿಸುತ್ತಾರೆ. ಗದಗ ಜಿಲ್ಲೆಯಲ್ಲಿ ಲಂಬಾಣಿ ಸಮುದಾಯದ ಅನೇಕ ತಾಂಡಾಗಳಿದ್ದು ಕಳಸಾಪೂರ, ನಾಗಾವಿ, ಬೆಳಧಡಿ, ಪಾಪನಾಸಿ, ಅಡವಿಸೋಮಾಪೂರ ಮುಂತಾದ ತಾಂಡಾಗಳಲ್ಲಿ ಲಂಬಾಣಿ ಸ್ತ್ರೀಯರ ಬಟ್ಟೆಗಳಲ್ಲಿ ಕಸೂತಿ ಚಿತ್ರಗಳು ಹೆಚ್ಚಾಗಿ ಬಳಕೆ ಆಗಿರುವುದನ್ನು ಕಾಣುತ್ತೇವೆ. ಲಂಬಾಣಿಮಹಿಳೆಯರು ಕಸೂತಿ ಕಲೆಯಲ್ಲಿ ಬಟ್ಟೆಗಳನ್ನು ಧರಿಸುವುದೇ ಅಪರೂಪವಾಗಿದ್ದು ಅದರಲ್ಲೂ ಮದುವೆ, ಹಬ್ಬ ಹರಿದಿನಗಳಲ್ಲಿ ಉತ್ಸವಗಳಲ್ಲಿ ತೊಡುವ ಅವರ ಉಡುಗೆ ತೊಡುಗೆಗಳಲ್ಲಿ ವೈಭವಪೂರ್ಣವಾಗಿ ಕಸೂತಿ ಕಲೆಯ ಬಳಕೆ ಆಗಿರುವುದು ಕಂಡುಬರುತ್ತದೆ. ಅವುಗಳ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ನಾಲ್ಕು

ಗದಗ ಜಿಲ್ಲೆಯ ಭಿತ್ತಿ ಚಿತ್ರಕಲೆ : ಗದಗ ಜಿಲ್ಲೆಯ ನರಗುಂದ ಬಾಬಾಸಾಹೇಬರ ಅರಮನೆಯಲ್ಲಿ ಮತ್ತು ನರಗುಂದ ಗುಂಡಪ್ಪ ಹಸಬಿ ಎಂಬುವರ ಮನೆಯಲ್ಲಿ ಬರೆದ ಹಲವಾರು ರೇಖಾ ವರ್ಣ ಚಿತ್ರಗಳಿವೆ. ಮರಾಠರ ಕಾಲದ ಚಿತ್ರಗಳೆಂದು ಕರೆಯಿಸಿಕೊಳ್ಳುವ ಈ ಭಿತ್ತಿಚಿತ್ರಗಳು ೧೮೭೫ರಲ್ಲಿ

ನರಗುಂದದ ಶ್ರೀ ಗುಂಡಪ್ಪ ಹಸಬಿಯವರ ಎರಡಂತಸ್ತಿನ ಮನೆಯಲ್ಲಿ ಇದ್ದು, ಅವು ಈಗ ಬಿದ್ದು, ಮೊದಲನೆಯ ಮಹಡಿಯ ಹೊರಭಾಗದ ಚಾವಡಿಯಲ್ಲಿ ಕಟ್ಟಿಗೆಯ ಹಲಗೆಗಳ ಮೇಲೆ ಹತ್ತು ಹಲವು ಭಿತ್ತಿ ಚಿತ್ರಗಳು ಉಳಿದುಕೊಂಡಿವೆ. ಹಳದಿ ಬಣ್ಣದ ಲೇಪನ ಮಾಡಿ ಕಂದು ಬಣ್ಣದ ರೇಖೆಗಳನ್ನು ಎಳೆಯಲಾಗಿದೆ. ಕೃಷ್ಣಲೀಲೇ, ಆಂಜನೆಯನ ಚಿತ್ರಗಳನ್ನು ನೋಡಿದರೆ ಚಿತ್ರಗಳ ರೇಖಾವಿನ್ಯಾಸ, ಬಳಸಿದ ಬಣ್ಣ, ವಿಷಯ ವಸ್ತು, ಶೈಲಿಯನ್ನು ಗಮನಿಸಿದರೆ ಗುಳೇದಗುಡ್ಡದಲ್ಲಿಯ ಭಿತ್ತಿಚಿತ್ರಗಳಿಗೂ ನರಗುಂದದ ಈ ಭಿತ್ತಿ ಚಿತ್ರಗಳಿಗೂ ಸಾಮ್ಯತೆ ಇರುವುದು ಕಂಡು ಬರುತ್ತದೆ ಅಲ್ಲದೆ ಇವು ಒಂದೇ ಕಾಲದ ರಚನೆಯೆಂಬುದು ತಿಳಿದು ಬರುತ್ತದೆ. ಅವುಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗುವುದು.

ಬಾಬಾಸಾಹೆಬರ ಅರಮನೆಯಲ್ಲಿ ಅರಮನೆಯಲ್ಲಿ ಭಿತ್ತಿಚಿತ್ರಗಳು ಒಂದು ಕೋಣೆಯ ಗೋಡೆಗಳ ಮೇಲೆ ಹಲವಾರು ಚಿತ್ರಗಳನ್ನು ಬಿಡಿಸಲಾಗಿದೆ ಇಲ್ಲಿಯ ಚಿತ್ರಗಳಲ್ಲಿ ಚೌಕಾಕಾರದಲ್ಲಿ ಕೆಂಪು ಬಣ್ಣಗಳನ್ನು ಹಿನ್ನೆಲಯಾಗಿ ಬಳಸಿದ್ದಾರೆ. ಕುಳಿತ ಭಂಗಿಯಲ್ಲಿರುವ ಈ ವಿನಾಯಕನ ಚಿತ್ರಕ್ಕೆ ಆಕರ್ಷಕ ವರ್ಣಗಳ ಬಳಕೆಯನ್ನು ಮಾಡಿದ್ದು ವೇಷ-ಭೂಷಣಗಳ ಅಲಂಕಾರವನ್ನು ನೋಡಿದರೆ ಸ್ಥಳೀಯ ಕಲಾವಿದರಿಂದಲೇ ರಚನೆ ಆಗಿರಬಹುದು ಎಂದು ತಿಳಿಯಬಹುದಾಗಿದೆ. ಇಬ್ಬರು ಹೆಣ್ಣುಮಕ್ಕಳು ಕೈಯಲ್ಲಿ ಹೂ ಮಾಲೆ ಮತ್ತು ಕಳಸ ಹಿಡಿದುಕೊಂಡು ಮುಂದೆ ನಿಂತಿರುವ ದೃಶ್ಯವಿದ. ಹಸಿರು ಮತ್ತು ಬಿಳಿ ಬಣ್ಣದ ವಿವಿಧ ರೀತಿಯ ಹೂವುಗಳು, ತೆಂಗಿನ ಗಿಡಗಳು, ರೆಕ್ಕೆಗಳಿರುವ ಇಬ್ಬರು ಯಕ್ಷರ ಚಿತ್ರಗಳನ್ನು ಇಲ್ಲಿ ಕಾಣಬಹುದು.

ಇನ್ನೂ ಅನೇಕ ಕಥಾನಕದ ಭಿತ್ತಿಚಿತ್ರಗಳು ನರಗುಂದ ಬಾಬಾಸಾಹೆಬರ ಅರಮನೆಯಲ್ಲಿ ಇರುವ ಎಲ್ಲ ಭಿತ್ತಿ ಚಿತ್ರಗಳ ಕುರಿತು ಸಮಗ್ರವಾಗಿ ಅಧ್ಯಯನ ಮಾಡಿ ಭಿತ್ತಿಚಿತ್ರಗಳ ಛಾಯಾ ಚಿತ್ರಗಳನ್ನು ಈ ಆಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ : ಐದು

ಗದಗ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು ಹಾಗೂ ಚಿತ್ರಕಲಾ ಶಿಕ್ಷಕರು : ಗದಗ ಜಿಲ್ಲೆ ಚಿತ್ರಕಲಾ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು, ಚಿತ್ರಕಲಾ ಶಿಕ್ಷಣ ಸಂಸ್ಥೆಗಳು ಮತ್ತು ಚಿತ್ರಕಲಾ ಶಿಕ್ಷಕರು ಅಪಾರ ಕೊಡುಗೆ ನೀಡಿದ್ದಾರೆ.

೧೯೪೭ರಲ್ಲಿ ಗದುಗಿನ ಕಲಾತಪಸ್ವಿ ಶ್ರೀ ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರವನ್ನು ಸ್ಥಾಪಿಸಿದರು, ಒಬ್ಬ ಚಿತ್ರಕಲಾ ಶಿಕ್ಷಕ ಏನೆಂಬುದನ್ನು ಸಾಧಿಸಬಲ್ಲ ಎಂಬುದಕ್ಕೆ ಶ್ರೀ ಟಿ.ಪಿ.ಅಕ್ಕಿಯವರೇ ಸಾಕ್ಷಿ. ತಾವು ವೃತ್ತಿಯಿಂದ ನಿವೃತ್ತಿ ಪಡೆದು ಕಲಾಮಂದಿರಕ್ಕಾಗಿಯೇ ತಮ್ಮನ್ನು ತೊಡಗಿಸಿಕೊಂಡರು. ಹಗಲಿರುಳು ಪರಿಶ್ರಮಿಸಿ ಕಲಾವಿದ್ಯಾರ್ಥಿಗಳ ಅಭಿವೃದ್ಧಿಗೆ ಕಲಾಶಾಲೆಯ ಬೆಳವಣಿಗೆ ಮಾಡಿದರು. ವಿದ್ಯಾರ್ಥಿಗಳೊಂದಿಗೆ ಪ್ರೀತಿಯಿಂದ ಬೆರೆತು ಅವರಿಗೆ ಕಲಿಕೆಯತ್ತ ಅಭಿರುಚಿ ಹುಟ್ಟುವಂತೆ ಮಾಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿದ್ದರು. ವಿಜಯ ಕಲಾ ಸಂಸ್ಥೆಯು ಚಿತ್ರಕಲಾ ಶಿಕ್ಷಕರ ನಿಜವಾದ ಹಿತಚಿಂತನೆಯನ್ನು ಮಾಡುವುದರ ಜೊತೆಗೆ ಕಲಾಕ್ಷೇತ್ರಕ್ಕೆ ರಾಜ್ಯ, ರಾಷ್ಟ್ರೀಯ ಮಟ್ಟದ ಕಲಾವಿದರನ್ನು ಕಲಾ ಶಿಕ್ಷಕರನ್ನು ತಯಾರಿಮಾಡಿದೆ. ಸಾವಿರಾರು ವಿದ್ಯಾರ್ಥಿಗಳು ನೂರಾರು ಉತ್ತಮ ಶಿಕ್ಷಕರನ್ನು ವಿಜಯ ಕಲಾಮಂದಿರ ಕೊಡುಗೆಯಾಗಿ ನೀಡಿದೆ.

ವಿಜಯ ಕಲಾಮಂದಿರದಲ್ಲಿ ಅನೇಕ ಉತ್ತಮ ಕಲಾ ಶಿಬಿರಗಳು, ಕಲಾ ಪ್ರದರ್ಶನಗಳು, ಕಲಾಚಟುವಟಿಕೆಗಳು ನಡೆದಿದ್ದು ಅವುಗಳ ಕುರಿತು ಅಧ್ಯಯನ ಮಾಡಲಾಗಿದೆ. ಈ ಸಂಸ್ಥೆಯಲ್ಲಿ ಕೆಲಸ ಮಡಿದ ಪ್ರಾಚಾರ್ಯ ಶ್ರೀ ಸಿ.ಎನ್.ಪಾಟೀಲ, ಡಾ. ವಸಂತ ಟಿ. ಅಕ್ಕಿ, ಉಪನ್ಯಾಸಕರಾದ ಶ್ರೀ ಕೆ.ವ್ಹಿ. ಕುಂದಗೋಳ ಮತ್ತು ಕೆಲಸ ಮಾಡುತ್ತಿರುವ ಪ್ರಾಚಾರ್ಯ ಶ್ರೀ ಅಶೋಕ ಅಕ್ಕಿ, ಉಪನ್ಯಾಸಕರಾದ ಶ್ರಿ ಆರ್. ವ್ಹಿ. ಹೆಗಡೆ, ಶ್ರೀ ವ್ಹಿ. ಈ ಬಡಿಗೇರ, ಶ್ರೀಮತಿ ಪ್ರೇಮಾ ಹಂದಿಗೋಳ, ಶ್ರೀ ಆರ್. ಡಿ. ಕಡ್ಲಿಕೊಪ್ಪ, ಶ್ರೀ ವಿಲ್ಸನ್ ಸೋನಾಗರ್, ಶ್ರೀ ಕೃಷ್ಣಾ ಕೆ.ಎಂ, ಶ್ರೀ ಶರಣಪ್ಪ ಬಿ. ಎಚ್. ಶ್ರೀಮತಿ ಎಸ್.ಎಸ್. ಕಮ್ಮಾರ ಶ್ರೀ ಸಿ.ವ್ಹಿ. ಬಡಿಗೇರ ಶ್ರಿ ಎಸ್.ವಿ. ಗುಂಜಾಳ ಶ್ರೀ ವ್ಹಿ.ಬಿ. ಪರ್ವತಗೌಡರ ಮತ್ತು ವಿದ್ಯಾರ್ಥಿಗಳ ಕುರಿತು ಅಧ್ಯಯನ ಮಾಡಲಾಗಿದೆ.

ಜೆ. ಎನ್. ಕಲಾಶಾಲೆ ಗದಗ-ಬೆಟಗೇರಿ ಇದು ೧೯೮೦-೮೧ ರಲ್ಲಿ ಹಿರಿಯ ರಾಜಕೀಯ ಧುರೀಣ ಶ್ರೀ ಎನ್.ಎಸ್.ತುಕ್ಕಾ ಹಾಗೂ ಕಲಾವಿದ, ಸಾಹಿತಿ ಶ್ರೀ ಜಿ.ಎನ್. ಜಾಡಗೌಡರ ಅವರ ನೇತೃತ್ವದಲ್ಲಿ ಪ್ರಾರಂಭವಾಯಿತು. ಒಬ್ಬರು ರಾಜಕೀಯ ಮುಖಂಡ, ಸಮಾಜ ಸೇವಕ ಮತ್ತೊಬ್ಬರು ಪ್ರಾಥಮಿಕ ಶಾಲೆಯ ಚಿತ್ರಕಲಾ ಶಿಕ್ಷಕ, ಇವರಿಬ್ಬರ ಪ್ರತಿಭೇಯ ಸಮಾಗಮದಿಂದಾಗಿ ಕಲಾಶಿಕ್ಷಣ ಸಂಸ್ಥೆ ಕಟ್ಟಿ ಬೆಳೆಸಿರುವುದು ಗದಗ ಜಿಲ್ಲೆಗೆ ಬಹು ದೊಡ್ಡ ಕೊಡುಗೆಯಾಗಿದೆ. ಶ್ರೀ ಎಂ. ಆರ್. ಬಾಗವಾನ ಇವರು ಸಂಸ್ಥಾಪಕ ಪ್ರಾಚಾರ್ಯರಾಗಿ ಈ ಸಂಸ್ಥೆಯಲ್ಲಿ ಕೆಲಸ ಮಾಡುವುದರ ಜೊತೆಗೆ ಹಾಗೂ ಇವರ ನಿಸ್ವಾರ್ಥ ಸೇವೆಯಿಂದ ಗದಗ ಜಿಲ್ಲೆಯಲ್ಲಿ ಎರಡನೆಯ ಉತ್ತಮ ಕಲಾಶಾಲೆಯನ್ನಾಗಿ ಬೆಳೆಯಲಿಕ್ಕೆ ಶ್ರಮಿಸಿದರು. ಈ ಕಲಾಶಾಲೆಯು ತನ್ನದೆಯಾದ ವಿಶಿಷ್ಟತೆಯನ್ನು ಪಡೆದಿದೆ. ಉತ್ತಮವಾದ ಕಲಾವಿದರು, ಕಲಾಶಿಕ್ಷಕರು ಈ ಶಾಲೆಗಾಗಿ ಶ್ರಮಿಸಿದ್ದಾರೆ. ಈ ಸಂಸ್ಥೆಯಲ್ಲಿ ಕೆಲಸ ಮಾಡಿದ ಶ್ರೀ ಜಿ.ಎಸ್.ದೊಡ್ಡಿಹಾಳ, ಶ್ರೀ ಎ.ಎ.ಶಿರಹಟ್ಟಿ, ಶ್ರೀ ಎನ್.ಎ.ಹರ್ಲಾಪೂರ, ಶ್ರಿ ಎನ್. ಕೆ. ಹಾಳಕೇರಿ ಪ್ರಸ್ತುತ ಕೆಲಸ ಮಾಡುತ್ತಿರುವ ಪ್ರಾಚಾರ್ಯ ಬಿ.ಎಲ್. ಚವ್ಹಾಣ, ಉಪನ್ಯಾಸಕರಾದ ಶ್ರೀ ಬಿ.ಎಫ್. ಬಡಿಗೇರ, ಶ್ರೀ ಎಂ. ಆರ್. ಹೆಬ್ಬಳ್ಳಿ, ಶ್ರೀ ಎಂ.ಆರ್. ಹರ್ಲಾಪೂರ, ಶ್ರೀ ವ್ಹಿ.ವಾಯ್. ಸೋಮನಕಟ್ಟಿ, ಶ್ರೀ ಎಸ್. ಎನ್. ಹರ್ಲಾಪೂರ, ಶ್ರಿ ಪಿ.ಬಿ. ಬಂಡಿ, ಶ್ರೀ ಎನ್. ಟಿ. ಮಾಳವದಕರ, ಶ್ರೀ ಪಿಎಸ್. ಲಕ್ಕುಂಡಿ, ಶ್ರಿ ವ್ಹಿ. ಎಲ್. ಬೆಳಗಲಿ, ಇವರ ಪರಿಶ್ರಮದಿಂದ ಅನೇಕ ಕಲಾವಿದರು, ಕಲಾಶಿಕ್ಷಕರನ್ನು ರೂಪಿಸುವ ಹೆಗ್ಗಳಿಕೆಯು ಜೆ.ಎನ್. ಕಲಾಶಾಲೆಗೆ ಇದೆ.

ಇದು ಅನೇಕ ಸಾಂಸ್ಕೃತಿಕ ಕಲಾಚಟುವಟಿಕೆಗಳನ್ನು, ಶಿಬಿರಗಳನ್ನು ಬೇರೆ ಬೇರೆ ಕಡೆ ಕಲಾ ಪ್ರದರ್ಶನಗಳನ್ನು ಮಾಡಿದೆ. ಇದರ ಬೆಳವಣಿಗೆ ಕುರಿತು ಮತ್ತು ಕಲಿತಂಥ ವಿದ್ಯಾರ್ಥಿಗಳ ಕುರಿತು ಅಧ್ಯಯನ ಮಾಡಲಾಗಿದೆ. ಹಾಗೂ ರವೀಂದ್ರ ಕಲಾ ನಿಕೇತನ ರೂಣ ಚಿತ್ರಕಲಾ ಶಾಲೆ ಲಕ್ಷ್ಮೇಶ್ವರ ಇವುಗಳ ಕುರಿತು ಮತ್ತು ಚಿತ್ರಕಲಾ ಶಾಲೆ ಮೂಂಡರಗಿ ಇದು ಶ್ರೀ ತೋಂಟದಾರ್ಯ ವಿದ್ಯಾಪೀಠದಿಂದ ಪ್ರಾರಂಭವಾಗಿ ಅನೇಕ ವಿದ್ಯಾರ್ಥಿಗಳನ್ನು ತಯಾರು ಮಾಡಿದೆ.

ಹೀಗೆ ಗದಗ ಜಿಲ್ಲೆಗೆ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು, ಉಪನ್ಯಾಸಕರು, ಶಿಕ್ಷಕರು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದು ಅವುಗಳ ಹುಟ್ಟು, ಬೆಳವಣಿಗೆ, ನಡೆದುಬಂದ ದಾರಿ, ವಿದ್ಯಾರ್ಥಿಗಳ ಕುರಿತು ಸ್ಥೂಲವಾಗಿ ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ : ಆರು

ಗದಗ ಜಿಲ್ಲೆಯ ಕಲಾವಿದರು ಮತ್ತು ಕಲಾಕೃತಿಗಳು : ಈ ಅಧ್ಯಯನದಲ್ಲಿ ಗದಗ ಜಿಲ್ಲೆಯ ರಾಷ್ಟ್ರಮಟ್ಟದಲ್ಲಿ ಬೆಳೆದ ಹಿರಿಯ ಕಲಾವಿದರಾದ ಶ್ರೀ ಅಮೀನಸಾಬ ಕಮಡೊಳ್ಳಿ, ವೆಂಕಟಪ್ಪ ಪ್ರಶಸ್ತಿ ಪಡೆದ ಕಲಾವಿದ ಶ್ರೀ ಎಂ.ಎ. ಚೆಟ್ಟಿಯವರ ಕಲಾಕ್ಷೇತ್ರಕ್ಕೆ ತಮ್ಮದೆಯಾದ ವಿಶಿಷ್ಟವಾದ ಕೊಡುಗೆಯನ್ನು ನಿಡಿ ಗದುಗಿನ ಹೆಸರುನ್ನು ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆಸಿರುವವರಲ್ಲಿ ಒಬ್ಬರು. ಕಲಾತಪಸ್ವಿ ಶ್ರೀ ಟಿ.ಪಿ. ಅಕ್ಕಿ ಕಲಾಶಿಕ್ಷಣ ಕಟ್ಟಿ ಉತ್ತಮ ಸಂಸ್ಥೆಯನ್ನು ಬೆಳೆಸಿದರು. ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಭುವನೇಶ್ವರಿಯ ಪ್ರಥಮ ಕಲಾಕೃತಿ ರಚಿಸಿ ರಾಜ್ಯಮಟ್ಟದಲ್ಲಿ ಗದುಗಿನ ಹೆಸರನ್ನು ಬೆಳೆಯಲಿಕ್ಕೆ ಶ್ರಮಿಸಿದ ಕಲಾಚಾರ್ಯ ಶ್ರೀ ಸಿ.ಎನ್.ಪಾಟೀಲ, ಶ್ರೀ ಶಿವಾನಂದ ಅಕ್ಕಿ, ನಾಡೋಜ ವ್ಹಿ.ಟಿ.ಕಾಳೆ, ಶ್ರೀ ಎನ್.ಎ.ಹರ್ಲಾಪೂರ, ಶ್ರೀ ಎ.ಎ. ಶಿರಹಟ್ಟಿ, ಶ್ರೀ ವಸಂತ ಅಕ್ಕಿ, ಶ್ರೀ ಕೆ.ವ್ಹಿ. ಕುಂದಗೋಳ ಮುಂತಾದ ಕಲಾವಿದರ ಕುರಿತು ಅವರು ಚಿತ್ರಕಲೆಗೆ ನೀಡಿದ ಅನುಪಮ ಸೇವೆ ಹಾಗೂ ಕಲಾಕೃತಿಗಳ ಕುರಿತು ಅಧ್ಯಯನ ಮಾಡಲಾಗಿದೆ.

ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೆಯಾದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ ಹಿರಿಯ ಕಲಾವಿದರನ್ನು ಗದಗ ಜಿಲ್ಲೆಯಲ್ಲಿ ಕಲಿತು ರಾಜ್ಯ ರಾಷ್ಟ್ರಮಟ್ಟದಲ್ಲಿ ಬೆಳೆದಿರುವ ಕಲಾವಿದರು ಮತ್ತು ಸಮಕಾಲಿನ ಗದಗ ಜಿಲ್ಲೆಯ ಕಲಾವಿದರ ಕಲಾಚಟುವಟಿಕೆಗಳ ಮತ್ತು ಕಲಾಕೃತಿಗಳ ಕುರಿತು ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಏಳು

ಗದಗ ಜಿಲ್ಲೆಯ ಚಿತ್ರಕಲಾ ಸಾಹಿತ್ಯ : ಈ ಅಧ್ಯಾಯದಲ್ಲಿ ಚಿತ್ರಕಲೆಯ ಸಾಹಿತ್ಯ ಕುರಿತು ಪ್ರಕಟಗೊಂಡಿರುವ ಮತ್ತು ಅಪ್ರಕಟಗೊಂಡ ಗ್ರಂಥಗಳು, ಪುಸ್ತಕಗಳು, ಅಭಿನಂದನಾ ಗ್ರಂಥಗಳ ಕುರಿತು ಅಧ್ಯಯನ ಮಾಡಲಾಗಿದೆ.

ತೋಂಟದಾರ್ಯಮಠವು, ಧಾರ್ಮಿಕ, ಸಂಗೀತ, ಸಾಹಿತ್ಯ, ಕಲೆಗೆ ತನ್ನದೆಯಾದ ಕೊಡುಗೆ ನೀಡಿದೆ. ಚಿತ್ರಕಲಾಸಾಹಿತ್ಯ ಕುರಿತು ಅನೇಕ ಗ್ರಂಥಗಳನ್ನು ತೋಂಟದಾರ್ಯ ವಿದ್ಯಾಪೀಠದಿಂದ ಪ್ರಕಟಣೆಗೊಳಿಸಿದೆ. ಅವುಗಳಲ್ಲಿ ಡಾ. ಎಸ್. ಪಾಟೀಲರ ಕರ್ನಾಟಕ ಜನಪದ ಚಿತ್ರಕಲೆ, ಪಿ.ಹೆಚ್.ಡಿ. ಮಹಾಸಂಶೋಧನಾ ಗ್ರಂಥ, ಶ್ರೀ ಎಂ.ಎ. ಚೆಟ್ಟಿಯವರ ಕುರಿತು ಪುಸ್ತಕ, ಡಾ. ಸಿದ್ಧಲಿಂಗಸ್ವಾಮಿ ಹಿರೇಮಠರವರ ಖ್ಯಾತಕಲಾವಿದ ನಾಡೋಜ "ಎಂ. ಆರ್. ಹಡಪದರ ಜೀವನ ಮತ್ತು ಕಲೆ" ಪಿ.ಎಚ್.ಡಿ. ಮಹಾಗ್ರಂಥ, ಡಾ. ಮಡಿವಾಳಪ್ಪ ಮಿಣಜಗಿಯವರ ಕುರಿತು ಪುಸ್ತಕ, ಡಿ.ವ್ಹಿ. ಹಾಲಭಾವಿಯರ ಕುರಿತು ಪುಸ್ತಕ, ಟಿ.ಪಿ. ಅಕ್ಕಿಯವರ ಕುರಿತು ಪುಸ್ತಕ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಡಂಬಳ-ಗದಗ ಇವರಿಂದ ಪ್ರಕಟಣೆಗೊಂಡಿವೆ.

ಕಲಾವಿದ ಲೇಖಕ ಶ್ರೀ ವಿ.ಟಿ.ಕಾಳೆಯವರ ಚಿತ್ರಕಲಾ ಪ್ರವೇಶ, ಚಿತ್ರಕಲಾ ಪರಿಚಯ ಕಲಾದರ್ಪಣ, ಕಲಾವಿದ ಟಿ.ಪಿ.ಅಕ್ಕಿ, ಶ್ರೀ ಶಿವಾನಂದ ಅಕ್ಕಿಯವರ ಕುರಿತು ಅಕಾಡೆಮಿಯಿಂದ ಪ್ರಕಟಣೆಗೊಂಡಿವೆ. ಶ್ರೀ ಎಸ್. ಎಂ. ಶಿರಹಟ್ಟಿಯವರು ಬರೆದಿರುವ ಚಿತ್ರಕಲಾ "ಕೈದೀಪ" ಈ ಚಿಕ್ಕಪುಸ್ತಕವು ಚಿತ್ರಕಲಾ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ಗ್ರಹಿಸಲಿಕ್ಕೆ ಸಹಾಯಕವಾಗಿದೆ.

ಶ್ರೀ ಎಂ.ಎ. ಚೆಟ್ಟಿಯವರ ಅಭಿನಂದನಾ ಗ್ರಂಥ, ಪಿ.ಟಿ. ಅಕ್ಕಿಯವರ ಅಭಿನಂದನಾ ಗ್ರಂಥ ವಿಜಯಕಲಾಮಂದಿರದಿಂದ ವಜ್ರಮಹೋತ್ಸವ ಸ್ಮರಣ ಸಂಚಿಕೆ, ಲಕ್ಕುಂಡಿ ಉತ್ಸವದಲ್ಲಿ ನಡೆದ

ಕಲಾವಿದರ ಶಿಬಿರ, ಕೃತಪುರ ಕಲಾವೈಭವ ಸ್ಮರಣ ಸಂಚಿಕೆ, ಎಸ್.ಕೆ.ಹೂಗಾರ ಕಲೆ ಮತ್ತು ಹಬ್ಬ, ಮುಂತಾದ ಪುಸ್ತಕಗಳು ಚಿತ್ರಕಲೆಯ ಕುರಿತು ಪ್ರಕಟಣೆಗೊಂಡಿವೆ.

ಎಂ.ವ್ಹಿ.ಎ. ಹಾಗೂ ಎಂ.ಎಫ್.ಎ. ಸ್ನಾತಕೋತ್ತರ ಪದವಿಗಾಗಿ ಸಾದರಪಡಿಸಿದ ಗದಗದ ಅನೇಕ ಉಪನ್ಯಾಸಕರು, ಕಿರುಪ್ರಬಂಧಗಳನ್ನು ಬರೆದಿದ್ದು ಅವುಗಳಲ್ಲಿ ಆಯ್ದ ಪ್ರಬಂಧಗಳನ್ನು ಚರ್ಚಿಸಲಾಗಿದೆ. ಅವುಗಳು ಚಿತ್ರಕಲಾ ಸಾಹಿತ್ಯಕ್ಕೆ ಗದಗ ಜಿಲ್ಲೆಗೆ ತಮ್ಮದೆ ಆದ ಅಮೂಲ್ಯವಾದ ಕೊಡುಗೆ ನೀಡಿವೆ. ಇವುಗಳ ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ : ಎಂಟು

ಗದಗ ಜಿಲ್ಲೆಯ ಕಲಾ ಸಂಗ್ರಾಹಾಲಯದಲ್ಲಿ ಸಂಗ್ರಹಗೊಂಡ ಕಲಾಕೃತಿಗಳು : ಗದಗ ಜಿಲ್ಲೆಯ ಹಲವು ಕಡೆಗಳಲ್ಲಿ ಕಲಾಸಂಗ್ರಹಾಲಯಗಳ ಅನೇಕ ಉತ್ತಮ ಕಲಾಕೃತಿಗಳು ಸಂಗ್ರಹಗೊಂಡಿವೆ. ಅವುಗಳಲ್ಲಿ ಆಯ್ದ ಕಲಾಕೃತಿಗಳನ್ನು ಅಧ್ಯಯನದಲ್ಲಿ ಅಳವಡಿಸಲಾಗಿದೆ. ಗದಗ ಜಿಲ್ಲೆಯ ಪ್ರಾಚ್ಯ ವಸ್ತು ಸಂಗ್ರಾಹಾಲಯಗಳಲ್ಲಿ ಅನೇಕ ಹಿರಿಯ ಕಲಾವಿದರ ಕಲಾಕೃತಿಗಳು ಸಂಗ್ರವಾಗಿವೆ. ಡಾ. ಜೆ.ಎಸ್. ಖಂಡೆರಾವ್, ಶ್ರೀ ವ್ಹಿ. ಜಿ. ಅಂದಾನಿ, ಶ್ರೀಮತಿ ರೇಣುಕಾ ಮಾರ್ಖಂಡೆ, ಎನ್. ಎಸ್. ಪತ್ತಾರ, ಪಿ.ಎಸ್. ಕಡೇಮನಿ ಮುಂತಾದ ಕಲಾವಿದರ ಅನೇಕ ಕಲಾಕೃತಿಗಳು ಸಂಗ್ರವಾಗಿದ್ದು ಅವುಗಳ ಕುರಿತು ಅಧ್ಯಯನ ಮಾಡಲಾಗಿದೆ.

ಗದಗ ಜಿಲ್ಲೆಯ ಅನೇಕ ಮಠಮಾನ್ಯಗಳಲ್ಲಿ ಹಲವಾರು ಕಲಾಕೃತಿಗಳು ಸಂಗ್ರವಾಗಿವೆ. ಅನೇಕ ಹಿರಿಯ, ಕಿರಿಯ ಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿದ ತೋಂಟದಾರ್ಯಮಠ ಕಲಾಕೃತಿಗಳನ್ನು ಪೋಷಣೆ ಮಾಡುವುದರ ಮೂಲಕ ಹಲವಾರು ಕಲಾಕೃತಿಗಳು ಮುಂದಿನ ಯುವ ಪೀಳಿಗೆಗೆ ಉಪಯೋಗವಾಗುವಂತೆ ಸಂಗ್ರಹಗೊಂಡಿವೆ. ಅವುಗಳ ಕುರಿತು ಕಲಾವಿದರ ಬಳಸಿದ ಬಣ್ಣ ರೇಖೆಗಳ ಕುರಿತು ಅಧ್ಯಯನ ಮಾಡಲಾಗಿದೆ. ಗದಗ ಜಿಲ್ಲೆಯ ಪ್ರಸಿದ್ಧ ಮಠಗಳಲ್ಲೊಂದಾದ ಬಳಗಾನೂರಿನ ಪೂಜ್ಯ ಶ್ರಿ ಚಿಕ್ಕೇನಕೊಪ್ಪ ಚೆನ್ನವೀರ ಮಹಾಸ್ವಾಮಿಗಳ ಮಠದಲ್ಲಿ ಅನೇಕ ಕಲಾಕೃತಿಗಳು ಸಂಗ್ರಹಗೊಂಡಿವೆ. ಅವುಗಳ ಕುರಿತು ಕಲಾವಿದರ ವಸ್ತು ವಿಷಯಗಳ ಕುರಿತು ಚರ್ಚಿಸಲಾಗಿದೆ.

ಗದಗ ಜಿಲ್ಲೆಯ ಚಿತ್ರಕಲಾ ಮಹಾವಿದ್ಯಾಲಯಗಳಲ್ಲಿ ಅನೇಕ ಹಿರಿಯ ಕಲಾವಿದರ ಅಮೂಲ್ಯವಾದ ಕಲಾಕೃತಿಗಳು ಸಂಗ್ರಹಗೊಂಡಿವೆ. ಅವುಗಳ ಕುರಿತು ಕಲಾವಿದ ಬಳಸಿದ ಬಣ್ಣ, ತಂತ್ರಗಾರಿಕೆಯ ಕುರಿತು ಅಧ್ಯಯನದಲ್ಲಿ ಅಳವಡಿಸಿಕೊಂಡ ಕಲಾಕೃತಿಗಳ ಕುರಿತು ಚರ್ಚಿಸಲಾಗಿದೆ. ಹಾಗೂ ಅವುಗಳ ಛಾಯಾಚಿತ್ರಗಳನ್ನು ದಾಖಲಿಸಲಾಗಿದೆ.

ಅಧ್ಯಾಯ : ಒಂಭತ್ತು

ಸಮಾರೋಪ : ಈ ಅಧ್ಯಾಯದಲ್ಲಿ ಪ್ರಸ್ತುತ ಮಹಾಪ್ರಬಂಧದ ಪ್ರತಿಯೊಂದು ಅಧ್ಯಾಯಗಳ ಸಮೀಕ್ಷೆ ಮಾಡಲಾಗಿದೆ. ಮತ್ತು ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ ವಿಷಯದ ಅಧ್ಯಯನದಿಂದ ಹೊರಬಂದ ಗಮನಾರ್ಹವೆನಿಸಿದ ವಿಷಯಗಳ ಫಲಿತಗಳನ್ನು ಪಟ್ಟಿಮಾಡಲಾಗಿದೆ. ಗದಗ ಜಿಲ್ಲೆ ಸಾಂಸ್ಕೃತಿಕ ಕ್ಷೇತ್ರದ ಕುರಿತು ಇಂತಹ ಅಧ್ಯಯನಕಾರರಿಗೆ ಈ ಕ್ಷೇತ್ರದಲ್ಲಿ ಆಗಬೇಕಾದ ವಿಷಯಗಳ ಅಧ್ಯಯನದ ಕುರಿತು ಕ್ಷೇತ್ರಗಳನ್ನು ಗುರುತಿಸಿಕೊಡುವ ಕೆಲಸವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

nnn

ಅಧ್ಯಾಯ - ಎರಡು

ಗದಗ ಜಿಲ್ಲೆಯ ಸಾಂಸ್ಕೃತಿಕ ಪರಿಸರ ಮತ್ತು ಲಲಿತ ಕಲೆಗಳು



ಕರ್ನಾಟಕವು ವಿವಿಧ ಜಿಲ್ಲೆಗಳನ್ನು ಹೊಂದಿದ್ದು, ಆ ಜಿಲ್ಲೆಗಳು ತಮ್ಮದೇ ಆದ ಧಾರ್ಮಿಕ ಸಾಂಸ್ಕೃತಿಕ, ಕಲೆ, ಇತಿಹಾಸ, ವಾಸ್ತು ಶಿಲ್ಪ, ಮುಂತಾದ ವಿಶಿಷ್ಟ ರೀತಿಯ ಪರಿಸರಗಳನ್ನು ಹೊಂದಿದೆ. ಪ್ರಾಚೀನ ಇತಿಹಾಸದಿಂದ ನಾವು ನೋಡಿದಾಗ ಅವು ತಮ್ಮ ಜಿಲ್ಲೆಯ ಸಾಂಸ್ಕೃತಿಕ ವಿಭಿನ್ನ ರೀತಿಯಲ್ಲಿ ಹೊಂದಿವೆ. ಅಂತ ನಮ್ಮ ರಾಜ್ಯದ ಸಾಂಸ್ಕೃತಿಕ ಕ್ಷೇತ್ರವನ್ನು ಗಮನಿಸಿದಾಗ ಗದಗ ಜಿಲ್ಲೆಯು ರಾಜ್ಯದಲ್ಲಿಯೇ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ.

ಸಾಹಿತ್ಯ ಕ್ಷೇತ್ರನವನ್ನು ಗಮನಿಸಿದಾಗ ಅನೇಕ ಸಾಹಿತಿಗಳು ಈ ಜಿಲ್ಲೆಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದರೆ. ಅದೇ ರೀತಿಯಾಗಿ ಸಂಗೀತ ಕ್ಷೇತ್ರದಲ್ಲಿಯೂ ಸಂಗೀತಗಾರರು, ಶಿಲ್ಪಕಲೆಯಲ್ಲಿ ಅನೇಕ ಶಿಲ್ಪಿಗಳು, ಧಾರ್ಮಿಕವಾಗಿ ಹಾಗೂ ಕ್ರೀಡೆ, ಸಹಕಾರ, ವಾಸ್ತು ಶಿಲ್ಪ, ನಾಟಕ, ಚಿತ್ರಕಲೆ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಗದಗ ಜಿಲ್ಲೆಯು ಉತ್ತಮವಾದ ಸಾಂಸ್ಕೃತಿಕ ಪರಿಸರವನ್ನು ಹೊಂದಿದ್ದು, ತನ್ನದೇ ಆದ ವೈಶಿಷ್ಟ್ಯಪೂರ್ಣವಾದ ಸಂಸ್ಕೃತಿ ಹೊಂದಿದೆ.

ಗದಗಕ್ಕೆ ಮೊದಲು ಕೃತಪುರವೆಂದು ಹೆಸರಿದ್ದು, ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾದ ಕೃತಪುರ ಮಹಾತ್ಮೆಯ ಬಗ್ಗೆ ೧೮ ಅಧ್ಯಾಯಗಳು ಇದೆ. ಅದು ಸಂಸ್ಕೃತದಲ್ಲಿ ಬರೆಯಲ್ಪಟ್ಟಿದ್ದು, ಈ ಪುರಾಣದಲ್ಲಿ ವಿವರಿಸಿದಂತೆ ಈ ಕೃತಪುರದಲ್ಲಿ ಲೋಹ ಬಂಡೀಪೂರ ಅಥವಾ ಲಕ್ಷ ಕುಂಡಲಿ ಹಾಕಿ ಯಾಗ ಮಾಡಿದ ಸ್ಥಳ, ಶಿಬಿ ಚಕ್ರವರ್ತಿಯ ರಾಜದಾನಿ (ಈಗಿನ ಲಕ್ಕುಂಡಿ) ಇತ್ತು. ಹಾಗೂ ಕೋಟಿ ಯಜ್ಞ ಮಾಡಿದ ಸ್ಥಳ ಕುರ್ತಕೋಟಿ, ಅಬ್ಬಿಗೇರಿ ಹೊಂಬಳ, ಮುನಿವೃಂದ (ಈಗಿನ ಮುಳಗುಂದ) ಮೊದಲಾದವುಗಳ ವರ್ಣನೆಯು ಈ ಕೃತುಪುರ ಮಹಾತ್ಮೆಯಲ್ಲಿ ಬರುತ್ತದೆ[೧].

ಗದುಗಿನಲ್ಲಿ ಜನಮೇಜಯ ಮಹಾರಾಜನ ಸರ್ಪಯಾಗ ಮಾಡಿದಾಗ ಅದರ ವಿಭೂತಿಯನ್ನು ಶೇಖರಿಸಿದ ಸ್ಥಳಕ್ಕೆ ಹಾಳದಿಬ್ಬವೆನ್ನುತ್ತಾರೆ. ಶ್ರೀ ಸರ್ವೇಶ್ವರ ಮೂರ್ತಿಯನ್ನು, ಶ್ರೀ ವೀರನಾರಾಯಣ ಗುಡಿಯಲ್ಲಿ ಸ್ಥಾಪಿಸಿರುವರು. ಕೃತಪುರದಲ್ಲಿ ಲೋಹ ಬಂಡಿಪುರ ಲಕ್ಷ ಕುಂಡಲಿ ಹಾಕಿ ಯಾಗ ಮಾಡಿದ ಸ್ಥಳ ಹಾಗೂ ಶಿಬಿ ಚಕ್ರವರ್ತಿಯ ರಾಜಧಾನಿಯೇ ಇಂದಿನ ಲಕ್ಕುಂಡಿಯಾಗಿದೆ. ಒಂದು ಕೋಟಿ ಯಜ್ಞ ಮಾಡಿದ ಸ್ಥಳ ಕುರ್ತಕೋಟಿ, ಅಣ್ಣಿಗೇರಿ, ಅಹೋಬಲ (ಹೊಂಬಳ), ಮುನಿವೃಂದ

---

೧. ಶ್ರೀ ಹ.ರಾ. ಕಿದಿಯೂರು (ಸಂ) ನಮ್ಮ ಗದಗ ಬೆಟಗೇರಿ ಪು.ಸಂ. ೩೭೧

(ಮುಳಗುಂದ) ಇವುಗಳ ಉಲ್ಲೇಖ ಕೃತಪುರ ಮಹಾತ್ಮೆಯಲ್ಲಿದೆ. ಈ ಯಜ್ಞದ ವೇಳೆಯಲ್ಲಿ ಬಂಡಿಗಳನ್ನು ಶೇಖರಿಸಿದ ಸ್ಥಳವೇ ಈಗಿನ ಅಸುಂಡಿ, ಕಾಯಿಪಲ್ಲೆ ಮುಂತಾದವುಗಳನ್ನಿಡಲು ಕಟ್ಟಿದ ಸ್ಥಳ ಬಿಂಕದಕಟ್ಟಿ, ಬೆಟ್ಟದೋಪಾದಿಯಲ್ಲಿ ಯಜ್ಞ ಸಾಮಗ್ರಿಗಳನ್ನು ಸಂಗ್ರಹಿಸಿದ ಸ್ಥಳವೇ ಬೆಟಗೇರಿ ಎಂದು ಹೇಳಲಾಗಿದೆ. ಸಾವಿರಾರು ನರರು (ಪ್ರಜೆಗಳು) ಇದ್ದ ಸ್ಥಳ ನರಸಾಪೂರ ಯಜ್ಞ ಕಾಲದಲ್ಲಿ ಜನರು ಊಟ ಮಾಡಿದ ಪತ್ರವಳಿಗಳನ್ನು ವಗ್ಯೆರೆಚೆಲ್ಲಿದ ಸ್ಥಳ ಮಲಸಮುದ್ರ ಯಜ್ಞದಲ್ಲಿ ಬೆಳ್ಳಿಯ ಕೊಪ್ಪರಿಗೆಗಳಲ್ಲಿ ಹಾಲು ಕಾಯಿಸಿದ ಸ್ಥಳ ಬೆಳ್ಳಿಕೊಪ್ಪ ನಾಗಾರ್ಜುನರೆಂಬ ರಾಕ್ಷಸರು ವಾಸಮಾಡಿದ ಸ್ಥಳ ನಾಗಾವಿ, ಶ್ರೀ ವೀರನಾರಾಯಣನು ನಾಗಾರ್ಜುನರ ಸಂಹಾರ ಮಾಡಿದ ಮೇಲೆ ಅವರ ಕಳಸಬಿದ್ದ ಜಾಗ ಕಳಸಾಪೂರ, ನಾಗಾರ್ಜುನರ ಧಡಬಿದ್ದ ಜಾಗೆ ಬೆಳಧಡಿ, ಶಿಬಿ ಚಕ್ರವರ್ತಿಯಿಂದ ಕಪೋತ ಪಕ್ಷಿಗೆ ಆಶ್ರಯ ಕೊಟ್ಟು ಅದರ ರಕ್ಷಣೆಗಾಗಿ ತನ್ನ ಮಾಂಸ ಕೊಟ್ಟ ಸ್ಥಳ ಕಪ್ಪತ್ತ (ಕಪೋತ) ಗುಡ್ಡವಾಯಿತು. ರಾಕ್ಷಸ ಸಂಹಾರ ಮಾಡಿದ ಬಳಿಕ ಅಣ್ಣಿಗೇರಿ ಅಮೃತೇಶ್ವರ, ಹೊಂಬಳ ಶಂಕರಲಿಂಗ, ಕೃತಪುರ ತ್ರಿಕುಟೇಶ್ವರ ಆಜ್ಞಾನುಸಾರವಾಗಿ ಶ್ರೀ ವೀರನಾರಾಯಣನು ಮೊದಲಿದ್ದ ಶ್ರೀ ಲಕ್ಷ್ಮೀ ನರಸಿಂಹ ದೇವರ ಸನ್ನಿದಿಯಲ್ಲಿ ಬಂದು ನಿಂತ ಸ್ಥಳ ಕೃತಪುರ (ಗದಗ) ಎಂದಿತ್ಯಾದಿ ವಿವರಗಳು ನಮಗೆ ಕೃತಪುರ ಪುರಾಣದಲ್ಲಿ ಸಿಗುತ್ತವೆ.[೨]

ಕೃತಪುರ ಹೆಸರು ಹೋಗಿ ಗದಗವೆಂದು ಮಾರ್ಪಾಟಾದ ದಂತಕತೆಯೊಂದಿದೆ. ಈಗಿರುವ ಶ್ರೀ ಜಗದ್ಗುರು ತೋಂಟದಾರ್ಯ ಸ್ವಾಮಿಗಳ ಮಠವು ಆಗ ನಿಬಿಡವಾದ ಅರಣ್ಯಾ ಮಧ್ಯದಲ್ಲಿತ್ತು. ಹಾಗೂ ಆ ಸುತ್ತಲಿನ ಪ್ರದೇಶದಲ್ಲಿ ಡಂಬಳ ಸಂಸ್ಥಾನಿಕರ ಆಧಿಪತ್ಯಕ್ಕೊಳಪಟ್ಟಿತ್ತು. ಹೀಗಿರಲೊಂದು ದಿನ ಡಂಬಳ ಸಂಸ್ಥಾನಿಕರ ಬೇಟೆಗೆ ಹೊರಟು ಶ್ರೀಗಳ ಮಠದ ಮುಂದೆ ಹಾಯ್ದು ಹೋಗುತ್ತಿರುವಾಗ ಆ ಮಠದ ಬಾಗಿಲಲ್ಲಿ ಒಂದು ಹೆಬ್ಬುಲಿ ಕುಳಿತು ಕಾಯುತ್ತಿತ್ತಂತೆ ಸಂಸ್ಥಾನಿಕರು ಸಮೀಪಕ್ಕೆ ಬಂದಾಗ ಕೂಡಾ ಅವರಿಗೆ ಅದು ಏನು ಮಾಡಲಿಲ್ಲ. ಈ ವಿಚಿತ್ರವನ್ನು ಕಂಡ ಸಂಸ್ಥಾನಾಧಿಪತಿಗಳು ಇದು ಪುಣ್ಯಾ ಭೂಮಿ ಇಲ್ಲಿ ತಪಸ್ವಿಗಳು ವಾಸಿಸುತ್ತಿರಬೇಕೆಂದು ಭಾಗಿ ಧೈರ್ಯದಿಂದ ಮಠದೊಳಗೆ ಪ್ರವೇಶಿಸಿ ಧ್ಯಾನಸ್ಥರಾಗಿ ಕುಳಿತ ತಪಸ್ವಿಗಳಿಗೆ ನಮಿಸಿ ಸುಮ್ಮನೆ ಕುಳಿತರು. ತುಸು ಹೊತ್ತಿನ ಮೇಲೆ ದ್ಯಾನದಿಂದ ಎಚ್ಚತ್ತ ಮಹಾತಪಸ್ವಿಗಳು 'ಎಲ್ಲವೂ ಕ್ಷೇಮವೇ?' ಎಂದು ಸಂಸ್ಥಾನಿಕರಿಗೆ ಕೇಳಿದರಂತೆ ಆಗ ಅವರು ಪೂಜ್ಯರೆ ಎಲ್ಲವೂ ಕ್ಷೇಮ, ಆದರೆ, ನನಗೆ ಸಂತತಿಯಿಲ್ಲದ ಕಾರಣ ತಾವು ಅವಗಾಯಿಸಬೇಕು. ಎಂದು ಅವರು ಉತ್ತರಿಸಿದರು. ಆಗ ತಪಸ್ಸಿಗರ ಆಶೀರ್ವದಿಸಿ ನಿನ್ನ ಬಯಕೆ ಈಡೇರುವುದು. ಚಿಂತಿಸಬೇಡವೆಂದು ಹೇಳಿದರಂತೆ ಅಂದಂತೆ ಅಲ್ಪಕಾಲದಲ್ಲಿ ಸಂಸ್ಥಾನಿಕ ಈಗ ಗದುಗಿನಲ್ಲಿ ವಿದ್ಯುತ್ ಪಂಪನಿಂದ ಹಿಡಿದು ಹಾತಲಗೇರಿವರೆಗೆ ಇದ್ದ ತಮ್ಮ ಹೊಲಗಳನ್ನು ದಾನವಾಗಿ ಮಠಕ್ಕೆ ಕೊಟ್ಟರಂತೆ ಕಾಲಾಂತರದಲ್ಲಿ ಮಠದಲ್ಲಿದ್ದ ಆ ತಪಸ್ವಿಗಳ ಆಗ ಅವರ ಗದ್ದುಗೆಗೆ ವಂದಿಸಲು ಹುಣ್ಣಿಮೆ, ಅಮವಾಸ್ಯೆ ದಿನಗಳಲ್ಲಿ ನಡೆದುಕೊಳ್ಳಲು ಸುತ್ತಮುತ್ತಲಿಂದ ಜನಸಮೂಹವೇ ಬರುತ್ತಿತ್ತು. ಆಗ ನಾವು 'ಗದಿಗಿಗೆ ಹೋಗುತ್ತೇವೆ' ಎಂದು ಅನ್ನುತ್ತಿದ್ದರಂತೆ. ಈ ಮಾತು ಬರುಬರುತ್ತಾ ಬದಲಾಗಿ 'ಗದಿಗ್ಗೆ ಹೋಗುತ್ತೇವೆ' ಎಂದಾಗಿ ಈ ಸ್ಥಳಕ್ಕೆ 'ಗದಗು ಎಂಬ ಹೆಸರು ಬಂದಿತಂತೆ"[೩]

೨. ಶ್ರೀ ಹ.ರಾ. ಕಿದಿಯೂರು (ಸಂ) ನಮ್ಮ ಗದಗ ಬೆಟಗೇರಿ ಪು.ಸಂ. ೩೭೧
೩. ಶ್ರೀ ಹ.ರಾ. ಕಿದಿಯೂರು (ಸಂ) ನಮ್ಮ ಗದಗ ಬೆಟಗೇರಿ ಪು.ಸಂ. ೩೭೨

ಗದುಗು, ಗದಗು, ಗದಗ ಎಂಬ ಪದಗಳು ಬಳಕೆಯಲ್ಲಿವೆ ಕಲ್ದುಗು, ಕದ್ದಗು, ಗದಗ, ಗದ್ದಗು ಎಂಬ ಪದ ಗದಗ ಎಂಬ ಹೆಸರು ಬಂತೆಂಬುದು ವಿದ್ವಾಂಸರ ಅಭಿಪ್ರಾಯ"[೪] ಹೀಗೆ ಗದಗು ಎಂಬ ಹೆಸರು ಕ್ರಮೇಣ ಗದಗ ಎಂದು ಪರಿವರ್ತನೆಯಾಯಿತೆಂದು ಹೇಳಬಹುದು. ಇದಲ್ಲದೆ ಮತ್ತೆ ಕೆಲವು ವಿದ್ವಾಂಸರ ಗದಗ, ಕಲ್ದುಗ ಮುಂತಾದ ಶಬ್ದಗಳಿಂದ ಗದುಗೆಂಬ ಹೆಸರು ಬಂದಿರಬೇಕೆಂದೂ ತರ್ಕಿಸುತ್ತಾರೆ. ಪ್ರಾಯಶಃ ಸಂಸ್ಕೃತದ ಶಬ್ದ ಗದಗದಿಂದ ಕಾಲಾನುಕ್ರಮದಲ್ಲಿ ಗದುಗೆಂದು ಹೆಸರಾಗಿರಬಹುದು. ಭಾರತ ಕಾವ್ಯವನ್ನು ಬರೆದ ನಾರಾಯಣಪ್ಪನು ತನ್ನ ಕಾವ್ಯದಲ್ಲೆಲ್ಲೂ ಕೃತಪುರವೆಂದು ಉಲ್ಲೇಖಿಸಿಲ್ಲ. ಅವನ ಕಾವ್ಯದ ಪ್ರತಿ ಸರಧಿದ ಕೊನೆಯ ಪದ್ಯದಲ್ಲಿಯೂ ಗದುಗಿನ ವೀರನಾರಾಯಣನೆಂದೆ ಹೇಳಿರುವುದರಿಂದ ಅವನು ಕೃತಪುರವೆಂಬ ಹಳೆಯ ಹೆಸರನ್ನು ಬಿಟ್ಟು ಹೊಸದಾದ ಗದಗೆಂಬ ಹೆಸರನ್ನೇ ಉಪಯೋಗಿಸಿದ್ದಾನೆ. ಕುಮಾರವ್ಯಾಸನ ಆರಾಧ ದೈವವಾದ ಶ್ರೀ ವೀರನಾರಾಯಣನು ಇಲ್ಲಿ ಬಂದು ನೆಲೆಸಿದ್ದರ ಬಗ್ಗೆಯೂ ಒಂದು ಕಥೆ ಪ್ರತೀತಿಯಲ್ಲಿದೆ. ಬ್ರಹ್ಮನ ಹೊಕ್ಕಳಲ್ಲೊಬ್ಬನಾದ "ಕೃತುವು ಇಲ್ಲಿ ತಪಸ್ಸು ಮಾಡಿದನೆಂದು ಅವನ ತಪಸ್ಸಿಗೆ ಸಂಪ್ರೀತನಾಗಿ ವೀರನಾರಾಯಣನ ಬದರಿಯಿಂದ ಬಂದು ಇಲ್ಲಿ ನೆಲೆಸಿದ್ದನೆಂದು ಕಪೋತ ದೈತ್ಯನನ್ನು ಸಂಹರಿಸಿದನೆಂದು ಕಥೆಯಿದೆ. ಶಿವ ಕಪೋತರೋಮರ ಯುದ್ದವನ್ನು ಹಾಗೂ ಗಂಗೆಯ ಭೂಮಿಯನ್ನು ಭೇದಿಸಿಕೊಂಡು ಹೋಗಿ ಅಂತರ್ಗತಳಾದದುನ್ನು ಹೇಳುವ ಒಂದು ಕಥೆಯಿದೆ. ಅಂದಿನಿಂದಲೂ ನಮಗೆ ಭೂಗರ್ಭದಿಂದಲೇ ನೀರು ಸಿಕ್ಕುವುದು ಎಲ್ಲರಿಗೂ ಪರಿಚಿತವೆ ಇದೆ. ಕಪೋತರೋಮರ ಸಂಹರಿಸಲ್ಪಟ್ಟ ಸ್ಥಳವೇ ಕಪ್ಪತ್ತಗುಡ್ಡವೆಂದು ಕರೆಯಲ್ಪಡುತ್ತದೆ. ಇವುಗಳೆಲ್ಲವು ದಂತಕತೆಯಷ್ಟೇ ಹೊರತು ಇದಕ್ಕೆ ಐತಿಹಾಸಿಕ ಆಧಾರವೇನು ಇಲ್ಲ. ಶಿಲಾಶಾಸನಗಳಲ್ಲಿ ಈ ಸ್ಥಳವು 'ಬೆಳವೊಲ ಮುನ್ನೂರು' ಎಂದೇ ಬರೆಯಲ್ಪಟ್ಟಿದೆ."[೫]

ಗದುಗ ಎಂಬ ಪದದ ವಿಷಯವಾಗಿ ಐತಿಹ್ಯದಲ್ಲಿರುವ ಕತೆಯು ಹೆಚ್ಚಿನ ವಿವರಗಳನ್ನು ಒದಗಿಸುತ್ತದೆ. ಈ ಐತಿಹ್ಯದಂತೆ ಕೃತಪುರವೆಂಬ ಹೆಸರಿನ ಹಿಂದೆ ಗದುಗಿನಲ್ಲಿ ಈಗಿರುವ ಒಕ್ಕಲಗೇರಿಯ ಹೆಸರಾಗಿತ್ತೆಂದೂ ಶ್ರೀ ವೀರನಾರಾಯಣ ದೇವರಿರುವ ದೇವಾಲಯದ ಸುತ್ತ ಗಜಗದ ಗಿಡಗಳ ಮೇಳೆಯಿತ್ತೆಂದು ಈ ಮೇಳೆಯಲ್ಲಿ ನಾಗಾರ್ಜುನನೆಂಬ ರಾಕ್ಷಸನು ಜನರಿಗೆ ಉಪಟಳ ಕೊಡುತ್ತಿದ್ದನೆಂದು ಅವನಿಗೂ ಬದರೀಕ್ಷೇತ್ರದಿಂದ ಬಂದ ನಾರಾಯಣನಿಗೂ ಬಹಳ ದಿವಸಗಳು ಯುದ್ದವಾಯಿತೆಂದು ಆ ಸಮಯದಲ್ಲಿ ಸಮಿಪದಲ್ಲಿದ್ದ ಸಣ್ಣ ನದಿಯೊಂದರ ನೀರು ಅಂತರ್ಗಾಮಿಯಾಯಿತೆಂದೂ ಐತಿಹ್ಯವಿದೆ.

ಪ್ರಾಚೀನತೆ : ಪ್ರಾಚೀನ ಹಾಗೂ ಮಧ್ಯಭಾಗದ ಕನ್ನಡ ಅರಸರ ಶಾಸನಗಳಲ್ಲಿ ಬೆಳವಲ ೩೦೦ರ ಉಲ್ಲೇಖವಿದೆ. (ಉದಾ: ೯೪೧ರ ತಕ್ಕೋಲ ಶಾಸನ) ಅಂದಿನ ಬೆಳವಲ ನಾಡು ಗದಗ, ಲಕ್ಷ್ಮೇಶ್ವರ ಮೊದಲಾದ ಭಾಗಗಳನ್ನು ಒಳಗೊಂಡಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಗದಗಿನಲ್ಲಿ ರಾಷ್ಟ್ರಕೂಟ, ಚಾಳುಕ್ಯ, ಕಳಚೂರಿ, ಯಾದವ, ಹೊಯ್ಸಳ, ವಿಜಯನಗರ, ಅಂದಿನ ಮನೆತನಗಳಿಂದ ಸಂಬಂಧಿಸಿದ ಶಾಸನಗಳಿವೆ. ಆದ್ದರಿಂದ ಇದು ಅನೇಕ ರಾಜಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತೆಂದು

೪. ಪ್ರೊ. ಸಿ.ವಿ. ಕೆರಿಮನಿ ಪ್ರಸಂ. ಹಾಗೂ ಇತರರು ಲೇ ಶ್ರೀ. ಐ.ಬಿ. ಬೆನಕೊಪ್ಪ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ. ೧೪೯

೫. ಶ್ರೀ ಪಿ.ಬಿ.ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾ ಮಂದಿರ ಕೊಡುಗೆ ಪು.ಸಂ. ೧೪

ಊಹಿಸಬಹುದಾಗಿದೆ. ಅತ್ಯಂತ ಪುರಾತನ ಶಾಸನವೆಂದರೆ ರಾಷ್ಟ್ರಕೂಟ ೩ನೆಯ ಇಂದ್ರನದು (೯೧೮) ೧೬೭೩ರಲ್ಲಿ ಗದಗ ಬಿಜಾಪೂರ ಸುಲ್ತಾನನಿಗೆ ಸೇರಿತ್ತು ಅನಂತರ ಮರಾಠರು ಇದರ ಪ್ರಭುತ್ವ ಪಡೆದರು. ೧೮೧೮ರಿಂದ ಗದಗ ಇಂಗ್ಲೀಷರ ಆಧೀನಕ್ಕೊಳಗಾಯಿತು."[೬]

ಗದಗ ಚಾಲುಕ್ಯರ ಕಾಲದಲ್ಲಿ (Wetern Chalukyas) ೯೭೩-೧೧೭೦ ರಲ್ಲಿ ಕಳಚೂರಿ ೧೧೬೧-೮೩ ಹೊಯ್ಸಳ ೧೧೭೦-೧೩೧೦ ರ ಅವಧಿ ವಿಜಯನಗರ ೧೩೩೬-೧೫೬೫ ಹೀಗೆ ಅನೇಕ ಸಂಬಂಧಿಸಿದ ಶಾಸನಗಳಲ್ಲಿ ಲಭ್ಯವಿದೆ. ಮುಂದೆ ೧೬೭೩ರ ಸುಮಾರಿಗೆ ಅದು ಬಂಕಾಪೂರ ಜಿಲ್ಲೆಯ ಒಂದು ಊರಾಗಿದ್ದು, ನುಸ್ರತಾಬಾದ (ಧಾರವಾಡ)ದ ಒಂದು ಸ್ಥಳವಾಗಿ ಪರಿಗಣಿಸಲ್ಪಟ್ಟಿತು. ಆಗ ಅವರು ವಿಜಾಪೂರ ಗವ್ಹರ್ನರನಾದ ಅಬ್ದುಲ್ ಖಾಸಿಮ ಖಾನನ ಆಡಳಿತದಲ್ಲಿತ್ತು. ೨೬-೦೭-೧೭೯೯ರಂದು ಕರ್ನಲ್ ವೆಲ್ಲಸ್ಲಿಗದಗ ಮೇಲೆ ಧಾಳಿಮಾಡಿ ಅದನ್ನು ಪೇಶ್ವೆಯವರ ವಶಕ್ಕೆ ಕೊಟ್ಟನು. ಗದಗ ಪದವು ವಿಜಯನಗರದ ಅರಸರ ಕಾಲದಿಂದ ಬಳಕೆಯಲ್ಲಿ ಬಂದಿತು. ಹೀಗಾಗಿ ಗದಗ ರಾಜಮನೆತನಗಳಿಂದ ಆಳಲ್ಪಟ್ಟ ನಾಡಾಗಿತ್ತೆಂದು ಊಹಿಸಬಹುದಾಗಿದೆ."[೭]

ವಿಜಯನಗರದ ಅರಸು ಹರಿಹರ ೨ ಇವರ ತಾಮ್ರ ಶಾಸನ ೧೩೭೯ರಿಂದ ತಿಳಿದು ಬರುವುದೇನೆಂದರೆ "ಈ ಅರಸರ ಕಾಲದ ಗದಗ ಪ್ರದೇಶದಲ್ಲಿ ೨೨ ಹಳ್ಳಿಗಳನ್ನು ತ್ರಿಕುಟೇಶ್ವರ ಹಾಗೂ ವೀರನಾರಾಯಣ ದೇವರ ಹೆಸರಿನಲ್ಲಿ ಉಂಬಳಿಯಾಗಿ ಕೊಡಲ್ಪಟ್ಟಿದೆ. ಆ ಕಾಲದ ಗದಗ ಪ್ರದೇಶದಲ್ಲಿ ೬೫ ಹಳ್ಳಿಗಳಿದ್ದವೆಂದು ಮುಖ್ಯವಾಗಿ ತಿಳಿಯಬಹುದು. ವೀರನಾರಾಯಣ ಗುಡಿಯಲ್ಲಿ ಲಭ್ಯವಿರುವ ಕೃಷ್ಣದೇವರಾಯರ ೧೫೧೯ರ ಶಾಸನ ಹಾಗೂ ಅದರ ನಂತರದ ೧೫೪೯ರ ಶಾಸನವು ಅನ್ನದಾನ ನಿಧಿಯ ಕೊಡುಗೆಯ ಬಗ್ಗೆ ಹಾಗೂ ವೀರನಾರಾಯಣ ದೇವರು ಕುಮಾರವ್ಯಾಸ ಕವಿಗೆ ವರಕೊಟ್ಟಿದ್ದು, ಕುಮಾರವ್ಯಾಸನು ವೀರನಾರಾಯಣ ದೇವರಿಂದ ಪ್ರೇರಿತನಾಗಿ ಬೃಹತ್ ಕನ್ನಡ ಭಾರತವನ್ನು ರಚಿಸಿದ್ದು ನೋಡಬಹುದು. ಈ ಘಟನೆಯು ಕನ್ನಡ ಭಾರತದ ಕಾಲವನ್ನು ನಿರ್ಣಯಿಸಲು ಸುಲಭ ಸಾಧ್ಯ"[೮] ಎಂದು ಹೇಳಬಹುದು.

ಇತ್ತೀಚಿನ ಐತಿಹಾಸಿಕ ಘಟನೆಗಳ ಬಗ್ಗೆ ಹೇಳಬೇಕಾದರೆ ೨೬-೦೭-೧೭೯೯ರಂದು ಕಾರ್ನಲ್ ವೆಲ್‌ಸ್ಲಿಯು ಡಂಬಳ ಕೋಟೆಯನ್ನು ಕೈವಶ ಮಾಡಿಕೊಂಡ ಬಳಿಕ ಮುಂದಿನ ೨೭-೭-೧೭೯೯ ಗದುಗಿಗೆ ಬಂದನೆಂದು ಹೇಳುತ್ತವೆ. ಆ ಕಾಲಕ್ಕೆ ಪೇಶ್ವೆಯವರು ಈ ದೇಶವನ್ನಾಳುತ್ತಿದ್ದರು. ಪೇಶ್ವೆಯವರ ಸೇನಾಧಿಕಾರಿಯನ್ನು ಗದುಗಿನಲ್ಲಿ ಬಂಧಿಸಲಾಗಿತ್ತು. ಕೊನೆಯ ಮರಾಠ ಯುದ್ಧದಲ್ಲಿ ಗದಗು ಬ್ರಿಟಿಶ್ ಸೇನಾನಿ ಮನ್ರೋನಿಗೆ ೬-೧-೧೮೧೮ರಂದು ಒಪ್ಪಿಸುವುದರಲ್ಲಿ ಬಂದಿತು."[೯]

---

೬ ಪ್ರೊ. ಪಿ.ವಿ. ಶೇರಿಮನಿ ಪ್ರ.ಸಂ. ಹಾಗೂ ಇತರರು ಲೇ ಶ್ರೀ ಆಯ್.ಬಿ. ಬೇನಕೂಪ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ. ೧೪೯

೭ ಶ್ರೀ ಹ.ರಾ. ಕಿದಿಯೂರು (ಸಂ) ನಮ್ಮ ಗದಗ ಬೆಟಗೇರಿ ಪು.ಸಂ. ೪೫೭

೮. ಶ್ರೀ ಹ.ರಾ. ಕಿದಿಯೂರು (ಸಂ) ನಮ್ಮ ಗದಗ ಬೆಟಗೇರಿ ಪು.ಸಂ. ೪೫೭

೯. ಶ್ರೀ ಹ.ರಾ. ಕಿದಿಯೂರು (ಸಂ) ನಮ್ಮ ಗದಗ ಬೆಟಗೇರಿ ಪು.ಸಂ. ೩೯೮

ರಾಷ್ಟ್ರಕೂಟರ ಕಾಲ (ಕ್ರಿಶ ೭೫೭–೯೭೩)ದಲ್ಲಿ ಗದಗು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅರಸರಿಂದ ನಿಯಮಿಸಲ್ಪಟ್ಟ ಅಧಿಕಾರಿಗಳಿಂದ ಆಡಳಿತ ನಡೆಸಲ್ಪಡುತ್ತಿತ್ತು. ಅಧಿಕಾರಿಗಳಿಗೆ ಭೂಮಿಗಳನ್ನು ಕಾಣಿಕೆಯಾಗಿ ಕೊಡಲ್ಪಡುತ್ತಿದ್ದವು. ಅಲ್ಲದೇ ಅವರ ಕರ ವಿಮುಕ್ತರಾಗುತ್ತಿದ್ದರು. ಸೊರಟೂರಿನಲ್ಲಿದ ಕ್ರಿ.ಶ. ೮೬೭–೬೮ರ ಮೊದಲನೆಯ ಅಮೋಘವರ್ಷನ ಶಿಲಾಶಾಸನವೊಂದು ಪುಲಿಗೇರಿಯನ್ನು ಆಳುತ್ತಿದ್ದ ಮಹಾಸಾವಂತ ಅಹವಾದಿತ್ಯ ಕುಪ್ಪೆಯರಸನ ತಪ್ಪದ ಮೇಲೆ ಐವತ್ತು ಪೌಂಡ ಆಗಿನ ಕಾಲದ ನಾಣ್ಯಗಳಷ್ಟು ಕರಭಾರವನ್ನಿಳಿಸಿದನು ಎಂದು ಹೇಳುತ್ತದೆ. ಗಾವರವಾಡದಲ್ಲಿರುವ ಮೊದಲನೆಯ ಅಮೋಘವರ್ಷನ ಆಧಾರವೊಂದರ ಬೆಳವೊಲ ಮನ್ನೂರನ್ನು ಆಳುತ್ತಿದ್ದ ದೇವಣ್ಣಯ್ಯನ ಕಾಲದಲ್ಲಿ ಗಾವರವಾಡ ಮಹಾ ಜನರಿಗೆ ತುಪ್ಪದ ಮೇಲಿನ ಕರವನ್ನು ಬಿಟ್ಟು ಕೊಡಲಾಯಿತೆಂದು ಗೊತ್ತಾಗುತ್ತದೆ.

ವೆಂಕಟಾಪೂರದಲ್ಲಿಯ ಮೊದಲನೆಯ ಅಮೋಘವರ್ಷನ ಶಿಲಾಶಾಸನವು ಕ್ರಿ.ಶ.(೯೦೭) ಮಹಾ ಶ್ರೀಮಂತನು ಬೆಳವೊಲ ಮನ್ನೂರನು ಮರಿಯಣ್ಣ ಮುಳಗುಂದದ ೧೨ನ್ನು ಆಳುತ್ತಿದ್ದಾಗ ಮಲ್ಲಿಕಾರ್ಜುನ ಭಟ್ಟರ ಶಿಪೂರಾದ ಚಂದ್ರ ತೊರಭಟ್ಟರಿಗೆ ಭೂಮಿಯನ್ನು ದಾನವಾಗಿ ಕೊಟ್ಟ ವಿವರಣೆ ನೀಡುತ್ತದೆ. ಸೊರಟೂರಿನಲ್ಲಿರುವ ಕ್ರಿ.ಶ.(೮೮೩) ರ ಎರಡನೆ ಕೃಷ್ಣನ ಶಿಲಾಶಾಸನವು ಇಂಡಪಯ್ಯನು ಪುಲಿಗೇರಿಯನ್ನಾಳುತ್ತಿದ್ದಾಗ ಸೊರಟೂರು ಕೂಡ ಅದರಲ್ಲಿ ವಿಲೀನಗೊಂಡಿತ್ತೆಂದೂ ಐವತ್ತು ಮಹಾ ಜನರ ಸಭೆಯೊಂದು ತಿಳಿಸುತ್ತದೆ. ಬೆಟಗೇರಿ (ಗದಗ) ದಲ್ಲಿರುವ ಕ್ರಿ.ಶ. ೮೯೨ರ ಎರಡನೆ ಕೃಷ್ಣನ ಕಾಲದ ವೀರಕಲ್ಲೊಂದು ಮಾನ್ಯ ತೋರಣನು, ಬೆಳವೊಲ ಮನ್ನೂರನು ಆಳುತ್ತಿದ್ದ ಸಮಯದಲ್ಲಿ 'ಕವಿಗಳ' ನೆಂಬ ವೀರನಾಯಕನು ಯುದ್ದರಂಗದಲ್ಲಿ ಮಡಿದನೆಂದು ಅವನ ಪತ್ನಿಯು ಈ ವೀರಕಲ್ಲನ್ನು ಸ್ಥಾಪಿಸಿದಳೆಂದೂ ಸಾರುತ್ತದೆ. ಬೆಳವೊಲದ ಮುನ್ನೂರಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಮೇವುಂಡಿ ಚಿಂಚಲಿ, ಯಲಿಶಿರೂರಗಳಲ್ಲಿರುವ ಎರಡನೇಯ ಕೃಷ್ಣನ ಶಿಲಾಶಾಸನಗಳಲ್ಲಿ ಹೇಳಲ್ಪಟ್ಟಿದೆ.[೧೦]

ಹೀಗೆ ಗದಗ ಇತಿಹಾಸವನ್ನು ನೋಡಿದಾಗ ನಮಗೆ ತಿಳಿಯುತ್ತದೆ. ಗದಗವು ಶಿಲ್ಪಕಲೆ, ಸಂಗೀತ, ಸಾಹಿತ್ಯ ನಾಟಕ, ಕ್ರೀಡೆ, ಧಾರ್ಮಿಕ ರಾಜಕೀಯ ಚಿತ್ರಕಲೆಯ ಮೂಲಕ ಭಾರತದಲ್ಲಿಯೇ ತಮ್ಮದೇಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಪ್ರಾಚೀನ ಇತಿಹಾಸವನ್ನು ಹೇಳುವ ಅನೇಕ ದೇವಾಲಯಗಳ ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಹೆಸರುವಾಸಿಯಾಗಿದೆ.

ವಾಸ್ತು ಶಿಲ್ಪ ಮತ್ತು ಶಿಲ್ಪಕಲೆ : ಗದುಗಿನ ಹಲವಾರು ಪ್ರಸಿದ್ಧ ದೇವಾಲಯಗಳ ಸುಂದರ ಸಮುದಾಯಗಳನ್ನು ಕಾಣಬಹುದು. ಇಲ್ಲಿನ ನೂರಾರು ದೇವಾಲಯಗಳ ಶಿಲ್ಪವೈಭವದಿಂದ ಕಂಗೊಳಿಸುತ್ತಿದೆ."[೧೧] ಚಾಲುಕ್ಯರ ಶೈಲಿಯಿಂದಾಗಿ ವೈಭವಯುತವಾದ ಹೊಯ್ಸಳ ಶೈಲಿಯಲ್ಲಿ ಗದಗ ಪ್ರದೇಶದಲ್ಲಿ ಕಾಣಬಹುದಾಗಿದೆ. ಗದಗ ಪ್ರದೇಶದ ದೇವಾಲಯಗಳಿಂದ ರಚನಾತ್ಮಕ ವಿನ್ಯಾಸ ಹಾಗೂ ಸೂಕ್ಷ್ಮ ಕೆತ್ತನೆಗಳಿಗೆ ಹೆಸರಾಗಿವೆ. ಬಹುತೇಕ ದೇವಾಲಯಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ

೧೦. ಶ್ರೀ ಪಿ.ಬಿ. ಬಂಡ್ಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾ ಮಂದಿರದ ಕೊಡುಗೆ ಪು.ಸಂ. ೧೬

೧೧. ಪ್ರೊ. ಸಿ.ವಿ. ಕೇರಿಮನಿ ಪ್ರ.ಸಂ. ಹಾಗೂ ಇತರರು ಲೇ. ಶ್ರೀ ದತ್ತಾಪ್ರಸನ್ ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೩೦

ನಿರ್ಮಾಣಗೊಂಡಿದೆ. ಕೆಲವು ದೇವಾಲಯಗಳಿಂದ ಸ್ಥಳೀಯ ಹಾಗೂ ಮುಖ್ಯವಾಗಿ ವೇಸರ (ಕಲ್ಯಾಣ ಚಾಲುಕ್ಯ) ಶೈಲಿಯ ಮಿಶ್ರಣಗಳನ್ನು ಅಳವಡಿಸಿಕೊಂಡು ಬಂದಿದೆ." [೧೨]

ಗದಗ ಜಿಲ್ಲೆಯಲ್ಲಿ ಈ ವೈಶಿಷ್ಟ್ಯ ಪೂರ್ಣ ದೇವಾಲಯಗಳ ನಿರ್ಮಾಣದ ಶ್ರೇಯಸ್ಸು ಇಲ್ಲಿನ ತಪಸ್ವಿಗಳು ಹಾಗೂ ಶಿಲ್ಪಿಗಳಿಗೆ ಸಲ್ಲುತ್ತದೆ. ಬೆಳವೊಲ ನಾಡಿನ ಈ ಶಿಲ್ಪಗಳು ತಮ್ಮ ಕಲಾ ನೈಪುಣ್ಯತೆಯಿಂದ ಅರ್ಥಪೂರ್ವವಾದ ದೇವಾಲಯಗಳನ್ನು ಈ ಭಾಗದಲ್ಲಿ ನಿರ್ಮಿಸಿದ್ದಾರೆ. ಗದುಗಿನ ನಾಗೋಜ, ದೋಗೋಜ ಮುಂತಾದ ಶಿಲ್ಪಿಗಳು ಇಲ್ಲಿನ ಹಲವಾರು ದೇವಾಲಯಗಳನ್ನು ನಿರ್ಮಿಸಿದ್ದರಲ್ಲದೇ ಹೊಯ್ಸಳ ದೇವಾಲಯಗಳನ್ನು ನಿರ್ಮಿಸಿದರೆಂಬ ಖ್ಯಾತಿಯನ್ನು ಪಡೆದಿದ್ದಾರೆ.

ಧಾರ್ಮಿಕ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯ ಶಿಲ್ಪಕಲೆಯನ್ನು ವಿಶ್ಲೇಷಿಸಿದರೆ ಇಲ್ಲಿ ಹೆಚ್ಚಾಗಿ ಶೈವ ದೇವಾಲಯಗಳ ಮೂರ್ತಿ ಶಿಲ್ಪಗಳು ಕಂಡುಬರುತ್ತವೆ. ಕ್ರಿ.ಶ. ೧೦-೧೧ನೇ ಶತಮಾನದಲ್ಲಿ ಈ ಪರಿಸರದಲ್ಲಿ ಅನೇಕ ಪ್ರಸಿದ್ಧರಾದ ಕಾಳಾಮುಖ ಮುನಿಗಳು ನೆಲೆಸಿದ್ದರು. ಇವರ ಪ್ರಭಾವ ಪ್ರೋತ್ಸಾಹದ ಪರಿಣಾಮವಾಗಿ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳು ನಿರ್ಮಾಣಗೊಂಡಿದೆ. ಈ ಜಿಲ್ಲೆಯಲ್ಲಿ ಅನೇಕ ವೈಷ್ಣವ ದೇವಾಲಯಗಳು ಮೈತಾಳಿವೆ. ಲಕ್ಷ್ಮೇಶ್ವರ, ಮುಳಗುಂದ, ಲಕ್ಕುಂಡಿ ಪ್ರಾಚೀನ ಕಾಲದಲ್ಲಿ ಜೈನ ಕೇಂದ್ರಗಳಾಗಿದ್ದವು. ಪ್ರಾಚೀನ ಕಾಲದಲ್ಲಿ ಡಂಬಳ ಬೌದ್ಧ ವಿಹಾರದ ಅವಶೇಷಗಳು ದೊರೆತಿವೆ.' [೧೩]

ಹೀಗೆ ಗದಗ ಜಿಲ್ಲೆಯಲ್ಲಿ ಶಿಲ್ಪಕಲೆಗೆ ರಾಜಾಶ್ರಯದ ಹಿನ್ನೆಲೆ ಮತ್ತು ರಾಜಮನೆತನಗಳ ಪ್ರೋತ್ಸಾಹ, ಕಲ್ಯಾಣ ಚಾಲುಕ್ಯರ ಶೈಲಿಯ ಲಕ್ಷಣಗಳು ಮತ್ತು ವಾಸ್ತುಶಿಲ್ಪ ರಚನಾವಿನ್ಯಾಸ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯ ಕೆಲವು ಪ್ರಮುಖ ದೇವಾಲಯಗಳು ಇವೆ. ತ್ರಿಕುಟೇಶ್ವರ ದೇವಸ್ಥಾನ: ಇಲ್ಲಿ ತ್ರಿಕುಟೇಶ್ವರ, ಸರಸ್ವತಿ ದೇವಾಲಯಗಳೆರಡೂ ಅಕ್ಕಪಕ್ಕದಲ್ಲಿವೆ. ತ್ರಿಕುಟೇಶ್ವರ ದೇವಾಲಯಗಳಲ್ಲಿ ಮಹಾ ಲಿಂಗಗಳು ಒಂದೇ ರೇಖೆಯಲ್ಲಿದ್ದುದರಿಂದ ಈ ದೇವಾಲಯಕ್ಕೆ ತ್ರಿಕುಟೇಶ್ವರ ಗುಡಿ ಎಂದು ಹೆಸರು ಈ ಗುಡಿಯ ಆವರಣದಲ್ಲಿ ಸುಂದರವಾಗಿ ಕೆತ್ತಿದ ಭೈರವ, ನರಸಿಂಹ, ಲಕ್ಷ್ಮೀ, ಗಣಪತಿ, ಶಿವ, ವಿಷ್ಣು, ಬ್ರಹ್ಮ ಕೃಷ್ಣ ಮಹಿಷಾಸೂರ ಮರ್ಧಿನಿ ಮುಂತಾದ ಸುಂದರ ಮೂರ್ತಿಗಳಿವೆ.

ಸರಸ್ವತಿ ದೇವಾಲಯ : ತ್ರಿಕುಟೇಶ್ವರ ದೇವಾಲಯದ ದಕ್ಷಿಣಕ್ಕೆ ಸರಸ್ವತಿ ದೇವಾಲಯವಿದೆ. ಆ ವಿಗ್ರಹ ಸುಲಕ್ಷಣವಾಗಿ ಸುಂದರವಾಗಿ ಕೆತ್ತಿದ ಮೂರ್ತಿ, ಆ ಗುಡಿಯ ಕಂಬಗಳು ಚಾಲುಕ್ಯರ ಕಾಲದ ಶಿಲ್ಪಕಲೆಯ ಮಾದರಿಯಾಗಿ ಉಳಿದಿದೆ. ಗರ್ಭಗುಡಿಯ ಸುತ್ತಲೂ ೧೪ ಕಂಬಗಳು ಹಾಗೂ ಉಳಿದ ನಾಲ್ಕು ಕಂಬಗಳು ಮಧ್ಯದಲ್ಲಿ ಆಧಾರ ಸ್ತಂಭಗಳಾಗಿವೆ. ಎಲ್ಲ ಕಂಬಗಳಿಗೂ ಸುಂದರವಾಗಿ ಕೆತ್ತಲಾಗಿದೆ ಹಾಗೂ ಇದು ಒಂದು ಸುಂದರವಾದ ದೇವಾಲಯವಾಗಿದೆ.

---

೧೨. ಪ್ರೊ. ಸಿ.ವಿ. ಕೆರಿಮನಿ ಪ್ರಸಂ. ಹಾಗೂ ಇತರರು ಲೇ ಶ್ರೀ ದತ್ತಾಪ್ರಸನ್ ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೩೦

೧೩. ಪ್ರೊ. ಸಿ.ವಿ. ಕೆರಿಮನಿ ಪ್ರಸಂ. ಹಾಗೂ ಇತರರು ಲೇ ಶ್ರೀ ದತ್ತಾಪ್ರಸನ್ ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೩೨

ವೀರನಾರಾಯಣ ದೇವಸ್ಥಾನ : ಈ ದೇವಸ್ಥಾನವು ಸುಮಾರು ೧೧-೧೨ ನೇಯ ಶತಮಾನದಲ್ಲಿ ಕಟ್ಟಿರಬೇಕು. ವಿಜಯನಗರದ ದೇವಸ್ಥಾನದಂತೆ ಗೋಪುರ ಎತ್ತರವಾಗಿದೆ. ಮನೋಹರವಾಗಿದೆ. ಹೊಯ್ಸಳ ವಿಷ್ಣುವರ್ಧನನು ಕಟ್ಟಿಸಿದ ಐದು ವಿಷ್ಣು ದೇವಾಲಯಗಳಲ್ಲಿ ಇದು ಒಂದೊಂದು ಪ್ರತಿತಿ, ಕುಮಾರವ್ಯಾಸ ಕವಿ ಈ ದೇವಸ್ಥಾನದಲ್ಲಿ ಕುಳಿತು ವೀರನಾರಾಯಣನಿಂದ ಸ್ಫೂರ್ತಿ ಪಡೆದು ಕನ್ನಡ ಭಾರತವನ್ನು ರಚಿಸಿದನೆಂದು ಇಂದಿಗೂ ಕಂಬ ಪ್ರೇಕ್ಷಕರಿಗೆ ಸಾರಿ ಹೇಳುತ್ತದೆ.[೧೪]

ಬ್ರಹ್ಮ ಜಿನಾಲಯ : ದಾನಚಿಂತಾಮಣಿ ಅತ್ತಿಮಬ್ಬೆಯ ಕ್ರಿ. ಶ. ೧೧೧೦ರಲ್ಲಿ ಈ ಜಿನಾಲಯವನ್ನು ನಿರ್ಮಿಸಿ ಹಲವಾರು ದಾನದತ್ತಿಗಳನ್ನು ನೀಡಿದ್ದಳು. ಈ ದೇವಾಲಯವು ಚೌಕಾಕಾರದ ಗರ್ಭಗ್ರಹ ಅರ್ಧ ಮಂಟಪ ನವರಂಗ ಹಾಗೂ ತೆರೆದ ಮುಖಮಂಟಪವನ್ನು ಹೊಂದಿದೆ. ಗರ್ಭಗುಡಿಯಲ್ಲಿ ನೇಮಿನಾಥನ ಆಕರ್ಷಕ ವಿಗ್ರಹವಿದೆ. ಇದು ಸುಂದರವಾದ ಪ್ರಭಾವಳಿಯನ್ನು ಹೊಂದಿದ್ದು ಅಕ್ಕಪಕ್ಕದಲ್ಲಿ ಚಾವರಧಾರಣಿಯರ ಶಿಲ್ಪಗಳಿವೆ.

ಈ ದೇವಾಲಯದ ಅರ್ಧ ಮಂಟಪದಲ್ಲಿರುವ ಬ್ರಹ್ಮನ ವಿಗ್ರಹವು ಕಲ್ಯಾಣ ಚಾಲುಕ್ಯರ ಕಲಾ ಕೌಶಲ್ಯದ ಪ್ರತೀಕವಾಗಿದ್ದು, ಗದುಗಿನಲ್ಲಿರುವ ಸರಸ್ವತಿ ವಿಗ್ರಹದಷ್ಟೇ ಆಕರ್ಷಕವಾಗಿದೆ. ಇದು ಸ್ಥಾನ ಭಂಗಿಯಲ್ಲಿದ್ದು ಚತುರ್ಮುಖಗಳನ್ನು ಹೊಂದಿದ್ದು ತೇಜೋಮಯವಾಗಿದೆ. ಚತುರ್ಮುಖಗಳಲ್ಲಿ ಹಿಂದಿನ ಮುಖಕ್ಕೆ ಮಾತ್ರ ಎಡಗೈಯಲ್ಲಿ ಕಲಶವಿದೆ. ಅರ್ಧ ಮಂಟಪದ ಮತ್ತೊಂದು ಬದಿಯಲ್ಲಿ ಜೈನ ದೇವತೆಯಾದ ಪದ್ಮಾವತಿಯ ರ್ಕಪಕವಾದ ಮೂತಿ ಶಿಲ್ಪವಿದೆ."[೧೫]

ಕಾಶಿವಿಶ್ವೇಶ್ವರ ದೇವಾಲಯ : ಲಕ್ಕುಂಡಿಯ ದೇವಾಲಯಗಳಲ್ಲಿ ಸುಂದರ ವಾಸ್ತು ಶಿಲ್ಪಕಲೆಯ ದೇವಾಲಯಗಳಲ್ಲಿ ಪ್ರಮುಖ ಮತ್ತು ಸುಂದರ ದೇವಾಲಯವು ಕಾಶೀವಿಶ್ವೇಶ್ವರ ದೇವಾಲಯ. ಇದು ಗರ್ಭ ಗೃಹ ಅಂತರಾಳ, ನವರಂಗ, ಮತ್ತು ಮುಖಮಂಟಪಗಳಿಂದ ಕೂಡಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಪಶ್ಚಿಮ, ದಕ್ಷಿಣ, ಉತ್ತರದ ಭಿತ್ತಿಗಳಲ್ಲಿ ಗೂಡುಗಳಿವೆ ಇದರ ಛತ್ತಿನಲ್ಲಿ ಬಹುದಳದ ತಾವರೆ ಇದೆ. ಬಾಗಿಲವಾಡವು ವಶ್ರನಾಗ, ನಾಗಿಣಿ, ಗಂಧರ್ವ, ಸ್ತಂಭ ಲತಾ ಶಾಖೆಗಳಿಂದ ಅಲಂಕೃತವಾಗಿದೆ. ಕೆಳಭಾಗದಲ್ಲಿ ಚಾಮರಧಾರಿಣಿಯವರಿದ್ದಾರೆ. ಹೀಗೆ ಹಲವಾರು ಶಿಲ್ಪಗಳನ್ನು ನಕ್ಷೆಗಳನ್ನು ಹೊಂದಿದ ಸುಂದರವಾದ ದೇವಾಲಯ ಕಾಶೀವಿಶ್ವೇಶ್ವರ ದೇವಾಲಯವಾಗಿದೆ.[೧೬]

"ಪುಲಿಗೆರಿ" ಎಂದೇ ಇತಿಹಾಸದ ಪುಟಗಳಲ್ಲಿ ಪ್ರಸಿದ್ಧವಾದ ಇಂದಿನ ಲಕ್ಷೇಶ್ವರ ಗದಗ ಜಿಲ್ಲೆಯ ಮಹತ್ವದ ಐತಿಹಾಸಿಕ ಪ್ರಸಿದ್ದವಾದ ಕೇಂದ್ರ ಜೈನ, ಶೈವ, ವೈಷ್ಣವ ಧರ್ಮಗಳ ಕೇಂದ್ರವಾಗಿದ್ದು, ಈ ನಗರ ಅನೇಕ ಐತಿಹಾಸಿಕ ಸ್ಮಾರಕಗಳನ್ನು ಹೊಂದಿದೆ.

---

೧೪. ಶ್ರೀ ಹ.ರಾ. ಕಿದಿಯೂರು (ಸಂ) ನಮ್ಮ ಗದಗ ಬೆಟಗೇರಿ ಪು.ಸಂ ೪೫೮

೧೫. ಪ್ರೊ. ಸಿ.ವಿ. ಕೆರಿಮನಿ ಪು.ಸಂ. ಹಾಗೂ ಇತರರು ಲೇ.ಶ್ರೀ ದತ್ತಾ ಪ್ರಸನ್ ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೩೪

೧೬. ಪ್ರೊ. ಸಿ.ವಿ. ಕೆರಿಮನಿ ಪು.ಸಂ. ಹಾಗೂ ಇತರರು ಲೇ ಶ್ರೀ ದತ್ತಾ ಪ್ರಸನ್ ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೩೪

ಸೋಮೇಶ್ವರ ದೇವಾಲಯ : ಈ ದೇವಾಲಯವು ಲಕ್ಷ್ಮೇಶ್ವರದ ಪ್ರಮುಖ ಆಕರ್ಷಣೆಯಾಗಿದೆ. ಇದನ್ನು ಪುಲಗೇರಿ ಸೋಮನಾಥ ದೇವಾಲಯವೆಂದು ಕರೆಯಲಾಗುತ್ತದೆ. ಸುಮಾರು ೧೧ನೇ ಶತಮಾನದಲ್ಲಿ ನಿರ್ಮಾಣವಾಗಿರಬಹುದಾದ ಈ ದೇವಾಲಯ ೩ ಮಹಾದ್ವಾರಗಳನ್ನೊಳಗೊಂಡ ಪ್ರಕಾರ ಗೋಡೆಯಿಂದಾ (ಕೋಟೆಯ ರೀತಿ) ಆವರಿಸಲ್ಪಟ್ಟಿದೆ. ದೇವಾಲಯದ ಮುಖ್ಯ ಕಟ್ಟಡ ಬೃಹದಾಕಾರದ ಸಂಕೀರಣ ಕಟ್ಟಡವಾಗಿದ್ದು ಇದು ಆಯತಾಕಾರದ ಅರ್ಧ ಮಂಟಪ, ವಿಶಾಲವಾದ ನವರಂಗ ಹಾಗೂ ಮುಖ್ಯ ಮಂಟಪಗಳನ್ನು ಹೊಂದಿದೆ.

ದೇವಾಲಯದ ಗರ್ಭ ಗೃಹದಲ್ಲಿರುವ ಮೂರ್ತಿ ಗದಗ ಜಿಲ್ಲೆಯ ಮತ್ತೊಂದು ವಿಶಿಷ್ಟವಾದ ಮೂರ್ತಿಯಾಗಿದೆ. ಸಾಮಾನ್ಯವಾಗಿ ಅದನ್ನು ಲಿಂಗದ ರೂಪದಲ್ಲಿ ಪ್ರತಿಷ್ಠಾಪಿಸಿ ಪೂಜಿಸುವುದು ವಾಡಿಕೆ. ಆದರೆ ಇಲ್ಲಿ ಲಿಂಗರೂಪಿ ಶಿವನ ಬದಲು ವೃಷಭಾರೂಢ ಶಿವ ಪತ್ನಿ ಪಾರ್ವತಿಯ ಅತಿಸುಂದರ ಶಿಲ್ಪವನ್ನು ಮೂರ್ತಿ ರೂಪದಲ್ಲಿ ಪೂಜಿಸಲಾಗುತ್ತದೆ. ಶಿವನು ನಂದಿಯ ವೃಷಭಾ ಮುಂಭಾಗದಲ್ಲಿ ಕುಳಿತಿದ್ದು ಅವನ ಹಿಂಬಾಗದಲ್ಲಿ ಪಾರ್ವತಿಯು ಕುಳಿತಿದ್ದಾಳೆ. ಈ ಶಿಲ್ಪವು ಚಾಲುಕ್ಯ ಶೈಲಿಯಲ್ಲಿದ್ದು ಅತ್ಯಂತ ಸುಂದರವಾಗಿದೆ."[೧೭] ಧಮ್ಮವೊಳಲು "ಧರ್ಮಪುರ" ಎಂದು ಶಾಸನೋಕ್ತವಾದ ಡಂಬಳ ಮಾಸವಾಡಿ-೧೪೦ ಆಡಳಿತ ವಿಭಾಗಕ್ಕೆ ಸೇರಿದ ಕರ್ನಾಟಕ ಪ್ರಮುಖ ಬೌದ್ಧ ಕೇಂದ್ರವಾಗಿತ್ತು. ಆರನೆಯ ವಿಕ್ರಮಾದಿತ್ಯನ ಹಿರಿಯರಸಿ ಲಕ್ಷ್ಮೀದೇವಿ ಇಲ್ಲಿ ತಾರಾಭವತಿ ವಿಹಾರವೊಂದನ್ನು ನಿರ್ಮಿಸಿದ ಸಂಗತಿ ಶಾಸನೋಕ್ತವಾಗಿದೆ.

ದೊಡ್ಡ ಬಸಪ್ಪನ ಗುಡಿ : ಕಲ್ಯಾಣದ ಚಾಲುಕ್ಯರು ನಿರ್ಮಿಸಿದ ಪ್ರಮುಖ ದೇವಾಲಯಗಳಲ್ಲೊಂದಾದ ಡಂಬಳದ ದೊಡ್ಡ ಬಸಪ್ಪ ದೇವಾಲಯ ಕನ್ನಡ ನಾಡಿನ ಹೆಮ್ಮೆಯ ಪ್ರತೀಕವಾಗಿದೆ. ಈ ದೇವಾಲಯವು ಅಡಿಯಿಂದ ಮುಡಿಯವರೆಗೆ ನಕ್ಷತ್ರಕಾರದ ವಿನ್ಯಾಸವನ್ನು ಹೊಂದಿರುವ ಈ ದೇವಾಲಯ ಕರ್ನಾಟಕದ ವಾಸ್ತು ಶಿಲ್ಪ ಅಧ್ಯಯನಕ್ಕೆ ವಿಶೇಷ ಉದಾಹರಣೆಯಾಗಿ ನಿಲ್ಲುತ್ತದೆ.[೧೮] ಈ ದೇವಾಲಯವು ನೋಡುಗರಿಗೆ ವಿಶಿಷ್ಟ ರೀತಿಯ ವಿನ್ಯಾಸವನ್ನು ಹೊಂದಿದ ಸುಂದರವಾದ ದೇವಾಲಯವಾಗಿದೆ. ಮೇಲ್ಭಾಗದಲ್ಲಿರುವ ಶಿಖರವು ಅದ್ಭುತವಾಗಿದ್ದು, ಪ್ರತಿ ಹಂತದಲ್ಲಿಯೂ ಬಿಡಿಶಿಲ್ಪಗಳನ್ನು ಹಾಗೂ ಚಿಕ್ಕ ಮಂಟಪಗಳ ಅಲಂಕಾರದಿಂದ ಸೌಂದರ್ಯ ಇಮ್ಮಡಿಗೊಂಡಿದೆ. ಇಡೀ ಶಿಖರ ನಕ್ಷತ್ರಾಕಾರದಲ್ಲಿದ್ದು ಮೊದಲ ನೋಟದಲ್ಲಿ ಕಣ್ಮನ ಸೆಳೆಯುತ್ತದೆ.

ವೆಂಕಟೇಶ್ವರ ದೇವಾಲಯ : ಈ ದೇವಾಲಯ ನರಗುಂದ ಗುಡ್ಡ ಇಳಿಜಾರಿನಲ್ಲಿರುವ ಎತ್ತರವಾದ ಸುಂದರ ದೇವಾಲಯವಾಗಿದೆ. ವೀರನಾರಾಯಣ ದೇವಾಲಯದಂತೆ ಎತ್ತರವಾದ ಗೋಪುರದ ವೆಂಕಟೇಶ್ವರ ದೇವಾಲಯದ ವೈಶಿಷ್ಟವೆಂದರೆ ಇದು ಎತ್ತರವಾದ ಪಂಚಶಿಖರವನ್ನು ಹೊಂದಿದೆ. ಇನ್ನಿತರ ದೇವಾಲಯಗಳಂತೆ ಈ ದೇವಾಲಯವೂ ಗರ್ಭಗೃಹ, ನವರಂಗ, ಸಭಾ

---

೧೭. ಪ್ರೊ. ಸಿ.ವಿ. ಕೆರಿಮನಿ ಪು.ಸಂ. ಹಾಗೂ ಇತರರು ಲೇ ಶ್ರೀ ದತ್ತಾ ಪ್ರಸನ್ ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೩೬

೧೮. ಪ್ರೊ. ಸಿ.ವಿ. ಕೆರಿಮನಿ ಪು.ಸಂ. ಹಾಗೂ ಇತರರು ಲೇ ಶ್ರೀ ದತ್ತಾ ಪ್ರಸನ್ ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೩೭

ಮಂಟಪ ಮತ್ತು ಅಂತರಾಳಗಳನ್ನು ಹೊಂದಿದೆ. ಈ ದೇವಾಲಯದ ವಿಶೇಷತೆಯೆಂದರೆ ಇದು ದ್ರಾವಿಡ ಶೈಲಿಯಲ್ಲಿರುವ ವಾಸ್ತು ಶಿಲ್ಪವಾಗಿದೆ.[೧೯] ಸುಂದರವಾದ ಗೋಪುರವನ್ನು ನಿರ್ಮಿಸಿದ್ದು ಗುಡ್ಡ ಇಳಿಜಾರಿನಲ್ಲಿರುವ ಈ ದೇವಾಲಯ ಸೌಂದರ್ಯತೆಯನ್ನು ಹೆಚ್ಚಿಸಿದೆ.

ಜೋಡು ಕಳಸದ ಗುಡಿ : ಈ ದೇವಾಲಯವು ರೋಣ ತಾಲೂಕಿನ ಸೂಡಿ ಗ್ರಾಮದಲ್ಲಿದೆ. ಎರಡು ಕಳಸಗಳುಳ್ಳ ದ್ವಿಕೂಟದ ದೇವಾಲಯವಿದೆ. ನಾಗದೇವನು ಇದನ್ನು ೧೦೬೧ರಲ್ಲಿ ನಿರ್ಮಿಸಿದನೆಂದು ಶಾಸನದಲ್ಲಿ ಉಲ್ಲೇಖವಿದೆ. ಇದು ಗರ್ಭಗೃಹ ತೆರೆದ ಅರ್ಧ ಮಂಟಪ ಹೊಂದಿದೆ. ಎರಡು ಗರ್ಭಗ್ರಹಗಳಿದ್ದು, ದೇವ ಕೋಷ್ಟಗಳಲ್ಲಿ ಬ್ರಹ್ಮ, ಮಹೇಶ್ವರ, ವಿಷ್ಣುವಿನ ಶಿಲ್ಪಗಳಿವೆ. ಅನೇಕ ಕಿರು ಚಿತ್ರಕಲೆಗಳಿವೆ. ದ್ರಾವಿಡ ಶೈಲಿಯ ಕೆತ್ತನೆಗಳಿವೆ.[೨೦]" ಗದಗ ಜಿಲ್ಲೆಯಲ್ಲಿ ಇನ್ನೂ ಅನೇಕ ಪ್ರಾಚೀನ ದೇವಾಲಯಗಳಿವೆ.

ಹೀಗೆ ಪ್ರಾಚೀನ ಕಾಲದಿಂದಲೂ ಗದಗು ಶಿಲ್ಪಗಳ ಹರವಿನಲ್ಲಿ ನಿರಂತರವಾಗಿ ಸಾಗಿಬಂದು ಶಾತವಾಹನರಿಂದಾ ವಿಜಯ ನಗರದ ಕಾಲದವರೆಗೆ ಅತ್ಯದ್ಬುತವಾದ ದೇವಾಲಯಗಳು ಮನಮೋಕವಾದ ಮೂರ್ತಿಶಿಲ್ಪಗಳನ್ನು ಮೈದುಂಬಿಕೊಂಡು ಮನೋಜ್ಞ, ಕಲಾ ಸಾಧನೆಗಳ ನೆಲೆವೀಡಾಗಿದೆ. ಆಧುನಿಕ ಕಾಲದಲ್ಲಿ ಗದಗ ಶಿಲ್ಪಕಲೆಗೆ ನಾಡಿನಾದ್ಯಂತ ಹೆಸರಾಗಿದೆ. ಗದುಗಿನ ಸೋಮಣ್ಣ ಸಿದ್ದಪ್ಪ ಶಿಲ್ಪಿ ಮತ್ತು ಮೂರ್ತಿ ಶಿಲ್ಪಕಲೆಗೆ ನಾಡಿನಾದ್ಯಂತ ಹೆಸರಾಗಿದ್ದಾರೆ. ಗದಗ ಲಕ್ಕುಂಡಿ ಮೂರ್ತಿ ಶಿಲ್ಪಕಲಾ ಕೇಂದ್ರಗಳಾಗಿದ್ದು, ನಾಡಿನ ವಿವಿಧ ಆಧುನಿಕ ದೇವಾಲಯಗಳಿಗೆ ಸುಂದರ ಮೂರ್ತಿ ಶಿಲ್ಪಗಳನ್ನು ನೀಡಿವೆ.

ಗದಗ ಜಿಲ್ಲೆಯಲ್ಲಿ ಶಿಲ್ಪಕಲೆಯು ಪ್ರಕಾಶಿಸುತ್ತದೆ. ಶಿಲ್ಪ ಕಲೆಯಲ್ಲಿ ಜಿಲ್ಲೆಯ ಲಕ್ಕುಂಡಿಯ ನೂರೊಂದು ಗುಡಿಗಳು ಆಕರ್ಷಣೀಯ ಅಲ್ಲಿನ ಬ್ರಹ್ಮ ಜೀನಾಲಯ ತನ್ನ ಶಿಲ್ಪ ವರ್ಚಸ್ಸಿನಿಂದ ಕಂಗೊಳಿಸುತ್ತಿದೆ. ಸುಂದರ ದೇವಾಲಯ ಸೂರ್ಯನಷ್ಟೇ ಪ್ರಕಾಶಮಾನವಾಗಿ ಹೊಳೆಯುತ್ತಿದೆ. ಈ ದೇವಾಲಯಗಳಲ್ಲಿ ಅನೇಕ ಸುಂದರವಾದ ಶಿಲ್ಪಗಳಿವೆ. ಆನೆ ಸರಳ ನಕ್ಷೆ ಚಿತ್ರಗಳು ಇಲ್ಲಿ ನೋಡಲು ಸಿಗುತ್ತವೆ. ಲಕ್ಕುಂಡಿಯಲ್ಲಿ ಇನ್ನು ಹಲವಾರು ದೇವಾಲಯಗಳ ಶಿಲ್ಪಕಲೆಯಿಂದ ಮೆರೆದಿವೆ. ಇತಿಹಾಸವನ್ನು ಸಾರಿ ಹೇಳುವ ಪ್ರಸಿದ್ಧ ದೇವಾಲಯವಾದ ಗದುಗಿನ ಶ್ರೀ ವೀರನಾರಾಯಣ ದೇವಾಲಯದಲ್ಲಿ ಅನೇಕ ಶಿಲ್ಪಗಳು ನೋಡಲು ಸಿಗುತ್ತದೆ. ದೇವಾಲಯದ ಮುಖ್ಯ ಗೋಪುರದಲ್ಲಿ ಕೆಲವು ಲೈಂಗಿಕ ಶಿಲ್ಪಗಳು ಇವೆ. ತ್ರಿಕುಟೇಶ್ವರ ದೇವಸ್ಥಾನ ಹಾಗೂ ಸೋಮನಾಥ ದೇವಾಲಯ ಬಹು ಪ್ರಸಿದ್ಧಿಯನ್ನು ಪಡೆದುಕೊಂಡ ಶಿಲ್ಪಕಲಾ ದೇವಾಲಯಗಳಿವೆ. ಸೋಮೇಶ್ವರ ದೇವಾಲಯ ರಾಷ್ಟ್ರೀಯ ಸಂರಕ್ಷಣಾ ಸ್ಮಾರಕವಾಗಿ ರೂಪುಗೊಂಡಿದೆ. ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯವು ಶಿಲ್ಪಕಲಾ ಕೇಂದ್ರವಾಗಿದೆ. ಸೂಡಿಯ ಜೋಡ ಕಳಸದ ದೇವಾಲಯದಲ್ಲಿ ಸುಂದರವಾದ ಶಿಲ್ಪಗಳು ಇವೆ. ನಿರ್ಜೀವ ಕಲ್ಲಿಗೆ ವಿಶೇಷ ರೂಪಕೊಡಬಹುದು ಎಂಬುದಕ್ಕೆ ಇಲ್ಲಿದ್ದ ದೇವಾಲಯಗಳೇ ಸಾಕ್ಷಿ, ಗದಗ ಜಿಲ್ಲೆಯನ್ನು

---

೧೯. ಪ್ರೊ. ಸಿ.ವಿ. ಕೆರಿಮನಿ ಪು.ಸಂ. ಹಾಗೂ ಇತರರು ಲೇ ಶ್ರೀ ದತ್ತಾ ಪ್ರಸನ್ ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೩೮

೨೦. ಎಸ್.ಟಿ. ಜಮಾದಾರ ಕಲಾವಿದ ಸಿ.ಎನ್. ಪಾಟೀಲ ಕಲಾ ಬದುಕು ಮತ್ತು ಕಲಾಕೃತಿಗಳು ಪು.ಸಂ. ೨೩೯

ಹಲವಾರು ರಾಜವಂಶಗಳು ಆಳಿದ್ದು ದೇವಾಲಯಗಳಿಗೆ ಶಿಲ್ಪಕಲೆಯಿಂದ ವಿಶೇಷ ಆಕರ್ಷಣಾ ಶಕ್ತಿ ನೀಡಿ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿದೆ.

ಸಾಹಿತ್ಯ : ಯಾವುದೇ ಪ್ರದೇಶದ ಇತಿಹಾಸ ಸಂಸ್ಕೃತಿ ಕುರಿತು ಅದ್ಯಯನ ಆ ಪ್ರದೇಶದ ಕಲೆ ಮತ್ತು ಸಾಹಿತ್ಯಗಳ ಪರಿಶೀಲನೆ ಇಲ್ಲದೆ ಸುಗಮವೆನಿಸಲಾರದು. ಕನ್ನಡ ಭಾಷೆ ಕ್ರಿಪೂ ೩ನೇ ಶತಮಾನಕ್ಕಿಂತ ಪ್ರಾಚೀನವಾದರೂ ಸಾಹಿತ್ಯದ ಹೆಜ್ಜೆ ಗುರುತುಗಳು ಕಾಣಸಿಗುವುದು. ಕ್ರಿ.ಶ.೬ನೇ ಶತಮಾನದ ಚಿತ್ರದುರ್ಗ ಜಿಲ್ಲೆಯ ತಾರಟಕಲ್ಲು ಶಾಸನದ ಗುಣಮದುಹ ದೊರೆಯ ಪ್ರಶಸ್ತಿ ಪದ್ಯದ ಪ್ರಾರಂಭದಿಂದ ಎನ್ನುವುದು ಈವರೆಗೆ ಉಪಲಬ್ದವಾಗಿರುವ ಗ್ರಂಥರೂಪದ ಅತ್ಯಂತ ಪ್ರಾಚೀನ ಕೃತಿ ಕ್ರಿ.ಶ. ೯ನೇ ಶತಮಾನದ ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಕಾಲದ ಶ್ರೀವಿಜಯನೆಂಬ ಕವಿ ಬರೆದ 'ಕವಿರಾಜಮಾರ್ಗ' ಎನ್ನುವುದು ಗದಗ ಪರಿಸರಕ್ಕೆ ಸೇರಿದ ಪುಲಿಗೇರಿ (ಈಗಿನ ಲಕ್ಷ್ಮೇಶ್ವರ) ತಿರುಳ್ಗನ್ನಡದ ಪ್ರದೇಶವೆಂದು, ಕವಿಶ್ರೀ ವಿಜಯ ಹಾಗೂ ಕ್ರಿ.ಶ.೧೦ನೇಯ ಶತಮಾನದ ಕನ್ನಡದ ಮಹಾಕವಿ ಪಂಪ ಪ್ರಶಂಸಿರುವುದು. ಕ್ರಿ.ಶ.೧೦ನೇ ಶತಮಾನದಲ್ಲಿ ಗದುಗಿನ ಬಳಿಯ ಲಕ್ಕುಂಡಿಯನ್ನು ತನ್ನ ಧಾರ್ಮಿಕ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು "ದಾನ ಚಿಂತಾಮಣಿ" ಎಂಬ ಬಿರುದಿಗೆ ಪಾತ್ರಳಾದ ಅತ್ತಿಮಬ್ಬೆ ಕೆಲಕಾಲ ಕನ್ನಡ ಪ್ರಖ್ಯಾತ ಕವಿ ರನ್ನನಿಗೆ ತನ್ನಲ್ಲಿ ಆಶ್ರಯ ನೀಡಿದ್ದಳು ಮತ್ತು ಆಗಿನ ಕಾಲದಲ್ಲೇ ಆಕೆ ಕನ್ನಡದ ಪ್ರಸಿದ್ಧ ಕೃತಿ ಪೊನ್ನನ ಶಾಂತಿನಾಥ ಪುರಾಣದ ೧೦೦೦ ಪ್ರತಿಗಳನ್ನು ಬರೆಯಿಸಿ ದಾನಮಾಡಿದಂತಹ ಅಸಾಧಾರಣ ಸಂಗತಿ ಒಂದಾಗಿದ್ದು ಇವೆಲ್ಲ ಈ ನೆಲಕ್ಕೆ ಸಂಬಂಧಿಸಿದ ಅಂಶಗಳು ಎಂಬುದನ್ನು ಗಮನಕ್ಕೆ ತೆಗೆದುಕೊಂಡರೆ ಗದಗ ಜಿಲ್ಲೆಯ ಪ್ರದೇಶ ಬಹು ಹಿಂದಿನಿಂದ ಶುದ್ಧ ಕನ್ನಡ ಭಾಷೆಗೆ ಸಾಹಿತ್ಯಿಕ ವಾತಾವರಣಕ್ಕೆ ಹೆಸರಾಗಿರಬೇಕು ಎನಿಸುತ್ತದೆ. ಪ್ರಾಚೀನ ಸಾಹಿತ್ಯದಿಂದ ಹಿಡಿದು ಆಧುನಿಕ ಸಾಹಿತ್ಯದವರೆಗೆ ಗದುಗಿನ ಕವಿಗಳ ಕೊಡುಗೆ ಅಪಾರ ಹಾಗೂ ಅವಿಸ್ಮರಣೀಯವಾದುದು. ಆಧುನಿಕ ಕವಿಗಳಾದ ಹುಯಿಲಗೋಳ ನಾರಾಯಣರಾವ್, ಚೆಂಬಳಕಿನ ಕವಿ ಚನ್ನವೀರ ಕಣವಿಯವರು ನಾಡಿನ ಹೆಸರಾಂತ ಕವಿಗಳು.

ನಯಸೇನ : (೧೧೧೨) : ಕವಿಗಳು ಮುಳಗುಂದವನ್ನು ಜೈನ ಸಮಾಜವಾಗಿದ್ದ ಈ ಧರ್ಮಾಮೃತ ಕಾವ್ಯ ರಚನೆ ಧರ್ಮದ ಹಿರಿಮೆಯನ್ನು ಹೆಚ್ಚಿಸಿದ್ದಾನೆ. ಈ ಚಂಪೂ ಶೈಲಿಯ ವಿಶೇಷತೆ ವಿಡಂಬನೆ ಕನ್ನಡ ಕಾವ್ಯ ನಾಡಿಗೆ ದೇಸಿಯತೆಯ ಸೊಗಡನ್ನು ಸೊಗಸಾಗಿ ಬೆರೆಸಿದ ಕವಿನಯನ ಸೇನ"

ಲಕ್ಕುಂಡಿಯ ಮುಕ್ತಾಯಕ್ಕ : (೧೧೬೦-೧೨೦೦) ಈ ಅವದಿಯಲ್ಲಿ ಮುಕ್ತಾಯಕ್ಕ ವಚನಗಳನ್ನು ರಚನೆ ಮಾಡಿದ್ದಾಳೆ. ಶಿವಶರಣೆ ಅಲ್ಲಮ ಪ್ರಭುವಿನ ಪ್ರಭಾವಕ್ಕೆ ಒಳಗಾಗಿ ಈಕೆ ಅನುಭವ ಮಂಟಪದಲ್ಲಿಯೂ ಭಾಗವಹಿಸಿದ ಅನುಭಾವಿ. ಈಕೆ ಅಜಗಣ ಎಂಬ ವಚನಾಂಕಿತವಿಟ್ಟುಕೊಂಡು ಅನೇಕ ವಚನಗಳನ್ನು ರಚಿಸಿದ್ದಾಳೆ. ಇದುವರೆಗೆ ೩೭ ವಚನಗಳು ದೊರೆತಿವೆ. ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಮರಳು ಶಂಕರದೇವ, ಮಡಿವಾಳಯ್ಯ, ಅಜಗಣ್ಣ[೨೧] ಮುಂತಾದವು ಪ್ರಭಾವ ಇವಳ ಮೇಲೆ ಆಗಿರುವುದಾಗಿ ಅಭಿಪ್ರಾಯವಿದೆ.

---

೨೧. ಪ್ರೊ. ಸಿ.ವಿ. ಕೆರಿಮನಿ ಪ್ರಸಂ. ಹಾಗೂ ಇತರರು ಲೇ ಡಾ॥ ಬಿ.ರಾಜಶೇಖರಪ್ಪ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೮೨

ಆದಯ್ಯ : (ಕ್ರಿ.ಶ. ೧೧೬೦) ಲಕ್ಷ್ಮೇಶ್ವರದ ಆದಯ್ಯ (ಕ್ರಿ.ಶ.೧೨ನೇ ಶತಮಾನದ ಶಿವಶರಣ ವಚನಕಾರರಲ್ಲಿ ಒಬ್ಬ ಸೌರಾಷ್ಟ್ರ ಸೋಮೇಶ್ವರಾ' ಎಂಬ ವಚನಾಂಕಿತದಲ್ಲಿರುವ ವಚನಗಳು ಇವನವೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಈವರೆಗೆ ಅಂಥ ವಚನಗಳು ಒಟ್ಟು ೪೦) ದೊರೆತಿವೆ. ಆಕಾಲದ ಹಿರಿಯ ವಚನಕಾರ ಉತ್ತಮದರ್ಜೆಯ ವಚನಗಳು ಇವರದಾಗಿದೆ. ಎಂದು ಗಮನಿಸಬಹುದಾಗಿದೆ.

ಅಜಗಣ್ಣ : (ಕ್ರಿ.ಶ. ೧೧೬೦) ಇವರು ೧೨ನೇ ಶತಮಾನದ ಪ್ರಸಿದ್ಧ ವಚನಕಾರರಾದ ಬಸವಣ್ಣನವರ ಸಮಕಾಲೀನರು. ಲಕ್ಕುಂಡಿ ಗ್ರಾಮದಲ್ಲಿ ಈ ಶಿವಭಕ್ತ ತನ್ನ ತಂಗಿ ಮುಕ್ತಾಯಕ್ಕನೊಂದಿಗೆ ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನಲ್ಲಿ ಮಸಳಕಲ್ಲು ಎಂಬ ಊರಲ್ಲಿ ವ್ಯವಸಾಯ ಮಾಡಿಕೊಂಡಿದ್ದ ಪ್ರಖ್ಯಾತ ಶರಣರು ವಚನಕಾರರು ಆಗಿದ್ದ ಅಲ್ಲಮ ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣವರ ಐದು ವಚನ ಸಮಾನ ಎಂದು ಪ್ರಖ್ಯಾತ ಶರಣ ವಚನಕಾರ ಚನ್ನಬಸವಣ್ಣನವರು ಹೇಳಿದ್ದಾರೆ. "ಮಹಾಘನ ಸೋಮೇಶ್ವರಾ" ಎಂಬ ಅಂಕಿತ ನಾಮ ಇವರ ಕೇವಲ ೧೦ ವಚನಗಳು ಮಾತ್ರ ದೊರೆತಿವೆ.

ಆಚಣ್ಣ : (ಕ್ರಿ.ಶ. ೧೨೦೦) ೧೨ನೇ ಶತಮಾನ ಕೊನೆಯಲ್ಲಿ ಮತ್ತು ೧೩ನೇ ಶತಮಾನದ ಆಧಿಭಾಗದಲ್ಲಿದ್ದಂತೆ ತಿಳಿಯಲಾಗಿರುವ ಪುಲಗೇರಿಯವನೆಂದು ಹೇಳಲಾದ ಕವಿ ಆಚಣ್ಣ ಇವರು ೨೪ ತೀರ್ಥಂಕರಲ್ಲಿ ಕೊನೆಯವನಾದ ವರ್ಧಮಾನ ಮಹಾವೀರನನ್ನು ಕುರಿತಾದ ಕಾವ್ಯದಲ್ಲಿ ಪ್ರಥಮ 'ವರ್ಧಮಾನ ಪುರಾಣ' ಕೃತಿಯನ್ನು ಬರೆದಿದ್ದಾರೆ.

ಸೋಮ : (ಕ್ರಿ.ಶ. ೧೨೯೯) ರಲ್ಲಿ ಕನ್ನಡದ ಹೆಸರಾಂತ ಶತಕಗಳಲ್ಲೊಂದಾದ ಸೋಮೇಶ್ವರ ಶತಕವನ್ನು ಬರೆದ ಕವಿ ಇವರು ಪುಲಿಗೇರಿಯವನೆಂದೂ ಅಲ್ಲಿಂದ ಸೋಮನಾಥ ಇವನ ಆರಾಧ್ಯ ದೈವರಾಗಿದ್ದರು.[೨೨] ಎಂದು ತಿಳಿದು ಬರುತ್ತದೆ.

ಕುಮಾರವ್ಯಾಸ : (ಕ್ರಿ.ಶ. ೧೩೦೦) ಕುಮಾರವ್ಯಾಸರು ಕನ್ನಡದ ಮಹಾಕವಿಗಳಲ್ಲೊಬ್ಬನೆಂದು ಖ್ಯಾತನಾದ ಕುಮಾರವ್ಯಾಸ ಗದಗ ಪ್ರದೇಶದ ಪ್ರಖ್ಯಾತ ಕವಿ ಗದುಗಿನ ವೀರನಾರಾಯಣನ ಪರಮ ಭಕ್ತನೂ ಯೋಗಿಯೂ ಆಗಿದ್ದನು. ಕ್ರಿಶ ೧೫೨೯ರಲ್ಲಿ ಗದುಗಿನ ಕಲಾ ಶಾಸನವೊಂದು ಅದರಲ್ಲಿ ಕವಿ ಕುಮಾರವ್ಯಾಸನ ಪ್ರಸ್ತಾಪವಿದೆ. ಸಂಸ್ಕೃತದಲ್ಲಿ ವ್ಯಾಸ ಮಹರ್ಷಿ ರಚಿಸಿದ 'ಮಹಾಭಾರತ'ದ ೧೮ ಪರ್ವಗಳಲ್ಲಿ ಹತ್ತು ಪರ್ವಗಳನ್ನು ಕನ್ನಡದಲ್ಲಿ ಭಾಮಿನೀ ಷಟ್ಪದಿಯಲ್ಲಿ ಕುಮಾರ ವ್ಯಾಸ ರಚಿಸಿರುವ ಬೃಹತ್ ಕಾವ್ಯ "ಕರ್ನಾಟಕ ಭಾರತ ಕಥಾ ಮಂಜರಿ" ಇದಕ್ಕೆ ಕನ್ನಡ ಭಾರತ, ಗದುಗಿನ ಭಾರತ ಕುಮಾರ ವ್ಯಾಸ ಎಂಬ ಹೆಸರುಗಳೂ ಇವೆ.[೨೩]

ಕುಮಾರ ವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು. ಭಾರತ ಕಣ್ಣಲ್ಲಿ ಕುಣಿಯುವುದು ಎಂದು ಆಧುನಿಕ ಕನ್ನಡದ ಮಹಾಕವಿ ಕುವೆಂಪು ಬಣ್ಣಿಸಿರುವ 'ಕುಮಾರವ್ಯಾಸ

---

೨೨. ಪ್ರೊ. ಸಇ.ಬಿ. ಕೆರಿಮನಿ ಪ್ರಸಂ. ಹಾಗೂ ಇತರರು ಲೇ ಡಾ॥ ಬಿ.ರಾಜಶೇಖರಪ್ಪ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೮೧

೨೩. ಪ್ರೊ. ಸಇ.ಬಿ. ಕೆರಿಮನಿ ಪ್ರಸಂ. ಹಾಗೂ ಇತರರು ಲೇ ಡಾ॥ ಬಿ.ರಾಜಶೇಖರಪ್ಪ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೮೨

ಭಾರತ' ಕನ್ನಡದ ಅತ್ಯಂತ ಜನಪ್ರೀಯವಾದ ಕಾವ್ಯ ಮಳೆ ಬಂದು ತೊಂದರೆಯಾದಾಗ ಜನ ಮಳೆ ಬರಿಸಿತೆಂದು ಪಾರಾಯಣ ಮಾಡಿಸುತ್ತಿದ್ದಾರೆಂದು ಜನಪ್ರೀಯತೆ ಇರುವ 'ವಿರಾಟಪರ್ವ' ಕುಮಾರವ್ಯಾಸ ಭಾರತದ ಒಂದು ಪರ್ವವೇ"[೨೪] ಹೀಗೆ ಕುಮಾರವ್ಯಾಸರು ಸಾಹಿತ್ಯ ಲೋಕದ ದಿಗ್ಗಜರಾಗಿದ್ದಾರೆ.

ಚಾಮರಸ : (ಕ್ರಿ.ಶ. ೧೪೩೦) ಗದಗ ಪ್ರದೇಶದ ಇನ್ನೊಬ್ಬ ಪ್ರಮುಖ ಕವಿ ಚಾಮರಸ ಕನ್ನಡದ ಪ್ರಮುಖ ಷಟ್ಪದಿ ಕವಿಗಳಲ್ಲಿ ಒಬ್ಬನಾದ ಇವನು ೧೨ನೇಯ ಶತಮಾನದ ಹಿರಿಯ ಅನುಭಾವಿ ಅಲ್ಲಮ ಪ್ರಭುವನ್ನು ಕುರಿತು ಭಾಮಿನೀ ಷಟ್ಪದಿಯಲ್ಲಿ ಬರೆದಿರುವ ಕೃತಿ 'ಪ್ರಭುಲಿಂಗಲೀಲೆ' ಪ್ರಸಿದ್ಧ ಕವಿಯಾದ ಕುಮಾರವ್ಯಾಸ ಮತ್ತು ಇವನು ಪರಸ್ಪರ ಬಂಧುಗಳು ಎಂದು ಹೇಳುವಂತಹ ಕೆಲವು ಐತಿಹ್ಯಗಳಿವೆ. ಆದರೆ ಆ ಐತಿಹ್ಯಗಳನ್ನು ಸತ್ಯವೆಂದು ತೆಗೆದುಕೊಳ್ಳುವುದು ಕಷ್ಟ ಇವರು ಗದುಗಿನ ಸಮೀಪದ ನಾರಾಯಣಪೂರದವರು ಎಂದು ಹೇಳಲಾಗಿದೆ.

ಪ್ರಭುಲಿಂಗಲೀಲೆಯು ವೀರಶೈವ ಧರ್ಮಕ್ಕೆ ಸಂಬಂಧಿಸಿದ ಸಾಹಿತ್ಯ ಕೃತಿಗಳಲ್ಲಿ ಅತ್ಯಂತ ಜನಪ್ರೀಯವಾದದ್ದು ಇದು ಸಂಸ್ಕೃತ, ಮರಾಠಿ, ತೆಲಗು, ತಮಿಳು, ಭಾಷೆಗಳಿಗೆ ಭಾಷಾಂತರಗೊಂಡಿದೆ.[೨೫] ಈ ಕೃತಿ ಬಗ್ಗೆ ಕವಿ ಹೇಳುವ ಈ ಕೆಳಗಿನ ಪದ್ಯ ಹೀಗಿದೆ.

ಸತ್ತವರ ಕಥೆಯಲ್ಲಿ ಜನರ
ಕುತ್ತದಲ್ಲಿ ಬಲು ಕುದಿದು ಕರ್ಮದ
ಕತ್ತರಿಗೆ ಸಿಕ್ಕುವವರ ಸೀಮೆಯ ಮಾತು ತಾನಲ್ಲ
ಹೊತ್ತ ಹೋಗದೆ ಪುಂಡರಾಲಿಪ
ಮತ ಮತಿಗಳ ಗೋಷ್ಠಿಯಲ್ಲಿದ್ದು,
ಸತ್ಯ ಶರಣರು ತಿಳಿವುದೀ ಪ್ರಭು ಲಿಂಗಲೀಲೆಯನು.

ಉಚಿತವಾದ ವರ್ಣನೆ ಕಲ್ಪನಾ ಸಂಪತ್ತು ಬಡಿತ ಸಾಂಕೇತಿಕತೆ ಶಬ್ದಶಕ್ತಿಯ ಸಹಜ ವಿಲಾಸ ಇವುಗಳಿಂದ ತುಂಬಿರುವ ಚಾಮರಸ ಕವಿಯ 'ಪ್ರಭುಲಿಂಗಲೀಲೆ ಉತ್ತಮ ಚರಿತ್ರ ಕಾವ್ಯವೆಂಬ ಪ್ರಶಂಶೆಗೆ ಪಾತ್ರವಾಗಿದೆ.

ಬಾಲಲೀಲ ಮಹಾಂತ ಶಿವಯೋಗಿ : (ಕ್ರಿ.ಶ. ೧೮೨೩-೯೫) ಕ್ರಿ.ಶ. ೧೮ನೇ ಮತ್ತು ೧೯ನೇಯ ಶತಮಾನ ಈ ಪ್ರದೇಶದ ಸಾಹಿತ್ಯ ಚರಿತ್ರೆಯಲ್ಲಿ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳು ರಚಿಸಿದ ವಿವಿಧ ಸಂದರ್ಭಗಳ ವಿವಿಧ ವಿಷಯಗಳ ವಿವಿಧ ಛಂದಸ್ಸುಗಳ ಹಾಡುಗಳು ಆ ಹಾಡುಗಳ ಸಂಕಲನವನ್ನು ಕೈವಲ್ಯ ದರ್ಪಣ ಎಂದು ಕರೆಯಲಾಗಿದೆ. ಮುಳಗುಂದದ ಶರಣೆ ಬಸಮ್ಮನ ಪುತ್ರ ಶೋಕ ನಿವಾರಿಸಲು ಅವರಿಗೆ ತಾವೇ ಮಗುಸ್ಥಾನದಲ್ಲಿ ಬಾಲಲೀಲೆಗಳನ್ನು ತೋರಿ "ಬಾಲಲೀಲಾ ಮಹಾಂತ ಶಿವಯೋಗಿ ಎಂಬ ಹೆಸರಿಗೆ ಪಾತ್ರರಾದರು.[೨೬]

---

೨೪. ಪ್ರೊ. ಸಇ.ಬಿ. ಕೆರಿಮನಿ ಪ್ರ.ಸಂ. ಹಾಗೂ ಇತರರು ಲೇ ಡಾ॥ ಬಿ.ರಾಜಶೇಖರಪ್ಪ ಬೆಳ್ವೂಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೮೨

೨೫. ಪ್ರೊ. ಸಿ.ವಿ. ಕೆರಿಮನಿ ಸಂ.ಸಂ. ಹಾಗೂ ಇತರರು ಲೇ ಡಾ॥ ಬಿ.ಜಾಶೇಖರಪ್ಪ ಬೆಳ್ವೂಲ ಬೆಳಕ ಸ್ಮರಣ ಸಂಚಿಕೆ ಪು.ಸಂ ೧೮೩

೨೬. ಪ್ರೊ. ಸಇ.ಬಿ. ಕೆರಿಮನಿ ಪ್ರ.ಸಂ. ಹಾಗೂ ಇತರರು ಲೇ ಡಾ॥ ಬಿ.ರಾಜಶೇಖರಪ್ಪ ಬೆಳ್ವೂಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೮೪

೧೮ನೇ ಶತಮಾನದ ಆರಂಭಿಕ ಕಾಲದಲ್ಲಿ ಗದುಗಿನ ಶಹಪೂರ ಪೇಟೆಯ ಗೋಪಾಲ ಬಸಪ್ಪ ಜನಪದ ಸಾಹಿತ್ಯದಲ್ಲಿ ಕೃಷಿ ಮಾಡಿದ್ದು ಹಲವು ಜನಪದ ಕಥೆಗಳನ್ನು ಬರೆದಿದ್ದಾರೆ. ಇವರು ಬರೆದ ನೈಜ ಘಟನೆಗಳನ್ನು ಆಧರಿಸಿ ಸಂಗ್ಯಾ-ಬಾಳ್ಯಾ ಎಂಬ ಕಥನ ಕಾವ್ಯವು ಮಹತ್ವದಾಗಿದೆ. ಮುಂದೆ ೧೯ನೇಯ ಶತಮಾನದ ಪ್ರಾರಂಭದಲ್ಲಿ ಕಾವ್ಯ ಮತ್ತು ನಾಟಕಗಳಲ್ಲಿ ವಿಪೂಲ ಸಾಹಿತ್ಯ ರಚಿಸಿರುವ ಹುಯಿಲಗೋಳ ನಾರಾಯಣಪ್ಪನವರು ಗದುಗಿನ ಹೆಮ್ಮೆಯ ಕವಿ ಇವರು ರಚಿಸಿದ ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು ಗೀತೆ (೧೯೨೪)ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಳಗಾವಿ ಕಾಂಗ್ರೇಸ್ ಅಧಿವೇಶನದ ಸ್ವಾಗತಗೀತೆಯಾಗಿ ಮುಂದೆ ನಾಡಗೀತೆಯಾಗಿ ಮೆರೆದಿದ್ದು ಇತಿಹಾಸವಿದೆ. ಅಲ್ಲದೇ ಸಾರ್ವಜನಿಕ ಶೇಷ್ಟ ಕವಿ, ವರಕವಿ ದ.ರಾ. ಬೇಂದ್ರೆಯವರ ಹುಯಿಲಗೋಳ ಶಿಷ್ಯರಾಗಿದ್ದುದು ಗಮನಾರ್ಹ ಸಂಗತಿಯಾಗಿದೆ."[೨೭] ನಾಟಕ ರಂಗದ ದಿಗ್ಗಜರಾದ ಗರುಡ ಸದಾಶಿವರಾಯರು ನಾಟಕಗಳನ್ನು ಬರೆಯುವುದಲ್ಲದೇ ಅವುಗಳನ್ನು ರಂಗದ ಮೇಲೆ ಪ್ರದರ್ಶನವನ್ನು ಮಾಡುತ್ತಿದ್ದನು ಅದೇ ರೀತಿ ಅಚ್ಚುತ ಕೃಷ್ಣ ಹುಯಿಲಗೋಳ, ಎನ್. ಕೆ. ಕುಲಕರ್ಣಿ, ಜಡಭರತ ಕೆ.ಎಂ. ಕುಲಕರ್ಣಿ, ತೋಟಪ್ಪಯ್ಯ ಶಾಸ್ತ್ರಿಗಳು, ಬೆಟಗೇರಿಯ ಸಿದ್ದಮಲ್ಲನಾರ್ಯ ಡಾ. ಪುಟ್ಟರಾಜ ಕವಿ ಗವಾಯಿಗಳು, ಎನ್.ಜಿ. ಜಾಡಗೌಡರ, ಬಸಯ್ಯಶಾಸ್ತ್ರಿ ಹಿರೇಮಠ, ನೀಲಮ್ಮ ತಾಯಿ ಅಸುಂಡಿ ಆಶು ಕವಿ ರಾಮಣ್ಣ ಬ್ಯಾಟಿ"[೨೮] ಅನೇಕ ಸಾಹಿತಿಗಳು ಈ ಪ್ರದೇಶದ ಕವಿಗಳಾಗಿ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಸಂಗೀತ : ಗದಗ ಜಿಲ್ಲೆಯು ಸಂಗೀತ ಕ್ಷೇತ್ರದಲ್ಲಿ ವಿಶಿಷ್ಟವಾದ ಕೊಡುಗೆ ನೀಡಿದೆ. ಸಂಗೀತ ದಿಗ್ಗಜರಾದ ಭಾರತರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ಭೀಮಸೇನ ಜೋಷಿ ಗದಗಿನವರು, ಅಂದರ ಬಾಳಿನ ಬೆಳಕು ನೀಡಿ ಸಂತಸದ ಅಲೆಯನ್ನು ಭಾರತದ ತುಂಬ ಪಸರಿಸುವಂತೆ ಮಾಡಿದ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು ಗದುಗಿನವರೆ.

ಸಂಗೀತ ಕ್ಷೇತ್ರದಲ್ಲಿ ಇಡೀ ಭಾರತವನ್ನು ಕರ್ನಾಟಕ ಪ್ರಾತಿನಿಧಿಕವಾಗಿ ಪ್ರತಿನಿಧಿಸುವಂತೆ ಕರ್ನಾಟಕವನ್ನು ಅಷ್ಟೇ ಮುಖ್ಯವಾಗಿ ಪ್ರತಿನಿಧಿಸುವಂತೆ ಕರ್ನಾಟಕವನ್ನು ಅಷ್ಟೇ ಮುಖ್ಯವಾಗಿ ಪ್ರತಿನಿಧಿಸ ಬಲ್ಲ ಸಾಮರ್ಥ್ಯ ಗದಗಿಗೆ ಇದೆ. ಗದುಗು ಸಂಗೀತ ಪರಂಪರೆ ಹಾಗೂ ಸಂಸ್ಕೃತಿಯಲ್ಲಿ ರಸಿಕರ ರಸಬೀಡಾಗಿದೆ.

ಗದುಗಿನಲ್ಲಿ ಸಂಗೀತ ಕಲೆಯ ಸಲುವಾಗಿಯೇ ತಮ್ಮನ್ನು ಮೀಸಲಾಗಿಟ್ಟುಕೊಂಡು ಅನೇಕ ಮನೆತನಗಳು ಪ್ರಸಿದ್ಧವಾಗಿವೆ. ಅಂತೆಯೇ ಬೆಂದ್ರೆಯವರು ಧಾರವಾಡದ ಬಗೆಗೆ ಹೇಳಿರುವ ಮಾತನ್ನೇ ಇಲ್ಲಿಯ ಜನ ಗದುಗಿಗೂ ಈ ರೀತಿ ಬದಲಾವಣೆ ಮಾಡಿ ಅನ್ವಯಿಸಿಕೊಂಡಿದ್ದಾರೆ. ಗದುಗಿನ ಯಾವುದೇ ಮೂಲೆಯಲ್ಲಿ ನಿಂತು ಕಲ್ಲು ಬೀಸಿದರೆ ಅದು ಒಬ್ಬ ಕಲಾವಿದನ ಮನೆಗೆ ಬಿಳುತ್ತದೆ. ಎಂಬ ಮಾತು ಗದುಗಿನ ಒಂದಿಲ್ಲಾ ಒಂದು ಮನೆಯಲ್ಲಿ ಒಬ್ಬರು ಅಥವಾ ಇಬ್ಬರು ಯಾವುದೇ ಕಲಾಸಕ್ತಿಯಲ್ಲಿ ತೊಡಗಿರುವವರ ಸಂಖ್ಯೆ ನಮಗೆ ಹೇರಳವಾಗಿ ದೊರೆಯುತ್ತವೆ. ಸಂಗೀತದ ಬಗೆಗೆ

೨೭. ಶ್ರೀ ಪಿ.ಬಿ. ಬಂಡ್ಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾ ಮಂದಿರದ ಕೂಡುಗೆ ಪು.ಸಂ ೨೪

೨೮. ಶ್ರೀ ಪಿ.ಬಿ. ಬಂಡ್ಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾ ಮಂದಿರದ ಕೂಡುಗೆ ಪು.ಸಂ ೨೪

ಹೇಳುವಂತಹ ಮನೆತನಗಳನ್ನು ಇಲ್ಲಿ ಈ ಕೆಳಗಿನಂತೆ ಉದಾಹರಿಸಬಹುದಾಗಿದೆ. ಜೋಶಿಯವರು ಮನೆತನ ಕಬಾಡಿ, ಹುಯಿಲಗೋಳ, ನಾಕೋಡ, ಪುರಂದರೆ, ಮಾಳೆಕೊಪ್ಪಮಠ, ಇನಾಮದಾರ, ಹಿರೇಮಠ, ಗುಡಿಹಾಳ, ಮರಗೋಡ, ಹಾನಗಲ್ಲ, ಗರೂಡ, ಚಾಫೇಕರ, ಮೊರಬದ, ಗಡೆದಗೌಡರ” ಮುಂತಾದ ಅನೇಕ ಸಂಗೀತಗಾರರು ತಮ್ಮ ಅನುಪಮ ಸೇವೆ ಸಲ್ಲಿಸಿದ್ದಾರೆ.

ಸಂಗೀತ ಕುರಿತು ಅನೇಕ ಸಂಸ್ಥೆಗಳು ತಮ್ಮದೇಯಾದ ಅಳಿಲು ಸೇವೆ ಮಾಡುವುದರ ಜೊತೆಗೆ ಸಂಗೀತ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆ ನೀಡಿವೆ. ವಿರೇಶ್ವರ ಪುಣ್ಯಾಶ್ರಮ ವಿಜಯ ಕಲಾಮಂದಿರ, ವಿಜಯ ನಾಟ್ಯಸಂಘ, ಹಿಂದುಸ್ಥಾನಿ ಸಂಗೀತ ಕಲಾವಿದರ ಸಂಘ, ಸುಗಮ ಸಂಗೀತ, ಕೀರ್ತನಕಾರರ ಸಂಘ, ನಾಟಕಗಳ ಸಂಘ, ಪ್ರವಚನಕಾರರ ಸಂಘ, ತೋಂಟದಾರ್ಯ ಮಠ, ಅಡವೀಂದ್ರಸ್ವಾಮಿ ಮಠ, ಹಾಲಕೇರಿ ಮಠ, ಇನ್ನೂ ಅನೇಕ ಮಠಗಳಲ್ಲಿಯೂ ಆಶ್ರಮಗಳಲ್ಲಿಯೂ ಅನೇಕ ಸಂಗೀತ ಕಲಾವಿದರನ್ನು ಗುರುತಿಸಬಹುದಾಗಿದೆ. ಶೋಭಾ ಹುಯಿಲಗೋಳ ಒಳ್ಳೆಯ ಸಂಗೀತಗಾರರು. ಗವಾಯಿಗಳ ಸಂಗೀತ ಪರಂಪರೆ, ಪ್ರಪಂಚವು ನಾದಮಯವಾಗಲೂ ಸಂಗೀತವೇ ಕಾರಣ ಸಂಗೀತಕ್ಕೆ ಅಗಾಧ ಶಕ್ತಿಯಿದೆ. ಅಂತಹ ಅಗಾಧಶಕ್ತಿ ಯುಳ್ಳವರು ಗದುಗಿನ ಗವಾಯಿಗಳ ಸಂಗೀತಕ್ಕೆ ಅಂಗವಿಕಲತೆ ಹಾಗೂ ದೃಷ್ಟಿಹೀನತೆ ಅಡ್ಡಿಯಾಗದು ಎಂಬ ಸಂದೇಶವನ್ನು ಸಂಗೀತದಿಂದ ಸಾರಿದ್ದಾರೆ ಗಾನಯೋಗಿ ಗುರುಗಳಾದ ಪಂಚಾಕ್ಷರಿ ಗವಾಯಿಗಳು ಸಂಗೀತವನ್ನು ಶ್ರೀಮಂತಗೊಳಿಸಿ ಅಂಗವಿಕಲತೆಗೆ ಸಂಗೀತವೆಂಬ ವಿಶೇಷಾಂಗ ನೀಡಿ ಸರಿಪಡಿಸಿದ್ದಾರೆ. ಧರ್ಮಗುರುಗಳಾಗಿ ಸಂಗೀತ ಜ್ಯೋತಿ ಬೆಳಗಿಸಿದ್ದಾರೆ. ವಿರೇಶ್ವರ ಪುಣ್ಯಾಶ್ರಮವನ್ನು ಕಟ್ಟಿದ್ದಾರೆ. ಅವರ ಶಿಷ್ಯರಾದ ಪುಟ್ಟರಾಜ ಕವಿಗವಾಯಿಗಳು ಸಂಗೀತ ಲೋಕಕ್ಕೆ ಹಾಗೂ ಗಾನಸ್ವರ್ಗಕ್ಕೆ ಹೊಸ ಆಯಾಮವನ್ನೇ ನೀಡಿದ್ದಾರೆ. ಅವರ ಗಾನ ಶೈಲಿಯಿಂದ ಲೋಕವನ್ನೇ ನಾದ ನಂದನವನ್ನಾಗಿಸಿದ್ದಾರೆ. ಅವರಿಗೆ ಪ್ರತಿಷ್ಠಿತ ಕಾಳಿದಾಸ ಸನ್ಮಾನ ಪ್ರಶಸ್ತಿಯನ್ನು ಮಧ್ಯ ಪ್ರದೇಶ ಸರಕಾರ ಕೊಡಮಾಡಿದೆ.”[೨೯] ಇದಲ್ಲದೆ. ಗದಗ ಪ್ರದೇಶದಲ್ಲಿ ಅನೇಕ ವಾದ್ಯ ಸಂಗೀತಗಾರರಿದ್ದಾರೆ. ಅವರು ರಾಜ್ಯ ರಾಷ್ಟ್ರಮಟ್ಟ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಹಾರ್ಮೋನಿಯಮದಲ್ಲಿ ವಿಠಲಸಾ ಕಬಾಡಿ ವಿರೇಶ್ವರ ಹಿರೇಮಠ, ರುದ್ರಾರಾಧ್ಯ ಶಾಸ್ತ್ರಿ, ವೈಯಲಿನ್ ಡಿ.ವ್ಹಿ. ಕಬಾಡಿ, ನಾರಾಯಣ ಹಿರೇಕೊಳಚೆ, ಸೀತಾರದಲ್ಲಿ ಆರ್. ವ್ಹಿ. ಗುಡಿಹಾಳ, ಕೃಷ್ಣ ಆರ್. ಗುಡಿಹಾಳ, ಪ್ರಾ. ಡಿ.ಎಸ್. ಕುರ್ತಕೋಟಿ, ನಿರ್ಮಲಾ ಕಟ್ಟಿ, ಶಶಿಕಲಾ ನಳಗಿ, ಡಾ। ಕೆ.ಎಸ್. ಶಿರೋಳ, ಡಾ। ಗೊಡಖಿಂಡಿ, ರಾಜೀವ ಹಿರೇಮಠ, ತಬಲಾವಾದನದಲ್ಲಿ ಖ್ಯಾತಿ ಪಡೆದ ಕಲಾವಿದರಾಗಿದ್ದಾರೆ.”[೩೦] ಹೀಗೆ ಸಂಗೀತ ಕ್ಷೇತ್ರದಲ್ಲಿಯು ಗದಗ ಜಿಲ್ಲೆಯು ಉತ್ತಮ ಪರಿಸರವನ್ನು ಹೊಂದಿದೆ.

ಧಾರ್ಮಿಕ : ಗದಗ ಜಿಲ್ಲೆಯ ಧಾರ್ಮಿಕ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ ಈ ಜಿಲ್ಲೆಯ ಸರ್ವ ಧರ್ಮಗಳ ಶಾಂತಿ ನೆಲೆಯಾಗಿದೆ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಜೈನರು ಎಲ್ಲ ಧರ್ಮದವರು ಒಗ್ಗಟ್ಟಿನಿಂದ ಬಾಳುತ್ತಿದ್ದಾರೆ. ಜಾತಿ ಧರ್ಮಗಳಿಂದ ಮಾನವೀಯ ಮೌಲ್ಯಗಳ ಶ್ರೇಷ್ಠ ಎಂಬುದನ್ನು

---

೨೯. (ಲೇ)ಅನ್ನದಾನಿ ಹಿರೇಮಠ ಲಕ್ಕುಂಡಿ ಉತ್ಸವ ೨೦೦೯ ಪು.ಸಂ ೫೫

೩೦. ರಾಜೀವ ಬಾ. ಬೆಟಗೇರಿ ಲಕ್ಕುಂಡಿ ಉತ್ಸವ ೨೦೦೮ ಪು.ಸಂ ೬೫

ತೋರಿಸಬೇಕಾಗಿದೆ. ಕಾರಣ ಸಂಸ್ಕೃತಿಯನ್ನು ಪರಂಪರಾಗತವಾಗಿ ಉಳಿಸಿಕೊಂಡು ಹೋಗಲು ಇಲ್ಲಿಯ ಮಠಮಾನ್ಯಗಳು ಶ್ರಮಿಸುತ್ತಿವೆ. ಶರಣರ ಹಾಗೂ ಬಸವ ತತ್ವಗಳನ್ನು ಕೇಂದ್ರೀಕರಿಸಿ ಈ ಮಠಗಳ ಕಾಯಕವೇ ಕೈಲಾಸವೆಂಬ ಸಂದೇಶವನ್ನು ಸಾರುತ್ತಿದೆ. ನಿತ್ಯದಾಸೋಹ ನೀಡುತ್ತಾ ಜನರ ಹಸಿವು ನೀಗಿಸಿವೆ. ಗದುಗಿನ ತೋಂಟದಾರ್ಯ ಮಠ, ವಿರೇಶ್ವರ ಪುಣ್ಯಾಶ್ರಮ, ವಿರೇಶ್ವರ ಮಠ, ವೀರೇಶ್ವರ ಕೇಂದ್ರಗಳಾಗಿವೆ. ಶಿರಹಟ್ಟಿಯ ಫಕ್ಕೀರಸ್ವಾಮಿ ಮಠ, ನಾಡಿನೆಲ್ಲೆಡೆ ಹೆಸರು ವಾಸಿಯಾಗಿದೆ. ಹಿಂದೂ ಮುಸ್ಲಿಂ ಭಾವೈಕ್ಯದ ಸಂಕೇತವಾಗಿ ರೂಪಗೊಂಡಿದೆ. ಗದುಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಶರಣ ತತ್ವ ಸಿದ್ಧಾಂತದ ಭಂಡಾರಿಯಾಗಿದ್ದಾರೆ. ಮಾಜಿ ರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ಅಬ್ದುಲ್ ಕಲಾಂರವರು ತೋಂಟದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳಿಗೆ ಕೋಮು ಸೌಹಾರ್ಧ ರಾಷ್ಟ್ರ ಪ್ರಶಸ್ತಿಯನ್ನು ಕೊಡಮಾಡಿದ್ದಾರೆ.[೩೧]

ಶ್ರೀ ತೋಂಟದಾರ್ಯಮಠ : ಶ್ರೀ ಮಠವು ಬಂದ ಭಕ್ತರಿಗೆ ಅನ್ನದಾಸೋಹ ನೀಡುವುದರ ಮೂಲಕ ಜನರಿಗೆ ಪುಣ್ಯದ ಕೆಲಸ ಮಾಡುತ್ತದೆ. ಶ್ರೀ ಮಠದ ಪೀಠಾಧಿಕಾರಿಗಳಾದ ಡಾ। ಸಿದ್ದಲಿಂಗ ಮಹಾಸ್ವಾಮಿಗಳು ಈ ಪರಂಪರೆಯನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಎಡೆಯೂರಲ್ಲಿ ತೋಂಟದ ಸಿದ್ದಲಿಂಗ ಶಿವಯೋಗಿಗಳು ಅಲಂಕರಿಸಿದ್ದು, ಶೂನ್ಯ ಸಿಂಹಾಸನವನ್ನು ಗದುಗಿನಲ್ಲಿ ಡಾ। ತೊಂಟದ ಸಿದ್ದಲಿಂಗ ಮಹಾಸ್ವಾಮಿಗಳು ಅಲಂಕರಿಸಿ ೩೫ ವರ್ಷಗಳು ಗತಿಸಿವೆ. ಶ್ರೀ ಸಾಮಾನ್ಯರ, ಅಸಾಮಾನ್ಯ, ಜನಸಾಮಾನ್ಯರಲ್ಲಿರುವಂತ ಶಕ್ತಿಯನ್ನು ಜಾಗರಣ ಮಾಡಲು ಪ್ರತಿ ಸೋಮವಾರಕ್ಕೊಮ್ಮೆ ವಿಶಿಷ್ಟ ರೀತಿಯಲ್ಲಿ ಶಿವಾನುಭವ ನಡೆಸುತ್ತಿದ್ದಾರೆ. ಜನರೇ ದೇವರೆಂದು ಭಾವಿಸಿ ಪಲ್ಲಕ್ಕಿಯನ್ನು ತ್ಯಜಿಸಿ ಸಿಂಹಾಸನ ಬಿಟ್ಟು ಕಿರೀಟ ನಿರಾಕರಿಸಿ, ಕೋಮು ಸೌಹಾರ್ಧತೆಯ ಹರಿಕಾರರಾಗಿ, ಜನರ ಮಧ್ಯ ನಡೆದು ಬಂದು ಜನ ಸಾಮಾನ್ಯರ ಮಹಾಸ್ವಾಮಿ ಎಂದೇ ಜನಪ್ರೀಯರಾಗಿದ್ದಾರೆ."[೩೨] ಅನೇಕ ಧಾರ್ಮಿಕ ಕೆಲಸಗಳನ್ನು ಮಾಡುತ್ತಿದ್ದಾರೆ. ಜೊತೆಗೆ ಉತ್ತಮ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ.

ವೀರೇಶ್ವರ ಪುಣ್ಯಾಶ್ರಮ : ಗದಗ ನಗರದ ವಿರೇಶ್ವರ ಪುಣ್ಯಾಶ್ರಮವು ನಾಡಿಗೆ ಮಾದರಿ 'ಅಂದರ ಬಾಳಿನ ನಂದಾ ದೀಪ' ಪುಣ್ಯಾಶ್ರಮ ಪಂ. ಪಂಚಾಕ್ಷರಿ ಗವಾಯಿಗಳವರ ಗಾನ ಯಜ್ಞಭೂಮಿ. ಕಂಚಿನ ಕಂಠದ ಅಮರ ಗಾಯಕರಾಗಿದ್ದರು. he is emperor in the kingdom of music world ಸಂಗೀತ ಸಾಮಾಜ್ಯದ ಚಕ್ರವರ್ತಿಯಾಗಿ ಕಂಡವರು ಪಂ. ಪಂಚಾಕ್ಷರಿ ಗವಾಯಿಗಳು ಡಾ। ಪುಟ್ಟರಾಜ ಕವಿ ಗವಾಯಿಗಳನ್ನು ಶಿಷ್ಯರನ್ನಾಗಿ ಪಡೆದರು.[೩೩] ಡಾ। ಪುಟ್ಟರಾಜರು ಅಂಧರಾಗಿದ್ದರು. ಸಾವಿರಾರು ಅಂದ ವಿದ್ಯಾರ್ಥಿಗಳನ್ನು ಪುಣ್ಯಾಶ್ರಮದಲ್ಲಿಟ್ಟುಕೊಂಡು ಸಂಗೀತ ವಿದ್ಯೆ ನೀಡಿ, ಆ

---

೩೧. ಅನ್ನದಾನಿ, ಹಿರೇಮಠ ಲಕ್ಕುಂಡಿ ಉತ್ಸವ ೨೦೦೯ ಪು.ಸಂ ೫೬

೩೨. ರಾಜೀವ. ಬಾ. ಬೆಟಗೇರಿ, ಲಕ್ಕುಂಡಿ ಉತ್ಸವ ೨೦೦೮ ಪು.ಸಂ

೩೩. ಪ್ರೊ. ಸಿ.ವಿ. ಕೆರಿಮನಿ ಪು.ಸಂ ಹಾಗೂ ಇತರರು ಲೇ. ಐ. ಬಿ. ಬೆನಕೊಪ್ಪ ಬೆಳ್ಳೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೫೨

ಮಕ್ಕಳ ಬಾಳಿಗೆ ಕತ್ತಲ ಅರಿವಾಗದಂತೆ ನೋಡಿಕೊಳ್ಳುತ್ತಿದ್ದಾರೆ. ಚತುರ್ಭಾಷಾ ಪಂಡಿತರಾಗಿದ್ದುಕೊಂಡು, ಈ ಭಾಗದ ನಡೆದಾಡುವ ದೇವರೆಂದೆ ಭಕ್ತರ ಹೃದಯಮಂದಿರದಲ್ಲಿ ನೆಲೆಯಾಗಿದ್ದಾರೆ. ಅಂತೆಯೇ ಇತ್ತೀಚಿಗೆ ಡಾ. ಪುಟ್ಟರಾಜರಿಗೆ "ಪದ್ಮಭೂಷಣ" ಪ್ರಶಸ್ತಿ ನೀಡಿ ಆ ಪ್ರಶಸ್ತಿಯ ಗೌರವವನ್ನು ಸರಕಾರ ಹೆಚ್ಚಿಸಿಕೊಂಡಿದೆ"[೩೪] ಎಂದರೆ ತಪ್ಪಾಗಲಾರದು.

ಶಿವಾನಂದ ಮಠ : ಶಿವಾನಂದ ಮಠವು ಧಾರ್ಮಿಕ ಕೆಲಸಗಳನ್ನು ಮಾಡುತ್ತಾ ಜನರಿಗೆ ಉತ್ತಮ ಭೋದನೆಯನ್ನು ಮಾಡುತ್ತಿದೆ. ಅನೇಕ ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದೆ. ಸಾವಿರಾರು ಭಕ್ತರಿಗೆ ಶಾಸ್ತ್ರಾಧ್ಯಯನವನ್ನು ಮಾಡಿಸುತ್ತಿದೆ. ಲಕ್ಷ ದೀಪೋತ್ಸವ ಮಾಡಿದ ಹೆಗ್ಗಳಿಕೆ ಶ್ರೀ ಮಠಕ್ಕಿದೆ. ಶಿವಾನುಭವದ ಮೂಲಕ ಶಾಸ್ತ್ರ ಹೇಳುವುದರ ಮೂಲಕ ಭಕ್ತರ ಮನದಲ್ಲಿ ಭಕ್ತಿಯ ಭಾವನೆಯನ್ನು ಹೆಚ್ಚಿಸುತ್ತಲಿದೆ.

ಚಿಕ್ಕೇನಕೊಪ್ಪದ ಚನ್ನವೀರ ಶರಣರ ಮಠ : ಈ ಮಠವು ಗ್ರಾಮೀಣ ಪ್ರದೇಶದಲ್ಲಿದ್ದು, ಗ್ರಾಮೀಣ ಜನರಲ್ಲಿ ಧಾರ್ಮಿಕತೆಯನ್ನು ಬೆಳೆಸುತ್ತಿದೆ. ನಡೆದಾಡುವ ದೇವರೆಂದೆ ಪ್ರಸಿದ್ಧಿ ಹೊಂದಿದ ಚಿಕ್ಕೇನಕೊಪ್ಪದ ಚನ್ನವೀರ ಶರಣರು ಲೀಲಾ ಪುರುಷರು ಅವರು ನಡೆದ ನೆಲವೇ ಸರ್ವ ಕ್ಷೇತ್ರವಾಗಿತ್ತು. ನೊಂದ ಭಕ್ತರಿಗೆ ದಾರಿತೋರಿದ ಶರಣರು ಜನಮನದಲ್ಲಿ ಇಂದಿಗೂ ಅವರಾಗಿದ್ದಾರೆ. ಇಂದಿನ ಶರಣರು ಅದೇ ಪರಂಪರೆಯಲ್ಲಿ ಸಾಗಿದ್ದಾರೆ."[೩೫]

ಹೊಸಳ್ಳಿಯ ಬೂದಿಶ್ವರ ಮಠ : ಗದಗ ಪ್ರದೇಶದ ಹೊಸಳ್ಳಿಯ ಗ್ರಾಮದ ಶ್ರೀ ಬೂದೀಶ್ವರ ಮಠವು ೭೭೫ ವರ್ಷ ಬಾಳಿದ ಹೊಸಳ್ಳಿಯ ಬೂದಿ ಸ್ವಾಮಿಗಳು ಇಂದಿಗೂ ಭಕ್ತರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ. ಈಗಿನ ಅಭಿನವ ಬೂದೀಶ್ವರ ಸ್ವಾಮಿಗಳು ಪಟ್ಟಕ್ಕೆ ಬಂದ ಮೇಲೆ ಮಠ ಉನ್ನತಿಯ ಕಡೆಗೆ ಸಾಗಿದೆ. ಮಠದ ಅಭಿವೃದ್ಧಿ ವೇಗವಾಗಿ ಬೆಳೆಯುತ್ತಿದೆ. ಭಕ್ತರಿಗೆ ಬೇಕಾದುದನ್ನು ನೀಡುವ ಪರಿ ಮಾಡುವಂತಹದ್ದು, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ.

ನಂದಿವೇರಿಮಠ : ಶ್ರೀ ಮಠದ ಪರಮ ಪೂಜ್ಯ ಶಿವಕುಮಾರ ಸ್ವಾಮಿಗಳು ನಂದಿವೇರಿ ಮಠ ಇವರು ಹೊಸದಾಗಿ ನೀರಿನ ಕ್ರಾಂತಿಯನ್ನು ಮಾಡುತ್ತಿದ್ದಾರೆ. ಒಂದೊಂದು ಮರ ಒಂದೊಂದು ಆಮ್ಲಜನಕ ಕಾರ್ಖಾನೆ ಎಂದು ಲಕ್ಷ ಗಿಡಗಳನ್ನು ನೆಡುವ ಮೂಲಕ ಒಂದು ಲಕ್ಷ ಆಮ್ಲಜನಕದ ಕಾರ್ಖಾನೆಗಳನ್ನು ನಿರ್ಮಿಸಿ ಕಪ್ಪತ್ತಗುಡ್ಡದಲ್ಲಿ ಕ್ರಾಂತಿಯನ್ನು ಮಾಡಿದ್ದಾರೆ"[೩೬]

ಶ್ರೀ ನೀಲಕಂಠೇಶ್ವರ ಮಠ : ಈ ಮಠವು ಬೆಟಗೇರಿ ಭಾಗದಲ್ಲಿದ್ದುಕೊಂಡು ಅನೇಕ ಧಾರ್ಮಿಕ ಕೆಲಸಗಳನ್ನು ಮಾಡುತ್ತಿದೆ. ಶ್ರೀ ಶ್ರೀ ಶ್ರೀ ಮುಮ್ಮಡಿ ಸ್ವಾಮಿಗಳು ಜೋತಿಷ್ಯ ಶಾಸ್ತ್ರದಲ್ಲಿ ಎಮ್. ಎ. ವಿದ್ವಾನ್ ಮಾಡಿದ್ದಾರೆ. ಕುರುಹಿನ ಶೆಟ್ಟಿ ಸಮಾಜದ ಜನರ ಆರಾದ್ಯ ಮಠವಾಗಿದೆ. ಹಾಗೂ ಬೆಟಗೇರಿ ಜನರಿಗೆ ಧಾರ್ಮಿಕತೆಯನ್ನು ಹೆಚ್ಚಿಸುತ್ತಿದೆ.

---

೩೪. ಪ್ರೊ. ಸಿ.ವಿ. ಕೆರಿಮನಿ ಪ್ರಸಂ ಹಾಗೂ ಇತರರು ಲೇ. ಐ. ಬಿ. ಬೆನಕೊಪ್ಪ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೫೨

೩೫. ಪ್ರೊ. ಸಿ.ವಿ. ಕೆರಿಮನಿ ಪ್ರಸಂ ಹಾಗೂ ಇತರರು ಲೇ. ಐ. ಬಿ. ಬೆನಕೊಪ್ಪ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೫೨

೩೬. ಪ್ರೊ. ಸಿ.ವಿ. ಕೆರಿಮನಿ ಪ್ರಸಂ ಹಾಗೂ ಇತರರು ಲೇ. ಐ. ಬಿ. ಬೆನಕೊಪ್ಪ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೧೫೩

ಫಕ್ಕೀರಸ್ವಾಮಿಗಳ ಮಠ : ಗದಗ ಜಿಲ್ಲೆಯ ಶಿರಹಟ್ಟಿಯಲ್ಲಿ ಇರುವ ಶ್ರೀಮಠವು ಹಿಂದು ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ಮಠವಾಗಿದೆ. ಮುಸ್ಲಿಂ ಧರ್ಮಕ್ಕೆ ಸೇರಿದ ಈ ಮಠಕ್ಕೆ ಹಿಂದೂಗಳು ಸಹ ನಡೆದುಕೊಳ್ಳುತ್ತಾರೆ. ಎಲ್ಲ ಜನರಿಗೆ ಬಾ ಎಂದು ಕರೆಯುವ ಫಕ್ಕೀರಸ್ವಾಮಿಗಳ ಮಠ ನಿಜವಾಗಿ ಭಾವೈಕ್ಯತೆಯ ಮಠವಾಗಿ ಗದಗ ಜಿಲ್ಲೆಯಲ್ಲಿ ಬೆಳೆಯುತ್ತಿದೆ. ಶ್ರೀಮಠದಿಂದ ಅನೇಕ ಶಿಕ್ಷಣ ಸಂಸ್ಥೆಗಳು ಸಹ ನಡೆಯುತ್ತಿವೆ. ಹಿಂದೂ ಮುಸ್ಲಿಂ ಎಲ್ಲರೂ ಒಂದು ಎಂಬ ಭಾವನೆಯಿಂದ ಈ ಮಠ ಧಾರ್ಮಿಕ ಕೆಲಸಗಳನ್ನು ಮಾಡುತ್ತಿದೆ. ಇವುಗಳಲ್ಲದೆ ನರಸಾಪೂರದ ವಿರೇಶ್ವರ ಮಠ ನೀಲಗುಂದ ಗುದ್ನೇಶ್ವರಮಠ, ವೆಂಕಟಾಪೂರ ಹೊಂಬಳ ಮಠ, ಮುಂಡರಗಿಯ ಅನ್ನದಾನೇಶ್ವರ ಮಠ ಅಡವೀಂದ್ರ ಸ್ವಾಮಿಗಳ ಮಠ ಹಡಗಲಿ ಮಠ ಪ್ರಭುದೇವರ ಮಠ, ಸಚ್ಚಿದಾನಂದ ಮಠ, ರಂಗಪ್ಪಜ್ಜನ ಮಠ, ಜುಮ್ಮಾ ಮಸೀದಿ ಲಕ್ಷ್ಮೇಶ್ವರದ ದೂದ ಪೀರಾ, ಶ್ರೀ ಸಾಯಿಬಾಬಾ ದೇವಾಲಯ ರಾಮಕೃಷ್ಣಾಶ್ರಮ ಮುಂತಾದ ಮಠಗಳ ಆದ್ಯಾತ್ಮಿಕ ಭಾವನೆಗಳನ್ನು ಜನಮನದಲ್ಲಿ ಬಿಂಬಿಸುತ್ತಿದೆ. ಅಲ್ಲದೇ ಮಹಿಳೆಯರಿಗಾಗಿಯೇ ಆಧ್ಯಾತ್ಮಿಕ ವಿಚಾರ ಧಾರೆಯನ್ನು ಹೇಳಲು ಶಿವಶರಣೆ ನೀಲಮ್ಮ ತಾಯಿ ಅಸುಂಡಿ ಈ ಮಠವು ಆಧ್ಯಾತ್ಮಿಕ ವಿದ್ಯಾಶ್ರಮವಾಗಿ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ನೀಡುತ್ತಿವೆ.

ಹೀಗೆ ಧಾರ್ಮಿಕ ಸಂಸ್ಕೃತಿಯಿಂದ ಉತ್ತಮ ಪರಿಸರವನ್ನು ಹೊಂದಿದ ಪ್ರದೇಶವಾಗಿದೆ. ಧಾರ್ಮಿಕ ಕ್ಷೇತ್ರಗಳಲ್ಲಿ ತನ್ನದೇ ಆದ ಅಪೂರ್ವ ಕೊಡುಗೆಯನ್ನು ಗದಗ ಜಿಲ್ಲೆ ನೀಡಿದೆ.

ಕ್ರೀಡೆ : ಕ್ರೀಡೆಯು ಕೇವಲ ದೈಹಿಕ ಚಟುವಟಿಕೆಯಲ್ಲಿ ಮನರಂಜನೆಯ ಮಾಧ್ಯಮ ವಷ್ಟೆ ಅಲ್ಲ. ಒಂದು ಜನಾಂಗದ, ಸಮಾಜ, ದೇಶ, ಸಂಸ್ಕೃತಿ ಮಾನವನ ಮೂಲವನ್ನೇ ಪ್ರತಿನಿಧಿಸುವ ಚಟುವಟಿಕೆ ಸಂಸ್ಕೃತಿ ಹಾಗೂ ನಾಗರಿಕತೆಯ ಅಭಿವೃದ್ಧಿಯಲ್ಲೂ ಕ್ರೀಡೆ ತನ್ನ ಪಾತ್ರವನ್ನು ಸ್ಪಷ್ಟಪಡಿಸಿದೆ. ಮಕ್ಕಳಿರ ಆಟವಾಡುವದನ್ನು ನೋಡಿದರೆ, ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಇದು ಕಾರಣ ಎಂಬುದನ್ನು ಗುರುತಿಸಬಹುದಾಗಿದೆ.

ಗದಗ ಜಿಲ್ಲೆಯ, ಕ್ರೀಡಾ ಸಂಸ್ಕೃತಿಯಿಂದ ಮೆರೆದಿದೆ. ರಾಜ ಮಹಾರಾಜರ ಕಾಲದಿಂದಲೂ ಕ್ರೀಡಾ ಇತಿಹಾಸ ಹೊಂದಿದೆ. ಇಂದಿಗೂ ಸಹ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡುತ್ತಿರುವದು ಅಭಿಮಾನದ ಸಂಗತಿ ಅಂಥ ಕ್ರೀಡಾ ಸ್ಪೂರ್ತಿಯಿಂದ ಸಾಧನೆಗಳನ್ನು ಮಾಡಿದವರ ಕುರಿತು ಸಾಧ್ಯವಾದಷ್ಟು ದಾಖಲಿಸುವ ಪ್ರಯತ್ನ ಮಾಡಿದ್ದೇನೆ. ಗದಗ ಹಿಂದೆ ಹಾಕಿ ಆಟದ ಉಚ್ಛಾಯ ಸ್ಥಿತಿಯಲ್ಲಿತ್ತು. ಮುಳಗುಂದ ಕಬಡ್ಡಿಗೆ ಹೆಸರುಮಾಡಿದೆ. ಜಿಲ್ಲೆಯ ಎರಡನೆಯ ದೊಡ್ಡನಗರವಾದ ಲಕ್ಷ್ಮೇಶ್ವರ ಕ್ರೀಡಾ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದೆ.[೩೭] ಶಿಕ್ಷಣ ಸಂಸ್ಥೆಗಳು ಅದರಲ್ಲೂ ಜಿಲ್ಲೆಯ ಪದವಿ ಕಾಲೇಜುಗಳ ಪಾತ್ರ ಅಪಾರ ಎಲ್ಲ ತಾಲೂಕುಗಳಿಗೂ ಒಂದಿಲ್ಲೊಂದು ಸಾಧನೆ ಮಾಡಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ವಿಶ್ಲೇಷಿಸಲಾಗಿದೆ.

---

೩೭. ಪ್ರೊ. ಸಿ.ವಿ. ಕೇರಿಮನಿ ಪ್ರ. ಸಂ. ಹಾಗೂ ಇತರರು ಲೇ. ಪ್ರೊ. ಎನ್.ಎಸ್.ಪಾಟೀಲ ಬೆಳ್ಳೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೭೬

ಹಾಕಿ : ಗದಗ ಹಾಕಿ ಆಟಕ್ಕೆ ಖ್ಯಾತಿಪಡೆದಿದೆ. ಕಳೆದ ೫೦:೬೦ ದಶಕದಲ್ಲಿ ಹಾಕಿಯ ಸುವರ್ಣಯುಗ. ಗದಗ-ಬೆಟಗೇರಿಯ ಸ್ಪೋರ್ಟ್ಸ್ ಕ್ಲಬ್‌ನವರು ಅಖಿಲ ಭಾರತ ಹಾಕಿ ಪಂದ್ಯಾವಳಿಯನ್ನು ಸಂಘಟಿಸುತ್ತಲಿದ್ದದು. ೧೯೫೭ರಲ್ಲಿ ಪಂಜಾಬದ ಶ್ರೇಷ್ಠ ಆಟಗಾರ ಬಲಜೀತಸಿಂಗ್, ಓಲಂಪಿಕ್ ಆಟಗಾರ ವದ್ಧಾಮಸಿಂಗ್, ಲಕ್ಷ್ಮಣಪ್ರತಿಪಾಲ ಸಿಂಗರಥ ಖ್ಯಾತನಾದವರು ಗದುಗಿನ ಪಂದ್ಯಾವಳಿ ಭಾಗವಹಿಸಿದ್ದು ಖ್ಯಾತಿಗೆ ಸಾಕ್ಷಿಯಾಗಿದೆ[೩೮].

ಹಾಕಿಯ ಪ್ರಮುಖ ಆಟಗಾರರಾದ ಚೆನ್ನುಭಾಟ್, ರಾಚಯ್ಯ ಸಿದ್ಲಿಂಗ್, ಖಟವಟೆ, ಮುಂತಾದವರು ಶ್ರೀಲಂಕಾ ಟೂರ್ನಿಯಲ್ಲಿ ಆಡಿದರು. ಚೆನ್ನುಭಾಟ ಖ್ಯಾತರಾಗಿದ್ದು ಅಖಿಲ ಭಾರತ ರೇಲ್ವೆ ತಂಡದಲ್ಲಿ ಸುಮಾರು ಎರಡು ವರ್ಷ ಆಡಿದರು.

೧೯೭೫ರಲ್ಲಿ ಶ್ರೀಹನುಮಾನ್ ಬ್ಲೆಸಿಂಗ್ ಸ್ಪೋರ್ಟ್ಸ್ ಕ್ಲಬ್ ಸ್ಥಾಪನೆಗಾಗಿ ಸೆಟ್ಲಮೆಂಟದ ಅನೇಕ ಕ್ರೀಡಾಪಟುಗಳ ತಯಾರಾದರು.

ರಾಜುಬಾಗಡೆ ಇವರು ಅಂತರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದರೆ, ಮಹೇಶ ಬಾಗಡೆ, ಶೀವು ನೀರಲಗಟ್ಟಿ, ಪರುಶುರಾಮ ಶಡಾದ, ಹನುಮಂತ ಕಟ್ಟಿಮನಿ ಮುಂತಾದವರು ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ್ದಾರೆ.

ಕ್ರಿಕೆಟ್ : ಗದಗ ಕ್ರೀಡಾಕೋಟದಲ್ಲಿಯು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿದೆ. ವೃತ್ತಿಯಿಂದ ಪ್ರಾಧ್ಯಾಪಕರಾಗಿದ್ದು, ಪ್ರವೃತ್ತಿಯಿಂದ ಕ್ರಿಕೆಟ್ ಪೊಷಕರಾದ ಪ್ರೋ. ಮುನ್ನಾ ಗುಳೇದಗುಡ್ಡ. ಅವರ ಕೊಡುಗೆ ಅಪಾರ, ಖ್ಯಾತ ಕ್ರಿಕೆಟ್ ಆಟಗಾರ ಸುನೀಲ ಜೋಶಿರವರು ಕೊಡುಗೆ, ಅಪಾರವಾದುದು. ಶ್ರೀ ಮುನ್ನಾ ಅವರು ಹೆಚ್ಚಿನ ಸಮಯವನ್ನು ಇದಕ್ಕಾಗಿಯೇ ಮೀಸಲಿಸಿದ್ದಿದ್ದಾರೆ. ಸ್ಪೋರ್ಟ್ಸ್ ಅಕಾಡೆಮಿ ಆಫ್ ಗದಗ ಎಂಬ ಸಂಸ್ಥೆಯನ್ನು ಹುಟ್ಟುಹಾಕಿದ್ದಾರೆ.

ರಾಷ್ಟ್ರೀಯ ಶಾಲಾ ಪಂದ್ಯಾವಳಿಗಳಲ್ಲಿ ಇವರ ಅನೇಕ ಶಿಷ್ಯಂದಿರಾದ ಮಹಾಂತೇಶ ರಾವನಕೊಪ್ಪ, ವಿಜಯ ಕಲ್ಯಾಣಿ, ಸುಭಾಸ ಅಂಗಡಿ, ನಂದೀಶ ಗಿಡ್ಡಿ ದೇಸಾಯಿ ಮುಂತಾದವರು ರಾಜ್ಯಮಟ್ಟದಲ್ಲಿ ವಿನಯ ಬಾರಕೇರ, ಮೊಯಿನುದ್ದೀನ, ಅನಿರುದ್ಧ ಜ್ಯೋಶಿ ಮುಂತಾದವರು ಕ್ರಿಕೆಟ್ ಆಟಗಳಲ್ಲಿ ಆಡಿ ತಮ್ಮ ಪ್ರತಿಭೆಯಿಂದ ಮೆರೆದಿದ್ದಾರೆ[೩೯].

ಕಬಡ್ಡಿ : ಗದಗ ಜಿಲ್ಲೆಯಲ್ಲಿ ಕಬಡ್ಡಿಯು ಬಹು ಜನಪ್ರೀಯವಾಗಿದೆ. ಮುಳಗುಂದದ ಕೊಡುಗೆ ಅಪಾರ ಕೃಷಿ ಕುಟುಂಬದಲ್ಲಿ ಜನಿಸಿ ಕಬಡ್ಡಿಗಾಗಿ ಜೀವತೇಯ್ದು, ಕಷ್ಟಪಟ್ಟು ತಂಡಕಟ್ಟಿ ತಮ್ಮೊರಿಗೆ ರಾಜ್ಯಕ್ಕೆ ಕೀರ್ತಿ ತರುವಲ್ಲಿನ ಕಬಡ್ಡಿಯ ಖಾತೆಯೇ ಅವರೆಲ್ಲಿ ಸೆಳೆಯಲು ಕಾರಣವಾಗಿತ್ತು.

ಇತ್ತಿಚಿಗೆ ಮುಳಗುಂದದಲ್ಲಿ ನಡೆದ ರಾಷ್ಟ್ರಮಟ್ಟದ ಕಬಡ್ಡಿ ವೈಭವದಿಂದ ನಡೆದದ್ದು. ಈ ಆಟದ ಜೀವಂತಿಕೆಗೆ ಸಾಕ್ಷಿ. ಹುಲಕೋಟಿ ಮಿಲ್ ಅನೇಕ ಖ್ಯಾತ ಕಬಡ್ಡಿ ಪಟುಗಳಿಗೆ ಆಶ್ರಯ ನೀಡಿತ್ತು

೩೮. ಪ್ರೊ. ಸಿ.ವಿ. ಕೇರಿಮನಿ ಪ್ರ. ಸಂ. ಹಾಗೂ ಇತರರು ಲೇ. ಪ್ರೂ. ಎನ್.ಎಸ್.ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೭೬

೩೯. ಪ್ರೊ. ಸಿ.ವಿ. ಕೇರಿಮನಿ ಪ್ರ. ಸಂ. ಹಾಗೂ ಇತರರು ಲೇ. ಪ್ರೂ. ಎನ್.ಎಸ್.ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೭೬

ಶ್ರೀಯುತ ಎಚ್.ಕೆ. ಪಾಟೀಲ ಹಾಗೂ ಡಿ.ಆರ್. ಪಾಟೀಲರ ಕಬಡ್ಡಿ ಪ್ರೇಮದಿಂದ ಅನೇಕ ಕಬಡ್ಡಿ ಪಂದ್ಯಾಟವನ್ನು ಆಯೋಜಿಸಿದ್ದಾರೆ. ಲಕ್ಷ್ಮೇಶ್ವರದಲ್ಲಿಯೂ ಕಬಡ್ಡಿಗೆ ವಿಶೇಷ ಪ್ರೋತ್ಸಾಹವಿತ್ತು. ಶಾಂತಣ್ಣ ಅಂಕಲಕೋಟಿಯವರಂಥ ಹಿರಿಯ ಆಟಗಾರರು ಇಂದಿಗೂ ಅದರ ವೈಭವನ್ನು ಸ್ಮರಿಸುತ್ತಾರೆ. ಅನೇಕ ಪಂದ್ಯಾವಳಿಗಳನ್ನು ಸಂಘಟಿಸಿದ್ದಾರೆ. ಚನ್ನಪ್ಪ ಶಾವಿ, ಮರಚಗಿಯವರಂಥ ಪ್ರತಿಭಾನ್ವಿತ ಮಹಿಳಾ ಆಟಗಾರರು ಇದ್ದರು![೪೦]

ಹೀಗೆ ಕಬಡ್ಡಿ ಆಟದಲ್ಲಿ ರಾಜ್ಯದಲ್ಲಿ ಹೆಸರು ಮಾಡಿ ಜಿಲ್ಲೆಯಾದ್ಯಂತ ಜನಪ್ರೀಯಗೊಂಡು ಅಮೂಲ್ಯವಾದ ಕೊಡುಗೆಯನ್ನು ನೀಡಿದೆ.

ಕುಸ್ತಿ : ಕುಸ್ತಿಯ ಹಿಂದೆ ರಾಜ ಮಹರಾಜರ ಕಾಲದಲ್ಲೂ ಹೆಸರು ಮಾಡಿದ ಪೈಲ್ವಾನರಿದ್ದಾರೆ. ಜಿಲ್ಲೆಯಾದ್ಯಂತ ಕುಸ್ತಿಯು ಪ್ರಚಲಿತವಿದೆ. ಜಾತ್ರೆಗಳಲ್ಲಿ ಕುಸ್ತಿ ಸಾಮಾನ್ಯವಾಗಿದ್ದವು. ಒಂದು ಕಾಲಕ್ಕೆ ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ಸಮೀಪದ ಅಡರಕಟ್ಟಿ ಗ್ರಾಮ ಕುಸ್ತಿ ನಡೆಸುವ ಪ್ರಸಿದ್ಧ ಕೇಂದ್ರವಾಗಿದ್ದವು ಶಿಗ್ಲಿಯ ಈರಪ್ಪ ಬಾಂಬೆ ಪೈಲ್ವಾನನಿಗೆ ಆಕಾರ ತೋರಿಸಿದ್ದು ಇಲ್ಲಿಯೇ ಲಕ್ಷ್ಮೇಶ್ವರದ ಪಾಸ್ತೆ, ಹೊಡ್ಡಿ ನೀಲಪ್ಪ, ಸಿದ್ದಪ್ಪ, ನೀರಲಗಿಯ ಕರಿವ, ಗದಗಿನ ರುದ್ರಪ್ಪ ಗುಡಿಸಾಗರ, ಮಾಬುಸಾಬ ಶಿರಹಟ್ಟಿ[೪೧]. ಮುಂತಾದ ಪೈಲ್ವಾನರು ರಾಜ್ಯಮಟ್ಟದಲ್ಲಿ ಹೆಸರು ಮಾಡಿದ್ದಾರೆ.

ಅಂತರಾಷ್ಟ್ರೀಯ ಖ್ಯಾತ ಪಟು ಆರ್.ಎಂ. ಪಾಟೀಲರಲ್ಲದೆ ಅನೇಕ ಖ್ಯಾತ ಪೈಲ್ವಾನರಾದ ಎಚ್.ಎನ್. ಅಮರಾಪೂರ, ಡಿ.ಎನ್. ಪಾಟೀಲ, ಎಂ.ಆರ್.ಹವಳದ, ಓಲೇಕಾರ, ಎನ್.ವಾಯ್. ಬೆಟಗೇರಿ ರೋಶನಖಾನ್ ಮುಂತಾದ ಕುಸ್ತಿ ಪಟುಗಳು ಈ ಜಿಲ್ಲೆಯವರಾಗಿದ್ದಾರೆ. ರಾಷ್ಟ್ರ ಅಂತರ ರಾಷ್ಟ್ರಮಟ್ಟದಲ್ಲಿ ಗದುಗಿನ ಹೆಸರು ಬೆಳಗಿಸಿದ್ದಾರೆ.

ಮಲ್ಲಕಂಬ : ಗದಗ ಪ್ರದೇಶದಲ್ಲಿ ಮಲ್ಲಕಂಬವು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ರಾಷ್ಟ್ರಮಟ್ಟದಲ್ಲಿ ಮಲ್ಲಕಂಬಕ್ಕೆ ಪುನರುಜ್ಜೀವನ ನೀಡಿದ್ದು ಲಕ್ಷ್ಮೇಶ್ವರ. ಇದು ಮಿರಜ ಸಂಸ್ಥಾನಕ್ಕೆ ವಳಪಟ್ಟಿತು. ಆಸ್ಥಾನ ಸಂಸ್ಥಾನಿಕ ಪವವರ್ಧನ ಅದರ ವ್ಯಾಯಾಮ ಜ್ಞಾನಕೋಶ ಎಂಬ ಏಳು ಬೃಹತ್ ಮರಾಠಿಕೋಶಗಳನ್ನು ಪ್ರಕಟಿಸುವಲ್ಲಿ ಮುಖ್ಯ ಪಾತ್ರವಹಿಸಿದ್ದರು.

೧೯೭೬ರಲ್ಲಿ ಪ್ರೊ. ಎನ್.ಎಸ್. ಪಾಟೀಲರು ದೈಹಿಕ ಅಧ್ಯಾಪಕರಾಗಿ ಸೇವೆಗೆ ಸೇರಿ ಮಲ್ಲಕಂಬಕ್ಕೆ ಪುನಶ್ಚೇತನ ನೀಡಿದ್ದಾರೆ. ಅವರ ಪರಿಶ್ರಮದಿಂದ ೧೯೮೧ರಲ್ಲಿ ರಾಷ್ಟ್ರೀಯ ಮಲ್ಲಕಂಬ ಪೆಡೆರೇಶನ್ ಸ್ಥಾಪನೆ ಮಾಡಿದ್ದಾರೆ. ೧೯೮೨ರಿಂದ ಇದುವರೆಗೆ ಪ್ರತಿವರ್ಷ ರಾಷ್ಟ್ರೀಯ ಮಲ್ಲಕಂಬ ಪಂದ್ಯಾವಳಿಗೆ ೩೨ ಪಟುಗಳ ರಾಜ್ಯ ತಂಡವನ್ನು ಕಳಿಸಲಾಗುತ್ತಿದೆ. ಹಾಗೂ ಕ.ವಿ.ವಿ.ಯಲ್ಲಿ ೬೦ಕ್ಕೂ ಹೆಚ್ಚು ಕ್ರೀಡಾಪಟುಗಳು ಪ್ರತಿನಿದಿಸಿದ್ದಾರೆ. ೧೯೮೬ರಲ್ಲಿ ಈ ಸಂಸ್ಥೆಯಡಿಯಲ್ಲಿ ಬಂದ ದೈಹಿಕ ಕಾಲೇಜು ಸ್ಥಾಪನೆಮಾಡಿ ರಾಜ್ಯದಾದ್ಯಂತ ಮಲ್ಲಕಂಬದಲ್ಲಿ ಪ್ರದರ್ಶನ ಮಾಡಲು ಸಹಾಯಕವಾಯಿತುವೆಂದು ಪ್ರೊ. ಎನ್.ಎಸ್. ಪಾಟೀಲರ ಅಭಿಪ್ರಾಯ.

---

೪೦. ಪ್ರೊ. ಸಿ.ವಿ. ಕೇರಿಮನಿ ಪ್ರ. ಸಂ. ಹಾಗೂ ಇತರರು ಲೇ. ಪ್ರೂ. ಎನ್.ಎಸ್.ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೭೭

೪೧. ಪ್ರೊ. ಸಿ.ವಿ. ಕೇರಿಮನಿ ಪ್ರ. ಸಂ. ಹಾಗೂ ಇತರರು ಲೇ. ಪ್ರೂ. ಎನ್.ಎಸ್.ಪಾಟೀಲ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೭೭

ಮಲ್ಲಕಂಬದಲ್ಲಿ ಹೆಸರು ಪಡೆದ ಕೆಲಪಟುಗಳೆಂದರೆ ವಿರೇಶ ಲಿಂಬಿಕಾಯಿ, ಶಿವಣ್ಣ ಶೋಕಿ, ಮುರಳಿ ಹುಬ್ಬಳ್ಳಿ, ಕೊಡ್ಲಿಕನವಳ್ಳಿ ಮುಂತಾದವರು ಮಹಿಳೆಯರ ವಿಭಾಗದಲ್ಲಿ ಚನ್ನಮ್ಮ ನಾವಿ, ಸುಮಿತ್ರಾ ಉಮಚಗಿ, ಗಾಯತ್ರಿ ಬಡಿಗೇರ, ವಿಶಂವಲಕ್ಷ್ಮಿ ಕನವಳ್ಳಿ ಕವಿತಾ ಪಾಟೀಲ ಮುಂತಾದ ಮಲ್ಲಕಂಬ ಕ್ರೀಡಾಪಟುಗಳು ಗದಗ ಜಿಲ್ಲೆಗೆ ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ.

ಗದಗ ಜಿಲ್ಲೆ ಪರಿಸರದಲ್ಲಿ ಇನ್ನೂ ಅನೇಕ ಕ್ರೀಡೆಗಳು ಇದೆ. ಅಟ್ಟಾ-ಪಟ್ಟಾ ಅಥ್ಲೆಟಿಕ್ಸದಲ್ಲಿ ರಾಷ್ಟ್ರೀಯ ಕ್ರೀಡಾಪಟುವಾಗಿ ವಿಲಾಸ ನೀಲಗುಂದ, ಇವರು ೧೦೦, ೨೦೦, ೪೦೦-ಮೀಟರ್ ಓಟದಲ್ಲಿ ಹಾಗೂ ಉದ್ದಜಿಗಿತದಲ್ಲಿ ವೀರಾಗ್ರಣಿಯಾಗಿದ್ದಾರೆ. ಅಲ್ಲದೆ ಹಿರಿಯರ ಓಲಂಪಿಕ್ಸ ಗೇಮನಲ್ಲಿ ಭಾರತವನ್ನು ಪ್ರತಿನಿಧಿಸಿ ಪ್ರಶಸ್ತಿ ಪಡೆದಿದ್ದಾರೆ. ಬಿ.ಜಿ. ನಾಗರಾಜ ಇವರು ಅಂತರರಾಷ್ಟ್ರೀಯ ಅಥ್ಲೇಟಿಕ್ಸ ಕ್ರೀಡಾಪಟವಾಗಿ ೧೦೦, ೨೦೦ ಮೀಟರುಗಳುಗಳಲ್ಲಿ ಪ್ರಶಸ್ತಿ ಪಡೆದಿದ್ದಾರೆ.[೪೨] ನೀಲಮ್ಮ ವಲ್ಲಿಗವಾಡಿ ಇವರು ಸೈಕ್ಲಿಂಗ್ ಸ್ಪರ್ಧೆಯಲ್ಲಿ ಅಂತರಾಷ್ಟ್ರೀಯ ಚಾಂಪಿಯನ್ ಶಿಫ್‌ನಲ್ಲಿ ಪ್ರಥಮಸ್ಥಾನ ಪಡೆದಿದ್ದಾಳೆ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಕಿತ್ತೂರರಾಣಿ ಚೆನ್ನಮ್ಮ ಪ್ರಶಸ್ತಿ, ಕರ್ನಾಟಕ ಏಕಲವ್ಯ ಪ್ರಶಸ್ತಿ"[೪೩]ಯನ್ನು ಪಡೆದ ಪ್ರತಿಭಾವನ್ವಿತ ಮಹಿಳೆಯಾಗಿದ್ದಾರೆ. ಇನ್ನೂ ಜಿಲ್ಲೆಯಲ್ಲಿ ಈಜು ಸ್ಪರ್ಧೆ ಚಿಣಿಪಣಿ, ಹಿಪಾರ್ ಚಕ್ರ ಮುಂತಾದ ಕ್ರೀಡೆಯಲ್ಲಿ ಗದಗ ಜಿಲ್ಲೆಯು ಅಪೂರ್ವವಾದ ಕೊಡುಗೆಗಳನ್ನು ಕ್ರೀಡಾ ಕ್ಷೇತ್ರಕ್ಕೆ ನೀಡುವ ಮೂಲಕ ಜಿಲ್ಲೆಯ ಕ್ರೀಡಾ ಸಂಸ್ಕೃತಿಯಿಂದ ಮೆರೆದಿದೆ.

ಸಹಕಾರಿ ರಂಗ : ಭಾರತವೇ ಬ್ರಿಟಿಷರ ಕಪಿಮುಷ್ಠಿಯಲ್ಲಿ ಸಿಲುಕಿಕತ್ತಲಲ್ಲಿ ಇರುವ ಸಮಯದಲ್ಲಿಂದೇ 'ಸಹಕಾರ'ದ ದಂಗೋಳಿ ಕೂಗಿದ್ದು ಗದಗ ಜಿಲ್ಲೆಯಲ್ಲಿ ಎನ್ನುವುದು ಹೆಮ್ಮೆತರುವ ವಿಷಯವಾಗಿದೆ. ಏಷ್ಯಾ ಖಂಡದಲ್ಲಿ ಮೊಟ್ಟ ಮೊದಲಿಗೆ 'ಸಹಕಾರ' ಎನ್ನುವ ಪದಕ್ಕೆ ಅರ್ಥ ಕಲ್ಪಿಸಿದ್ದು ಗದಗ ಜಿಲ್ಲೆ "ಕಣಗಿನಹಾಳ" ಎಂಬ ಪುಟ್ಟಗ್ರಾಮ ಎಂದರೆ ಪರಮಾಶ್ಚರ್ಯವಾಗುತ್ತದೆ.

ಬ್ರಿಟಿಷ ಅಧಿಕಾರ ಜೇಪ್ಸರ ಮೆಕ್ಯಾನಿಯಲ್ ಧಾರವಾಡ ಜಿಲ್ಲಾ ಕಲೆಕ್ಟರ್ ಹಾಗೂ ರಜಿಸ್ಟಾರ ಆಗಿದ್ದ ಸಂದರ್ಭದಲ್ಲಿ ಕಣಗಿನಹಾಳ ಗ್ರಾಮದ ಸಿದ್ಧನಗೌಡ, ಸಣ್ಣರಾಮನಗೌಡ, ಪಾಟೀಲರ 'ಸಹಕಾರದೊಂದಿಗೆ' ಪ್ರಪ್ರಥಮ ಕೃಷಿ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಿದರು. ೮-೫-೧೯೫೦ರಲ್ಲಿ ಪ್ರಾರಂಭವಾದ ಈ ಸಂಸ್ಥೆಗೆ ಪ್ರಥಮ ಅಧ್ಯಕ್ಷರಾಗಿ ಸಿದ್ದನಗೌಡರು ಅಧಿಕಾರ ವಹಿಸಿಕೊಂಡು ಸಹಕಾರಿ ರಂಗದ 'ಪಿತಾಮಹ' ಎನ್ನುವ ಅನ್ವರ್ಥವನ್ನು ಪಡೆದುಕೊಂಡು ಸಹಕಾರಿರಂಗದ ಸೇವೆಯನ್ನು ನೆಟ್ಟರು.

ಅಂದು ಸಿದ್ಧನಗೌಡರು ಕೇವಲ ೧೨ಜನ ಸದಸ್ಯರೊಂದಿಗೆ ಪ್ರಾರಂಭವವಾದ ಈ ಸಂಸ್ಥೆ ಸಹಕಾರರಂಗ ಇಂದು ದೇಶಾದ್ಯಂತ ೫ ಲಕ್ಷ ೫೦ ಸಾವಿರ ಸಹಕಾರ ಸಂಘಗಳನ್ನು ಹೊಂದಿದ್ದು ೨೦ ಕೋಟಿ ೪೦ ಲಕ್ಷ ಸದಸ್ಯರಿದ್ದಾರೆ. ಇನ್ನು ರಾಜ್ಯದಲ್ಲಿ ೩೩,೯೪ ಸಹಕಾರ ಸಂಘಗಳಿದ್ದು ೨ ಲಕ್ಷ ೯ ಸಾವಿರ ಸದಸ್ಯರಿದ್ದಾರೆ. ಕೋಟ್ಯಾಂತರ ಜನರ ಬಾಳಿಗೆ "ಸಹಕಾರಿಯಾಗಿ ದೇಶದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದ್ದಾರೆ"[೪೪]

---

೪೨. ಪ್ರೊ. ಎಸ್.ವ್ಹಿ. ಸಂಕನೂರರು (ಸಂ) ಯುವ ಚೇತನ ಸ್ಮರಣ ಸಂಚಿಕೆ ಪು.ಸಂ ೭

೪೩. ಎಸ್.ವ್ಹಿ. ಸಂಕನೂರ ಯುವ ಚೇತನ ಸ್ಮರಣ ಸಂಚಿಕೆ ಪುಂ.ಸಂ ೭

೪೪. ಪ್ರೊ ಸಿ.ವಿ. ಕೆರಿಮನಿ ಹಾಗೂ ಇತರರು ಲೇ. ಪ್ರೊ ಅಶೋಕ. ಡಿ. ಸೊರಪುರ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪುಂ.ಸಂ ೨೯೨

'ಹುಲಕೋಟಿಯ ಹುಲಿ' ಎಂದೆ ಪ್ರಖ್ಯಾತರಾದ ಮಾಜಿ ಸಚಿವರಾದ ಶ್ರೀ ಕೆ.ಎಚ್. ಪಾಟೀಲ ಇವರು ಸಾರ್ವಜನಿಕ ಜೀವನಕ್ಕೆ ಬರುತ್ತಿದ್ದಂತೆ ಸಹಕಾರಿ ತತ್ವವನ್ನು ಆಳವಾಗಿ ತಿಳಿದುಕೊಳ್ಳುವ ಮೂಲಕ ಜನರಿಗೆ ಸಹಕಾರಿ ಯಾಗಲೆಂದು ದಿ. ಗದಗ ಕೊ. ಆಪರೇಟಿವ್ ಕಾಟನ್ ಸೇಲ್ಸ ಸೊಸಾಯಿಟಿಯನ್ನು ಪ್ರಾರಂಭಿಸಿದರು. ಅಲ್ಲದೆ ಸಹಕಾರಿ ರೈತರ ನೂಲಿನ ಗಿರಣಿ ಎಣ್ಣಿ ಗಿರಣಿ ಬೇಳೆಕಾಳಿನ ಗಿರಣಿ ಸ್ಥಾಪಿಸಿ ಜನರಿಗೆ ಉಪಯೋಗವಾಗುವಂತೆ ಮಾಡಿದ್ದಾರೆ[೪೫].

ದಿ. ಗದಗ ಕೋ ಆಪರೇಟಿನ್ ಚಿಟ್ಸಪೈಲ್ ಮಿಲ್ಲನ ಅಧ್ಯಕ್ಷರಾಗಿ ಶ್ರೀ ಡಿ.ಆರ್. ಪಾಟೀಲರು ಸಹಕಾರಿ ನೂಲಿನ ಗಿರಣಿಗಳ ಮಹಾಮಂಡಳದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಗುಳಪ್ಪ. ಫ. ಉಪನಾಳಿರು ಕೂಡಾ ಸಹಕಾರಿ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿ ಸೋಮೇಶ್ವರ ಸಹಕಾರಿ ರೈತರ ನೂಲಿನ ಗಿರಾಣಿ ಸ್ಥಾಪನೆ ಮಾಡಿ ಹಲವಾರು ಬಡಕುಟುಂಬಗಳಿಗೆ ದಾರಿದೀಪವಾಗಿದ್ದರು.

ಗದಗ ಜಿಲ್ಲೆಯಲ್ಲಿಂದ ಸಹಕಾರಿ ಸಂಸ್ಥೆಗಳು : ಇಂದು ಗದಗ ಜಿಲ್ಲೆಯ ಗದಗ, ಮುಂಡರಗಿ, ಶಿರಹಟ್ಟಿ, ನರಗುಂದ, ರೋಣ ತಾಲೂಕನ್ನೊಳಗೊಂಡು ವಿವಿಧ ಬಗೆಯ ಸಹಕಾರಿ ಸಂಘ, ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಗದಗ ಜಿಲ್ಲೆಯಲ್ಲಿ ಪ್ರಸ್ತುತ ೨೬೦ ಸಹಕಾರಿ ಸಂಸ್ಥೆಗಳಿದ್ದು ಅವುಗಳಲ್ಲಿ ೬೪೦ ಸಹಕಾರ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು. ೩೫ ಸ್ಥಗಿತಗೊಂಡಿವೆ. ೮೫ ಸಂಸ್ಥೆಗಳು ಸಮಾಪನಗೊಂಡಿವೆ. ಹೀಗೆ ಸಹಕಾರಿ ಸಂಘ ಸಂಸ್ಥೆಗಳು ಅಂದು ಶಿದ್ಧನಗೌಡರು ಬಂದು ಸಂಘವನ್ನು ಸ್ಥಾಪಿಸಿ ಅನೇಕ ಜನರಿಗೆ ಅನೂಕೂಲವಾಗಿದ್ದಾರೆ ಇಂದು ಲಕ್ಷಾಂತರ್ ಸಂಘಗಳ ಮೂಲಕ ಕೋಟ್ಯಾಂತರ ಜನರಿಗೆ ಸಹಕಾರಿ ರಂಗದ ಸಹಕಾರಿ ರಂಗವು ದೇಶದ ಅವಿಭಾಜ್ಯ ಅಂಗವಾಗಿ ಕೆಲಸ ಮಾಡುತ್ತಿದೆ."[೪೬]

ಹೀಗೆ ಗದಗ ಜಿಲ್ಲೆಯಲ್ಲಿ ಸಹಕಾರಿರಂಗದಲ್ಲಿ ಅನುಪಸೇವೆಮಾಡುವುದರಮೂಲಕ ರಾಷ್ಟ್ರ, ಅಂತರಾಷ್ಟ್ರಮಟ್ಟದಲ್ಲಿ ಹೆಸರು ಪಡೆದಿದೆ ಎಂದು ಹೇಳಬಹುದು.

ನಾಟಕರಂಗ : ಗದಗ ಜಿಲ್ಲೆಯ ನಾಟಕರಂಗದಲ್ಲಿಯ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಈ ಕ್ಷೇತ್ರದಲ್ಲಿ ಡಾ. ಎಚ್.ಎನ್. ಹೂಗಾರವರು ಚಿರಸ್ಥಾಯಿ ಜನಪ್ರಿಯ ವೃತ್ತಿ ನಾಟಕಕಾರರು ಹಾಸ್ಯನವರು, ದಸರಾ, ದೀಪಾವಳಿ, ಹಡೆದವ್ವ ಬೂದಿ ಮುಚ್ಚಿಕೆಂಡ, ಹೂಗಾರರ ಪ್ರಮುಖ ನಾಟಕಗಳು, ಡಾ. ಫ.ಶಿ. ಬಾಂಡಗೆಯವರು ನಾಟಕದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಸ್ವಭಾವತಃ ನಾಟಕ ಕೃರ್ತ ಜೀವಂತ ದಾನ, ದೇವದರ್ಶನ, ಹೊಸ ಕಾನೂನು ಮತ್ತಿತ್ತರ ನಾಟಕಕಗಳನ್ನು ಆಡಿದ್ದಾರೆ. ದುಡಿಮೆಯಿಂದ ಫಲ ದುಡಿಮೆಯ ಸಮುದಾಯಕ್ಕೆ ದಕ್ಕೆ ಬೇಕೆಂಬ ಶ್ರವ ಸಂಸ್ಕೃತಿಯನ್ನು ಮಾರ್ಮಿಕವಾಗಿ ಬಿಂಬಿಸುತ್ತವೆ.

ಡಾ. ಆರ್.ಎನ್. ಕುಲಕರ್ಣಿಯವರು ೨೦ವರ್ಷಗಳಿಂದ ತಮ್ಮದೇ ಮಿತ್ರ ಮಂಡಳಿ ಕಟ್ಟಿಕೊಂಡು ವಾಸ್ತವಿಕ ಘಟನೆಗಳನ್ನು ಡಂಬಿಸುವ ಪ್ರಹಸನಗಳನ್ನು ಬರೆದು ಪ್ರಕಟಿಸಿದ್ದಾರೆ. ಅನೇಕ ಸಭೆ

---

೪೫. ಪ್ರೊ ಸಿ.ವಿ. ಕೆರಿಮನಿ ಹಾಗೂ ಇತರರು ಲೇ. ಪ್ರೊ ಅಶೋಕ. ಡಿ. ಸೊರಟೂರ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪುಂ.ಸಂ ೨೯೨

೪೬. ಪ್ರೊ ಸಿ.ವಿ. ಕೆರಿಮನಿ ಹಾಗೂ ಇತರರು ಲೇ. ಪ್ರೊ ಅಶೋಕ. ಡಿ. ಸೊರಟೂರ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪುಂ.ಸಂ ೨೯೪

ಸಮಾರಂಭಗಳಲ್ಲಿ ಸಾಮಾಜಿಕ, ಪೌರಾಣಿಕ, ನಾಟಕಗಳನ್ನು ಆಡಿಸಿ ಬಾನಮುಪ್ಪಣೆಯನ್ನು ಪಡೆದುಕೊಂಡಿದ್ದಾರೆ. ಶಾಂತರವಿ ಎಂದು ಹೆಸರಾಗಿದ್ದ ಸಕ್ಕರಿ ಬಾಳಾಚಾರ್ಯರು. ವೀರನಾರಾಯಣ ಕೃಪಾ ಪೋಷಿತ ನಾಟಕ ಕಂಪನಿಯನ್ನು ಆರಂಭಿಸಿದ್ದಾರು.[೪೭] ಶ್ರೀ ಪಂಚಾಕ್ಷರಿ ಗವಾಯಿಗಳು ಸ್ಥಾಪಿಸಿದ ನಾಟಕ ಮಂಡಳಿ ಇಂದಿಗೂ ಆಧ್ಯಾತ್ಮಿಪಡೆಯ ನಾಟಕಗಳಿಗೆ ಪ್ರಶಸ್ತಿ ನೀಡಿ ಸಮಾಜದ ಅಂಕುಡೊಂಕುಗಳನ್ನು ತಿದ್ದುತ್ತಿವೆ.

ಚಿತ್ರಕಲೆ : ಗದಗ ಜಿಲ್ಲೆಯ ಪ್ರಾಚೀನ ಕಾಲದಿಂದಲೇ ಚಿತ್ರಕಲೆಯು ಬೆಳೆದು ಬಂದಿದೆ. ಜಾನಪದ, ಹಸ್ತ ಪ್ರತಿ, ನವ್ಯಕಲೆ ಬೆಳೆದು ಗದಗ ಜಿಲ್ಲೆಯು ಚಿತ್ರಕಲಾ ಕ್ಷೇತ್ರಕ್ಕೆ ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ನೀಡಿದೆ. ಕ್ರಿ. ಶ. ೧೧೮೨ರಲ್ಲಿಯ ಶಾಸನವೊಂದರ ಪ್ರಕಾರ ಗದಗ ತಾಲೂಕಿನ ಕುರ್ತಕೋಟಿ ಗ್ರಾಮದ ಬೊಮ್ಮನವರ ಅಂಪ್ಯಣ ಎಂಬಾತವರ, ಇಟ್ಟಿಗೆ ಹಾಗೂ ಚಿತ್ರಕಲೆಗಳಲ್ಲಿ ಶಾಸ್ತ್ರೋಕವಾಗಿ ಕೃತಿಚನೆಯನ್ನು ಮಾಡುತ್ತಿದ್ದ, ಕಮ್ಮಾರ ವಿದ್ಯೆಯಲ್ಲಿ ವಿಶ್ವಕಾರ್ಯನಿಗಿಂತಲೂ ಮಿಗಿಲು ಎಂದೆ ನಿಡ್ಡಿದ್ದಾನೆಂದು ವರ್ಗಿಸುತ್ತದೆ. ಇಲ್ಲಿನ ತ್ರಿಕುಟೇಶ್ವರ ದೇವಾಲಯ ಸಮೂಹದಲ್ಲಿಯ ಸರಸ್ವತಿ ಗೋಡೆಯ ಮೇಲಿನ ಶಾಸನವು ಬಹಶಃ ಅಲ್ಲಿ ಸ್ಥಾನಾಚಾರ್ಯರಾಗಿದ್ದ ಕ್ರಿಯಾ ಶಕ್ತಿ ಪಂಡಿತ ದೇವರನ್ನು ಬಗ್ಗಿಸುತ್ತ ಅವರು ಅನೇಕ ಚಿತ್ರಶಾಸ್ತ್ರಾದಿ ಉಪನ್ಯಾಸಕರಾಗಿದ್ದರೆಂದು ಒಂದಾಗಿ ಹೇಳುತ್ತದೆ."

ಉತ್ತರ ಕರ್ನಾಟಕದಲ್ಲಿ ಅನೇಕ ಕಡೆ ಬಂಡೆಗಳಲ್ಲಿನ ವರ್ಣಚಿತ್ರಗಳು ರೇಖಾಚಿತ್ರಗಳು ಶೋಧವಾಗಿವೆ. ಅಂತಹ ಶಿಲಾಯುಗದಿಂದ ಪ್ರಾಗೈತಿಹಾಸಿಕ ಬಂಡೆಯಾಸರೆಯ ರೇಖಾಚಿತ್ರಗಳು ಗದಗ ತಾಲೂಕಿನ ನೀಲಗುಂದ ಗ್ರಾಮದ ಗುಡ್ಡದ ಮೇಲೆ ನೋಡಬಹುದಾಗಿದೆ. ಗದಗ ತಾಲೂಕಿನ ಚಿಂಚಲಿ ಸಮೀಪದ ಗುಡ್ಡದ ದಕ್ಷಿಣ ಭಾಗದಲ್ಲಿರುವ ಶಿಲೆಯ ಮೇಲಿನ ಛಾಯಾ ಚಂದ್ರನಾಥ ಜೈನರ ಶ್ರದ್ಧಾ ಕೇಂದ್ರವಾಗಿದೆ. ಬೆಳಗಿನ ಪ್ರಥಮ ಸೂರ್ಯ ಕಿರಣಗಳು ಈ ಶಿಲೆಯ ಮೇಲೆ ಬಿದ್ದಾಗ ತೀರ್ಥಂಕರ ರೂಪದ ಗುಲಾಬಿ ಬಣ್ಣದ ಆಕೃತಿ ಗೋಚರಿಸುತ್ತದೆ. ಇದೊಂದು ಶಿಲ್ಪಚಿತ್ರಕಲಾ ವಿಸ್ಮಯವಾಗಿದೆ ಇವೆಲ್ಲ ಪ್ರಾಚಿನತೆಯವಾದರೂ ಕೃತಿಯಾಗಿದೆ.[೪೮] ಇದಲ್ಲದೆ ಗದಗ ಜಿಲ್ಲೆಯ ಪ್ರಾಚಿನ ಇತಿಹಾಸವನ್ನು ಹೆಳುವಂತ ಅದ್ಭುತ ಕೆಲಸವನ್ನು ಶ್ರೀಮಂತವರ್ಗದ ಜನರು ದೇವಾಲಯ, ಅರಮನೆ, ಶ್ರೀಮಂತರ ಮನೆಗಳಲ್ಲಿ ರಾಜಮನೆತನದವರು, ಮಾಂಡಲಿಕರು, ಪೋಷಕರದ ಕಲಾಸಕ್ತರು ವರ್ಣಚಿತ್ರಕಾರರು. ಚಿತ್ರಬಿಡಿಸಿರುವುದು ಕಂಡು ಬರುತ್ತದೆ. ಇಂಥಹ ಚಿತ್ರಗಳಿಗೆ ನರಗುಂದದಲ್ಲಿ ಕಂಡುಬರುತ್ತದೆ.[೪೯] ನಗರಗುಂದ ಅರಮನೆಯಲ್ಲಿ ವೆಕಟೇಶ್ವರ ದೇವಾಲಯದಲ್ಲಿ ಮತ್ತು ಗುಂಡಪ್ಪ ಹಸಬಿ ಎಂಬವರ ಮನೆಯ ಮಟ್ಟಿಗೆಯಲ್ಲಿ ಚಿತ್ರಿಸಿದ ಹಲವಾರು ರೇಖಾವರ್ಣ ಚಿತ್ರಗಳ ಇವೆ ವೆಂಕಟೇಶ್ವರ ದೇವಾಲಯದಲ್ಲಿ ಎಲ್ಲ ಭಿತ್ತಿಚಿತ್ರಗಳು ನಾಶವಾಗಿದೆ. ಕೇಲವು ಭಿತ್ತಿಚಿತ್ರಗಳನ್ನು ತಿದ್ದು ಪಡಿ ಮಾಡಲಾಗಿದೆ. ಏಳಿದಿರುವ ಚಿತ್ರಗಳಲ್ಲಿ ದಶಾವತಾರ, ಚಿತ್ರಗಳು ಇವೆ. ಹೆಚ್ಚಿನ ಪ್ರದರ್ಶನದಲ್ಲಿ

---

೪೭. ಆರ್.ಎನ್.ಕುಲಕರ್ಣಿ ನಿದರ್ಶನ ೨೩-೧೦-೨೦೧೦

೪೮. ಪ್ರೊ ಸಿ.ವಿ. ಕೆರಿಮನಿ ಹಾಗೂ ಇತರರು ಲೇ. ಡಾ. ಲಕ್ಷ್ಮೀದೇವಿಗವಾಯಿ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೨೩

೪೯. ಪ್ರೊ ಸಿ.ವಿ. ಕೆರಿಮನಿ ಹಾಗೂ ಇತರರು ಲೇ. ಡಾ. ಲಕ್ಷ್ಮೀದೇವಿಗವಾಯಿ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೨೩

ಭಿತ್ತಿಚಿತ್ರಗಳು ನಾಶವಾಗಿದೆ. ನರಗುಂದ ಅರಮನೆಯ ಶಿವಾಜಿಯ ಕೈಕೆಳಗೆ ಅಧಿಕಾರಿಯಾಗಿದ್ದ ಅಪ್ಪಾಜಿಹೆಸರೋ ಎಂಬ ಮರಾಠ ಮೂಲದ ವ್ಯಕ್ತಿಯ ವಂಶಸ್ಥರು ಇಲ್ಲಿ ಆಳಿದ್ದಾರೆ. ನರಗುಂದ ಸಂಸ್ಥಾನಿಕರು ತಮ್ಮ ಆಡಳಿತ ಕಾಲದಲ್ಲಿ ಕಟ್ಟಿಸಿದ ಅರಮನೆಯಲ್ಲಿ ಭಿತ್ತಿಚಿತ್ರಗಳನ್ನು ಬರೆಸಿದ್ದು ಆ ಕಟ್ಟಡ ಇಂದಿನ ಸ್ಥಳಿಯ ಮುನ್ಸಿಪಾರ್ಟಿ ಕಛೇರಿಯಾಗಿದೆ.

ಈ ಚಿತ್ರಗಳು ಜಾನಪದ ಮೂಲದ ಅಂಶಗಳನ್ನು ಹೆಚ್ಚಾಗಿ ಹೋಲುತ್ತದೆ. ಇಲ್ಲಿ ಹೆಚ್ಚಾಗಿ ರಾಮಾಯಣ, ಮಹಾಭಾರತದ ಚಿತ್ರಪಟ ಕೃಷ್ಣನ ಸಾರಸ ಸಲ್ಲಾಪದ ಚಿತ್ರಗಳು ದೇವತೆಗಳ ಪ್ರಾಣಿ ಪಕ್ಷಿಗಳ ಚಿತ್ರಗಳ ನೋಡಲು ಸಿಗುತ್ತದೆ. ನರಗುಂದ ಗುಂಡಪ್ಪ ಹಸಬಿಯವರ ಮನೆಯಲ್ಲಿಯ ಭಿತ್ತಿಚಿತ್ರಗಳು ಎರಡಂತ್ತಿಸ ಮಹಡಿಯ ಮೇಲೆ ಕಟ್ಟಿಗೆಯ ಹಲಗೆಗಳ ಮಟ್ಟಿಗೆಯಲ್ಲಿ ಮಾತ್ರ ಕೆಲವು ಭಿತ್ತಿ ಚಿತ್ರಗಳು ಉಳಿದುಕೊಂಡಿವೆ.[೫೦]

ಗದಗ ಪ್ರದೇಶದ ಚಿತ್ರಕಲೆ ಇತಿಹಾಸವನ್ನು ನಿಡಿದರೆ ಹಬ್ಬ, ಉತ್ಸವ, ಜಾತ್ರೆ, ಮದುವೆಯಂತಹ ಸಂಭ್ರಮದ ದಿನಗಳಲ್ಲಿ ನೆಲಗೋಡೆಗಳನ್ನು ಸಾರಿಸಿ ಸುಣ್ಣ,ಬಣ್ಣ, ಹಚ್ಚಿ ಅಲಂಕರಿಸಿ ಶ್ರೀಕಾರ, ಸ್ವಸ್ತಿಕ ಸಂಕೇತಗಳನ್ನು ಇರುವುದು ಗದಗ ಜಿಲ್ಲೆಯ ಹಳ್ಳಿಗಳಲ್ಲಿ ಇಂದಿಗೂ ಕಾಣಬಹುದು. ಮಾನವಾಕೃತಿಗಳು, ಹಾವು ಚೇಳು ಸೂರ್ಯ, ಚಂದ್ರ, ವಾಲಗದವರು ಮೊದಲಾದ ಚಿತ್ರ ವಿನ್ಯಾಸಗಳು ಜಿಲ್ಲಯಾದ್ಯಂತ ಕರಡು ಬರುತ್ತದೆ. ಇದರಿಂದಾಗಿ ಕಲೆಗೆ ಹೊಂದಿಕೊಂಡಿರುವ ಹಚ್ಚೆ ಚಿತ್ರಕಲೆಯು ಈ ಭಾಗದಲ್ಲಿ ಬಳಸುತ್ತಿರುವುದು ಕಂಡು ಬರುತ್ತರದೆ. ಈ ಕಲೆಯನ್ನು ಸಂಕೇತ ಪ್ರಧಾನವಾಗಿ ಬಳಸಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಗದಗ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಹಾಸುಹೊದಿಕೆಯಾಗಿ ಬಳಸಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಗದಗ ಜಿಲ್ಲೆಯಲ್ಲಿ ಕಾಠಿಕಲಯಿಂದ ಒಂದು ಜನಪದ ಸ್ತ್ರೀಯರ ಸೌಂದರ್ಯ ಪ್ರಜ್ಞಂಪ ಅಭಿವ್ಯಕ್ತಿಯಾಗಿ ಬಹುಪಯೋಗಿ ವಸ್ತುವಾಗಿ ಕೌದಿ ಕಂಡು ಬಂದಿದೆ. ಕೌದಿಗಳಲ್ಲಿ ವೈವಿದ್ಯತೆಯನ್ನು ಬಳಸಿ ಚಿತ್ತಾರಗಳನ್ನು ಸೃಷ್ಟಿಸುತ್ತಾರೆ. ತಮ್ಮ ಭಾವನೆಗಳಿಂದ ಹೊರಹೊಮ್ಮುವ ಕಲಾತ್ಮಕ ಕಲೆ ಈ ಚಿತ್ರಗಳಲ್ಲಿ ಎದ್ದುಕಾಣುತ್ತವೆ[೫೧].

649368

ಪ್ರತಿದಿನ ಮನೆ ಅಂಗಳದಲ್ಲಿ ಬಿಡಿಸುವ ವೈವಿದ್ಯಪರ ವರ್ಣರಂಜಿತ ರಂಗೋಲಿ ಚಿತ್ರ, ನೇರೆಂದ ಮೇಲಿನ ಕಸೂತಿಯ ವಿನ್ಯಾಸ, ಲಂಬಾಣಿ ಜನಂಗದ ವಿಶಿಷ್ಟವಾದ ಕಸೂತಿಯ ವಿನ್ಯಾಸ, ಕೈ ಕಾಲು, ಮುಖ ಶರಿರದ ಮೇಲೆಲ್ಲ ಹಾಕಿಸಿಕೊಳ್ಳುವ ಹಚ್ಚೆಯ ಕೆಲೆ, ಬೆಟಗೇರಿಂದ ಕೈಮಗ್ಗದ ರೇಶ್ಮೆ, ನೂಲಿನ ಸೀರೆಗಳು ನೇಯ್ಗೆಯ ವಿಧಾನ, ನೈಸರ್ಗಿಕ ಬಣ್ಣಗಳು ಅಗಲವಾದ ರೇಶ್ಮೆಯಗೀರೆಂದ ಸೆರಗುಗಳಲ್ಲಿ ಕಂಡು ಬರುವ ವಿವಿಧ ವಿನ್ಯಾಸಗಳು ಅತ್ಯಂತ ಪ್ರಸಿಧ್ಧಿಯನ್ನು ಪಡೆದಿವೆ[೫೨].

೫೦. ಪ್ರೊ ಸಿ.ವಿ. ಕೆರಿಮನಿ ಹಾಗೂ ಇತರರು ಲೇ. ಡಾ. ಲಕ್ಷ್ಮೀದೇವಿಗವಾಯಿ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೨೪

೫೧. ಶ್ರೀ ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ಕೊಡುಗೆ ಪು.ಸಂ೨೧

೫೨. ಪ್ರೊ. ಸಿ.ವಿ. ಕೆರಿಮನಿ ಪಂ.ಸಂ ಹಾಗೂ ಇತರರು ಲೇ ಡಾ॥ ಲಕ್ಷ್ಮೀದೇವಿ ಗವಾಯಿ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೨೪

ಸಂಸ್ಕೃತಿ ಮತ್ತು ಸಾಮಾಜವನ್ನು ಕುರಿತು ಅಭ್ಯಾಸಮಾಡುವ ವಿಷಯಗಳಲ್ಲಿ ಜಾನಪದ ಅತ್ಯಂತ ಮಹತ್ತವಾದ ವಿಷಯ, ಹಿಂದೆಂದಿಗಿಂತ ಈಗ ಜಾನಪದ ಸಾಮಗ್ರಿಯನ್ನು ವಿಫುಲವಾಗಿ ಕಲೆ ಹಾಕುವ ಅಗತ್ಯವಿದೆ. ಎಷ್ಟೋ ಜಾನಪದ ಬಗೆಗಳು ಅಲಕ್ಷಿತವಾಗಿಯೇ ಬೆಳಿದಿವೆ. ಇನ್ನೆಷ್ಟು ಜಾನಪದ ಬಗೆಗಳು ಸಾಮಾಜಿಕ ಬದಲಾವಣೆಯ ಒತ್ತಡಕ್ಕೊಳಗಾಗಿ ನಶಿಸಿ ಹೋಗುತ್ತಿವೆ"[೫೩].

ಗದಗ ಜಿಲ್ಲಯ ಕಲ್ಲೂರ ಗ್ರಾಮದ ಶ್ರೀನಿಂಗಪ್ಪ ಬಂಗಾರಿಯವರು, ನಿಂಗಪ್ಪ ಕತ್ತಿ, ಸೋಮಪ್ಪ ಹೊಸಮನಿ ಯಲ್ಲಪ್ಪ ನಬಿಸಾಬ, ಸಿದ್ಧರಾಮಪ್ಪ ಬಸಪ್ಪ ಇವರು ಸೂತ್ರದ ಗೊಂಬೆ ಆಟವನ್ನು ಸುಂದರವಾಗಿ ಆಡಿಸುತ್ತಿದ್ದರು ನಾಟಕ ಚಲನಚಿತ್ರಗಳನ್ನು ಈ ಸೂತ್ರದಗೊಂಬೆಯ ಆದುದರಿಂದ ರಚಿತವಾಗಿದೆ. ಆದರೆ ೬೦ ವರ್ಷಗಳ ಹಿಂದೆ ಆಡಿಸುತ್ತಿದ ಈ ಬೊಂಬೆಗಳು ಈಗಲು ಜೀವಂತವಾಗಿವೆ ಆ ಗೊಂಬೆ ಆಟ ಆಡಿಸದೆ ಇರುವದರಿಂದ ಅವು ನಸಿಸಿ ಹೋಗುವ ಅಂಚಿನಲ್ಲಿವೆ. ಬಿಂಕದಕಟ್ಟಿಯ ಶ್ರೀ ವಿರಪಾಕ್ಷಪ್ಪ ಕ್ಷತ್ರಿಯವರು ತೋಗುಗೊಂಬೆ ಆಟ ಆಡಿಸುತ್ತ ಗದಗ ಜಿಲ್ಲೆಯ ಜಾನಪದ ಸಂಸ್ಕೃತಿಯನ್ನು ಉಳಿಸುವುದರಲ್ಲಿ ಒಬ್ಬರಾಗಿದ್ದಾರೆ. ರಾಮಾಯಣ ಮಹಾಭಾರತದ ಕಥೆಗಳನ್ನು ಹೆಳುವುದರ ಮೂಲಕ ಸಮಾಜದ ಅಕ್ಕುಡೊಕ್ಕು ತಿದ್ದುವ ಕೆಲಸಮಾಡುತ್ತಿದ್ದಾರೆ. ಆದರೆ ಇಂದಿನ ತಾಂತ್ರಿಕ ದಿನಮಾನಗಳಲ್ಲಿ ಅವುಗಳಕಡೆ ಹೆಚ್ಚಿನ ಪ್ರೋತ್ಸಾಹ ದೊರಕುತಿಲ್ಲ. ಆದರೆ ಅವು ಗದಗ ಜಿಲ್ಲೆಯ ಜಾನಪದ ಸಂಸ್ಕೃತಿಯನ್ನು ಎತ್ತಿತೋರಿಸವುಗಳಾಗಿವೆ.

ರಾಜ್ಯದಲ್ಲಿಯೇ ಗದಗ ಜಿಲ್ಲೆಯು ಚಿತ್ರಕಲೆಗೆ ತನ್ನದೆ ಆದ ಹೆಸರು ಪಡೆದುಕೊಂಡಿದೆ. ಭಾರತಕ್ಕೆ ಸ್ವಾತಂತ್ರ್ಯ ದೂರೆತ ವರ್ಷನೇ ಶ್ರೀ ಟಿ.ಪಿ ಅಕ್ಕಿಯವರ ವಿಜಯ ಕಲಾಮಂದಿರವನ್ನು ಸ್ಥಾಪಿಸಿದ್ಧರಿಂದ ಗದಗು ರಾಜ್ಯದ ನಾನಾಭಾಗಗಳಲ್ಲಿ ಇಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ರಾಜ್ಯರಾಷ್ಟ್ರಮಟ್ಟದಲ್ಲಿ ಬೆಳೆದಿದ್ದಾರೆ. ರಾಷ್ಟ್ರಮಟ್ಟದಲ್ಲಿ ದಾಖಲೀಕರಣಗೊಂಡಿದೆ. ಅಂದಿನಿಂದ ಇಂದಿನವರೆಗೂ ಕಲಾಶಾಲೆ ಸ್ವತಂತ್ರವಾಗಿ ಬೆಳೆಯುವುದರೊಂದಿಗೆ ಗದುಗಿನ ಹೆಸರನ್ನು ಇತಿಹಾಸದಲ್ಲಿ ದಾಖಲೀಕರಿಸಿದ ಕೀರ್ತಿ ವಿದ್ಯಾರ್ಥಿಗಳ ಪದವನ್ನು ಮೀರಿಸಿದ ಶಪೂರಾಗಿ ಬೆಳೆದು ನಾಡಿಗೆ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ"[೫೪] ನಾಡಿನ ಉದ್ದಗಲಕ್ಕೂ ಅನೇಕ ಕಲವಿದರನ್ನು ಹಾಗೂ ಅನೇಕ ಕಲಾ ಶಿಕ್ಷಕರನ್ನು ರಾಜ್ಯ ರಾಷ್ಟ್ರಮಟ್ಟದಲ್ಲಿ ಬೆಳೆಸಿದ ಕೀರ್ತಿ ವಿಜಯವರೂದುಂದಿಕ್ಕೆ ಸಲ್ಲುತ್ತಿದೆ.

ಡಾ. ಬಿ.ಕೆ. ಹಿರೇಮಠ ಡಾ. ಎಸಿ.ಸಿ.ಪಾಟೀಲ ಎಂ.ಆರ್. ಬಾಳಿಕಾಯಿ, ಡಾ. ಯಾದಪ್ಪ ಪರದೇಶಿ, ವ್ಹಿ.ಟಿ. ಕಾಳೆ, ಆಯ್. ಆಯ್. ಕಮಾನಗಾರ, ಸಿ.ವಾಯ್. ಖಾಮಾಜಿ, ಬಿ.ಜಿ.ವಾರಿ ಟಿ.ವಿ. ನಗೇಶಗುಡಿ, ಎಂ.ಜೆ. ಬಂಗ್ಲೇವಾಲೆ, ಎನ್.ಎ. ಹರ್ಲಾಪೂರ, ಜಿ.ಎನ್. ಜಾಡಗೌಡರ, ಎಂ.ಆರ್. ಬಾಗವಾನ, ಮಹದೇವ ಕವಿಶೆಟ್ಟಿ, ಎಂ.ಜೆ. ವಾಜೇದವರ, ಎ.ಎ. ಶಿರಹಟ್ಟಿ, ಕೆ.ವ್ಹಿ. ಕುಂದಗೋಳ, ಮುಂತಾದವರು ಈ ಕಲಾಶಾಲೆಯ ವಿದ್ಯಾರ್ಥಿಗಳು.

ಇದಲ್ಲದೇ ಗದಗ ಬೆಟಗೇರಿಯ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಅಖಿಲ ಭಾತರ ಕುರುಹಿನ ಶೆಟ್ಟಿ ಸಂಘ(ರಿ) ಬೆಂಗಳೂರು ಇದರ ಅಡಿಯಲ್ಲಿ ೧೯೮೦ರಲ್ಲಿ ಪ್ರಾರಂಭವಾಗಿಯಿತು.

---

೫೩. ಡಾ॥ ಎಚ್.ಜೆ.ಲಕ್ಕಪ್ಪಗೌಡ ಸಂ ಜನಪದ ಕರ್ನಾಟಕ ಪು.ಸಂ ೮೪

೫೪. ಶಾಮ್ಮ ಜಮಾದಾರ ಕಲಾವಿದ ಎನ್.ಪಾಟೀಲರ ಬಂಧಕು ಕಲಾಕೃತಿಗಳು ಪು.ಸಂ ೧೯

ಇದರ ಪ್ರಮುಖ ರುವಾರಿಗಳಾದ ಶ್ರೀ ನೀಲಕಂಠ ಮುಮ್ಮಡಿ ಸ್ವಾಮಿಗಳು, ಶ್ರೀ ಜಿ.ಎನ್. ಜಾಡಗೌಡರ, ಶ್ರೀ ಎನ್.ಎಸ್. ತುಕ್ಕಾ ಶ್ರೀ ಎಂ.ಆರ್. ಬಾಗವಾನ, ಶ್ರೀ ಎನ್.ಎ. ಹರ್ಲಾಪೂರ, ಮುಂತಾದವರ ಮಾಗದರ್ಶನದಿಂದ ಎರಡುವರೆದಶಕದವರೆಗೆ ನಡೆದುಕೊಂಡು ಕಾರಣಾಂತದಿಂದ ಗದುಗಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಂದ ವಿದ್ಯಾದಾನ ಸಮಿತಿ ಹಸ್ತಾಂತರಗೊಂಡು ಅಧ್ಯಕ್ಷರಾದ ಶ್ರೀ ಡಿ.ಬಿ. ಹುಯಿಲಗೋಳ, ಕಾರ್ಯದರ್ಶಿಗಳಾದ ಶ್ರೀನಿವಾಸ ಹುಯಿಲಗೋಳ, ಪ್ರಾಚಾರ್ಯರಾದ ಬಿ.ಎಲ್. ಚವ್ಹಾಣ ಇವರಿಂದ ಉತ್ತಮ ಕಲಾ ಚಟುವಟಿಕೆ ಮಾಡುವುದರ ಮೂಲಕ ಅನೇಕ ಉತ್ತಮ ವಿದ್ಯಾರ್ಥಿಗಳನ್ನು ಚಿತ್ರಕಲಾ ಶಿಕ್ಷಕರನ್ನು ಈನಾಡಿಗೆ ನೀಡಿದ ಕಿರ್ತಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯಕ್ಕೆ ಸಲ್ಲುತ್ತದೆ.

ಶ್ರೀ ಎಂ.ಆರ್. ಹೆಬ್ಬಳ್ಳಿ, ಸಂಗಮೇಶ, ಹರ್ಲಾಪೂರ, ವಿ.ವಾಯ್. ಸೋಮನಕಟ್ಟಿ ಎಂ.ಆರ್. ಹರ್ಲಾಪೂರ, ವ್ಹಿ.ಎಲ್. ಬೆಳಗಲಿ, ಪಿ.ಬಿ. ಬಂಡಿ ಪಿ.ಎಸ್. ಲಕ್ಕುಂಡಿ, ಶ್ರೀಕಾಂತ, ಪಾಟೀಲ, ರಾಜು ಉಮಚಗಿ ಡಿ.ಜೆ. ಈಟಿ, ಜೆ.ಕೆ. ಬಾಗವಾನ ಮುಂತಾದವರು ಈ ಶಾಲೆಯ ಉತ್ತಮ ವಿದ್ಯಾರ್ಥಿಗಳು.

ಶ್ರೀ ಮಡಿವಾಳ ಮಾಚಿದೇವ ವಿದ್ಯಾಸಂಸ್ಥೆ ರೋಣ ಇದು ೧೯೯೧-೯೨ರಲ್ಲಿ ಪ್ರಾರಂಭವಾಯಿತು. ತುಮಕುರಿನ ಬಾಬುರಾವ್ ರವರು ಕೆಲವುದಿನಗಳ ಉತ್ತಮವಾಗಿ ಈ ರವೀಂದ್ರ ಕಲಾ ಶಾಲೆಯನ್ನು ನಡೆಸಿದರು. ನಂತರ ಇದು ೨೦೦೧ರಲ್ಲಿ ಶ್ರೀ ಸಿದ್ಧರಾಮೇಶ್ವರ ವಿದ್ಯಾವರ್ಧಕ ಸಂಸ್ಥೆ ರೋಣ ಇದಕ್ಕೆ ಹಸ್ತಾಂತರಗೊಂಡು 'ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು' ಎಂಬಂತೆ ಒಳ್ಳೆಯ ಶಬ್ಧಕ್ಕೆ ಹೊಗುವ ಭರವಸೆಯನ್ನು ಮೂಡಿಸುವ ದಿಸೆಯಲ್ಲಿ ಈ ಸಂಸ್ಥೆ ಹೆಜ್ಜೆಯನ್ನು ಇರಿಸುತ್ತಿದೆ.[೫೫]"

ಹೀಗೆ ಗದಗ ಜಿಲ್ಲೆಯಲ್ಲಿ ಮೂರು ಚಿತ್ರಕಲಾ ಮಹಾವಿದ್ಯಾಲಯಗಳಿದ್ದು ಚಿತ್ರಕಲೆಯಲ್ಲಿ ತಮ್ಮದೇ ಆದ ಕಲಾ ಸೇವೆಸಲ್ಲಿಸುತ್ತ ವಿಶಿಷ್ಠವಾದ ಕೊಡುಗೆ ನೀಡಿವೆ.

ಪ್ರಾರಂಭದ ಹಂತದಲ್ಲಿ ಗದಗ ಜಿಲ್ಲೆಯ ಚಿತ್ರಕಲಾ ಕ್ಷೇತ್ರಕ್ಕೆ ವಿಶಿಷ್ಠವಾದ ಕೊಡುಗೆನೀಡಿದ ಕಲಾವಿದರು ಕೆಲವರು ಮಾತ್ರ ಚಿತ್ರಕಲೆಗಾಗಿಯೇ ತಮ್ಮನ್ನು ತಾವು ಅರ್ಥೈಸಿಕೊಂಡು ಅಮೂಲ್ಯವಾದ ಕಲಾಕೃತಿಗಳನ್ನು ರಚಿಸುವುದರಮೂಲಕ ಈ ನಾಡಿನ ಚಿತ್ರಕಲಾ ಕ್ಷೇತ್ರಕ್ಕೆ ತಳಪಾಯ ಹಾಕಿದವರು. ಶ್ರೀ ಟಿ.ಪಿ. ಅಕ್ಕಿ, ಶ್ರೀ ಶಿವಾನಂದ ಅಕ್ಕಿ, ಎಂ.ಎ. ಚೆಟ್ಟಿ, ಶ್ರೀ ಸಿ.ಎನ್. ಪಾಟೀಲ, ಅಮಿನಸಾಹೇಬ ಕಮಡೊಳ್ಳಿ, ಸಿ.ಟಿ. ರಾಯ್ಕರ, ಶ್ರೀ ಎಸ್.ಎಂ. ಶಿರಹಟ್ಟಿ, ವ್ಹಿ.ಟಿ. ಕಾಳೆ, ಇವರ ಕಲಾಸೇವಯ ಚಿತ್ರಕಲಾ ಪ್ರಪಂಚಕ್ಕೆ ಅಪಾರವಾಗಿದೆ. ಇವರೆಲ್ಲರೂ ತಮ್ಮ ಕಲಾ ಸಾಧನೆಯಲ್ಲಿ ಶ್ರೇಷ್ಠ ಮಟ್ಟವನ್ನು ಮುಟ್ಟಿದವರು. ಕಲಾ ಕ್ಷೇತ್ರದಲ್ಲಿ ವಿವಿಧ ರೀತಿಯ ಕೆಲಸ ಕಾರ್ಯಗಳನ್ನು ಮಾಡಿ ಗದುಗಿನ ಹೆಸರನ್ನು ರಾಷ್ಟ್ರೀಯ ಮಟ್ಟದವರೆಗೆ ಬೆಳಿಸಿದ್ದಾರೆ.

ಗದಗ ಜಿಲ್ಲೆಯ ಹೊಸ ತಲೆಮಾರಿನ ಚಿತ್ರಕಲಾವಿದರಲ್ಲಿ ಪ್ರಮುಖರಾದವರು, ವಸಂತ ಅಕ್ಕಿ, ಆರ್.ವ್ಹಿ. ಹೆಗಡೆ, ಅಶೋಕ ಅಕ್ಕಿ, ಕೆ.ವ್ಹಿ. ಕುಂದಗೋಳ ಪ್ರೇಮಾ ಹಂದಿಗೋಳ, ಬನಶಂಕರಿ ಹೆಗಡೆ, ಡಾ. ಲಕ್ಷ್ಮೀದೇವಿ ಗವಾಯಿ, ಸಿ.ವಿ. ಬಡಿಗೇರ, ಬಿ.ಎಲ್. ಚವ್ಹಾಣ, ಕಮಲ್ ಆಹ್ಮದ್, ಎಸ್.ವ್ಹಿ. ಗುಂಜಾಳ, ಶರಣಪ್ಪ, ಬಿ.ಎಚ್. ಎನ್.ಟಿ. ಮಾಳವದಕರ, ಎಸ್.ಎನ್. ಹರ್ಲಾಪೂರ ಪಿ.ಎಸ್.

೫೫. ಪ್ರೊ. ಸಿ.ವಿ. ಕೆರಿಮನಿ ಹಾಗೂ ಇತರರು ಲೇ ಲಕ್ಷ್ಮೀದೇವಿ ಗವಾಯಿ ಬೆಳ್ವೂಲ ಬೆಳಕು ಸ್ಮರಣ ಸಂಚಿಕೆ ಪು.ಸಂ ೨೨೬

ಲಕ್ಕಂಡಿ, ವಿ.ವಾಯ್. ಸೋಮನಕಟ್ಟಿ, ಪಿ.ಬಿ. ಬಂಡಿ, ವ್ಹಿ.ಎಲ್. ಬೆಳಗಲಿ, ಕೆ.ಎಸ್. ಬಂಡಿ, ಎಸ್.ಎಫ್. ಬೆನಕಣ್ಣವರ, ಎಂ.ಆರ್. ಹೆಬ್ಬಳ್ಳಿ, ಎಂ.ಆರ್. ಹರ್ಲಾಪೂರ, ಎಸ್.ಡಿ. ಕಡ್ಲಿಕೊಪ್ಪ. ಪಿ.ಎ. ಕುಲಕರ್ಣಿ, ಆರ್.ಡಿ. ಕಡ್ಲಿಕೊಪ್ಪ, ಕೃಷ್ಣಾ, ಕೆ.ಎಂ., ಎಸ್.ಎಸ್. ಕಮ್ಮಾರ, ಶಂಕರಗೌಡ ಪಾಟೀಲ, ಶ್ರೀಕಾಂತ ಪಾಟೀಲ, ಎ.ಎ. ಶಿರಹಟ್ಟಿ, ಎಸ್.ಎಂ. ಲೋಹಾರ, ವಿಜಯ ಕಿರೆಸೂರ, ಜೆ.ಕೆ. ಬಾಗವಾನ, ರಾಜು ಉಮಚಗಿ, ರಮೇಶ, ತೇರದಾಳ, ಸುರೇಶ ಡಿ.ಎಚ್. ಮುಂತಾದ ಕಲಾವಿದರು ತಮ್ಮ ಕಲಾಸೇವೆಯನ್ನು ಸಲ್ಲಿಸುತ್ತ ಗದಗ ಜಿಲ್ಲೆಗೆ ತಮ್ಮದೆ ಆದ ಕೂಡುಗೆಯನ್ನು ನೀಡಿದ್ದಾರೆ ".

ಹೀಗೆ ಗದಗ ಜಿಲ್ಲೆಯು ಚಿತ್ರಕಲಾ ಕ್ಷೇತ್ರಕ್ಕೆ. ಬಹುದೊಡ್ಡ ಕೊಡುಗೆ ನೀಡಿದೆ ಎಂದು ಹೇಳಬಹುದು. ಶಿಲ್ಪ, ವಾಸ್ತು ಶಿಲ್ಪ ಸಂಗೀತ ಧಾರ್ಮಿಕ ಸಹಕಾರಿ, ಕ್ರೀಡೆ ಸಾಹಿತ್ಯ ಚಿತ್ರಕಲೆ ಮುಂತಾದ ಸಾಂಸ್ಕೃತಿಕ ಪರಿಸರವನ್ನು ಗದಗ ಜಿಲ್ಲೆ ಹೊಂದಿದೆ.

n n n


ಗದಗ ಜಿಲ್ಲೆಯ ಐತಿಹಾಸಿಕ ಸ್ಥಳಗಳು



ಶ್ರೀ ವೀರನಾರಣ ದೇವಸ್ಥಾನ,ಗದಗ



ಜ. ಶ್ರೀತೋಂಟದಾರ್ಯ ಮಠ, ಗದಗ



ಜುಮ್ಮಾ ಮಸಜಿದ್, ಗದಗ



ಶ್ರೀ ವಿರೇಶ್ವರ ಪುಣ್ಯಾಶ್ರಮ,ಗದಗ



ಜ.ನೀಲಂಕೇಶ್ವರ ಮಠ,ಗದಗ-ಬಟಗೇರಿ.

ಗದಗ ಜಿಲ್ಲೆಯ ಐತಿಹಾಸಿಕ ಸ್ಥಳಗಳು



ಜ.ಶ್ರೀ ಶಿವಾನಂದ ಮಠ,ಗದಗ



ಪ.ಪೂ.ಶ್ರಿ ಅಡವೀಂದ್ರ ಮಸ್ವಾಮಿಗಳವರ ಮಠ, ಗದಗ.



ಶ್ರೀ ಅನ್ನದಾನೇಶ್ವರಮಠ, ಮುಂಡರಗಿ.



ಲಕ್ಕುಂಡಿಯ ಪ್ರಸಿದ್ಧ ಉಸಕಿನಬಾವಿ



ಗದಗ ಜಿಲ್ಲೆಯ ಐತಿಹಾಸಿಕ ಸ್ಥಳಗಳು



ಬ್ರಹ್ಮಜಿನಾಲಯ ಲಕ್ಕುಂಡಿ



ಕಾಶಿವಶ್ವನಾಥ ದೇವಾಲಯ ಲಕ್ಕುಂಡಿ.



ಛಾಯಾ ಚಂದ್ರನಾಥ,ಚಿಂಚಲಿ



ಮಲ್ಲಯ್ಯನಕಟ್ಟೆ ವೀರಗಲ್ಲುಗಳು, ಬೆಟಗೇರಿ

ಅಧ್ಯಾಯ - ಮೂರು

ಗದಗ ಜಿಲ್ಲೆಯ ಜನಪದ ಚಿತ್ರಕಲೆ



ಒಂದು ಜನಾಂಗದ ಸಂಸ್ಕೃತಿಯ ಮಟ್ಟವನ್ನು ಬೆಳವಣಿಗೆಯನ್ನು ತಿಳಿಯಬೇಕಾದರೆ ಅಲ್ಲಿ ಬೆಳೆದು ಬಂದ ಹಲವು ಬಗೆಯ ಕಲೆಗಳನ್ನು ಪರಾಮರ್ಶಿಸಬೇಕಾಗುತ್ತದೆ. ಕರ್ನಾಟಕದ ಜನತೆ ಸಂಸ್ಕೃತಿಯ ಕೈಗನ್ನಡಿಯಾದ ಕಲೆಯ ಹಲವು ಪ್ರಕಾರಗಳನ್ನು ಅತ್ಯಂತ ಪ್ರಾಚೀನ ಕಾಲದಿಂದಲೂ ತನ್ನದೆ ಆದ ರೀತಿಯಲ್ಲಿ ಬೆಳೆಸಿಕೊಂಡು ಬಂದಿದೆ.[೧]

ಮಾನವ ನಿತ್ಯ ಜೀವನದಲ್ಲಿ ಅನುಭವಿಸುವ ಸುಖ ಸಂತೃಪ್ತಿ, ಆನಂದಗಳೇ ಕಲೆಗೆ ಮೂಲ. ಶಾಂತಿ ಸಮೃದ್ಧಿಗಳು ಕಲೆಯನ್ನು ಬೆಳೆಸಿಕೊಂಡು ಬರುವ ಮುಖ್ಯ ಅಂಶಗಳು. ತನಗುಂಟಾದ ಸಂತೋಷದ ಕುರುಹಾಗಿ ಮಾನವ ಹಲವು ಬಗೆಯಲ್ಲಿ ಹಾವಭಾವಗಳನ್ನು ವ್ಯಕ್ತಪಡಿಸುತ್ತಾನೆ ಸುಗ್ಗಿಯ ಕಾಲದಲ್ಲಿ ಸಂತೋಷದಿಂದ ಗುಂಪು ಗುಂಪಾಗಿ ಕುಣಿಯವುದು. ಹಾಡುವುದು ಅನೂಚಾನವಾಗಿ ನಡೆದು ಬಂದ ಪದ್ಧತಿಯಾಗಿದೆ.[೨] ಜನಾಂಗದ ಬದುಕು ಜೀವನ ಚರಿತ್ರೆಯೆನಿಸಿದರೆ ಕಲೆಗಳು ಅದರ ಆತ್ಮಚರಿತ್ರೆಯೆನಿಸುತ್ತವೆ. ವ್ಯಾಪಕವಾದ ಅರ್ಥದಲ್ಲಿ "ಜನತೆ ಬದುಕಿನ ರೀತಿ ಅನುಭವಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆ ಜೀವನ ಮೌಲ್ಯ ಇತ್ಯಾದಿಗಳ ವಿವರಣೆಯೇ ಇತಿಹಾಸವೆನಿಸುತ್ತವೆ. ಆ ಇತಿಹಾಸದ ಒಳ ಚೌಕಟ್ಟಿನಲ್ಲಿ ಬೆಳೆದು ಬಂದ ಕಲೆಗಳು ಅದಕ್ಕೆ ಸುಂದರ ಸಂಸ್ಕಾರವನ್ನು ನೀಡುತ್ತವೆ.[೩]

ನಿತ್ಯದ ಬದುಕು ಹಸನಾಗಿ ನಡೆಯುವಂತೆ ಒಂದು ಸೂತ್ರದಲ್ಲಿ ಯಾವುದು ಬಂಧಿಸಿದೆಯೋ ಅದು ಧರ್ಮ. ಈ ಧರ್ಮ ಪ್ರಜ್ಞೆಯ ಆಚಾರ–ವಿಚಾರಗಳು ನೂರಾರು ಸಂಪ್ರದಾಯಗಳಿಗೆ ನಂಬಿಕೆಗಳಿಗೆ ಮೌಲ್ಯಗಳಿಗೆ ಕಾರಣವಾಗಿ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ ಮುಂತಾಗಿ ಕಲೆಗಳು ಹುಟ್ಟಿ ವಿಕಾಸಗೊಂಡವು ಈ ದೃಷ್ಟಿಯಿಂದ ಮನುಷ್ಯನ ಕ್ರಿಯಾಶೀಲ ಮನಸ್ಸು ಬದುಕನ್ನು ಸುಂದರವಾಗಿಸಲು ಜಡದಿಂದ ಚೈತನ್ಯಕ್ಕೆ ಸಾಗುವಂತೆ ಮಾಡಲು ಪಟ್ಟ ಪರಿಶ್ರಮದಿಂದಲೇ ಕಲೆಗಳ ಹುಟ್ಟಿಗೆ ಕಾರಣವಾಗಿದೆ ಎನ್ನಬಹುದು. ಇಂಥ ಕಲೆಗಳ ಬೆಳವಣಿಗೆ, ವಿಕಾಸಗಳೇ ಸಂಸ್ಕೃತಿಯ ವೈಭವವನ್ನು ಸೂಚಿಸುತ್ತದೆ. ಜನಪದ ಕಲೆಗಳು ಅಪ್ಪಟ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದಂಥವುಗಳು. ಅವುಗಳ ಕೊಡುಗೆ

೧. ಡಾ॥ ಎಸ್.ಸಿ.ಪಾಟೀಲ ಮತ್ತು ಶ್ರೀ ಸತ್ಯಾನಂದ ಪಾತ್ರೋಟ (ಸಂ) ಲೇ.ಪಿ.ಆರ್.ತಿಪ್ಪೆಸ್ವಾಮಿ (ಪು.ಸಂ) ೧೨೩

೨. ಡಾ॥ ಎಸ್.ಸಿ.ಪಾಟೀಲ ಮತ್ತು ಶ್ರೀ ಸತ್ಯಾನಂದ ಪಾತ್ರೋಟ (ಸಂ) ಲೇ.ಪಿ.ಆರ್.ತಿಪ್ಪೆಸ್ವಾಮಿ (ಪು.ಸಂ) ೧೨೩

೩. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೩

ಅಪಾರವಾದುದು. "ಜಾನಪದ ಸಂಪ್ರದಾಯಗಳು ಒಂದು ಸಮುದಾಯದ ಸಮಷ್ಟಿ, ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು ಅದು ಜನಸಾಮಾನ್ಯರ ಸ್ಮೃತಿಯೂ ಅಹುದು" ಎಂಬ ಡಾ। ದೇ. ಜವರೇಗೌಡರ ಮಾತುಗಳು. ಜಾನಪದದ ಮಹತ್ವವನ್ನು ಮನಗಾಣಿಸುತ್ತವೆ ಎಂದು ಡಾ। ಎಸ್.ಸಿ. ಪಾಟೀಲರ ಅಭಿಪ್ರಾಯ ಹಾಗೆಯೇ ಜನಪದ ಕಲೆಗಳ ಮಹತ್ವದ ಬಗ್ಗೆ ಹೇಳುತ್ತಾ "ಸಂಸ್ಕೃತಿ ಎನ್ನವುದು ಯಾವುದೇ ಒಬ್ಬ ವ್ಯಕ್ತಿಯ ಸ್ವಂತ ಆಸ್ತಿಯಲ್ಲ, ಅದು ಜನಾಂಗಕ್ಕೆ ಸೇರಿದಂತಹುದು.[೪] ಹಿಗಾಗಿ ಸಮಸ್ಠಿಯಿಂದ ಸಂಸ್ಕೃತಿಯ ಸ್ವತ್ತು ಎನಿಸಿಕೊಳ್ಳುತ್ತದೆ. ಜಾನಪದ ಕಲೆಯನ್ನುವುದು ಇಂಥ ಸಂಸ್ಕೃತಿಯ ಒಂದು ಅಂಶವಾಗಿದೆ. ಈವರೆಗೆ ಜಾನಪದ ಬದುಕನ್ನು ಕಡೆಗಣಿಸಿಕೊಂಡು ಬಂದಂತೆ ಜಾನಪದ ಸಂಸ್ಕೃತಿಯ ಭಾಗವಾಗಿರುವ ಕಲೆಯ ಬಗ್ಗೆ ಅವಜ್ಞೆಯನ್ನು ತೋರಿದವರಿಗೆ ಇದು ಬೆರಳು ತೋರುವ ಮಾತಾಗುತ್ತದೆ.

"ನಗರ ನಿಯಂತ್ರಿತ ಜನಾಂಗಕ್ಕಿಂತ ನಿಸರ್ಗ ನಿಯಂತ್ರಿತ ಜನಾಂಗದಲ್ಲಿ ಮಾನವನ ಪ್ರಾಕೃತಿಕ ಪ್ರಜ್ಞೆಗಳು ದಟ್ಟವಾಗಿ ನೆಲೆನಿಂತಿರುತ್ತವೆ. ಇಂಥ ಜನಾಂಗವೇ ಜನಪದ" ಎಂಬ ಡಾ. ಕಲಬುರ್ಗಿಯವರ ಮಾತನ್ನು ಗಟ್ಟಿಯಾಗಿ ಹಿಡಿದು, ನಿಸರ್ಗಜನ್ಯ ಕಲೆ ಜಾನಪದದಲ್ಲಿ ಕಲ್ಪಿಸಬೇಕಾಗುತ್ತದೆ.[೫] ಎಂದು ಡಾ। ಎಸ್.ಸಿ. ಪಾಟೀಲರು ಜಾನಪದ ಚಿತ್ರಕಲೆಯಲ್ಲಿ ಉಲ್ಲೇಖಿಸಿದ್ದಾರೆ. ಕಲೆಗಳ ಕುಂಚವಾಗಿದೆ. ಪ್ರಾರಂಭ ಕಾಲದಲ್ಲಿ ರೂಪಗೊಂಡಿರುಬಹುದಾದ ಕಲೆಯ ಕಾಲದ ಪ್ರಶ್ನೆಗಿಂತ, ನಾಡಿನ ಸಂಸ್ಕೃತಿಗೆ ಜನಪದ ಕಲೆ, ಜನರ ಬದುಕಿನ ಆತ್ಮವಾಗಿ, ಜೀವನವಾಗಿ ಹೇಗೆ ಜೀವಂತ ಅಸ್ತಿತ್ವವನ್ನು ನೀಡಿದೆ ಎಂಬುದರ ಅಧ್ಯಯನ ಅವಶ್ಯವಾಗಿದೆ. ಜನಪದ ಚಿತ್ರಕಲೆಯೆಂದರೆ ಕೇವಲ ಬಣ್ಣವಲ್ಲ. ರೇಖೆಯಲ್ಲಿ ಸುಣ್ಣ ಕಾವಿಗಳ ಬೊಟ್ಟುಗಳಲ್ಲಿ ಧಾರ್ಮಿಕ ಸಂಪ್ರದಾಯಗಳು, ಪ್ರಕೃತಿಯ ಶಕ್ತಿ ಮೂಲಗಳು, ಮನುಷ್ಯನ ಸೂಪ್ತ ಶಕ್ತಿಗಳು ಅಡಕಗೊಂಡಿರುವ ಸೌದರ್ಯ ತುಂಬಿರುವ ವೃತ್ತಿ ಮೂಲವಾಗಿರುವ ದೈನಂದಿನ ಬದುಕೇ ಆಗಿರುವ ಕಲೆ ಈ ಚಿತ್ರಕಲೆ. ಈ ಅರ್ಥದಲ್ಲಿ ಜನಪದ ಚಿತ್ರಕಲೆಯೆಂದರೆ ಜನಪದ ಜೀವನದ ಅಧ್ಯಯನವೇ ಆಗಿದೆ[೬] ಎಂದು ಹೇಳಬಹುದು.

ಮಾನವನ ವಿಧಿ ಕ್ರಿಯೆಗಳೆಲ್ಲ ಬಣ್ಣದಲ್ಲಿ ಹುಟ್ಟಿ, ವಿವಿಧ ಚಟುವಟಿಕೆಗಳೆಲ್ಲ ಬಣ್ಣದಲ್ಲಿ ತೊಡಗಿ, ನೋಡುವವರ ಕಣ್ಣಿಗೆ ಹಬ್ಬವನ್ನುಂಟು ಮಾಡುವ, ಭಯವನ್ನುಂಟು ಮಾಡುವ ಸರ್ವ ಭಾವನೆಗಳ ಅಧ್ಯಯನವೂ ಈ ಜನಪದ ಚಿತ್ರಕಲೆಯಲ್ಲಿದೆ. ವಿವಿಧ ಹಂತಗಳಲ್ಲಿ ಬಾಳುವ ಮನುಷ್ಯನ ಬದುಕು, ಅದರಲ್ಲಿಯೂ ಜನಪದರ ಬದುಕು, ತಮಗೆ ಅರಿವಿಲ್ಲದೆ ಚಿತ್ರಕಲೆಯನ್ನು ಹೇಗೆ ರೂಢಿಸಿಕೊಂಡಿತೆಂಬುದನ್ನು ತಿಳಿದುಕೊಳ್ಳವುದೇ ಮುಖ್ಯವಾಗಿದೆ.

ಜನಪದ ಚಿತ್ರಕಲೆಯ ಇತಿಹಾಸ : ಜನಪದ ಚಿತ್ರಕಲೆಗೆ ಕಾಲ ಸೂಚಿ ಹೇಳುವುದು ಅಸಾಧ್ಯವಾದುದು. ಮನುಷ್ಯ ಪ್ರಪಂಚಕ್ಕೆ ಕಾಲಿಟ್ಟು, ಅವನು ಕಲೆಯ ಹೊಳಹುಗಳನ್ನು ಹಾಕಿಕೊಂಡು ಅವನು ನಿತ್ಯದ ಬದುಕಿನಲ್ಲಿ ತಂದುಕೊಳ್ಳುವರೆಗಿನ ಕಾಲವನ್ನು ಕಲೆಯ ಕಾಲವೆಂದು ಗುರುತಿಸಬೇಕಾಗುತ್ತದೆ. ಹಾಗಾದಾಗ

೪. ಡಾ. ಎಸ್.ಸಿ.ಪಾಟೀಲ ಕರ್ನಾಟಕ ವಿ.ವಿ. ಜನಪದ ಚಿತ್ರಕಲೆ (ಪು.ಸಂ) ೩

೫. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೪

೬ ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೫

ಕಲೆ ದಿಢೀರನೆ ಹುಟ್ಟಿ ಬರಲಿಲ್ಲ ಅಥವಾ ಇಂಥ ಕಾಲದಲ್ಲಿಯೇ ಹುಟ್ಟಿತು ಎಂದು ಹೇಳಲಿಕ್ಕಾಗುವುದೂ ಇಲ್ಲ. ಪ್ರಾಚೀನ ವರ್ಣಚಿತ್ರಗಳಿಗೆ ಅಂಟಿದ ಬಣ್ಣವನ್ನೇ ಪರೀಕ್ಷೆಗೆ ಒಳಪಡಿಸಿ ಕಾಲಗಣನೆ ಮಾಡಿಕೊಂಡು ಅಲ್ಲೊಂದು ಚಿತ್ರವಿದ್ದರೆ ಚಿತ್ರಕಲೆಯ ಕಾಲವಿದೆಂದು ಗುರುತಿಸಲೂಬಹುದು. ವಿದ್ವಾಂಸರು ಮನುಷ್ಯನ ಸಂಪರ್ಕ ಸಾಧನವಾಗಿ ಭಾಷೆ ಹುಟ್ಟುವ ಪೂರ್ವದಲ್ಲಿ ಚಿತ್ರಗಳು ಗುಹೆಗಳಲ್ಲಿ, ಬಂಡೆಗಳಲ್ಲಿ ಕೊರೆಯಲ್ಪಡುತ್ತಿದ್ದವು ಎಂದಿದ್ದಾರೆ. ವಿಶ್ವದಲ್ಲಿ ಅತೀ ಪ್ರಾಚೀನ ಚಿತ್ರಕಲೆಯ ಕುರುಹುಗಳು ಸ್ಪೇನಿನ ಗವಿಗಳಲ್ಲಿಯೂ ಪ್ರಾನ್ಸಿನ ಡೊರಡೋನ್ ಪ್ರಾಂತದ ಲಾಗ್ರೀಜ್ ಗವಿಗಳಲ್ಲಿಯೂ ದೊರೆತಿವೆ. ಸುಮಾರು ೨೭೦೦೦ ವರ್ಷಗಳ ಹಿಂದೆ ಅರಿನೇಷಿಯನ್ ನಾಗರಿಕತೆಯ ಕಾಲದಲ್ಲಿ ಮನುಷ್ಯನ ಪ್ರಾಚೀನ ಕಲಾಕೃತಿಗಳು ದೊರೆಯುತ್ತವೆ. ಎಂಬ ಅಭಿಪ್ರಾಯವೂ ಇದೆ. ಕಲ್ಲಿನ ಗೋಡೆಗಳ ಮೇಲೆ ಕಲ್ಲಿನ ಆಯುಧಗಳಿಂದ ಕೊರೆದಿರುವ ಕಾಡುಕೋಣ, ಕುದುರೆ, ಕರಡಿ, ಮುಂತಾದ ಪ್ರಾಣಿಗಳ ಆಕೃತಿಗಳು ದೊರೆಯುತ್ತವೆ. 'ಗಾರಗಾಸ್' (ಫ್ರಾನ್ಸ್) ಗವಿಗಳಲ್ಲಿನ ಹಸ್ತ ಚಿತ್ರಗಳು, ಹಸ್ತಕ್ಕೆ ಬಣ್ಣ ಹಚ್ಚಿ ಅಚ್ಚಿಸಿದ ಹಾಗಿವೆಯಂತೆ. ಆದಿಮಾನವ ತಾನು ಬೇಟೆಯಾಡಿದ ಪ್ರಾಣಿಗಳ ಹಸಿ ರಕ್ತವನ್ನು ಕೈಗೆ ಹಚ್ಚಿಕೊಂಡು ಹಾಗೆಯೇ ಬಂಡೆಗಳಿಗೆ ಹಚ್ಚಿರುವ ಸಾಧ್ಯತೆಯೂ ಇರಬೇಕು. ಪ್ರಪಂಚದ ಅನೇಕ ಕಡೆಗವಿಗಳಲ್ಲಿ ಪ್ರಾಚೀನ ಚಿತ್ರಕಲೆ, ಪ್ರಾಣಿಗಳ ರೂಪದಲ್ಲಿ ಹಾಗೂ ಮಾನವಾಕೃತಿಯ ರೂಪದಲ್ಲಿ ಚಿತ್ರಿತವಾಗಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. 'ಆದಿಮಾನವನ ಚಿತ್ರಗಳು ಶಿಲೆ, ವೃಕ್ಷಗಳ ತೊಗಟೆ, ಜೀವ ಜಂತುಗಳ ಚರ್ಮ, ಎಲುವು, ಕೊಂಬು, ಕೊಳಗದಂತಹ ಸಾಮಗ್ರಿಗಳ ಮೇಲೆ ಚಿತ್ರಿತವಾಗಿವೆ. ಕ್ಯಾಲಿಪೋರ್ನಿಯಾ ಕೊಳ್ಳ, ಸ್ಕಾಟ್ಲಂಡದ ಕಲ್ಲುಬಂಡೆಗಳು, ರೈಘ್‌ಲ್ಯಾಂಡ್ದ ಡೊಳ್ಳು, ಒವ್ವನ್ (ಫ್ರಾನ್ಸ್)ದ ಕೊಂಬುಗಳ ಮೇಲೆ ಚಿತ್ರಗಳನ್ನು ಗುರುತಿಸಲಾಗಿದೆ.'[೭]

ಕ್ರಿ.ಶ.ಪೂ. ೪೦೦೦ ರಿಂದ ೧೦೦೦ ವರ್ಷಗಳ ಅವಧಿಯಲ್ಲಿ ಸಹರಾದಲ್ಲಿ ಕೃಷಿ, ಯುದ್ಧ, ಮಂತ್ರ, ಮಾಟಗಳಿಗೆ ಸಂಬಂಧಿಸಿದ ಚಿತ್ರಗಳಿದ್ದುವೆಂದು ಡಾ. ಶಿವರಾಮ ಕಾರಂತರು ವಿವರಿಸುತ್ತಾರೆ. ಎಂದು ಡಾ. ಎಸ್.ಸಿ. ಪಾಟೀಲರು ಕರ್ನಾಟಕ ಜನಪದ ಚಿತ್ರಕಲೆಯ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಭಾರತದಲ್ಲಿಯೂ ಇತಿಹಾಸ ಪೂರ್ವ ಆದಿಮಾನವನ ಗುಹೆ ಮತ್ತು ಶಿಲಾಶ್ರಯದ ಚಿತ್ರಗಳು ಶೋಧನವಾಗಿದ್ದು, ಚಿತ್ರಕಲಾ ಸಂಶೋಧಕರ ಗಮನ ಸೆಳೆದಿವೆ. ಭಾರತದಲ್ಲಿಯ ಪ್ರಾಚೀನ ಚಿತ್ರಕಲೆಯನ್ನು ನೋಡಬಹುದು.

ಜಾನಪದ ಚಿತ್ರಕಲೆಯನ್ನು ನೋಡಿದಾಗ ಕರ್ನಾಟಕದಲ್ಲಿ ಹೆಚ್ಚಾಗಿ ಗೃಹಾಲಂಕಾರ ಬಹಳ ಸರಳವಾಗಿ ಸುಣ್ಣಹಚ್ಚುವುದು, ಸಾಮಾನ್ಯವಾಗಿ ಎಲ್ಲಡೆಯೂ ಕಂಡುಬರುತ್ತದೆ. ತಿಂಗಳಿಗೊಮ್ಮೆಯೋ ಹದಿನೈದು ದಿನಗಳಿಗೊಮ್ಮೆಯೋ ನೀರಿನಲ್ಲಿ ಸುಣ್ಣವನ್ನು ಗಟ್ಟಿಯಾಗಿ ಕಲಸಿ, ಸಣ್ಣ ಕುಂಚದಿಂದ ತೊಟ್ಟಿಯ ಅಂಚು, ಗೋಡೆಯ ಕೆಳಭಾಗ ಕಂಬದ ಕೆಳಗೆ ನೆಲವನ್ನು ಬಿಟ್ಟು ಒಂದಂಗುಲ ಎತ್ತರಕ್ಕೆ ಕಿರುಸುಣ್ಣ ಎಂದು ಹೇಳುತ್ತಾರೆ. ಚಂದ್ರದಿಂದ ರಂಗೋಳಿ ಬಿಡುವುದು ಹಳ್ಳಿಗರ ಗೃಹಾಲಂಕರಣ ಮತ್ತೊಂದು ವಿಧಾನ. ಚಂದ್ರವನ್ನು ನೀರಿನಲ್ಲಿ ಕರಗಿಸಿ ತೊಟ್ಟಿ ಮನೆಗಳಲ್ಲಿ ಈಚಲಗರಿಯಿಂದ ಸೋಗೆಗಳಿಂದ ಮಾಡಿದ ಕುಂಚದ ಮೂಲಕ ಅಚ್ಚುಕಟ್ಟಾಗಿ ಎರಡೆರಡು ಎಳೆಗಳನ್ನು ಎಳೆಯುತ್ತಾರೆ.

೭ ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೨೭

ಗ್ರಾಮಾಂತರ ಜನ ಇದನ್ನು ವಾರ್ಲಿ (ಕಲೆ) ಬಿಡುವುದು ಎಂದು ಕರೆಯುತ್ತಾರೆ. ಕೆಮ್ಮಣ್ಣಿನಿಂದ ಹೊಸ್ತಿಲು ಸಾರಿಸುವುದು. ಅವರ ಗೃಹಾಲಂಕರಣದ ಇನ್ನೊಂದು ವಿಧಾನ ಧೂಳಿನಂತಿರುವ ಕೆಮ್ಮಣ್ಣನ್ನು ನೀರಿನಲ್ಲಿ ಗಟ್ಟಿಯಾಗಿ ಕಲಸಿ, ಮನೆಯ ಹೊಸ್ತಿಲು ಮತ್ತು ಬಾಗಿಲಿನ ಚೌಕಟ್ಟು ತಳಭಾಗಗಳಿಗೆ ಆರು ಅಂಗುಲ ಎತ್ತರಕ್ಕೆ ಸಾರಿಸುತ್ತಾರೆ.[೮]

ಗದಗ ಜಿಲ್ಲೆಯ ಜಾನಪದ ಚಿತ್ರಕಲೆಯು ಒಂದು ಸುಂದರವಾದ ಸಂಸ್ಕೃತಿಯನ್ನು ಹೊಂದಿದೆ. ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಜನಪದ ಚಿತ್ರಕಲೆಯು ಕಂಡುಬರುತ್ತದೆ. ಮತ್ತು ಸ್ತೋತ್ರದಲ್ಲಿ ತೊಗಲುಗೊಂಬೆ ಕಲೆ, ಮೆಹಂದಿ ಕಲೆ, ರಂಗೋಲಿಕಲೆ, ಹಚ್ಚೆಕಲೆ, ಕಸೂತಿ ಕಲೆ, ಹುಲಿವೇಷ, ಕೌದಿಕಲೆಗಳು ಹೆಚ್ಚಾಗಿ ಕಂಡುಬರುತ್ತವೆ.

ತೊಗಲುಗೊಂಬೆ ಕಲೆ : ಯಾವುದೇ ದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಧಿಕಾರ ಆಯಾ ದೇಶದ ಯಾವುದೇ ಕಲೆಗಳಿಗೆ ಇರುತ್ತದೆ. ಸಾಮಾನ್ಯವಾಗಿ ದೇಶಿ ಮೂಲದ ಕಲೆಗಳು ಅವುಗಳದೇ ಆದ ವಿಶಿಷ್ಟ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುತ್ತವೆ. ಅವು ತಲೆಮಾರಿನಿಂದ ತಲೆಮಾರಿಗೆ ಮುಂದುವರಿದು ಅದೊಂದು ಸಾಮೂಹಿಕವಾದ ಸೃಷ್ಟಿಯಾಗಿ ಸಂವಹನಗೊಳ್ಳುತ್ತದೆ. ಅಲ್ಲಿ ವೈಯಕ್ತಿಕ ಪ್ರತಿಭೆ ಕೆಲಸ ಮಾಡಿದರೂ ಅದು ಆಯಾ ಸಮುದಾಯದ ಸಮಷ್ಟಿ ಸೃಷ್ಟಿಯಾಗಿ ಅಭಿವ್ಯಕ್ತಗೊಳ್ಳುತ್ತದೆ. ಹೀಗಾಗಿ ಒಂದು ವಸ್ತುವಿನ ಕಲಾತ್ಮಕತೆಯನ್ನು ಬೆಳೆಸುವಲ್ಲಿ ಗುಂಪಿನ ಪ್ರತಿಯೊಬ್ಬನ ಕೈವಾಡವೂ ಅದರಲ್ಲಿ ಕಾರ್ಯ ಮಾಡಿರುತ್ತದೆ. ಹೀಗೆ ಒಂದು ವಸ್ತುವಿಗೆ ಸಮೂಹದ ವ್ಯಕ್ತಿ ತನ್ನದೆನಿಸಿದ್ದು, ಈ ವಸ್ತುವಿನ ಪೀಳಿಗೆಗೆ ತಮ್ಮದೇಯಾದ ಕ್ರಿಯಾತ್ಮಕ ಅಂಶಗಳನ್ನು ಪ್ರೇರಿಸುತ್ತಾನೆ. ಹಿಗೆ ಒಂದು ಪ್ರೇರಕ ಶಕ್ತಿ ಈ ಕಲೆಯ ಹಿಂದೆ ಕೆಲಸ ಮಾಡುತ್ತಾ ಹೋಗಿರುವುದನ್ನು ಗುರುತಿಸಬಹುದು[೯] ಎಂದು ಹೇಳಿದ್ದಾರೆ.

ಜನಪದ ಕಲೆ ಸೌಂದರ್ಯದ ಆಶಯವಾಗಿ ಧಾರ್ಮಿಕ ಹಿನ್ನೆಲೆಯಲ್ಲಿ, ವೃತ್ತಿ ಮೂಲದ ಸಂದರ್ಭಗಳಲ್ಲಿ ಜನಿಸಿ ಬಂದಿರುವುದು ಅವುಗಳ ಅಧ್ಯಯನದಿಂದ ಗೊತ್ತಾಗುವ ಸಂಗತಿಯಾಗಿದೆ. ಪ್ರತಿಯೊಂದು ದೇಶದ ಕಲೆಗಳು ಆಯಾದೇಶದ ಸಂಪತ್ತು ಅಷ್ಟೇ ಅಲ್ಲ, ಆಯಾ ಸಂಸ್ಕೃತಿಯ ತೋರು ದೀವಿಗೆಗಳು ಕೂಡ. ಪರಂಪರಾಗತವಾಗಿ ಸಹಸ್ರಾರು ವರ್ಷಗಳಿಂದ ಉಳಿದು ಬಂದ ನಮ್ಮ ಕಲಾ ಸಂಪತ್ತು, ನಮ್ಮ ಹಿರಿಯರ ಸಾಧನೆ. ಈ ಸೃಜನಶೀಲ ಅಭಿವ್ಯಕ್ತಿಯು ಅಮೂಲ್ಯ ಆಸ್ತಿಗಳಾಗಿ ಉಳಿದುಕೊಂಡು ಬಂದಿವೆ.[೧೦] ಎಂದು ಡಾ. ಎಸ್.ಸಿ.ಪಾಟೀಲರು ವರ್ಣಿಸುತ್ತಾರೆ.

ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ತೊಗಲಗೊಂಬೆ ಚಿತ್ರಕಲೆಯು ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡಿದೆ. ಪ್ರದರ್ಶನಾತ್ಮಕವಾದ ಈ ಕಲೆ ಜನಜೀವನದ ಆಯಾಮಗಳನ್ನು ಒಳಗೊಂಡಿದೆಯಲ್ಲದೇ ಚಿತ್ರಕಲೆಯ ಹಲವು ವೈಶಿಷ್ಟಗಳು ಇದರಲ್ಲಿ ಅಡಕವಾಗಿವೆ. ಹೀಗಾಗಿ ತೊಗಲುಗೊಂಬೆಯ ನಾಗರಿಕರ ಬದುಕಿನ ಬಗೆಗಿನ ವಿವರಗಳನ್ನು ತಿಳಿಸುವುದರ ಜೊತೆಗೆ ಮಾನವನ

೮. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೬೮

೯. ಡಾ. ಎಸ್.ಸಿ.ಪಾಟೀಲ ರಂಗೋಲಿ ಚಿತ್ರಕಲೆ (ಪು.ಸಂ) ೧

೧೦. ಡಾ. ಎಸ್.ಸಿ.ಪಾಟೀಲ ರಂಗೋಲಿ ಚಿತ್ರಕಲೆ (ಪು.ಸಂ) ೧

ಕಲಾ ಜೀವನಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ವಿವರವನ್ನು ತಿಳಿದುಕೊಳ್ಳಬಹುದು. ಈ ಕಲೆಯು ಒಬ್ಬ ವ್ಯಕ್ತಿಯಿಂದ ನಿರ್ಮಾಣಗೊಳ್ಳದೇ ಕುಟುಂಬದ ಎಲ್ಲ ಜನರು ಈ ತೊಗಲು ಗೊಂಬೆಯಾಡಿದ ಕಲೆಯಲ್ಲಿ ಭಾಗವಹಿಸುತ್ತಾರೆ.[೧೧] ತೊಗಲು ಗೊಂಬೆ ಕಲೆಯು ಕುಟುಂಬದ ಐಕ್ಯತೆ, ಸಾಮರಸ್ಯವನ್ನು ಸಾಧಿಸುವ ಮಹತ್ವದ ಕಲಾ ಪ್ರಕಾರ ಇದಾಗಿದೆ. ತೆರೆಯಹಿಂದೆ ಬೆಳಕಿನ ಅದ್ಭುತ ಲೋಕವನ್ನು ಸೃಷ್ಟಿಸಿ, ಗೊಂಬೆ ಚಿತ್ರಗಳ ಮೂಲಕ ಧಾರ್ಮಿಕ, ಸಾಮಾಜಿಕ, ಐತಿಹಾಸಿಕ, ಸಮಕಾಲೀನ ಹೀಗೆ ಅನೇಕ ಕಥಾ ಪ್ರಸಂಗಗಳನ್ನು ನಿರೂಪಿಸಿ, ಅದರಿಂದ ಜನರ ಜೀವನ ವಿಧಾನವನ್ನು ತಿದ್ದುವ ಕೆಲಸವನ್ನು ಈ ತೊಗಲುಗೊಂಬೆ ಮಾಡಿ ಕಲೆ ಮಾಡುತ್ತ ಬಂದಿದೆ.[೧೨]

ತೊಗಲು ಗೊಂಬೆಯಾಟವು ಪ್ರಗೈತಿಹಾಸಿಕ ಕಾಲದಿಂದಲೂ ಇಂದಿನವರೆಗೂ ಉಳಿದುಕೊಂಡು ಬಂದಿದೆ. ವ್ಯಕ್ತಿಯಿಂದ ವ್ಯಕ್ತಿಗೆ, ಕುಟುಂಬದಿಂದ ಕುಟುಂಬಕ್ಕೆ, ಸಮುದಾಯದಿಂದ ಸಮುದಾಯಕ್ಕೆ ಬೇರೆ ಬೇರೆಯಾದ ಪ್ರಾದೇಶಿಕಲೆ ಆ ಪ್ರದೇಶದ ಜನರ ಜೀವನ ವಿಧಿವಿಧನ ಆಚಾರ, ವಿಚಾರ, ಧಾರ್ಮಿಕ ನಂಬಿಕೆಗಳು ತೊಗಲುಗೊಂಬೆ ಚಿತ್ರಗಳ ಮೇಲೆ ಪ್ರಭಾವ ಬೀರಿ ವೈವಿಧ್ಯಮಯವಾಗಿ ರೂಪಗೊಳ್ಳಲು ಕಾರಣವಾಯಿತೆನ್ನಬಹುದು. ಇವುಗಳಿಂದ ರಾಜಕೀಯ ಧಾರ್ಮಿಕ ಸಾಮಾಜಿಕ, ಪೌರಾಣಿಕ, ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಮಹತ್ವವಾದ ಆಧಾರಗಳಾಗಿವೆ.[೧೩] ಅಂಥ ಇತಿಹಾಸವನ್ನು ಹೆಳಿರುವ ತೊಗಲು ಗೊಂಬೆಕಲೆಯ ಗದಗ ಜಿಲ್ಲೆಯಲ್ಲಿ ಇದ್ದು ದಿನದಿಂದ ದಿನಕ್ಕೆ ನಾಶವಾಗಿರುವ ಈ ಕಲೆ ಸಂದರ್ಭನುಸಾರವಾಗಿ ಇವುಗಳ ಅಧ್ಯಯನ ತುಂಬ ಅಧ್ಯಯನವಾಗಿದೆ. ಇದಿಸೇಯಲ್ಲಿ ಗದಗ ಜಿಲ್ಲೆಯಲ್ಲಿ ಕಂಡು ಬರುವ ತೊಂಗಲುಗೊಂಬೆ ಆಟಗಾರರನ್ನು ಗುರುತಿಸಿ ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ವಿರುಪಾಕ್ಷಪ್ಪ ಕ್ಷತ್ರಿ : ಇವರು ಗದಗ ಜಿಲ್ಲೆಯ ಬಿಂಕದಕಟ್ಟಿ ಗ್ರಾಮದವರಾದ ವಿರುಪಾಕ್ಷಪ್ಪ ಕ್ಷತ್ರೀಯವರು ತಂತ್ರಗಾರಿಕೆಯಿಂದ ಗೊಂಬೆಯನ್ನು ತಯಾರಿಸುತ್ತಾರೆ ಹಾಗೂ ಗೊಂಬೆಯ ಪಾತ್ರ ಮತ್ತು ಸನ್ನಿವೇಷಗಳು ಪ್ರೇಕ್ಷಕರಿಗೆ ಸಂತೋಷವನ್ನು ಉಂಟುಮಾಡುವಂತೆ ಮಾಡುತ್ತಾರೆ. ತೊಗಲುಗೊಂಬೆಯಿಂದ ಒಳ್ಳೆಯ ಪ್ರದರ್ಶನವನ್ನು ಜನರಿಗೆ ಕೊಡಬೇಕೆಂಬುದು ಇವರ ಆಶೆಯಾಗಿರುತ್ತದೆ.

ವಿರೂಪಾಕ್ಷಪ್ಪನವರು ತಮ್ಮ ವಂಶಜರು ತಯಾರಿಸಿದ ತೊಗಲುಗೊಂಬೆಗಳು ಇವರಲ್ಲಿವೆ. ಇವುಗಳಿಂದ ಗೊಂಬೆಯಾಟವನ್ನು ಆಧಾರವಾಗಿಟ್ಟುಕೊಂಡು ಬೇರೆ ಆಟಗಳನ್ನು ರಚಿಸಿದ್ದಾರೆ.

ಗೊಂಬೆಯಾಟಗಳು ಇವು ರಾಮಾಯಣ, ಮಹಾಭಾರತಕ್ಕೆ ಸಂಬಂಧಪಟ್ಟ ಸನ್ನಿವೇಶಗಳನ್ನು ಪಾತ್ರಗಳು ತಯಾರಿಸಿದ್ದಾರೆ. ಇವುಗಳನ್ನು ಜಿಂಕೆಯ ಚರ್ಮದಿಂದ ತಯಾರಿಸಿಕೊಂಡಿದ್ದಾರೆ ಹಾಗೂ ಅದರಲ್ಲಿ ಬಣ್ಣಗಳ ಲೇಪನ ನೈಸರ್ಗಿಕ ವಸ್ತುಗಳನ್ನು ಅಂದರೆ ಬಾಗಲಿ ಗಿಡದ ಹಣ್ಣು ಮತ್ತು ತೊಂಡೆ ಗಿಡದ ಹಣ್ಣು ಹಾಗೂ ಕೊಬ್ಬರಿ ಚಿಪ್ಪು ಸುಟ್ಟಿದ ಪುಡಿಯನ್ನು ಉಪಯೋಗಿಸಿಕೊಂಡು ವರ್ಣಗಳನ್ನು

೧೧. ಡಾ. ಶಶಿಕಲಾ ಹೂಗಾರ ಉತ್ತರ ಕರ್ನಾಟಕದ ತೊಗಲು ಗೊಂಬೆ ಕಲೆ (ಪು.ಸಂ) ೨೩೬

೧೨. ಡಾ. ಶಶಿಕಲಾ ಹೂಗಾರ ಉತ್ತರ ಕರ್ನಾಟಕದ ತೊಗಲು ಗೊಂಬೆ ಕಲೆ (ಪು.ಸಂ) ೨೩೬

೧೩. ಡಾ. ಶಶಿಕಲಾ ಹೂಗಾರ ಉತ್ತರ ಕರ್ನಾಟಕದ ತೊಗಲು ಗೊಂಬೆ ಕಲೆ (ಪು.ಸಂ) ೨೩೭

ತಯಾರಿಸಿ ತೊಗಲುಗೊಂಬೆಗಳಿಗೆ ಲೇಪನ ಮಾಡಿದ್ದಾರೆ. ಚರ್ಮ ಹದಮಾಡಿಕೊಂಡ ನಂತರ ರೇಖೆ ರಚನೆ, ಅದರ ಮೇಲೆ ವರ್ಣಗಳಿಂದ ಲೇಪನ ಮಡುತ್ತಾರೆ. ನಂತರ ಪ್ರದರ್ಶನಕ್ಕೆ ಪ್ರವೇಶ ಮಾಡುತ್ತಿದ್ದರು.[೧೪]

ವಿರೂಪಾಕ್ಷಪ್ಪ ಕ್ಷತ್ರೀಯವರು ತಮ್ಮ ವಂಶಜರು ತಯಾರಿಸಿದ ತೊಗಲುಗೊಂಬೆಗಳನ್ನು ಜೋಪಾನವಾಗಿಟ್ಟುಕೊಂಡು ಅವುಗಳನ್ನು ಈಗಲೂ ಉಪಯೋಗಿಸುತ್ತಿದ್ದಾರೆ, ವೈಜ್ಞಾನಿಕತೆ ಬದಲಾದಂತೆ.

ಗೊಂಬೆಯನ್ನು ತಯಾರಿಸಿದ್ದಾರೆ. ಇಂದು ಜಿಂಕೆ ಚರ್ಮದಿಂದ ತಯಾರಿಸುವುದು ಕಾನೂನು ನಿಷೇಧವಿರುವುದರಿಂದ ಜಿಂಕೆ ಜರ್ಮದ ಬದಲಾಗಿ ಆಡಿನ ಚರ್ಮವನ್ನು ತೊಗಲುಗೊಂಬೆಗಳಿಗೆ ಉಪಯೋಗಿಸಿಕೊಳ್ಳಲು ಪ್ರಾರಂಭಿಸಿದರು. ಆಡಿನ ಚರ್ಮವನ್ನು ಹದಮಾಡಿಕೊಂಡು ಬಿಸಿನೀರಿನಲ್ಲಿ ತೊಯಿಸಿ ನಂತರ ಅದರ ಕೊದಲನ್ನು ಚೂಪಾದ ಆಯುಧದಿಂದ ತೆಗೆಯುತ್ತಾರೆ. ನಂತರ ರೇಖಾಚಿತ್ರವನ್ನು ಪೆನ್ಸಿಲಿನಿಂದ ಹಾಕಿಕೋಳ್ಳುತ್ತಾರೆ. ಮುಂದೆ ಸ್ವಲ್ಪ ದಿನಗಳವರೆಗೆ ಹಾಗೆ ಬಿಡುತ್ತಾರೆ. ನಂತರ ನೈಸಗಿಕ ಪರಿಕರಗಳಿಂದ ಆಕೃತಿಗಳಿಗೆ ತಕ್ಕಂತೆ ವರ್ಣಗಳನ್ನು ಲೇಪಿಸುತ್ತಾರೆ. ಈ ವರ್ಣಗಳಷ್ಟೆಯಲ್ಲದೇ ತೆಂಗಿನ ಚಿಪ್ಪನ್ನು ಸುಟ್ಟುಕೊಂಡು ಅದರ ಬೂದಿಯನ್ನು ಎಣ್ಣೆಯಲ್ಲಿ ಸೇರಿಕೊಂಡು ತೊಗಲುಗೊಂಬೆಗಳಿಗೆ ಲೇಪಿಸುತ್ತಾರೆ.

ವಿರೂಪಾಕ್ಷಪ್ಪ ಕ್ಷತ್ರೀಯವರು ತೊಗಲುಗೊಂಬೆಗಳ ಪ್ರದರ್ಶನವನ್ನು ಕೌಶಲ್ಯದಿಂದ ಆಡಿಸುತ್ತಿದ್ದರು. ಇವರು ಹಳ್ಳಿಯಿಂದ ದಿಲ್ಲಿಯವರೆಗೂ ಹಾಗೂ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ತಮ್ಮ ಆಟದ ಪ್ರಕರ್ದಶನವನ್ನು ಮಾಡಿದ್ದಾರೆ, ಸುದ್ದಿಮಾಧ್ಯಮಗಳಾದ ಪತ್ರಿಕೆ ದೂರದರ್ಶನದವರು ಇವರ ಮನೆಗೆ ಬಂದು ತೊಗಲುಗೊಂಬೆಗಳ ಆಟವನ್ನು ವಿಡಿಯೋಚಿತ್ರಿಕರಣವನ್ನು ಮಾಡಿಕೊಂಡಿದ್ದು, ವಿಶೇಷವಾಗಿದೆ. ಅಷ್ಟೆಯಲ್ಲದೆ ವಿರೂಪಾಕ್ಷಪ್ಪನವರು ತಾವೇ ತಯಾರಿಸಿದ ಗೊಂಬೆಗಳ ಸನ್ನವೇಶ ಕಥೆಗಳ ಮಾಹಿತಿಯನ್ನು ತೆಗೆದುಕೊಂಡು ಹೋಗಿರುವುದು ಗಮನಾರ್ಹ, ದೂರದರ್ಶನದಲ್ಲಿ ನಾಗಾಭರಣರವರ ಮಾರ್ಗದರ್ಶನದ ಧಾರಾವಾಹಿ ಪಂಚತಂತ್ರ ಕಾರ್ಯಕ್ರಮವನ್ನು ಟಿ.ವಿಯಲ್ಲಿ ಪ್ರಸಾರವಾಯಿತು. ಇದು ವಿರೂಪಾಕ್ಷಪ್ಪನವರ ತೊಗಲುಗೊಂಬೆಗಳು ಹಾಗೂ ಅವರ ವಂಶಜರು ತಯಾರಿಸಿದ ಗೊಂಬೆಗಳ ಸಹಾಯದಿಂದ ಕಾರ್ಯಕ್ರಮವನ್ನು ನಡೆಸಿದ್ದಾರೆ.

ವಿರೂಪಾಕ್ಷಪ್ಪನವರ ಅನೇಕ ಹಳ್ಳಿಗಳಲ್ಲಿ, ಜಿಲ್ಲಾ ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ಸಾಕಷ್ಟು ಪ್ರದರ್ಶನಗಳನ್ನು ನೀಡಿದ್ದಾರೆ. ಆದರೆ ಈಗಲೂ ಕೂಡ ಹಳ್ಳಿಗಳಿಗೆ ಕಾರ್ಯಕ್ರಮಗಳನ್ನು ಕೊಡುತ್ತಿದ್ದಾರೆ. ತೊಗಲುಗೊಂಬೆಯಲ್ಲಿ ವಿರೂಪಾಕ್ಷಪ್ಪನವರ ತಯಾರಿಸಿದ ತೊಗಲುಗೊಂಬೆಗಳು ರಾಮಾಯಣ, ಮಹಾಭಾರತ ಅಲ್ಲದೆ ತಾವೇ ತಯಾರಿಸಿದ ತೊಗಲುಗೊಂಬೆಗಳಿವೆ. ಉದಾಹರಣೆಗೆ ಕಲಿಯುಗದ ಬ್ರಹ್ಮ, ಸಂಗ್ಯಾ–ಬಾಳ್ಯಾ, ಆರೋಗ್ಯ ಇಲಾಖೆಯ ಯೋಜನೆ, ಚಲನೆಯ ತಂತ್ರವನ್ನು ಹೊಂದಿದ ವಿರೂಪಾಕ್ಷಪ್ಪನವರ ವಂಶದವರು ರಚನೆಯ ಶೈಲಿ ಇದು ಕೈಕಾಲುಗಳನ್ನು ಒಂದಕ್ಕೊಂದು ಜೋಡಿಸಿ ಅವುಗಳನ್ನು ಲೇಪಿಸುತ್ತಾರೆ.[೧೫]

೧೪. ಶ್ರೀ ವಿರೋಪಾಕ್ಷಪ್ಪ ಕ್ಷೇತ್ರಿ ಸಂದರ್ಶನ ದಿನಾಂಕ: ೨೬–೪–೨೦೦೯
೧೫. ಶ್ರೀ ವಿರೋಪಾಕ್ಷಪ್ಪ ಕ್ಷೇತ್ರಿ ಸಂದರ್ಶನ ದಿನಾಂಕ: ೨೮–೪–೨೦೦೯

ವಿರೂಪಾಕ್ಷಪ್ಪ ಹಾಗೂ ಅವರ ತಂದೆ ತಯಾರಿಸಿದ ಗೊಂಬೆಗಳು : ಸಂಗ್ಯಾ-ಬಾಳ್ಯಾ, ಸಾಕ್ಷರತೆ ಕಥೆ, ಆರೋಗ್ಯ ಇಲಾಖೆಯ ಕಾರ್ಯಕ್ರಮಗಳನ್ನು ತೊಗಲುಗೊಂಬೆಯಾಟಕ್ಕೆ ಉಪಯೋಗಿಸುತ್ತಿದ್ದರು. ಈ ಗೊಂಬೆಗಳ ತಯಾರಿಕೆಗೆ ಬೇರೆ ಬೇರೆ ಶೈಲಿಗಳನ್ನು ಬಳಸಿ ಗೊಂಬೆಯ ಚಿತ್ರಗಳನ್ನು ರಚಿಸುತ್ತಾರೆ.

ಈ ತೊಗಲು ಗೊಂಬೆಯ ಚಿತ್ರಗಳನ್ನು ಈ ಕೆಳಗಿನಂತೆ ವಿಂಗಡಿಸಿ ಚರ್ಚಿಸಲಾಗಿದೆ.

೧. ಧಾರ್ಮಿಕ   ೨. ಪೌರಾಣಿಕ

೩. ರಾಜಕೀಯ   ೪. ಸಾಮಾಜಿಕ

ಧಾರ್ಮಿಕ ಚಿತ್ರಗಳು :

ಚಿತ್ರ ೧ : ಶ್ರೀ ಗಣೇಶ : ಈ ಚಿತ್ರವು ತೊಗಲು ಗೊಂಬೆಯಾಟವಾಡುವಾಗ ಗಣೇಶನನ್ನು ಸುತ್ತಿಸೂತ್ತ ಆಟವನ್ನು ಪ್ರಾರಂಭಿಸುತ್ತಾರೆ. ಎಲ್ಲರಲ್ಲಿಯು ಧಾರ್ಮಿಕ ಭಾವನೆ ಬರುವ ಉದ್ದೇಶದಿಂದ ಮತ್ತು ವಿಘ್ನ ವಿನಾಶಕನಾದ ಗಣೇಶನು ಯಾವುದೇ ತೊಂದರೆಯಾಗಬಾರದೆಂಬ ಉದ್ದೇಶದಿಂದ ಈ ಗಣೇಶನ ಚಿತ್ರವನ್ನು ರೂಪಿತವಾದೆ. ಈ ಚಿತ್ರವು ಹಳದಿ ವರ್ಣದಿಂದ ಪೂರ್ಣಗೊಂಡಿದ್ದು ಸುಂದರವಾದ ವಿನ್ಯಾಸದ ಆಭರಣಗಳನ್ನು ಹಾಕಿದ್ದಾರೆ. ಸುಂದರ ನಕ್ಷೆಯನ್ನು ಹೊಂದಿರುವ ಕೀರಿಟ, ಸೊಂಡಿಲನಿಂದ ಹೂವಿನಹಾರ ಹಿಡಿದಿದ್ದಾನೆ, ವೇದಿಕೆಗೆ ಹೂವಿನ ಹಾರರುಕುವುದರೊಂದಿಗೆ ಆಟ ಪ್ರಾರಂಭಿಸುತ್ತಿದ್ದರು. ಅದರಿಂದ ಶ್ರೀ ಗಣೇಶ ಸೊಂಡಿಲಿಗೆ ಹೂವಿನ ಹಾರವಿದೆ ಕೈ, ಕಾಲು ಕೊರಳ ಆಭರಣವನ್ನು ಕಲಾವಿದ ಸೂಕ್ಷ್ಮತೆಯಿಂದ ಸುಂದರವಾಗಿ ರಚನೆ ಮಾಡಿದ್ದಾರೆ. ನಯವಾದ ಕಣ್ಣುಗಳು ಸುಂದರವಾದ ದಂತುಗಳನ್ನು ಪ್ರಾಮಾಣಕ್ಕೆ ತಕ್ಕಂತೆ ಕಲಾಕೃತಿಯನ್ನು ರಚನೆಗೊಂಡಿದೆ.

ಚಿತ್ರ : ೨ : ಭುವನೇಶ್ವರಿ : ಈ ಚಿತ್ರವು ತಾಯಿ ಭುವನೇಶ್ವರಿಯ ಚಿತ್ರವಾಗಿದ್ದು ಸೌಂದರ್ಯತೆಯ ಈ ಚಿತ್ರದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ತೊಗಲು ಗೊಂಬೆಯಾಟದಲ್ಲಿ ಪ್ರಾರಂಭದಲ್ಲಿ ಶ್ರೀ ಗಣೇಶನ ದರ್ಶನ ನೀಡಿದರೆ ಆಟದ ಮುಕ್ತಾಯದಲ್ಲಿ ಮಾತೆ ಭುವನೇಶ್ವರಿಯ ದರ್ಶನ ನೀಡಿ ಆಶಿರ್ವದಿಸಿ ಅಂತಿಮಗೂಳ್ಳುವುದು. ಈ ಕಲಾಕೃತಿಯನ್ನು ಕಲಾವಿದ ಬಹಳ ಸುಂದರವಾಗಿ ರಚಿಸಿದ್ದಾನೆ ತಿಳಿಗೆಂಪು ಮೈಬಣ್ಣವಾಗಿದೆ. ಕೈ, ಕಾಲು, ಕೊರಳ ಆಭರಣವನ್ನು ಸುಂದರವಾಗಿ ರಚಿಸಿದ್ದಾರೆ. ಕಿರಿಟದ ವಿನ್ಯಾಸವು ವಿಶಿಷ್ಟ ರೀತಿಯಿಂದ ರಚಿಸಿದ್ದಾರೆ. ಹಸಿರು ವರ್ಣದ ಮೇಲುವಸ್ತ್ರ (ಬಡವಿ) ಧರಿಸಿದ್ದು ಇದರಲ್ಲಿ ಸೂಕ್ಷ್ಮವಾದ ವಿನ್ಯಾಸವನ್ನು ಕಲಾವಿದ ಚಿತ್ರಿಸಿದ್ದಾನೆ. ಕೆಂಪು ವರ್ಣದ ಸೀರೆಯನ್ನು ಧರಿಸಿದ್ದಾರೆ. ಚಿತ್ರಕ್ಕೆ ತಕ್ಕಂತೆ ಸುಂದರವಾದ ನಕ್ಷೆಗಳಿಂದ ಕಲಾವಿದ ರಚನೆ ಮಾಡಿದ್ದಾನೆ. ನಯವಾದ ನೀರಿಗೆಗಳು ಇದರಲ್ಲಿ ಎದ್ದು ಕಾಣುತ್ತದೆ. ಸುಂದರವಾದ ಕೈ, ಕಾಲು, ಬೆರಳುಗಳನ್ನು ರಚನೆ ಮಾಡಿ ಕಲಾಕೃತಿಯನ್ನು ಸುಂದರಗೊಳ್ಳುವಂತೆ ಮಾಡಿದ್ದಾರೆ. ಈ ತೊಗಲು ಗೊಂಬೆ ಕಲೆಯು ಧಾರ್ಮಿಕ ಚಿತ್ರದಲ್ಲಿ ಭುವನೇಶ್ವರಿಯ ಚಿತ್ರವು ಪ್ರಾಮಾಣಕ್ಕೆ ತಕ್ಕಂತೆ ಸುಂದರವಾದ ಕಲಾಕೃತಿಯು ಇದಾಗಿದೆ. ಸ್ವಾತಂತ್ರ ಸಂಗ್ರಮದ ಚಿತ್ರಗಳನ್ನು ಪ್ರದರ್ಶನ ಮಾಡುವಾಗ ಭಾರತ ಮಾತೆಯ ಚಿತ್ರ ಪ್ರದರ್ಶಣ ಸಾಂಪ್ರದಾಯಿಕವಾಗಿ ಪ್ರದರ್ಶನ ಮಾಡಬೇಕಾಗುತ್ತದೆ.

ಪೌರಾಣಿಕ ಚಿತ್ರಗಳು :

ಚಿತ್ರ : ೧. ಭೀಮ : ಈ ಚಿತ್ರದಲ್ಲಿ ಭೀಮನ ಬಣ್ಣವು ಕೆಂಪು, ನೀಲಿ, ಹಸಿರು ವರ್ಣಗಳಿಂದ ಲೇಪನ ಇವನ ವಾಗಿದೆ ಹಾಗೂ ವಸ್ತ್ರಾಲಂಕಾರವನ್ನು ಈ ಗೊಂಬಯು ಹೊಂದಿದೆ ಭೀಮನು ಬಲಶಾಲಿ. ಇವನ ಗಾತ್ರ ಪ್ರಮಾಣದ ಅನುಗುಣವಾಗಿ ಕಲಾವಿದನು ಚಿತ್ರಿಸಿದ್ದಾನೆ. ಈ ಗೊಂಬೆಯಲ್ಲಿ ಭೀಮ ಬಲಗೈಯಲ್ಲಿ ಸರಪಣಿಯನ್ನು ಛೇದಿಸುವ ದೃಶ್ಯ, ಅವನ ಕಣ್ಣುಗಳು ಶೌರ್ಯದಂತೆ ಹೊಳೆಯುತ್ತವೆ. ಹಾಗೂ ಎರಡು ಕೈತೋಳಿನಲ್ಲಿ ಕೆಂಪುವರ್ಣದ ವಸ್ತ್ರಾಲಂಕಾರ ಧರಿಸಿದ್ದು, ಅವನ ಎರಡು ಕಾಲುಗಳಲ್ಲಿ ವಿನ್ಯಾಸ ಆಭರಣ ಹಾಕಿದ್ದು, ಅವನ ವಸ್ತ್ರದಲ್ಲಿ ಎರಡು ಕೈಯ ಮುಡಿಯಮೇಲೆ ಭಗಘಂಟೆಯ ಆಕಾರ ವಸ್ತ್ರ ಹಾಗು ಅವನ ಎರಡು ವೊಣಕಾಲು ಕೆಳಭಾಗದವರೆಗೂ, ಎರಡು ಪಂಚೆ ವಿನ್ಯಾಸವನ್ನು ಹೊಂದಿದೆ. ಇದು ಶೌರ್ಯದ ಸಂಕೇತಸೂಚನೆ. ಹಾಗೂ ಬಲಶಾಲಿ ಹೊಂದಿದ್ದನು ಎಂಬುದು ಕಲಾವಿದನ ಕಲ್ಪನೆ, ಅವನು ಎರಡು ಕಾಲುಗಳ ಪಾದದಲ್ಲಿ ನೈಸರ್ಗಿಕ ಪರಿಸರ ಹೊಂದಿದ್ದು, ಅದನ್ನು ಕಪ್ಪು ವರ್ಣದಿಂದ ಲೇಪನ ಮಾಡಲಾಗಿದೆ. ಇದು ರಚನಾ ತಂತ್ರಗಾರಿಕೆಯಿಂದ ಭಾವಾಭಿವ್ಯಕ್ತವಾಗಿದೆ ಎಂಬುದು ತೊಗಲುಗೊಂಬೆಯಲ್ಲಿ ಕಾಣಬಹುದು. ಇಲ್ಲಿ ಭೀಮನು ಜಟಾಧಾರಿ, ಸರಪಣಿಯಂತೆ ಮಣಿಯಂತೆ ದೊಡ್ಡ ಆಭರಣಗಳಿಂದ ಭಿಮನ್ನು ಅಲಂಕರಿಸಲಾಗಿದೆ. ಈ ಗೊಂಬೆಯ ಚಿತ್ರದಲ್ಲಿ ಶೌರ್ಯ, ಸಾಹಸದ ಬಗ್ಗೆ ಹೆಮ್ಮೆ ಪಡುತ್ತಿರುವಂತೆ ಗೋಚರವಾಗುತ್ತದೆ. ಮಹಾಕವಿ ಕುಮಾರವ್ಯಾಸ ಕರ್ನಾಟಕ ಭಾರತ ಕಥಾಮಂಜರಿಯನ್ನು ಮಹಾಭಾರತವನ್ನು ಧರ್ಮದೃಷ್ಟಿ ಋಷಿದರ್ಶನದಿಂದ ವರ್ಣಿಸಿದ್ದಾನೆ. ಪಾಂಡವರು ಮತ್ತು ಕೌರವರ ನಡುವಿನ ವೈನಸ್ಸುಗಳ ಸಂಘರ್ಷದಿಂದ ಜೀವನ ಸಿದ್ಧಾಂತವನ್ನು ಪ್ರಕಟವಾಗಿರುವುದು ಮಹಾಭಾರತದಲ್ಲಿ ಪಂಚಪಾಂಡವರು ಕೌರವರೊಡನೆ ಪಗಡೆಯಾಟಕ್ಕೆ ಕುಳಿತಾಗ ಹಂತ ಹಂತವಾಗಿ ಸೋಲುತ್ತಾ ತಮ್ಮ ಸರ್ವಸ್ವವನ್ನು ಕಳೆದ ಮೇಲೆ ಅಂತಿಮವಾಗಿ ದ್ರೌಪದಿಯನ್ನು ಪಣಕ್ಕಿಡುವ ಪ್ರಸಂವೊಂದು ನಡೆಯುತ್ತದೆ. ಮಹಾಭಾರತದ ಸನ್ನಿವೇಶಗಳನ್ನು ನಮ್ಮ ನಡುವಿನ ಜನಪದರಲ್ಲಿಯೇ ವಿಶಿಷ್ಟ ರೂಪದಲ್ಲಿ ತೊಗಲುಗೊಂಬೆಯ ಮೂಲಕ ಮಹಾಭಾರತದಲ್ಲಿ ನಡೆದುಹೋದ ದೃಶ್ಯವನ್ನು ತೊಗಲುಗೊಂಬೆಯಾಟದ ಹಾಗೂ ಅದರಲ್ಲಿ ಚಿತ್ರಗಳ ಮೂಲಕ ಪ್ರದರ್ಶನ ಮಾಡುತ್ತಾರೆ. ಮತ್ತೆ ಈ ದೃಶ್ಯವನ್ನು ವಿರೂಪಾಕ್ಷಪ್ಪ ಕ್ಷತ್ರೀಯವರು ಪಾಂಡವರ ದೃಶ್ಯ ತೊಗಲುಗೊಂಬೆಯಲ್ಲಿ ಚಿತ್ರವನ್ನು ರಚನೆಯನ್ನು ಮಾಡಿ ತೊಗಲುಗೊಂಬೆಯ ಪ್ರದರ್ಶನದಲ್ಲಿ ಕಾಣಬಹುದು.

ಚಿತ್ರ : ೨. ಬಬ್ರುವಾಹನ : ಈ ಚಿತ್ರವು ಮಹಾಭಾರತದಲ್ಲಿ ಪ್ರಮುಖ ಪಾತ್ರಧಾರಿಯಾದ ಅರ್ಜುನನ ಮಗ ಬಬ್ರುವಾಹನ ಚಿತ್ರವಾಗಿದೆ. ಈ ಚಿತ್ರವು ಯುದ್ಧಮಾಡುತ್ತಿರುವ ದೃಶ್ಯವಾಗಿದೆ ಬಹುಶ ಅರ್ಜುನ ಮತ್ತು ಬಬ್ರುವಾಹನ ಇಬ್ಬರು ಯುದ್ಧಮಾಡುವ ಸನ್ನಿವೇಶದ ಚಿತ್ರವಾಗಿದೆ. ಬಬ್ರುವಾಹನನು ಬಾಣು ಬಿಲ್ಲು ಹಿಡಿದು ಯುದ್ಧ ಮಾಡುತ್ತಿರುವ ದೃಶ್ಯವಾಗಿದೆ. ಹೆಗಲಲ್ಲಿ ಬತ್ತಳಿಕೆಗಳನ್ನು ಹಾಕಿದ್ದಾನೆ ಮೈಬಣ್ಣವು ಹಳದಿವರ್ಣದ್ದಾಗಿದ್ದು ಕೆಂಪುವರ್ಣದ ವಸ್ತ್ರವನ್ನು ಧರಿಸಿದ್ದಾನೆ ಸುಂದರವಾದ ನಕ್ಷೆಯುಳ್ಳ ಕೀರಿಟಧರಿಸಿದ್ದಾನೆ. ಈ ಕಲಾಕೃತಿಯನ್ನು ಆಕರ್ಷಕವಾದ ಮತ್ತು ರೊಷದಲ್ಲಿರುವ ಬಬ್ರುವಾಹನನ ಭಾವನೆಯನ್ನು ಕಲಾವಿದ ಅತ್ಯಂತ ಸುಂದರವಾಗಿ ಅಭಿವ್ಯಕ್ತಗೊಳ್ಳಿಸಿದ್ದಾನೆ. ಕೈ ಕಾಲು, ಮೂಗು, ಕಣ್ಣುಗಳನ್ನು ನಯವಾಗಿ ರಚಿಸಿದ್ದಾರೆ. ಬಬ್ರವಾಹನ ಕಾಲ ಕೆಳಗೆ ಸುಂದರ ನಕ್ಷೆಯನ್ನು ಹೊಂದಿರುವ ಕಟ್ಟೆ ಇದೆ. ಈ ಕಲಾಕೃತಿಯು ಪ್ರಮಾಣಬದ್ಧತೆಯಿಂದ ಕುಡಿದೆ.

ಚಿತ್ರ ೪ : ಹನುಮಂತ : ಪೌರಾಣಿಕ ಯುಗದಲ್ಲಿ ಹನುಮಂತನು ಕಥೆಯಾಧಾರಿತ ಸನ್ನಿವೇಶದ ಹನುಮಂತ, ರಚನೆಯ ಮೈಬಣ್ಣವನ್ನು ಹಸಿರು, ಕಪ್ಪು, ಕೆಂಪು ವರ್ಣಗಳನ್ನು ಲೇಪಿಸಲಾಗಿದೆ. ಹನುಮಂತನ ತಲೆಯ ಮೇಲಿನ ಕಿರೀಟ ಕೆಂಪು, ಹಳದಿ, ಕಪ್ಪು ವರ್ಣಗಳಿಂದಾಗಿದೆ. ಹನುಮಂತನ ಮುಖದ ಭಾಗದಲ್ಲಿ ಹಸಿರು, ಕೆಂಪು ವರ್ಣವು ಮೂಗಿನ ಅರ್ಧಭಾಗದಿಂದ ಕೆಳಭಾಗದ ಬಾಯಿ ಕೆಂಪು ವರ್ಣದಾಗಿದೆ. ಅವನ ಹಣೆಯ ಮೇಲೆ ಕುಂಕುಮದ ನಾಮ ಕೆಂಪು ವರ್ಣದಿಂದ ಕೂಡಿದೆ. ಹನುಮಂತನ ಕಿವಿ ಹಾಗೂ ಆಭರಣದ ಅಲಂಕಾರವು ಹಾರದಂತೆ ವಿನ್ಯಾಸ ಕೆಂಪು, ಕಪ್ಪು ವರ್ಣದಿಂದ ಕೂಡಿದೆ. ಎರಡು ಕೈಭುಜ ತೋಳಿನಲ್ಲಿ ವಿನ್ಯಾಸವು ಹೂವಿನ ಕಿರೀಟ ಹಾಕಿದ್ದು, ಅದು ಕೆಂಪು ಹಾಗೂ ಚರ್ಮದಲ್ಲಿ ಚಿತ್ರರಚನೆಯು ಚರ್ಮದಲ್ಲಿ ಬಿಟ್ಟ ಸ್ಥಳವನ್ನು ವಿನ್ಯಾಸಕ್ಕೆ ಬಿಳಿ ಬಣ್ಣವನ್ನು ಬಳಸಲಾಗಿದೆ. ಹನುಮಂತನ ಸೊಂಟದ ಭಾಗದ ವಸ್ತ್ರ ಕೆಂಪು, ಹಳದಿ, ಕಪ್ಪು ವರ್ಣದಾಗಿದೆ.

ಹನುಮಂತನ ಬಲಗೈಯಲ್ಲಿ ಗದೆಯನ್ನು ಹಿಡಿದಿದ್ದಾನೆ. ಅವನ ಎಡಗೈಯ ಹಿಂಭಾಗದಲ್ಲಿ ವೃಕ್ಷವು ಚಾಚಿದೆ. ಹಿಂಭಾಗದ ಬಾಲದ ಕೂದಲು ಕಪ್ಪು ವರ್ಣದಿಂದ ಕೂಡಿದ್ದು, ಗದೆಯ ವರ್ಣವು ಕೆಂಪು, ಹಸಿರು, ವಿನ್ಯಾಸದಿಂದ ಕುಡಿದೆ. ಈ ತೊಗಲುಗೊಂಬೆಯಲ್ಲಿ ಚಿತ್ರರಚನೆ ಹಾಗೂ ವರ್ಣಗಳ ಸಂಯೋಜನೆಯು ನೈಜವಾಗಿರುವಂತೆ ಕಾಣುತ್ತದೆ. ಪೌರಾಣಿಕ ದೃಶ್ಯವು ಕಲ್ಪನೆ ಹನುಮಂತನ ಬಲಶಾಲಿ, ಬುದ್ಧಿವಂತನು ಹಾಗೂ ಶೌರ್ಯಯೋಧನು ಎಂಬುದು ಕಥೆಗಳಲ್ಲಿ ತಿಳಿಯುತ್ತದೆ. ಈ ತೊಗಲುಗೊಂಬೆಯಲ್ಲಿ ಕಲಾವಿದನು ಹನುಮಂತನ ಚಿತ್ರವನ್ನು ಸೊಗಸಾಗಿ ಚಿತ್ರಿಸಿದ್ದಾನೆ.

ಚಿತ್ರ ೪ : ಅರ್ಜುನ (ಪಾರ್ಥ) :ಈ ಗೊಂಬೆಯಲ್ಲಿ ಅರ್ಜುನ ಚಿತ್ರ ಮುಖ ನೈಜತೆಯಂತೆ ಕುಡಿದೆ. ಇದು ಒಂದು ಅಕಾಡೆಮಿಯ ನೆಲೆಯ ವರ್ಣಸಂಯೋಜನೆ, ರಚನಾ ತಂತ್ರಗಾರಿಕೆ, ಭಾವಾಭಿವ್ಯಕ್ತಿಯಲ್ಲಿ ಸಂಪ್ರದಾಯ ಚಿತ್ರಕ್ಕಿಂತ ಭಿನ್ನವಾಗಿರುತ್ತದೆ. ಈ ಚಿತ್ರವು ಭಾವಾಭಿವ್ಯೆಕ್ತಿಯಲ್ಲಿ ಗೆಲ್ಲುವ ಚಿತ್ರ ಧನಸ್ಸನ್ನು ಹಿಡಿದು ಅರ್ಜುನ ದೃಢಕಾಯವೆಂದು ಬಿಂಬಿಸುವಲ್ಲಿ ಕಲಾವಿದ ಯಶಸ್ವಿಯಾಗಿದ್ದಾನೆ. ಪಾರ್ಥನ ತಲೆಯ ಮೇಲೆ ಕಿರೀಟ ಹಾಕಿರುವುದು ಇವನ ಮೈಬಣ್ಣವು ಕೆಂಪುವರ್ಣ ಹೊಂದದ್ದು, ವಸ್ತ್ರವು ಕೆಂಪು, ಹಸಿರು ವರ್ಣಗಳಿಂದ ಕೂಡಿದೆ. ಪಾರ್ಥನೆ ಬಲಗೈಯಲ್ಲಿ ಬಿಲ್ಲು-ಬಾಣವನ್ನು ಹಿಡಿದಿರುವನು ಎರಡು ಕೈತೋಳುಗಳಲ್ಲಿ ಭುಜಗಳಲ್ಲಿ ವಸ್ತ್ರಗಳು ಕೆಂಪು ಮತ್ತು ಬಿಳಿ, ಕಪ್ಪು ವರ್ಣಗಳಿಂದ ಕೊಡಿದ್ದು, ಕೊರಳಲ್ಲಿ ಹೊವಿನಹಾರ ಹಾಕಿಕೊಂಡಿದ್ದಾನೆ. ಹೊಟ್ಟೆಯ ತಳಭಾಗ ವಸ್ತ್ರವಿನ್ಯಾಸ ಹಸಿರು ಬಣ್ಣದ್ದಾಗಿದೆ ಹಾಗೂ ವೊಣಕಾಲು ಸ್ವಲ್ಪ ಭಾಗದವರೆಗೆ ಕಚ್ಚೆಯಾಕಾರದ ವಸ್ತು ಹೊಂದಿದ್ದು, ಎರಡು ಕಾಲ್ತೋಳಗಳಲ್ಲಿ ಬಳೆಯ ವಿನ್ಯಾಸ ಇದು ಬಿಳಿ ಹಾಗೂ ಕಪ್ಪು ವರ್ಣವನ್ನು ಹೊಂದಿದೆ.

ಪಾರ್ಥ ಯುದ್ಧ ಮಾಡಲು ಸಿದ್ಧನಾಗಿದ್ದು ಅವನ ಬೆನ್ನ ಹಿಂದಿನ ಎಡಭಾಗದಲ್ಲಿ ಬಾಣಗಳ ಬತ್ತಳಿಕೆ ಕಂಡುಬರುತ್ತದೆ. ಅವು ಕೂಡ ಕೆಂಪು, ಬಿಳಿ ಹಾಗೂ ಕಪ್ಪು ವರ್ಣಗಳಿಂದ ಕೊಡಿವೆ. ಈ ಗೊಂಬೆಯನ್ನು ಕಲಾವಿದನು ತಂತ್ರಗಾರಿಕೆಯಲ್ಲಿ ಅತ್ಯಂತ ವಿಶಿಷ್ಟ ರೂಪದಲ್ಲಿ ಚಿತ್ರ ರಚನೆಯನ್ನು ಮಾಡಿದ್ದಾರೆ.

ಚಿತ್ರ ೫ : ಕೃಷ್ಣನ ರಾಧೆ ಹಾಗೂ ಸತ್ಯಭಾಮೆ : ಭಾರತೀಯ ಪವಿತ್ರ ಗ್ರಂಥಗಳಾದ ರಾಮಾಯಣ, ಮಹಾಭಾರತಗಳಲ್ಲಿ ದ್ರೌಪದಿ, ಕುಂತಿ, ಸುಭದ್ರೆ, ಸುಮಿತ್ರೆ, ಕೌಶಲ್ಯ, ಕೈಕೇಯಿ, ಸೀತೆ ಇವರುಗಳು ಬಹುಮುಖ್ಯರೆನಿಸಿದ್ದಾರೆ. ವಿರುಪಾಕ್ಷಪ್ಪನವರು ತಮ್ಮ ತೊಗಲುಗೊಂಬೆಯ ಚಿತ್ರಗಳಲ್ಲೂ ಸ್ತ್ರೀ ಪಾತ್ರಧಾರಿಗಳು ರಂಗಪ್ರವೇಶ ಮಾಡಿದ್ದಾರೆ. ಸ್ತ್ರೀ ಪಾತ್ರಧಾರಿ ಚಿತ್ರಗಳಲ್ಲಿ ಪುರುಷ ಚಿತ್ರಗಳಿಗಿಂತ ತುಂಬಾ ಅಲಂಕಾರಿಕವಾಗಿ ತೊಗಲುಗೊಂಬೆಯಲ್ಲಿ ರಚನೆ ಮಾಡಿದ್ದಾರೆ.

ಪದ್ಯರೂಪದಲ್ಲಿ ನಿರೂಪಿಸಲ್ಪಟ್ಟ ಧಾರ್ಮಿಕ ಆಶಯಗಳ, ಪುರಾಣಗಳ, ಕಾವ್ಯಗಳಿದ್ದರೂ ಅವುಗಳಲ್ಲಿ ಪ್ರಮುಖವಾಗಿ ಗೋಚರಿಸುವುದು ಕೃಷ್ಣಪರಮಾತ್ಮನ ಕುರಿತಾದದ್ದು, ಭಾರತದ ಸಂದರ್ಭದಲ್ಲಿ ಒಂದು ಮಹತ್ವ ಕಾವ್ಯ ಅವುಗಳಲ್ಲಿ ರೇಣುಕಾ ಮಹಾತ್ಮೆ, ಶ್ರೀ ಕೃಷ್ಣ ಪಾರಿಜಾತ ಮುಂತಾದವುಗಳು. ಈ ಕಲಾವಿದ ತಮ್ಮ ತೊಗಲುಗೊಂಬೆಯಲ್ಲಿ ಕೃಷ್ಣನ ಕುರಿತಾದ ಕಥೆ ರಂಗಮಂಟಪದಲ್ಲಿ ದೃಶ್ಯದ ಮೂಲಕ ಪ್ರದರ್ಶನಮಾಡಿ ತೋರಿಸಿದ್ದಾನೆ. ರುಕ್ಮಿಣಿ ಮತ್ತು ಸತ್ಯಭಾಮೆಯ ಜೊತೆಗೆ ಕೃಷ್ಣನ ರಚನಾವಿನ್ಯಾಸದಲ್ಲಿ ಈ ಚಿತ್ರವು ಭಿನ್ನವಾಗಿ ನಿಲ್ಲುತ್ತದೆ. ಆದರೆ ಸಂಯೋಜನೆಯಲ್ಲಿ ಒಂದೇ ಬಗೆಯ ರಚನೆಯಾಗಿದೆ. ಕೃಷ್ಣನ ಮೈಬಣ್ಣ ನೀಲಿವರ್ಣದಿಂದ ದೇಹದ ರಚನೆ ಹೊಂದಿದೆ. ಕೃಷ್ಣನ ಬಲಗಡೆ ರುಕ್ಮಿಣಿ ಮತ್ತು ಎಡಭಾಗದಲ್ಲಿ ಸತ್ಯಭಾಮೆಯ ಚಾಮರವನ್ನು ಹಿಡಿದಿರುವ ದೃಶ್ಯ ಕೃಷ್ಣನ ಕುರಿತು ಆರಾಧನೆ ಮಾಡುತ್ತಿರುವುದು ಕಂಡುಬರುತ್ತದೆ. ಕೃಷ್ಣನು ತನ್ನ ಕೊಳಲನ್ನು ಬಾರಿಸುವುದು, ಇಬ್ಬರು ಸ್ತ್ರೀಯರನ್ನು ಸಂತೋಷಗೊಳಿಸುತ್ತಿರು, ಹಿನ್ನಲೆಯಲ್ಲಿ ಮೃದಂಗವನ್ನು ಬಾರಿಸುತ್ತಿರುವುದು. ಬೃಂದಾವನದ ಗಿಡಮರಗಳು ಅಲಂಕಾರಿಕ ವಿನ್ಯಾಸದೊಂದಿಗೆ ಈ ತೊಗಲುಗೊಂಬೆಯ ಚಿತ್ರವಿನ್ಯಾಸ ಹೊಂದಿದೆ.

ಕೃಷ್ಣನ ಪೀಠ ಮತ್ತು ಕೈತೋಳುಗಳ ವಿನ್ಯಾಸ ಹೊಟ್ಟೆಯ ಕೆಳಭಾಗದ ವಸ್ತ್ರಾಲಂಕಾರ ಉತ್ತಮವಾಗಿ ಕಲಾವಿದ ರಚನೆ ಮಾಡಿದ್ದಾನೆ. ಬಲಗಡೆ ರುಕ್ಮಿಣಿ ಅವಳ ವಸ್ತ್ರಾಲಂಕರ, ಕೇಶ ಹಾಗೂ ಕೈಯಲ್ಲಿ ಬಳೆಗಳು, ಕಾಲುಗಳಲ್ಲಿ, ಕೊರಳಲ್ಲಿ, ಕಿವಿಯ ಆಭರಣಗಳನ್ನು ಚಿತ್ರಿಸಿದ್ದಾರೆ. ಇವಳು ಎಡಗೈಯಿಂದ ಕೃಷ್ಣನಿಗೆ ಚಾಮರವನ್ನು ಬೀಸುತ್ತಿರುವಳು. ಇವಳ ಮೈಬಣ್ಣವನ್ನು ಕೆಂಪು ವರ್ಣದಿಂದ ಕಲಾವಿದ ರಚನೆಮಾಡಿದ್ದಾನೆ. ಎಡಭಾಗದಲ್ಲಿ ಸತ್ಯಭಾಮೆಯು ಕೂಡ ಕೃಷ್ಣನಿಗೆ ಚಾಮರ ಸೇವೆಯನ್ನು ಮಾಡುತ್ತಿರುವಳು. ಇವಳ ವಸ್ತ್ರಾಲಂಕಾರವನ್ನು ವಿನ್ಯಾಸದಿಂದ ರಚನೆಮಾಡಿದ್ದಾರೆ. ಅವಳ ಕೈ, ಕಾಲು, ಆಭರಣಗಳ ವಿನ್ಯಾಸದಿಂದ ಕೂಡಿದೆ. ಮೈಬಣ್ಣವು ಕೂಡ ಕೆಂಪು ವರ್ಣದಿಂದ ಕೂಡಿದೆ. ಈ ಗೊಂಬೆಯ ವಿಶೇಷತೆ ನಿಜವಾದ ಕೃಷ್ಣನಿಗೆ ಸೇವೆಯನ್ನು ಮಾಡುತ್ತಿರುವ ಕಲ್ಪನೆಯನ್ನು ಕಲಾವಿದ ಬಿಂಬಿಸಿದ್ದಾನೆ.

ಚಿತ್ರ ೬ : ಸುದಿಷ್ಣೆ : ಈ ತೊಗಲು ಗೊಂಬೆ ಚಿತ್ರವು ಸುಂದರವಾದ ನಕ್ಷೆಗಳಿಂದ ರಚಿತವಾಗಿದೆ. ಕಣ್ಣು, ಮೂಗು, ಕೈ, ಕಾಲು ನಯವಾಗಿದ್ದು ಸುದಿಷ್ಣೆಯು ತೊಟ್ಟಿರುವ ಆಭರಣಗಳು, ಕೇಶ ಅಂಕಾರಗಳನ್ನು ಉತ್ತಮ ರೀತಿಯಲ್ಲಿ ರಚಿತವಾಗಿದೆ. ತೊಟ್ಟಿರುವ ಕೊಪ್ಪಸ, ಉಟ್ಟಿರುವ ಸೀರೆಯು ಜಾಂಬಳಿ ವರ್ಣದಾಗಿದೆ. ಸಂಪ್ರಾದಾಯ ಶೈಲಿಯಲ್ಲಿ ರಜಿತವಾದ ಈ ಚಿತ್ರವು ಪೌರಾಣಿಕ ಸನ್ನಿವೇಶದಲ್ಲಿ ಬರುವ ಪಾತ್ರಕ್ಕೆ ತೊಗಲುಗೊಂಬೆ ಆಟಗಾರ ಬಳಸುತ್ತಿದ್ದ ಚಿತ್ರವಾಗಿದೆ.

ರಾಜಕೀಯ ಚಿತ್ರಗಳು :

ಚಿತ್ರ : ೧. ರಾಜಾ : ಪ್ರೇಮವನ್ನು ವ್ಯಕ್ತಗೊಳಿಸುತ್ತಿರುವ ಅರಸ ಭಾರತದ ಪೌರಾಣಿಕ ಪ್ರಸಂಗಗಳಲ್ಲಿ ಪ್ರೀತಿ, ಪ್ರೇಮವು ಪ್ರಮುಖವಾಗಿ ಗೋಚರಿಸುತ್ತದೆ. ಅದರಲ್ಲೂ ರಾಜ ಮಹಾರಾಜರ ಪ್ರೀತಿ, ಪ್ರೇಮಗಳು, ಪೌರಾಣಿಕ ಪ್ರಸಂಗಗಳ ಚಿತ್ರದಾಗಿದೆ. ದೇಹರಚನೆ ದೈತ್ಯವಾಗಿದ್ದು, ಸರಳರಚನೆಯಲ್ಲಿ ಕಂಡುಬರುತ್ತದೆ. ಅಲಂಕಾರಿಕೆ ಅಂಶಗಳಿದ್ದರೂ ಈ ಗೊಂಬೆಚಿತ್ರದ ತಲೆಯ ಮೇಲೆ ರಾಜವೈಭವದ ಸಂಕೇತವಾದ ಅಲಂಕಾರಿಕ ಛತ್ರಿಯು ಕೊಡ ಚಿತ್ರವಿನ್ಯಾಸದ ಮುಖ್ಯ ಮತ್ತು ಅರಸರ ಪ್ರೇಮವನ್ನು ವ್ಯಕ್ತಪಡಿಸಲು ಕೈಯಲ್ಲಿ ಹೂವನ್ನು ಬಿಡಿಸಲಾಗಿದೆ. ಈ ತೊಗಲುಗೊಂಬೆಯ ಚಿತ್ರಗಳಲ್ಲಿ ಕಂಡುಬರುತ್ತದೆ. ಅರಸನ ತಲೆಯ ಪೇಟವನ್ನು ಹಾಕಿರುವನು. ಅವರ ವಿನ್ಯಾಸ ಕೆಂಪು ನೀಲಿ ವರ್ಣದಿಂದ ಮತ್ತು ಕಪ್ಪು ಹಾಗೂ ಚರ್ಮದಲ್ಲಿ ಹಾಗೆ ಬಿಟ್ಟುಕೊಂಡು ಅದರಲ್ಲಿ ವಿನ್ಯಾಸವನ್ನು ರಚನೆ ಮಾಡಲಾಗಿದೆ. ಅರಸನ ಮುಖದಲ್ಲಿ ಮೀಸೆ, ದಾಡಿ ಮತ್ತು ಅವನ ಕಿವಿಯಲ್ಲಿ ಆಭರಣಗಳನ್ನು, ಕೊರಳಲ್ಲಿ, ಕೈಯಲ್ಲಿ ಹಾಗೂ ಕಾಲುತೋಳುಗಳಲ್ಲಿ ಆಭರಣಗಳಿಂದ ವಿನ್ಯಾಸವನ್ನು ಕೆಂಪು, ನೀಲಿ, ಹಳದಿ ವರ್ಣಗಳನ್ನು ಉಪಯೋಗಿಸಿದ್ದಾನೆ. ಮೈಬಣ್ಣ ಸ್ವಲ್ಪ ಕೆಂಪುವರ್ಣದ್ದಾಗಿದೆ. ಅರಸನ ಬಲಗೈಯಲ್ಲಿ ಒಂದು ಹೂವನ್ನು ಹಿಡಿದಿದ್ದಾನೆ. ಎಡಗೈಯಲ್ಲಿ ಆಯುಧವನ್ನು ಹಿಡಿದಿದ್ದಾನೆ. ಅವನ ಕೊರಳಲ್ಲಿ ಮೂರು ಆಭರಣಗಳು ಇವೆ. ಅದರಲ್ಲಿ ಒಂದು ಪ್ರೇಮದ ಸಂಕೇತದೊಡ್ಡ ಆಭರಣವನ್ನು ಹಾಕಿಕೊಂಡಿದ್ದಾನೆ. ಈ ತೊಗಲುಗೊಂಬೆಯ ಚಿತ್ರವನ್ನು ನೋಡಿದರೆ ಅದು ಅರಸನು ತನ್ನ ಪ್ರೀತಿಯ ಸಂಗಾತಿಗೆ ಕೊಡುವ ಭಾವನೆಯನ್ನು ತಿಳಿಸುತ್ತದೆ. ಭಾರತೀಯ ಪೌರಣಿಕ ಪ್ರಸಂಗಗಳಲ್ಲಿ ಸ್ತ್ರೀಯರ ಪಾತ್ರ ಪ್ರಮುಖವಾದುದು. ಸಾಮ್ರಾಜ್ಯಗಳ ಉದ್ಧಾರಕ್ಕೂ, ಅವನತಿಗೂ ಕಾರಣವಾಗುವ ಸ್ತ್ರೀ ಪಾತ್ರಧಾರಿಗಳು ಬಹುತೇಕ ಪ್ರಾಚೀನ ಮತ್ತು ಆಧುನಿಕ ಕಥೆ, ಇದು ರಾಮಾಯಣ ಮತ್ತು ಮಹಾಭಾರತಗಳಲ್ಲಿ ಸ್ತ್ರೀಯರ ಪಾತ್ರ ಪ್ರಮುಖವೆನಿಸುತ್ತವೆ. ವಿರೂಪಾಕ್ಷಪ್ಪನವರ ತೊಗಲುಗೊಂಬೆಯ ಚಿತ್ರಗಳಲ್ಲಿ ಪುರುಷರಷ್ಟೇ ಸ್ತ್ರೀ ಎಂಬ ಶಬ್ದಕ್ಕೆ ಸೀತಮಿತವಾಗಿದೆ. ಎಂಬ ಕಲ್ಪನೆಯ ನಮ್ಮಲ್ಲಿ ಇದೆ. ಈ ತೊಗಲುಗೊಂಬೆ ಚಲನೆಯ ತಂತ್ರವನ್ನು ಹೊಂದಿದ ಚಿತ್ರಶೈಲಿಯಾಗಿದೆ. ಇದು ಕೈ, ಕಾಲುಗಳನ್ನು ಒಂದಕ್ಕೊಂದು ಜೋಡಿಸಿ ಅವುಗಳನ್ನು ಕಡ್ಡಿಯ ಮೂಲಕ ಚಲಿಸುವಂತೆ ಈ ಚಿತ್ರದಲ್ಲಿ ರೂಪಿಸಿರುತ್ತಾರೆ. ಇಲ್ಲಿ ಮಾನವ ಅಂಗ ರಚನೆಯಾಗಿದ್ದು ಇದು ಪ್ರಾಂತೀಯ ಪ್ರಭಾವವೇ ಕಾರಣವಾಗುತ್ತದೆ. ತೊಗಲುಗೊಂಬೆಯನ್ನು ಅಲಂಕಾರಿಕ ವಿನ್ಯಾಸಕ್ಕೆ ಹೆಚ್ಚಿನ ಅಂಶಗಳು ಕಂಡುಬರುತ್ತವೆ.

ಚಿತ್ರ : ೨. ಕಂಕಬಟ್ಟ : ಯುಧಿಷ್ಠರನು ಅಜ್ಞಾತವಾಸದಲ್ಲಿದ್ದಾಗ ಕಂಕಭಟ್ಟನೆಂಬ ಹೆಸರಿನಿಂದ ಗುರುತಿಸಲ್ಪಡುತ್ತಾನೆ. ವಿರಾಟ ಅರಸನ ಸೇವಕನಾಗಿರುತ್ತಾನೆ. ಈ ಚಿತ್ರದಲ್ಲಿ ಯುಧಿಷ್ಠರನು ಆರೋಗ್ಯವಂತ ದೃಢವಾದ ದೇಹವನ್ನು ಹೊಂದಿರುವುದನ್ನು ಕಲಾವಿದ ತೋರಿದ್ದಾನೆ. ಹೆಚ್ಚಿನ ಅಲಂಕಾರ ಇಲ್ಲಿನ ಚಿತ್ರದಲ್ಲಿ ಇರದಿದ್ದರೂ, ವರ್ಣಗಳ ಸಾಂಗತ್ಯದಿಂದ ಚಿತ್ರ ಗಮನಸೆಳೆಯುತ್ತದೆ. ಅಲಂಕಾರಿಕ ವಿನ್ಯಾಸದಲ್ಲಿ ಗೌಪ್ಯತೆಯನ್ನು ವ್ಯಕ್ತಪಡಿಸಿದ್ದು, ಈ ಸೂಕ್ಷ್ಮಯುತ ಕೌಶಲ್ಯ ಕಂಡುಬರುತ್ತದೆ. ತೊಗಲುಗೊಂಬೆಯಲ್ಲಿ ಕಂಕಭಟ್ಟ ಪಾತ್ರವನ್ನು ತಮ್ಮ ತೊಗಲುಗೊಂಬೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಕಲಾವಿದನು ಕಂಕಭಟ್ಟನ ಭಾವಚಿತ್ರದಲ್ಲಿ ಕೆಂಪು, ಹಸಿರು ಮತ್ತು ಕಪ್ಪು ವರ್ಣಗಳಿಂದ ಚಿತ್ರವನ್ನು ಚಿತ್ರಿಸಿದ್ದಾರೆ. ಕಂಕಭಟ್ಟನ ತಲೆಯ ಮೇಲಿಪೇಟ ಕೆಂಪುವರ್ಣದಿಂದ ಹಾಗೂ ಅವನ ಮೈಬಣ್ಣವು ಕೆಂಪು ವರ್ಣದಿಂದ

ಹಾಗೆಯೇ ಮುಖದಲ್ಲಿ ಮೀಸೆ ಮತ್ತು ಗಡ್ಡ ಭಾಗವನ್ನು ಅತ್ಯಂತ ನೈಜತೆಯಿಂದ ರಚಿಸಿದ್ದಾರೆ. ಅವನ ಬಲಗೈ ಬೆರಳಿನಳ್ಳಿನ ಯಾವುದೊಂದು ಆಯುಧವನ್ನು ಹಿಡಿದುಕೊಂಡು ಅದನ್ನು ವೀಕ್ಷಣೆಯನ್ನು ಮಾಡುತ್ತಿರುವುದು ಕಾಣುತ್ತದೆ. ಅವನ ಎಡಗೈ ಬೆರಳಿನಲ್ಲಿ ಇನ್ನೊಂದು ಆಯುಧವನ್ನು ಹಿಡಿದಿರುವುದು ಕಂಡುಬರುತ್ತದೆ ಮತ್ತು ಅವನ ಕೈತೋಳಗೈ ಎರಡು ವಿನ್ಯಾಸ ಆಭರಣಗಳಿಂದ ಹೊಂದಿದೆ. ಅವನ ಎರಡು ಕಾಲತೋಳದಲ್ಲಿ ಕಪ್ಪು ವರ್ಣದ ವಿನ್ಯಾಸ ರಚನೆಯಾಗಿದೆ. ಅವನು ಕಿವಿಯ ಆಭರಣಗಳಿಂದ ಹಾಕಿರುವುದು ಕಾಣುತ್ತದೆ. ಇವನ ಭಾವನೆ ಯುದ್ಧದ ನಡುವಿನ ಸಮಯದಲ್ಲಿ ಆಗುವ ದೃಶ್ಯ ಕಾಣುತ್ತವೆ ಎಂಬುದು ತಿಳಿಯುತ್ತದೆ. ಕಂಕಣಭಟ್ಟವನ ತಲೆಯ ಮೇಲಿನಪೇಠ ಇದು ಒಂದೇ ಪಟ್ಟಿಯ ಸುತ್ತಲೂ ಅದರ ಹಿಂಬದಿಯಲ್ಲಿ ವಿನ್ಯಾಸ ಕೆಂಪು, ಹಸಿರು ಮತ್ತು ಕಪ್ಪು ವರ್ಣಗಳಿಂದ ಲೇಪನ ಮಾಡಿದ್ದು, ಭಾವಚಿತ್ರವು ರೇಖೆಗಳನ್ನು ಕಪ್ಪು ಬಣ್ಣದಿಂದ ಲೇಪನ ಮಾಡಿದ್ದಾರೆ. ಕಲಾವಿದನು ಬಲಶಾಲಿಯಾದ ಕಂಕಭಟ್ಟನು ಯುದ್ಧ ಮಾಡುವ ಧೈರ್ಯವನ್ನು ಮಾಡುವನು ಎಂಬ ಕಲ್ಪನೆ ಕಲಾವಿದನು ಕಲ್ಪಿಸಿಕೊಂಡಿದ್ದಾನೆ ಎಂಬುದು ತಿಳಿದುಬರುತ್ತದೆ.

ಚಿತ್ರ : ೩. ಸಖಿಯರೊಡನೆ ಮಹಾರಣಿ : ಕಲಾವಿದ ವಿರೂಪಾಕ್ಷಪ್ಪನವರು ತೊಗಲುಗೊಂಬೆಯ ಚಿತ್ರದಲ್ಲಿ ಸಖಿಯರೊಡನೆ ಹಿಂದೆಯಿರುವ ಮಹಾರಾಣಿಗೆ ಹಣ್ಣನ್ನು ಆಸ್ವಾಧಿಸುವ ಆಶೆ. ಮಹಾರಾಣಿಗೆ ತಕ್ಕಂತೆ ವೇಷಭೂಷಣಗಳನ್ನು ಅತ್ಯಂತ ಸುಂದರವಾದ ವಿನ್ಯಾಸದೊಂದಿಗೆ ಚಾಮರವನ್ನು ಮಹಾರಾಣಿಯ ಹಿಂದಿನ ಭಾಗದಲ್ಲಿ ಹಿಡಿದುಕೊಂಡು ಹೋಗುತ್ತಿರುವ ದೃಶ್ಯ ಸಖಿಯ ಅಲಂಕಾರಿಕ ವಿನ್ಯಾಸಗಳು ವಸ್ತ್ರಾಲಂಕಾರಗಳ ಜೊತೆಗೆ ಇರುವ ಸಖಿಯರು ಮಹಾರಾಣಿಯ ಸಂಭ್ರಮಕ್ಕೆ ತಮ್ಮ ಬೆಂಬಲವನ್ನು ನೀಡುವ ಭಾವನೆ ಈ ತೊಗಲುಗೊಂಬೆಯ ಚಿತ್ರದಲ್ಲಿ ರಚನಾಶೈಲಿಯಲ್ಲಿ ಕಲಾವಿದನು ಮಹಾರಾಣಿಗೆ ಶ್ರೀಮಂತ ಮೆರುಗನ್ನು ಕೊಟ್ಟಿದ್ದಾನೆ. ಈ ತೊಗಲುಗೊಂಬೆಯ ರೇಖೆಗಳು ತಮ್ಮ ಪಾಲ್ಗೊಳ್ಳವಿಕೆಯ ವಿನ್ಯಾಸ ತ್ರಿಭುಜಾಕೃತಿ ಅವಳ ಅಂಗರಚನೆ ಒಳ್ಳೆಯದಾಗಿ ಹೊಂದಿಕೊಂಡಿದೆ.

ಮಹಾರಾಣಿ ಮೈಬಣ್ಣವು ಕೆಂಪು ವರ್ಣದಿಂದ ಕೂಡಿದೆ. ಅವಳ ವಸ್ತ್ರ ಹಾಗೂ ತೋಳು ಅಂಗಿಯ ಪಟ್ಟಿ ಪಟ್ಟಿ ರೇಖೆಯು ಕಪ್ಪು ಹಾಗೂ ಕೆಂಪು ಸರಳ ಗೆರೆಯನ್ನು ಎಳೆದ ಹಾಗೆ ವರ್ಣದಿಂದ ರಚನೆ ಮಾಡಿದ್ದಾನೆ. ಮಹಾರಾಣಿಯ ಮೂಗಿನಲ್ಲಿ ಮೂಗುತಿಯ ವಿನ್ಯಾಸ ಮತ್ತು ಕಿವಿಯಲ್ಲಿ ಆಭರಗಣಗಳು ವಿನ್ಯಾಸದಿಂದ ಕೂಡಿದೆ. ಹಾಗೂ ಕೈಬಳೆಗಳನ್ನು ಹಾಕಿಕೊಂಡಿದ್ದಾಳೆ. ಮಹಾರಾಣಿಯ ಎರಡು ಕೈಬೆರಳುಗಳಲ್ಲಿ ಹಾಕಿಕೊಂಡಿದ್ದು ಕಾಣಬಹದು.

ಮಹಾರಾಣಿಯ ಸೇವಕಿಯ ಹಿಂಭಾಗದಲ್ಲಿ ಸೇವೆಯನ್ನು ಮಾಡುತ್ತಿರುವ ದೃಶ್ಯವನ್ನು ಕಾಣಬಹುದು ಅಂದರೆ ತ್ರಿಭುಜವಿನ್ಯಾಸವಿದ್ದು, ಛತ್ರಿಯನ್ನು ಹಿಡಿದುಕೊಂಡಿದ್ದಾಳೆ. ಇವಳ ಮೈಬಣ್ಣವು ಕೆಂಪು ವರ್ಣದಿಂದ ಕೂಡಿದೆ. ಅವಳ ವಸ್ತ್ರವಿನ್ಯಾಸವು ಹಳದಿ ಬಣ್ಣದಿಂದ ಹಾಗೂ ಕೆಂಪು ವರ್ಣದಿಂದ ಲೇಪನ ಮಾಡಲಾಗಿದೆ. ತ್ರಿಭುಜ ವಿನ್ಯಾಸವನ್ನು ಕಪ್ಪು ಮತ್ತು ಕೆಂಪುವರ್ಣದಿಂದ ಲೇಪನಮಾಡಲಾಗಿದೆ. ಛತ್ರಿ ಚಾಮರದ ಕೂದಲಿನ ವರ್ಣಗಾರಿಕೆಯು ಕೆಂಪು, ಹಸಿರು, ಕಪ್ಪು ವರ್ಣಗಳಿಂದ ಲೇಪನಮಾಡಲಾಗಿದೆ. ಸೇವಕಿಯ ಬಲಗೈ ತನ್ನ ಎದೆಯ ಸಮಾನವಾಗಿ ಹಿಡಿದು ಎಡಗೈಯನ್ನು ಸ್ವಲ್ಪ ಕೆಳಗಡೆ ಭಾಗ ದೇಹದವರೆಗೆ ಛತ್ರಿ ಚಾಮರವನ್ನು ಎರಡು ಕೈಗಳಿಂದ ಹಿಡಿದುಕೊಂಡು

ಮಹಾರಾಣಿಯೊಡನೆ ಸೇವೆಮಾಡುತ್ತಿರುವುದು ಚಿತ್ರವಾಗಿದೆ ಅದು ಕಲಾವಿದನ ತಂತ್ರಗಾರಿಕೆ, ಶೈಲಿ ಮಹಾರಾಣಿ ಹಾಗೂ ಸೇವಕಿಯನ್ನು ಗೊಂಬೆಯನ್ನು ಪ್ರೇಕ್ಷಕರು ಪ್ರದರ್ಶನದಲ್ಲಿ ನೋಡಿದರೆ ನಿಜವಾದ ಮಹಾರಾಣಿ ಹೀಗೆ ಇರುತ್ತಿದ್ದರು ಎಂಬ ಕಲ್ಪನೆಯನ್ನು ಪ್ರೇಕ್ಷಕರಿಗೆ ಆರ್ಶ್ಚಯವನ್ನು ಮೂಡಿಸುವ ಕಲ್ಪನೆ ಕಲಾವಿದನ ಆಸೆ ಇತ್ತು ಎಂಬುದು ತಿಳಿದುಬರುತ್ತದೆ.

ಚಿತ್ರ : ೪. ರಾಜಾ ಮತ್ತು ನರ್ತಕಿ : ರಾಜನು ನರ್ತಕಿಯೊಂದಿಗೆ ಅವಳ ಎದುರೂ ಭಾಗದಲ್ಲಿ ನಿಂತಿದ್ದಾನೆ. ರಾಜಾನ ಮೈಯಬಣ್ಣವು ಕೆಂಪು ವರ್ಣದಿಂದ ಕೂಡಿದೆ. ರಾಜನ ಕಿರೀಟ ವಿನ್ಯಾಸದೊಂದಿಗೆ ಇದು ಕೆಂಪು ಹಾಗೂ ಕಪ್ಪು ಮತ್ತು ಹಸಿರು ವರ್ಣದಿಂದ ಲೇಪನವಾಗಿದೆ. ರಾಜಾನ ಮುಖದಲ್ಲಿ ಸಂತೋಷ ವ್ಯಕ್ತವಾಗುವಂತೆ ಅವನ ಭಾವ ವೀಕ್ಷಿಸುವುದನ್ನು ಕಾಣಬಹುದು. ರಾಜಾನ ವಸ್ತ್ರ ಅಲಂಕಾರದೊಂದಿಗೆ ವರ್ಣವು ಹಸಿರು ಹಾಗೂ ಕೆಂಪು, ಕಪ್ಪು ವರ್ಣಗಳನ್ನು ಲೇಪನ ಮಾಡಿದ್ದಾನೆ. ಅವನ ತೋಳಂಗಿಯಲ್ಲಿ ವಿನ್ಯಾಸ ಹಾಗೂ ಕಾಲುಗಳಲ್ಲಿ ರಾಜರ ಪಾದರಕ್ಷೇಯ ಕಪ್ಪು ವರ್ಣದಾಗಿದೆ ಈ ಗೊಂಬೆಯನ್ನು ತಂತ್ರಗಾರಿಕೆಯಿಂದ ಕಲಾವಿದನು ರಚಿಸಿ ಮಾಡಿದ್ದಾನೆ.

ನರ್ತಕಿಯ ಮೈಬಣ್ಣವು ಕೆಂಪು ವರ್ಣದಾಗಿದೆ. ಅವಳ ತಲೆ ಮುಂಭಾಗದ ಹಣೆಯ ಮೇಲೆ ಹಾಗೂ ಕೊರಳಲ್ಲಿ ವಸ್ತ್ರ ಆಭರಣಗಳ ಹಾಗೂ ತಲೆಕೂದಲಿನಲ್ಲಿ ವಸ್ತ್ರಾಲಂಕಾರವು ಮುತ್ತುಗಳ ಸರಮಾಲೆ ಗೋಳಾಕಾರವನ್ನು ಕೆಂಪು ಕಪ್ಪುವರ್ಣಗಳಿಂದ ಚರ್ಮವನ್ನು ಬೆಟ್ಟ ಭಾಗ ಬಿಳಿ ಭಾಗವು ಮುತ್ತಗಳ ಸರ ಮಾಲೆಯಂತೆ ಚಿತ್ರರಚನೆಯಾಗಿದೆ. ಅವಳ ಮುಖದಲ್ಲಿ ನಗು ಭಾವನೆ ತುಂಬಿಕೊಂಡಿದೆ. ಅವಳ ಮೂಗಿನ ಮೂಗುತಿ ಹಾಗೂ ಕಿವಿಯ ಆಭರಣವು ಕೆಂಪು ಹಸಿರು ವರ್ಣದ ಚುಕ್ಕಿಯಂತೆ ರಚನೆಯಾಗಿದೆ. ಅವಳ ಕೊರಳ ಆಭರಣ, ವಸ್ತ್ರಾಲಂಕಾರವಿದೆ. ಇದು ಕೆಂಪು ಹಸಿರು ಹಾಗೂ ಕಪ್ಪು ವರ್ಣಗಳಿಂದ ಚರ್ಮದ ಚಿತ್ರ ರಚನೆಯಲ್ಲಿ ಬಿಟ್ಟ ಭಾಗ ಬಿಳಿಯ ಚುಕ್ಕೆಯ ಆಕಾರದ ವಿನ್ಯಾಸದೊಂದಿಗೆ ಕಂಡುಬರುತ್ತದೆ. ಅವರ ವಸ್ತ್ರ ಕೆಂಪು, ಹಸಿರು ಹಾಗೂ ಕಪ್ಪು ವರ್ಣಗಳಿಂದ ಅವಳ ಎರಡು ಕೈಯಗಳಲ್ಲಿ ಬಳೆಗಳು, ಕಾಲುಗಳಲ್ಲಿ ಆಭರಣಗಳಾದ ಗೆಜ್ಜೆಗಳು ವರ್ಣಗಳಿಂದ ಕೂಡಿವೆ. ಈ ಚಿತ್ರವು ರಾಜನ ಆಸ್ಥಾನದಲ್ಲಿ ಮನರಂಜನೆಗಾಗಿ ಇದ್ದ ನೃತ್ಯಗಾರ್ತಿ ಎಂದು ತಿಳಿದುಬರುತ್ತದೆ.

ವಿರೂಪಾಕ್ಷಪ್ಪನವರ ಮನೆಯವರು ಈ ಪಾತ್ರಗಳನ್ನು ತಮ್ಮ ಕಥೆಗಳಿಗೆ ಉಪಯೋಗಿಸುವ ತೊಗಲುಗೊಂಬೆಯಲ್ಲಿ ಚಿತ್ರರಚನೆ ಮಾಡಿಕೊಂಡು ಪ್ರೇಕ್ಷಕರಿಗೆ ತಿಳಿಸಿಕೊಡುವುದು ಕಲಾವಿದನ ಈ ದೃಶ್ಯ ತೊಗಲುಗೊಂಬೆಯಲ್ಲಿ ತಂತ್ರಗಾರಿಕೆಯನ್ನು ಉಪಯೋಗಿಸಿಕೊಂಡಿದ್ದಾರೆ. ರಾಜ ನರ್ತಕಿ ನೃತ್ಯ ಮಾಡುತ್ತಿರುವುದು ಈ ಚಿತ್ರದಿಂದ ಕಂಡುಬರುತ್ತದೆ.

ಚಿತ್ರ : ೫. ರಾಜ ಮತ್ತು ರಾಜಸೇವಕರು : ಸಮಾಜದ ಹೊರತಾಗಿ ಮನುಷ್ಯನಿಲ್ಲ, ಮನುಷ್ಯನ ಹೊರತಾಗಿ ಸಮಾಜವಿಲ್ಲ. ಒಂದು ಸಮಾಜದ ಆಚರಣೆಗಳು ದೇಶದ ಘನತೆ ಗೌರವಗಳನ್ನು ನಿರ್ಣಯಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇಂದು ಭಾರತದ ಸಾಂಪ್ರದಾಯಿಕ ಆಚರಣೆಗಳು, ಹಬ್ಬ-ಹರಿದಿನಗಳು, ಜಾತ್ರೆ ಸಾಂಸ್ಕೃತಿಕವಾಗಿ ನಮ್ಮ ನಡುವಿನ ಸಾಮಾಜಿಕರಿಂದ ನಿರಂತರವಾಗಿ ನಡೆದುಬಂದಿವೆ. ಇಂತಹ ಆಚರಣೆಗಳಲ್ಲಿ ನಮ್ಮ ಪೌರಾಣಿಕ ಚಿತ್ರಗಳನ್ನು ನಾವು ಇಂದಿಗೂ ಕಾಣಬಹುದಾಗಿದೆ. ಒಂದು ಸಮಾಜದ ವ್ಯವಸ್ಥೆಯಲ್ಲಿ ಸಂಘಟನೆಗಳು ಸಂವಾದಗಳ ಮತ್ತು ಆಚರಣೆಗಳು ಒಂದು ಶಿಸ್ತಿನ ರೂಪದಲ್ಲಿ ನಡೆದು ಬಂದಿರುತ್ತವೆ.

ತೊಗಲುಗೊಂಬೆ ಕಲಾವಿದನು ಇದು ಆಧುನಿಕ ರಚನಾತಂತ್ರದ ಚಿತ್ರಶೈಲಿಯ ಆಶಯವನ್ನು ಹೊತ್ತುಕೊಂಡು ರಚಿಸಲ್ಪಟ್ಟಿವೆ. ಇವು ಸರಳ ರಚನೆಗಳಾಗಿವೆ. ಆದರೆ ಹಿಂದಿನ ತಲೆಮಾರಿನ ಗೊಂಬೆಯ ವರ್ಣಗಳು ಇಬ್ಬರು ಸೇವಕರು ರಾಜನ ಆಜ್ಞೆಯನ್ನು ಒಪ್ಪಿಕೊಂಡು ಇವರಿಬ್ಬರ ಕೈಯಲ್ಲಿ ಆಯುಧಗಳನ್ನು ಹಿಡಿದುಕೊಂಡು ಯುದ್ಧಕ್ಕೆ ಹೋಗುತ್ತಿರುವ ದೃಶ್ಯಗಳಾಗಿವೆ. ಮೈಬಣ್ಣವು ಕೆಂಪು ವರ್ಣದಿಂದ ಲೇಪನವಾಗಿದೆ. ಇವರ ತಲೆಯ ಮೇಲಿನ ಪೇಟ ಬೇರೆ ಬೇರೆ ವರ್ಣಗಳಿಂದ ರಚನೆಯಾಗಿವೆ. ಆ ಪೇಟದಲ್ಲಿ ವಿನ್ಯಾಸದೊಂದಿಗೆ ರಚನೆಯಾಗಿದೆ. ಕೊರಳು ವಸ್ತ್ರ, ಕೈತೋಳು, ಕಾಲುಗಳ ತೋಳು ಆಭರಣದ ವಸ್ತ್ರ ಹಾಗೂ ಒಬ್ಬ ಸೇವಕನ ವಸ್ತ್ರ ಹೊಟ್ಟೆಯ ತಳಭಾಗದ ವಸ್ತ್ರ ಬೇರೆ ಬೇರೆ ವರ್ಣಗಳಿಂದ ಲೇಪನವಾಗಿದೆ. ಇಬ್ಬರು ಸೇವಕರು ಕೆಂಪು ವರ್ಣದಿಂದ ಲೇಪನ, ಮೈಕಾಲು ಮೇಲ್ಭಾಗ ವಸ್ತ್ರಧರಿಸಿದ್ದಾನೆ. ಮತ್ತು ಹೊಟ್ಟೆಯ ಕೆಳಭಾಗ ಇದು ಹಸಿರು ವರ್ಣದಿಂದ ಕೂಡಿದೆ ಮೊಣಕಾಲು ಮೇಲಿನ ಭಾಗದವರೆಗೆ ವಸ್ತ್ರವನ್ನು ಹೊಂದಿದೆ. ಈ ತೊಗಲುಗೊಂಬೆಯು ರಾಜನ ಸೇವಕರು ಎಂಬುದು ಕಂಡುಬರುತ್ತದೆ.

ಸಾಮಾಜಿಕ :

ಚಿತ್ರ : ೧ : ಗಂಗಾ ಮತ್ತು ಬಾಳ್ಯಾ : ಈ ಚಿತ್ರಗಳು ಸಂಗ್ಯಾ, ಬಾಳ್ಯ ನಾಟಕ ಕಥೆಯಲ್ಲಿ ಬರುವ ಪ್ರಮುಖಪಾತ್ರಗಳ ಚಿತ್ರವಾಗಿದೆ. ಗಂಗಾನ ಚಿತ್ರವು ಸಾಂಪ್ರದಾಯಿಕ ಶೈಲಿಯಲ್ಲಿ ರಚಿತವಾಗಿದೆ. ಹಾಕಿಕೊಂಡಿರುವ ಆಭರಣಗಳು, ಕುಪ್ಪಸ ಮತ್ತು ತೊಟ್ಟಿರುವ ಲಂಗವು ಸುಂದರವಾದ ನಕ್ಷೆಯಿಂದ ರಚಿತವಾಗಿದೆ. ಗಂಗಾ ಮೂಗಿಗೆ ಹಾಕಿಕೊಂಡಿರುವ ಮೂಗನತ್ತು ಅತ್ಯಕರ್ಷಕವಾಗಿದೆ. ಕೇಶಾಲಂಕಾರ ಕೈ ಕಾಲು ಆಭರಣವನ್ನು ಕಲಾವಿದ ಕಲಾತ್ಮಕವಾಗಿ ರಚಿಸಿದ್ದಾನೆ ಬಾಳ್ಯಾನಾ ಚಿತ್ರವು ಆಕರ್ಷಕವಾಗಿ ರಚಿತವಾಗಿದೆ. ಕಣ್ಣು ಮೂಗು ಬಾಯಿ, ಕೈ ಕಾಲುಗಳ ಬಣ್ಣ ಆಭರಣವನ್ನು ಸಾಂಪ್ರದಾಯಕ ಶೈಲಿಯಲ್ಲಿ ರಚಿತವಾಗಿದೆ. ತಲೆಗೆ ಸುತ್ತಿಕೊಂಡಿರುವ ಪೇಠ ಉಟ್ಟಿರುವ ವಸ್ತ್ರಾಲಂಕಾರವು ಕೆಂಪು ಬಣ್ಣದಿಂದ ಸುಂದರವಾಗಿ ರಚನೆಗೊಂಡಿದೆ. ಗಂಗಾ ಮತ್ತು ಬಾಳ್ಯಾನ ಪಾತ್ರಕ್ಕೆ ಈ ಗೊಂಬೆಗಳನ್ನು ಬಳಸುತ್ತಿದ್ದರು. ಈ ಎರಡು ಗೊಂಬೆಗಳನ್ನು ಕಲಾವಿದ ಸಾಂಪ್ರದಾಯಕ ಶೈಲಿಯಲ್ಲಿ ರಚನೆಮಾಡಿದ್ದಾನೆ.

ಚಿತ್ರ : ೨. ಹಳ್ಳಿಯ ಪರಿಸರದ ಜನಜೀವನ : ಮಂಗನಿಂದ ಮಾನವನಾದ ಎಂಬುವುದು ಶಿಲಾಯುಗದ ಇತಿಹಾಸದಲ್ಲಿ ತಿಳಿದುಬರುತ್ತದೆ. ಪ್ರಾಣಿಯಾದರು ಆಹಾರ ಬೇಕಾಗುವುದು ಆದಿಯಿಂದ ಮಾನವನಾದ ಆಹಾರ, ವಸ್ತ್ರ, ಕೆಲಸಗಳನ್ನು ಮಾಡುವುದು ಅವನಿಗೆ ವಾಸಿಸುವುದಕ್ಕೆ ಮನೆ, ಊಟ, ಬಟ್ಟೆಗಳನ್ನು ಕಂಡುಕೊಂಡನು, ಮಾನವನ ವೃತ್ತಿ ಒಕ್ಕಲುತನವನ್ನು ಪ್ರಥಮವಾಗಿ ಕಂಡುಕೊಂಡನು. ಇದೇ ವೃತ್ತಿಯನ್ನು ವಂಶಜರು ರೂಢಿಸಿಕೊಂಡು ಬಂದಿರುವುದನ್ನು ಕಾಣಬಹುದು. ಇವತ್ತಿನ ಒಕ್ಕಲುತನದ ವೃತ್ತಿ ಸಂಪ್ರದಾಯವೆಂದು ಹೇಳಬಹುದು.

ಹಳ್ಳಿ ಹಳ್ಳಿಗೆ ಗೊಂಬೆಯಾಟದಲ್ಲಿ ಅಲ್ಲಿಯ ಹಳ್ಳಿಯ ಪರಿಸರವನ್ನು ಹಾಗೂ ರೈತನ ಬಗ್ಗೆ ವಿಷಯವನ್ನು ತೆಗೆದುಕೊಂಡು ತಮ್ಮ ತೊಗಲುಗೊಂಬೆಯಲ್ಲಿ ಚಿತ್ರರಚನೆ, ಮನುಷ್ಯನ ಆಕೃತಿ, ಬಲಶಾಲಿ ದೇಹ ರಚನೆಯ ರೈತನ ಚಿತ್ರವು ಮೈಬಣ್ಣವು ಹಳದಿಯಾಗಿದ್ದು, ಈ ದೃಶ್ಯ ಹೊಲದಿಂದ ಬರುವ ರೈತನಂತೆ ಕಾಣುತ್ತದೆ. ರೈತನ ಹಿಂಭಾಗದಲ್ಲಿ ಒಂದು ದೊಡ್ಡದಾದ ಗೋಣಿ ಚೀಲದ

ತುಂಬ ಧಾನ್ಯಗಳನ್ನು ಹೊತ್ತುಕೊಂಡು ಬರುವುದು, ಗೋಣಿ ಚೀಲದ ತುದಿಯನ್ನು ಬಲಗೈಯಲ್ಲಿ ಹಿಡಿದುಕೊಂಡು ತಲೆಯ ಮೇಲೆ ಹೊತ್ತುಕೊಂಡು ಬರುವುದು, ಅವನ ತಲೆಗೆ ಒಂದು ಕೆಂಪು ವಸ್ತ್ರವನ್ನು ಸುತ್ತಿಕೊಂಡಿರುವುದು ಕಂಡುಬರುತ್ತದೆ. ಅವನ ಮುಖದಲ್ಲಿ ಮೀಸೆ ವ್ಯಕ್ತವಾಗಿ ರಚನೆಯಾಗಿದೆ ಹಾಗೂ ಗಡ್ಡದ ಭಾಗದಲ್ಲಿ ಕೂದಲು ಉದ್ದವಾಗಿ ರಚನೆಯಾಗಿದ್ದು, ಕಪ್ಪು ವರ್ಣದಿಂದ ಕೂಡಿದೆ. ಬಲಗೈಯಲ್ಲಿ ಕೂಡುಗೋಲನ್ನು ಹಿಡಿದಿದ್ದು, ಆತನ ಸೊಂಟದ ವಸ್ತ್ರವು ಕೆಂಪು, ರೈತನ ಎರಡು ಮುಂಗೈಯಲ್ಲಿ ಮತ್ತು ಕಾಲುಗಳಲ್ಲಿ ಕೆಂಪು ವಸ್ತ್ರದ ಪಟ್ಟಿಯಿರುವುದನ್ನು ಕಾಣಬಹುದು. ಈ ದೃಶ್ಯಯದಲ್ಲಿ ಕಲಾವಿದನ ತಂತ್ರಗಾರಿಕೆಯನ್ನು ಕಾಣಬಹುದು.

ಚಿತ್ರ : ೩ : ಬಂಗಾರಕ್ಕ ಮತ್ತು ಸಿಂಗಾರಕ್ಕ : ಈ ತೊಗಲು ಗೊಂಬೆಯು ಜಾನಪದ ಶೈಲಿಯ ಸಾಮಾಜಿಕ ಕಥೆಗಳಲ್ಲಿ ಬರುವ ಹಾಸ್ಯ ಪಾತ್ರದ ಬೊಂಬೆಗಳಾಗಿವೆ. ಜೀವನದಲ್ಲಿ ಸುಖದುಃಖ ಹಾಸ್ಯಗಳು ಇರುವುದು ಸಹಜ ಎಂಬುದನ್ನು ಅರಿತು ತೊಗಲು ಗೊಂಬೆ ಆಟದಲ್ಲಿ ಬರುವ ಪ್ರಮುಖ ಹಾಸ್ಯಪಾತ್ರದ ಗೊಂಬೆಗಳು ಇವು ಸಿಂಗಾರಕ್ಕ ಬಂಗಾರಕ್ಕನ ಚಿತ್ರಗಳಾಗಿವೆ. ಬಂಗಾರಕ್ಕನ ಚಿತ್ರವು ಸಾಂಪ್ರದಾಯಿಕ ಶೈಲಿಯದ್ದಾಗಿದ್ದು ತೊಟ್ಟಿರುವ ಕುಪ್ಪಸ ಕೆಂಪುವರ್ಣದಾಗಿದೆ. ಉಟ್ಟಿರುವ ಸೀರೆಯು ಹಸಿರುವರ್ಣದಾಗಿದೆ. ಸುಂದರವಾದ ಕೇಶಲಂಕಾರ. ಮೂಗುನತ್ತ ಕೈ ಕೊರಳ ಆಭರಣಗಳು ಸುಂದರವಾಗಿ ರಚಿಸಿದ್ದಾನೆ. ಅದೇ ರೀತಿಯಲ್ಲಿ ಸಿಂಗಾರಕ್ಕನ ಚಿತ್ರವು ಉತ್ತಮ ರೀತಿಯದಾಗಿದ್ದು ಇದು ಬಂಗಾರಕ್ಕನ ಚಿತ್ರಕಿಂತ ಚಿಕ್ಕದಾಗಿದೆ. ಕಲಾವಿದ ಚಿತ್ರದ ಮೂಲಕ ದೊಡ್ಡದು ಮತ್ತು ಚಿಕ್ಕವು ಎಂದು ತಿಳಿಯಲು ರಚಿಸಿದ್ದಾನೆ ಸಿಂಗಾರಕ್ಕನ ಕುಪ್ಪಸವು ಹಸಿರು ಮತ್ತು ಸೀರೆಯು ಹಳದಿ ಕೆಂಪು ಮಿಶ್ರೀತವಾಗಿದೆ. ಕೇಶಲಂಕಾರ ಆಭರಣಗಳು ಉತ್ತಮರೀತಿಯಿಂದ ರಚಿಸಿದ್ದಾನೆ.

ಚಿತ್ರ : ೪. ನಂದಿ : ಈ ಚಿತ್ರದಿಂದ ಧರ್ಮಕ್ಕೆ ಜನಾಂಗದ ಪದ್ಧತಿಯ ಆಚರಣೆಳ ಸಂಬಂಧಗಳು ಕಂಡುಬರುತ್ತದೆ. ಈ ತೊಗಲುಗೊಂಬೆಯ ಕಾಮಧೇನು (ನಂದಿ) ಈ ಗೊಂಬೆಯ ಚಿತ್ರ ಬಿಳಿ ಕೆಂಪು ವರ್ಣಗಳಿಂದ ರಚನೆಯಾಗಿವೆ. ಕಾಮಧೇನು ಕೊರಳಲ್ಲಿ ಪಟ್ಟಿಗಳ ವಿನ್ಯಾಸಕ್ಕೆ ಘಂಟೆಗಳ ಸರಪಳಿಯಂತಹ ವಿನ್ಯಾಸಗಳು ಇಲ್ಲಿ ಕಂಡುಬರುತ್ತವೆ. ಕೆಳಭಾಗದಲ್ಲಿ ನೈಸರ್ಗಿಕ ವಿನ್ಯಾಸಗಳು ರಚನೆಗೊಂಡಿದ್ದು, ಕಾಮಧೇನು ಭಂಗಿಯಲ್ಲಿ ಒಂದೇ ಕೆಳಭಾಗದಲ್ಲಿ ನೈಸರ್ಗಿಕ ವಿನ್ಯಾಸಗಳು ರಚನೆಗೊಂಡಿದ್ದು, ಕಾಮಧೇನು ಭಂಗಿಯಲ್ಲಿ ಒಂದೇ ಹೋಲಿಕೆ ಇದೆ.

ಚಿತ್ರ : ೫ ಗೀಳಿ : ಈ ಚಿತ್ರವು ಸಾಮಾಜಿಕ ಕಥೆಯಲ್ಲಿ ಬಳಸಿಕೊಳ್ಳಲು ರಚಿಸಿದ ಚಿತ್ರವಾಗಿದೆ ಪ್ರೇಮ ಪ್ರಸಂಗವನ್ನು ಹೇಳುವಾಗ ಗೀಳಿಯ ಮುಖಾಂತರ ಸಂದೇಶ ಕಳಿಸಲು ಅಥವಾ ಸಾಮಾಜಿಕ ಸನ್ನಿವೇಶಕ್ಕೆ ಬಳಸಿಕೊಳ್ಳಲು ಉಪಯೋಗಿಸುತ್ತಿದ್ದರು. ಗಿಡದ ಟೊಂಗೆಯ ಮೇಲೆ ಕುಳಿತು ಕೊಂಡಿರುವಂತೆ ಸುಂದರವಾಗಿ ಗೀಳಿ ಹಸಿರು ಬಣ್ಣ ಮಧ್ಯದಲ್ಲಿ ಹಳದಿ ವರ್ಣಗಳನ್ನು ಬಳಸಿಕೊಂಡು ಸುಂದರವಾದ ಚಿತ್ರವನ್ನು ಕಲಾವಿದ ರಚಿಸಿದ್ದಾನೆ.

ಚಿತ್ರ : ೬ : ಜಿಂಕೆ : ಈ ಚಿತ್ರವು ಪೌರಾಣಿಕ ಮತ್ತು ಸಾಮಾಜಿಕ ಸನ್ನಿವೇಶದಲ್ಲಿ ಬಳಸಲು ಉಪಯೋಗಿಸುವ ಚಿತ್ರವಾಗಿದೆ. ರಾಮಾಯಣದಲ್ಲಿ ಸೀತೆಗೆ ಬೇಕಾದ ಜಿಂಕೆಯ ಸನ್ನಿವೇಶಕ್ಕೆ ಸಾಮಾಜಿಕ ಕಥೆಗಳಲ್ಲಿ ಬರುವ ಸನ್ನಿವೇಶಕ್ಕೆ ಈ ಜಿಂಕೆಯ ಚಿತ್ರ ಉಪಯೋಗಿಸುತ್ತಿದ್ದರು. ಈ ಚಿತ್ರವು ನೈಜ

ರೀತಿಯಲ್ಲಿ ಚಿತ್ರಿತವಾಗಿದ್ದು ಹಳದಿವರ್ಣದಿಂದ ಪ್ರಮಾಣಕ್ಕೆ ತಕ್ಕಂತೆ ರಚನೆ ಮಾಡಿದ್ದಾರೆ. ತೊಗಲು ಗೊಂಬೆಯಾಟದಲ್ಲಿ ಬಳಸಿಕೊಳ್ಳುವ ಚಿತ್ರವಾಗಿದೆ.

ಚಿತ್ರ : ೭. ಜಾಹಿರಾತಿಗಾಗಿ ನೂತನ ವಿನ್ಯಾಸದ ಗೊಂಬೆ : ಈ ತೊಗಲುಗೊಂಬೆಯ ಇತ್ತೀಚಿನ ದಿನಗಳಲ್ಲಿ ನಿರ್ಮಿಸಿದ ಗೊಂಬೆ, ಚಿತ್ರರಚನೆಯ ಸೃಜನಶೀಲ ಸಂಯೋಜನೆ ವಿಶೇಷವೆನ್ನಬಹುದು ಈ ಗೊಂಬೆ ದ್ವಿಚಕ್ರ ವಾಹನದಲ್ಲಿ ಒಬ್ಬ ಪುರುಷ ದ್ವಿಚಕ್ರ ವಾಹವನ್ನು ಚಲಿಸುವಂತೆ ಮನುಷ್ಯನ ಕೊರಳ ಕೆಳಭಾಗವು ಮನುಷ್ಯನಿದ್ದು, ಅವನ ಹಿಂಭಾಗದಲ್ಲಿ ಸ್ತ್ರೀ ಕೂಡ, ಕೊರಳಿನ ಕೆಳಭಾಗ ಸ್ತ್ರೀಯು ವಸ್ತ್ರವನ್ನು ಧರಿಸಿಕೊಂಡು ದ್ವಿಚಕ್ರವಾಹನದ ಹಿಂಬದಿಯಲ್ಲಿ ಕುಳಿತಿರುವಳು, ಆದರೆ ಪುರುಷ ಹಾಗೂ ಸ್ತ್ರೀ ಮುಖ ಭಾಗವು ಇಲಿಯ ರೂಪದ ಮುಖವನ್ನು ಹಾಗೂ ಬಾಲಪುರುಷ ಹಾಗೂ ಸ್ತ್ರೀ ಚಿತ್ರರಚನೆಯನ್ನು ಕಲಾವಿದ ಮಾಡಿದ್ದಾನೆ.

ದ್ವಿಚಕ್ರವನ್ನು ಪುರುಷನು ಚಲಿಸುವನು ಇವನ ಮುಖವು ಇಲಿಯ ಮುಖವನ್ನು ಹೊಂದಿದ್ದು, ಇದು ನೀಲಿ ಹಾಗೂ ಕೆಂಪು, ಕಪ್ಪು ವರ್ಣಗಳಿಂದ ರಚಿತವಾಗಿ. ಪುರುಷನ ಕೊರಳಿನ ಕೆಳಭಾಗವು ಮನುಷ್ಯನ ದೇಹ, ಕೈ, ಕಾಲುಗಳು ಇವೆ. ಪುರುಷನ ಧರಿಸಿದ ಅಂಗಿಯು ಹಳದಿ ವರ್ಣ, ಅವನ ಕೈಬಣ್ಣವು ಕಪ್ಪು, ಕೈ ತೋಳುಗಳಲ್ಲಿ ವಸ್ತ್ರವು ಕೆಂಪು ವರ್ಣದಿಂದ ಲೇಪನವಾಗಿದೆ. ಅವನ ಕೊರಳಲ್ಲಿ ಟೈ, ಸೊಂಟಕ್ಕೆ ಬೆಲ್ಟ್ ಕಪ್ಪು ವರ್ಣದಿಂದ ಕೂಡಿದೆ. ಆತನ ಪ್ಯಾಂಟ್ ನೀಲಿ ವರ್ಣದಿದ್ದು, ಕಾಲುಗಳಲ್ಲಿ ಕಪ್ಪು ಬೂಟುಗಳನ್ನು ಧರಿಸಿದ್ದಾನೆ.

ಮನುಷ್ಯನ ದೆಹಕ್ಕೆ ಇಲಿಯ ಮುಖವಿದ್ದು, ಕಣ್ಣಿಗೆ ಕಣ್ಣಡಕ ಧರಿಸಿದ್ದು, ಹಿಂಭಾಗದಲ್ಲಿ ಸ್ತ್ರೀಯ ಮುಖವು ಇಲಿಯ ಆಕಾರವಿದ್ದು, ಈಕೆಯು ಕಿವಿಗೆ, ಕೊರಳಲ್ಲಿ ಕೈಯಲ್ಲಿ ಬಳೆಗಳು, ತಲೆಯಲ್ಲಿ ಹೂವಿನ ಅಲಂಕಾರವಿದೆ. ಈಕೆಯು ವಿನೂತನ ಬಟ್ಟೆಯನ್ನು ಧರಿಸಿದ್ದು, ಅದು ಹಳದಿ ವರ್ಣದಿಂದ ಲೇಫನವಾಗಿದೆ ಇವಳ ತೋಳಂಗಿಂಯು ಕೆಂಪು ವರ್ಣದಿಂದ ರಚಿಸಲಾಗಿದೆ. ಕಾಲು, ಕೈಗಳು ಕಪ್ಪು ವರ್ಣದಾಗಿದೆ. ಇವಳು ಕೂಡಾ ಬೂಟನ್ನು ಧರಿಸಿದ್ದು, ಈ ಶೈಲಿಯು ವಿನೂತನವೆಂದು ಹೇಳಬಹುದು. ದ್ವಿಚಕ್ರ ವಾಹನದ ಬಣ್ಣವು ಹಳದಿ, ಕೆಂಪು, ಕಪ್ಪು, ಬಣ್ಣಗಳಿಂದ ಮಿಶ್ರಿತಗೊಂಡಿದೆ.

ಈ ತೊಗಲುಗೊಂಬೆಯ ಚಿತ್ರರಚನೆ ದ್ವಿಚಕ್ರವನ್ನು ಚಲಿಸುವ ಪುರುಷ ಹಾಗೂ ಸ್ತ್ರೀಯು ಇಂದಿನ ಜನರ ಜೀವನದ ಬದುಕು ಇಲ್ಲಿಯ ಹಾಗೆ ಸುತ್ತಾಡುವ ಜೀವನ ಎಂಬುವುದು ಜನರಲ್ಲಿ ಕಲ್ಪನೆ ಮೂಡಿಸಲು ವಿರೂಪಾಕ್ಷಪ್ಪನವರು ತನ್ನ ಮನಸ್ಸಿನ ಭಾವನೆಯನ್ನು ಈ ತೊಗಲುಗೊಂಬೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಸೂತ್ರದ ಗೊಂಬೆ ಚಿತ್ರಕಲೆ ಕಲ್ಲೂರು :

ಪ್ರಾಚೀನ ಇತಿಹಾಸವನ್ನು ನೋಡಿದಾಗ ಮನರಂಜನೆಗಾಗಿ ಅನೇಕ ಜಾನಪದಿಯ ವಾಸ್ತು ವಿಷಯಗಳನ್ನು ತೆಗೆದುಕೊಂಡು ನಮ್ಮ ಪೂರ್ವಜರು ಹೇಳಿದ ಕೇಳಿದ್ದು ತಿಳಿದು ಬರುತ್ತದೆ. ಅನೇಕ ಪೌರಾಣಿಕ, ಧಾರ್ಮಿಕ, ಸಾಮಾಜಿಕ ಕಥೆಗಳನ್ನು ಹೇಳುವುದರ ಮೂಲಕ ತಮ್ಮ ಸುಖಮಯವಾದ ಜೀವನನನ್ನು ಸಾಗಿಸುತ್ತಿದ್ದರು. ಇಂಥ ಸಂದರ್ಭದಲ್ಲಿ ಸೂತ್ರದಗೊಂಬೆಗಳು ಹುಟ್ಟಿಕೊಂಡು ಜನರಿಗೆ

ಮನರಂಜನೆಯನ್ನು ನಿಡುವುದರ ಮೂಲಕ ಪ್ರಚಲಿತಕ್ಕೆ ಬಂದಿರುವುದು ಸೂತ್ರದ ಗೊಂಬೆ, ಹಿಂದೆ ನಡೆದ ಗತಕಾಲದ ವೈಭವ ರಾಮಾಯಣ, ಮಹಾಭಾರತ, ಧಾರ್ಮಿಕ, ಮತ್ತು ಸಾಮಾಜಿಕ ಕಥೆಗಳ ಮೂಲಕ ದೃಶ್ಯಾತ್ಮಕ ರೂಪದಲ್ಲಿ ಬೆಳಕಿಗೆ ಬಂದಿದ್ದು ಸೂತ್ರದ ಗೊಂಬೆ ಕಲೆ.

ಇಂಥ ಒಂದು ಸಾಂಸ್ಕೃತಿಕ ವಿಷಯದ ಹಿನ್ನಲೆಯನ್ನು ಹೊಂದಿರುವ ಸೂತ್ರದ ಗೊಂಬೆ ಚಿತ್ರಕಲೆಯು ರಾಜ್ಯದ ಅನೇಕ ಕಡೆಸಿಗುತ್ತವೆ. ಗದಗ ಜಿಲ್ಲೆಯನ್ನು ನೋಡಿದಾಗ ಕಲ್ಲೂರ ಗ್ರಾಮದಲ್ಲಿ ಇವೆ. ಸುಮಾರು ೬೦, ೭೦ ವರ್ಷಗಳ ಹಿಂದೆ ಈ ಸೂತ್ರದ ಗೊಂಬೆ ಆಟವು ಬಹಳಷ್ಟು ಪ್ರಚಲಿತದಲ್ಲಿ ಇರುವುದು ಕಂಡು ಬಂದಿದೆ. ಕಲ್ಲೂರಗ್ರಾಮದಲ್ಲಿ ರೆಡ್ಡರ ಓಣಿಯಿಂದ ಸೂತ್ರದ ಗೊಂಬೆ ಆಟವನ್ನು ಆಡಿಸುತ್ತಿದ್ದರಂತೆ, ಶ್ರೀನಿಂಗಪ್ಪ ಕತ್ತಿ ಇವರು ಸೂತ್ರದ ಗೊಂಬೆ ಕಲೆಯ ಕಥೆಗಾರರು ಅನೇಕ ಕಥೆಗಳನ್ನು ರಚಿಸುತ್ತಿದ್ದರು. ಇವರಿಗೆ ಮಕ್ಕಳ ಇರಲಿಲ್ಲ ಸೂತ್ರದ ಗೊಂಬೆಯ ಆಟನೆ ಇವರಿಗೆ ಜೀವಾಳವಾಗಿತ್ತು. ರಾಮಾಯಣ, ಮಹಾಭಾರತ, ಅನೇಕ ಧಾರ್ಮಿಕ ಸಾಮಾಜಿಕ ಕಥೆಗಳನ್ನು ಬರೆದು ರಾಜ್ಯದ ಹಲವಾರು ಕಡೆಗಳಿಗೆ ಸೂತ್ರದ ಗೊಂಬೆ ಕಲೆಯನ್ನು ಪ್ರದರ್ಶಿಸಿ ಜನಮೆಚ್ಚುಗೆಯನ್ನು ಪಡೆದುಕೊಂಡಿದವರಾಗಿದ್ದಾರೆ.

ಕಲ್ಲೂರ ಗ್ರಾಮದಲ್ಲಿ ಸೂತ್ರದ ಗೊಂಬೆಯಾಟವನ್ನು ಆಡಿಸೂವ ಇನ್ನೊಂದು ತಂಡ ವಿತ್ತು, ಶ್ರೀಮಲ್ಲಿಕಾರ್ಜುನ ಸಂಘ, ಈ ಸಂಘದಲ್ಲಿ ನಾಗಪ್ಪ, ಶಿವರುದ್ರಯ್ಯ, ಶಿಲ್ಪ ಬಸಲಿಂಗಪ್ಪ ಸಂಶಿ ಮುಂತಾದನರು ಸೂತ್ರದ ಗೊಂಬೆಯಾಟವನ್ನು ಆಡಿಸುತ್ತಿದ್ದರು. ಇವರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಪ್ರದರ್ಶಿಸಿದ್ದಾರೆ. ಆದರೆ ಈ ಸಂಘದ ಎಲ್ಲ ಸೂತ್ರಗೊಂಬೆಗಳು ನಾಶವಾಗಿವೆ. ಎಂದು ಶ್ರೀ ಶಿವಪ್ಪ ಸೂರಪ್ಪ ಬೆಳಟ್ಟಿಯವರ ಸಂದರ್ಶನದಿಂದ ತಿಳಿದು ಬರುತ್ತದೆ.[೧೬]

ಕಲ್ಲೂರ ಗ್ರಾಮದ ರಡ್ಡೆರ ಓಣಿಯಿಂದ ಸೂತ್ರಗೊಂಬೆ ಆಟವನ್ನು ಆಡಿಸುವವರು ಈ ಕೆಳಗಿನಂತಿದ್ದಾರೆ.

ಶ್ರೀ ನಿಂಗಪ್ಪ ಕತ್ತಿ, ಶ್ರೀ ನಿಂಗಪ್ಪ ಬಂಗಾರಿ, ಶ್ರೀ ಚೆನ್ನಪ್ಪ ಸಂಗಪ್ಪಾ ಶೆಟ್ಟರ, ಶ್ರೀ ಸೊಮಪ್ಪ ಹೊಸಮನಿ, ಶ್ರೀ ಯಲ್ಲಪ್ಪ ಡಬರಿ, ಶ್ರೀ ನಬಿಸಾಬ ನಧಾಪ, ಶ್ರೀ ಯಲ್ಲಪ್ಪ ರಾಮರಡ್ಡಿ, ಶ್ರೀ ಸಿದ್ಧರಾಮಪ್ಪ ಕಮ್ಮಾರ, ಶ್ರೀ ಬಸಪ್ಪ ಸೊಮಪ್ಪ ಹಿರೆತಮ್ಮಣ್ಣವರ.

ಇವರೆಲ್ಲರು ಸೇರಿ ಕಲ್ಲೂರ ಗ್ರಾಮದಲ್ಲಿ ರಡ್ಡೆದ ಓಣಿಯಿಂದ ಸಂಘ ಕಟ್ಟಿಕೊಂಡು ಜಾನಪದಯ ಕಲೆಯಾದ ಸೂತ್ರದ ಗೊಂಬೆ ಕಲೆಯ ಆಟವನ್ನು ಆಡಿಸುತ್ತಾ ಬೆಳೆಸಿ ಉಳಿಸಿದವರು. ಈ ಸೂತ್ರಗೊಂಬೆ ಕಲೆಯ ನಂತರದಲ್ಲಿ ಚಲನ ಚಿತ್ರಗಳು ಬೆಳಕಿಗೆ ಬಂದವು ಎಂದು ನಮಗೆ ಅನೇಕ ಉಲ್ಲೇಖಗಳಲ್ಲಿ ದೊರೆಯುತ್ತವೆ.

ಶ್ರೀ ನಿಂಗಪ್ಪ ಕತ್ತಿಯವರು ಸೂತ್ರಗೊಂಬೆಯ ಕಥೆಗಾರರು ಶ್ರೀ ನಿಂಗಪ್ಪ ಬಂಗಾರಿಯವರು ರಾಮನ ಗೊಂಬೆಯನ್ನು ಆಡಿಸುತ್ತಿದ್ದರು. ಶ್ರೀ ಚೆನ್ನಪ್ಪ ಸಂಗಪ್ಪ ಶೆಟ್ಟರರವರು ಲವ-ಕುಶರ ಗೊಂಬೆಗಳನ್ನು ಆಡಿಸುತ್ತಿದ್ದರು. ಶ್ರೀ ಸೊಮಪ್ಪ ಹೊಸಮನಿಯವರು ಸೀತೆಯ ಮತ್ತು ಹೆಣ್ಣು ಗೊಂಬೆಯನ್ನು

---

೧೬. ಶ್ರೀ ಶಿವಪ್ಪ ನೊರಪ್ಪ ಬ್ಯಾಹಟ್ಟಿ ಸಂದರ್ಶನ ದಿನಾಂಕ: ೨೩-೫-೨೦೦೯

ಆಡಿಸುತ್ತಿದ್ದರು. ಶ್ರೀ ಯಲ್ಲಪ್ಪ ಡಬರಿಯವರು ಹನುಮನಾಯಕನ ಗೊಂಬೆಯನ್ನು ಆಡಿಸುತ್ತಿದ್ದರು. ಶ್ರೀ ನಬಿಸಾಬ ನದಾಪನವರು ರಾಕ್ಷಸನ ಗೊಂಬೆಯನ್ನು ಆಡಿಸುತ್ತಿದ್ದರು. ಶ್ರೀ ಯಲ್ಲಪ್ಪ ರಾಮರಡ್ಡಿಯವರು ಅಶ್ವಮೇಧ ಗೊಂಬೆಯನ್ನು ಆಡಿಸುತ್ತಿದ್ದರು. ಶ್ರೀ ಸಿದ್ಧರಾಮಪ್ಪ ಕಮ್ಮಾರರವರು ಮದ್ದಿಲಬಡೆಯುತ್ತಿದ್ದರು. ಶ್ರೀ ಬಸಪ್ಪ ಸೊಮಪ್ಪ ಹಿರೆತಮ್ಮಣ್ಣವರ ಇವರು ಸಹಾಯಕರಾಗಿ ತೋಗಲು ಗೊಂಬೆ ಆಟಕ್ಕಾಗಿ ಪ್ರೋತ್ಸಾಹ ನೀಡಿದವರಾಗಿದ್ದರು. ಶ್ರೀ ಸೋಮಪ್ಪ ಹೊಸಮನಿಯವರು ಎಲ್ಲ ಬೊಂಬೆಗಳಿಗೆ ತಮ್ಮ ಪ್ರಾಣಕ್ಕಿಂತ ಹೆಚ್ಚು ನೊಡಿಕೊಳ್ಳುತ್ತಿದ್ದರು. ಅವುಗಳಿಗೆ ಬಡಿಗೆ ಉಡಿಗೆ ತೊಡಿಗೆಗಳನ್ನು ಧರಿಸುತ್ತಿದ್ದರು ಬಹಳಷ್ಟು ಕಾಳಜಿವಹಿಸಿ ಜೋಪಾನವಾಗಿ ಇರುತ್ತಿದ್ದರು. ಎಂದು ಕಲ್ಲೂರ ಗ್ರಾಮದ ಹಿರಿಯರಾದ ಶ್ರೀ ಯಲ್ಲಪ್ಪ ಗೋವಿಂದಪ್ಪ ನಾಗರಡ್ಡಿಯವರಿಂದ ತಿಳಿದು ಕೊಳ್ಳಲಾಯಿತು.[೧೭]

ಸುಮಾರು ೧೦೦, ೧೫೦, ವರ್ಷಗಳ ಹಿಂದೆ ರಚಿತಗೊಂಡು ರಾಜ್ಯದ ನಾನಾಭಾಗಗಳಿಗೆ ಹೊಗಿ ಪ್ರದರ್ಶನ ಗೊಂಡಿರುವ ಈ ಸೂತ್ರದ ಗೊಂಬೆ ಕಲೆಯನ್ನು ಬಹಳಷ್ಟು ಜೊಪಾನವಾಗಿ ಇಲ್ಲಿಯವರೆಗೆ ಸಂರಕ್ಷಣೆಯನ್ನು ಮಾಡಿಕೊಂಡು ಬಂದಿದವರೆಂದರೆ ಶ್ರೀ ಫಕಿರಪ್ಪ ಬಸಪ್ಪ ಬಂಗಾರಿಯವರು ಮತ್ತು ಯಲ್ಲಪ್ಪ ಬಸಪ್ಪ ಬಂಗಾರಿಯವರು ನಮ್ಮ ನಾಡಿನ ಜಾನಪದಿಯ ಸಂಸ್ಕೃತಿಯನ್ನು ಎತ್ತಿತೊರಿಸುವ ಈ ಸೂತ್ರಗೊಂಬೆ ಕಲಯು ನಸಿಸುವ ಅಂಚಿನಲ್ಲಿವೆ ಅವುಗಳನ್ನು ಸರಕಾರ ಸಂಘ ಸಂಸ್ಥೆಗಳು ಸಂರಕ್ಷಣೆ ಮಾಡುವುದು ಬಹಳ ಅವಶ್ಯಕವಾಗಿದೆ.[೧೮] ಎಂದು ಯಲ್ಲಪ್ಪ ಬಸಪ್ಪ ಬಂಗಾರಿಯವರು ಅಭಿಪ್ರಾಯಪಡುತ್ತಾರೆ ಗದಗ ಜಿಲ್ಲೆಯ ಜಾನಪದ ಲೋಕಕ್ಕೆ ಉತ್ತಮಕೊಡುಗೆ ನಿಡುವ ಸುಮಾರು ೫೦,೬೦ ವರ್ಷಗಳ ಹಿಂದೆ ಕಲಾ ಸಂಸ್ಕೃತಿಕ ಸಂತೋಷವನ್ನು ನೀಡಿ ಒಂದು ಸಣ್ಣ ಮನೆಯಲ್ಲಿ ಕಟ್ಟಿಗೆ ಸಂದಕದಲ್ಲಿ ಮಲಗಿರುವ ಈ ತೊಗಲು ಗೊಂಬೆ ಕಲೆಯನ್ನು ಸಾರ್ವಜನಿಕರಿಗೆ ಪ್ರದರ್ಶನಮಾಡುವುದರಿಂದ ಸಂಗ್ರಾಹಾಲಯದಲ್ಲಿ ಇಡುವುದು ಅವಶ್ಯವಾಗಿದೆ. ಈ ಕುರಿತು ನನಗೆ ಸಿಕ್ಕ ಮಾಹಿತಿಗಳಂತೆ ಇವುಗಳನ್ನು ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸುವ ಪ್ರಯತ್ನ ಮಾಡಿದ್ದೆನೆ.

ಸೂತ್ರಗೊಂಬೆಗಳ ಕುರಿತು ಈ ಕೆಳಗಿನಂತೆ ವಿಂಗಡಿಸಿ ಚರ್ಚಿಸಲಾಗಿದೆ.

೧. ರಾಮ　೨. ಸೀತೆ　೩. ಲವ　೪. ಕುಶ

೫. ಹನುಮನಾಯಕ ದೊರೆ　೬. ರಾಕ್ಷಸ　೭. ಅಶ್ವಮೇಧ

ಚಿತ್ರ : ೧. ರಾಮ : ಈ ಸೂತ್ರದ ಗೊಂಬೆಯು ರಾಮನ ಪಾತ್ರ, ಕೃಷ್ಣನ ಪಾತ್ರಗಳಿಗೆ ಉಪಯೋಗಿಸುತ್ತಿದ್ದರು ಕೈ, ಕಾಲು, ಮುಖಗಳಿಗೆ ಕಟ್ಟಿಗೆಯನ್ನು ಬಳಸಿ ಸುಂದರವಾದ ಗೊಂಬೆಯನ್ನು ರಚಿಸಿದ್ದಾರೆ. ಕಿರಿಟ, ಕೊರಳ ಆಭರಣ, ಕೈ, ಕಾಲು ಆಭರಣಗಳನ್ನು ಧರಿಸಿದ್ದಾರೆ. ನೊಡಲಿಕ್ಕೆ ಅತ್ಯಾಕರ್ಷಕವಾದ ಗೊಂಬೆಯಾಗಿದೆ. ಭುಜದ ಮೇಲೆ ಸುಂದರವಾದ ನಕ್ಷೆಯನ್ನು ಹೊಂದಿದ ಕವಚವು ಇದೆ. ಹಳದಿ ವರ್ಣದ ಶಾಲವನ್ನು ಧರಿಸಿದ್ದಾರೆ. ಕೆಂಪುವರ್ಣದ ಧೋಥರವನ್ನು ಧರಿಸಿದ್ದಾರೆ. ಮುಖ ಬಣ್ಣವು ಕೆಂಪು ವರ್ಣದಾಗಿದೆ. ಕಣ್ಣು, ಮುಗು, ಬಾಯಿಗಳು ಸುಂದರವಾಗಿ ರಚಿತವಾಗಿವೆ.

---

೧೭. ಶ್ರೀ ಯಲ್ಲಪ ಗೋವಿಂದಪ್ಪ ನಾಗರಡ್ಡಿ (ಕಲ್ಲೂರು) ಸಂದರ್ಶನ ದಿನಾಂಕ: ೨೩-೩-೨೦೦೯

೧೮. ಶ್ರೀ ಯಲ್ಲಪ್ಪ ಬಸಪ್ಪ ಬಂಗಾರಿ ನಾಗರಡ್ಡಿ ದಿನಾಂಕ ೨೩-೩-೨೦೦೯

ಈ ಗೊಂಬೆಯು ನೊಡಲಿಕ್ಕೆ ಸುಂದರವಾದ ಗೊಂಬೆಯಾಗಿದ್ದು ಪೌರಾಣಿಕ ಕಥೆಗಳಲ್ಲಿ ಪ್ರಮುಖಪಾತ್ರದಲ್ಲಿ ಕಾಣಿಸಿಕೊಳ್ಳುವ ಸುಂದರವಾದ ಗೊಂಬೆ ಇದಾಗಿದೆ.

ಚಿತ್ರ : ೨. ಸೀತೆ : ಈ ಸೂತ್ರದ ಗೊಂಬೆಯು ಪೌರಾಣಿಕ, ಮತ್ತು ಸಾಮಾಜಿಕ ಕಥೆಗಳಲ್ಲಿ ಬರುವ ಹೆಣ್ಣು ಪಾತ್ರಗಳಿಗೆ ಬಳಸಿಕೊಳ್ಳತಿತಿದ್ದರು ಸುಂದರವಾದ ಮುಖವನ್ನು ಹೊಂದಿರುವ ಈ ಗೊಂಬೆ ಮುಗಿನತ್ತ ಕಿವಿಯಲ್ಲಿ ಬೆಂಡೆಲೆ ಕೊರಳಲ್ಲಿ ಆಭರಣಗಳು ನಡಪಟ್ಟಿಗಳನ್ನು ಧರಿಸಿರುವ ಈ ಗೊಂಬೆಯು ಕೆಂಪು ವರ್ಣದ ಕುಪ್ಪಸ, ನಿಲಿವರ್ಣದ ಸೀರೆಯನ್ನು ಉಡಿಸಿದ್ದಾರೆ. ಸುಂದರವಾದ ಕಣ್ಣು, ಮುಗು, ಬಾಯಿ, ಕೈಗಳನ್ನು ಕಲಾವಿದರು ಉತ್ತಮವಾಗಿ ರಚಿಸಿದ್ದಾರೆ. ಈ ಗೊಂಬೆಯನ್ನು ಶ್ರೀ ಸೋಮಪ್ಪ ಹೊಸಮನಿಯವರು ಹೆಣ್ಣು ಪಾತ್ರದ ಗೊಂಬೆಗಳನ್ನು ಆಡಿಸುತ್ತಿದ್ದರು. ಈ ಸುಂದರವಾದ ಸೀತೆಯ ಗೊಂಬೆಯನ್ನು ಹೊಸಮನಿಯವರು ಪ್ರಾಣಕ್ಕೆ ಪ್ರಾಣ ಇಟ್ಟು ಉತ್ತಮ ರೀತಿಯಲ್ಲಿ ಆಡಿಸುತ್ತಿದ್ದರು ಒಟ್ಟಾರೆ ಈ ಸೀತೆಯ ಗೊಂಬೆಯು ಬಹಳಷ್ಟು ಸುಂದರವಾದ ಗೊಂಬೆ ಇದಾಗಿದೆ.

ಚಿತ್ರ : ೩.೪. ಲವ. ಕುಶ : ಈ ಗೊಂಬೆಯು ಲವ ಮತ್ತು ಕುಶರ ಪಾತ್ರಕ್ಕೆ ಬಳಸಿಕೊಳ್ಳುವ ಗೊಂಬೆ ಯಾಗಿವೆ. ಸುಂದರವಾದ ಕೀರಿಟವನ್ನು ಧರಸಿದ್ದು ಭುಜಕ್ಕೆ ಸುಂದರವಾದ ನಕ್ಷೆಯನ್ನು ಅಳವಡಿಸಿದ್ದಾರೆ, ಎದೆಗೆ ಕವಚವನ್ನು ಧರಿಸಿದ್ದು ಸೂಕ್ಷನಕ್ಷೆಯಿಂದ ಇವುಗಳನ್ನು ಚಿತ್ರಿಸಿದ್ದಾರೆ ಕೊರಳ ಆಭರಣದಲ್ಲಿ ನಾಣ್ಯದಿಂದ ರಚಿಸುವ ಸುಂದರವಾದ ಆಭರಣವಿದೆ ಇವುಗಳು ಲಂಬಾಣಿ ಮಹಿಳೆಯರು ಹಾಕಿಕೊಳ್ಳುವ ಆಭರಣದಂತಿವೆ. ಹಳದಿವರ್ಣದ ಕಾಲು, ಕೆಂಪುವರ್ಣದ ದೊತರಗಳು ಧರಿಸಿವೆ. ಎರಡು ಗೊಂಬೆಗಳು ಒಂದೇರೀತಿಯಾಗಿದ್ದು ನೊಡಲಿಕೆ ಬಹಳ ಸುಂದರವಾದ ಗೊಂಬೆಗಳಾಗಿವೆ. ಈ ಗೊಂಬೆಗಳನ್ನು ಶ್ರೀ ಚೆನ್ನಪ್ಪ ಸಂಗಪ್ಪ ಶೆಟ್ಟರರವರು ಆಡಿಸುತ್ತಿದ್ದರು ಉತ್ತಮ ಲವ-ಕುಶರ ಗೊಂಬೆ ಇದ್ದಾಗಿದೆ.

ಚಿತ್ರ : ೫. ಹನುಮನಾಯಕ ದೋರೆ : ಈ ಗೊಂಬೆಯ ಹನುಮನಾಯಕ ದೊರೆಯ ಗೊಂಬೆಯಾಗಿದ್ದು ವಾಲ್ಮಿಕಿ ಈ ಜನಾಂಗದವರಾದವರು ಐತಿಹಾಸಿಕ ಪ್ರಸಿದ್ಧಿಯಲ್ಲಿರುವ ಇವರು ಕುರಿತು ಸೂತ್ರದ ಗೊಂಬೆಯಲ್ಲಿ ಕಾನಿಸಿಕೊಂಡು ಹಾಸ್ಯಪಾತ್ರವನ್ನು ಈ ಗೊಂಬೆಯಿಂದ ಜನರಿಗೆ ಮನರಂಜನೆಯನ್ನು ನಿಡುತ್ತಿದ್ದರು ಈ ಗೊಂಬೆಯು ಬುಡಕಟ್ಟು ಜನಾಂಗದವರಾಗಿರುವದರಿಂದ ಮೈಬಣ್ಣ ಕಪ್ಪಾಗಿದೆ. ಪೇಠವನ್ನು ಧರಿಸಿದ್ದು ಗೊಂಬೆಯ ತಕ್ಕಂತಿದೆ ಮುಖದ ಬಣ್ಣಕಪ್ಪಗಾದರು ಮುಖಲಕ್ಷಣ ಸುಂದರವಾಗಿದೆ. ಕಣ್ಣು ಮೂಗು, ನುಗುಮುಖ ಕೈ ಕಾಲುಗಳ ಸುಂದರವಾಗಿವೆ. ಗುಲಾಬಿವರ್ಣದ ಚುಕ್ಕೆಯಿಂದ ಕೂಡಿದ ಅಂಗಿಯನ್ನು ತೊಟ್ಟಿದೆ ಮತ್ತು ಬಿಳಿಧೋತರವನ್ನು ಧರಿಸಿದೆ. ಕೆಂಪುವರ್ಣದ ಶಾಲನ್ನು ಹೊಂದಿದ ಈ ಗೊಂಬೆಯು ಸುಂದರವಾಗಿದೆ.

ಚಿತ್ರ : ೬. ರಾಕ್ಷಸ : ಈ ಗೊಂಬೆಯು ಪುರಾಣ ಕಥೆಗಳಲ್ಲಿ ಬರುವ ರಾಕ್ಷಸನ ಪಾತ್ರವಹಿಸುವ ಗೊಂಬೆಯಾಗಿದೆ. ಎಲ್ಲಿ ದೇವತೆಗಳು ಇರುತ್ತಾರೆ ಅಲ್ಲಿ ರಾಕ್ಷಸರು ಇರುವುದನ್ನು ಅನೇಕ ಪುರಾಣ ಕಥೆಗಳಲ್ಲಿ ಕೆಳಿದ್ದು ರಾಕ್ಷಸ ಪಾತ್ರವನ್ನು ವಹಿಸುವ ಈ ಗೊಂಬೆಯ ಎಲ್ಲ ಗೊಂಬೆಕಿಂತ ವಿಬಿನ್ನವಾಗಿದೆ. ರಾಕ್ಷಸನ ಮುಖ, ಕೆಂಪುವರ್ಣದಿಂದ ಕೂಡಿದೆ. ತಲೆಯ ಮೇಲಿನ ಕೀರಿಟ ದೇವತೆಯ ಕೀರಿಟಕ್ಕಿಂತ ವಿಭಿನ್ನವಾಗಿದೆ ರಾಕ್ಷಸನ ಮುಖ ಕೆಂಪುವರ್ಣದಿಂದ ಕೂಡಿದೆ. ಭೂಜದ ಕವಚವು ಸುಂದರವಾದ

ನಕ್ಷೆಯಿಂದ ಕೂಡಿದೆ ಕಣ್ಣು, ಮೂಗು, ಬಾಯಿ, ರಾಕ್ಷಸನ ಹಲ್ಲು ಹೇಗೆ ಇರುತ್ತವೆಯೋ ಅದರಂತೆ ಹಲ್ಲುಗಳು ಇವೆ. ತೊಟ್ಟಿಧ ಅಂಗಿಯು ಕೆಂಪುವರ್ಣ ಮತ್ತು ಹಳದಿವರ್ಣದಿಂದ ನಡುವೆ ಪಟ್ಟಿಯನ್ನು ಹೊಂದಿದೆ. ಧೋತರವು ಕೆಂಪುವರ್ಣದಾಗಿದೆ. ಒಟ್ಟಾರೆ ಈ ಗೊಂಬೆಯು ಆಕರ್ಷಕವಾದ ಸೂತ್ರದ ಗೊಂಬೆಯಾಗಿದೆ.

ಚಿತ್ರ : ೭. ಅಶ್ವಮೇಧ : ಈ ಗೊಂಬೆಯು ಕಟ್ಟಿಗೆಯಿಂದ ಮಾಡಿದ ಗೊಂಬೆಯಾಗಿದೆ. ಸೂತ್ರದ ಗೊಂಬೆಯಾಟದಲ್ಲಿ ಪೌರಾಣಿಕ ಮತ್ತು ರಾಜಕಿಯ ಸಾಮಾಜಿಕ ಕಥೆಗಳಲ್ಲಿ ಬರುವ ಕುದುರೆಗಳಿಗೆ ಜೀವ ತುಂಬವ ಪಾತ್ರವನ್ನು ಈ ಗೊಂಬೆ ಕೊಡುತಿತ್ತು. ಕೊರಳಲ್ಲಿ ಆಭರಣವನ್ನು ಧರಿಸಿದ್ದು ಸುಂದರವಾದ ಗೊಂಬೆಯಾಗಿದೆ. ಕಣ್ಣು ಮೂಗು ಬಾಯಿಯನ್ನು ಕಲಾವಿದ ಉತ್ತಮ ರೀತಿಯಲ್ಲಿ ಸುಂದರವಾಗಿ ರಚಿಸಿದ್ದಾರೆ. ೬೦, ೭೦, ವರ್ಷಗಳ ಹಳೆಯದಾದರು ನೊಡಲಿಕ್ಕೆ ಸುಂದರವಾಗಿ ಕಾಣುತ್ತದೆ. ಈ ಗೊಂಬೆಯನ್ನು ಶ್ರೀ ಬಸಪ್ಪ ಸೋಮಪ್ಪ ಹಿರೆತಿಪ್ಪಣ್ಣವರಯವರು ಆಡಿಸುತ್ತಿದ್ದರು.

ಹೀಗೆ ಗದಗ ಜಿಲ್ಲೆಯ ಕಲ್ಲೂರ ಗ್ರಾಮದ ಸೂತ್ರದ ಗೊಂಬೆಗಳು ಮತ್ತು ಸೂತ್ರ ಗೊಂಬೆಯ ಕಥೆಗಾರರು ಸೂತ್ರದ ಗೊಂಬೆಯನ್ನು ಆಡಿಸುತ್ತಿದ್ದವರ ಕುರಿತು ಸಿಕ್ಕ ಮಾಹಿತಿಯನ್ನು ಹೇಳುವ ಪ್ರಯತ್ನ ಮಾಡಲಾಗಿದೆ.

ಮದರಂಗಿ ಕಲೆ : ಜಾನಪದ ಕಲೆಯಲ್ಲಿ ಮದರಂಗಿ ಕಲೆಯು ತನ್ನದೆಯಾದ ಜಾನಪದ ಸಂಸ್ಕೃತಿಯನ್ನು ಹೊಂದಿದೆ. ಚರ್ಮದ ಮೇಲಿನ ಚಿತ್ರಕಲೆಯಲ್ಲಿ ಶಾಶ್ವತವಾದುದು ಹೆಚ್ಚೆಯಾದರೆ, ಅಶಾಶ್ವತವಾದ ಚಿತ್ರಕಲೆಯಾಗಿ ಮದರಂಗಿ ಬೆಳೆದುಬಂದಿದೆ. ಸಂಪ್ರದಾಯ, ಕಲಾತ್ಮಕತೆ, ಸೌಭಾಗ್ಯಗಳೆಲ್ಲ ಮದರಂಗಿಯ ರೂಪದಲ್ಲಿ ಸ್ತ್ರೀಯ ಕೈ, ಕಾಲು ಮುಖಗಳ ಮೇಲೆ ಸ್ಥಾನ ಪಡೆದಿದೆ. ಸ್ತ್ರೀಯರಂತೆ ಪುರುಷರು ಮದರಂಗಿಯಿಂದ ಶೃಂಗಾರಗೊಳ್ಳುವುದಿದೆ.[೧೯] ಮದರಂಗಿ ಕಲೆಯನ್ನು ಹೆಚ್ಚಾಗಿ ಬಾಲಕಿಯರು ಪ್ರೌಢಸ್ತ್ರೀಯರು ಹೆಚ್ಚಾಗಿ ಒರೆಸಿಕೊಳ್ಳುತ್ತಾರೆ. ಬಾಲಕರು, ಗಂಡಸರು ಸಹ ಮೆಹಂದಿ ಕಲೆಯನ್ನು ಹಚ್ಚಿಕೊಳ್ಳುತ್ತಾರೆ. ಇದು ಎಲ್ಲರಿಗೂ ಪ್ರಿಯವಾದ ಕಲೆಯಾಗಿದೆ.

ಸಂಸ್ಕೃತ ಭಾಷೆಯಲ್ಲಿ "ಮದವಂತಿಕಾ" ಹಿಂದಿಯಲ್ಲಿ "ಮೆಹಂದಿ", ಮರಾಠಿಯಲ್ಲಿ "ಮಂದಿಯಾಚೆ", ತೆಲುಗಿನಲ್ಲಿ 'ಗೌರಿಂಟಾಡು', ಇಂಗ್ಲೀಷಿನಲ್ಲಿ "ಹೆನ್ನಾ", ಪರ್ಷಿಯನ್ನಲ್ಲಿ "ಹಿನಾ", ಎಂದು ಈ ಮದರಂಗಿಯನ್ನು ಕರೆಯುತ್ತಾರೆ.[೨೦] ಈ ಕಲೆ ದೇಶಭಾಷೆ, ಪ್ರದೇಶಗಳನ್ನು ಮೀರಿ ಮದರಂಗಿ ಕಲೆ ಜನಪ್ರೀಯತೆಯನ್ನು ಪಡೆದಿದೆ. ನಿಸರ್ಗದ ಜೀವಿಗಳಾದ ಜನಪದರಿಗೆ ಮದರಂಗಿಯ ಬಣ್ಣದ ಸಾಸಿ ಎಂದೋ ದೊರೆತಿದೆ. ಮದರಂಗಿಗೆ ಹನ್ನೆರಡನೆಯ ಶತಕಕ್ಕೂ ಪೂರ್ವ ಇತಿಹಾಸವಿದೆ. ಉತ್ತರ ಭಾರತ ಪ್ರವೇಶಿಸಿದ ಮುಸ್ಲಿಂ ಜನಾಂಗ ಮದರಂಗಿಯನ್ನು ಹೆಚ್ಚು ಬಳಸುತ್ತಿದ್ದಾರೆ ಎಂದು ಆ ಕಾಲಘಟ್ಟವನ್ನು ಹೇಳುತ್ತಿರಬೇಕೆನಿಸುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಅದು ಎಂದೋ ತನ್ನ ಸ್ಥಾನವನ್ನು ಗಟ್ಟಿಗೊಳಿಸಿಕೊಂಡಿದೆ.

---

೧೯. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೧೨

೨೦. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೧೨

ಉತ್ತರ ಭಾರತದಲ್ಲಿ ಹೆಚ್ಚಾಗಿ ಒಡವೆ ವಸ್ತುಗಳಿಗಿಂತ ಮದರಂಗಿಯ ಬಣ್ಣದ ಅಲಂಕಾರ ಮೇಲಾಗುತ್ತದೆ. ಅಲ್ಲಿ ಮದರಂಗಿ ಇಲ್ಲದೆ ಮದುವೆ ಇಲ್ಲ ಎಂಬ ಗಾದೆ ಮತು ಕೇಳಿ ಬರುತ್ತದೆ. ನಮ್ಮ ಭಾಗದಲ್ಲಿ ಅರಿಷಿಣ ಹಚ್ಚಿಕೊಂಡಂತೆ ಉತ್ತರ ಭಾರತದಲ್ಲಿ ಮದರಂಗಿಯ ಬಣ್ಣದ ಚಿತ್ರ ಚಿತ್ತಾರಗಳ ಲೇಪನ ಸಾಮಾನ್ಯವಾದುದು, ರಾಜಸ್ಥಾನಿ ಜನಪದ ಹಾಡೊಂದರಲ್ಲಿ ಹೀಗಿದೆ.

"ಪ್ರೇಮ್‌ರಾಸ್ ಮೆಹಂದಿ ರಾಜೀ
ಧಾರಾ ಹಾಥಾ ಮಹಾರೆ ಹಿವಾರೆ ; ಊಪರ್ ರಾಬಾ
ಪ್ರೇಮ್ ರಾಸ್ ಮೆಹಂದಿ ರಾಚನಿ
ಧಾರೀ ಮೆಹಂದೀ ಪಾರ್ ವರುಣಿ
ಪನ್ನಾ – ಎ – ಜವಾರ್ – ಪ್ರಿಯೆ"[೨೧]

ಪ್ರೇಮದ ಕುರುಹೆಂದರೆ ಮೆಹಂದಿ, ನೋಡಲು ಇದು ಅತ್ಯಂತ ವರ್ಣರಂಜಿತ ಮದ್ದು ಅಂಗಿಗಳಿಯೇ ಮೆಹಂದಿ ಹಚ್ಚಿದ ನಿನ್ನ ವರ್ಣಮಯ ಹಸ್ತವನ್ನು ನನ್ನ ವೃಕ್ಷಸ್ಥಲದಲ್ಲಿಡು. ನಿನ್ನ ಈ ಅಲಂಕೃತ ಅಂಗೈಗೋಸ್ಕರ ಅಮೂಲ್ಯವಾದ ರತ್ನವನ್ನೇ ಬೇಕಾದರೂ ತ್ಯಾಗ ಮಾಡುತ್ತೇನೆ ಎಂದು ರಾಜಸ್ಥಾನಿ ಜನಪದ ಹಾಡಿನಲ್ಲಿ ಬಹಳಷ್ಟು ಅರ್ಥಗರ್ಭಿತವಾಗಿದೆ. ಮದರಂಗಿಯು ಪ್ರೀತಿ–ಪ್ರೇಮವಾಗಿ, ಸೌಂದರ್ಯ–ಸಂಪ್ರದಾಯವಾಗಿ ಸುಮಂಗಲೆಯ ಸೌಭಾಗ್ಯವಾಗಿ, ಜನಪದರ ಚಿತ್ರಕಲೆಯಾಗಿ ಈ ಮದರಂಗಿ ಭಾರತೀಯರಲ್ಲಿ ಹಾಸುಹೊಕ್ಕಾಗಿದೆ.[೨೨]

ಮದರಂಗಿಯ ಬಣ್ಣ ತಯಾರಿಸುವುದು : ಮದರಂಗಿಯ ಬಣ್ಣವನ್ನು ಗ್ರಾಮೀಣರು ತುಂಬ ಸರಳವಾಗಿ ತಯಾರಿಸುತ್ತಾರೆ. ಮದರಂಗಿ ಗಿಡದ ತೊಪ್ಪಲನ್ನು ಚೆನ್ನಾಗಿ ಒಣಗಿಸಿ ಕುಟ್ಟಿ ಪುಡಿ ಮಾಡುತ್ತಾರೆ. ಈ ಪುಡಿಯನ್ನು ತೆಳ್ಳನೆಯ ಬಟ್ಟೆ ಇಲ್ಲವೆ ಹಿಟ್ಟು ಸೋಸುವ ಸಾಣಿಗೆಯಲ್ಲಿ (ಜರಡಿಯಲ್ಲಿ) ಹಾಕಿ ಸೋಸುತ್ತಾರೆ. ಸೋಸಿದ ಪುಡಿಯನ್ನು ಒಂದು ಪಾತ್ರೆಯಲ್ಲಿ ಇಟ್ಟುಕೊಂಡಿರುತ್ತಾರೆ. ಹಚ್ಚಿಕೊಳ್ಳುವ ಸಂದರ್ಭದಲ್ಲಿ ಮದರಂಗಿಯ ಪುಡಿಯನ್ನು ಬೇರೆ ದ್ರಾವಣಗಳ ಮಿಶ್ರಣದೊಂದಿಗೆ ಸೇರಿಸಿ ಮದರಂಗಿಯ ಬಣ್ಣ ಸಿದ್ಧಗೊಳಿಸುತ್ತಾರೆ. ಮದರಂಗಿ ಸಿದ್ಧಗೊಳಿಸುವ ವಿಧಾನ ಹೀಗಿದೆ

೧. ಮದರಂಗಿಯ ಗಿಡಗಳಿಂದ ಸೊಪ್ಪನ್ನು ತೆಗೆದುಕೊಂಡು ಲಿಂಬೆರಸದೊಂದಿಗೆ ಕಾಚು ವೀಳ್ಯೆದೆಲೆಗಳನ್ನು ಕೂಡಿಸಿ ಚೆನ್ನಾಗಿ ಅರೆದು ದ್ರಾವಣ ತಯಾರಿಸುತ್ತಾರೆ. ಆ ದ್ರಾವಣವನ್ನು ಒಂದು ತಾಸಿನವರೆಗೆ ನೆನೆಯಿಡುತ್ತಾರೆ.

೨. ನೀಲಗಿರಿ ಎಣ್ಣೆ, ಲಿಂಬೆಹಣ್ಣಿನ ರಸ ಮತ್ತು ಮದರಂಗಿ ಪುಡಿಯನ್ನು ಚೆನ್ನಾಗಿ ಕಲಿಸಿ ದ್ರಾವಣ ತಯಾರಿಸುತ್ತಾರೆ.

೩. ಚಹಪುಡಿ ಮತ್ತು ಲಿಂಬೆ ಹಣ್ಣಿನ ರಸವನ್ನು ನೀರಿನಲ್ಲಿ ಹಾಕಿ ಚೆನ್ನಾಗಿ ಕೂಡಿಸಿ ಅದರಲ್ಲಿ ಮದರಂಗಿ ಪುಡಿಯನ್ನು ಕೂಡಿಸಿ ದ್ರಾವಣ ತಯಾರಿಸುತ್ತಾರೆ.[೨೩]

---

೨೧. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೧೪

೨೨. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೧೪

೨೩. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೧೬

ಈ ರೀತಿಯಾಗಿ ಮದರಂಗಿಯನ್ನು ಮೊದಲು ಸಿದ್ಧಗೊಳಿಸಿಕೊಂಡು ನಂತರ ಅದನ್ನು ಹಚ್ಚುತ್ತಾರೆ ಮದರಂಗಿ ಹಚ್ಚುವುದು :

ಹಚ್ಚೆಯನ್ನು "ಹೊಯ್ಯುವುದು" ಆಥವಾ "ಹಾಕುವುದು" ಎಂದರೆ ಮದರಂಗಿಯನ್ನು ಮಾತ್ರ "ಹಚ್ಚುವುದು" ಎನ್ನುತ್ತಾರೆ ಮದರಂಗಿ ತಯಾರಿಕೆಯೊಳಗೊಂಡು ಅದನ್ನು ಹಚ್ಚುವ ಸಲಕರಣೆಗಳು ಹೀಗಿವೆ....

ಅ) ಮದರಂಗಿ ಪುಡಿಯ ಡಬ್ಬಿ ಆ) ಮಿಶ್ರಣದ ಪಾತ್ರೆ ಇ) ಕಡ್ಡಿ ಈ) ಬಿಳಿಯ ಬಟ್ಟೆ ಮುಂತಾದವು.

ಅ) **ಡಬ್ಬಿ** : ಇದರಲ್ಲಿ ಮದರಂಗಿಯ ಎಲೆಯ ಪುಡಿಯನ್ನು ಸಂಗ್ರಹಿಸಿಟ್ಟಿರುತ್ತಾರೆ ಆ ಪುಡಿಯನ್ನು ತಾವೇ ಸಿದ್ಧಮಾಡಿಕೊಳ್ಳಬಹುದು ಇಲ್ಲವೆ ಬೇರೆಯವರಿಂದ ಸಂಗ್ರಹಿಸಿಕೊಂಡಿರುತ್ತಾರೆ. ಇದನ್ನೇ ಮದರಂಗಿ ಡಬ್ಬಿ ಎಂದು ಕರೆಯುತ್ತಾರೆ.

ಆ) **ಮಿಶ್ರಣದ ಪಾತ್ರೆ** : ಮದರಂಗಿಯನ್ನು ಹಚ್ಚಿಕೊಳ್ಳುವ ಸಂದರ್ಭದಲ್ಲಿ ಮದರಂಗಿಯ ಮಿಶ್ರಣವನ್ನು ತಯಾರಿಸಿಕೊಳ್ಳುವ ಪಾತ್ರೆ ಇದಾಗಿದೆ. ತಮಗೆ ಎಷ್ಟು ಬೇಕೋ ಅಷ್ಟನ್ನು ಪಾತ್ರೆಯಲ್ಲಿ ಮದರಂಗಿ ಪುಡಿಯನ್ನು ಹಾಕಿಕೊಂಡು ತಯಾರಿಸಿಕೊಂಡು ಉಳಿದರೆ ಹಾಗೆಯೇ ಉಳಿಸುತ್ತಾರೆ. ಇಲ್ಲದಿದ್ದರೆ ಚೆಲ್ಲಿ ತೊಳೆದಿಡುತ್ತಾರೆ.

ಇ) **ಕಡ್ಡಿ** : ಹಳ್ಳಿಗಳಲ್ಲಿ ಸಾಮಾನ್ಯವಾಗಿ ದೀಪದ ಕಡ್ಡಿಯಿಂದ ಮದರಂಗಿಯ ಚಿತ್ರ ಬರೆಯುತ್ತಾರೆ. ದಂತದ ಕಡ್ಡಿ, ಚಂದನದ ಕಡ್ಡಿ, ಪ್ಲಾಸ್ಟಿಕ್ ಕಡ್ಡಿಗಳನ್ನು ಉಪಯೋಗಿಸುತ್ತಾರೆ. ಇದಕ್ಕಾಗಿ ಇತ್ತೀಚೆಗೆ ಪೆನ್ನಿನಂತಹ ವಸ್ತುವನ್ನು ಬಳಸುತ್ತಾರೆ. ಇಂತಹ ಸಾಧನದಲ್ಲಿ ಮದರಂಗಿಯ ದ್ರಾವಣವನ್ನು ತುಂಬಿ ಪೆನ್ನಿನ ಹಾಗೆ ಬರೆಯುತ್ತಾ ಹೋದಂತೆ ಬಣ್ಣ ಇಳಿಯುತ್ತ ಹೋಗುತ್ತದೆ. ಪೇಟೆಯಲ್ಲಿ "ಟ್ರೆಸಿಂಗ್" ಪದ್ಧತಿಯೂ ಬೆಳೆದಿದೆ. ಆದರೆ ಹೆಚ್ಚಾಗಿ ಹಳ್ಳಿಗಳಲ್ಲಿ ಕಡ್ಡಿಗಳ ಬಳಕೆಯೇ ಹೆಚ್ಚು.

ಈ) ಬಿಳಿಯ ಬಟ್ಟೆ ಮದರಂಗಿ ಹಚ್ಚುವಾಗ ಚಿತ್ರ ಕೆಟ್ಟರೆ, ಅವುಗಳನ್ನು ಅಳಿಸಿ ಮತ್ತೆ ಸರಿಯಾದ ರೀತಿಯಲ್ಲಿ ಸುಳುವುಗಳನ್ನು ಬಿಡಿಸಲು ಈ ಬಟ್ಟೆಯನ್ನು ಬಳಸುತ್ತಾರೆ.[೨೪] ಮದರಂಗಿ ಹೆಚ್ಚುವ ಪೂರ್ವದಲ್ಲಿ ಇವುಗಳೆಲ್ಲ ಸಲಕರಣೆಗಳ ಅವಶ್ಯಕವಾಗಿ ಬೇಕಾಗುವ ಸಾಮಗ್ರಿಗಳು.

ಮದರಂಗಿ ಹೆಚ್ಚುವವರಿದ್ದಾರೆ. ಶಹರದಲ್ಲಿ ಮದರಂಗಿಯನ್ನು ಹೆಚ್ಚುತ್ತಾರೆ. ಮದರಂಗಿ ಹೆಚ್ಚಾಗಿ ಮುಂಜಾನೆ. ಸಾಯಂಕಾಲ ಇಲ್ಲವೆ ರಾತ್ರಿಯೆ ವೇಳೆಯಲ್ಲಿಯೇ ಹಚ್ಚಿಸಿಕೊಳ್ಳುತ್ತಾರೆ. ಹಚ್ಚಿಕೊಂಡ ಮೇಲೆ ಆರೇಳು ತಾಸು ಅದನ್ನು ಒಣಗಲು ಬಿಡಬೇಕಾಗುತ್ತದೆ. ಹೀಗಾಗಿ ರಾತ್ರಿಯ ವೇಳೆಯೇ ಅವರಿಗೆ ಸೂಕ್ತವಾಗಿದೆ. ಮದರಂಗಿಯನ್ನು ಹೆಚ್ಚಾಗಿ ಹುಣ್ಣಿಮೆ, ಉತ್ಸವ, ಮದುವೆ ಸಮಾರಂಭ ಮುಂಜಿವೆ ಸಂದರ್ಭಗಳಲ್ಲಿ ಮದರಂಗಿ ಹಚ್ಚಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಯಾವ ವೇಳೆಯಲ್ಲಾದರೂ ಮದರಂಗಿ ಹಚ್ಚಕೊಳ್ಳುತ್ತಾರೆ. ಆದರೆ ಕೆಲವು ಹಿರಿಯರು ತಮ್ಮ ಮೂಲ ಸಂಪ್ರದಾಯವನ್ನು ಬಿಟ್ಟುಕೊಟ್ಟಿಲ್ಲ.

೨೪. ಡಾ. ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೧೫

ಗದಗ ಜಿಲ್ಲೆಯ ರೋಣ, ನರಗುಂದ ಶಿರಹಟ್ಟಿ, ಮುಂಡರಗಿ, ಲಕ್ಷೇಶ್ವರ, ಸೊರಟೂರ, ಲಕ್ಕುಂಡಿ, ಮುಳಗುಂದ, ನಾಗಸಮುದ್ರ ಮುಂತಾದ ಅನೇಕ ಊರುಗಳಲ್ಲಿ ಮದರಂಗಿ ಕಲೆಯಬಗ್ಗೆ ಹೆಚ್ಚು ಪ್ರಾವೀಣ್ಯತೆಯನ್ನು ಪಡೆದುಕೊಂಡವರಾಗಿದ್ದಾರೆ.

ಸುಧಾ ಕುಲಕರ್ಣಿ : ಇವರು ಭಾರತ ಸ್ಕೌಟ್ ಮತ್ತು ಗೈಡ್‌ದಲ್ಲಿ ರಾಜ್ಯಮಟ್ಟದ ಸೈಕ್ಲಿಂಗ್‌ನಲ್ಲಿ ಪ್ರಶಸ್ತಿ ಪಡೆದವರಾಗಿದ್ದಾರೆ. ಮದರಂಗಿ ಕಲೆಯನ್ನು ಹಚ್ಚುವಲ್ಲಿ ವಿಶೇಷ ಪ್ರಾವಿಣ್ಯತೆಯನ್ನು ಪಡೆದಿದ್ದಾರೆ. ಮದುವೆ ಸಮಾರಂಭದಲ್ಲಿ ಮದುಮಗಳು ಇವರ ಮನೆಗೆ ಬಂದು ಮದರಂಗಿಯನ್ನು ಹಚ್ಚಿಸಿಕೊಂಡು ಹೋಗುತ್ತಾರೆ. ಇನ್ನೂ ಕೆಲವರ ಮನೆಗೆ ಹೋಗಿ ಮದರಂಗಿಯನ್ನು ಹಚ್ಚುತ್ತಾರೆ. ಬಾಲ್ಯದಲ್ಲಿಯೇ ಈ ಕಲೆಯನ್ನು ಮೈಗೂಡಿಸಿಕೊಂಡಿರುವ ಇವರು ವಿಭಿನ್ನ ರೀತಿಯ ಮದರಂಗಿ ಚಿತ್ರವಿನ್ಯಾಸವನ್ನು ಬರೆಯುತ್ತಾರೆ. ಕೈಗಳಿಗೆ ಕಾಲುಗಳಿಗೆ ಪಾದಗಳಿಗೆ ಮದರಂಗಿಯ ಸುಂದರವಾದ ವಿನ್ಯಾಸವನ್ನು ಬರೆಯುವುದು ವಿಶೇಷವಾಗಿದೆ. ಮುಸ್ಲೀಮರು ರಮ್‌ಜಾನ್, ಬಕ್ರೀದ್ ಹಬ್ಬಗಳಲ್ಲಿ ಹಿಂದುಗಳು ದೀಪಾವಳಿಯಲ್ಲಿ ಹುಣ್ಣಿವೆ ಹಬ್ಬ ಜಾತ್ರೆಯ ಸಂದರ್ಭದಲ್ಲಿ ಮದರಂಗಿ ಕಲೆಯನ್ನು ಹಚ್ಚಿಸಿಕೊಳ್ಳಲು ಬರುತ್ತಾರೆ. ಎಂದು ಅವರು ಹೇಳುತ್ತಾರೆ.[೨೫]

ಮದರಂಗಿಯು ನೋಡುಗರಿಗೆ ಸಂತೋಷ ಕೊಡುತ್ತದೆ. ಮತ್ತು ಆರೋಗ್ಯಕ್ಕೆ ಯಾವುದೇ ತರದ ಹಾನಿಯುಂಟುಮಾಡುವುದಿಲ್ಲ. ಕೆಲವು ದಿನಗಳ ವರೆಗೆ ಇದ್ದು ಕ್ರಮೇಣ ಮಾಸಿಹೋಗುತ್ತದೆ.

ಬಿ.ಎಂ. ಕರಿಗೌಡರ : ಶ್ರೀ ಬಿ.ಎಂ.ಕರಿಗೌಡರ ಅವರು ಮದರಂಗಿ ಕಲೆಯನ್ನು ಹಚ್ಚುತ್ತಾರೆ. ಇವರು ಮೊದಲಿಂದಲೂ ಈ ಕಲೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ವಿದ್ಯಾದಾನ ಸಮಿತಿ ಪ್ರಾಥಮಿಕ ವಿಭಾಗದಲ್ಲಿ ಆಡಳಿತ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಇವರು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮದರಂಗಿಯ ವಿಭಿನ್ನ ರೀತಿಯ ಚಿತ್ರ ವಿನ್ಯಾಸವನ್ನು ರಚಿಸುತ್ತಾರೆ. ಮಕ್ಕಳಿಗೆ ಮದರಂಗಿಯನ್ನು ತಾವೆ ತರಬೇಕೆಂದು ಹೇಳಿ ಸಾಲಾಗಿನಿಲ್ಲಿಸಿ ಈ ಮದರಂಗಿಯ ಪಕ್ಷಿ, ನಕ್ಷತ್ರ, ಪ್ರಾಣಿ, ಗಿಡ, ಹೂಬಳ್ಳಿಗಳ ಸುಂದರವಾದ ವಿನ್ಯಾಸವನ್ನು ಬರೆಯುತ್ತಾರೆ. ಮದರಂಗಿ ಹಚ್ಚುವಾಗ ನಾಚಿಕೆಪಡಿಕೊಳ್ಳುವದಿಲ್ಲವೆಂದು ಹೇಳುತ್ತಾರೆ.[೨೬]

ಶಾಲೆಯಲ್ಲಿ ವಾರ್ಷಿಕ ಸ್ನೇಹಸಮ್ಮೇಳನ ನಾಳೆ ಇದೆ ಎಂದರೆ ಎಲ್ಲ ಮಕ್ಕಳು ಸಾಲುನಿಂತು ಮದರಂಗಿ ಹಚ್ಚಿಸಿಕೊಳ್ಳುತ್ತಾರೆ. ಬಾಲಕರಲ್ಲಿ ಕಲೆಯ ಅಭಿರುಚಿಯನ್ನು ಮೂಡಿಸುವ ಕರಿಗೌಡರು ನಿಜವಾಗಿಯೂ ಒಬ್ಬ ಕಲಾ ಪೋಷಕ ಎಂದು ಹೇಳಬಹುದು. ಯಾವ ಮಕ್ಕಳಿಗೆ ಬೇಸರ ತರದೆ ಮದರಂಗಿ ತಂದ ಮಕ್ಕಳಿಗೆ ಎಲ್ಲರಿಗೂ ಹಚ್ಚುವ ರೂಢಿಯನ್ನು ಬೆಳೆಸಿಕೊಂಡಿದ್ದಾರೆ. ಇನ್ನು ಅನೇಕ ಕಲಾವಿದರು ಗದಗ ಜಿಲ್ಲೆಯಲ್ಲಿ ಇದದು ಮದರಂಗಿ ಕಲೆಯನ್ನು ಹಾಕುತ್ತಾರೆ. ವಿಷಯದ ವ್ಯಾಪ್ತಿ ಬಹಳ ವಿರುವುದರಿಂದ ಕೆಲವು ಕಲಾವಿದರ ಕುರಿತು ಚರ್ಚೆ ಮಾಡಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೨೫. ಸುಧಾ ಕುಲಕರ್ಣಿ ಸಂದರ್ಶನ ದಿನಾಂಕ: ೨೪-೨-೨೦೧೦

೨೬. ಬಿ.ಎಂ. ಕರಿಗೌಡರ ಸಂದರ್ಶನ ದಿನಾಂಕ ೨೬-೪-೨೦೧೦

ರಂಗೋಲಿ ಚಿತ್ರಕಲೆ :

ರಂಗೋಲಿಯ ಹಿನ್ನೆಲೆ : ರಂಗೋಲಿ ಭಾರತದ ಅತ್ಯಂತ ಪ್ರಾಚೀನ ಜನಪದ ಕಲೆ, ಬದುಕಿನ ಖುಷಿಯನ್ನು, ಸೌಭಾಗ್ಯ ಮಂಗಳಕರ ಪ್ರಸನ್ನತೆಯನ್ನು ಶುಭ ಸನ್ನಿವೇಶವನ್ನು ಹೇಳುವ ಲಾಲಿತ್ಯಪೂರ್ಣ ಕಲಾಕೌಶಲ್ಯವೇ ರಂಗವಲ್ಲಿ, ಇಲ್ಲಿಯ ಜನಪದ ಚಿತ್ರಕಲೆಗಳಲ್ಲೊಂದಾದ ಈ ಕಲೆಯಲ್ಲಿ ಶ್ರೇಷ್ಠ ಕಲೆಯ ಲಕ್ಷಣಗಳೆಲ್ಲವೂ ಇವೆ. ಇದು ಅಲಂಕಾರಿಕ ಮಾತ್ರವಲ್ಲ, ಮಂಗಳಕರವೂ ಆಗಿದೆ. ರಂಗೋಲಿ ಭಾರತದ ಹಳ್ಳಿ ಮೂಲೆಗಳೆಲ್ಲಲ್ಲ ತುಂಬಿರುವ ಸೌಂದರ್ಯಪ್ರಜ್ಞೆಯ ದ್ಯೋತಕ ದೇವರನ್ನು ಒಲಿಸಿಕೊಳ್ಳುವ ಮಾರ್ಗ. ಈ ಕಲೆ ತಮಿಳುನಾಡಿನಲ್ಲಿ "ಕೊಲಂ", ಆಂದ್ರದಲ್ಲಿ "ಮುಗ್ಗಲಂ", ಮರಾಠಿಯಲ್ಲಿ "ರಂಗೋಳಿ", ಗುಜರಾತದಲ್ಲಿ "ಸಾಥ", ಬಂಗಾಳದಲ್ಲಿ "ಅಲ್ಲಿನಾ", ಒರಿಸ್ಸಾದಲ್ಲಿ "ಚಿತಾ", ರಾಜಸ್ಥಾನದಲ್ಲಿ "ಮಾಂಡವಾ", ಉತ್ತರ ಪ್ರದೇಶದಲ್ಲಿ "ಸಾಂಝು", ಎಂದು ಪ್ರಖ್ಯಾತಿ ಹೊಂದಿದೆ. ರಂಗೋಲಿಕಲೆಯ ಮೂಲ ಆಶಯ ಮಾತ್ರ ಎಲ್ಲ ಪ್ರದೇಶಗಳಲ್ಲಿಯೂ ಒಂದೇ ಆಗಿದೆ.[೨೭]

ರಂಗೋಲಿಯನ್ನು ಹೆಣ್ಣುಮಕ್ಕಳು ಪ್ರತಿದಿನ ಬೆಳಿಗ್ಗೆ ಎದ್ದು ಬಾಗಿಲಲ್ಲಿ ಹಾಕುತ್ತಾರೆ. ಎದ್ದೊಡನೆ ಹೊಸ್ತಿಲ ತೊಳೆದು ಅಂಗಳ ಸಾರಿಸಿ ರಂಗೋಲಿಯನ್ನು ಹಾಕಿ ಹೊಸ್ತಿಲ ಪೂಜೆ ಮಾಡಿ ದಿನಗೆಲಸ ಪ್ರಾರಂಭಿಸುವುದು ಸಂಪ್ರದಾಯವಾಗಿದೆ. ಹಿರಣ್ಯಕಶ್ಯಪನ "ಮುಪ್ಪು, ಶಿಕ್ಷೆ, ಶಿಷ್ಟ ಪರಿಪಾಲನೆ" ಮಾಡುವ ದೇವರ ಬಗೆಗಿನ ಭಕ್ತಿಯಿಂದಾಗಿ ಹೊಸ್ತಿಲ ಪೂಜೆ ಮಾಡುವ ಸಂಪ್ರದಾಯವನ್ನು ಜನಪದರು ರೂಢಿಸಿಕೊಂಡಿರುವುದು ಕಂಡುಬರುತ್ತದೆ.[೨೮] ರಂಗೋಲಿ ಕಲೆಯನ್ನು ಚುಕ್ಕೆಗಳು, ಸರಳ ರೇಖೆಗಳಿಂದ ವಿವಿಧ ಬಣ್ಣ ಬಣ್ಣದಿಂದ ಚಿತ್ತಾರಗಳನ್ನು ಹಾಕುತ್ತಾರೆ. ಸುದರವಾದ ಮತ್ತು ಶುಭ್ರವಾದ ರೇಖೆಗಳು ಹೊಸ್ತಿಲ ಮುಂದೆ ಬೆಳದಿಂಗಳು ಚೆಲ್ಲಿದಂತೆ ಇರುತ್ತದೆ. ಇದರಿಂದ ಮನೆಯ ಶಿಸ್ತು, ಕ್ರಿಯಾಶೀಲ ಮನೆಯ ಗೃಹಿಣಿಯ ಜೀವನಕ್ರಮ, ಈ ರಂಗೋಲಿಯನ್ನು ಕೇವಲ ಚೆಂದ ಕಾಣಿಸುವುದಕ್ಕೆ ಮಾತ್ರ ಹಾಕುವುದಿಲ್ಲ. ಇದರ ಹಿಂದೆ ತಾಂತ್ರಿಕ ಹಿನ್ನೆಲೆಯ ವಿಧಿಕ್ರಿಯೆಗಳು ಐತಿಹಾಸಿಕ ಪೌರಾಣಿಕ ಹಿನ್ನೆಲೆಯ ಕಥಾನಕಗಳೂ ಇರುತ್ತವೆ.[೨೯]

"ರಂಗ"ವೆಂದರೆ ಬಣ್ಣ "ವಲ್ಲಿ" ಎಂದರೆ ಬಳ್ಳಿ ಎಂದರ್ಥ ಬಣ್ಣದ ಸಾಲು ರಂಗೋಲಿ ಪುಡಿ, ಬಣ್ಣಗಳಿಂದ ರಚಿಸಿದ ಬಳ್ಳಿ ಚಿತ್ರವೆ ಗಂಗೋಲಿ, ಬಣ್ಣದ ಗೆರೆಗಳ ಸಮೂಹವೆಂದೂ ಬಣ್ಣಗಳ ವೃದವೆಂದೂ ಇದನ್ನು ಅರ್ಥೈಸುತ್ತಾರೆ. ರಂಗೋಲಿಯು ರಂಗವಲಿಯೆಂದೂ ಪ್ರಸಿದ್ಧವಾಗಿದೆ.[೩೦] ಎಂದು ಡಾ.ಎಸ್.ಸಿ.ಪಾಟೀಲರು ಕರ್ನಾಟಕದ ಜನಪದ ಚಿತ್ರಕಲೆಯ ಗ್ರಂಥದಲ್ಲಿ ಹೇಳಿದ್ದಾರೆ.

ರಂಗೋಲಿಯ ಪ್ರಾಚೀನತೆ : ಮಾನವನ ಬದುಕಿನಲ್ಲಿ ಚಿತ್ರಕಲೆಯು ಪ್ರವೇಶದೊಂದಿಗೆ ರಂಗೋಲಿ ಪ್ರವೇಶ ಪಡೆದಿದೆ. ಸಂತೋಷಕುಮಾರ ಗುಲ್ವಾಡಿಯವರು ರಂಗೋಲಿ ಪ್ರಾಚೀನತೆಯನ್ನು ಸುಮಾರು ೫೦೦೦ ವರ್ಷಗಳಷ್ಟು ಹಿಂದೆ ಬೆಳೆದು, ಪರಿಚಯಾತಕ ಲೇಖನ ಬರೆದಿದ್ದಾರೆ. ಆದರೆ ಅದಕ್ಕಾಗಿ

---

೨೭. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೧೯

೨೮. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೧೯

೨೯. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೧೯

೩೦. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೨೧

ಆಧಾರ ಸೂಚಿಗಳನ್ನು ಅವರು ಕೊಟ್ಟಿಲ್ಲವೆಂದು ಡಾ. ಎಸ್.ಸಿ.ಪಾಟೀಲರು ಹೇಳುತ್ತಾರೆ. ಆದಿಮಾನವರು ಕಲ್ಲುಬಂಡೆಗಳ ಮೇಲೆ ಗವಿಗಳ ಮೇಲೆ ಚಿತ್ರಗಳನ್ನು ಬಿಡಿಸಿದ್ದನ್ನು ನೋಡಿದರೆ ರಂಗೋಲಿಯು ಇತಿಹಾಸ ಪೂರ್ವದ ಕಾಲಕ್ಕೆ ಹೋಗುತ್ತದೆ. ಜನಪದ ಬಹುಪಾಲು ಕಲೆಗಳಿಗೆ ಲಿಖಿತ ಆಧಾರ ಗುರುತಿಸುವುದು ಕಷ್ಟ ಸಾಧ್ಯವಾಗಿದೆ.[೩೧]

೬೪ ಕಲೆಗಳಲ್ಲಿ ರಂಗೋಲಿ ಕುರಿತ ಬೇರೆ ಹೆಸರಿನ ಕಲೆಯೆಂದು ಇಲ್ಲದಿರುವುದೂ ಈ ಹೆಸರು ರಂಗೋಲಿಯನ್ನೇ ಸೂಚಿಸುತ್ತದೆಯೆಂಬ ಭಾವನೆಗೆ ಅವಕಾಶ ನೀಡುತ್ತದೆ. ಬಂದಿಯವರು ಕಾಮಶಾಸ್ತ್ರದ ತೆಲುವ್ಯಖ್ಯಾನಕಾರರಾದ ಮೊಡಿಚರ್ಲ ಆಂಜನೇಯ ಶಾಸ್ತ್ರಯವರು ರಂಗೋಲಿ ಇದು ಚಿತ್ರಕಲೆಯೆಷ್ಟೇ ಪ್ರಾಚೀನವಾದುದು. ಮಂತ್ರಶಾಸ್ತ್ರ, ತಂತ್ರಶಾಸ್ತ್ರ ಮತ್ತು ಆಗಮಗಳಲ್ಲಿ ವ್ಯಕ್ತವಾಗಿರುವ ಅನೇಕ ಕಾವ್ಯಕರ್ಮಗಳಲ್ಲಿ ದೇವತಾ ವಿಗ್ರಹ ಅಥವಾ ಕಲಶವನ್ನು ಸ್ಥಾಪಿಸುವೆಡೆಯಲ್ಲಿ ಬಣ್ಣ ಬಣ್ಣದ ಧಾನ್ಯಗಳಿಂದ ಅಥವಾ ಬಣ್ಣ ಹಚ್ಚಿದ ಹೂರಸದಿಂದ ಅಕ್ಕಿಗೆ ಬಣ್ಣಕೊಟ್ಟು ಅದರಿಂದ ದೇವತಾಸ್ವರೂಪಗಳನ್ನು ರಚಿಸಿ ಪೂಜಿಸುವ ವಾಡಿಕೆಯುಂಟು. ರಂಗವಲ್ಲಿ ಇದೇ ಮೂಲ ಎಂದಿದ್ದಾರೆ.[೩೨] ಹೀಗೆ ರಂಗೋಲಿಯ ಕುರಿತು ವಿವಿಧ ಬಗೆಯ ಅಭಿಪ್ರಾಯಗಳನ್ನು ಹೇಳಿದ್ದಾರೆ."

ರಂಗೋಲಿಯ ಕುರಿತು ಕಥೆ ಐತಿಹ್ಯ :

ಪ್ರಾಚೀನ ಪರಂಪರೆಯನ್ನು ಹೊಂದಿದ ರಂಗೋಲಿಯ ಕುರಿತು ಹಲವಾರು ಕಥೆ, ಐತಿಹ್ಯಗಳಿದ್ದು ಇವರು ರಂಗೋಲಿಯ ಪ್ರಾಚೀನತೆಯನ್ನು ಸೂಚಿಸುತ್ತದೆ.

ರಾಮಾಯಣದಲ್ಲಿ ಬರುವ ಕಥೆ ಹೀಗೆ ಇದೆ. ರಾಮ, ಲಕ್ಷ್ಮಣ, ಸೀತೆ ಇವರು ಹದಿನಾಲ್ಕು ವರ್ಷ ವನವಾಸಕ್ಕೆ ಹೋಗುತ್ತಾರೆ. ಕಾಡಿನಲ್ಲಿ ಕುಳಿತಾಗ ಸೀತೆಗೆ ನನ್ನೊಂದು ಬಯಕೆಯನ್ನು ಈಡೇರಿಸುವಿಯಾ ಎಂದು ರಾಮನಿಗೆ ಸೀತೆ ಬಸರಿಯಾದಾ ಕೇಳುತ್ತಾಳೆ. ಏನು ಹೇಳು ಎಂದಾಗ ಕಾಡಿನಲ್ಲಿ ಒಂದು ಸುಂದರವಾದ ಜಿಂಕೆ ಇದೆ. ಆ ಜಿಂಕೆಯನ್ನು ತಂದುಕೊಡು ಎಂದು ಕೇಳಿದಾಗ ಆಗಲಿ ಎಂದು ಶ್ರೀ ರಾಮ ಆ ಮಾಯಾ ಜಿಂಕೆಯ ಬೆನ್ನುಹತ್ತಿ ಹೋಗುತ್ತಾನೆ. ಸ್ವಲ್ಪ ಹೊತ್ತಿನ ನಂತರ ಸೀತೆಗೆ "ಲಕ್ಷ್ಮಣ" ಹಾ ಸೀತೆ ಎಂದು ಧ್ವನಿ ಕೇಳಿಬರುತ್ತದೆ. ಇದರಿಂದ ಸೀತೆ ಗಾಭರಿಯಾಗಿ ಲಕ್ಷ್ಮಣನಿಗೆ ರಾಮನಿಗೆ ಏನೋ ಆಗಿದೆ ಅವರನ್ನು ಕರೆದುಕೊಂಡುಬಾ ಎಂದು ಕಳಿಸುತ್ತಾಳೆ. ಲಕ್ಷ್ಮಣ ಸೀತೆಯ ರಕ್ಷಣೆಗಾಗಿ ಮನೆಯ ಮುಂದೆ ರಂಗೋಲಿಯ ಗೆರೆ ಹಾಕಿ ಹೋಗುತ್ತಾನೆ. ನಾನು ಬರುವವರೆಗೆ ಇದನ್ನು ದಾಟಿ ಹೋಗಬಾರದು ಎಂದು ಹೇಳಿ ಹೋಗುತ್ತಾನೆ. ರಾವಣನು ಭಿಕ್ಷುಕನ ವೇಷಧರಿಸಿ ಒಂದು ಭಿಕ್ಷೆ ನೀಡಲು ಸೀತೆಗೆ ಕೇಳುತ್ತಾನೆ. ಸೀತೆ ಭಿಕ್ಷೆ ನೀಡಲು ಲಕ್ಷ್ಮಣ ಹಾಕಿದ ಗೆರೆಯನ್ನು ಮರೆತು ದಾಟಿ ಬರುತ್ತಾಳೆ. ಆಗ ರಾವಣ ಸೀತೆಯನ್ನು ಹೊತ್ತುಕೊಂಡು ಲಂಕೆಗೆ ಹೋಗುತ್ತಾನೆ. ಲಕ್ಷ್ಮಣ ಹಾಕಿದ ಗೆರೆಯನ್ನು ಸೀತೆ ದಾಟಿದುದಕ್ಕೆ ಆಕೆಗೆ ತೊಂದರೆಯಾಯಿತೆಂಬ ಕಥೇ ರೂಢಿಯಲ್ಲಿದೆ.

---

೩೧. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೨೧

೩೨. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೨೩

ರಂಗೋಲಿಯನ್ನು ದಾಟಬಾರದೆಂಬ ನಂಬಿಕೆ ಈಗಲೂ ಜನಪದದಲ್ಲಿ ಉಳಿದುಕೊಂಡು ಬಂದಿದೆ. ಲಕ್ಷ್ಮಣ ಹಾಕಿದ ರೇಖೆಗೆ ಲಕ್ಷ್ಮಣ ರೇಖೆ ಎಂಬ ಹೆಸರೂ ಜನಪದರಲ್ಲಿ ಪ್ರಚಲಿತದಲ್ಲಿದೆ. ಅದರ ಪ್ರಯುಕ್ತ ಬಾಗಿಲ ಮುಂದೆ ರಂಗೋಲಿ ಹಾಕುವುದಾಗಿ ಹೇಳುತ್ತಾರೆ.[೩೩]

"In the Ramayana before Lakshman went to help Rama he drew lines in frount of the hut for the protection of Sita. Even the power ful great demon like Rawan could not cross those lines the Lakshman Rekha without wear ming him self" ಎಂಬ ಮಾತು ಕುರಿತು ಡಾ. ಎಸ್.ಸಿ.ಪಾಟೀಲರು ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ.[೩೪]

ಅರಮನೆಯಲ್ಲಿ ಮುತ್ತು ಕಟ್ಟಿದ ಬಾಗಿಲ ಬಳಿ ರತ್ನ ಖಚಿತವಾದ ಹೆಬ್ಬಾಗಿಲ ಹತ್ತಿ ಸೊಗಸಾದ ರಂಗೋಲಿ ಹಾಕಿಸುತ್ತಿದ್ದ ಸುಂದರವಾದ ರಂಗೋಲಿಯನ್ನು ಕಂಡು ಜನಕಮಹಾರಾಜನು ಸಂತೋಪಡುತ್ತಿದ್ದ. ಇನ್ನೊಂದು ಸಂಗತಿ ರಾಮಾಯಣದಲ್ಲಿದೆ.[೩೫] ಎಂದು ಹೇಳಬಹುದು.

ಹೀಗೆ ರಂಗೋಲಿಯ ಕುರಿತು ಕಥೆಗಳಿವೆ. ರಂಗೋಲಿ ಕಲೆಯನ್ನು ಪ್ರತಿಯೊಬ್ಬರೂ ಪ್ರೀತಿಸುತ್ತಾರೆ. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ರಂಗೋಲಿಯನ್ನು ಗದಗ ಜಿಲ್ಲೆಯ ಪ್ರತಿಯೊಬ್ಬರ ಮನೆಯ ಮುಂದೆ ರಂಗೋಲಿಯನ್ನು ಹಾಕುವ ವಾಡಿಕೆ ಇದೆ. ಅನೇಕ ಸಭೆ ಸಮಾರಂಭಗಳಲ್ಲಿ, ಹಬ್ಬ ಹರಿದಿನಗಳಲ್ಲಿ ರಂಗೋಲಿ ಕಲೆಯನ್ನು ಹಾಕುತ್ತಾರೆ. ಹಾಗೂ ಶಾಲಾ-ಕಾಲೆಜುಗಳಲ್ಲಿ ರಂಗೋಲಿಯ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ.

ಶ್ರೀಮತಿ ಸುಮನ್ ಕುಲಕರ್ಣಿ : ಇವರು ಅನೇಕ ರಾಜ್ಯ, ರಾಷ್ಟ್ರಮಟ್ಟದ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಬಾಲ್ಯದಲ್ಲಿಯೇ ಪ್ರತಿಭಾವಂತೆಯಾದ ಇವರು ರಂಗೋಲಿ ಸ್ಪರ್ಧೆಯು ನಡೆದಲ್ಲಿ ಹಾಜರಾಗಿ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಅನೇಕ ಮಹಿಳೆಯರಿಗೆ ರಂಗೋಲಿ ಕುರಿತು ತಿಳುವಳಿಕೆಯನ್ನು ನೀಡುತ್ತಾರೆ. ಚುಕ್ಕೆ ಚಿತ್ರ, ರಂಗೋಲಿ, ಸರಳಗ್ಯೆ ರಂಗೋಲಿ, ಚುಕ್ಕೆ ರಹಿತ ರಂಗೋಲಿ ಹೆಚ್ಚಾಗಿ ಅಲಂಕಾರಿಕವಾಗಿ ಸುಂದರವಾಗಿ ಕಾಣುತ್ತದೆ. ಆದ್ದರಿಂದ ಈ ರಂಗೋಲಿಯನ್ನು ಹಾಕುತ್ತಾರೆ. ಶ್ರೀಮತಿ ಸುಮನ್ ಕುಲಕರ್ಣಿಯವರನ್ನು ಸಂದರ್ಶಿಸಿದಾಗ ರಂಗೋಲಿಯ ಸುಮಂಗಲೆ ಮನೆಯಲ್ಲಿ ಶಾಂತಿ ಸೌಹಾರ್ದತೆಗಳು ನೆಲೆಸುತ್ತವೆ. ಮನಸ್ಸಿಗೆ ಆನಂದವನ್ನು ನೀಡುತ್ತವೆ. ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇದರೆಲ್ಲ ಸ್ಫೂರ್ತಿ ತಮ್ಮ ತಂದೆ-ತಾಯಿ ಹಾಗೂ ಪತಿಯವರ ಸಹಾಯ ಸಹಕಾರದಿಂದ ರಂಗೋಲಿ ಕಲೆಯಲ್ಲಿ ಬೆಳೆಯಲು ಕಾರಣವಾಯಿತು ಎಂದು ಹೇಳುತ್ತಾರೆ.[೩೬] ಇನ್ನು ಅನೇಕ ಮಹಿಳೆಯರು ರಂಗೋಲಿಯಲ್ಲಿ ಉತ್ತಮವಾದ ಸಾಧನೆಯನ್ನು ಮಾಡಿದ್ದಾರೆ.

---

೩೩. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೨೫

೩೪. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೨೫

೩೫. ಡಾ। ಎಸ್.ಸಿ.ಪಾಟೀಲ: ಕರ್ನಾಟಕದ ಜನಪದ ಚಿತ್ರಕಲೆ ಕರ್ನಾಟಕ ವಿ.ವಿ. (ಪು.ಸಂ) ೨೨೬

೩೬. ಸುಮನ್ ಕುಲಕರ್ಣಿ ಸಂದರ್ಶನ ದಿನಾಂಕ: ೨೮-೬-೨೦೧೦

ರಂಗೋಲಿಯನ್ನು ಗದಗ ಜಿಲ್ಲೆಯ ಲಂಬಾಣಿ ತಾಂಡಾಗಳಲ್ಲಿ ಹಾಕುತ್ತಾರೆ. ಈ ಜನರು ದೇವತಾ ಕಾರ್ಯಗಳಲ್ಲಿ ಆಯಾ ದೇವತೆಗಳಿಗೆ ಅನುಗುಣವಾಗಿ ಅವರ ಹೆಸರಿನಿಂದ ರಂಗೋಲಿ ಹಾಕುತ್ತಾರೆ. ಪೂರ್ವ ಪಶ್ಚಿಮವಾಗಿ ಕುಳಿತುಕೊಂಡು ರಂಗೋಲಿ ಹಾಕಬೇಕೆಂಬ ನಿಯಮಗಳಿಗೆ ಲಂಬಾಣಿ ಜನರು ಪೂಜಾ ಸ್ಥಾನದಲ್ಲಿ ರಂಗೋಲಿ ಹಾಕುತ್ತಾರೆ.

ಕುಲದೇವತೆಗಳಾದ ದುರ್ಗಾದೇವಿ, ತುಳಜಾ ಭವಾನಿ, ಸೀತಾ ಸತ್ತಿ ದೇವತೆಗಳಿಗೆ ವಿಶಿಷ್ಟವಾದ ರಂಗೋಲಿಯನ್ನು ಹಾಕುತ್ತಾರೆ. ದುರ್ಗಾ ಮಾತೆಯ ಮುಂದೆ ವರ್ತುಲಾಕಾರವಾಗಿಯೂ ತುಳಜಾ ಭವಾನಿಯ ಮುಂದೆ ಚೌಕಾಕಾರವಾಗಿಯೂ ಸೀತಾ ಸತ್ತಿಯ ಮುಂದೆ ತ್ರಿಕೋನಾಕಾರವಾಗಿಯೂ ರಂಗೋಲಿ ಹಾಕುತ್ತಾರೆ. ಎಂದು ಶ್ರೀಲಕ್ಷ್ಮಣ ತುಳಸಿಮನಿ ಇವರಿಂದ ಕೇಳಿತಿಳಿದುಕೊಳ್ಳಲಾಯಿತು.[೩೭] ಹಾಕುವಾಗ ರೇಖೆಗಳು ಸಮಪ್ರಮಾಣದಲ್ಲಿ ಬರಲು ಅಳತೆಗೋಲು ಹಿಡಿಯುತ್ತಾರೆ. ಪ್ರತಿ ಎರಡು ರೇಖೆಗಳು ಪರಸ್ಪರ ಸಂಧಿಸುವಲ್ಲಿ ಒಂದೊಂದು ಲಿಂಬೆಯ ಹಣ್ಣು, ಉತ್ತತ್ತಿ, ಅಡಿಕೆ, ಹೂ, ಕಾಯಿಗಳನ್ನಿಟ್ಟು ಪೂಜೆ ಮಾಡುತ್ತಾರೆ. ಲಂಬಾಣಿಯ ಜನರಲ್ಲಿ ಮಹಿಳೆಯರಿಗಿಂತ ಪುರುಷರೇ ರಂಗೋಲಿಯನ್ನು ಬರೆಯುತ್ತಾರೆ. ಇದನ್ನೇ ಚೊಕೊಪುರು ಎಂದು ಕರೆಯುತ್ತಾರೆ. ರಂಗೋಲಿ ಕಲೆಯ ಕುರಿತು ಗದಗ ಜಿಲ್ಲೆಯಲ್ಲಿ ಅನೇಕ ಕಲಾವಿದರು ರಂಗೋಲಿ ಕಲೆಯನ್ನು ಪ್ರಶಸ್ತಿ ಪಡೆದ ಕುಮಾರಿ ರಾಜೇಶ್ವರಿ ಮರಿಗೌಡರ ಇವಳು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ತಾಲೂಕಾ ಮಟ್ಟದ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದುಕೊಂಡಿದ್ದಾಳೆ. ದಿವ್ಯಾ ಬದ್ನಾಳ ಗದಗ ಇವಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದುಕೊಂಡಿದ್ದಾಳೆ. ಗೀತಾ ಚಳಗೇರಿ ಗದಗ ಇವಳು ಜಿಲ್ಲಾಮಟ್ಟದ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದುಕೊಂಡಿದ್ದಾಳೆ, ದೀಪಾ ಧರ್ಮಾಯತ ಗದಗ, ವಿಣಾ ಕೊಪ್ಪಳ, ಗದಗ ವೀಣಾ ರಂಗರೇಜಿ, ಸುಮಿತ್ರಾ ಮಲ್ಲಾಡದ ಮುಂತಾದವರು.

ಹಚ್ಚೆಕಲೆ : ಹಚ್ಚೆಕಲೆಯು ಜಾನಪದೀಯ ಕಲೆಯಾಗಿದೆ. ಚರ್ಮದ ಮೇಲೆ ಚಿತ್ರವಾಗಿ ಸ್ಥಾನ ಪಡೆದ "ಹಚ್ಚೆ" ಕಲೆಯಾಗಿದೆ. ಪ್ರಪಂಚವ್ಯಾಪಿಸಿ ದೀರ್ಘ ಇತಿಹಾಸವನ್ನು ಹೊಂದಿದೆ. ಹಲವಾರು ವಿದ್ವಾಂಸರು ಈ ಹಚ್ಚೆ ಕಲೆಯ ಪ್ರಾಚೀನತೆಯ ಕುರಿತು ಚರ್ಚಿಸಿದ್ದಾರೆ. ಅದರ ವಿಕಾಸ ಪ್ರಸಾರ ಕುರಿತು ಆಲೋಚನೆಗಳನ್ನು ಹರಿಯಬಿಟ್ಟಿದ್ದಾರೆ. ಕನ್ನಡದಲ್ಲಿ 'ಹಚ್ಚೆ' ಪದವು 'ಪಚ್ಚೆ' ಮೂಲದಿಂದ ಬಂದಿದೆ. "ಹಚ್ಚೆ" ಎಂದರೆ ಹಸಿರು ಮಣಿ ಅಥವಾ ರತ್ನ. ಹಸಿರು ಬಣ್ಣ, ಹಣೆಯ ಮೇಲಿನ ಸ್ಥಿರವಾದ ತಿಲಕ ಎಂಬರ್ಥಗಳಿವೆ. ಚರ್ಮದ ಮೇಲೆ ಶಾಶ್ವತವಾಗಿ ಇರಬಲ್ಲ ಹಸಿರು ಬಣ್ಣದ ಗುರುತೇ ಹಚ್ಚೆಯಾಗಿದೆ.[೩೮]

ಹೆಚ್ಚೆಕಲೆಯು ಭಾರತದ ಬೇರೆ ಬೇರೆ ಜನಾಂಗಗಳಲ್ಲಿ ಬೇರೆ ಹೆಸರನಿಂದ ಕರೆಯಲ್ಪಡುತ್ತದೆ. ಮರಾಠಿಯಲ್ಲಿ "ಗೊಂದನ್", ತೆಲುಗಿನಲ್ಲಿ "ಮಚ್ಚಾ", ತಮಿಳಿನಲ್ಲಿ "ಕೈಕಾ", "ಪಾಡ್ಲಾ", ಕೊಡಗಿನಲ್ಲಿ "ಹಚ್ಚೆಬಟ್ಟಾ", ಹಿಂದಿ ಉರ್ದುವಿನಲ್ಲಿ "ಗೊದಾನಾ" ಎಂದು ಬೇರೆ ಬೇರೆ ರೀತಿಯಲ್ಲಿ ಕರೆಯಲ್ಪಡುತ್ತದೆ.

---

೩೭. ಶ್ರೀ ಲಕ್ಷ್ಮಣ ತುಳಸಿಮನಿ ಸಂದರ್ಶನ ದಿನಾಂಕ ೩೮-೭-೨೦೧೧

೩೮. ಡಾ। ಎಸ್.ಸಿ.ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಮ.ಸಂ) ೭೧

ಕರ್ನಾಟಕ ಮೈಸೂರು ಭಾಗದಲ್ಲಿ ಹಚ್ಚೆ, ಹಚ್ಚಿ ಎಂದೂ ವಿಜಾಪುರ ಕಲಬುರ್ಗಿ ಭಾಗದಲ್ಲಿ ಹಂಚಿಬೊಟ್ಟು, ಹಚ್ಚಿ ಎಂದೂ ಧಾರವಾಡ, ಬೆಳಗಾವಿ, ಗದಗ, ಜಿಲ್ಲೆಯ ಬಿಂಕದಕಟ್ಟಿ ಎಂಬ ಊರಲ್ಲಿ ಶ್ರೀಮತಿ ರೇಣುಕಾ ವಿರುಪಾಕ್ಷಪ್ಪ ಕ್ಷೇತ್ರಿ ಎಂಬ ಮಹಿಳೆಯು ಈಗಲೂ ಸ್ತ್ರೀಯರಿಗೆ ಹಚ್ಚೆಯನ್ನು ಹಾಕುತ್ತಿದ್ದಾರೆ. ತಮ್ಮ ಅನುವಂಶಿಕ ಕಲೆಯನ್ನು ರೇಣುಕಾ ಎಂಬ ಮಹಿಳೆಯು ಒಂದು ಸಾಂಪ್ರದಾಯಿಕ ಕಲೆಯಲ್ಲಿ ಪರಿಣಿತಳು. ಗ್ರಾಮೀಣ ಸ್ತ್ರೀ ಮಹಿಳೆಯರ ಹಣೆ, ಗದ್ದ ಕೈಗಳಲ್ಲಿ ಅದರ ಮೇಲೆ ಶಾಶ್ವತವಾಗಿ ಉಳಿಯುವಂತೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಹಾಕುವ ಬಳಸುವ ವಸ್ತುಗಳನ್ನು ತಾವೇ ತಯಾರಿಸಿಕೊಳ್ಳುತ್ತಾರೆ. ತೊಂಡೆ ಎಲೆಯನ್ನು ಕುದಿಸಿ ಅದರ ದೀಪದ ಕಾಡಿಗೆಯನ್ನು ಸೇರಿಸುತ್ತಾರೆ. ಈ ದ್ರವದ ಹಚ್ಚೆಯನ್ನು ಹಚ್ಚುವಲ್ಲಿ ಲೇಪಿಸುತ್ತಾರೆ. ಮೂರು ಅಥವಾ ನಾಲ್ಕು ಸೂಜಿಗಳನ್ನು ಉಪಯೋಗಿಸುತ್ತಾರೆ. ನಂತರ ಕೊಬ್ಬರಿ ಎಣ್ಣೆ ಅರಿಷಿಣವನ್ನು ಲೇಪಿಸುತ್ತಾರೆ. ದ್ರವವನ್ನು ಕುದಿಸಿರುವುದರಿಂದ ಹಾಗೂ ನಂಜು ನಿರೋಧಕ ಗುಣದ ಅರಿಷಿಣ ಹಚ್ಚುವದರಿಂದ ಗಾಯವು ಬೇಗನೆ ವಾಸಿಯಾಗುತ್ತದೆ. ಈ ಹಚ್ಚೆಯನ್ನು ಚುಚ್ಚಿಕೊಳ್ಳುವುದಕ್ಕೆ ಸಾಂಪ್ರದಾಯಕ ಕಾರಣ ಹಾಗೂ ಮೂಢನಂಬಿಕೆಗಳಿವೆ. ಹಣೆಗೆ ಹಚ್ಚೆ ಹಾಕಿಸಿಕೊಳ್ಳುವುದೆಂದರೆ ಖಾಯಂ ಮುತ್ತೈದೆ ಭಾಗ್ಯ ಹಾಗೂ ಬಲಗೈಯಲ್ಲಿ ನಾಲ್ಕನೆಯ ಬೆರಳಿಗೆ ನೊಣದ ಚಿತ್ರ ಹಾಕಿದರೆ ತಯಾರಿಸಿದ ಆಹಾರ ಹಳಸುವುದಿಲ್ಲ ಎಂಬ ನಂಬಿಕೆಯು ಪ್ರಚಲಿತವಾಗಿದೆ. ಕೈಗೆ ಸೂರ್ಯಪಾನ ಹಾಗೂ ಹನಮಂತನ ಚಿತ್ರದ ಹಚ್ಚೆ ಹಾಕಲಾಗುತ್ತದೆ. ಹಚ್ಚೆಚುಚ್ಚುವುದರಿಂದ ಕೆಲವು ವೈದ್ಯಕೀ ಗುಣಗಳು ಇರುವುದನ್ನು ನಂಬಲಾಗಿದೆ ಪದೇ ಪದೇ ಹೊಟ್ಟೆ ನೋವು ಬರುತ್ತಿದ್ದರೆ ನರ ನೋಡಿ ಹಚ್ಚೆಯನ್ನು ಚುಚ್ಚಿದರೆ ನೋವು ಬರುವುದಿಲ್ಲ. ಹಾಗೂ ಮೊಣಕಾಲು ನೋವು ಇದ್ದರೆ ನರನೋಡಿ ಚುಚ್ಚಿದರೆ ನೋವು ನಿವಾರಣೆಯಾಗುತ್ತದೆ. ಸ್ತ್ರೀಯರಿಗೆ ಹೆರಿಗೆ ಸಮಯದಲ್ಲಿ ಮಕ್ಕಳು ಬದುಕದೇ ಇದ್ದರೆ ನರನೋಡಿ ಚುಚ್ಚಿದರೆ ಮಕ್ಕಳು ಬದುಕುವರು ಎಂಬ ನಂಬಿಕೆ ಇದೆ.[೩೯] ಚುಚ್ಚುವರಿಗೆ ಸೀರೆ ಉಡಿಸಿ ಹೋಗುತ್ತಾರೆ. ಹೆಚ್ಚಾಗಿ ಲಂಬಾಣಿಯ ಮಹಿಳೆಯರು ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕು ಸೂರಣಗಿ ಎಂಬ ಗ್ರಾಮದವಳಾದ ಶ್ರೀಮತಿ ಯಲ್ಲವ್ವ ಕೀಳಿಕ್ಯಾತರ ಎಂಬುವಳು ಈಗಲೂ ಹಚ್ಚೆ ಕಲೆಯನ್ನು ಮುಂದುವರಿಸಿಕೊಂಡು ಬಂದಳು. ಈ ಕಲೆಯನ್ನು ಅನುವಂಶಿಕವಾಗಿ ಬೆಳಸಿಕೊಂಡು ಬಂದಿದ್ದಾಳೆ.[೪೦]

ಹಚ್ಚೆ ಹಾಕುವ ಸಾಮಗ್ರಿಗಳು : ಸಣ್ಣಸೂಜಿ ಅತೀ ಸಣ್ಣ ಸೂಜಿ ಮೂರು ನಾಲ್ಕು ಸೂಜಿಯನ್ನು ಉಪಯೋಗಿಸುತ್ತಾರೆ.

ಹಚ್ಚೆ ಬಣ್ಣವನ್ನು ತಯಾರಿಸುವ ವಿಧಾನ : ಕೊಬ್ಬರಿಯನ್ನು ಸುಟ್ಟು ಎಣ್ಣೆ ಮತ್ತು ಸುಟ್ಟ ಚಿಪ್ಪಿನ ಬೂದಿಯನ್ನು ದ್ರಾವಣ ಮಾಡಿಕೊಂಡು ಮಹಿಳೆಯರಿಗೆ ಹಾಗೂ ಚಿಕ್ಕ ಮಕ್ಕಳಿಗೆ ಉಪಯೋಗಿಸುತ್ತಾರೆ. ಮಹಿಳೆಯರಿಗೆ ಹಣೆಯ ಮೇಲೆ ಹಾಗೂ ಮೊಣಕಾಲು ಮತ್ತು ಸುಳಿ ಇದ್ದ ಭಾಗಕ್ಕೆ ಮಾತ್ರ ಹಚ್ಚೆಯನ್ನು ಚುಚ್ಚುತ್ತಾರೆ ಮತ್ತು ಚಿಕ್ಕ ಮಕ್ಕಳಿಗೆ ಬೆನ್ನ ಮೇಲೆ ಸುಳಿ ಇದ್ದರೆ ಮಾತ್ರ ಮಕ್ಕಳಿಗೆ

೩೯. ಶ್ರೀಮತಿ ರೇಣುಕಾ ವಿರುಪಾಕ್ಷಪ್ಪ ಕ್ಷತ್ರಿ ಇವರ ಸಂದರ್ಶನ ದಿನಾಂಕ ೨೭-೧೧-೨೦೧೦

೪೦. ಶ್ರೀಮತಿ ಯಲ್ಲಮ್ಮ ಕಳ್ಳಿಕ್ಯಾತರ ಇವರ ಸಂದರ್ಶನ ದಿನಾಂಕ ೨೮-೨-೨೦೧೦

ಹಚ್ಚೆಯನ್ನು ಹಾಕಿಸುತ್ತಾರೆ. ಸುತ್ತಮುತ್ತಲಿನ ಪ್ರದೇಶದ ಜನರು ಯಲ್ಲಮ್ಮನ ಮನೆಗೆ ಬಂದು ಹಚ್ಚೆಯನ್ನು ಹಾಕಿಸಿಕೊಂಡು ಹೋಗುತ್ತಾರೆ. ಹಚ್ಚೆಯನ್ನು ಹಾಕುವ ನಿಯಮ ರವಿವಾರ ಮತ್ತು ಗುರುವಾರ ಮಾತ್ರ ಹಾಕಿಸುತ್ತಾರೆ.

ಹಚ್ಚೆ ಹಾಕುವ ಅಥವಾ ಹಾಕಿಸಿಕೊಳ್ಳುವ ನಂಬಿಕೆ ಮಹಿಳೆಯರು ಹೆತ್ತಮಕ್ಕಳು ಬದುಕುತ್ತಿರುವುದಿಲ್ಲ. ಅಂಥವರು ರವಿವಾರ, ಗುರುವಾರ ಬಂದು ಹಚ್ಚೆಯನ್ನು ಹಾಕಿಸಿಕೊಂಡು ಉಟ್ಟ ಬಟ್ಟೆಯಲ್ಲಿ ಸ್ನಾನಮಾಡಿ ಪುನಃ ಆ ಬಟ್ಟೆಯನ್ನು ತೊಡುವುದಿಲ್ಲ ಅಲ್ಲಿ ಬಿಟ್ಟು ಹೋಗುತ್ತಾರೆ. ಆ ಊರಿನ ಹನಮಂತ ದೇವಸ್ಥಾನಕ್ಕೆ ಹೋಗಿ ಪೂಜೆಯನ್ನು ಮಾಡಿಕೊಂಡು ಹೋಗುತ್ತಾರೆ. ಎಂಬ ನಂಬಿಕೆ ಇದೆ. ಸೂರಣಗಿಯ ಯಲ್ಲಮ್ಮ, ಮಗಳಿಗೆ ಅಣ್ಣನ ಹಚ್ಚೆಕಲಡ ಹಾಕುವುದನ್ನು ಕಲಿಸಿದ್ದಾರೆ. ಇವಳ ಮಗಳು ಪಾರವ್ವಳು ಹಚ್ಚೆ ಹಾಕುವುದನ್ನು ಕಲಿಯುತ್ತಿದ್ದಾಳೆ.[೪೧] ಈ ಊರಲ್ಲಿ ೫೦ ರಿಂದ ೬೦ ಮನೆಗಳಿದ್ದು ಕೀಳಿಕ್ಯಾತರ ಮನೆಗಳೂ ಇವೆ. ಅದರಲ್ಲಿ ಯಲ್ಲವ್ವ ನಿಂಗಬಸಪ್ಪ ಕೀಳಿಕ್ಯಾತರ ಮನೆಯ ಹಚ್ಚೆಯ ಕಲೆಯನ್ನು ಮುಂದೆ ಯಲ್ಲವ್ವ ಮಗಳು ಪಾರವ್ವಳು ಮುಂದುವರೆಸಿಕೊಂಡು ಬರುತ್ತಿದ್ದಾಳೆ.

ಹಾಗೂ ಗದಗ ಜಿಲ್ಲೆಯ ಬಿಂಕದಕಟ್ಟಿಯ ಶ್ರೀಮತಿ ರೇಣುಕಾ ವಿರುಪಾಕ್ಷಪ್ಪ ಕ್ಷತ್ರಿಯವರು ಮನೆಯ ಮಹಿಳೆಯರು ಹಚ್ಚೆ ಹಾಕುವುದರಲ್ಲಿ ನಿಪುಣೆಯತೆಯನ್ನು ಹೊಂದಿದ್ದಾರೆ. ಹಚ್ಚೆಯ ಹಾಕುವ ಕುರಿತ ನಂಬಿಕೆಯ ವಿವಿಧ ಜನಾಂಗಗಳಲ್ಲಿರುವ ನಂಬಿಕೆಗಳು ಮಹಿಳೆಯ ಕೈ ಹಾಗೂ ಮೈಗಳಲ್ಲಿ.

ಹಚ್ಚೆ ಹಾಕುವುದರಿಂದ ಆಗುವ ಲಾಭ : ಹಚ್ಚೆ ಇದ್ದರೆ ಮಾಡಿದ ಅಡಿಗೆ ಹುಲುಸಾಗುತ್ತದೆ. ಮಾಟ ಮಂತ್ರ ಮೈಗೆ ಅಂಟುವುದಿಲ್ಲ. ಹಚ್ಚೆ ಕೈಯಲ್ಲಿ ಇದ್ದರೆ ಹೆಣ್ಣುಮಕ್ಕಳು ಮನೆಯ ಲಕ್ಷ್ಮೀ, ಹಚ್ಚೆ ಸೌಂರ್ಯದ ಸಂಕೇತ, ಕಷ್ಟಗಳು ಬರುವುದಿಲ್ಲ.

ಹಚ್ಚೆಯ ಸಾಕುವಸಾಮಗ್ರಿ : ೧ ಸೂಜಿಯದಿಂಡು ೨. ಚಿತ್ರ ಬರೆಯುವ ಕಡಿ ೩. ಹಚ್ಚೆಯ ನಕ್ಷೆ ಚಿತ್ರಗಳಿರುವ ಪುಸ್ತಕ ೪. ಹಚ್ಚೆ ಹಾಕುವಾಗ ಬಳಸುವ ಹಚ್ಚೆ ಮಸಿಯ ಚಿಕ್ಕ ಕುಡಿಕೆ. ೫. ಹಚ್ಚೆ ಚುಚ್ಚುವ ಸೂಜಿಗಳನ್ನಿಡುವ ಕುಡಿಕೆ ೬. ಬಿದಿರಿನ ಕೊಳವೆ.

ಸೂಜಿಯ ದಿಂಡು : ಹಚ್ಚೆ ಹೊಯ್ಯಲು ಉಪಯೋಗಿಸುವ ಚೂಪಾದ ಸೂಜಿಗಳ ಕಡ್ಡಿಗೆ ಹಂಚು ಎನ್ನುತ್ತಾರೆ. ಒಂದೂವರೆ ಇಂಚಿನಷ್ಟು ಉದ್ದದ ೨, ೩, ೪, ೬ ನಂ. ಬೇಕಾದಷ್ಟು ಸೂಜಿಗಳನ್ನು ಒಂದೇ ಸಮನಾಗಿ ಜೋಡಿಸಿ ಅವುಗಳ ಎರಡೂ ಬದಿಗೆ ಬಿದಿರ ಕಡ್ಡಿಯ ಸಣ್ಣ ಪಟ್ಟಿಗಳನ್ನಿಟ್ಟು ದಾರದಿಂದ ಬಿಗಿಯಾಗಿ ಸುತ್ತಿಕಟ್ಟುತ್ತಾರೆ. ಸೂಜಿಯ ಮೊನಚು ಭಾಗ ಕಾಲು ಇಂಚಿನ ಹೊರಕ್ಕೆ ಕಾಣುತ್ತಿರುವಂತೆ ಕಟ್ಟಿರಬೇಕಾಗುತ್ತದೆ. ಹಚ್ಚೆ ಚಿತ್ರಗಳಿಗೆ ದೊಡ್ಡ ಸೂಜಿಗಳನ್ನು ಹೆಚ್ಚಿಗೆ ಉಪಯೋಗಿಸುತ್ತಾರೆ. ಇದನ್ನು ಕಿಳ್ಳಿಕ್ಯಾತರು ರೇಣುಕಾ ಮತ್ತು ಸೂರಣಿಗಿ ಯಲ್ಲಮ್ಮ ಸೂಜಿ ದಿಂಡು ಎಂದು ಕರೆಯುತ್ತಾರೆ.

ಚಿತ್ರ ಬರೆಯುವ ಕಡ್ಡಿ : ಮುಂದೆ ಚೂಪಾಗಿ ಕೆತ್ತಿದ ಬಿದಿರಿನ ನವಿಲುಗರಿಯ ಒಂದು ಸಣ್ಣಕಡ್ಡಿಯನ್ನು ಬೆಂಕಿಕಡ್ಡಿಯನ್ನು ಹಚ್ಚೆಯ ವಿನ್ಯಾಸಗಳನ್ನು ಹೊಯ್ಯತೊಡುಗುತ್ತಾರೆ. ಕಡ್ಡಿನಲ್ಲಿರುವ ಮನೆಯೊಳಗೆ ಕಡಿಯನ್ನು ಅದ್ದಿ ಹಚ್ಚೆಗೆ ಲೇಪಿಸುತ್ತಾರೆ.

---

೪೧. ಶ್ರೀಮತಿ ಯಲ್ಲಮ್ಮ ಕಳ್ಳಿಕ್ಯಾತರ ಇವರ ಸಂದರ್ಶನ ದಿನಾಂಕ ೨೮-೨-೨೦೧೦

ಹಚ್ಚೆಯ ಹಾಕುವ ಮಸಿಯ ಚಿಕ್ಕ ಕುಡಿಕೆ : ಇದು ಮಣ್ಣಿನ ಕುಡಿಕೆ ಇರುತ್ತದೆ. ಮಸಿಯನ್ನು ಕೊಬ್ಬರಿ ಸುಟ್ಟುಕೊಂಡು ಚಿಪ್ಪನ್ನು ಬುದಿಯನ್ನು ಬಳಸಿಕೊಂಡು ಸ್ವಲ್ಪ ನೀರನ್ನು ಬಳಸಿಕೊಂಡು ಚಿಕ್ಕ ಕುಡಿಕೆಯಲ್ಲಿ ಹಾಕಿರುತ್ತಾರೆ.

ಹಚ್ಚೆ ಸೂಜಿಗಳನ್ನಿಡುವ ಬಿದಿರಿನ ಕೊಳವೆ : ಹಚ್ಚೆ ಹೊಯ್ಯವುದಾದ ಮೇಲೆ ಆ ಸೂಜಿಗಳನ್ನು ಚಿಮಣಿ ಎಣ್ಣೆಯಲ್ಲಿ ತೊಳೆದು ಅವುಗಳಿಗೆ ಒಳ್ಳೆ ಎಣ್ಣೆಯನ್ನು ಲೇಪಿಸಿ ನಂತರ ಸ್ವಚ್ಛವಾಗಿ ಬಟ್ಟೆಯಿಂದ ಒರಸಿ ಅರಿವೆಯ ಸುತ್ತಿಕಟ್ಟುತ್ತಾರೆ. ಇದರಿಂದ ಸೂಜಿಗಳಿಗೆ ಜಂಗು ಹತ್ತುವುದಿಲ್ಲ. ಜಂಗು ಹಿಡಿದ ಸೂಜಿಗಳಿಂದ ಹಚ್ಚೆ ಚುಚ್ಚಿದರೆ ನಂಜಾಗುವ ಸಂಭವ ಬರಬಹುದು. ಗದಗ ಜಿಲ್ಲೆಯ ಪರಿಸರದಲ್ಲಿ ಬಿಂಕದಕಟ್ಟಿಯ ರೇಣುಕಾ ಹಾಗೂ ಸೂರಣಗಿಯ ಯಲ್ಲವ್ವ ಕಿಳ್ಳಿಕ್ಯಾತರ ಮನೆತನದವರು ಈಗಲೂ ತಮ್ಮ ವೃತ್ತಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ.[೪೨]

ಕೌದಿಯ ಕಲೆ :

ನಗ್ನಾವಸ್ಥೆಯ ಮಾನವನಿಗೆ ಕಾಲಕ್ರಮದಲ್ಲಿ ಪೂರ್ಣಾಭಿಮಾನದ ಭಾವಗಳು ಹೆಚ್ಚು ಕಾಡತೊಡಗಿದಾಗ ಅವನ ಮೈಮೇಲೆ ಹೊದಿಕೆ ಅನಿವಾರ್ಯವಾಗತೊಡಗಿತು. ಮೈಮೇಲೆ ತೊಡುವ ಬಟ್ಟೆಗಳು ಮಳೆಗಾಳಿ ಬಿಸಿಲುಗಳಿಂದ ರಕ್ಷಿಸಿಕೊಳ್ಳಲು ಹೊದ್ದಿಕೆಗಳು ಅವಶ್ಯಕ ಸಾಧನೆಗಳಾಗತೊಡಗಿದವು. ಮುಂದೆ ತೊಗಟೆ, ಎಲೆಯಂಥ ವಸ್ತುಗಳ ಬಟ್ಟೆ ಮತ್ತು ಹೊದಿಕೆಯ ಕಾಲಾನಂತರದಲ್ಲಿ ಇಂದಿನ ನೂಲಿನ ಬಟ್ಟೆ ಮತ್ತು ಆ ಬಟ್ಟೆಯ ಹೊದಿಕೆಗೆ ಮನಿಪೂಕಾಲಿಟ್ಟನು ಈ ಹಿನ್ನೆಲೆಯಲ್ಲಿ ಜನಪದರು ಹಾಸು ಹೊದಿಕೆಗಾಗಿ ಬಳಸು ಕೌದಿಯ ಒಂದು ಅವಶ್ಯಕ ಸಾಧನವಾಯಿತು.[೪೩]

ಕೌದಿಯ ಕುರಿತು ಅನೇಕ ತಜ್ಞರು ಬೇರೆ ಬೇರೆ ರೀತಿಯಲ್ಲಿ ಹೇಳಿದ್ದಾರೆ. ಶಬ್ದಕೋಶಗಳಲ್ಲಿ 'ಕೌದಿ' ಪದಕ್ಕೆ ತಕ್ಕಂತೆ ಹಳೆಯ ಅರಿವೆಯ ಹೊಸಹೊದಿಕೆ ತುಂಡು ಬಟ್ಟೆಗಳನ್ನು ಕೂಡಿಸಿಹೊಲಿದ ಹಚ್ಚಡವೆಂದು"[೪೪] ಕನಾವಚಕದಲ್ಲಿ ಕೌದಿಯನ್ನು ಕವೂದಿ, ಕವಿವಿ. ಕವೂದಿ, ಕೌಂದಿ, ಕಂತೆ ಎಂದು ಕರೆಯತ್ತಾರೆ. ಕೌದಿಯನ್ನು ತಮಿಳುನಲ್ಲಿ ಕವನ್ದಿ, ಕವನ್ದಿಗೈವರ, ತಿಯಾಳೆದಲ್ಲಿ ಕವಿಯನ್ ಮರಾಠಿಯಲ್ಲಿ 'ಕಂಥಾ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿದೆ.'[೪೫]

ಕ್ರಿ.ಶ. ಸುಮಾರು ೨ನೆಯ ಶತಮಾನದ ಆಯುರ್ವೇದಶಾಸ್ತ್ರ ಕೃತಿಯಿಂದ 'ಚರಕ ಸಂಹಿತಾದಲ್ಲಿ ಕೌದಿಯನ್ನು ಕಂಥಾ ಎಂದು ಕರೆಯಲಾಗಿದೆ. ಇದು ಕೌದಿಯನ್ನು ಉಲ್ಲೇಖಿಸುವ ಪ್ರಾಚಿನ ದಾಖಲೆಯಾಗಿದೆ.'[೪೬]

ಈ ಕಲೆಯು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತದೆ. ಕೌದಿಯುನ್ನು ಹೊಲಿಯಬೇಕಾದರೆ ಹತ್ತಿಯಿಂದ ದಾರ ಸ್ವತಃ ತಾವೇ ತಯಾರಿಸಿಕೊಳ್ಳುತ್ತಿದ್ದರು. ಹತ್ತಿಯನ್ನು ತೊಡೆಯ ಮೇಲೆ ಕಾಲ ಮೇಲೆ ಅಥವಾ ಅಂಗೈಯಿಂದ ಹೊಸದುಕೊಂಡು ದಪ್ಪವಾದ ದಾರ

೪೨. ಶ್ರೀಮತಿ ಯಲ್ಲವ ಕಳ್ಳಿಕ್ಯಾತರ ಸಂದರ್ಶನ ದಿನಾಂಕ ೨೯-೨-೨೦೧೦
೪೩. ಡಾ॥ ಎಸ್.ಸಿ.ಪಾಟೀಲ ಕರ್ನಾಟಕದ ಜನಪದ ಚಿತ್ರಕಲೆ (ಪು.ಸಂ) ೧೨೯
೪೪. ಡಾ॥ ಎಸ್.ಸಿ.ಪಾಟೀಲ ಕರ್ನಾಟಕದ ಜನಪದ ಚಿತ್ರಕಲೆ (ಪು.ಸಂ) ೧೨೯
೪೫. ಡಾ॥ ಎಸ್.ಸಿ.ಪಾಟೀಲ ಕರ್ನಾಟಕದ ಜನಪದ ಚಿತ್ರಕಲೆ (ಪು.ಸಂ) ೧೨೯
೪೬. ಡಾ॥ ಎಸ್.ಸಿ.ಪಾಟೀಲ ಕರ್ನಾಟಕದ ಜನಪದ ಚಿತ್ರಕಲೆ (ಪು.ಸಂ) ೧೩೦

ಮಾಡುತ್ತಿದ್ದರು. ಕೆಲವರು ಪರಕಿಯಿಂದಲೂ ದಾರ ಹೊಸೆದುಕೊಂಡು ತಯಾರಿಸುತ್ತಿದ್ದರು. ಇದು ಆದಿಕಾಲದಿಂದಲೂ ದಾರ ತಯಾರಿಸಿಕೊಳ್ಳುವ ಒಂದು ರೀತಿ ದಾರ ತಯಾರಿಸಿಕೊಳ್ಳುತ್ತಿದ್ದರು. ಹದಿನಾಲ್ಕು ಹದಿನೈದನೆಯ ಶತಮಾನದಲ್ಲಿ ಗಾಂಧಿ ಚರಕದಂತ ಮಾತದಿಯ ಚರಕಗಳು ಜಾರಿಯಲ್ಲಿದ್ದವೆಂಬ ಹೇಳಿಕೆಗಳೂ ಇವೆ. ಇತ್ತೀಚೆಗೆ ಯಂತ್ರದ ಮೇಲೆ ತಯಾರಾದ ದಾರ ಅಂಗಡಿಯಿಂದ ಖರೀದಿಸಿದ ಕೌದಿಗಳನ್ನು ಹೊಲಿಯುವವರು ಹೆಚ್ಚಾಗಿರುವುದನ್ನು ಕಾಣುತ್ತೇವೆ. ಸೂಜಿಗಳು ಸಹ ಇಂದು ಅಂಗಡಿಯಿಂದಲೇ ಖರೀದಿಸುವುದಾಗಿದೆ. ಆದರೆ ಕೌದಿಯ ಹೊಲಿಯುವ ಸೂಜಿಗಳೆಂದೇ ಸ್ವಲ್ಪ ದಪ್ಪವಾಗಿರುತ್ತವೆ.

ಕೌದಿಯನ್ನು ತಯಾರಿಸುವ ಉಪಕರಣಗಳು :

೧. **ಸೂಜಿ** : ಸೂಜಿಯ ಸಾಧನದಿಂದಲೇ ಕೌದಿ ಹೊಲೆಯಲ್ಪಟ್ಟು ತಯಾರಾಗುತ್ತದೆ. ಈ ಹೊಲಿಗೆಗಾಗಿ ಸಣ್ಣ ಸೂಜಿ, ಮಧ್ಯಮ ಸೂಜಿ, ದೊಡ್ಡ ಸೂಜಿಗಳನ್ನು ಉಪಯೋಗಿಸುತ್ತಾರೆ.

ಕೌದಿಯಲ್ಲಿ ಚಿತ್ರ ಬಿಡಿಸುವ ಸಣ್ಣ ಹೊಲಿಗೆ ಹಾಕುವ ಸಂದರ್ಭಗಳಲ್ಲಿ ಸಣ್ಣ ಸೂಜಿಯನ್ನು ಮುಖ್ಯ ಹೊಲಿಗೆಯಲ್ಲಿ ಮಧ್ಯಮ ಸೂಜಿಯನ್ನು ಲ್ಯಾವಿ ಮಾಡುವಲ್ಲಿ ದೊಡ್ಡ ಸೂಜಿಯನ್ನು ಉಪಯೋಗಿಸುತ್ತಾರೆ.

೨. **ದಾರ** : ಹತ್ತಿಯ ಅರಳೆಯಿಂದ ತಮಗೆ ಬೇಕಾದ ರೀತಿಯಲ್ಲಿ ಬಿಳಿಯ ದಾರ ತಯಾರಿಸಿಕೊಂಡು ಕೌದಿಯನ್ನು ತಯಾರಿಸುವ ಕಾಲವೊಂದಿತ್ತು. ಆದರೆ ಈಗ ಅಂಗಡಿಗಳಲ್ಲಿ ಸಿಗುವ ಸಿದ್ಧವಾದ ದಾರದ ಉಂಡೆಗಳನ್ನು ತಂದು ಕೌದಿ ಹೊಲಿಗೆಗೆ ಬಳಸುತ್ತಾರೆ. ಕೌದಿಯ ಮಧ್ಯಮದಲ್ಲಿ ವರ್ಣರಂಜಿತ ದಾರ ಬಳುಸತ್ತಾರೆ. ಗದಗ ಪರಿಸರದ ಊರುಗಳಲ್ಲಿ ಈ ಕೌದಿಯ ಕಲೆಯು ಈಗಲೂ ಹೊಲಿಯುವವರು ಇದ್ದಾರೆ. ಗಾರವಾಡ ಹಾಗೂ ಬೆಟಗೇರಿ, ಜಂತ್ಲಿಶಿರೂರ ಈ ಊರುಗಳಲ್ಲಿ ಹೊಲಿಯುವ ಮೊದಲು ಇಲ್ಲವೆ ಚಪಾತಿಯ ತುಂಡನ್ನು ಹಾಕುತ್ತಾರೆ.

೩. ಹಳೆ ಹೊಸ ಅರಿವೆ ಅಥವಾ ಹಳೆಯ ಬಟ್ಟೆಯ ತುಂಡು ಕೌದಿ ಹೊಲಿಗೆಗೆ ಮೂಲ ಸಾಮಗ್ರಿಗಳೆಂದರೆ ಹಳೆಯ ಅರಿವೆ ಹಳೆಯ ಹಾಗೂ ಹೊಸ ಅರಿವೆಯ ತುಂಡುಗಳು. ಬಣ್ಣ ಬಣ್ಣದ ಬಟ್ಟೆಗಳನ್ನು ತುಂಡುಗಳಿಂದ ಬೇರೆ ಬೇರೆ ಬಗೆ ಚಿತ್ರ ಬಿಡಿಸುತ್ತಾರೆ. ಕೌದಿ ಹೊಲಿಯಲು ಬೇಕಾಗುವ ಬಿಳಿಯ ಮತ್ತು ಬಣ್ಣದ ಬಟ್ಟೆಗಳನ್ನು ಕೆಲಸ ಮುಗಿದ ಮೇಲೆ ಗಂಟು ಕಟ್ಟಿ ಇಡುವರು. ಇದಕ್ಕೆ ಬಟ್ಟೆಯ ಗಂಟು ಅಥವಾ ಲ್ಯಾವಿ ಗಂಟು ಎಂದು ಕರೆಯುತ್ತಾರೆ.[೪೭]

೪. **ಕುಡುಗೋಲು ಅಥವಾ ಕತ್ತರಿ** : ಪ್ರಾಚೀನ ಕಾಲದಲ್ಲಿ ತಮಗೆ ಬೇಕಾದ ಬಟ್ಟೆಯನ್ನು ಕತ್ತರಿಸಿಕೊಳ್ಳಲು ಕುಡುಗೋಲನ್ನು ಬಳಸುತ್ತಿದ್ದರು. ಆದರೆ ಈಗ ಕತ್ತರಿಯನ್ನು ಉಪಯೋಗಿಸುತ್ತಾರೆ.

ಕೌದಿಯ ಪ್ರಕಾರಗಳು :

೧. ದೊಡ್ಡವರ ಕೌದಿ   ೨. ಚಿಕ್ಕವರ ಕೌದಿ

---

೪೭ ಶ್ರೀಮತಿ ಯಲ್ಲವ್ವ ಶಾ. ಸಿಂಧೆ ಸಂದರ್ಶನ (ದಿನಾಂಕ) ೩೦-೨-೨೦೧೦

೧. ದೊಡ್ಡವರ ಕೌದಿ : ಇವುಗಳನ್ನು ಗದಗ ಪರಿಸರದಲ್ಲಿಯ ಊರುಗಳಾದ ಗಾವರವಾಡ, ಬೆಟಗೇರಿ, ಜಂತ್ಲಿಶಿರೂರ ಈ ಊರುಗಳಲ್ಲಿ ಕೌದಿಯನ್ನು ಹೊಲಿಯುವ ಕಲಾವಿದರು ಕಂಡುಬರುತ್ತಾರೆ. ದೊಡ್ಡವರ ಕೌದಿಯು ಸಾಮಾನ್ಯವಾಗಿ ಏಳು ಮೊಳ ಉದ್ದ ಹಾಗೂ ಐದು ಮೊಳ ಅಗಲ ಇರುತ್ತದೆ. ಮಲಗಿದರೆ ಕಾಲು ಹೊರಗೆ ಕಾಣಿಸುವುದಿಲ್ಲ. ತಮ್ಮ ಪ್ರಮುಖ ಅನಿವಾರ್ಯ ಅವಶ್ಯಕತೆಯನ್ನು ಗಮನಿಸಿ ಇಂಥ ಕೌದಿ ತಯಾರಾಗುತ್ತದೆ ಹಳ್ಳಿಗಳಲ್ಲಿ ಪ್ರತಿ ವರ್ಷವು ಹೊಸ ಕೌದಿ ಹೊಲಿಸುತ್ತಿದ್ದರು. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿ ಕೌದಿಗಳಿಲ್ಲದ ಮನೆಗಳೇ ಇಲ್ಲ ಎಂದು ಹಿಂದಿನ ಕಾಲದಲ್ಲಿ ಅಜ್ಜಿ ತಮ್ಮ ಅನಿಸಕೆಯನ್ನು ಹೇಳುತ್ತಿದ್ದರು.[೪೮] ಕೌದಿಯ ವಿಶಿಷ್ಟ ಗುಣವೆಂದರೆ ಬೇಸಿಗೆಯಲ್ಲಿ ತಂಪಾಗಿಯೂ ಚಳಿಗಾಲದಲ್ಲಿ ಬೆಚ್ಚಗಾಗಿಯೂ ಇರುವ ಪ್ರಿಯ ವಸ್ತುವಾಗಿದೆ. ಒಂದು ಕೌದಿ ಒಂದರಿಂದ ಎಂಟು ವರ್ಷದವರೆಗೆ ಬಾಳಿಕೆ ಬರುವಷ್ಟು ಹೆಚ್ಚು ತಾಳಿಕೆಯ ಗುಣವನ್ನು ಹೊಂದಿರುತ್ತದೆ.

೨. ಚಿಕ್ಕವರ ಕೌದಿ : ಚಿಕ್ಕವರ ಕೌದಿ ನಾಲ್ಕು ಮೊಳ ಉದ್ದ ಹಾಗೂ ಮೂರು ಮೊಳ ಅಗಲವಾಗಿರುತ್ತದೆ. ಇದನ್ನು ಚಿಕ್ಕ ಕೌದಿಗಳಿಗೆ ತೊಟ್ಟಿಲು ಕೌದಿಗಳೆಂದು ಕರೆಯುತ್ತಾರೆ. ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ತವರೂರಿಗೆ ಚೊಚ್ಚಲ ಹೆರಿಗೆ ಆದ ಮೇಲೆ ಗಂಡನ ಮನೆಗೆ ಹೋಗುವ ಮುನ್ನ ಹೆಣ್ಣುಗಳ ತಾಯಿಯು ಆ ಊರಲ್ಲಿ ಕೌದಿ ಹೊಲಿಯುವವರಿಂದ ಕೌದಿಯನ್ನು ಹೊಲಿಸಿಕೊಡುತ್ತಾರೆ. ಈ ಕೌದಿ ಒಂದೂವರೆ ಘೂಟ ಉದ್ದ ಹಾಗೂ ಎರಡು ಘೂಟ ಅಥವಾ ಮೊಳದ ಲೆಕ್ಕದಿಂದ ಹೊಲಿಯುತ್ತಾರೆ. ಹಾಗೂ ಹೊಲಿಸಿ ತಾಯಂದಿರರು ಮಗಳಿಗೆ ಗಂಡನ ಮನೆಗೆ ಕೊಟ್ಟು ಕಳಿಸುತ್ತಾರೆ.

ಕೌದಿಯಲ್ಲಿ ಚಿತ್ರಗಳು : ಕೌದಿಯ ವಿನ್ಯಾಸಗಳಲ್ಲಿ ಕಂಡುಬರುವ ೧. ಐತಿಹಾಸಿಕ ಚಿತ್ರಗಳು ೨. ಧಾರ್ಮಿಕ ಚಿತ್ರಗಳು ೩. ಸಾಮಾಜಿಕ ಚಿತ್ರಗಳು. ೪. ಅಲಂಕಾರಿಕ ಚಿತ್ರಗಳು ಇವು ಗದಗ ಪರಿಸರದಲ್ಲಿಯ ಊರುಗಳಲ್ಲಿ ಕಂಡುಬರುತ್ತವೆ.

ಐತಿಹಾಸಿಕ ಚಿತ್ರ : ಬಸವಣ್ಣನವರ ಹಾಗೂ ಬುದ್ಧ ಹಾಗೂ ಮುಸ್ಲಿಂ ಅರ್ಧಚಂದ್ರಾಕೃತಿ ಚಿಹ್ನೆ ಮಂದಿರ, ಗುಡಿ ಹಾಗೂ ತೇರು ಹಾಗೂ ಮೈಲಾರ ದೇವರು, ತ್ರಿಶೂಲ ಪರಮೇಶ್ವರ ಇನ್ನೂ ಅನೇಕ ಐತಿಹಾಸಿಕ ಚಿತ್ರಗಳು ಕೌದಿಗಳಲ್ಲಿ ಇರುತ್ತವೆ.

ಧಾರ್ಮಿಕ ಚಿತ್ರಗಳು : ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ ಹಾಗೂ ವೀರಶೈವ ಮೊದಲಾದ ಧರ್ಮಗಳ ಜನರು ತಮ್ಮ ತಮ್ಮ ಆರಾಧ್ಯ ದೇವರುಗಳನ್ನು ಪೂಜಿಸುವುದು ಸಂಪ್ರದಾಯ, ಆಯಾ ಧರ್ಮಗಳ ಸಂಕೇತಗಳು ಕೌದಿಗಳಲ್ಲಿ ಈ ಚಿತ್ರಗಳಿರುತ್ತವೆ. ಈಶ್ವರ ಬುದ್ಧ, ಬಸವ ಮತ್ತು ಸವಸ್ತಿಕ ಹಾಗೂ ಶುಭ-ಲಾಭ ಮಾರುತಿ ಓಂ ಹಾಗೂ ಮಠ ಮಂದಿರಗಳ ಚಿತ್ರಗಳು ಕೌದಿಕಲೆಯಲ್ಲಿ ಕಾಣುತ್ತವೆ.

ಸಾಮಾಜಿಕ ಅಥವಾ ನೈಸರ್ಗಿಕ ಚಿತ್ರಗಳು : ಒಕ್ಕಲುತನಕ್ಕೆ ನಿಸರ್ಗಕ್ಕೆ ಸಂಬಂಧಿಸಿದ ಚಿತ್ರ ಹಾಗು ಜಾತ್ರೆ, ಉತ್ಸವ ಹಾಗೂ ಮದುವೆ ಸಂಬಂಧಿಸಿದ ಚಿತ್ರ ಹಾಗೂ ಜನಪದ ಆಟಗಳಿಗೆ ಸಂಬಂಧಿಸಿದ ರೇಖಾಚಿತ್ರಗಳು ಈ ಕೌದಿಯಲ್ಲಿ ರಚನೆಗೊಂಡಿರುತ್ತವೆ. ಪಗಡಿ ಬಜಾರ ಐದಾರು ಪಗಡಿ ಚೌಕದ

೪೮. ಶ್ರೀಮತಿ ಯಲ್ಲವ್ವ ಶಾ. ಸಿಂಧೆ ಸಂದರ್ಶನ (ದಿನಾಂಕ) ೩೦-೨-೨೦೧೦

ಮನಿ ಹಾಗೂ ತೇರು ಬಾಸಿಂಗ, ಸೂರ್ಯ, ಚಂದ್ರ, ನಕ್ಷತ್ರ ಹಾಗೂ ಎಲೆಬಳ್ಳಿ ಹಕ್ಕಿ ಪಕ್ಷಿ ಹಕ್ಕಿಯ ಕಾಲುಗಳ ಚಿತ್ರಗಳು ಕೌದಿಯಲ್ಲಿ ರಚನೆಯಾಗುತ್ತವೆ.

ಅಲಂಕಾರಿಕ ಚಿತ್ರಗಳು : ಕೌದಿಗಳಲ್ಲಿ ಅರ್ಧ ಭಾಗಗಳಲ್ಲಿ ಅಲಂಕಾರಿಕ ಚಿತ್ರಗಳಿರುತ್ತವೆ.ಬಟ್ಟೆಯ ತುಂಡು ತಾಪಿ ಹಚ್ಚುವಲ್ಲಿ ವಿವಿಧ ರೀತಿಯ ಹೊಲಿಗೆ ವಿನ್ಯಾಸದೊಂದಿಗೆ ಕೌದಿಯ ಅಲಂಕಾರ ಕಾಣುತ್ತದೆ. ನಾಲ್ಕು ಭಾಗಗಳಲ್ಲಿ ಅಂಚು ಅಲಂಕಾರಗೊಂಡಿರುತ್ತವೆ. ಇನ್ನೂ ಕೆಲವು ಮಧ್ಯದಲ್ಲಿ ಚೌಕಾಕಾರದ ವೃತ್ತ ಮಾಡಿಕೊಂಡು ನಾಲ್ಕು ಭಾಗಗಳಲ್ಲಿ ಕೂಡಿರುವ ರೇಖಾಲಂಕಾರವು ಕೌದಿಯ ಸೌಂದರ್ಯದಿಂದ ಕಾಣುತ್ತದೆ.

ಕೌದಿಯನ್ನು ಹೊಲಿಯುವ ತಂತ್ರಗಾರಿಕೆ : ಯಾವ ಅಳತೆಯ ಕೌದಿ ತಯಾರಿಸಬೇಕಾಗಿದೆಯೋ ಆ ಅಳತೆಯ ಹಳೆಯ ಸೀರೆ ಮತ್ತು ದೋತರ ಇವುಗಳನ್ನು ಒಂದಕ್ಕೊಂದು ಜೋಡಿಸಿ ಎರಡು ಮೂರು ಅಥವಾ ನಾಲ್ಕು ಪದರುಗಳಾಗುವ ಹಾಗೆ ತಯಾರಿಸಿಕೊಂಡು ನಾಲ್ಕು ಪದರುಗಳಲ್ಲಿ ಗಟ್ಟಿಯಾದ ದಪ್ಪವಾಗಿರುವದನ್ನು ಕೆಳಹಾಸಿಗೆ ಎಂದು ಅದನ್ನು ಒದ್ದೆ ಮಾಡಿಕೊಂಡು ಸಮತಟ್ಟಾದ ನೆಲದ ಮೇಲೆ ಹರವಿಕೊಂಡು ಅದರಷ್ಟೇ ಸಮಾನಗಿ ಇರುವ ಎರಡು ಮೂರು ಒಂದರ ಮೇಲೊಂದರಂತೆ ಹರವಿದಾಗ ನಂತರ ನಾಲ್ಕು ಪದರುಗಳನ್ನು ಚೆನ್ನಾಗಿ ಜೋಡಿಸಿ ನಾಲ್ಕು ಬದಿಗ ನಾಲ್ಕು ಮಹಿಳೆಯರು ಕುಳಿತುಕೊಂಡು ಬೆರಳಿನಷ್ಟು ಮೇಲಕ್ಕೆ ಮಡಚಿಟ್ಟು ಈ ಮಡಿಕೆ ಮಾಡಿದ ಭಾಗಕ್ಕೆ ಹೊಲಿಗೆ ಹಾಕಿಕೊಳ್ಳುತ್ತಾರೆ. ನಂತರ ನಾಲ್ಕು ಮೂಲೆಗೆ ಒಂದೊಂದು ಭಾರವಾದ ಕಲ್ಲನ್ನು ಇಟ್ಟು ನಾಲ್ಕು ಪದರು ಬಟ್ಟೆಗಳಿಗೆ ಒಳ ಹೊಲಿಗೆಗಳನ್ನು ಮೊಳಕ್ಕೊಂದರಂತೆ ಬಿಳಿ ದಾರದಿಂದ ಹಾಕಿಕೊಳ್ಳುತ್ತಾರೆ. ಈ ರೀತಿ ಪೂರ್ತಿ ಕೌದಿ ಮುಗಿಯುವವರೆಗೆ ಜೋಡಿಸಿದ ನಾಲ್ಕು ಪದರು ಒಂದಕ್ಕೊಂದು ಬಿಟ್ಟು ಜೋತು ಬೀಳಲಾರದೆಂದು ಈ ರೀತಿ ಮಾಡಿ ಲ್ಯಾವಿಯನ್ನು ಮಡಕೆ ಮಾಡಿ ಮಡಚಿಟ್ಟು ಅದರ ಮೇಲೆ ಭಾರ ಹೇರಿ ಇಡುತ್ತಾರೆ. ಲ್ಯಾವಿ ಮಾಡುವುದಕ್ಕೆ ನಾಲ್ಕು ಜನರು ಮಹಿಳೆಯರು ಸೇರಿಕೊಂಡು ಕೌದಿಯನ್ನು ಹೊಲಿಯುತ್ತಾರೆ. ಹೊಲಿಗೆ ಕಲೆ ಬಲ್ಲ ಮಹಿಳೆಯ ಬಹಳೆ ಬಟ್ಟೆಗಳನ್ನು ಚಿಕ ಚಿಕ್ಕದಾಗಿ ಕತ್ತರಿಸಿಕೊಂಡು ಒಂದು ದಾರದ ರೇಖಾಚಿತ್ರ ವಿನ್ಯಾಸಗಳಿಂದಾದ ಚಿತ್ರ ಎರಡು ವಿವಿಧ ಆಕಾರದ ಬಣ್ಣದ ಬಟ್ಟೆಗಲ ತುಂಡುಗಳ ಸಂಯೋಜನೆಯನ್ನು ಕೌದಿಯಲ್ಲಿ ಉಪಯೋಗಿಸಿಕೊಂಡು ಅದರ ಮೇಲೆ ಕಲಾತ್ಮಕವಾಗಿ ಹೊಲಿದಾಗ ಅದು ಅಂಶವೆಂದು ಕಾಣುತ್ತದೆ. ಇದೊಂದು ವೃತ್ತಿಕಲೆಯಾಗಿ ಇಂದು ವ್ಯಾಪಾರಕ್ಕೆ ತಿರುಗಿ ಉಪಜೀವನಕ್ಕೂ ದಾರಿ ಮಾಡಿಕೊಟ್ಟಿರುವುದು ಇದು ಶೈಲಿ ವಿಶೇಷತೆಗಳಲ್ಲೊಂದಾಗಿದೆ.[೪೯]

ಕೌದಿಗಳನ್ನು ಹೊಲಿಯುವವರ ಹೆಸರು : ಗದಗ ನಗರದಲ್ಲಿ ಕೌದಿಯ ಹೊಲಿಯುವವರ ಮನೆತನದವರ ಹೆಸರು :

ಶ್ರೀಮತಿ ಯಲ್ಲಮ್ಮ ಶಾ. ಸಿಂಧೆ, ಶ್ರೀಮತಿ ಗೀತಾಬಾಯಿ ಬೀಸೆ, ಶ್ರೀಮತಿ ಸಂಗವ್ವ ಫ. ಮೂಲಿಮನಿ, ಶ್ರೀಮತಿ ಬಸಮ್ಮ ಶಾ. ಶಾಲಿ, ಶ್ರೀಮತಿ ಯಲ್ಲಮ್ಮ ಗಂ. ಬಂಡಿವಡ್ಡರ.

---

೪೯. ಶ್ರೀಮತಿ ನೀಲವ್ವ ಹೊಂಬಳ ಗಾವರವಾಡ ಸಂದರ್ಶನ (ದಿನಾಂಕ) ೩೦-೨-೨೦೧೦

ಗಾವರವಾಡದಲ್ಲಿ ಕೌದಿ ಹೊಲಿಯುವ ಮನೆತನದವರು :

ಶ್ರೀಮತಿ ಗಂಗವ್ವ ಶಾಲಿ, ಶ್ರೀಮತಿ ಶೇಖವ್ವ ದೊಡಮನಿ, ಶ್ರೀಮತಿ ನೀಲಮ್ಮ ಹೊಂಬಳ, ಶ್ರೀಮತಿ ಹನಮವ್ವ ಶಾಲಿ, ಶ್ರೀಮತಿ ಚೆನ್ನಬಸವ್ವ ಕರಜಗಿ, ಈರವ್ವ ಗಡಾದೇವರ, ಬಸವ್ವ ಈ ಕವಲೂರ.

ಜಂತ್ಲಿಶಿರೂರಲ್ಲಿ ಕೌದಿಯನ್ನು ಹೊಲಿಯುವವರ ಮನೆತನಗಳು

ಶ್ರೀಮತಿ ಕಲ್ಲವ್ವ ಯ. ಹಸಬಿ[೫೦], ಶ್ರೀಮತಿ ಯಲ್ಲವ್ವ ಸಂ. ವಡ್ಡರ, ಶ್ರೀಮತಿ ಯಮನವ್ವ ಗಾಲಿ, ಶ್ರೀಮತಿ ಸಂಗವ್ವ ಮ. ಸಿಂಪಿಗಾರ, ಶ್ರೀಮತಿ ಗಂಗವ್ವ ಕ. ಸಂಗಳ.

ಈ ಊರಲ್ಲಿ ೫ ಮನೆತನದವರು ಈಗಲೂ ಕೌದಿಗಳನ್ನು ಹೊಲಿಯುತ್ತಾರೆ.

ಕಸೂತಿ ಕಲೆ :

ವಸ್ತ್ರಕಲೆಯ ಒಂದು ಕಲಾತ್ಮಕ ಅಂಗ ಕಸೂತಿ, ಕರ್ನಾಟಕದಲ್ಲಿ ಕಸೂತಿ ಎಂದು ಕರೆಯಿಸಿಕೊಳ್ಳುವ ಈ ಕಲೆಗೆ ಪುಲ್ಕರಿ, ಗುಜರಾತದಲ್ಲಿ ಕಥಿ, ರಾಜಸ್ತಾನದಲ್ಲಿ ಪಿಚವಾಯಿ, ಬಂಗಾಲದಲ್ಲಿ, ಕಂಥೆ, ಬಿಹಾರದಲ್ಲಿ ಕಸಿದಾ, ಓರಿಸ್ಸಾದಲ್ಲಿ ಪುರಿ, ಉತ್ತರ ಪ್ರದೇಶದಲ್ಲಿ ಚಿಕನ್, ಕಾಶ್ಮೀರದಲ್ಲಿ ಕಸೀದಾ, ಮಣಿಪುರದಲ್ಲಿ ಪಾನ್ನೆಕ್ ಹಿಮಾಚಲ ಪ್ರದೇಶದಲ್ಲಿ ಛಂಬಾ, ಸಿಂಧ ಪ್ರಾಂತದಲ್ಲಿ ಕಚ್, ಚಿಕ್ಕನ್‌ಕಾರಿ ಮಹಾರಾಷ್ಟ್ರದಲ್ಲಿ ಕಶಿದಾ, ಕಸುದಾ ಪರ್ಷಿಯನ್ನು ಮತ್ತು ಹಿಂದಿಯಲ್ಲಿ ಕಶೀದಹ ಎಂದು ಪ್ರಾದೇಶಿಕವಾಗಿ ಇದಕ್ಕೆ ಬೇರೆ ಬೇರೆ ಹೆಸರುಗಳಿರುತ್ತವೆ.[೫೧]

ಕಸೂತಿ ಎಂದರೆ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಮಾಡುವ ಹೆಣಿಕೆ. ಅಲಂಕಾರವೆಂಬ ಅರ್ಥವಿದೆ. ವಸ್ತ್ರದ ಮೇಲೆ ವಿರಳವಾಗಿ ಚರ್ಮ ಇತರ ವಸ್ತುಗಳ ಮೇಲೆ ಸೂಜಿದಾರಗಳಿಂದ ಹೆಣೆದು ಮಾಡಿದ ಅಲಂಕಾರವನ್ನು ಕಸೂತಿ ಎನ್ನಬಹುದು. ಕೌದಿಕಲೆಯ ಹಾಗೂ ಕಸೂತಿ ಕಲೆ ಸಹೋದರ ಕಲೆ ಎರಡರಲ್ಲಿ ಆನಂದವನ್ನು ಸವಿಯುತ್ತಾರೆ. ಹೊಲಿಯುವವರಲ್ಲಿ ತೋರುವ ಸಮಾಧಾನ ಮತ್ತು ನೋಡುವವರಲ್ಲಿ ಕಾಣುವ ಸಂತೃಪ್ತಿ ಈ ಆಂತರಿಕ ಸಂಬಂಧದ ಮೂಲಕ ಈ ಕಲೆ ಹೊರ ಹೊಮ್ಮುತ್ತದೆ.[೫೨]

ಬಿಸಿಲು, ಗಾಳಿ, ಮಳೆ, ಚಳಿಗಳಿಂದ ಶರೀರದ ರಕ್ಷಣೆ, ಪಡೆಯಲೆಂದು ಪ್ರಾರಂಭವಾದ ಉಡುಪ, ಕಾಲಮದಲ್ಲಿ ಧಾರ್ಮಿಕ, ರಾಜಕೀಯ ಸಾಮಾಜಿಕ ಅಂತಸ್ತಿನ ವಸ್ತುವಾಯಿತಲ್ಲದೆ ಗದಗ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಒಂದು ಜನಪದ ಸ್ತ್ರೀಯರ ಸೌಂದರ್ಯ ಪ್ರಜ್ಞೆಯ ಅಭಿವ್ಯಕ್ತಿಯಾಗಿ ಬಹುಪಯೋಗಿ ವಸ್ತುವಾಗಿ ಕಸೂತಿ ಕಲೆ ಕಂಡುಬರುತ್ತದೆ.

---

೫೦. ಶ್ರೀಮತಿ ಕಲ್ಲವ್ವ ಯ. ಹಸಬಿ ಜಂತ್ಲಿ ಶಿರೂರ ಸಂದರ್ಶನ್ (ದಿನಾಂಕ) ೩-೩-೨೦೧೦

೫೧. ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೨

೫೨. ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೨

ಕಸೂತಿ ಕಲೆ ಎಂದರೆ ಬಣ್ಣದ ದಾರಗಳಿಂದ ಬಟ್ಟೆಗಳಿಗೆ ಹೆಣಿಗೆಯ ಅಲಂಕಾರವೆಂಬ ಅರ್ಥವಿದೆ. ಬಟ್ಟೆಗಳ ಮೇಲೆ ಸೂಜಿದಾರಗಳಿಂದ ಹೆಣಿದು ಮಾಡುವ ಅಲಂಕಾರವನ್ನು ಕಸೂತಿ ಎನ್ನಬಹುದು.[೫೩] ಬಟ್ಟೆಗಳ ಮೇಲೆ ಚಿತ್ರಗಳ ಬಾಹ್ಯ ರೇಖೆಗಳನ್ನು ಗುರುತು ಹಾಕಿಕೊಳ್ಳಲು ಪೆನ್ಸಿಲ್, ಇದ್ದಿಲು, ಚಾರ್‌ಕೋಲ್‌ಗಳನ್ನು ಬಳಸುತ್ತಾರೆ. ಕಸೂತಿಯಿಂದ ಧಾರ್ಮಿಕ ಚಿತ್ರಗಳೊಂದಿಗೆ ತುಳಸಿಕಟ್ಟೆ, ತೇರು, ಗೋಪುರ, ಬಾಸಿಂಗ, ನಾಯಿ, ಮೊಲ, ಪಶು, ಪಕ್ಷಿಗಳು, ಹೂಬಳ್ಳಿ, ಸೂರ್ಯ, ಚಂದ್ರ ಹಾಗೂ ಭೂಮಿತಿ ಆಕೃತಿಯ ಚಿತ್ರಗಳನ್ನು ಕಸೂತಿ ಕಲೆಯಿಂದ ರಚಿಸುತ್ತಾರೆ. ಗದಗ ಜಿಲ್ಲೆಯ ಲಂಬಾಣಿ ಸಮುದಾಯದ ಅನೇಕ ತಾಂಡಾಗಳಿದ್ದು ಕಳಸಾಪೂರ, ನಾಗಾವಿ, ಬೆಳಧಡಿ, ಪಾಪನಾಸಿ, ಅಡವಿಸೋಮಾಪೂರದ ಸ್ತ್ರೀಯರ ಬಟ್ಟೆಗಳಲ್ಲಿ ಕಸೂತಿ ಚಿತ್ರಗಳು ಹೆಚ್ಚಾಗಿ ಬಳಕೆಯಾಗಿರುವುದನ್ನು ಕಾಣುತ್ತೇವೆ. ನೇಯ್ಗೆ ಕಲೆಯು ಗದಗ–ಬೆಟಗೇರಿಯ ನೇಕಾರಿಕೆಯ ಪ್ರಬಲ ಕೆಲಸವನ್ನು ಮಾಡಿದೆ. ದೆಹಲಿಯ ಕೆಂಪುಕೋಟೆಯ ಮೇಲೆ ಮೊದಲು ಹಾರಿಸಿದ ಪ್ರಥಮ ಧ್ವಜವು ಗದಗ–ಬೆಟಗೇರಿಯ ನೇಯ್ಗೆ ಕಲೆಯ ವಿನ್ಯಾಸವಾಗಿದೆ. ಈ ಕಸೂತಿಯ ಕಲೆಯಲ್ಲಿ ಗದಗ ಜಿಲ್ಲೆಯು ವಿಶೇಷತೆಯನ್ನು ಪಡೆದುಕೊಂಡಿದೆ.

ಕಸೂತಿ ರಚನೆಯ ಸಾಮಗ್ರಿ :

ಕಸೂತಿ ರಚನೆಯಲ್ಲಿ ಬಳಕೆಯಾಗುವ ಸಾಮಗ್ರಿಗಳು ಹೀಗಿವೆ. ೧. ಕಟ್ಟಿಗೆಯ ರಿಂಗು ೨. ರಿಂಗು ೩. ಸೂಜಿ ೪. ಕತ್ತರಿ ೫. ವಿವಿಧ ವರ್ಣದ ಹಾಗೂ ಸಾದಾ ರೇಶ್ಮೆದಾರ ೬. ಅಂಗುಸ್ಥಾನ ೭. ಚಿತ್ರದ ಬಾಹ್ಯ ರೇಖೆಗಳನ್ನು ಗುರುತು ಹಾಕಿಕೊಳ್ಳುವ ಪೆನ್ಸಿಲ್

೧. **ಕಟ್ಟಿಗೆಯ ರಿಂಗು** : ಕಸೂತಿಯ ಅರಿವೆಯನ್ನು ಈ ಕಟ್ಟಿಗೆಯ ರಿಂಗಿನಲ್ಲಿ ಹಾಕಿ ಬಿಗಿಗೋಳಿಸುತ್ತಾರೆ. ಅರಿವೆಯನ್ನು ಸಮನಾಗಿ ಮಡಿಕೆ ಬೀಳದಂತೆ ಮಾಡಲು ಈ ರಿಂಗು ತುಂಬ ಸಹಾಯಕಾರಿಯಾಗುತ್ತದೆ. ಕಟ್ಟಿಗೆಯ ರಿಂಗು ಇದು ಇತ್ತೀಚಿನ ದಿನಗಳಲ್ಲಿ ಬಂದಿರುವಂತಿದೆ. ಮೊದಲು ನೇರವಾಗಿ ಬಟ್ಟೆಯ ಮೇಲೆ ಕಸೂತಿ ಮಾಡುತ್ತಿದ್ದುದು ಕಂಡುಬರುತ್ತದೆ.[೫೪]

೨. **ಸೂಜಿ** : ಇದರಲ್ಲಿ ಎರಡು ವಿಧಗಳು. ಒಂದು ಸಾಮಾನ್ಯ ಸೂಜಿ. ಇನ್ನೊಂದು ಕೊಕ್ಕೆ ಸೂಜಿ.

ಸಾಮಾನ್ಯ ಸೂಜಿ : ಹೊಲಿಗೆ ಕಸೂತಿಯಲ್ಲಿ ಸಾಮಾನ್ಯ ರೀತಿಯಲ್ಲಿ ಇರುತ್ತದೆ.

ಕತ್ತರಿ : ಕತ್ತರಿಗಳಲ್ಲಿ ವಿವಿಧ ರೀತಿಯ ನಮೂನೆಗಳಿದ್ದು ಅಂಕುಡೊಂಕಾದ ಕತ್ತಿರಿಗಳು ಕಸೂತಿಯಲ್ಲಿ ಹೆಚ್ಚ ಪ್ರಯೋಜನಕಾರಿಯೆನಿಸಿವೆ. ಕಸೂತಿ ಮುಗಿದ ಮೇಲೆ ಹೆಚ್ಚಿನ ದಾರವನ್ನು ಕತ್ತರಿಸಲು ಇದನ್ನು ಉಪಯೋಗಿಸುತ್ತಾರೆ. ಹಿಂದಿನ ಜನರು ಈಳಿಗೆಯಿಂದಲೋ ಅಥವಾ ಕುಡಗೋಲಿನಿಂದಲೋ ದಾರವನ್ನು ಕೊಯ್ಯುತ್ತಿದ್ದರು.

೫೩. ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೨
೫೪. ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೩

ವಿವಿಧ ವರ್ಣದ ದಾರ : ಇಲ್ಲಿ ಹತ್ತಿ ಮತ್ತು ಉಣ್ಣೆಯ ದಾರಗಳೆರಡನ್ನು ಬಳಸುತ್ತಾರೆ. ಕಸೂತಿ ಹಾಕುವವರ ಅಭಿರುಚಿತಗಳಿಗನುಗುಣವಾಗಿ ಇವು ಉಪಯೋಗವಾಗುತ್ತವೆ. ಇಲ್ಲಿ ಹೆಚ್ಚಾಗಿ ಸಿದ್ಧದಾರಗಳನ್ನು ಬಳಸುತ್ತಾರೆ.

ಅಂಗುಸ್ಥಾನ : ಕೈಗೆ ಸೂಜಿ ನಡಬಾರದೆನ್ನುವ ದೃಷ್ಟಿಯಿಂದ ಕೈ ಬೆರಳಿಗೆ ಹಾಕಿಕೊಳ್ಳುವ ಲೋಹದ ಸಾಧನವಿದಾಗಿದೆ. ಇದು ಇತ್ತೀಚೆಗೆ ಕಸೂತಿಯಲ್ಲಿ ಬಳಕೆಯಾಗುತ್ತಿದೆ. ಚಿತ್ರ ಬಾಹ್ಯರೇಖೆಗಳನ್ನು ಗುರುತು ಹಾಕಿಕೊಳ್ಳಲು ಬಳಸುತ್ತಾರೆ.[೫೫]

ಪೆನ್ಸಿಲ್ : ಅರಿವೆಯ ಮೇಲೆ ಚಿತ್ರಗಳನ್ನು ಹೆಣೆಯುಬೇಕಾದರೆ ಚಿತ್ರ ಬರೆಯುವುದರಿಂದ ಮೊದಲು ಅದರ ಮೇಲೆ ರೇಖೆಗಳನ್ನು ಹಾಕಿಕೊಂಡು ಆ ರೇಖೆಯ ಮೇಲೆ ಕಸೂತಿ ಹೆಣೆಯುತ್ತಾರೆ.[೫೬]

ಇದಕ್ಕಾಗಿ ಪೆನ್ಸಿಲ್ ಬಳಸಲಾಗುತ್ತದೆ. ಚಿತ್ರ ಬರೆಯಲು ಬರುವವರು ತಾವೇ ಚಿತ್ರ ಬಿಡಿಸಿಕೊಂಡು ಕಸೂತಿ ಹೆಣೆಯುತ್ತಾರೆ.

ಕಸೂತಿ ಹಾಕುವ ವಿಧಾನ : ಕಸೂತಿ ಹಾಕುವುದರಲ್ಲಿ ಕೈ ಕಸೂತಿ, ಯಂತ್ರದ ಕಸೂತಿ ಎಂಬ ಎರಡು ವಿಧಾನಗಳಿದ್ದು ಕೈ ಕಸೂತಿ ಕೈಯಿಂದ ಕಸೂತಿಯ ಚಿತ್ರವಿನ್ಯಾಸಗಳನ್ನು ನಿರ್ಮಾಣ ಮಾಡುವ ಕಲಾತ್ಮಕವಾಗಿ ಕೈ ಕಸೂತಿಯಲ್ಲಿವೇ ಹೊಲಿಗೆ ಕಸೂತಿ ಹೆಣೆಗೆಯ ಕಸೂತಿಗಳಿರುತ್ತವೆ.

ಹೊಲಿಗೆ ಕಸೂತಿ : ಸೂಜಿಯಿಂದ ವರ್ಣ ರಂಜಿತವಾದ ದಾರಗಳನ್ನು ಪೋಣಿಸಿ ಅರಿವೆಯ ಮೇಲೆ ಹೊಲಿಗೆಯಿಂದ ಮಾಡುವ ಕಸೂತಿಯ ಕೆಲಸವನ್ನು ಹೊಲಿಗೆ ಕಸೂತಿ ಎಂದು ಕರೆಯುತ್ತಾರೆ. ಕೈಚೀಲ, ಟೇಬಲ್, ಕುರ್ಚಿಗಳಿಗಾಗಿ, ಬಾಗಿಲು ತೋರಣ, ತಲೆದಿಂಬು, ಮಕ್ಕಳ ತೊಟ್ಟಿಲ ಉಪಯೋಗಿಸುಮ ಹೊಲಿಗೆಯ ಕಸೂತಿ ಹಾಕುತ್ತಾರೆ.[೫೭]

ಹೆಣಿಗೆ ಕಸೂತಿ : ಈ ವಿವಿಧ ದಾರದಲ್ಲಿ ದಾರವನ್ನು ಅಥವಾ ರೇಷ್ಮೆಯ ನೂಲನ್ನು ತೆಗೆದುಕೊಂಡು ಕೊಕ್ಕೆ ಸೂಜಿಯಿಂದ ದಾರವನ್ನು ಹೆಣೆಯುತ್ತ ಕಸೂತಿ ಚಿತ್ರವಿನ್ಯಾಸ ಬಿಡಿಸುತ್ತಾರೆ. ನೂಲನ್ನು ಅಥವಾ ದಾರವನ್ನು ತೋರುಬೆರಳಿಗೆ ಸುತ್ತಿಕೊಂಡು ದಾರವನ್ನು ಎಡಗೈ ಹೆಬ್ಬೆರಳು ಮತ್ತು ನಡುವಿನ ಬೆಳುಗಳ ಸ್ವಲ್ಪ ದಾರವನ್ನು ಬಿಡುತ್ತ ಬಲಗೈಯಲ್ಲಿ ಹಿಡಿದು ಕೊಕ್ಕೆ ಸೂಜಿಯಿಂದ ಹೆಣೆಯುತ್ತ ಹೋಗುತ್ತಾರೆ ಸೂಜಿಯಲ್ಲಿ ನಂಬರ ಇರುತ್ತವೆ.

ಯಂತ್ರದ ಕಸೂತಿ : ಯಂತ್ರದ ಸಹಾಯದಿಂದ ಆಧುನಿಕ ರೀತಿಯಲ್ಲಿ ಹಾಕುವ ಕಸೂತಿಯನ್ನು ಯಂತ್ರದ ಕಸೂತಿಯೆಂದು ಕರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೈಕಸೂತಿಯಂತೆ ವರ್ಣರಂಜಿತ ಚಿತ್ರಗಳನ್ನು ಯಂತ್ರವೇ ಮಾಡುತ್ತಿದೆ. ಆರ್ಥಿಕ ಖರ್ಚಿನ ಈ ಯಂತ್ರದ ಕಸೂತಿ ಸಹಾಯವಾಗುವುದು.

ಕಸೂತಿ ಪ್ರಕಾರಗಳು : ೧. ಮೆಂತೆ ಕಸೂತಿ ೨. ನೇಯ್ಗೆ ಕಸೂತಿ ೩. ಮುರುಗಿ ಕಸೂತಿ ೪. ಕನ್ನಡಿಕಟ್ಟಿನಲ್ಲಿ ಹಾಕುವ ಕಸೂತಿ.[೫೮]

---

೫೫. ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೪

೫೬ ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೪

೫೭ ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೪

೫೮. ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೫

ಮೆಂತೆ ಕಸೂತಿ : ಈ ಕಸೂತಿಯ ಸಾಲುಗಳು ಮೆಂತೆ ಕಾಳಿನೋಪಾದಿಯಲ್ಲಿರುವುದರಿಂದ ಇದಕ್ಕೆ ಮೆಂತೆ ಕಸೂತಿ ಎನ್ನುವರು. ಇಲ್ಲಿ ಬಟ್ಟೆಯ ಬಣ್ಣದ ಹಿನ್ನೆಲೆಯ ಮೇಲೆ ಚಿತ್ರ ವಿನ್ಯಾಸಗಳನ್ನು ತುಂಬಲಾಗುವುದು. ಹಿನ್ನೆಲೆ ತಿಳಿಯಾದ ವರ್ಣದಿಂದ ಕೂಡಿದ್ದರೆ ಅದರ ಮೇಲೆ ಚಿತ್ರ ಹೆಚ್ಚು ಸ್ಪಷ್ಟವಾಗಿ ಕಾಣುವಂತೆ ಅಥವಾ ದಟ್ಟವರ್ಣದ ವಿನ್ಯಾಸ ಬಿಡಿಸುವುದುಂಟು. ಇನ್ನು ಕೆಲವು ಸಲ ಹಿನ್ನೆಲೆ ದಟ್ಟ ಬಣ್ಣದಿಂದ ಕೂಡಿದ್ದರೆ ದಾರದಿಂದ ಚಿತ್ರವಿನ್ಯಾಸ ಹೆಣೆಯುತ್ತಾರೆ. ಮೆಂತೆ ಕಸೂತಿಯ ಸೌಂದರ್ಯದ ಪರಿಕಲ್ಪನೆ ಉಂಟಾಗುತ್ತದೆ. ಇದರಲ್ಲಿ ತುಳಸಿಕಟ್ಟೆ, ತೇರು, ಬಾಸಿಂಗ, ಕೊಳವೆಬಾವಿ, ನಾಯಿ, ಮೊಲ, ಬೆಕ್ಕು ಮುಂತಾದ ಆಕೃತಿಗಳನ್ನು ಚಿತ್ರಿಸಿ ಕಸೂತಿ ಮಾಡಲಾಗುತ್ತದೆ.

ನೇಯ್ಗೆ ಕಸೂತಿ : ನೇಯ್ಗೆ ಕಸೂತಿಯಲ್ಲಿ ಬಟ್ಟೆಯ ಮೇಲಿರುವ ಅಡ್ಡ ಮತ್ತು ಗೆರೆಗಳಲ್ಲಿ ಬಟ್ಟೆಯ ಅಡ್ಡ ಎಳೆಗಳೊಡನೆ ನೇಯ್ಗೆಯಂತೆ ಹಾಕುತ್ತಾರೆ.[೫೯] ಹೀಗಾಗಿ ಕಸೂತಿಯ ಚಿತ್ರ ವಿನ್ಯಾಸಗಳು ನೇಯ್ಗೆಯಂತೆ ಕಾಣಿಸುತ್ತವೆ. ಈ ಕಸೂತಿಯನ್ನು ನೇಯ್ಗೆ ಕಸೂತಿ ಎಂದು ಕರೆಯುತ್ತಾರೆ.

ಇಲ್ಲಿ ಯಾವುದೇ ರೀತಿಯ ಚಿತ್ರದ ವಿನ್ಯಾಸಗಳು ತುಂಬಿದರೂ ಅವು ನೇಯ್ಗೆಯಂತೆ ಕಾಣಿಸುವುದಲ್ಲದೆ ಬಟ್ಟೆಯ ಹಿಂದಿನ ದಪ್ಪಾಗಿ ಕಂಡು ಬಂದರೆ ಮೇಲಿನ ಭಾಗದಲ್ಲಿ ಉದ್ದವಾಗಿರುತ್ತವೆ. ಇನ್ನು ಕೆಲವು ಸಲ ಕೆಳಭಾಗದಲ್ಲಿ ಉದ್ದವಿದ್ದರೆ ಮೇಲಿನ ಭಾಗದಲ್ಲಿ ಗಿಡ್ಡವಾಗಿ ಕಾಣಿಸುತ್ತವೆ. ಇವು ರಥ, ಪಶುಪಕ್ಷಿ, ಹೂಬಳ್ಳಿ ಮುಂತಾದ ಚಿತ್ರವಿನ್ಯಾಸಗಳಿಂದ ಕೂಡಿರುತ್ತವೆ.

ಮುರುಗಿ ಕಸೂತಿ : ಹೆಣಿಗೆ ಮುರಿಗಿ ಮುರುಗಿಯಾಗಿರುವುದರಿಂದ ಈ ಕಸೂತಿಗೆ ಮುರುಗಿ ಕಸೂತಿ ಎಂದು ಹೆಸರು ಬಂದಿರಬೇಕು.[೬೦] ಇದರಲ್ಲಿ ಗುಡಿ, ಗೋಪುರ, ಕಟ್ಟೆ, ಭಾವಿ, ತೊಟ್ಟಿಲು, ಶಿವಲಿಂಗ, ನಂದಿ ಹೂ, ತೆನೆ, ಮಂಟಪ ಮೊದಲಾದ ಚಿತ್ರವಿನ್ಯಾಸಗಳು ಕಂಡುಬರುತ್ತವೆ.

ಗದಗ ಜಿಲ್ಲೆಯ ಪರಿಸರದಲ್ಲಿ ಲಂಬಾಣಿಗರ ಉಡುಗೆ ತೊಡುಗೆಗಳಲ್ಲಿ ಹೆಚ್ಚಾಗಿ ಕನ್ನಡಿ ನಾಣ್ಯದ ಬಿಲ್ಲೆ ಕಂಡುಬರುತ್ತವೆ. ಮಹಿಳೆಯರು ಕಾಡಿನಲ್ಲಿ ಇರುವಾಗ ಕಾಡು ಪ್ರಾಣಿಗಳ ರಕ್ಷಣೆಗಾಗಿ ಇವುಗಳನ್ನು ಬಳಸಿಕೊಳ್ಳುತ್ತಿದ್ದರು. ಕನ್ನಡಿಯ ಪ್ರತಿಬಿಂಬ ಪ್ರಾಣಿಗಳಿಗೆ ಬೀಳುವುದರಿಂದ ಅವು ಹೆದರಿ ಓಡಿಹೋಗುತ್ತಿದ್ದವು. ಚೌಕಾಕಾರ ದೊಡ್ಡ ದೊಡ್ಡ ಕನ್ನಡಿಗಳನ್ನು ಬಳಸುತ್ತಿದ್ದರು. ಕನ್ನಡಿಯಲ್ಲಿ ಅನೇಕ ಪ್ರಾಣಿಗಳು ಕಾಣುವುದರಿಂದ ತಮಗಿಂತ ಹೆಚ್ಚು ಪ್ರಾನಿಗಳು ಇವೆ ಎಂದು ಹೆದರಿ ಓಡಿಹೋಗುತ್ತಿದ್ದವು. ಕನ್ನಡಿಗಳನ್ನು ಜೋಡಿಸುವಾಗ ವಿಶಿಷ್ಟ ರೀತಿಯ ವಿನ್ಯಾಸಗಳಿಂದ ಲಂಬಾಣಿಗಳಷ್ಟು ವಿಶೇಷವಾಗಿ ಆಕರ್ಷಿಸುವ ಜನರು ಬೇರಾರಿಲ್ಲ. ಅವರನ್ನು ಗುರುತಿಸುವುದು ಅತಿ ಸುಲಭ ಅವರು ಧರಿಸಿರುವ ರಂಗುರಂಗಿನ ಉಡುಗೆ-ತೊಡುಗೆಗಳೇ ಇದಕ್ಕೆ ಮುಖ್ಯ ಕಾರವಣವಾಗಿವೆ. ಸಾಮಾನ್ಯವಾಗಿ ಲಂಬಾಣಿ ಮಹಿಳೆಯರು ಧರಿಸುವ ಪೋಷಾಕುಗಳಲ್ಲಿ ಕೆಂಪು ಬಣ್ಣ ಹೆಚ್ಚಿನ ಪ್ರಾಧಾನ್ಯತೆ ಪಡೆದಿದೆ. ಉಳಿದ ಬಣ್ಣಗಳ ಬಟ್ಟೆಯನ್ನು ಧರಿಸುತ್ತಾರೆ. ಅನೇಕ ತುಂಡು ತುಕಡಿಗಳನ್ನು ಜೋಡಿಸಿ ನಡುನಡುವೆ ಚಿಕ್ಕ ಚಿಕ್ಕ ಕನ್ನಡಿಗಳನ್ನು ಹಾಕಿ ಸೂಕ್ಷ್ಮವಾಗಿ ಕಸೂತಿ ಮಾಡಿರುತ್ತಾರೆ.

---

೫೯. ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೬

೬೦. ಡಾ॥ ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ (ಪು.ಸಂ) ೧೪೬

ಲಂಬಾಣಿಗರು ತಮ್ಮ ಪ್ರತಿಯೊಂದು ಉಡುಗೆಗಳ ಮೇಲೆ ಅಲ್ಲಲ್ಲಿ ವಿನ್ಯಾಸರೂಪದಲ್ಲಿ ಚಿಕ್ಕ ಚಿಕ್ಕ ಕನ್ನಡಿಗಳನ್ನು ಜೋಡಿಸಿಕೊಳ್ಳುವುದು ಅವರ ವೈಶಿಷ್ಟ್ಯ. ಪೂರ್ವಜರು ಅಲೆಮಾರಿಯಾಗಿದ್ದು, ವ್ಯಾಪಾರಕ್ಕಾಗಿ ಊರಿಂದೂರಿಗೆ ಕಾಡುಗಳಲ್ಲಿ ಸಂಚರಿಸುವ ಸಂದರ್ಭದಲ್ಲಿ ಕನ್ನಡಿಗಳನ್ನು ಜೋಡಿಸುವುದು, ಅಗತ್ಯವಿತ್ತು. ಲಂಬಾಣಿ ಮಹಿಳೆಯರು ಧರಿಸುವ ಲಂಗ 'ಘಟಿಯಾ' ಕುಪ್ಪಸ 'ಕಾಂಚಳಿ' ಹಾಗೂ ಮೇಲ್ಮುಸುಕು "ಛಾಂಟಿಯಾ" ಇವುಗಳನ್ನು ತಯಾರಿಸುವುದು ಬಹಳ ಕಷ್ಟದ ಕೆಲಸವಾಗಿದೆ. ಈ ಮೂರು ಉಡುಗೆಗಳನ್ನು ತಯಾರಿಸಲು ಕನಿಷ್ಟ ಮೂರು ನಾಲ್ಕು ತಿಂಗಳುಗಳು ಬೇಕು. ಉಡುಗೆಗಳನ್ನು ಸಿಂಪಿಗರಲ್ಲಿ ಅಲ್ಪಸ್ವಲ್ಪ ಮಾಡಿಕೊಂಡು ಉಳಿದ ಕೆಲಸವನ್ನು ತಾವೇ ಕುಳಿತು ಕಸೂತಿ ಹಾಕಿ ಕಲಾತ್ಮಕವಾಗಿ ತಯಾರಿಸಿಕೊಳ್ಳುತ್ತಾರೆ.[೬೧]

ಉತ್ತರ ಕರ್ನಾಟಕದಲ್ಲಿ ಅಲ್ಲಲ್ಲಿ "ತಾಂಡಾ" ಮಾಡಿಕೊಂಡು ನೆಲೆಸಿರುವ ಲಂಬಾಣಿಗಳು ತಾವು ಕರ್ನಾಟಕದವರು ಎಂದು ಅಭಿಮಾನದಿಂದ ಹೇಳುತ್ತಾರೆ. ಇವರ ಭಾಷೆ "ಲಮಾಣಿ" ಭಾಷೆಯಾಗಿದ್ದು ಇದಕ್ಕೆ ಲಿಪಿ ಇಲ್ಲ. ಈ ಜನಾಂಗದವರು ಸಂಪ್ರದಾಯಸ್ಥರಾಗಿದ್ದು, ಒಕ್ಕಟ್ಟಿನಲ್ಲಿ ಬಲವಿದೆ ಎಂದು ನಂಬಿದವರು. ಗುಡ್ಡಗಾಡುಗಳಲ್ಲಿ ತಮ್ಮ ವಸತಿಯನ್ನು ಮಾಡಿಕೊಂಡು ಕಟ್ಟಿಗೆ ಕಡಿದು ಮಾರಿ ಜೀವನೋಪಾಯ ಸಾಗಿಸಿದವರು. ಲಂಬಾಣಿ ಮಹಿಳೆಯರು ಬೆವರು ಸುರಿಸಿ ಕಟ್ಟಿಗೆ ಹೊತ್ತು ಸಾಗುವಾಗ ಅವರ ಆಕರ್ಷಕ ಉಡುಪುಗಳ ವೈವಿಧ್ಯತೆ ಎದ್ದು ಕಾಣುತ್ತದೆ.

"ಲಮಾಣಿಗಿಲ್‌ಗಿಲ್
ನಾನುಬರ್ತಿನಿ ನಿಲ್‌ನಿಲ್
ಕಟ್ಟಿಗೆ ಹೊರಿ "ಚೆಲ್‌ಚೆಲ್"

ಎಂದು ಹಳ್ಳಿಯ ಮಕ್ಕಳು ಲಂಬಾಣಿ ಮಹಿಳೆಯರ ಗೆಜ್ಜೆಯ ನಾದ ಕನ್ನಡಿಯ ಸೌಂದರ್ಯವನ್ನು ಬಣ್ಣ ಬಣ್ಣದ ಉಡುಪುಗಳು ಮಕ್ಕಳನ್ನು ಪ್ರಚೋದಿಸುವ ಹಾಡಾಗಿದೆ. ಲಂಬಾಣಿ ಮಹಿಳೆಯರ ಉಡುಗೆ-ತೊಡುಗೆಗಳು ಇತರ ಸಮಾಜದಿಂದ ವಿಭಿನ್ನವಾಗಿದ್ದು, ನೋಡಲು ಬಹಳ ಸುಂದರ ಮತ್ತು ಆಕರ್ಷಕವಾಗಿದ್ದು ತನ್ನದೇ ಆದ ರೀತಿಯ ವೈಶಿಷ್ಟ್ಯತೆಯನ್ನು ಹೊಂದಿವೆ.

ಗದಗ ಜಿಲ್ಲೆಯಲ್ಲಿ ಅನೇಕ ತಾಂಡಾಗಳು ಇದ್ದು ಅಧ್ಯಯನದ ದೃಷ್ಟಿಯಿಂದ ಕೆಲವು ಪ್ರಮುಖ ತಾಂಡಾಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಬರುವ ತಾಂಡಾಗಳು ತಮ್ಮ ಸಾಂಸ್ಕೃತಿಕ ಕಸೂತಿ ಕಲೆಯನ್ನು ಬಳಸಿಕೊಂಡು ಬಂದಿದ್ದಾರೆ. ಕಳಸಾಪೂರ, ನಾಗಾವಿ, ಬೆಳಧಡಿ, ಪಾಪನಾಶಿ, ಮುಂತಾದ ತಾಂಡಾದ ಲಮಾಣಿಗರು ಕಸೂತಿ ಕಲೆಯನ್ನು ತಯಾರಿಸಿಕೊಂಡು ಗೋವಾ, ಕೇರಳ, ಹೊರ ರಾಜ್ಯಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತಾರೆ.[೬೨] ಕಸೂತಿಯ ಕಲೆಯ ಕಲಾವಿದೆಯರ ಹೆಸರುಗಳು ಈ ಕೆಳಗಿನಂತಿವೆ.

---

೬೧. ಬಿ. ಎಲ್. ಲಮಾಣಿ ಲಂಬಾಣಿ ಜನಗದ ಕಲಾತಮಕ ಉಡುಗೆ ತುಡುಗೆಗಳು (ಪು.ಸಂ) ೧೮

೬೨. ಶ್ರೀಮತಿ ರಶ್ಮಿಬಾಯಿ ನಾಗಪ್ಪ. ರಾಠೋಡ ಕಳಸಾಪೂರ, ಸಂದರ್ಶನ ದಿನಾಂಕ: ೨೮-೩-೨೦೧೦

ಕಳಸಾಪೂರ ತಾಂಡೆ :

ಶ್ರೀಮತಿ ರಕ್ಕಿಬಾಯಿ ನಾರಾಯಣಪ್ಪ ರಾಠೋಡ[೬೩], ಶ್ರೀಮತಿ ಲಾಲವ್ವ ನಾಗಪ್ಪ ರಾಠೋಡ, ಶ್ರೀಮತಿ ಲಾಲವ್ವ ಲಕ್ಷ್ಮಣ ರಾಠೋಡ, ಶ್ರೀಮತಿ ಪಾರೀಬಾಯಿ ದೇವಪ್ಪ ಲಮಾಣಿ, ಶ್ರೀಮತಿ ಧಾನಿಬಾಯಿ ರಾಮಪ್ಪ ಲಮಾಣಿ, ಶ್ರೀಮತಿ ರತ್ನಾಬಾಯಿ ರತ್ನವ್ವ ಲಾಮಾಣಿ, ಶ್ರೀಮತಿ ಸುಸೀಲಾಬಾಯಿ ಪಾಂಡಪ್ಪ ರಾಠೋಡ, ಶ್ರೀಮತಿ ಗೀತಾಬಾಯಿ ಸುರೇಶ ರಾಠೋಡ, ಶ್ರೀಮತಿ ಧರ್ಮಿಬಾಯಿ ಸೋಮನಾಥ ಲಮಾಣಿ, ಶ್ರೀಮತಿ ಕೇಳಿಬಾಯಿ ಧಂಜಪ್ಪ ಲಮಾಣಿ.

ನಾಗಾವಿ ತಾಂಡಾ :

ಶ್ರೀಮತಿ ಮಧು ದಯಾನಂದ ಪವಾರ, ಶ್ರೀಮತಿ ಶಾರದಾ ಮಾನಪ್ಪ ತೋಟದ[೬೪], ಶ್ರೀಮತಿ ಶೈಲಾ ಚಂದಪ್ಪಾ ಪವಾರ, ಶ್ರೀಮತಿ ರೇಣುಕಾ ತೋಟದ

ಬೆಳಧಡಿ ತಾಂಡಾ :

ಶ್ರೀಮತಿ ಗಂಗವ್ವ್ ಗುರಪ್ಪ ಆಡಿನವರ, ಶ್ರೀಮತಿ ಶೇಖವ್ವ ರೂಪಸಿಂಗ್ ಪೂಜಾರ, ಶ್ರೀಮತಿ ಸವಿತಾ ಗೋಪಾಲ ಪೂಜಾರ[೬೫], ಶ್ರೀಮತಿ ಮಂಗಲವ್ವ ಗಂಗಪ್ಪ ಹೊಸಮನಿ, ಶ್ರೀಮತಿ ಲಕ್ಷ್ಮೀಬಾಯಿ ಲಕ್ಷ್ಮಣ ಹೊಸಮನಿ.

ಪಾಪನಾಶಿ ತಾಂಡಾ :

ಶ್ರೀಮತಿ ಶಾಂತವ್ವ ಬಂದಿಯಪ್ಪ ತಂಬೂರಿ[೬೬], ಶ್ರೀಮತಿ ಪಾರ್ವತಮ್ಮ ಥಾವರೇಪ್ಪ ಲಮಾಣಿ, ಶ್ರೀಮತಿ ಜಯಶ್ರೀ ರಮೇಶ ಮುರಳಿ, ಶ್ರೀಮತಿ ಶಾಂತವ್ವ ಹನಮಂತಪ್ಪ ಪೂಜಾರ, ಶ್ರೀಮತಿ ನೀಲವ್ವ ದಂಜಪ್ಪ ಪೂಜಾರ, ಶ್ರೀಮತಿ ಲಾಲವ್ವ ನಾರಾಯಣ ಜಾಧವ, ಶ್ರೀಮತಿ ರಾಮವ್ವ ಬಂಡೆಯಪ್ಪ ರಾಠೋಡ.

ಧಾರ್ಮಿಕ ಜಾನಪದ ಚಿತ್ರಕಲೆ :

ಹುಲಿವೇಷ : ಈ ಹುಲಿವೇಷ ಗದಗ ಜಿಲ್ಲೆಯ ಪ್ರತಿಯೊಂದು ಹಳ್ಳಿಗಳಲ್ಲಿಯರ ಮೊಹರಂ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಹಬ್ಬದ ಮೂಲ ಉದ್ದೇಶ ಶೋಕಾಚರಣೆಯಾಗಿದ್ದರೂ ನಮ್ಮ ಜನ ಭಕ್ತಿಯಿಂದ ಭಾವೈಕ್ಯತೆಯ ಸಂಕೇತವಾಗಿ ಸಂಭ್ರಮದಿಂದ ಆಚರಿಸುತ್ತಾರೆ. ಕರ್ಬಲ ರಣರಂಗದಲ್ಲಿ ಕಾಲವಾದ ಶರಣರ ಪುಣ್ಯ ತಿಥಿಯ ಸೂಚಕವಾದ ಈ ಹಬ್ಬ ಹತ್ತುದಿನಗಳ ಕಲಾ ನಡೆಯುವಂತಹದು. ಮಸಿದಿ ಮುಂದಿನ ಬೆಂಕಿಯ ಹೊಂಡವನ್ನು ತೋಡುವುದರೊಂದಿಗೆ ಇದು ಪ್ರಾರಂಭವಾಗುತ್ತದೆ. ಇದನ್ನೇ ನಮ್ಮ ಜನಪದಿಯರು ಗುದ್ದಲಿ ಪೂಜೆ ಎಂದು ಕರೆಯುವುದುಂಟು, ಹೀಗೆ ಗುದ್ದಲಿ ಹಾಕುವುದು ಧರ್ಮಯುದ್ಧಕ್ಕೆ ಆಹ್ವಾನವಿತ್ತ ಸಂಕೇತವಾಗಿರುತ್ತದೆ. ಈ ವೇಳೆ

೬೩. ಸಂದರ್ಶನ ದಿನಾಂಕ: ೨೯-೩-೨೦೧೦

೬೪. ಶ್ರೀಮತಿ ಶಾರದಾ ಮಾನಪ್ಪ ತೋಟದ ನಾಗಾವಿ ತಾಂಡೆ ಸಂದರ್ಶನ (ದಿನಾಂಕ) ೨೮-೩-೨೦೧೦

೬೫. ಶ್ರೀಮತಿ ಸವಿತಾ.ಗೋಪಾಲ.ಪೂಜಾರ, ಬೆಳದಡಿ ತಾಂಡೆ ಸಂದರ್ಶನ (ದಿನಾಂಕ) ೩-೪-೨೦೧೦

೬೬. ಶ್ರೀಮತಿ ಶಾರಿತವ್ವ, ಬದ್ದಿಯಪ್ಪ ತಂಬುರಿ ಪಾಪನಾಸಿ ತಾಂಡೆ ಸಂದರ್ಶನ (ದಿನಾಂಕ) ೬-೪-೨೦೧೦

ಮುಸ್ಲಿಂರೊಂದಿಗೆ ಹಿಂದೂಗಳ ಸಹ ಫಕೀರಾಗುತ್ತಾರೆ. ಇನ್ನು ಕೆಲವರು ಹುಲಿವೇಷ ಹಾಕಿಕೊಂಡು ಹಲಿಗೆಯಗುತ್ತಿಗೆ ತಕ್ಕಂತೆ ಕುಣಿಯುತ್ತಾ ಮೋಜು ಮಾಡುವರು. ದೇವರು ಹೊಳಿಗೆ ಹೋಗುವ ದಿನದಂದು ಆ ಊರಿನ ಪ್ರತಿಯೊಂದು ಓಣಿಯವರು ಹೆಜ್ಜೆಯ ಮೇಳದೊಂದಿಗೆ ಮಸಿದಿಯ ಮುಂದಿನ ಬಯಲಿಗೆ ಬಂದು ವಿಶೇಷವಾಗಿ ಕುಣಿಯುತ್ತಾರೆ. ಇದು ಅಲ್ಲದೇ ಚಿನಿಕೋಲು ಆಟವನ್ನು ಸಹ ಆಡುತ್ತಾರೆ. ಇನ್ನು ಕೆಲವರು ರಿವಾಯತ್ ಪದಗಳನ್ನು ಗುಂಪುಗೂಡಿ ಹಾಡುತ್ತಿರುತ್ತಾರೆ. ರೋಣ ತಾಲೂಕಿನ ಮುಗಳಿ ಗ್ರಾಮದಲ್ಲಿ ಜನರು ಕತ್ತಿವರಸೆಯೊಂದಿಗೆ ರೋಮಾಂಚನ ಕಾರಿಯಾಗಿ ಯುದ್ಧ ಅಭಿನಯದ ಮೆರವಣಿಗೆಯನ್ನು ಮಾಡುತ್ತಾರೆ. ಇದು ನೋಡುಗರ ಕಣ್ಣಿಗೆ ಭಯಂಕರದೊಂದಿಗೆ ರೂದ್ರ-ರಮ್ಯವಾಗಿರುತ್ತದೆ. ಹಸೇನಿ ಹುಸೇನರ ತ್ಯಾಗದ ಪ್ರತೀಕವಾಗಿ ಶೋಕಿಸುತ್ತ ದೇಹದವನ್ನು ದಂಡಿಸುತ್ತ ರಕ್ತಹಾಯುವವರೆಗೂ ತಮ್ಮ ಎದೆಗಳಿಗೆ ಬಡಿದುಕೊಳ್ಳುವ ದೃಶ್ಯ ನೋಡುಗರ ಎದೆ ಝಲ್. ಎನ್ನುವಂತಿರುತ್ತದೆ.[೬೭] ಈ ಆಚರಣೆಯನ್ನು ಗದಗ ಜಿಲ್ಲೆಯ ನರಗುಂದ, ಕೊಣ್ಣೂರ, ಮುಂಡರಗಿ, ಶಿರಹಟ್ಟಿ, ಬೆಳಟ್ಟಿ, ಲಕ್ಷ್ಮೇಶ್ವರ, ಮುಂತಾದ ಕಡೆಗಳಲ್ಲಿ ವಿಶೇಷವಾಗಿ ಕಾಣಬಹುದು.

ಹುಲಿವೇಷ ಚಿತ್ರ ಬರೆಯುವವರು ಗದಗ ಜಿಲ್ಲೆಯಲ್ಲಿ ಬಹಳಷ್ಟು ಜನರಿದ್ದಾರೆ. ಆದರೆ ಲಕ್ಷ್ಮೇಶದ ಚಿತ್ರಗಾರ ಎಂಬ ಕುಟುಂಬದವರು ಹುಲಿವೇಷದ ಚಿತ್ರಗಳನ್ನು ದೊಡ್ಡವರಿಗೆ ಚಿಕ್ಕವರಿಗೆ ಬರೆಯುವ ವಿಶೇಷ ಪಾಂಡಿತ್ಯೆಯನ್ನು ಪಡೆದುಕೊಂಡವರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಹುಲಿವೇಷ ಚಿತ್ರಗಳು ಧಾರ್ಮಿಕವಾಗಿ ಬರೇಯಿಸಿಕೊಳ್ಳವ ಪರಂಪರೆಯನ್ನು ಹೊಂದಿದೆ.[೬೮]

ಹಿಂದೂ-ಮುಸ್ಲಿಂ ಭೇಧವಿಲ್ಲದೆ ಅಲಾಯ ದೇವರಿಗೆ ಬೇಡಿಕೊಂಡ ಕೆಲವು ಭಕ್ತರು ಹುಲಿಯಂತೆ ಮೈಯಿಗೆ ಬಣ್ಣವನ್ನು ಹಚ್ಚಿಕೊಂಡು ಕೊರಳಿಗೆ ಹೂವಿನ ಮಾಲೆಯನ್ನು ಹಾಕಿಕೊಂಡು ಎರಡು ರಟ್ಟೆಗಳಿಗೆ ನವಿಲು ಗರಿಗಳನ್ನು ಕಟ್ಟಿಕೊಂಡು, ಬೀದಿ-ಬೀದಿಗಳಲ್ಲಿ ಹುಲಿಯಂತೆ ಕುಣಿಯುತ್ತಾರೆ. ಗದಗ ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿ ಹುಲಿವೇಷದ ಕಲಾವಿದರು ಸಿಗುತ್ತಾರೆ.

n n n

೬೭. ಪ್ರೊ. ಸಿ.ವಿ. ಕೆರೆಮನಿ ಪ್ರಸಂ ಹಾಗೂ ಇತರರು ಲೇ ಡಾ. ಸಿದ್ಧಣ್ಣ ಜಗಬಾಳ ಬೆಳ್ವೊಲ ಬೆಳಕು ಸ್ಮರಣ ಸಂಚಿಕೆ (ಪು.ಸಂ)

೬೮. ಎಮ್.ಎನ್. ಚಿತ್ರಗಾರ ಲಕ್ಷ್ಮೇಶ್ವರ ಸಂದರ್ಶನ ದಿನಾಂಕ : ೨೮-೧೦-೨೦೧೦



ಚಿತ್ರ ೧ : ಶ್ರೀ ಗಣೇಶ



ಚಿತ್ರ ೨ : ಭುವನೇಶ್ವರಿ

ತೊಗಲುಗೊಂಬೆ ಚಿತ್ರಕಲೆ (ಪೌರಾಣಿಕ)



ಚಿತ್ರ ೧ : ಭೀಮ



ಚಿತ್ರ ೨ : ಬಬ್ರುವಾಹನ



ಚಿತ್ರ ೩:ಹನುಮಂತ


ತೊಗಲುಗೊಂಬೆ ಚಿತ್ರಕಲೆ (ಪೌರಾಣಿಕ)



ಚಿತ್ರ ೪ : ಪಾರ್ಥ



ಚಿತ್ರ ೫ : ಕೃಷ್ಣ ರಾಧೆ ಹಾಗೂ ಸತ್ಯಭಾಮೆ



ಚಿತ್ರ ೬ : ಸುಧಿಷ್ಣೆ

ತೊಗಲುಗೊಂಬೆ ಚಿತ್ರಕಲೆ (ರಾಜಕೀಯ)



ಚಿತ್ರ ೧ : ರಾಜಾ



ಚಿತ್ರ ೨ : ಕಂಕಣ ಭಟ್ಟ



ಚಿತ್ರ ೩ : ಸಖಿಯರೊಡನೆ ಮಹಾರಾಣಿ

ತೊಗಲುಗೊಂಬೆ ಚಿತ್ರಕಲೆ (ರಾಜಕೀಯ)



ಚಿತ್ರ ೪ : ರಾಜಾ ಮತ್ತು ನರ್ತಕಿ



ಚಿತ್ರ ೫ :ರಾಜಾ ಮತ್ತು ಸೇವಕರು



ಚಿತ್ರ ೧ : ಗಂಗಾ ಮತ್ತು ಬಾಳ್ಯಾ



ಚಿತ್ರ ೨ : ಹಳ್ಳಿಯ ಪರಿಸದ ಜನಜೀವನ



ಚಿತ್ರ ೩ : ಬಂಗಾರಕ್ಕ ಮತ್ತು ಸಿಂಗಾರಕ್ಕ

ತೊಗಲುಗೊಂಬೆ ಚಿತ್ರಕಲೆ (ಸಾಮಾಜಿಕ)



ಚಿತ : ೪. ನಂದಿ



ಚಿತ್ರ : ೫. ಗಿಳಿ



ಚಿತ್ರ : ೬. ಜಿಂಕೆ



ಚಿತ್ರ : ೭. ಜಾಹಿರಾತಿಗಾಗಿ ನೂತನ ವಿನ್ಯಾದ ಚಿತ್ರ



ರಂಗಸಜ್ಜಿಕೆ



ಹಿನ್ನೆಲೆಸಂಗಿತ



ರಂಗಸಜ್ಜಿಕೆಗೆ ಬಳಸುವ ವಸ್ತುಗಳು



ಹಿನ್ನಲೆ ಸಂಗೀತ ಕಲಾವಿದರು

ಸೂತ್ರದ ಗೊಂಬೆ ಚಿತ್ರಕಲೆ (ಕಲ್ಲೂರ)



ಚಿತ್ರ : ೧.ರಾಮ



ಚಿತ್ರ :೨.ಸೀತೆ



ಚಿತ್ರ : ೩.ಲವ



ಚಿತ್ರ : ೪.ಕುಶ



ಚಿತ್ರ: ೫.ಹನುಮನಾಯಕ ದೋರೆ



ಚಿತ್ರ ೬.ರಾಕ್ಷಸ



ಚಿತ್ರ ೭.ಅಶ್ವಮೇಧ

ಮದರಂಗಿ ಚಿತ್ರಕಲೆ



ಚಿತ್ರ ೧



ಚಿತ್ರ ೨.



ಚಿತ್ರ ೩



ಚಿತ್ರ ೪



ಚಿತ್ರ ೪

ರಂಗೋಲಿ ಚಿತ್ರಕಲೆ

ರಂಗೋಲಿ ಹಾಕುತ್ತಿರುವ ಮಹಿಳೆರು ಹಾಗೂ ಬಾಲಕಿಯರು



ಚಿತ್ರ ೧.



ಚಿತ್ರ ೨.



ಚಿತ್ರ ೩.




ಚಿತ್ರ ೪.



ಚಿತ್ರ ೫.



ಚಿತ್ರ ೬.



ಚಿತ್ರ ೭.

ಹಬ್ಬ ಹರಿದಿನಗಳಲ್ಲಿ ಹಾಕಿರುವ ರಂಗೋಲಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪.




ಚಿತ್ರ ೫.



ಚಿತ್ರ ೬.



ಹಚ್ಚೆ ಹಾಕುವಕಲಾವಿದೆ ಯಲ್ಲವ್ವ ಕಿಳಿಕ್ಯಾತರೊಂದಿಗೆ ಸಂರ್ಶನ



ಹಚ್ಚೆ ಹಾಕುವ ಪರಿಕರಗಳು



ಕೌದಿ ಕಲೆ




ದೊಡ್ಡವರ ಕೌದಿ



ಚಿಕ್ಕವರ ಕೌದಿ



ಪಗಡಿನವಿನ್ಯಾಸದ ಕೌದಿ



ಸಾದಾ ವಿನ್ಯಾಸ



ಕೌದಿಹೊಲಿಯುವ ದೃಶ್ಯ



ಕಸೂತಿ ಕಲೆ











ಹುಲಿವೇಶ ಚಿತ್ರಕಲೆ











ಅಧ್ಯಾಯ - ನಾಲ್ಕು

ಗದಗ ಜಿಲ್ಲೆಯ ಭಿತ್ತಿ ಚಿತ್ರಕಲೆ



"ಭಾರತೀಯ ಚಿತ್ರಕಲಾ ಪರಂಪರೆಯಲ್ಲಿ ಕರ್ನಾಟಕದ ಭಿತ್ತಿ ಚಿತ್ರಗಳಿಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ನಾಡಿನ ಜನತೆ ಭಿತ್ತಿಚಿತ್ರಗಳನ್ನು ರಚಿಸುವ ಮೂಲಕ ಕಲಾಕಾರರಾಗಿ ಭಿತ್ತಿಚಿತ್ರಗಳನ್ನು ಬರೆಯಿಸುವುದರೊಂದಿಗೆ ಕಲಾ ಪೋಷಕರಾಗಿದ್ದಾರೆ. ಈ ಭಿತ್ತಿಚಿತ್ರ ಪರಂಪರೆ ವ್ಯಕ್ತಿಯಿಂದ ವ್ಯಕ್ತಿಗೆ, ಸಮುದಾಯದಿಂದ ಸಮುದಾಯಕ್ಕೆ ಬೇರೆ ಬೇರೆಯಾಗಿ ಸೃಷ್ಟಿಗೊಂಡಿದೆ. ಪ್ರಾದೇಶಿಕತೆ, ಆ ಪ್ರದೇಶದ ಜನರ ಜೀವನ ವಿಧಾನ, ಆಚಾರ-ವಿಚಾರ, ಧಾರ್ಮಿಕ ನಂಬಿಕೆ ಮುಂತಾದವುಗಳು ಅವರ ಭಿತ್ತಿಚಿತ್ರ ರಚನೆಯ ಮೇಲೆ ಪ್ರಭಾವ ಬೀರಿ ಈ ಪರಂಪರೆ ವೈವಿಧ್ಯಮಯವಾಗಿ ರೂಪುಗೊಳ್ಳಲು ಕಾರಣವಾಗಿದೆ."[೧]

ಪ್ರಾಚೀನ ಕಾಲದಲ್ಲಿಂದ ರಚಿತಗೊಂಡ ಭಿತ್ತಿ ಚಿತ್ರಗಳು ಆಯಾಕಾಲದ ಜನಜೀವನ, ಸಾಮಾಜಿಕ ವಿಷಯಗಳಿಂದ ಕೂಡಿದೆ. ಭಿತ್ತಿಚಿತ್ರಗಳಿಂದ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಜೀವನದ ಇತಿಹಾಸವನ್ನು ತಿಳಿಯಲು ಇವುಗಳು ಆಕರಣ ಆಗಿವೆ.

ಭಿತ್ತಿಚಿತ್ರಕಲೆಗೆ ಸುದೀರ್ಘವಾದ ಒಂದು ಇತಿಹಾಸವಿದೆ. ಶಾಸನಗಳಲ್ಲಿ ಪುರಾತನ ಕಾವ್ಯಗ್ರಂಥಗಳಲ್ಲಿ ಚಿತ್ರಾಲಂಕೃತ ದೇವಾಲಯಗಳು, ಚಿತ್ರಗಳಿಂದ ಕೂಡಿದ ಚಿತ್ರಶಾಲೆ ಹಾಗೂ ನಾಟ್ಯಶಾಲೆಗಳ ವಿವರಣೆ ಇದೆ. ಸೋಮೇಶ್ವರನು ರಚಿಸಿರುವ ಬೃಹತ್ ಗ್ರಂಥ "ಮಾನಸೋಲ್ಲಾಸದಲ್ಲಿ ಚಿತ್ರಶಾಲೆ ಮತ್ತು ನಾಟ್ಯ ಶಾಲೆಯ ಭಿತ್ತಿಚಿತ್ರಗಳಿಗೆ ಗೋಡೆಗಳನ್ನು ಸಿದ್ಧಪಡಿಸುವ ವಿಧಿ ವಿಧಾನದ ಉಲ್ಲೇಖವಿದೆ."[೨]

ಭಿತ್ತಿಚಿತ್ರಕಲೆಯ ಕುರಿತು ಅಧ್ಯಯನ ಮಾಡುವಾಗ "ಪ್ರಾಚೀನ ಗ್ರಂಥಗಳಿಂದ ಕುಲವಗ್ಗ (೨ ನೇಯ ಶತಮಾನ), ವಿಷ್ಣು ಧರ್ಮೋತ್ತರ ಪುರಾಣ (೫ನೇಯ ಶತಮಾನ) ಬೃಹತ್ ಸಂಹಿತೆ (೬ನೇಯ ಶತಮಾನ). ಅಭಿಲಾಷಿತಾರ್ಥ ಚಿಂತಾಮಣಿ (೧೧ನೇಯ ಶತಮಾನ) ಮುಂತಾದವುಗಳಲ್ಲಿ ಭಿತ್ತಿಚಿತ್ರ ರಚನೆಗಳ ಬಗ್ಗೆ ವಿವರಗಳಿವೆ. ಜೊತೆಗೆ ಅವುಗಳ ಪ್ರಭಾವ ಭಿತ್ತಿಚಿತ್ರಗಳ ಮೇಲೆ ಉಂಟಾಗಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತೆ[೩] ಎಂಬುದನ್ನು ಗಮನಿಸಬಹುದು.

೧. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೦.
೨. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಶ್ರೀ ಪಿ.ಆರ್. ತಿಪ್ಪೇಸ್ವಾಮಿ ನಿಜದನಲೆ ಪು.ಸಂ.೧೨೫.
೩. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಶ್ರೀ ಪಿ.ಆರ್. ತಿಪ್ಪೇಸ್ವಾಮಿ ನಿಜದನಲೆ ಪು.ಸಂ.೧೨೫.

ಪೂರ್ವಜರು ಭಿತ್ತಿ ಚಿತ್ರಕಲಾ ಪರಂಪರೆಯನ್ನು ಧರ್ಮ ಪ್ರಚಾರದ ಸಾಧನವಾಗಿ, ಸಮಾಜವನ್ನು ರೂಢಿಸುವಲ್ಲಿ ಮನರಂಜನೆಗಾಗಿ, ವೈಯಕ್ತಿಕ ಭಾವನೆಗಳ ಕಲಾತ್ಮಕ ಅಭಿವ್ಯಕ್ತಿಗಾಗಿ, ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಂಡಿದ್ದಾರೆ. ಆರಾಧನೆ, ಮಾಡುವುದು ದೇವರು ಧರ್ಮ ಪಂಥ, ಪಂಗಡ, ಹಾಗೂ ಸಾಮಾಜಿಕ ಶ್ರೇಣಿಕರಣಗಳ ಸಂಕೀರ್ಣ ಬದುಕುಗಳಲ್ಲದೇ ನಾಡಿನ ಜನರ ಕಲಾಭಿಮಾನ, ಸೌಂದರ್ಯೋಪಾಸನೆಯ ಬೆಳವಣಿಗೆಯಂತಹ ಆಂತರಿಕ ವಿಷಯಗಳು.

ಈ ಭಿತ್ತಿಚಿತ್ರ ಪರಂಪರೆಯಲ್ಲಿ ಆಕರವಾಗಿವೆ. ಎಂದರೆ ತಪ್ಪಾಗಲಾರದು, ಭಿತ್ತಿ ಚಿತ್ರಗಳು ಸಮಕಾಲೀನ ಜನಜೀವನ, ಸಸ್ಯವರ್ಗ, ಪ್ರಾಣಿವರ್ಗಗಳ ಕುರಿತು ತಿಳಿಸಿಕೊಡುವ ಮಹತ್ವದ ಚಿತ್ರ ಲಿಪಿಗಳಾಗಿವೆ ಎಂದು ಹೇಳಬಹುದಾಗಿದೆ.

"ಭಿತ್ತಿಚಿತ್ರವನ್ನು ಆಂಗ್ಲಭಾಷೆಯಲ್ಲಿ Moral Pointing ಎಂದು ಕರೆಯಲಾಗಿದೆ. ಅನೇಕ ಶಬ್ಧಕೋಶವು ಮತ್ತು ವಿಶ್ವಕೋಶಗಳು ಭಿತ್ತಿಚಿತ್ರಕಲೆಯ ಅರ್ಥವು ಒಂದು ಬಗೆಗೆ ವಿವರಣೆ ಕೊಟ್ಟಿದೆ ಕ್ಯಾಂಬ್ರಿಜ್ ವಿಶ್ವಕೋಶವು ಗೋಡೆಯ ಮೇಲೆ ಬಣ್ಣದಿಂದ ಬರೆದ ಚಿತ್ರ ಭಿತ್ತಿಚಿತ್ರವೆನಿಸಿದರೆ, ಗೋಡೆಯ ಮೇಲೆ ಕೆತ್ತಿ ಕೊರೆದು, ಅಂಟಿಸಿ ರೂಢಿಸಿದ ಕೃತಿಗಳು ಭಿತ್ತಿಶಿಲ್ಪದ ವ್ಯಾಪ್ತಿಯಲ್ಲಿ ಬರುತ್ತವೆ ಎಂದು ಹೇಳಿದೆ. ಆಕ್ಸಫರ್ಡ ಶಬ್ದಕೋಶವು ಗೋಡೆ ಮತ್ತು ಮೇಲ್ಛಾವಣಿಗಳಲ್ಲಿ ಬರೆದ ಬಣ್ಣದ ಚಿತ್ರಗಳನ್ನು ಭಿತ್ತಿಚಿತ್ರಗೆಳೆಂದು ಕರೆದಿದೆ. ವೆಬ್‌ಸ್ಟಾರ್ರ ನೂಯ ಏಲ್ಡರ್ರ ಎನಸೈ ಕ್ಲೋಡಿಪಿಯಾದಲ್ಲಿಯೂ ಸಹಿತ ಗೋಡೆ ಮತ್ತು ಮೇಲ್ಛಾವಣಿಗಳ ಮೇಲೆ ರಚನೆಯಾದ ಚಿತ್ರಗಳನ್ನು ಭಿತ್ತಿಚಿತ್ರಗಳೆಂದು ಹೇಳಿದೆ.[೪] "ಅಲ್ಲದೆ ಭಾರತೀಯ ಪ್ರಾಚೀನ ಶಿಲ್ಪ ಶಾಸ್ತ್ರಗಳು ಭಿತ್ತಿ ಚಿತ್ರವನ್ನು ಕೂಡ ಚಿತ್ರವೆಂದು ಕರೆದಿವೆಯಲ್ಲದೇ ಗೋಡೆ ಮತ್ತು ಛಾವಣಿಗಳ ಮೇಲೆ ಗಾರೆಲೇಪನ ಮಾಡಿ ಅದರ ಮೇಲೆ ಚಿತ್ರಬರೆಯುವುದನ್ನು ಭಿತ್ತಿಚಿತ್ರವೆಂದು ಪರಿಗಣಿಸಿವೆ."[೫]

ಹೀಗೆ ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಶಬ್ದಕೋಶ ಗ್ರಂಥಗಳ ಭಿತ್ತಿಚಿತ್ರಗಳು ಕುರಿತು ವಿವರ ನೀಡಿವೆ.

ಇತಿಹಾಸದ ಪುಟವನ್ನು ನಾವು ನೋಡಿದಾಗ ಸಿಂಧೂ ನಾಗರಿಕತೆ ವೇದಗಳ ಕಾಲದಲ್ಲಿಯೂ ಭಿತ್ತಿ ಚಿತ್ರರಚನೆ ಇತ್ತು ಎಂಬ ಬಗೆಗೆ ದಾಖಲೆಗಳು ದೊರೆಯುತ್ತವೆ. ರಾಮಾಯಣ ಮಹಾಭಾರತಗಳಲ್ಲಿ ಭಿತ್ತಿಚಿತ್ರಗಳಿಂದ ಅಲಂಕರಿಸಲಾದ ಅರಮನೆಗಳ ವರ್ಣನೆ ಬರುತ್ತದೆ ಕ್ರಿ.ಪೂ. ೨೫೦ರಲ್ಲಿ ರಚನೆಯಾದ ಭಿತ್ತಿಚಿತ್ರಗಳು ಬಿಹಾರದ ಬರಾಬರ ಬೆಟ್ಟದ ಗುಹೆಗಳಲ್ಲಿ, ಓರಿಸ್ಸಾದ ಬಾಂಡಗಿರಿ, ಉದಯಗಿರಿ ಗುಹೆಗಳಲ್ಲಿ ಕಂಡು ಬರುತ್ತವೆ. ಈ ಸ್ಥಳದಲ್ಲಿ ನಾಟ್ಯದ ದೃಶ್ಯಗಳು, ವಾದ್ಯಗಾರರು, ಹೂಬಳ್ಳಿಯ ನಕ್ಷಚಿತ್ರಗಳು ರಚನೆಯಾಗಿದ್ದು[೬] ಕಂಡು ಬರುತ್ತವೆ. ಅವುಗಳನ್ನು ನೋಡಿದಾಗ ನಮಗೆ ಚಿತ್ರರಚನೆಯ ವೈವಿಧ್ಯತೆ ಸ್ಪಷ್ಟವಾಗಿ ಕಾಣುತ್ತದೆ.

---

೪. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೧.
೫. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೧.
೬ ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೧.

ಕರ್ನಾಟಕವು ಸಹಿತ ಶ್ರೀಮಂತವಾದ ಭಿತ್ತಿಚಿತ್ರ ಪರಂಪರೆಯನ್ನು ಹೊಂದಿದೆ. ಪ್ರಾಗೈತಿಹಾಸಿಕ ವರ್ಣಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕದಲ್ಲಿ ಇರುವುದು ಕಂಡು ಬರುತ್ತದೆ ಹಂಪೆ, ಪಿಕ್ಕಿಹಾಳ, ತಾವರಗೇರೆ, ಕೊಪ್ಪಳ, ಬಾದಾಮಿ, ಐಹೊಳೆ, ರಾಮದುರ್ಗ ಬಳಿಯ ಗಾಜಿನಗುಡ್ಡ ಹಿರೇಬೇನಕಲ್ ಮುಂತಾದ ಅನೇಕ ಸ್ಥಳಗಳಲ್ಲಿ ಇರುವುದು ಕಂಡುಬರುತ್ತವೆ.

ಅದೇ ರೀತಿಯಾಗಿ ಗದಗ ಜಿಲ್ಲೆಯ ನಿಲಗುಂದ ಗ್ರಾಮದಲ್ಲಿ ಪ್ರಾಚೀನಕಾಲದ ಪ್ರಾಗೈತಿಹಾಸಿಕ ಚಿತ್ರಗಳು ಕಂಡು ಬರುತ್ತವೆ ಈ ಚಿತ್ರಗಳನ್ನು ಯಾವುದೇ ಸಂಶೋದನಾ ಮಹಾಪ್ರಬಂಧಗಳಲ್ಲಿ ದಾಖಲಾಗಿರುವುದು ಕಂಡುಬರುವುದಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಇವುಗಳ ಕುರಿತು ಚರ್ಚಿಸಲಾಗಿದೆ.

ಪ್ರಾಗೈತಿಹಾಸಿಕ ಚಿತ್ರಕಲೆ ನಿಲಗುಂದ : ಪ್ರಾಚೀನ ಕಾಲದಿಂದಲೂ ಉತ್ತರ ಕರ್ನಾಟಕದ ಭೌಗೋಳಿಕ ಪರಿಸರವು ಜನವಸತಿಗೆ ಉತ್ತಮ ನೆಲೆಯನ್ನು ಒದಗಿಸಿಕೊಟ್ಟಿದೆ. ಬೆಟ್ಟ-ಗುಡ್ಡಗಳಿರುವ ಯಾವುದೇ ಪ್ರದೇಶ ನೋಡಿದರೂ ಅಲ್ಲಿ ಒಂದಿಲ್ಲೊಂದು ಪ್ರಾಚೀನ ಕುರುಹು ದೊರೆಯುವ ಸಾಧ್ಯತೆ ಇದೆ. ಕಲ್ಲು-ಬಂಡೆಗಳ ಬೆಟ್ಟಗಳು, ನಸುಗೆಂಪು ಬಣ್ಣದ ಕಲ್ಲುಗುಡ್ಡಗಳು, ಬೂದುಬಣ್ಣದ ಗ್ರಾನೈಟ್‌ಶಿಲೆಯ ಬಂಡೆಗಳು, ವಾತಾವರಣದಿಂದ ಸೀಳಿ ಸಹಜವಾಗಿ ಉಂಟಾದ ಗವಿಗಳು, ಕಲ್ಲಸರೆಗಳು, ಪರ್ವತಾವಳಿ, ಬೆಟ್ಟ-ಗುಡ್ಡಗಳಾಗಿದ್ದರಿಂದ ಹುಟ್ಟಿ ಬರುವ ಜಲಸಂಪತ್ತು, ಫಲವತ್ತಾದ ಮಣ್ಣು ಮುಂತಾದ ನೈಸರ್ಗಿಕ ಅನುಕೂಲತೆಯಿಂದಾಗಿ ಉತ್ತಕರ್ನಾಟಕ ಸಮೃದ್ಧ ಪ್ರಾಚೀನ ಸಾಂಸ್ಕೃತಿಕ ಸಂಪತ್ತನ್ನು ಹೊಂದಿ ಚಿತ್ರಕಲೆಗೂ ನೆಲೆಬೀಡಾಗಿದೆ.[೭]

ಆದಿ ಮಾನವನು "ಬೇಸಾಯದಂತಹ ನಾಗರಿಕ ಜೀವನದ ರೀತಿಯಿಂದ ಆದಷ್ಟು ಹೆಚ್ಚಿಗೆ ದೂರ ಉಳಿದು, ವನ್ಯಮೃಗಗಳ ಎಡೆಯಲ್ಲಿ ತಮ್ಮದೇ ಆದ ಬಾಳ್ವೆಯನ್ನು ನಡೆಸುತ್ತಿದ್ದಾಗ ಅರಣ್ಯ ಮಧ್ಯದ ಗುಹೆಗಳಲ್ಲಿ ವಾಸ ಮಾಡಿರಬಹುದು. ಮಳೆ ಬಂದಾಗ, ಬಿಸಿಲು ಹೆಚ್ಚಾದಾಗ, ಹೆಬ್ಬಂಡೆಗಳು ಮುಂದುಗಡೆ ಮತ್ತು ಮೇಲುಗಡೆ ಚಾಚಿಕೊಂಡ ಸ್ಥಳಗನ್ನು ತಾತ್ಕಾಲಿಕ ನಿವಾಸವಾಗಿಯೋ, ವಿಶ್ರಾಮವಾಗಿಯೋ ಆರಿಸಿದರು. ಇಂಥ ಸ್ಥಳಗಳನ್ನು ಬಂಡೆಯಾಸರೆ (Rock Shelters)ಗಳು ಎಂದು ಕರೆಯುವುದು ವಾಡಿಕೆ". ಇನ್ನು ಕೆಲವುಸಲ ನೆಲೆಗಳನ್ನು ಪ್ರಮುಖವಾಗಿ ೧. ಬಯಲು ಬಂಡೆಯ ಮೇಲಿನ ಶಿಲಾಶ್ರಯದ ಚಿತ್ರಗಳು, ೨. ಗವಿಯ ಒಳಗೆ ಚಿತ್ರಿಸಿದ ಶಿಲಾಶ್ರಯದ ವರ್ಣಚಿತ್ರಗಳು – ಎಂದು ಎರಡು ರೀತಿಯಲ್ಲಿ ಗುರುತಿಸಬಹುದಾಗಿದೆ.[೮] ಇವುಗಳನ್ನು ಹೀಗೆ ವಿವರಿಸಬಹುದು. ಇವುಗಳನ್ನು ಶಿಲಾಶ್ರಯದ ನೆಲೆಗಳೆಂದು ಕರೆಯುತ್ತಾರೆ. ಇಂತಹ ಶಿಲಾಶ್ರಯದ ಚಿತ್ರಗಳಿರುವ ನೆಲೆಯ ರಾಜ್ಯದ ಹಲವುಕಡೆಗಳಲ್ಲಿ ನೊಡಲು ಸಿಗುತ್ತದೆ. ಗದಗ ಜಿಲ್ಲೆಯ ನಿಲಗುಂದ ಎಂಬ ಗ್ರಾಮದಲ್ಲಿ ಪ್ರಾಗೈತಿಹಾಸಿಕ ಚಿತ್ರಗಳು ಕಂಡುಬರುತ್ತದೆ. ಪ್ರಾಚೀನ ಕುರುಹದಿಂದ ಐತಿಹಾಸಿಕ ನೆಲೆಯನ್ನು ಹೆಳುವುದು ನಿಲುಗುಂದದ ಕಲ್ಲ ಆಸರೆಯ ಪ್ರಾಗೈತಿಹಾಸಿಕ ಚಿತ್ರಗಳು ಇವೆ. ಇದಕ್ಕೆ ಪ್ರಾಚೀನ ಇತಿಹಾಸವು ಇದೆ. ನಿಲುಗಂದ ಗುಡ್ಡಕ್ಕೆ ಹತ್ತಿರ ಶ್ರೀ ಮಹಾಂತ ಸ್ವಾಮಿಗಳವರ ದೇವಸ್ಥಾನವಿದೆ. ದೇವಸ್ಥಾನದಿಂದ ಗುಡ್ಡದ ಕಡೆಗೆ

೭ ಡಾ. ಎಸ್.ಸಿ. ಪಾಟೀಲ, ಜನಪದ ಚಿತ್ರಕಲೆ ವೀರಶೈವ ಅಧ್ಯಯನ ಸಂಸ್ಥೆ ಜಗದ್ಗೋರು ತೋಂಟದಾರ್ಯ ಸಂಸ್ಥಾನಮಠ ಗದಗ ಪು.ಸಂ. ೩೧

೮. ಡಾ. ಎಸ್.ಸಿ. ಪಾಟೀಲ, ಜನಪದ ಚಿತ್ರಕಲೆ ವೀರಶೈವ ಅಧ್ಯಯನ ಸಂಸ್ಥೆ ಜಗದ್ಗೋರು ತೋಂಟದಾರ್ಯ ಸಂಸ್ಥಾನಮಠ ಗದಗ ಪು.ಸಂ. ೩೧

ಹೊದರೆ ಅಲ್ಲಿ ಭಿಮಶೇಷ ಕುಂಡ ತಿವಿದಿದ್ದು ಕಲ್ಲು, ಈ ಬಂಡೆಗಳ ಮೇಲೆ ಪ್ರಾಗೈತಿಹಾಸಿಕ ಚಿತ್ರಗಳು ಕಂಡುಬರುತ್ತದೆ. ನಿಲಗುಂದ ಗುಡ್ಡದ ಚಿತ್ರಗಳು ಇಲ್ಲಿ ಕಂಡುಬರುತ್ತವೆ ೧. ಭೀಮಸೇನ ಕುಂಡಿ ತಿವಿದ ಕಲ್ಲು, ೨. ಕರೆ ಕುದುರೆ, ಬಿಳಿ ಕುದುರೆ, ೩. ಹೊಕ್ಕಳಯಲ್ಲಮ್ಮ ಗವಿ, ೪. ಗಂಗಾಳ ಗಲ್ಲ್, ೫. ಖಾರದ ಕಲ್ಲು, ೬. ವ್ಯಳ ಮುಟಗಿ ಕಲ್ಲು, ೭. ಪಾಂಡವ ಪಗಡೆ ಯಾಡಿದ್ದು, ಮುಂತಾದ ಸ್ಥಳಗಳಲ್ಲಿ ಆದಿಮಾನವರ ರಚಿಸಿದ ಚಿತ್ರಗಳು ಇಲ್ಲಿ ಕಂಡುಬರುತ್ತವೆ. ಆದಿಮಾನವನು ವಿಶ್ರಾಂತಿ ವೇಳೆಯಲ್ಲಿ ಕಲ್ಲು ಬಂಡೆಯ ಮೇಲೆ ಕಲ್ಲಾಸರೆಯ ಮೇಲೆ ಕಾಡು ಪ್ರಾಣಿಗಳ, ಜಿಂಕೆಯ, ಬೇಟಿಯಾಡುವ ಚಿತ್ರ ಪಕ್ಷಿ, ಗೀಡ ರಂಗೋಲಿಯ ಚಿತ್ರ ಮುಂತಾದ ಚಿತ್ರಗಳು ಇಲ್ಲಿ ಕಂಡು ಬರುತ್ತದೆ. ಈ ಚಿತ್ರಗಳ ಕುರಿತು ಯಾವುದೆ ಸಂಶೋಧನಾತ್ಮ ಗ್ರಂಥದಲ್ಲಿ ಎಲ್ಲಿ ಉಲ್ಲೇಖವಾಯಿರುವುದಿಲ್ಲ. ಪ್ರಸ್ತೂತ ಅಧ್ಯಯನದಲ್ಲಿ ಅಧ್ಯಯನ ಮಾಡಿ ದಾಖಲಿಸಲಾಗಿದೆ.

ನಿಲಗುಂದ ಕಲ್ಲಾಸರೆ, ಗವಿಯ ಚಿತ್ರಗಳು :

ಚಿತ್ರ : ೧. ಈ ಕಲಾಕೃತಿಯು ಜಿಂಕೆಗಳ ಕಲಾಕೃತಿಯಾಗಿದೆ ಜಿಂಕೆಗಳು ನಿಂತು ನೊಡುತ್ತಿವೆ. ಬಹುಶಃ ಆದಿಮಾನವರು ಜಿಂಕೆಯನ್ನು ಬೆನ್ನಟಿ ಬಂದಾಗ ಓಡಿಬಂದು ನಿಂತಿರುವ ಚಿತ್ರವಾಗಿದೆ. ಜಿಂಕೆಯು ಕಾಡಿನಲ್ಲಿವೆ ಎಂಬ ಕಲ್ಪನೆ ತೊರಿಸಲಿಕ್ಕೆ ಗಿಡಗಳನ್ನು ಸುಂದರವಾಗಿ ಹಿನ್ನಲೆಯತ ರಚಿಸಿದ್ದಾರೆ. ಈ ಕಲಾಕೃತಿಯನ್ನು ಪ್ರಾಣಿಗಳ ರಕ್ತದಿಂದ ರಚಿಸಿದ ಕಲಾಕೃತಿ ಇದಾಗಿದೆ. ಈ ಕಲಾಕೃತಿಯು ದೊಡ್ಡದಾದ ಕಲ್ಲಿನ ಮೇಲೆ ಇದೆ ಈ ಕಲ್ಲನ್ನು ಭೀಮಶೇನ ಕುಂಡಿತಿವಿದ ಕಲ್ಲು ಎಂದು ಕರೆಯುತ್ತಾರೆ. ಈ ಕಲ್ಲಿನಲ್ಲಿ ರಚಿತವಾಗಿದೆ.

ಚಿತ್ರ : ೨. ಈ ಚಿತ್ರವು ಮನುಷ್ಯನ ಪ್ರಾಣಿ ಬೆಟೆಯಾಡುತ್ತಿರುವಾಗ ಸಂತೋಷವನ್ನು ವ್ಯಕ್ತಪಡಿಸುವ ದೃಶ್ಯವನ್ನು ರಚಿಸಿದ್ದಾರೆ. ಒಬ್ಬ ಮನುಷ್ಯ ನಾನು ಇಲ್ಲಿ ಅದಿನಿ ಎನ್ನುವುದಕ್ಕೆ ಎರಡು ಕೈಗಳನ್ನು ಮೇಲಕ್ಕೆತ್ತಿ ತೋರಿಸುತ್ತಿದ್ದಾರೆ. ಹಿನ್ನಲೆಯಾಗಿ ಗುಡ್ಡ, ಸೂರ್ಯನ ಚಿತ್ರವನ್ನು ಪ್ರಾಣಿಯ ರಕ್ತದಿಂದ ರಚಿಸಿದ್ದವು ಸ್ಪಸ್ಟವಾಗಿ ಕಾಣುತ್ತದೆ.

ಚಿತ್ರ : ೩. ಈ ಕಲಾಕೃತಿಯು ಬೆಟೆಯಾಡುವ ದೃಶ್ಯವಾಗಿದೆ. ಆದಿಮಾನವರು ಪ್ರಾಣಿಯನ್ನು ಬೆನ್ನಟ್ಟಿ ಹೊಗುತ್ತಿರುವುದು ಗುಡ್ಡ ಮತ್ತು ಟೆಂಗಿನ ಎತ್ತರವಾದ ಗಿಡಗಳನ್ನು ನೈಜವಾಗಿ ಸ್ಪಷ್ಟವಾಗಿ ಕಾಣುವಂತೆ ರಚಿಸಿದ್ದಾರೆ. ಅಲ್ಲಲ್ಲಿ ಬೆಟೆ ಆಡುತ್ತಿರುವ ಮನುಷ್ಯರ ಚಿತ್ರವನ್ನು ರಚಿತವಾಗಿದೆ. ಈ ಕಲಾಕೃತಿಯು ಭಿಮಸೇನ ಬಂಡೆಯ ಮೇಲೆ ರಚಿತವಾಗಿದೆ.

ಚಿತ್ರ : ೪. ಈ ಕಲಾಕೃತಿಯಲ್ಲಿ ಎರಡು ರೀತಿಯಲ್ಲಿ ಇರುವ ಚಿತ್ರಗಳು ಕಂಡು ಬರುತ್ತದೆ. ಒಂದು ಕಡ್ಡಿ ಮನುಷ್ಯರ ಎರಡು ಚಿತ್ರಗಳು ಮೇಲೆ ಕೈ ಎತ್ತಿ ಕರೆಯುತ್ತಿರುವ ಚಿತ್ರಗಳು ಪ್ರಾಣಿಯ ಚಿತ್ರಗಳು ಇವೆ. ಇನ್ನೊಂದು ರಂಗೋಲಿ ಹಾಕಿದ ಚಿತ್ರವನ್ನು ಅತ್ಯಂತ ಸುಂದರವಾಗಿ ರಚಿಸಿದ್ದಾರೆ. ಈ ಕಲಾಕೃತಿಯನ್ನು ಪ್ರಾಣಿಗಳ ರಕ್ತದಿಂದ ಚಿತ್ರಿಸಿದ್ದಾರೆ. ಈ ಕಲಾಕೃತಿಯ ಬಿಳಿ ಕುದುರೆ, ಕರೆ ಕುದುರೆ ಗವಿಯಲ್ಲಿ ಕಂಡು ಬರುತ್ತವೆ.

"ಕ್ರಿ.ಶ. ೮ ರಿಂದ ೧೦ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರಾ ಮಹಾಲಯಗಳಲ್ಲಿ ಭಿತ್ತಿ ಚಿತ್ರ ರಚಿಸಲಾಗಿದೆ. ಹೊಯ್ಸಳರ ಕಾಲದಲ್ಲಿ ಮೂಡಬಿದಿರೆಯ ಜೈನ

ಬಸದಿ. ಶ್ರವಣಬೆಳಗೊಳದ ಪೆರ್ಶ್ವೇಯ ಬಸದಿ, ಕರ್ನಾಳ್ಳಿಯ ಕಲ್ಲೇಶ್ವರ ದೇವಾಲಯ, ಹಳೇಬೀಡದ ಹೊಯ್ಸಳೇಶ್ವರ ದೇವಾಲಯ, ಅಂಗಡಿಯಲ್ಲಿನ ವಾಸಂತಿಕಾ ದೇವಾಲಯಗಳಲ್ಲಿ ಭಿತ್ತಿ ಚಿತ್ರ ಬರೆಯಲಾಗಿದೆ."[೯] ಹೀಗೆ ರಾಜ ಮಹಾರಾಜರು ಸಂಸ್ಥಾನಿಕರು ಮಾತ್ರವಲ್ಲದೆ ಮಠಮಾನ್ಯರುಗಳು ಸಹಿತ ಭಿತ್ತಿಚಿತ್ರಕಲೆ ಕರ್ನಾಟಕದಲ್ಲಿ ಬೆಳೆಸಿದ್ದಾರೆ. "ಭಿತ್ತಿಚಿತ್ರ ರಚಿಸುವದಲ್ಲಿ ವೀರಶೈವ ಮಠಗಳ ಪಾತ್ರ ತುಂಬಾ ಮಹತ್ವದ್ದಾಗಿದೆ. ಮಠಗಳ ಪೋಷಣೆಯಲ್ಲಿ ರಚನೆಯಾದ ಭಿತ್ತಿಚಿತ್ರಗಳು ಧಾರವಾಡ ಸಮಿಪದ ಆಮ್ಮಿನಭಾವಿಯ ಪಂಚಗ್ರಹ ಹಿರೇಮಠ, ಮಹಾಲಿಂಗಪುರದ ಮಹಾಲಿಂಗೇಶ್ವರ ಮಠ, ನವಲಗುಂದದ ವಿರಕ್ತಮಠ, ಸುರಪುರದ ಅಣ್ಣಿವನಮಠ, ಅಥಣಿಯ ಶಜ್ಜಿನಮಠಗಳಲ್ಲಿ ಕಂಡುಬರುತ್ತದೆ.[೧೦]

ಸಮಾಜದಲ್ಲಿನ ಪ್ರತಿಷ್ಠಿತ ವ್ಯಕ್ತಿಗಳು ತಮ್ಮ ಮನೆಗಳಲ್ಲಿ ಭಿತ್ತಿಚಿತ್ರ ಬರೆಸುವ ಮೂಲಕ ಈ ಪ್ರಕಾರದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇಂಥಹ ಪ್ರತಿಷ್ಠಿತ ವ್ಯಕ್ತಿ ಬರೆಸಿದ ಚಿತ್ರಗಳು ನರಗುಂದದ ಗುಂಡಪ್ಪ ಹಸಬಿಯವರ ಮನೆಯಲ್ಲಿವೆ. ಗುಳೇದಗುಡ್ಡದ ಹೊಸಮನಿಗೌಡ್ರ ಮನೆ, ರಾಯಚೂರಿನ ಖಾಚಿನಗೌಡರ ಮನೆ, ಸಂಕೇಶ್ವರದ ವರ್ಣೇಕರ ಮನೆಗಳಲ್ಲಿ ಕಂಡುಬರುತ್ತದೆ. ಹೀಗೆ ಅನೇಕ ಶ್ರೀಮಂತ ಮತ್ತು ಪ್ರತಿಷ್ಠಿತ ವ್ಯಕ್ತಿಗಳ ಆಸಕ್ತಿ ಮತ್ತು ಪ್ರೋತ್ಸಾಹದಿಂದ ಕರ್ನಾಟಕದಲ್ಲಿ ಭಿತ್ತಿಚಿತ್ರ ರಚನಾ ಪರಂಪರೆ ಶ್ರೀಮಂತವಾಗಿ ಬೆಳೆಯಿತು. ಹೀಗೆ ಭಿತ್ತಿಚಿತ್ರ ರಚನಾ ಭವ್ಯ ಪರಂಪರೆಯು ಕರ್ನಾಟಕದ ಅನೇಕ ಪ್ರತಿಷ್ಠಿತ ವ್ಯಕ್ತಿಗಳ ಮನೆಯಲ್ಲಿ ಅಜರಾಮರವಾಗಿ ಬೆಳೆಯಿತು. ದೇವಾಲಯದ ಮಠಮಾನ್ಯಗಳಲ್ಲಿ ಭಿತ್ತಿಚಿತ್ರಗಳಿಂದ ಅಲಂಕರಿಸಿದಂತೆ ರಾಜ ಮಹಾರಾಜರು, ಸಂಸ್ಥಾನಿಕರು ತಮ್ಮ ಅರಮನೆಗಳನ್ನು ಭಿತ್ತಿಚಿತ್ತಗಳಿಂದ ಅಲಂಕರಿಸಿಕೊಂಡಿರುವುದು ಕಂಡು ಬರುತ್ತದೆ.

ರಾಜಕಾರಣಿಗಳ ಸಂವಹನಗೃಹಗಳು, ಸ್ನಾನಗೃಹಗಳು, ಖಾಸಗಿಕೋಣೆಗಳು, ಸಭಾ ಭವನಗಳು, ರಾಣಿಯರ ಜನಾನಗಳು, ಅತಿಥಿ ಅಭ್ಯಾಗತರು ಕುಳಿತು ಕೇಳುವ ಕೋಣೆಗಳಲ್ಲದೇ, ಅರಮನೆಗಳಲ್ಲಿರುವ ಪ್ರತ್ಯೇಕ ಚಿತ್ರಶಾಲೆಗಳಲ್ಲಿ ಚಿತ್ರಗಳನ್ನು ರಚನೆ ಮಾಡಿರುವುದು ಕಂಡು ಬರುತ್ತದೆ. ಕರ್ನಾಟಕದಲ್ಲಿ ಭಿತ್ತಿ ಚಿತ್ರಗಳನ್ನು ಗಮನಸಿದಾಗ ಹೆಚ್ಚಾಗಿ ಹಿಂದೂ ಮತ್ತು ಮುಸ್ಲಿಂ ಅರಸರು ಕಟ್ಟಿಸಿದ ಅರಮನೆಗಳಲ್ಲಿ ಭಿತ್ತಿ ಚಿತ್ರಗಳು ಕಂಡುಬರುತ್ತವೆ.

ರಂಗೀನ್ ಮಹಲ್, ಬೀದರ ಅರಸ್ ಮಹಲ್, ಬಿಜಾಪೂರ ಬೇಸಿಗೆ ಅರಮನೆ, ಕುಮಟಗಿ, ನಿಂಬಾಳಕರ ರಾಜವಾಡೆ, ನಿಪ್ಪಾಣಿ ನಾಯಕರ ಅರಮನೆ, ಸುರಪುರ ನವಾಬರವಾಡೆ, ಸವಣೂರ, ರಾಮದುರ್ಗವಾಡೆ, ದರಿಯಾ ದೌಲತ್ ಅರಮನೆ, ಶ್ರೀರಂಗಪಟ್ಟಣ, ಬಾಬಾಸಾಹೇಬರ ಅರಮನೆ, ನರಗುಂದದಲ್ಲಿ ಭಿತ್ತಿಚಿತ್ರಗಳು ಇವೆ. ಇವುಗಳ ಕುರಿತು ರೇಖಾವಿನ್ಯಾಸ, ಬಣ್ಣಗಳ ಕುರಿತು ಬಣ್ಣಿಸಲಾಗಿದೆ.

ಭಿತ್ತಿ ಸಿದ್ಧತೆ : ಭಿತ್ತಿ ಚಿತ್ರ ರಚನೆಯಾಗುವಾಗ ಯಾವ ರೀತಿಯಾಗಿ ಸಿದ್ಧತೆ ಮಾಡಿಕೊಳ್ಳಬೇಕು, ಮಿಶ್ರಣವನ್ನು ಹೇಗೆ ಮತ್ತು ಯಾವಯಾವ ವಸ್ತುಗಳಿಂದ ತಯಾರಿಸಿಕೊಳ್ಳಬೇಕು. ನಂತರ ಅದನ್ನು ಆಧಾರಕ್ಕೆ ಲೇಪಿಸುವ ವಿಧಾನ ಯಾವುದು ಎಂಬ ಕುರಿತು ಭಾರತೀಯ ಪ್ರಾಚೀನ ಶಿಲ್ಪ ಶಾಸ್ತ್ರಗಳು ವಿವರಣೆ ನೀಡಿವೆ ವಿಷ್ಣುಧರ್ಮೋತ್ತರ ಪುರಾಣ, ಮನಸೋಲ್ಲಾಸ, ಶಿವರತ್ನ, ಶಿವತತ್ವರತ್ನಾಕರ,

೯. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೩.

೧೦. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೩.

ಸವರಾಂಗಣಸೂತ್ರದಾರ, ಕಾಶ್ಯಪಶಿಲ್ಪಶಾಸ್ತ್ರ ಮುಂತಾದ ಕೆಲವು ಗ್ರಂಥಗಳಲ್ಲಿ ಭಿತ್ತಿಸಿದ್ಧಗೊಳಿಸುವ ವಿಧಾನ ಬಣ್ಣಗಳು, ಕುಂಚ ತಯಾರಿಕೆ, ಚಿತ್ರರಚನಾ ವಿಧಾನ, ಅಳತೆ ಪ್ರಮಾಣಗಳನ್ನೊಳಗೊಂಡ ಭಿತ್ತಿಚಿತ್ರ ರಚನೆಯ ಕುರಿತು ಸಮಗ್ರ ವಿವರಣೆಯನ್ನು ವಿವರಿಸಲಾಗಿದೆ. "ಭಿತ್ತಿ ಸಿದ್ಧಗೊಳಿಸುವಲ್ಲಿ ಪ್ರಮುಖವಾಗಿ ಎರಡು ವಿಧಾನಗಳಿದ್ದು ಒಂದು ಮಣ್ಣಿನ ಭಿತ್ತಿಯಾದರೆ, ಇನ್ನೊಂದು ಗಾರೆಭಿತ್ತಿ ತಯಾರಿಕೆಯಾಗಿದೆ. ಮಣ್ಣಿನ ಭಿತ್ತಿಯಲ್ಲಿ ಜಿಗಟಾದ ಜೇಡಿಮಣ್ಣು ಪ್ರಧಾನವಾದರೆ ಗಾರೆಭಿತ್ತಿಯಲ್ಲಿ ಸಣ್ಣ ಬಿಸುಕುಗಳು ಪ್ರಧಾನವಾಗಿರುತ್ತದೆ."[೧೧] ಹೀಗೆ ಭಿತ್ತಿಯ ಸಿದ್ಧತೆಗೊಳಿಸುತ್ತದೆ.

"ಭಿತ್ತಿ ಸಿದ್ಧತೆಗೊಳಿಸುವ ರೀತಿ ಒಂದೇ ಹಂತದಲ್ಲಿ ಪೂರ್ಣಗೊಳ್ಳದೇ ನಾಲ್ಕು ಹಂತಗಳಲ್ಲಿ ನಡೆಯುತ್ತದೆ. ಮೊದಲ ಹಂತದಲ್ಲಿ ಆಧಾರಕ್ಕೆ ಲೇಪಿಸಲಾಗುವುದು. ಮೂರನೇಯ ಹಂತದಲ್ಲಿ ಲೇಪಿಸಿದ ಮಿಶ್ರಣವನ್ನು ವಿವಿಧ ಅಂಟು ದ್ರಾವಕಗಳಿಂದ ತಿಕ್ಕಿ ನುಣುಪುಗೊಳಿಸಿದರೆ, ನಾಲ್ಕನೆಯ ಹಂತದಲ್ಲಿ ನುಣುಪುಗೊಳಿಸಿದ ಭಿತ್ತಿಗೆ ಸುಣ್ಣದ ಹಿನ್ನಲೆ ಲೇಪನಕೊಟ್ಟು ಚಿತ್ರ ಬರೆಯಲು ಅಣಿಗೊಳಿಸಲಾಗುವುದು.[೧೨]"

ಗೋಡೆಯ ಮೇಲೆ ಸುಣ್ಣವನ್ನು ಲೇಪಿಸಿ ಸುಣ್ಣವು ಇನ್ನು ಹಸಿಯಾಗಿರುವಾಗಲೇ ಚಿತ್ರವು ಪೂರ್ಣವಾಗಿ ಚಿತ್ರ ಬಾಗುವಂತೆ ಚಿತ್ರಿಸುವುದರ ಪ್ರೇಸ್ಕೋ ಪದ್ಧತಿಯ ವೈಶಿಷ್ಟ್ಯವಾಗಿದೆ. ಸುಣ್ಣವು ಒಣಗಿದ ನಂತರ ಅದರೊಂದಿಗೆ ಚಿತ್ರವು ಗಟ್ಟಿಗೊಂಡು ಶಾಶ್ವತವಾಗಿ ಉಳಿಯುತ್ತದೆ. ಗೋಡೆಗಳಿಗೆ ಬಣ್ಣವನ್ನು ಹಚ್ಚುವ ವಿಧಾನಗಳು ಅನೇಕ ವಿಧಗಳಾಗಿವೆ. ತೈಲವರ್ಣ ಮತ್ತು ಮೇಣಗಳನ್ನು ಸಹ ಬಳಸಬಹುದೆಂಬುದಕ್ಕೆ ವೆನಿಸ್ ಮತ್ತಿತರ ಕಡೆಗಳಲ್ಲಿ ಕ್ಯಾನವಾಸನ ಮೇಲೆ ಚಿತ್ರಿಸಿ ನಂತರ ಗೋಡೆ ಇಲ್ಲವೆ ಒಳಮಳಿಗೆಯಲ್ಲಿ ಅಂಟಿಸಿರುವುದು ಕಂಡುಬರುತ್ತದೆ.[೧೩]"

ಭಿತ್ತಿಸಿದ್ಧತೆಗೊಳಿಸುವ ಕುರಿತು ವಿಷ್ಣುಧರ್ಮೋತ್ತರ ಗ್ರಂಥದಲ್ಲಿ ಈ ರೀತಿ ಹೇಳಲಾಗಿದೆ. ಮೂರು ಪ್ರಕಾರದ ಇಟ್ಟಿಗೆ ಪುಡಿಯನ್ನು ಮತ್ತು ಅಷ್ಟೇ ಪ್ರಮಾಣದ ಜೇಡಿಮಣ್ಣನ್ನು ಬೆರೆಸಿ ಅದಕ್ಕೆ ಮೂರು ಪ್ರಮಾಣದಲ್ಲಿ ಮಣ್ಣುಗಳು, ಜೇನುಮೇಣು, ಅತಿಮಧುರ, ಕಾಕಂಬಿ, ಇವುಗಳನ್ನು ಸೇರಿಸಿ ಮಿಶ್ರಣ ಮಾಡುವುದು. ಈ ಮಿಶ್ರಣಕ್ಕೆ ೧/೩ ಭಾಗದಷ್ಟು ಆಮೇಲೆ ಕಪ್ಪುಕಲ್ಲಿನ ಪುಡಿಯನ್ನು ಸೇರಿಸಿ ನೀರು ಹಾಕಿ ಒಟ್ಟು ಮಿಶ್ರಣವನ್ನು ಚೆನ್ನಾಗಿ ಕಲಕಬೇಕು. ಆ ಮೇಲೆ ಹತ್ತಿಗಿಡದ ರಸ, ಬಿಲ್ವಪತ್ರಿಕೆಯ ಅಂಟು. ವಜ್ರಸರಿ ಮತ್ತು ಹಾಲನ್ನು ಚಿರ ಭಿತ್ತಿಯನ್ನು ನುಣುಪಗೊಳಿಸಬೇಕು. ಅದು ಒಣಗುತ್ತಾ ಬರುತ್ತಿರುವಂತೆಯೇ ಅದರ ಮೇಲೆ ಸುಣ್ಣದ ಲೇಪನ ಹಾಕಿ ಚಿತ್ರರಚಿಸಬೇಕು. ಎಂದು ವಿಷ್ಣುಧರ್ಮೋತ್ತರ ಗ್ರಂಥದಲ್ಲಿ ಹೇಳಲಾಗಿದೆ.[೧೪]" ಇದೇ ರೀತಿಯಾಗಿ ಬೇರೆಬೇರೆ ಪ್ರಾಚೀನ ಗ್ರಂಥಗಳು ಭಿತ್ತಿಸುವ ಮಿಶ್ರಣ ಮಾಡುವರೀತಿಯನ್ನು ಲೇಪಿಸುವ ಕುರಿತು ಹೇಳಿವೆ.

ಭಿತ್ತಿಚಿತ್ರ ಕಲೆಯ ಪರಿಕರಗಳು : ಭಿತ್ತಿಚಿತ್ರ ರಚನೆಗಾಗಿ ಅನೇಕ ಬಗೆಯ ಪರಿಕರಗಳ ಅಗತ್ಯವಿದ್ದು ಅವುಗಳನ್ನು ಭಿತ್ತಿ ನಿರ್ಮಾಣ ಪರಿಕರ ಮತ್ತು ಭಿತ್ತಿಚಿತ್ರ ರಚನಾ ಪರಿಕರಗಳೆಂಬುದಾಗಿ

---

೧೧. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೪.
೧೨. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೪.
೧೩. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಶ್ರೀ ಪಿ.ಆರ್. ತಿಪ್ಪೇಸ್ವಾಮಿ ನಿಜದನಲೆ ಪು.ಸಂ.೨೪೪.
೧೪. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೪.

ವಿಂಗಡಿಸಬಹುದಾಗಿದೆ. ಭಿತ್ತಿ ನಿರ್ಮಾಣ ಪರಿಕರಗಳಲ್ಲಿ ಭಿತ್ತಿ ತಯಾರಿಕೆಯಲ್ಲಿ ಒಳಗೊಳ್ಳುವ ಎಲ್ಲ ವಸ್ತುಗಳೂ ಬರುತ್ತವೆ. ಇಲ್ಲಿ ಪ್ರಮುಖವಾಗಿ ಮಣ್ಣು, ಕಲ್ಲಿನಪುಡಿ, ಉಸುಕು, ಸುಣ್ಣ, ನಾರು ಪದಾರ್ಥ ಶಂಖಚೂರ್ಣ, ಇಟ್ಟಿಗೆಪುಡಿ, ವಜ್ರಲೇಪ, ಮರದಂಟು, ವಿವಿಧ ಗಿಡದ ರಸ, ಬಾಳೆಹಣ್ಣು, ಕಾಕಂಬಿ, ಜೇಮೇಣು ಮುಂತಾದ ವಸ್ತುಗಳನ್ನು ಭಿತ್ತಿನಿರ್ಮಾಣ ಹಂತದಲ್ಲಿ ಬಳಸಲಾಗುತ್ತದೆ.

ಭಿತ್ತಿಚಿತ್ರ ರಚನಾ ಪರಿಕರಗಳಲ್ಲಿ ಮುಖ್ಯವಾಗಿ ವರ್ತಿಕಾ (ಸೀಸಕಡ್ಡಿ), ಬಣ್ಣ, ಅಂಟುದ್ರಾವಕ, ಬಣ್ಣಮಿಶ್ರಗೊಳಿಸುವ ತಟ್ಟೆ ಮತ್ತು ಕುಂಚಗಳು ಉಪಯೋಗಿಸಲ್ಪಡುತ್ತವೆ. ಭಿತ್ತಿಚಿತ್ರ ರಚನೆಯಲ್ಲಿ ಮೊದಲಿಗೆ ಆಕೃತಿಗಳನ್ನು ವರ್ತಿಕಾದಿಂದಲೇ ಚಿತ್ರಿಸಿಕೊಳ್ಳುತ್ತಿದ್ದರು. ಈ ವರ್ತಿಕಾಗಳನ್ನು ಕಟ್ಟಿಗೆ ಸುಟ್ಟು ಇದ್ದಿಲುಗಳಿಂದ ಸಾಮಾನ್ಯವಾಗಿ ಪಡೆಯುತ್ತಿದ್ದರು. ಕೆಲವು ಸಲ ಕಪ್ಪಕಾಡಿಗೆ, ಧಾನ್ಯದ ಹಿಟ್ಟು, ಕಲ್ಲಿನಪುಡಿ, ಇಟ್ಟಿಗೆಪುಡಿ, ಜೇಡಿಮಣ್ಣು ಮತ್ತು ವಜ್ರಸರಿ ಇವುಗಳನ್ನು ಮಿಶ್ರಣಗೊಳಿಸಿ ತಯಾರಿಸಿದ ಕಡ್ಡಿಗಳನ್ನು ಸುಟ್ಟು ಅದರಿಂದಲೂ ವರ್ತಿಕಾಗಳನ್ನು ತಯಾರಿಸಿಕೊಳ್ಳುತ್ತಿದ್ದರು.[೧೫]

ಬಣ್ಣಗಳನ್ನು ಖನಿಜಮೂಲ, ಪ್ರಾಣಿಮೂಲ, ಸಸ್ಯಮೂಲ ಮತ್ತು ಲೋಹಮೂಲಗಳಿಂದ ಪಡೆದುಕೊಳ್ಳುತ್ತಿದ್ದರಲ್ಲದೇ ಕ್ರಿ.ಶ. ೧೮ನೇ ಶತಮಾನದ ಈಚೆಗೆ ರಾಸಾಯನಿಕ ಬಣ್ಣಗಳನ್ನು ಭಿತ್ತಿಚಿತ್ರ ರಚನೆಯಲ್ಲಿ ಬಳಸಲಾರಂಬಿಸಿದರು. ಖನಿಜ ಮೂಲದ ಬಣ್ಣಗಳಲ್ಲಿ ಬೇರೆ ಬೇರೆ ಬಣ್ಣದ ಕಲ್ಲು, ಮಣ್ಣು, ಅದಿರುಗಳಿಂದ ಬಣ್ಣ ತಯಾರಿಸಿಕೊಳ್ಳುತ್ತಿದ್ದರು. ಪ್ರಾಣಿಮೂಲ ಬಣ್ಣಗಳಲ್ಲಿ ಪ್ರಾಣಿಗಳ ರಕ್ತ, ಕೊಬ್ಬು, ವಿವಿಧ ಜಾತಿಯ ಕೀಟಗಳನ್ನು ಸಂಸ್ಕರಿಸಿ ಬಣ್ಣ ಪಡೆದುಕೊಳ್ಳುತ್ತಿದ್ದರು. ಸಸ್ಯಮೂಲ ಬಣ್ಣಗಳಲ್ಲಿ ಬೇರೆ ಬೇರೆ ಸಸ್ಯಗಳ ಎಲೆ, ಹೂ, ಹಣ್ಣು, ಚಿಗುರು, ಕಾಂಡ ಬೇರುಗಳಿಂದ ಬಣ್ಣ ತಯಾರಿಸಿಕೊಂಡು ಚಿತ್ರ ರಚಿಸುತ್ತಿದ್ದರು. ಲೋಹ ಮೂಲದ ಬಣ್ಣಗಳಲ್ಲಿ ವಿವಿಧ ಲೋಹಗಳನ್ನು ಕಾಯಿಸುವುದು, ಕರಗಿಸುವುದು, ಮತ್ತು ತೇಯುವ ಮೂಲಕ ಬಣ್ಣ ಪಡೆಯುತ್ತಿದ್ದರಲ್ಲದೇ ಲೋಹದ ಹಾಳೆಗಳನ್ನು ತೆಳುವಾಗಿ ಬಡಿದು ಅದನ್ನೇ ಕತ್ತರಿಸಿ ಚಿತ್ರದ ಭಾಗಗಳಿಗೆ ಅಂಟಿಸುತ್ತಿದ್ದರು. ಇಲ್ಲವೇ ಕುಟ್ಟಿ ಪುಡಿಯನ್ನು ಅಂಟು ದ್ರಾವಣದಲ್ಲಿ ಕಲಿಸಿ ಚಿತ್ರಗಳಿಗೆ ಲೇಪಿಸುತ್ತಿದ್ದರು. ವರ್ಣವನ್ನು ಪಡೆಯುತ್ತಿದ್ದ ಪ್ರಮುಖ ಬಣ್ಣಗಳಲ್ಲಿ ಮಿಶ್ರಣಮಾಡಿಕೊಳ್ಳಲು ಅನೇಕ ಬಗೆಯ ಅಂಟುದ್ರಾವಕಗಳನ್ನು ಪ್ರಾಚೀನರು ಉಪಯೋಗಿಸುತ್ತಿದ್ದರು.[೧೬] ಅವುಗಳಲ್ಲಿ ಪ್ರಾಣಿಜನ್ಯ, ಸಸ್ಯಜನ್ಯ, ಮತ್ತು ಖನಿಜಜನ್ಯವಾದ ಅಂಟುಗಳು ಸೇರಿವೆ. ಪ್ರಾಣಿಜನ್ಯ ಅಂಟುಗಳಲ್ಲಿ ವಜ್ರಸರಿ, ಪ್ರಾಣಿಗಳ ರಕ್ತ, ಎಲುಬಿನೊಳಗಿನ ಜಿಗಟುಪದಾರ್ಥ, ಕೊಬ್ಬು, ಹಾಲಿನಕೆನೆ, ತತ್ತಿಯ ಲೋಳೆ ಪದಾರ್ಥಗಳನ್ನು ಉಪಯೋಗಿಸುತ್ತಿದ್ದರು. ವಜ್ರಸರಿಯನ್ನು ಕೋಣ, ಎಮ್ಮೆ, ಎತ್ತು, ಅಕಳುಗಳ ಚರ್ಮ, ಕೋಡುಗಳನ್ನು ಕುದಿಸುವ ಮೂಲಕ ತಯಾರಿಸಿಕೊಳ್ಳುತ್ತಿದ್ದರು. ಸಸ್ಯಜನ್ಯ ಅಂಟುಗಳಲ್ಲಿ ವಿವಿಧ ಬಗೆಯ ಗಿಡದಕಾಯಿ, ಹೂ, ಹಣ್ಣು, ಎಲೆ ಕಾಂಡಗಳಿಂದ ಪಡೆದ ಅಂಟುಗಳನ್ನು ಉಪಯೋಗಿಸುತ್ತಿದ್ದರು. ಖನಿಜಜನ್ಯ ಅಂಟುಗಳಲ್ಲಿ ಸುಣ್ಣ ಮತ್ತು ಸುಣ್ಣದ ಅಂಶಗಳನ್ನು ಒಳಗೊಂಡು ಅದಿರಿನ ಬಣ್ಣಗಳನ್ನು ಕಲಿಸಿಕೊಳ್ಳಲು ತಟ್ಟೆಗಳ ಅವಶ್ಯಕತೆ ಇದ್ದು ಪ್ರಾಚೀನರು ಕಲ್ಲಿನ

---

೧೫. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೫.

೧೬. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೫.

ತಗ್ಗು ಇಲ್ಲವೆ ಕುಳಿಗಳನ್ನು ಪ್ರಾರಂಭದಲ್ಲಿ ಬಣ್ಣಕಲಿಸಲು ಬಳಸಿದ್ದಾರೆ. ನಂತರದಲ್ಲಿ ಎಲುಬಿನ ಟೊಳ್ಳುಭಾಗ, ಎಲೆಗಳಿಂದ ಮಾಡಿದ ಡೊಣ್ಣೆಗಳು, ಬಿದಿರಿನ ಕೊಳವೆಗಳು, ಟೆಂಗಿನಚಿಪ್ಪು ಮತ್ತು ಪಾತ್ರೆಗಳನ್ನು ಬಳಸಿದಂತೆ ತಿಳಿದುಬರುತ್ತದೆ.[೧೭]

ಚಿತ್ರಗಳಿಗೆ ವರ್ಣವಿನ್ಯಾಸ ಮಾಡಲು ಕುಂಚಗಳ ಅವಶ್ಯಕತೆ ಇದ್ದು ಪ್ರಾಚೀನರು ಅನೇಕ ಬಗೆಯ ಕುಂಚಗಳಿಂದ ಬಣ್ಣಲೇಪಿಸಿದ್ದಾರೆ. ತೀರಾ ಮೊದಲಿಗೆ ಪ್ರಾಣಿಗಳ ಕೂದಲು, ಇಲ್ಲವೇ ಸಸ್ಯದ ಕಾಂಡವನ್ನು ಜಜ್ಜಿ ಎಳೆ ಎಳೆಯಾಗಿ ಮಾಡಿಕೊಂಡು ಕುಂಚಗಳಾಗಿ ಉಪಯೋಗಿಸಿದ್ದಾರೆ. ಜೊತೆಗೆ ಹುಲ್ಲಿನ ಗರಿಕೆಗಳನ್ನು ಒಟ್ಟಾಗಿಕಟ್ಟಿ ಮತ್ತು ಪ್ರಾಣಿಗಳ ಚರ್ಮವನ್ನು ಕಟ್ಟಿಗೆಯ ತುದಿಗೆ ಸುತ್ತಿ ಅವುಗಳಿಂದ ಬಣ್ಣಲೇಪಿಸಿದ್ದಾರೆ ಎಂಬುದಾಗಿ ವಿದ್ವಾಸರು ತರ್ಕಿಸಿದ್ದಾರೆ. ನಂತರದ ಕಾಲದಲ್ಲಿ ಆಡು, ಎಮ್ಮೆ, ಆಕಳು, ಎತ್ತು, ಅಳಿಲು, ಕಾಡುಹಂದಿ, ಮೊಲ ಮುಂತಾದ ಪ್ರಾಣಿಗಳ ಕೂದಲಿನಿಂದ ಕುಂಚಗಳನ್ನು ತಯಾರಿಸಿಕೊಂಡಿದ್ದಾರೆ. ಈ ಕುಂಚಗಳಲ್ಲಿ ಸ್ಥೂಲ, ಮಧ್ಯಮ, ಸೂಕ್ಷ್ಮ ಎಂಬ ಬಗೆಗಳಿದ್ದವಲ್ಲದೇ ದುಂಡು, ಚಪ್ಪಟೆ ಹೀಗೆ ಬೇರೆಬೇರೆ ಆಕಾರಗಳು ಇದ್ದವು. ಕುಂಚಗಳ ಪ್ರಕಾರಗಳು ಅವುಗಳ ತಯಾರಿಕೆ, ಉಪಯೋಗ ಮುಂತಾದ ಸಂಗತಿಗಳ ಬಗ್ಗೆ ಪ್ರಾಚೀನ ಶಿಲ್ಪಶಾಸ್ತ್ರಗಳು ವಿವರವಾಗಿ ಚರ್ಚಿಸಿವೆ. ಈ ರೀತಿಯ ಅನೇಕ ಪರಿಕರಗಳನ್ನು ಬಳಸಿಕೊಂಡು ನಿರ್ದಿಷ್ಟ ವಿಧಾನದಲ್ಲಿ ಭಿತ್ತಿಚಿತ್ರ ರಚನೆಯನ್ನು ಪ್ರಾಚೀನರು ಮಾಡುತ್ತಿದ್ದು,[೧೮] ಚಿತ್ರರಚನಾ ವಿಧಾನವನ್ನು ಸ್ಥೂಲವಾಗಿ ಈ ಮುಂದಿನಂತೆ ಗಮನಿಸಬಹುದು.

ಭಿತ್ತಿ ಚಿತ್ರ ರಚನಾ ವಿಧಾನ : ಭಿತ್ತಿಚಿತ್ರ ರಚನೆಯಲ್ಲಿ ಪ್ರಮುಖವಾಗಿ ಭಿತ್ತಿ ಹಸಿ ಇರುವಾಗ ಚಿತ್ರರಚಿಸುವ ಫ್ರೆಸ್ಕೋಬ್ಯುನೋ ಮತ್ತು ಭಿತ್ತಿ ಒಣಗಿದ ನಂತರ ಚಿತ್ರರಚಿಸುವ ಫ್ರೆಸ್ಕೋ ಸೆಕ್ಕೋ ಎಂಬ ಎರಡು ವಿಧಾನಗಳು ಪ್ರಚಲಿತದಲ್ಲಿದ್ದರೂ, ಅತೀ ಹೆಚ್ಚಿನ ಚಿತ್ರಗಳನ್ನು ಭಾರತದಲ್ಲಿ ಭಿತ್ತಿ ಒಣಗಿದ ನಂತರ ಚಿತ್ರಿಸಲಾಗಿದೆ. ಅಂತೆಯೇ ಕರ್ನಾಟಕದಲ್ಲಿಯೂ ಸಾಮಾನ್ಯವಾಗಿ ಕಾವಿ ಭಿತ್ತಿಚಿತ್ರಗಳನ್ನು ಹೊರತುಪಡಿಸಿ ಇನ್ನಿತರ ಭಿತ್ತಿಚಿತ್ರಗಳನ್ನು ಭಿತ್ತಿ ಒಣಗಿದ ನಂತರವೇ ಚಿತ್ರಿಸಲಾಗಿದೆ. ಭಿತ್ತಿಹಸಿ ಇರುವಾಗ ಚಿತ್ರರಚನೆ ಮಡುವ ವಿಧಾನ ಕಠಿಣವಾಗಿದ್ದು, ಒಂದು ದಿನದಲ್ಲಿ ಎಷ್ಟು ಭಾಗಗದಲ್ಲಿ ಚಿತ್ರ ಮಾಡಬಲ್ಲರೋ ಅಷ್ಟೇ ಪ್ರಮಾಣದ ಭಿತ್ತಿಯನ್ನು ಲೇಪಿಸಿಕೊಳ್ಳಬೇಕು. ಇಲ್ಲವೇ ನಿರ್ಮಿಸಿದ ಭಿತ್ತಿಯು ಮರುದಿನದ ಚಿತ್ರರಚನೆಗೆ ಹಸಿ ಇರುವಂತೆ ನೋಡಿಕೊಳ್ಳಬೇಕು. ಭಾರತದಂತಹ ಉಷ್ಣಪ್ರದೇಶದಲ್ಲಿ ಈ ಪದ್ಧತಿಯನ್ನು ಅನುಸರಿಸುವುದು ಕಷ್ಟಸಾಧ್ಯವಾಗಿರುವುದರಿಂದ ಇಲ್ಲಿ ಹೆಚ್ಚಾಗಿ ಒಣಭಿತ್ತಿಯ ಮೇಲೆಯೇ ಚಿತ್ರರಚನೆ ಮಾಡಲಾಗಿದೆ.

ಲೇಕ್ಯಕರ್ಮ ಎಂದರೆ ಭಿತ್ತಿಯ ಮೇಲೆ ಸೀಸದ ಕಡ್ಡಿಯಿಂದ ಚಿತ್ರದ ಪ್ರಾಥಮಿಕ ರೇಖೆಗಳನ್ನು ಹಾಕಿಕೊಳ್ಳವುದಾಗಿದೆ. ರೇಖಾಕರ್ಮವೆಂದರೆ, ಸೀಸದಕಡ್ಡಿಯ ರೇಖೆಗಳ ಮೇಲೆ ಮತ್ತು ಕೆಂಪು ಇಲ್ಲವೇ ಹಳದಿ ವರ್ಣಗಳಿಂದ ರೇಖೆಗಳನ್ನು ಎಳೆಯುವದಾಗಿದೆ. ವರ್ಣಕರ್ಮವು ಚಿತ್ರಗಳಿಗೆ ಬಣ್ಣ ಲೇಪಿಸುವ ಹಂತವಾಗಿದ್ದು, ವರ್ತನಕರ್ಮವು ಚಿತ್ರಗಳಿಗೆ ನೆರಳು ಬೆಳಕಿನ ವಿನ್ಯಾಸ ಮಾಡುವದಾಗಿದೆ.[೧೯]

---

೧೭. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೬.
೧೮. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೬.
೧೯. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೭.

ಐದನೆಯದಾದ ಲೇಖಕರ್ಮವು ಚಿತ್ರರಚನೆಯ ನಂತರ ಬಣ್ಣದಿಂದ ಚಿತ್ರಗಳಿಗೆ ಹೊರರೇಖೆ ಎಳೆಯುವದಾಗಿದೆ. ಆರನೆಯದಾದ ದ್ವಿಕಕರ್ಮ ಹಂತವು ಚಿತ್ರದ ಮುಕ್ತಾಯಕ್ಕೆ ಕಣ್ಣಿನ ಹೊಳಪು, ಆಭರಣಗಳ ಮಿಂಚುವಿಕೆ, ಬೆಳಕಿನ ಹೊಳೆಯುವ ಭಾಗಗಳನ್ನು ಗುರುತಿಸಿ ಚಿತ್ರಿಸುವದಾಗಿದೆ. ಈ ರೀತಿ ಭಿತ್ತಿ ಚಿತ್ರಕಲಾವಿದರು ಹಂತಹಂತವಾಗಿ ಚಿತ್ರರಚನೆ ಮಾಡುತ್ತಿದ್ದರು.

ಭಿತ್ತಿಚಿತ್ರ ರಚನಾ ಮಾಧ್ಯಮಗಳು : ಭಿತ್ತಿಚಿತ್ರಗಳನ್ನು ಗೋಡೆ ಮತ್ತು ಮೇಲ್ಛಾವಣಿಗೆ ಲೇಪಿಸಿದ ಗಾರೆ ಲೇಪನದ ಮೇಲೆ ಸಾಮಾನ್ಯವಾಗಿ ರಚಿಸುತ್ತಲಿದ್ದರೂ ಇದರ ಜೊತೆಗೇ ಗೋಡೆ ಮತ್ತು ಮೇಲ್ಛಾವಣಿಗಳಲ್ಲಿ ಅಳವಡಿಸಿದ ಮರ, ಲೋಹ, ಕಲ್ಲು, ಗಾಜು ಮಾಧ್ಯಮಗಳ ಮೇಲೂ ಭಿತ್ತಿಚಿತ್ರ ರಚನೆ ಮಾಡಿರುವುದು ಕಂಡು ಬರುತ್ತದೆ. ಇಂತಹ ಉದಾಹರಣೆಗಳು ಕರ್ನಾಟಕದಲ್ಲಿಯೂ ದೊರೆಕುತ್ತವೆ. ಧಾರವಾಡ ಬಳಿಯ ಅಮ್ಮಿನಭಾವಿಯ ಹಿರೇಮಠದಲ್ಲಿ ಕಟ್ಟಿಗೆ ಲೋಹ ಫಲಕಗಳ ಮೇಲೆ ಚಿತ್ರಗಳಿದ್ದರೆ, ಬೆಳಗಾವಿಯಲ್ಲಿನ ಚರ್ಚ, ರಾಮದುರ್ಗದ ವಾಡೆಯಲ್ಲಿ ಗಾಜಿನ ಮೇಲೆ ಚಿತ್ರಗಳಿವೆ.

ಭಿತ್ತಿಚಿತ್ರ ಕಲೆಯ ವಿಂಗಡನೆ ಮತ್ತು ವಸ್ತು ವಿಷಯ : ಕರ್ನಾಟಕದ ಬೇರೆಬೇರೆ ನೆಲೆಗಳಲ್ಲಿ ರಚನೆಯಾಗಿರುವ ಭಿತ್ತಿಚಿತ್ರಕಲೆಯು.

ಈ ಕೆಳಗಿನ ನೆಲೆಗಳಲ್ಲಿ ಕಂಡುಬರುತ್ತವೆ :

೧) ಗುಹೆಗಳಲ್ಲಿರುವ ಭಿತ್ತಿಚಿತ್ರಕಲೆ

೨) ದೇವಾಲಯಗಳಲ್ಲಿರುವ ಭಿತ್ತಿಚಿತ್ರಕಲೆ

೩) ಮನೆಗಳಲ್ಲಿರುವ ಭಿತ್ತಿಚಿತ್ರಕಲೆ

೪) ಅರಮನೆಗಳಲ್ಲಿರುವ ಭಿತ್ತಿಚಿತ್ರಕಲೆ

೫) ಮಠಗಳಲ್ಲಿರುವ ಭಿತ್ತಿಚಿತ್ರಕಲೆ

೬) ಬಸದಿಗಳಲ್ಲಿರುವ ಭಿತ್ತಿಚಿತ್ರಕಲೆ

೭) ಮಸೀದಿಗಳಲ್ಲಿರುವ ಭಿತ್ತಿಚಿತ್ರಕಲೆ

೮) ಚರ್ಚುಗಳಲ್ಲಿರುವ ಭಿತ್ತಿಚಿತ್ರಕಲೆ

೯) ಇತರ ವಾಸ್ತು ರಚನೆಗಳಲ್ಲಿರುವ ಭಿತ್ತಿಚಿತ್ರಕಲೆ[೨೦]

ನರಗುಂದ ಅರಮನೆ : ಗದಗ ಜಿಲ್ಲೆಗೆ ಸೇರಿದ ನರಗುಂದವು ತಾಲೂಕಾ ಸ್ಥಳವಾಗಿದೆ. ಕರ್ನಾಟಕ ಇತಿಹಾಸದಲ್ಲಿ ಬಹಳಷ್ಟು ಹೆಸರು ಮಾಡಿದ ಸ್ಥಳ ಶಿವಾಜಿಯ ಕೈಕೆಳಗೆ ಅಧಿಕಾರಿಯಾಗಿದ್ದ ಅಪ್ಪಜಿಸುರೋ ಎಂಬ ಮರಾಠಾ ಮೂಲದ ವ್ಯಕ್ತಿಯ ವಂಶಸ್ಥರು ಇಲ್ಲಿ ಆಳಿದ್ದಾರೆ. ಕ್ರಿ.ಶ. ೧೮೫೭ರಲ್ಲಿ ಈ ಸಂಸ್ಥಾನವು ಬ್ರಿಟೀಷರ ಸೊತ್ತಾಯಿತು. ನರಗುಂದ ಸಂಸ್ಥಾನಿಕರು ತಮ್ಮ ಆಡಳಿತ ಕಾಲದಲ್ಲಿ ಕಟ್ಟಿಸಿದ ಅರಮನೆಯಲ್ಲಿ ಭಿತ್ತಿಚಿತ್ರಗಳನ್ನು ರಚಿಸಿದ್ದು, ಆ ಕಟ್ಟಡ ಇಂದು ಸ್ಥಳೀಯ ಮುನ್ಸಿಪಲ್ ಕಛೇರಿಯಾಗಿದೆ. ಅರಮನೆಯ ಚಿತ್ರಗಳ ಬಗೆಗೆ ವಿವರವಾಗಿ ಹೇಳಿದವರೆಂದರೆ ಬಹುಶಃ ಶಿವರಾಮ ಕಾರಂತ ಅವರು ಎಂದು ಡಾ.ಯಾದಪ್ಪ ಪರದೇಶಿಯವರು ತಮ್ಮ ಪಿ.ಎಚ್.ಡಿ. ಸಂಶೋಧನಾ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

---

೨೦. ಡಾ. ಎಸ್.ಸಿ. ಪಾಟೀಲ, ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೬೭.

ಆದರೆ ಇವರು ಇಲ್ಲಿನ ಮೂರು ನಾಲ್ಕು ಚಿತ್ರಗಳ ಬಗೆಗೆ ಮಾತ್ರ ವಿವರಣೆ ಕೊಡುತ್ತಾರೆ. ಡಾ.ಎಸ್.ಸಿ. ಪಾಟೀಲ ಅವರು ಜನಪದ ಚಿತ್ರಕಲೆಯ ಕುರಿತು ಅಧ್ಯಯನ ಮಾಡುವಾಗ ಇವುಗಳನ್ನು ಪ್ರಸ್ತಾಪಿಸಿದ್ದಾರೆ. ಡಾ. ಅ.ಲ. ನರಸಿಂಹನ್ ಅವರು ಕರ್ನಾಟಕ ಚಿತ್ರಕಲೆಯ ಸಾಂಸ್ಕೃತಿಕ ಅಂಶಗಳ ಕುರಿತು ಹೇಳುವಾಗ ಇಲ್ಲಿನ ಒಂದೆರಡು ಚಿತ್ರಗಳನ್ನು ಉದಾಹರಿಸಿದ್ದಾರೆ.[೨೧] ಅಲ್ಲದೆ ಭಿತ್ತಿಚಿತ್ರಕಲೆಯ ಕಾಲಮಾನದ ಬಗ್ಗೆ ಚರ್ಚಿಸಿದ್ದಾರೆ ಎಂದು ಡಾ. ಯಾದಪ್ಪ ಪರದೇಶಿಯವರು ತಮ್ಮ ಅಧ್ಯಯನದಲ್ಲಿ ಪ್ರಸ್ತಾಪಿಸಿದ್ದಾರೆ.

ನರಗುಂದ ಭಿತ್ತಿಚಿತ್ರಕಲೆಯ ಕುರಿತು ಅನೇಕ ದಿನಪತ್ರಿಕೆಗಳಲ್ಲಿ ವಾರಪತ್ರಿಕೆಗಳಲ್ಲಿ ಮಾಸಪತ್ರಿಕೆಗಳಲ್ಲಿ ಇವುಗಳ ಕುರಿತು ಅನೇಕ ಕ್ರಿಯಾತ್ಮಕ ಲೇಖನಗಳು ಆಗಾಗ ಬಂದಿವೆ. ಆದರೆ ಅವು ಹೆಚ್ಚಿನ ವಿವರಣೆಯನ್ನು ನೀಡುವುದಿಲ್ಲ.[೨೨]

ಕಾಲ : ನರಗುಂದ ಅರಮನೆಯಲ್ಲಿನ ಭಿತ್ತಿಚಿತ್ರಗಳು ಬಾಬಾ ಸಾಹೇಬನ ನಂತರದಲ್ಲಿ ಅಂದರೆ ೧೮೫೮ರ ನಂತರದ ಕಾಲದಲ್ಲಿ ರಚನೆಯಾಗಿರಬಹುದು ಎಂದು ಡಾ. ಅ.ಲ.ನರಸಿಂಹನ್ ಅವರು ತಿಳಿಸಿದ್ದಾರೆ. ಇಲ್ಲಿಯ ಕೆಲವು ಚಿತ್ರಗಳ ಬಗ್ಗೆಯೂ ಸಂದೇಹಗಳನ್ನು ಎತ್ತಬಹುದೆಂದಿದ್ದಾರೆ.[೨೩]

ಬಾಬಾಸಾಹೇಬನ ಅರಮನೆಯಲ್ಲಿ ಹಿಂದು-ಮುಸ್ಲಿಂ ಮತ್ತು ಐರೋಪ್ಯ ಜನರು ಯುದ್ಧ ಮಾಡುತ್ತಿರುವ ಚಿತ್ರವಿದ್ದು ಬ್ರಿಟೀಷರೋ, ಪೋರ್ಚುಗೀಸರೋ ಬಂದು ದೇಶೀಯ ಅರಸುಗಳ ಕದನದಲ್ಲಿ ಪಾಲುವಹಿಸತೊಡಗಿದ್ದರಿಂದಲೇ ಈ ಕಾಲದ ಚಿತ್ರದಲ್ಲಿ ಅವರನ್ನು ಕಾಣಿಸಿದ್ದಾರೆ ಎಂದು ಕಾರಂತರು ಅಭಿಪ್ರಾಯಪಡುತ್ತಾರೆ ಎಂದು ಡಾ.ಅ.ಲ.ನರಸಿಂಹನ್ ಉಲ್ಲೇಖಿಸಿದ್ದಾರೆ.[೨೪] ಚಿತ್ರದ ಆಧಾರದ ಮೇಲೆ ಈ ಊಹೆಯನ್ನು ಮಾಡಿದ್ದಾರೆ. ಈ ಕುರಿತು ಅವರು ಹೀಗೆ ಹೇಳುತ್ತಾರೆ. "ಬಾಬಾಸಾಹೇಬ ತನ್ನ ಅಂತಿಮ ಯುದ್ಧದ ದಿನದ ಯಾವುದೇ ಯುದ್ದ ಮಾಡಿದಂತಿಲ್ಲ. ಅಂತಿಮ ಯುದ್ಧ ಅರಂಭವಾದುದು ೧೮೫೮ರ ಮಾರ್ಚನಲ್ಲಿ. ಮೇ ೨೯ರಂದು ನ್ಯಾನ್ಸನ್ ಸಾಹೇಬನನ್ನು ಸೆರೆಹಿಡಿದು ಜೂನ ೧೨ ರಂದು ಬೆಳಗಾವಿಯಲ್ಲಿ ಗಲ್ಲಿಗೇರಿಸಲಾಯಿತು. ನರಗುಂದದ ಭಿತ್ತಿಚಿತ್ರದಲ್ಲಿ ಮಧ್ಯೆ ಪ್ರಧಾನವಾಗಿ ಕಾಣುವಂತೆ ಹನುಮಂತನ ದೇವಾಲಯ ಬಿಡಿಸಿದೆ. ಸುರೇಬಾನದ ಆಂಜನೇಯ ದೇವಾಲಯದಲ್ಲಿಯೇ ನ್ಯಾನ್ಸನ್ನನ ಕೊಲೆಯಾಗಿದ್ದು. ಅದು ನರಗುಂದವರ ಸಾಧನೆಯ ವಿಷಯ. ಅರಮನೆಯ ಯುದ್ಧದ ಚಿತ್ರವು ಇದೆ ಯುದ್ಧ ಹಾಗೂ ಸುರೇಬಾನದ ಅಂಜನೇಯ ದೇವಾಲಯವೇ ಅಗಿದ್ದರೆ ಚಿತ್ರಗಳು ಆತನ ಜೀವಿತ ಕಾಲದಲ್ಲಿ ಬರೆಸಿದ್ದಾಗಿರುವುದಲ್ಲ. ಮ್ಯಾನ್ಸನ್ನನ ಕೊಲೆಯೊಂದಿಗೆ ಆತ ತಲೆತಪ್ಪಿಸಿಕೊಂಡಿದ್ದು, ತೋರಗಲ್ಲ ಅಡವಿಯಲ್ಲಿ, ಆತ ಸೆರೆಸಿಕ್ಕು ಗಲ್ಲಗೇರಿಸಲ್ಪಟ್ಟ ನಂತರದ ಆದರೆ ಕೆಲವೇ ವರ್ಷಗಳಲ್ಲಿ ಬರೆಸಿರಬಹುದು[೨೫] ಎಂದು ಡಾ.ಅ.ಲ.ನರಸಿಂಹನ್ ಹೇಳುತ್ತಾರೆ."

ಮ್ಯಾನ್ಸನ್ನ ಕೊಲೆಯೊಂದಿಗೆ ಕಾಡುಸೇರಿದ ಬಾಬಾ ಸಾಹೇಬರು ಕೊನೆಗೆ ತೋರಗಲ್ಲ ಅಡವಿಯಲ್ಲಿ ಬ್ರಿಟೀಷರಿಗೆ ಸೆರೆಸಿಕ್ಕು ಆತನನ್ನು ಗಲ್ಲಿಗೇರಿಸಲಾಯಿತು. ಇದು ನಡೆದ ಇತಿಹಾಸವು ಹೌದು.

---

೨೧. ಡಾ. ಯಾದಪ್ಪ ಪರದೇಶಿ ಉತ್ತರ ಕರ್ನಾಟಕದ ಭಿತ್ತಿಚಿತ್ರ ಕಲೆ ಪು.ಸಂ.೨೮೦.
೨೨. ಡಾ. ಯಾದಪ್ಪ ಪರದೇಶಿ ಉತ್ತರ ಕರ್ನಾಟಕದ ಭಿತ್ತಿಚಿತ್ರ ಕಲೆ ಪು.ಸಂ.೨೮೦.
೨೩. ಡಾ. ಅ.ಲ. ನರಸಿಂಹನ್ ಕರ್ನಾಟಕ ಭಿತ್ತಿಚಿತ್ರ ಪರಂಪರೆ ಪು.ಸಂ. ೧೮೨.
೨೪. ಡಾ. ಅ.ಲ. ನರಸಿಂಹನ್ ಕರ್ನಾಟಕ ಭಿತ್ತಿಚಿತ್ರ ಪರಂಪರೆ ಪು.ಸಂ. ೧೮೩.
೨೫. ಡಾ. ಅ.ಲ. ನರಸಿಂಹನ್ ಕರ್ನಾಟಕ ಭಿತ್ತಿಚಿತ್ರ ಪರಂಪರೆ ಪು.ಸಂ. ೧೮೩.

ಬಾಬಾಸಾಹೇಬನ ಅಂತ್ಯದೊಂದಿಗೆ ನರಗುಂದ ಸಂಸ್ಥಾನವು ಬ್ರಿಟೀಷರ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟ ಈ ಸಂಸ್ಥಾನದಲ್ಲಿ ಬ್ರಿಟೀಷರ ವಿರೋಧಿ ಘಟನೆಯ ಚಿತ್ರವನ್ನು ಬರೆಸುವ ಅಂದರೆ ಬ್ರಿಟೀಷ ಅಧಿಕಾರಿ ಮ್ಯಾನ್ಸನ್ ಸಾಹೇಬರ ಕೊಲೆಯನ್ನು ಪ್ರತಿನಿಧಿಸುವ ಕ್ರಮವನ್ನು ಬ್ರಿಟೀಷರು ನೋಡಿಕೊಂಡು ಸುಮ್ಮನಿದ್ದರೇ? ಎಂಬುದೂ ವಿಚಾರ ಮಾಡಬೇಕಾಗುತ್ತದೆ. ಹಾಗಾಗಿ ಬಾಬಾಸಾಹೇಬನ ನಂತರದಲ್ಲಿ ಈ ಚಿತ್ರಗಳು ರಚನೆಯಾಗಿವೆ ಎಂಬುದು ಹೆಚ್ಚುಯೋಗ್ಯವಲ್ಲ ಎಂದು ಡಾ. ಯಾದಪ್ಪ ಪರದೇಶಿಯವರ ಅಭಿಪ್ರಾಯ ಸರಿ ಎಂದು ಹೇಳಬಹುದು.[೨೬] ಯಾಕೆಂದರೆ ಬಾಬಾಸಾಹೇಬನ ಅಂತ್ಯದೊಂದಿಗೆ ನರಗುಂದ ಸಂಸ್ಥಾನ ಬ್ರಿಟೀಷರ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿತು. ಆದ್ದರಿಂದ ಈ ಚಿತ್ರಗಳು ಪುನಃ ಬರೆಸಲು ಆಗಿಲ್ಲವೆಂಬುದು ತಿಳಿದು ಬರುತ್ತದೆ.

ನರಗುಂದವನ್ನು ಎರಡು ಬಾರಿ ಸುಲ್ತಾನ ವಶಪಡಿಸಿಕೊಂಡಿದ್ದು ಪೇಶ್ವೆಗಳು, ನಿಜಾಮನು ನರಗುಂದದವರ ಸಹಾಯಕ್ಕೆ ಬಂದದ್ದು ಮುಂತಾದ ಘಟನೆಗಳನ್ನು ಇಲ್ಲಿರುವ ಯುದ್ಧ ಚಿತ್ರ ಪ್ರತಿನಿಧಿಸುತ್ತಿರಬಹುದು. ಈ ಅರಮನೆಯ ಕಟ್ಟಡವು ಸುಮಾರು ಎರಡು ನೂರು ವರ್ಷಗಳ ಹಳೆಯದಾದ ಕಟ್ಟಡವಾಗಿದೆ ಎಂದು ಶಿವರಾಮ ಕಾರಂತ ಅವರು ತಿಳಿಸುತ್ತಾರೆ.[೨೭] ಈ ಸಂಸ್ಥಾನದ ಮೊದಲ ದೊರೆ ರಾಮರಾವ್ ತಮ್ಮನ ಮಗನಾದ ದಾದಾಜಿಯ ಮಗನಾದ ಭಾಸ್ಕರರಾಯನ ಕಾಲದಲ್ಲಿ ನಿರ್ಮಿತವಾಗಿರಬಹುದು. (ಸುಮಾರು ಕ್ರಿ.ಶ. ೧೭೭೦ರಲ್ಲಿ) ಎಂದೆನಿಸುತ್ತದೆ. ಬಲವಂತರಾಯನು ಸಮಯ ಸಾಧಿಸಿ ಕ್ರಿಶ. ೧೭೫೮ರಲ್ಲಿ ಸಿಂಹಾಸನವನ್ನು ವಶಪಡಿಸಿಕೊಂಡಾಗ ಬಾಸ್ಕರರಾಯನು ತಕ್ಷಣವೇ ಪುಣೆಗೆ ಹೋಗಿ ಮಾಧವರಾಯನ ಪ್ರೀತಿ ಸಂಪಾದಿಸಿ ಆತನ ಸಹಾಯದಿಂದ ಬಳವಂತರಾಯನನ್ನು ಪದಚ್ಯುತಗೊಳಿಸಿ ತಾನೇ ಮತ್ತೆ ಸಂಸ್ಥಾನವನ್ನು ಹಿಡಿದುಕೊಂಡನು. ಕಾರಂತ ಅವರು ಅರಮನೆಯ ನಿರ್ಮಾಣದ ಬಗ್ಗೆ ಕೊಡುವ ೨೦೦ ವರ್ಷಗಳ ಕಾಲಮಾನವು ಭಾಸ್ಕರರಾಯನ ಆಡಳಿತಕ್ಕೆ ಸರಿಹೊಂದುವುದರಿಂದ ಬಹುಶ ಈತನ ಕಾಲಕ್ಕೆ ಅರಮನೆಯನ್ನು ನಿರ್ಮಿಸಿರಬೇಕು ಎನಿಸುತ್ತದೆ. ಅಲ್ಲದೆ ತಾನು ನಿರ್ಮಿಸಿದ ಅರಮನೆಯನ್ನು ಅಲಂಕರಿಸಲು ತನ್ನ ಪ್ರೀತಿ ಪಾತ್ರ ದೊರೆಗಳಾಗಿದ್ದ ತನಗೆ ರಾಜ್ಯವನ್ನು ಮರಳಿ ದೊರಕಿಸಿಕೊಟ್ಟ ಪೇಶ್ವೆಗಳ ರಾಜ್ಯದಿಂದಲೇ ಕಲಾವಿದರನ್ನು ಕರೆಯಿಸಿಕೊಂಡು ಈ ಅರಮನೆಯ ಚಿತ್ರಗಳನ್ನು ಬರೆಸಿರಬೇಕು. ಚಿತ್ರಗಳಲ್ಲಿರುವ ಪೇಶ್ವೆಗಳ ರೀತಿಯ ವಸ್ತ್ರವಿನ್ಯಾಸ. ವೇಷಭೂಷಣಗಳು, ಇದನ್ನು ಸಮರ್ಥಿಸುತ್ತವೆ. ಹಾಗಾಗಿ ಪೇಶ್ವೆಗಳ ಜೊತೆಗೆ ಅತ್ಯಂತ ಸಂಪರ್ಕವಿದ್ದ ಭಾಸ್ಕರರಾಯನ ಕಾಲದಲ್ಲಿಯೆ ಈ ಚಿತ್ರಗಳು ರಚನೆಯಾಗಿರಬೇಕು. (೧೭೭೦ರ ಸುಮಾರಿಗೆ) ಎಂದರೆ ಹೆಚ್ಚು ಸಮಂಜಸವೆನಿಸುತ್ತದೆ ಎಂದು ಡಾ. ಯಾದಪ್ಪ ಪರದೇಶಿಯವರ ಅಭಿಪ್ರಾಯವಾಗಿದೆ.[೨೮]

---

೨೬. ಡಾ. ಯಾದಪ್ಪ ಪರದೇಶಿ ಉತ್ತರ ಕರ್ನಾಟಕ ಭಿತಿಚಿತ್ರ ಕಲೆ ಪು.ಸಂ. ೨೮೧.

೨೭. ಡಾ. ಶಿವರಾಮ ಕಾರಂತ ಕರ್ನಾಟಕದಲ್ಲಿ ಚಿತ್ರಕಲೆ ಪು.ಸಂ. ೯೪.

೨೮. ಡಾ. ಯಾದಪ್ಪ ಪರದೇಶಿ ಉತ್ತರ ಕರ್ನಾಟಕದ ಭಿತ್ತಿಚಿತ್ರ ಕಲೆ ಪು.ಸಂ.೨೮೨.

ಗದಗ ಜಿಲ್ಲೆಯ ಬೇರೆ ಬೇರೆ ನೆಲೆಗಳಲ್ಲಿ ರಚನೆಯಾಗಿರುವ ಭಿತ್ತಿ ಚಿತ್ರಕಲೆಗಳನ್ನು ಈ ರೀತಿಯಾಗಿ ವಿಂಗಡಿಸಬಹುದು.

೧) ದೇವಾಲಯಗಳಲ್ಲಿರುವ ಭಿತ್ತಿ ಚಿತ್ರಕಲೆ

೨) ಅರಮನೆಗಳಲ್ಲಿರುವ ಭಿತ್ತಿ ಚಿತ್ರಕಲೆ

೩) ಮನೆಗಳಲ್ಲಿರುವ ಭಿತ್ತಿ ಚಿತ್ರಕಲೆ

೧) **ದೇವಾಲಯಗಳಲ್ಲಿರುವ ಭಿತ್ತಿಚಿತ್ರಕಲೆ** : ಪ್ರಾಚೀನರ ತಾವು ನಂಬಿದ, ಪೂಜಿಸುವ, ಇಲ್ಲವೇ ಆರಾಧಿಸುವ ದೇವರಿಗಾಗಿ ಕಟ್ಟಲ್ಪಟ್ಟ ದೇವಾಲಯಗಳಲ್ಲಿ ಭಿತ್ತಿಚಿತ್ರಗಳನ್ನು ರಚಿಸಿ ಅಲಂಕರಿಸಿದ್ದಾರೆ. ದೇವಾಲಯಗಳ ಈ ಭಿತ್ತಿ ಚಿತ್ರಗಳಿಂದ ಆಯಾ ದೇವಾಲಯಗಳ ಸೌಂದರ್ಯ ವೃದ್ಧಿಸುವುದು ಅಲ್ಲದೇ ಅಲ್ಲಿ ರಚನೆ ಮಾಡಿದ ಧಾರ್ಮಿಕ ಸಂಬಂಧಿ ಚಿತ್ರಗಳಿಂದ ಜನರಲ್ಲಿ ಧರ್ಮ ಪ್ರಜ್ಞೆ ಜಾಗೃತಗೊಳ್ಳುತ್ತಿತ್ತು. ದೇವಾಲಯಗಳಲ್ಲಿ ಮುಖ್ಯವಾಗಿ ಆ ದೇವಾಲಯಕ್ಕೆ ಸಂಬಂಧಿಸಿದ ಚಿತ್ರಗಳು, ರಾಮಾಯಣ ಮಹಾಭಾರತಗಳಿಗೆ ಸಂಬಂಧಿಸಿದ ಚಿತ್ರಗಳಲ್ಲದೇ ದೇವಾಲಯ ನಿರ್ಮಾತೃಗಳ ಚಿತ್ರಗಳು ಪ್ರಾಣಿ, ಪಕ್ಷಿ, ಹೂಬಳ್ಳಿ ಚಿತ್ರಗಳ ರಚನೆಯಾಗಿರುತ್ತದೆ.[೨೯] ಗದಗ ಜಿಲ್ಲೆಯಲ್ಲಿ ಬರುವ ಶ್ರೀ ವೆಂಕಟೇಶ್ವರ ದೇವಾಲಯದಲ್ಲಿ ಭಿತ್ತಿಚಿತ್ರಗಳು ರಚನೆಯಾಗಿದ್ದು ಈ ಕೆಳಗಿನವಂತಿವೆ.

ಶ್ರೀ ವೆಂಕಟೇಶ್ವರ ದೇವಾಲಯ ನರಗುಂದ : ಗದಗ ಜಿಲ್ಲೆಯ ನರಗುಂದ ಕೋಟೆಯ ಒಳ ಆವರಣದಲ್ಲಿ ಇರುವ ಈ ದೇವಾಲಯವನ್ನು ಕ್ರಿ.ಶ. ೧೭೨೦ರಲ್ಲಿ ಈ ಸಂಸ್ಥಾನದ ಮೊದಲ ದೊರೆ ರಾಮರಾಯನ ಕಾಲದಲ್ಲಿ ಕಟ್ಟಿಸಿ ಚಿತ್ರ ಬರೆಸಲಾಗಿದೆ. ಮೊದಲು ದೇವಾಲಯದ ಒಳಭಾಗದ ಗೋಡೆಗಳೆಲ್ಲವೂ ಚಿತ್ರಗಳಿಂದ ತುಂಬಿದ್ದು ಅದೆಲ್ಲ ನಾಶವಾಗಿ, ಈಗ ಗರ್ಭಗುಡಿಯ ಎದುರಿನ ಗೋಡೆ ಮೇಲೆ ದಶಾವತಾರ ಚಿತ್ರಗಳು ಮಾತ್ರ ಉಳಿದುಕೊಂಡಿವೆ. ಇವುಗಳ ಮೇಲೆ ಈ ತಿದ್ದುಪಡಿಮಾಡಲಾಗಿದೆ, ಮತ್ತು ಅನೇಕ ಚಿತ್ರಗಳು ನಶಿಸಿಹೋಗಿವೆ.”[೩೦]

ಮನೆಗಳಲ್ಲಿರುವ ಭಿತ್ತಿ ಚಿತ್ರಕಲೆ : ರಾಜರು, ಸಂಸ್ಥಾನಿಕರು ತಮ್ಮ ಅರಮನೆ, ರಾಜವಾಡೆಗತಳನ್ನು ಭಿತ್ತಿಚಿತ್ರಕಲೆಯಿಂದ ಅಲಂಕರಿಸಿದಂತೆ, ಅವರ ಕೈಕಳಗಿನ ಅಧಿಕಾರಿಗಳು, ಊರಿನ ಪ್ರತಿಷ್ಠಿತ ಜನರು ಸಹಿತ ತಮ್ಮ ಮನೆಗಳನ್ನು ಭಿತ್ತಿ ಚಿತ್ರಗಳಿಂದ ಸುಂದರಗೊಳಿಸಿರುವುದು ಕಂಡುಬರುತ್ತದೆ.[೩೧] ಕರ್ನಾಟಕದಲ್ಲಿ ಪ್ರಾಚೀನ ಭಿತ್ತಿಚಿತ್ರಗಳು ಅನೇಕ ಮನೆಗಳಲ್ಲಿ ಕಂಡು ಬರುತ್ತವೆ” ಗದಗ ಜಿಲ್ಲೆಯಲ್ಲಿ ಪ್ರಾಚೀನ ಭಿತ್ತಿಚಿತ್ತಗಳು ನರಗುಂದದ ಗುಂಡಪ್ಪ ಮನೆಯಲ್ಲಿ ರಚನೆಗೊಂಡಿವೆ.

ಶ್ರೀ ಗುಂಡಪ್ಪ ಹಸಬಿಯವರ ಮನೆ, ನರಗುಂದ : ಗದಗ ಜಿಲ್ಲೆಯ ನರಗುಂದದಲ್ಲಿರುವ ಗುಂಡಪ್ಪ ಹಸಬಿಯವರ ಹಳೆಯ ಮನೆಯು ಕ್ರಿ.ಶ. ೧೮೭೬ರಲ್ಲಿ ಕಟ್ಟಲ್ಪಟ್ಟಿದ್ದು, ಇದರಲ್ಲಿ ಅದೇ ಕಾಲದಲ್ಲಿ

---

೨೯. ಡಾ. ಎಸ್.ಸಿ. ಪಾಟೀಲ ನಿತ್ಯಾನಂದ ಪಾತ್ರೋಟ (ಸಂ) ನಿಜದ ನೆಲೆ ಪು.ಸಂ. ೪೬೯.

೩೦. ಡಾ. ಎಸ್.ಸಿ. ಪಾಟೀಲ ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ಲೇ. ನಿಜದ ನೆಲೆ ಪು.ಸಂ. ೪೭೦.

೩೧. ಡಾ. ಎಸ್.ಸಿ. ಪಾಟೀಲ ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ಲೇ. ನಿಜದ ನೆಲೆ ಪು.ಸಂ. ೪೭೪.

ಭಿತ್ತಿಚಿತ್ರಗಳನ್ನು ರಚಿಸಲಾಗಿದೆ. ಮೇಲಂತಸ್ತಿನಲ್ಲಿರುವ ಭಾವಣಿಯ ಮರದ ಹಲಗೆಗಳ ಮೇಲೆ ವರ್ಣಚಿತ್ರಗಳು ಇಲ್ಲಿ ರಚನೆಯಾಗಿದೆ. ಮನೆಯ ವಂಶಸ್ಥರು ಕುದುರೆಯ ಮೇಲೆ ಹೊರಟಿರುವುದು. ಕೃಷ್ಣ ಮತ್ತು ಆತನ ಮಡದಿಯರು, ರಾಮರಾವಣ ವರ್ಣಚಿತ್ರಗಳು ಇಲ್ಲಿವೆ ಈ ಚಿತ್ರಗಳು ಸಹಿತ ಮಸುಕಾಗಿ ಗೋಚರಿಸುತ್ತಿದ್ದು ಇನ್ನುಳಿದ ಹೆಚ್ಚಿನ ಚಿತ್ರಗಳು ನಾಶವಾಗಿವೆ."[೩೨]

ರಾಮ ಬಾಣ ಬಿಡಲು ಸಿದ್ಧನಾಗಿದ್ದು ಲಕ್ಷಣ ತನ್ನ ಅಣ್ಣನ ಬೆನ್ನು ಹಿಂದೆ ಕಾವಲಿರುವಂತೆ ಚಿತ್ರಿಸಲಾಗಿದೆ. ಹಾಗೆಯೇ ಆಕಾಶದಲ್ಲಿರುವ ಹನುಮಂತನ ಚಿತ್ರವು ಬಹುಸೊಗಸಾಗಿದೆ. ಕೃಷ್ಣನ ಮಡದಿಯರ ಜೊತೆ ಸರಸ ಸಲ್ಲಾಪದಲ್ಲಿರುವ ಚಿತ್ರದಲ್ಲಿ ಬಳಸಿದ ಬಣ್ಣಗಳು ಕಡು ನೀಲಿ ಕಿತ್ತಳೆ, ಬಿಳಿಯ ಬಣ್ಣದ ಚಿಕ್ಕೆಗಳು ಅಲಂಕಾರದಿಂದ ವೇಷಭೂಷಣಗಳನ್ನು ಚಿತ್ರಿಸಲಾಗಿದೆ. ಒಬ್ಬರ ಹಿಂದೊಬ್ಬರಂತೆ ಕುದುರೆ ಓಡಿಸಿಕೊಂಡು ಹೊರಟಿರುವ ಇಬ್ಬರು ಕುದುರೆ ಸವಾರರ ಚಿತ್ರದಲ್ಲಿ ಸವಾರರು ಲಗಾಮ ಜಗ್ಗಿದ್ದಾರೆ. ಕುದುರೆಗಳು ಎರಡು ಕಾಲನ್ನೆತ್ತಿ ನೆಗೆಯುವಂತಿವೆ. ಸವಾರರ ಪೇಶ್ವೆ ಶೈಲಿಯ ವೇಷಭೂಷಣಗಳಿವೆ. ಕಡು ನೀಲಿ ಬಣ್ಣದ ಹಿನ್ನೆಯಲ್ಲಿ ತಿಳಿ ನೀಲಿ ಮತ್ತು ಕಂದುಬಣ್ಣದ ವೇಷಭೂಷಣಗಳು ಚಿತ್ರಿತಗೊಂಡಿವೆ. ಲಗಾಮಿನೊಂದಿಗೆ ಅಲಂಕಾರಿಕ ಸಾಮಗ್ರಿಯು ಸಾಕಷ್ಟು ಚಿತ್ರಣಗೊಂಡಿವೆ.

ವ್ಯಾಪ್ತಿ ಶರೀರ ಹಕ್ಕಿಯ ಮುಖ, ರೆಕ್ಕೆ ಎಂಟು ಕೈಗಳಿರುವ ಹಾರುವ ಭಂಗಿಯ ಚಿತ್ರಗಂಡಭೇರುಂಡ ಪಕ್ಷಿಯದು, ಗರುಡನ ಮುಖ ಹೋಲುವ ಈ ಪಕ್ಷಿಯ ಸುತ್ತಮುತ್ತ ವಿಚಿತ್ರ ರೀತಿಯ ಪ್ರಾಣಿಗಳ ಕಾಲ್ಪನಿಕ ಚಿತ್ರಗಳು ಇವೆ. ಹೀಗೆ ಇಲ್ಲಿಂದ ಇನ್ನು ಹಲವಾರು ಚಿತ್ರಗಳು ನೋಡಲು ಸಿಗುತ್ತವೆ[೩೩] ಆದರೆ ಅನೇಕ ಭಿತ್ತಿಚಿತ್ರಗಳು ನಾಶವಾಗಿದ್ದು ಅವುಗಳ ರಕ್ಷಣೆಯನ್ನು ಮಾಡಲು ಆಗಿರುವುದಿಲ್ಲ.

ಅರಮನೆಗಳಲ್ಲಿರುವ ಭಿತ್ತಿಚಿತ್ರಕಲೆ : "ದೇವಾಲಯಗಳ ಮಠಮಾನ್ಯಗಳ ಭಿತ್ತಿಚಿತ್ರಗಳಿಂದ ಅಲಂಕರಿಸಿದಂತೆ ರಾಜ ಮಹಾರಾಜರು, ಸಂಸ್ಥಾನಿಕರು ತಮ್ಮ ಅರಮನೆಗಳನ್ನು ಸಹಿತ ಭಿತ್ತಿ ಚಿತ್ರಗಳಿಂದ ಅಲಂಕರಿಸುತ್ತ ಬಂದಿದ್ದಾರೆ. ಅರಮನೆಗಳ ಹಲವು ಭಾಗಗಳಲ್ಲಿ ಭಿತ್ತಿ ಚಿತ್ರಗಳ ರಚನೆಯ ಕಂಡು ಬರುತ್ತದೆ. ರಾಜ-ರಾಣಿಯರ ಜನಾಂಗ, ಅತಿಥಿ ಅಭ್ಯಗತರು ಕುಳಿತುಕೊಳ್ಳುವ ಕೋಣೆಗಳಲ್ಲದೇ ಅರಮನೆಗಳಲ್ಲಿರುವ ಪ್ರತ್ಯೇಕ ಚಿತ್ರಶಾಲೆಗಳಲ್ಲಿ ಚಿತ್ರಗಳನ್ನು ರಚನೆ ಮಾಡಿರುವುದು ಕಂಡು ಬರುತ್ತದೆ. ಕರ್ನಾಟಕದಲ್ಲಿ ಹೆಚ್ಚಾಗಿ ಹಿಂದೂ ಮತ್ತು ಮುಸ್ಲಿಂ ಅರಸರು ಕಟ್ಟಿಸಿದ ಅರಮನೆಗಳಲ್ಲಿ ಭಿತ್ತಿಚಿತ್ರಗಳು ಕಂಡುಬರುತ್ತವೆ."[೩೪] ಅವುಗಳಲ್ಲಿ ಗದಗ ಜಿಲ್ಲೆಯಲ್ಲಿ ಬರುವ ಭಿತ್ತಿಚಿತ್ರಗಳನ್ನು ಗಮನಿಸಿದಾಗ ನರಗುಂದದ ಅರಮನೆಯಲ್ಲಿರುವ ಭಿತ್ತಿ ಚಿತ್ರಗಳು ನೋಡಲು ಸಿಗುತ್ತವೆ.

ಬಾಬಾಸಾಹೇಬ ಅರಮನೆ, ನರಗುಂದ : ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ತರ ಪಾತ್ರವಹಿಸಿದ ನರಗುಂದ ಸಂಸ್ಥಾನದ ದೊರೆ ಬಾಬಾಸಾಹೇಬನ ಅರಮನೆಯು ಇಂದು ಸ್ಥಳೀಯ

---

೩೨. ಡಾ. ಎಸ್.ಸಿ. ಪಾಟೀಲ ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ಲೇ. ನಿಜದ ನೆಲೆ ಪು.ಸಂ.೪೭೫.

೩೩. ಡಾ. ಎಸ್.ಸಿ. ಪಾಟೀಲ ಕರ್ನಾಟಕ ಜನಪದ ಚಿತ್ರಕಲೆ ಪು.ಸಂ.೫೧.

೩೪. ಡಾ. ಎಸ್.ಸಿ. ಪಾಟೀಲ ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೭೬.

ಮರಸಭೆಯಾಗಿದೆ. ಈ ಅರಮನೆಯ ಎಡಗಡೆಯ ಕೋಣೆಯಲ್ಲಿ (ಮೂಲಕೋಣೆ) ವರ್ಣಮಯ ಚಿತ್ರಗಳು ಕಂಡುಬರುತ್ತದೆ. ಕ್ರಿ.ಶ. ೧೮ನೇ ಶತಮಾನದಲ್ಲಿ ಈ ಚಿತ್ರಗಳು ರಚನೆಯಾಗಿವೆ. ರಾಜನ ಸಂವಹನಗೃಹವಾಗಿರುವ ಈ ಕೋಣೆಯ ನಾಲ್ಕು ಬದಿಯ ಗೋಡೆಗಳು ಸಂಪೂರ್ಣ ಚಿತ್ರಗಳಿಂದ ತುಂಬಿ ಹೋಗಿವೆ.[೩೫] ಕೋಣೆಯನ್ನು ಪ್ರವೇಶಿಸಿದಾಗ ಸಿಗುವ ಆನಂದವೆ ಬೇರೆ ಕೆಂಪು ವರ್ಣದಿಂದ ಚಿತ್ರದ ಹಿನ್ನಲೆಯಾಗಿ ಕಲಾವಿದ ಬಳಸಲಾಗಿದೆ. ನೋಡುಗರಿಗೆ ಬಹಳಷ್ಟು ಆನಂದವನ್ನು ನೀಡುತ್ತದೆ. ರಾಜ-ರಾಣಿಯರು, ಅವರ ಅಂತಃಪುರದ ಸನ್ನಿವೇಶಗಳು, ಶಿವ, ವಿಷ್ಣು, ಪಾರ್ವತಿ, ಸರಸ್ವತಿ, ಗಣಪತಿ, ಲಕ್ಷ್ಮೀ, ಬ್ರಹ್ಮ, ಇಂದ್ರ ಮುಂತಾದ ದೇವತೆಗಳಲ್ಲದೇ ರಾಮಾಯಣಕ್ಕೆ ಸಂಬಧಿಸಿದ ಚಿತ್ರಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಅಷ್ಟದಿಕ್ಪಾಲಕರು ದ್ವಾದಶ ರಾಶಿಗಳಿಗೆ ಸಂಬಧಿಸಿದ ಚಿತ್ರಗಳು ಸುಂದರವಾಗಿವೆ. ವಿಷ್ಣುವಿನ ಹಲವಾರು ರೂಪಗಳು ಇಲ್ಲಿದ್ದು ಪಾಂಡುರಂಗನ ಚಿತ್ರಣವು ಬೇರೆ ಬೇರೆ ವಿನ್ಯಾಸದಲ್ಲಿದ್ದು ಹಲವು ಕಡೆಗೆ ಚಿತ್ರಿತವಾಗಿದೆ. ಸ್ತ್ರೀಯೊಬ್ಬಳು ಆನೆಯ ತಲೆಯ ಮೇಲೆ ನಿಂತು ಬಾಣ ಬಿಡುತಿರುವುದು. ಹಲವು ಸ್ತ್ರೀಯರು ಸ್ನಾನ ಮಾಡುತ್ತಿರುವುದು, ಆನೆ ನದಿಯ ಸಂಯುಕ್ತ ವಿನ್ಯಾಸದ ಚಮತ್ಕಾರಿ ಚಿತ್ರಗಳು ಇಲ್ಲಿವೆ. ಹೆಚ್ಚಿನ ಚಿತ್ರಗಳ ಮೇಲೆ ಮಸುಕಾದ ಧೂಳಿನ ಕಪ್ಪು ಪದರು ಲೇಪನವಾಗಿದ್ದು ಚಿತ್ರಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಕೆಂಪು ಪದರು ಲೇಪನವಾಗಿದ್ದು ಚಿತ್ರಗಳು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಕೆಂಪು ಹಿನ್ನಲೆಯ ಮೇಲೆ ಚಿತ್ರಗಳು ರಚನೆಯಾಗಿದ್ದು ಹಸಿರು, ಹಳದಿ, ಬಿಳಿ, ನೇಸರಕೆಂಪು, ಕಪ್ಪು ವರ್ಣಗಳು ಬಳಕೆಗೊಂಡಿದೆ. ಇಲ್ಲಿನ ದೃಶ್ಯಗಳು ವಿಶಾಲವಾದ ಅಂಕಣದಲ್ಲಿ ಚಿತ್ರಿತಗೊಂಡಿದೆ. ಅವುಗಳಲ್ಲಿ ಕೆಲವು ಕಲಾಕೃತಿಗಳು ಚರ್ಚಿಸಲಾಗಿದೆ.

ನರಗುಂದ ವೆಂಕಟೇಶ್ವರ ದೇವಾಲಯ, ಗುಂಡಪ್ಪ ಹಸಬಿಯವರ ಮನೆ ಬಾಬಾಸಾಹೇಬರ ಅರಮನೆಯ ಭಿತ್ತಿಚಿತ್ರಗಳನ್ನು ಹೀಗೆ ವಿಂಗಡಿಸಬಹುದು.

೧) ಧಾರ್ಮಿಕ ಭಿತ್ತಿಚಿತ್ರಗಳು

೨) ಪೌರಾಣಿಕ ಭಿತ್ತಿಚಿತ್ರಗಳು

೩) ರಾಜಕೀಯ ಭಿತ್ತಿಚಿತ್ರಗಳು

೪) ಅಲಂಕಾರಿಕ ಭಿತ್ತಿಚಿತ್ರಗಳು

ಧಾರ್ಮಿಕ ಭಿತ್ತಿಚಿತ್ರಗಳು :

ಚಿತ್ರ : ೧)ಗಣಪತಿ : ಗಣಪತಿಯ ಚಿತ್ರವು ವೃತ್ತಾಕಾರದ ಒಳಗೊಡೆಗೆ ರಚಿಸಿದ್ದಾರೆ. ವೃತ್ತದ ಒಳಗಡೆಗೆ ಹಸಿರು ವರ್ಣದಿಂದ ಹಿನ್ನೆಲೆಯಾಗಿ ರಚಿಸಿದ್ದಾರೆ. ವೃತ್ತದ ಹೊರಗಡೆಯ ಚೌರಸದಲ್ಲಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಗಣಪತಿಯ ಭಿತ್ತಿಚಿತ್ರವು ಕುಳಿತಭಂಗಿಯಲ್ಲಿದೆ. ಆನೆಯ ದೊಡ್ಡದಾದ ಮುಖ, ದಂತ, ಸುಂದರವಾದ ಕೀರಿಟವನ್ನು ಧರಿಸಿದ್ಧಾನೆ. ಕಿರೀಟದಲ್ಲಿ ಸುಂದರವಾದ ನಕ್ಷೆಗಳು ರಚಿತವಾಗಿವೆ. ನಾಲ್ಕು ಕೈಗಳನ್ನು ಹೊಂದಿದ್ದು ಎರಡು ಕೈಗಳಲ್ಲಿ ಆಯುಧಗಳಿವೆ ಒಂದು ಕೈಯನ್ನು ಮೊಣಕಾಲ ಮೇಲೆ ಇಟ್ಟುಕೊಂಡಿದ್ದರೆ, ಇನ್ನೊಂದು ಕೈ ಯೋಗಮುದ್ರೆ ಭಂಗಿಯನ್ನು ತೋರುತ್ತದೆ.

---

೩೫. ಡಾ. ಎಸ್.ಸಿ. ಪಾಟೀಲ ನಿತ್ಯಾನಂದ ಪಾತ್ರೋಟ (ಸಂ) ಡಾ. ಯಾದಪ್ಪ ಪರದೇಶಿ ನಿಜದನಲೆ ಪು.ಸಂ.೪೭೭.

ಗಣಪತಿಯು ರಾಜಪುರುಷನಂತೆ ತೋರುವ ಉದ್ದ ತೋಳಿನ ಅಂಗಿಯನ್ನು ಧರಿಸಿದ್ದು ಗಮನಾರ್ಹ ಆಂಶವಾಗಿದೆ. ಸುಂದರವಾದ ಹಳದಿ ಶಾಲು ಹೊದ್ದುಕೊಂಡಿರುವ ಗಣಪತಿಯು ರಾಜಠೀವಿಯಿಂದ ಕುಳಿತಿದ್ದಾನೆ. ಈ ಭಿತ್ತಿ ಚಿತ್ರದಲ್ಲಿ ಹೆಚ್ಚಾಗಿ ಕೆಂಪು, ಹಸಿರು, ಹಳದಿ, ಬಣ್ಣಗಳ ಬಳಕೆಯು ಕಂಡುಬರುತ್ತದೆ.

ಚಿತ್ರ : ೨)ಪಶುಪತ್ರಿ : ಈ ಚಿತ್ರವು ಆಕರ್ಷಕವಾದ ಮತ್ತು ವಿಚಿತ್ರವಾದ ಚಿತ್ರವಾಗಿದೆ. ಪಡುವಿನ ಮೇಲೆ ಕುಳಿತು ಬರುತ್ತಿರುವ ಪಶುಕಲೆಯ ಎದುರಿಗೆ ಸ್ತ್ರೀಯಾವಳವರು ಆನೆಯ ಮೇಲೆ ಆನೆಯ ಮೇಲೆ ಕುಳಿತು ಬರುತ್ತಿದ್ದಾಳೆ ಆ ಚಿತ್ರವನ್ನು ನೋಡಿದಾಗ ವರಾಹವಾಗಿ ಅಥವಾ ದೇವತೆಯಂತೆಕಾಣುತ್ತಾಳೆ. ಒಬ್ಬ ಸೇವಕನು ಆನೆಗೆ ಅಂಕುಶ ಹಿಡಿದುಕೊಂಡು ಸವಾರಿಮಾಡುತ್ತಿರುವ ದೃಶ್ಯವಾಗಿದೆ. ಸ್ತ್ರೀ ಕುಳಿತ ಆನೆ ಮತ್ತು ಪಶುಪತಿ ಕುಳಿತ ಪಶುವಿನ ಮುಖಗಳು ಒಂದೆಡೆಗೇ ಸೇರಿಕೊಂಡಿವೆ. ಈ ಚಿತ್ರವನ್ನು ನೋಡಿದಾಗ ಪಶುವಿಗಾಗಿ ಒಂದೇ ಮುಖವನ್ನು ರಚಿಸಲಾಗಿದೆ. ಎದುರು ಬದರಾಗಿರುವ ಎರಡು ಬೇರೆ ಬೇರೆ ಪ್ರಾಣಿಗಳ ಮುಖವು ಒಂದಾಗಿ ರಚಿಸಿದ್ದು ಕಲಾವಿದನ ಜಾಣ್ಮೆಯನ್ನು ತೋರಿಸುತ್ತದೆ. ಎರಡಕ್ಕೂ ಸೇರಿ ಒಂದೇ ಮುಖವಿದ್ದರೂ ಸೂಕ್ಷ್ಮವಾಗಿ ಗಮನಿಸಿದಾಗ ಒಂದು ಕಡೆ ಆನೆಯ ಮುಖಸ್ಪಷ್ಟವಾಗಿ ಕಂಡರೆ, ಇನ್ನೊಂದು ಕಡೆಯಿಂದ ಸೂಕ್ಷ್ಮವಾಗಿ ಗಮನಿಸಿದಾಗ ಪಡು(ಆರಳು)ವಿನ ಮುಖವು ಸ್ಪಷ್ಟವಾಗಿಯೇ ಗೋಚರಿಸುತ್ತದೆ. ಆನೆಯ ಸೊಂಡಿಲ ಎದುರಿಗಿರುವ ಪಶುವಿನ ಕೋಡಾಗಿ ಕಂಡರೆ ಆನೆಯ ಕೋರೆಗಳು ಕಿವಿಯ ಹಾಗೆ ರೂಪಾಂತರ ಹೊಂದಿವೆ. ಒಂದೇ ಕಣ್ಣು ಎರಡು ಪ್ರಾಣಿಗಳಿಗೆ ದೃಷ್ಟಿಯನ್ನು ಒದಗಿಸಿದ್ದು. ಆನೆಯ ತಲೆಯ ಮೇಲಿನ ಭಾಗ ಆಕಳಿನ ಬಾಯಿಯಂತೆ ಕಾಖವು ಪಶುವಿನ ಮೇಲೆ ಕುಳಿತ ಪಶುಪತಿಇರುವ ಕಿರೀಟಧರಿಸಿದ್ದು ನಾಲ್ಕು ಕೈಗಳನ್ನು ಹೊಂದಿದವನಾಗಿದ್ದಾನೆ. ಹಿಂದಿನ ಎರಡು ಕೈಗಳಲ್ಲಿ ಒಂದಲ್ಲಿ ತ್ರಿಪಾಲ, ಇನ್ನೊಂದರಲ್ಲಿ ಢಮರುಗ ಹಿಡಿದುಕೊಂಡಿದ್ದಾನೆ. ಪಶುಪತಿ ಕುಳಿತುಕೊಂಡಿರುವ ಪಶುವೂ ಅತ್ಯಂತ ಶೃಂಗಾರಗೊಂಡಿದೆ. ಹಸಿರು ಅಂಚಿನ ಕೆಂಪು ವಸ್ತ್ರವನ್ನು ಮೇಲೆ ಹಾಕಿದ ಕೊರಳಲ್ಲಿ ಆಭರಣಗಳೂ ಇದಕ್ಕೆ ಇವೆ. ಎದುರಿಗೆ ಆನೆಯಮೇಲೆ ಕುಳಿತ ದಾಕ್ಷಾಯಣಿ ಬರುತ್ತಿದ್ದು ರಾಜ ಪೋಷಾಕಿನಲ್ಲಿದ್ದಾಳೆ. ಅಲಂಕೃತ ಆನೆಯ ಮೇಲೆ ಚಾಮರದ ನೆರಳಲ್ಲಿ ರಾಣಿಯು ವಿರಾಜಮಾನಳಾಗಿಕುಳಿತ್ತಿದ್ದಾಳೆ. ಮಾವುತನು ಅಂಕುಶ ಹಿಡಿದು ಆನೆಯನ್ನು ನಡೆಸುತ್ತಿದ್ದಾನೆ. ಟೀಪುಸುಲ್ತಾನ ಶೈಲಿಯ ಟೊಪ್ಪಿಯನ್ನು ಮಾವುತ ಧರಿಸಿದ್ದಾನೆ. ಪಶುಪತಿ ಮತ್ತು ದಾಕ್ಷಾಯಿಣಿಯ ಚಿತ್ರವು ಬೆತ್ತವ ರೀತಿಯಲ್ಲಿ ಕೂಡಿದ ಔಚಿತ್ತಪೂರ್ಣವಾದ ರೇಖೆ ವರ್ಣಗಳು ಯೋಜನಾಬದ್ಧವಾದ ಸಂಯೋಜನೆಯಿಂದ ರಚಿಸಿದ್ದಾನೆ. ಈ ಪಶುಪತಿ ಭಿತ್ತಿಚಿತ್ರದ ಹಿನ್ನೆಲೆಗೆ ಕೆಂಪುವರ್ಣ ಬಳಸಿದ್ದಾರೆ. ಕಲಾಕೃತಿಯಲ್ಲಿ ಹೆಚ್ಚಾಗಿ ಹಳದಿ ವರ್ಣವನ್ನು ಬಳಸಿ ಕಲಾಕೃತಿಯನ್ನು ತೋರಣದಿಂದ ಸುಂದರವಾಗಿ ಪೂರ್ಣಗೊಳಿಸಿದ್ದಾರೆ.

ಚಿತ್ರ : ೩. ವಿಠ್ಠಲ : ಈ ಚಿತ್ರವು ಆಕರ್ಷಕವಾದ ಸುಂದರ ಚಿತ್ರವಾಗಿದೆ. ವಿಠ್ಠಲನು ಎರಡು ಕೈಗಳನ್ನು ಸೊಂಟದ ಮೇಲೆ ಇಟ್ಟು ಕಪ್ಪಲದ ಪ್ರಸ್ತದ ಮೇಲೆ ನಿಂತಿದ್ದಾನೆ. ಮುಖದಲ್ಲಿ ಮಂದಹಾಸ ಮಿನುಗುತ್ತಲಿದೆ. ತೆಳುಹಳದಿಯ ಪಂಜೆಯನ್ನು ಉಟ್ಟುಕೊಂಡಿದ್ದು. ಅದೇವರ್ಣದಶಾಲವನ್ನು ಇಳಿಬಿಟ್ಟಿದ್ದಾನೆ. ಕೊರಳಲ್ಲಿರುವ ರುದ್ರಾಕ್ಷಿ ಸರವು ಮೊಣಕಾಲಿನವರೆಗೆ ಇಳಿಬಿಟ್ಟಿದೆ. ವಿಠ್ಠಲನ ಆಕ್ಕಪಕ್ಕದಲ್ಲಿ ಇಬ್ಬರು ಸ್ತ್ರೀಯರು ಹೂಮಾಲೆಯನ್ನು ಹಿಡಿದು ಸ್ವಾಗತಿಸುತ್ತಿರುವ ದೃಶ್ಯ ಸುಂದರವಾಗಿ ಕಲಾವಿದ ರಚಿಸಿದ್ದಾನೆ. ವಿಠ್ಠಲನ ಹಿಂದಿನ ಖಾಲಿ ಸ್ಥಳವನ್ನು ಗಿಡಗಳನ್ನೇ ಮರದ ಪದರ ಹಾಗೆ ಬಗ್ಗಿಸಿ

ರಚನೆಮಾಡಿದ್ದು ಕಲಾವಿದನ ಸಂಯೋಜನಾ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ. ಒಳಬಾಗಿದಂತಿರುವಗಿಡಗಳಲ್ಲಿರುವ ಟೊಂಗೆ, ಎಲೆಗಳೇ ತೋರಣದಂತೆ ಕಂಗೊಳಿಸುತ್ತಿವೆ. ವಿಠ್ಠಲನ ಬಲಗಡೆ, ಗರುಡ, ಎಡೆಗಡೆ ಹನುಮಂತ ಇಬ್ಬರೂ ಹೂಮಾಲೆಯನ್ನು ವಿಠೋಬನಿಗೆ ಹಾಕಲು ಹಾರಿ ಬರುತ್ತಿದ್ದಾರೆ. ಇಬ್ಬರಿಗೂ ರೆಕ್ಕೆಗಳನ್ನು ರಚಿಸಿ ಪಕ್ಷಿಸೂಚಿಯಾಗಿ ಅವಸರನ್ನು ಸುಂದರವಾಗಿ ತೋರಿಸಿದ್ದಾರೆ. ಚಿತ್ರದ ಹಿನ್ನೆಲೆಯಾಗಿ ಕೆಂಪುವರ್ಣ ಲೇಪನನಾಗಿದ್ದು ಹಸಿರು, ಕೆಂಪು, ತೆಳು ಹಳದಿ ವರ್ಣಗಳು ಇಲ್ಲಿ ಮುಖ್ಯವಾಗಿ ಬಳಕೆಯಾಗಿವೆ.

ಪೌರಾಣಿಕ

ಚಿತ್ರ : ೧)ಗೀರಿಜಾಕಲ್ಯಾಣ : ಈ ಚಿತ್ರದಲ್ಲಿ ವಿಷ್ಣುವು ಕೈಯಲ್ಲಿ ಪುಷ್ಪಹಿಡಿದು ವಿಶ್ರಾಂತಿ ಪಡೆಯುತ್ತಿದ್ದು, ಸೇವಕಿಯರು ವಿಷ್ಣುವಿಗೆ ಸೇವೆ ಮಾಡುತ್ತಿರುವ ದೃಶ್ಯ ಸುಂದರವಾಗಿ ರಚನೆಗೊಂಡಿದೆ ಒಬ್ಬಸೇವಕಿ ವಿಷ್ಣುವಿನ ಪಾದಸೇವೆ ಮಾಡುತ್ತಿದ್ದರೆ ಇನ್ನೊಬ್ಬ ಸೇವಕಿಯು ಚಾಮರಹಿಡಿದು ಬರುತ್ತಿದ್ದಾಳೆ. ವಿಷ್ಣುವಿನ ಪಕ್ಕದಲ್ಲಿ ಲಕ್ಷ್ಮೀಯು ಕುಳಿತಿದ್ದು ಯಾವುದೋ ಒಂದು ವಿಷಯದಲ್ಲಿ ಮಗ್ನನಾಗಿರುವಂತಿದೆ. ವಿಷ್ಣುವಿನ ಕೀರಿಟ, ಹಳದಿ ವಸ್ತ್ರ, ನೀಲಿ ವರ್ಣದ ಶಾಲಹಾಕಿಕೊಂಡು ಬಿಳಿದೋತರವನ್ನು ತೊಟ್ಟಿಕೊಂಡು ವಿಶ್ರಾಂತಿ ಪಡೆಯುತ್ತಿರುವ ಸುಂದರವಾದ ಚಿತ್ರ ಇದಾಗಿದೆ. ವಿಶ್ರಾಂತಿ ಪಡೆಯುತ್ತಿರುವ ವಿಷ್ಣುವಿನ ಆಸರಕ್ಕೆ ಬೆನ್ನಹಿಂದೆ ದೊಡ್ಡಾದಾದ ತಲೆದಿಂಬು ಕೆಂಪುವರ್ಣದಿಂದ ರಚಿತವಾಗಿದೆ. ಪಂಚಮುಖವಿಷ್ಣುವನ್ನು ಹಳದಿವರ್ಣದಿಂದ ಸುಂದರವಾದ ವಿನ್ಯಾಸಗಳಿಂದ ರಚೆನೆಗೊಂಡಿದೆ. ನಾಲ್ಕುಕಡೆ ಕಂಬವನ್ನು ರಚನೆಮಾಡಿದ್ದಾರೆ. ಇದರಲ್ಲಿ ಹೂ ಬಳ್ಳಿ ಪಕ್ಷಿಯ ವಿನ್ಯಾಸವನ್ನು ರಚನೆಗೊಂಡಿದೆ ಮಂಟಪಕ್ಕೆ ಎಲೆ ಹೂಗಳ ತೋರಣವನ್ನು ರಚನೆಯಾಗಿದೆ. ಮಂಟಪದ ಹೊರಗಡೆ ಪಕ್ಷಿ ಹಾರಾಡುತ್ತಿರುವ ಮಂಟಪದ ಎರಡು ಕಡೆಗೆ ಸುಂದರವಾದ ಗಿಡಗಳನ್ನು ಕಲಾವಿದ ಸಂಯೋಜನೆಗಾಗಿ ಬಳಸಿದ್ದು ಕಂಡು ಬರುತ್ತದೆ. ವಿಷ್ಣುವಿನ ಹಿನ್ನೆಲೆಯಾಗಿ ನೀಲಿ, ಶಾಮವರ್ಣದಿಂದ ಕೂಡಿದೆ. ಈ ಚಿತ್ರವನ್ನು ನೋಡಿದಾಗ ಎಲ್ಲ ಚಿತ್ರಕ್ಕಿಂತಲೂ ವಿಶಿಷ್ಠ ರೀತಿಯಲ್ಲಿ ಸೌಂದರ್ಯತೆಯನ್ನು ಇದರಲ್ಲಿ ಹೆಚ್ಚಿಸಿದ್ದಾನೆ ಮತ್ತು ಹೆಚ್ಚಿನ ರೀತಿಯಲ್ಲಿ ಮಂಟಪದಲ್ಲಿ ವಿನ್ಯಾಸವನ್ನು ಕಲಾವಿದನು ಬಳಸಿಕೊಂಡಿದ್ದು ಕಂಡು ಬರುತ್ತದೆ.

ಒಟ್ಟಾರೆ ಈ ಕಲಾಕೃತಿಯು ಸುಂದರವಾಗಿದ್ದು ಕೆಂಪು, ಹಳದಿ, ನೀಲಿ, ಬಿಳಿ, ಹಸಿರು, ಬಣ್ಣಗಳ ಬಳಕೆ ಮಾಡಿ ಸುಂದರ, ಕಲಾತ್ಮಕವಾಗಿ ಕಲಾವಿದನು ರಚನೆ ಮಾಡಿದ್ದಾನೆ.

ಚಿತ್ರ : ೨. ಸಮುದ್ರ ಮಂಥನ : ಸಮುದ್ರ ಮಂಥನ ದೃಶ್ಯವು ಸುಂದರವಾಗಿದ್ದು ದೇವತೆಗಳ ಮತ್ತು ರಾಕ್ಷಸರು ಆದಿಶೇಷನನ್ನು ಹಗ್ಗ ಮಾಡಿ ಮಂದೂರ ಪರ್ವತವನ್ನು ಕಡಗೋಲುಮಾಡಿ ಸಾಗರವನ್ನೇ ಕಡೆಯುತ್ತಿದ್ದಾರೆ. ಸಾಗರವನ್ನು ಕಡೆಯುತ್ತಿರುವಾಗ ಮಂದಾರರ್ಪತವು ಸಾಗರದಲ್ಲಿ ಕೆಳಕ್ಕಿಡು ಹೋಗುತ್ತಿರುವ ಸಂದರ್ಭದಲ್ಲಿ ಶ್ರೀ ಹರಿಯು ಮಂದಾರ ಪರ್ವತವು ಸಾಗರದಲ್ಲಿ ಮುಳಗಬಾರದು ಎಂದು ಕೂರ್ಮಾವತಾರ ತಾಳಿ ಎತ್ತಿಹಿಡಿದಿದ್ದಾನೆ. ಈ ಚಿತ್ರದಲ್ಲಿ ಕಲಾವಿದನು ರಾಕ್ಷಸರು ಮತ್ತು ದೇವತೆಗಳ ಬೇರೆಬೇರೆ ಎಂಬ ಕಲ್ಪನೆಯನ್ನು ಅವುಗಳ ವೇಷ ಭೂಷಣಗಳಿಂದ ತಿಳಿಯುವಂತೆ ರಾಕ್ಷಸರು ಕಪ್ಪುವರ್ಣದವರಾಗಿದ್ದು ದಪ್ಪವಾದ ಮೀಸೆ, ಕೆಂಪಾದ ಕಣ್ಣುಗಳು ಇವೆ.

ದೇವತೆಗಳೆಲ್ಲರೂ ಗೌರವವರ್ಣದಿಂದ ಇದ್ದು ಪ್ರತಿಯೊಬ್ಬರ ಬೇರೆಬೇರೆ ವರ್ಣದ ಅಂಗಿಯನ್ನು ತೊಟ್ಟಿದ್ದಾರೆ ಹಾಗೂ ವಿವಿಧ ವರ್ಣಗಳ ಧೋತರಗಳನ್ನು ಉಟ್ಟುಕೊಂಡಿದ್ದಾರೆ. ದೇವತೆಗಳ ಉದ್ದ ತೋಳಿನ ಅಂಗಿಯನ್ನು ತೊಟ್ಟುಕೊಂಡಿದ್ದು ನಡಕ್ಕೆ ನಡುಪಟ್ಟಿಯನ್ನು ಬಿಗಿದುಕೊಂಡಿದ್ದಾರೆ. ಇದನ್ನು ನೋಡಿದರೆ ಮರಾಠಾ ಶೈಲಿಯನ್ನು ನೆನಪಿಗೆ ತರುತ್ತದೆ. ಈ ಚಿತ್ರದಲ್ಲಿ ಉದ್ದವಾದ ಬಡಿಗೆಯ ಹಾಗಿರುವ ಮಂದಾರ ಪರ್ವತವು ಹಳದೀ ವರ್ಣದಲ್ಲಿದ್ದು ಅದರ ತುಂಬ ಗಿಡ, ಹೂವುಗಳನ್ನು ರಚಿಸಿ ಅದನ್ನು ಪರ್ವತವೆಂಬ ಬ್ರಮೆಬರುವಂತೆ ಮಾಡಿದ್ದಾರೆ. ಪರ್ವತದ ಕೆಳಭಾಗದಲ್ಲಿರುವ ಕೂರ್ಮವು ಪರ್ವತವು ಸಮುದ್ರದಲ್ಲಿ ಮುಳಗದಂತೆ ತಡೆದು ತನ್ನ ಡುಬ್ಬದ ಮೇಲೆ ಹೊತ್ತುಕೊಂಡಿದೆ. ಈ ಚಿತ್ರದಲ್ಲಿ ಪ್ರಮುಖವಾಗಿ ಕೆಂಪ, ಹಳದಿ, ಹಸಿರು, ನೀಲಿವರ್ಣಗಳು ಬಳಕೆಗೊಂಡಿವೆ.

ಈ ಸಮುದ್ರ ಮಂಥನ ಚಿತ್ರದ ಕೆಳಭಾಗದಲ್ಲಿ ಉದ್ದನೆಯ ಪಟ್ಟಿಯಲ್ಲಿ ಸಾಗರ ಮಂಥನದಿಂದ ಹೊರಬಂದ ಐರಾವತ, ವಚ್ಚಶ್ರರ್ಪ್ವ, ಕಾಮಧೇನು, ಮುಂತಾದ ವಸ್ತುಗಳು ಮತ್ತು ದೇವಾನುದೇವತೆಗಳ ಚಿತ್ರಗಳಿವೆ. ಐರಾವತವು ತೆಳು ಹಳದೀ ವರ್ಣದಲ್ಲಿದ್ದು ಮೈಮೇಲೆ ಹಾಕಿದ ಅಂಚುಳ್ಳ ವಸ್ತ್ರ ಹೊದಿಸಲಾಗಿದೆ ವಚ್ಚಶ್ರಫ ಕುದುರೆಯು ಹಿಂಗಾಲುಗಳ ಮೇಲೆ ನಿಂತು ಕುಣಿಯುತ್ತಿದೆ. ಕಾವಧೇನು ಪಶುದೇಹ ಸ್ತ್ರೀ ಮುಖ ಹೊಂದಿದೆ. ಇವುಗಳಲ್ಲದೇ ಸಮುದ್ರ ಮಂಥನದಿಂದ ಉಧ್ಬವಿಸಿದ ನಾರಾಯಣ, ಶಿವ ಮತ್ತಿತರ ದೇವತೆಗಳು ಹಾಗೂ ಕೆಲವು ಋಷಿಗಳೂ ಈ ಪಟಿಕೆಯಲ್ಲಿ ಚಿತ್ರಿತರಾಗಿದ್ದಾರೆ. ಇದು ಕ್ಷತ್ರಿಯ ಹಿನ್ನೆಲೆಯನ್ನು ಕೆಂಪು ವರ್ಣದಿಂದ ಕೂಡಿದೆ ಇದರಲ್ಲಿ ಹಳದಿ, ಕೆಂಪು, ನೀಲಿ, ಹಸಿರು, ವರ್ಣಗಳು ಹೆಚ್ಚಾಗಿ ಬಳಸಲಾಗಿದೆ.

ಚಿತ್ರ : ೩. ಆದಿ ಶೇಷಶಯನ ವಿಷ್ಣು : ಈ ಚಿತ್ರವು ಉದ್ದನೆಯ ಆಯಾತಾಕಾರದ ದೊಡ್ಡ ಪಟ್ಟಿಯಲ್ಲಿ ರಚಿತವಾಗಿದೆ. ವಿಷ್ಣುವು ಆದಿಶೇಷನ ಮೇಲೆ ವಿಶ್ರಾಂತಿ ಪಡೆಯುತ್ತಿದ್ದಾನೆ. ಏಳುಹೆಡೆಗಳ ಆದಿಶೇಷನು ವಿಷ್ಣುವಿಗೆ ನೆರಳನ್ನು ಮಾಡುತ್ತಿರುವ ಸುಂದರವಾದ ದೃಶ್ಯ ಇದಾಗಿದೆ. ಚತುರ್ಭುಜ ಹೊಂದಿದ ನಾರಾಯಣನು ನೀಲ ಮೇಘಶಾಮವರ್ಣವನ್ನು ಹೊಂದಿದ್ದಾನೆ ಎರಡು ಕೈಗಳನ್ನು ಮೊಣಕಾಲಿನ ಮೇಲೆ ಆರಾಮವಾಗಿ ಇಟ್ಟುಕೊಂಡು ಬಲಗೈ ಅಭಯಹಸ್ತ ಮುದ್ರೆಯಲ್ಲಿದೆ. ಹಿಂದಿನ ಎರಡು ಕೈಗಳಲ್ಲಿ ಶಂಖಚಕ್ರಗಳನ್ನು ಹಿಡಿದಿದ್ದಾನೆ. ನಾರಾಯಣನ ಹೊಕ್ಕಳಿಂದ ಕಮಲ ಹೊರಬಂದಿದ್ದು ಹೂವಿನಲ್ಲಿ ಬ್ರಹ್ಮನು ವಿರಾಜಮಾನನಾಗಿದ್ದಾನೆ. ಶೇಷಯನ ವಿಷ್ಣುವಿನ ಎಡ ಮತ್ತು ಬಲಗಳಲ್ಲಿ ಶ್ರೀದೇವಿ ಭೂದೇವಿಯವರು ವಿಷ್ಣುವಿನ ಸೇವೆ ಮಾಡುತ್ತಿದ್ದಾರೆ. ಕಪ್ಪು, ಹಸಿರು ಮಿಶ್ರಿತ ಕೆಂಪು ಅಂಚಿನ ಚುಕ್ಕೆಗಳಿರುವ "ಚಂದ್ರಕಾಳಿ" ಸೀರೆಯನ್ನು ಶ್ರೀದೇವಿಯು ಉಟ್ಟುಕೊಂಡಿದ್ದಾಳೆ. ಅದರಂತೆ ಭೂದೇವಿಯು ಉಟ್ಟುಕೊಂಡಿದ್ದಾಳೆ. ಚಂದ್ರ ಕಾಳಿ ಸೀರೆಯು ವಿಶಿಷ್ಠವಾದ ಸೀರೆಯಾಗಿದೆ. ಬಲಗಡೆಗಿರುವ ಭೂದೇವಿಯು ನಾರಾಯಣನನ್ನು ಸುತ್ತಿ ಸುತ್ತಿದ್ದಾಳೆ. ಕಲಾವಿದ ವಿಷ್ಣು ಆ ದಿಶೇಷ, ಶ್ರೀದೇವಿ, ಭೂದೇವಿಯರಿಗೆ ಒಂದು ಕಟ್ಟೆ ಆಕಾರದಂತಿರುವ ಪೀಠದ ಮೇಲೆ ಕುಳಿತಿರುವಂತೆ ಸಂಯೋಜನೆ ಮಾಡಿದ್ದಾನೆ.

ಶೇಷಶಯ ವಿಷ್ಣುವಿನ ಪೀಠದ ನಾಲ್ಕು ಮೂರ್ತಿಯಲ್ಲಿ ಸುಂದರವಾದ ಸವೆಗಳಿವೆ. ಎದುರಿನ ಭಾಗದಲ್ಲಿ ಒಂದು ಸೈಪ್ರಾಸ್ ವೃಕ್ಷ ಮತ್ತು ಒಂದು ಬೃಹತ್ತಾದ ಅಲಂಕಾರಿಕ ಹೂವಿನ ಕುಂಡಲಿವಿದೆ.

ಈ ಅಲಂಕಾರಿಕ ಕುಂಡಲಿಯಲ್ಲಿ ಕೆಂಪು ಹಳದಿ ಹೂಗಳು ತುಂಬಿಕೊಂಡಿವೆ. ಇಂತಹದೇ ಹೂ ಕುಂಡಲ ಬಲಗಡೆಗೂ ಇದೆ. ಮೇಲ್ಭಾಗದಿಂದ ತಗುಚಿಟ್ಟಂತೆ ವಿವಿಧ ಬಗೆಯ ಹೂ ಗೊಂಚಲಗಳನ್ನು ಕಲಾವಿದ ಸುಂದರವಾಗಿ ರಚಿಸಿದ್ದಾನೆ. ಕಲಾಕೃತಿಯ ಹಿನ್ನೆಲೆಯಾಗಿ ಕೆಂಪುವರ್ಣದಿಂದ ಪೂರ್ಣಗೊಂಡಿದೆ ಕೆಂಪು ನೀಲಿ, ಹಳದಿ, ಹಸಿರು, ವರ್ಣಗಳು ಚಿತ್ರದಲ್ಲಿ ಹೆಚ್ಚಾಗಿ ಬಳಕೆಯಾಗಿದೆ. ಚಿತ್ರದ ಸುತ್ತಲೂ ಕೆಂಪು, ಮತ್ತು ಹಳದಿ ನೀಲಿ ಹೂಗಳ ಎಲೆ ಬಳ್ಳಿಗಳ ವಿನ್ಯಾಸದಿಂದ ರಚಿಸಿದ್ದಾರೆ ಒಬ್ಬರೆ ಈ ಚಿತ್ರವನ್ನು ರೂಪಿರ್ಸಿ ಸ್ಥಳಾವಕಾಶವನ್ನು ಸರಿಯಾದ ರೀತಿಯಲ್ಲಿ ಬಳಿಸಿ ಕೊಂಡು ಪೂರ್ಣಗೊಳಿಸಿದ್ದಾನೆ.

ಚಿತ್ರ : ೪. ವರಾಹ ಅವತಾರದ : ಈ ಚಿತ್ರವು ವಿಷ್ಣುವು ವರಾಹ ಅವತಾರವನ್ನು ತಾಳಿದ ಚಿತ್ರವಾಗಿದೆ. ತನ್ನ ಎಡಗಾಲಿನಿಂದ ರಾಕ್ಷಸನನ್ನು ಕೆಳಕ್ಕೆ ತುಳಿದಿದ್ದು ಎಡಕೈಯಲ್ಲಿ ರಾಕ್ಷಸನ ಜುಟ್ಟನ್ನು ಹಿಡಿದು ಬಲಗೈಯ ಖಡ್ಗದಿಂದ ಆತನ ರುಂಡ ಕತ್ತರಿಸುತ್ತಿದ್ದಾನೆ. ಇನ್ನೆರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿದಿದ್ದಾನೆ. ಭೂದೇವಿಯು ರಾಕ್ಷಸನಿಂದ ಬಿಡುಗಡೆಗೊಂಡು ಕೃತಜ್ಞತಾಭಾವದಿಂದ ವರಾಹರೂಪಿ ವಿಷ್ಣುವನ್ನು ನೋಡುತ್ತಿದ್ದಾಳೆ. ವರಾಹರೂಪಿ ವಿಷ್ಣು ಕೆಂಪುವಸ್ತ್ರವನ್ನು ಉಟ್ಟುಕೊಂಡಿದ್ದು ಹಳದಿವರ್ಣದ ಶಾಲು ಹಾಕಿಕೊಂಡಿದ್ದಾನೆ. ಪ್ರಖರವಾದ ಕೆಂಪುವರ್ಣದ ಸೀರೆಉಟ್ಟು ತೇಳು ಹಳದೀವರ್ಣದ ಕುಪ್ಪಸವನ್ನು ಭೂದೇವಿಯು ತೊಟ್ಟಿದ್ದಾಳೆ. ಈ ಸುಂದರ ಮತ್ತು ರೋಚಕವಾದ ದೃಶ್ಯವನ್ನು ಕಲಾವಿದ ಕಲ್ಪನೆಯನ್ನು ಮೀರಿ ಈ ಚಿತ್ರವನ್ನು ಚಿತ್ರಿಸಿದ್ದಾನೆ. ಚಿತ್ರದ ಹಿನ್ನೆಲೆಯ ಗಾಢನೀಲಿವರ್ಣದಿಂದ ಪೂರ್ತಿಗೊಳಿಸಿದ್ದಾರೆ ಹೂಬಳ್ಳಿಗಳನ್ನು ಅಲಂಕಾರಿಕ ನಕ್ಷೆಗಳು ರಚಿಸಿ ಚಿತ್ರ ಸಂಯೋಜನೆಯನ್ನು ಮಾಡಿದ್ದಾರೆ. ಈ ಚಿತ್ರದಲ್ಲಿ ರಾಕ್ಷಸರಕೈಯಲ್ಲಿ ಕತ್ತಿ ಡಾಲುಗಳನ್ನು ಅತ್ಯಾಕರ್ಷಕವಾಗಿ ಅವನಕೈಯಲ್ಲಿ ಹಿಡಿಸಿದ್ದಾನೆ. ಈ ಭಿತ್ತಿಚಿತ್ರವನ್ನು ನೊಡಿದಾಗ ಎಲ್ಲ ಚಿತ್ರಕ್ಕಿಂತಲೂ ಇದು ಉತ್ತಮವಾದಚಿತ್ರಗಳಲ್ಲಿ ಒಂದಾಗಿದೆ.

ಚಿತ್ರ : ೫ : ವಿಠ್ಠಲನ ಚಿತ್ರ : ನರಗುಂದ ಆರನೆಯ ಭಿತ್ತಿ ಚಿತ್ರಗಳಲ್ಲಿ ವಿಠ್ಠಲನ ಮತ್ತೊಂದು ಚಿತ್ರವನ್ನು ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿ ವಿಠಲನಿಗೆ ನಾಲ್ಕು ಕೈಗಳು ಹೊಂದಿದ್ದು ಒಂದು ಕೈಯಲ್ಲಿ ಶಂಕು, ಚಕ್ರ, ಮತ್ತು ಗದಾಧರಿಯಾಗಿನಿಂತಿದ್ದಾನೆ. ವಿಠ್ಠಲನ ಮೈ ಬಣ್ಣವು ನೀಲಿ ಮಿಶ್ರಿತ ಕಪ್ಪಾಗಿದೆ ಕೆಂಪುವರ್ಣದ ಧೋತರವನ್ನು ಧರಿಸಿದ್ದಾನೆ. ವಿಠ್ಠಲನ ಎಡಗಡೆ ಮತ್ತು ಬಲಗಡೆ ಆತನ ಭಂಟರಾದ ಗರುಡ, ಮತ್ತು ಹನುಮಂತರನ್ನು ಚಿತ್ರಿಸಿದ್ದಾರೆ. ಬಲಗಡೆಗೆ ಗರುಡನು ಇದ್ದು ಎರಡು ಕೈಗಳಲ್ಲಿ ಹಾವುಗಳನ್ನು ಹಿಡಿದಿದ್ದಾನೆ. ಗರುಡನ ಮೈಬಣ್ಣವು ಬೂದುವರ್ಣದಾಗಿದೆ. ಗರುಡನು ರೆಕ್ಕೆ ಹೊಂದಿವನಾಗಿದ್ದಾನೆ. ಎಡಗಡೆಗೆ ಇರುವ ಹನುಮಂತನು ಕೈಮುಗಿದು ನಿಂತಿದ್ದು ಆತನ ಬಾಲ ಮೇಲಕ್ಕೆತ್ತಿದೆ. ಹನುಮಂತನ ಮೈಬಣ್ಣವು ಪಾಂಡುರಂಗನ ಮೈಬಣ್ಣದಂತೆಯೇ ಇರುವುದು ವಿಶೇಷವಾಗಿದೆ. ಹನುಮಂತ ಮತ್ತು ಗರುಡರ ಹಿಂದುಗಡೆಗೆ ದೊಡ್ಡದಾದ ಅಲಂಕಾರಿಕ ಗಿಡಗಳ ಚಿತ್ರಗಳಿದ್ದು ಈ ಗಿಡಗಳಲ್ಲಿ ದೊಡ್ಡದಾದ ಹೂಗಳು ಅರಳೆನಿಂತಿವೆ. ಗಿಡದ ಕೆಳಗೆ ಗೀಳಿನವಿಲುಗಳು ಸಂತೋಷದಿಂದ ಆಡುತ್ತಿರುವ ದೃಶ್ಯ ಸುಂದರವಾಗಿ ರಚಿತಗೊಂಡಿದೆ. ಈ ವಿಠ್ಠಲನ ಚಿತ್ರದ ಪಟ್ಟೆಯಲ್ಲಿ ಕೆಳಗಡೆಯಲ್ಲಿ ಮೂರು ಚಿತ್ರಗಳಿದ್ದು ಮಧ್ಯದಲ್ಲಿ ಅಲಂಕಾರಿಕ ನಕ್ಷೆಯ ಚಿತ್ರವಿದೆ. ಬಲಕ್ಕೆ ಕಾರ್ತಿಕೇಯನ

ಚಿತ್ರ ಎಡಕ್ಕೆ ಗಣಪತಿಯ ಚಿತ್ರಗಳಿವೆ. ವಿಠ್ಠಲನ ಚಿತ್ರವನ್ನು ಗಮನಿಸಿದಾಗ ಸ್ಥಳಾವಕಾಶ ಸಂಯೋಜನೆಯನ್ನು ಮಾಡಿಕೊಂಡು ಕಲಾವಿದ ಉತ್ತಮ ರೀತಿಯಲ್ಲಿ ಪೂರ್ಣಗೊಳಸಿದ್ದಾನೆ.

ಚಿತ್ರ : ೬ : ಕೃಷ್ಣಲೀಲೆಯ ಚಿತ್ರ : ಈ ಚಿತ್ರವು ಕಿಟಕಿಯ ಮೇಲ್ಭಾಗದಲ್ಲಿ ಆಯತಕಾರದಲ್ಲಿ ರಚಿಸಿದ ಬೃಹತ್ತದ ಚಿತ್ರವಿದೆ. ಇದರಲ್ಲಿ ಎರಡು ಉದ್ದವಾದ ಪಟ್ಟಿಗಳಿವೆ ಈ ಎರಡು ಪಟ್ಟಿಗಳಲ್ಲಿ ಕೃಷ್ಣನ ಕಥಾನಕಗಳನ್ನು ಹೊಂದಿರುವ ಚಿತ್ರಗಳನ್ನು ರಚಿಸಿದ್ದಾರೆ. ಕೃಷ್ಣನಿಗೆ ನಾಲ್ಕು ಭಾಹುಗಳಿದ್ದು ಗೋಪಿಕಾನ್ಯೆಯೊಬ್ಬಳನ್ನು ತನ್ನ ಎರಡು ಕೈಗಳಿಂದ ತಬ್ಬಿಕೊಂಡಿದ್ದಾನೆ. ಕೃಷ್ಣನ ಎಡ ಬಲಗಳಲ್ಲಿ ಐದೈದು ಮಂದಿ ಗೋಪಿಶಾಸ್ತ್ರೀಯರು ಅವನ ಬಳಗೆ ಹಾತೊರೆದು ಬರುತ್ತಿರುವ ದೃಶ್ಯ ಸುಂದರವಾಗಿದೆ. ಗೋಪಿಕಾಸ್ತ್ರೀಯರ ವಯ್ಯಾರದ ನಡಿಗೆ ಮೋಹಕವಾಗಿದೆ ಹಾಗೆ ಬಂದವರಲ್ಲಿ ಇನ್ನಿಬ್ಬರನ್ನು ತನ್ನ ಇನ್ನೆರಡು ಕೈಗಳಿಂದ ಹಿಡಿದುಕೊಂಡಿದ್ದಾನೆ. ಅವರಲ್ಲಿ ಒಬ್ಬಳು ನಾಚಿಮುಖ ಹೊರಳಿಸಿದ್ದಳೆ. ಹೀಗೆ ಈ ಭಿತ್ತಿಚಿತ್ರವನ್ನು ಕಲಾವಿದರು ಕೃಷ್ಣನ ಲಿಲೇಯ ದೃಶ್ಯವನ್ನು ಉತ್ತಮರೀತಿಯಲ್ಲಿದೆ. ಕೃಷ್ಣಣ ಮೈಬಣ್ಣ, ಹಾಗೂ ಉಡಿಗೆ ತೊಡಿಗೆಗಳು ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

ಕೆಳಗಿನ ಪಟ್ಟಿಯಲ್ಲಿ ಕೃಷ್ಣನನ್ನು ನಾಲ್ಕುಕನ್ಯೆಯರು ಪಲ್ಲಕ್ಕಿಯಲ್ಲಿ ಹೊತ್ತೊಕೊಂಡು ಹೊರಡಿದ್ದಾರೆ. ಹಸುವೊಂದು ಪಲ್ಲಕ್ಕಿಯ ಕೆಳಗೆ ಬಾಲ ಎತ್ತಿಕೊಂಡು ಕುತ್ತಿಗೆಯನ್ನು ಮೇಲಕ್ಕೆತ್ತಿ ತಾನು ಕೃಷ್ಣಣನ ಜೋತೆಗೆ ಜಿಗಿಯುತ್ತ ಹೊರಟಿದೆ. ಪಲ್ಲಕ್ಕಿಯ ಹಿಂದೆ ಮುಂದೆ ಚಾಮರ ಹಿಡಿದುಕೊಂಡು ಹೊಗುತ್ತಿರುವನಾರಿಯರ ಗುಂಪೊಂದು ಇದೆ. ಸ್ತ್ರೀಯರಿಗೆ ಕಿತ್ತಳೆ, ನಸುಗೆಂಪು ಗೌರ್ವರ್ಣ, ಹಳದಿ, ಪಾಟೀವರ್ಣಗಳು ಇವೆ ಗೋಪಿಕಾ ಸ್ತ್ರೀಯರ ವೆವಿಧ್ಯಮಯ ಸುಂದರ ಸೀರೆ, ಧರಿಸಿದ್ದಾರೆ. ಭಿತ್ತಿಚಿತ್ರದ ಎಡಗಡೆ ಮತ್ತು ಬಲಗಡೆಯಲ್ಲಿ ಕಲಾಕೃತಿಯ ಸಮತೋಲನ ಮಾಡಲು ಕೊನೆಗೆ ಸೈಪ್ರಸ್ ವೃಕ್ಷಾದಂತಿರುವ ಗೀಡ್ಡಗಳನ್ನು ಚಿತ್ರಸಿದ್ದಾರೆ. ಹಿನ್ನಲೆಯಾಗಿ ಕೆಂಪುವರ್ಣದಿಂದ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ.

ಇನ್ನೊಂದು ಚಿತ್ರದಲ್ಲಿ ನೀಲಮೇಘ ವರ್ಣದ ನಾಲ್ಕು ಕೈಗಳನ್ನು ಹೊಂದಿದ್ದಾನೆ. ಹಿಂದಿನ ಎರಡು ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿದುಕೊಂಡಿದ್ದಾರೆ. ಇನ್ನೊಂದು ಕೈಗಳಿಂದ ಕೊಳಲನ್ನು ನುಡಿಸುತ್ತಿದ್ದಾನೆ. ಕೃಷ್ಣನು ಕಾಲಮೇಲೆ ಕಾಲು ಹಾಕಿ ಕೊಂಡು ಕೊಳಲು ನುಡಿಸುತ್ತಿರುವ ಭಂಗಿಯು ಸುಂದರವಾಗಿದೆ. ಕೃಷ್ಣನ ಸಮಿಪ ಮತ್ತು ಹಿಂದುಗಡೆ ನಿಂತಗೋವು ಆತನ ಹಿಮ್ಮಡಿಯನ್ನು ಪ್ರೀತಿಯಿಂದ ನೆಕ್ಕುತಿವೆ. ಕೃಷ್ಣನು ಕೀರಿಟ ಧರಿಸಿದ್ದು ಇಲ್ಲಿ ಚಿತ್ರಗಳ ವೈಶಿಷ್ಟವೆನಿಸುತ್ತದೆ ಚಿತ್ರದ ಹಿನ್ನೆಲೆಯ ಕೆಂಪು, ವರ್ಣದಾಗಿದ್ದು ವೃತ್ತದ ಹೊರಗಡೆಗೆ ಹಸಿರು ವರ್ಣವಿದೆ ಸುಂದರವಾದ ರೇಖಾ ವಿನ್ಯಾಸದಿಂದ ಕೂಡಿದೆ. ಈ ಚಿತ್ರವನ್ನು ಗಮನಿಸಿದಾಗ ನೈಜತೆ ಮತ್ತು ಜೀವಂತಿಕೆಯನ್ನು ಕೂಡಿದಂತೆ ಭಾಸವಾಗುತ್ತದೆ. ಕಲಾಕೃತಿಯ ಹೊರ ಅಂಚಿನ ನಾಲ್ಕು ದಿಸಳಿನ ದಳದ ಹೂಗಳ ಬೆಳ್ಳಿಯನ್ನು ರಚಿಸಿ ಚಿತ್ರದ ಚೌಕಟ್ಟನ್ನು ಸುಂದರವಾಗಿ ಅಲಂಕರಿಸಲಾಗಿದೆ.

ಚಿತ್ರ : ೭. ಸೀತಾ ಸ್ವಯಂವರ : ಈ ಚಿತ್ರವು ಉದ್ದನೆಯ ಪಟ್ಟಿಯಲ್ಲಿ ರಾವಣವಧೆ ಕಥಾನಕ ದೃಶ್ಯವನ್ನು ಉತ್ತಮರೀತಿಯಿಂದ ಸಂಯೋಗಮಾಡಿ ಚಿತ್ರಿಸಿದ್ದಾರೆ ದಶರಥ್ ಮಹಾರಾಜರ ಆಸ್ಥಾನದಲ್ಲಿ ಒಪ್ಪಿಗೆ ಪಡೆದು ರಾಮಲಕ್ಷ್ಮಣರನ್ನು ಕರೆದೊಯ್ಯುದು ವಿಶ್ವಾಮಿತ್ರ ಮುನಿಗಳ ಸೀತಾಸ್ವಂಯಂವರದಲ್ಲಿ ರಾಮಸೀತೆಗೆ ಮುನಿಗಳ ಆಶೀರ್ವಾದ ಮುಂತಾದ ಘಟನೆಗಳನ್ನು ಈ ಸೀತಾಸ್ವಯಂವರದಲ್ಲಿ

ರಚಿಸಿದ್ದಾರೆ. ಆಸ್ಥಾನದ ದೃಶ್ಯದಲ್ಲಿ ಮೂಲ ಕಿರೀಟಧಾರಿ ವ್ಯಕ್ತಿಗತ ಕುಳಿತ್ತಿದ್ದಾರೆ. ಇಬ್ಬರು ಮುನಿಗಳು ಇದ್ದಾರೆ. ರಾಮಲಕ್ಷ್ಮಣರಿದ್ದಲ್ಲಿ ರಾಮನು ಶಿವಧನಸ್ಸನ್ನು ಎದೆಯ ಮೇಲೆ ಏರಿಸುತ್ತಿದ್ದಾನೆ. ಈ ದೃಶ್ಯದಲ್ಲಿ ದಶಕಂಠ ರಾವಣನು ತನ್ನಿಂದಾಗದ ಕೆಲಸಕ್ಕೆ ನಾಚಿಕೆ ಪಟ್ಟುಕೊಳ್ಳುತ್ತಿದ್ದಾನೆ ಚಿತ್ರವನ್ನು ಅವಲೋಕಿಸಿದಾಗ ಕಲಾವಿದ ರಾಮಲಕ್ಷ್ಮಣರ ಚಿತ್ರಗಳಿಗಿಂತ ರಾವಣನ ಚಿತ್ರವನ್ನು ಚಿಕ್ಕದಾಗಿ ಬಿಡಿಸಿದ್ದಾನೆ. ಈ ಚಿತ್ರದಿಂದ ರಾಮಲಕ್ಷ್ಮಣರ ವ್ಯಕ್ತಿ ತ್ವಕಿಂತ ಆತನ ವ್ಯಕ್ತಿತ್ವ ಸಣ್ಣದು ಎನ್ನುವುದು ಕಂಡುಬರುತ್ತದೆ. ರಾಮನು ನೀಲಿವರ್ಣದವನಾಗಿದ್ದು ಲಕ್ಷ್ಮಣನು ಕಿತ್ತಳೆ ವರ್ಣದ ಮೈ ಬಣ್ಣವನ್ನು ಕಲಾವಿದ ಲೇಪಿಸಿದ್ದಾನೆ.

ರಾಮ ಸೀತೆಯರ ಸ್ವಯಂವರದಲ್ಲಿ ಮುನಿಗಳೆಲ್ಲರು ರಾಮಸೀತೆಯರನ್ನು ಕೈ ಹಿಡಿದು ಆಶೀರ್ವಾದಿಸುತ್ತಿದ್ದಾರೆ. ಸೀತೆಯ ಕೈಯನ್ನು ರಾಮನ ಕೈಯಲ್ಲಿ ಮುನಿಯು ಕೊಡುತ್ತಿದ್ದಾರೆ. ಅವನ ಹಿಂದೆ ಸ್ತ್ರೀಯೋಬ್ಬಳು ಆರತಿಯನ್ನು ತೆಗೆದುಕೊಂಡು ಬಂದಿದ್ದಾಳೆ. ಆರತಿಯನ್ನು ಹಿಡಿದ ಸ್ತ್ರೀ ಕಪ್ಪು ಮಿಶ್ರಿತ ಹಸಿರು ವರ್ಣದ ಸೀರೆಯನ್ನು ತೊಟ್ಟಿದ್ದು ಸೀರೆಯಲ್ಲಿ ಗೆರೆಗಳನ್ನೂ ಹೊಂದಿದೆ. ನೋಡಲು ಬಹಳ ಆಕರ್ಷಕವಾದ ಸೀರೆಇದೆ. ಇದನ್ನು ಕಡ್ಡಿ ಸೀರೆ ಎಂದು ಹೇಳುತ್ತಾರೆ. ಕೆಂಪು ಕುಪ್ಪಸತೊಟ್ಟು ಇವಳು ಕೊರಳಲ್ಲಿ ಆಲಂಕೃತವಾದ ಆಭರಣವನ್ನು ಧರಿಸಿದ್ದಾಳೆ. ಹಣೆಯ ಮೇಲೆ ಅಗಲವಾದ ಕುಂಕುಮ್ಮ ಹಚ್ಚಿಕೊಂಡು ತುರಬನ್ನು ಕಟ್ಟಿಕೊಂಡಿದ್ದಾಳೆ. ಈ ಚಿತ್ರದಲ್ಲಿ ಇನ್ನಿಬ್ಬರು ಸ್ತ್ರೀಯರು ಕಡ್ಡಿಸೀರೆಯನ್ನೆ ಉಟ್ಟುಕೊಂಡಿದ್ದಾರೆ ರಾಮನ ಹಿಂದೆ ಲಕ್ಷ್ಮಣ ನಿಂತಿದ್ದಾನೆ ರಾಮಸೀತೆಯರಿಗೆ ಎಲ್ಲ ಋಷಿಮುನಿಗಳು ಅಕ್ಷತೆಯನ್ನು ಹಾಕಿ ಆಶೀರ್ವದಿಸುತ್ತಿರುವ ದೃಶ್ಯ ಸುಂದರವಾಗಿದೆ.

ರಾಮಲಕ್ಷ್ಮಣರು ಉದ್ದಾದ 'ಕುರ್ತಾ' ಮಾದರಿಯ ಅಂಗಿಗಳನ್ನು ಧರಿಸಿದ್ದಾರೆ. ಪಾದದವರೆಗೆ ಇಳಿಬಿಟ್ಟಿರುವ ಹಳದಿವರ್ಣದ ಅಂಗಿರುವನ್ನು ರಾಮಧರಿಸಿದ್ದಾರೆ, ಮೊಣಕಾಲುವರೆಗೆ ಇಳಿಬಿಟ್ಟಿರುವ ಕೆಂಪುವರ್ಣದ ನೀರುಗಳುಳ್ಳ ಅಂಗಿಯನ್ನು ಲಕ್ಷ್ಮಣಧರಿಸಿದ್ದಾನೆ. ಕಲಾವಿದ ಚಿಕ್ಕದಾದ ಸೀತಾದೇವಿಯ ಚಿತ್ರರಚಿಸಿದ್ದು ಕೆಂಪುಸೀರೆ ಮತ್ತು ಕೆಂಪುವರ್ಣದ ಕುಪ್ಪಸ ತೊಟ್ಟಿದ್ದಾಳೆ. ಉದ್ದವಾದ ಜಡೆಗೆ ತಲೆತುಂಬ ಹೂ ಮುಡಿದುಕೊಂಡಿದ್ದಾಳೆ.

ಈ ಚಿತ್ರದಲ್ಲಿ ಹಿನ್ನೆಲೆಯಾಗಿ ಕೆಂಪು ವರ್ಣದಿಂದ ಪೂರ್ಣಗೊಳಿಸಿದ್ದು ಸುತ್ತಲಿನ ಚೌಕಟ್ಟು ಹೂ ಬಳ್ಳಿಯಿಂದ ಸುಂದರವಾದ ನಕ್ಷೆಯಿಂದ ರಚನೆಯಾಗಿದೆ. ಕೆಂಪು ಹಳದಿ ಹೂಗಳು, ಹಸಿರು, ಎಲೆಗಳು ಈ ಕಲಾಕೃತಿಯ ಅಂಚಿನ ಪಟ್ಟಿಯಲ್ಲಿ ಸುಂದರವಾದ ವಿನ್ಯಾಸ ರಚಿಸುವುದರ ಮೂಲಕ ಕಲಾವಿದ ಸೀತಾಸ್ವಯಂವರ ಚಿತ್ರಕ್ಕೆ ಸ್ಥಳಾವಕಾಶ ವರ್ಣಲೇಪನವು ಸುಂದರವಾಗಿ ರಚನೆಮಾಡಿದ್ದಾರೆ.

ರಾಜಕೀಯ ಚಿತ್ರಗಳು :

ಚಿತ್ರ : ೧.ಕುದರೆ ಸವಾರ ರಾಜ : ಈ ಚಿತ್ರವು ಕುದುರೆಯ ಮೇಲೆ ಹೊರಟಿರುವ ರಾಜ ಚಿತ್ರವಾಗಿದೆ. ರಾಜನು, ಕುದುರೆ ಮೇಲೆ ಕುಳಿತ ಭಂಗಿ ಸುಂದರವಾಗಿದ್ದು, ತಿಳಿಹಳಯಿಂದ ಉದ್ದವಾದ ಅಂಗಿಯನ್ನು ಧರಿಸಿದ್ದಾನೆ.. ಒಂದು ಕೈಯಲ್ಲಿ ಕುದುರೆ ಹಿಡಿದು ಕುದುರೆಸವಾರಿ ಮಾಡುತ್ತಿದ್ದಾನೆ. ತಲೆ ಮೇಲೆ ಪೇಠಾವು ಟಿಪ್ಪುನ ಸೇನಾದಂತಿದೆ ನಯವಾದ ಮುಖದಲ್ಲಿ ಸುಂದರವಾದ ಕಣ್ಣು ಮೂಗುಗಳು ಮುಖಕ್ಕೆ ತಕ್ಕಂತೆ ಮೀಸೆಯನ್ನು ರಚಿಸಲಾಗಿದೆ. ಕುದುರೆಯುವ ಕೆಂಪು ಮತ್ತು ಬಿಳಿವರ್ಣದಿಂದ ರಚಿಸಿದ್ದಾರೆ. ಕುದುರೆಯ ಮೇಲೆ ಸುಂದರ ವಿನ್ಯಾಸದ ಕೆಂಪುವರ್ಣದಯು

ಇದೆ. ಕುದುರೆ ಕೊರಳಲ್ಲಿ ಉತ್ತಮ ವಿನ್ಯಾಸದ ಹಗ್ಗದ ಆಭರಣಗಳು ಲಗಾಮವನ್ನು ಸುಂದರವಾಗಿ ರಚನೆಗೊಂಡಿದೆ. ಈ ಚಿತ್ರವನ್ನು ಗಮನಿಸಿದಾಗ ರಾಮನು ಕುದುರೆ ಮೇಲೆ ಕುಳಿತು ಯುದ್ಧಕ್ಕೆ ಹೋಗುವ ದೃಶ್ಯದಂತಿದೆ ಚಿತ್ರದ ಹಿನ್ನೆಲೆಯುನ್ನು ಕೆಂಪುವರ್ಣದಿಂದ ಕಲಾಕೃತಿಯುನ್ನು ಪೂರ್ಣಗೊಳಿಸಿದ್ದಾರೆ.

ಚಿತ್ರ : ೨.ಯುದ್ಧದ ದೃಶ್ಯ : ಈ ಚಿತ್ರವು ೪x೮ ಅಡಿಯದಾಗಿದ್ದು ಉದ್ದನೆಯ ಪಟ್ಟಿಯಲ್ಲಿ ರಚಿತವಾಗಿದೆ. ರಾಜ, ಸೈನಿಕರು ಯುದ್ಧಕ್ಕೆ ಹೊರಟಿರುವ ಚಿತ್ರವಾಗಿದೆ. ಇದರಲ್ಲಿ ಎರಡು ಭಾಗಮಾಡಿ ಒಂದು ಭಾಗದಲ್ಲಿವಾದ ಮೇಲಿನ ಭಾಗದಲ್ಲಿ ಸೈನಿಕರೆಲ್ಲರು ಯುದ್ಧದ ತಯಾರಿ ಮಾಡಿಕೊಂಡು ಬರುವಂತೆ ರಣವಾದ್ಯಗಳನ್ನು ಬಾರಿಸುತ್ತಿರುವ ಚಿತ್ರವಿದೆ. ಅದರಪಕ್ಕದಲ್ಲಿ ಸೈನಿಕರು ಹಸಿರುವರ್ಣದ ಕತ್ತಿ ಢಾಲುಗಳನ್ನು ಹಿಡಿದು ಒಂದೇ ರೀತಿಯಲ್ಲಿ ಶಿಸ್ತಿನಿಂದ ಹೆಜ್ಜೆಹಾಕುತ್ತ ಸಾಗುತ್ತಿರುವ ದೃಶ್ಯವಾಗಿದೆ. ಸೈನಿಕರ ಎಡಗಡೆಗೆ ನಾಲ್ವರು ಯುರೋಪಿಯ ಸೈನಿಕರಿದ್ದು ಅವರು ರಣಕಹಳೆಯ ವಾದ್ಯವನ್ನು ಬಾರಿಸುತ್ತಿದ್ದಾರೆ. ಈವಾದ್ಯಗಳು ವಿಶಿಷ್ಟರೀತಿಯದ್ದಾಗಿವೆ. ಯುರೋಪಿನ ಸೈನಿಕರು ಎಡಗಡೆಗೆ ಬಂದೂಕುಗಳನ್ನು ಹಿಡಿದುಕೊಂಡು ಬರುತ್ತಿರುವ ಹಿಂದೂ ಸೈನಿಕರಿದ್ದಾರೆ. ಹೀಗೆ ಈ ಮೇಲಿನ ಭಾಗದ ಪಟ್ಟಿಯಲ್ಲಿ ವಿವಿಧ ಜನಾಂಗದ ಸೈನಿಕರ ಚಿತ್ರವನ್ನು ಸುಂದರವಾಗಿ ರಚನೆಯಾಗಿವೆ.

ಕೆಳಗಿನಭಾಗದಲ್ಲಿ ರಣರಂಗದ ವಿಶಾಲವಾದ ಸ್ಥಳದೃಶ್ಯವನ್ನು ಚಿತ್ರಿಸಿದ್ದಾರೆ. ಇದರ ಮಧ್ಯಭಾಗದಲ್ಲಿ ಆಂಜನೆಯ ಗುಡಿ ಇದೆ ಆಂಜನೇಯನು ಎಡೆಗಡೆಗೆ ಮುಖ ಮಾಡಿಕೊಂಡಿದ್ದಾರೆ. ಈ ದೇವಾಲಯದ ಎಡಭಾಗದಲ್ಲಿ ಹಿಂದೂ ರಾಜಕುಮಾರ ನೊಬ್ಬನು ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಯುದ್ಧದಲ್ಲಿ ತೊಡಗಿದ್ದಾನೆ. ರಾಜಕುಮಾರನ ಸಹಾಯಕರಾಗಿ ಕುದುರೆ ಸವಾರರು, ಕಾಲಾಳುಗಳು ರಣರಂಗದಲ್ಲಿ ಯುದ್ಧ ಮಾಡುತ್ತಿದ್ದಾರೆ. ಸೈನಿಕರು ಖಡ್ಗ ಉದ್ದವಾದ ಭಲ್ಲೆಗಳನ್ನು ಹಿಡಿದು ಕೊಂಡಿದ್ದಾರೆ. ರಾಜನು ಆನೆಯ ಮೇಲೆ ಕುಳಿತು ಸೈನಿಕರಿಗೆ ಮಾರ್ಗದರ್ಶನ ಮಾಡುತ್ತಿದ್ದಾನೆ. ಇದರ ಎದುರಿನ ಆಂಜನೇಯ ಗುಡಿಯ ಬಲಗಡೆಗೆ ಇರುವ ಸೈನ್ಯದಲ್ಲಿ ಅಪಾರ ಜನಸೈನಿಕರಿದ್ದು ಇವರ ಬರಿ ಅಶ್ವಾರೋಹಿಗಳಾಗಿದ್ದಾರೆ. ಇದರಲ್ಲಿ ಅನೇಕ ನಿರೂಪದ ಭಾವನಯಿಂದ ಚಿಮ್ಮತ್ತಾ ಖಡ್ಗದಿಂದ ವೈರಿಗಳನ್ನು ಹೊಡೆಯುತ್ತ ಕೆಲವು ಸೈನಿಕರು ಮುನ್ನಡೆದಿದ್ದಾರೆ. ಚಿತ್ರದಲ್ಲಿ ನೀಲಿ, ಹಸಿರು, ಹಳದಿ ಬಣ್ಣಗಳನ್ನು ಪ್ರಮುಖವಾಗಿ ಬಳಸಿದ್ದಾರೆ. ಹಿನ್ನೆಲೆಯಾಗಿ ಕೆಂಪುಬಣ್ಣದಿಂದ ರಚನೆಯಾಗಿದೆ. ಈ ಯುದ್ಧದ ಚಿತ್ರದಲ್ಲಿ ನಾಯಿಗಳು ಜೋರಾಗಿ ಬೊಗಳುತ್ತಿರುವ ಅನೇಕ ನಾಯಿಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಎಲ್ಲ ಸೈನಿಕರು ಹೆಚ್ಚಾಗಿ ಒಂದೇ ರೀತಿಯಿಂದ ಟೊಪ್ಪಿಗೆಯನ್ನು ದರಿಸಿದ್ದಾರೆ. ಅದು ಹಿಂದೆ ಬಾಚಿದಂತೆ ಇದೆ. ಈ ಯುದ್ಧದ ದೃಶ್ಯದಲ್ಲಿ ಆನೆ ಕುದುರೆಗಳ ಕಲಾಕೃತಿಗಳು ಪ್ರಮಾಣಬದ್ಧವಾಗಿ ಸುಂದರ ರೇಖಾವಿನ್ಯಾಸ ಭಾವನಾತ್ಮಕ ಮತ್ತು ಕಲಾತ್ಮಕವಾಗಿ ಸುಂದರವಾದ ಕಲಾಕೃತಿಗಳನ್ನು ಕಲಾವಿದನು ರಚನೆ ಮಾಡಿದ್ದಾರೆ.

ಚಿತ್ರ : ೩. ರಾಜಾ ಮತ್ತು ನರ್ತಕಿ : ಈ ಚಿತ್ರದಲ್ಲಿ ರಾಜ ಮತ್ತು ನರ್ತಕಿಯರು ಸೇರಿ ನೃತ್ಯ ಮಾಡುತ್ತಿರುವ ಚಿತ್ರವಾಗಿದೆ. ರಾಜನು ಕೀರಿಟ ಧರಿಸಿದ್ದು ಸುಂದರವಾದ ನಕ್ಷಾ ವಿನ್ಯಾಸವನ್ನು ಹೊಂದಿದೆ. ರಾಜನು ಉದ್ದನೆಯ ಅಂಗಿಯನ್ನು ಧರಿಸಿದ್ದಾನೆ ಇದರ ಬಣ್ಣವು ತಿಳಿಹಳದಿ ವರ್ಣದ್ದಾಗಿದೆ.

ರಾಜನ ಪಂಚೆಯು ಕೆಂಪುವರ್ಣದ್ದಾಗಿದೆ. ನಡದ ಸುತ್ತಲೂ ಸುಂದರವಾದ ವಿನ್ಯಾಸವನ್ನು ಹೊಂದಿದೆ. ನರ್ತಕಿಯು ನರ್ತನಮಾಡುತ್ತಿರುವ ದೃಶ್ಯ ನೈಜತೆಯಿಂದ ಕೂಡಿದೆ. ಸೀರೆಯ ಕಡ್ಡಿಸೀರೆಯಾಗಿದ್ದು ಕಪ್ಪು ನೀಲಿ ವರ್ಣದ್ದಾಗಿದೆ. ಅದರ ಧಡಿಯು ಕೆಂಪುವರ್ಣದ್ದಾಗಿದೆ. ಕುಪ್ಪಸವು ಕೆಂಪುದ್ದಾಗಿದೆ. ಕುಪ್ಪಸದ ಅಂಚಿನಲ್ಲಿ ಸುಂದರವಾದ ವಿನ್ಯಾಸವು ರಚನೆಗೊಂಡಿದೆ. ನರ್ತಕಿಯ ನಯವಾದ ಕೂದಲು ಸುಂದರವಾದ ಮುಖವನ್ನುಳ್ಳದಾಗಿದ್ದು ನೋಡುಗರಿಗೆ ನರ್ತನಮಾಡುವಂತೆಭಾಸವಾಗುತ್ತದೆ. ರಾಜಾಮತ್ತು ನರ್ತನೆಯ ಭಾವನೆಯು ವಿಶಿಷ್ಠರೀತಿಯದ್ದಾಗಿದೆ. ರಾಜನ ಹಿಂದೆ ಒಬ್ಬ ರಾಜನ ಆಸ್ಥಾನದಲ್ಲಿ ನೃತ್ಯಮಾಡುತ್ತಿದ್ದ ನರ್ತಕಿಯನ್ನು ತದೇಕ ಬತ್ತದಿಂದ ನೋಡುತ್ತಿದ್ದಾನೆ. ತಲೆಮೇಲೆ ಪೇಟಾ ಸುಂದರವಾದ ವಸ್ತ್ರವನ್ನು ಧರಿಸಿದ್ದಾನೆ. ಹಿನ್ನೆಲೆಯಾಗಿ ಕೆಂಪುವರ್ಣದಿಂದ ಕಲಾವಿದ ಸುಂದರವಾಗಿ ಪೂರ್ಣಗೊಳಿಸಿದ್ದಾನೆ.

ಒಟ್ಟಾರೆ ಈ ಕಲಾಕೃತಿಯನ್ನು ನೋಡಿದಾಗ ರಾಜ ಮತ್ತು ನರ್ತಕಿಯರು ನೃತ್ಯ ಮಾಡುತ್ತಿರುವ ದೃಶ್ಯವು ಅವರ ಹಾವಭಾವಗಳನ್ನು ಕಲಾವಿದ ತಮ್ಮ ಕಲ್ಪನೆಯನ್ನು ಮೀರಿ ಕಲಾಕೃತಿ ರಚಿಸಿದ್ದಾನೆ.

ಸಾಮಾಜಿಕ ಭಿತ್ತಿಚಿತ್ರಗಳು

೧. ಅಲಂಕಾರಿಕ ಗಿಡಗಳ ಚಿತ್ರ : ಸಮುದ್ರ ಮಂಥನ ಚಿತ್ರದ ಕೆಳಗಿನ ಪಟ್ಟಿಯಲ್ಲಿ ಏಳು ಅಲಂಕಾರಿಕ ವೃಕ್ಷಗಳ ಚಿತ್ರವಿದೆ. ಅವುಗಳ ಅಕ್ಕಪಕ್ಕದಲ್ಲಿ ಹುಲಿಗಳು ಗಾಂಭಿರ್ಯವಾಗಿ ಬರುತ್ತಿವೆ. ಹಸಿರಿನಿಂದ ಕಂಗೊಳಿಸುತ್ತಿರುವ ಗಿಡಗಳು ಅದರಲ್ಲಿ ಸುಂದರವಾದ ಹೂಗಳು ಅರಳಿ ನಿಂತಿವೆ. ಅದರಲ್ಲಿ ಪಕ್ಷಿಗಳು ಚಿಲಿಪಿಲಿ ಗುಟ್ಟುತ್ತ ಹಾಡುತ್ತಿವೆ. ಹುಲಿಗಳು ಹಳದಿವರ್ಣದ ಮೈಬಣ್ಣ ಹೊಂದಿವೆ. ಈ ಏಳು ವೃಕ್ಷಗಳ ಗುಂಪಿನ ಚಿತ್ರದ ಕೆಳಗಡೆ ಗೋಡೆಯಲ್ಲಿ ಕಿಟಕಿಯೊಂದಿದೆ. ಕಿಟಕಿಯ ಎಡಕ್ಕೆ ಪಶುಪತಿಯ ಚಿತ್ರ ಬಲಗಡೆಗೆ ವಿಠ್ಠಲನ ಚಿತ್ರವನ್ನು ರಚಿಸಲಾಗಿದೆ. ಶರಭ ಚಿತ್ರಗಳ ಕೆಳಗೋಡೆಯಲ್ಲಿ ಒಂದು ಮಾಡವಿದ್ದು ಆ ಮಾಡ ಎಡಬಲಗಳಲ್ಲಿ ಅಲಂಕಾರಿಕ ಹೂಗಿಡಗಳನ್ನು ರಚಿಸಿದ್ದಾರೆ. ಎಡಕ್ಕೆ ನಾಲ್ಕು ಬಲಕ್ಕೆ ನಾಲ್ಕು ಅಲಂಕಾರಿಕ ಗಿಡಗಳಿದ್ದೂ ಒಂದರ ಹಾಗೆ ಒಂದು ಇಲ್ಲ ಅವು ಪ್ರತಿಯೊಂದು ಬೇರೆ ಬೇರೆಯಾಗಿವೆ. ಅಲಂಕಾರಿಕ ಗಿಡಗಳಲ್ಲಿ ಕೆಲವು ನೆಲದಲ್ಲಿ ಹುಟ್ಟಿದ್ದರೆ ಇನ್ನು ಕೆಲವು ಹೂಕುಂಡಲಿದಲ್ಲಿನ ಗಿಡಗಳಲ್ಲಿ, ಇಣಚಿ (ಅಳಿಲು) ಮತ್ತು ಇತರ ವೈವಿಧ್ಯ ಪಕ್ಷಿಗಳಿದ್ದರೆ, ನೆಲದಲ್ಲಿ ಹುಟ್ಟಿರುವ ಸೈಪ್ರಸ್ತರಹಾದ ವೃಕ್ಷಗಳ ಚಿತ್ರಗಳ ಚೌಕಟ್ಟಿಗೆ ಹೊಬಳ್ಳಿಂದ ನಕ್ಷೆಯಲ್ಲಿ ಕೆಂಪು ಹೂಗಳು ಹಳದಿ, ಬಿಳಿ ವರ್ಣದ ಹೂಗಳಿವೆ ನಾಲ್ಕು ಪಕಳೆಗಳ ಹೂವಾಗಿದೆ. ಈ ಅಲಂಕಾರಿಕ ಗಿಡಗಳಲ್ಲದೇ ಆಯಾ ವಿಷಯಕ್ಕೆ ಪೂರಕವಾಗಿ ಅಲ್ಲಲ್ಲಿ ಅಲಂಕಾರಿಕೆ ಗಿಡಗಳು, ಹೂ ಕುಂಡಗಳು, ಎಲೆ ಬಳ್ಳಿಗಳು ಸೂಳುವುಗಳು ಜ್ಯಾಮಿತಿಕ ನಕ್ಷೆಗಳನ್ನು ರಚಿಸಲಾಗಿದ್ದು ಅಯಾ ವಿಷಯದ ವಿವರಣೆ ಮಾಡುವ ಸಂದರ್ಭದಲ್ಲಿ ಅವುಗಳ ಕುರಿತಾಗಿ ಹೇಳಲಾಗಿದೆ. ಚಿತ್ರಗಳ ಅಂಚಿನಲ್ಲಿ ಖಾಲಿ ಇದ್ದ ಸ್ಥಳ ಬಿಂಬಿಸಲೂ ಹೂಬಳ್ಳಿ ನಕ್ಷೆಗಳನ್ನು ಚಿತ್ರಿಸಲಾಗಿದೆ. ವಿಷಯಕ್ಕೆ ಅನುಗುಣವಾಗಿ ಅಲಂಕಾರಿಕ ನಕ್ಷೆಗಳ ರಚನೆಯಾಗಿದೆ.

...

ನರಗುಂದ ಅರಮನೆಯ ಭಿತ್ತಿಚಿತ್ರಗಳು



ಪ್ರಾಗೈತಿಹಾಸಿಕ ಚಿತ್ರಕಲೆ ನಿಲಗುಂದ



ಬಾಬಾಸಾಹೇಬರ ಮೂರ್ತಿ ಶಿಲ್ಪ



ನರಗುಂದ ಬಾಬಾಸಾಹೇಬರ ಅರಮನೆ



ಗುಂಡಪ್ಪ ಹಸಬಿಯವರ ಭಿತ್ತಿಚಿತ್ರ ಇರುವ ಮನೆ

ನಿಲಗುಂದದ ಪ್ರಾಗೈತಿಹಾಸಿಕ ಬಂಡೆ ಆಸರೆಯ ಚಿತ್ರಗಳು




ಚಿತ್ರ .೧



ಚಿತ್ರ ೨.



ಚಿತ್ರ೩.



ಚಿತ್ರ೪.

ನರಗುಂದ ಅರಮನೆಯ ಧಾರ್ಮಿಕ ಭಿತ್ತಿಚಿತ್ರಗಳು



ಚಿತ್ರ ೧. ಗಣಪತಿ



ಚಿತ್ರ ೨. ಪಶುಪತಿ



ಚಿತ್ರ ೩.ವಿಠ್ಠಲ



ಚಿತ್ರ ೧. ಗೀರಿಜಾ ಕಲ್ಯಾಣ




ಚಿತ್ರ ೨. ಸಮುದ್ರಮಂಥನ



ಚಿತ್ರ ೩.ಆದಿಶೇಷ ವಿಷ್ಣು



ಚಿತ್ರ ೪. ವರಾಹ ಅವತಾರ



ಚಿತ್ರ ೫.ವೇಶಧಾರಿ ವಿಠ್ಠಲ



ಚಿತ್ರ ೬. ಕೃಷ್ಣ ಲಿಲೆ



ಚಿತ್ರ ೭. ಸೀತಾ ಸ್ವಯಂವರ



ಚಿತ್ರ ೧. ಕುದುರೆ ಸವಾರ ರಾಜ



ಚಿತ್ರ ೨. ಯುದ್ಧದ ದೃಶ್ಯ




ಚಿತ್ರ ೩. ರಾಜಾ ಮತ್ತು ನರ್ತಕಿ

ನರಗುಂದ ಅರಮನೆಯ ಸಾಮಾಜಿಕ ಭಿತ್ತಿಚಿತ್ರಗಳು



ಚಿತ್ರ ೧. ಅಲಂಕಾರಿಕ ಗಿಡಗಳು



ಚಿತ್ರ ೨. ದ್ವಾರಪಾಲಕ



ಚಿತ್ರ.೩.ಅಲಂಕಾರಿಕ ಗುಡು

അಧ್ಯಾಯ – ಐದು

ಗದಗ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು ಹಾಗೂ ಚಿತ್ರಕಲಾ ಶಿಕ್ಷಕರು



ಒಂದು ಉತ್ತಮ ಶಿಕ್ಷಣ ಸಂಸ್ಥೆಯು ಬೆಳೆಯಬೇಕಾದರೆ ಆ ಸಂಸ್ಥೆಯ ಶಿಕ್ಷಕರ ಪಾತ್ರ ಮಹತ್ವದ್ದಾಗಿರುತ್ತದೆ. ನಾಡಿನ ಸತ್ಪ್ರಜೆಗಳನ್ನು ರೂಪಿಸುವ ಶಿಕ್ಷಕ ಆಯಾ ದೇಶದ ಸಂಸ್ಕೃತಿಯ ನಿರ್ಮಾಣದಲ್ಲಿಯೂ ಪ್ರಮುಖ ಪಾತ್ರವಹಿಸುತ್ತಾನೆ. ಅಂತಹ ಮಹತ್ವದ ಸ್ಥಾನವು ಶಿಕ್ಷಕ ಅಥವಾ ಗುರುವಾದವನಿಗೆ ದೈವದತ್ತವಾಗಿ ಬಂದಿರುವ ಕೊಡುಗೆಯಾಗಿದೆ. ವೇದೋಕ್ತವಾಗಿ "ಗುರು" ಶಬ್ದದ ಅರ್ಥ ತುಂಬಾ ವ್ಯಾಪಕವಾದದ್ದು. 'ಗುರು ಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ' ಅಜ್ಞಾನವನ್ನು ನಾಶಪಡಿಸುವವನೇ ಗುರು. ಮಕ್ಕಳ ಅಭ್ಯುದಯವೇ ಅವನ ಪೂಜೆ ಎಂಬ ಮಾತು ಉಪನಿಷತ್ತುಗಳಲ್ಲಿ ಕಾಣಬಹುದು. ಗುರುವಾದವನು ಶಿಕ್ಷಕನಾಗಬೇಕೆ ಹೊರತು ಸಂಬಳದ ಉಪಾಧ್ಯಾಯನಾಗಬಾರದು. ಶಿಕ್ಷಕ ವಿಶಿಷ್ಟವಾದ ವ್ಯಕ್ತಿತ್ವಉಳ್ಳ ಶಿಕ್ಷಕನ ಬುದ್ಧಿಶಕ್ತಿ ಒಳ್ಳೆಯ ಮಾತುಗಾರಿಕೆ, ಮಾನಸಿಕ, ದೈಹಿಕ, ಆರೋಗ್ಯ, ಸಂತೋಷ, ಕರುಣೆ, ರಚನಾತ್ಮಕ ಆಲೋಚನೆ, ಸಹಕಾರ ಮನೋಭಾವನೆ, ಹಾಸ್ಯ ಪ್ರವೃತ್ತಿ, ತಾಳ್ಮೆ, ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ ಇವು ಶಿಕ್ಷಕನ ವ್ಯಕ್ತಿತ್ವವನ್ನು ರೂಪಿಸುವ ಗುಣಗಳಾಗಿವೆ. ವಿಷಯಜ್ಞಾನ, ಮಕ್ಕಳ ಬಗೆಗಿನ ವಾತ್ಸಲ್ಯ ಮತ್ತು ತಿಳುವಳಿಕೆ, ದೃಢನಿರ್ಧಾರ ಸದಾಕಲಿಯುವ ಹಂಬಲ ಅಥವಾ ಛಲ, ಬದಲಾವಣೆಗಳನ್ನು ಗ್ರಹಿಸುವ ಸೂಕ್ಷ್ಮಸಂವೇದನೆ ಇವು ಶಿಕ್ಷಕನಿಗೆ ಅವಶ್ಯ. ಸದಾ ಹಸನ್ಮುಖಿಯಾಗಿದ್ದು, ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳುವ ಮನೋಭಾವ ಇರಬೇಕು. ತಾನೊಬ್ಬ ಆದರ್ಶ ವಿದ್ಯಾರ್ಥಿ ಎಂಬ ಭಾವನೆ ಶಿಕ್ಷಕನಲ್ಲಿರಬೇಕು. ಅಂದಾಗ ಒಳ್ಳೆಯ ಶಿಕ್ಷಕನಾಗಬಲ್ಲ."[೧]

ಹೀಗೆ ಗುರುವಾದವನು ಮಕ್ಕಳನ್ನು ಕ್ಷೇತ್ರದಲ್ಲಿ ಬೆಳೆಸುವುದರ ಜೊತೆಗೆ ಪರೋಕ್ಷವಾಗಿ ನಾಡಿನ ಪ್ರಮುಖ ಬೆಳವಣಿಗೆಗೆ ಕಾರಣನಾಗಿರುತ್ತಾನೆ. ಯಾವುದೇ ಶಿಕ್ಷಣ ಸಂಸ್ಥೆಯ ಹಿರಿಮೆ ಗರಿಮೆಗಳನ್ನು ಅಲ್ಲಿನ ಅಧ್ಯಾಪಕ ವೃಂದದ ಸಾಧನೆ ಮತ್ತು ಪರಿಶ್ರಮಗಳ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ. ಆದ್ದರಿಂದ ಪ್ರಧಾನಮಂತ್ರಿಯಿಂದ ರಾಷ್ಟ್ರಪತಿಯಿಂದ ರಾಷ್ಟ್ರಪತಿಯ ವರೆಗೆ ಉನ್ನತ ವ್ಯಕ್ತಿಗಳು ತಮಗೆ ಕಲಿಸಿದ ಗುರುಗಳನ್ನು ಗೌರವದಿಂದ ನೆನೆಯುತ್ತಾರೆ. ಇದಕ್ಕೆ ಪ್ರಮುಖ ಕಾರಣ ಅಂತಹ ಅಧ್ಯಾಪಕರು. ವಿದ್ಯಾರ್ಥಿಗಳ ಬಗ್ಗೆ, ಅವರ ಕಲಿಕೆಯ ಬಗ್ಗೆ ಹೊಂದಿರುವ ಕಾಳಜಿ ಮತ್ತು ಆಸಕ್ತಿಗಳು, ಎನ್ನಬಹುದು. ಈ ರೀತಿಯ ಪರಿಶ್ರಮದಿಂದ ವಿದ್ಯಾರ್ಥಿಗಳು ಬೆಳೆಯುವುದರ ಜೊತೆಗೆ ಆಯಾ ಶಾಲೆ ಮತ್ತು ಶಿಕ್ಷಣ ಸಂಸ್ಥೆಗಳು ಬೆಳೆಯುತ್ತವೆ.[೨]

---

೧. ಪಿ.ಬಿ. ಬಂಡಿ, ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ – ಪು.ಸಂ. ೩೮

೨. ಪಿ.ವಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ – ಪು.ಸಂ. ೩೮

ಈ ಹಿನ್ನೆಲೆಯನ್ನು ನೋಡಿದಾಗ ವಿಶ್ವಪ್ರಸಿದ್ಧಿಯನ್ನು ಪಡೆದ ಶಾಂತಿನಿಕೇತನ ಕಲಾಶಾಲೆಯು ಪ್ರಬುದ್ಧವಾಗಿ ಬೆಳೆಯಲು ಅಲ್ಲಿನ ಅಧ್ಯಾಪಕರ ಸಾಧನೆ ಪ್ರಮುಖವಾಗಿದೆ. ಅದೇ ರೀತಿ ಭಾರತದಲ್ಲಿ ಮೊಟ್ಟಮೊದಲು ಆರಂಭಗೊಂಡ ಕಲ್ಕತ್ತಾ ಕಲಾಶಾಲೆಯು ಪ್ರಸಿದ್ಧಿ ಪಡೆಯಲು ಅಲ್ಲಿನ ಅಧ್ಯಾಪಕರ ಕೊಡುಗೆ ಅನನ್ಯವಾದುದು. ಮುಂಬೈನ ಸರ್ ಜೆ.ಜೆ. ಕಲಾಶಾಲೆಯು ಕಲೆಗೆ ಮತ್ತು ಶಿಸ್ತಿಗೆ ಹೆಸರಾಗಿದ್ದು, ಅಲ್ಲಿನ ಅಧ್ಯಾಪಕರ ಸಾಧನೆ ಮತ್ತು ಪರಿಶ್ರಮದ ಫಲವೆನ್ನಬಹುದು. ಬ್ರಿಟಿಷರ ಆಡಳಿತವಿದ್ದಾಗ ಕಲಾಗುರು ಶ್ರೀ ದಂಡಾವತಿಮಠ ಅವರು ಮುಂಬೈನಲ್ಲಿ ನೂತನ ಕಲಾಮಂದಿರವನ್ನು ಸ್ಥಾಪಿಸಿ ಕಲಾವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮಹತರ ಕಾರ್ಯವನ್ನು ಮಾಡಿದರು. ಅಂದಿನ ದಿನಗಳಲ್ಲಿ ನೂತನ ಕಲಾಶಾಲೆಯು ದಂಡಾವತಿಮಠರವರಿಂದ ಪ್ರಸಿದ್ಧಿ ಪಡೆಯಿತು. ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ (ಕಾವಾ) ಅಂದಿನ ದಿನಗಳಲ್ಲಿ ಪ್ರಸಿದ್ಧಿ ಪಡೆಯಲು ಅಲ್ಲಿರುವ ಉತ್ತಮ ಶಿಕ್ಷಕ ವೃಂದವು ಕಾರಣವಾಗಿತ್ತು. ಕರ್ನಾಟಕದಲ್ಲಿ ಪ್ರಥಮವಾಗಿ ಸ್ಥಾಪನೆಗೊಂಡ ಡಿ.ವಿ. ಹಾಲಭಾವಿ ಸ್ಕೂಲ ಆರ್ಫ್ ಆರ್ಟ, ಧಾರವಾಡ ಇದನ್ನು ಆರಂಭಿಸಿದ ಹಾಲಭಾವಿಯವರು ಸ್ವತಃ ಶ್ರೇಷ್ಠ ಅಧ್ಯಾಪಕರಾಗಿದ್ದು ಕಲಾಶಾಲೆಯ ಬೆಳವಣಿಗೆಗೆ ಅವರ ಪರಿಶ್ರಮದ ಫಲಕಾರಣ ಬೆಂಗಳೂರಿನ ಚಿತ್ರಕಲಾ ಪರಿಷತ್ತು ಶ್ರೀ ನಂಜುಂಡರಾವ ಅವರ ಮಹಾತ್ವಕಾಂಕ್ಷೆಯ ಅಧ್ಯಾಪಕರಿಂದಾಗಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆಯಿತು. ನಾಡೋಜ ಅರ್.ಎಂ.ಹಡಪದ ಅವರ ಕೆನ್ ಕಲಾಶಾಲೆಯು ಹಡಪದ ಮಾಸ್ತರ ಅವರ ಪರಿಶ್ರಮದಿಂದ ಹೆಸರುವಾಸಿಯಾಯಿತು ಎಂದು ಹೇಳಬಹುದು.

ಈ ಹಿನ್ನೆಲೆಯಲ್ಲಿ ಗದುಗಿನ ವಿಜಯ ಕಲಾಮಂದಿರದ ಕಲಾಶಾಲೆಯು ಅಧ್ಯಾಪಕರ ಕೊಡುಗೆಗಳನ್ನು ಮತ್ತು ಕಲಾಶಾಲೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದು, ಆ ಮೂಲಕ ನಾಡಿನ ಕಲಾಕ್ಷೇತ್ರದ ಬೆಳವಣಿಗೆಗೆ ಕಾರಣೀಭೂತರಾದವರು.[೩] ಇಲ್ಲಿ ಸೇವೆ ಸಲ್ಲಿಸಿದ ಮತ್ತು ಸೇವೆ ಸಲ್ಲಿಸುತ್ತಿರುವ ಶಿಕ್ಷಕ ವೃಂದದಲ್ಲಿ ಕೆಲವು ಜನ ಶ್ರೇಷ್ಠ ಕಲಾವಿದರು ಮಾತ್ರವಲ್ಲದೇ ಉತ್ತಮ ಶಿಕ್ಷಕರೂ ಆಗಿದ್ದಾರೆ.

"ಜ್ಞಾನದ ಅಂತಿಮ ಗುರಿ ಚಾರಿತ್ರ್ಯ ನಿರ್ಮಾಣದಲ್ಲಿದೆ" ಎಂದು ಮಹಾತ್ಮಾಗಾಂಧೀಜಿಯವರು ಹೇಳಿರುವರು. ಚಾರಿತ್ರ್ಯ ನಿರ್ಮಾಣವನ್ನು ನಾವು ಸೂಕ್ಷ್ಮವಾಗಿ ಗಮನಿಸಿದಾಗ ಚಿತ್ರಕಲಾ ಕ್ಷೇತ್ರ ಬಹು ಮುಖ್ಯ ಪಾತ್ರವಹಿಸುತ್ತದೆ.[೪] ಅಂಥಹ ಬಹುದೊಡ್ಡ ಕೊಡುಗೆಯನ್ನು ಹಿಂದಿನ ಕೃತಪುರ ಆಗಿದ್ದ ಇಂದಿನ ಗದಗ ಜಿಲ್ಲೆಯು ನೀಡಿದೆ. ಇದು ಸಾಮಾಜಿಕ, ಆರ್ಥಿಕ, ಸಾಹಿತ್ಯ, ಸಂಗೀತ, ರಾಜಕೀಯ, ಧಾರ್ಮಿಕ, ಕ್ರೀಡೆ, ಕಲೆ, ಚಿತ್ರಕಲೆ, ಶಿಲ್ಪಕಲೆ, ನಾಟಕ, ಶೈಕ್ಷಣಿಕ, ಕೈಗಾರಿಕೆ ಹೀಗೆ ಬಹುಮುಖ ರಂಗದಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಇದಕ್ಕೆಲ್ಲ ಅನೇಕ ಹಿರಿಯರ, ಚಿಂತಕರ ಚೇತನಗಳು ಕಾರಣೀಭೂತವಾಗಿವೆ.

---

೩. ಪಿ.ವಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರದ ಕೊಡುಗೆ ಪು.ಸಂ. ೪೦

೪. ಅಶೋಕ ಅಕ್ಕಿ (ಸಂ) ವಜ್ರವಿಜಯ ನೆನಪಿನ ಸಂಚಿಕೆ ೨೦೦೮

"ಕೃತುಪುರ, ಗದಗು ಶಿಲ್ಪಕಲಾ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಸುಂದರ ನಗರ, ಕಲ್ಯಾಣ ಚಾಲುಕ್ಯರು ನಿರ್ಮಿಸಿದ ತ್ರಿಕೋಟೇಶ್ವರ, ಸೋಮೇಶ್ವರ ಹಾಗೂ ಮಲ್ಲಿಕಾರ್ಜುನ ದೇವಾಲಯಗಳು, ಹೊಯ್ಸಳ ವಿಷ್ಣುವರ್ಧನ ನಿರ್ಮಿಸಿದ ವೀರನಾರಾಯಣ ದೇವಾಲಯ ಮೊದಲಾದವುಗಳು ತಮ್ಮ ಶ್ರೀಮಂತ ಶಿಲ್ಪಕಲಾ ವೈಭವವನ್ನು ಸಾರುತ್ತ ಇಂದಿಗೂ ಮನುಷ್ಯನನ್ನು ಮಂತ್ರಮುಗ್ಧನನ್ನಾಗಿ ಮಾಡುತ್ತವೆ. ಲಕ್ಕುಂಡಿಯ ದೇವಾಲಯಗಳು, ಜೈನ ಬಸದಿಗಳು ನಮ್ಮ ಕಣ್ಮುಂದಿವೆ.[೫] ವಾಸ್ತುಶಿಲ್ಪ ಹಾಗೂ ಶಿಲ್ಪಗಳನ್ನು ನೋಡಿದಾಗ ಯಾವುದಕ್ಕೂ ಕಡಿಮೆ ಇಲ್ಲ ಎಂಬಂತೆ ಚಿತ್ರಕಲಾ ಸಂಸ್ಕೃತಿಯು ಅಜರಾಮರವಾಗಿ ಉಳಿದು ತಮ್ಮದೇ ಆದ ಸಾಂಸ್ಕೃತಿಕ ಪರಿಸರದಲ್ಲಿ ಚಿತ್ರಕಲಾ ಶಿಕ್ಷಣ ನೀಡುವುದರ ಮೂಲಕ ಚಿತ್ರಕಲಾ ಕ್ಷೇತ್ರಕ್ಕೆ, ಚಿತ್ರಕಲಾ ಶಿಕ್ಷಣ ಸಂಸ್ಥೆಗಳಾದ ವಿಜಯ ಕಲಾಮಂದಿರ ಗದಗ, ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಗದಗ, ರವೀಂದ್ರ ಚಿತ್ರಕಲಾ ನಿಕೇತನ ಮಹಾವಿದ್ಯಾಲಯ, ರೋಣ, ಮುಂಡರಗಿಯ ಚಿತ್ರಕಲಾ ಮಹಾವಿದ್ಯಾಲಯ, ಲಕ್ಷ್ಮೇಶ್ವರದ ಚಿತ್ರಕಲಾ ಮಹಾವಿದ್ಯಾಲಯ ಇವೆಲ್ಲವೂ ಗದಗ ಜಿಲ್ಲೆಗೆ ಬಹುದೊಡ್ಡ ಕೊಡುಗೆ ನೀಡಿದ ಚಿತ್ರಕಲಾ ಶಿಕ್ಷಣ ಸಂಸ್ಥೆಗಳಾಗಿವೆ. ಅಲ್ಲದೇ ಹಲವಾರು ಕಲಾ ವಿದ್ಯಾರ್ಥಿಗಳನ್ನು ಕಲಾವಿದರನ್ನು, ಚಿತ್ರಕಲಾ ಶಿಕ್ಷಕರನ್ನು ಚಿತ್ರಕಲಾ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯಾಗಿ ನೀಡಿವೆ.

ವಿಜಯ ಕಲಾಮಂದಿರ ಗದಗ : ವಿಜಯ ಕಲಾಮಂದಿರ ಗದುಗಿನ ಚಿತ್ರಕಲೆಯನ್ನು ಹುಟ್ಟುಹಾಕಿದ ಅಥವಾ ಕಾಣಿಕೆ ನೀಡಿದ ದೇವಾಲಯವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ೧೯೪೭ರಲ್ಲಿ ಬ್ರಿಟಿಷ್‌ರಿಂದ ಸ್ವತಂತ್ರಗೊಂಡು ಭಾರತ ಸಂತೋಷ ಹಾಗೂ ಸಂಭ್ರಮದಿಂದ ತುಳುಕುತ್ತಿತ್ತು. "ಬ್ರಿಟಿಷ್‌ರ ದಾಸ್ಯದಿಂದ ಅದೇ ತಾನೇ ಮುಕ್ತವಾಗಿ ಗರಿಬಿಚ್ಚಿದ ಹಕ್ಕಿಗಳು ಭಾರತ ಮಾತೆಯ ಮಕ್ಕಳ ಮನಸ್ಸಿಗೆ ಮುದ ನೀಡಲೆಂದೋ ಅಥವಾ ಆ ಮಕ್ಕಳ ಮನದಾಳದಲ್ಲಿ ಭಾರತೀಯ ಕಲಾ ಸಂಸ್ಕೃತಿಯ ಬೆಳಕನ್ನು ಭಿತ್ತರಿಸಬೇಕೆಂದು ೧೯೪೭ರಲ್ಲಿಯೇ ಕಲಾತಪಸ್ವಿ ದಿವಂಗತ ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರವನ್ನು ಗದುಗಿನಲ್ಲಿ ಹುಟ್ಟಿಹಾಕಿದರು.[೬]

ಉತ್ತರ ಕರ್ನಾಟಕದಲ್ಲಿ ಸುಪ್ರಸಿದ್ಧ ಚಿತ್ರಕಲಾವಿದರಾದ ಎಂ.ವಿ. ಮಿಣಜಗಿ, ಡಿ.ವಿ. ಹಾಲಭಾವಿ, ಎಂ.ಎ.ಚೆಟ್ಟಿ, ಸಿ.ಎನ್. ಪಾಟೀಲ, ವಿಜಯ ಸಿಂಧೂರ, ವಿ.ಟಿ.ಕಾಳೆ, ಡಾ. ಜೆ.ಎಸ್.ಖಂಡೇರಾವ್, ಡಾ.ವಿ.ಜಿ.ಅಂದಾನಿ, ಎಂ.ಆರ್.ಬಾಳಿಕಾಯಿ ಇವರಂತಹ ಖ್ಯಾತ ಕಲಾವಿದರು ಕಲಾಕ್ಷೇತ್ರದಲ್ಲಿ ನಕ್ಷತ್ರಗಳಂತೆ ಹೊಳೆಯುತ್ತಿರುವುದನ್ನು ನಾವು ಕಾಣುತ್ತೇವೆ. ಇಂಥ ಕಲಾ ನಕ್ಷತ್ರಗಳನ್ನು ಸೃಷ್ಟಿದ ಗರಡಿಮನೆಯೇ ವಿಜಯ ಕಲಾಮಂದಿರ ಎಂದರೆ ತಪ್ಪಾಗಲಾರದು. ಇದರ ರೂವಾರಿಗಳೇ ಕಲಾತಪಸ್ವಿ ದಿವಂಗತ ಟಿ.ಪಿ. ಅಕ್ಕಿಯವರು. ಭಾರತ ಸ್ವಾತಂತ್ರ ಪೂರ್ವದಲ್ಲಿ ಮುಂಬೈ ಮಹಾನಗರದಲ್ಲಿ ಚಿತ್ರಕಲಾ ಶಿಕ್ಷಣವನ್ನು ಪಡೆದು ಬಂದ ಟಿ.ಪಿ. ಅಕ್ಕಿಯವರು ಚಿತ್ರಕಲಾ ಶಿಕ್ಷಣದ ಒಳ ಹರಿವನ್ನು ತಿಳಿದವರಾಗಿದ್ದರು. ಆ ಕಾಲದಲ್ಲಿ ಚಿತ್ರಕಲಾ ಶಿಕ್ಷಣ ಈ ಭಾಗದಲ್ಲಿ ದೊರಕದಿರುವುದನ್ನು ಮನಗಂಡಿದ್ದರು. ಮುಂಬೈ, ಮದ್ರಾಸ್ ಹಾಗೂ ಶಾಂತಿನಿಕೇತನ ಕಲ್ಕತ್ತಾಕ್ಕೆ ಚಿತ್ರಕಲಾ ಶಿಕ್ಷಣ ಪಡೆಯಲು ಹೋಗಬೇಕಾಗಿರುವುದರಿಂದ ಸಾಮಾನ್ಯ ಜನರಿಗೆ ಸಾಧ್ಯವಾಗದಿರುವುದನ್ನು ಅರಿತವರಾಗಿದ್ದರಿಂದ ಈ ಭಾಗದಲ್ಲಿ ಚಿತ್ರಕಲಾ ಶಿಕ್ಷಣ ನೀಡುವ ಸಂಸ್ಥೆಯೊಂದನ್ನು ಹುಟ್ಟುಹಾಕಿದರು.

೫. ಅಶೋಕ ಅಕ್ಕಿ ಸಂ. ವಜ್ರವಿಜಯ ನೆನಪಿನ ಸಂಚಿಕೆ ಪು. ಸಂ. ೧೭

೬ ಅಶೋಕ ಅಕ್ಕಿ ಸಂ. ವಜ್ರವಿಜಯ ನೆನಪಿನ ಸಂಚಿಕೆ ಪು. ಸಂ. ೧

ಬಹುಮುಖ ಪ್ರತಿಭೆಯ ವ್ಯಕ್ತಿತ್ವ, ಸರಳ ಸಜ್ಜನಿಕೆಯ ಮಾತುಗಾರಿಕೆ ಮತ್ತು ಸ್ನೇಹಜೀವಿಯಾದ ಟಿ.ಪಿ. ಅಕ್ಕಿಯವರು ಕಷ್ಟಪಟ್ಟು ತಮ್ಮ ಬೆವರು ಹನಿಗಳಿಂದ ಕಟ್ಟಿದ ವಿಜಯ ಕಲಾಮಂದಿರ ಸಂಸ್ಥೆ ನಾಡಿನ ಸಮಸ್ತ ಕಲಾವಿದರ ಅಶ್ರಯ ತಾಣವಾಗಿ, ಕಲೆಯನ್ನು ಕಸಿಮಾಡುವ ಕೇಂದ್ರವಾಗಿ ಬೆಳೆಯಿತು. ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಂದ ಚಿಕ್ಕ ಕಟ್ಟಡದಲ್ಲಿ ಪ್ರಾರಂಭವಾದ ಈ ಸಂಸ್ಥೆ ಬೃಹತ್ ಕಟ್ಟಡದೊಂದಿಗೆ ಬೆಳೆದಿದೆ. "ಜೀವನವೇ ಶ್ರೇಷ್ಠ ಕಲೆ, ಕಲಾಕಾರನಿಗೆ ಶ್ರೇಷ್ಠ ಕಲೆ, ಕಲಾಕಾರನಿಗೆ ಶ್ರೇಷ್ಠತೆ ದೊರೆಯಬೇಕಾದರೆ ಪರಿಶ್ರಮ ಮತ್ತು ದೇವರ ಪ್ರೇರಣೆ ಇವೆರಡೂ ಬೇಕು ಎಂದು ವಿದ್ಯಾರ್ಥಿಗಳಿಗೆ ಟಿ.ಪಿ. ಅಕ್ಕಿಯವರು ಹೇಳುತ್ತಿದ್ದರು."[೭]

ವಿಜಯ ಕಲಾಮಂದಿರದಲ್ಲಿ ಉಚ್ಚಕಲಾ ಶಿಕ್ಷಣದ ಪ್ರಾರಂಭಿಕ ಹಂತದಿಂದಲೇ ಅಂದರೆ ಎಲಿಮೆಂಟರಿ ಡ್ರಾಯಿಂಗ್ ಮತ್ತು ಪೇಂಟಿಂಗ್ ತರಗತಿಯಿಂದಲೇ ಡಿಝಾಯಿನ್, ಸ್ಟಿಲ್ ಲೈಫ್, ಯಥಾದರ್ಶನ, ಪೂರ್ಣಭಾವಚಿತ್ರಣ, ಅರ್ಧಭಾವಚಿತ್ರಣ, ಪ್ರತಿಮೆಗಳ ಅಭ್ಯಾಸ ಮೊದಲಾದ ವಿಷಯಗಳ ಅಭ್ಯಾಸ ಕಡ್ಡಾಯವಾಗಿತ್ತು. ಅಲ್ಲದೇ ಆ ಎಲ್ಲ ವಿಷಯಗಳೂ ಪರೀಕ್ಷಾ ವಿಷಯಗಳಾಗಿದ್ದವು. ಲೈಫ್ ಸ್ಟಡಿ ಅಥವಾ ಎದುರಿಗೆ ಜೀವಂತ ವ್ಯಕ್ತಿಗಳನ್ನು ಕುಳ್ಳಿರಿಸಿ ಅವರ ಭಾವಚಿತ್ರವನ್ನು ರಚಿಸುವ ಅಭ್ಯಾಸಕ್ಕಾಗಿ ಪುರುಷ ಮಾಡೆಲ್‌ಗಳು ಸಾಕಷ್ಟು ಸಿಗುತ್ತಿದ್ದವು. ಆದರೆ ಸ್ತ್ರೀ ಮಾಡೆಲ್‌ಗಳು ಸಿಗುತ್ತಿರಲಿಲ್ಲವಂತೆ. ಸ್ತ್ರೀ ಮಾಡೆಲ್‌ಗಳನ್ನು ಬಹಳಷ್ಟು ಕಷ್ಟದಿಂದ ಕರೆದುಕೊಂಡು ಬರುತ್ತಿದ್ದರು. ಸ್ತ್ರೀಯರನ್ನು ತರಲು ಹೋದ ವಿದ್ಯಾರ್ಥಿಗಳು ಅವರಿಂದ ಬೈಗಳುಗಳನ್ನೋ ಹೊಡೆತವನ್ನೋ ತಿಂದುಬರುತ್ತಿದ್ದರು. "ನಿಮ್ಮೆದುರಿಗೆ ನಾ ಕೂರುತ್ತ ಪೋಟೋ ತಗಿಸಿಕೊ ಬೇಕಾ? ಹ್ಯಾಂಗ ಕಾಣ್ತೇನಿ ನಿಮ್ಮ ಕಣ್ಣಾಗ ನಾನು? ಇನ್ನೊಂದ್ಸಲ ಹೀಂಗ ಕರಿಯಾಕ ಬಂದ್ರ ನಿಮ್ಮ ಕಾಲಗಣಿಕೀನ ಮುರದ ಕಳಸ್ತೀನಿ" ಎಂದು ದಬಾಯಿಸಿ ಕಳಿಸಿಬಿಡುತ್ತಿದ್ದರು.[೮] ಇದರಿಂದ ಕಲಾ ಅಭ್ಯಾಸಕ್ಕೆ ತೊಂದರೆಯಾಗುತ್ತಿತ್ತು.

ವ್ಯಾಪಾರಿ ಕೇಂದ್ರವಾಗಿದ್ದ ಅಂದಿನ ಗದುಗಿನ ಜನತೆಗೆ ಕಲಾ ಸಂಸ್ಕೃತಿ, ಕಲಾಶಿಕ್ಷಣ, ಕಲಾಭ್ಯಾಸಗಳು ಪರಿಚಯವೇ ಇರಲಿಲ್ಲ. ಹೀಗಾಗಿ ಜನ ಆಡುತ್ತಿದ್ದರು. ಕಲಾಸಂಸ್ಕೃತಿಯ ಬಗ್ಗೆ ಅರಿಕೆ ಇದ್ದ ಜನರೆಂದರೆ ಲಂಭಾಣಿ ಜನರೆಂದು ಹೇಳಬಹುದು. ಆದ್ದರಿಂದ ಬಹುದಿನಗಳ ನಂತರ ಲೈಫ್ ಕೂಡಲಿಕ್ಕೆ 'ಒಬ್ಬ ಲಂಬಾಣಿ ಹೆಣ್ಣುಮಗಳು ಧೈರ್ಯದಿಂದ ಮುಂದೆ ಬಂದಳು. ಅವಳನ್ನೇ ಬೇರೆ ಬೇರೆ ವೇಷಗಳನ್ನು ತೊಡಿಸಿದರು. ಕಲಾ ಸಂಸ್ಕೃತಿಯ ಅರಿವಿಲ್ಲದ ಕೆಲವರು "ಕಲಾಮಂದಿರದ ನೀತಿ–ನಡಾವಳಿ ಸರಿಯಿಲ್ಲ, ಕೂಲಿ ಮಾಡುವ ಹೆಣ್ಣುಮಕ್ಕಳನ್ನು ಪುಸಲಾಯಿಸಿ ಕರೆದುಕೊಂಡು ಹೋಗಿ ಅವರನ್ನು ಎದುರಿಗೆ ಕುಳ್ಳಿರಿಸಿ ಅವರ ಫೋಟೋ ಕೈಯಿಂದ ಬಿಡಿಸುತ್ತಾರೆ. ಇದೆಂಥ ನೀತಿ? ಅಕ್ಕಿಯವರು ಇಂಥ ಹೇಯ ಕೆಲಸಕ್ಕೆ ತರುಣರನ್ನು ತೊಡಗಿಸಿ ಗದುಗಿನ ಸಂಸ್ಕೃತಿಯನ್ನು ಹಾಳು ಮಾಡುತ್ತಿದ್ದಾರೆ" ಎಂದು ಆಡಿಕೊಂಡರು. ಅವಹೇಳನವನ್ನು ಮಾಡಿದರು. ಇದನ್ನು ತಿಳಿದ ಅಕ್ಕಿಯವರು ಕೆಲವು ತಮ್ಮ ಸಹೋದ್ಯೋಗಿಗಳು "ಅಕ್ಕಿಯವರೆ ನೀವು ಕಲಾಮಂದಿರ ಮಾಡಿ ನಿಮ್ಮ ಹೆಸರಿಗೆ ಕಳಂಕ ತಂದುಕೊಳ್ಳುತ್ತಿದ್ದೀರಿ. ಸುಮ್ಮನೇ ಈ ಕಲಾಸಾಲೀನ ಮುಚ್ಚಿ ಥಣ್ಣಗ ನಿಶ್ಚಿಂತೆಯಾಗಿ ಡ್ರಾಯಿಂಗ್ ಮಾಸ್ತರ ಕೆಲಸಾ ಮಾಡಿಕೊಂಡು ಹೋಗ್ರಿ" ಎಂದು ಉಪದೇಶಗಳನ್ನು ನೀಡಿದರು. ಅವರ ಉಪದೇಶ

೭ ಅಶೋಕ ಅಕ್ಕಿ ಸಂ. ವಜ್ರವಿಜಯ ನೆನಪಿನ ಸಂಚಿಕೆ ಪು.ಸಂ. ೨

೮. ಅಶೋಕ ಅಕ್ಕಿ ಸಂ (ಲೇ) ಶ್ರೀ ವಿ.ಟಿ.ಕಾಳೆ ವಜ್ರವಿಜಯ ನೆನಪಿನ ಸಂಚಿಕೆ ಪು.ಸಂ ೨೦

ಕೇಳದ ಅಕ್ಕಿಯವರು "ನೋಡ್ರಿ ತುಂಗಭದ್ರಾ ನದೀಗೆ ಆಣೆಕಟ್ಟು ಕಟ್ಟಿದರು. ಅದನ್ನು ಕಟ್ಟೋವಾಗ ಅದರ ಮುಖ್ಯ ಇಂಜಿನೀಯರ್ ಒಬ್ಬರು ದೊಡ್ಡ ಕಬ್ಬಿಣದ ಗರ್ಡ್‌ರ್ ಬಿದ್ದು ಸತ್ತುಹೋದರು. ಹಾಗಂತ ಆಣೆಕಟ್ಟು ಕಟ್ಟೋದನ್ನು ನಿಲ್ಲಿಸಿದರೇನು? ಹಾಗೆನೇ ಕಲಾ ಸಂಸ್ಕೃತಿಯ ಪರಿಚಯವಿಲ್ಲದ ಜನತೆಗೆ ಅದರ ಅರಿವು ಮೂಡಿಸುವುದು ಒಂದು ಆಣೆಕಟ್ಟನ್ನು ಕಟ್ಟಿದಂತೆಯೇ. ಅದರ ದಾರಿಯಲ್ಲಿ ಬರುವ ಅಡತಡೆಗಳನ್ನು, ಅಪವಾದ, ನಿಂದನೆಗಳನ್ನು ಸಹಿಸಿಕೊಂಡಲ್ಲದೇ ನನ್ನ ಕಲಾಶಾಲೆಯಂಥ ಎಂದು ತಿರುಗೇಟು ನೀಡಿದರು. ಶ್ರೀ ಟಿ.ಪಿ. ಅಕ್ಕಿಯವರು ಕಲಾಶಾಲೆಯನ್ನು ಒಂದು ದೇವ ಮಂದಿರವನ್ನು ಕಟ್ಟುವುದು ಹೇಗೆ ಸಾಧ್ಯ?" ಎಂದು ತಿರುಗೇಟು ನೀಡಿದರು.[೯] ಶ್ರೀ ಟಿ.ಪಿ.ಅಕ್ಕಿಯವರು ಕಲಾಶಾಲೆಯನ್ನು ಉತ್ತಮ ರೀತಿಯಲ್ಲಿ ಬೆಳಸಬೇಕು ಎಂದು ನಿರ್ಧಾರ ಮಾಡಿದರು.

ಗದುಗು ಆಗಿನ ಧಾರವಾಡ ಜಿಲ್ಲೆಯ ಒಂದು ತಾಲೂಕಾ ಸ್ಥಳವಾಗಿತ್ತು. ಆದ್ದರಿಂದ ಎಲ್ಲ ಶಿಕ್ಷಣ ಸಂಸ್ಥೆಗಳು ಧಾರವಾಡ ಜಿಲ್ಲಾ ಶಿಕ್ಷಣದ ಆಡಳಿತಕ್ಕೆ ಒಳಪಟ್ಟಿದ್ದವು. ಧಾರವಾಡ ಜಿಲ್ಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಾಗಿದ್ದ ಶ್ರೀ ಕೊಪ್ಪಿಕರ, ಶ್ರೀ ಪ.ಗು. ಹಂದ್ರಾಳ, ಶ್ರೀ ತೇರಗಾಂವಕರ ಮೊದಲಾದವರು ಅಕ್ಕಿಯವರ ಸಾಹಸವನ್ನು ಮೆಚ್ಚಿಕೊಂಡು ಅವರ ಕಲಾ ಶಾಲೆಯ ಅಭಿವೃದ್ಧಿಗಾಗಿ ಬೆಂಬಲಿಗರಾಗಿದ್ದರು. ಸರಕಾರದ ಸರ್ವ ಸವಲತ್ತುಗಳು ಅಕ್ಕಿಯವರಿಗೆ ದೊರೆಯವಂತೆ ಮುತುವರ್ಜಿ ವಹಿಸಿದ್ದರು.[೧೦] ಇದರಿಂದ ಯಾವುದೇ ಶಾಲಾ ಆಡಳಿತಕ್ಕೆ ತೊಂದರೆಯಾಗದಂತೆ ಒಬ್ಬ ಉತ್ತಮ ಆಡಳಿತಗಾರರಾಗಿ ಹಂತ ಹಂತವಾಗಿ ವಿಜಯ ಕಲಾಮಂದಿರವನ್ನು ಬೆಳೆಸತೊಡಗಿದರು.

ಮುಂಬೈನ ಜೆ.ಜೆ. ಕಲಾಶಾಲೆಯಲ್ಲಿ ಅಭ್ಯಾಸ ಗೈದ ಕಲಾವಿದ ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀ ಎಂ.ಎ.ಚೆಟ್ಟಿಯವರು ಗದಗನಲ್ಲಿಯೇ ವಾಸವಾಗಿದ್ದರೂ ಕಲಾಶಾಲೆಯನ್ನು ಪ್ರಾರಂಭಿಸುವ ಸಾಹಸಕ್ಕೆ ಕೈಹಾಕಿರಲಿಲ್ಲ. ಆದರೂ ಮನೆಯ್ ಮುಂದೆ 'ಮುಂಬಯಿ ಚಿತ್ರಕಲಾ ಶಾಲೆ' ಎಂದು ಒಂದು ಬೋರ್ಡನ್ನು ಚೆಟ್ಟಿಯವರು ತೂಗುಹಾಕಿದ್ದರು. ಒಬ್ಬ ಕಲಾವಿದ್ಯಾರ್ಥಿಯೂ ಅವರ ಬಳಿ ಕಲಾ ಅಭ್ಯಾಸ ಮಾಡಲು ಸುಳಿದಿರಲಿಲ್ಲ. ಇಂಥ ವಾತಾವರಣದಲ್ಲಿ ಕಲಾಶಾಲೆಯನ್ನು ಪ್ರಾರಂಭಿಸುವುದು ಅಕ್ಕಿಯವರಿಗೂ ಕಷ್ಟಸಾಧ್ಯಾದ ಮಾತಾಗಿತ್ತು. ಅಕ್ಕಿ ಅವರ ಧೋರಣೆಯನ್ನು ತಿಳಿದ ಕೆಲವರು ಅವರ ಸಹೋದ್ಯೋಗಿಗಳೇ ಅಪಹಾಸ್ಯ ಮಾಡಿ ನಕ್ಕಿದ್ದರು. "ಚೆಟ್ಟಿಯವರಂತಹ ಒಬ್ಬ ಶ್ರೇಷ್ಠ ಚಿತ್ರಕಲಾವಿದರಿಂದಲೇ ಕಲಾಶಾಲೆಯನ್ನು ಪ್ರಾರಂಭಿಸುವುದು ಸಾಧ್ಯವಾಗಿಲ್ಲ. ಇನ್ನು ಕೇವಲ ಚಿತ್ರಕಲಾ ಶಿಕ್ಷಕರಾದ ಮಾತ್ರಕ್ಕೆ ಕಲಾವಿದರಲ್ಲದ ಅಕ್ಕಿ ಅವರಿಂದ ಸಾಧ್ಯವಾದೀತೇ ? ಎಂದು ಅನೇಕರು ಅನುಮಾನಪಟ್ಟದ್ದೂ ಉಂಟು.[೧೧] ಎಂದು ಶ್ರೀ ವಿ.ಟಿ.ಕಾಳೆಯವರು ಹೇಳಿದ್ದಾರೆ.

"ಕಲೆಯು ತನ್ನ ಉನ್ನತ ಆದರ್ಶಗಳಿಂದಲೇ ತನ್ನ ಧ್ಯೇಯವನ್ನು ಸಾಧಿಸಬೇಕೆಂಬುದು ಮಹಾತ್ಮಾಗಾಂಧೀಜಿಯವರ ಮತವಾಗಿತ್ತು. ಇದು ಟಿ.ಪಿ. ಅಕ್ಕಿಯವರ ಧ್ಯೇಯವೂ ಆಗಿತ್ತು"[೧೨] ಆದ್ದರಿಂದ ಅಕ್ಕಿವರು ಕರ್ನಾಟಕದಲ್ಲಿ ಉತ್ತಮವಾದ ಕಲಾಶಾಲೆಯನ್ನು ನಿರ್ಮಾಣ ಮಾಡಬೇಕೆಂಬ

---

೯. ಅಶೋಕ ಅಕ್ಕಿ ಸಂ (ಲೇ) ಶ್ರೀ ವಿ.ಟಿ.ಕಾಳೆ ವಜ್ರವಿಜಯ ನೆನಪಿನ ಸಂಚಿಕೆ ಪು.ಸಂ ೨೦

೧೦. ಅಶೋಕ ಅಕ್ಕಿ ಸಂ (ಲೇ) ಶ್ರೀ ವಿ.ಟಿ.ಕಾಳೆ ವಜ್ರವಿಜಯ ನೆನಪಿನ ಸಂಚಿಕೆ ಪು.ಸಂ ೨೦

೧೧. ಅಶೋಕ ಅಕ್ಕಿ ಸಂ (ಲೇ) ಶ್ರೀ ವಿ.ಟಿ.ಕಾಳೆ ವಜ್ರವಿಜಯ ನೆನಪಿನ ಸಂಚಿಕೆ ಪು.ಸಂ ೨೦

೧೨. ಆರ್. ಜಿ. ರಾಯ್ಕರ ಪಿ.ಟಿ. ಅಕ್ಕಿ ಕ.ಲ.ಕ. ಅಕಾಡೆಮಿ ಬೆಂಗಳೂರು ಪು.ಸಂ.೯

ಉದ್ಧೇಶದಿಂದ ಕೆಲವು ವಿದ್ಯಾರ್ಥಿಗಳಿಂದ ತಮ್ಮ ಹೈಸ್ಕೂಲಿನಲ್ಲಿಯೇ ಉಚ್ಚಕಲಾ ತರಗತಿ ಪ್ರಾರಂಭಿಸಿದರು. ೧೯೩೭ರಲ್ಲಿ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಪ್ರಾರಂಭಿಸಿದರು. ಇದರಿಂದ ಅನೇಕ ವಿದ್ಯಾರ್ಥಿಗಳಿಗೆ ಅನುಕೂಲವಾಗಿತ್ತು. ಇದನ್ನು ನೋಡಿ ಟಿ.ಪಿ. ಅಕ್ಕಿಯವರು ಯಾಕೆ ಕಲಾಶಾಲೆಯನ್ನು ಪ್ರಾರಂಭಿಸಬಾರದು ಎಂದು ತಮ್ಮ ಸ್ನೇಹಿತರ ಜೊತೆ ಚರ್ಚಿಸಿ ಈ ಕಲಾಶಾಲೆಗೆ ತಮ್ಮ ಪ್ರೀತಿಯ ಪುತ್ರ 'ವಿಜಯ' ಅವನ ಹೆಸರೇ ಇಡಬೇಕೆಂದು ನಿರ್ಧರಿಸಿ "ವಿಜಯ ಕಲಾಮಂದಿರ" ಎಂಬ ಹೆಸರನ್ನು ಇಟ್ಟರು.[೧೩]

೧೯೪೦ರ ದಶಕದಲ್ಲಿ ಧಾರವಾಡ, ಬೆಳಗಾವಿ, ಕಾರವಾರ, ಬಿಜಾಪೂರ ಜಿಲ್ಲೆಗಳು ಮುಂಬಯಿ ಪ್ರಾಂತ್ಯಕ್ಕೊಳಪಟ್ಟಿದ್ದವು. ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಯು ಮಾತ್ರ ಮುಂಬಯಿ ಸರಕಾರದ ಕಲಾ ಶಿಕ್ಷಣದ ಪ್ರಸಿದ್ಧ ಕೇಂದ್ರವಾಗಿತ್ತು.[೧೪] ಆದ್ದರಿಂದ ಮುಂಬೈ ಪ್ರಾಂತದ ಯಾವುದೇ ಸ್ಥಳಗಳಲ್ಲಿ ಇದ್ದ ಕಲಾಶಾಲೆಗಳು ವಿದ್ಯಾರ್ಥಿಗಳನ್ನು ಉಚ್ಚಕಲಾ ಪರೀಕ್ಷೆ ಕಟ್ಟಲು ಮುಂಬಯಿಗೆ ಕಳುಹಿಸುತ್ತಿದ್ದರು. ಪರೀಕ್ಷೆಗೆ ನಿಯಮಾನುಸಾರ ಪ್ರತಿ ವಿದ್ಯಾರ್ಥಿಗಳು ಕೆಲವು ಚಿತ್ರ ಬಿಡಿಸಿ ಕಳಿಸಿ, ಪ್ರತಿ ಪರೀಕ್ಷೆಗೆ ಸರ್ ಜೆ.ಜೆ. ಕಲಾಶಾಲೆಯಿಂದ ಅನುಮತಿ ಪಡೆದು ನಂತರವೇ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿತ್ತು. ಹೀಗಾಗಿ ಎಲ್ಲ ಕಡೆಗೂ ಉಚ್ಚ ಕಲಾ ವಿದ್ಯಾರ್ಥಿಗಳ ಸಂಖ್ಯೆಯು ಕಮ್ಮಿಯಾಗತೊಡಗಿತ್ತು. ಪರೀಕ್ಷೆ ಸಲುವಾಗಿ ಮುಂಬಯಿಗೆ ಹೋಗಿ ಒಂದೆರಡು ದಿನ ಉಳಿದು ಖರ್ಚುಮಾಡಿ ಬರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಅಕ್ಕಿಯವರ ಉತ್ಸಾಹ ಕುಗ್ಗುತ್ತಿರುವುದನ್ನು "ನೂತನ ಕಲಾಮಂದಿರ" ವೈಭವದಿಂದ ನಡೆಸಿಕೊಂಡು ಹೋಗುತ್ತಿದ್ದ ಶ್ರೇಷ್ಠ ಕಲಾಗುರು ಜೆ.ಎಸ್. ದಂಡಾವತಿಮಠ ಅವರು ಅಕ್ಕಿಯವರಿಗೆ ಎಲ್ಲ ರೀತಿಯ ಸಹಕಾರ, ಸಹಾಯ ಮಾಡುವ ಬಗ್ಗೆ ಧೈರ್ಯ ಸ್ಥೈರ್ಯಗಳನ್ನು ನೀಡಿ, ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕಳಿಸಲು ಚೈತನ್ಯವನ್ನು ತುಂಬಿದರು.[೧೫] ಇದರಿಂದ ಸ್ಫೂರ್ತಿಗೊಂಡ ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರಕ್ಕೆ ಉತ್ತಮವಾದ ಕಲಾವಿದ ಕಲಾಶಿಕ್ಷಕರನ್ನು ಹುಡುಕಲು ಪ್ರಾರಂಭಿಸಿದರು. "ಪೇಂಟಿಂಗ್ ಡಿಪ್ಲೋಮಾ ಮತ್ತು ಆರ್ಟ್ ಮಾಸ್ಟರ್ ಪದವೀಧರರನ್ನು ನೇಮಿಸಬೇಕೆಂದು ಹುಡುಕುವಾಗ ಸಿ.ಎನ್. ಪಾಟೀಲರವರು ಟಿ.ಪಿ. ಅಕ್ಕಿಯವರ ಕಣ್ಣಿಗೆ ಬಿದ್ದರು, ಅವರಲ್ಲಿ ಇರುವ ಕಲಾಪ್ರತಿಭೆಯನ್ನು ಗುರುತಿಸಿ ಅಕ್ಕಿಯವರು ಈತನನ್ನು ಕಲಾಪದವೀಧರನನ್ನಾಗಿ ಮಾಡಿ, ತಮ್ಮ ಶಾಲೆಗೆ ಶಿಕ್ಷಕನನ್ನಾಗಿ ನೇಮಿಸಿಕೊಳ್ಳಬೇಕೆಂದುಕೊಂಡರು. ತಾವೇ ಸ್ವತಃ ಪ್ರಯತ್ನ ಮಾಡಿ ಸಿ.ಎನ್. ಪಾಟೀಲರಿಗೆ ಸಿರಸಂಗಿ ಲಿಂಗರಾಜ ಟ್ರಸ್ಟನಿಂದ ದತ್ತಿಯ ಶಿಷ್ಯವೇತನವನ್ನು ದೊರಕಿಸಿಕೊಟ್ಟರು. ಹಾಗಾಗಿ ಮುಂಬಯಿ ಸರ್ ಜೆ.ಜೆ. ಕಲಾಶಾಲೆಗೆ ಕಲಿಯಲು ಕಳುಹಿಸಿಕೊಟ್ಟರು. ಅಲ್ಲಿ ಉಳಿಯುವ ಇತರೇ ಎಲ್ಲ ವ್ಯವಸ್ಥೆಯನ್ನು ತಾವೇ ಮುಂಬಯಿಗೆ ಹೋಗಿ ಮಾಡಿ ಬಂದರು.[೧೬] ಇದರಿಂದ ಅಕ್ಕಿಯವರಿಗೆ ಸಿ.ಎನ್. ಪಾಟೀಲರ ಮೇಲಿರುವ ಪ್ರೀತಿ, ವಿಶ್ವಾಸ ಎಷ್ಟಿತ್ತೆಂಬುದು ಇದರಿಂದ ತಿಳಿಯುತ್ತದೆ. ಸಿ.ಎನ್.ಪಾಟೀಲರು ಗುರುವಿಗೆ ತಕ್ಕ ಶಿಷ್ಯರಾಗಿ ಉತ್ತಮ ಕಲಾಪ್ರತಿಭೆಯಾಗಿ ಬೆಳೆದರು.

---

೧೩. ಆರ್. ಜಿ. ರಾಯ್ಕರ ಪಿ.ಟಿ. ಅಕ್ಕಿ ಕ.ಲ.ಕ. ಅಕಾಡೆಮಿ ಬೆಂಗಳೂರು ಪು.ಸಂ.೯

೧೪. ಆರ್. ಜಿ. ರಾಯ್ಕರ ಪಿ.ಟಿ. ಅಕ್ಕಿ ಕ.ಲ.ಕ. ಅಕಾಡೆಮಿ ಬೆಂಗಳೂರು ಪು.ಸಂ.೯

೧೫. ಆರ್. ಜಿ. ರಾಯ್ಕರ ಪಿ.ಟಿ. ಅಕ್ಕಿ ಕ.ಲ.ಕ. ಅಕಾಡೆಮಿ ಬೆಂಗಳೂರು ಪು.ಸಂ.೧೦

೧೬. ಆರ್. ಜಿ. ರಾಯ್ಕರ ಪಿ.ಟಿ. ಅಕ್ಕಿ ಕ.ಲ.ಕ. ಅಕಾಡೆಮಿ ಬೆಂಗಳೂರು ಪು.ಸಂ.೧೧

ವಿಶ್ವವಿಖ್ಯಾತ ಕಲಾವಿದರೆಂದು ವಿ.ಬಿ. ಪರಬ, ಲಕ್ಷ್ಮಣ ಐ, ಪೋಪಳೆ, ಅಕಬರ ಪದ್ಮಶ್ರೀ, ಸಸ್ತಿಕ, ಭಾವೆ ಮುಂತಾದ ಸಹಪಾಟಿಗಳ ಜೊತೆಯಲ್ಲಿಯೇ ಸಿ.ಎನ್.ಪಾಟೀಲರು ಕಲಿತು ಕಲಾಪ್ರತಿಭೆಯನ್ನು ಬೆಳೆಸಿಕೊಳ್ಳತ್ತ ಖ್ಯಾತಿ ಪಡೆದರು.

"ಕಲೆಯ ಬಲೆ ಬೀಸಿ ಕಲೆ ನೀಡಿದಾ ಮಹನೀಯರೇ ಲಲಿತಕಲೆಯನ್ನು ಬೀರಿನಲಿಯ ತೊಡಗಿಸಿದವರೇ ಸಲುಗೆಯಲಿ ಶಿಷ್ಯರನ್ನು ಕರುಣದಿಂ ಕಂಡವರೇ"[೧೭] ಎಂದು ಶ್ರೀ ಟಿ.ಪಿ. ಅಕ್ಕಿಯವರು ಕವನದಂತೆ ತಮ್ಮ ಶಿಷ್ಯರಿಗೆ ಕಂಡವರು. ಅಕ್ಕಿಯವರು ಸಿ.ಎನ್.ಪಾಟೀಲರನ್ನು ವಿಜಯ ಕಲಾಮಂದಿರದ ಪ್ರಾಂಶುಪಾಲರನ್ನಾಗಿ ನೇಮಕ ಮಾಡಿಕೊಂಡರು. ಶ್ರೀ ಎ.ಆಯ್.ಕವಾನಗಾರ ಅವರನ್ನು ಉಪನ್ಯಾಸಕರಾಗಿ ಆಯ್ಕೆ ಮಾಡಿಕೊಂಡು ಕಲಾಮಂದಿರವನ್ನು ಉತ್ತಮರೀತಿಯಲ್ಲಿ ನಡೆದುಕೊಂಡು ಹೋಗುವಂತೆ ಮಾಡಿದರು. "ಅಂದಿನ ಮೇವಿನ ಬಜಾರದ ಕೊನೆಯಲ್ಲಿ ಮಹಾಲಕ್ಷ್ಮೀ ಸಿನಿಮಾ ಥೀಯೇಟರಿಗೆ ಹೊಂದಿಕೊಂಡಂತಿರುವ ಒಂದು ಶಾಲೆ ಖಾಲಿಯಾಗಿದೆ ಎಂದು ತಿಳಿಯಿತು. ಅದು ಅತೀ ಚಿಕ್ಕ ಕಟ್ಟಡ. ಎದುರಿಗೆ ತಿಪ್ಪೆಗುಂಡಿಗಳು, ಬಲಗಡೆಗೆ ಒಂದೊಮ್ಮೆ ಸ್ಮಶಾನವಾಗಿದ್ದ ಖಾಲಿಜಾಗ, ಅದರಲ್ಲಿಯೇ ಗದುಗಿನ ತೋಂಟದಾರ್ಯ ಮಠದವರು ಬಡ ವಿದ್ಯಾರ್ಥಿಗಳಿಗಾಗಿ ನಡೆಸುತ್ತಿದ್ದ ಬೋರ್ಡಿಂಗ್ ಹೌಸ್, ಅಲ್ಲಿರುವ ಈ ವ್ಯಾಯಾಮ ಶಾಲೆಯನ್ನೇ ವಿಜಯ ಕಲಾಮಂದಿರವನ್ನಾಗಿ ಪರಿವರ್ತಿಸಿಕೊಳ್ಳಬೇಕು ಎಂದುಕೊಂಡ ಅಕ್ಕಿಯವರು ವ್ಯಾಯಾಮ ಶಾಲೆಯ ಮೇಲುಸ್ತುವಾರಿಯನ್ನೂ ನೋಡಿಕೊಳ್ಳುತ್ತಿದ್ದ ಗದುಗಿನ ಶ್ರೀಮಂತ ವ್ಯಾಪಾರಿಯಾಗಿದ್ದ ಶ್ರೀ ಬುಳ್ಳಾ ಸಿದ್ದಂಣನವರನ್ನು ಕಾಣಲು ತಮ್ಮ ಸಹೋದ್ಯೋಗಿಗಳನ್ನು ಕರೆದುಕೊಂಡು ಹೋದರು. ಗದುಗಿನ ಕರ್ನಾಟಕ ವ್ಯಾಯಾಮ ಶಾಲೆಯನ್ನು ವಿಜಯ ಕಲಾಮಂದಿರವನ್ನಾಗಿ ಮಾರ್ಪಡಿಸಲು ಒಪ್ಪಿಗೆ ಸೂಚಿಸಿದರು. ಇದರಿಂದ ವಿಜಯ ಕಲಾಮಂದಿರಕ್ಕೆ ಒಂದು ನೆಲೆ ಸಿಕ್ಕಿತು.[೧೮]

ಇದರಿಂದ ವಿದ್ಯಾರ್ಥಿಗಳ ಸಂಖ್ಯೆ ನಾಲ್ಕರಿಂದ ಆರಕ್ಕೆ, ಆರರಿಂದ ಎಂಟಕ್ಕೆ ಏರತೊಡಗಿತ್ತು. ಉಚ್ಚ ಕಲಾಶಿಕ್ಷಣದ ಪ್ರಾರಂಭಿಕ ಹಂತದಿಂದಲೇ ಅಂದರೆ ಎಲಿಮೆಂಟರಿ ಡ್ರಾಯಿಂಗ್ ಮತ್ತು ಪೇಂಟಿಂಗ್ ತರಗತಿಗಳು ಪ್ರಾರಂಭವಾದವು.

"ಜೀವನವೇ ಶ್ರೇಷ್ಠ ಕಲೆ, ಕಲಾಕಾರನಿಗೆ ಶ್ರೇಷ್ಠತೆ ದೊರೆಯಬೇಕಾದರೆ ಪರಿಶ್ರಮ ಮತ್ತು ದೇವರ ಪ್ರೇರಣೆ ಎರಡೂ ಬೇಕು ಎಂದುಕೊಂಡ ಅಕ್ಕಿಯವರು ಅಂದು ಕಲಾಜ್ಞಾನದ ಮೂಲಕ ಬಿತ್ತಿದ ಬೀಜ ಇಂದು ಬೆಳೆದು ಹೆಮ್ಮರವಾಗಿ ದೇಶದ ತುಂಬೆಲ್ಲ ತನ್ನ ಪ್ರತಿಭಾ ಕಂಪನ್ನು ಬೀರಿದೆ.[೧೯] ಅನೇಕ ಮಹನೀಯರು ವಿಜಯ ಕಲಾಮಂದಿರಕ್ಕೆ ತನುಮನಧನದಿಂದ ಸಹಾಯ ಸಹಕಾರ ನೀಡಿದ್ದಾರೆ. ಅಂಥವರಲ್ಲಿ ಶ್ರೀ ಟಿ.ಪಿ. ಅಕ್ಕಿಯವರ ಶಿಷ್ಯರಾದ ಶ್ರೀಯುತ ಎಸ್.ಟಿ. ಹಿರೇಮಠ, ಶ್ರೀ ಜೆ.ಡಿ. ಮೇರವಾಡೆ ಹಾಗೂ ಆತ್ಮೀಯರಾದ ಜರ್ಮನಿಯ ಡಾ. ಶಿವರಾಮ ಕಿರುಮಕ್ಕಿಯವರು.

---

೧೭. ಆರ್. ಜಿ. ರಾಯ್ಕರ ಪಿ.ಟಿ. ಅಕ್ಕಿ ಕ.ಲ.ಕ. ಅಕಾಡೆಮಿ ಬೆಂಗಳೂರು ಪು.ಸಂ.೧೧

೧೮. ಅಶೋಕ ಅಕ್ಕಿ (ಸಂ) ವಿ.ಟಿ. ಕಾಳೆ ವಜ್ರವಿಜೇಯ ನೇನಪಿನ ಸಂಚಿಕೆ ಪು.ಸಂ. ೧೯

೧೯. ಅಶೋಕ ಅಕ್ಕಿ (ಸಂ) ವಜ್ರವಿಜಯ ನೆನಪಿನ ಸಂಚಿಕೆ ಪು.ಸಂ. ೨

ಶ್ರೀ ಟಿ.ಪಿ.ಅಕ್ಕಿ, ಶ್ರೀ ಸಿ.ಎನ್. ಪಾಟೀಲ, ಶ್ರೀ ಎಂ.ಎ. ಚೆಟ್ಟಿ, ಶ್ರೀ ಎ.ಆಯ್. ಕಮಾನಗಾರ, ಕಾಮಾಜಿ, ಶ್ರೀ ಎಸ್.ಎಂ. ಶಿರಹಟ್ಟಿ, ಶ್ರೀ ಎಲ್.ಎ. ಕಲಬುರ್ಗಿ, ಶ್ರೀ ಕೆ.ಎ. ಚೆಟ್ಟಿ, ಶ್ರೀ ವಸಂತ ಜಾಧವ, ಶ್ರೀ ಎಂ.ಆರ್. ಬಾಗವಾನ ಶ್ರೀ ಆರ್.ಜಿ. ರಾಯ್ಕರ, ಶ್ರೀ ವಿ.ಪಿ.ಕಾಳೆ, ಶ್ರೀ ಎಸ್.ಕೆ. ಹೂಗಾರ, ಶ್ರೀ ಜಿ.ಬಿ. ನವಲಗುಂದ ಶ್ರೀ ವಿ.ವಿ. ಗುಗ್ಗರಿ, ಶ್ರೀ ವಸಂತ ಅಕ್ಕಿ, ಶ್ರೀ ಕೆ.ವಿ. ಕುಂದಗೋಳ, ಮುಂತಾದ ಹಿರಿಯ ಕಲಾವಿದರು ತಮ್ಮಲ್ಲಿರುವ ಕಲಾಸಂಪತ್ತನ್ನು ಉಪನ್ಯಾಸದ ಮೂಲಕ ವಿದ್ಯಾರ್ಥಿಗಳಿಗೆ ಧಾರೆಎರೆದು ಈ ಸಂಸ್ಥಾಗೊಂದು, ಭದ್ರ ಬುನಾದಿ ಹಾಕಿಕೊಟ್ಟು ಸೇವಾ ನಿವೃತ್ತಿಯಾಗಿದ್ದಾರೆ.[೨೦]

ವಿಜಯ ಕಲಾಮಂದಿರ ಸಂಸ್ಥೆಯಲ್ಲಿ ನಡೆದ ಚಿತ್ರಕಲಾ ಕೋರ್ಸುಗಳು :

ಬೆಂಗಳೂರು ಕೆ.ಎಸ್.ಇ.ಇ. ಬೋರ್ಡ್ ನಿಂದ ನಡೆದ ಕೊರ್ಸ್‌ಗಳು :

೧. ಚಿತ್ರಕಲಾ ಶಿಕ್ಷಣದಲ್ಲಿ ಎಲಿಮೆಂಟರಿ

೨. ಇಂಟರ್‌ಮಿಡಿಯಟ್

೩. ೩ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

೪. ೪ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

೫. ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

ಚಿತ್ರಕಲಾ ಶಿಕ್ಷಕರ ತರಬೇತಿ ಕೋರ್ಸುಗಳಾದ

೧. (ಡಿ.ಟಿ.ಸಿ) ಡ್ರಾಯಿಂಗ್ ಟೀಚರ ಕೋರ್ಸ್ – ೧೯೬೧

೨. (ಡಿ.ಎಂ.ಸಿ) ಡ್ರಾಯಿಂಗ್ ಮಾಸ್ಟರ್ ಕೋರ್ಸ್ – ೧೯೮೧

೩. (ಎ.ಎಂ.ಸಿ) ಆರ್ಟ್ ಮಾಸ್ಟರ್ ಕೋರ್ಸ್ – ೧೯೮೨

೪. (ಎ.ಟಿ.ಸಿ) ಆರ್ಟ್ ಟೀಚರ್ ಕೋರ್ಸ್

ಕನ್ನಡ ವಿಶ್ವವಿದ್ಯಾಲಯ ಹಂಪಿ ವಿಶ್ವವಿದ್ಯಾಲಯದಿಂದ ನಡೆಯುವ ಕೊರ್ಸ್‌ಗಳು

೧. ದೃಶ್ಯಕಲಾ ಮೂಲ ಪ್ರಥಮ ವರ್ಷ

೨. ದೃಶ್ಯಕಲಾ ಮೂಲ ದ್ವಿತೀಯ ವರ್ಷ

೩. ಬಿ.ವಿ.ಎ. ಪ್ರಥಮ ವರ್ಷ (ಚಿತ್ರಕಲಾ ಪದವಿ)

೪. ಬಿ.ವಿ.ಎ ದ್ವಿತೀಯ ವರ್ಷ (ಚಿತ್ರಕಲಾ ಪದವಿ)

೫. ಬಿ.ವಿ.ಎ. ತೃತೀಯ ವರ್ಷ (ಚಿತ್ರಕಲಾ ಪದವಿ)

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ನಡೆಸುವ ಚಿತ್ರಕಲಾ ಕೋರ್ಸುಗಳು :

೧. ಬಿ.ಎಫ್.ಎ. ಪ್ರಥಮ ವರ್ಷ ಪದವಿ

೨. ಬಿ.ಎಫ್.ಎ. ದ್ವಿತೀಯ ವರ್ಷ ಪದವಿ

೩. ಬಿ.ಎಫ್.ಎ. ತೃತೀಯ ವರ್ಷ ಪದವಿ

---

೨೦. ಅಶೋಕ ಅಕ್ಕಿ (ಸಂ) ವಜ್ರವಿಜಯ ನೆನಪಿನ ಸಂಚಿಕೆ ಪು.ಸಂ. ೩

೪. ಬಿ.ಎಫ್.ಎ. ಪ್ರಥಮ ವಾಣಿಜ್ಯ ಪದವಿ

೫. ಬಿ.ಎಫ್.ಎ. ದ್ವಿತೀಯ ವಾಣಿಜ್ಯ ಪದವಿ

೬. ಬಿ.ಎಫ್.ಎ. ತೃತೀಯ ವಾಣಿಜ್ಯ ಪದವಿ

೭. ಎಂ.ಎಫ್.ಎ. ಚಿತ್ರಕಲಾ ಸ್ನಾತಕೋತ್ತರ ಪದವಿ ಕೋರ್ಸು[೨೧]

ಹೀಗೆ ಚಿತ್ರಕಲೆಯಲ್ಲಿ ಪದವಿ, ವಾಣಿಜ್ಯ ಪದವಿ, ಸ್ನಾತಕೋತ್ತರ ಪದವಿ, ಪ್ರಾಥಮಿಕ ಶಿಕ್ಷಕರ ತರಬೇತಿ, ಪ್ರೌಢಶಾಲಾ ಶಿಕ್ಷಕರ ತರಬೇತಿ ವರ್ಗಗಳನ್ನು ಪ್ರಾರಂಭಿಸಿ ನಾಡಿನಾದ್ಯಂತ ಅನೇಕ ವಿದ್ಯಾರ್ಥಿಗಳನ್ನು ಚಿತ್ರಕಲಾ ಶಿಕ್ಷಕರನ್ನು ತಯಾರಿಸಿದ ಕೀರ್ತಿ ವಿಜಯ ಕಲಾಮಂದಿರದ್ದಾಗಿದೆ. ಇಲ್ಲಿ ಫೌಂಡೇಶನ್ ತರಗತಿಯಿಂದ ಸ್ನಾತಕೋತ್ತರ ಪದವಿಯ ವರೆಗೆ ಚಿತ್ರಕಲೆಯ ಶಿಕ್ಷಣ ದೊರೆಯವುದು ವಿಶೇಷ. ಸ್ವಂತ ಉದ್ಯೋಗ ಕೈಗೊಳ್ಳಲು ಬರುವಂತೆ ಕಂಪ್ಯೂಟರ ಗ್ರಾಫಿಕ್ಸ್, ಫೋಟೋಗ್ರಾಫಿಕ್‌ಗಳಂತಹ ವಿಷಯಗಳನ್ನು ಇದರೊಂದಿಗೆ ಅಳವಡಿಸಿ, ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಶಿಕ್ಷಣ ನೀಡಲಾಗುತ್ತದೆ. "ಇಲ್ಲಿಯ ಗುಣಾತ್ಮಕ ಶಿಕ್ಷಣ ಹಾಗೂ ಸೌಕರ್ಯಗಳನ್ನು ಮಾಡಿದ (ನ್ಯಾಕ್) ನ್ಯಾಕ್ ಸಂಸ್ಥೆಯು ೨೦೦೬-೦೭ರಲ್ಲಿ "ಬಿ" ಗ್ರೇಡ್ ಮಾನ್ಯತೆ ನೀಡಿದೆ. ಹೀಗಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಯುವ ಕಲಾವಿದರಿಗೆ ಒಂದು ಗುಣಾತ್ಮಕ ಕಲಾಶಿಕ್ಷಣ ನೀಡುವುದರ ಜೊತೆ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ವಿಶಿಷ್ಟವಾದ ಕೊಡುಗೆ ನೀಡಿದೆ.[೨೨] ಎಂದರೆ ತಪ್ಪಾಗಲಾರದು.

ವಿಜಯಕಲಾ ಮಂದಿರದಲ್ಲಿ ಸೇವೆಸಲ್ಲಿಸಿದ ಶಿಕ್ಷಕರನ್ನು ಈ ಕೆಳಗಿನಂತೆ ವಿಂಗಡಿಸಿ ಚರ್ಚಿಸಲಾಗಿದೆ:

೧. ಸೇವೆಸಲ್ಲಿಸಿದ ಪ್ರಾಚಾರ್ಯರು ಗೌರವ ಶಿಕ್ಷಕರು

೨. ಸೇವೆ ಸಲ್ಲಿಸುತ್ತಿರುವ ಪ್ರಾಚಾರ್ಯರು ಶಿಕ್ಷಕರು

ಪ್ರಾಚಾರ್ಯ ಸಿ.ಎನ್.ಪಾಟೀಲ ಇವರು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ನಿಟ್ಟೂರ ಗ್ರಾಮದಲ್ಲಿ ೧೯೨೩ರಲ್ಲಿ ಜನಿಸಿದ ಶ್ರೀಯುತರು ಬಾಲ್ಯದಲ್ಲಿಯೇ ಚಿತ್ರಕಲೆಯ ಗೀಳು ಹಚ್ಚಿಕೊಂಡವರು. ತಮ್ಮ ೧೧ನೇ ವಯಸ್ಸಿನಲ್ಲಿಯೇ ಅಂದಿನ ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳಾಗಿದ್ದ ಸಿದ್ದಪ್ಪ ಕಂಬಳಿಯವರ ಭಾವಚಿತ್ರ ರಚಿಸಿ ಪ್ರಶಂಸೆ ಪಡೆದರು.[೨೩] ಅಕ್ಕಿಯವರ ಪ್ರೀತಿಯ ಶಿಷ್ಯರಾಗಿದ್ದ ಸಿ.ಎನ್.ಪಾಟೀಲರಿಗೆ ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲಿ ಉನ್ನತ ಚಿತ್ರಕಲಾ ಅಭ್ಯಾಸ ಮೂಡಿ ಬರಲು ಕಳಿಸಿದರು. ಸಿ.ಎನ್. ಪಾಟೀಲರಿಗೆ ಉತ್ತರ ಕರ್ನಾಟಕದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿಯ ಸ್ಕಾಲರ್ ಸಿಫ್ ದೊರಕಿಸಿಕೊಟ್ಟರು.

ಸಿ.ಎನ್. ಪಾಟೀಲ ಅವರು ಚಿತ್ರಕಲಾ ತರಗತಿಯ ಅಡ್ವಾನ್ಸ್ ಡ್ರಾಯಿಂಗ್ ಮತ್ತು ಡಿ.ಟಿ.ಸಿ ಮತ್ತು ಡಿ.ಎಂ.ಸಿ ಪರೀಕ್ಷೆಗಳನ್ನು ಉಚ್ಚ ಶ್ರೇಣಿಯಲ್ಲಿ ಪಾಸು ಮಾಡಿಕೊಂಡು ಗದುಗಿಗೆ ಮರಳಿ ಬಂದರು ಇದರಿಂದ ಸಂತೋಷಗೊಂಡ ಶ್ರೀ ಟಿ.ಪಿ. ಅಕ್ಕಿಯವರು ಸಿ.ಎನ್. ಪಾಟೀಲರನ್ನು ವಿಜಯ

---

೨೧. ವಿಜಯಕಲಾಮಂದಿರದಿಂದ ದಾಖಲೆಗಳಿಂದ ಪಡೆದುಕೊಳ್ಳಲಾಗಿದೆ

೨೨. ಅಶೋಕ ಅಕ್ಕಿ (ಸಂ) ವಜ್ರವಿಜಯ ನೆನಪಿನ ಸಂಚಿಕೆ ಪು.ಸಂ. ೨

೨೩. ಅಶೋಕ ಅಕ್ಕಿ ಕೃತಪೂರ ಕಲಾ ವ್ಯಜನ ಕೈಪಿಡಿ ೨೦೧೦

ಕಲಾಮಂದಿರದ ಪ್ರಥಮ ಪ್ರಾಚಾರ್ಯರನ್ನಾಗಿ ೧೯೪೭ರಲ್ಲಿ ನೇಮಕ ಮಾಡಿದರು. ಉತ್ತಮ ಕಲಾವಿದರು, ವಾಕ್ ಚಾತುರ್ಯರಾದ ಸಿ.ಎನ್. ಪಾಟೀಲರು ವಿಜಯ ಕಲಾಮಂದಿರವನ್ನು ಉನ್ನತ ಮಟ್ಟಕ್ಕೆ ಏರಲು ಸಾಕಷ್ಟು ಪರಿಶ್ರಮಪಟ್ಟರು.

ಸಿ.ಎನ್.ಪಾಟೀಲರು ತಮಗೆ ಬೇಕಾದ ಸಹಶಿಕ್ಷಕರನ್ನು ನೇಮಿಸಿಕೊಂಡರು. ಶ್ರೀ ಎಂ.ಎ.ಚೆಟ್ಟಿ, ಶ್ರೀ ಎ.ಆಯ್.ಕಮಾನಗಾರ, ಶ್ರೀ ವಿ.ಟಿ.ಕಾಳೆ, ಸಿ.ಟಿ.ರಾಯ್ಕರ ಇವರುಗಳನ್ನು ನೇಮಕ ಮಾಡಿಕೊಂಡು ಹಂತ ಹಂತವಾಗಿ ವಿಜಯ ಕಲಾಮಂದಿರವನ್ನು ವಿಜಯದ ದಾರಿಯಲ್ಲಿ ಕೊಂಡೊಯ್ದರು ಜೆ.ಜೆ. ಕಲಾಶಾಲೆ ಮುಂಬಯಿಯಿಂದ ವಿಶೇಷ ಕಲಾ ಪರಣಿತಿಯನ್ನು ಪಡೆದ ಇವರು ತಮ್ಮಲ್ಲಿರುವ ಅನೇಕ ವಿಚಾರಗಳನ್ನು ಕಲಾ ಪ್ರತಿಭೆಗಳನ್ನು ವಿದ್ಯಾರ್ಥಿಗಳಿಗೆ ನೀಡಿದ್ದರು. ಉತ್ತಮ ಮಾತುಗಾರ, ಉತ್ತಮ ಆಡಳಿತಗಾರ, ಉತ್ತಮ ನಾಟಕಕಾರ, ಉತ್ತಮ ಕಲಾವಿದರಾದ ಶ್ರೀ ಸಿ.ಎನ್.ಪಾಟೀಲರು ಉತ್ತಮ ಕಲಾವಿದರ ತಂಡ ರಚಿಸಲು ವಿಜಯ ಕಲಾಮಂದಿರವನ್ನು ತಮ್ಮ ಪ್ರಾಚಾರ್ಯರ ಅವಧಿಯಲ್ಲಿ ತಳಹಂತದಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದರ ಜೊತೆ ಎಲ್ಲ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಬೇಕಾದ ವ್ಯಕ್ತಿಯಾಗಿ ಟಿ.ಪಿ. ಅಕ್ಕಿಯವರ ಸಹಕಾರದಿಂದ ವಿಜಯ ಕಲಾಮಂದಿರ ದೊಡ್ಡ ಪ್ರಮಾಣದಲ್ಲಿ ಬೆಳೆಯಲು ಕಾರಣೀಕರ್ತರಾದರು.[೨೪] ಬಹುಮುಖ ಪ್ರತಿಭೆಯನ್ನು ಹೊಂದಿದ ಸಿ.ಎನ್.ಪಾಟೀಲರು ಶ್ರೀ ಎಂ.ಎ.ಚೆಟ್ಟಿ, ಶ್ರೀ ವಿ.ಟಿ.ಕಾಳೆ, ಶ್ರೀ ಎ.ಐ. ಕಮಾನಗಾರ, ಶ್ರೀ ಸಿ.ಟಿ.ರಾಯ್ಕರ್ ಅವರ ಸಹಕಾರದಿಂದ ಶ್ರೀ ಟಿ.ಪಿ. ಅಕ್ಕಿಯವರ ಪ್ರೋತ್ಸಾಹದಿಂದ ವಿಜಯ ಕಲಾಮಂದಿರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ವಿಜಯ ಕಲಾಮಂದಿರವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರವಹಿಸಿ ನಿಷ್ಠೆಯಿಂದ ನಿರಾಳವಾಗಿ ಸೇವೆ ಸಲ್ಲಿಸಿದರು, ವಿಜಯ ಕಲಾಮಂದಿರ ಚಿತ್ರಕಲಾ ಶಿಕ್ಷಣದ ಭದ್ರ ಬುನಾದಿ ಹಾಕಿಕೊಟ್ಟವರು.[೨೫]

ಎಂ.ಎ.ಚೆಟ್ಟಿ : ಸಂಸ್ಕೃತಿ ಪರಂಪರೆ ಮತ್ತು ಕಲೆಗಳಿಗಾಗಿಯೇ ತಮ್ಮ ಬದುಕನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡವರಲ್ಲಿ ಉತ್ತರ ಕರ್ನಾಟಕದ ರವಿವರ್ಮರೆಂದೇ ಪ್ರಖ್ಯಾತಿ ಪಡೆದ ಗದುಗಿನ ವರ್ಣಬ್ರಹ್ಮ ಎಂ.ಎ. ಚೆಟ್ಟಿಯವರು ಒಬ್ಬರು. "ಶರಣ ಪರಂಪರೆಯ ಮನೆತನದಲ್ಲಿ ೧೯೦೭ರ ಮಾರ್ಚ್ ೮ ರಂದು ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಜನನ. ಬಾಲ್ಯದಲ್ಲಿಯೇ ಮನೆಯಂಗಳದಲ್ಲಿ ಅಂದದ ರಂಗವಲ್ಲಿಗಳನ್ನಿತ್ತು ಮುಂದೊಂದು ದಿನ ಕಲಾವಿದನಾಗುವ ಬಯಕೆಯನ್ನು ಸೂಚಿಸಿದ್ದರು. ಅವರ ತಂದೆಯವರಾದ ಅಡಿವೆಪ್ಪಣ್ಣವನರು ಕೂಡಾ ಕಲಾಕಾರರೇ. ಹಾಗಾಗಿ ಎಳೆಯ ವಯಸ್ಸಿನಲ್ಲಿ ಪೆನ್ಸಿಲ್, ಬಣ್ಣ, ಬ್ರಿಟಿಷ್‌ಳೊಂದಿಗೆ ನಲಿದವರು. ಚಿತ್ರಕಲೆ ಕೃಷಿಯಲ್ಲಿ ಎಷ್ಟೋ ಕಷ್ಟ ಸಹಿಸಿಕೊಂಡು ಪರಿಶ್ರಮ, ಸಿದ್ಧಿಸಾಧನೆಗಳನ್ನು ಬೆಳೆಸಿಕೊಂಡಿದ್ದರೋ ಅಷ್ಟೇ ಆಚಾರ-ವಿಚಾರ, ನೀತಿ-ನಿಯಮಗಳಲ್ಲಿಯೂ ಕ್ರಮಬದ್ಧವಾಗಿ ಅನುಸರಿಸಿದ ಶಿಸ್ತಿನ ವ್ಯಕ್ತಿ"[೨೬] ಇವರು. ವಿಜಯ ಕಲಾಮಂದಿರದ ಏಳಿಗೆಗಾಗಿ ದುಡಿದಂತಹ ಅನೇಕ ಶಿಕ್ಷಕರಲ್ಲಿ ಎಂ.ಎ. ಚೆಟ್ಟಿಯವರು ಪ್ರಮುಖರಾಗಿದ್ದಾರೆ.

---

೨೪. ಶ್ರೀ ಸಿ.ಎನ್. ಪಾಟೀಲರ ಸಂದರ್ಶನ ದಿನಾಂಕ ೨೦-೧೦-೨೦೦೬

೨೫. ಶ್ರೀ ಸಿ.ಎನ್.ಪಾಟೀಲರ ಸಂದರ್ಶನ ದಿನಾಂಕ ೨೨-೧೦-೨೦೦೬

೨೬. ಪ್ರೊ. ಸಿ.ವ್ಹಿ. ಕೆರೆಮನಿ (ಪ್ರಸಂ) ಲೇ.ಕಾವ್ಯ ಶ್ರೀ ಬೆಳ್ವೂಲಬೆಳಕು ಸ್ಮರಣ ಸಂಚಿಕೆ ಪು.ಸಂ. ೪೦೧

"ಮುಂಬಯಿ ಜೆ.ಜೆ. ಕಲಾಶಾಲೆಯಲ್ಲಿ ೧೯೩೧ರಲ್ಲಿ ಡಿಪ್ಲೋಮಾ ಮುಗಿಸಿಕೊಂಡು ಮುಂದೆ ಸೊಲ್ಲಾಪೂರಕ್ಕೆ ಬಂದು ನೆಲೆಸಿದರು. ಅಲ್ಲಿ ಅವರು ಸ್ವತಂತ್ರ ಚಿತ್ರಕಾರರಾಗಿ ಚಿತ್ರಗಳ ರಚನೆಗೆ ತೊಡಗಿದರು. ಶ್ರೀ ಮಲ್ಲಿಕಾರ್ಜುನಶಾ ಲಂಬಿ ಅವರು ಇವರಿಗೆ ಆಶ್ರಯಕೊಟ್ಟರು. ಅವರ ಮನೆಯಲ್ಲಿ ಪ್ರಸಾದ ಸೇವಿಸಿಕೊಂಡು ಕಾಡಾದ ಅಣ್ಣಾ ಅವರ ಅಂಗಡಿಯ ಮೂರನೆಯ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದರು.[೨೭] ಹೀಗೆ ಚಿತ್ರ ರಚನೆಯಲ್ಲಿ ತೊಡಗಿದ ಶ್ರೀ ಚೆಟ್ಟಿಯವರು ಅನೇಕ ಪುರಾಣದ ಘಟನೆಗಳಿಗೆ ಸಚಿತ್ರರಚನೆಯಲ್ಲಿ ತೊಡಗಿ ಅನೇಕ ಶಿವಶರಣೆಯರ ಕಲಾಕೃತಿಗಳನ್ನು ಅನೇಕ ಮಠಮಾನ್ಯಗಳಲ್ಲಿ ಪುಸ್ತಕಗಳಲ್ಲಿ ರಚಿಸಿಕೊಟ್ಟು ಉತ್ತಮ ಕಲಾವಿದರಾಗಿ ಬೆಳೆದರು.

"೧೯೩೯ರಲ್ಲಿ ಶ್ರೀ ಎಂ.ಎ. ಚೆಟ್ಟಿಯವರು ಗದುಗಿಗೆ ಬಂದು ನೆಲಸಿದ ನಂತರ ೧೯೪೦ರಲ್ಲಿ ಅವರ ಚಿಕ್ಕಪ್ಪ ಮನೆಯಲ್ಲಿಯೇ ಮುರಗೆಪ್ಪನವರನ್ನು ಉಳಿಸಿಕೊಂಡರು. ತಾವು ಅಥಣಿಯಲ್ಲಿಯ ಆಸ್ತಿ ಸಂರಕ್ಷಣೆಗಾಗಿ ಹೋದರು. ಅಥಣಿಗೆ ಹೋಗುವ ಮುನ್ನ ಮುರಿಗೆಪ್ಪನವರಿಗೆ ಒಂದು ಮಾತನ್ನು ತಿಳಿಹೇಳಿದರು. "ಉದಯ ಆಗೋ ಸೂರ್ಯನನ್ನು ಎಲ್ಲರೂ ಪೂಜೆ ಮಾಡ್ತಾರ ಮುಳಗೋ ಸೂರ್ಯನನ್ನು ಯಾರೂ ಪೂಜೆ ಮಾಡೊದಿಲ್ಲ. ಬದುಕಿನಲ್ಲಿ ನಾವು ನಮ್ಮ ಶೀಲ, ಸಚ್ಚಾರಿತ್ರ್ಯದಿಂದ ಪ್ರತಿಷ್ಠೆಯನ್ನು ಗಳಿಸಿಕೊಂಡರೆ ಮಾತ್ರ ಎಲ್ಲರ ಬಾಯಲ್ಲಿ ಉಳಿಯತ್ತೇವೆ."ಅಂದರೆ ಸಮಾಜದಲ್ಲಿ ಒಳ್ಳೆಯ ಮನುಷ್ಯನಾಗಿ ಎಲ್ಲರಿಂದಲೂ ಮೆಚ್ಚುವಂತೆ ಬಾಳಬೇಕೆಂಬ ಅರ್ಥದಲ್ಲಿ ಹೇಳಿರಬೇಕು.[೨೮] ಅವರ ಮಾತಿನಂತೆ ಸತತ ಕಲಾಕೃತಿಗಳ ರಚನೆಯ ಮೂಲಕ ಕೆಲವೇ ದಿನಗಳಲ್ಲಿ "ಚೆಟ್ಟಿಯವರು ದಿನವೂ ಉದಯವಾಗುವ ಸೂರ್ಯನಂತೆ ಕಲಾರಂಗದಲ್ಲಿ ಉದಯಿಸಿ ಬೆಳಕಾದರು.

ಟಿ.ಪಿ. ಅಕ್ಕಿಯವರು ಕಲಾಚರಿತ್ರೆಯ ಇತಿಹಾಸದಲ್ಲಿ ಗದುಗು ಶಾಶ್ವತವಾಗಿ ಉಳಿಯುವಂತೆ "ವಿಜಯ ಕಲಾಮಂದಿರವನ್ನು ೧೯೪೭ರಲ್ಲಿ ಸ್ಥಾಪಿಸಿದ್ದು ಈ ಕಲಾಮಂದಿರದಲ್ಲಿ ಸೇವೆಗೆ ಸೇರಿದರು. ಇಂಥ ಒಂದು ಆದರ್ಶ ಕಲಾಸಂಸ್ಥೆಯಲ್ಲಿ ಸುಮಾರು ಮೂವತ್ತೆರಡು ವರ್ಷಗಳವರೆಗೆ ಕಲಾಶಿಕ್ಷಕರಾಗಿ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸುವ ಸೌಭಾಗ್ಯ ಒದಗಿ ಬಂದಿತ್ತು ಶ್ರೀ ಟಿ.ಪಿ.ಅಕ್ಕಿ ಮಾಸ್ತರರು ನನ್ನನ್ನು ಮುರಿಗೆಪ್ಪಣ್ಣಾ ಎಂದೇ ಕೂಗುತ್ತಿದ್ದರು. ಆ ಕೂಗಿನಲ್ಲಿ ಭಾತೃತ್ವ, ವಾತ್ಸಲ್ಯ ಅಡಗಿದೆ.[೨೯] ಎಂಬುದಕ್ಕೆ ಅವರ ಶಿಕ್ಷಕ ವೃತ್ತಿಯೇ ಸಾಕ್ಷಿ ಎನ್ನಬಹುದು.

ಶಿಕ್ಷಕರಾಗಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಚೆಟ್ಟಿಯವರು ಜೆ.ಜೆ.ಕಲಾಶಾಲೆಯ ಮಾದರಿಯನ್ನೇ ಅನುಸರಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಪಾಠ ಹೇಳುವಾಗ ಶಿಸ್ತು ಕುರಿತು ಹೇಳುತ್ತಿದ್ದರು. ಚೆಟ್ಟಿಯವರ ನಿಷ್ಠೆಯ ದುಡಿತ ಟಿ.ಪಿ. ಅಕ್ಕಿಯವರ ಮಾರ್ಗದರ್ಶನಗಳಿಂದ ವಿಜಯ ಕಲಾಮಂದಿರ ಕರ್ನಾಟಕದಲ್ಲಿ ಒಳ್ಳೆಯ ಸಂಸ್ಥೆಯಾಗಿ ಬೆಳೆಯಲಿಕ್ಕೆ ಕಾರಣವಾಯಿತು. "ಮಾತು ಕಡಿಮೆ ಕೆಲಸ ಜಾಸ್ತಿ, ಚೆಟ್ಟಿಯವರು ಯಾವಾಗಲೂ ಹೇಳುವ ಮಾತುಗಳಿವು. ಅವರು ಮೂಕರಾಗಿದ್ದೂ ಸಹಿತ

೨೭ ಲೇ. ಡಾ. ಲಕ್ಷ್ಮೀದೇವಿ ಗವಾಯಿ, ಕಲಾವಿದ ಎಂ.ಎ. ಚೆಟ್ಟಿ ಜೀವನ ಕಲಾ ಕೃತಿಗಳ ಪು.ಸಂ. ೯೫

೨೮. ಲೇ. ಡಾ. ಲಕ್ಷ್ಮೀದೇವಿ ಗವಾಯಿ, ಕಲಾವಿದ ಎಂ.ಎ. ಚೆಟ್ಟಿ ಜೀವನ ಕಲಾ ಕೃತಿಗಳ ಪು.ಸಂ. ೯೭

೨೯. ಸಂ. ಮಹಾಲಿಂಗಯೊಳಗಿ ಎಂ.ಎ. ಚೆಟ್ಟಿ ನೆನಪಿನ ಪು.ಸಂ. ೨೦೨

ಮೂಕನನ್ನು ಮಾತನಾಡಿಸಿದವರು. ಅಂದರೆ ಅವರು ಹೆಚ್ಚು ಮಾತನಾಡುತ್ತಿರಲಿಲ್ಲ. ತಮ್ಮ ಚಿತ್ರಗಳ ಮುಖಾಂತರ ಲೋಕವನ್ನು ಮಾತನಾಡಿಸಿದವರು.[೩೦] ಅವರ ಶಿಸ್ತಿನ ಕೆಲಸದಿಂದ ವಿದ್ಯಾರ್ಥಿಗಳಿಗೆ ಬಹಳಷ್ಟು ಲಾಭವಾಯಿತು. ಸದಾ ಕಲಾಕೃತಿಯನ್ನೇ ರಚನೆ ಮಾಡುವುದರ ಮೂಲಕ ವಿದ್ಯಾರ್ಥಿಗಳಿಗೆ ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದರು.

"ವಿದ್ಯಾರ್ಥಿಗಳಿಗೆ ಎಂದೂ ಅವರು ನೇರವಾಗಿ ಬೈದವರಲ್ಲ ಮೃದು ಮಾತುಗಳಿಂದ ಅವರ ತಪ್ಪುಗಳನ್ನು ತಿದ್ದಿ ಅವರಿಗೆ ಮನವರಿಕೆ ಮಾಡಿಕೊಡುತ್ತಿದ್ದರು. ಅಲ್ಲದೇ "ತಾವು ಒಂದು ಪೇಪರ ತೆಗೆದುಕೊಂಡು ಒಂದು ಬೋರ್ಡಿಗೆ ಅಂಟಿಸಿ ಎಲ್ಲ ಹುಡುಗರಿಗೆ ಸುತ್ತಲೂ ನಿಲ್ಲಿಸಿಕೊಂಡು ಯಾವ ರೀತಿ ಚಿತ್ರ ರಚಿಸಿಬೇಕು ಅಂತಾ ಹೇಳ್ತಾ ಇದ್ರು ಪ್ರತಿಯೊಂದು ಲೈಫ್ ಆಗಲಿ, ಭಾವಚಿತ್ರವಾಗಲಿ, ಸಂಯೋಜನೆಯ ಚಿತ್ರವಾಗಲಿ ಪ್ರತಿಯೊಂದನ್ನು ಮಾಡಿ ತೋರಿಸುತ್ತಿದ್ದರು. ಬರಿ ಬಾಯಲ್ಲಿ ಹೇಳುತ್ತಿರಲಿಲ್ಲ. ಚಿತ್ರ ಮಾಡುವ ಸಂದರ್ಭದಲ್ಲಿ ಉಂಟಾಗುವ ತೊಂದರೆಗಳಿಗೆ ವಿವರಣೆ ಕೊಟ್ಟು ನೆರಳು-ಬೆಳಕನ್ನು ಯಾವ ರೀತಿ ಮಾಡಬೇಕು ಎಂಬುದನ್ನು ಹೇಳುತ್ತಿದ್ದರು. ಚಿತ್ರದಲ್ಲಿ ಪ್ರತ್ಯಕ್ಷವಾಗಿ ಅದರ ಲೋಪದೋಷಗಳನ್ನು ತಿದ್ದಿ ಸರಿಯಾದ ಮಾರ್ಗದರ್ಶನ ಮಾಡುತ್ತಿದ್ದರು. ಉತ್ತಮ ಕಲಾವಿದ ಯಾವ ರೀತಿ ಆಗಬೇಕು ಅನ್ನುವ ಮಾರ್ಗದರ್ಶನದ ಸೂತ್ರಗಳನ್ನು ಪಾಠ ಪ್ರವಚನ ರೂಪದಲ್ಲಿ ನಮ್ಮ ವರ್ಗದಲ್ಲಿ ಹೇಳ್ತಾ ಇದ್ರು.[೩೧] ಹೀಗೆ ವಿದ್ಯಾರ್ಥಿಗಳಿಗೆ ಸರಳ ರೀತಿಯಿಂದ ಪಾಠ ಮಾಡುತ್ತಿದ್ದರು. "ಬಣ್ಣಗಳ ಬಗ್ಗೆ ಅವರ ಆಳವಾದ ಜ್ಞಾನವಿತ್ತು. ಬಣ್ಣ ಪ್ಯಾಲೇಟ್ ಮೇಲೆ ಯಾವ ಬಣ್ಣದ ಹತ್ತಿರ ಯಾವ ಬಣ್ಣ ಇರಬೇಕು. ಅನ್ನೊದು ಕರಗತವಾಗಿತ್ತು. ನೋಡಲಾರದೇ ಆ ಕೈ ಅದೇ ಬಣ್ಣದ ಮೇಲೆ ಹೋಗುತ್ತಿತ್ತು"[೩೨] ಇದರಿಂದ ಬಣ್ಣದ ಪ್ಲೇಟನ್ನು ಸ್ವಚ್ಛವಾಗಿ ಯಾವ ರೀತಿ ಉಪಯೋಗಿಸಬೇಕು, ಬಣ್ಣಗಳನ್ನು ಯಾವ ರೀತಿ ಮಿಶ್ರಣ ಮಾಡುವುದು, ಕಲಾಕೃತಿಗೆ ಬಣ್ಣವನ್ನು ಯಾವ ರೀತಿ ಬಳಸಬೇಕು ಎಂಬುದು ಅನೇಕ ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿತ್ತು.

ಚೆಟ್ಟಿಯವರು ಜೇಬಿನಲ್ಲಿ ಒಂದು ಪೆನ್ಸಿಲ್, ಕೈಯಲ್ಲಿ ಒಂದು ಸ್ಕೆಚ್ ಪುಸ್ತಕ ಯಾವಾಗಲೂ ಇರುತ್ತಿತ್ತು. ತಮ್ಮ ಮನಸ್ಸೆಳೆದಂತ ಯಾವುದೇ ಆಕೃತಿ ಇರಲಿ ನೋಡಿದ ತಕ್ಷಣ ಸ್ಕೆಚ್ ಮಾಡುವುದು. ಅವರ ವಿದ್ಯಾರ್ಥಿಗಳ ಇದ್ದು ಜೊತೆ ತಾವು ರೇಖಾ ಚಿತ್ರತಗಳನ್ನು ಚಿತ್ರಿಸುತ್ತಿದ್ದರು. ಅಲ್ಲದೆ ವಿದ್ಯಾರ್ಥಿಗಳಿಗೆ ಈ ರೀತಿ ಹೇಳ್ತಾ ಇದ್ರು. "ನೀವು ಈ ರೀತಿ ಸುಮ್ನೆ ಚಿತ್ರ ತೆಗದ್ರ ಆಗೂದಿಲ್ಲ. ಪ್ರತಿದಿನ ೫೦ ರಿಂದ ೧೦೦ ಸ್ಕೆಚ್ ಮಾಡ್ಬೇಕು. ೨೦೦ ಪುಟದ ನೋಟಬುಕ್ ೨-೩ ದಿನಗಳಲ್ಲಿ ಮುಗಿಸಬೇಕು ಅಂತ ಹೇಳಿ ಹಂಗ ತಾವು ಮಾಡ್ತಿದ್ರು. ನಮ್ಮಿಂದ ಮಾಡಸತಿದ್ರು, ಬಸ್ ಸ್ಟ್ಯಾಂಡ್, ಪೇಟೆ, ಸಂತೆ ರೇಲ್ವೆ ಸ್ಟೇಷನ್, ಥೇಟರ್ ಮುಂದೆ ಹೀಗೆ ಎಲ್ಲಾ ಕಡೆಗೆ ನಮ್ಮನ್ನು ಸ್ಕೆಚ್ ಮಾಡಲಿಕ್ಕೆ ಕರೆದುಕೊಂಡು ಹೋಗ್ತಿದ್ರು. ತಾವು ಸ್ಕೆಚ್ ಮಾಡ್ತಿದ್ರು, ನಮಗೂ ಹ್ಯಾಂಗ ಮಾಡಬೇಕಂತ ಹೇಳ್ತಿದ್ರು. ಆಕೃತಿ ಕ್ಷಣ

೩೦. ಸಂ. ಮಹಾಲಿಂಗಯೊಳಗಿ ಎಂ.ಎ. ಚೆಟ್ಟಿ ನೆನಪಿನ ಪು.ಸಂ. ೯೮

೩೧. ಲೇ. ಡಾ. ಲಕ್ಷ್ಮೀದೇವಿ ಗವಾಯಿ ಕಲಾವಿದ ಎಂ.ಎ. ಚೆಟ್ಟಿಯ ಜೀವನ ಚಿತ್ರಕಲಾ ಕೃತಿಗಳ ಪು.ಸಂ. ೧೦೦

೩೨. ಎಮ್.ಆರ್. ಬಾಳಿಕಾಯಿ ಸಂದರ್ಶನ ದಿನಾಂಕ ೨೬-೮-೨೦೦೮

ಮಾತ್ರದಲ್ಲಿ ತೆಗಿತಿದ್ರು, ಅಷ್ಟು ತೀವ್ರವಾಗಿ ಅವರ ಕೈಚಳಕ ಮತ್ತು ರೇಖೆಯಲ್ಲಿ ಅಷ್ಟೆ ನಿಖರತೆ ಇತ್ತು. ಅವರು ಎಂದೂ ರಬ್ಬರನ್ನು ಬಳಸಲೇ ಇಲ್ಲ."[೩೩] ಎಂದು ಅವರ ವಿದ್ಯಾರ್ಥಿಯಾದ ಎಂ.ಆರ್.ಬಾಳಿಕಾಯಿಯವರು ಹೇಳುತ್ತಾರೆ. ಇದರಿಂದ ಚೆಟ್ಟಿಯವರು ವಿದ್ಯಾರ್ಥಿಗಳನ್ನು ಎಷ್ಟು ಪ್ರೀತಿಯಿಂದ ವಿದ್ಯಾರ್ಜನೆ ಮಾಡಿಸುತ್ತಿದ್ದರು ಎಂಬುದು ತಿಳಿಯುತ್ತದೆ.

ಸಂಯೋಜನೆ ಚಿತ್ರ ಹೇಳುವಂಥಹ ಸಂದರ್ಭದಲ್ಲಿಯೂ ತಾವು ಈ ರೀತಿ ಹೇಳ್ತಾ ಇದ್ರು. "ಚಿತ್ರದಲ್ಲಿಯ ಎಲ್ಲಾ ವಸ್ತುಗಳು ಒಂದಕ್ಕೊಂದು ಸಂಬಂಧವನ್ನು ಹೊಂದಿರಬೇಕು. ಆ ಸಂಬಂಧವನ್ನು ಬಿಟ್ಟು ನಾವು ಚಿತ್ರಿಸೀದ್ರ ಅದು ಅಸಂಬದ್ಧವಾಗಿ ಕಾಣಿಸುತ್ತೆ ಅನ್ನುವಂಥದನ್ನು ಹೇಳ್ತಾ ಇದ್ರು."[೩೪] ವ್ಯಕ್ತಿ ಚಿತ್ರ ಹಾಗೂ ಸಂಯೋಜನಾ ಚಿತ್ರಗಳನ್ನು ರಚಿಸುವಲ್ಲಿ ಅವರದು ಎತ್ತಿದ ಕೈ, ಅಂತೆಯೇ ಬಹುತೇಕ ಎಲ್ಲ ವಿದ್ಯಾರ್ಥಿಗಳು ಅವರ ಸುತ್ತಲೂ ನಿಂತು ಅವರು ರಚಿಸುವ ರೀತಿಯನ್ನು ವೀಕ್ಷಿಸಿ ತಾವು ಹಾಗೆಯೇ ರೂಢಿಸಬೇಕೆನ್ನುವ ಬಯಕೆಯೊಂದಿಗೆ ತಮ್ಮ ತಮ್ಮ ಸ್ಥಳಗಳನ್ನು ಆಕ್ರಮಿಸುತ್ತಿದ್ದರು.[೩೫] ಎಂದು ಚೆಟ್ಟಿಯವರ ಅಭಿನಂಧನಾ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ.

ಸದಾ ಕಲಿಯುವ, ಕಲಿಸುವ ತವಕದಲ್ಲಿರುತ್ತಿದ್ದ ಚೆಟ್ಟಿ ಗುರುಗಳು ನಮ್ಮನ್ನು ನೈಜಕಲೆಗೆ ಹೆಚ್ಚಿನ ಒತ್ತು ಸಂಯೋಜನಾ ಚಿತ್ರ, ಪೂರ್ಣಭಾವಚಿತ್ರಗಳನ್ನು ಹೇಳುತ್ತಿದ್ದರು. ಅವರ ಬಣ್ಣಗಳ ಲೇಪನ, ಸಂಯೋಜನ ಚಿತ್ರಗಳ ಹೊಂದಾಣಿಕೆಗಳು ಇಂದಿಗೂ ನಮ್ಮ ಕಣ್ಣಮುಂದೆ ಕಾಣುತ್ತದೆ. ಅವರು ಮಾಡಿದ ಕಲಾಕೃತಿಗಳ ಹಾಗೆ ಕೆಲವು ಕಲಾಕೃತಿಗಳನ್ನು ಮಾಡಿರಿ."[೩೬] ಎಂದು ಚೆಟ್ಟಿಯವರ ಶಿಷ್ಯ ಕೆ.ವ್ಹಿ. ಕುಂದಗೋಳ ಅವರು ಹೇಳುತ್ತಾರೆ. ಬಣ್ಣಗಳ ಲೇಪನ, ಸಂಯೋಜನ ಚಿತ್ರಗಳ ಹೊಂದಾಣಿಕೆಗಳು ಇಂದಿಗೂ ನಮ್ಮ ಕಣ್ಣಮುಂದೆ ಕಾಣುತ್ತದೆ. ಅವರು ಮಾಡಿದ ಕಲಾಕೃತಿಗಳ ಹಾಗೆ ಕೆಲವು ಕಲಾಕೃತಿಗಳನ್ನು ಮಾಡಿರಿ."[೩೭] ಎಂದು ಶ್ರೀ ಎಂ.ಆರ್. ಬಾಳಿಕಾಯಿಯವರು ಅಭಿಮಾನದಿಂದ ಹೇಳುತ್ತಾರೆ.

ಶಾಲೆ ಬಿಟ್ಟ ನಂತರವೂ ನಾವು ಚಟ್ಟಿಗುರುಗಳ ಮನೆಗೆ ಹೋಗಿ ಅವರು ರಚಿಸುತ್ತಿದ್ದ ಕಲಾಕೃತಿಗಳನ್ನು ವೀಕ್ಷಿಸುತ್ತಿದ್ದವು ಆದಾಗ ಕಲಾಕೃತಿಗಳನ್ನು ಯಾವ ರೀತಿಯಲ್ಲಿ ವಿಕ್ಷಿಸಬೇಕೆಂದು ಯಾವ ರೀತಿಯಲ್ಲಿ ಬಣ್ಣವನ್ನು ಬಳಸಬೇಕು. ಲೈಪ್, ಪೋಟ್ರೊಪ, ಸಂಯೋಜನೆ ಚಿತ್ರಗಳ ಕುರಿತು ಯಾವ ರೀತಿಯಿಂದ ವಿಕ್ಷಿಸಬೇಕು ಎಂದು ಮಾರ್ಗದರ್ಶನ ಮಾಡ್ತಾ ಇದ್ರು ಇಂಥ ಒಬ್ಬ ಒಳ್ಳೆಯ ಗುರುಗಳು ಮಾರ್ಗದರ್ಶನ ಅವರ ಸ್ಪೂರ್ತಿಯಿಂದ ಇವತ್ತು ಅವರ ಆರ್ಶಿವಾರ್ದದಿಂದ ನಾವು ಬೆಳೆಯಲಿಕ್ಕೆ ಸಾಧ್ಯವಾಯಿತು." ಎಂದು ಶ್ರೀ ಎಂ.ಆರ್. ಬಾಳಿಕಾಯಿಯವರು ಅಭಿಮಾನದಿಂದ ಹೇಳುತ್ತಾರೆ.

ಹೀಗೆ ಚೆಟ್ಟಿಯವರು ವಿದ್ಯಾರ್ಥಿಗಳಿಗೆ ತಮ್ಮಲ್ಲಿರುವ ಎಲ್ಲ ವಿದ್ಯೆಯನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡುವುದರ ಮೂಲಕ ವಿಜಯ ಕಲಾಮಂದಿರ ಹೆಚ್ಚಿನ ರೀತಿಯಲ್ಲಿ ಬೆಳೆಯಲಿಕ್ಕೆ

---

೩೩. ಎಮ್. ಆರ್. ಬಾಳಿಕಾಯಿ ಸಂದರ್ಶನ ದಿನಾಂಕ ೨೬-೮-೨೦೦೮

೩೪. ಲೇ. ಡಾ. ಲಕ್ಷ್ಮೀದೇವಿ ಗವಾಯಿ ಕಲಾವಿದ ಎಂ.ಎ. ಚೆಟ್ಟಿಯವರ ಕಲಾಕೃತಿಗಳ ಪು.ಸಂ.೧೦೨

೩೫. ಲೇ. ಡಾ. ಲಕ್ಷ್ಮೀದೇವಿ ಗವಾಯಿ ಕಲಾವಿದ ಎಂ.ಎ. ಚೆಟ್ಟಿಯವರ ಕಲಾಕೃತಿಗಳ ಪು.ಸಂ.೧೦೨

೩೬. ಕೆ.ವಿ. ಕುಂದಗೋಳ ಗದಗ ಸಂದರ್ಶನ ದಿನಾಂಕ ೨೫-೪-೨೦೦೮

೩೭. ಎಮ್.ಆರ್. ಬಾಳಿಕಾಯಿ ಕಲಾವಿದರ ಧಾರವಾಡ ಸಂದರ್ಶನ ದಿನಾಂಕ ೮-೧೦-೨೦೦೮

ಕಾರಣೀಭೂತರಾಗಿದ್ದರು. ಚೆಟ್ಟಿಯವರು ವಿದ್ಯಾರ್ಥಿಗಳ ಮೇಲಿನ ಪ್ರೀತಿ ಮತ್ತು ಅವರ ಕಾರ್ಯವೈಖರಿಯನ್ನು ಕಂಡಂಥ ಶ್ರೀ ಟಿ.ಪಿ. ಅಕ್ಕಿ ಅವರು ಹೀಗೆ ಹೇಳಿದ್ದಾರೆ. "೧೯೪೭ರಿಂದ ೧೯೭೨ರ ವರೆಗೆ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತ ಕಲಾಮಂದಿರದ ಸರ್ವತೋಮ್ಮುಖ ಬೆಳವಣಿಗೆಗೆ ಶ್ರಮಿಸಿದವರಾಗಿದ್ದಾರೆ. ತನ್ನ ವಿದ್ಯಾರ್ಥಿ ಮಕ್ಕಳಲ್ಲಿ ಕಲೆಯ ಬಗ್ಗೆ ಅಭಿರುಚಿ ಹೆಚ್ಚಿಸಿದ, ಕರ್ತವ್ಯ ಪ್ರಜ್ಞೆ ಬೆಳೆಸಿದ, ಪಾಠದೊಂದಿಗೆ ಶಿಸ್ತು, ಸಂಯಮ ಇತ್ಯಾದಿ ಪಠ್ಯೇತರ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿ ಅವರ ಸರ್ವಾಂಗೀಣ ಉನ್ನತಿಗಾಗಿ ಶ್ರಮಿಸಿದ ಶಿಸ್ತಿನ ಮನುಷ್ಯ ಸಣ್ಣ."[೩೮]

ಚೆಟ್ಟಿಯವರು ಕಲಿಸುವುದಲ್ಲದೇ ಮುಂಬಯಿ ಹಾಗೂ ಪುಣೆ ರಾಜ್ಯದ ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಗಳಿಗೆ ಪರೀಕ್ಷಕರಾಗಿ ೯ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. "ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ,, ಅದರ ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯ ಗೈದಿದ್ದಾರೆ."[೩೯] ಪರೀಕ್ಷಕರಾಗಿ ಹೊದಾಗಿನ ಒಂದು ಘಟನೆಯನ್ನು ಹಾಲಭಾವಿಯವರು ಹೀಗೆ ಹೇಳುತ್ತಾರೆ. "ನಾನು ಚೆಟ್ಟಿಯವರು ಮತ್ತು ಬೇರೆಯವರು ಹೀಗೆ ಎಂಟು ಮಂದಿ ಆಗಿನ ಸ್ಕೂಲ್ ಆಫ್ ಆರ್ಟ್‌ನ ಕಲಾ ಪರೀಕ್ಷಕರಾಗಿದ್ದೆವು. ಅದರಲ್ಲಿ ಇಬ್ಬರು ಮಹಿಳೆಯರು, ಲೇಡಿ ಟೆಂಪಲ್ ಹಾಗೂ ಮಿಸೆಸ್ ಡಾಲಿಸ್ ಶ್ರೀ ಮುರಿಗೆಪ್ಪನವರು ಮೀಸೆಗೆ ಕಪ್ಪು ಬಣ್ಣ ಹಚ್ಚಿಕೊಂಡು ಬರುವುದನ್ನು ನೋಡಿ ಮಿಸೆಸ್ ಡಾಲಿಸ್ ಅವರು 'Oh my grand son has come' ಎಂದು ಚೇಷ್ಟೆ ಮಾಡುತ್ತಿದ್ದರು."[೪೦] ಯಾವಾಗಲೂ ಚೆಟ್ಟಿಯವರು ಮೀಸೆ ಕಪ್ಪು ಬಣ್ಣ ಹಚ್ಚುತ್ತಿದ್ರು, ತಲೆಗೆ ಯಾವುದೇ ಬಣ್ಣ ಹಚ್ಚುತ್ತಿರಲಿಲ್ಲ ಮೀಸೆಗೆ ಮಾತ್ರ ಹಚ್ಚುತ್ತಿದ್ರು ಇದು ಅವರ ವೈಶಿಷ್ಟ್ಯವಾಗಿತ್ತು.

"ವಿಜಯ ಕಲಾಮಂದಿರದಲ್ಲಿ ಇಪ್ಪತ್ತೈದು ವರ್ಷಗಳ ಕಾಲ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳಲ್ಲಿ ಕಲೆಯ ಬಗ್ಗೆ ಅಭಿರುಚಿ ಹೆಚ್ಚಿಸಿ, ಕರ್ತವ್ಯಪ್ರಜ್ಞೆಯನ್ನೂ ಬೆಳಸಿ, ಪಾಠದೊಂದಿಗೆ ಶಿಸ್ತು, ಸಂಯಮ ಇತ್ಯಾದಿ ಪಠ್ಯೇತರ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿ ಅವರ ಸರ್ವಾಂಗೀಣ ಉನ್ನತಿಗಾಗಿ ಶ್ರಮಿಸಿದ್ದಾರೆ.[೪೧] ಇಂಥ ಒಬ್ಬ ಶ್ರೇಷ್ಠ ಕಲಾವಿದ, ಕಲಾಶಿಕ್ಷಕ ವಿಜಯ ಕಲಾಮಂದಿರದ ಬೆಳವಣಿಗಾಗಿ ಸಾಕಷ್ಟು ಶ್ರಮಿಸಿ ಅನೇಕ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ. ವಿಜಯ ಕಲಾಮಂದಿರದ ಬೆಳವಣಿಗೆಗಾಗಿ ಶ್ರಮಿಸಿದ ಆದರ್ಶ ಕಲಾಶಿಕ್ಷಕರಾಗಿದ್ದರು.

ವ್ಹಿ.ಟಿ. ಕಾಳೆ : ೧೯೩೪ರಲ್ಲಿ ತುಳಜಾರಾಮ ಕಾಳೆ ಮತ್ತು ಭರಮವ್ವ ದಂಪತಿಗಳು ಪುತ್ರರಾಗಿ ವೆಂಕಟೇಶ ತುಳಜಾರಾಮ್ ಕಾಳೆಯವರು ಬಾಗಲಕೋಟೆ ಜಿಲ್ಲೆಯ ಹುನಗುಂದದಲ್ಲಿ ಜನಿಸಿದರು. ಕಾರಣಾಂತರದಿಂದ ಗದುಗೆ ಬಂದರು ಇವರ ಮನೆಯ ಪಕ್ಕದ ಎಂ.ಸಿ.ಮುನವಳ್ಳಿಯವರು ರಚಿಸುತ್ತಿದ್ದ ಚಿತ್ರಗಳ ಕಡೆ ಚಿತ್ತಹರಿಸಿದ ಕಾಳೆಯವರು ತಾವು ಚಿತ್ರರಚಿಸಲು ಪ್ರಾರಂಭಿಸಿದರು. ಇವರ ಪ್ರತಿಭೆ ಕಂಡು ಮುನವಳ್ಳಿಯವರು ಕಲಾಗುರು ಟಿ.ಪಿ. ಅಕ್ಕಿಯವರ ಕಡೆ ಕರೆದೊಯುತ್ತಾರೆ. ಶ್ರೀ ಟಿ.ಪಿ. ಅಕ್ಕಿಯವರ ಸಹಾಯ-ಸಹಕಾರದಿಂದ ಅಂದಿನ ಮುಂಬಯಿ ಪ್ರಾಂತದ ಎಲಿಮೆಂಟರಿ ಪೇಂಟಿಂಗ್‌ನಲ್ಲಿ

೩೮. ಶ್ರೀ ಮಹಾಲಿಂಗಯೊಳಗಿ ಕಲಾತಪಸ್ವಿ ಎಂ.ಚೆಟ್ಟಿಯವರ ಅಭಿನಂದನಾ ಗ್ರಂಥ ಪು.ಸಂ. ೧೦೨
೩೯. ಶ್ರೀ ಮಹಾಲಿಂಗಯೊಳಗಿ ಕಲಾತಪಸ್ವಿ ಎಂ.ಚೆಟ್ಟಿಯವರ ಅಭಿನಂದನಾ ಗ್ರಂಥ ಪು.ಸಂ. ೧೦೩
೪೦. ಶ್ರೀ ಮಹಾಲಿಂಗಯೊಳಗಿ ಕಲಾತಪಸ್ವಿ ಎಂ.ಚೆಟ್ಟಿಯವರ ಅಭಿನಂದನಾ ಗ್ರಂಥ ಪು.ಸಂ. ೧೦೩
೪೧. ಲೇ. ಡಾ. ಲಕ್ಷ್ಮೀದೇವಿ ಗವಾಯಿ ಸಿ.ವ್ಹಿ. ಕೆರಮನಿ (ಪು.ಸಂ) ಬೊಳ್ವೂಲ ಬೆಳಕು ಸ್ಮರಣ ಸಂಚಿಕೆ ಪು.ಸಂ.೨೨೬

ದ್ವಿತೀಯ ರ್‍ಯಾಂಕ್‌ನಲ್ಲೂ ಇಂಟರ್ಮಿಡಿಯಟ್ ಪೇಂಟಿಂಗ್ ಹಾಗೂ ಅಡ್ವಾನ್ಸ್ ಪೇಂಟಿಂಗ್‌ನಲ್ಲಿ ತೃತೀಯ ರ್‍ಯಾಂಕ್‌ನಲ್ಲಿ ಉತ್ತೀರ್ಣರಾದರು. ೧೯೫೨ರಲ್ಲಿ ಮುಂಬಯಿ ಸರ್ ಜೆ.ಜೆ. ಕಲಾಶಾಲೆಯಿಂದ ಗೌರಮೆಂಟ್ ಡಿಪ್ಲೋಮಾ ಪರೀಕ್ಷೆಯಲ್ಲಿ ಹಾಗೂ ಮಾಡೆಲಿಂಗ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಅವರ ಜ್ಞಾನಾರ್ಜನೆಯ ಹಸಿವನ್ನು ಎತ್ತಿತೋರಿಸುತ್ತದೆ.

"ಬಹುಮುಖ ಪ್ರತಿಭೆಯ ಆಗರವಾಗಿರುವ ವ್ಹಿ.ಟಿ. ಕಾಳೆಯವರು ಚಿತ್ರಕಲಾವಿದರಾಗಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಇದರ ಜೊತೆಗೆ ಶ್ರೇಷ್ಠ ಕಲಾಶಿಕ್ಷಕರಾಗಿ, ಲೇಖಕರಾಗಿ, ಶಿಲ್ಪಕಾರ, ಸಂಗೀತಗಾರ, ನಾಟಕ ನಿರ್ದೇಶಕ, ನಟನೆ"[೪೨] ಹೀಗೆ ಬಹುಮುಖ ಪ್ರತಿಭೆಯನ್ನು ಹೊಂದಿದ ಶ್ರೀ ವ್ಹಿ.ಟಿ.ಕಾಳೆಯವರು ತಾವು ವ್ಯಾಸಂಗ ಮಾಡಿದ ವಿಜಯ ಕಲಾಮಂದಿರದಲ್ಲಿ ಚಿತ್ರಕಲಾ ಉಪನ್ಯಾಸಕರಾಗಿ ೧೯೫೨ ರಿಂದ ೧೯೬೪ರ ವರೆಗೆ ಸೇವೆ ಸಲ್ಲಿಸಿದ್ದಾರೆ. ಕಲಾಶಿಕ್ಷಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ದಾರಿ ದೀಪವಾಗಿದ್ದಾರೆ.

ಕಾಳೆಯವರು ವಿದ್ಯಾರ್ಥಿಗಳಿಗೆ ಶಿಸ್ತುಬದ್ಧವಾದ ಶಿಕ್ಷಣವನ್ನು ನೀಡುತ್ತಿದ್ದರು. ಕಲಾಕೃತಿಗಳನ್ನು ಯಾವ ರೀತಿಯಿಂದ ರಚಿಸಬೇಕು ಎಂಬುದನ್ನು ಸರಳ ರೀತಿಯಿಂದ ವಿದ್ಯಾರ್ಥಿಗಳಿಗೆ ಮನಮುಟ್ಟುವ ರೀತಿಯಲ್ಲಿ ಹೇಳುತ್ತಿದ್ದರು. ಸಾಹಿತ್ಯದಲ್ಲಿಯೂ ಹೆಚ್ಚಿನ ಪರಿಣಿತಿ ಹೊಂದಿದ್ದರಿಂದ ಕಲಾ ಇತಿಹಾಸ ಹೇಳುತ್ತಿದ್ದರು."[೪೩] ಎಂದು ಅವರ ಶಿಷ್ಯರಾದ ಶ್ರೀ ಕೆ.ವ್ಹಿ. ಕುಂದಗೋಳ ಅವರು ಹೇಳುತ್ತಾರೆ.

"ಕಾಳೆಯವರು ಶಿಕ್ಷಣ ರಂಗಕ್ಕೆ ಅಪಾರ ಸೇವೆ ಸಲ್ಲಿಸಿದ್ದು ಕರ್ನಾಟಕ ಸರಕಾರದ ಪಠ್ಯ ಪುಸ್ತಕಗಳ ರಚನಾ ಕಲಾವಿದರ ಸದಸ್ಯರಾಗಿ ಕರ್ನಾಟಕ ಸರಕಾರದ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಕೇಂದ್ರವು ಕೈಗೊಂಡ ಶಿಕ್ಷಣದ ಪಠ್ಯಕ್ರಮ ನವೀಕರಣ ಕಾರ್ಯದಲ್ಲಿ ಕಲಾವಿದ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ, ಕರ್ನಾಟಕ ಸರಕಾರದ ಅನೌಪಚಾರಿಕ ಶಿಕ್ಷಣದ ಪಠ್ಯ ಪುಸ್ತಕಗಳಿಗೆ ಕಲಾವಿದ ಸಂಪನ್ಮೂಲ ವ್ಯಕ್ತಿಯಾಗಿ ಹಾಗೂ ಸಲಹಾ ಸಮಿತಿಯ ಸದಸ್ಯರಾಗಿ"[೪೪] ಕಾರ್ಯಮಾಡಿದ್ದಾರೆ. ಹೀಗೆ ಹತ್ತು ಹಲವು ಸಮಿತಿ ಸದಸ್ಯರಾಗಿ ಕೆಲಸ ಮಾಡಿದ ಕಾಳೆಯವರು ವಿಜಯ ಕಲಾಮಂದಿರಕ್ಕೆ ಮತ್ತು ಗದುಗಿಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ.

ಶ್ರೀ ವ್ಹಿ.ಟಿ. ಕಾಳೆಯವರು ಹತ್ತು ಹಲವು ವಿಷಯಗಳನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವಂತೆ ಹೇಳಿಕೊಡುತ್ತಿದ್ದುದನ್ನು ಜೊತೆಗೆ ಆಗಾಗ ಕಲಾ ಇತಿಹಾಸದ ಪಾಠಗಳನ್ನು ರಸವತ್ತಾಗಿ ತಿಳಿಸುತ್ತಿದ್ದುದನ್ನು ಅವರ ವಿದ್ಯಾರ್ಥಿ ಡಾ. ಬಿ.ಕೆ. ಹಿರೇಮಠರು ಈಗಲೂ ಸ್ಮರಿಸುತ್ತಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ಕಾಳೆಯವರಿಗೆ ತಾವು ವಿದ್ಯಾಭ್ಯಾಸ ಮಾಡಿದ ಕಲಾಶಾಲೆಯಲ್ಲಿಯೇ ಶಿಕ್ಷಕನಾಗಿ ಸೇವೆ ಸಲ್ಲಿಸುವ ಸದಾವಕಾಶ ಸಿಕ್ಕಿದ್ದರಿಂದ ಅವರ ಕಲಾಬದುಕಿಗೆ ಸ್ಫೂರ್ತಿ ದೊರೆತಂತಾಯಿತು. ವಿಜಯ ಕಲಾಮಂದಿರವು ಬೋಧನಾ ರಂಗವೇ ಸಾಧನಾರಂಗವೂ ಆಗಿ ಅವರ ಮುಂದಿನ ಕಲಾತ್ಮಕ ಬದುಕಿನ ಭವ್ಯ ಸೌಧಕ್ಕೆ ಅಡಿಪಾಯ ಹಾಕಿಕೊಟ್ಟಿತ್ತು"[೪೫] ಬೋಧನೆಯೊಂದಿಗೆ ಕಲಾಕೃತಿ ರಚನಾ ವಿನ್ಯಾಸಕ್ಕೆ

೪೨. ಡಾ. ಎಚ್.ಎನ್.ಚಿತ್ರಗಾರ (ಸಂ) ಲೇ ಎನ್.ಎಮ್.ತಿಪ್ಪೆರುಂದ್ರಯ್ಯ ಚಿತ್ತಾರ ಸ್ಮರಣ ಸಂಚಿಕೆ ಪು.ಸಂ. ೭೮

೪೩. ಕೆ.ವ್ಹಿ. ಕುಂದಗೋಳ ಕಲಾವಿದರು ಗದಗ ಸಂದರ್ಶನ ದಿನಾಂಕ ೧೮-೮-೨೦೦೯

೪೪. ಡಾ. ಎಚ್.ಎನ್.ಚಿತ್ರಗಾರ (ಸಂ) ಲೇ. ಎನ್.ಎಮ್.ತಿಪ್ಪೆರುಂದ್ರಯ್ಯ ಚಿತ್ತಾರ ಸ್ಮರಣ ಸಂಚಿಕೆ ಪು.ಸಂ. ೭೯

೪೫. ಡಾ. ಎಸ್.ಸಿ.ಪಾಟೀಲ (ಸಂ) ವ್ಹಿ.ಟಿ.ಕಾಳೆ, ಕ.ಲ.ಕ. ಅಕಾಡೆಮಿ ಬೆಂ. ಪು. ೪

ಅಡಿಪಾಯವಾಯಿತು ಎಂದು ಡಾ. ಎಸ್.ಸಿ. ಪಾಟೀಲರು ಶ್ರೀ ವ್ಹಿ.ಟಿ. ಕಾಳೆಯವರ ಕುರಿತು ಉಲ್ಲೇಖಿಸಿದ್ದಾರೆ.

"ಕಾಳೆಯವರ ಮಾರ್ಗದರ್ಶನದಲ್ಲಿ ಹಲವಾರು ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ರ್‍ಯಾಂಕುಗಳನ್ನು ವಿವಿಧ ಪರೀಕ್ಷೆಗಳಲ್ಲಿ ಹತ್ತು ಹಲವು ಪ್ರದರ್ಶನಗಳ ಪ್ರಶಸ್ತಿ ಸಹಿತ ಬಹುಮಾನಗಳನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಯಲ್ಲಿ ಕಾಳೆಯವರ ಮಾರ್ಗದರ್ಶನದ ಪಾಲನ್ನು ಮರೆಯುವಂತಿಲ್ಲ. ಒಬ್ಬ ಒಳ್ಳೆಯ ಶಿಕ್ಷಕ ಉತ್ತಮ ಸ್ನೇಹಿತ, ಉತ್ತಮ ಮಾರ್ಗದರ್ಶಕ ಉತ್ತಮ ತತ್ವಜ್ಞಾನಿಯಂತೆ ಇರಬೇಕು ಎಂಬ ಇಂಗ್ಲೀಷ್ ಗಾದೆ ಮಾತಿಗೆ ವ್ಹಿ.ಟಿ. ಕಾಳೆಯವರು ನಿದರ್ಶನದಂತಿದ್ದಾರೆ. ಅವರೊಬ್ಬ ಒಳ್ಳೆಯ ಸ್ನೇಹಿತ, ಒಳ್ಳೆಯ ಮಾರ್ಗದರ್ಶಿಯಾಗಿ, ಅನುಭವಗಳನ್ನು ಧಾರೆ ಎರೆಯುವಲ್ಲಿ ತತ್ವಜ್ಞಾನಿಯಂತೆ ಇರುವುದನ್ನು ಅವರ ನೂರಾರು ವಿದ್ಯಾರ್ಥಿಗಳು ಇಂದಿಗೂ ಸ್ಮರಿಸುತ್ತಾರೆ."[೪೬] ಹೀಗೆ ಬಹುಮುಖ ಪ್ರತಿಭೆಯ ಕಾಳೆಯವರು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಮತ್ತು ವಿಜಯ ಕಲಾಮಂದಿರ ಬೆಳವಣಿಗೆಗಾಗಿ ಸಾಕಷ್ಟು ಶ್ರಮಿಸಿದ್ದಾರೆ.

ಸ.ಮ.ಶಿರಹಟ್ಟಿ : ಗದುಗಿನಲ್ಲಿ ೧೯೨೯ಜೂನ್ ೨೪ ರಂದು ಜನಿಸಿದ ಶ್ರೀ ಸತ್ತಾರಸಾಬ ಮಹ್ಮದಸಾಬ ಶಿರಹಟ್ಟಿಯವರು ಕಲಾವಲಯದಲ್ಲಿ ಪ್ರಮುಖರು. ಇವರು ೧೯೬೩ರಲ್ಲಿ ವಿಜಯ ಕಲಾಮಂದಿರದಲ್ಲಿ ಗೌರವ ಉಪನ್ಯಾಸಕರಾಗಿ ಸೇವೆಗೆ ಸೇರಿದರು. ಚಿತ್ರಕಲೆಯ ಬಗ್ಗೆ ಅಪಾರ ಪ್ರೀತಿ ಇದ್ದ ಇವರಿಗೆ ಕಲಾ ಸಾಹಿತ್ಯದ ಕುರಿತು ವಿಶೇಷ ಆಸಕ್ತಿ ಇತ್ತು. ಕಲಾ ಇತಿಹಾಸದ ಬಗ್ಗೆ ಕಲಾಸಾಹಿತ್ಯದ ಬಗ್ಗೆ ವಿಶೇಷವಾಗಿ ಪಾಠ ಮಾಡುತ್ತಿದ್ದ ಶ್ರೀ ಸ.ಮ. ಶಿರಹಟ್ಟಿಯವರು ಕಲಾ ವಿಚಾರವಾಗಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ.

೧೯೪೯ರಲ್ಲಿ ಹೈಯರ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದವರು. ಹೆಚ್ಚಿನ ಕಲಾ ಅಭ್ಯಾಸಕ್ಕಾಗಿ ಮುಂಬಯಿ ಜೆ.ಜೆ. ಕಲಾಶಾಲೆಯಲ್ಲಿ ಇಂಟರ್ ಮಿಡಿಯೆಟ್ ಡ್ರಾಯಿಂಗ್ ಆ್ಯಂಡ್ ಪೇಂಟಿಂಗ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ೧೯೫೯ರಲ್ಲಿ ಡ್ರಾಯಿಂಗ್ ಟೀಚರ್ಸ್ ಪರೀಕ್ಷೆಯನ್ನು ಪಾಸಾದರು. ೧೯೬೧ರಲ್ಲಿ ಅಡ್ವಾನ್ಸ್ ಡ್ರಾಯಿಂಗ್ ಪರೀಕ್ಷೆ. ೧೯೬೩ರಲ್ಲಿ ಆರ್ಟ್ ಮಾಸ್ಟರ್ ಪರೀಕ್ಷೆಯನ್ನು ಪಾಸಾದರು. ೧೯೬೬ರಲ್ಲಿ ಡಿಪ್ಲೋಮಾ ಇನ್ ಮಾಡೆಲಿಂಗ್, ೧೯೬೪ರಲ್ಲಿ ಗೌರಮೆಂಟ್ ಡಿಪ್ಲೋಮಾ ಪರೀಕ್ಷೆಯನ್ನು ಪಾಸು ಮಾಡಿದ ಇವರು ಸದಾ ಕಲಿಯುವ ಆಸೆಯುಳ್ಳವರಾಗಿದ್ದರು.

"ಕಲಾಕೃತಿ ರಚನೆ, ಕಲಾಪ್ರದರ್ಶನ ಮುಂತಾದ ವಿಷಯಗಳಿಗಿಂತ ಹೆಚ್ಚಾಗಿ ಇವರು ವಿದ್ಯಾರ್ಥಿಗಳ ಕಲಿಕೆಯ ಆಸಕ್ತಿ ಮತ್ತು ಕಲಾಬರವಣಿಗೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರಾಗಿದ್ದಾರೆ.[೪೭] ಕಲಾ ಇತಿಹಾಸ ವಿಷಯ ಕುರಿತು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಚಿತ್ರಕಲಾ ಕೈದೀಪ, ಚಿತ್ರಕಲೆಯ ಇತಿಹಾಸ-೨ ಚಿತ್ರರಚನೆಯ ಇತಿಹಾಸ ಭಾಗ-೩ ಕಲೆಯ ಕೊಲೆ, ಮೇವಾಡದ ಸ್ತಂಭ ಮುಂತಾದ ಕಲಾ ಇತಿಹಾಸ ಕುರಿತು ಬರೆದಿದ್ದಾರೆ. ಶಿರಹಟ್ಟಿಯವರು ಕಲೆಯ ಜೊತೆಗೆ ಅನೇಕ

---

೪೬. ಡಾ. ಎಸ್.ಸಿ.ಪಾಟೀಲ (ಸಂ) ವ್ಹಿ.ಟಿ.ಕಾಳೆ, ಕ.ಲ.ಕ. ಅಕಾಡೆಮಿ ಬೆಂ. ಪು. ೪

೪೭. ಪಿ.ವ್ಹಿ.ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲಯ ಕೊಡುಗೆ ಪು.ಸಂ. ೪೬

ಸಂಘ-ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳನ್ನು ಉತ್ತಮ ರೀತಿಯಲ್ಲಿ ನಡೆಸಿದ್ದಾರೆ. ವಿದ್ಯಾರ್ಥಿಗಳಿಗೆ ಮಾರ್ಮಿಕ ರೀತಿಯಿಂದ ಹೇಳುತ್ತಿದ್ದರು. ಆದ್ದರಿಂದಲೇ ಶ್ರೀಯುತರು ೧೯೮೩ರಲ್ಲಿ ಕರ್ನಾಟಕ ರಾಜ್ಯ ಸರಕಾರದಿಂದ ರಾಜ್ಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ೧೯೮೮ರಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದುಕೊಂಡ ಶ್ರೀ ಸ.ಮ.ಶಿರಹಟ್ಟಿಯವರು ವಿಜಯ ಕಲಾಮಂದಿರದಲ್ಲಿ ಉಪನ್ಯಾಸಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದರ ಮೂಲಕ ವಿಜಯ ಕಲಾ ಮಂದಿರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ."[೪೮]

ಸ.ಮ.ಶಿರಹಟ್ಟಿಯವರು ಅನೇಕ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಕೃತಪುರ ಕಲಾಕೇಂದ್ರ ಸ್ಥಾಪಿಸಿ ಇದಕ್ಕೆ ಸಂಸ್ಥಾಪಕ ನಿರ್ದೇಶಕರಾಗಿ, ಕಾರ್ಯದರ್ಶಿಗಳಾಗಿ ಎಂ.ಕೆ.ಎಸ್.ಬಳಗ ಕಾಗದಗೇರಿ ಗದಗ ಇದರ ಸಂಸ್ಥಾಪಕ ಕಾರ್ಯದರ್ಶಿಗಳಾಗಿ ಹೀಗೆ ಅನೇಕ ಸಂಘ-ಸಂಸ್ಥೆಗಳನ್ನು ಸ್ಥಾಪಿಸಿ ಸಕ್ರೀಯವಾಗಿ ಕೆಲಸ ನಿರ್ವಹಿಸಿದ್ದಾರೆ. ಅನೇಕ ಸರಕಾರಿ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. "೧೯೭೦ರಲ್ಲಿ ಉತ್ತಮ ಅಧ್ಯಾಪಕ" ಪ್ರಶಸ್ತಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರ ಅವರಿಂದ ೧೯೭೮ರಲ್ಲಿ "ಕವಿಗುರು" ಪ್ರಶಸ್ತಿ, ಶಾಂತಿ ಚರ್ಚಾಸಮಿತಿ ಗದಗ ಇವರಿಂದ ೧೯೮೩ರಲ್ಲಿ ರಾಜ್ಯ ಪ್ರಶಸ್ತಿ, ಭಾರತ ಸರಕಾರ ದೆಹಲಿ, ೧೯೮೮ರಲ್ಲಿ "ಕುಶಲಕವಿ" ಬಿರುದು, ಪಂಡಿತ ಪಂಢರಿನಾಥಾಚಾರ್ಯರಿಂದ ೧೯೯೧ರಲ್ಲಿ "ಗುರುಕುಲ ಸೋಮ" ಪ್ರಶಸ್ತಿ, ರೋಟರಿ ಸಂಸ್ಥೆ ಗದಗ ಇವರಿಂದ ಹೀಗೆ ಅನೇಕ ಪ್ರಶಸ್ತಿ ಪಡೆದಿದ್ದಾರೆ.[೪೯] ಸ.ಮ.ಶಿರಹಟ್ಟಿಯವರು ಅನೇಕ ನಾಟಕಗಳನ್ನು ಬರೆದು ನಿರ್ದೇಶಿಸಿ ಪ್ರದರ್ಶನ ನೀಡಿದ್ದಾರೆ. ಅವುಗಳೆಂದರೆ, ನೆಲೆಇಲ್ಲದ ನಾರಿ, ಅರ್ಥಾತ್ ಹಟವಾದಿ ಹೆಣ್ಣು, ಪಾವನ ಪ್ರೇಮ, ಅರ್ಥಾತ್ ಕಾಳಿಚರಣ, ಮಂಡಗೈ ಗಂಡುಗಲಿ, ಸಾಮ್ರಾಟ್ ಅಶೋಕ ಅರ್ಥಾತ್ ದೇನಾಂಡ್ರಿಯ, ವಿಚಿತ್ರ ವಿಧವೆ ಅರ್ಥಾತ್ ಅತ್ತಿಗೆ, ದಿನ್ ಫರೇಶಾ, ಶಿಶುನಾಳಧೀಶ, ಜೀವನದಾಯಿನಿ, ಅಲ್ಲಾಹುಅಕ್ಬರ್ ಅರ್ಥಾತ್ ಹರಹರ ಮಹಾದೇವಾ, ಸ್ವಾಮಿ ಭಕ್ತ ಅರ್ಥಾತ್ ಕಾರಸ್ಥಾನ, ಹುತಾತ್ಮ,[೫೦] ಮುಂತಾದವುಗಳು ಶಿರಹಟ್ಟಿಯವರು ಬರೆದ ನಾಟಕಗಳಾಗಿವೆ.

ಶ್ರೀ ಸ.ಮ.ಶಿರಹಟ್ಟಿಯವರು ಚಿತ್ರಕಲೆ, ಚಿತ್ರಕಲಾ ಸಾಹಿತ್ಯ, ಜಾನಪದ ಸಾಹಿತ್ಯ, ನಾಟಕ ಸಾಹಿತ್ಯ, ಅನುವಾದಿತ ಗ್ರಂಥಗಳನ್ನು ಬರೆದು, ಅನೇಕ ವಿಷಯಗಳ ಕುರಿತು ವಿಭಿನ್ನ ರೀತಿಯಲ್ಲಿ ಬಹುಮುಖ ಪ್ರತಭೆಯನ್ನು ಹೊಂದಿದ ಒಬ್ಬ ರಾಷ್ಟ್ರ ಪ್ರಶಸ್ತಿ ಪಡೆದ ಕಲಾವಿದ, ಕಲಾಶಿಕ್ಷಕ. ಅನೇಕ ವಿದ್ಯಾರ್ಥಿಗಳಿಗೆ ದಾರಿದೀಪವಾಗಿ ಒಬ್ಬ ಆದರ್ಶ ಶಿಕ್ಷಕನಾಗಿ ಶ್ರೀ ಶಿರಹಟ್ಟಿಯವರು ವಿಜಯ ಕಲಾ ಮಂದಿರದಲ್ಲಿ ಗೌರವ ಉಪಪ್ರಾಚಾರ್ಯರಾಗಿ. ಮಾರ್ಗದರ್ಶನ ನೀಡಿ ವಿಜಯ ಕಲಾ ಮಂದಿರದಲ್ಲಿ ಗೌರವ ಉಪಪ್ರಾಚರ್ಯರಾಗಿ, ಮಾರ್ಗದರ್ಶನ ನೀಡಿ ವಿಜಯ ಕಲಾ ಮಂದಿರಕ್ಕೆ ಮತ್ತು ಗದಗ ಜಿಲ್ಲೆಗೆ ಅಲ್ಲದೇ ಈ ರಾಜ್ಯಕ್ಕೆ ಮಾದರಿ ಶಿಕ್ಷಕನಾಗಿ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ.

---

೪೮. ಹಾಮಿದುಲ್ಲಾ ಎ. ಶಿರಹಟ್ಟಿ ಇವರ ಸಂದರ್ಶನ ೨೦-೭-೨೦೦೯

೪೯. ಎಸ್.ಎಂ. ಶಿರಹಟ್ಟಿಯವರ ಪರಿಚಯ ಪತ್ರಗಳು

೫೦. ಎಸ್.ಎಂ. ಶಿರಹಟ್ಟಿಯವರ ಪರಿಚಯ ಪತ್ರಗಳು

ಜಿ.ಬಿ. ನವಲಗುಂದ : ಶ್ರೀ ಜಿ.ಬಿ.ನವಲಗುಂದ ಇವರು ವಿಜಯ ಕಲಾಮಂದಿರದಲ್ಲಿ ಗೌರವ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಕಲಾವಿಷಯ ಹೇಳುವುದರ ಜೊತೆ ಪಾಠ ಮಾಡುವಾಗ ಹಾಸ್ಯದ ಮೂಲಕ ವಿದ್ಯಾರ್ಥಿಗಳಲ್ಲಿ ಕಲಿಕೆಯ ಆಸಕ್ತಿ ಹುಟ್ಟಿಸುವ ಚಾಣಾಕ್ಷತೆ ನವಲಗುಂದ ಅವರಲ್ಲಿತ್ತು. ಇವರ ಕೈಯಲ್ಲಿ ಕಲಿತ ವಿದ್ಯಾರ್ಥಿಗಳು ಸದಾ ಅವರನ್ನು ನೆನಪಿಸಿಕೊಳ್ಳುತ್ತಾರೆ. ಪಾಠ ಮಾಡುವಾಗ ಕರಿಹಲಿಗೆಯ ಮೇಲಿನ ಆಕರ್ಷಕ ರೇಖಾ ಚಿತ್ರಗಳು ವಿದ್ಯಾರ್ಥಿಗಳಲ್ಲಿ ಕುತೂಹಲ ಕೆರಳಿಸುತ್ತಿತ್ತು. ಸರಳ ರೀತಿಯಿಂದ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಪಾಠ ಬೋಧನೆಯನ್ನು ಮಾಡುತ್ತಿದ್ದ ಶ್ರೀ ಜಿ.ಬಿ. ನವಲಗುಂದರವರು ವಿದ್ಯಾರ್ಥಿಗಳ ಪ್ರೀತಿಯ ಗುರುಗಳಾಗಿದ್ದರು.

ವಿಶೇಷವಾಗಿ ಸ್ಮರಣ ಚಿತ್ರಣವನ್ನು ಬಹು ಸುಂದರವಾಗಿ ವಿಷಯಕ್ಕೆ ತಕ್ಕಂತೆ ಹಿನ್ನೆಲೆಯನ್ನು ಪೆನ್ಸಿಲ್ ಹಾಗೂ ವರ್ಣಗಳ ಬಳಕೆಯಲ್ಲಿ ನೆರಳು-ಬೆಳಕಿನ ಕಡೆಗೆ ಹೆಚ್ಚು ಒತ್ತು ನೀಡಿ ಸುಂದರವಾಗಿ ರಚಿಸುತ್ತಿದ್ದರು. ನೆರಳು-ಬೆಳಕಿನಲ್ಲಿ ವಿನ್ಯಾಸ ರಚಿಸುವ ಪ್ರಾವೀಣ್ಯತೆ ಹೊಂದಿದ್ದರು. "ಸಂಯೋಜನಾ ಚಿತ್ರದಲ್ಲಿ ಪ್ರಮಾಣಬದ್ಧತೆ, ಸಮತೋಲನ ಇಂತಹ ವಿಷಯಗಳನ್ನು ಸ್ಪಷ್ಟವಾಗಿ ವಿದ್ಯಾರ್ಥಿಗಳಿಗೆ ತಿಳಿಸುತ್ತಿದ್ದರು."[೫೧]

ಚಿತ್ರಕಲಾ ಶಿಕ್ಷಣದಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ, ಮೂರ್ತಿಶಿಲ್ಪ ಕಲೆಗಳಲ್ಲಿ ಡಿಪ್ಲೋಮಾ ಪರೀಕ್ಷೆಗಳನ್ನು ಪಾಸಾಗಿದ್ದ ಶ್ರೀ ನವಲಗುಂದ ರವರು ತಾವು ಕಲಿತ ಎಲ್ಲ ವಿದ್ಯೆಯನ್ನು ವಿದ್ಯಾರ್ಥಿಗಳಿಗೆ ಧಾರೆಯೆರೆದು ವಿದ್ಯಾರ್ಥಿಗಳನ್ನು ಮಕ್ಕಳಂತೆ ಪ್ರೀತಿಸಿ ಮತ್ತು ಅವರ ಪ್ರೀತಿಗೆ ಪಾತ್ರರಾಗಿ ವಿಜಯ ಕಲಾಮಂದಿರದಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ.

ಶ್ರೀ ಎ.ಆಯ್. ಕಮಾನಗಾರ : ಶ್ರೀ ಎ.ಆಯ್.ಕಮಾನಗಾರ ಇವರು ಗದುಗಿನವರಾಗಿದ್ದು, ಬಾಲ್ಯದಲ್ಲಿಯೇ ಕಲೆಯ ಕುರಿತು ಹೆಚ್ಚು ಆಸಕ್ತಿ ಹೊಂದಿದವರಾಗಿದ್ದರು. ಸಿ.ಎನ್.ಪಾಟೀಲ ರವರ ಸಮಕಾಲೀನವರಾದ ಇವರು ಉನ್ನತ ವ್ಯಾಸಂಗಕ್ಕಾಗಿ ಮುಂಬೈಯ ಸರ್ ಜೆ.ಜೆ.ಕಲಾಶಾಲೆಯಲ್ಲಿ ಆರ್ಟ್ ಮಾಸ್ಟರ್ ಮತ್ತು ಡಿಪ್ಲೋಮಾ ಪರೀಕ್ಷೆಗಳನ್ನು ಪಾಸಾದರು. ಜೆ.ಜೆ. ಕಲಾಶಾಲೆಯಲ್ಲಿ ಕಲಿಯುವ ವೇಳೆಯಲ್ಲಿ ಎಲ್ಲ ಗುರುಗಳ ಪ್ರೀತಿಗೆ ಪಾತ್ರರಾಗಿದ್ದರು. ಗೆಳೆಯರ ಜೊತೆ ಆತ್ಮೀಯತೆಯಿಂದ ಕಲಾಕೃತಿ ರಚಿಸುವುದರ ಮೂಲಕ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಶ್ರೀ ಎ.ಆಯ್.ಕಮಾನಗಾರ ಅವರು ಉತ್ತಮ ಕಲಾಭ್ಯಾಸಗೈದು ಗದುಗಿಗೆ ಬಂದಾಗ ವಿಜಯ ಕಲಾಮಂದಿರದ ರೂವಾರಿಯಾದ ಶ್ರೀ ಟಿ.ಪಿ.ಅಕ್ಕಿಯವರು ಇವರ ಕಲಾ ಪ್ರತಿಭೆಯನ್ನು ನೋಡಿ ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರಾಗಿ ನೇಮಕಮಾಡಿಕೊಂಡರೆ ವಿದ್ಯಾರ್ಥಿಗಳಿಗೆ ಅನುಕೂಲ ಆಗಬಹುದು ಎಂಬ ಆಶೆಯಿಂದ ಶ್ರೀ ಎ.ಆಯ್.ಕಮಾನಗಾರರವರಿಗೆ ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಂಡರು. ಶ್ರೀ ಟಿ.ಪಿ.ಅಕ್ಕಿಯವರ ಗೌರವಕ್ಕೆ ತಕ್ಕಂತೆ ನಡೆದುಕೊಂಡರು.

"ಶ್ರೀಯುತರು ಪಾಠ ಮಾಡುವಾಗ ಎಲ್ಲ ವಿದ್ಯಾರ್ಥಿಗಳನ್ನು ತಮ್ಮ ಕಡೆಗೆ ಸೆಳೆದುಕೊಂಡು ಸರಳ ರೀತಿಯಲ್ಲಿ ಕಲಾಕೃತಿ ರಚನೆ ಮಾಡಿಸುವುದು, ಯಥಾದರ್ಶನ ವಿಷಯವನ್ನು ಎಲ್ಲರಿಗೆ ತಿಳಿಯುವ ರೀತಿಯಲ್ಲಿ ಬಹಳ ಸರಳವಾಗಿ ಹೇಳುತ್ತಿದ್ದರು. ಹಾಗೂ ಬಹಳ ಮೃದು ಸ್ವಭಾವದವರಾಗಿದ್ದರು.

೫೧. ಪಿ.ಬಿ. ಬಂಡಿ ಚಿತ್ರಕಲಾಕ್ಷೇತ್ರಕ್ಕೆ ಗದಗ ಜಿಲ್ಲೆ ಕೊಡುಗೆ ಪು.ಸಂ.೪೭

ಸದಾ ಕಲಿಯುವ ಮತ್ತು ಕಲಿಸುವ ಹಂಬಲದಲ್ಲಿದ್ದ ಕಮಾನಗಾರರು ತಾವು ಕಲಿಸಿದ ಅನೇಕ ವಿದ್ಯಾರ್ಥಿಗಳ ಪ್ರೀತಿಯ ಗುರುಗಳಾಗಿ ತಾವು ಕಲಸಿದ ಗುರುಗಳಿಗೆ ಉತ್ತಮವಾದ ಸೇವೆ ಸಲ್ಲಿಸುವುದರ ಮೂಲಕ ವಿಜಯ ಕಲಾಮಂದಿರದ ಬೆಳವಣಿಗೆಯಲ್ಲಿ ಶ್ರೀ ಕಮಾನಗಾರರ ಕೊಡುಗೆ ಬಹು ದೊಡ್ಡದಾಗಿತ್ತು. "ವಿಜಯ ಕಲಾಮಂದಿರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಇವರು ಬೇರೆ ಕಡೆಗೆ ನೇಮಕಾತಿ ಹೊಂದಿ ತೆರಳಿದರು. ಮುಂದಿನ ದಿನಗಳಲ್ಲಿ ಆಯ್.ಜಿ.ಮಿಂಟ್‌ಬಾಂಟಿಯಿಂದ ENUSS ಮೆಡಲ್ ೧೯೮೧ರಲ್ಲಿ ರಾಷ್ಟ್ರಪತಿಗಳಿಂದ ಪಡೆದುಕೊಂಡ ಇವರು ಆದರ್ಶ ಕಲಾಶಿಕ್ಷಕರಾಗಿದ್ದರು."[೫೨]

ಶ್ರೀ ಎನ್.ಎಸ್.ಶಿಲ್ಪಿ : ವಿಜಯ ಕಲಾಮಂದಿರದಲ್ಲಿ ಚಿತ್ರಕಲೆಯ ಜೊತೆಗೆ ಶಿಲ್ಪಕಲೆಯನ್ನು ಸಹಿತ ಆರಂಭವಾಯಿತು. ಈ ಶಿಲ್ಪಕಲೆಯ ಶಿಕ್ಷಣವನ್ನು ನೀಡಲು ಒಬ್ಬ ಉತ್ತಮ ಶಿಲ್ಪಕಲಾ ಶಿಕ್ಷಕರನ್ನು ಹುಡುಕುವಾಗ ಗದಗದ ಜಿಲ್ಲೆಯು ಹೊಂಬಳ ಗ್ರಾಮದ ಶಿಲ್ಪಕಲಾವಿದರಾದ ಶ್ರೀ ನಾಗಲಿಂಗಾಚಾರ್ಯ ಶಂಕ್ರಪ್ಪಾಚಾರ್ಯ ಶಿಲ್ಪಿ ಇವರು ಸಿಕ್ಕರು.

೧೯೩೫ರಲ್ಲಿ ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ಜನಿಸಿದ ಶ್ರೀ ಎನ್.ಎಸ್. ಶಿಲ್ಪಿಯವರು ಬಾಲ್ಯದಿಂದಲೇ ಕಲೆಯ ಕಡೆಗೆ ಹೆಚ್ಚು ಒಲವು ತೋರಿಸುತ್ತಿದ್ದರು. ಚಿತ್ರಕಲೆಯಲ್ಲಿ ಡಿಪ್ಲೋಮಾ ಜೊತೆಗೆ ಶಿಲ್ಪಕಲೆಯಲ್ಲಿ ಡಿಪ್ಲೋಮಾವನ್ನು ಜೆ.ಜೆ. ಕಲಾಶಾಲೆಯಲ್ಲಿ ಪಾಸಾದ ಶ್ರೀ ಶಿಲ್ಪಿಯವರು ಶಿಲ್ಪಕಲೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದವರಾಗಿದ್ದರು. ಮಣ್ಣಿನಲ್ಲಿ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಶಿಲ್ಪದಲ್ಲಿ ಸರಳವಾಗಿ ವಿದ್ಯಾರ್ಥಿಗಳಿಗೆ ತಿಳಯುವಂತೆ ಪಾಠ ಬೋಧನೆಯನ್ನು ಮಾಡುತ್ತಿದ್ದರು. ಇವರ ಕಲಿಸುವಿಕೆಯಿಂದ ಅನೇಕ ವಿದ್ಯಾರ್ಥಿಗಳು ಶಿಲ್ಪಕಲಾ ಡಿಪ್ಲೋಮಾ ಪರೀಕ್ಷೆಗೆ ಕುಳಿತುಕೊಳ್ಳಲಿಕ್ಕೆ ಕಾರಣವಾಯಿತು.

"ವಿಜಯ ಕಲಾಮಂದಿರದಲ್ಲಿ ಶಿಲ್ಪಕಲಾ ವಿಭಾಗದಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿದ ಇವರು ಅನೇಕ ಪ್ರಶಸ್ತಿ–ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಅಂಥವರಲ್ಲಿ ರಾಷ್ಟ್ರಪತಿಗಳಿಂದ ಸನ್ಮಾನಿಸಲ್ಪಟ್ಟ ಇವರು ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿಲಭಿಸಿದೆ. ಅಲ್ಲದೇ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ, ಜಕಣಾಚಾರಿ ಪ್ರಶಸ್ತಿಯ ಆಯ್ಕೆ ಸಮಿತಯ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದಾರೆ."[೫೩] ಶ್ರೀ ಎನ್.ಎಸ್.ಶಿಲ್ಪಿಯವರು ಅನೇಕ ಶಿಲ್ಪಕಲಾ ಕೃತಿಗಳನ್ನು ರಚನೆ ಮಾಡಿದ್ದು ರಾಜ್ಯ, ಹೊರ ರಾಜ್ಯಗಳಲ್ಲಿ ಅವರ ಶಿಲ್ಪಕಲಾಕೃತಿಗಳು ನೆಲೆಗೊಂಡಿವೆ.

"ಶ್ರೀ ಎನ್.ಎಸ್. ಶಿಲ್ಪಿಯವರು ಪುಣೆಯ ಪ್ರಖ್ಯಾತ ದಗಡುಸೇಠ ಗಣಪತಿಯ ಮೂರ್ತಿಯನ್ನು ನಿರ್ಮಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ."[೫೪] ಶಿಲ್ಪಕಲೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವಿದ್ಯಾರ್ಥಿಗಳಿಗೆ ನೆಚ್ಚಿನ ಗುರುಗಳಾಗಿ ಶಿಲ್ಪಕಲೆಯುಲ್ಲಿ ಪ್ರಬುದ್ಧತೆಯುನ್ನು ಹೊಂದಿದ ಶ್ರೀ ಎನ್.ಎಸ್. ಶಿಲ್ಪಿಯವರು ವಿಜಯ ಕಲಾ ಮಂದಿರದ ಶಿಲ್ಪಕಲಾ ಶಿಕ್ಷಣ ವಿಭಾಗವು ಉತ್ತಮವಾಗಿ

೫೨. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ಗದಗುಗಿನ ವಿಜಯಕಲಾಮಂದಿರ ಕೊಡುಗೆ ಪು.ಸಂ. ೪೭

೫೩. ಪಿ.ಬಿ.ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ಕೊಡುಗೆ ಪು.ಸಂ ೪೮

೫೪. ಪಿ.ಬಿ.ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ಕೊಡುಗೆ ಪು.ಸಂ ೪೮

ಬೆಳೆಯಲಿಕ್ಕೆ ಪ್ರಮುಖ ಪಾತ್ರವಹಿಸಿದ್ದಾರೆ. ಇಂಥ ಕಲಾವಿದರಿಂದ ವಿಜಯ ಕಲಾಮಂದಿರ ಬೆಳೆಯಲಿಕ್ಕೆ ಅನುಕೂಲವಾಯಿತು.

ಶ್ರೀ ಎಸ್.ಎಂ.ಅರ್ಕಸಾಲಿ : ಶ್ರೀ ಎಸ್.ಎಂ.ಅರ್ಕಸಾಲಿಯವರು ೧೯೫೪ರಲ್ಲಿ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಕಳಕೋಳ ಗ್ರಾಮದಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯ ಕಡೆಗೆ ಹೆಚ್ಚು ಆಸಕ್ತಿ ಇದ್ದ ಇವರು ಉನ್ನತ ವ್ಯಾಸಂಗಕ್ಕಾಗಿ ವಿಜಯ ಕಲಾಮಂದಿರದಲ್ಲಿ ಪ್ರವೇಶ ಪಡೆದರು. ಎಲ್ಲ ಉಪನ್ಯಾಸಕರ ಪ್ರೀತಿಯ ಶಿಷ್ಯರಾಗಿ ಶ್ರೀ ಎಂ.ಎ. ಚೆಟ್ಟಿ, ಸಿ.ಎನ್. ಪಾಟೀಲರವರ ಮಾರ್ಗದರ್ಶನದಲ್ಲಿ ಟಿ.ಪಿ. ಅಕ್ಕಿಯವರ ಆಶೀರ್ವಾದದಿಂದ ಇವರು ಜಿ.ಡಿ. (ಆರ್ಟ್) ಜಿ.ಡಿ. (ಮಾಡಲಿಂಗ್)ದಲ್ಲಿ ಮೂರ್ತಿ ಶಿಲ್ಪದಲ್ಲಿ ರ್‍ಯಾಂಕ್ ಗಳಿಸಿದ್ದಾರೆ.

ಶ್ರೀ ಎಸ್.ಎಂ. ಅರ್ಕಸಾಲಿಯವರ ಕಲಾಪ್ರತಿಭೆಯನ್ನು ನೋಡಿ ಟಿ.ಪಿ.ಅಕ್ಕಿಯವರು ವಿಜಯ ಕಲಾಮಂದಿರದ ಗೌರವ ಉಪನ್ಯಾಸಕರಾಗಿ ೧೯೭೪ರಲ್ಲಿ ನೇಮಕ ಮಾಡಿಕೊಂಡು ಅಧ್ಯಾಪಕರಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಟ್ಟರು. ಶ್ರೀಯುತರು ೧೯೭೪ ರಿಂದ ೧೯೭೭ರ ವರೆಗೆ ಇಲ್ಲಿ ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಕಲಾ ವಿದ್ಯಾಭ್ಯಾಸದ ಜೊತೆಗೆ ಮಾಡಲಿಂಗ್ ಕುರಿತು ವಿದ್ಯಾರ್ಥಿಗಳಿಗೆ ತಿಳಿಸುತ್ತಿದ್ದರು. ಅವರ ಅನುಭವದಿಂದ ಪಾಠಬೋಧನೆಯು ಉತ್ತಮ ರೀತಿಯದಾಗಿತ್ತು. ಇಂಥ ಉತ್ತಮ ಅಧ್ಯಾಪಕರಾದ ಶ್ರೀ ಅರ್ಕಸಾಲಿಯವರು "೧೯೭೭ ರಿಂದ ಸಂತ ಜೋಸೆಫ್ ಪ್ರೌಢಶಾಲೆ, ಹಾಸನದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಶ್ರೀಯುತರು "೧೯೭೮ರಲ್ಲಿ ವಿಜಯ ಕಲಾಮಂದರದಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಹಾಗೂ ಹಾಸನದಲ್ಲಿ ೩ ಬಾರಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮತ್ತು ೨ಬಾರಿ ಗುಂಪು ಕಲಾಪ್ರದರ್ಶನ ಮಾಡಿದ್ದಾರೆ."[೫೫] ಶ್ರೀ ಅರ್ಕಸಾಲಿಯವರು ಶಿಕ್ಷಣ ನೀಡುವುದರ ಜೊತೆಗೆ ಸಂಘಟನಾಚತುರರಾಗಿದ್ದರು. ಹಾಸನ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿದ್ದಾರೆ. ಶಿಕ್ಷಕರ ಬಗ್ಗೆ ಕಾಳಜಿ ಇದ್ದ ಇವರು ಅನೇಕ ಕಡೆ ಕಲಾಪ್ರದರ್ಶನ ಮಾಡಿ ಜನಮೆಚ್ಚುಗೆ ಪಡೆದಿದ್ದಾರೆ. ರಾಜ್ಯ ಲಲಿತಕಲಾ ಅಕಾಡೆಮಿ, ಮೈಸೂರು ದಸರಾ ಪ್ರದರ್ಶನ ಮುಂತಾದ ಕಡೆಗೆ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಅಲ್ಲದೇ ಇವರು ವಿವಿಧ ಮಾಧ್ಯಮಗಳಲ್ಲಿ ಬೆಳ್ಳಿ, ತಾಮ್ರ, ಬಳಪದಕಲ್ಲು, ಪ್ಲಾಸ್ಟರ್ ಆಫ್ ಪ್ಯಾರಿಸ್ ಮೊದಲಾದ ಮಾಧ್ಯಮಗಳಲ್ಲಿ ಅನೇಕ ವಿಗ್ರಹಗಳನ್ನು ತಯಾರಿಸಿದ್ದಾರೆ. ಅನೇಕ ಪ್ರಶಸ್ತಿ–ಪುರಸ್ಕಾರಗಳನ್ನು ಪಡೆದಿದ್ದಾರೆ. ವಿಶ್ವಕರ್ಮ ಸಮಾಜದವರು ಇವರ ಕಲೆಯನ್ನು ಗುರುತಿಸಿ "ಕಲಾನಿಧಿ" ಎಂಬ ಬಿರುದು ನೀಡಿ ಸನ್ಮಾನಿಸಿದ್ದಾರೆ. ಇಂಥ ಒಬ್ಬ ಕಲಾವಿದ ವಿಜಯ ಕಲಾಮಂದಿರದ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಗದುಗಿಗೆ ಕೊಡುಗೆ ನೀಡಿದ್ದಾರೆ.

ಎಂ. ಆರ್. ಬಾಗವಾನ : ಶ್ರೀ ಎಂ.ಆರ್. ಬಾಗವಾನರವರು ವಿಜಯಕಲಾಮಂದಿರದಲ್ಲಿಯೇ ಕಲಿತು ಇಲ್ಲಿಯೇ ಶಿಲ್ಪಕಲಾ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಬಾದಾಮಿ ತಾಲೂಕಿನ ಜಾಲಿಹಾಳ ಗ್ರಾಮದಲ್ಲಿ ೧೯೪೭ರಲ್ಲಿ ಜನಿಸಿದ ಇವರು ಚಿತ್ರಕಲೆ ಮತ್ತು ಶಿಲ್ಪಕಲೆಯಲ್ಲಿ ಡಿಪ್ಲೋಮಾ ಪಡೆದುಕೊಂಡಿದ್ದರು. ಮಾಡಲಿಂಗ್ ಕೃತಿ ರಚನೆಯಲ್ಲಿ ವಿಶೇಷವಾಗಿ ಅಧ್ಯಯನಮಾಡಿ ಸೃಜನಾತ್ಮಕ

೫೫. ಪಿ.ಬಿ.ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ಕೊಡುಗೆ ಪು.ಸಂ ೪೯

ನೈಜ ಮೂರ್ತಿಗಳನ್ನು ಮಾಡುತ್ತಿದ್ದರು. ಶಿಲ್ಪಕಲಾಶಿಕ್ಷರಾಗಿದ್ದರು ಚತ್ರಕಲಾ ಪ್ರಾಮಿಣ್ಯತೆ ಪಡೆದುಕೊಂಡಿದ್ದರು ಶಿಲ್ಪಕಲಾವಿಭಾಗದಲ್ಲಿ ಸೇವೆಸಲ್ಲಿಸಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿ ಅನೇಕ ವಿದ್ಯಾರ್ಥಿಗಳ ನೆಚ್ಚಿನ ಶಿಕ್ಷಕರಾಗಿ ೧೦ ವರ್ಷಗಳವರೆಗೆ ವಿಜಯಕಲಾಮಂದಿರದಲ್ಲಿ ಉಪನ್ಯಾಸಕರಾಗಿ ವಿಜಯಕಲಾಮಂದಿರದ ಶಿಲ್ಪಕಲಾವಿಭಾಗ ಬೆಳೆಯಲಿಕ್ಕೆ ಇವರ ಸೇವೆಯ ಅನುಪವಾಗಿತ್ತು.[೫೬]

ಶ್ರೀ ಎಂ.ಆರ್. ಬಾಗವಾನರವರ ಅನೇಕ ಶ್ರೇಷ್ಠ ಕಲಾಕೃತಿಗಳು ವಿದ್ಯಾರ್ಥಿಗಳಿಗೆ ನಾಡಿಗೆ ಕೊಡುಗೆಯಾಗಿದೆ. ಶಿಲ್ಪಕಲೆಯ ಜೊತೆಗೆ ಕಲಾ ಇತಿಹಾಸ ಯಥಾದರ್ಶನ ಹೆಳಿ ವಿದ್ಯಾರ್ಥಿಗಳಿಂದ ಮೆಚ್ಚುಗೆ ಪಡೆದುಕೊಂಡಿದ್ದಾರೆ.

ಸಿ.ಟಿ. ರಾಯಕರ : ಶ್ರೀ ಸಿ.ಟಿ.ರಾಯಕರ ಇವರು ವಿಜಯ ಕಲಾಮಂದಿರದ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಕಲಾಮಂದಿರದ ಬೆಳವಣಿಗೆಗೆ ಇವರೂ ಕಾರಣೀಕರ್ತರು. ಶ್ರೀ ಸಿ.ಟಿ.ರಾಯ್ಕರ್ ರವರು ಮುಂಬೈಯ ಸರ್, ಜೆ.ಜೆ.ಕಲಾಶಾಲೆಯಲ್ಲಿ ಕಲಾವಿದ್ಯಾಭ್ಯಾಸ ಪೂರೈಸಿ ಕಲಾಶಿಕ್ಷಕರಾಗಿ, ಕಲಾವಿದರಾಗಿ ಬಾಳಿ ಬದುಕಿದವರು.

ಚಿತ್ರರಚನೆಯಲ್ಲಿ ರಾಯ್ಕರ್‌ರವರು ವಿಶಿಷ್ಟತೆಯನ್ನು ಹೊಂದಿದ್ದರು. ಹೆಚ್ಚಾಗಿ ಇವರು ಜಲವರ್ಣದಲ್ಲಿ ಕಲಾಕೃತಿಗಳನ್ನು ರಚಿಸುತ್ತಿದ್ದರು. ಬಣ್ಣವನ್ನು ಕಲಾಕೃತಿಗೆ ಲೇಪಿಸಿ ಅದನ್ನು ತೊಳೆದು (ವಾಷ್) ವಿಧಾನದಲ್ಲಿ ಕಲಾಕೃತಿಗಳನ್ನು ರಚನೆ ಮಾಡಿದ್ದಾರೆ. ಇಂಥಹ ಒಂದು ತಂತ್ರಗಾರಿಕೆಯ ಕುರಿತು ವಿದ್ಯಾರ್ಥಿಗಳಿಗೆ ಕಲಾಕೃತಿ ರಚಿಸವಂತೆ ಮಾರ್ಗದರ್ಶನ ಮಾಡುತ್ತಿದ್ದರು. ಅಲ್ಲದೇ ರೇಖಾ ಚಿತ್ರಗಳನ್ನು ಬಹಳಷ್ಟು ಸುಂದರವಾಗಿ ರಚಿಸುವಂತೆ ಸರಳ ರೀತಿಯಲ್ಲಿ ತಿಳಿಯುವಂತೆ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದರು.

ಶ್ರೀ ಸಿ.ಟಿ.ರಾಯ್ಕರ್ ರವರು ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯೆ ನೀಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಒಳ್ಳೆಯ ನಡತೆ, ವಿನಯತೆಯ ಕುರಿತು ಜೀವನದಲ್ಲಿ ಯಾವ ರೀತಿಯಲ್ಲಿ ಬಾಳಬೇಕೆಂಬ ನೀತಿ ಬೋಧನೆಯನ್ನು ಮಾಡಿ ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ನಡೆಯುವಂತೆ ಹೇಳುತ್ತಿದ್ದರು. ಅವರ ಮಾರ್ಗದರ್ಶನದಲ್ಲಿ ಅನೇಕ ವಿದ್ಯಾರ್ಥಿಗಳು ತಮ್ಮ ಜೀವನವನ್ನು ಸುಖಮ - ಯವಾಗಿಸಿಕೊಂಡಿದ್ದಾರೆ.

ಶ್ರೀ ಸಿ.ಟಿ.ರಾಯ್ಕರ್ ಅವರ ತಂದೆಯವರು ಆಗರ್ಭ ಶ್ರೀಮಂತರಾಗಿದ್ದುದರಿಂದ ಅವರಿಗೆ ಕಲಾಕೃತಿ ರಚನೆ ಮಾಡುತ್ತಿರುವುದಕ್ಕೆ ನಿರಾಕರಸುತ್ತಿದ್ದರು. ಸತತ ಕಲಾಕೃತಿ ರಚನೆ ಮಾಡುತ್ತಿದ್ದರೆ ರಾಯ್ಕರ ಅವರು ಇಂದು ರಾಷ್ಟ್ರಮಟ್ಟದ ಕಲಾವಿದರಾಗಿ ಬೆಳೆಯುತ್ತಿದ್ದರು. ಆದರೆ ಕಲಾದೇವಿ ಅವರನ್ನು ಮುಂದುವರೆಸಲು ಕೊಡಲಿಲ್ಲ. ತಮ್ಮ ತಂದೆಯವರು ತಾವು ಇನ್ನು ಮುಂದೆ ಕಲಾಕೃತಿಯನ್ನು ರಚಿಸಬಾರದು ಎಂದು ಶ್ರೀ ಸಿ.ಟಿ.ರಾಯ್ಕರ್ ಅವರಿಂದ ನಿಷೇಧಿಸಿದ್ದರು. ತಂದೆಗೆ ತಕ್ಕ ಮಗನಾಗಿರುವುದರಿಂದ ರಾಯ್ಕರ ಅವರು ಅಂದಿನಿಂದ ಕಲಾಕೃತಿ ರಚನೆ ಮಾಡುವುದನ್ನು ಸ್ಥಗಿತಗೊಳಿಸಿದರು.[೫೭] ಪಾಠಬೋಧನೆಯಲ್ಲಿ ಯಾವುದೇ ರೀತಿಯ ತೊಂದರೆ ಆಗದ ಹಾಗೆ ನೋಡಿಕೊಳ್ಳುತ್ತಿದ್ದರು. ಅವರ ಸೇವೆಯು ವಿಜಯ ಕಲಾಮಂದಿರಕ್ಕೆ ದಾರಿದೀಪವಾಯಿತು.

---

೫೬ ಎಂ.ಆರ್. ಹೆಬ್ಬಳ್ಳಿ, ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್. ಚಿತ್ರಕಲಾ ಕೊಡುಗೆ ಪು.ಸಂ. ೪೪

೫೭ ಸಿ.ಟಿ. ರಾಯ್ಕರ ದಾಖಲಾತಿಗಳಿಂದ ಸಂಗ್ರಹ

ಪ್ರಾ. ಶ್ರೀ ವಸಂತ ಟಿ.ಅಕ್ಕಿ : ಶ್ರೀ ವಸಂತ ಟಿ. ಅಕ್ಕಿಯವರು ೨೦-೬-೧೯೪೦ರಲ್ಲಿ ಗದುಗಿನಲ್ಲಿ ಜನಿಸಿದರು. ಬಾಲ್ಯದಿಂದಲೇ ಕಲೆಯ ಗೀಳು ಹಚ್ಚಿಕೊಂಡಿದ್ದ ಇವರು ಅನೇಕ ಕಲಾಕೃತಿಗಳನ್ನು ಗೀಚುವುದರ ಮೂಲಕ ತಂದೆಯವರಾದ ಟಿ.ಪಿ.ಅಕ್ಕಿಯವರಿಗೆ ತೋರಿಸುತ್ತಿದ್ದರು. ಯಾವಾಗಲೂ ತಂದೆಯವರ ಜೊತೆಯಲ್ಲೇ ಇದ್ದು ರಚನಾತ್ಮಕ ಕೃತಿಗಳನ್ನು ರಚಿಸುತ್ತಿದ್ದರು. ಪ್ರೌಢಶಾಲೆಯನ್ನು ಮುಗಿಸಿ ವಿಜಯ ಕಲಾಮಂದಿರದಲ್ಲಿ ಉನ್ನತ ಚಿತ್ರಕಲಾ ಅಭ್ಯಾಸಕ್ಕೆ ಪ್ರವೇಶ ಪಡೆದರು. ಗುರುವಿಗೆ ತಕ್ಕ ಶಿಷ್ಯರಾಗಿ ಕಲಾಗುರು ಎಂ.ಎ. ಚೆಟ್ಟಿಯವರು, ಸಿ.ಎನ್. ಪಾಟೀಲರವರ ಮಾರ್ಗದರ್ಶನದಲ್ಲಿ ಅನೇಕ ಉತ್ತಮವಾದ ಕಲಾಕೃತಿಗಳನ್ನು ರಚಿಸಿದರು. ಗುರುಗಳು ಹೇಳಿದ ಕೆಲಸ ಚಾಚು ತಪ್ಪದೇ ಮಾಡಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಮಾಡ್ಲಿಂಗ್ ಡಿಪ್ಲೋಮಾ ಪರೀಕ್ಷೆ ಪಾಸಾದರು.

ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರಾಗಿ ನೇಮಕಹೊಂದಿ ಉತ್ತಮ ಕೆಲಸ ಮಾಡತೊಡಗಿದರು. ಇವರ ಕಾರ್ಯವೈಖರಿಯನ್ನು ಅರಿತ ಟಿ.ಪಿ.ಅಕ್ಕಿಯವರು ಕಲಾಮಂದಿರವನ್ನು ಸುಲಭವಾಗಿ ಆಡಳಿತ ಮಾಡಿಕೊಂಡು ಹೋಗಬಹುದೆಂಬ ವಿಶ್ವಾಸದಿಂದ ವಿಜಯ ಕಲಾಮಂದಿರಕ್ಕೆ ಪೂರ್ಣಾವಧಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಲು ನೇಮಿಸಿದರು. ಉತ್ತಮ ಆಡಳಿತಗಾರರಾದ ಶ್ರೀ ಟಿ.ಪಿ.ಅಕ್ಕಿಯವರಂತೆ ಶ್ರೀ ವಸಂತ ಅಕ್ಕಿಯವರು ದಕ್ಷ ಆಡಳಿತಗಾರರಾಗಿ ಹೆಸರಾದವರು. ತಮ್ಮ ಕಛೇರಿ ಕೆಲಸದ ಬಿಡುವಿನ ವೇಳೆಯಲ್ಲಿ ಅನೇಕ ಕಲಾಕೃತಿಗಳನ್ನು ರಚನೆ ಮಾಡಿ ಅನೇಕ ಕಡೆಗಳಲ್ಲಿ ಪ್ರದರ್ಶನ ಮಾಡಿದ್ದಾರೆ.

ಭಾವಚಿತ್ರ ಮತ್ತು ಸಂಯೋಜನಾ ಚಿತ್ರ ರಚನೆಯಲ್ಲಿ ಸಿದ್ಧಹಸ್ತರಾಗಿದ್ದ ಇವರ ಇನ್ನೊಂದು ವಿಶೇಷತೆ ಎಂದರೆ, ಫೋಟೋಗ್ರಾಫಿ ಮಾಡುವುದು ಮತ್ತು ಆಕಳ ಹಾಲು ಕರೆಯುವುದು ವಿಶೇಷ ಹವ್ಯಾಸವಾಗಿತ್ತು. ಜಾತ್ರಾ ವೇಳೆಯಲ್ಲಿ ಹಾಲು ಕರೆಯುವ ಸ್ಪರ್ಧೆಗಳಿಗೆ ಹಾಜರಾಗಿ ಆಕಳ ಹಾಲು ಕರೆಯುತ್ತಿದ್ದರು. ಇಂಥ ವಿಶಿಷ್ಟತೆಯನ್ನು ಪಡೆದುಕೊಂಡ ವಸಂತ ಆಕ್ಕಿಯವರು ಉತ್ತಮ ಆಡಳಿತಗಾರರಾಗಿ ವಿಜಯ ಕಲಾಮಂದಿರಕ್ಕೆ ಮತ್ತು ಗದುಗಿಗೆ ಬಹುದೊಡ್ಡ ಕೊಡುಗೆ ನೀಡಿ ಸೇವಾ ನಿವೃತ್ತಿಹೊಂದಿ ಇಂದು ಸುಖಜೀವನ ನಡೆಸುತ್ತಿದ್ದಾರೆ.

ಶ್ರೀ ಕೆ.ವ್ಹಿ.ಕುಂದಗೋಳ : ಶ್ರೀ ಕೆ.ವಿ. ಕುಂದಗೋಳ ಭಾರತಕ್ಕೆ ಸ್ವಾತಂತ್ರ ದೊರೆತ ಮತ್ತು ವಿಜಯ ಕಲಾಮಂದಿರ ಪ್ರಾರಂಭ ಆದ ವರ್ಷ ಬೆಟಗೇರಿಯಲ್ಲಿ ದಿನಾಂಕ ೧-೨-೧೯೪೭ರಂದು ಜನಿಸಿದರು. ಗದುಗಿನಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿ. ಬಿ.ಎಸ್ಸಿ. ಪದವೀಧರರಾದ ಶ್ರೀ ಕುಂದಗೋಳರು ಕಾಲೇಜಿನಲ್ಲಿ ರಂಗೋಲಿ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದು ಚಿತ್ರಕಲೆಯ ಕಡೆ ಬರಲು ಕಾರಣವಾಯಿತು. ಚಿತ್ರಕಲೆಯ ಹೆಚ್ಚಿನ ವ್ಯಾಸಂಗಕ್ಕಾಗಿ ಅಕ್ಕಿ ಗುರುಗಳ ಕಡೆ ಹೋದರು. ಕಲೆಯನ್ನು ಪೋಷಿಸುತ್ತಿದ್ದ ಅಕ್ಕಿಯವರು ಕುಂದಗೋಳರವರಿಗೆ ಪ್ರೀತಿಯಿಂದ ಬರಮಾಡಿಕೊಂಡು ಪ್ರವೇಶ ನೀಡಿದರು. ಸದಾ ಶಿಸ್ತು ನಿಷ್ಠತೆ, ನೈತಿಕತೆಯನ್ನು ಹೊಂದಿದ ಕುಂದಗೋಳರವರು ಎಂ.ಎ. ಚೆಟ್ಟಿ, ಸಿ.ಎನ್. ಪಾಟೀಲ, ಸಿ.ಟಿ. ರಾಯ್ಕರ್ ಮುಂತಾದ ಶ್ರೇಷ್ಠ ಕಲಾಗುರುಗಳ ಕೈಯಲ್ಲಿ ಎ.ಎಂ.(೧೯೭೪), ಜಿ.ಡಿ.ಡಿಪ್ಲೋಮಾ (೧೯೭೫) ಪರೀಕ್ಷೆಯನ್ನು ಪಾಸು ಮಾಡಿಕೊಂಡರು.

ವಾಕ್‌ಚಾತುರ್ಯರು ಶಿಸ್ತನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಕುಂದಗೋಳ ಅವರ ಕಲಾಪ್ರತಿಭೆಯನ್ನು ನೋಡಿ ವಿಜಯ ಕಲಾಮಂದಿರಕ್ಕೆ ಸೇವೆಗೆ ಸೇರಲು ಆದೇಶ ನೀಡಿದರು.

ಗುರುಗಳ ಆದೇಶದಂತೆ ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರಾಗಿ ತಾವು ಕಲಿತ ವಿದ್ಯೆಯನ್ನು ವಿದ್ಯಾರ್ಥಿಗಳಿಗೆ ಧಾರೆಎರೆದಿದ್ದಾರೆ. ಯಾವಾಗಲೂ ವಿದ್ಯಾರ್ಥಿಗಳನ್ನು ತಮ್ಮ ಕಡೆ ಎಳೆದುಕೊಳ್ಳುವ ಚಾತುರ್ಯತೆಯು ಕುಂದಗೋಳರವರಲ್ಲಿ ಇತ್ತು. ನಿಸರ್ಗಚಿತ್ರಣ, ಸಂಯೋಜನಾ ಚಿತ್ರಣ, ಭಾವಚಿತ್ರಣ, ಸ್ಥಿರಚಿತ್ರಣ, ಜೊತೆಗೆ ಕಲಾಶಿಕ್ಷಣವನ್ನು ಬೋಧನೆ ಮಾಡುತ್ತಿದ್ದರು. ವಿದ್ಯಾರ್ಥಿಗಳು ಹೆಚ್ಚಾಗಿ ನೋಡಿ ಕಲಿಯುವಂತೆ ಹೇಳುತ್ತಿದ್ದರು.

ಶ್ರೀ ಎಂ.ಎ. ಚೆಟ್ಟಿಯವರ ಪ್ರಭಾವಕ್ಕೆ ಒಳಗಾದ ಇವರು ಚೆಟ್ಟಿಯವರು ರಚಿಸಿದ ಅನೇಕ ಪ್ರಮುಖ ಸಂಯೋಜನಾ ಚಿತ್ರಗಳ ಪ್ರತಿಕೃತಿಗಳನ್ನು ಮಾಡಿದ್ದಾರೆ. ಚೆಟ್ಟಿಯವರ ಅನೇಕ ಕಲಾಕೃತಿಗಳ ಛಾಯಾಚಿತ್ರಗಳನ್ನು ತಮ್ಮ ಕಡೆ ಇಂದಿಗೂ ಸಂಗ್ರಹಿಸಿಕೊಂಡಿದ್ದಾರೆ. ಸದಾ ಕಲಿಯಬೇಕು ಎಂಬ ಹಂಬಲದಲ್ಲಿರುವ ಶ್ರೀಯುತರು ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಬಡವಿದ್ಯಾರ್ಥಿಗಳಿಗೆ ಉತ್ತೇಜನ ನೀಡಿ ಅವರಿಗೆ ದಾರಿದೀಪವಾಗಿದ್ದಾರೆ.

ಸದಾ ಹಸನ್ಮುಖಿಯಾದ ಶ್ರೀ ಕುಂದಗೋಳರವರು ಎಲ್ಲರನ್ನೂ ನಗಿಸುತ್ತ ಮಾತಿನಲ್ಲಿಯೇ ಶಿಸ್ತನ್ನು ಕಲಿಸುವ ಮಾಸ್ಟರ್‌ರಾಗಿ ವಿದ್ಯಾರ್ಥಿಗಳಿಗೆ ಪ್ರೀತಿಯ ಗುರುಗಳಾಗಿ ಉಳಿದಿದ್ದಾರೆ. ವೃತ್ತಿಯಿಂದ ನಿವೃತ್ತಿಯಾದ ಇವರು ಕೆಲಸದಲ್ಲಿ ಪ್ರವೃತ್ತಿಯನ್ನು ತೋರಿಸುತ್ತ ಅನೇಕ ಸಾಧಕ ಪುರುಷರ, ಕಲಾವಿದರ ಅನೇಕ ಭಾವಚಿತ್ರಗಳನ್ನು ರಟ್ಟಿನಲ್ಲಿ ರಚಿಸಿ ಸಾಮಾನ್ಯರಿಗೂ ಚಿರಪರಿಚಿತರಾಗಿದ್ದಾರೆ. "ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಕುಂದಗೋಳ ಅವರು ಬಸವೇಶ್ವರ ಯುವಕ ಸಂಘ, ವೀರಶೈವ ಪ್ರಗತೀಶೀಲ ಯುವಕ ಸಂಘ, ಅಭಿನಯರಂಗ, ಹೊಳಲಮ್ಮದೇವಿ ಟ್ರಸ್ಟ್ ಮುಂತಾದ ಸಂಘಗಳಲ್ಲಿ ಸದಸ್ಯರಾಗಿ ಮತ್ತು ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಾರೆ. ಗದುಗಿನ ಹಿರಿಯ ಕಲಾವಿದರಾದ ದಿವಂಗತ ಎಂ.ಎ.ಚೆಟ್ಟಿಯವರ ಪ್ರಮುಖವಾದ ಅನೇಕ ಕಲಾಕೃತಿಗಳ ಪ್ರತಿಕೃತಿ ಮಾಡಿ ಕಾಯ್ದಿಟ್ಟಿದ್ದಾರೆ."[೫೮] ಇವರು ವಿವಿಧ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚನೆ ಮಾಡಿದ್ದಾರೆ. ಅದರಲ್ಲಿ ವಿಶೇಷವಾಗಿ ರಟ್ಟಿನ ಮೇಲೆ ಅನೇಕ ಮಹನೀಯರ ಭಾವಚಿತ್ರಗಳನ್ನು ಮಾಡಿದ್ದಾರೆ. ಇಂಥ ಪ್ರತಿಭಾನಿತ್ವ ಕಲಾವಿದರಾದ ಶ್ರೀ ಕೆ.ವಿ.ಕುಂದಗೋಳರವರು ವಿಜಯ ಕಲಾಮಂದಿರಕ್ಕೆ ಮತ್ತು ಗದಗ ಜಿಲ್ಲೆಗೆ ಬಹುದೊಡ್ಡ ಕೊಡುಗೆ ನೀಡಿದ್ದಾರೆ.

ಸೇವೆಯಲ್ಲಿರುವ ಶಿಕ್ಷಕರು :

ವಿಜಯ ಕಲಾಮಂದಿರ ಸಂಸ್ಥೆಯು ೧೯೮೫ರಲ್ಲಿ ಚಿತ್ರಕಲೆಯಲ್ಲಿ ಪದವಿ ತರಗತಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಪ್ರಾರಂಭಿಸಿದ್ದು ಅನೇಕ ಉಪನ್ಯಾಸಕರು ತಮ್ಮ ಅಮೂಲ್ಯವಾದ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸೇವೆಯಲ್ಲಿ ಇರುವ ಅಧ್ಯಾಪಕರನ್ನು ಎರಡು ರೀತಿಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ಅ) ವಿಜಯ ಕಲಾಮಂದಿರದ ಶಿಕ್ಷಕರು

ಆ) ವಿಜಯ ಚಿತ್ರಕಲಾ ಮಹಾವಿದ್ಯಾಲಯದ ಶಿಕ್ಷಕರು

---

೫೮. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯಕಲಾಮಂದಿರ ಕೊಡುಗೆ ಪು.ಸಂ. ೫೦

ವಿಜಯ ಕಲಾಮಂದಿರದಲ್ಲಿ ಪ್ರಾಚಾರ್ಯರು ಅನೇಕ ಕಲಾ ಉಪನ್ಯಾಸಕರು ಉತ್ತಮವಾದ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಕುರಿತು ಸ್ಥೂಲವಾಗಿ ಈ ಅಧ್ಯಯನ ಮಾಡಲಾಗಿದೆ.

ಪ್ರಾ. ಅಶೋಕ ಟಿ.ಅಕ್ಕಿ : ಅಶೋಕ ಟಿ.ಅಕ್ಕಿಯವರು ೧೯೫೨, ಜೂನ್ ೧೯ರಂದು ಗದಗನಲ್ಲಿ ಜನಿಸಿದರು. ವಿಜಯ ಕಲಾಮಂದಿರದ ಸಂಸ್ಥಾಪಕರಾದ ಶ್ರೀ ಟಿ.ಪಿ.ಅಕ್ಕಿಯವರ ಪುತ್ರರಾದ ಶ್ರೀ ಅಶೋಕ ಅಕ್ಕಿಯವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಗದುಗಿನಲ್ಲಿಯೇ ಪೂರೈಸಿದ್ದಾರೆ. ಚಿಕ್ಕವನಿರುವಾಗಲೇ ಅಕ್ಕಿಯವರು ಕಲೆಯ ಕಡೆ ಆಸಕ್ತಿ ಹೊಂದಿದವಾಗಿದ್ದರು.

ವಿಜಯ ಕಲಾಮಂದಿರದಲ್ಲಿ ಉನ್ನತ ಚಿತ್ರಕಲಾ ಶಿಕ್ಷಣಕ್ಕೆ ಪ್ರವೇಶ ಪಡೆದು ಖ್ಯಾತ ಕಲಾವಿದರಾದ ಶ್ರೀ ಎಂ.ಎ.ಚೆಟ್ಟಿ, ಸಿ.ಎನ್.ಪಾಟೀಲ, ಸಿ.ಟಿ.ರಾಯ್ಕರ ಮುಂತಾದ ಕಲಾಗುರುಗಳ ಮಾರ್ಗದರ್ಶನದಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಪರೀಕ್ಷೆ ಪಾಸು ಮಾಡಿಕೊಂಡರು ಮತ್ತು ಎಂ.ಎ.ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ. ಸದಾ ಕಲಾಚಟುವಟಿಕೆಯಲ್ಲಿಯೇ ತೊಡಗಿಕೊಂಡ ಅಶೋಕ ಅಕ್ಕಿಯವರು ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರಾಗಿ ಸೇವೆಗೆ ಸೇರಿದರು. ಇವರ ಸೇವೆಯನ್ನು ವಿಜಯ ಕಲಾಮಂದಿರ ಬೆಳೆಯಲು ಆಧಾರ ಸ್ಥಂಭವಾಗಿ ನಿಂತರು. ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಆಡಳಿತಾತ್ಮಕ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಕಲಾಶಾಲೆಯ ಆಗುಹೋಗುಗಳಲ್ಲಿ ಮತ್ತು ಗುಣಾತ್ಮಕ ಅಂಶಗಳಲ್ಲಿ ಇವರ ಪಾತ್ರ ಬಹು ಮುಖ್ಯವಾಗಿದೆ. ಚಿತ್ರಕಲೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ನಿಸರ್ಗ ಚಿತ್ರಣ, ಸೃಜನಶೀಲ ಕಲಾಕೃತಿ ರಚನೆ, ಸಮಕಾಲೀನ ಕಲೆಯ ಬಗ್ಗೆ ಒಲವು ಆಸಕ್ತಿ ಹೊಂದಿದವರಾಗಿದ್ದಾರೆ. ಕಲಾ ಇತಿಹಾಸದ ಕಡೆಗೆ ಹೆಚ್ಚಿನ ಒಲವು ಇದ್ದ ಇವರು ಕಲಾಶಿಕ್ಷಣ, ಕಲಾ ಇತಿಹಾಸ ಕುರಿತು ಬರೆದ ಕಲಾಚರಿತ್ರೆ ಪುಸ್ತಕ ಬರೆದಿದ್ದರಿಂದ ವಿದ್ಯಾರ್ಥಿಗಳಿಗೆ ಬಹಳಷ್ಟು ಉಪಯೋಗವಾಗಿದೆ. ಶ್ರೀಯುತರು ಚಿತ್ರಕಲೆಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣ ವಿಜಯ ಕಲಾಮಂದಿರದಲ್ಲಿ ಪ್ರಾರಂಭಿಸಲಿಕ್ಕೆ ಮುಖ್ಯ ಕಾರಣೀಕರ್ತರಾಗಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಸ್ನಾತಕೋತ್ತರ ವಿಭಾಗ ಉತ್ತಮ ರೀತಿಯಲ್ಲಿ ನಡೆಯುತ್ತಿದೆ.

ಅಶೋಕ ಅಕ್ಕಿಯವರು ಕಲಾಶಾಲೆಯ ಆಡಳಿತದ ಜೊತೆ ಅನೇಕ ಕಲಾ ಕೃತಿಗಳನ್ನು ರಚಿಸಿ ಜನಮೆಚ್ಚುಗೆಯನ್ನು ಪಡೆದಿದ್ದಾರೆ. ಹೊಸಪೇಟೆ, ಗದಗ, ಹುಬ್ಬಳ್ಳಿ, ಬೆಳಗಾವಿ, ಪಾಂಡಿಚೇರಿ, ಧಾರವಾಡ, ಬೆಂಗಳೂರು, ದೆಹಲಿ, ಮುಂಬಯಿ, ಹಂಪಿ, ಲಕ್ಕುಂಡಿ, ಭೂಪಾಲ, ಲಖನೌ, ಚಂಡಿಗಢ, ಗುಲಬರ್ಗಾ ಮುಂತಾದವುಗಳ ಕಡೆಗೆ ಸಮೂಹ ಕಲಾಪ್ರದರ್ಶನ ಮಾಡಿದ್ದಾರೆ. ಗದಗ, ಹೊಸಪೇಟೆ, ಹುಬ್ಬಳ್ಳಿ, ಬೆಳಗಾವಿ, ಪಾಂಡಿಚೇರಿ, ಚೆನ್ನೈ, ಬೆಂಗಳೂರುಗಳಲ್ಲಿ[೫೯] ಏಕವ್ಯಕ್ತಿ ಕಲಾಪ್ರದರ್ಶನ ಮಾಡಿದ್ದಾರೆ. ಶ್ರೀಯುತರು ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅವುಗಳಲ್ಲಿ ರೋಟರಿ ಪ್ರಶಸ್ತಿ, ಎ.ಬಿ.ವಿ.ಎಂ.ಎಸ್. ಮೈಸೂರು ದಸರಾ ಪ್ರಶಸ್ತಿ, ೩೪ನೇ ರಾಷ್ಟ್ರೀಯ ಮಟ್ಟದ ಲಕ್ನೋ ಲಲಿತಕಲಾ ಅಕಾಡೆಮಿಯಿಂದ ಪ್ರಶಸ್ತಿ, ಹೀಗೆ ಅನೇಕ ಪ್ರಶಸ್ತಿಗಳು ಲಭಿಸಿವೆ.[೬೦] ಶ್ರೀ ಅಶೋಕ ಅಕ್ಕಿಯವರು ಕಲೆಯ ಬಗ್ಗೆ ಸದಾ

೫೯. ಅಶೋಕ ಅಕ್ಕಿ (ಸಂ) ಕೃತಪೂರಕಲಾ ವೈಭವ ಚಿತ್ರ ಮತ್ತು ಶಿಲ್ಪಕಲಾವಿದರ ಕೈಪಿಡಿ ಪು.ಸಂ. ೨೮

೬೦. ಅಶೋಕ ಅಕ್ಕಿ (ಸಂ) ಕೃತಪೂರಕಲಾ ವೈಭವ ಚಿತ್ರ ಮತ್ತು ಶಿಲ್ಪಕಲಾವಿದರ ಕೈಪಿಡಿ ಪು.ಸಂ. ೨೮

ಕಾಳಜಿವಹಿಸುತ್ತಿದ್ದ ಇವರು ಅನೇಕ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಚೆನ್ನೈ, ಮಡಿಕೇರಿ, ಬೆಳಗಾವಿ, ಬೆಂಗಳೂರು, ಕರ್ನಾಟಕ ಲಲಿತಕಲಾ ಅಕಾಡೆಮಿ, ಕಲಾಶಿಬಿರ, ಗದಗ ಹಾಗೂ ಇತರ ಸಂಘಟನೆಗಳು ಏರ್ಪಡಿಸಿದ ಅನೇಕ ಕಲಾಶಿಬಿರಗಳಲ್ಲಿ ಮತ್ತು ವಿಚಾರ ಸಂಕೀರಣಗಳಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರು, ನಾಗಪೂರ, ನ್ಯೂಯಾರ್ಕ್, ಮೈಸೂರು, ಗದಗ, ಶಿರಸಿ, ಹೈದ್ರಾಬಾದ್, ಮಡಿಕೇರಿ ಮುಂತಾದ ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.[೬೧] ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದನ್ನು ಗಮನಿಸಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇದರ ಸದಸ್ಯರಾಗಿ, ಕೇಂದ್ರ ಲಲಿತಕಲಾ ಅಕಾಡೆಮಿ, ದೆಹಲಿ ಇದರ ಸದಸ್ಯರಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿ.ಎಚ್.ಡಿ. ಅಧ್ಯಯನ ಮಂಡಳಿಯ ಸದಸ್ಯರಾಗಿ, ಪರೀಕ್ಷಾ ಮಂಡಳಿ ಸದಸ್ಯರಾಗಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇದರ ಅಧ್ಯಯನ ಮಂಡಳಿಯ ಸದಸ್ಯರಾಗಿ ಅನೇಕ ಶಿಬಿರ, ವಿಚಾರ ಸಂಕೀರಣಗಳ ಸಂಚಾಲಕರಾಗಿ, ನಿರ್ದೇಶಕರಾಗಿ, ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ಉತ್ತಮ ಶಿಕ್ಷಕರು, ದಕ್ಷ ಆಡಳಿತಗಾರರೂ ಹೌದು. ವಿದ್ಯಾರ್ಥಿಗಳ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ ಶ್ರೀ ಅಶೋಕ ಅಕ್ಕಿಯವರು ವಿಜಯ ಕಲಾಶಾಲೆಯ ಬೆಳವಣಿಗೆಯಲ್ಲಿ ಅಹರ್ನಿಯ ಸೇವೆ ಸಲ್ಲಿಸುತ್ತಿದ್ದಾರೆ.

ರಾಮಚಂದ್ರ ಹೆಗಡೆ : ಶ್ರೀ ರಾಮಚಂದ್ರ ಹೆಗಡೆಯವರು ವಿಜಯ ಕಲಾಮಂದಿರದಲ್ಲಿ ಹಿರಿಯ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತ ಕಲಾ ಮಂದಿರದ ಬೆಳವಣಿಗೆಯಲ್ಲಿ ತಮ್ಮದೆ ಆದ ಕೊಡುಗೆ ನೀಡಿದ್ದಾರೆ. ಶ್ರೀಯುತರು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ೨೮-೫-೧೯೫೫ ರಂದು ಜನಿಸಿದ ಇವರು ಚಿಕ್ಕವರಿರುವಾಗಲೇ ಚಿತ್ರಕಲೆಯಡೆಗೆ ಆಸಕ್ತಿ ಹೊಂದಿದರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ಗದುಗಿನ ವಿಜಯ ಕಲಾಮಂದಿರದಲ್ಲಿ ಪ್ರವೇಶ ಹೊಂದಿದರು.

ಶ್ರೀ ರಾಮಚಂದ್ರ ಹೆಗಡೆಯವರು ಚಿತ್ರಕಲೆಯಲ್ಲಿ ವಿದ್ಯಾಭ್ಯಾಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತ ಎಲ್ಲ ಗುರುಗಳ ಪ್ರೀತಿಯ ಶಿಷ್ಯರಾಗಿ ಚಿತ್ರಕಲೆಯಲ್ಲಿ ಡಿಪ್ಲೋಮಾ ಮತ್ತು ಆರ್ಟ್ ಮಾಸ್ಟರ್ ಪರೀಕ್ಷೆಗಳನ್ನು ಹಾಗೂ ಮೂರ್ತಿಶಿಲ್ಪ ಕಲೆಯಲ್ಲಿ ಡಿಪ್ಲೋಮಾ ಪರೀಕ್ಷೆಯನ್ನು ಪಾಸು ಮಾಡಿಕೊಂಡರು. ಶ್ರೀಯುತರು ಪ್ರಥಮ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್‌ದಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದುಕೊಂಡಿದ್ದಾರೆ. ನಾಲ್ಕನೆಯ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್‌ನಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದು ವಿಜಯ ಕಲಾಮಂದಿರಕ್ಕೆ ಮತ್ತು ತಮಗೆ ಕಲಿಸಿದ ಗುರುಗಳಿಗೆ ಕೀರ್ತಿ ತಂದಿದ್ದಾರೆ. ಜೊತೆಗೆ ಮುಂಬೈಯಲ್ಲಿರುವ ಬ್ರಿಟಿಷ್ ಇನ್‌ಸ್ಟಿಟ್ಯೂಟ್ ಆಫ್ ಇಂಜನೀಯರಿಂಗ್ ಟೆಕ್ನಾಲಜಿಯಿಂದ ವಾಣಿಜ್ಯ ಕಲೆಯಲ್ಲಿ ತರಬೇತಿ, ವಾರ್ಲಿಕಲೆಯಲ್ಲಿ ತರಬೇತಿ ಪಡೆದುಕೊಂಡಿದ್ದಾರೆ. ಶ್ರೀ ಎಂ.ಎ.ಚೆಟ್ಟಿ, ಎಂ.ಆರ್.ಬಾಗವಾನ, ವಸಂತ ಅಕ್ಕಿ, ಎಲ್.ಎ.ಕಲಬುರ್ಗಿ, ಜಿ.ಬಿ.ನವಲಗುಂದ ಹೀಗೆ ಅತ್ಯಂತ ಖ್ಯಾತ ಗುರುಬಳಗದ ಪ್ರೀತಿಯ ಶಿಷ್ಯರಾಗಿದ್ದರು. ಮಿತಭಾಷಿಯಾದ ಹೆಗಡೆಯವರು ಸದಾ ಶಿಸ್ತು, ಸಂಯಮಶೀಲತೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಅಂತಹ ಗುಣಾತ್ಮಕದ ಜೊತೆ ಉತ್ತಮ ಕಲಾವಿದ್ಯಾರ್ಥಿಯಾಗಿದ್ದ ಶ್ರೀ ರಾಮಚಂದ್ರ ಹೆಗಡೆಯವರ ಕಲಾ ಪ್ರೌಢಿಮೆಯನ್ನು ಮೆಚ್ಚಿ ಶ್ರೀ ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಂಡರು.

೬೧. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ಕೊಡುಗೆ ಪು.ಸಂ. ೫೨

ವಿಜಯ ಕಲಾಮಂದಿರದ ಉಪನ್ಯಾಸಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ಮಾಡಿದ್ದಾರೆ. "ಜಲವರ್ಣ ಮಾಧ್ಯಮದ ಬಳಕೆಯಲ್ಲಿ ಸಿದ್ಧಹಸ್ತರು. ಹೆಗಡೆಯವರು ಭಾವಚಿತ್ರಣ, ನಿಸರ್ಗಚಿತ್ರ, ಸೃಜನಶೀಲ ಸಂಯೋಜನಾ ಚಿತ್ರಣ, ಯಥಾದರ್ಶನ, ಸ್ಮರಣಚಿತ್ರಣ, ಜಾನಪದ ಶೈಲಿಯ ವಾರ್ಲಿ ಚಿತ್ರಕಲೆಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ."[೬೨]

ಶ್ರೀ ಆರ್.ವ್ಹಿ.ಹೆಗಡೆಯವರು ಚಿತ್ರಕಲಾ ಪ್ರದರ್ಶನವನ್ನು ರಾಜ್ಯ, ಹೊರರಾಜ್ಯಗಳಲ್ಲಿ ಮಾಡಿ ಕಲಾಮೆಚ್ಚುಗೆ ಪಡೆದುಕೊಂಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ದಾಖಲಿಸಲಾಗಿದೆ. ಮೈಸೂರು ದಸರಾ ಪ್ರದರ್ಶನ ಮೈಸೂರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನ, ಲಿಯೋ ಕ್ಲರ್ಬ ಗದಗ, ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹೊಸದಿಲ್ಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ವಾರ್ಷಿಕ ಕಲಾಪ್ರದರ್ಶನ, ಗುಂಪು ಕಲಾಪ್ರದರ್ಶನ ಬೆಂಗಳೂರು, ಎಸ್. ಸಿ.ಝುಡ್.ಸಿ.ಸಿ. ವಾರ್ಲಿ ಜನಪದ ಕಲಾಪ್ರದರ್ಶನ ಪುಣೆ, ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಚಿತ್ರಕಲಾ ಪರಿಷತ್ ಬೆಂಗಳೂರು, ರಿಜನಲ್ ಸೆಂಟ್ರಲ್ ಚೆನ್ನೈ, ರಾಷ್ಟ್ರೀಯ ಕಲಾಪ್ರದರ್ಶನದಲ್ಲಿ, ಭೂಪಾಲ, ಲಖನೊ, ಚಂಡೀಗಡ ಮುಂಬಯಿ, ಹಂಪಿ, ಗದಗ, ಹುಬ್ಬಳ್ಳಿ, ಧಾರವಾಡ [೬೩] ಮುಂತಾದ ಕಡೆಗಳಲ್ಲಿ ಕಲಾ ಪ್ರದರ್ಶನ ಮಾಡಿದ್ದಾರೆ. ಶ್ರೀ ರಾಮಚಂದ್ರ ಹೆಗಡೆಯವರು ೧೯೭೮, ೭೯ರಲ್ಲಿ ಗದಗದಲ್ಲಿ ಏಕವ್ಯಕ್ತಿ ಕಲಾಪ್ರದರ್ಶನ, ೧೯೮೫ರಲ್ಲಿ ಶಿರಸಿಯಲ್ಲಿ ಏಕವ್ಯಕ್ತಿ ಕಲಾ ಪ್ರದರ್ಶನವನ್ನು ಮಾಡಿದ್ದಾರೆ. ಹಾಗೂ ಜನಮೆಚ್ಚುಗೆ ಪಡೆದಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಬೆಂಗಳೂರು, ಗದಗ, ಗುಲಬರ್ಗಾ, ಎನ್.ಸಿ.ಎ.ಆರ್.ಟಿ.ಯಿಂದ ಹೊಸದಿಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಗ್ರಾಫಿಕ್ ಕ್ಯಾಂಪ್-ಬೆಂಗಳೂರು, ವಾರ್ಲಿ ಜಾನಪದ ಕಲೆ ಪುಣೆ, ಜಲವರ್ಣ ಕಲಾಶಿಬಿರ ಹಂಪಿ, ರಾಷ್ಟ್ರೀಯ ಶಿಲ್ಪಕಲಾ ಶಿಬಿರ ಗದಗ, ಪಾಟ್ನಾ, ಯು.ಜಿ.ಸಿ. ರಿಪ್ರೇಶರ ಕೋರ್ಸ್ ವಿಶ್ವಭಾರತಿ, ತೋಂಟದಾರ್ಯ ಜಾತ್ರಾ ಮಹೋತ್ಸವ ಗದಗ, ಲಕ್ಕುಂಡಿ ಉತ್ಸವ, ಲಕ್ಕುಂಡಿ, ಆಳ್ವಾಸ್ ಚಿತ್ರಶಿಬಿರ ಮೂಡಬಿದರಿ, ಆಳ್ವಾಜ್ ವರ್ಣಜಾಗೃತಿ ಮೂಡಬಿದಿರ, ೭೬ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಕಲಾಶಿಬಿರ ಗದಗ.[೬೪] ಹೆಗಡೆಯವರು ೧೯೭೮ರಲ್ಲಿ ಮೈಸೂರು ದಸರಾ ಪ್ರಶಸ್ತಿ, ೧೯೯೬ರಲ್ಲಿ ಮೂರನೆಯ ಟ್ರನಾಲೆ ಡ್ರಾಯಿಂಗ್‌ದಲ್ಲಿ ಬಂಗಾರದ ಪದಕ, ಚಂದಿಗಢ ಹಾಗೂ ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ, ಸನ್ಮಾನಗಳನ್ನು ಪಡೆದುಕೊಂಡಿದ್ದಾರೆ.

ಕೇಂದ್ರ ಲಲಿತಕಲಾ ಅಕಾಡೆಮಿ ಹೊಸದಿಲ್ಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ, ಎಸ್.ಸಿ.ಝುಡ್. ಸಿ.ಸಿ. ನಾಗಪೂರ, ನ್ಯೂಯಾರ್ಕ್ (ಯು.ಎಸ್.ಎ) ಪ್ರಾನ್ಸ್, ಮೈಸೂರು, ಕಾಳಿದೇವಸ್ಥಾನ ಶಿರಸಿ, ಮಡಿಕೇರಿ, ಹೈದರಾಬಾದ, ಬೋರ್ಡ್, ಎನ್.ಬಿ.ಕುಲಕರ್ಣಿ ಬೆಂಗಳೂರು, ಪುಣೆ, ಆಳ್ವಾಸ್ ಟ್ರಸ್ಟ ಮೂಡಬಿದಿರೆ ಹೀಗೆ ಮುಂತಾದ ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಇಂತಹ ಕಲಾ ಪ್ರತಿಭೆಯನ್ನು ಹೊಂದಿರುವ ಶ್ರೀ ಆರ್.ವ್ಹಿ.ಹೆಗಡೆಯವರು ಗದುಗಿಗೆ ತಮ್ಮದೆ ಆದ ವಿಶಿಷ್ಟ ಕೊಡುಗೆ ನೀಡಿದ್ದಾರೆ.

---

೬೨. ಪಿ.ವಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ಕೊಡುಗೆ ಪು.ಸಂ. ೫೨

೬೩. ಆರ್.ವಿ. ಹೆಗಡೆ ಕಲಾವಿದರು ಗದಗ ಸಂದರ್ಶನ ದಿನಾಂಕ ೧೯-೪-೨೦೧೦

೬೪. ಆರ್.ವಿ. ಹೆಗಡೆ ಕಲಾವಿದರು ಗದಗ ಸಂದರ್ಶನ ದಿನಾಂಕ ೨೯-೪-೨೦೧೦

ಶ್ರೀಮತಿ ಪ್ರೇಮಾ ಹಿರೇಮಠ : ಶ್ರೀಮತಿ ಪ್ರೇಮಾ ಹಿರೇಮಠರವರು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹೂಲಿ ಎಂಬ ಗ್ರಾಮದಲ್ಲಿ ೧೯೫೭ರಲ್ಲಿ ಜನಿಸಿದ್ದಾರೆ. ಚಿಕ್ಕವಯಸ್ಸಿನಲ್ಲಿಯೇ ಚಿತ್ರಕಲೆಯ ಬಗ್ಗೆ ಆಸಕ್ತಿ ಹೊಂದಿದ ಹಿರೇಮಠರವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಹೊಲಿಯಲ್ಲಿ ಮುಗಿಸಿ, ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ಗದುಗಿನ ವಿಜಯ ಕಲಾಮಂದಿರದಲ್ಲಿ ಚಿತ್ರಕಲಾ ತರಗತಿಗೆ ಪ್ರವೇಶ ಪಡೆದು ಎಲ್ಲ ಗುರುಗಳ ಪ್ರೀತಿಯ ಶಿಷ್ಯೆಯಾಗಿ ಕಲಾಶಿಕ್ಷಣವನ್ನು ಉತ್ತಮ ರೀತಿಯಲ್ಲಿ ಪಡೆದುಕೊಂಡರು.

ಕಲಾವಿದ ಎಂ.ಎ.ಚೆಟ್ಟಿ, ಟಿ.ಪಿ.ಅಕ್ಕಿ, ಸಿ.ಎನ್.ಪಾಟೀಲ, ಕಮಾನಗಾರ ಇವರ ಮಾರ್ಗದರ್ಶನದಲ್ಲಿ ಕಲಾ ಅಭ್ಯಾಸ ಮಾಡಿ ಡಿಪ್ಲೋಮಾ ಡ್ರಾಯಿಂಗ್ ಮತ್ತು ಪೇಂಟಿಂಗ್, ಆರ್ಟ್ ಮಾಸ್ಟರ್ ಡಿಪ್ಲೋಮಾ ಪರೀಕ್ಷೆ ಹಾಗೂ ಮೂರ್ತಿಶಿಲ್ಪ ಕಲೆಯಲ್ಲಿ ಡಿಪ್ಲೋಮಾ ಪರೀಕ್ಷೆಯನ್ನು ಪಾಸು ಮಾಡಿಕೊಂಡರು. ಇದರ ಜೊತೆಗೆ ಬಿ.ಎ. ಮತ್ತು ಸೀನಿಯರ ಸಂಗೀತ ಪರೀಕ್ಷೆಗಳನ್ನು ಇವರು ಪಾಸುಮಾಡಿಕೊಂಡಿದ್ದಾರೆ. ಪ್ರೇಮಾ ಹಿರೇಮಠರವರು.[೭೫] ಜಲವರ್ಣ ಚಿತ್ರರಚನೆಯಲ್ಲಿ ಆಸಕ್ತಿ ಹೊಂದಿದ ಇವರು ಸಂಯೋಜನಾ ಚಿತ್ರ ರಚನೆಯಲ್ಲಿ ಪ್ರಬುದ್ಧತೆಯನ್ನು ಪಡೆದುಕೊಂಡಿದ್ದಾರೆ. ವಿಶೇಷವಾಗಿ ಹಿರೇಮಠರವರು ಚಿತ್ರಕಲಾ ಇತಿಹಾಸ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವರಾಗಿದ್ದಾರೆ. ರಚನಾತ್ಮಕ ರೇಖೆ, ಆಕರ್ಷಕವಾದ ವರ್ಣವಿನ್ಯಾಸ, ಸಮತೋಲನದ ಸಂಯೋಜನಾ ಚಿತ್ರಗಳು ನೋಡುಗರಿಗೆ ಆಕರ್ಷಿಸುತ್ತವೆ. ಇಂಥ ಕಲಾ ಪ್ರೌಢಿಮೆಯವರಾದ ಶ್ರೀಮತಿ ಪ್ರೇಮಾ ಹೀರೇಮಠರವರ ಕಲಾ ಪ್ರೌಢಿಮೆಯನ್ನು ಮೆಚ್ಚಿ ಶ್ರೀ ಟಿ.ಪಿ.ಅಕ್ಕಿಯವರು ಹಿರೇಮಠರವರಿಗೆ ತಾವು ಕಲಿತ ಕಲಾ ಮಂದಿರಕ್ಕೆ ಉಪನ್ಯಾಸಕಿಯನ್ನಾಗಿ ನೇಮಕ ಮಾಡಿಕೊಂಡರು. "ನಾನು ಕಲಿತ ಕಲಾಶಾಲೆಯಲ್ಲಿ ಉಪನ್ಯಾಸಕಿಯಾಗಿ ನೇಮಕಮಾಡಿದ್ದು ನನ್ನ ಭಾಗ್ಯ, ಕಲಾಗುರು ಟಿ.ಪಿ.ಅಕ್ಕಿ ಗುರುಗಳನ್ನು ಎಂದೆಂದೂ ಮರೆಯಲಾರೆ ಎಂದು ಭಾವುಕರಾಗಿ ನುಡಿಯುತ್ತಾರೆ.[೭೬] ಸದಾ ಕಲಿಯುವ ಆಸಕ್ತಿಯನ್ನು ಹೊಂದಿದ ಇವರು ವಿಜಯ ಕಲಾಮಂದಿರಕ್ಕೆ ಉಪನ್ಯಾಸಕಿಯಾಗಿ ಅನೇಕ ವಿದ್ಯಾರ್ಥಿಗಳಿಗೆ ಕಲಾ ಭೋಧನೆ ಮಾಡಿ ಉತ್ತಮವಾದ ಕಲಾವಿದರನ್ನು ಹುಟ್ಟು ಹಾಕಿದ್ದಾರೆ. ಚಿತ್ರ ಸಂಯೋಜನೆ, ನಿಸರ್ಗ ಚಿತ್ರಣ, ರೇಖಾ ಚಿತ್ರಣ ಮತ್ತು ಚಿತ್ರಕಲಾ ಇತಿಹಾಸ ವಿಷಯದಲ್ಲಿ ವಿಶೇಷತೆಯನ್ನು ಹೊಂದಿದ ಇವರು ಅನೇಕ ಕವನಗಳನ್ನು ಬರೆದಿದ್ದಾರೆ. ಅನೇಕ ಸಭೆ ಸಮಾರಂಭಕ್ಕೆ ನಿರೂಪಕಿಯಾಗಿ ಕಾರ್ಯ ಮಾಡಿದ್ದಾರೆ. ಚಿತ್ರಕಲೆ, ಸಂಗೀತ, ಸಾಹಿತ್ಯಗಳನ್ನು ಕರಗತ ಮಾಡಿಕೊಂಡ ಪ್ರೇಮಾ ಹಿರೇಮಠರು ಅನೇಕ ರಾಜ್ಯ, ರಾಷ್ಟ್ರಮಟ್ಟದ ಕಲಾ ಪ್ರದರ್ಶನ, ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಶ್ರೀಮತಿ ಪ್ರೇಮಾ ಹಿರೇಮಠರವರು : ಗದಗ, ಬೆಂಗಳೂರು, ಮೈಸೂರು, ಪುಣೆ, ಕೋಲ್ಕತ್ತಾ, ಮುಂಬೈ, ಮದ್ರಾಸ್, ದೆಹಲಿ, ಹುಬ್ಬಳ್ಳಿ, ಧಾರವಾಡ ಮುಂತಾದ ಕಡೆಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ. ಕರ್ನಾಟಕ ಕಲಾಮೇಳ, ಕಲಾಶಿಬಿರ ಬೆಂಗಳೂರು, ರಾಷ್ಟ್ರೀಯ ಕಲಾ ಮೇಳ ಬೆಂಗಳೂರು, ರಾಷ್ಟ್ರೀಯ ಕಲಾ ಮೇಳ ಗದಗ, ಕರ್ನಾಟಕ ಲಲಿತಕಲಾ ಅಕಾಡೆಮಿ ಕಲಾಶಿಬಿರ, ಬೆಂಗಳೂರು, ಲಕ್ಕುಂಡಿ, ಧಾರವಾಡ, ರಾಜ್ಯಮಟ್ಟದ ಕಲಾಶಿಬಿರ ಹಂಪಿ.

---

೭೫. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯಕಲಾ ಮಂದಿರ ಕೊಡುಗೆ ಪು.ಸಂ. ೫೩

೭೬. ಪ್ರೊ. ಎಚ್.ಆರ್. ಹಿರೇಮಠರವರಿಗೆ ಸಂದರ್ಶನ ದಿನಾಂಕ ೭–೮೦೨೦೦೮

ಶ್ರೀಮತಿ ಪ್ರೇಮಾ ಹಿರೇಮಠರವರು ಟಿ.ಪಿ. ಅಕ್ಕಿ ಗುರುಗಳು ತಮಗೆ ತೋರಿಸಿದ ಮತ್ತು ಮಾಡಿದ ಉಪಕಾರವನ್ನು ಈ ಕೆಳಗಿನ ಕವನದಲ್ಲಿ ಹೀಗೆ ಸ್ಮರಿಸುತ್ತಾರೆ.

ಗುರುವೇ ನಿಮ್ಮ ನೆನಪು ಬಂದಾಗ
ಅರಿಯದೇ ಬರುತಾವ ನೀರು ಕಣ್ಣಾಗ
ಮರೆಯಲ್ಯಾಂಗ ಗುರುವೇ ನಿನ್ನ ಈ ಜನುಮದಾಗ।

ಹೆತ್ತು ಹೊತ್ತು ಬೆಳಸಿದವರ
ಮತ್ತೆ ಮತ್ತೆ ನೆನೆಯಲಿಲ್ಲ
ನಿತ್ಯ ನಿಮ್ಮ ಸ್ಮರಣೆಯಲ್ಲಿ
ತುತ್ತು ಅನ್ನವಿರುವುದಲ್ಲಾ
ಎತ್ತ ಹೋದರೂ ಮತ್ತೆ ನೆನಪು।

ಎಂಥ ತಾಯಿ ಹೆತ್ತಳೋ ನಿಮ್ಮ
ಮತ್ತ ಹುಟ್ಟಿ ನೋಡಿ ಒಮ್ಮೆ
ಕರಣೆ ತೋರಿ ಶಿಷ್ಯಗಳಿಗೊಮ್ಮೆ
ನೆನಸಿ ನೆನಸಿ ಸ್ಮರಿಸುತ್ತೇನೆ
ಪುತ್ರದಾಂಗ ಹುಡುಕತೇನಿ
ದಂಗುಬಡಿದು ಕೂಡತೇನಿ।[೬೭]

ವಿ.ವಾಯ್. ಬಡಿಗೇರ : ಶ್ರೀ ವಿ.ವಾಯ್. ಬಡಿಗೇರರವರು ೧೯೫೩ರಲ್ಲಿ ಬಿಜಾಪುರದಲ್ಲಿ ಹುಟ್ಟಿದ ಇವರು ಚಿತ್ರ ಕಲೆಯ ಕುರಿತು ಬಾಲ್ಯದಲ್ಲಿಯೇ ಆಸಕ್ತಿ ಉಳ್ಳವರಾಗಿದ್ದರು.

ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ವಿಜಯ ಕಲಾಮಂದಿರ, ಗದಗ ಇಲ್ಲಿ ಆರ್ಟ್ ಮಾಸ್ಟರ ಡಿಪ್ಲೋಮಾ ಪರೀಕ್ಷೆಯನ್ನು ಪಾಸು ಮಾಡಿಕೊಂಡಿದ್ದಾರೆ. ಕಲಾವಿದ ಎಂ.ಎ.ಚೆಟ್ಟಿ, ಸಿ.ಎನ್.ಪಾಟೀಲ, ಎಂ.ಆರ್.ಬಾಗವಾನ ಇವರೆಲ್ಲರ ಶಿಷ್ಯರಾದ ಇವರು ಶಿಲ್ಪಕಲೆ, ಯಥಾದರ್ಶನ, ಸ್ಮರಣ ಚಿತ್ರಣ, ವಸ್ತುಚಿತ್ರಣ ರಚನೆಯಲ್ಲಿ ಪ್ರಭುತ್ವ ಪಡೆದುಕೊಂಡಿದ್ದಾರೆ. ಇವರ ಕಲಾಪ್ರತಿಭೆಯನ್ನು ಮೆಚ್ಚಿ ಟಿ.ಪಿ. ಅಕ್ಕಿಯವರು ತಾವು ಕಲಿತ ಕಲಾಮಂದಿರ ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಡಂರು ಮೃದು ಸ್ವಭಾವದವರಾದ ಶ್ರೀ ಬಡಿಗೇರರವರು ಅನೇಕ ವಿದ್ಯಾರ್ಥಿಗಳಿಗೆ ಪ್ರೀತಿಯ ಗುರುವಾಗಿದ್ದಾರೆ. ವಿದ್ಯಾರ್ಥಿಗಳಿಗೆ ಪಾಠ ಮಾಡುವಾಗ ನಗುನಗುತ ತಿಳಿಯುವ ರೀತಿಯಲ್ಲಿ ಬೋಧನೆಯನ್ನು ಮಡುತ್ತಾರೆ.[೬೮]

ಶ್ರೀ ವಿ.ವೈ.ಬಡಿಗೇರರವರು ಕಲಿಸುವುದರ ಜೊತೆಗೆ ಅನೇಕ ಸಂಯೋಜನಾ ಚಿತ್ರ, ಸ್ಮರಣಚಿತ್ರ, ಮೂರ್ತಿಶಿಲ್ಪಕಲೆಯನ್ನು ರಚಿಸಿದ್ದಾರೆ. ಅನೇಕ ಕಡೆ ಇವರ ಕಲಾದರ್ಶನಗಳು ಪ್ರದರ್ಶನಗೊಂಡಿವೆ.

---

೬೭ ಅನ್ನದಾನಿ ಹಿರೇಮಠ (ಸಂ) ಸುವರ್ಣ ವಿಜಯ ಪು.ಸಂ. ೨೦

೬೮. ವಿ.ವಾಯ್ ಬಡಿಗೇರಿ ಸಂದರ್ಶನ ದಿನಾಂಕ ೨೦-೮-೨೦೦೯

೫ ಗದಗ, ಮೈಸೂರು, ಧಾರವಾಡ, ಬಿಜಾಪುರ, ಹೈದರಾಬಾದ ಮುಂತಾದ ಕಡೆಗಳಲ್ಲಿ ಇವರ ಕಲಾಪ್ರದರ್ಶನಗಳು ನಡೆದಿವೆ. ೬ ಅಲ್ಲದೇ ದಾವಣಗೇರಿ, ಗುಲಬರ್ಗಾ, ಬೆಂಗಳೂರು, ಗದಗ ನಗರಗಳಲ್ಲಿ ನಡೆದ ಶಿಲ್ಪಕಲೆ, ಗ್ರಾಫಿಕ್ಸಕಲೆ, ಟೆರಾಕೂಟಾ ಹಾಗೂ ಮರದ ಶಿಲ್ಪಕಲೆಯ ಕಾರ್ಯಾಗಾರದಲ್ಲಿ ಭಾಗವಹಿಸಿ ಕಲಾಕೃತಿ ರಚನೆ ಮಾಡಿದ್ದಾರೆ.[೧೯] ಅನೇಕ ಚಿತ್ರಕಲಾ ಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರು ರಚಿಸಿದ ಅನೇಕ ಕಲಾ ಕೃತಿಗಳು ಗದಗ, ದಾವಣಗೆರೆ, ಧಾರವಾಡ, ಬೆಳಗಾವಿ ಬಿಜಾಪುರ ಮತ್ತು ಮದ್ರಾಸ್ ಮುಂತಾದ ನಗರಗಳಲ್ಲಿ ಸಂಗ್ರಹಗೊಂಡಿವೆ.

ಶ್ರೀ ವಿ.ವೈ.ಬಡಿಗೇರ ಅವರ ಚಿತ್ರಶಿಲ್ಪ, ಮರದ ಕೆತ್ತನೆ, ಟೆರಾಕೊಟಾ ಮಾಧ್ಯಮಗಳಲ್ಲಿ ವಿಶೇಷ ಅಧ್ಯಯನ ಮಾಡಿ ಅನೇಕ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವುದರ ಮೂಲಕ ಗದುಗಿಗೆ ತಮ್ಮದೇಯಾದ ಕೊಡುಗೆಯನ್ನು ನೀಡಿದ್ದಾರೆ.

ಆರ್.ಡಿ. ಕಡ್ಲಿಕೊಪ್ಪ : ಶ್ರೀ ಆರ್.ಡಿ.ಕಡ್ಲಿಕೊಪ್ಪರವರು ವಿಜಯ ಕಲಾಮಂದಿರದ ಅಧ್ಯಾಪಕ ವೃಂದದಲ್ಲಿ ಬಹುಮುಖ ಪ್ರತಿಭೆಯುಳ್ಳವರಲ್ಲಿ ಒಬ್ಬರು. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಶಿರಸಂಗಿಯಲ್ಲಿ ೧೯೬೦ರಲ್ಲಿ ಹುಟ್ಟಿದ ಶ್ರೀ ರಾಜಗೋಪಾಲ ದೇವೇಂದ್ರ ಕಡ್ಲಿಕೊಪ್ಪರವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಗದಗದ ಜಿಲ್ಲೆಯ ಶಿರಹಟ್ಟಿಯಲ್ಲಿ ಮುಗಿಸಿದರು. ಶ್ರೀ ಆರ್.ಡಿ. ಕಡ್ಲಿಕೊಪ್ಪರವರ ಅಣ್ಣಂದಿರು ಚಿತ್ರಕಲಾ ಅಭ್ಯಾಸಗೈದು ಪ್ರೌಢಶಾಲಾ ಶಿಕ್ಷಕರಾಗಿದ್ದರು. ಹೀಗಾಗಿ ಅವರ ಪ್ರಭಾವ ಇವರ ಮೇಲೆ ಬೀರಿ ಚಿತ್ರಕಲಾ ಶಿಕ್ಷಣವನ್ನು ತಾವು ಪಡೆದು ಗದುಗಿನ ವಿಜಯ ಕಲಾಮಂದಿರಕ್ಕೆ ಉನ್ನತ ಚಿತ್ರಕಲಾ ಶಿಕ್ಷಣಕ್ಕೆ ಪ್ರವೇಶ ಪಡೆದರು.

ಚಿತ್ರಕಲಾ ಅಭ್ಯಾಸವನ್ನು ಶ್ರೀ ಸಿ.ಎನ್. ಪಾಟೀಲ, ಎಂ.ಎ. ಚೆಟ್ಟಿ, ವಿ.ಟಿ. ಅಕ್ಕಿ, ಮುಂತಾದ ಕಲಾವಿದರ ಪ್ರೀತಿಯ ಶಿಷ್ಯರಾಗಿ ವಿದ್ಯಾರ್ಥಿ ಇರುವಾಗಲೇ ಅನೇಕ ಸಾಂಘಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರು. ತಮ್ಮ ಕಲಾಪ್ರತಿಭೆಯನ್ನು ಕಲಾಗುರು ಟಿ.ಪಿ.ಅಕ್ಕಿಯವರು ಮೆಚ್ಚಿ ಶ್ರೀ ರಾಜಗೋಪಾಲ ಕಡ್ಲಿಕೊಪ್ಪರವರಿಗೆ ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರನ್ನಾಗಿ ಸೇವೆಗೆ ಸೇರಿಸಿಕೊಂಡರು. ಚಿತ್ರಕಲೆಯಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಮೂರ್ತಿಶಿಲ್ಪಕಲೆಯಲ್ಲಿ ಡಿಪ್ಲೋಮಾ ಪರೀಕ್ಷೆಗಳನ್ನು ಪಾಸು ಮಾಡಿದ ಕಡ್ಲಿಕೊಪ್ಪರು ಕಲಾಮಂದಿರದ ಮೂರ್ತಿಶಿಲ್ಪಕಲಾ ವಿಭಾಗದ ಮುಖ್ಯಸ್ಥರಾಗಿ ಇವರು ಚಿತ್ರಕಲಾ ವಿಭಾಗದ ಉಪನ್ಯಾಸಕರಾಗಿ ಕಾರ್ಯನಿರ್ವಹಿಸತೊಡಗಿದ್ದಾರೆ.[೨೦] ಇವರು ಗದಗ, ಧಾರವಾಡ, ಬೆಂಗಳೂರು, ದೆಹಲಿ, ಹೈದರಾಬಾದ್[೨೧] ಮುಂತಾದ ಕಡೆಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ. ತಾವು ವೈಯಕ್ತಿಕ ವಿಚಾರಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿಗಳಿಗೆ ಪ್ರದರ್ಶನ ಮಾಡಲು ಶಿಬಿರದಲ್ಲಿ ಭಾಗವಹಿಸಲು, ಚಿತ್ರಸ್ಪರ್ಧೆಗೆ ಭಾಗವಹಿಸಲು ಪ್ರಚೋದಿಸುತ್ತಾರೆ. ಸದಾ ಸಂಘಟನಾ ಮನೋಭಾವ ಹೊಂದಿದ ಶ್ರೀ ಕಡ್ಲಿಕೊಪ್ಪರು ಅನೇಕ ಸಂಘ–ಸಂಸ್ಥೆಗಳಿಗೆ ಸದಸ್ಯರಾಗಿ ಕರ್ನಾಟಕ ಚಿತ್ರಕಲಾ ಮಹಾವಿದ್ಯಾಲಯಗಳ ನೌಕರರ ಸಂಘದ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಉತ್ತಮವಾದ ಕೆಲಸ ಮಾಡಿದ್ದಾರೆ. ತೋಂಟದಾರ್ಯ

---

೧೯. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ಗದಗ ವಿಜಯ ಮಂದಿರ ಕೊಡುಗೆ ಪು.ಸಂ.೫೩

೨೦. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ಗದಗ ವಿಜಯ ಮಂದಿರ ಕೊಡುಗೆ ಪು.ಸಂ.೫೪

೨೧. ಅಶೋಕ ಅಕ್ಕಿ (ಸಂ) ಕೃತಪೂರಕಲಾ ವೈಭವ ಕೈಪಿಡಿ. ಪು.ಸಂ. ೪೨

ಜಾತ್ರಾ ಮಹೋತ್ಸವದಲ್ಲಿ ಚಿತ್ರಕಲಾ ಶಿಬಿರ, ವಸ್ತು ಪ್ರದರ್ಶನದ ಸಂಚಾಲಕರಾಗಿ, ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚಿತ್ರಕಲಾ ಶಿಬಿರದ ಸಂಚಾಲಕರಾಗಿ ಉತ್ತಮ ಕಾರ್ಯಮಾಡಿದ್ದಾರೆ ಸದಾ ಸಂಘಟನೆಯಲ್ಲಿ ತೊಡಗಿರುವ ಶ್ರೀ ಕಡ್ಲಿಕೊಪ್ಪರು ಅನೇಕ ಶಿಷ್ಯರಿಗೆ ಸಂಘಟನಾ ಶಕ್ತಿ ತುಂಬಿದ್ದಾರೆ.

ಶ್ರೀ ಆರ್.ಡಿ.ಕಡ್ಲಿಕೊಪ್ಪರವರು ಮಾಡಿದ ಕಲಾ ಪ್ರತಿಭೆಯನ್ನು ಮೆಚ್ಚಿ ಕೆಲವು ಸಂಘ-ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಅವುಗಳಲ್ಲಿ ಲಾಯನ್ಸ್ ಕ್ಲಬ್ ವತಿಯಿಂದ ನಡೆದ ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನದಲ್ಲಿ ಪ್ರಶಸ್ತಿ, ಶಿರಸಂಗಿಯ ವಿಶ್ವಕರ್ಮ ಯುವಕ ಸಂಘದಿಂದ ನಡೆದ ಕಲಾ ಪ್ರದರ್ಶನದಲ್ಲಿ ಪ್ರಶಸ್ತಿ ದೊರಕಿವೆ. ಶಿಲ್ಪಕಲಾ ಶಿಬಿರ ಬೆಂಗಳೂರು, ಟೆರಾಕೊಟಾ ಶಿಬಿರ ಗದಗದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಹೆಚ್ಚಿಸಿಕೊಂಡಿದ್ದಾರೆ. ವಿಜಯ ಕಲಾಮಂದಿರದಿಂದ ಶೈಕ್ಷಣಿಕ ಪ್ರವಾಸದಲ್ಲಿ ಊಟ, ವಸತಿಯ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡುವುದು ಇವರ ವಿಶೇಷತೆಯಾಗಿದೆ.[೭೨] ಅಲ್ಲದೇ ಕಲಾಶಾಲೆಯಲ್ಲಿ ಯಾವುದೇ ಶಿಬಿರ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ ವಹಿಸಿ ಕಾರ್ಯಕ್ರಮ ಯಶಸ್ವಿಯಾಗುವಂತೆ ನೋಡಿಕೊಳ್ಳುವುದು ಇವರ ಗುಣಧರ್ಮವಾಗಿದೆ ಸದಾ ಹಸನ್ಮುಖಿಯಾದ ಶ್ರೀ ರಾಜಗೋಪಾಲ ಕಡ್ಲಿಕೊಪ್ಪರು ಬಹುಮುಖ ಕಲಾ ಪ್ರತಿಭೆಯನ್ನು ಹೊಂದಿದವರಾಗಿದ್ದಾರೆ.

ವಿಲ್ಸನ್ ಎಸ್. ಸೋನಾಘರ : ಶ್ರೀ ವಿಲ್ಸನ್ ಎಸ್. ಸೋನಾಘರ ಇವರು ೧೯೬೧ರಲ್ಲಿ ಗದುಗಿನಲ್ಲಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ಹಂತದಲ್ಲಿ ಚಿತ್ರಕಲೆಯ ಅಭಿರುಚಿ ಹೊಂದಿದವರಾಗಿದ್ದರು. ಬಿ.ಎ. ಪದವಿಧರರಾದ ಇವರು ಉನ್ನತ ಚಿತ್ರಕಲಾ ಅಭ್ಯಾಸವನ್ನು ವಿಜಯ ಕಲಾಮಂದಿರದಲ್ಲಿ ಮಾಡಿದ್ದಾರೆ. ಶ್ರೀ ವಿಲ್ಸನ್‌ರವರು ೧೯೮೧ರಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕನೊಂದಿಗೆ ಆರ್ಟ್ ಮಾಸ್ಟರ್ ಡಿಪ್ಲೋಮಾ ಪರೀಕ್ಷೆಯನ್ನು ಪಾಸು ಮಾಡಿದ್ದಾರೆ. ಡಿಪ್ಲೋಮಾ ಮಾಡಲಿಂಗ್‌ದಲ್ಲಿ ೨ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.[೭೩] ಗುರುಗಳಿಗೆ ಉತ್ತಮ ಶಿಷ್ಯರಾಗಿ ಸ್ಮರಣಚಿತ್ರಣ, ಭಾವಚಿತ್ರಣ, ಸಂಯೋಜನಾ ಚಿತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಶ್ರೀ ಸೋನಾಘರ ಅವರ ಕಲಾ ಪ್ರತಿಭೆಯನ್ನು ಮೆಚ್ಚಿ ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರನ್ನಾಗಿ ಶ್ರೀ ಟಿ.ಪಿ. ಅಕ್ಕಿಯವರು ನೇಮಕ ಮಾಡಿಕೊಂಡರು.

ಸದಾ ಗುರುಗಳಿಗೆ ವಿಧೇಯರಾದ ವಿಲ್ಸನ್‌ರವರು ಉಪನ್ಯಾಸಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಸದಾ ಕ್ರಿಯಾಶೀಲರಾದ ಇವರು ಅನೇಕ ಕಲಾಕೃತಿಗಳನ್ನು ರಚಿಸಿ ಅನೇಕ ಕಲಾಪ್ರದರ್ಶನ, ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಕಲಾಕೃತಿಗಳು ಗದಗ, ಹುಬ್ಬಳ್ಳಿ, ಧಾರವಾಡ, ಹೈದರಾಬಾದ್, ಮುಂಬಯಿ, ಮುದ್ರಾಸ್, ದೆಹಲಿ, ಬೆಂಗಳೂರು ಮುಂತಾದ ಕಡೆಗಳಲ್ಲಿ ಪ್ರದರ್ಶನಗೊಂಡಿವೆ.[೭೪] ಗದಗ, ಬೆಂಗಳೂರು, ಧಾರವಾಡಗಳಲ್ಲಿ ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ಮಾಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ, ಕೇಂದ್ರ ಲಲಿತಕಲಾ ಅಕಾಡೆಮಿಯ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಆಯ್ಕೆಯಾಗಿ ಪ್ರದರ್ಶನಗೊಂಡಿವೆ. ಸದಾ ಕಲಾಕೃತಿಗಳ

೭೨. ಆರ್.ಡಿ .ಕಡ್ಲಿಕೊಪ್ಪ ಸಂದರ್ಶನ ದಿನಾಂಕ ೧೦-೭-೨೦೦೮

೭೩. ಅನ್ನದಾನಿ ಹಿರೇಮಠ (ಸಂ) ಸುವರ್ಣ ವಿಜಯ ಪು.ಸಂ. ೨೮

೭೪. ಅಶೋಕ ಅಕ್ಕಿ ಕೃತಪೂರ ಕಲಾ ವೈಭವ ಕೈಪಿಡಿ ಪು.ಸಂ. ೫೦

ರಚನೆಯಲ್ಲಿ ತೊಡಗಿಕೊಂಡಿರುವ ಶ್ರೀ ವಿಲ್ಸ್‌ನ್‌ರವರು ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಗದಗ, ಹುಬ್ಬಳ್ಳಿ, ಕಲಾಮೇಳ ಬೆಂಗಳೂರು, ಸೌಥ್ ಸೆಂಟ್ರಲ್ ಝೋನ್, ಕಲಾ ಉತ್ಸವ ಬೆಂಗಳೂರು, ಮಡಿಕೇರಿ, ಲಕ್ಕುಂಡಿ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಲಾಶಿಬಿರ ಗದಗ ಹೀಗೆ ಹಲವಾರು ಕಲಾಶಿಬಿರಗಳಲ್ಲಿ ಭಾಗವಹಿಸಿ ಉತ್ತಮ ಕಲಾಕೃತಿ ರಚನೆ ಮಾಡಿದ್ದಾರೆ.

ಸೊನಘುರರವರು ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ವಾರ್ಷಿಕ ಕಲಾ ಪ್ರದರ್ಶನದ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಅನೇಕ ಸಂಘ-ಸಂಸ್ಥೆಗಳಿಂದ ಸನ್ಮಾನ, ಗೌರವಗಳಿಗೆ ಭಾಜನರಾಗಿದ್ದಾರೆ. ಇವರು ಅನೇಕ ಉತ್ತಮ ಕಲಾಕೃತಿಗಳು ಗದಗ, ಮುಂಬಯಿ, ದೆಹಲಿ, ಜರ್ಮನಿ, ಅಮೇರಿಕಾ ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ.[೭೫] ಕಲಾಶಾಲೆಯ ಯಾವುದೇ ಕೆಲಸವಿದ್ದರೂ ಶ್ರದ್ಧೆಯಿಂದ ಮಾಡುವ ಮನೋಭಾವ ಉಳ್ಳವರಾಗಿದ್ದಾರೆ. ಇವರ ಸೇವೆಯಿಂದ ಅನೇಕ ವಿದ್ಯಾರ್ಥಿಗಳಿಗೆ ಸಹಾಯವಾಗಿದೆ. ಗದಗ ಜಿಲ್ಲೆಗೆ ತಮ್ಮದೆಯಾದ ಕಲಾ ಕೊಡುಗೆಯನ್ನು ಇವರು ನೀಡಿದ್ದಾರೆ.

ಕೃಷ್ಣ ಕೆ.ಎಂ : ಶ್ರೀ ಕೃಷ್ಣಾ ಕೆ.ಎಂ. ಇವರು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಗೋಲಭಾವಿ ಗ್ರಾಮದಲ್ಲಿ ೧೯೭೩ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಶಿಕ್ಷಣವನ್ನು ಗೊಲಭಾವಿಯಲ್ಲಿ ಮುಗಿಸಿ ಪ್ರೌಢಶಿಕ್ಷಣವನ್ನು ತೇರದಾಳದಲ್ಲಿ ಪೂರೈಸಿದ್ದಾರೆ.[೭೬] ಚಿಕ್ಕವರಿದ್ದಾಗಲೇ ಚಿತ್ರಕಲೆಯ ಗೀಳಿಗಂಟಿಕೊಂಡ ಕೃಷ್ಣಾರವರು ಉನ್ನತ ವ್ಯಾಸಂಗಕ್ಕಾಗಿ ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯಕ್ಕೆ ಪ್ರವೇಶ ಪಡೆದರು. ಸದಾ ಹಸನ್ಮುಖರಾಗಿರುವ ಇವರು ಖ್ಯಾತ ಕಲಾವಿದರಾದ ಶ್ರೀ ಎಂ.ಆರ್.ಬಾಳಿಕಾಯಿಯವರ ಕೈಯಲ್ಲಿ ಪಳಗಿದವರು. ಕಲಿಯುವಾಗ ಎಲ್ಲ ಸ್ನೇಹಿತರನ್ನು ಗುರುಗಳನ್ನು ಅಷ್ಟೇ ವಿನಯದಿಂದ ಕಾಣುತ್ತಿದ್ದರು. ಚಿತ್ರಕಲೆಯ ಜೊತೆ ಸಂಗೀತ ಕಲೆ ಇವರಿಗೆ ಕರಗತವಾಗಿದೆ. ಭಾವಚಿತ್ರಣ, ನಿಸರ್ಗಚಿತ್ರ, ಸಂಯೋಜನಾ ಚಿತ್ರ, ಯಥಾದರ್ಶನ, ವಸ್ತುಚಿತ್ರ, ನಕ್ಷಾಚಿತ್ರಗಳು, ಸ್ಮರಣ ಚಿತ್ರಣಗಳನ್ನು ಜಲವರ್ಣ, ತೈಲವರ್ಣ ಅಕ್ರಾಲಿಕ್ ಮಾಧ್ಯಮಗಳಿಂದ ಉತ್ತಮ ಕಲಾಕೃತಿಗಳನ್ನು ರಚಿಸುವುದರ ಮೂಲಕ ಆರ್ಟ್ ಮಾಸ್ಟರ್ ಪರೀಕ್ಷೆಯನ್ನು ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ, ಧಾರವಾಡದಲ್ಲಿ ಪಾಸು ಮಾಡಿಕೊಂಡರು. ಮುಂದೆ ಸಿಂದಗಿಯ ಶ್ರೀ ತೋಂಟದಾರ್ಯ ವಿದ್ಯಾಪೀಠದ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಎರಡು ವರ್ಷಗಳ ಕಾಲ ಉತ್ತಮ ಸೇವೆ ಸಲ್ಲಿಸಿದ್ದಾರೆ.

ಶ್ರೀ ಕೃಷ್ಣಾ ಕೆ.ಎಂ.ರವರು ೧೯೯೬ರಲ್ಲಿ ಗದುಗಿನ ವಿಜಯ ಕಲಾಮಂದಿರದಲ್ಲಿ ಉಪನ್ಯಾಸಕರಾಗಿ ಸೇವೆಗೆ ಹಾಜರಾದರು. ಮೃದುಸ್ವಭಾವದ ಸರಳ ವ್ಯಕ್ತಿಯಾದ ಶ್ರೀ ಕೃಷ್ಣಾರವರು ಅನೇಕ ವಿದ್ಯಾರ್ಥಿಗಳ ಪ್ರೀತಿಯ ಗುರುವಾಗಿ ಸದಾ ಕಲಿಸುವ, ಕಲಿಯುವ ಹಂಬಲದಲ್ಲಿರುತ್ತಾರೆ. ಇವರು ಡಿಪ್ಲೋಮಾ, ಬಿ.ಎಫ್.ಎ., ಎ. ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ. ತೈಲವರ್ಣ ಮತ್ತು ಜಲವರ್ಣಗಳಿಂದ ಅನೇಕ ಸೃಜನಾತ್ಮಕ ಸಂಯೋಜನಾ ಕಲಾಕೃತಿಗಳನ್ನು ರಚಿಸಿದ್ದಾರೆ. ಜಲವರ್ಣದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ ಇವರು ಅನೇಕ ಉತ್ತಮವಾದ ನಿಸರ್ಗ ಚಿತ್ರಗಳನ್ನು ರಚಿಸಿದ್ದಾರೆ.

---

೭೫. ಅಶೋಕ ಅಕ್ಕಿ ಕೃತಪೂರ ಕಲಾ ವೈಭವ ಕೈಪಿಡಿ ಪು.ಸಂ. ೫೦

೭೬ ಕೃಷ್ಣಾ ಕೆ.ಎಂ. ಸಂದರ್ಶನ, ದಿನಾಂಕ ೨೪-೧೧-೨೦೦೮

ರಾಜ್ಯ ಹೊರರಾಜ್ಯಗಳಲ್ಲಿ ಅನೇಕ ಚಿತ್ರಕಲಾ ಪ್ರದರ್ಶನಗಳಲ್ಲಿ, ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಗದಗ, ಮಧ್ಯಪ್ರದೇಶ, ರಾಜ್ಯಸ್ಥಾನ, ಲಕ್ಕುಂಡಿ, ಕೆ.ವಿ.ವಿ. ಧಾರವಾಡ, ಉಜ್ಜಯನಿ ಕಲಾಶಿಬಿರ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಸುವರ್ಣ ಕರ್ನಾಟಕ ಕಲಾಶಿಬಿರ ಗುಲಬರ್ಗಾ, ಹಂಪಿ ಉತ್ಸವ ಮುಂತದ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.[೭೭] ಗದಗ, ಧಾರವಾಡ, ಬೆಂಗಳೂರು, ಚೆನ್ನೈ ಹೊಸದೆಹಲಿ, ಚಿತ್ರಕಲಾ ಪರಿಷತ್ ಬೆಂಗಳೂರು, ಹೀಗೆ ಹಲವಾರು ಕಡೆಗಳಲ್ಲಿ ನಡೆದ ಕಲಾಪ್ರದರ್ಶನ ಮತ್ತು ಕಲಾಶಿಬಿರಗಳಲ್ಲಿ ಭಾಗವಹಿಸಿ ಅನುಭವಿ ಕಲಾವಿದರಾಗಿದ್ದಾರೆ. ಇದಲ್ಲದೇ ಇವರ ಕಲಾಕೃತಿಗಳು ಜರ್ಮನಿ, ಧಾರವಾಡ, ಬೆಂಗಳೂರು, ಗದಗ, ಲಕ್ಕುಂಡಿ, ರಾಜಸ್ಥಾನ, ದೆಹಲಿ ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ. ಇಂತಹ ಕಲಾವಿದರು ಗದುಗಿಗೆ ತಮ್ಮದೇಯಾದ ಕೊಡುಗೆಯನ್ನು ನೀಡಿದ್ದಾರೆ.

ಶ್ರೀಮತಿ ಶಶಿಕಲಾ ಶ್ರೀರಂಗ ಕಮ್ಮಾರ : ಶ್ರೀಮತಿ ಶಶಿಕಲಾ ಕಮ್ಮಾರರವರು ಬೆಳಗಾವಿ ಜಿಲ್ಲೆಯ ಮಲ್ಲಾಪೂರ ಗ್ರಾಮದಲ್ಲಿ ೧೯೬೪ರಲ್ಲಿ ಜನಿಸಿದರು.[೭೮] ದೊಡ್ಡಪ್ಪ ಎಸ್.ಎನ್. ಸುತಾರರವರು ಚಿತ್ರಕಲಾವಿದರಾಗಿ ಉಮಾ ಚಿತ್ರಕಲಾ ಶಾಲೆಯನ್ನು ಬೆಳಗಾವಿಯಲ್ಲಿ ಪ್ರಾರಂಭಿಸಿದರು. ಈ ಕಲಾಶಾಲೆಯಲ್ಲಿ ಶ್ರೀಮತಿ ಕಮ್ಮಾರರವರು ಆರ್ಟ್ ಮಾಸ್ಟರ್ ಡಿಪ್ಲೋಮಾ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ. ಉತ್ತಮ ಕಲಾವಿದೆಯಾದ ಇವರು ಕಲಾಪ್ರತಿಭೆಯನ್ನು ಮೆಚ್ಚಿ ಶ್ರೀ ಸುತಾರರವರು ತಮ್ಮ ಕಲಾಶಾಲೆಯಲ್ಲಿ ಪ್ರಾಚಾರ್ಯರರನ್ನಾಗಿ ಸೇವೆಗೆ ಹಾಜರುಪಡಿಸಿಕೊಂಡರು. ಉತ್ತಮ ಆಡಳಿತಗಾರರಾದ ಶ್ರೀಮತಿ ಕಮ್ಮಾರವರು ಅನೇಕ ವಿದ್ಯಾರ್ಥಿಗಳಿಗೆ ಕಲಾ ವಿದ್ಯಾರ್ಜನೆ ನೀಡಿದ್ದಾರೆ.

೨೦೦೫ರಲ್ಲಿ ಉಮಾ ಕಲಾಶಾಲೆ, ಬೆಳಗಾವಿ ಇದು ಕೆಲವು ಆಡಳಿತಾತ್ಮಕ ತೊಂದರೆಯಿಂದ ಕಲಾಶಾಲೆಯು ಮುಚ್ಚಲ್ಪಟ್ಟಿತು. ಮುಂದೆ ಇವರು ಸರಕಾರದ ಆದೇಶದಂತೆ ಇವರು ಉಮಾ ಚಿತ್ರಕಲಾ ಶಾಲೆಯಿಂದ ಗದುಗಿನ ವಿಜಯ ಕಲಾಮಂದಿರಕ್ಕೆ ನಿಯೋಜನೆಗೊಂಡರು.[೭೯] ಸರಳ ಸ್ವಭಾವದ ಶ್ರೀಮತಿ ಕಮ್ಮಾರರವರು ಚಿತ್ರ ಸಂಯೋಜನೆ, ಯಥಾದರ್ಶನ, ಸ್ಮರಣಚಿತ್ರಣ, ವಸ್ತುಚಿತ್ರಣಗಳಲ್ಲಿ ವಿಶೇಷ ಪರಿಣಿತಿ ಹೊಂದಿದವರು. ಇವರ ಕಲಾಕೃತಿಗಳು ಬೆಳಗಾವಿ, ದಾವಣಗೆರೆ, ಗುಲಬರ್ಗಾ, ಗದಗ, ಬೆಂಗಳೂರು ಮುಂತಾದ ಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಸದಾ ಕಲಿಸುವ ಕಲಿಯುವ ತವಕದಲ್ಲಿರುವ ಇವರು ಎಂ.ವಿ.ಎ. ಸ್ನಾತಕೋತ್ತರ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ. ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಗದಗ, ಬೆಳಗಾವಿ, ಬೆಂಗಳೂರು, ದಾವಣಗೆರೆ ಮುಂತಾದ ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.[೮೦]

ಶರಣಪ್ಪ ಬಿ.ಎಚ್ : ಶರಣಪ್ಪ ಬಿ.ಎಚ್. ಇವರು ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ನಾಗರಾಳ ಗ್ರಾಮದಲ್ಲಿ ೧೯೭೦ರ ಜೂನ್ ೧ ರಂದು ಜನಿಸಿದರು. ಚಿಕ್ಕವನಿರುವಾಗಲೇ

೭೭. ಅಶೋಕ ಅಕ್ಕಿ ಕೃತಪುರ ಕಲಾವೈಭವ ಕೈಪಿಡಿ. ಪು.ಸಂ. ೪೩
೭೮. ಶ್ರೀಮತಿ ಶಶಿಕಲಾ ಕಮ್ಮಾರ ಸಂದರ್ಶನ ದಿನಾಂಕ ೨೬-೧೧-೨೦೦೯
೭೯. ಶ್ರೀಮತಿ ಪ್ರಶಿಕಲಾ ಕಮ್ಮಾರ ಸಂದರ್ಶನ ದಿನಾಂಕ ೩೦-೧೧-೨೦೦೯
೮೦. ಅಶೋಕ ಅಂಕಿ ಕೃತಪೂರ ಕಲಾವೈಭವ ಕೈಪಿಡಿ ಪು. ೪೩

ಚಿತ್ರಕಲೆಯ ಕುರಿತು ಆಸಕ್ತಿ ಇರುವುದರಿಂದ ಉನ್ನತ ವ್ಯಾಸಂಗಕ್ಕಾಗಿ ಬೆಳಗಾವಿಯ ಉಮಾ ಚಿತ್ರಕಲಾ ಶಾಲೆಯಲ್ಲಿ ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡಿದರು.[೮೧] ವಿದ್ಯಾಜೀವನದಲ್ಲಿಯೇ ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿ ಎಲ್ಲ ಶಿಕ್ಷಕರ ಪ್ರೀತಿಗೆ ಪಾತ್ರರಾದರು. ಆರ್ಟ್ ಮಾಸ್ಟರ್ ಡಿಪ್ಲೋಮಾ, ಡ್ರಾಯಿಂಗ್ ಮತ್ತು ಪೇಂಟಿಂಗ್ ಡಿಪ್ಲೋಮಾ ಪದವಿಯನ್ನು ಉಮಾ ಚಿತ್ರಕಲಾ ಶಾಲೆಯಲ್ಲಿಯೇ ಪಡೆದುಕೊಂಡರು. ಸರಳ ಸ್ವಭಾವದ ಉತ್ತಮ ನಡತೆಯನ್ನು ಗಮನಿಸಿದ ಶ್ರೀ ಎಸ್.ಬಿ.ಸುತಾರವರು ಇವರಿಗೆ ತಾವು ಕಲಿತ ಕಲಾಶಾಲೆಯಲ್ಲಿಯೇ ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಂಡು ಸೇವೆಸಲ್ಲಿಸುವ ಭಾಗ್ಯ ಕಲ್ಪಿಸಿಕೊಟ್ಟರು.

ಶರಣಪ್ಪರವರು ಉಪನ್ಯಾಸಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತ ಉತ್ತಮ ಸೇವೆ ಸಲ್ಲಿಸುತ್ತಿದ್ದರು. ಆದರೆ ಉಮಾ ಕಲಾಶಾಲೆಯು ಕೆಲವು ಆಡಳಿತಾತ್ಮಕ ತೊಂದರೆಯಿಂದ ಸರಕಾರ ಈ ಕಲಾಶಾಲೆಯನ್ನು ಬಂದ ಮಾಡಿತು ಕಲಾಶಾಲೆ ಬಂದಾದಾಗ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗ ಸರಕಾರದವರೇ ಇವರಿಗೆ ಬೇರೆ ಸಂಸ್ಥೆಗೆ ವರ್ಗಾಯಿಸಿದಾಗ ಶರಣಪ್ಪನವರಿಗೆ ಸಿಕ್ಕಿದ್ದು ಗದಗಿನ ವಿಜಯ ಕಲಾಮಂದಿರ. ೨೦೦೩ರಲ್ಲಿ ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರಾಗಿ ಸೇವೆ ಸಲ್ಲಿಸತೊಡಗಿದರು. ಸಂಸ್ಥೆಯವರ ಹಾಗೂ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾದರು. ಸದಾ ಕಲಿಯುವ ಆಸೆಯನ್ನು ಹೊತ್ತ ಶರಣಪ್ಪನವರು ಬಿ.ಎಫ್.ಎ. ಹಾಗೂ ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಡೆದುಕೊಂಡರು. ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಹೆಚ್ಚಾಗಿ ಇವರು ನಿಸರ್ಗ ಚಿತ್ರಣವನ್ನು ಜಲವರ್ಣದಿಂದ ಮಾಡಿ ಅನೇಕ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ.[೮೨] ಬೆಳಗಾವಿ, ಶಿರಸಂಗಿ, ಗದಗ, ಲಕ್ಕುಂಡಿ, ಬೆಂಗಳೂರು, ದೆಹಲಿ, ಧಾರವಾಡ ಮುಂತಾದ ಕಡೆಗಳಲ್ಲಿ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ.

ಬೆಂಗಳೂರು, ಹುಬ್ಬಳ್ಳಿ, ಶಿವಮೊಗ್ಗ, ಹಂಪಿ, ರಾಜಸ್ಥಾನ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಗದಗ, ಲಕ್ಕುಂಡಿ, ಬೆಳಗಾವಿ ಮುಂತಾದ ಕಡೆಗಳಲ್ಲಿ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ಇವರ ಅನೇಕ ಕಲಾಕೃತಿಗಳು ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ ಗದಗ, ಬೀದರ, ಲಂಡನ್, ಶಿವಮೊಗ್ಗ, ರಾಜಸ್ಥಾನ, ಗೋವಾ, ಮಧ್ಯಪ್ರದೇಶ, ಮುಂಬಯಿಗಳಲ್ಲಿ ಸಂಗ್ರಹಗೊಂಡಿವೆ.

ವಿಜಯ ಚಿತ್ರಕಲಾ ಮಹಾವಿದ್ಯಾಲಯ (ಸ್ನಾತಕೋತ್ತರ ಪದವಿ ವಿಭಾಗ) :

ಈ ಚಿತ್ರಕಲಾ ಪದವಿ ವಿದ್ಯಾಲಯ ವಿಜಯ ಕಲಾಮಂದಿರ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿದ್ದು ೧೯೮೫ ರಲ್ಲಿ ಚಿತ್ರಕಲಾ ಪದವಿ ತರಗತಿಗಳನ್ನು ಆರಂಭ ಮಾಡಿತು. ಚಿತ್ರಕಲೆಯಲ್ಲಿ ಪದವಿಯನ್ನು ನೀಡುವ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಒದಗಿಸಿಕೊಟ್ಟಿತು.

ವಿಜಯ ಚಿತ್ರಕಲಾ ಮಹಾವಿದ್ಯಾಲಯ ಪ್ರಾರಂಭಿಸಲು ಶ್ರೀ ಅಶೋಕ ಅಕ್ಕಿಯವರು ಮೂಲ ಕಾರಣೀಭೂತರಾಗಿದ್ದಾರೆ. ಶ್ರೀಯುತರು ಈ ಕಾಲೇಜಿನ ಪ್ರಥಮ ಪ್ರಾಚಾರ್ಯರಾಗಿ ಸುಮಾರು

---

೮೧. ಶರಣಪ್ಪ ಎಚ್.ಎಮ್. ಸಂದರ್ಶನ ದಿನಾಂಕ ೧೦-೧೧-೨೦೦೯

೮೨. ಅಶೋಕ ಅಕ್ಕಿ ಕೃತಪೂರ ಕಲಾ ವೈಭವ ಪು.೩೭

ಹತ್ತು ವರ್ಷಗಳ ಕಾಲ ಉತ್ತಮ ಸೇವೆ ಮಾಡುವುದರ ಮೂಲಕ ಕಾಲೇಜಿಗೆ ತಳಹದಿ ಹಾಕಿಕೊಟ್ಟರು. ಪ್ರಾರಂಭದಲ್ಲಿ ಬಿ.ಎಫ್.ಎ. ಪದವಿ ನೀಡುತ್ತಾ ಬಂದು ವಿದ್ಯಾರ್ಥಿಗಳ ಬೇಡಿಕೆಯ ಮೇರೆಗೆ ಮುಂದೆ ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ನೀಡುತ್ತಿದೆ. ಈ ಕಾಲೇಜಿನಲ್ಲಿ ಅನೇಕ ಉಪನ್ಯಾಸಕರು ಸೇವೆ ಸಲ್ಲಿಸಿದ್ದಾರೆ. ಹಾಗು ಸೇವೆ ಸಲ್ಲಿಸುತ್ತಿದ್ದಾರೆ. ಅವುಗಳ ಸ್ಥೂಲ ಪರಿಚಯ ನೀಡಲಾಗಿದೆ.

ಪ್ರಾ. ಸಿ.ವ್ಹಿ. ಬಡಿಗೇರ : ಶ್ರೀ ಸಿ.ವಿ.ಬಡಿಗೇರ ಇವರು ಗದಗ ತಾಲೂಕಿನ ಹೊಸೂರು ಗ್ರಾಮದಲ್ಲಿ ೧೯೬೭ರ ಎಪ್ರಿಲ್ ೫ ರಂದು ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿದ ನಂತರ ಚಿತ್ರಕಲಾ ಪದವಿ ಅಭ್ಯಾಸಕ್ಕಾಗಿ ಗದುಗಿನ ವಿಜಯ ಲಲಿತಕಲಾ ಮಹಾವಿದ್ಯಾಲಯ ಪ್ರವೇಶ ಪಡೆದರು. ಬಡಿಗೇರ ಅವರು ಉತ್ತಮ ವಿದ್ಯಾಭ್ಯಾಸವನ್ನು ಮಾಡಿ ಎಲ್ಲ ಗುರುಗಳ ಪ್ರೀತಿಯ ಶಿಷ್ಯರಾಗಿ ನಿಸರ್ಗಚಿತ್ರಣ, ಸಂಯೋಜನಾ ಚಿತ್ರಣ, ಸಾಂಪ್ರದಾಯಿಕ ಚಿತ್ರಣ ಮತ್ತು ಗ್ರಾಫಿಕ್ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿ ಎಂ.ಎಫ್.ಪಿ ಗ್ರಾಫಿಕ್ ಸ್ನಾತಕೋತ್ತರ ಪದವಿಯನ್ನು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ."[೮೩]

ಮೃದು ಸ್ವಭಾವದ ಸರಳ ವ್ಯಕ್ತಿಯಾಗಿರುವ ಇವರು ಉತ್ತಮ ಕಲಾ ವಿದ್ಯಾರ್ಥಿಯಾಗಿ ತಾವು ಕಲಿತ ಕಾಲೇಜಿನಲ್ಲಿಯೇ ಉಪನ್ಯಾಸಕರಾಗಿ ಸೇವೆ ಮಾಡಿಕೊಂಡರು. ಶ್ರೀಯುತರು ಉಪನ್ಯಾಸಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಪ್ರಭುದ್ಧ ಕಲಾವಿದರನ್ನಾಗಿ ಮಾಡಿದ್ದಾರೆ. ಅನೇಕ ಕಲಾಚಟುವಟಿಕೆ, ಕಲಾಪ್ರದರ್ಶನಗಳನ್ನು ಮಾಡಿದ್ದಾರೆ. ಅವರ ಕಲಾಪ್ರತಿಭೆಯನ್ನು ಮೆಚ್ಚಿ ಸಂಸ್ಥೆಯವರು ಉಪನ್ಯಾಸಕರಾದ ಶ್ರೀ ಸಿ.ವಿ.ಬಡಿಗೇರ ಅವರಿಗೆ ಪ್ರಾಚಾರ್ಯರನ್ನಾಗಿ ನೇಮಕ ಮಾಡಿದ್ದಾರೆ. ವಿಜಯ ಕಲಾಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಸೇವೆ ಆರಂಭಿಸಿದ ಇವರು ಮಹಾವಿದ್ಯಾಲಯದ ಆಡಳಿತಾತ್ಮಕ ಸಮಸ್ಯೆಗಳಿಗೆ ಸ್ಪಂದಿಸಿ ಸಂಸ್ಥೆಯವರೊಂದಿಗೆ ಮತ್ತು ಉಪನ್ಯಾಸಕರೊಂದಿಗೆ ಚರ್ಚಿಸಿ, ಉತ್ತಮ ಆಡಳಿತವನ್ನು ನಿರ್ವಹಿಸುತ್ತಿದ್ದಾರೆ. ಆಡಳಿತ ಕೆಲಸ ಮಾಡುವುದರ ಜೊತೆಗೆ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಚೆನ್ನೈ, ನವದೆಹಲಿ, ಬೆಂಗಳೂರು, ಗುಲಬರ್ಗಾರು, ಧಾರವಾಡ, ಗದಗ, ಲಕ್ಕುಂಡಿ, ಮುಂತಾದ ವಿವಿಧ ಕಡೆ ನಡೆದ ರಾಜ್ಯಮಟ್ಟದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.[೮೪]

ಶ್ರೀ ಸಿ.ವಿ.ಬಡಿಗೇರ ಗ್ರಾಫಿಕ್ ವಿಷಯದಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದು, ಇವರ ಯಚ್ಚಿಂಗ್, ಕ್ಯಾಲಿಗ್ರಾಫಿ, ವಿಷಯಗಳನ್ನು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಹೇಳುತ್ತಾರೆ. ಹಲವಾರು ಕಾರ್ಯಗಾರದಲ್ಲಿ ಭಾಗವಹಿಸಿದ್ದಾರೆ. ಪ್ರಮುಖವಾಗಿ ಅಖಿಲ ಭಾರತ ಮೂರ್ತಿಶಿಲ್ಪ ಕಲಾವಿದರ ಕಾರ್ಯಗಾರ, ಕ್ಯಾಲಿಗ್ರಾಫಿಕ್ ಕಾರ್ಯಾಗಾರ, ಯಚ್ಚಂಗ್ ಕಾರ್ಯಾಗಾರ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶಿಲ್ಪ ಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ.

೮೩. ಸಿ.ವ್ಹಿ. ಬಡಿಗೇರಿಯಿಂದ ಸಂದರ್ಶನ ದಿನಾಂಕ ೨೮-೧೦-೨೦೦೯

೮೪. ಅಶೋಕ ಅಕ್ಕಿ (ಸಂ) ಕೃತಪೂರ ಕಲಾವೈಭವ ಪು.ಸಂ. ೨೯

ಬಿಜಾಪುರದಲ್ಲಿ ನಡೆದ ಅಖಿಲ ಭಾರತ ಕಲಾಪ್ರದರ್ಶನದಲ್ಲಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಗದಗ, ಧಾರವಾಡ, ಚೆನ್ನೈ, ದೆಹಲಿ, ಬೆಂಗಳೂರು, ರಾಜಸ್ಥಾನ, ಶಿರಸಿಂಗಿ ಹೀಗೆ ಹಲವಾರು ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

ಪ್ರಾ ಶ್ರೀಮತಿ ಬನಶಂಕರಿ ಕುಲಕರ್ಣಿ : ಶ್ರೀಮತಿ ಬನಶಂಕರಿ ಕುಲಕರ್ಣಿಯವರು ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ನರೆಗಾಯಿ ಎಂಬ ಗ್ರಾಮದಲ್ಲಿ ಜನಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಎಂ.ಎ. ಸ್ನಾತಕೋತ್ತರ ಪದವಿ ಪಡೆದಿದ್ದಾರೆ ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಯನ್ನು ವಿಜಯ ಚಿತ್ರಕಲಾ ಮಂದಿರದಲ್ಲಿ ಮುಗಿಸಿದ್ದಾರೆ. ಶ್ರೀಮತಿ ಬನಶಂಕರಿ ಅಂಗಡಿಯವರು ಕಲಾಪ್ರತಿಭೆ ಮತ್ತು ಉತ್ತಮ ಮೃದು ಸ್ವಭಾವದವರಾಗಿದ್ದರಿಂದ ತಾವು ಕಲಿತ ಕಲಾಮಂದಿರದಲ್ಲಿ ಉಪನ್ಯಾಸಕಿಯಾಗಿ ಸೇವೆಗೆ ಸೇರಿಕೊಂಡರು. ಸರಳ ಸ್ವಭಾವದವರಾದ ಇವರು ವಇಜಯ ಕಲಾಮಂದಿರದಲ್ಲಿ ಉಪನ್ಯಾಸಕಿಯಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ಮಾಡುತ್ತ ವಿದ್ಯಾರ್ಥಿಗಳಿಗೆ ಪ್ರೀತಿಯ ಗುರುಮಾತೆಯಾಗಿ ಎರಡು ವರ್ಷಗಳ ಕಾಲ ಕಾಲೇಜಿನ ಪ್ರಾಚಾರ್ಯರಾಗಿ ಉತ್ತಮ ಆಡಳಿತವನ್ನು ಮಾಡಿದ್ದಾರೆ.

ಸಾಂಪ್ರದಾಯಿಕ ಚಿತ್ರರಚನೆಯಲ್ಲಿ ಆಸಕ್ತಿ ಹೊಂದಿದ ಇವರು ವ್ಯಕ್ತಿ ಚಿತ್ರ ಸಂಯೋಜನಾ ಚಿತ್ರಗಳನ್ನು ರಚಿಸುವಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ್ದಾರೆ.[೮೫] ಇವರ ಅನೇಕ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಧಾರವಾಡ, ಹುಬ್ಬಳ್ಳಿ, ಗದಗ, ಬೆಂಗಳೂರು, ಲಕ್ಕುಂಡಿ, ಹೊಸಪೇಟೆ ಮುಂತಾದವುಗಳಲ್ಲಿ ಇವರು ಕಲಾಪ್ರದರ್ಶನ ಮಾಡಿದ್ದಾರೆ. ಗುಲಬರ್ಗಾ, ಪಾಟ್ನಾ, ಬೆಂಗಳೂರು, ಧಾರವಾಡ, ಗದಗ, ಹುಬ್ಬಳ್ಳಿ ಮುಂತಾದವುಗಳ ಕಡೆಗೆ ನಡೆದ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ. ಸೌಥ್ ಇಂಡಿಯಾ ಹಿಸ್ಟರಿ ಕಾನ್ಫರೆನ್ಸ್, ದೃಶ್ಯಕಲಾ ಸಾಹಿತ್ಯ ಸಮಾವೇಶ, ಆರ್ಟ್ ಸೆಮಿನಾರ್ ಶಿವಮೊಗ್ಗ, ಪುನರ್‌ಮನನ ಶಿಬಿರ ಶಾಂತಿನಿಕೇತನ.[೮೬] ಕಲಾಉಪನ್ಯಾಸ, ಶ್ರೀ ಸಿದ್ದೇಶ್ವರ ಚಿತ್ರಕಲಾ ಮಹಾವಿದ್ಯಾಲಯ, ಬಿಜಾಪುರ, ಕಲಾಉಪನ್ಯಾಸ, ನಿಮ್ಮೊಂದಿಗೆ ನಾವು, ರಿಫ್ರೆಶರ್ ಕೋರ್ಸ್, ಕನ್ನಡ ವಿಶ್ವವಿದ್ಯಾಲಯ, ಹಂಪಿ ಮುಂತಾದ ಕಲಾ ಶಿಕ್ಷಣ ತರಬೇತಿಯನ್ನು ಪಡೆದುಕೊಂಡಿದ್ದಾರೆ.

ಎಸ್.ವ್ಹಿ.ಗುಂಜಾಳ : ಶ್ರೀ ಸತ್ಯನಾರಾಯಣ ವ್ಹಿ.ಗುಂಜಾಳರವರು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಅಮರಗೋಳದಲ್ಲಿ ೧೯೬೬ರಲ್ಲಿ ಜನಿಸಿದ್ದಾರೆ.[೮೭] ಚಿಕ್ಕವರಿರುವಾಗಲೇ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ ಇವರು ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಗದುಗಿನಲ್ಲಿ ಪೂರೈಸಿ ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ವಿಜಯ ಕಲಾಮಂದಿರಕ್ಕೆ ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡತೊಡಗಿದರು. ಎಲ್ಲ ಶಿಕ್ಷಕರ ಪ್ರೀತಿಯನ್ನುಗಳಿಸಿ ಉತ್ತಮ ಸ್ನೇಹಿತರ ಒಡನಾಟದಲ್ಲಿ ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸುವತ್ತ ಗಮನಹರಿಸಿದರ. ವಿಜಯ ಕಲಾಮಂದಿರದಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಶಿಕ್ಷಣವನ್ನು ಹಾಗೂ ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಪಡೆದುಕೊಂಡರು. ನಿಸರ್ಗಚಿತ್ರ, ಸ್ಥಿರಚಿತ್ರ,

---

೮೫. ಪಿ.ಬಿ.ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ಕೊಡುಗೆ ಪು.ಸಂ. ೫೯

೮೬. ಅಶೋಕ ಅಕ್ಕಿ, ಕೃತಪುರ ಕಲಾ ವೈಭವ ಕೈಪಿಡಿ ಪು.ಸಂ. ೪೦

೮೭. ಎಸ್.ಬಿ. ಗುಂಜಾಳ ಸಂದರ್ಶನ ದಿನಾಂಕ ೨೬–೭–೨೦೦೯

ಸ್ಮರಣಚಿತ್ರಣ, ಸಂಯೋಜನಾ ಚಿತ್ರಗಳನ್ನು ರಚಿಸುವಲ್ಲಿ ಸಿದ್ಧಹಸ್ತರಾದ ಗುಂಜಾಳರವರು ಅಕ್ರಾಲಿಕ್ ಮಾಧ್ಯಮದಲ್ಲಿ ನವ್ಯ ಶೈಲಿಯ ಸೃಜನಾತ್ಮಕ ಕೃತಿಗಳನ್ನು ರಚಿಸುವಲ್ಲಿ ವಿಶೇಷತೆಯನ್ನು ಪಡೆದುಕೊಂಡಿದ್ದಾರೆ. ಸುಂದರವಾದ ರೇಖಾಚಿತ್ರಗಳನ್ನು ರಚಿಸುವುದರ ಮೂಲಕ ತಮ್ಮ ಕಲಾ ಪ್ರೌಢಿಮೆಯನ್ನು ಪಡೆದಿದ್ದಾರೆ.

ಶ್ರೀ ಎಸ್.ವ್ಹಿ.ಗುಂಜಾಳರವರ ಕಲಾಕೃತಿ ಸದಾ ಕಲಾಚಟುವಟಿಕೆಯನ್ನು ಗಮನಿಸಿ ಶ್ರೀ ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರದಲ್ಲಿ ಚಿತ್ರಕಲಾ ಉಪನ್ಯಾಸಕರನ್ನಾಗಿ ನೇಮಕಾತಿ ಮಾಡಿದರು. ತಾವು ಕಲಿತ ಶಾಲೆಯಲ್ಲಿ ಉಪನ್ಯಾಸಕರಾಗಿ ನೇಮಕ ಹೊಂದಿದ ಗುಂಜಾಳರವರು ತಮ್ಮಲ್ಲಿರುವ ವಿದ್ಯಾರ್ಥಿಗಳನ್ನು ತಮ್ಮ ಕಡೆಗೆ ಸೆಳೆದುಕೊಂಡು ಸದಾ ಸ್ನೇಹ ಜೀವಿಯಾಗಿ ಇರುವ ವಿದ್ಯಾರ್ಥಿಗಳಿಗೆ ಆತ್ಮೀಯತೆಯ ಸ್ನೇಹಿತರಂತೆ ಕಾಣುತ್ತಾರೆ. ಚಿತ್ರಕಲೆಯಲ್ಲದೆ ಹಾಸ್ಯ, ನಾಟಕ ಮಾಡುವುದರ ಮೂಲಕ ತಮ್ಮಲ್ಲಿರುವ ಪ್ರತಿಭೆಯನ್ನು ಸಾಬೀತುಪಡಿಸಿದ್ದಾರೆ.

ಸದಾ ಕಲಿಸುವ ಕಲಿಯುವ ಹಂಬಲದಲ್ಲಿರುವ ಗುಂಜಾಳರವರು ಬಿ.ಎಫ್.ಎ. ಮತ್ತು ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ. ಜಯಪುರ, ಮುಂಬಯಿ, ಹೈದರಾಬಾದ, ಚೆನ್ನೈ, ದೆಹಲಿ, ಕೋಲ್ಕತ್ತಾ, ಬೆಂಗಳೂರು ಹೀಗೆ ರಾಷ್ಟ್ರಮಟ್ಟದ ಕಲಾಪ್ರದರ್ಶನಗಳನ್ನು ಸುವರ್ಣ ಕರ್ನಾಟಕ ಕಲಾಶಿಬಿರ, ಧಾರವಾಡ ಉತ್ಸವ, ಲಕ್ಕುಂಡಿ ಉತ್ಸವ, ಚಾಲುಕ್ಯ ಉತ್ಸವ, ಹಂಪಿ ಉತ್ಸವ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕಲಾಶಿಬಿರ ಗದಗ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಮುಂತಾದ ಕಡೆಗಳಲ್ಲಿ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.[೮೮]

ಶ್ರೀ ಎಸ್.ವ್ಹಿ.ಗುಂಜಾಳರವರು ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ-ಪುರಸ್ಕಾರ ಪಡೆದುಕೊಂಡಿದ್ದಾರೆ. ಅವುಗಳಲ್ಲಿ ರೋಟರಿ ಪ್ರಶಸ್ತಿ, ವಾಟರ್ ಕಲರ್ ಉತ್ಸವ ಕಲಾವಿದ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ -೨೦೦೯-೧೦ನೇ ಸಾಲಿನ ವಾರ್ಷಿಕ ಕಲಾಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇವರ ಕಲಾಕೃತಿಗಳು, ಗದಗ, ಧರವಾಡ, ಬೆಂಗಳೂರು, ದೆಹಲಿ, ಕೋಲ್ಕತ್ತಾ, ಚೆನ್ನೈ ರಾಜಸ್ತಾನ ಹೀಗೆ ರಾಜ್ಯ ಮತ್ತು ಅಂತಾರಾಜ್ಯಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

ವ್ಹಿ.ಬಿ. ಪರ್ವತಗೌಡ ಶ್ರೀ ವ್ಹಿ.ಬಿ. ಪರ್ವತಗೌಡ್ರ ಇವರು ೧೯೭೪ರ ಜೂನ್ ೧ ರಂದು ಗದುಗಿನಲ್ಲಿ ಜನಿಸಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಮುಗಿಸಿದ ನಂತರ ಅಣ್ಣ ಚಿತ್ರಕಲಾ ಅಭ್ಯಾಸ ಮಡುತ್ತಿರುವುದನ್ನು ಗಮನಿಸುತ್ತಿದ್ದ ಶ್ರೀ ಪರ್ವತಗೌಡ್ರ ಅನುಕರಣೆಯನ್ನು ಮಾಡಿದವರು. ತಾವೂ ಕಲಾವಿದನಾಗಬೇಕೆಂಬ ಹಂಬಲದಿಂದ ಚಿತ್ರಕಲಾ ಶಿಕ್ಷಣಕ್ಕೆ ಅಣಿಯಾದರು. ಅಲ್ಲದೇ ವಿಜಯ ಕಾಲೇಜ ಆಫ್ ಫೈನ್ ಆರ್ಟ್ ಇಲ್ಲಿ ವಾಣಿಜ್ಯ ಕಲೆಯ ವಿಷಯ ಆಯ್ದುಕೊಂಡು ಪ್ರವೇಶ ಪಡೆದು ಅಧ್ಯಯನ ಮಾಡಲಾರಂಭಿಸಿದರು. ಅನೇಕ ಕಲಾಕೃತಿಗಳನ್ನು ರಚಿಸುವುದರ ಮೂಲಕ ಎಲ್ಲ ಶಿಕ್ಷಕರ ಪ್ರೀತಿಗೆ ಪಾತ್ರರಾಗಿ ಉತ್ತಮ ಶ್ರೇಣಿಯಲ್ಲಿ ಬಿ.ಎಫ್.ಎ. ಪದವಿಯನ್ನು ಪಡೆದುಕೊಂಡರು.

---

೮೮. ಅಶೋಕ ಅಕ್ಕಿ. ಕೃತಪುರಕಲಾ ವೈಭವ ಕೈಪಿಡಿ ಪು. ೩೪

ಶ್ರೀ ಪರ್ವತಗೌಡರು ವಾಣಿಜ್ಯ ಕಲೆಯಲ್ಲಿ ಬಿ.ಎಫ್.ಎ. ಪದವಿ ಮುಗಿದ ನಂತರ ಎಂ.ಎಫ್.ಎ. ಸ್ನಾತಕೋತ್ತರ ಪದವಿ ಪಡೆಯಬೇಕೆಂದು ನಿರ್ಧರಿಸಿದರು. ಆದರೆ ವಿಜಯ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ವಾಣಿಜ್ಯ ಕಲೆಯಲ್ಲಿ ಎಂ.ಎಫ್.ಎ. ಸ್ನಾತಕೋತ್ತರ ಪದವಿ ತರಗತಿಗಳು ಲಭ್ಯವಿಲ್ಲದ ಕಾರಣ ಚಿತ್ರಕಲಾ ಪರಿಷತ್ ಬೆಂಗಳೂರು ಇಲ್ಲಿ ಎಂ.ಎಫ್.ಎ. ತರಗತಿಗೆ ಪ್ರವೇಶ ಹೊಂದಿ ಅಧ್ಯಯನ ಮಾಡಿದರು. ಈ ಸಂದರ್ಭದಲ್ಲಿ ಅನೇಕ ಉತ್ತಮ ಸ್ನೇಹಿತರನ್ನು ಹೊಂದಿದ್ದರಲ್ಲದೇ ಅನೇಕ ಕಲಾಚಟುವಟಿಕೆಗಳನ್ನು ನಡೆಸಿದವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಹೊಂದಿದ ಇವರು ವಿಜಯ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ವಾಣಿಜ್ಯ ವಿಭಾಗಕ್ಕೆ ಉಪನ್ಯಾಸಕರಾಗಿ ನೇಮಕಗೊಂಡು ಸೇವೆ ಸಲ್ಲಿಸತೊಡಗಿದರು. ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನಮಾಡುತ್ತ ಅನೇಕ ಕಡೆಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ. ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಕಲಾಕೃತಿಗಳು ಗದಗ, ಬೆಂಗಳೂರು, ಪೂನಾ, ಮುಂಬಯಿ, ಹೈದರಾಬಾದ್, ಚೆನ್ನೈ ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ.[೮೯]

ವಿಜಯ ಕಲಾ ಮಂದಿರದ ವಿದ್ಯಾರ್ಥಿಗಳು :

ಯಾವುದೇ ಶಿಕ್ಷಣ ಸಂಸ್ಥೆಯ ಉನ್ನತಿ ಮತ್ತು ಪ್ರಸಿದ್ದಿಗಳು ಮತ್ತು ಅದರ ಬೆಳವಣಿಗೆಗಳು ಆ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಸಾಧನೆಗಳು ಅಷ್ಟೇ ಪ್ರಮುಖವಾಗಿರುತ್ತದೆ. ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಕಲಿತು ರ್‍ಯಾಂಕ್ ಬರುವುದು, ಉತ್ತಮ ಶ್ರೇಣಿಯಲ್ಲಿ ಪಾಸಾಗುವುದು, ಸಾಂಸ್ಕೃತಿಕ ಚಟುವಟಿಕೆ, ಕಲಾಚಟುವಟಿಕೆಗಳಲ್ಲಿ ಭಾಗವಹಿಸಿ ಶಾಲೆಗೆ ಹೆಸರು ತರುವುದು ಬಹುಮಾನಗಳನ್ನು ಪಡೆಯುವುದು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಬೆಳೆಯುವುದರ ಮೂಲಕ ಆಯಾ ಶಿಕ್ಷಣ ಸಂಸ್ಥೆಯ ಉನ್ನತೀಕರಣಕ್ಕೆ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾಗಿರುತ್ತದೆ.

ಆದ್ದರಿಂದ ಗದುಗಿನ ವಿಜಯ ಕಲಾಮಂದಿರದಲ್ಲಿ ಕಲಿತು ಹೋದ ಅನೇಕ ವಿದ್ಯಾರ್ಥಿಗಳು ಪ್ರತಿಭಾವಂತರಾಗಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ನಡೆದ ರಾಜ್ಯ ಮತ್ತು ರಾಷ್ಟ್ರಮಟ್ಟದ ಶಿಬಿರಗಳಲ್ಲಿ ಭಾಗವಹಿಸಿ ಪ್ರಶಸ್ತಿ-ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. ಕೇಂದ್ರಲಲಿತಕಲಾ ಅಕಾಡೆಮಿ ಪ್ರಶಸ್ತಿ, ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಕ್ಯಾಮೆಲ್ ಅವರ ಪೌಂಡೇಶನ್ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ ಮುಂತಾದ ಪ್ರಶಸ್ತಿ ಪಡೆಯುವ ಮೂಲಕ ವಿಜಯ ಕಲಾಮಂದಿರದ ವಿದ್ಯಾರ್ಥಿಗಳು ಶಾಲೆಗೆ, ಜಿಲ್ಲೆಗೆ, ರಾಜ್ಯಕ್ಕೆ ಹೆಸರು ಮಾಡಿದ್ದಾರೆ. ಅಂಥ ವಿದ್ಯಾರ್ಥಿಗಳ ಕುರಿತು ಸಂಕ್ಷಿಪ್ತದಲ್ಲಿ ಪರಿಚಯಿಸಲಾಗಿದೆ. ಅಧ್ಯಯನದ ವ್ಯಾಪ್ತಿಯು ಬಹುವಾಗಿರುವುದರಿಂದ ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲಿ ಬೆಳೆದ ವಿದ್ಯಾರ್ಥಿಗಳ, ರಾಜ್ಯ ಮಟ್ಟದಲ್ಲಿ ಬೆಳೆದ ವಿದ್ಯಾರ್ಥಿಗಳನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ವಿಜಯ ಕಲಾಮಂದಿರದಲ್ಲಿ ಕಲಿತ ವಿದ್ಯಾರ್ಥಿಗಳಲ್ಲಿ ಕೆಲವರು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಪಕರಾಗಿ, ಪ್ರವಾಚಕರಾಗಿ ಅಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದು, ಅಂತವರಲ್ಲಿ ಕೆಲವರು ಪಿಎಚ್.ಡಿ.ಯಂತಹ ಉನ್ನತ ಪದವಿಗಳನ್ನು ಪಡೆದಿದ್ದಾರೆ. ಹಾಗೂ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಚಿತ್ರಕಲೆಯಲ್ಲಿ

೮೯. ವ್ಹಿ.ಬಿ. ಪರ್ವತ ಗೌಡರ ಸಂದರ್ಶನ ದಿನಾಂಕ ೨೬-೭-೨೦೦೯

ಪಿಎಚ್.ಡಿ. ಅಧ್ಯಯನ ಮಾಡಿ ಪದವಿ ಪಡೆದ ಮೊದಲ ವಿದ್ಯಾರ್ಥಿಗಳು ಇದೇ ಕಲಾಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳೇ ಆಗಿದ್ದಾರೆ. ವಿಶ್ವವಿದ್ಯಾಲಯ ಮಟ್ಟದಲ್ಲಿ ಸೇವೆ ಸಲ್ಲಿಸಿದ ಸೇವೆ ಸಲ್ಲಿಸುತ್ತಿರುವ ವಿಜಯ ಕಲಾಮಂದಿರದಲ್ಲಿ ಕಲಿತ ವಿದ್ಯಾರ್ಥಿಗಳ ಕುರಿತು ಸ್ಥೂಲವಾಗಿ ಚರ್ಚಿಸಲಾಗಿದೆ.

೧. ಡಾ. ಬಿ. ಕೆ. ಹಿರೇಮಠ : ಬಿ.ಕೆ. ಹಿರೇಮಠ ರವರು ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ೧೯೪೧ರ ಜುಲೈ ೧೫ರಂದು ಹನಕನಹಳ್ಳಿ ಹಿರೇಮಠದ ಕೆಂಡಯ್ಯನವರ ಧರ್ಮಪತ್ನಿ ಈ ದಂಪತಿಗಳಿಗೆ ಜೇಷ್ಠ ಪುತ್ರರಾಗಿ ಬಸಯ್ಯನವರ ಜನನ, ತಂದೆ ಕೆಂದಯ್ಯನವರಿಗೆ ಹುಲಕೋಟಿಯಲ್ಲಿ ಹೊಲ-ಮನೆ. ಆದರೆ 'ಸಣ್ಣ ಮಾತೊಂದು' ಕಾರಣವಾಗಿ ಎಲ್ಲವನ್ನೂ ಬಿಟ್ಟು ಹೆಂಡತಿ ಮಕ್ಕಳೊಂದಿಗೆ ಕೆಲಸ ಹುಡುಕಿಕೊಂಡು ಗದುಗಿಗೆ ಸ್ಥಳಾಂತರಗೊಂಡರು.[೯೦] ಹಿರೇಮಠರವರು ಪ್ರಾಥಮಿಕ ಶಿಕ್ಷಣವನ್ನು ಸವಡಿ ಶಾಲೆಯಲ್ಲಿ ಪ್ರಾರಂಭಿಸಿದರು. ಗರ್ಭಗುಡಿಯಲ್ಲಿನ ಅಂಭಾಭವಾನಿಯ ಸಂಗಮವರಿ ಕಲ್ಲಿನ ಸುಂದರ ಮೂರ್ತಿ ಬಸಯ್ಯನವರನ್ನು ಆಕರ್ಷಿಸಿದ್ದು ಸಹಜವೇ. ತಂದೆ ಕೆಂದಯ್ಯನವರು ಹನುಮಂತನನ್ನು ಅತ್ಯಂತ ಸರಳವಾಗಿ ಚಿತ್ರಿಸುವುದನ್ನು ಬಸಯ್ಯನಿಗೆ ಕಲಿಸಿದದೇ ಅವರ ಕಲಾಕೃತಿಗೆ ಮುಂದಿನ ಕಲಾವ್ಯಾಸಂಗಕ್ಕೆ ನಾಂದಿಯಾಯಿತು.[೯೧] ಬಡತನದ ಭವಣೆಯಲ್ಲಿ ಹಿರೇಮಠರು ಐದನೆಯ ತರಗತಿಗೆ ಸರಕಾರಿ ಶಾಲೆಯಲ್ಲಿ ಅಭ್ಯಾಸ ಪ್ರಾರಂಭಿಸಿ ಅಲ್ಲಿನ ಕಲಾಶಿಕ್ಷಕರಿಗೆ ಹಿರೇಮಠರ ಕಲಾಸಕ್ತಿ ಗೊತ್ತಿದ್ದರಿಂದ ಬಡವ ಕೊಡಲಾರ ಎಂಬ ಕಾರಣಕ್ಕಾಗಿ ಡ್ರಾಯಿಂಗ್ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಸಲಿಲ್ಲ ಎಂಬ ಮಾನಸಿಕ ಆಘಾತ ಇಂದಿಗೂ ಇವರ ಮನದಲ್ಲಿ ನೆಲೆಯೂರುವಂತೆ ಮಾಡಿದೆ.[೯೨] ಈ ವಿಷಯವನ್ನು ಹಿರೇಮಠರು ಬಹುನೋವಿನಿಂದ ಹೇಳುತ್ತಾರೆ. ಚಿಕ್ಕವರಿರುವಾಗಲೇ ಚಿತ್ರಕಲೆಯ ಗೀಳು ಅಂಟಿಕೊಂಡಿದ್ದ ಹಿರೇಮಠರು ಚಿತ್ರಕಲಾ ಅಭ್ಯಾಸ ಮಾಡಬೇಕೆಂದು ಆತುರದಲ್ಲಿದ್ದಾಗ ಟಿ.ಪಿ.ಅಕ್ಕಿಯವರು ವಿಜಯ ಕಲಾಮಂದಿರಕ್ಕೆ ಪ್ರವೇಶ ಪಡಿಸಿಕೊಂಡರು. ಚಿತ್ರಕಲಾ ಶಿಕ್ಷಣಕ್ಕೆ ಟಿ.ಪಿ.ಅಕ್ಕಿಯವರು ಹಿರೇಮಠರವರಿಗೆ ಸರ್ವಸ್ವವಾಗಿ ನಿಂತರು. ಪರೀಕ್ಷಾ ಫಿಯನ್ನು ಟಿ.ಪಿ.ಅಕ್ಕಿಯವರೇ ಭರಿಸುತ್ತಿದ್ದರು. ಇಂಥ ಒಂದು ಅವಕಾಸ ಬಳಸಿಕೊಂಡ ಹಿರೇಮಠರು ಉತ್ತಮ ಕಲಾ ಅಭ್ಯಾಸ ಮಾಡಿ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದರು.

ಖ್ಯಾತ ಕಲಾವಿದ ಎಂ.ಎ.ಚೆಟ್ಟಿ, ಸಿ.ಎನ್.ಪಾಟೀಲ, ವ್ಹಿ.ಟಿ.ಕಾಳೆ, ಶ್ರೀ ಕಮಾನಗಾರ ಮೊದಲಾದ ಕಲಾವಿದರ ಕೈಯಲ್ಲಿ ಪಳಗಿದ ಇವರು ವಿದ್ಯಾರ್ಥಿಗಳಲ್ಲಿ ಸ್ಪರ್ಧಾಮನೋಭಾವನೆಯಿಂದ ಅಭ್ಯಾಸ ಮಾಡಿಸುತ್ತಿದ್ದರು. ಹಿರೇಮಠರ ಅನೇಕ ಉತ್ತಮ ಸ್ನೇಹಿತರು ಇದ್ದರು.[೯೩] ಪ್ರಾ.ವಸಂತ ಅಕ್ಕಿ, ರಮೇಶ, ಅಕ್ಕಿ, ಬಿ.ಜಿ.ವಾರಿ ಸುಂಕದ ಈಶ್ವರಪ್ಪ ಮೊದಲಾದವರು ಇವರ ಆತ್ಮೀಯ ಸ್ನೇಹಿತರಾಗಿದ್ದರು.

ಹೀಗೆ ಉತ್ತಮ ಸ್ನೇಹಿತರ ಪ್ರೀತಿಯ ಗುರುಗಳ ಕೈಯಲ್ಲಿ ಉನ್ನತ ಅಭ್ಯಾಸ ಮಾಡಿ ಮಾಡ್ಲಿಂಗ್ ಹಾಗೂ ಆರ್ಟ್ ಮಾಸ್ಟರ್ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರೈಸಿದರು. ಉಚ್ಚ ಶಿಕ್ಷಣ ಪಡೆದು

೯೦. ಡಾ. ಸಿಂದ್ಧಲಿಂಗಸ್ವಾಮಿ ಹಿರೇಮಠ ಡಾ. ಬಿ.ಕೆ. ಹಿರೇಮಠ ಕ.ಲ.ಕ ಬೆಂಗಳೂರು ಪು.ಸಂ. ೧೩

೯೧. ಡಾ. ಸಿಂದ್ಧಲಿಂಗಸ್ವಾಮಿ ಹಿರೇಮಠ ಡಾ. ಬಿ.ಕೆ. ಹಿರೇಮಠ ಕ.ಲ.ಕ ಬೆಂಗಳೂರು ಪು.ಸಂ. ೧೩

೯೨. ಡಾ. ಬಿ.ಕೆ. ಹಿರೇಮಠ ದಾಖಲಾತಿ ಸಂಗ್ರಹ

೯೩. ಡಾ. ಎಸ್.ಸಿ. ಪಾಟೀಲ ಹಾಗೂ ನಿತ್ಯಾನಂದ ಪಾತ್ರೋಟ ಸಂ. ನಿಜದ ನೇಲೆ ಪು.ಸಂ. ೮೭೫

ತಾವೂ ಒಬ್ಬ ಉತ್ತಮ ಕಲಾವಿದನಾಗಬೇಕೆಂಬ ಬಯಸಿದ ಹಿರೇಮಠರ ಆಸೆಗೆ ತಾತ್ಕಾಲಿಕವಾಗಿ ವಿರಾಮ ನೀಡಿದರು ಕಲಾ ಅಭ್ಯಾಸದ ಆಸೆ ರೂಪಾಂತರ ಹೊಂದಿ ಗದುಗಿನ ಜೆ.ಟಿ.ಕಾಲೇಜಿನಲ್ಲಿ ಬಿ.ಎ. ಪದವಿ ಅಭ್ಯಸಿಸಲು ಮುಂದಾದರು.

ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಪ್ರಾರಂಭಿಸಿದರು. ಹಿರೇಮಠರು ತಮ್ಮ ಆಸೆಯಂತೆ ಫಿಲಾಸಫಿ ಮತ್ತು ಲಾಜಿಕ್ ವಿಷಯವನ್ನು ಆಯ್ಕೆ ಮಾಡಿಕೊಂಡರು. ಆದರೆ ಆ ವಿಷಯದ ಪ್ರಾಧ್ಯಾಪಕರು "ಇದೇ ಕಾಲೇಜಿನಲ್ಲಿ ಈ ವಿಷಯಗಳನ್ನು ಆಯ್ಕೆ ಮಾಡಿಕೊಂಡ ನಿನಗೆ ಬೋಧಿಸಲು ಆಗದು"[೯೪] ಎಂದು ಹೇಳಿದಾಗ ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಬಂದರು. ಕಲೆ/ಸಾಹಿತ್ಯಗಳೆರಡನ್ನೂ ಹೀರೇಮಠರು ಸಮನಾಗಿ ತೂಗಿಸಿಕೊಂಡು ಹೋದದ್ದು ಅವರ ವ್ಯಕ್ತಿತ್ವಕ್ಕೆ ಮೆರಗು ನೀಡಿದೆ. ಹಿರೇಮಠರವರ ಉತ್ತಮ ಕಲಾವಿದರಿರುವುದರಿಂದ ಅವರಿಗೆ ಅಪಾರ ಮನ್ನಣೆ ಇತ್ತು. ಜೆ.ಟಿ.ಕಾಲೇಜಿನ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಡಾ. ಬಾಗಲಕೋಟ ಮತ್ತು ಎಸ್.ಆರ್.ಪಾಟೀಲರ ಅಣತಿಯಂತೆ ಸುಮಾರು ೮-೧೦ ವಿಜ್ಞಾನಿಗಳ ಭಾವಚಿತ್ರಗಳನ್ನು ರಚಿಸಿ ತಮ್ಮ ಕಾಲೇಜಿನ ಉಪನ್ಯಾಸಕರ ನೆಚ್ಚಿನ ಶಿಷ್ಯರಾದರು. ಎಂಬ ವಿಜ್ಞಾನಿಯ ಭಾವಚಿತ್ರ ಹಾಗೂ ಡಾ.ರಾಧಾಕೃಷ್ಣನ್ ರವರ ಎರಡು ಅಡಿ ಅಗಲ ಮತ್ತು ಮೂರು ಅಡಿ ಎತ್ತರದ ಕ್ಯಾನ್‌ವಾಸ್‌ನಲ್ಲಿ ತೈಲವರ್ಣದಲ್ಲಿ ಭಾವಚಿತ್ರವನ್ನು ರಚಿಸಿ ಕಾಲೇಜಿಗೆ ಕಾಣಿಕೆಯಾಗಿ ನೀಡಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾಗಿ, ಕುಲಪತಿಗಳಾಗಿದ್ದ ಸದಾಶಿವ ಒಡೆಯರ, ಡಾ. ಸೋಮಶೇಖರ ಇಮ್ರಾಪೂರ, ಡಾ. ಪಂಚಾಕ್ಷರಿ ಹಿರೇಮಠರ ಮುಂತಾದ ಸಾಹಿತಿಗಳ ಗ್ರಂಥಗಳಿಗೆ ಮುಖಪುಟ ವಿನ್ಯಾಸ ಮತ್ತು ಸಾಂದರ್ಭಿಕ ರೇಖಾ ಚಿತ್ರಗಳನ್ನು ರಚಿಸಿ ಸ್ನಾತಕೋತ್ತರ ಅಧ್ಯಯನದಲ್ಲಿ ಕಲೆಯ ನಂಟು ಇಟ್ಟುಕೊಂಡರು.

ಹಿರೇಮಠರು ಸ್ನಾತಕೋತ್ತರ ಪದವಿಯ ನಂತರ 'ಕನ್ನಡ ಸಾಹಿತ್ಯದಲ್ಲಿ ಲಲಿತಕಲೆಗಳು' ಎಂಬ ವಿಷಯದ ಕುರಿತು ಡಾ. ಆರ್.ಸಿ.ಹಿರೇಮಠರವರ ಮಾರ್ಗದರ್ಶನದಲ್ಲಿ ಸಂಶೋಧನಾ ಅಧ್ಯಯನ ಮಾಡಿ ೧೯೮೭ರಲ್ಲಿ ಪಿ.ಎಚ್.ಡಿ. ಪದವಿ ಹೊಂದಿದರು. ಸಂಶೋಧಕರಾಗಿ, ಚಿತ್ರಕಲಾವಿದರಾಗಿ, ಸಾಹಿತಿಗಳಾಗಿ ಸಾಧನೆಮಾಡಿದ ಹಿರೇಮಠರು ಅನೇಕ ವಿದ್ಯಾರ್ಥಿಗಳಿಗೆ ಪಿ.ಎಚ್.ಡಿ. ಮಾರ್ಗದರ್ಶನ ಮಾಡಿದ್ದಾರೆ.

"ಕವಿ ಚಿತ್ರಕೋವಿದನ ಪರತತ್ವ ಶೋಧಕನು।
ವಿವಿಧ ವಾದನಗೀತ ನೃತ್ಯ ಕುಶಲಿಗಳು॥
ನವನವತೆಯಂದದು ಮನನಿಗೀತೆಲ್ಲ ಕಲೆಗಾರ।
ರಾವರಿಂದ ಸುಂದರೆ ಮಂಕುತಿಮ್ಮ"॥

ಕವಿ, ಚಿತ್ರಗಾರ ಪರತತ್ವವನ್ನು ಶೋಧಿಸುವವನು ವಿವಿಧ ನೃತ್ಯ ಮತ್ತು ಗೀತ ಕುಶಲಿಗಳು ಮನಸ್ಸಿಗೆ ನವ್ಯತೆಯನ್ನು ನೀಡುತ್ತಾರೆ. ಮತ್ತು ಅವರಿಂದಲೇ ಈ ಪ್ರಪಂಚಕ್ಕೆ ಸಂದರತೆ"[೯೫] ಎಂಬ

೯೪. ಡಾ. ಸಿಂದ್ಧಲಿಂಗಸ್ವಾಮಿ ಹಿರೇಮಠ ಡಾ. ಬಿ.ಕೆ. ಹಿರೇಮಠ ಕ.ಲ.ಕ ಬೆಂಗಳೂರು ಪು.ಸಂ. ೧೫

೯೫. ಡಿ.ವಿ.ಜಿ. ಮಂಕು ತಿಮ್ಮನ ಕಗ್ಗ ತಾತ್ಪರ್ಯ ಪು.ಸಂ. ೧೫೬

ಡಿ.ವಿ.ಜಿಯವರು ಮೂಲತಃ ಕವಿಯಾಗಿದ್ದರೂ ಎಲ್ಲ ಲಲಿತಕಲೆಗಳ ಬಗ್ಗೆ ಕಲಾವಿದರ ಬಗ್ಗೆ ಅಪಾರ ಪ್ರೀತಿ ಗೌರವವನ್ನು ಹೊಂದಿ ಅವುಗಳ ಮರ್ಮ ಅರಿತವರು. ಹಾಗೆಯೇ ಹಿರೇಮಠರು ಹೇಳುವಂತೆ 'ಭಾವನೆಗಳು ಕ್ರಿಯಾಶೀಲವಾದಾಗ ಚಿತ್ರದೃಶ್ಯವೊಂದು ಕಣ್ಮುಂದೆ ನಿಲ್ಲುತ್ತದೆ. ಸೃಜನಶೀಲವಾದ ಮನಸ್ಸು ಸಾಕಾರಗೊಳಿಸಲು ಯತ್ನಸುತ್ತದೆ." ಮನಸ್ಸು ಕಣ್ಣು ಕೈಗಳ ಪರಸ್ಪರ ಸಹಕರಿಸುತ್ತವೆ. ಕಲಾಕೃತಿ ಒಂದು ಸಾಕಾರಗೊಳ್ಳುತ್ತದೆ. ಅಂಥ ಸೃಷ್ಠಿಯಲ್ಲಿ ಕಂಡ ಕೇಳಿದ ಸಂಗತಿಗಳು ನನ್ನ ಓದು ಅನುಭವ ಸಂಸ್ಕಾರಗಳ ಹಿನ್ನೆಲೆಯಲ್ಲಿ ಬೆರೆತು ಒಂದು ಕಲಾಕೃತಿಯಾಗಿ ಹುಟ್ಟು ಪಡೆಯುತ್ತದೆ.[೯೬] ಎಂಬ ಮಾತಿನ ಸತ್ಯತೆಯನ್ನು ಡಾ.ಬಿ.ಕೆ.ಹಿರೇಮಠರವರು ಸಾಬೀತುಪಡಿಸಿದ್ದಾರೆ. ಅನೇಕ ವರ್ಣಮಯವಾದ ಸಂಕೇತ ರೂಪದಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಜಲವರ್ಣ, ತೈಲವರ್ಣ, ಪೆನ್ಸಿಲ್, ಪೆನ್ ಆ್ಯಂಡ್ ಇಂಕ್ ಮಾಧ್ಯಮಗಳಲ್ಲಿ ಅನೇಕ ಭಾವಚಿತ್ರ, ನಿಸರ್ಗಚಿತ್ರ ಸಂಯೋಜನಾ ಚಿತ್ರಗಳನ್ನು ರಚಿಸಿದ್ದಾರೆ. ಡಾ. ಹಿರೇಮಠರವರು ಸಂಯೋಜನಾ ಚಿತ್ರಗಳನ್ನು ಹೆಚ್ಚಾಗಿ ತೈಲವರ್ಣಗಳಲ್ಲಿ ರಚಿಸಿದ್ದಾರೆ.

ಡಾ. ಹಿರೇಮಠರು ಕಲಾಕೃತಿಗಳು ಮಾನವೀಯ ಮೌಲ್ಯಗಳು, ಧರ್ಮದ ಸಂಕೇತಗಳನ್ನು ಸಾರುವ ಕಲಾಕೃತಿಗಳಾಗಿವೆ ಎಂದು ಕೇಳಿದ ಪ್ರಶ್ನೆಗೆ ಇವರ ಉತ್ತರ "ನಾನು ನನ್ನ ಕೃತಿಗಳ ಮೂಲಕ ಏನನ್ನು ಸಾಧಿಸಲು ಹೊರಡುವುದಿಲ್ಲ. ಆ ಮೌಲ್ಯಗಳನ್ನು ಒಬ್ಬ ಕಲಾವಿದನಾಗಿ ಅರ್ಥೈಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಹಾಗಾಗಿ ನನ್ನ ಕಲಾಕೃತಿಗಳಲ್ಲಿ ಸಂಕೇತಗಳದೇ ಮೇಲುಗೈ, ಅದು ಕಲೆ ಸಾಹಿತ್ಯಗಳ ಒಟ್ಟು ಅಧ್ಯಯನದ ಫಲವೂ ಆಗಿರಬಹುದು.[೯೭] ಎಂದು ವ್ಯಕ್ತಪಡಿಸುತ್ತಾರೆ. ಹೀಗೆ ಹಿರೇಮಠರು ಸಾಂಪ್ರದಾಯಕ ಕಲೆ, ಸಾಹಿತ್ಯಾದಿಗಳನ್ನು ಅಕಾಡೆಮಿಕ್ ಆಗಿ ಅಧ್ಯಯನ ಮಾಡಿ ಅದನ್ನು ಮೈಗೂಡಿಸಿಕೊಂಡವರು. ಆದರೆ ತಮ್ಮ ಅಭಿವ್ಯಕ್ತಿಗೆ ಅದನ್ನು ಅಧಾರವಾಗಿಸಿಕೊಂಡು ಆಧುನಿಕ ನೆಲೆಯ ಕಲಾಕೃತಿಗಳಲ್ಲಿ ತಾತ್ವಿಕ, ಸೈದ್ಧಾಂತಿಕ ಮಾನವೀಯತೆಯ ಅಂಶಗಳು ಕಂಡುಬರುತ್ತವೆ. ಶ್ರೀಯುತರು ರಚಿಸಿದ ಅನೇಕ ಕಲಾಕೃತಿಗಳು ದೇಶ ವಿದೇಶಗಳ ಅನೇಕ ಗಣ್ಯ ವ್ಯಕ್ತಿಗಳ ಹಾಗೂ ಸಂಘ-ಸಂಸ್ಥೆಗಳಲ್ಲಿ ಸಂಗ್ರಹಿಸಲ್ಪಟ್ಟಿವೆ.

ಡಾ. ಬಿ.ಕೆ. ಹಿರೇಮಠರವರು ಉತ್ತಮ ಕಲಾವಿದರಾಗಿ ಸಾಹಿತಿಗಳಾಗಿ ಸಂಶೋಧಕರಾಗಿ ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಕನ್ನಡ ಸಂಶೋಧನೆ ವಿಭಾಗದ ಮುಖ್ಯಸ್ಥರಾಗಿ ಅನೇಕ ಕೆಲಸ ಮಾಡುವುದರ ಮೂಲಕ ಒಬ್ಬ ಉತ್ತಮ ಸಂಶೋಧಕರಾಗಿ ಹೊರಹೊಮ್ಮಿದ್ದಾರೆ. ವಿಜಯ ಕಲಾಮಂದಿರದ ವಿದ್ಯಾರ್ಥಿಯಾಗಿ ಚಿತ್ರಕಲಾ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ.[೯೮]

ಡಾ. ಬಿ.ಕೆ. ಹಿರೇಮಠರು ಕೆಲವು ಕಲಾಕೃತಿಗಳನ್ನು ಮಾತ್ರ ಈ ಅಧ್ಯಯನದಲ್ಲಿ ದಾಖಲಿಸಲಾಗಿದೆ. ಅಧ್ಯಯನದ ವಿಸ್ತಾರ ಇರುವುದರಿಂದ "ಸರಳ ಸ್ವಭಾವದವರಾದ ಸ್ನೇಹಮಯ ವ್ಯಕ್ತಿತ್ವವನ್ನು ಹೊಂದಿದ ಶ್ರೀಯುತರ ಚಿತ್ರಕಲಾ ಕ್ಷೇತ್ರದಲ್ಲಿ ಗಣನೀಯವಾದ ಸೇವೆ ಸಲ್ಲಿಸಿರುವುದನ್ನು ಗಮನಿಸಿ ಅನೇಕ

೯೬ ಡಾ. ಸಿಂದ್ಧಲಿಂಗಸ್ವಾಮಿ ಹಿರೇಮಠ ಡಾ. ಬಿ.ಕೆ. ಹಿರೇಮಠ ಕ.ಲ.ಕ ಬೆಂಗಳೂರು ಪು.ಸಂ. ೧೯

೯೭ ಡಾ. ಸಿಂದ್ಧಲಿಂಗಸ್ವಾಮಿ ಹಿರೇಮಠ ಡಾ. ಬಿ.ಕೆ. ಹಿರೇಮಠ ಕ.ಲ.ಕ ಬೆಂಗಳೂರು ಪು.ಸಂ. ೧೯

೯೮. ಡಾ. ಸಿಂದ್ಧಲಿಂಗಸ್ವಾಮಿ ಹಿರೇಮಠ ಡಾ. ಬಿ.ಕೆ. ಹಿರೇಮಠ ಕ.ಲ.ಕ ಬೆಂಗಳೂರು ಪು.ಸಂ. ೩೨

ಸಂಘ-ಸಂಸ್ಥೆಗಳು ಇವರನ್ನು ಸನ್ಮಾನಿಸಿ ಗೌರವಿಸಿವೆ. ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ ಇವರಿಗೆ ಸಂದಿದೆ. ಇವರು ನಾಡಿನ ಅನೇಕ ಪ್ರಮುಖ ನಗರಗಳಲ್ಲಿ ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ಮಾಡಿದ್ದಾರೆ. ಡಾ. ಹಿರೇಮಠರು ಚಿತ್ರಕಲೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಅಪಾರ ಕೊಡುಗೆಯನ್ನು ಗುರುತಿಸಿ ಇವರಿಗೆ ಅರವತ್ತು ವಸಂತಗಳು ತುಂಬಿದ ಸಂದರ್ಭದಲ್ಲಿ ಅವರ ಆತ್ಮೀಯರು, ಅಭಿಮಾನಿಗಳು, ಶಿಷ್ಯಂದಿರು ಸೇರಿ. **"ನಿಜದ ನೆಲೆ"**[೯೯] ಎಂಬ ಅಮೂಲ್ಯವಾದ ಅಭಿನಂದನಾ ಗ್ರಂಥವನ್ನು ಹೊರತಂದಿದ್ದಾರೆ.

೨.ಎಂ.ಆರ್.ಬಾಳಿಕಾಯಿ : "ಕಲಾವಿದನ ನೆರಳೆ ಕಲೆ, ಕಲಾವಿದನ ಅಂತರಾತ್ಮನ ಪ್ರತಿಭೆಯೇ ಕಲೆಯ ಪ್ರತಿಭೆ, ಕಲಾವಿದನು ಎಷ್ಟು ಸುಸಂಸ್ಕೃತನಾಗಿ, ವಿಚಾರಪರನಾಗಿ, ಧ್ಯಾನಮಗ್ನನಾಗಿದ್ದರೆ, ಕಲೆಯು ಅಷ್ಟು ಸುಂದರವೂ, ಶಕ್ತಿಯುತವೂ ಪ್ರಯೋಜಕವೂ ಆಗಿರುತ್ತದೆ."[೧೦೦] ಕಲಾವಿದನ ಕಣ್ಣಿಗೆ ಕಾಣುವ, ಗೋಚರಿಸುವ ಸುಂದರ ಪದಾರ್ಥಗಳನ್ನು ತಾನು ಸೃಷ್ಟಿಸಿ ನೋಡಬೇಕೆಂಬುದು ಮಾನವನಲ್ಲಿ ಲೀನವಾಗಿರುವ ಸಹಜಗುಣ, ಜಗತ್ತು ಎಂದು ಸೃಷ್ಠಿಯಾಯಿತೋ ಅಂದೇ ಈ ಭಾವನೆಯು ಸೃಷ್ಠಿಯಾಯಿತೆಂದು ಸ್ಥೂಲವಾಗಿ ಗಮನಿಸಿದಾಗ ನೋಡಬಹುದಾಗಿದೆ. ಭಾರತೀಯರ ಕಲೆಯ ಕುರಿತು ಅಧ್ಯಯನ ಮಾಡಿದಾಗ ಕಲೆಯ ರಹಸ್ಯವೆಂದರೆ ಆದರ್ಶಗಳ ಪ್ರದರ್ಶನ, ನಿಜವಾದ ಕಲೆಯನ್ನು ಒಂದು ಸುಂದರವಾದ ಹೂವಿಗೆ ಹೋಲಿಸಬಹುದು. ಭೂಮಿಯಲ್ಲಿಯೇ ಜನಿಸಿ, ಅಲ್ಲೇ ಬೆಳೆದು, ಸೃಷ್ಠಿ ಹೊಂದಿದ್ದರೂ ಅದು ಭೂಮಿಯ ಮೇಲಿರುವುದಿಲ್ಲ. ಹಾಗೆಯೇ ಕಲೆಯು ನಿಸರ್ಗದ ಸಂಪರ್ಕದಲ್ಲಿರಬೇಕು. ಅಂದಾಗ ಸುಗಮವಾಗಿ ಸಾಗಲು ಸಾಧ್ಯ.

ಪ್ರತಿಯೊಂದು ಕ್ಷಣವೂ ಮಾನವನ ಪ್ರಗತಿ ಜೀವನದಲ್ಲಿ ಅತ್ಯಮೂಲ್ಯವಾದುದು. ಪ್ರತಿಯೊಬ್ಬ ವ್ಯಕ್ತಿಯ ಕೃತಿಗಳೂ ಅವನ ಏಳು-ಬೀಳುಗಳನ್ನು ಕುರಿತು ಸೂಚನೆಗಳು. ಜೀವನದಲ್ಲಿ ಮಾನವನು ಬೆಳೆಯುತ್ತಾ ಬೆಳೆಯುತ್ತಾ ತನ್ನ ಮುಂದಿರುವ ತೆರೆಗಳನ್ನು ನಿವಾರಿಸುತ್ತಾ ಹಾರಾಡಲು ವಿಶಾಲವಾದ ಆಗಸವನ್ನು ತೋರ್ಪಡಿಸಿಕೊಳ್ಳಬೇಕು. ಇದು ಕಲಾವಿದ ಎಂ.ಆರ್.ಬಾಳಿಕಾಯಿ ಅವರ ವಿಚಾರಧಾರೆಗಳು. ಈ ಹಿನ್ನೆಲೆಯಲ್ಲಿಯೇ ಅವರ ಕೃತಿಗಳೂ ರಚನೆಗೊಂಡಿವೆ.[೧೦೧] ಎಂದು ಹೇಳಬಹುದು.

ಶ್ರೀ ಮಹಾವೀರ ರಾಯಪ್ಪ ಬಾಳಿಕಾಯಿ ಇವರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹೆಬ್ಬಾಳ ಎಂಬ ಗ್ರಾಮದಲ್ಲಿ ದಿನಾಂಕ ೧-೬-೧೯೪೧ರಂದು ಜನಿಸಿದ್ದಾರೆ. ತಾಯಿ ಅಮ್ಮವ್ವ ಹಾಗೂ ತಂದೆ ರಾಯಪ್ಪ ಬಡ ಕೃಷಿಕರು. ಮೂಲತ ಇವರು ಬಾಳೆತೋಟವಿತ್ತು. ಮತ್ತು ಬಾಳೆ ವ್ಯಾಪಾರ ಮಾಡುತ್ತಿದ್ದರು. ಕ್ರಮೇಣ ಮನೆತನಕ್ಕೆ ಬಾಳಿಕಾಯಿ ಎಂದು ಹೆಸರು ಬಂತು. ಬಾಲ್ಯದಲ್ಲಿಯೇ ಚಿತ್ರಕಲೆಯ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ ಇವರು ಪ್ರಾಥಮಿಕ ಶಾಲೆಯನ್ನು ಹೆಬ್ಬಾಳದಲ್ಲಿ ಮಾಧ್ಯಮಿಕ ಶಾಲೆಯನ್ನು ಸಂಕೇಶ್ವರದಲ್ಲಿ ಪೂರೈಸಿದರು. ಪ್ರೌಢಶಾಲೆಯಲ್ಲಿ ಬಿಡುವಿನ ವೇಳೆಯಲ್ಲಿ ಸ್ನೇಹಿತರಿಗೆ ಚಿತ್ರ ಬಿಡಿಸಿಕೊಡುತ್ತಿದ್ದರು. ಚಿತ್ರ, ಶಿಲ್ಪ, ಕರಕುಶಲಗಳನ್ನು ರಚಿಸಿ ಸ್ನೇಹಿತರಿಗೆ ಕಲಾಭಿರುಚಿ ಬೆಳೆಯುವಂತೆ ಮಾಡುತ್ತಿದ್ದರು. ತಾವು ಕಲಾಭಿರುಚಿ ಬೆಳೆಸಿಕೊಂಡರು.[೧೦೨]

---

೯೯. ಡಾ. ಎಸ್.ಸಿ. ಪಾಟೀಲ ಹಾಗೂ ನಿತ್ಯಾನಂದ ಪಾತ್ರೋಟ ಸಂ. ನಿಜದ ನೇಲೆ ಪು.ಸಂ. ೯೨೪

೧೦೦. ಎಂ. ಆರ್.ಬಾಳಿಕಾಯಿ, ಲೇ, ಸುರೇಶ ಹಾಲಭಾವಿ ಕ.ಲ.ಕ. ಬೆಂಗಳೂರು ಪು.ಸಂ. ೯

೧೦೧ ಎಂ. ಆರ್.ಬಾಳಿಕಾಯಿ, ಲೇ, ಸುರೇಶ ಹಾಲಭಾವಿ ಕ.ಲ.ಕ. ಬೆಂಗಳೂರು ಪು.ಸಂ. ೧೦

೧೦೨ ಎಂ.ಆರ್.ಬಾಲಿಕಾಯಿಯವರ ಸಂದರ್ಶನ ದಿನಾಂಕ ೨೮-೧-೨೦೦೮

ಇವರು ಉನ್ನತ ಚಿತ್ರಕಲಾ ಅಭ್ಯಾಸಕ್ಕಾಗಿ ಗದುಗಿನ ವಿಜಯ ಕಲಾಮಂದಿರಕ್ಕೆ ಪ್ರವೇಶ ಪಡೆಯಲು ಅಣ್ಣ ಬಾಬುರಾವ್ ಬಾಳಿಕಾಯಿಯವರನ್ನು ಕರೆದುಕೊಂಡು ಹೋಗಿ ಕಲಾತಪಸ್ವಿ ಟಿ.ಪಿ.ಅಕ್ಕಿಯವರಿಗೆ ಭೇಟಿ ನೀಡಿದರು. ಚಿಕ್ಕವಯಸ್ಸು ಮತ್ತು ಸಣ್ಣಕಾಯದವರಾಗಿದ್ದ ಮಹಾವೀರನನ್ನು ಅಕ್ಕಿಯವರು ನೋಡಿ 'ಈತನು ಬಹಳ ಚಿಕ್ಕವನಿದ್ದಾನೆ, ಇಲ್ಲಿಯ ಅಭ್ಯಾಸ ಈತನಿಗೆ ಬಹಳ ಭಾರವಾಗಬಹುದು' ಎಂದು ಪ್ರವೇಶಕ್ಕೆ ನಿರಾಕರಿಸಿದರು.[೧೦೩] ಆದರೆ ಅಣ್ಣನವರು ಅಕ್ಕಿಯವರನ್ನು ಬಹಳ ವಿನಂತಿಸಿಕೊಂಡಾಗ ಅವರು ಒಪ್ಪಿಕೊಂಡರು. ಅನೇಕ ಮಿತ್ರರ ಜೊತೆಗೂಡಿ ಉತ್ತಮ ಕಲಾಕೃತಿಗಳನ್ನು ರಚಿಸಿ ಎಲ್ಲರ ಪ್ರೀತಿಗೆ ಪಾತ್ರರಾದರು. ಡಾ.ಬಿ.ಕೆ.ಹಿರೇಮಠ. ಬಿ.ಜಿ.ವರಿಯವರ ಇವರ ಸ್ನೇಹಿತರು. ಖ್ಯಾತ ಕಲಾವಿದರಾದ ಶ್ರೀ ಸಿ.ಎನ್. ಪಾಟೀಲ, ಶ್ರೀ ಎಂ.ಎ. ಚೆಟ್ಟಿಯವರ ಇವರ ಕೈಯಲ್ಲಿ ಪಳಗಿದ ಮಹಾವೀರರು ೧೯೬೨ರಲ್ಲಿ ಡಿ.ಟಿ.ಸಿ. ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದು ಕಲಾಶಾಲೆಗೆ ಕೀರ್ತಿ ತಂದರು.

ಶ್ರೀ ಎಂ.ಆರ್. ಬಾಳಿಕಾಯಿಯವರು ಓದುತ್ತಿದ್ದಾಗಲೇ ೧೯೬೨ರಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸೆಚೇಂಜ ಮುಖಾಂತರ ಚಿತ್ರಕಲಾ ಶಿಕ್ಷಕರ ಹುದ್ದೆಗೆ ಶಿಕ್ಷಕರನ್ನು ಕಳಿಸಲು ಅಕ್ಕಿಯವರಿಗೆ ಕೇಳಿಕೊಂಡರು. ಬಾಳಿಕಾಯಿಯವರು ಮತ್ತು ಎನ್.ಬಿ.ಸುಂಕದ ಅವರ ಹೆಸರುಗಳನ್ನು ಸೂಚಿಸಿದರು. ಆ ವರ್ಷಕ್ಕೆ ಕಲಾಶಾಲೆಯಿಂದ ಚಿತ್ರಕಲಾ ಶಿಕ್ಷಕರಾಗಿ ಇವರಿಬ್ಬರಿಗೆ ಇದಕ್ಕೆ ಅಕ್ಕಿ ಗುರುಗಳನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಶ್ರೀ ಎಂ.ಆರ್. ಬಾಳಿಕಾಯಿಯವರು ೩೧-೧೦-೧೯೬೨ರಂದು ಹಾಸನ ಜಿಲ್ಲೆಯ ಅರಿಸಿಕೆರೆ ತಾಲೂಕಿನ ಬಾಣಾವರದ ಸರಕಾರಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿದರು. ಸರಳ ಸ್ವಭಾವದವರಾದ ಬಾಳಿಕಾಯಿಯವರು ನಿಸ್ವಾರ್ಥ ಸೇವೆಯಿಂದ ವಿದ್ಯಾರ್ಥಿಗಳ, ಸಹದ್ಯೋಗಿಗಳ ಮತ್ತು ಊರ ಜನರ ಪ್ರೀತಿಗೆ ಪಾತ್ರರಾದರು. ಅನೇಕ ವಿದ್ಯಾರ್ಥಿಗಳಿಗೆ ಹಾಯರ್ ಮತ್ತು ಲೋಯರ್ ಗ್ರೇಡ್ ಡ್ರಾಯಿಂಗ್ ಪರೀಕ್ಷೆಗೆ ಕೂಡ್ರಿಸಿ ನೂರಕ್ಕೆ ನೂರರಷ್ಟು ಫಲಿತಾಂಶ ಬರುವಂತೆ ಮಾಡುತ್ತಿದ್ದರು. ಸದಾ ಕಲಾಚಟುವಟಿಕೆಯಲ್ಲಿ ಇರುತ್ತಿದ್ದ ಎಂ. ಆರ್. ಬಾಳಿಕಾಯಿಯವರು ಪ್ರತಿವರ್ಷ ಚಿತ್ರಕಲಾ ಪ್ರದರ್ಶನಗಳನ್ನು ಮಾಡುತ್ತಿದ್ದರು. ರಂಗೋಲಿ ಹಾಕುವುದು ಮುಂತಾದ ಕಾರ್ಯಚಟುವಟಿಕೆಯಲ್ಲಿ ತೊಡಗುತ್ತಿದ್ದ ಬಾಳಿಕಾಯಿಯವರನ್ನು ನೋಡಿ ಟಿ.ರಾಮಯ್ಯ ಡಿ.ಡಿ.ಪಿ.ಐ. ಯವರು ದೇವನೂರಿನ ಶ್ರೀ ಲಕ್ಷ್ಮೀ ದೇವಸ್ಥಾನದಲ್ಲಿ ಜೈಮಿನಿ ಮಹಾಭಾರತದ ಕೆಲವು ದೃಶ್ಯಗಳನ್ನು ತೈಲವರ್ಣದಿಂದ ಭಿತ್ತಿ ಚಿತ್ರಗಳನ್ನು ಚಿತ್ರಿಸಲು ವಿನಂತಿಸಿದರು.[೧೦೪] ಈ ಕಲಾಕೃತಿಗಳು ಇಂದಿಗೂ ನೋಡಲು ಸಿಗುತ್ತವೆ.

೧೯೭೦ರಲ್ಲಿ ಎಂ.ಆರ್. ಬಾಳಿಕಾಯಿಯವರು ಧಾರವಾಡದ ಸರಕಾರಿ ಹೆಣ್ಣುಮಕ್ಕಳ ಟ್ರೈನಿಂಗ್ ಕಾಲೇಜಿಗೆ ವರ್ಗಾವಣೆಗೊಂಡರು. ಅಲ್ಲಿ ಅನೇಕ ಉತ್ತಮ ಕಾರ್ಯಗಳನ್ನು ಮಾಡುತ್ತ ಎಲ್ಲರ ಪ್ರೀತಿಗೆ ಪಾತ್ರರಾದರು. ಮುಂದೆ ಗಂಡುಮಕ್ಕಳ ಸರಕಾರಿ ಟ್ರೈನಿಂಗ್ ಕಾಲೇಜಿನ ಅಧೀನದಲ್ಲಿದ್ದ ಫೈನ್ ಆರ್ಟ್ ವಿಭಾಗಕ್ಕೆ ೧೯೭೩ರಲ್ಲಿ ವರ್ಗಾವಣೆಯಾಗಿ ಬಂದರು. ಈ ವಿಭಾಗದ ಶಿಕ್ಷಕರು

---

೧೦೩ ಲೇ. ಸುರೇಶ.ಹಾಲಬಾವಿ. ಸಂ. ಎಂ.ಆರ್.ಬಾಳಿಕಾಯಿ ಕ.ಲ.ಕೆ.ಅ.ಬೆಂಗಳೂರು, ಪು.ಸಂ. ೧೧

೧೦೪ ಲೇ. ಸುರೇಶ.ಹಾಲಬಾವಿ. ಸಂ. ಎಂ.ಆರ್.ಬಾಳಿಕಾಯಿ ಕ.ಲ.ಕೆ.ಅ.ಬೆಂಗಳೂರು, ಪು.ಸಂ. ೧೨

ನಿವೃತ್ತಿ ಹೊಂದಿದ್ದರಿಂದ ಯಾವುದೇ ಕಲಾಚಟುವಟಿಕೆಗಳಲ್ಲದೆ ಸ್ಥಗಿತಗೊಂಡಿತ್ತು. ಅದನ್ನು ಬಾಳಿಕಾಯಿಯವರು ಚಾಲನೆ ಮಾಡಿದರು. ಖ್ಯಾತ ಕಲಾವಿದ ಡಿ.ವಿ.ಹಾಲಭಾವಿ, ಎನ್.ಜಿ.ಬಡಿಗೇರ ಅವರ ಜೊತೆ ಒಳ್ಳೆಯ ಸಂಬಂಧ ಇಟ್ಟುಕೊಂಡರು. ಅವರ ಮಾರ್ಗದರ್ಶನ ಪಡೆದುಕೊಳ್ಳುತ್ತಿದ್ದರು.

ಸದಾ ಅಧ್ಯಯನಶೀಲರಾದ ಬಾಳಿಕಾಯಿಯವರು ಮೇಲಾಧಿಕಾರಿಗಳು ಅನುಮತಿ ಪಡೆದು ೧೯೭೧ರಲ್ಲಿ ಡಿ.ವಿ.ಹಾಲಭಾವಿಯವರ ಮಾರ್ಗದರ್ಶನದಲ್ಲಿ ಸ್ಕೂಲ್ ಆಫ್ ಆರ್ಟ್‌ದಿಂದ ಡ್ರಾಯಿಂಗ್ ಮಾಸ್ಟರ್ ಕೋರ್ಸ ಪರೀಕ್ಷೆಗೆ ಕುಳಿತುಕೊಂಡು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದರು.[೧೦೫] ೧೯೬೬ರಲ್ಲಿ ವಿಜಯ ಕಲಾಮಂದಿರ ಗದಗ ಇಲ್ಲಿ ಡಿಪ್ಲೋಮಾ ಪೇಂಟಿಂಗ್ ಪರೀಕ್ಷೆಗೆ ಕುಳಿತು ರಾಜ್ಯಕ್ಕೆ ಎರಡನೆಯ ರ್‍ಯಾಂಕ್ ಪಡೆದರು. ಹೀಗೆ ಚಿತ್ರಕಲೆಯಲ್ಲಿ ಉನ್ನತ ಜ್ಞಾನವನ್ನು ಸಂಪಾದಿಸಿದ ಇವರು ಒಬ್ಬ ಶ್ರೇಷ್ಠ ಕಲಾವಿದ ಎಂದೆನಿಸಿಕೊಂಡರು. ಸರಕಾರಿ ಚಿತ್ರಕಲಾ ಶಾಲೆಯಲ್ಲಿ ಅನೇಕ ಕಲಾಚಟುವಟಿಕೆ ಮಾಡುತ್ತ ಶಾಲೆಯ ಬೆಳವಣಿಗೆಗೆ ಶ್ರಮಿಸಿದ್ದಾರೆ. ಶ್ರದ್ಧೆ ಮತ್ತು ಪ್ರಾಮಾಣಿಕತೆಗೆ ಪ್ರಾಶಸ್ತ್ಯಕೊಟ್ಟು ಕಾರ್ಯನಿರ್ವಹಿಸುತ್ತ ಬಂದರು. ಇದರಿಂದ ಸರಕಾರಿ ಚಿತ್ರಕಲಾ ಶಾಲೆಯ ಬೆಳವಣಿಗೆ ಉನ್ನತಗೊಂಡಿತಲ್ಲದೇ ಇಲ್ಲಿ ಅನೇಕ ಕಲಾಚಟುವಟಿಕೆಗಳು ನಡೆಯುತ್ತಾ ಬರಲಾರಂಭಿಸಿದವು. ಅಲ್ಲಿನ ಸಿಬ್ಬಂದಿಯವರನ್ನು ಹಾಗೂ ವಿದ್ಯಾರ್ಥಿಗಳನ್ನು ಪ್ರೀತಿಯಿಂದ ಕಾಣುತ್ತಿದ್ದರಲ್ಲದೇ ಇವರಲ್ಲಿ ಸ್ಪರ್ಧಾಮನೋಭಾವ ಬೆಳೆಯುವಂತೆ ಪ್ರೇರೇಪಿಸುತ್ತಾ ಬಂದರು.ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ಪ್ರೀತಿಸುತ್ತಿದ್ದರು. ಅಲ್ಲದೇ ಆರ್ಥಿಕ ಸಹಾಯ ಮಾಡುತ್ತ ಬಂದರು. ಕಲಾವಿದರಿಗೆ ಆಪ್ತರಿಗೆ ಸ್ನೇಹಿತರಿಗೆ ತಮಗೆ ಸಾಧ್ಯವಾದಷ್ಟು ಸಹಾಯ ಸಹಕಾರವನ್ನು ಸಲ್ಲಿಸುತ್ತಾ ಬಂದಿದ್ದಾರೆ. ತಮ್ಮ ಅನೇಕ ಸಂಬಂದಿಗಳಿಗೆ ತಮ್ಮ ಮನೆಯಲ್ಲಿ ಇಟ್ಟುಕೊಂಡು ಶಿಕ್ಷಣಕ್ಕೆ ಬೇಕಾಗುವ ಎಲ್ಲ ಸಹಾಯ ಸಹಕಾರ ಮಾಡಿದ್ದಾರೆ. ಶ್ರೀಯುತರು ಸಹಾಯವನ್ನು ಇಂದಿಗೂ ನೆನೆಯುತ್ತಾರೆ.

ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಮುಖ್ಯಸ್ಥರಾಗಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಕಲಾಪ್ರದರ್ಶನ, ಶಿಬಿರಗಳಲ್ಲಿ ಭಾಗವಹಿಸುವಂತೆ ಪ್ರಚೋದಿಸಿ ರಾಜ್ಯದಲ್ಲಿ ನಾನಾ ಭಾಗಗಳಲ್ಲಿ ಚಿತ್ರಕಲಾ ಶಿಕ್ಷಕರಾಗುವ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆಯನ್ನು ಮಾಡಿದರು. ಕಲಾವಿದರಿಗೆ ಚಿತ್ರಕಲಾ ಪ್ರದರ್ಶನ ಮಾಡಲು ಬಹಳ ತೊಂದರೆಯಾಗುತ್ತಿದ್ದುದನ್ನು ಗಮನಿಸಿ ಮೇಲಾಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟು ಸರಕಾರಿ ಆರ್ಟ್ ಗ್ಯಾಲರಿಯನ್ನು ಸ್ಥಾಪಿಸಲು ಕಾರಣೀಭೂತರಾದರು.[೧೦೬] ಗ್ಯಾಲರಿಗೆ ಬೇಕಾಗುವ ಕೊಠಡಿ, ವಿದ್ಯುತ್ ದೀಪ, ವಿಶೇಷ ರೀತಿಯ ಹ್ಯಾಂಗರ್, ನೆಲಹಾಸು ಮುಂತಾದ ಉತ್ತಮ ರೀತಿಯಲ್ಲಿ ಕಲಾಕೃತಿ ಪ್ರದರ್ಶಿಸಲು ವ್ಯವಸ್ಥೆ ಮಾಡುವಲ್ಲಿ ಯಶಸ್ವಿಯಾದರು. ಸದಾ ಕಲಾಚಟುವಟಿಕೆಯಲ್ಲಿ ತೊಡಗುತ್ತಿದ್ದ ಬಾಳಿಕಾಯಿಯವರು ಸರಕಾರಿ ಚಿತ್ರಕಲಾ ಶಾಲೆಯಲ್ಲಿ ಉತ್ತಮ ಕೆಲಸ ಮಾಡುವುದರತ್ತ ತಮ್ಮ ಗಮನ ಹಾಗೂ ವ್ಯಕ್ತಿತ್ವವನ್ನು ವೃದ್ಧಿಮಾಡಿಕೊಂಡಿದ್ದಾರೆ. ಯಾರ ಶಾಲೆಯಲ್ಲಿ ಕಲಿತಿ ಎಂದು ಕೇಳಿದರೆ ಬಾಳಿಕಾಯಿಯವರ ಶಾಲೆಯಲ್ಲಿ ಎಂದು ಕರೆಯುತ್ತಾರೆ. ಬಾಳಿಕಾಯಿಯವರ ಶಿಷ್ಯಂದಿರು ಕರ್ನಾಟಕದ ಮೂಲೆ ಮೂಲೆಯಲ್ಲಿ ಶಿಕ್ಷಕರಾಗಿ, ಕನ್ನಡ

---

೧೦೫ ಲೇ. ಸುರೇಶ.ಹಾಲಬಾವಿ. ಸಂ. ಎಂ.ಆರ್.ಬಾಳಿಕಾಯಿ ಕ.ಲ.ಕೆ.ಅ.ಬೆಂಗಳೂರು, ಪು.ಸಂ. ೧೩

೧೦೬ ಎಂ.ಆರ್. ಬಾಳಿಕಾಯಿಯವರ ಸಂದರ್ಶನ ದಿನಾಂಕ ೧೮-೧೨-೨೦೦೯

ವಿಶ್ವವಿದ್ಯಾಲಯದಲ್ಲಿ ಗೌರವ ಅಧ್ಯಾಪಕರಾಗಿ, ಬಾಳಿಕಾಯಿಯವರು ಸೇವೆ ಸಲ್ಲಿಸಿದ್ದಾರೆ. ಒಬ್ಬ ಆದರ್ಶಶಿಕ್ಷಕರಾದ ಶ್ರೀ ಎಮ್,ಆರ್,ಬಾಳಿಕಾಯಿಯವರು ಒಬ್ಬ ಶ್ರೇಷ್ಠ ಕಲಾವಿಧರಾಗಿ ಅನೇಕ ಕಲಾಕೃತಿಗಳನ್ನು ರಚಿಸಿ ಪ್ರದರ್ಶನಮಾಡಿದ್ದಾರೆ. ಅನೇಕ ಕಲಾ ಶಿಬಿರಗಳಲ್ಲಿ ಬಾಗವಹಿಸಿದ್ದಾರೆ. ಹಲವಾರು ಪ್ರಾತ್ಯಕ್ಷತೆ, ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ಪುಸ್ತಕ, ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ.

ಶ್ರೀ ಎಮ್.ಆರ್.ಬಾಳಿಕಾಯಿಯವರು ಅನೇಕ ಬಾರಿ ಮೈಸುರು ಕಲಾ ಪ್ರದರ್ಶನ ಮಾಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡಮಿಯ ವಾರ್ಷಿಕ ಕಲಾ ಪ್ರದರ್ಶನ. ಅಖಿಲ ಭಾರತ ಕಲಾ ಪ್ರದರ್ಶನ ಧಾರವಾಡ, ರಾಜ್ಯಮಟ್ಟದ ಕಲಾಪ್ರದರ್ಶನ ಬಿಜಾಪೂರ, ಅನೇಕ ರಾಷ್ಟ್ರೀಯ ಕಲಾಮೇಳ ಮದ್ರಾಸ, ರಾಜ್ಯಮಟ್ಟದ ಜಲವರ್ಣ ಕಲಾಪ್ರದರ್ಶನ ಹುಬ್ಬಳ್ಳಿ, ರಾಷ್ಟ್ರೀಯ ಕಲಾಮೇಳ, ಬೆಂಗಳೂರು, ರಾಷ್ಟ್ರೀಯ ಕಲಾಮೇಳ ದೆಹಲಿ, ರಾಜ್ಯಮಟ್ಟದ ಕಲಾಪ್ರದರ್ಶನ ಹಾಗೂ ಜಾನಪದ ಕಲಾಮೇಳ ಬಾಗೇವಾಡಿ, ಲಲಿತಕಲಾ ಅಕಾಡೆಮಿ ಕಲಾಪ್ರದರ್ಶನ (ರವೀಂದ್ರ) ಭವನ ದೆಹಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ ೫೧ನೇ ವಾರ್ಷಿಕ ಕಲಾಪ್ರದರ್ಶನ, ಹಾಸನ, "ಮಿಲೇನಿಯಂ ಷೋ" ಸಮಕಾಲೀನ ಪ್ರದರ್ಶನ ದೆಹಲಿ, ಚಾಲುಕ್ಯ ಉತ್ಸವ ಬಾದಾಮಿ, ಐಹೊಳೆ, ಪಟ್ಟದಕಲ್ಲು, ನಮ್ಮೂರ ಜಾತ್ರೆ ಡಂಬಳ, ಗದಗ ದಶಮಾನೋತ್ಸವ ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಳಕಲ್ಲ., ರಾಷ್ಟ್ರೀಯ ಹಂಪಿ, ರಾಷ್ಟ್ರೀಯ ಕಲಾಮೇಳ ಕಲ್ಕತ್ತಾ, ಹೀಗೆ ಮುಂತಾದ ಕಡೆಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ. ಅಲ್ಲದೆ ಹಲವಾರು ಕಡೆಗಳಲ್ಲಿ ಏಕವ್ಯಕ್ತಿ ಕಲಾಪ್ರದರ್ಶನ ಮಡಿದ್ದಾರೆ. ಬಾಣಾವರ, ಹಾಸನ, ಅರಸಿಕೆರೆ, ಹೆಬ್ಬಾಳ, ಅಜ್ಜಂಪುರ, ತರೀಕೆರೆ, ಚಿಕ್ಕಮಗಳೂರು, ಧಾರವಾಡ, ವೆಂಕಟಪ್ಪ ಆರ್ಟ್ ಗ್ಯಾಲರಿ ಬೆಂಗಳೂರು ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ, ಹೀಗೆ ಹಲವಾರು ಏಕವ್ಯಕ್ತಿ ಕಲಾಪ್ರದರ್ಶನ ಮಾಡಿ ತಮ್ಮ ಕಲಾ ಪ್ರತಿಭೆಯನ್ನು ಬೆಳೆಸಿಕೊಂಡಿದ್ದಾರೆ.[೧೦೭]

ಶ್ರೀ ಎಂ.ಆರ್. ಬಾಳಿಕಾಯಿಯವರು ಅನೇಕ ಉತ್ತಮ ಕಲಾಕೃತಿಗಳನ್ನು ಮಾಡಿದ್ದು, ಅವರ ಕಲಾಪ್ರತಿಭೆಯನ್ನು ಮೆಚ್ಚಿ ಅನೇಕ ಸಂಘ-ಸಂಸ್ಥೆಗಳು ಅವರಿಗೆ ಸನ್ಮಾನಿಸಿ ಗೌರವಿಸಿವೆ. ೧೯೬೭ರಲ್ಲಿ ಕಲಾ ಮತ್ತು ಕರಕುಶಲ ಪ್ರದರ್ಶನ, ಹಾಸನ ೧೯೬೯ರಲ್ಲಿ ಮೈಸೂರು ದಸರಾ ಪ್ರದರ್ಶನದಲ್ಲಿ ದ್ವಿತೀಯ ಬಹುಮಾನ, ೧೯೭೨ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪ್ರದರ್ಶನದಲ್ಲಿ ಪ್ರಥಮ ಬಹುಮಾನ, ೧೯೮೫ರಲ್ಲಿ ರೋಟರ್‍ಯಾಕ್ಟ್ ಧಾರವಾಡದಲ್ಲಿ ದ್ವಿತೀಯ ಬಹುಮಾನ, ೧೯೮೫ರಲ್ಲಿ ಕೆ. ಇನ್ಸಿಟಿಟ್ಯೂಯಟ್ ಆಫ್ ಇಂಜನೀಯರಿಂಗ ಧಾರವಾಡ ಇಲ್ಲಿ ಸನ್ಮಾನ, ೧೯೯೫ರಲ್ಲಿ ಜಿಲ್ಲಾ ಮಟ್ಟದ ಉತ್ತಮ ಚಿತ್ರಕಲಾ ಶಿಕ್ಷಕ ಪ್ರಶಸ್ತಿ, ಬೆಲ್ಲದ ಪ್ರತಿಷ್ಠಾನ ಧಾರವಾಡ ಇಲ್ಲಿ ಸನ್ಮಾನ, ೧೯೯೫ರಲ್ಲಿ ಜಿಲ್ಲಾ ಮಟ್ಟದ ಉತ್ತಮ ಚಿತ್ರಕಲಾ ಶಿಕ್ಷಕ ಪ್ರಶಸ್ತಿ, ಬೆಲ್ಲದ ಪ್ರತಿಷ್ಠಾನ ಧಾರವಾಡ ಇವರಿಂದ ಜಿಲ್ಲಾ ಉತ್ತಮ ಚಿತ್ರಕಲಾ ಪ್ರಶಸ್ತಿ, ಕರ್ನಾಟಕ ರಾಜ್ಯ ಸರಕಾರದಿಂದ ೧೯೯೬ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಕಲಾವಿದರ ಪ್ರಶಸ್ತಿ, ೧೯೯೯ರಲ್ಲಿ "ಕಲಾನಿಧಿ" ಬಿರುದು, ಹಳೆ ವಿದ್ಯಾರ್ಥಿಗಳಿಂದ ೨೦೦೫ರಲ್ಲಿ ಆರ್ಟ್ ಇಂಡಿಯಾ ಫೈನ್ ಆರ್ಟ್ ಆ್ಯಂಡ್ ಕ್ರಾಫ್ಟ್ ಸೊಸೈಟಿ ದೆಹಲಿಯಿಂದ ಹಿರಿಯ ಕಲಾವಿದರಿಗೆ

೧೦೭ ಎಂ.ಆರ್. ಬಾಳಿಕಾಯಿಯವರ ಸಂದರ್ಶನ ದಿನಾಂಕ ೨೮-೫-೨೦೧೦

ಸನ್ಮಾನ. ಹೀಗೆ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ಬಾಳಿಕಾಯಿಯವರಿಗೆ ಅನೇಕ ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ಅವುಗಳಲ್ಲಿ ರೋಟರಿ ಕ್ಲಬ್ ಧಾರವಾಡ, ರೇನ್‌ಬೋ ಆರ್ಟ್ ಕೌನ್ಸಿಲ್ ಧಾರವಾಡ, ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಗದಗ, ಜೈನ್ ಸಮಾಜ ಹೆಬ್ಬಾಳ, ಡಿ.ವಿ. ಹಾಲಭಾವ ಪ್ರಶಸ್ತಿ - ೨೦೧೦ ಇವರಿಂದ ಸನ್ಮಾನಗಳು ಸೇರಿವೆ.

ಅಲ್ಲದೇ ಅನೇಕ ಕಲಾಶಾಲೆಗಳಲ್ಲಿ ಸಂಘ-ಸಂಸ್ಥೆಗಳಲ್ಲಿ ಪ್ರಾತ್ಯಕ್ಷಿಕೆ ಹಾಗೂ ಉಪನ್ಯಾಸಗಳನ್ನು ಮಾಡಿದ್ದಾರೆ. ಚಿತ್ರಕಲಾವಿದರಿಗೆ ಪುನಶ್ಚೇತನ ಉಪನ್ಯಾಸ ಮಾಲಿಕೆಯಲ್ಲಿ ಕೋಲಾಜ ಕಲೆಯ ವಿಷಯದ ಕುರಿತು ಉಪನ್ಯಾಸ ಮಾಡಿದ್ದಾರೆ. ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಗದಗ, ಶ್ರೀ ಲಕ್ಷ್ಮಣರಾವ್ ಜಾರಕಿಹೊಳಿ ಹೈಸ್ಕೂಲ್ ಗೋಕಾಕ ಮುಂತಾದ ಶಿಕ್ಷಣ ಸಂಸ್ಥೆಗಳಲ್ಲಿ ವಿಚಾರ ಸಂಕಿರಣ, ಪ್ರಾತ್ಯಕ್ಷಿಕೆಯನ್ನು ಮಾಡಿದ್ದಾರೆ.[೧೦೮] ಇಲಾಖೆಗಳಿಂದ ಅನೇಕ ಸ್ಪರ್ಧೆಗಳಲ್ಲಿ ನಿರ್ಣಾಯಕರಾಗಿ ನೋಡಲ್ ಅಧಿಕಾರಿಯಾಗಿ, ಉತ್ತಮವಾದ ಕೆಲಸ ಮಾಡಿದ್ದಾರೆ. ಸದಾ ಅಧ್ಯಯನಶೀಲರಾದ ಶ್ರೀ ಎಂ.ಆರ್.ಬಾಳಿಕಾಯಿಯವರು ಅಧ್ಯಯನದ ಜೊತೆಗೆ ಬರಹಗಾರರಾಗಿದ್ದಾರೆ. ಇವರು ಅನೇಕ ಲೇಖನಗಳನ್ನು ಬರೆದಿದ್ದಾರೆ. "ಜೀವನ ಶಿಕ್ಷಣ" ಸರಕಾರಿ ಶಿಕ್ಷಕರ ತರಬೇತಿ ಕೇಂದ್ರದ ಮಾಸಿಕದಲ್ಲಿ ಕಲಿಸುವ ಸಾಮಗ್ರಿಗಳ ಕುರಿತು. ೧೯೯೬ರಲ್ಲಿ ಹಾಲಭಾವಿ ಸ್ಕೂಲ್ ಆಫ್ ಆರ್ಟ್ ವಜ್ರಮಹೋತ್ಸವ ಸ್ಮರಣ ಸಂಚಿಕೆ "ಚಿತ್ರಾಕ್ಷಿ"ಯಲ್ಲಿ ಯಥಾದರ್ಶನ, ಜನತಾ ಶಿಕ್ಷಣ ಸಮಿತಿ ಧಾರವಾಡದ ಸ್ಮರಣ ಸಂಚಿಕೆಯ ಗ್ರಂಥದಲ್ಲಿ ಶಿಕ್ಷಣದಲ್ಲಿ ಶಿಕ್ಷಣ ಸಂಮಾನ ಉತ್ತರ ಕರ್ನಾಟಕ ಶೈಕ್ಷಣಿಕ ಸಾಧನೆ ಹಲವು ಮುಖಗಳು, ಚಿತ್ರಕಲಾ ಶಿಕ್ಷಣ ಕುರಿತು ಲೇಖನಗಳು ಕಲಾವಾರ್ತೆಯಲ್ಲಿ ಯಥಾದರ್ಶನ ವಿಷಯ ಕುರಿತು ಲೇಖನಗಳನ್ನು ಬರೆದಿದ್ದಾರೆ. ಕಂಕಣ ಎಂಬ ಗ್ರಂಥದಲ್ಲಿ ಮಾನವ ಜನಾಂಗದ ನಂಬಿಕೆಗಳು ಡಾ.ಬಿ.ಕೆ.ಹಿರೇಮಠ ಬಾಗಲಕೋಟೆ ಇವರ ಅಭಿನಂದನಾ ಗ್ರಂಥವಾದ ನಿಜದ ನೆಲೆ ಕಲೆ ಕುರಿತು ಉತ್ತಮವಾದ ಮೆಚ್ಚುಗೆಯನ್ನು ನೀಡಿದ್ದಾರೆ. ಅಲ್ಲದೇ ಎಂ.ಆರ್.ಬಾಳಿಕಾಯಿಯವರ ಕುರಿತು ಅವರ ಕಲಾಕೃತಿಗಳ ಹಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಎಂ.ಆರ್.ಬಾಳಿಕಾಯಿಯವರ ಅನೇಕ ಕಲಾಕೃತಿಗಳು ಸಂಗ್ರಹಗೊಂಡಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಜಾನಪದ ಸಂಗ್ರಹಾಲಯ ಮೈಸೂರ, ರವೀಂದ್ರ ಆರ್ಟ್ ಗ್ಯಾಲಿ ದೆಹಲಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಧಾರವಾಡ, ಪ್ರಾಚ್ಯವಸ್ತು ಸಂಗ್ರಹಾಲಯ ಧರ್ಮಸ್ಥಳ, ಸ್ವಿಟ್ಜರ್ಲೆಂಡ್, ಬಾದಾಮಿ, ಅಮೇರಿಕಾ, ಕೆ.ಡಿ.ಬಿಸಿಯಲ್ ಬೆಂಗಳೂರು ಹಾಗೂ ರಾಜ್ಯದ ಅನೇಕ ಕಲಾಶಾಲೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

ಹೀಗೆ ಬಾಳಿಕಾಯಿಯವರು ಅನೇಕ ಕಲಾಕೃತಿಗಳನ್ನು ರಚಿಸಿ ಅನೇಕ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿ ಎಲ್ಲರ ನೆಚ್ಚಿನ ಗುರುಗಳಾಗಿದ್ದಾರೆ. ಒಬ್ಬ ಆದರ್ಶ ಶಿಕ್ಷಕರಾಗಿ, ಕಲಾವಿದರಾಗಿ ಉತ್ತಮ ಆಡಳಿತಗಾರರಾಗಿ ಉತ್ತಮ ಸೇವೆ ಸಲ್ಲಿದ್ದಾರೆ. ಮನುಷ್ಯ ಕೊನೆಯವರೆಗೆ ವಿದ್ಯಾರ್ಥಿಯಾಗಿರಬೇಕಂತೆ ಅಂದರೆ ಮಾತ್ರ ಅವರು ಉನ್ನತಿ ಹೊಂದಲು ಸಾಧ್ಯ ಎಂದು ಹಿರಿಯರು ಹೇಳುತ್ತಾರೆ. ಬೆಳಯುತ್ತ

೧೦೮ ಎಂ.ಆರ್.ಬಾಳಿಕಾಯಿಯವರ ದಾಖಲಾತಿ

ಬೆಳೆಯುತ್ತ ಸಮಾಜದಿಂದ, ವಿಚಾರವಂತರಿಂದ ಮಾರ್ಗದರ್ಶನ ಪಡೆದರೆ ಮಾತ್ರ ಮನುಷ್ಯ ಒಂದು ಗುರಿ ಮುಟ್ಟಲು ಸಾಧ್ಯ[೧೦೯] ಎಂದು ಬಾಳಿಕಾಯಿಯವರ ವಾದವಾಗಿದೆ. ಸದಾ ಅಧ್ಯಯನ ಶೀಲರಾದ ಬಾಳಿಕಾಯಿಯವರು ನಾನು ಇನ್ನೂ ಮಾಡಬೇಕಾದದ್ದು ಕಲಿಯಬೇಕಾದದು ಬಹಳವಿದೆ ಎಂದು ಹೇಳುತ್ತಾರೆ ಇಂಥ ಒಬ್ಬ ಮಹಾ ಕಲಾವಿದ ಕಲಾ ಶಿಕ್ಷಕ ದಿನಾಂಕ ೩೧-೫-೧೯೯೯ರಂದು ನಿವೃತ್ತಿ ಹೊಂದಿದ್ದಾರೆ. ನಿವೃತ್ತಿಯಾದರೂ ಸಹ ಬಾಳಿಕಾಯಿಯವರು ತಮ್ಮ ಮನೆಯಲ್ಲಿ ಒಂದು ಸ್ಟುಡಿಯೋ ಮಾಡಿಕೊಂಡು ಅನೇಕ ಕಲಾಕೃತಿಗಳನ್ನು ರಚಿಸುವುದರ ಮೂಲಕ ಕಲಾಕೃತಿಗಳ ಜೊತೆ ಆಟ ಆಡುತ್ತಾ ಇರುತ್ತಾರೆ.

ಹೀಗೆ ಶ್ರೀ ಎಂ.ಆರ್. ಬಾಳಿಕಾಯಿಯವರು ಅನೇಕ ಉತ್ತಮ ಕೆಲಸ ಮಾಡವುದರ ಮೂಲಕ ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೇಯಾದ ವಿಶಿಷ್ಟವಾದ ಕೊಡುಗೆ ನೀಡಿದ್ದಾರೆ.

೩. ಡಾ. ಎಸ್.ಸಿ. ಪಾಟೀಲ :

ಡಾ. ಎಸ್.ಸಿ.ಪಾಟೀಲರು ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಮಾನಶಿವಣಗಿ ಎಂಬ ಚಿಕ್ಕ ಗ್ರಾಮದಲ್ಲಿ ೧೯೫೫ ಜುಲೈ ೨೩ ರಂದು ಜನಿಸಿದರು. ತಂದೆ ಚಂದಪ್ಪಗೌಡರು. ತಾಯಿ ಶಾಂತಮ್ಮ. ಗೌಡಕಿ ಮನೆತನದಲ್ಲಿ ಜನಿಸಿದ ಇವರು ಬಾಲ್ಯದಲ್ಲಿಯೇ ಚಿತ್ರಕಲೆಯ ಗೀಳಿಗೆ ಅಂಟಿಕೊಂಡರು. ಶರಣಗೌಡರು ಪ್ರಾಥಮಿಕ ಶಿಕ್ಷಣವನ್ನು ಬೇರೆ ಬೇರೆ ಊರಲ್ಲಿ ಮುಗಿಸಿ, ಪ್ರೌಢ ಶಿಕ್ಷಣವನ್ನು ಎಚ್.ಜಿ.ಹೈಸ್ಕೂಲ್ ಸಿಂದಗಿಯಲ್ಲಿ ಪೂರೈಸಿದರು. ತಂದೆ ಊರ ಗೌಡರಾಗಿ ಇರವುದರಿಂದ ಮಗ ಡಾಕ್ಟರ್ ಆಗಲಿ ಎನ್ನುವ ಹೆಬ್ಬಯಕೆಯಿಂದ ಪಿ.ಯು.ಸಿ ಸಾಯನ್ಸ್ ಗಾಗಿ ಧಾರವಾಡದ ಆರ್.ಎಲ್.ಎಸ್.ಪಿ.ಯು. ಕಾಲೇಜಿನಲ್ಲಿ ಪ್ರವೇಶ ಪಡೆದರು. ಆದರೆ "ಬಾಲ್ಯದಿಂದಲೇ ಚಿತ್ರಕಲೆಯನ್ನು ತಂದೆ, ಅಣ್ಣನಿಂದ ಪ್ರಭಾವಿರತಾದ ಶರಣಗೌಡರು ಪಿ.ಯು.ಸಿ. ವಿಜ್ಞಾನ ವಿಷಯದಲ್ಲಿ ಅನುತ್ತೀರ್ಣರಾದರು."[೧೧೦] ಇದರಿಂದ ತಂದೆಯವರಿಗೆ ನಿರಾಸೆಯಾಯಿತು. ಮನೆಯವರು ಬೇಸತ್ತು ಇವನಿಂದ ವಿಜ್ಞಾನ ಓದಲು ಸಾಧ್ಯವಿಲ್ಲ ಎಂದು ಅರಿತು ಇವರ ಅಣ್ಣನವರು ಧಾರವಾಡದ ಡಿ.ವ್ಹಿ.ಹಾಲಭಾವಿ ಕಲಾಶಾಲೆಯಲ್ಲಿ ಚಿತ್ರಕಲೆ ಅಭ್ಯಾಸಕ್ಕೆ ಸೇರಿಸಿದರು. ಅಲ್ಲಿ ಅಭ್ಯಾಸ ಮಾಡುತ್ತ ಗದುಗಿನ ವಿಜಯ ಕಲಾಮಂದಿರಕ್ಕೆ ಪ್ರವೇಶ ಪಡೆದು ಚಿತ್ರಕಲಾ ಅಭ್ಯಾಸವನ್ನು ವಿಜಯ ಕಲಾಮಂದಿರದಲ್ಲಿ ಪ್ರಾರಂಭಿಸಿದರು.

ಸದಾ ಸ್ನೇಹಜೀವಿಯಾದ ಪಾಟೀಲರು ಅನೇಕ ಸ್ನೇಹಿತರ ಬಳಗವನ್ನು ಸಂಪಾಧಿಸಿಕೊಂಡಿದ್ದಾರೆ. ಚಿತ್ರಕಲೆ ಹಾಗೂ ಮಾಡ್ಲಿಂಗ್‌ನ್ನು ಉತ್ತಮ ರೀತಿಯಲ್ಲಿ ಅಭ್ಯಾಸ ಮಾಡಿ ಶಾಲೆಗೆ ಕೀರ್ತಿ ತರುವಂತೆ ಫಲಿತಾಂಶ ಪಡೆದುಕೊಂಡರು. ವಸ್ತುಚಿತ್ರ, ನಿಸರ್ಗಚಿತ್ರ, ಯಥಾದರ್ಶನ ಚಿತ್ರಸಂಯೋಜನೆ ಭಾವಚಿತ್ರ ಮುಂತಾದ ವಿಷಯಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಶ್ರೀ ಟಿ.ಪಿ.ಅಕ್ಕಿ, ಸಿ.ಎನ್.ಪಾಟೀಲ, ಎಂ.ಎ.ಚೆಟ್ಟಿ, ಎನ್.ಎಸ್.ಶಿಲ್ಪಿ, ಎಸ್.ಎಂ.ಶಿರಹಟ್ಟಿ, ಶ್ರೀ ಕಮಾನಗಾರ ಮುಂತಾದ ಪ್ರಖ್ಯಾತ ಕಲಾವಿದರ ಕೈಯಲ್ಲಿ ಪಳಗಿದ ಪಾಟೀಲರು ಚಿತ್ರಕಲೆಯಲ್ಲಿ ಸಾಕಷ್ಟು ಅಧ್ಯಯನ ಮಾಡಿ ಶಾಲೆಯಲ್ಲಿ ನಡೆಯುವ

೧೦೯. ಎಂ.ಆರ್. ಬಾಳಿಕಾಯಿಯವರ ಕ.ಲ.ಕ.ಅ. ಬೆಂಗಳೂರು ಪು.ಸಂ. ೧೯

೧೧೦. ಡಾ. ಮೋಹನ ಪಾಚಾಳ ಡಾ. ಎಸ್‌ಸಿ. ಪಾಟೀಲ ಮತ್ತು ದೃಶ್ಯ ಕಲಾಕ್ಷೇತ್ರ ಒಂದು ಸಂಕಥನ ಪು.ಸಂ. ೧೦

ಎಲ್ಲ ಕಲಾಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಇವರು ಸದಾ ಕ್ರಿಯಾಶೀಲರಾದ ಪಾಟೀಲರು ವಿದ್ಯಾರ್ಥಿ ಜೀವನದಲ್ಲಿಯೇ ಅನೇಕ ಕಾರ್ಯಕ್ರಮಗಳನ್ನು ಮಾಡಿ ಎಲ್ಲ ಸ್ನೇಹಿತರ ಮತ್ತು ಗುರುಗಳ ಪ್ರೀತಿಗೆ ಪಾತ್ರರಾಗಿದ್ದಾರೆ. ಇಂಟರ್‌ಮಿಡಿಯಟ್ ಕಲಾ ಮಾಡ್ಲಿಂಗ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್ ಪಡೆದು ತಂದೆ-ತಾಯಿಗಳಿಗೆ ಹಾಗೂ ಗುರುವೃಂದಕ್ಕೆ ಸಂತೋಷವನ್ನು ತಂದುಕೊಟ್ಟಿದ್ದಾರೆ. ಆರ್ಟ್ ಮಾಸ್ಟರ್ ಡಿಪ್ಲೋಮಾ, ಡ್ರಾಯಿಂಗ್ ಮತ್ತು ಪೆಂಟಿಂಗ್ ಪರೀಕ್ಷೆಯನ್ನು ಉತ್ತಮ ರೀತಿಯಲ್ಲಿ ಪೂರೈಸಿದರು.

ಡಾ. ಎಸ್.ಸಿ.ಪಾಟೀಲರು ಸದಾ ಅಧ್ಯಯನ ಶಿಲರಾದ ಇವರು ಚಿತ್ರಕಲೆಯ ಜೊತೆ ಓದು ಬರಹದ ಕಡೆಗೆ ಹೆಚ್ಚು ಗಮನ ನೀಡಿ ಎಂ.ಎ., ಎಂ.ಇಡಿ. ಎಂ.ಎ. ಡಿಪ್ಲೋಮಾ ಶಾಸನ ಶಾಸ್ತ್ರ, ಸಂಶೋಧನ ಶಾಸ್ತ್ರಗಳ ಕುರಿತು ತಿಳುವಳಿಕೆ ನೀಡುವ ಪರೀಕ್ಷೆ ಕಟ್ಟಿ ಉತ್ತೀರ್ಣರಾದರು. ಇದರಿಂದ ಸಂಶೋಧನೆಯ ಕಡೆಗೆ ಹೆಚ್ಚಿನ ಒಲವು ಮೂಡಿತೆನ್ನಬಹುದು. ಖ್ಯಾತ ಸಂಶೋಧಕ ಡಾ.ಎಂ.ಎಂ.ಕಲಬುರ್ಗಿಯವರು, ಡಾ. ಬಿ.ಆರ್. ಹಿರೇಮಠ, ಡಾ. ಎ. ಮುರಿಗೆಪ್ಪ, ಡಾ. ಬಿ.ಕೆ.ಹಿರೇಮಠರಂತಹ ಉತ್ತಮ ಸಂಶೋಧಕರು ಪಾಟೀಲರಿಗೆ ಮಾರ್ಗದರ್ಶಕರಾಗಿ ಬೋಧನೆ ಮಾಡಿದ್ದರೆ. ಅವರ ದಾರಿಯಲ್ಲಿಯೇ ಪಾಟೀಲರು ನಡೆದು ಬಂದು "ಕರ್ನಾಟಕದ ಜನಪದ ಚಿತ್ರಕಲೆ" ಎಂಬ ವಿಷಯದಲ್ಲಿ ಪಿ.ಎಚ್.ಡಿ. ಪದವಿಯನ್ನು ಡಾ. ಬಿ.ಆರ್. ಹಿರೇಮಠರವರ ಮಾರ್ಗದರ್ಶನದಲ್ಲಿ ಮಾಡಿಕೊಂಡರು. ಪಿ.ಎಚ್.ಡಿ. ಮಾಡುವ ಸಂದರ್ಭದಲ್ಲಿ ಡಾ. ಎಸ್.ಸಿ. ಪಾಟೀಲರವರಿಗೆ ಅನೇಕ ತೊಂದರೆಗಳು ಬಂದರೂ ಬಿಡದೇ ಅದನ್ನು ಪೂರ್ಣಗೊಳಿಸಿದರು. ಉತ್ತಮ ಸಂಶೋಧಕರಾದ ಡಾ.ಎಸ್.ಸಿ.ಪಾಟೀಲ ಅವರ ಸಂಶೋಧನಾ ಕೃತಿಗೆ ಬಂಗಾರದ ಪದಕ ತಂದುಕೊಟ್ಟಿತು. ಇವರ ಕಲಾಪ್ರೌಢಿಮೆ ಸಂಶೋಧನಾ ಕ್ರೀಯಾಶೀಲತೆಯು ಇವರಿಗೆ ಉಪ್ಪಿನ ಬೆಟಗೇರಿಯ ಸಂ.ಪ.ಪೂರ್ವ ಕಾಲೇಜಿಗೆ ಶಿಕ್ಷಣ ಉಪನ್ಯಾಸಕರಾಗಿ ಸೇವೆಗೆ ಸೇರಲು ಪ್ರೊ. ಮಾರಿಹಾಳರವರು ಪ್ರೋತ್ಸಾಹಿಸಿದರು. ಈ ಕಾಲೇಜಿನಲ್ಲಿ ಶರಣಗೌಡರ ಅಣ್ಣನ ಸ್ನೇಹಿತರು ಖ್ಯಾತ ಶಿಲ್ಪಕಲಾವಿದರಾದ ಶ್ರೀ ಕೆ.ಎಂ.ಸಾಬಣ್ಣವರು ಇವರು ಚಿತ್ರಕಲಾ ಶಿಕ್ಷಕರಾಗಿದ್ದರು. ಇವರಿಂದ ಡಾ.ಪಾಟೀಲರವರಿಗೆ ಅನೇಕ ಸಹಾಯ-ಸಹಕಾರ ನೀಡಿದರು. ಇಲ್ಲಿ ಹಲವು ವರ್ಷಗಳ ಕಾಲ ಉಪನ್ಯಾಸಕರಾಗಿ ಕೆಲಸ ನಿರ್ವಹಿಸಿದರು.

ಡಾ. ಎಸ್.ಸಿ.ಪಾಟೀರಲು ೧೯೯೭ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸುಮಾರು ೧೪ವರ್ಷಗಳ ಕಾಲ ಬೋಧನಾ ಅನುಭವ ಹೊಂದಿದವರಾಗಿದ್ದಾರೆ.[೧೧೧] ವಿದ್ಯಾರ್ಥಿಗಳಿಗೆ ಆತ್ಮೀಯ ಗುರುವಾಗಿ ಸರಳ ಸಹಜ ವ್ಯಕ್ತಿತ್ವವನ್ನು ಹೊಂದಿದ ಡಾ. ಎಸ್.ಸಿ.ಪಾಟೀಲರು ಸದಾ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದಾರೆ. ಶಿಲ್ಪಕಲಾ ವಿಭಾಗದಲ್ಲಿ ಅನೇಕ ಸಮಸ್ಯೆಗಳು ಇದ್ದವು. ಅವುಗಳನ್ನು ಸರಳವಾಗಿ ಮತ್ತು ವ್ಯವಸ್ಥಿತವಾಗಿ ಆಡಳಿತ ನಡೆಯುವಂತೆ ಮೇಲಾಧಿಕಾರಿಗಳಿಗೆ ಮನವರಿಕೆ ಮಾಡಿ ಶಿಲ್ಪಕಲಾ ಡಿಪ್ಲೋಮಾ ಕೋರ್ಸ್‌ಗಳನ್ನು ಪದವಿಗಳನ್ನಾಗಿ ಪರಿವರ್ತಿಸಿದರು. ಶಿಲ್ಪಕಲಾ ವಿಭಾಗವು ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ೧೯೯೯ರಲ್ಲಿ ಬಾದಾಮಿಯ ಬನಶಂಕರಿಗೆ ಸ್ಥಳಾಂತರಿಸಲಾಯಿತು.

೧೧೧. ಡಾ. ಎಸ್.ಸಿ. ಪಾಟೀಲ ಮತ್ತು ದೃಶ್ಯ ಕ್ಷೇತ್ರ ಒಂದು ಸಂಕಥನ ಪು.ಸಂ. ೧೬

ಈ ವಿಭಾಗಕ್ಕೆ ಡಾ. ಎಸ್.ಸಿ.ಪಾಟೀಲರಿಗೆ ಮುಖ್ಯಸ್ಥರಾಗಿ ನೇಮಕಗೊಳಿಸಿದರು. ಉತ್ತಮ ಸಂಶೋಧಕರು ಆಡಳಿತಗಾರರಾದ ಡಾ. ಎಸ್.ಸಿ.ಪಾಟೀಲರು ಶಿಲ್ಪಕಲಾ ವಿಭಾಗವನ್ನು ಉತ್ತಮವಾಗಿ ನಡೆಸುತ್ತ ಈ ವಿಭಾಗದಲ್ಲಿ ಚಿತ್ರಕಲೆಯಲ್ಲಿ ಬಿ.ಎಫ್.ಎ. ಹಾಗೂ ಎ.ಟಿ.ಸಿ. ಕೋರ್ಸ್ ಪ್ರಾರಂಭವಾಗುವಂತೆ ಮಾಡಿದರು. ಇವುಗಳಿಗೆ ಬೇಕಾಗುವ ಪಠ್ಯಕ್ರಮವನ್ನು ರಚನೆ ಮಾಡಿದರು. ಬಿ.ಎಫ್.ಎ. ಚಿತ್ರಕಲಾ ಪದವಿಯನ್ನು ನ್ಯಾಷನಲ್ ಕರ್ಕ್ಯೂಲಿಯದಂತೆ ಬಿ.ವಿ.ಎ. ಬ್ಯಾಚುಲರ್ ಆಫ್ ವಿಜ್ಯುವಲ್ ಆರ್ಟ್ ಎಂದು ಬದಲಾಯಿಸಿದರು. ಇದಕ್ಕೆ ಬೇಕಾಗುವ ಪಠ್ಯಕ್ರಮವನ್ನು ರಚಿಸಿದರು. ಬಿ.ಎ.ಎ. ಇಂದ ಆರಂಭಗೊಂಡು ಎಂ.ವಿ.ಎ., ಎಂ.ಫಿಲ್., ಪಿಎಚ್.ಡಿ. ಸಂಶೋಧನಾ ಅಧ್ಯಯನದ ವರೆಗೆ ವಿದ್ಯಾರ್ಥಿಗಳು ದೃಶ್ಯಕಲೆಯಲ್ಲಿ ಅಧ್ಯಯನ ಮಾಡುವ ಅವಕಾಶ ದೊರಕಿಸಿ ಕೊಟ್ಟಟರು.[೧೧೨] ಪಾಟೀಲರು ಸಂಶೋಧನ ಮಾಡುವಂತೆ ಕನ್ನಡ ವಿಶ್ವವಿದ್ಯಾಲಯದಿಂದ ನಡೆಯುವಂತೆ ಮಾಡಿದರು. ಕನ್ನಡ ವಿಶ್ವವಿದ್ಯಾಲಯದಲ್ಲಿ ದೃಶ್ಯಕಲೆಯ ಕುರಿತು ನಡೆದ ಸಂಶೋಧನೆಯು ಬೇರೆ ಯಾವುದೇ ವಿಶ್ವವಿದ್ಯಾಲಯದಲ್ಲಿ ನಡೆದಿಲ್ಲವೆಂದರೆ ತಪ್ಪಾಗಲಾರದು. ಇದಕ್ಕೆ ಕಾಣರಣಿಭೂತರೆ ಡಾ. ಎಸ್.ಸಿ.ಪಾಟೀಲರು ಬಾದಾಮಿಯ ಶಿಲ್ಪಕಲಾ ವಿಭಾಗದಲ್ಲಿ ಒಂದು ಉತ್ತಮವಾದ ಆರ್ಟ್ ಗ್ಯಾಲರಿಯನ್ನು ಖ್ಯಾತಕಲಾವಿದರಾದ ನಾಡೋಜ ಆರ್.ಎಂ. ಹಡಪದ ಅವರ ಹೆಸರಿನಲ್ಲಿ ಪ್ರಾರಂಭಿಸಿ ಅವರ ಹೆಸರು ಸದಾಕಲಾ ಉಳಿಯುವಂತೆ ಮಾಡಿದರು.

ಕರ್ನಾಟಕದ ಕಲಾಶಾಲೆಗಳು ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಯೊಳಗೆ ಬರುವಂತೆ ಪ್ರಯತ್ನಿಸಿದ್ದಾರೆ. ರಾಜ್ಯದ ಕಲಾಶಾಲೆಗಳನ್ನು ಉನ್ನತ ಶಿಕ್ಷಣ ಪಡೆಯುವಂತೆ ಡಿಪ್ಲೋಮಾ ಬದಲಾಗಿ ಬಿ.ವಿ.ಎ. ಪದವಿ ಪಡೆಯುವಂತೆ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘ, ಧಾರವಾಡ ಅವರ ಸಹಕಾರದೊಂದಿಗೆ ಮೇಲಾಧಿಕಾರಿಗಳಗೆ ಮನವರಿಕೆ ಮಾಡಿದರು. ಬಿ.ವಿ.ಎ. ಪದವಿ ರಾಜ್ಯದ ಎಲ್ಲ ಕಲಾಶಾಲೆಗಳು ನಡೆಸುವಂತೆ ಆದೇಶ ಮಾಡಲು ಕಾರಣೀಭೂತರಾದರು. ಆರ್ಟ್ ಮಾಸ್ಟರ್ ಡಿಪ್ಲೋಮಾ ತರಗತಿ ಪಾಸು ಮಾಡಿ ಸೇವೆಸಲ್ಲಿಸುತ್ತಿರುವ ಉಪನ್ಯಾಸಕರು ಬಿ.ವಿ.ಎ. ಪದವಿ ತರಗತಿಗೆ ಬೋಧನೆ ಮಾಡುವ ಪದ್ಧತಿ ಸರಿಯಾದುದಲ್ಲವೆಂಬ ವಾದವನ್ನು ಪ್ರತಿಪಾದಿಸಿದರು. ಇದಲ್ಲದೇ ಚಿತ್ರಕಲಾ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರಿಗೆ ಉನ್ನತ ಶಿಕ್ಷಣ ಪೂರೈಸಿಕೊಳ್ಳಲು ಎಂ.ವಿ.ಎ. ಸ್ನಾತಕೋತ್ತರ ಪದವಿಯ ಅಧ್ಯಯನ ಮಾಡಲು ಅನುವಾಗುವಂತೆ ಸೇವಾನಿರತ ಅಧ್ಯಾಪಕರ ನಾಲ್ಕು ಸೆಮಿಸ್ಟರ್ ಎಂ.ವಿ.ಎ. ಸ್ನಾತಕೋತ್ತರ ಪದವಿಯನ್ನು ಪೂರೈಸಿಕೊಳ್ಳಲು ಅನುಕೂಲವಾಗುವಂತೆ ಸರಕಾರದ ಮಟ್ಟದಲ್ಲಿ ಆದೇಶ ಮಾಡುವಂತೆ ಸೂಕ್ತ ವ್ಯವಸ್ಥೆ ಮಾಡುವಲ್ಲಿ ಡಾ.ಎಸ್.ಸಿ.ಪಾಟೀಲರ ಶ್ರಮ ಅಧಿಕವಾದುದು.

ಡಾ.ಎಸ್.ಸಿ.ಪಾಟೀಲರು ಹಲವು ಕಡೆಗಳಲ್ಲಿ ಏಕವ್ಯಕ್ತಿ ಕಲಾಪ್ರದರ್ಶನ ಮಾಡಿದ್ದಾರೆ. ೧೯೬೭ರಲ್ಲಿ ಕರ್ನಾಟಕ ಕಾಲೇಜ, ಧಾರವಾಡ, ೧೯೬೮-೬೯ರಲ್ಲಿ ಶ್ರೀ ಮುರಘಾಮಠ ಧಾರವಾಡ, ೧೯೮೦, ೮೧, ೮೩ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮೨ರಲ್ಲಿ ಕುಮಟಾ ೧೯೮೪-೮೫ ರಲ್ಲಿ ಧಾರವಾಡ ಜಿಲ್ಲೆಯ ವೀರಾಪೂರ, ೧೯೯೬ರಲ್ಲಿ ಸರಕಾರಿ ಆರ್ಟ್ ಗ್ಯಾಲರಿ ಧಾರವಾಡ, ೨೦೦೯ರಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು.

೧೧೨. ಡಾ. ಎಸ್.ಸಿ.ಪಾಟೀಲ ಮತ್ತು ದೃಶ್ಯ ಕ್ಷೇತ್ರ ಒಂದು ಸಂಕಥನ ಪು.ಸಂ. ೧೭

ಗದಗ, ಹುಬ್ಬಳ್ಳಿ, ಧಾರವಾಡ, ಬೆಲಹೊಂಗಲ, ಬೆಂಗಳೂರು, ದೆಹಲಿ, ಹಂಪಿ, ಮೈಸೂರು, ಪಟ್ಟದಕಲ್ಲು, ಬಾದಾಮಿ, ಸಾನೆಹಳ್ಳಿ, ಮೌಂಟಅಬು ರಾಜಸ್ಥಾನ, ವಿರೋಸ್ ಗ್ಯಾಲರಿ, ಲಕ್ನೋ, ಹೈದರಾಬಾದ್, ಕರ್ನಾಟಕ ಸಂಘ ದೆಹಲಿ ರಾಷ್ಟ್ರೀಯ ಕಲಾಪ್ರದರ್ಶನ ಅಮೃತಸರ್, ಪಂಜಾಬ, ಬೆನಾನ್‌ಸ್ಮಿತ್ ಕಾಲೇಜು ಬೆಳಗಾವಿ, ಕೇಂದ್ರ ಲಲಿತಕಲಾ ಅಕಾಡೆಮಿ ಸೆಂಟರ್ ಚೆನ್ನೈ, ಸೌಥ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಅಧಿವೇಶನ ಅನಂತಪುರ, ಕೃಷ್ಣದೇವರಾಯ ವಿಶ್ವವಿದ್ಯಾಲಯ ಕುಪ್ಪಂ, ಆಂದ್ರಪ್ರದೇಶ, ತುಮುಕೂರು ವಿಶ್ವವಿದ್ಯಾಲಯ, ದ್ರಾವಿಡ ವಿಶ್ವವಿದ್ಯಾಲಯ ಕುಪ್ಪಂ ಹೀಗೆ ರಾಜ್ಯ ಹೊರರಾಜ್ಯಗಳಲ್ಲಿ ಅನೇಕ ಸಮೂಹ ಕಲಾಪ್ರದರ್ಶನ ಹಾಗೂ ಕಲಾಶಿಬಿರಗಳಲ್ಲಿ ಭಾಗವಹಿಸಿದವರಾಗಿದ್ದಾರೆ.[೧೧೩]

ಡಾ. ಎಸ್.ಸಿ.ಪಾಟೀಲರು ಹಲವಾರು ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಚಿತ್ರಕಲಾವಿದ ಎಂಬುದನ್ನು ಸಾಬೀತುಪಡಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ರಾಜ್ಯ ಹೊರರಾಜ್ಯಗಳಲ್ಲಿ ಸಂಗ್ರಹಗೊಂಡಿವೆ. ಗದಗ, ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ಬೆಂಗಳೂರು, ಕನ್ನಡ ವಿಶ್ವವಿದ್ಯಾಲಯ ಹಂಪಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ದ್ರಾವಿಡ ವಿಶ್ವವಿದ್ಯಾಲಯ ಕುಪ್ಪಂ, ಮೌಂಟ್ ಅಬು ರಾಜಸ್ಥಾನ, ದೆಹಲಿ, ಮುಂಬಯಿ, ಪೂನಾ ಮುಂತಾದ ಸ್ಥಳಗಳಲ್ಲಿ ಡಾ. ಎಸ್.ಸಿ. ಪಾಟೀಲರ ಕಲಾಕೃತಿಗಳು ಸಂಗ್ರಹಗೊಂಡಿವೆ.

ಡಾ. ಎಸ್.ಸಿ.ಪಾಟೀಲರ ಕಲಾ ಸಾಧನೆ ಮತ್ತು ಸಂಶೋಧನಾತ್ಮಕ ಸಾಧನೆಗಳನ್ನು ಗಮನಿಸಿ ಹಲವಾರು ಸಂಘ–ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಕರ್ನಾಟಕ ಜಾನಪದ ಕಲೆ ಪಿ.ಎಚ್.ಡಿ. ಮಹಾಪ್ರಬಂಧಕ್ಕೆ ಪಾಟೀಲರಿಗೆ ಬಂಗಾರದ ಪದಕ ದೊರೆತಿದೆ. ಬಾರೋಕ ಕಲೆ ಗ್ರಂಥಕ್ಕೆ ಕರ್ನಾಟಕ ಲಲಿತಕಲಾ ಅಕಾಡೆಮಿ ಉತ್ತಮ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಿದೆ. ಜನಪದ ಚಿತ್ರಕಲೆ ಸಂಶೋಧನಾ ಗ್ರಂಥಕ್ಕೆ ಉತ್ತಮ ಸಂಶೋಧನಾ ಕೃತಿ ಪ್ರಶಸ್ತಿಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯು ಇವರನ್ನು ಗೌರವಿಸಿದೆ. ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ, ಬೆಲ್ಲದ ಶಿಕ್ಷಣ ಮತ್ತು ಕೃತಿ ಪ್ರತಿಷ್ಠಾನ ಧಾರಾಡ ಇವರು ನೀಡಿ ಸನ್ಮಾನಿಸಿದ್ದಾರೆ. ರಾಷ್ಟ್ರಕವಿ ಗೋವಿಂದ ಪೈ ಪ್ರತಿಷ್ಠಾನ ಉಡುಪಿ, ಕರ್ನಾಟಕ ಜನಪದ ಚಿತ್ರಕಲೆ ಗ್ರಂಥಕ್ಕೆ ಕು.ಶಿ. ಹರಿದಾಸ ಭಟ್ಟ ಜಾನಪದ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಉತ್ತಮ ಉಪನ್ಯಾಸಕ ಪ್ರಶಸ್ತಿ, ರಾಜ್ಯ ಶಿಕ್ಷಕರ ನಿಧಿಯ ಬೆಳಗಾವಿ ಇವರು ನೀಡಿ ಸನ್ಮಾನಿಸಿದ್ದಾರೆ. ಕರ್ನಾಟಕ ಸರಕಾರದಿಂದ ಬೆಸ್ಟ್ ಲೆಕ್ಚೆರೆರ್ ಆವಾರ್ಡ್ ಇವರಿಗೆ ಲಭಿಸಿದೆ. ವರ್ಷದ ವ್ಯಕ್ತಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಶಿಕ್ಷಣ ರತ್ನ ಪ್ರಶಸ್ತಿಯನ್ನು ಇಂಟರ್‌ನ್ಯಾಶನಲ್ ಫ್ರೆಂಡ್‌ಶಿಫ್ ಅಶೋಶಿಯೇಶನ್ ನ್ಯೂ ದೆಹಲಿ, ಹಂಪಿ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಜ್ರಮಹೋತ್ಸವ ವಿಶೇಷ ಗೌರವ ಪ್ರಶಸ್ತಿಯನ್ನು ವಿಜಯ ಕಲಾಮಂದಿರ ಗದಗ ಇವರು ನೀಡಿ ಗೌರವಿಸಿದ್ದಾರೆ. ಹೀಗೆ ಅನೇಕ ಪ್ರಶಸ್ತಿಗಳನ್ನು ಡಾ. ಎಸ್.ಸಿ. ಪಾಟೀಲರಿಗೆ ಸಂದಿವೆ. ಹಲವು ಸಂಘಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟಿದ್ದಾರೆ.[೧೧೪]

---

೧೧೩. ಡಾ. ಎಸ್.ಸಿ. ಪಾಟೀಲ ದಾಖಲೆಗಳಿಂದ ಸಂಗ್ರಹ

೧೧೪. ಡಾ. ಎಸ್.ಸಿ. ಪಾಟೀಲ ದಾಖಲೆಗಳಿಂದ ಸಂಗ್ರಹ

ಕ್ರಿಯಾಶೀಲ ವ್ಯಕ್ತಿಯಾದ ಡಾ. ಎಸ್.ಸಿ. ಪಾಟೀಲರು ಅನೇಕ ಕಲಾಚಟುವಟಿಕೆ ಮಾಡುವುದರ ಮೂಲಕ ಹಲವಾರು ಸಂಘ-ಸಂಸ್ಥೆಗಳಲ್ಲಿ ಸಕ್ರೀಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಯು.ಜಿ.ಸಿ ನ್ಯಾಕ್ ಕೌನ್ಸಿಲ್ ನ್ಯೂ ದೆಹಲಿ ಇದರ ಸದಸ್ಯತ್ವ, ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರಕಾರ ಇದರ ಸದಸ್ಯರಾಗಿ, ಕರ್ನಾಟಕ ರಾಜ್ಯ ಸರಕಾರದಿಂದ ಕೊಡಲ್ಪಡುವ ವೆಂಕಪ್ಪ ಪ್ರಶಸ್ತಿಯ ಆಯ್ಕೆ ಸಮಿತಿಯ ಸದಸ್ಯತ್ವ, ಯು.ಜಿ.ಸಿ. ನ್ಯಾಕ್ ಪರೀಕ್ಷಾ ಮಂಡಳಿ ನ್ಯೂ ದೆಹಲಿ ಇದರ ಸದಸ್ಯತ್ವ ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ಇದರ ಸದಸ್ಯರಾಗಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇದರ ಬಿ.ಓ.ಇ. ಸದಸ್ಯತ್ವ ಗುಲಬರ್ಗಾ ವಿಶ್ವವಿದ್ಯಾಲಯದ ಬಿ.ಓ.ಎಸ್. ಮತ್ತು ಬಿ.ಓ.ಇ. ಸದಸ್ಯತ್ವ, ಕುವೆಂಪು ವಿಶ್ವವಿದ್ಯಾಲಯ, ಲಲಿತಕಲಾ ಮಹಾವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಬಿ.ಓ.ಎಸ್. ಮತ್ತು ಬಿ.ಓ.ಇ. ಸದಸ್ಯತ್ವ, ಅಧ್ಯಕ್ಷರು ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ ಇದರ ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿ, ಅಧ್ಯಕ್ಷರು ಬಿ.ವಿ.ಎ. ಮತ್ತು ಎ.ಟಿ.ಸಿ. ಬಿ.ವಿ.ಇಡಿ., ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಯ ಡೀನ್, ಲಲಿತಕಲಾ ನಿಕಾಯ, ಕನ್ನಡ ವಿಶ್ವವಿದ್ಯಾಲಯ, ಮುಖ್ಯಸ್ಥರು, ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಬಾದಾಮಿ ಬನಶಂಕರಿ ಶಾಖೆ, ಮುಖ್ಯಸ್ಥರು ದೃಶ್ಯಕಲಾ ವಿಭಾಗ, ಮುಖ್ಯಸ್ಥರು ಸಂಗೀತ ಮತ್ತು ನೃತ್ಯ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಅಧ್ಯಕ್ಷರು ಕರ್ನಾಟಕ ದೃಶ್ಯಕಲಾ ಅಕಾಡೆಮಿ, ಧಾರವಾಡ ಹೀಗೆ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಮತ್ತು ಸಲ್ಲಿಸುತ್ತಿದ್ದಾರೆ. ಅದಲ್ಲದೇ ಅನೇಕ ಸಂಘ-ಸಂಸ್ಥೆಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಸಕ್ರೀಯವಾಗಿ ಕೆಲಸ ಮಾಡುತ್ತಿದ್ದಾರೆ.[೧೧೫]

ಡಾ. ಎಸ್.ಸಿ. ಪಾಟೀಲರು ಉತ್ತಮ ಸಂಶೋಧಕರಾಗಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಅನೇಕ ವಿದ್ಯಾರ್ಥಿಗಳು ಮತ್ತು ಸೇವಾನಿರತ ಅಧ್ಯಾಪಕರು ಎಫ್.ಫಿಲ್. ಮತ್ತು ಪಿಎಚ್.ಡಿ ಸಂಶೋಧನಾ ಅಧ್ಯಯನ ಮಾಡಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಪಿಎಚ್.ಡಿ ಅಧ್ಯಯನ ಮಾಡಿದ ವಿವರ ಈ ಕೆಳಗನಂತಿದೆ.

ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿ ಪಿಎಚ್.ಡಿ ಪಡೆದವರು

೧. ಡಾ. ಯಾದಪ್ಪ ಪರದೇಶಿ : ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ

೨. ಡಾ. ಶಿವಾನಂದ ಎಚ್. ಬಂಟನೂರ : ಉತ್ತರ ಕರ್ನಾಟಕದ ಜನಪದ ಶಿಲ್ಪಕಲೆ

೩. ಡಾ. ಸಿದ್ಧಲಿಂಗಸ್ವಾಮಿ ಅ. ಹಿರೇಮಠ : ಚಿತ್ರಕಲಾವಿದ ಆರ್. ಎಂ. ಹಡಪದ

೪. ಡಾ. ಲಕ್ಷ್ಮೀದೇವಿ ಗವಾಯಿ : ಕಲಾವಿದ ಎಂ.ಎ.ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು

೫. ಡಾ. ವಿ.ಎಂ. ಬಾಗಾಯತ : ಮುಸ್ಲಿಂ ಅರಸರ ಕಾಲದ ಚಿತ್ರಕಲೆ

೬. ಡಾ. ಶಶಿಕಲಾ ಎಂ. ಹೂಗಾರ : ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ

೭. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ : ಕರ್ನಾಟಕದ ರಥ ಶಿಲ್ಪಕಲೆ

೮. ಡಾ. ಎಚ್.ಎಸ್. ಚಿತ್ರಗಾರ : ಕರ್ನಾಟಕದ ಹಸ್ತಪತ್ರಿ ಚಿತ್ರಕಲೆ

---

೧೧೫. ಡಾ. ಎಸ್‌ಸಿ. ಪಾಟೀಲ ಮತ್ತು ದೃಶ್ಯ ಕಲಾಕ್ಷೇತ್ರ ಒಂದು ಸಂಕಥನ ಪು.ಸಂ. ೫೩

೯. ಡಾ. ಗೀತಾಂಜಲಿ ಬಿ.ಆರ್. : ಕರ್ನಾಟಕದ ದೀಪಸ್ತಂಭಗಳು

೧೦. ಡಾ. ಎ.ಎಸ್. ವಿಶ್ವನಾಥ : ಕರಾವಳಿ ಕರ್ನಾಟಕ ಯಕ್ಷಗಾನ ಮುಖವರ್ಣಿಕೆಗಳು ಮತ್ತು ವೇಷಭೂಷಣಗಳು

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಮಾರ್ಗದರ್ಶಕರಾಗಿದ್ದು ಅಲ್ಲಿ ಪಿಎಚ್.ಡಿ.ಪದವಿ ಪಡೆದುಕೊಂಡವರು :

೧. ಡಾ. ಶಿವಕುಮಾರ : ಸಮಕಾಲೀನ ಉತ್ಸವಗಳು ಮತ್ತು ಹಬ್ಬಗಳಲ್ಲಿ ವಾಣಿಜ್ಯ ಕಲಾ ಮೇಳಗಳು

೨. ಡಾ. ವಿಶ್ವೇಶ್ವರಿ ತಿವಾರಿ : ಹೈದರಾಬಾದ್ ಕರ್ನಾಟಕದ ರಂಗೋಲಿ ಚಿತ್ರಕಲೆ ಸಾಂಸ್ಕೃತಿಕ ಅಂಶಗಳು

೩. ಡಾ. ಮಲ್ಲಕಾರ್ಜುನ ಬಾಗೋಡಿ : ಸುರಪುರ ಶೈಲಿ ಚಿತ್ರಕಲೆ

೪. ಡಾ. ಮೋಹನರಾವ್ ಬಿ. ಪಂಚಾಳ : ಡಾ. ಎಸ್.ಎಂ.ಪಂಡಿತ ಜೀವನ ಮತ್ತು ಕಲಾಕೃತಿಗಳು

ಡಾ.ಎಸ್.ಸಿ. ಪಾಟೀಲರ ಮಾರ್ಗದರ್ಶನದಲ್ಲಿ ಎಂಪಿಲ್ ಪದವಿ ಪಡೆದವರು :

೧. ಮಲ್ಲಿಕಾರ್ಜುನ ಬಾಗೋಡಿ : ಕಲಾವಿದ ಜೆ.ಎಸ್. ಖಂಡೇರಾವ್ ಜೀವನ ಮತ್ತು ಕಲಾಕೃತಿಗಳು

೨. ಎ.ಎಸ್. ವಿಶ್ವನಾಥ : ಯಕ್ಷಗಾನ ಮುಖವರ್ಣಿಕೆ ಮತ್ತು ವೇಷಭೂಷಣಗಳು

೩. ಶಂಕರ ಕುಂದಗೋಳ : ಕಲಾವಿದ ಡಿ.ವಿ.ಹಾಲಭಾವಿ ಬದುಕು ಮತ್ತು ಕಲಾಕೃತಿಗಳು

೪. ಸಿ.ಡಿ. ಜಟ್ಟೆಣ್ಣವರ : ಕಲಾವಿದ ಎಂ.ವಿ.ಮಿಣಜಗಿ ಜೀವನ ಮತ್ತು ಕಲಾಕೃತಿಗಳು

೫. ಸುಚಿತ್ರಾ ಲಿಂಗದಳ್ಳಿ : ವಿಜಯನಗರ ಚಿತ್ರಕಲೆ

೬. ರವಿ ನಾಯಕ : ಕಿನ್ನಾಳ ಚಿತ್ರಕಲೆ

೭. ಬಿ.ಎಂ. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿಚಿತ್ರಕಲೆ

೮. ಶೈಲಾ ಬರಡೋಲ್ : ಸಂಥ ಸುಭರಾಯರ ಜೀವನ ಮತ್ತು ಕಲಾಕೃತಿಗಳು

೯. ಉಮೇಶ : ಕರ್ನಾಟಕದ ಜೈನ ಚಿತ್ರಕಲೆ

೧೦. ಶಶಿಕಾಂತ ಬಸರಿಕಟ್ಟಿ : ಕಲಘಟಗಿ ಚಿತ್ರಕಲೆ

ಹೀಗೆ ಅನೇಕ ಕಲಾವಿದರು ಡಾ.ಎಸ್.ಸಿ. ಪಾಟೀಲರ ಮಾರ್ಗದರ್ಶನದಲ್ಲಿ ಪಿಎಚ್.ಡಿ., ಡಿ.ಲಿಟ್., ಎಂ.ಫಿಲ್. ಹಾಗೂ ಎಂ.ವಿ.ಎ. ಸ್ನಾತಕೋತ್ತರ ಪದವಿ ಹಾಗೂ ಬಿ.ವಿ.ಎ.. ಪದವಿಗಾಗಿ ಅನೇಕ ಕಿರು ಪ್ರಬಂಧಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ದೃಶ್ಯಕಲೆಯ ಕುರಿತು ಸಾಕಷ್ಟು ಸಂಶೋಧನಾತ್ಮಕ ವಿಷಯಗಳಲ್ಲಿ ಕೃಷಿ ಮಾಡಿದ ಪಾಟೀಲರು ಚಿತ್ರಕಲಾ ಕ್ಷೇತ್ರಕ್ಕೆ ಅದರಲ್ಲೂ ಸಂಶೋಧನಾ ವಿಷಯದಲ್ಲಿ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅವರ ಕಾರ್ಯಚಟುವಟಿಕೆಗಳನ್ನು ಮೆಚ್ಚಿ ಅನೇಕ ದಿನಪತ್ರಿಕೆಗಳು ಅವರ ವ್ಯಕ್ತಿತ್ವದ ಕುರಿತು ಪ್ರಶಂಸೆ ಮಾಡಿವೆ. ಚಿತ್ರಕಲಾ ಕ್ಷೇತ್ರಕ್ಕೆ ವಿಭಿನ್ನ ರೀತಿಯಲ್ಲಿ ತಮ್ಮದೇ ಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.[೧೧೬]

---

೧೧೬. ಡಾ. ಎಸ್.ಸಿ. ಪಾಟೀಲ ದಾಖಲೆಗಳಿಂದ ಸಂಗ್ರಹ

ಡಾ. ಡಿ.ಎ. ಉಪಾಧ್ಯಯ : ಡಾ. ಡಿ.ಎ. ಉಪಾಧ್ಯರವರು ಗದಗ ಜಿಲ್ಲೆಯ ರೋಣ ತಾಲೂಕಿನ ಅಬ್ಬಿಗೇರಿ ಗ್ರಾಮದಲ್ಲಿ ೧೯೫೨ರಲ್ಲಿ ಹುಟ್ಟಿದ ಇವರು ದಾವಣಗೆರೆಯ ಕೈಗಾರಿಕಾ ಕಲಾಶಾಲೆಯಲ್ಲಿ ಐದು ವರ್ಷದ ಡಿಪ್ಲೋಮಾ ಪರೀಕ್ಷೆಯನ್ನು ೧೯೭೬ರಲ್ಲಿ ಪಾಸು ಮಾಡಿಕೊಂಡರು. ನಂತರ ಡಿ.ಟಿ.ಸಿ.ಕೋರ್ಸ್‌ನ್ನು ಗದುಗಿನ ವಿಜಯ ಕಲಾಮಂದಿರದಲ್ಲಿ ೧೯೭೮ರಲ್ಲಿ ಪಾಸಾದರು. ಸದಾ ಕ್ರಿಯಾಶೀಲರಾದ ಉಪಾಧ್ಯರವರು ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ಕಲಾ ಪ್ರತಿಭೆಯಿಂದ ಮೈಸೂರಿನ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿಯ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ನೇಮಕಗೊಂಡು ಕಲಾಶಾಲೆಯ ಅನೇಕ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ಮಾಡುತ್ತಿದ್ದಾರೆ. ಕಲಾವಿದರು, ಸಾಹಿತಿಗಳು, ಚಲನ ಚಿತ್ರಗಳಲ್ಲಿನ ಉತ್ತಮ ಸೇವೆಯನ್ನು ಸಲ್ಲಿಸುವುದರ ಮೂಲಕ ತಮ್ಮದೇಯಾದ ವಿಶಿಷ್ಟ ಕೊಡುಗೆ ನೀಡಿದ್ದಾರೆ.

ಸದಾ ಕಾಲ ಕಲಿಯುವ ಹಂಬಲವನ್ನು ಇವರು ಹೊಂದಿದ್ದಾರೆ. ಉಪಾಧ್ಯರವರು ಎಂ.ವಿ.ಎ. ಸ್ನಾತಕೋತ್ತರ ಪದವಿಯನ್ನು ಮತ್ತು ಕನ್ನಡ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ. ಚಿತ್ರಕಲೆಯ ಜೊತೆಗೆ ಸಾಹಿತ್ಯವನ್ನೂ ಇವರು ರಚಿಸುತ್ತ ಎರಡೂ ಕ್ಷೇತ್ರಗಳಲ್ಲಿಯೂ ಗುರುತಿಸಿಕೊಂಡಿದ್ದಾರೆ. ಇವರು ಹಲವಾರು ಉತ್ತಮ ಕಲಾಕೃತಿಗಳನ್ನು ರಚಿಸಿ ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಹುಲ್ಲಹಕ್ಕಿಗಳಲ್ಲಿ ಇವರ ಏಕವ್ಯಕ್ತಿ ಪ್ರದರ್ಶನಗಳು ನಡೆದಿವೆ. ಮೈಸೂರು, ಬೆಂಗಳೂರು, ಚೆನ್ನೈ, ನಾಗರಹೊಳೆ, ಧಾರವಾಡ, ಹಂಪಿ, ಶ್ರೀರಂಗಪಟ್ಟಣ, ಮುಂತಾದ ಕಡೆಗಳಲ್ಲಿ ನಡೆದ ಕಾರ್ಯಾಗಾರದಲ್ಲಿ ಇವರು ಭಾಗವಹಿಸಿದ್ದಾರೆ. ಗದಗ, ಮೈಸೂರು, ದಾವಣಗೆರೆ, ಬೆಂಗಳೂರು, ಹುಬ್ಬಳ್ಳಿ, ದೆಹಲಿ ಕೇರಳ ಮುಂತಾದ ಕಡೆಗಳಲ್ಲಿ ಇವರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ.[೧೧೭]

ಚಲನಚಿತ್ರ ನಿರ್ದೇಶಕರಾದ ಶ್ರೀ ಉಪಾಧ್ಯರವರು ನಟರಾಗಿ ಅಭಿನಯಿಸಿದ್ದಾರೆ. ದೃಶ್ಯಕಲಾ ಸಾಹಿತ್ಯ ಕುರಿತು ಸುಮರು ೪೯ ಪುಸ್ತಕಗಳನ್ನು ರಚಿಸಿ ಪ್ರಕಟಿಸಿದ್ದಾರೆ. ದೃಶ್ಯಕಲಾ ಇತಿಹಾಸದಿಂದ ಚಿತ್ರಕಲಾ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಇವರು ಬರೆದ ಬಹಳಷ್ಟು ಪುಸ್ತಕಗಳು ಉಪಯುಕ್ತವಾಗಿವೆ. ಡಾ.ಡಿ.ಎ. ಉಪಾಧ್ಯರವರು ಅನೇಕ ಸಂಘ-ಸಂಸ್ಥೆಗಳಲ್ಲಿ ಸದಸ್ಯರಾಗಿ, ಕಾರ್ಯದರ್ಶಿಯಾಗಿ, ಕಾರ್ಯನಿರ್ವಹಿಸಿದ್ದಾರೆ. ಶ್ರೀಯುತರ ಅನೇಕ ಕಲಾಕೃತಿಗಳು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರದರ್ಶನಗೊಂಡಿವೆ. ದೆಹಲಿ, ಗದಗ, ಮೈಸೂರು, ಹುಬ್ಬಳ್ಳಿ, ಅಬ್ಬಿಗೇರಿ ಮುಂತಾದ ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

ಬಹುಮುಖ ಪ್ರತಿಭೆಯ ಕಲಾವಿದರಾದ ಡಾ. ಉಪಾಧ್ಯರವರು ಚಿತ್ರಕಲಾ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಚಿತ್ರಕಲಾ ಸಾಹಿತ್ಯದಲ್ಲಿ ವಿಶಿಷ್ಟವಾದ ಸಾಧನೆ ಮಾಡಿದ್ದಾರೆ. ಇಂಥ ಕಲಾವಿದರು ಗದಗ ಜಿಲ್ಲೆಯವರಾಗಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಕಲಾಸಾಹಿತ್ಯ ಮತ್ತು ವಿಮರ್ಶಕರು ಆದ ಇವರು ಉತ್ತಮ ವಿಮರ್ಶಕರಾಗಿ ಗುರುತಿಸಿಕೊಂಡಿದ್ದಾರೆ. ಚಿತ್ರಕಲಾ ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ದೂರ ಶಿಕ್ಷಣದ ಮೂಲಕ ನೀಡುವ ಕಲಾ ಸಂಸ್ಥೆಯನ್ನು ಕಟ್ಟಿದ್ದಾರೆ.[೧೧೮]

---

೧೧೭. ಡಾ. ಡಿ.ಎ. ಉಪಾದ್ಯರವರ ಪರಿಚಯ ಪತ್ರದಿಂದ ಸಂಗ್ರಹ

೧೧೮. ಡಾ. ಡಿ.ಎ. ಉಪಾದ್ಯಯರವರ ಸಂದರ್ಶನ ದಿನಾಂಕ ೧೭-೯-೨೦೧೦

ಹೀಗೆ ಡಾ.ಡಿ.ಎ. ಉಪಾಧ್ಯರವರು ಉತ್ತಮ ಅಧ್ಯಾಪಕರಾಗಿ ಕಲಾಸಾಹಿತಿಗಳಾಗಿ, ಚಲನಚಿತ್ರಗಳ ನಿರ್ದೇಶಕರಾಗಿ ನಟರಾಗಿ ಉತ್ತಮ ಕಾರ್ಯ ಮಾಡುವುದರ ಮೂಲಕ ದೃಶ್ಯಕಲೆಯಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಟಿ.ವಿ. ಗಣೇಶಗುಡಿ : ಟಿ.ವಿ.ಗಣೇಶಗುಡಿ ಇವರು ಹಾವೇರಿ ಜಿಲ್ಲೆಯ ಹಾನಗಲ್ಲಿನಲ್ಲಿ ೧೯೪೬ ಜೂನ್ ೨೪ ರಂದು ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯ ಕಡೆಗೆ ಆಸಕ್ತಿ ಹೊಂದಿದ ಇವರು ಉನ್ನತ ಚಿತ್ರಕಲಾ ಅಭ್ಯಾಸಕ್ಕಾಗಿ ಗದುಗಿನ ವಿಜಯ ಕಲಾಮಂದಿರಕ್ಕೆ ಪ್ರವೇಶ ಪಡೆದು ಉತ್ತಮ ಅಭ್ಯಾಸ ಮಾಡಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಡಿಪ್ಲೋಮಾ ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಪಡೆದುಕೊಂಡಿದ್ದಾರೆ. ಉತ್ತಮ ಕಲಾ ವಿದ್ಯಾರ್ಥಿಯಾದ ಇವರು ದಾವಣಗೆರೆ ವಿಶ್ವವಿದ್ಯಾಲಯದಿಂದ ಲಲಿತಕಲಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆಗೆ ಸೇರಿ ಉತ್ತಮ ಪಾಠಬೋಧನೆ ಮಾಡುತ್ತ ಶಿಲ್ಪಕಲಾ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದಾರೆ. ಶಿಲ್ಪಕಲಾವಿದರಾದ ಇವರು ಅನೇಕ ಕಲಾಕೃತಿಗಳನ್ನು ರಚಿಸವುದರ ಮೂಲಕ ಉತ್ತಮ ಕಲಾವಿದರಾಗಿ ತಮ್ಮ ಕಲಾಪ್ರೌಢಿಮೆ ಹೊಂದಿದ್ದಾರೆ. ಇವರ ಕಲಾಕೃತಿಗಾಗಿ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ, ಕನ್ನಡ ಸಾಹಿತ್ಯ ಸಮ್ಮೇಳನ ಪ್ರಶಸ್ತಿ, ದಾವಣಗೆರೆಯ ಲಯನ್ಸದಿಂದ ಪ್ರಶಸ್ತಿಗಳನ್ನು ಪಡೆದಿದ್ದು ಇವು ಪ್ರಮುಖ ಪ್ರಶಸ್ತಿಗಳಾಗಿವೆ. ಹಾಗೂ ಶ್ರೀಡಿ.ವಿ.ಗಣೇಶಗುಡಿ ಇವರು ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ಸನ್ಮಾನಗೊಂಡಿದ್ದಾರೆ. ಹಲವಾರು ಏಕವ್ಯಕ್ತಿ ಕಲಾಪ್ರದರ್ಶನ ಮಾಡಿದ್ದಾರೆ.

ಶ್ರೀ ಟಿ.ವಿ. ಗಣೇಶಗುಡಿಯವರು ತಮ್ಮ ಕಲಾಪ್ರದರ್ಶನದಲ್ಲಿ ಚಿತ್ರ ಮತ್ತು ಶಿಲ್ಪಕಲಾಕೃತಿಗಳು ಎರಡು ರೀತಿಯ ಕಲಾಕೃತಿ ರಚಿಸಿದ್ದು, ಹಲವಾರು ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಬುಡಕಟ್ಟು ಚಿತ್ರಕಲಾ ಶಿಬರ ಸ್ತಾರ (ಮಧ್ಯಪ್ರದೇಶ), ಶಿರಾಮಿರ್ಕ್ಸ ಕಲಾಶಿಬಿರ ಮದ್ರಾಸ್, ನೆಹರು ಜನ್ಮ ಶತಾಬ್ದಿ ಕಲಾಶಿಬಿರ ಬೆಂಗಳೂರು, ಸಿಲ್ಪಕಲಾ ಶಿಬಿರ ಶಿವಾರಪಟ್ಟಣ, ಜಲವರ್ಣ ಕಲಾಶಿಬಿರ ನಂದಿಬೆಟ್ಟ, ಟೆರಾಕುಟ್ಟ ಸಿಬಿರ ರಾಮನಗರ, ರಾಜ್ಯ ಕಲಾವಿದರ ಸಿಬಿರ ಮಡಿಕೇರಿ, ಚಿತ್ರದುರ್ಗ, ಪೂನಾ, ರಾಷ್ಟ್ರೀಯ ಜನಪದ ಕಲಾವಿದರ ಶಿಬಿರ ಮಥುರಾ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಶಿಬಿರ ಅಲಹಾಬಾದ್ ಮುಂತಾದ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿ ತಮ್ಮದೇಯಾದ ಕಲಾ ಕಾಣಿಕೆ ನೀಡಿದ್ದಾರೆ. ಮುಂಬಯಿ, ಬೆಂಗಳೂರು, ಮೈಸೂರು, ಗುಲಬರ್ಗಾ, ದಾವಣಗೆರೆ, ಧಾರವಾಡ, ಹುಬ್ಬಳ್ಳಿ, ಕೋಲ್ಕತ್ತಾ, ಮಂಗಳೂರು, ಹಂಪಿ, ಬಿಜಾಪುರ ಮತ್ತು ನವದೆಹಲಿ ಮುಂತಾದ ರಾಜ್ಯ, ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಟಿ.ಎಂ.ಗಣೇಶಗುಡಿಯವರು ರಚಿಸಿದ ಅನೇಕ ಉತ್ತಮ ಕಲಾಕೃತಿಗಳು ಮದ್ರಾಸ್, ನಾಗಪುರ, ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿ, ಗದಗ, ತುಮಕೂರು, ಹಂಪಿ, ದೇವನಹಳ್ಳಿ, ಚಿತ್ರದುರ್ಗ, ಅಕ್ಕಿಆಲೂರ, ಮಂಗಳೂರು ಅಮೇರಿಕಾ, ಇಸ್ರೇಲ್, ನಾರ್ವೆ, ಇಟಲಿ ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ.[೧೧೯] ಅನೇಕ ಕಡೆ ಗೌರವ ಉಪನ್ಯಾಸಕರಾಗಿ ಉತ್ತಮ ಕೆಲಸ ಮಾಡಿದ್ದಾರೆ.

೧೧೯. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯಕಲಾಮಂದಿರ ಕೊಡುಗೆ ಪು.ಸಂ. ೬೮

ಗದಗ, ಹಂಪಿ, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಬೇಲೂರು, ಹಳೆಬೀಡು ಮುಂತಾದ ಕಡೆಗಳಲ್ಲಿ ಕಲಾಪ್ರಾತ್ಯಕ್ಷಿತೆಯನ್ನು ನೀಡಿದ್ದಾರೆ. ಶ್ರೀ ಗಣೇಶಗುಡಿಯವರು ಅನೇಕ ಸಂಘ-ಸಂಸ್ಥೆಗಳಿಗೆ ಸದಸ್ಯರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ ಮುಂತಾದ ಶೈಕ್ಷಣಿಕ ಕೆಲಸಗಳನ್ನು ಮಾಡಿದ್ದಾರೆ. ಹೀಗೆ ಗಣೇಶಗುಡಿಯವರು ಉತ್ತಮ ಶಿಲ್ಪಕಲಾವಿದರಾಗಿ ಚಿತ್ರಕಲಾವಿದರಾಗಿ ಸೇವೆ ಸಲ್ಲಿಸಿ ಗದಗ ಜಿಲ್ಲೆಗೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ.

ಚಿದಾನಂದ ಗಣೇಶಗುಡಿ : ಶ್ರೀ ಚಿದಾನಂದ ಗಣೇಶಗುಡಿಯವರು ೧೯೫೪ ನವೆಂಬರ ೭ ರಂದು ಹಾವೇರಿ ಜಿಲ್ಲೆಯ ಹಾನಗಲ್ಲನಲ್ಲಿ ಜನಿಸಿದ್ದಾರೆ. ಚಿತ್ರಕಲಾ ಪದವಿಯನ್ನು ವಿಜಯ ಕಲಾಮಂದಿರದಿಂದ ಪಡೆದುಕೊಂಡಿದ್ದಾರೆ. ನಿಸರ್ಗಚಿತ್ರ ರಚನೆಯಲ್ಲಿ ಸಿದ್ಧಹಸ್ತರಾದ ಇವರು ಜಲವರ್ಣ,ತೈಲವರ್ಣ ಮಾಧ್ಯಮದಿಂದ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಹಲವಾರು ಚಿತ್ರಕಲಾ ಶಿಬಿರ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರು, ಮೈಸೂರು ದಾವಣಗೆರೆ ಹುಬ್ಬಳ್ಳಿ, ಹಾವೇರಿ ಧಾರವಾಡ ಮುಂತಾದ ಸ್ಥಳಗಳಲ್ಲಿ ಕಲಾಪ್ರದರ್ಶನ ಮಾಡಿ ತಮ್ಮ ಕಲಾಪ್ರತಿಭೆಯನ್ನು ಸಾಭಿತುಪಡಿಸಿಕೊಂಡದ್ದರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಇವರಿಂದ ಕಲಾಶಿಬಿರ, ಧಾರವಾಡ, ಮೈಸೂರು, ದಾವಣಗೇರೆ, ಗದಗ, ಮುಂತಾದ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಶ್ರೀ ಚಿದಾನಂದ ಗಣೇಶಗುಡಿಯವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ಜಲವರ್ಣ ಕಾರ್ಯಾಗಾರ, ಕಲಾಬರಹಗಾರ ಮುಂತಾದ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ಬೆಂಗಳೂರು, ದಾವಣಗೆರೆ, ಮೈಸೂರು, ಗದಗ, ಹಾವೇರಿ, ಹುಬ್ಬಳ್ಳಿ ಮುಂತಾದ ಅನೇಕ ಕಡೆಗಳಲ್ಲಿ ಗಣೇಶಗುಡಿಯವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಚಿದಾನಂದರವರು ಮೈಸೂರು ದಸರಾ ಕಲಾಪ್ರದರ್ಶನದ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ತೀರ್ಪುಗಾರರಾಗಿ ಉತ್ತಮ ಕಾರ್ಯನಿರ್ವಹಿಸಿದ್ದಾರೆ. ಶ್ರೀ ಚಿದಾನಂದ ಗಣೇಶಗುಡಿಯವರಿಗೆ ರಾಜ್ಯಮಟ್ಟದ ಕಲಾಪ್ರದರ್ಶನ ಪ್ರಶಸ್ತಿ, ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಮೈಸೂರು ದಸರಾ ಪ್ರಶಸ್ತಿ, ರಾಜ್ಯ ಸರಕಾರಿ ನೌಕರರ ಕ್ರೀಡಾಕೂಡ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಶ್ರೀ ಚಿದಾನಂದ ಗಣೇಶಗುಡಿಯವರ ಕಲಾಪ್ರತಿಭೆಯನ್ನು ಮೆಚ್ಚಿ ಹಲವಾರು ದಿನಪತ್ರಿಕೆಗಳಲ್ಲಿ ಲೇಖನಗಳು ಪ್ರಕಟಗೊಂಡಿವೆ.[೧೨೦] ೨೦೦೨ ಎಪ್ರಿಲ್ ೨೮ ರಂದು ಪ್ರಜಾವಾಣಿ ಕನ್ನಡ ದಿನಪತ್ರಿಕೆಯಲ್ಲಿ ನೈಜದೃಶ್ಯಗಳ ಪ್ರತಿಕೃತಿ ಗಣೇಶಗುಡಿ ಇವರತ ಎಂಬ ಲೇಖನವನ್ನು ಎಸ್.ಜ್.ಹುಸೇನಿ ಬರೆದಿದ್ದಾರೆ. ಧಾರವಾಡದಲ್ಲಿ ದಿನಾಂಕ ೨೯-೩-೧೯೯೯ ರಿಂದ ೨-೪-೧೯೯೯ರ ವರೆಗೆ ನಡೆದಿದ್ದು ಅವರ ಕುರಿತಾಗಿ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಲೇಖನ ಬಂದಿದೆ. ಜೀವಂತಿಕೆಯನ್ನು ಬಿಂಬಿಸಿದ ವರ್ಣ ಚಿತ್ರಗಳು ಎಂಬ ತಲೆಬರಹದ ಈ ಲೇಖನವನ್ನು ಕಲಾವಿದ ಡಿ.ಎಂ.ಬಡಿಗೇರ ಅವರು ಬರೆದಿದ್ದಾರೆ. ಇದಲ್ಲದೆ ಸ್ಟಾರ್ ಆಫ್ ಮೂಸೂರು ಎಂಬ ಇಂಗ್ಲೀಷ್ ದಿನಪತ್ರಿಕೆಯಲ್ಲಿ ಇವರ ಕಲಾಕೃತಿಗಳ ಕುರಿತು "ಸ್ಪೆಂಡರ್ ಆಫ್ ನೇಚರ್ ಆಜ್ಯ್ ಭಂಗಿ ಗ್ಯಾಲರಿ" ಎಂಬ ಲೇಖನವನ್ನು ಜಿ.ಟಿ.ನಾರಾಯಣರಾವ್ ಬರೆದಿದ್ದಾರೆ.[೧೨೧] ಹೀಗೆ ಗಣೇಶಗುಡಿಯವರು ಕಲಾಕೃತಿ ರಚಿಸುವುದರ ಮೂಲಕ ರಾಜ್ಯ ಮಟ್ಟದಲ್ಲಿ ನಿಸರ್ಗ ಕಲಾಕೃತಿ ರಚಿಸುವ ಕಲಾವಿದರಾಗಿದ್ದಾರೆ.

---

೧೨೦. ಚಿದಾನಂದ ಗಣೇಶ ಗುಡಿ ಇವರ ದಾಖಲೆಗಳು

೧೨೧, ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರದ ಕೊಡುಗೆ ಪು.ಸಂ. ೭೧

ಶ್ರೀ ಎಂ.ಜಿ. ವಾಚೇದಮಠ : ಎಂ.ಜಿ.ವಾಚೇದಮಠರವರು ಧಾರವಾಡ ಜಿಲ್ಲೆಯ ಕೂಗನೂರಿನಲ್ಲಿ ೧೯೩೩ರಲ್ಲಿ ಜನಿಸಿದರು. ಇವರು ಮುಂದೆ ಮುಂಬಯಿನ ನೂತನ ಕಲಾಮಂದಿರದಿಂದ ಡಿಪ್ಲೋಮಾ ಪರೀಕ್ಷೆಯನ್ನು ಪಾಸುಮಾಡಿಕೊಂಡರು. ನಂತರದ ದಿನಗಳಲ್ಲಿ ವಿಜಯ ಕಲಾಮಂದಿರದಿಂದ ಮಾಡಲಿಂಗನಲ್ಲಿ ಡಿಪ್ಲೋಮಾ ಪದವಿಯನ್ನು ಪಡೆದುಕೊಂಡರು. ಧಾರವಾಡದಲ್ಲಿ ಆರ್.ಎಲ್.ಪ್ರೌಢಶಾಲೆಯಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರ ಕಲಾಕೃತಿಗಳು ಮುಂಬಯಿ, ಗದಗ, ಧಾರವಾಡ, ಅಥಣಿಯಲ್ಲಿ ಪ್ರದರ್ಶನಗೊಂಡಿವೆ.

ರಾಜ್ಯ ಪಠ್ಯಪುಸ್ತಕ ರಚನಾ ಸಮಿತಿಯ ಕಲಾವಿದರಾಗಿ ಧಾರವಾಡ ಕಲಾಶಾಲೆಯಲ್ಲಿ ಪೋಸ್ಟ್ ಡಿಪ್ಲೋಮಾ ಕ್ಲಬನ ಸ್ಥಾಪಕರಾಗಿ ಕೆಲಸ ನಿರ್ವಹಿಸಿದ್ದಾರೆ. ಇವರ ಕಲಾಕೃತಿಗಳು ಮುಂಬಯಿ, ಧರವಾಡ, ಅಥಣಿ, ಸವದತ್ತಿ ಮತ್ತು ಗದಗನಲ್ಲಿ ಸಂಗ್ರಹಗೊಂಡಿವೆ. ಇವರ ಕಲಾಬದುಕು ಕುರಿತು ಪದವಿ ಮಟ್ಟ ವಿದ್ಯಾರ್ಥಿಯೊಬ್ಬರು ಕೀರು ಪ್ರಬಂಧವನ್ನು ರಚನೆ ಮಾಡಿದ್ದಾರೆ. ಚಿತ್ರಕಲೆಯ ಪ್ರಕಾರದಲ್ಲಿ ಹಲವು ವೈವಿದ್ಯತೆಗಳಿದ್ದು ರೇಖಾ ಚಿತ್ರಗಳಲ್ಲಿ ಇವರು ಪ್ರಬುದ್ಧತೆ ಪಡೆದವರು. ಇವರ ಕಲಾಕೃತಿಗಳಲ್ಲಿ ಪ್ರಾಣಿ, ಪಕ್ಷಿಗಳು, ಆಕಳು ಮತ್ತು ನಾಯಿ, ಕುದುರೆಗಳಂಥಹ ಸಾಕು ಪ್ರಾಣಿಗಳ ರೇಖಾಚಿತ್ರಗಳನ್ನು ವಿವಿಧ ವಿನ್ಯಾಸಗಳಲ್ಲಿ ಇವರು ರಚನೆ ಮಾಡಿದ್ದಾರೆ. ಬಿಳಿ ಹಾಳೆಯ ಭಾಗವನ್ನು ಬಿಡದೆ ಸಂಪೂರ್ಣವಾಗಿ ಕಿರು ರೇಖಾಚಿತ್ರಗಳಿಂದ ಅವುಗಳನ್ನು ತುಂಬಿಸುವುದು ಇವರ ವಿಶೇಷತೆಯಾಗಿದೆ.[೧೨೨]

ಪ್ರಾ. ಸಿ.ಬಿ. ಕಾಚಾಪೂರ : ಇವರು ಗುಲಬರ್ಗಾ ಜಿಲ್ಲೆಯಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರ ಕಲೆಯಲ್ಲಿ ಆಸಕ್ತಿಯನ್ನು ಹೊಂದಿದ ಇವರು ಉನ್ನತ ಚಿತ್ರಕಲಾ ಅಭ್ಯಾಸಕ್ಕಾಗಿ ವಿಜಯಕಲಾ ಮಂದಿರಕ್ಕೆ ಪ್ರವೇಶಪಡೆದರು. ಎಂ.ಎ. ಮತ್ತು ಡಿಪ್ಲೋಮಾ ಪರೀಕ್ಷೆಗಳನ್ನು ಪಾಸುಮಾಡಿಕೊಂಡರು. ದೆಹಲಿಯ ಗಡಿ ಸ್ಟುಡಿಯೊದಲ್ಲಿ ಗ್ರಾಫಿಕ್ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಅಲ್ಲದೆ ಕಲಾ ಇತಿಹಾಸದಲ್ಲಿ ಡಿಪ್ಲೋಮಾ ಪಾಸಾಗಿದ್ದು ಎಂ.ಎ. ಡ್ರಾಯಿಂಗ್ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ. ಸದಾ ಕ್ರೀಯಾಶೀಲರಾದ ಸಿ.ಬಿ.ಕಾಚಾಪೂರರವರು ಶ್ರೀ ಸಿದ್ಧೇಶ್ವರ ಲಲಿತಕಲಾ ಮಹಾವಿದ್ಯಾಲಯದ ಪ್ರಾಚ್ಯಾರ್ಯರಾಗಿ ಚಿತ್ರಕಲಾ ಮಹಾವಿದ್ಯಾಲಯವನ್ನು ರಾಜ್ಯದಲ್ಲಿಯೇ ಮಾದರಿಯ ಚಿತ್ರಕಲಾ ಮಹಾವಿದ್ಯಾಲಯನ್ನಾಗಿ ಬೆಳೆಸಿದ್ದಾರೆ. ಸಾಮಾಜಿಕ ಚಿಂತಕರಾದ ಕಾಚಾಪುರ ಅವರು ಚಿತ್ರಕಲೆಯ ಜೊತೆಗೆ ಸಾಮಾಜಿಕ ರಂಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವಿವಿಧ ಸಂಘ-ಸಂಸ್ಥೆಗಳಲ್ಲಿ ಸದಸ್ಯರಾಗಿ ಸಕ್ರೀಯವಾದ ಕೆಲಸ ಮಾಡುತ್ತಿದ್ದಾರೆ. ಲಲಿತ ಕಲಾಸಂಘ, ಬಿಜಾಪೂರ, ಕರ್ನಾಟಕ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘ, ಧಾರವಾಡ, ಇದರ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಸಿದ್ಧಲಿಂಗ ಲಲಿತಕಲಾ ಅಕ್ಯಾಡೆಮಿಯಿಂದ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದಾರೆ. ಉತ್ತಮ ಆಡಳಿತಗಾರರಾದ ಶ್ರೀ ಸಿಬಿಕಾಚಾಪೂರವರು ಉತ್ತಮ ಕಲಾವಿದರು ಇವರ ಅನೇಕ ಕಲಾಪ್ರದರ್ಶನಗಳು ಬಿಜಾಪೂರ, ದೆಹಲಿ, ಮೈಸೂರು, ಬೆಂಗಳೂರು, ಬೆಳಗಾಂವ, ಗದಗ, ಮುಂತಾದ ಸ್ಥಳಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ.[೧೨೩]

---

೧೨೨. ಎಂ.ಜೆ. ವಾಚೆದಮಠರವರ ಸಂದರ್ಶನ ದಿನಾಂಕ: ೨೮-೧೦-೨೦೧೦

೧೨೩. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯಕಲಾ ಮಂದಿರ ಕೊಡುಗೆ ಪು.ಸಂ. ೬೯

ಶ್ರೀ ಸಿ.ಬಿ. ಕಾಚಾಪೂರವರ ಅನೇಕ ಕಲಾಕೃತಿಗಳು ಬೆಂಗಳೂರು, ಬಿಜಾಪೂರ, ದೆಹಲಿ, ಮೈಸೂರ, ಬೆಂಗಳೂರು ಗದಗ, ಮುಂತಾದ ಪ್ರಮುಖ ಸ್ಥಳಗಳಲ್ಲಿ ಸಂಗ್ರಹಗೊಂಡಿವೆ. ದಕ್ಷ ಆಡಳಿತ, ಪ್ರಾಮಾಣಿಕ ಸೇವೆ ಮತ್ತು ಉತ್ತಮಕಲಾ ಪ್ರತಿಭೆಗಳನ್ನು ಮೆಚ್ಚಿ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ.[೧೨೪] ಶ್ರೀ ಟಿ.ಪಿ. ಅಕ್ಕಿ ಸ್ಮಾರಕ ಪ್ರಶಸ್ತಿಗಳು ಇವರಿಗೆ ಲಭಿಸಿದೆ. ಇವರು ಚಿತ್ರಕಲೆಯಲ್ಲಿ ಉತ್ತಮ ಕಲಾವಿದರಾಗಿ, ದಕ್ಷ ಆಡಳಿತಗಾರರಾಗಿ ಸೇವೆಸಲ್ಲಿಸವೂದರ ಜೊತೆಗೆ ಸಿದ್ಧೇಶ್ವರ ಶಿಕ್ಷಣಸಂಸ್ಥೆಗೆ ತಾವು ಕಲಿತ ಸಂಸ್ಥೆಗೆ ಕಿರ್ತಿ ತಂದಿದ್ದಾರೆ.

ಎಂ.ಜೆ. ಬಂಗ್ಲೇವಾಲೆ : ಎಂ.ಜೆ.ಬಂಗ್ಲೇವಾಲೆಯವರು ೧೯೫೪ರಂದು ರಾಣೆಬೆನ್ನೂರಲ್ಲಿ ಜನಿಸಿದ್ದಾರೆ. ಪ್ರಾಥಮಿಕ ಹಂತದಲ್ಲಿಯೇ ಚಿತ್ರಕಲೆಯ ಗೀಳಿಗೆ ಅಂಟಿಕೊಂಡಿದ್ದ ಬಂಗ್ಲೇವಾಲೆಯವರು ಉನ್ನತ ಶಿಕ್ಷಣಕ್ಕಾಗಿ ಗದುಗಿನ ವಿಜಯ ಕಲಾಮಂದಿರದಲ್ಲಿ ೧೯೭೪ರಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಪರೀಕ್ಷೆಯನ್ನು ಪಾಸುಮಾಡಿಕೊಂಡಿದ್ದಾರೆ. ಸೃಜನಾತ್ಮಕ ಕಲಾಕೃತಿಗಳನ್ನು ರಚಿಸುವುದರ ಮೂಲಕ ರಾಜ್ಯ ಹೊರರಾಜ್ಯದಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಮೈಸೂರು, ಬೆಂಗಳೂರು, ಗೋವಾ, ಹುಬ್ಬಳ್ಳಿ, ಗದಗ, ಧಾರವಾಡ, ಮುಂಬೈ, ದೆಹಲಿ, ಚೆನ್ನೈ ಮುಂತಾದ ಅನೇಕ ಕಡೆ ಕಲಾಪ್ರದರ್ಶನ ಮಾಡಿದ್ದಾರೆ."[೧೨೫]

ಎಂ.ಜೆ.ಬಂಗ್ಲೇವಾಲೆಯವರು ಗದಗ, ಹುಬ್ಬಳ್ಳಿ, ಬೆಂಗಳೂರು, ಮೈಸೂರು, ಗೋವಾ ಮುಂತಾದ ಪ್ರಮುಖ ಸ್ಥಳಗಳಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ, ಚಿತ್ರಸಂಯೋಜನೆ, ಸೃಜನಾತ್ಮಕ ಕಲಾಕೃತಿಗಳನ್ನು ಬಣ್ಣಗಳ ಬಳಕೆಯಿಂದ ಉತ್ತಮ ರೀತಿಯಲ್ಲಿ ಹಲವಾರು ಕಲಾಶಿಬರಿಗಳಲ್ಲಿ ಭಾಗವಹಿಸಿ ಉತ್ತಮ ಕಲಾವಿದರಾಗಿದ್ದಾರೆ. ರಾಜ್ಯದ ಅನೇಕ ಚಿತ್ರಕಲಾವಿದ್ಯಾಲಯಗಳಲ್ಲಿ ಚಿತ್ರಕಲಾ ಪ್ರಾತ್ಯಕ್ಷಿತೆಯನ್ನು ಮಾಡಿದ್ದಾರೆ. ಕಲಾ ಇತಿಹಾಸ ವಿಷಯದಲ್ಲಿ ಆಸಕ್ತಿ ಹೊಂದಿರುವ ಬಂಗ್ಲೆವಾಲೆಯವರು ಅನೇಕ ಚಿತ್ರಕಲಾ ವಿದ್ಯಾಲಯದಲ್ಲಿ ಚಿತ್ರಕಲಾ ವಿಷಯದ ಮೇಲೆ ಉಪನ್ಯಾಸವನ್ನು ಮಾಡಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ಹಲವಾರು ಹೊಸ ಹೊಸ ವಿಚಾರ ವಿನಮಯ ಮಾಡುವುದರ ಮೂಲಕ ಎಲ್ಲರ ಪ್ರೀತಿಯ ಗುರುಗಳಾಗಿದ್ದಾರೆ.

ಎಂ.ಜೆ. ಬಂಗ್ಲೇವಾಲೆಯವರ ಕಲಾಪ್ರೌಢಿಮೆಯನ್ನು ಅನೇಕ ಸಂಘ-ಸಂಸ್ಥೆಗಳು ಇವರಿಗೆ ಸನ್ಮಾನ ಮಾಡಿ ಪ್ರೋತ್ಸಾಹಿಸಿವೆ. ಅನೇಕ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಅಖಿಲ ಭಾರತ ಭಿತ್ತಿಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನ ಪಡೆದಕೊಂಡಿದ್ದಾರೆ. ರೊಟರಿ ಕ್ಲಬ್‌ದಿಂದ ಅಂತಾರಾಷ್ಟ್ರೀಯ ಬಹುಮಾನ, ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಮೂವತ್ತೆರಡನೆಯ ವಾರ್ಷಿಕ ಕಲಾಪ್ರದರ್ಶನದಲ್ಲಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಸದಾ ಕ್ರಿಯಾಶೀಲರಾದ ಶ್ರೀ ಎಂ.ಜೆ. ಬಂಗ್ಲೆವಾಲೆಯವರು ಹಲವಾರು ಸಂಘ-ಸಂಸ್ಥೆಗಳ ಸದಸ್ಯರಾಗಿ ಸಕ್ರೀಯವಾಗಿ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ಚಿತ್ರಕಲಾ ಮಹಾವಿದ್ಯಾಲಯಗಳ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ.

೧೨೪. ಸಿ.ಬಿ. ಕಾಚಾಪೂರರವರ ದಾಖಲಾತಿಗಳಿಂದ ಸಂಗ್ರಹ

೧೨೫. ಎಂ.ಜೆ. ಬಂಗ್ಲೇವಾಲೆಯವರ ಸಂದರ್ಶನ ದಿನಾಂಕ: ೨೭-೧೧-೨೦೧೦

ಕಲೆಯೇ ಜೀವನ ಎಂದು ನಂಬಿರುವ ಬಂಗ್ಲೇವಾಲೆಯವರು ಹತ್ತು ಹಲವಾರು ಚಿತ್ರಕಲಾ ಪ್ರದರ್ಶನ, ಕಲಾಶಿಬಿರ ಮಾಡಿ ಉತ್ತಮ ಕಲಾವಿದರಾಗಿದ್ದಾರೆ. ಇವರ ಅನೇಕ ಉತ್ತಮ ಕಲಾಕೃತಿಗಳು ದೆಹಲಿ, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ತುಮಕೂರು, ಬಿಜಾಪೂರ, ಹಾವೇರಿ, ಗದಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಮುಂಬೈ ಮುಂತಾದ ಅನೇಕ ಕಡೆ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಸಧ್ಯ ಇವರು ಶ್ರೀ ವಿಜಯ ಮಹಾಂತೇಶ ಚಿತ್ರಕಲಾ ಮಹಾವಿದ್ಯಾಲಯ, ಹುಬ್ಬಳ್ಳಿಯಲ್ಲಿ ಹಿರಿಯ ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸಿಸುತ್ತಿದ್ದಾರೆ.[೧೨೬]

ಸುರೇಶ ಕುಲಕರ್ಣಿ : ಕಲಾವಿದ ಸುರೇಶ ಕುಲಕರ್ಣಿಯವರು ೨೫-೫-೧೯೪೮ರಂದು ಶಿರಹಟ್ಟಿ ತಾಲೂಕಿನ ಪುಟ್ಟಗ್ರಾಮ ಬನ್ನಕೊಪ್ಪದಲ್ಲಿ ಜನಿಸಿದರು. ತಂದೆ ವೆಂಕಟೇಶ ತಾಯಿ ಪದ್ಮಾವತಿ. ಆರು ಜನ ಅಣ್ಣತಮ್ಮಂದಿರು, ಮೂರು ಜನ ಅಕ್ಕತಂಗಿಯರು ಸುರೇಶ ಕುಲಕರ್ಣಿಯವರು ಬಾಲ್ಯದಲ್ಲಿ ಬಣ್ಣ ಬಣ್ಣದ ಗಾಳಿಪಟಗಳನ್ನು ತಯಾರಿಸುತ್ತಿದ್ದರು. ಮಣ್ಣೆತ್ತಿನ ಅಮವಾಸ್ಯೆ ಬಂದರೆ ಬಸವಣ್ಣಗಳನ್ನು ಮಣ್ಣಿನಿಂದ ತಯಾರಿಸುತ್ತಿದ್ದರು. ಗೋಕುಲಾಷ್ಟಮಿ ಬಂದರೆ ಕೃಷ್ಣ ಬಲರಾಮನ ಗೊಂಬೆಗಳನ್ನು ಮಾಡುವುದು ಮತ್ತು ವೇಷಗಳನ್ನು ಹಾಕಿಸುವುದು ಇವುಗಳೆನ್ನಲ್ಲ ಬಹಳ ಸುಂದರವಾಗಿ ಮಾಡುತ್ತಿದ್ದರು. ಮತ್ತು ಕಾರ್ಯಕ್ರಮದಲ್ಲಿ ಹಾಡಿಗೆ ತಕ್ಕ ರಂಗೋಲಿ ಹಾಕುವುದು, ಡೊಳ್ಳಿನ ಪದ ಹಾಡುತ್ತ ಹಾಡುತ್ತಾ ಕುಣಿಯುವುದು ಹೀಗೆ ಇವರ ಬಾಲ್ಯ ಜೀವನದೊಳಗೆ ಸೌಂದರ್ಯಪ್ರಜ್ಞೆ ಮೂಡಿತು. ಸುರೇಶ ಕುಲಕರ್ಣಿಯವರು ಚಿತ್ರಕಲಾ ಶಿಕ್ಷಣಕ್ಕೆ ಗದುಗಿನ ವಿಜಯ ಕಲಾಮಂದಿರದಲ್ಲಿ ಡಿ.ಟಿ.ಸಿ. ಕೋರ್ಸಿಗೆ ಪ್ರವೇಶ ಪಡೆದರು. ಅಲ್ಲಿಂದ ಚಿತ್ರಕಲಾ ಶಿಕ್ಷಣ ಪ್ರಾರಂಭವಾಯಿತು. ಚಿತ್ರಕಲಾ ವಿಷಯಗಳಲ್ಲಿ ಪರಿಪೂರ್ಣರಾದ ಗುರುಗಳಿಂದ ಶಿಕ್ಷಣ ಪಡೆದು ೧೯೬೬ರಲ್ಲಿ ಡ್ರಾಯಿಂಗ್ ಟೀಚರ್ ಕೋರ್ಸನ್ನು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಾಸಾದರು ೧೯೭೪ರಲ್ಲಿ ಆರ್ಟ್ ಮಾಸ್ಟರ್, ೧೯೭೫ರಲ್ಲಿ ಜಿ.ಡಿ.ಆರ್ಟ್‌ನ್ನು ಉಚ್ಚ ಶ್ರೇಣಿಯಲ್ಲಿ ಪಾಸಾದರು. ಮುಂದೆ ಧಾರವಾಡದಲ್ಲಿ ದ.ರಾ.ಬೇಂದ್ರೆಯವರು ೧೯೭೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಒನ್ ಮ್ಯಾನ್ ಷೋ ಇವರ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಚಿತ್ರಗಳು ಅದ್ಭುತವಾಗಿವೆ ಎಂದು ಬಣ್ಣಿಸಿದರು. ೧೯೭೧ರಲ್ಲಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಏರ್ಪಡಿಸಿದ ಚಿತ್ರಕಲಾ ಸ್ಪರ್ಧೆಯನ್ನು "Dream" ಚಿತ್ರಕ್ಕೆ ಪ್ರಥಮ ಬಹುಮಾನ ಪಡೆದಿದ್ದಾರೆ. ೧೯೭೭ರಲ್ಲಿ ಇಂಟರ್ ಮಿಡಿಯೆಟ್ ಮಾಡೆಲಿಂಗ್‌ದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ ಹೀಗೆ ಸುರೇಶ ಕುಲಕರ್ಣಿಯವರು ನಿಸರ್ಗಪ್ರಿಯ ಕಲಾವಿದರಲ್ಲಿ ಅಪರೂಪದ ವ್ಯಕ್ತಿ.

ಸುರೇಶ ಕುಲಕರ್ಣಿಯವರು ಧಾರವಾಡದ ಕೆ.ಇ.ಬೋರ್ಡ ಸಂಸ್ಥೆಯಲ್ಲಿ ೧೯೭೬ರಲ್ಲಿ ಶಿಕ್ಷಕರಾಗಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷಣವನ್ನು ಉತ್ತಮವಾಗಿ ನೀಡಿದ್ದಾರೆ. ಹೀಗಾಗಿ ಉತ್ತಮ ಚಿತ್ರಕಲಾ ಶಿಕ್ಷಕರಾಗಿ ಜನಪ್ರಿಯರಾದರೂ ಇವರು ಸೂಕ್ಷ್ಮ ಚಿತ್ರಗಾರ ಎಂದು ಡಾ. ದ.ರಾ.ಬೇಂದ್ರೆಯವರಿಂದ ಸನ್ಮಾನಿತರಾಗಿದ್ದಾರೆ. ೧೯೯೨ರಲ್ಲಿ ಆದರ್ಶ ಗುರು ಎಂದು ರಾಜ್ಯ ಪ್ರಶಸ್ತಿ ಪೂಜ್ಯ ಶ್ರೀ ಸಾಯಿಬಾಬಾ ಅವರಿಂದ ಸ್ವೀಕರಿಸಿದ್ದಾರೆ. ೧೯೯೨ರಲ್ಲಿ ಶಿಕ್ಷಕರಾದ ಧೀಮಂತರು ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯಿಂದ ಸತ್ಕರಿಸಲಾಗಿದೆ. ೧೯೯೫ರಲ್ಲಿ ಜಿಲ್ಲೆಯ

೧೨೬. ಎಂ.ಜೆ. ಬಂಗ್ಲೇವಾಲೆಯವರ ದಾಖಲಾತಿಗಳಿಂದ

ಅತ್ಯತ್ತಮ ಶಿಕ್ಷಕ ಪ್ರಶಸ್ತಿ ಪಡೆದಿದ್ದಾರೆ. ಕಲಾವಿದರು ಮುಖ್ಯೋಪಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಹೀಗೆ ಅವರು ಶಿಕ್ಷಕ ವೃತ್ತಿಯನ್ನು ಅತೀ ಉತ್ಸಾಹದಿಂದ ಸೇವೆ ಸಲ್ಲಿಸಿದ್ದಾರೆ.[೧೨೭]

ಸುರೇಶ ಕುಲಕರ್ಣಿಯವರು ರೇಖಾಚಿತ್ರಗಳು, ವರ್ಣಚಿತ್ರಗಳು, ಭಾವಚಿತ್ರಗಳು, ರಂಗೋಲಿಗಳಲ್ಲಿ, ಪೂರ್ವ ಭಾರತ, ಉತ್ತರ ಭಾರತ ದಕ್ಷಿಣ ಭಾರತ, ಪಶ್ಚಿಮ ಭಾರತದ ರಂಗೋಲಿ ಹೀಗೆ ಭಾರತದ ಎಲ್ಲ ರಾಜ್ಯದ ರಂಗೋಲಿಗಳನ್ನು ಚಿತ್ರಿಸಿದ್ದಾರೆ. ಹಾಗೂ ಅ ರಂಗೋಲಿಯ ಅರ್ಥಗಳನ್ನು ಕೂಡ ಅಭ್ಯಸಿಸಿ, ಪ್ರಸ್ತುತಪಡಿಸಿದ್ದಾರೆ. ಮತ್ತು ಮುಖಪುಟ ಚಿತ್ರಗಳನ್ನು ಕೂಡ ರಚಿಸಿದ್ದಾರೆ. ಜೊತೆಗೆ ಕಂಪ್ಯೂಟರ ಚಿತ್ರಗಳನ್ನು ರಚನೆ ಮಾಡಿದ್ದಾರೆ. ಜಲವರ್ಣದ ಭೂದೃಶ್ಯಗಳು, ಮಿಶ್ರ ಮಾಧ್ಯಮದ ಚಿತ್ರಗಳು ಮೈಕ್ರೋಸ್ಕೋಪ್ ಚಿತ್ರಗಳನ್ನು ಕೂಡ ಸುಂದರವಾಗಿ ರಚನೆ ಮಾಡಿದ್ದಾರೆ. ಇವರ ಕಲಾಕೃತಿಗಳ ಕುರಿತು ಶ್ರೀ ಗಿರೀಶ ಕಾರ್ನಾಡ, ಕೀರ್ತಿನಾಥ ಕುರ್ತಕೋಟಿ, ವಾಮನ ಬೇಂದ್ರೆ ಹೀಗೆ ಅನೇಕ ಪ್ರಖ್ಯಾತ ಸಾಹಿತಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸನ್ಮಾನಗಳು : ೧೯೮೯ರಲ್ಲಿ "ರಾಷ್ಟ್ರೀಯ ಪ್ರಶಸ್ತಿ" ಭಾವೈಕ್ಯತೆ ಶಿವಿರದ ಮೂಲಕ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಸಮಗ್ರ ಮನೋಭಾವ ಬೆಳವಣಿಗೆ ಒಂದು ಪುನರಾವಲೋಕನ ಅಧ್ಯಯನಕ್ಕೆ ಎನ್.ಸಿ.ಇ.ಆರ್.ಟಿಯ ಪ್ರಶಸ್ತಿ ನಿಧಿಯಿಂದ.[೧೨೮] ೧೯೯೬ರಲ್ಲಿ ಶಾರದಾ ಶಲ್ಮಲ, ಪ್ರಶಸ್ತಿ ಪದ್ಮಶ್ರೀ ಗಂಗೂಬಾಯಿ ಹಾನಗಲ್ ಅವರಿಂದ ಸತ್ಕಾರ, ೨೦೦೫ರಲ್ಲಿ ನೋಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿಗಳು ಎಂಬ ಪುಸ್ತಕಕ್ಕೆ ಡಾ.ಸ.ಜ.ನಾಗಲೋಟಿಮಠ ವಿಜ್ಞಾನ ಸಾಹಿತ್ಯ ಪ್ರಶಸ್ತಿ ದೊರಕಿದೆ.

ಡಿ.ಎಂ.ಬಡಿಗೇರ : ಶ್ರೀ ದೇವೆಂದ್ರಪ್ಪಅವರು ಬಿಜಾಪೂರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಬಳಗಾನೂರು ಎಂಬ ಗ್ರಾಮದಲ್ಲಿ ೧೯೫೪ರಲ್ಲಿ ಜನಿಸಿದರು. ತಂದೆ ಮಾನಪ್ಪ ಕಟ್ಟಿಗೆಯ ಕೆತ್ತನೆ ಕೆಲಸದಲ್ಲಿ ಸಿದ್ಧಹಸ್ತರು. ತಂದೆಯವರಿಂದ ಪ್ರಭಾವಿತರಾದ ದೇವೆಂದ್ರಪ್ಪ ಪ್ರಾಥಮಿಕ ಶಿಕ್ಷಣವನ್ನು ಬಳಗಾನೂರಲ್ಲಿ, ಪ್ರೌಢಶಿಕ್ಷಣವನ್ನು ಬಾಗಲಕೋಟೆಯಲ್ಲಿ ಪೂರೈಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿ ಇದ್ದ ದೇವೆಂದ್ರಪ್ಪ ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ಗದುಗಿನ ವಿಜಯ ಕಲಾಮಂದಿರದಲ್ಲಿ ಪ್ರವೇಶ ಪಡೆದರು. ಖ್ಯಾತ ಕಲಾವಿದರಾದ ಎಂ.ಎ. ಚೆಟ್ಟಿ, ಸಿ.ಎನ್.ಪಾಟೀಲ, ಟಿ.ಪಿ.ಅಕ್ಕಿ, ಮುಂತಾದ ಶಿಕ್ಷಕರ ಮಾರ್ಗದರ್ಶನದಲ್ಲಿ ಉತ್ತಮ ಕಲಾಶಿಕ್ಷಣ ಪಡೆದರು. ಆರ್ಟ್ ಮಾಸ್ಟರ್ ಡಿಪ್ಲೋಮಾ, ಡ್ರಾಯಿಂಗ್ ಮತ್ತು ಪೇಂಟಿಂಗ್ ಡಿಪ್ಲೋಮಾ ಪದವಿಯನ್ನು ಮುಗಿಸಿದರು.

ಡಿ.ಎಂ.ಬಡಿಗೇರರವರು ೧೯೭೪ರಲ್ಲಿ ಕಾರವಾರದ ಸರಕಾರಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಪ್ರಾರಂಭಿಸಿದರು. ನಂತರ ಬಿಜಾಪುರ ಜಿಲ್ಲೆಯ ಹುನಗುಂದ ಡೈಯಟ್‌ನಲ್ಲಿ ಸೇವೆ ಸಲ್ಲಿಸಿ, ಅಲ್ಲಿಂದ ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯಕ್ಕೆ ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸುತ್ತ ಅನೇಕ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ಮಾಡಿದ್ದಾರೆ. ನಿಸರ್ಗಚಿತ್ರ, ಚಿತ್ರಸಂಯೋಜನೆ, ಸೃಜನಾತ್ಮಕ ಕಲೆ, ಭಾವಚಿತ್ರಗಳನ್ನು ಜಲವರ್ಣ, ತೈಲವರ್ಣ, ಅಕ್ರಾಲಿಕ್ ಮಾಧ್ಯಮಗಳಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಸದಾ ಕ್ರಿಯಾಶೀಲರಾದ ಶ್ರೀ ದೇವೇಂದ್ರಪ್ಪ

೧೨೭. ಸುರೇಶ ಕುಲಕರ್ಣಿಯವರ ಸಂದರ್ಶನ ದಿನಾಂಕ: ೪-೧-೨೦೧೦
೧೨೮. ಸುರೇಶ ಕುಲಕರ್ಣಿಯವರ ಪರಿಚಯ ಪತ್ರ

ಬಡಿಗೇರ ಎಂ.ವಿ.ಎ. ಸ್ನಾತಕೋತ್ತರ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಡೆದುಕೊಂಡಿದ್ದಾರೆ.

ಶ್ರೀ ಡಿ.ಎಂ.ಬಡಿಗೇರರವರು ಕಲಾಕೃತಿ ರಚನೆಯಲ್ಲಿ ಸಾಕಷ್ಟು ಕೃಷಿ ಮಾಡಿದ ಇವರು ೧೯೭೬ರಲ್ಲಿ ಧಾರವಾಡ, ೧೯೮೪ರಲ್ಲಿ ನವದೆಹಲಿ, ೧೯೮೮, ೯೦ರಲ್ಲಿ ರಾಜ್ಯ ಹೊರರಾಜ್ಯಗಳಲ್ಲಿ ಅನೇಕ ಗುಂಪು ಪ್ರದರ್ಶನ ಮಾಡಿದ್ದಾರೆ.[೧೨೯] ಇವುಗಳಲ್ಲಿ ಬೆಂಗಳೂರು, ಬಿಜಾಪುರ, ಧಾರವಾಡ, ಜೈಪುರ, ಚೆನ್ನೈ, ನವದೆಹಲಿ, ಮುಂಬೈ ಮುಂತಾದ ಕಡೆಗಳಲ್ಲಿ ಪ್ರದರ್ಶನ ಮಾಡಿ ಸಮರ್ಥ ಕಲಾವಿದರೆನಿಸಿಕೊಂಡಿದ್ದಾರೆ. ಸದಾ ಕಲಾಚಟುವಟಿಕೆಯಲ್ಲಿರುವ ಬಡಿಗೇರರವರು೧ ಬೆಂಗಳೂರು, ದೆಹಲಿ, ರಾಜಸ್ಥಾನ, ತಮಿಳುನಾಡು, ಕಾರವಾರ, ಮೈಸೂರು, ಗುಲಬರ್ಗಾ, ಹೈದರಾಬಾದ, ಹುಬ್ಬಳ್ಳಿ, ಗದಗ ಹಂಪಿ ಮುಂತಾದ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿ ಸೃಜನಾತ್ಮಕ ಕಲಾಕೃತಿಗಳನ್ನು ರಚಸಿದ್ದಾರೆ. ಅನೇಕ ಕಡೆ ಪ್ರಾತ್ಯಕ್ಷಿಕೆ, ಉಪನ್ಯಾಸ ನೀಡಿದ್ದಾರೆ. ಹಲವು ವಿಚಾರ ಸಂಕೀರಣಗಳಲ್ಲಿ ಭಾಗವಹಿಸಿದ್ದಾರೆ.

ದೇವೇಂದ್ರಪ್ಪನವರಿಗೆ ೧೯೯೩ರಲ್ಲಿ ವಿಜಾಪುರದಲ್ಲಿ ರಾಜ್ಯಮಟ್ಟದಲ್ಲಿ ಪ್ರಶಸ್ತಿ ಲಭಿಸಿದೆ. ೧೯೯೪-೯೫ರಲ್ಲಿ ಮೈಸೂರು ದಸರಾ ಪ್ರಶಸ್ತಿ, ೧೯೯೫ರಲ್ಲಿ ಆದರ್ಶ ಚಿತ್ರಕಲಾ ಶಿಕ್ಷಕ ಪ್ರಶಸ್ತಿ, ಅಲ್ಲದೇ ಹಲವಾರು ಸಂಘ-ಸಂಸ್ಥೆಗಳಿಂದ ಪ್ರಶಸ್ತಿ-ಪುರಸ್ಕಾರಗಳನ್ನು ಪಡೆದಿದ್ದಾರೆ[೧೩೦]. ಸದಾ ಕಲಾಚಟುವಟಿಕೆಯಲ್ಲಿರುವ ಶ್ರೀ ಡಿ.ಎಂ.ಬಡಿಗೇರ ಅವರು ಹಲವಾರು ಉತ್ತಮ ಕಲಾಕೃತಿಗಳು ಹಂಪಿ, ಧಾರವಾಡ, ದೆಹಲಿ, ಮೈಸೂರು, ಧಾರವಾಡ ಮತ್ತು ದೇಶ ವಿದೇಶಗಳಲ್ಲಿ ಸಂಗ್ರಹಿತಗೊಂಡಿವೆ. ಇವರು ಫೋಟೋಗ್ರಾಫಿಯಲ್ಲಿ ಎತ್ತಿದ ಕೈ, ಉತ್ತಮ ಕಲಾಕೃತಿಗಳಿಂದ ಕೂಡಿದ ಹಳೆ ಕ್ಯಾಲೆಂಡರ್, ಅಂಚೆಚೀಟಿ, ನಾಣ್ಯ ಸಂಗ್ರಹ ಇವರ ಹವ್ಯಾಸಗಳು, ಉತ್ತಮ ಕೆಲಸಗಾರರಾದ ಶ್ರೀ ದೇವೇಂದ್ರಪ್ಪನವರು ಹಲವಾರು ಸಂಘ-ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಕಲಾ ಸೇವೆಯನ್ನು ಮೆಚ್ಚಿ ಸರಕಾರವು ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯತ್ವ ನೀಡಿ ಗೌರವಿಸಿದೆ. ಸದಸ್ಯರಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ.

ಹೀಗೆ ದೇವೇಂದ್ರಪ್ಪ ಮಾನಪ್ಪ ಬಡಿಗೇರ ಇವರು ಸೃಜನಾತ್ಮಕ ಕಲಾಕೃತಿ ರಚಿಸುವುದರ ಮೂಲಕ ಪ್ರಾತ್ಯಕ್ಷಿಕೆ ನೀಡುವುದರ ಮೂಲಕ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಬೆಳೆದಿದ್ದಾರೆ.

ಎನ್. ಎಂ. ದಾಟನಾಳ : ಶ್ರೀ ಎನ್.ಎಂ. ದಾಟನಾಳರವರು ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ದಾಟನಾಳದಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿಯನ್ನು ಹೊಂದಿದ ಇವರು ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ಗದುಗಿನ ವಿಜಯಕಲಾಮಂದಿರಕ್ಕೆ ಪ್ರವೇಶಪಡೆದು ಎಲ್ಲ ಶಿಕ್ಷಕರ ಪ್ರೀತಿಯ ಶಿಷ್ಯರಾಗಿ ಆರ್ಟ್‌ಮಾಸ್ಟರ ಪರೀಕ್ಷೆಯನ್ನು ಪಾಸುಮಾಡಿಕೊಂಡಿದ್ದಾರೆ. ಶ್ರೀ ಎನ್.ಎಂ. ದಾಟನಾಳರವರು, ಜಲವರ್ಣ ತೈಲವರ್ಣ, ಅಕ್ರಾಲಿಕ್ ಮಾಧ್ಯಮದಿಂದ ಹಲವಾರು ಕಲಾಕೃತಿಗಳನ್ನು ರಚಿಸಿದ್ದಾರೆ. ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಮುಖ್ಯಸ್ಥರಾದ ಇವರು ಅನೇಕ ಕಲಾಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ.[೧೩೧] ಇತಿಹಾಸ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಇರುವ

೧೨೯. ಕಲಾವಾರ್ತೆ ಕ.ಲ.ಕ. ಅಕಾಡೆಮಿ ಸಂಚಿಕೆ ಪು.ಸಂ. ೩೧

೧೩೦. ಕಲಾವಾರ್ತೆ ಕ.ಲ.ಕ. ಅಕಾಡೆಮಿ ಸಂಚಿಕೆ ಪು.ಸಂ. ೩೧

೧೩೧. ಎನ್.ಎಂ. ದಾಟನಾಳರವರ ಪರಿಚಯ ಪತ್ರ ಸಂಗ್ರಹ

ಇವರು ವಿದ್ಯಾರ್ಥಿಗಳ ನಕ್ಷಾಚಿತ್ರ ಇತಿಹಾಸ ವಿಷಯದ್ಲಿ ಹೆಚ್ಚಿನ ಆಸಕ್ತಿ ಇರುವ ಇವರು ವಿದ್ಯಾರ್ಥಿಗಳ ನಕ್ಷಾಚಿತ್ರ ಇತಿಹಾಸ, ಭಾವಚಿತ್ರ ಸ್ಥಿರಚಿತ್ರಗಳನ್ನು ರಚಿಸಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಸದಾ ಕಲಿಯುವ ಹಂಬದಲ್ಲಿರುವ ಇವರು ಸ್ನಾತಕೋತ್ತರ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಡೆದುಕೊಂಡಿದ್ದಾರೆ.

ಉತ್ತಮ ಆಡಳಿತಗಾರರಾದ ನಿಂಗಪ್ಪ ದಾಟನಾಳರವರು ತಮ್ಮ ಆಡಳಿತದಲ್ಲಿ ಧಾರವಾಡದಲ್ಲಿ ಉತ್ತಮ ಆರ್ಟ್ ಗ್ಯಾಲರಿಯನ್ನು ಸರಕಾರದಿಂದ ಅನುಮತಿಪಡೆದು ಕಟ್ಟಿಸಿದ ಕಿರ್ತಿಗೆ ಪಾತ್ರರಾಗಿದ್ದಾರೆ. ಇವರು ರಚಿಸಿದ ಅನೇಕ ಕಲಾಕೃತಿಗಳು ಧಾರವಾಡ, ಗದಗ, ಮೈಸೂರ, ಹುಬ್ಬಳ್ಳಿ, ಬೆಂಗಳೂರು, ದೆಲ್ಲಿ, ಕೊಲ್ಲಾಪೂರ, ಬಾಂಬೆ ಹಂಪಿ ಮುಂತಾದ ಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಬೆಂಗಳೂರು, ಗದಗ ಧಾರವಾಡ, ಗೋಕಾಕ ಮೂಡಬಿದರಿ ಮುಂತಾದ ಕಡೆಗಳಲ್ಲಿ ನಡೆದ ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರು, ಗದಗ ಧಾರವಾಡ, ಹುಬ್ಬಳ್ಳಿ ದೆಹಲಿ, ಪೂಣಾ ಗೋವಾ ಮುಂತಥವುಗಳ ಕಡೆಗಳಲ್ಲಿ ಇವರ ಅನೇಕ ಉತ್ತಮ ಕಲಾಕೃತಿಗಳು ಸಂಗ್ರಹಗೊಂಡಿವೆ. ಸದಾ ಕ್ರೀಯಾಶೀಲರಾದ ಇವರು ಅನೇಕ ಸಮಾಜಿಕ ಕೆಲಸಗಳನ್ನು ಮಾಡಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಚಿತ್ರಕಲಾ ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ ಹಲವಾರು ಚಿತ್ರಕಲಾ ಸ್ಪರ್ದೆಗಳ ನಿರ್ಣಾಯಕರಾಗಿ, ಮೈಸೂರದಸರಾದಲ್ಲಿ ಜಿಲ್ಲೆಯ ಐತಿಹಾಸಿಕ ವಿಷಯಗಳ ಮೇಲೆ ರೂಪಕ ಮಾಡಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ.[೧೩೨] ಕರ್ನಾಟಕ ಗೌರವ ಪ್ರಶಸ್ತಿ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನ ಪಡೆದು ಕೊಂಡಿದ್ದಾರೆ. ಅನೇಕ ಬಡ ವಿದ್ಯಾರ್ಥಿಗಳಿಗೆ ಮಾರ್ಗದಶರನ ನೀಡುವುದರ ಮೂಲಕ ಅವರಿಗೆ ಎಲ್ಲರೀತಿ ಸಹಾಯ ಮಾಡಿದ್ದಾರೆ. ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಮುಖ್ಯಸ್ಥರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

ಎಂ.ಡಿ. ಕಡ್ಲಿಕೊಪ್ಪ : ಎಂ.ಡಿ. ಕಡ್ಲಿಕೊಪ್ಪ ಅವರು ಪೂರ್ಣ ಹೆಸರು ಮನೋಹರ ದೇವೇಂದ್ರಪ್ಪ ಕಡ್ಲಿಕೊಪ್ಪ, ಇವರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕುರಗೋಡ ಗ್ರಾಮದಲ್ಲಿ ೧೯೪೧ರಲ್ಲಿ ಜನಿಸಿದರು. ಗದಗ ಜಿಲ್ಲಾ ಶಿರಹಟ್ಟಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಮುಗಿಸಿಕೊಂಡು ನಂತರ ವಿಜಯ ಕಲಾಮಂದಿರದಲ್ಲಿ ಎ.ಎಂ.ಮತ್ತು ಜಿ.ಡಿ. ಆರ್ಟ್ ಅಭ್ಯಾಸವನ್ನು ಮುಗಿಸಿದರು. ಇವರು ಶಿರಹಟ್ಟಿಯಲ್ಲಿ ಎಫ್.ಎಂ.ಡಬಲಿ ಸಂಯುಕ್ತ ಕಿರಿಯ ಮಹಾವಿದ್ಯಾಲಯದಲ್ಲಿ ೩೯ ವರ್ಷ ೮ ತಿಂಗಳು ಚಿತ್ರಕಲಾ ಅಭ್ಯಾಸದ ಜೊತೆಗೆ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ಕಲಾಕೃತಿ ಪ್ರದರ್ಶನಗಳು ಶಿರಹಟ್ಟಿ, ಗದಗ, ಧಾರವಾಡ, ಬೆಂಗಳೂರು ಮುಂತಾದ ಕಡೆಗಳಲ್ಲಿ ಪ್ರದರ್ಶನ ಮಾಡಿದ್ದು, ಚಿತ್ರಕಲಾ ಶಿಕ್ಷಣದಲ್ಲಿ ಪರೀಕ್ಷಾ ನಿಯಂತ್ರಕರಾಗಿ ಸರಕಾರಿ ಅಧಿಕಾರಿಗಳಿಂದ ಪ್ರಶಂಸೆ ಹಾಗೂ ಪ್ರಶಸ್ತಿ ಹಾಗೂ ಪುರಸ್ಕಾರ ಪತ್ರಗಳನ್ನು ಪಡೆದಿದ್ದಾರೆ. ಇವರು ರೇಖಾ ಚಿತ್ರಗಳನ್ನು ತಮ್ಮದೆಯಾದ ವಿಶೇಷ ಶೈಲಿಯಲ್ಲಿ ರಚನೆ ಮಾಡುವ ತಂತ್ರಗಾರಿಕೆಯನ್ನು ಕರಗತಮಾಡಿಕೊಂಡವರು. ಇವರು ಚಿತ್ರಕಲಾ ಶಿಕ್ಷಕರಲ್ಲದೆ ಸಾಹಿತಿಗಳೂ ನಲವತ್ತಕ್ಕೂ ಹೆಚ್ಚು ಕವನಗಳನ್ನು ರಚಿಸಿದ್ದಾರೆ. ಎಂಟು ಸಣ್ಣ ಕಥೆಗಳನ್ನು ಬರೆದಿದ್ದಾರೆ. ಕರ್ನಾಟಕ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ

೧೩೨. ಎನ್. ಎಂ. ದಾಟನಾಳರವರ ಸಂದರ್ಶನ ದಿನಾಂಕ: ೪-೧-೨೦೧೦

ಸದಸ್ಯರಾಗಿ, ೧೯೮೩–೮೭ರ ವರೆಗೆ ಶಿರಹಟ್ಟಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಕ್ಷೇತ್ರ ವರವಿ ಮೌನೇಶ್ವರ ದೇವಸ್ಥಾನದ ಅಭಿವೃದ್ಧಿಯಲ್ಲಿ ಹೆಚ್ಚಿನ ಕಾರ್ಯಭಗಿತ್ವವಹಿಸಿದ್ದಾರೆ. ಇದಲ್ಲದೆ ಸ್ವಂತ ಪುಸ್ತಕ ಪ್ರಕಾಶಕರಾಗಿ ಇವರು ಶ್ರೀಭುವನೇಶ್ವರಿ ಸಾಹಿತ್ಯ ಪ್ರಕಾಶನ ಶಿರಹಟ್ಟಿ ಇದರ ಅಡಿಯಲ್ಲಿ ಎಂಟು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.[೧೩೩] ಶ್ರೀ ಮೌನೇಶ್ವರ ಬಾಲಲೀಲೆಗಳು, ಬಾಲವಿಶ್ವಕರ್ಮ ಭಾಗ–೧ ವಿಶ್ವಕರ್ಮ ಮಹಾಪುರುಷರು, ಬಾಲವಿಶ್ವಕರ್ಮ ಭಾಗ–೨ ಹಾಗೂ ಕಾಳಿಕಾ ಮಹಾತ್ಮೆ ಬಾಲವಿಶ್ವಕರ್ಮ ಭಾಗ–೩ ಅರ್ಜುನಾಚಾರ್ಯ ತೆಂಗಳೇಕರ ಸಮಗ್ರ ಸಾಹಿತ್ಯ ಸಂಪುಟ, ವಿಶ್ವಬ್ರಾಹ್ಮಣ ವೈಭವ ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ ಕಲಾ ಸೇವೆಯನ್ನು ಕಂಡು ಕರ್ನಾಟಕ ಲಲಿತಕಲಾ ಅಕಾಡೆಮಿಯು ಗದುಗಿನಲ್ಲಿ ನಡೆದ ವಾರ್ಷಿಕ ಕಲಾಪ್ರದರ್ಶನದಲ್ಲಿ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಮಹಾದೇವ ಕವಿಶೆಟ್ಟಿ : ಮಹಾದೇವ ಕವಿಶೆಟ್ಟಿಯವರು ಬಿಜಾಪುರದಲ್ಲಿ ೧೯೪೩ರಲ್ಲಿ ಜನಿಸಿದರು. ಇವರು ಕಲಾಶಿಕ್ಷಣವನ್ನು ವಿಜಯ ಕಲಾಮಂದಿರದಲ್ಲಿ ಪಡೆದುಕೊಂಡು ನಂತರ ರಬಕವಿಯ ಪ್ರೌಢಶಾಲೆಯಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಇವರು ವೃತ್ತಿ ಜೀವನವನ್ನು ನಡೆಸುವುದರ ಜೊತೆಗೆ ಇವರು ಉದಯಪುರ, ಕಲ್ಕತ್ತಾ, ದೆಹಲಿ, ಹೈದರಾಬಾದ್, ಬೆಂಗಳೂರು, ಹುಬ್ಬಳ್ಳಿ, ಹೀಗೆ ಅನೇಕ ಕಡೆಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಏಕವ್ಯಕ್ತಿ ಕಲಾಕೃತಿಯ ಪ್ರದರ್ಶನಗಳು ಇವರಿಗೆ ಕಲಾರಂಗದಲ್ಲಿ ಪ್ರೌಢಶಾಲೆಯ ಶಿಕ್ಷಕನಾಗಿ ಸಲ್ಲಿಸಿದ ಸೇವೆ ಗಮನಿಸಿ ಭಾರತ ಸರಕಾರವು ದೆಹಲಿಯಲ್ಲಿ ಇವರಿಗೆ ಸನ್ಮಾನಿಸಿದೆ. ಹಾಗೂ ರಾಜ್ಯ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ, ಟಿ.ಪಿ. ಅಕ್ಕಿ ಸ್ಮಾರಕ ಪ್ರಶಸ್ತಿ, ಮಠಮಾನ್ಯಗಳು, ಸಂಘ–ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ. ಪ್ರಮುಖ ಕಲಾಪ್ರದರ್ಶನಗಳಲ್ಲಿ ಕಲಾಶಿಬಿರಗಳಲ್ಲಿ ಸಲಹೆಗಾರರಾಗಿ ಅಧ್ಯಕ್ಷರಾಗಿ ಹಾಗೂ ನಿರ್ದೇಶಕರಾಗಿ ಸೇವೆ ಮಾಡಿದ್ದಾರೆ. ಭಾರತವನ್ನು ಪ್ರವಾಸದ ಮೂಲಕ ತಿರುಗಾಡಿ ಜಗತ್ಪ್ರಸಿದ್ಧ ಸ್ಮಾರಕ, ಪುಣ್ಯಕ್ಷೇತ್ರಗಳು ಮತ್ತು ಇತಿಹಾಸ ಪ್ರಸಿದ್ಧ ಸ್ಥಳಗಳನ್ನು ತಮ್ಮ ರೇಖಾ ಚಿತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅವುಗಳ ಪ್ರದರ್ಶನ ಮಾಡಿದ್ದಾರೆ. ಇವು ತೈಲ ವರ್ಣಗಳಿಂದ ಚಿತ್ರಗಳು ದೇಶ ವಿದೇಶಗಳಲ್ಲಿ ಸಂಗ್ರಹಗೊಂಡಿದ್ದು ಇವರ ಕಲಾಪ್ರೌಢಿಮೆಗೆ ಸಂದ ಗೌರವವಾಗಿದೆ.[೧೩೪]

ಎ.ಬಿ. ಉಪ್ಪಾರ : ಶ್ರೀ ಅಜ್ಜಪ್ಪ ಬಾಳಪ್ಪ ಉಪ್ಪಾರ ಇವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಲಕ್ಕುಂಡಿ ಗ್ರಾಮದಲ್ಲಿ ೧೯೬೦ರ ಜೂನ್ ೧ ರಂದು ಒಬ್ಬ ಶಿಲ್ಪಿಯ ಮಗನಾಗಿ ಹುಟ್ಟಿದರು. ಪ್ರಾಥಮಿಕ ಶಿಕ್ಷಣವನ್ನು ಲಕ್ಕುಂಡಿಯಲ್ಲಿ ಹಾಗೂ ನಾಗನೂರಿನಲ್ಲಿ ಮುಗಿಸಿ ಪ್ರೌಢಶಾಲೆಯನ್ನು ಸಿರಸಂಗಿಯ ವಿದ್ಯಾಮಂದಿರ ಪ್ರೌಢಶಾಲೆಯಲ್ಲಿ ಪೂರೈಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯ ಗೀಳಿಗಂಟಿಕೊಂಡಿರುವ ಅಜ್ಜಪ್ಪ ಉನ್ನತ ಚಿತ್ರಕಲಾ ಶಿಕ್ಷಣವನ್ನು ಗದುಗಿನ ವಿಜಯ ಕಲಾಮಂದಿರದಲ್ಲಿ ಪ್ರವೇಶ ಪಡೆದು ಉತ್ತಮ ಅಭ್ಯಾಸ ಮಾಡಿ ಡಿಪ್ಲೋಮಾ ಫೈನ್ ಆರ್ಟ್‌ನ್ನು ೧೯೮೧ರಲ್ಲಿ ಪೂರೈಸಿದ್ದಾರೆ.

---

೧೩೩. ಎಂ.ಡಿ. ಕಡ್ಲಿಕೊಪ್ಪರವರ ಪರಿಚಯ ಪತ್ರದಿಂದ ಸಂಗ್ರಹ

೧೩೪. ಮಹದೇವ ಕವಿಶೆಟ್ಟಿಯವರ ದಾಖಲಾತಿಗಳೆಂದ ಸಂಗ್ರಹ

ಹಾಗೂ ಆರ್ಟ್ ಮಾಸ್ತರ್ ಡಿಪ್ಲೋಮಾ ಇನ್ ಫೈನ್ ಆರ್ಟ್‌ನ್ನು ೧೯೮೧ರಲ್ಲಿ ಪೂರೈಸಿದ್ದಾರೆ. ಹಾಗೂ ಆರ್ಟ್ ಮಾಸ್ತರ್ ಡಿಪ್ಲೋಮಾ ಪದವಿಯನ್ನು ಉಮಾ ಕಲಾಶಾಲೆ ಬೆಳಗಾವಿಯಲ್ಲಿ ೧೯೮೨ರಲ್ಲಿ ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಪಾಸಾಗಿದ್ದಾರೆ.[೧೩೫]

ಶ್ರೀ ಎ.ಬಿ.ಉಪ್ಪಾರವರು ಉತ್ತಮ ಕಲಾಕೃತಿಗಳನ್ನು ಮತ್ತು ಕಲಾಪ್ರತಿಭೆಯನ್ನು ಮೆಚ್ಚಿ ೧೯೮೩ ಜೂನ್ ೧ರಂದು ನೇಸರಗಿಯಲ್ಲಿ ತಾವು ಕಲಿತ ವಿದ್ಯಾಮಂದಿರ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಲು ಆಡಳಿತ ಮಂಡಳಿಯವರು ಆದೇಶ ನೀಡಿದರು. ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತ ಇವರು ಅನೇಕ ಕಲಾಕೃತಿಗಳನ್ನು ರಚಿಸತೊಡಗಿದರು. ವಿಶೇಷವಾಗಿ ಭಾವಚಿತ್ರಗಳನ್ನು ನೈಜವಾಗಿ ತದ್ರೂಪವಾಗಿ ತೆಗೆಯುವ ಕಲಾನೈಪುಣ್ಯತೆಯನ್ನು ಶ್ರೀ ಉಪ್ಪಾರವರು ಪಡೆದಿದ್ದಾರೆ. ಇವರು ಅನೇಕ ಕಲಾಪ್ರದರ್ಶನವನ್ನು ಮಾಡಿದ್ದಾರೆ. ಗದಗ, ಧಾರವಾಡ, ಬೆಂಗಳೂರು, ಬೆಳಗಾವಿ, ಕೊಪ್ಪಳ, ರಾಯಚೂರು, ರಾಯಭಾಗ ಮುಂತಾದ ಅನೇಕ ಸ್ಥಳಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ. ಹಾಗೂ ಹೊರ ರಾಜ್ಯಗಳಲ್ಲಿ ನಡೆದ ಶಿಬಿರಗಳಲ್ಲಿ ಕಾರ್ಯಾಗಾರಗಳಲ್ಲಿ ಭಾಗವಹಿಸಿ ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿ ತಮ್ಮ ವ್ಯಕ್ತಿತ್ವವನ್ನು ತೋರಿಸಿಕೊಟ್ಟಿದ್ದಾರೆ. ಹುಬ್ಬಳ್ಳಿ ಧಾರವಾಡ, ಗದಗ, ನೇಸರಗಿ ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಕಲಾಶಿಬಿರವನ್ನು ಮಾಡಿದ್ದಾರೆ. ಹಾಗೂ ಇವರು ಹಲವಾರು ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ. ೨೦೦೭ರಲ್ಲಿ ನೇಸರಗಿಯಲ್ಲಿ ಮುಂತಾದ ಕಡೆಗಳಲ್ಲಿ ಏಕವ್ಯಕ್ತಿ ಕಲಾಪ್ರದರ್ಶನ ಮಾಡಿದ್ದಾರೆ.

ಶ್ರೀ ಎ.ಬಿ.ಉಪ್ಪಾರರವರು ಅನೇಕ ಸಾಧು ಸತ್ಪುರುಷರ ಮಹಾನ್ ವ್ಯಕ್ತಿಗಳ ಕಲಾಕೃತಿಗಳನ್ನು ನೈಜ ರೂಪದಲ್ಲಿ ರಚಿಸಿದ್ದಾರೆ. ಪೇಜಾವರ ಸ್ವಾಮಿಗಳ, ಲಂಡನ್ನಿನ ಪೋಪ್ ಬೇಡಿಕೆ ಡಾ. ವಿರೇಂದ್ರ ಹೆಗ್ಗಡೆ, ತುಮಕೂರಿನ ಸಿದ್ಧಗಂಗಾ ಮಹಾಸ್ವಾಮಿಗಳವರ ಭಾವಚಿತ್ರಗಳು, ಗುಲಬರ್ಗಾದ ಶರಣ ಬಸಪ್ಪನವರ, ಡಾ. ರಾಜಕುಮಾರರವರ ಕಲಾಕೃತಿಗಳು ಹೀಗೆ ಹಲವಾರು ಗಣ್ಯರ ಅನೇಕ ಕಲಾಕೃತಿಗಳನ್ನು ತೈಲವರ್ಣದಲ್ಲಿ ರಚನೆ ಮಾಡಿದ್ದಾರೆ. ಇವರ ಕಲಾ ನೈಪುಣ್ಯವನ್ನು ಮೆಚ್ಚಿ ಅನೇಕ ಸಂಘ–ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

೧೯೮೬ರಲ್ಲಿ ಪೋಪ್ ಜಾನ್‌ಪಾಲ್-II ಅವರಿಂದ ಬಂಗಾರದ ಪದಕ, ೧೯೮೮ರಲ್ಲಿ ಸನ್ಮಾನ್ಯ ರಾಜೀವ ಗಾಂಧಿಯವರಿಂದ ಪ್ರಶಸ್ತಿ, ೧೯೯೨ರಲ್ಲಿ ಡಾ.ರಾಜಕುಮಾರ ಅವರಿಂದ ಪುರಸ್ಕಾರ್, ೧೯೯೨ರಲ್ಲಿ ವಿದ್ಯಾಮಂದಿರ ಪ್ರೌಢಶಾಲೆ ನೇಸರಗಿಯಲ್ಲಿ, ೧೯೯೨ರಲ್ಲಿ ಕಲ್ಬುರ್ಗಿಯ ಡಾ. ಶರಣ ಬಸಪ್ಪ ಅಪ್ಪರವರಿಂದ ದೊರೆಗಳಿಂದ ಸನ್ಮಾನ, ೨೦೦೭ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪುರಸ್ಕಾರ, ೨೦೦೭ರಲ್ಲಿ ಕೊಪ್ಪಳದ ಡಾ. ಸಿದ್ದಯ್ಯ ಪುರಾಣಿಕ ರಾಜ್ಯ ಮಟ್ಟದ ಪ್ರಶಸ್ತಿ, ೨೦೦೭ರಲ್ಲಿ ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ, ೨೦೦೭ರಲ್ಲಿ ಬಾಚೀದ ಶಿಕ್ಷಕ ಪ್ರಶಸ್ತಿ, ೨೦೦೭ರಲ್ಲಿ ರಾಜ್ಯಮಟ್ಟದ ಜಗದ್ಗುರು ಬಸವೇಶ್ವರ ಸದ್ಭಾವನಾ ಪ್ರಶಸ್ತಿ, ೨೦೦೭ರಲ್ಲಿ ಕರ್ನಾಟಕ ಭೂಷಣ ಪ್ರಶಸ್ತಿ, ಬೆಂಗಳೂರು, ೨೦೦೭ರಲ್ಲಿ ಕರುನಾಡ ಪದ್ಮಶ್ರೀ ಪ್ರಶಸ್ತಿ ಗೋವಾ, ೨೦೦೭ರಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಪ್ರಶಸ್ತಿ, ೨೦೦೮ರಲ್ಲಿ ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ ಶ್ರೀ ಭಗೀರಥ ಪ್ರಶಸ್ತಿ,

೧೩೫. ಎ.ಬಿ. ಉಪ್ಪಾರರವರ ದಾಖಲಾತಿಗಳಿಂದ ಸಂಗ್ರಹ

ಕರ್ನಾಟಕ ರಾಜ್ಯ ಉಪ್ಪಾರ ಸಂಘ ಬೆಂಗಳೂರು, ರವಿವರ್ಮ ಪ್ರಶಸ್ತಿ, ೨೦೦೯ರಲ್ಲಿ ಕಲಾರತ್ನ ಪ್ರಶಸ್ತಿ, ಶ್ರೀ ಕಲ್ಮೇಶ್ವರ, ಗೋಕಾಕ ಹೀಗೆ ಎ.ಬಿ. ಉಪ್ಪಾರವರು ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡು ಕಲಾಬದುಕನ್ನು ಉತ್ತಮ ರೀತಿಯಲ್ಲಿ ನಡೆಸುತ್ತಿದ್ದಾರೆ.[೧೩೬]

ಶ್ರೀ ಎ.ಬಿ.ಉಪ್ಪಾರವರು ವ್ಯಕ್ತಿಚಿತ್ರ ಮತ್ತು ಭಾವಚಿತ್ರ ರಚನೆಯಲ್ಲಿ ಪ್ರಬುದ್ಧತೆಯನ್ನು ಪಡೆದುಕೊಂಡ ಇವರು ಜಲವರ್ಣ ಮತ್ತು ತೈಲವರ್ಣ ರಚನೆಯಲ್ಲಿ ವಿಶೇಷ ಪರಣಿತಿ ಪಡೆದುಕೊಂಡಿದ್ದಾರೆ. ಇವರು ರಚಿಸಿದ ಹಲವಾರು ಕಲಾಕೃತಿಗಳು ರಾಜ್ಯ ಮತ್ತು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಗ್ರಹಗೊಂಡಿವೆ. ಸಧ್ಯ ಇವರು ತಾವು ಕಲಿತ ಪ್ರೌಢಶಾಲೆಯಾದ ವಿದ್ಯಾಮಂದಿರ ಪ್ರೌಢಶಾಲೆ ನೇಗಿಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ.

ಎಸ್.ಎಫ್. ಬೆನಕಣ್ಣವರ : ಎಸ್.ಎಫ್.ಬೆನಕಣ್ಣವರ ಇವರು ಬೆಟಗೇರಿಯಲ್ಲಿ ೧೯೫೭ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಗದುಗಿನಲ್ಲಿ ಮುಗಿಸಿದರು. ಇವರು ಬಾಲ್ಯದಿಂದಲೂ ಚಿತ್ರಕಲೆಯ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದ್ದರು. ನಂತರ ವಿಜಯ ಕಲಾಮಂದಿರದಲ್ಲಿ ಕಲಾಶಿಕ್ಷಣವನ್ನು ಕಲಿತರು. ಡಿ.ಟಿ.ಸಿ. ಕೋರ್ಸ್ ೧೯೭೫ರಲ್ಲಿ ಪಡೆದರು. ೧೯೮೧ರಲ್ಲಿ ಆರ್ಟ್ ಮಾಸ್ಟರ್, ೧೯೮೬ರಲ್ಲಿ ಡಿಪ್ಲೋಮಾ ಪರೀಕ್ಷೆಯನ್ನು ಪಾಸಾದರು. ನಂತರ ಮಾಡೆಲ್ ಹೈಸ್ಕೂಲ್ ಗದಗನಲ್ಲಿ ಕಲಾಶಿಕ್ಷಕರಾಗಿ ಸೇವೆ ಪ್ರಾರಂಭಿಸಿದರು. ಇವರ ಕಲಾಕೃತಿಗಳು ಹುಬ್ಬಳ್ಳಿ, ಬೆಂಗಳೂರು, ಬೆಳಗಾವಿ, ಮಂಡ್ಯ, ರಾಜಸ್ಥಾನದ ಮೌಂಟ್‌ಅಬು, ಮುಂತಾದ ಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಕಲಾಕೃತಿ ಶಿಬರಗಳು ಧಾರವಾಡ ಮೈಸೂರು, ಬೆಂಗಳೂರು, ಮಂಗಳೂರುಗಳಲ್ಲಿ ನಡೆದ ಕರ್ನಾಟಕ ಪರಿಷತ್ತಿನವರು ರೇಖಾಚಿತ್ರ ಪ್ರದರ್ಶನ ಮೈಸೂರು, ದಸರಾ ಚಿತ್ರಕಲಾ ಪ್ರದರ್ಶನ ಹಾಗೂ ಬೆಂಗಳೂರು ೬ನೇ ಕರ್ನಾಟಕ ಕಲಾಮೇಳಗಳಲ್ಲಿ ಭಾಗವಹಿಸಿದ್ದಾರೆ.

ಇವರಿಗೆ ಸಂದ ಪ್ರಶಸ್ತಿಗಳು ಬಂದಿವೆ. ಚಿತ್ರಕಲಾ ಚತುರ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಅಂತರಾಷ್ಟ್ರಿಯ ಕ್ಲಬ್ ರೋಟರಿ ಹಾಗೂ ಯುವ ಜನಮೇಳದಿಂದ ಪ್ರಶಸ್ತಿಗಳು ದೊರಕಿವೆ. ಇನ್ನೂ ಅನೇಕ ಸಂಘ ಹಾಗೂ ಸಂಸ್ಥೆಗಳಿಂದ ಮಠ ಮಾನ್ಯಗಳಲ್ಲಿ ಪುರಸ್ಕಾರಗಳು ಮತ್ತು ಗದಗ-ಬೆಟಗೇರಿ ಶಹರ ವಲಯ ವತಿಯಿಂದ ೧೯೯೨-೯೩ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿವೆ. ಶಿಕ್ಷಕರತ್ನ ಪ್ರಶಸ್ತಿ ರಾಜ್ಯಮಟ್ಟದ ಕಲಾರತ್ನ ಪ್ರಶಸ್ತಿ ಅನೇಕ ಸಲ ದಿನಪತ್ರಿಕೆಗಳಲ್ಲಿ ಹಲವಾರು ಬಾರಿ ಇವರ ಕಲಾಕೃತಿ ಹಾಗೂ ವ್ಯಕ್ತಿತ್ವ ಕುರಿತು ಲೇಖನಗಳು ಬಂದಿವೆ.[೧೩೭]

ಪದ್ಮರಾಜ ಅನಂತರಾವ ಕುಲಕರ್ಣಿ : ಪದ್ಮರಾಜರವರು ಗದಗ ನಗರದಲ್ಲಿ ೧೯೫೯ರಲ್ಲಿ ಜನಿಸಿದರು. ನಗರದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಪಡೆದುಕೊಂಡರು. ನಂತರ ವಿಜಯ ಕಲಾಮಂದಿರದಲ್ಲಿ ಆರ್ಟ್‌ಮಾಸ್ಟರ್ ಮತ್ತು ಡಿಪ್ಲೋಮಾ ಪದವಿಯನ್ನು ಪಾಸಾದರು. ಈಗ ವಿ.ಡಿ.ಎಸ್.ಟಿ.ಸಿ. ಗಂಡುಮಕ್ಕಳ ಪ್ರೌಢಶಾಲೆಯಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

---

೧೩೬. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯಕಲಾ ಮಂದಿರದ ಕೊಡುಗೆ ಪು.ಸಂ. ೮೯

೧೩೭. ಎಸ್.ಎಫ್. ಬೆನಕಣ್ಣವರ ಸಂದರ್ಶನ ದಿನಾಂಕ: ೨೮-೧೦-೨೦೧೦

ಕೇಂದ್ರ ಲಲಿತಕಲಾ ಅಕಾಡೆಮಿಯಿಂದ ೧೯೮೮ರಲ್ಲಿ ಫೆಲೋಶಿಪ್ ಪಡೆದುಕೊಂಡ ಇವರು ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರ ಕಲಾಕೃತಿಗಳು ಗದಗ, ಕದಡಿ, ಕೊಪ್ಪಳ, ಧಾರವಾಡ, ಹುಬ್ಬಳ್ಳಿ, ಬೆಂಗಳೂರುಗಳಲ್ಲಿ ಪ್ರದರ್ಶನಗೊಂಡಿವೆ. ಸಂಸ್ಥೆ ಶಾಲೆಯಲ್ಲಿ ಕಲಾಶಿಬಿರಗಳಲ್ಲಿ ಗದಗ ಬೆಟಗೇರಿಗಳಲ್ಲಿ ಭಾಗವಹಿಸಿದ್ದಾರೆ. ಇವರು ಹೆಚ್ಚಾಗಿ ಸಮಕಾಲೀನ ಸಂಯೋಜನೆ ಚಿತ್ರಶೈಲಿಯಲ್ಲಿ ಕೃತಿ ರಚಿಸಿದ್ದಾರೆ. ಇವರಿಗೆ ರಾಜ್ಯ ಪ್ರಶಸ್ತಿಗಳು ಹಾಗೂ ಸಂಘ ಸಂಸ್ಥೆಗಳ ಪ್ರಶಸ್ತಿ ಪುರಸ್ಕಾರಗಳು ಸಂದಿವೆ.[೧೩೮]

ಜಂಭುಕೇಶ್ವರ ಎಸ್.ಎಂ. : ಶ್ರೀ ಜಂಬುಕೇಶ್ವರ ಅವರು ಬಳ್ಳಾರಿ ಜಿಲ್ಲೆಯ ಶ್ರೀಧರಗಡ್ಡೆ ಎಂಬ ಒಂದು ಚಿಕ್ಕ ಗ್ರಾಮದಲ್ಲಿ ೨೩-೬-೧೯೪೮ರಲ್ಲಿ ಜನಿಸಿದ್ದಾರೆ. ತಂದೆ ಎಸ್.ಎಫ್.ಬಸಯ್ಯನವರು. ವೃತ್ತಿಯಿಂದ ಶಿಕ್ಷಕರು. ಶಿಸ್ತಿನ ಸಿಪಾಯಿಗಳು. ಇಂಥವರ ವಾತ್ಸಲ್ಯದಲ್ಲಿ ಬೆಳೆದ ಜಂಭುಕೇಶ್ವರರವರು ಪ್ರಾಥಮಿಕ ಶಿಕ್ಷಣವನ್ನು ಬಳ್ಳಾರಿ ತಾಲೂಕಿನ ಬೈಲೂರ ಎಂಬ ಗ್ರಾಮದಲ್ಲಿ ಮುಗಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯ ಕಡೆಗೆ ಹೆಚ್ಚಿನ ಒಲವು ಇತ್ತು. ಮಾಧ್ಯಮಿಕ ಶಿಕ್ಷಣವನ್ನು ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ ಶ್ರೀ ಭೀಮರಾಮಭಟ್ಟ ಎಂಬ ಕಲಾ ಗುರಿವಿನಿಂದ ಕಲಾದೀಕ್ಷೆ ಪಡೆದುಕೊಂಡರು. ಪ್ರೌಢಶಿಕ್ಷಣವನ್ನು ಪೂರೈಸಿದರು.

ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ಗದುಗಿನ ವಿಜಯ ಕಲಾಮಂದಿರಕ್ಕೆ ಬಂದರು. ಇಲ್ಲಿ ಅನೇಕ ಹಿರಿಯ ಕಲಾಗುರುಗಳ ಮಾರ್ಗದರ್ಶನದಿಂದ ಉತ್ತಮವಾಗಿ ಅಧ್ಯಯನ ಮಾಡಿ ತಮ್ಮ ಕಲಾ ಪ್ರತಿಭೆಯನ್ನು ತೋರಿಸಿಕೊಟ್ಟರು. ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸಿಟ್ಯೂಟ್ ಸೇರಿ ಕಲೆಯನ್ನು ಆಳವಾಗಿ ಅಧ್ಯಯನ ಮಾಡಿ ಉತ್ತಮ ಕಲಾವಿದನಾಗಿ ಹೊರಬಂದರು. ಚಿತ್ರಕಲೆಯ ಜೊತೆ ಫೋಟೋಗ್ರಾಫಿ ಮಾಡವುದು ಇವರ ಹವ್ಯಾಸವಾಗಿತ್ತು. ಸದಾ ಕ್ರೀಯಾಶೀಲ ವ್ಯಕ್ತಿಗಳಾದ ಜಂಬುಕೇಶ್ವರರವರು ೧೯೬೯ರಲ್ಲಿ ಜೆ.ಎಸ್.ಎಸ್. ಮಹಾವಿದ್ಯಾಪೀಠದಲ್ಲಿ ಕಲಾಶಿಕ್ಷಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. ಅನೇಕ ವಿದ್ಯಾರ್ಥಿಗಳಿಗೆ ಚಿತ್ರಕಲಾವಿಷಯವನ್ನು ಬೋಧಿಸುತ್ತ ಅನೇಕ ಹಾಯರ್ ಗ್ರೇಡ್ ಪರೀಕ್ಷೆ ಮಾಡಿಸಿದ್ದಾರೆ. ಹಲವಾರು ವಿದ್ಯಾರ್ಥಿಗಳಿಗೆ ಪ್ರೀತಿಯ ಗುರುಗಳಾಗಿದ್ದಾರೆ. ಶ್ರೀಯುತರು ನೇಪಾಳ, ಭೂತಾನ್, ಶ್ರೀಲಂಕಾ, ಸಿಂಗಪೂರ, ಐರೋಪ್ಯ ದೇಶಗಳಿಗೆ ಹೋಗಿ ಅಲ್ಲಿನ ಕಲೆ ಸಂಸ್ಕೃತಿಯನ್ನು ಅರಿತವರಾಗಿದ್ದಾರೆ.[೧೩೯]

ಅನೇಕ ಸಂಘ-ಸಂಸ್ಥೆಗಳಲ್ಲಿ ಛಾಯಾಚಿತ್ರ, ಪತ್ರಿಕೋದ್ಯಮ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಚಿತ್ರಕಲೆ ಛಾಯಾಚಿತ್ರಕಲೆಗೆ ಸಂಬಂಧಪಟ್ಟಂತೆ ಆಕಾಶವಾಣಿ ದೂರದರ್ಶನಗಳಲ್ಲಿ ಸುಮಾರು ೪೦ಕ್ಕಿಂತಲೂ ಹೆಚ್ಚಿನ ಉಪನ್ಯಾಸಗಳನ್ನು ನೀಡಿದ್ದಾರೆ. ಹಲವು ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ಚಿತ್ರಕಲಾ ಸ್ಪರ್ಧೆಗಳಲ್ಲಿ ತೀರ್ಪುಗಾರರಾಗಿ, ಸಂಘಟಿಕರಾಗಿ ಯಶಸ್ವಿಯಾಗಿ ಕೆಲಸ ನಿರ್ವಹಿಸಿದ್ದಾರೆ. ಛಾಯಾಚಿತ್ರ, ಚಿತ್ರಕಲೆಯ ಜೊತೆಗೆ ಸಾಹಿತ್ಯದಲ್ಲೂ ಇವರ ಸೇವೆ

೧೩೮. ಪಿ.ಎ. ಕುಲಕರ್ಣಿಯವರ ದಾಖಲಾತಿ ಸಂಗ್ರಹ

೧೩೯. ಕಲಾವಾರ್ತೆ ಕ.ಲ.ಕ. ಅಕಾಡಮಿ ಸಂಚಿಕೆ ೯೦ ಪು.ಸಂ. ೧೯

ಗಮನಾರ್ಹವಾಗಿದೆ. ನಾಡಿನ ಪ್ರಸಿದ್ಧ ವಾರಪತ್ರಿಕೆ, ದಿನಪತ್ರಿಕೆಗಳಲ್ಲಿ ಅನೇಕ ಲೇಖನಗಳು ಪ್ರಕಟಗೊಂಡಿವೆ. ೨೦೦೬ರಲ್ಲಿ ಯುರೋಪದಲ್ಲಿ ನಾಲ್ಕು ದಿನಗಳು ಎಂಬ ಪ್ರವಾಸ ಕಥನವು ಲೇಖನದ ಪ್ರಾವೀಣ್ಯತೆಗೆ ಸಾಕ್ಷಿಯಾಗಿದೆ.

ಶ್ರೀಯುತರು ರಾಮ್ ಫೋಟೋಗ್ರಾಫಿಕ್ ಸೊಸೈಟಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಪೆಡರೇಶನ್ ಆಫ್ ಇಂಡಿಯನ್ ಫೋಟೋಗ್ರಾಫಿ, ದಸರಾ ವಸ್ತುಪ್ರದರ್ಶನ ಮೈಸೂರು ಕನ್ನಡ ಸಾಹಿತ್ಯ ಪರಿಷತ್ತು ಹೀಗೆ ಹತ್ತು ಹಲವಾರು ಸಂಸ್ಥೆಗಳ ಸದಸ್ಯತ್ವ, ಅಧ್ಯಕ್ಷ, ಕಾರ್ಯದರ್ಶಿ ಮುಂತಾದ ಸ್ಥಾನಮಾನ ಪಡೆದು ತಮ್ಮ ಮತ್ತು ಸಂಸ್ಥೆಯ ಗೌರವ ಹೆಚ್ಚಿಸಿಕೊಂಡಿದ್ದಾರೆ.

ಜಂಬುಕೇಶ್ವರರಿಗೆ ಲಂಡನಿನ ಫೋಟೋಗ್ರಾಫಿಕ್ ಸೊಸೈಟಿಯಿಂದ ೧೯೯೮ರಲ್ಲಿ ಎ.ಆರ್.ಪಿ.ಎಸ್. ಪ್ರಶಸ್ತಿ, ಬೆಲ್ಜಿಯಂ ದೇಶದ ಎ.ಎಫ್.ಐ.ಎ.ಸಿ. ಪ್ರಶಸ್ತಿ, ೧೯೯೦ರಲ್ಲಿ ಲಭಿಸಿವೆ.[೧೪೦] ಇವರ ಅನೇಕ ಕಲಾಕೃತಿಗಳು ಚೀನ, ತೈವಾನ್, ಟರ್ಕಿ ಕಲ್ಕತ್ತಾ, ಬಿಹಾರ, ಬೆಲ್ಜಿಯಂ, ಕೇರಳ, ಲಕ್ನೋ, ಮದ್ಯಪ್ರದೇಶ ಮುಂತಾದ ದೇಶಗಳಲ್ಲಿ ಪ್ರದರ್ಶನಗೊಂಡಿವೆ. ಹಾಗೂ ಸಂಗ್ರಹಿತವಾಗಿವೆ. ರಾಜ್ಯ, ರಾಷ್ಟ್ರಮಟ್ಟದಲ್ಲಿ ಅಂತಾರಾಷ್ಟ್ರೀಯ ಮಟ್ಟದ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಹೀಗೆ ಜಂಬುಕೇಶ್ವರ ರವರು ಉತ್ತಮ ಕಲಾವಿದರಾಗಿ ರಾಷ್ಟ್ರಮಟ್ಟದಲ್ಲಿ ಬೆಳೆದ ಕಲಾವಿದರಾಗಿದ್ದಾರೆ. ನಿವೃತ್ತರಾಗಿ ಸಧ್ಯ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ.

ಜಿ.ಎಸ್.ಬೂಸಗೊಂಡ : ಶ್ರೀ ಜಿ.ಎಸ್.ಭೂಸಗೊಂಡರವರು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ತಾಯಿಯ ತವರು ಮನೆಯಾದ ಐನಾಪುರದಲ್ಲಿ ೨೨-೭-೧೯೫೯ರಲ್ಲಿ ಜನಿಸಿದರು. ಕೃಷಿಕ ಕುಟುಂಬದಲ್ಲಿ ಇವರು ಜನಿಸಿದರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಸ್ವಂತ ಊರಾದ ವಿಜಾಪುರ ಜಿಲ್ಲೆಯ ತಿಕೋಟಾದಲ್ಲಿ ಪೂರ್ಯೆಸಿದರು. ಬಾಲ್ಯದಲ್ಲಿಯೇ ಚಿತ್ರಕಲೆಯ ಗೀಳು ಅಂಟಿಕೊಂಡಿದ್ದ ಗದಿಗೆಪ್ಪ ಓದಿನಲ್ಲಿ ಅಷ್ಟು ಗಮನಹರಿಸದೇ ಚಿತ್ರಕಲೆಯ ಕಡೆಗೆ ಹೆಚ್ಚು ಒಲವು ಇದ್ದ ಇವರು ಪಾಟಿಯ ಮೇಲೆ ಉತ್ತಮ ಕಲಾಕೃತಿಗಳನ್ನು ರಚಿಸುತ್ತಿದ್ದರು. ಇದನ್ನು ಗಮನಿಸಿದ ವರ್ಗದ ಗುರುಗಳು ರಾಷ್ಟ್ರ ಪ್ರಶಸ್ತಿ ವಿಜೇತ ಶಂಗು ಬಿರಾದಾರ ಇವರ ಬೆನ್ನುತಟ್ಟಿ ಪ್ರೋತ್ಸಾಹಿಸಿದರು.

ಭೂಸಗೊಂಡರ ಗುರುಗಳು ಸಧ್ಯದ ಎಂ.ಎಲ್.ಸಿ.ಜಿ.ಕೆ. ಪಾಟೀಲರು ಇಂಗ್ಲೆಂಡ್‌ನಿಂದ ಬರುವಾಗ ಜಲವರ್ಣ, ಕ್ರಿಯಾನ್ಸ್, ಪೆನ್ಸಿಲ್ ನಾರ್ವೆ ಪೇಪರ್ ತರಿಸಿಕೊಟ್ಟರು. ನಿದ್ದೆ ಮರೆತು ಚಿತ್ರ ತೆಗೆಯಲಾರಂಭಿಸಿದರು.[೧೪೧] ಸದಾ ಕಲೆಯ ಗುಂಗಿನಲ್ಲಿಯೇ ಇರುವ ಭೂಸಗೊಂಡರು ಉನ್ನತ ವ್ಯಾಸಂಗಕ್ಕಾಗಿ ಗದುಗಿನ ವಿಜಯ ಕಲಾಮಂದಿರಕ್ಕೆ ಪ್ರವೇಶ ಪಡೆದರು. ಸದಾ ಕ್ರಿಯಾಶೀಲರಾದ ಇವರು ೧೯೭೬ರಿಂದ ೧೯೮೫ರ ವರೆಗೆ ಗದುಗಿನ ವಿಜಯ ಕಲಾಮಂದಿರಲ್ಲಿ ಅಧ್ಯಯನ ಮಾಡಿದ್ದಾರೆ. ಎರಡು ಬಾರಿ ರಾಜ್ಯಕ್ಕೆ ಎರಡನೆಯ ರ್‍ಯಾಂಕ್ ಪಡೆದ ಪ್ರತಿಭಾನ್ವಿತ ವ್ಯಕ್ತಿ, ೧೯೭೮ರಲ್ಲಿ ಸಿಂದಗಿ ತಾಲೂಕಿನಲ್ಲಿ ಖಾಸಗಿ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಗೆ ಸೇರಿದರು. ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಪಡೆದುಕೊಂಡಿದ್ದಾರೆ. ಹಾಗೂ

೧೪೦. ಕಲಾವಾರ್ತೆ ಕ.ಲ.ಕ. ಅಕಾಡಮಿ ಸಂಚಿಕೆ ೯೦ ಪು.ಸಂ. ೧೯

೧೪೧. ಕಲಾವಾರ್ತೆ ಕ.ಲ.ಕ. ಅಕಾಡಮಿ ಸಂಚಿಕೆ ೯೦ ಪು.ಸಂ. ೩೪

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಕಲಾ ಇತಿಹಾಸದಲ್ಲಿ ಪಿ.ಜಿ.ಡಿಪ್ಲೋಮಾ ಪದವಿಯನ್ನು ಪಡೆದುಕೊಂಡಿದ್ದಾರೆ. ಸಧ್ಯ ಚಿತ್ರಕಲೆಯಲ್ಲಿ ವ್ಯಕ್ತಿ ಅಧ್ಯಯನದ ಮೇಲೆ ಸಂಶೋಧನೆ ಮಾಡುತ್ತಿದ್ದಾರೆ.

ಚಿತ್ರಕಲಾ ಕ್ಷೇತ್ರದಲ್ಲಿ ಚಂದ್ರವರ್ಮಾ ಫೈನ್ ಆರ್ಟ್ ಕ್ಲಬ್ ಎಂಬ ಸಂಸ್ಥೆಯನ್ನು ಪ್ರೌಢಶಾಲೆಯಲ್ಲಿ ಪ್ರಾರಂಭಿಸಿದ್ದಾರೆ. ಶ್ರೀಯುತರು ಚಿತ್ರಕಲೆಯ ಕುರಿತು ಅನೇಕ ಲೇಖನಗಳನ್ನು ಬರೆದದ್ದು ಅನೇಕ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿವೆ. ರಾಜ್ಯಮಟ್ಟದ ಅನೇಕ ಚಿತ್ರಕಲಾ ಶಿಬಿರದಲ್ಲಿ ಕಲಾಪ್ರದರ್ಶನವನ್ನು ಮಾಡಿದ್ದಾರೆ. ಹಲವಾರು ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ. ವಿಜಾಪುರ, ಬೆಂಗಳೂರು, ಬೆಳಗಾವಿ, ಬಾದಾಮಿ, ಹಾಸನ, ದೆಹಲಿ, ಬಾಗಲಕೋಟೆ, ಮಂಗಳೂರು ಹೀಗೆ ಹಲವಾರು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ತಮ್ಮ ಕಲಾ ಪತ್ರಿಭೆಯನ್ನು ತೋರಿಸಿದ್ದಾರೆ.

ಜಿ.ಎಸ್.ಭೂಸಗೊಂಡರವರು ೧೯೬೮ರಿಂದ ಮೈಸೂರು, ನವದೆಹಲಿ, ಬೆಂಗಳೂರು, ಬಾಗಲಕೋಟೆ, ಬಿಜಾಪುರ, ಸಿಂದಗಿ, ಧಾರವಾಡದಲ್ಲಿ ತರಬೇತಿ ಪಡೆದಿದ್ದಾರೆ. ೧೯೮೦ರಲ್ಲಿ ಚಾಂದಕವಟೆಯಲ್ಲಿ ೧೯೮೧ರಲ್ಲಿ ಧಾರವಾಡದಲ್ಲಿ, ೧೯೮೯ರಲ್ಲಿ ಕೊಲಾರದ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಪ್ರಜೋದಿಸಿ ಮಕ್ಕಳಿಗೆ ಬೋಧಿಸಿದ್ದಾರೆ.[೧೪೨]

೧೯೮೧ರಲ್ಲಿ ಏಕವ್ಯಕ್ತಿ ಕಲಾಪ್ರದರ್ಶನ ಧಾರವಾಡ, ೧೯೮೬-೮೯ರಲ್ಲಿ ಕೋಲಾರ ಜಿಲ್ಲೆ ಉನಿಗಡದಲ್ಲಿ ಕಲಾಕೃತಿಗಳ ಪ್ರದರ್ಶನ ಮಾಡಿದ್ದಾರೆ. ಶ್ರೀಯುತರು ರಚಿಸಿದ ಅನೇಕ ತೈಲ, ಜಲವರ್ಣ, ಅಕ್ರಾಲಿಕ್ ಮಾಧ್ಯಮದ ಕಲಾಕೃತಿಗಳು ಬೆಂಗಳೂರು, ದೆಹಲಿ, ಮುಂಬೈ, ಬಿಜಾಪುರ, ದಹಲಿ, ಬೆಳಗಾವಿ, ಧಾರವಾಡ ಮತ್ತು ಬೇರೆ ಬೇರೆ ಊರುಗಳಲ್ಲಿ ಸಂಗ್ರಹಗೊಂಡಿವೆ.

ಶ್ರೀ ಜಿ.ಎಸ್.ಭೂಸಗೊಂಡರವರು ಅನ್ನ ಆಹಾರವಿಲ್ಲದೆ ೪೩ ದಿನಗಳ ಕಾಲ ಗವಿಯಲ್ಲಿದ್ದು ಕುಂಡಲಿನಿಯೋಗದ ಅನುಷ್ಠಾನ ಮಾಡಿದ್ದಾರೆ. ಇವರ ಕಲಾಸಾಧನೆಯನ್ನು ಯೋಗಸೇವೆಯನ್ನು ಮೆಚ್ಚಿ ಅನೇಕ ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿದ್ದಾರೆ. ಸಧ್ಯ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಕಲಾವಾರ್ತೆಯ ಸಂಪಾದಕರಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಸುಮಾರು ೭೬ ಉಚಿತ ಯೋಗಶಿಬಿರ ನಡೆಸಿ ಸಮಾಜಸೇವೆ ಮಾಡಿದ್ದಾರೆ.

ಎನ್.ಕೆ. ಹಾಳಕೇರಿ : ಶ್ರೀ ಎನ್.ಕೆ.ಹಾಳಕೇರಿಯವರು ಗದಗ ಜಿಲ್ಲೆಯ ಹಡಗಲಿಯಲ್ಲಿ ೧೯೫೫ರಲ್ಲಿ ಜನಿಸಿದರು. ಇವರು ಗದಗನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿದರು. ಇವರು ವಿಜಯ ಕಲಾಮಂದಿರದಲ್ಲಿ ಆರ್ಟ್ ಮಾಸ್ಟರ್ ಮತ್ತು ಡಿಪ್ಲೋಮಾ ಪರೀಕ್ಷೆಗಳನ್ನು ಪಾಸುಮಾಡಿದರು. ಕೆಲವು ವರ್ಷಗಳ ವರೆಗೆ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ವೃತ್ತಿಯೊಂದಿಗೆ ಕಲಾಕೃತಿಗಳನ್ನು ರಚನೆ ಮಾಡುತ್ತಾ ಬಂದಿದ್ದಾರೆ. ಇವರ ಕಲಾಕೃತಿಗಳಲ್ಲಿ ಜಲವರ್ಣ, ಸಂಯೋಜನಾ ಕೃತಿಗಳಲ್ಲಿ ಗ್ರಾಮೀಣ ಬದುಕಿನ ನೈಜ ಘಟ್ಟವನ್ನು ಚಿತ್ರಿಸಿದ್ದಾರೆ. ತೈಲವರ್ಣಗಳಿಂದ ಚಿತ್ರಗಳನ್ನು ರಚನೆ ಮಾಡಿದ್ದಾರೆ. ಇವರು ವಿಶೇಷವಾಗಿ ರೇಖಾಚಿತ್ರಗಳನ್ನೇ ರಚನೆ ಮಾಡುತ್ತಿರುತ್ತಾರೆ. ಇವರು ಮೃದು ಸ್ವಭಾವದವರಾಗಿದ್ದು ಇವರ ಆಚಾರ-

೧೪೨. ಕಲಾವಾರ್ತೆ ಕ.ಲ.ಕ. ಅಕಾಡಮಿ ಸಂಚಿಕೆ ೬೦ ಪು.ಸಂ. ೩೫

ವಿಚಾರ ಸಾಂಪ್ರದಯದ ಪಾಲನೆಯೊಂದಿಗೆ ಬಾಳುವವರಾಗಿದ್ದಾರೆ. ಇವರ ವಿಚಾರ ಶಕ್ತಿಯನ್ನು ಕಲಾಕೃತಿಯಲ್ಲಿ ಪ್ರತಿಬಿಂಬಿಸುವುದರಲ್ಲಿಯೇ ತೋರಿಸುತ್ತಾರೆ.[೧೪೩]

ಎನ್.ಕೆ.ಹಾಳಕೇರಿಯವರು ಕಲಾಶಿಬಿರ, ಕಲಾಪ್ರದರ್ಶನಗಳು, ವಿಚಾರ ಸಂಕಿರಣಗಳನ್ನು ನಡೆಸಿದ್ದಾರೆ. ಇವರ ಕಲಾಶಿಬಿರದಲ್ಲಿ ಗದಗ, ಮೈಸೂರು, ಧರವಾಡ, ಗುಲಬರ್ಗಾ, ಚೆನ್ನೈ ಬೆಂಗಳೂರುಗಳಲ್ಲಿ ನಡೆದ ಕಲಾಶಿಬಿರಗಳಲ್ಲಿ ಭಗವಹಿಸಿ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ತಮ್ಮ ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಇವರ ಕಲಾಕೃತಿಗಳು ದೆಹಲಿ, ಧಾರವಾಡ, ಹುಬ್ಬಳ್ಳಿ, ಸಿಂಗನಹಳ್ಳಿ, ಕೌಜಲಗಿ, ಇನ್ನೂ ಹಲವಾರು ಕಡೆಗಳಲ್ಲಿ ಸಂಗ್ರಹಗೊಂಡಿವೆ. ಇವರು ಕಲಾಕೃತಿಯಲ್ಲಿ ವಿಶೇಷವಾಗಿ ಉಗುರಿನಿಂದ ಕಲಾಕೃತಿಗಳನ್ನು ರಚನೆ ಮಾಡುತ್ತಾರೆ. ಇವುಗಳನ್ನು ಪ್ರತ್ಯೇಕ ಪ್ರದರ್ಶನಗಳನ್ನು ನಡೆಸಿದ್ದಾರೆ. ಈಗ ಇವರು ಜೆ.ಎಸ್.ಎಸ್. ಡಿ.ವಿ.ಹಾಲಭಾವಿ ಸ್ಕೂಲ್ ಆಫ್ ಆರ್ಟ್ ಧಾರವಾಡದಲ್ಲಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ. ಯಾದಪ್ಪ ಪರದೇಶಿ : ಡಾ. ಯಾದಪ್ಪ ಪರದೇಶಿಯವರು ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಕೆರೂರ ಎಂಬ ಗ್ರಾಮದಲ್ಲಿ ೧೯೬೩ರಲ್ಲಿ ಜನಿಸಿದ್ದಾರೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಕೆರೂರ ಗ್ರಾಮದಲ್ಲಿ ಹಾಗೂ ಪಿ.ಯು.ಸಿ. ಮತ್ತು ಬಿ.ಎ. ಪದವಿಯನ್ನು ಬಾಗಲಕೋಟೆಯ ಶ್ರೀ ಬಸವೇಶ್ವರ ಮಹಾವಿದ್ಯಾಲಯದಲ್ಲಿ ಪೂರೈಸಿದ್ದಾರೆ. ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿರುವುದರಿಂದ ಚಿತ್ರಕಲಾ ಅಭ್ಯಾಸಕ್ಕಾಗಿ ವಿಜಯ ಕಲಾಮಂದಿರದಲ್ಲಿ ಪ್ರವೇಶ ಪಡೆದು ಡಿ.ಎಂ.ಸಿ. ಪರೀಕ್ಷೆ ಪಾಸಾಗಿದ್ದಾರೆ. ಬಿ.ಎಫ್.ಎ. ಪದವಿಯನ್ನು ವಿಜಯ ಕಲಾಮಂದಿರದಿಂದ ಪಡೆದುಕೊಂಡಿದ್ದಾರೆ ಸರಳ ಸ್ವಭಾವದವರಾದ ಮತ್ತು ಉತ್ತಮ ವಿದ್ಯಾರ್ಥಿಯಾದ ಯಾದಪ್ಪ ಅವರ ಕಲಾಪ್ರತಿಭೆಯನ್ನು ಮೆಚ್ಚಿ ತಾವು ಕಲಿತ ಕಲಾಶಾಲೆಯಲ್ಲಿಯೇ ಮೂರು ವರ್ಷಗಳ ವರೆಗೆ ಉತ್ತಮ ಸೇವೆ ಸಲ್ಲಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು.[೧೪೪]

ಸದಾ ಅಧ್ಯಯನಶೀಲರಾದ ಯಾದಪ್ಪ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಮುಂದೆ ಉತ್ತರ ಕರ್ನಾಟಕ ಭಿತ್ತಿಚಿತ್ರಕಲೆ ಎಂಬ ವಿಷಯದ ಮೇಲೆ ಕಲಾವಿದರು ಸಂಶೋಧಕರಾದ ಡಾ. ಎಸ್.ಸಿ.ಪಾಟೀಲ ಅವರ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಯಾದಪ್ಪ ಪರದೇಶಿಯವರು ಕನ್ನಡ ವಿಶ್ವವಿದ್ಯಾಲಯದ ಗೌರವ ಅಧ್ಯಾಪಕರಾಗಿ ಸೇವೆ ಸೇರಿ ಬೋಧನಾ ಕಾರ್ಯ ಮಾಡುತ್ತ ಚಿತ್ರಕಲಾ ಇತಿಹಾಸ ವಿಷಯದಲ್ಲಿ ವಿಶೇಷವಾದ ಅಧ್ಯಯನ ಮಾಡಿದ ಯಾದಪ್ಪ ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆ ಮಾಡುವುದರ ಮೂಲಕ ಅನೇಕ ಬಿ.ವಿ.ಎ. ಪದವಿ ವಿದ್ಯಾರ್ಥಿಗಳಿಗೆ ಸಂಶೋಧನೆಯ ಕುರಿತು ಮಾರ್ಗದರ್ಶನ ಮಾಡುತ್ತಿದ್ದಾರೆ.[೧೪೫] ಚಿತ್ರಕಲೆ ಮತ್ತು ಚಿತ್ರಕಲಾ ಸಾಹಿತ್ಯದ ಬಗ್ಗೆ ಒಲವು ಮತ್ತು ಪ್ರಬುದ್ಧತೆಯನ್ನು ಹೊಂದಿದ ಇವರು ಪದವಿ ಇತಿಹಾಸದಲ್ಲಿ ಆಳವಾದ ಅಧ್ಯಯನ ಮಾಡಿದ

೧೪೩. ಎನ್.ಕೆ. ಹಾಳಕೆರಿಯವರ ದಾಖಲಾತಿಗಳಿಂದ ಸಂಗ್ರಹ

೧೪೪. ಡಾ. ಯಾದಪ್ಪ ಪರದೇಶಿ ಸಂದರ್ಶನ ದಿನಾಂಕ: ೨೦-೮-೨೦೦೮

೧೪೫. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರಕ್ಕೆ ವಿಜಯಕಲಾಮಂದಿರದ ಕೊಡುಗೆ ಪು.ಸಂ. ೬೫

ಇವರು ಚಿತ್ರಕಲೆಯಲ್ಲಿ ಅಷ್ಟೇ ಪ್ರಬುದ್ಧತೆಯನ್ನು ಹೊಂದಿದ್ದಾರೆ. ಅನೇಕ ಕಲಾಪ್ರದರ್ಶನ, ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಶೀಗಿ ಚಿತ್ರಕಲೆ ಪುಸ್ತಕವು ರಾಜ್ಯ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡಿದೆ. ಅಲ್ಲದೆ ಇವರು ಬರೆದ ಇನ್ನೂ ಎರಡು ಪುಸ್ತಕಗಳು ಪ್ರಕಟಣೆಯ ಹಂತದಲ್ಲಿದೆ. ಅನೇಕ ಪತ್ರಿಕೆಗಳಲ್ಲಿ ಕಲಾ ವಿಷಯಗಳ ಕುರಿತು ಪ್ರಕಟಣೆಗೊಂಡಿವೆ. ಹಲವಾರು ಲೇಖನಗಳನ್ನು ಬರೆದಿದ್ದಾರೆ. ಸದಾ ಕ್ರಿಯಾಶೀಲರಾದ ಯಾದಪ್ಪ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಂಡಳಿ ಹಾಗೂ ಪರೀಕ್ಷಾ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ. ಯಾದಪ್ಪ ಪರದೇಶಿಯವರು ಉತ್ತಮ ಕಲಾವಿದರಾದ ಇವರು ಅನೇಕ ಕಲಾಕೃತಿಗಳು ಬೆಂಗಳೂರು, ಗುಲಬರ್ಗಾ, ಗದಗ, ಧಾರವಾಡ, ಹಂಪಿ, ಹೊಸಪೇಟೆ, ಬಾದಾಮಿ, ಬಾಗಲಕೋಟ, ಕೂಡಲಸಂಗಮ ಮತ್ತು ಬರ್ಮಾ ದೇಶಗಳಲ್ಲಿ ಪ್ರದರ್ಶನಗೊಂಡಿವೆ. ರಾಜ್ಯದ ಅನೇಕ ಕಡೆ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ರಾಜ್ಯದ ಅನೇಕ ಚಿತ್ರಕಲಾ ಮಹಾವಿದ್ಯಾಲಯಗಳಿಗೆ ಉಪನ್ಯಾಸ ನೀಡಿದ್ದಾರೆ. ಹೀಗೆ ಡಾ. ಯಾದಪ್ಪ ಪರದೇಶಿಯವರು ಚಿತ್ರಕಲೆಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಎಂ.ಸಿ. ಚೆಟ್ಟಿ : ಶ್ರೀ ಎಂ.ಸಿ. ಚೆಟ್ಟಿಯವರು ಹುಬ್ಬಳ್ಳಿಯಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ ಇವರು ಚಿತ್ರಕಲಾ ಅಭ್ಯಾಸ ಮಾಡಲು ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯಕ್ಕೆ ಪ್ರವೇಶ ಪಡೆದು ಆರ್ಟ್ ಮಾಸ್ಟರ ಪರೀಕ್ಷೆ ಪಾಸುಮಾಡಿಕೊಂಡರು. ಜಲವರ್ಣ ತೈಲವರ್ಣ, ಕ್ರೆಯಾನ್ಸ್ ಮಾಧ್ಯಮದಲ್ಲಿ ನಿಸರ್ಗಚಿತ್ರ, ಸ್ಥಿರಚಿತ್ರ, ಭಾವಚಿತ್ರಗಳಲ್ಲಿ ವಿಶೇಷ ಆಸಕ್ತಿ ಹೊಂದಿದ ಚೆಟ್ಟಿಯವರು ಉತ್ತಮ ಕಲಾವಿದರಾಗಿ ಹೊರ ಹೊಮ್ಮುತಿದ್ದಂತೆ ತಾವು ಕಲಿತ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ಸೇವೆಗೆ ಸೇರಿಕೊಂಡರು. ಶ್ರೀ ಬಸವರಾಜ ಹಳಿಜೋಳರವರ ಪ್ರಭಾವದಿಂದ ಭಾವಚಿತ್ರದಲ್ಲಿ ಪರಿಣಿತಿಯನ್ನು ಪಡೆದುಕೊಂಡಿದ್ದಾರೆ. ಶ್ರೀ ಎಂ.ಸಿ. ಚೆಟ್ಟಿಯವರು ರಾಜ್ಯ ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನ, ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿ ಪುರಸ್ಕಾರ ಪಡೆದುಕೊಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ರಾಷ್ಟ್ರೀಯ ಪ್ರಶಸ್ತಿ, ಭಾವಚಿತ್ರದಲ್ಲಿ ಹಲವು ಪ್ರಶಸ್ತಿ ಪುರಸ್ಕಾರಪಡೆದು ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ.[೧೪೬]

ಶ್ರೀ ಎಂ.ಸಿ. ಚೆಟ್ಟಿಯವರು ಬೆಂಗಳೂರು, ದೇಹಲಿ, ಬಾಂಬೆ, ಪೂಣಾ, ಕೊಚ್ಚಿ, ನಾಗಪೂರ, ಕೇರಳ, ಗೋವಾ, ಹುಬ್ಬಳ್ಳಿ, ಧಾರವಾಡ, ಗದಗ, ಮುಂತಾದ ಕಡೆನಡೆದ ಕಲಾಪ್ರದರ್ಶ ರಾಜ್ಯರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಹಲವಾರು ಕಡೆಗಳಲ್ಲಿ ಪ್ರತ್ಯಕ್ಷತೆಯನ್ನು ನೀಡಿ ಜನಮೆಚ್ಚುಗೆ ಪಡೆದುಕೊಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೇಮಿಯ ಸದಸ್ಯರಾಗಿ ಅನೇ ಕೆಲಸಗಳನ್ನು ಮಾಡಿದ್ದಾರೆ. ವಿಜಯ ಕಲಾ ಮಂದಿರದಿಂದ ಬಿ.ಎಫ್.ಎ. ಪದವಿಯನ್ನು ಪಡೆದುಕೊಂಡ ಇವರು ರಾಜ್ಯ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದ ಉತ್ತಮ ಕಲಾವಿದರಾಗಿ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಪ್ರಭಾರಿ ಪ್ರಾಚಾರ್ಯರಾಗಿ ಕೆಲಸ ಮಾಡುತ್ತಿದ್ದಾರೆ.

---

೧೪೬. ಎಮ್.ಸಿ. ಚೆಟ್ಟಿಯವರ ದಾಖಲಾತಿಯವರ ಸಂಗ್ರಹ

ಸಿ.ಡಿ. ಜಟ್ಟೆಣ್ಣವರ : ಸಿ.ಡಿ.ಜಟ್ಟೆಣ್ಣವರ ಇವರು ೧೯೬೮ರಲ್ಲಿ ಗದಗ ಬೆಟಗೇರಿಯಲ್ಲಿ ಜನಿಸಿದ್ದಾರೆ. ಬಾಲ್ಯದಿಂದ ಚಿತ್ರಕಲೆಯಕಡೆಗೆ ಒಲವು ಇರುವುದರಿಂದ ಪ್ರೌಢಶಿಕ್ಷಣವನ್ನು ಗದಗನಲ್ಲಿಯೇ ಪೂರೈಸಿ ಚಿತ್ರಕಲಾ ಅಭ್ಯಾಸಕ್ಕಾಗಿ ವಿಜಯ ಕಲಾಮಂದಿರ ಗದಗದಲ್ಲಿ ಪ್ರವೇಶಪಡೆದು ಎಲ್ಲ ಶಿಕ್ಷಕರ ಪ್ರೀತಿ ವಿದ್ಯಾರ್ಥಿಯಾಗಿ ಆರ್ಟ್‌ಮಾಸ್ಟರ ಡಿಪ್ಲೋಮಾ ಪರೀಕ್ಷೆಪಾಸು ಮಾಡಿಕೊಂಡಿದ್ದಾರೆ. ನಂತರ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎಫ್.ಎ. ಸ್ನಾತಕೋತ್ತರ ಪದವಿ ಪಡೆದು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಎಂ.ಫಿಲ್. ಪದವಿಯನ್ನು ಪಡೆದುಕೊಂಡಿದ್ದಾರೆ.[೧೪೭]

ಸದಾ ಕ್ರೀಯಾಶೀಲರಾದ ಜಟ್ಟೆಣವರ ಗದಗ, ಧಾರವಾಡ, ಮುಂಬಯಿ, ದೆಹಲಿ, ಬೆಂಗಳೂರು, ಬಿಜಾಪೂರ, ಮೈಸೂರ, ಚೆನ್ನೈ, ನಾಗಪೂರ ಮುಂತಾದಕಡೆಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಬಿಜಾಪೂರ, ಮೈಸೂರ, ಉಡುಪಿ, ಗದಗ ಧಾರವಾಡ, ದೆಹಲಿ, ಹಂಪಿ, ಬೆಂಗಳೂರು, ಬೆಳಗಾಂವ, ಮೂಡಬಿದರಿ, ಕಿತ್ತೂರ, ಮುಂತಾದ ರಾಜ್ಯ ರಾಷ್ಟ್ರಮಟ್ಟದ ಕಲಾ ಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರತಿಭೆಯವನ್ನು ಹೆಚ್ಚಿಸಿಕೊಂಡಿದ್ದಾರೆ. ಇವರ ಹಲವು ಕಲಾಕೃತಿಗಳು ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ವಾರ್ಷಿಕ ಪ್ರಶಸ್ತಿ, ಅಖಿಲಭಾರತ ಕಲಾ ಪ್ರದರ್ಶನ ಪುಣೆ, ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ಪ್ರದರ್ಶನ ಗದಗ, ಮತ್ತು ಹುಬ್ಬಳ್ಳಿಯಲ್ಲಿ ನಡೆದ ಇನ್‌ಕಾಲೇಕ್ಸ್ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳಿಗೆ ಪ್ರಶಸ್ತಿ ಪಡೆದುಕೊಂಡಿವೆ. ಅಲ್ಲದೆ ದೆಹಲಿಯ ಸಾಂಸ್ಕೃತಿಕ ಇಲಾಖೆಯಿಂದ ಜ್ಯೂನಿಯರ್ ಫೆಲೋಸಿಫ್‌ನ್ನು ಎರಡು ವರ್ಷಗಳವರೆಗೆ ಪಡೆದುಕೊಂಡಿದ್ದಾರೆ.[೧೪೮]

ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಅನೇಕ ಸಂಘ ಸಂಸ್ಥೆಗಳು ಮಠ ಮಾನ್ಯರು ಸನ್ಮಾನಿಸಿ ಗೌರವಿಸಿದ್ದಾರೆ. ಚಿತ್ರಕಲೆಯ ಜೊತೆಗೆ ಅನೇಕ ಸಾಮಾಜಿಕ ಸಂಘ ಸಂಸ್ಥೆಗಳ ಕೆಲಸವನ್ನು ಮಾಡುತ್ತಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡಮಿಯ ಸದಸ್ಯರಾಗಿ ಕನ್ನಡ ವಿಶ್ವವಿದ್ಯಾಲಯದ ಎ.ಟಿ.ಸಿ ಬಿ.ವ್ಹಿ.ಇಡಿ ಅಧ್ಯಯನಮಂಡಳಿಯ ಸದಸ್ಯರಾಗಿ, ಪರೀಕ್ಷಾಮಂಡಳಿಯ ಸದಸ್ಯರಾಗಿ ಉತ್ತಮ ಕೆಲಸಮಾಡಿದ್ದಾರೆ. ಕರ್ನಾಟಕ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘದ ಕಾರ್ಯದರ್ಶಿಯಾಗಿ ಉತ್ತಮವಾದ ಕೆಲಸ ಮಾಡುತ್ತಿದ್ದಾರೆ.

ಹುಬ್ಬಳ್ಳಿಯ ವಿಜಯ ಮಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ. ಸೃಜನಾತ್ಮ ಪಾಠಭೋಧನೆ ಮಾಡುವುದರೊಂದಿಗೆ ಅನೇಕ ವಿದ್ಯಾರ್ಥಿಗಳಿಗೆ ಮಾಗದರ್ಶನ ಮಾಡುತ್ತಿದ್ದಾರೆ. ಇವರ ಅನೇಕ ಕಲಾಕೃತಿಗಳು, ಬೆಂಗಳೂರು, ಹುಬ್ಬಳ್ಳಿ ರಾಜಸ್ಥಾನ, ಪುನಾ, ದೆಹಲಿ, ಹಂಪಿ ಧಾರವಾಡ, ಗದಗ, ಮೈಸೂರು, ಮೂಡಬಿದರಿ, ಬೆಳಗಾಂವ ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ.

ಮಹೇಶ ಹೊಸಳ್ಳಿಮಠ : ಮಹೇಶ ಹೊಸಳ್ಳಿಮಠ ಅವರು ಬಿಜಾಪುರದಲ್ಲಿ ೧೯೬೭ರಲ್ಲಿ ಜನಿಸಿದ್ದಾರೆ. ಬಿಜಾಪುರದಲ್ಲಿ ಇವರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಪಡೆದುಕೊಂಡು

೧೪೭. ಸಿ.ಡಿ. ಜೆಟ್ಟೆಣ್ಣವರ ಸಂದರ್ಶನ ದಿನಾಂಕ ೨೮-೧೦-೨೦೧೦
೧೪೮. ಸಿ.ಡಿ. ಜೆಟ್ಟೆಣ್ಣವರ ದಾಖಲಾತಿಗಳ ಸಂಗ್ರಹ

ಬಂದು ಗದುಗಿನ ವಿಜಯ ಕಲಾಮಂದಿರದಲ್ಲಿ ಚಿತ್ರಕಲಾ ಶಿಕ್ಷಣವನ್ನು ಕಲಿಯಲು ಪ್ರವೇಶ ಪಡೆದರು. ಇಲ್ಲಿ ಇವರು ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಪಡೆದಿದ್ದಾರೆ.

ನಂತರ ವೃತ್ತಿ ಜೀವನದೊಂದಿಗೆ ಕಲಾಕೃತಿಗಳನ್ನು ರಚನೆ ಮಾಡುತ್ತಾ ಇವರು ಕಲಾಕೃತಿಗಳ ಶಿಬಿರಗಳು ಸ್ಪಂದನ ಕಲಾಪರಿಷತ್ತಿನ ರಾಜ್ಯಮಟ್ಟದ ಚಿತ್ರಕಲಾ ಶಿಬಿರ ಬೆಳಗಾವಿಯಲ್ಲಿ ನಡೆದ ಕಾವ್ಯ-ಕುಂಚ-ಗಾಯನ ಕಾರ್ಯಕ್ರಮ ಧಾರವಾಡ ಜಿಲ್ಲಾ ಉತ್ಸವ ಲಲಿತಕಲಾ ಅಕಾಡೆಮಿ ಶಿಬಿರ, ಮೂಡಬಿದರಿ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಮತ್ತು ಕಲಾಕೃತಿಗಳನ್ನು ರಚನೆ ಮಾಡಿ ಕಲಾ ಪ್ರದರ್ಶನಗಳನ್ನು ಮಾಡಿದ್ದಾರೆ. ಇವರ ಕಲಾಕೃತಿಗಳು ಗದಗ, ಮಿಚಿಗನ್ ಪಂಡರಾಪುರ, ಗುಲ್ಬರ್ಗಾ ಮತ್ತು ಹುಬ್ಬಳ್ಳಿಗಳಲ್ಲಿ ಸಂಗ್ರಹಗೊಂಡಿವೆ. ಮಹೇಶ ಹೊಸಳ್ಳಿಮಠರವರಿಗೆ ಕಲಾಕೌಶಲ್ಯತೆಗೆ ಅನೇಕ ಪ್ರಶಸ್ತಿ ಬಹುಮಾನಗಳು ದೊರಕಿವೆ. ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಗದಗ, ಪ್ರದರ್ಶನ ಮತ್ತು ಕಾರ್ಯಾಗಾರ, ರಾಷ್ಟ್ರೀಯ ಕಲಾಮೇಳ, ಕಲಾ ಇತಿಹಾಸ ವಿಚಾರ ಸಂಕಿರಣ, ೯ನೇ ಕನ್ನಡ ಸಾಹಿತ್ಯ ಸಮ್ಮೇಳನ ದರೋಜಿ ಮುಂತಾದ ಕಡೆಗಳಲ್ಲಿ ಭಾಗವಹಿಸಿದ್ದಾರೆ.[೧೪೯]

ಈಗ ಇವರು ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ರಾಜು ತೇರದಾಳ : ರಾಜು ತೇರದಾಳ ಅವರು ಗದಗನಲ್ಲಿ ೧೯೬೬ರಲ್ಲಿ ಜನಿಸಿದರು. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣವನ್ನು ಇಲ್ಲಿಯೇ ಮುಗಿಸಿದರು. ನಂತರ ವಿಜಯ ಕಲಾಮಂದಿರದಲ್ಲಿ ಆರ್ಟ್ ಮಾಸ್ಟರ್ ಮತ್ತು ಡಿಪ್ಲೋಮಾ ಪರೀಕ್ಷೆಯನ್ನು ಪಡೆದುಕೊಂಡರು. ಈಗ ಕೊಪ್ಪಳ ಸಮೀಪದ ಹಲಗೇರಿ ಎಂಬ ಗ್ರಾಮದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಕಲಾಕೃತಿಗಳು ಗದಗ, ಕೊಪ್ಪಳ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ನಾಗಪುರ, ನವದೆಹಲಿ, ಮುಂಬಯಿ, ಗೋವಾ, ಕಲ್ಕತ್ತಾ, ಮದ್ರಾಸ್, ರಾಮನಗರ ಮತ್ತು ತುಮರಿಗಳಲ್ಲಿ ಪ್ರದರ್ಶನಗೊಂಡಿವೆ. ಮೈಸೂರ, ಬೆಂಗಳೂರು, ಹುಬ್ಬಳ್ಳಿ, ಮುಂತಾದ ಕಡೆಗಳಲ್ಲಿ ನಡೆದ ಕಲಾಶಿಬಿರಗಳಲ್ಲಿ ಭಾಗವಹಿಸಿ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ.[೧೫೦]

ಇವರಿಗೆ ಸಂದ ಪ್ರಶಸ್ತಿಗಳು ಮೈಸೂರು ದಸರಾ ಪ್ರಶಸ್ತಿ, ಅಖಿಲ ಭಾರತ ಪೇಂಟಿಂಗ್ ಪ್ರಶಸ್ತಿ, ದಕ್ಷಿಣ ವಲಯದ ನಾಗಪುರ ಮೈಸೂರು, ಹುಬ್ಬಳ್ಳಿ, ನಾಗಪುರ, ದೆಹಲಿ, ಮುಂಬಯಿ, ತುಮರಿಗಳಲ್ಲಿ ಸಂಗ್ರಹಗೊಂಡಿವೆ. ಇವರು ನವ್ಯ ಶೈಲಿಯಲ್ಲಿ ಕಲಾಕೃತಿಗಳನ್ನು ರಚನೆಮಾಡುತ್ತಾರೆ. ತೈಲವರ್ಣ, ಜಲವರ್ಣಗಳಿಂದ ಕಲಾಕೃತಿಗಳನ್ನು ರಚನೆ ಮಾಡುತ್ತಾರೆ.

ಶಂಕ್ರಪ್ಪ ಕುಂದಗೋಳ : ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಶಲವಡಿ ಎಂಬ ಗ್ರಾಮದಲ್ಲಿ ೧೯೭೬ರಲ್ಲಿ ಕೃಷಿಕ ಕುಟುಂಬದಲ್ಲಿ ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹುಟ್ಟೂರಲ್ಲಿ ಪೂರೈಸಿದರು. ಬಾಲ್ಯದಲ್ಲಿಯೇ ಚಿತ್ರಕಲೆಯ ಒಲವು ಇದ್ದ ಇವರಿಗೆ

೧೪೯. ಮಹೇಶ ಹೊಸ್ಸಳ್ಳಿಮಠರವರ ಸಂದರ್ಶನ ದಿನಾಂಕ: ೨೯-೧೦-೨೦೧೦

೧೫೦. ಕಲಾವಾರ್ತೆ ಕ.ಲ.ಕ. ಅಕಾಡೆಮಿ ಸಂಚಿಕೆ- ೬೦ ಪು.ಸಂ. ೧೨

ಚಿತ್ರಕಲಾ ಶಿಕ್ಷಕರಾದ ಧಾರವಾಡ ಇವರು ವಿಜಯ ಮಹಾಂತೇಶ ಕಲಾ ಶಾಲೆ, ಹುಬ್ಬಳ್ಳಿಯಲ್ಲಿ ಚಿತ್ರಕಲಾ ಪ್ರವೇಶ ಪಡೆದು ಆರ್ಟ್ ಮಾಸ್ಟರ್ ಡಿಪ್ಲೋಮಾ ಪದವಿಯನ್ನು ೧೯೯೮ರಲ್ಲಿ ಪೂರೈಸಿದರು. ೧೯೯೯ರಲ್ಲಿ ಡ್ರಾಯಿಂಗ ಮತ್ತು ಪೇಂಟಿಂಗ್ ಡಿಪ್ಲೋಮಾ ಪದವಿಯನ್ನು ಪಡೆದರು.

ಹುಟ್ಟು ಹೋರಾಟಗಾರರಾದ ಮತ್ತು ಕ್ರಿಯಾಶೀಲರಾದ ಶಂಕರ ಅವರ ಕೈಗೊಂಡ ಕೆಸಲವಾಗಬೇಕೆಂಬುದು ಅವರ ನಿಲುವು. ವಿದ್ಯಾರ್ಥಿ ದೆಸೆಯಿಂದಲೇ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತ ಸಂಘಟನೆಹೊಂದಿಗೆ ಸಕ್ರೀಯ ಕಾರ್ಯಕರ್ತರಾಗಿ ಹೋರಾಟ ಪ್ರತಿಭಟನೆಗಳನ್ನು ಮೈಗೂಡಿಸಿಕೊಂಡವರು. ಚಿತ್ರಕಲಾ ಶಿಕ್ಷಕ ಸಂಘಟನೆಯಲ್ಲಿ ಕೆಲಸ ಮಾಡುತ್ತ ಚಿತ್ರಕಲಾ ಶಿಕ್ಷಕರ ನೇಮಕಾತಿಗಾಗಿ ಚಿತ್ರಕಲೆಯ ಅಭಿವೃದ್ದಿಗಾಗಿ ಕಲಾ ಚಟುವಟಿಕೆಗಳಲ್ಲಿ ತೊಡಗುತ್ತಿದ್ದಾರೆ.

ಹೋರಾಟದ ಜೊತೆಗೆ ಉನ್ನತ ವ್ಯಾಸಂಗ ಮಾಡಲು ಗದುಗಿನ ವಿಜಯ ಕಲಾ ಮಂದಿರದಿಂದ ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಪಡೆದರು. ಸದಾ ಅಧ್ಯಯನಶೀಲರಾದ ಶಂಕರ ಕುಂದಗೋಳ ಇವರು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಕಲಾವಿದ ಡಿ.ವಿ.ಹಾಲಭಾವಿಯವರು ಕುರಿತು ಅಧ್ಯಯನ ಮಾಡಿ ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ. ಸಧ್ಯ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಡಾ. ಎಸ್.ಸಿ. ಪಾಟೀಲ ಅವರ ಮಾರ್ಗದರ್ಶನದಲ್ಲಿ "ಗಂಜೀಫಾ" ಚಿತ್ರಕಲೆಯ ಕುರಿತು ಪಿ.ಎಚ್.ಡಿ. ಅಧ್ಯಯನ ಮಾಡುತ್ತಿದ್ದಾರೆ.

ಕಲಾ ಸಂಘಟನೆಗಳ ಜೊತೆಗೆ ಅನೇಕ ತೈಲ ಮಾಧ್ಯಮ, ಜಲವರ್ಣ, ಅಕ್ರಾಲಿಕ್ ಮಾಧ್ಯಮದಲ್ಲಿ ಕಲಾಕೃತಿಗಳನ್ನು ರಚಿಸಿ ಬೆಂಗಳೂರು, ಹಂಪಿ, ಗದಗ, ದೆಹಲಿ, ಕೇರಳ, ಪೂನಾ, ಲಕ್ನೋ ಮುಂತಾದ ಕಡೆಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಇವರ ವತಿಯಿಂದ ನಡೆದ ಕಲಾಶಿಬಿರ, ಹುಬ್ಬಳ್ಳಿ, ಧಾರವಾಡ, ಗದಗ, ಹಂಪಿ, ಲಕ್ನೋ ಮುಂತಾದ ಕಡೆಗಳಲ್ಲಿ ಅನೇಕ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ನವದೆಹಲಿ, ಧಾರವಾಡ, ಹುಬ್ಬಳ್ಳಿ, ಗದಗ, ಬೆಂಗಳೂರು, ಲಕ್ನೋ ಮುಂತಾದ ಪ್ರಮುಖ ಸ್ಥಳಗಳಲ್ಲಿ ಸಂಗ್ರಹಿಸಲ್ಪಟ್ಟಿವೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ರಾಜ್ಯದ ಹಲವಾರು ಕಡೆಗಳಲ್ಲಿ ಕಲಾಶಿಬಿರ ಕಲಾಪ್ರದರ್ಶನ, ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ಉತ್ತಮ ಕೆಲಸ ಮಾಡುತ್ತಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಬನಶಂಕರಿ ಬಾದಾಮಿಯ ಶಿಲ್ಪ ಮತ್ತು ವರ್ಣ ಚಿತ್ರಕಲಾ ವಿಭಾಗದಲ್ಲಿ ಅಧ್ಯಾಪಕರಾಗಿ ಕಳೆದ ಆರು ವರ್ಷಗಳಿಂದ ಉತ್ತಮವಾದ ಕೆಲಸವನ್ನು ಮತ್ತು ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ.[೧೫೧] ಕಲಾಕೃತಿ ರಚಿಸುವುದರ ಜೊತೆಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಹಲವಾರು ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ಇವರು ಚಿಕ್ಕವಯಸ್ಸಿನಲ್ಲಿಯೇ ಉತ್ತಮ ಸಾಧನೆ ಮಾಡಿದ್ದಕ್ಕೆ ಹಲವಾರು ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ.

ಬಿ.ಓ. ಶೈಲೇಶ್ : ಇವರು ಶಿವಮೊಗ್ಗದಲ್ಲಿ ೧೯೭೦ರಲ್ಲಿ ಹುಟ್ಟಿದ್ದು ಚಿತ್ರಕಲೆಯಲ್ಲಿ ಆಸಕ್ತಿಇರುವುದರಿಂದ ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ವಿಜಯಕಲಾಮಂದಿರ ಗದಗ ಇಲ್ಲಿಂದ

---

೧೫೧. ಶಂಕರ ಕೊಂದಗೋಳರವರ ಸಂದರ್ಶನ ದಿನಾಂಕ: ೨೯-೧೨-೨೦೦೯

ಬಿ.ಎಫ್.ಎ ಪದವಿಯನ್ನು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿದಿಶೇಯಲ್ಲಿಯೇ ಅನೇಕ ಉತ್ತಮಕಲಾಕೃತಿಗಳನ್ನು ರಚಿಸುತ್ತ ಚೋಳ ಮಂಡಳದ ಕಲಾಗ್ರಾಮದಲ್ಲಿ ಸ್ವತಂತ್ರ ಕಲಾವಿದರಾಗಿ ಕೃತಿ ರಚನೆಮಾಡುತ್ತಿದ್ದಾರೆ. ಶೈಲೇಶ್‌ರವರು ಚೆನ್ನೈ ದೆಹಲಿ, ಮಾಲ್ಡೀಲ್ಸ್, ಜರ್ಮನಿ, ಮುಂಬಿಯ, ಹೈದರಾಬಾದ, ಕೋರಿಯಾ ಬೆಂಗಳೂರು, ಗದಗ, ತಿರುವಣ್ಣಮಲೈ, ಮಧ್ಯಪ್ರದೇಶ, ಹಂಪಿ, ಮುಂತಾದವುಗಳಲ್ಲಿ ನಡೆದ ಕಲಾ ಪ್ರದರ್ಶನ ಮತ್ತು ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಕಲಾಕೃತಿಗಳಿಗೆ ಲಭಿಸಿರುವ ಪ್ರಶಸ್ತಿಗಳಲ್ಲಿ ಚೆನ್ನೈನಗ್ಲೋಬಲ್ ಅಡ್ಡಸ್ಟ್‌ಮೆಂಬ್ ಪ್ರಶಸ್ತಿ ಬೆಂಗಳೂರಿನ ಕೇಜ್ರಿಬಾಲಾ ಪ್ರಶಸ್ತಿ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಸೌಥ್ ಸೇಂಟ್ರಲ್ ರೇಲಾನ್ ನಾಗಪೂರ ಪ್ರಶಸ್ತಿಗಳು ಮುಖ್ಯವಾಗಿವೆ.[೧೫೨]

ಶೈಲೇಶರವರ ಅನೇಕ ಉತ್ತಮವಾದ ಕಲಾಕೃತಿಗಳು ಭಾರತ ಮತ್ತು ವಿದೇಶಗಳಲ್ಲಿಯು ಸಂಗ್ರಹಗೊಂಡಿವೆ. ಸದಾ ಕಲಾಕೃತಿಗಳನ್ನು ರಚಿಸುವುದರ ಮೂಲಕ ಉತ್ತಮಕಲಾ ವಿದರಾಗಿ ಸೇವೆ ಸಲ್ಲಿ ಸುತ್ತಿದ್ದಾರೆ.

ಕಮಲ್ ಅಹ್ಮದ್ ಎಂ. : ಶ್ರೀ ಕಮಲ ಅಹ್ಮದರವರು ೧೯೬೮ ಜುಲೈ ೧೨ ರಂದು ಗದಗದಲ್ಲಿ ಜನಿಸಿದ್ದಾರೆ. ಪ್ರಾಥಮಿಕ ಪ್ರೌಢಶಿಕ್ಷಣವನ್ನು ಗದಗದಲ್ಲಿ ಪೂರೈಸಿ ಉನ್ನತ ಚಿತ್ರಕಲಾ ವ್ಯಾಸಂಗಕ್ಕಾಗಿ ವಿಜಯ ಕಲಾಮಂದಿರದಲ್ಲಿ ಡಿ.ಎಂ.ಸಿ.ಯಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾದಲ್ಲಿ ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದುಕೊಂಡಿದ್ದಾರೆ. ಹಾಗೂ ಬಿ.ಎಫ್.ಎ. ಪದವಿಯಲ್ಲಿಯೂ ಸಹ ಪ್ರಥಮ ರ್‍ಯಾಂಕ್ ಪಡೆಯುವುದರ ಮೂಲಕ ವಿಜಯ ಕಲಾಮಂದಿರಕ್ಕೆ ಹೆಮ್ಮೆಯ ವಿದ್ಯಾರ್ಥಿಯಾಗಿದ್ದಾರೆ. ಸದಾ ಅಧ್ಯಯನಶೀಲರಾದ ಕಮಲ್‌ರವರು ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದಿದ್ದಾರೆ.

ಕಮಲ್ ಅಹ್ಮದವರು ಕಿರುರೂಪ ಚಿತ್ರರಚನೆಯಲ್ಲಿ ಮತ್ತು ಭಾವಚಿತ್ರ ರಚನೆಯಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ್ದಾರೆ. ಇವರು ರಚಿಸಿದ ಅನೇಕ ಕಲಾಕೃತಿಗಳು ಹಲವಾರು ಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಗದಗ, ಬಿಜಾಪುರ, ಲಕ್ಕುಂಡಿ, ಬೆಂಗಳೂರು, ನ್ಯೂಡೆಲ್ಲಿ, ಲಕ್ನೋ, ಪಾಂಡಿಚೇರಿ, ಗೋವಾ ಕೋಲ್ಕತ್ತಾ, ಮೈಸೂರು, ಜೈಪುರ, ಗುಲಬರ್ಗಾ, ನಾಗಪುರ, ಆಂದ್ರಪ್ರದೇಶ, ಉಡುಪಿ ಮುಂತಾದ ಅನೇಕ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಕ್ರೀಯಾಶೀಲರಾದ ಇವರು ಗದಗ, ಹುಬ್ಬಳ್ಳಿ, ಧಾರವಾಡ, ಹೊಸಪೇಟೆ, ಹಂಪಿ, ಬಳ್ಳಾರಿ, ಬೆಂಗಳೂರು, ಗೋವಾ, ಕಲ್ಕಿತ್ತಾ, ಚೆನ್ನೈ ಮುಂತಾದ ಹಲವಾರು ಕಲಾಶಿಬಿರಗಳಲ್ಲಿ ಭಾಗವಹಿಸಿ ಅನೇಕ ಕಲಾಕೃತಿಗಳನ್ನು ಅಭಿವ್ಯಕ್ತಿಗೊಳಿಸಿದ್ದಾರೆ.[೧೫೩]

ಕಲಾಪ್ರತಿಭಾನ್ವಿತ ಕಮಲ್ ಅಹ್ಮದ್ ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿ ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿ ಕೊಂಡಿದ್ದಾರೆ. ೧೯೯೨ರಲ್ಲಿ ಉತ್ತಮ ವಿದ್ಯಾರ್ಥಿ ಪ್ರಶಸ್ತಿ, ವಿಜಯ ಕಲಾಮಂದಿರ ಗದಗ, ೧೯೯೨ಸರಲ್ಲಿ ಮೈಸೂರು ದಸರಾ ಪ್ರಶಸ್ತಿ, ೧೯೯೩ರಲ್ಲಿ ರೋಟರಿ ಕ್ಲಬ್‌ದಿಂದ ಪ್ರಶಸ್ತಿ, ೧೯೯೪ರಲ್ಲಿ ಮೆರಿಟ್ ಅವಾರ್ಡ್ ಮೈಸೂರು ದಸರಾ. ೧೯೯೫ರಲ್ಲಿ ಅರಿಕ್ಕಮೇಡಲ ಪ್ರಶಸ್ತಿ

---

೧೫೨. ಶೈಲೇಶ ಓ.ಬಿ. ಅವರ ದಾಖಲಾತಿಗಳ ಸಂಗ್ರಹದಿಂದ

೧೫೩. ಕಮಲ ಹಮ್ಮದ ಅವರ ಸಂದರ್ಶನ ದಿನಾಂಕ: ೨೭-೧೧-೨೦೧೦

ಪಾಂಡಿಚೇರಿ, ೧೯೯೫ರಲ್ಲಿ ವಾರ್ಷಿಕ ಕಲಾ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೧೯೯೫ರಲ್ಲಿ ೯ನೇಯ ಅಖಿಲ ಭಾರತ ಕಲಾ ಪ್ರಶಸ್ತಿ ನಾಗಪೂರ, ೧೯೯೬ರಲ್ಲಿ ೮ನೇ ಅಖಿಲ ಭಾರತ ಜಲವರ್ಣ ಪ್ರಶಸ್ತಿ., ಗುಲಬರ್ಗಾ, ೧೯೯೬ರಲ್ಲಿ ಅಖಿಲ ಭಾರತ ಕಲಾ ಪ್ರದರ್ಶನ ಪ್ರಶಸ್ತಿ ಶಹಬಾದ ಗುಲಬರ್ಗಾ, ೧೯೯೬ರಲ್ಲಿ ಸಾಂಪ್ರದಾಯಿಕ ಕಲಾ ಪ್ರಶಸ್ತಿ, ಮೈಸೂರು ದಸರಾ, ೧೯೯೭ರಲ್ಲಿ ಪೋರ್ಟರೇಟ್ ಮೆರಿಟ್ ಪ್ರಶಸ್ತಿ ಮೈಸೂರು, ೧೯೯೭ರಲ್ಲಿ ಬಂಗಾರದ ಪದಕವನ್ನು ೨ನೇ ಅಖಿಲ ಭಾರತ ಕಲಾಪ್ರದರ್ಶನ ಗುಲಬರ್ಗಾದಿಂದ ಪಡೆದುಕೊಂಡಿದ್ದಾರೆ. ೧೯೯೮ರಲ್ಲಿ ಉತ್ತಮ ಕಲಾವಿದ ಪ್ರಶಸ್ತಿಯನ್ನು ಜಿಲ್ಲಾ ಆಡಳಿತ ಗದಗ ದಿಂದ ಪಡೆದುಕೊಂಡಿದ್ದಾರೆ. ೧೯೯೯ರಲ್ಲಿ ೨೮ನೇ ವಾರ್ಷಿಕ ಕಲಾಪ್ರದರ್ಶನ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೧೯೯೯ರಲ್ಲಿ ಸಾಂಪ್ರದಾಯಿಕ ಕಲಾ ಪ್ರಶಸ್ತಿ ಸಿದ್ದೇಶ್ವರ ಚಿತ್ರಕಲಾ ಮಹಾವಿದ್ಯಾಲಯ ಬಿಜಾಪುರ, ೨೦೦೦ರಲ್ಲಿ ಬಂಗಾರದ ಪದಕ ಹಾಗೂ ಪ್ರತಿಭಾ ರತ್ನ ಪ್ರಶಸ್ತಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೧ರಲ್ಲಿ ಸಾಂಪ್ರದಾಯಿಕ ಕಲಾಪ್ರಶಸ್ತಿ, ೨೦೦೨ರಲ್ಲಿ ಬೆಳಗಾವದ ಆರ್ಟ್ ಪೌಂಡೇಶನ್‌ದಿಂದ ಕಲಾಸಿರಿ ಪ್ರಶಸ್ತಿ ಕಲಾಪ್ರಶಸ್ತಿಯನ್ನು ಪಡೆದು ಅನೇಕ ಸಂಘ-ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟಿದ್ದಾರೆ. ಇವರ ಕಲಾಪ್ರತಿಭೆಯನ್ನು ನೋಡಿ ಅನೇಕ ದಿನಪತ್ರಿಕೆಗಳಲ್ಲಿ ಲೇಖನಗಳು ಕಲಾಕೃತಿಗಳು ಪ್ರಕಟಗೊಂಡಿವೆ.

ಕಮಲ್ ಅಹ್ಮದ್‌ರವರು ಸದಾ ಕ್ರಿಯಾಶೀಲರಾಗಿದ್ದು ಇವರು ಅನೇಕ ಪ್ರೌಢಶಾಲೆಗಳಲ್ಲಿ ಗೌರವ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ಬೇರೆ ಬೇರೆ ಭಾಗಗಳಲ್ಲಿ ಸಂಗ್ರಹಗೊಂಡಿವೆ. ಬೆಂಗಳೂರು, ದೆಹಲಿ, ನಾಗಪುರ, ದಾವಣಗೆರೆ, ಶಹಬಾದ, ಉಡುಪಿ, ಧರ್ಮಸ್ಥಳ, ಯು.ಎಸ್.ಎ. ಹುಬ್ಬಳ್ಳಿ ಗದಗ, ಮುಂಬಯಿ, ತೋಟದಾರ್ಯಮಠ ಗದಗ, ಕೋಲಾರ, ಹೈದರಾಬಾದ್, ಬಿಜಾಪುರ, ಮುಂತಾದ ಅನೇಕ ಸ್ಥಳಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಸದಾ ಕ್ರಿಯಾಶೀಲರಾದ ಕಮಲ್ ಅಹ್ಮದ್ ಉತ್ತಮ ಕಲಾಕೃತಿಗಳನ್ನು ರಚಿಸುವುದರ ಮೂಲಕ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆಯುವುದರ ಮೂಲಕ ಗದಗ ಜಿಲ್ಲೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಸಧ್ಯ ಇವರು ಸರಕಾರಿ ಪ್ರೌಢಶಾಲೆ ಶಿವಪೂರ, ಕಾರ್ಕಳ ತಾಲೂಕ ಉಡುಪಿ ಜಿಲ್ಲೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತ ವಿದ್ಯಾರ್ಥಿಗಳಿಗೆ ಕಲೆಯ ಕುರಿತು ಉತ್ತಮ ಬೋಧನೆ ಮಾಡುತ್ತಿದ್ದಾರೆ.[೧೫೪]

ಡಾ. ನಿಂಗಪ್ಪ ಎಂ. ಅಂಗಡಿ : ಡಾ॥ ನಿಂಗಪ್ಪ ಅಂಗಡಿಯವರು ಭಾಗಲಕೋಟಿ ಜಿಲ್ಲೆಯ ಗ್ರಾಮದಲ್ಲಿ ೧೯೭೭ರಂದು ಜನಿಸಿದ್ದಾರೆ. ಚಿಕ್ಕವನಿರುವಾಗಲೇ ಕಲೆಯಲ್ಲಿ ಆಸಕ್ತಿಯನ್ನು ಹೊಂದಿದ ಇವರು ಉನ್ನತ್ತ ಚಿತ್ರಕಲಾ ಅಭ್ಯಾಸಗಕ್ಕಾಗಿ ವಿಜಯಕಲಾ ಮಂದಿರ ಗದಗದಲ್ಲಿ ಎ.ಎಂ.ಜಿ.ಡಿ. ಪರೀಕ್ಷೆಪಾಸಾಗಿ ಸ್ನಾತಕೋತ್ತರ ಪದವಿ (ಎಂ.ಎಫ್.ಎ) ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪಡೆದಿದ್ದಾರೆ.[೧೫೫] ಸದಾಕ್ರೀಯಾಶೀಲರಾದ ಡಾ.ಎನ್.ಎಂ. ಅಂಗಡಿಯವರು ಅನೇಕ ರಾಜ್ಯಮಟ್ಟದ ಚಿತ್ರ ಪ್ರದರ್ಶನ, ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ವಿಚಾರ ಸಂಕಿರ್ಣದಲ್ಲಿ ವಿಷಯ ಮಂಡನೆಮಾಡಿದ್ದಾರೆ. ಡಾ. ಎನ್.ಎಂ. ಅಂಗಡಿಯವರ ಅನೇಕ ಕಲಾಕೃತಿಗಳು, ಗದಗ,

೧೫೪. ಪಿ.ಬಿ. ಬಂಡಿ ಚಿತ್ರಕಲಾ ಕ್ಷೇತ್ರ ವಿಜಯಕಲಾಮಂದಿರ ಕೊಡುಗೆ ಪು.ಸಂ. ೧೦೫

೧೫೫. ಡಾ. ನಿಂಗಪ್ಪ ಅಂಗಡಿ ಅವರ ಸಂದರ್ಶನ ದಿನಾಂಕ: ೨೪-೩-೨೦೧೦

ಧಾರವಾಡ, ಹುಬ್ಬಳ್ಳಿ, ಬೆಂಗಳೂರು, ದೆಹಲಿ, ಪೂನಾ, ಗುಲಬರ್ಗಾ ಚೈನ್ನೈ, ಮೈಸೂರು, ಲಕ್ಕುಂಡಿ, ಮುಂತಾದಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಉತ್ತಮ ಕಲಾವಿದರಾದ ನಿಂಗಪ್ಪ ಅಂಗಡಿಯವರು ತಮ್ಮ ಕಲಾ ಪ್ರತಿಭೆಯಿಂದ ಕನ್ನಡ ವಿಶ್ವವಿದ್ಯಾಲಯದ ಶಿಲ್ಪ, ಕಲಾ ವಿಭಾಗ ಬನಶಂಕರಿ, ಬದಾಮಿಯಲ್ಲಿ ಪ್ರಾಧ್ಯಪಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ಉತ್ತಮ ಭೋಧನೆಮಾಡುವುದರ ಮೂಲಕ ಒಳ್ಳೆಯ ಅಧ್ಯಾಪಕರಾಗಿದ್ದಾರೆ. ಸದಾಕಲಿಯುವ ಹಂಬಲವನ್ನು ಹೊಂದಿರುವ ಇವರು ಕರ್ನಾಟಕದ ಗಾಜಿನ ಮೇಲಿನ ಚಿತ್ರಕಲೆ ಎಂಬ ವಿಷಯದಲ್ಲಿ ಡಾ॥ ಎಸ್.ಸಿ.ಪಾಟೀಲರ ಮಾರ್ಗದರ್ಶನದಲ್ಲಿ ಅಧ್ಯಯನಮಾಡಿ ಡಿ.ಎಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ.[೧೫೬]

ಸದಾ ಚಿತ್ರಕಲೆಯ ಕುರಿತು ಅಧ್ಯಯನಮಾಡುತ್ತಿರುವುದರ ಜೊತೆಗೆ ಕಂಪ್ಯೂಟರ್ ಶಿಕ್ಷಣವನ್ನು ಪಡೆದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಇವರು ಅನೇಕ ಕಲಾಕೃತಿಗಳು ಗದಗ, ಬೆಂಗಳೂರು, ಹೈದರಾಬಾದ, ದೆಹಲಿ, ಹಂಪಿ, ಧಾರವಾಡ, ಬೆಂಗಳೂರು ಮುಂತಾದ ಪ್ರಮುಖ ಸ್ಥಳಗಳಲ್ಲಿ ಸಂಗ್ರಹ ಗೊಂಡಿವೆ.

ಶ್ರೀ ವ್ಹಿ. ವ್ಹಿ. ಹಿರೇಮಠ : ಶ್ರೀ ವ್ಹಿ.ವಿ.ಹಿರೇಮಠರವರು ಕೊಪ್ಪಳ ಜಿಲ್ಲೆಯ ಯತ್ನಳ್ಳಿ ಎಂಬ ಗ್ರಾಮದಲ್ಲಿ ೧೯೬೩ರಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯಕಡೆಗೆ ಹೆಚ್ಚಿನ ಆಸಕ್ತಿ ಹೊಂದಿದ ಇವರು ಉನ್ನತ ವ್ಯಾಸಂಗಕ್ಕಾಗಿ ವಿಜಯಕಲಾಮಂದಿರಕ್ಕೆ ಪ್ರವೇಶಪಡೆದು ಎಲ್ಲ ಶಿಕ್ಷಕರ ಪ್ರೀತಿಯ ವಿದ್ಯಾರ್ಥಿಯಾಗಿ ಮಾಸ್ಟರ ಪರೀಕ್ಷೆಯಲ್ಲಿ ರಾಜ್ಯಕ್ಕೆ ಎರಡನೆಯ ರ್‍ಯಾಂಕ್ ಪಡೆದುಕೊಂಡಿದ್ದಾರೆ. ಮೃದು ಸ್ವಭಾವದವರಾದ ಶ್ರೀ ಹಿರೇಮಠರವರು ಕಲಾಪ್ರತಿಭೆಯಿಂದ ಬಿಜಾಪೂರದ ಶ್ರೀ ಸಿದ್ಧೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಲು ಅನೂಕೂಲವಾಯಿತು. ಅನೇಕ ವಿದ್ಯಾರ್ಥಿಗಳಿಗೆ ಪಾಠಭೋಧನೆಯನ್ನು ಮಾಡಲು ಅವಕಾಶ ಸಿಕ್ಕಿತು. ಸದಾಕಲಿಯಬೇಕು ಎಂಬ ಆಸೆಹೊಂದಿದ ಹಿರೇಮಠರು ಕರ್ನಾಟಕ ವಿಶ್ವವಿದ್ಯಾಲಯದಿಂದ ಕಲಾ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಮತ್ತು ಕನ್ನಡ ವಿಶ್ವವಿದ್ಯಾಲಯದಿಂದ ಎಂ.ವ್ಹಿ.ಎ. ಸ್ನಾತಕೋತ್ತರ ಪದವಿಯನ್ನು ಪಡೆದರು. ಇವರ ಅನೇಕ ಉತ್ತಮವಾದ ಕಲಾಕೃತಿಗಳು ಬಿಜಾಪೂರ ಗದಗ, ಮೈಸೂರು, ಬೆಂಗಳೂರು, ಧಾರವಾಡ, ಹುಬ್ಬಳ್ಳಿ, ಕಲ್ಕತ್ತಾ, ದೇಹಲಿ, ತುಮಕೂರು, ಮುಂತಾದಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಹಿರೇಮಠರು ರಾಜ್ಯ ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರಗಳಲ್ಲಿ, ವಿಚಾರಸಂಕೀರ್ಣಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ವಿದ್ಯಾಲಯಗಳಲ್ಲಿ ಕಲಾಪ್ರತ್ಯಕ್ಷತೆಯನ್ನು ನೀಡಿದ್ದಾರೆ.[೧೫೭] ಇವರ ಹಲವಾರು ಕಲಾಕೃತಿಗಳು ಬಿಜಾಪೂರ, ಗದಗ, ಕೆನಡಾ, ದೇಹಲಿ, ಬೆಂಗಳೂರುಗಳಲ್ಲಿ ಸಂಗ್ರಹಗೊಂಡಿವೆ.

ಮಂಜುನಾಥ ಮಾನೆ : ಶ್ರೀ ಮಾನೆಯವರು ೧೯೬೭ರಲ್ಲಿ ಬಿಜಾಪೂರದಲ್ಲಿ ಹುಟ್ಟಿದ್ದಾರೆ. ಬಾಲ್ಯದಿಂದಲೇ ಚಿತ್ರಕಲೆಯ ಕಡೆಗೆ ಆಸಕ್ತಿ ಇದ್ದ, ಮಾನೆಯವರು ಉನ್ನತ ಚಿತ್ರಕಲಾ ವ್ಯಾಸಂಗಕ್ಕಾಗಿ ವಿಜಯಕಲಾ ಮಂದಿರ ಗದಗದಿಂದ ಆರ್ಟ್‌ಮಾಸ್ಟರ ಡಿಪ್ಲೋಮಾ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೊದಲನೆಯ ರ್‍ಯಾಂಕಪಡೆದುಕೊಂಡ ಪ್ರತಿಭಾನ್ವಿತರು ಸದಾಕಲಿಯುವ ತವಕದಲ್ಲಿರುವ ಮಾನೆಯವರು ಧಾರವಾಡ ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಬಿ.ಇಡಿ. ಪದವಿಯನ್ನು ಪಡೆದುಕೊಂಡಿದ್ದಾರೆ.

---

೧೫೬. ಡಾ. ನಿಂಗಪ್ಪ ಅಂಗಡಿ ಅವರ ದಾಖಲಾತಿಗಳ ಸಂಗ್ರಹದಿಂದ

೧೫೭. ವ್ಹಿ.ವ್ಹಿ. ಹೇರಮಠ ಅವರ ಪರಿಚಯ ಪತ್ರದಿಂದ ಒಂದು ಸಂಗ್ರಹ

ಶ್ರೀ ಮಂಜುನಾಥ ಮಾನೆಯರವರ ಅನೇಕ ಉತ್ತಮವಾದ ಕಲಾ ಕೃತಿಗಳು ಬಿಜಾಪೂರ, ಬೆಂಗಳೂರು, ಗದಗ, ಜಮಖಂಡಿ, ದೆಹಲಿ ಮುಂತಾದ ಕಡೆಗಳಲ್ಲಿ ಪ್ರದರ್ಶನಗೊಂಡಿವೆ. ಬೆಂಗಳೂರು, ಬಿಜಾಪೂರ, ನಾಗಪುರ ಮೈಸೂರು, ಕೇರಳ, ಗದಗ, ಮುಂತಾದ ಕಡೆಗಳಲ್ಲಿ ನಡೆದ ಕಲಾಶಿಬಿರಗಳಲ್ಲಿ ಭಗವಹಿಸಿದ್ದಾರೆ. ಅನೇಕ ಸಂಘಸಂಸ್ಥೆಗಳು ದಸರಾ ಪ್ರಶಸ್ತಿ, ಜಿಲ್ಲಾ ತರಬೇತಿ ಕೇಂದ್ರದಿಂದ ಅತ್ಯುತಮ ಕಲಾವಿದ ಪ್ರಶಸ್ತಿ ಬೆಂಗಳೂರು ಯುವಕ ಕೇಂದ್ರದಿಂದ ಉತ್ತಮ ಕಲಾವಿದ ಪ್ರಶಸ್ತಿ ಲಭಿಸಿವೆ. ಮಾನೆಯವರು ಉತ್ತಮಕಲಾವಿದರು ಹೌದು ಉತ್ತಮ ವೇದಿಕೆ ನಿರ್ಮಾಪಕರ ಕೆಲಸ ಮಾಡಿದ್ದಾರೆ.[೧೫೮] ಪಟ್ಟದಕಲ್ಲು, ನವರಸಪೂರ ಉತ್ಸವಗಳ ವೇದಿಕೆಯನ್ನು ನಿರ್ಮಿಸಿ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಮಾನೆಯವರ ಅನೇಕ ಕಲಾಕೃತಿಗಳು, ದಾವಣಗೇರಿ ಬೆಂಗಳೂರು, ಬಿಜಾಪೂರ, ಗದಗ, ಜಮಖಂಡಿ, ಹುನ್ನೂರು, ಜಮಖಂಡಿ ಹಂಪಿ ಮುಂತಾದಕಡೆಗಳಲ್ಲಿ ಸಂಗ್ರಹಗೊಂಡಿವೆ.

ಡಾ. ಶಶಿಕಲಾ ಹೂಗಾರ : ಶಶಿಕಲಾ ಹೂಗಾರವರು ೧೯೬೬ರಲ್ಲಿ ಗದಗದಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ತಂದೆಯವರ ಕಲಾಪ್ರೇರಣೆಯಿಂದ ಕಲಾಕೃತಿ ರಚಿಸುತ್ತಿದ ಇವರು ಚಿತ್ರಕಲಾ ಅಧ್ಯಯನಕ್ಕಾಗಿ ವಿಜಯ ಚಿತ್ರಕಲಾ ಮಂದಿರದಿಂದ ಎಂ.ಎಫ್.ಎ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು ಎಲ್ಲರ ಪ್ರೀತಿಗೆ ಪಾತ್ರರಾದ ಇವರು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಡಾ. ಎಸ್.ಸಿ. ಪಾಟೀಲರ ಮಾರ್ಗದರ್ಶನದಲ್ಲಿ ಉತ್ತರ ಕರ್ನಾಟಕದ ತೊಗಲು ಗೊಂಬೆ ಕಲೆಕುರಿತು ಪಿ.ಹೆಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ. ಜಲವರ್ಣ, ತೈಲವರ್ಣದಿಂದ ಉತ್ತಮ ಕಲಾಕೃತಿಯನ್ನು ರಚಿಸುವ ಇವರು ರಾಜ್ಯ ಹೊರರಾಜ್ಯಗಳಲ್ಲಿ ಕಲಾಪ್ರದರ್ಶನ ಕಲಾಶಿಬಿರಗಳಲ್ಲಿ ಭಾಗವಹಿಸಿ ಕಲಾಪ್ರತಿಭೆಯನ್ನು ತೋರಿಸಿದ್ದಾರೆ. ಅವುಗಳಲ್ಲಿ ಗದಗ, ಬೆಂಗಳೂರ, ಗುಲಬರ್ಗಾ, ಕೊಲ್ಲಾಪೂರ, ಪುಣೆ, ಹೈದರಾಬಾದ, ಶಹಾಬಾದ, ಬಿಜಾಪೂರ, ಹಂಪಿ, ಗೋವಾ, ಕೇರಳಾ, ಮುಂತಾದವುಗಳು.

ಡಾ. ಶಶಿಕಲಾ ಹೂಗಾರರವರು ಹಲವಾರು ಕಡೆ ನಡೆದ ಕಲಾಪ್ರದರ್ಶನ ಸ್ಪರ್ದೆಗಳಲ್ಲಿ ಬಾಗವಹಿಸಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. ಯುವಕಲಾ ಪ್ರಶಸ್ತಿ, ಹೈದರಾಬಾದ, ರಾಜ್ಯ ಮಟ್ಟದ ಕಲಾಪ್ರಶಸ್ತಿ, ಗದಗ ಸೃಜನಾತ್ಮಕ ಚಿತ್ರಕಲಾ ಶಿಕ್ಷಕ ಪ್ರಶಸ್ತಿ ಔರಗಂಬಾದ ಸೈನಿಕ್ ಸ್ಕೂಲ್, ಬಿಜಾಪೂರ ಮುಂತಾದ ಅನೇಕ ಪ್ರಶಸ್ತಿಗಳು ಹಾಗೂ ಹಲವಾರು ಸಂಘ ಸಂಸ್ಥೆಗಳಿಂದ ಪಡೆದುಕೊಂಡಿದ್ದಾರೆ. ಡಾ. ಶಶಿಕಲಾ ಹೂಗಾರರವರು ಸಧ್ಯ ಬಿಜಾಪೂರ ಸೈನಿಕ ಸ್ಕೂಲ್‌ನಲ್ಲಿ ಚಿತ್ರಕಲಾ ಶಿಕ್ಷಕಿಯಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.[೧೫೯]

ಇವರ ಅನೇಕ ಕಲಾಕೃತಿಗಳು ಹಲವಾರು ಕಡೆಗಳಲ್ಲಿ ಸಂಗ್ರಹಗೊಂಡಿವೆ. ಗದಗ, ಗುಲಬರ್ಗಾ, ಹೈದರಾಬಾದ ಗೋವಾ, ಹಂಪಿ, ಬಿಜಾಪೂರ, ಬಾದಾಮಿ, ಬನಶಂಕರಿ, ಬೆಂಗಳೂರು, ಪೂಣೆ, ಮುಂತಾದವುಗಳ ಕಡೆಗಳಲ್ಲಿ.

---

೧೫೮. ಮಂಜುನಾಥ ಮಾನೆಅವರ ದಾಖಲಾತಿಗಳಿಂದ ಸಂಗ್ರಹ

೧೫೯. ಡಾ. ಶಶಿಕಲಾ ಹೂಗಾರರವರ ದಾಖಲಾತಿಗಳಿಂದ ಸಂಗ್ರಹ

ಡಾ. ಮೊಹನರಾವ. ಬಿ. ಪಾಂಚಾಳ : ಮೊಹನರಾವ ಪಾಂಚಾಳರವರು ೧೯೭೪ ಜನವರಿ ೨ರಂದು ಗುಲಬುರ್ಗಾ ಜಿಲ್ಲೆಯ ನರಗುನಂದನಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯ ಕುರಿತು ಆಸಕ್ತಿ ಹೊಂದಿದ ಇವರು ಚಿತ್ರಕಲಾ ಪದವಿಯನ್ನು ಗುಲಬರ್ಗಾದಲ್ಲಿ ಪೂರೈಸಿ. ಉನ್ನತವ್ಯಾಸಂಗಕ್ಕಾಗಿ ಗದುಗಿನ ವಿಜಯ ಕಲಾಮಂದಿರದಲ್ಲಿ ಎಂ.ಎಫ್.ಎ. ಸ್ನಾತಕೊತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ. ಸದಾಕಲಿಯುವ ಹಂಬಲದಲ್ಲಿರುವ ಪಾಂಚಾಳರು ಡಾ. ಎಂ.ಎಸ್.ಪಂಡಿತರವರ ಕುರಿತು ಪಿ.ಹೆಚ್.ಡಿಯನ್ನು ಡಾ. ಎಸ್.ಸಿ.ಪಾಟೀಲರವರ ಮಾರ್ಗದರ್ಶನದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ. ಜಲವರ್ಣ, ತೈಲವರ್ಣ, ಅಕಾಲಿಕ ಮಾಧ್ಯಮದಿಂದ ಹಲವಾರು ಕಲಾಕೃತಿ ರಚಿಸಿದ್ದಾರೆ. ರಾಜ್ಯ, ರಾಷ್ಟ್ರಮಟ್ಟದ ಚಿತ್ರ ಕಲಾಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಬೆಂಗಳೂರು, ದೆಹಲಿ, ಮುಂಬೈಯಿ, ಪೂಣೆ, ಮೈಸೂರ, ಗುಲಬರ್ಗಾ, ಗದಗ ಹುಮನಾಬಾದ, ಲಖನೊ, ಚೈನೈ, ಹೈದರಾಬಾದ, ಯುಎಸ್.ಎ. ಸ್ವೆಜರಲ್ಯಾಂಡ್, ಆಸ್ಟ್ರೇಲಿಯಾ ಸಿಂಗಾಪೂರ, ಪ್ರಾನ್ಸ, ಮುಂತಾದವುಗಳಕಡೆ ಕಲಾಪ್ರದರ್ಶನಮಾಡಿ ಉತ್ತಮ ಕಲಾವಿದರಾಗಿ ಹಂಪೆಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.[೧೬೦] ಮೊಹನರಾವ್ ಪಾಂಚಾಳರವರ ಅನೇಕ ಕಲಾಕೃತಿಗಳು ರಾಜ್ಯ ಹೊರ ರಾಜ್ಯಗಳಲ್ಲಿ ಸಂಗ್ರಹಗೊಂಡಿವೆ.

ಶ್ರೀಧರ. ಎಸ್. ಚವ್ಹಾಣ : ಶ್ರೀಧರ ಚವ್ಹಾಣರವರು ೧೯೭೧ ಎಪ್ರಿಲ್ ೨೪ ರಂದು ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಕೋಳೂರು ತಾಂಡಾದಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿಹೊಂದಿದ ಇವರು ಚಿತ್ರಕಲಾ ಅಧ್ಯಯನಕ್ಕಾಗಿ ಬಿಜಾಪೂರ ಶ್ರೀ ಸಿದ್ದೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಆರ್ಟ್ ಮಾಸ್ಟರ ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಾಸುಮಾಡಿಕೊಂಡರು. ಮುಂದೆ ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ವಿಜಯ ಕಲಾಮಂದಿರ ಗದಗದಿಂದ ಎಮ್.ಎಫ್.ಎ. ಸ್ನಾತಕೊತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ.

ಜಲವರ್ಣದಿಂದ ನಿಸರ್ಗ ಚಿತ್ರ ರಚನೆ ಮಾಡುವುದರಲ್ಲಿ ಸಿದ್ಧಹಸ್ತರಾದ ಇವರು ತೈಲವರ್ಣದಿಂದ ನೈಫ್ ಕಲಾಕೃತಿರಚಿಸುವಲ್ಲಿ ವಿಶೇಷಯನ್ನು ಹೊಂದಿದ್ದಾರೆ. ೧೦, ೧೫ ನಿಮಿಷದಲ್ಲಿ ತೈಲವರ್ಣದಿಂದ ನಿಸರ್ಗಚಿತ್ರ ಮಾಡುವಸಾಮರ್ಥವನ್ನು ಹೊಂದಿದ ಚವ್ಹಾಣರು. ಸೃಜನಾತ್ಮಕ ಕಲೆ ರಚಿಸುವುದರ ಮೂಲಕ ಸಮಾಜದ ಅಂಕುಡೊಂಕತಿದ್ದುವ ಕಲಾಕೃತಿಗಳನ್ನು ರಚಿಸಿ ಮಾಡಿದ್ದಾರೆ. ಹಲವಾರು ಏಕವ್ಯಕ್ತಿ ಕಲಾಪ್ರದರ್ಶನ ಮಾಡಿದ್ದಾರೆ. ರಾಜ್ಯ ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರ, ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಅದರಲ್ಲಿ ಪ್ರಮುಖವಾಗಿ ತಿಂಗಳ ಚಿತ್ರ ಬಿಜಾಪೂರ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ೧೦ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಬಿಜಾಪೂರ, ಗದಗ, ಧಾರವಾಡ, ದೆಹಲಿ, ಬೆಂಗಳೂರು ಮುಂಬಯಿ, ಮೈಸೂರ ಶಿವಮೊಗ್ಗ ಉಡುಪಿ, ಬಸವಕಲ್ಯಾಣ ಬಿದರ ಬೆಳಗಾಂವ, ಕಲ್ಕತ್ತಾ ಮುಂತಾದವುಗಳ ಕಡೆಗಳಲ್ಲಿ ನಡೆದ ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನ ಮತ್ತು ಶಿಬಿರಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಬಸವಶ್ರೀ ಪ್ರಶಸ್ತಿ, ಅಖಿಲ ಭಾರತ ಮಟ್ಟದ ಲೋಕಮಾನ್ಯ ತಿಲಕ ಪ್ರಶಸ್ತಿ, ೭೫ನೇ ಕನ್ನಡ ಸಾಹಿತ್ಯ

---

೧೬೦. ಡಾ. ಮೋಹನರಾವ ಬಿ. ಪಾಚಾಂಳ ಪರಿಚಯ ಪತ್ರ ಸಂಗ್ರಹ

ಸಮ್ಮೇಳನ ಪ್ರಶಸ್ತಿ ೩೩ನೇ ವಾರ್ಷಿಕ ಕಲಾಪ್ರಶಸ್ತಿ ಕರ್ನಾಟಕ ಲಲಿತಕಲಾ ಅಕಡೆಮಿ ಬೆಂಗಳೂರು. ಇಂಡಿಯನ್ ರಾಯಲ್ ಅಕಾಡೆಮಿ ಆರ್ಟ್ ಮತ್ತು ಕಲ್ಚರ್, ಸೊಸಾಯಿಟಿ ಗುಲಬರ್ಗಾ, 'ಕಲಾರತ್ನ ಪ್ರಶಸ್ತಿ' ಬಿದರ ರಾಜ್ಯಮಟ್ಟದ ಚಿತ್ರಕಲಾ ಪ್ರಶಸ್ತಿ, ಬಿಜಾಪೂರ, ದಸರಾ ಪ್ರಶಸ್ತಿ ಮೈಸೂರ, ರಾಜ್ಯಮಟ್ಟದ ಬಲವರ್ಣ ಚಿತ್ರಕಲಾ ಪ್ರಶಸ್ತಿ ಹುಬ್ಬಳ್ಳಿ ಮುಂತಾದ ಪ್ರಶಸ್ತಿ ಪುರಸ್ಕಾರಗಳನ್ನು ಅನೇಕ ಸಂಘ ಸಂಸ್ಥೆಗಳಿಂದ ಪಡೆದು ಕೊಂಡಿದ್ದಾರೆ. ಇವರ ಅನೇಕ ಉತ್ತಮವಾದ ಕಲಾಕೃತಿಗಳು, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ಮೈಸೂರ, ಗುಲಬರ್ಗಾ, ಗದಗ ಬಿದರ, ಬಿಜಾಪೂರ, ಪುಣೆ, ಮುಂಬಯಿ ಕಲ್ಕತ್ತಾ ಮುಂತಾದ ದೇಶ ವಿದೇಶಗಳಲ್ಲಿ ಸಂಗ್ರಹಗೊಂಡಿವೆ.[೧೬೧]

ಆಶಾರಾಣಿ ಬಿ. ನಡೋಣಿ : ಶ್ರೀಮತಿ ಆಶಾರಾಣಿಯವರು ಹಾಸನ ಜಿಲ್ಲೆಯ ಹಳೆಬೀಡುನಲ್ಲಿ ೧೯೭೭ ಜೂಲೈ ೮ ರಂದು ಜನಿಸಿದ್ದರೆ. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿ ಇದ್ದ ಇವರು ಹಾಸನದ ಶಾಂತಲ ಲಲಿತಕಲಾ ಚಿತ್ರಕಲಾ ಮಹಾವಿದ್ಯಾಲಯದಿಂದ ಚಿತ್ರಕಲೆಯಲ್ಲಿ ಆರ್ಟಮಾಸ್ಟರ ಪದವಿ ಪಡೆದುಕೊಂಡಿದ್ದಾರೆ. ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ವಿಜಯಕಲಾಮಂದಿರ ಗದಗದಿಂದ ಪಡೆದುಕೊಂಡಿದ್ದಾರೆ. ರಾಜ್ಯ ಹೊರ ರಾಜ್ಯಗಳಲ್ಲಿ ಕಲಾಪ್ರದರ್ಶನ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ನಾಗಪೂರ, ಮೈಸೂರರು ಬೆಂಗಳೂರು, ಹೈದರಾಬಾದ ಶಹಬಾದ್ ಮುಂತಾದ ಅನೇಕ ರಾಜ್ಯ ರಾಷ್ಟ್ರಮಟ್ಟದಲ್ಲಿ ನಡೆದ ಕಲಾ ಶಿಬಿರ ಪ್ರದರ್ಶನಗಳಲ್ಲಿ ಭಾಗವಹಿಸಿ ಕಲಾಪ್ರತಿಭೆಯನ್ನು ತೋರಿಸಿದ್ದಾರೆ. ಇವರಕಲಾಕೃತಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಲಬಿಸಿದೆ. ಆಶಾರಾಣಿ ನಡೋಣಿಯವರಿಗೆ ಹಲವು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ಹೊರೆತಿವೆ. ೧೯೯೮ ರಿಂದ ೨೦೦೬ರವರೆಗೆ ರಾಜ್ಯದ ಹಲವಾರು ಭಾಗಗಳಲ್ಲಿ ಹತ್ತು ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ಮಾಡಿದ್ದಾರೆ."[೧೬೨] ಇವರ ಅನೇಕ ಕಲಾಕೃತಿಗಳು ಮುಂಬಯಿ, ಮೀರಜ, ಕುಮಾರ ಪಟ್ಟಣಂ, ಗದಗ, ಬೆಳಗಾಂವ, ರಾಯಭಾಗ ಬೆಂಗಳೂರು, ಮುಂತಾದವುಗಳ ರಾಜ್ಯದ ಹಲವಾರು ಕಡೆಗಳಲ್ಲಿ ಸಂಗ್ರಹಗೊಂಡಿವೆ. ಅನೇಕ ಸಾಂಸ್ಕೃತಿಕ ಕಲಾ ಚಟುವಟಿಕೆಯಲ್ಲಿ ಭಾಗವಹಿಸಿದ ಇವರು ಸದ್ಯ ಚಿತ್ರಕಲಾ ಶಿಕ್ಷಕಿಯರಾಗಿ ರಾಯ ಭಾಗತಾಲೂಕಿನ ಸರಕಾರಿ ಪ್ರೌಢಶಾಲೆ ಹಾಲಸಿರಗುರದಲ್ಲಿ ಉತ್ತಮವಾದ ಸೇವೆ ಸಲ್ಲಿಸುತ್ತಿದ್ದಾರೆ.

ಎನ್.ಎಸ್. ಪತ್ತಾರ : ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ೧೯೭೧ರಲ್ಲಿ ಹುಟ್ಟಿದ ಇವರು ಬಾಲ್ಯದಲ್ಲಿಯೇ ತಮ್ಮ ತಂದೆಯ ಪ್ರೇರಣೆಯಿಂದ ಚಿತ್ರಕಲಾ ಅಧ್ಯಯನಕ್ಕಾಗಿ ಗದುಗಿನ ವಿಜಯಕಲಾ ಮಂದಿರದಿಂದ ಬಿ.ಎಫ್.ಎ ಪದವಿಯನ್ನು ಕರ್ನಾಟಕ ವಿಶ್ವವಿದ್ಯಾಲಯದಿಂದ ಎರಡನೇ ರ್‍ಯಾಂಕ್‌ನೊಂದಿಗೆ ಪಾಸಾಗಿದ್ದಾರೆ. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎಫ್.ಎ ಸ್ನಾತಕೊತ್ತರ ಪದವಿಯು ಪಡೆದುಕೊಂಡಿದ್ದಾರೆ. ಸದಾ ಅಧ್ಯಯನ ಶೀಲರಾದ ಪತ್ತಾರ ಚಿತ್ರಕಲಾ ಇತಿಹಾಸ ವಿಷಯದಲ್ಲಿ ವಿಶೇಷ ಅಧ್ಯಯನ ಮಾಡಿದ್ದಾರೆ. ಇವರ ಕಲಾ ಪ್ರತಿಭೆಯನ್ನು ಮೆಚ್ಚಿ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ. ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಅಖಿಲ ಭಾರತ ತೀಲಕ

---

೧೬೧. ಶ್ರೀಧರ ಚವ್ಹಾಣರವರ ದಾಖಲಾತಿಗಳಿಂದ ಸಂಗ್ರಹ

೧೬೨. ಆಶಾರಾಣಿ ನಡೋಣಿಯವರ ದಾಖಲಾತಿಗಳಿಂದ ಸಂಗ್ರಹ

ಪ್ರಶಸ್ತಿ, ಮಾನವ ಸಂಕೇತ ಸನ್ಮಾನ ಪ್ರಶಸ್ತಿ ಮುಂತಾದವುಗಳು ಇವರಿಗೆ ಲಭಿಸಿವೆ. ರಾಜ್ಯ ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ ಮುಂಬಯಿ ಬೆಂಗಳೂರು, ದೆಹಲಿ, ಮಂಗಳೂರು, ಗೋವಾ, ಜಯಪೂರ, ತುಮಕುರು, ಹೈದರಾಬಾದ ಚೆನ್ನೈ, ಉಡುಪಿ, ಕೊಚ್ಚಿನ್, ಗದಗ, ಧಾರವಾಡ ಹುಬ್ಬಳ್ಳಿ, ಮುಂತಾದವುಗಳ ಕಡೆಗೆ ಪ್ರದರ್ಶನವಾಗಿವೆ ಗದಗ, ಗುಲಬರ್ಗಾ, ಧಾರವಾಡ, ತುಮಕೂರು, ಮಂಗಳೂರು, ಹಾಸನ ಮೂಡಬಿದರೆ, ಉಜ್ಜಯಿನಿ, ಕೇರಳ, ದೆಹಲಿ, ಮುಂತಾದ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ತುಮಕೂರು, ಮಂಗಳೂರು, ಬೆಂಗಳೂರು, ಉಡುಪಿ, ಮೈಸೂರು ಹಾವೇರಿ ಮುಂತಾದ ಕಡೆಗಳಲ್ಲಿ ಉಪನ್ಯಾಸ ಮತ್ತು ಪ್ರತ್ಯಕ್ಷಿತೆಯನ್ನು ಮಾಡಿದ್ದಾರೆ.[೧೬೩]

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪರೀಕ್ಷಾಮಂಡಳಿಯ ಸದಸ್ಯರಾಗಿ ಉತ್ತಮ ಸೇವೆಸಲ್ಲಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ದೆಹಲಿ, ಮದ್ರಾಸ್, ಮಣಿಪಾಲ, ಗದಗ, ಹುಬ್ಬಳ್ಳಿ, ಧಾರವಾಡ, ಮೈಸೂರು ಗುಲಬರ್ಗಾ, ಮಂಗಳೂರು, ತುಮಕುರು, ನಾಗಪೂರ, ಕೇರಳ ಕಾಸರಗೂಡು ಮುಂತಾದ ಕಡೆ ಸಂಗ್ರಹಗೊಂಡಿವೆ. ಸದ್ಯ ಇವರು ಮಹಾಲಸಾ ಚಿತ್ರಕಲಾ ಮಹಾವಿದ್ಯಾಲಯ ಮಂಗಳೂರದಲ್ಲಿ ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

ರಮೇಶ ತೇರದಾಳ : ೧೯೭೦ರಲ್ಲಿ ಗದುಗಿನಲ್ಲಿ ಜನಿಸಿದ ಇವರು ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿದವರಾಗಿದ್ದರು ಉನ್ನತ ಚಿತ್ರಕಲಾ, ಅಧ್ಯಯನಕ್ಕಾಗಿ ವಿಜಯಕಲಾಮಂದಿರದಿಂದ ಬಿ.ಎಫ್.ಎ. ಪದವಿಯನ್ನು ಪಡೆದುಕೊಂಡಿದ್ದಾರೆ. ಕಲಿಯುವ ಹಂಬಲದಲ್ಲಿರುವ ರಮೇಶ ಎಂ.ಎಫ್.ಎ ಸ್ನಾತಕೋತ್ತರ ಪದವಿಯನ್ನು ಬೆಂಗಳೂರಿನ ಚಿತ್ರಕಲಾ ಪರಿಷತ್‌ನಿಂದ ಪಡೆದು ಕೊಂಡಿದ್ದಾರೆ. ತಾವೊಬ್ಬ ಸ್ವತಂತ್ರಕಲಾ ವಿದರಾಗಿ ಬದುಕಬೇಕೆಂದು ನಿರ್ಧರಿಸಿ ಅನೇಕ ಕಲಾಕೃತಿಗಳನ್ನು ಕಲಾಪ್ರದರ್ಶನಮಾಡಿ ಕಲಾವಿದರಾಗಿ ಕೆಲಸಮಾಡುತ್ತಿದ್ದಾರೆ. ರಮೇಶರವರ ಕಲಾಕೃತಿಗಳು, ದೆಹಲಿ, ಚೆನ್ನೈ, ಗೋವಾ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ಲಖನೌ, ವಿಶಾಖಪಟ್ಟಣ, ಜಯಪೂರ, ಮೌಂಟ್‌ಅಬು, ಹಾಸನ, ಮುಂಬಯಿ ಮುಂತಾದ ಕಡೆಗಳಲ್ಲಿ ಪ್ರದರ್ಶನ ಗೊಂಡಿವೆ. ಹುಬ್ಬಳ್ಳಿ, ಗದಗ, ಬೆಳಗಾಂವ, ಬೆಂಗಳೂರು, ಗುಲಬರ್ಗಾ, ದಾವಣಗೇರಿ, ಕೇರಳ, ಮೌಂಟ್‌ಅಬು, ರಾಜಸ್ಥಾನ, ಚಿಕ್ಕಮಂಗಳೂರು ಮುಂತಾದಕಡೆ ನಡೆದ ಕಲಾಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಕಲಾಚಾತುರ್ಯವನ್ನು ತೋರಿಸಿದ್ದಾರೆ. ಇವರ ಕಲಾ ಕೌಶಲ್ಯಕ್ಕೆ ಲಬಿಸಿರುವ ಪ್ರಶಸ್ತಿಗಳಲ್ಲಿ ದಸರಾ ಪ್ರಶಸ್ತಿ ಗುಂಟೂರಿನ ರಾಷ್ಟ್ರೀಯ ಚಿತ್ರಕಲಾ ಪ್ರಶಸ್ತಿ, ಚಿತ್ರಕಲಾ ಪರಿಷತ್ತಿನಲ್ಲಿ ನಡೆದ ೧೬ನೇ ಅಖಿಲಭಾರತ ಪ್ರದರ್ಶನ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ವಿಶಾಖಪಟ್ಟಣದ ರಾಷ್ಟ್ರೀಯ ಪ್ರಶಸ್ತಿ, ಹೊಸದೆಹಲಿಯ ಆವಂತಿಕಾ ಪ್ರಶಸ್ತಿ, ನಾಗಪೂರದ ವಿಭಾಗೀಯ ಮಟ್ಟದ ಪ್ರಶಸ್ತಿ, ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ, ಹೆಬ್ಬಾರ ಆರ್ಟ್ ಫೌಂಡೇಶನ್ ಪ್ರಶಸ್ತಿ, ಮತ್ತು ಕ್ಯಾಮಿನ್ ಪ್ರಶಸ್ತಿಗಳು ಪ್ರಮುಖವಾಗಿವೆ.[೧೬೪]

೧೬೩. ಎಮ್.ಎಸ್. ಪತ್ತಾರರವರ ಸಂಗ್ರಹ

೧೬೪. ಗಣೇಶ ತೇರದಾಳರವರ ದಾಖಲಾತೆಗಳ ಸಂಗ್ರಹ

ರಮೇಶ ತೇರದಾಳವರು ಕಲಾಪ್ರತಿಭೆಯನ್ನು ಮೇಚ್ಚಿ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ದೆಹಲಿಯ ಸಂಸ್ಕತಿ ಇಲಾಖೆಯ ಶಿಷ್ಯವೇತನಗಳನ್ನು ಪಡೆದುಕೊಂಡಿದ್ದಾರೆ. ಸದಾ ಕ್ರೀಯಾಶೀಲರಾದ ರಮೇಶರವರು. ಕರ್ನಾಟಕ ಲಲಿತಕಲಾ ಅಕಾಡಮಿಯ ಸದಸ್ಯರಾಗಿ ಉತ್ತಮಸೇವೆ ಸಲ್ಲಿಸಿದ್ದಾರೆ. ಅನೇಕ ಚಿತ್ರಕಲಾ ಪ್ರದರ್ಶನದ ನಿರ್ವಾಹಕರಾಗಿ ಸೇವೆಸಲ್ಲಿಸಿದ್ದಾರೆ. ಬೆಂಗಳೂರು, ಗದಗ, ಗುಲಬರ್ಗಾ, ಮಂಗಳೂರು, ಬವಳನಿ, ಅಮೇರಿಕಾ, ಚೆನ್ನೈ ಇಟಲಿ, ಸಿಂಗಾಪೂರ ಮುಂತಾದ ದೇಶ ವಿದೇಶಗಳಲ್ಲಿ ಇವರ ಕಲಾಕೃತಿಗಳ ಸಂಗ್ರಹಗೊಂಡಿವೆ.[೧೬೫]

೩೮. ವೇಂಕಟೇಶ ವ್ಹಿ. ಕಬಾಡಿ : ವೇಂಕಟೇಶ ಕಬಾಡಿಯವರು ೧೯೭೧ ಜುಲೈ ೨೭ರಂದು ಕೊಪ್ಪಳದಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿ ಇದ್ದು ಇವರು ಪ್ರಾಥಮಿಕ, ಪ್ರೌಢಶಿಕ್ಷಣವನ್ನು ಗಂಗಾವತಿಯಲ್ಲಿ ಮುಗಿಸಿ ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ವಿಜಯಕಲಾಮಂದಿರಕ್ಕೆ ಪ್ರವೇಶ ಪಡೆದು ಎಲ್ಲ ಶಿಕ್ಷಕರ ಪ್ರೀತಿಯ ಶಿಷ್ಯರಾಗಿ ಆರ್ಟ್‌ಮಾಸ್ಟರ್ ಡಿಪ್ಲೋಮಾ ಹಾಗೂ ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗನಲ್ಲಿ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ ಪಡೆದು ಪಾಸಾಗಿದ್ದಾರೆ. ಉತ್ತಮ ವಿದ್ಯಾರ್ಥಿಯಾದ ಇವರು ಸದಾ ಕಲಿಯುವ ಹಂಬಲದಲ್ಲಿರುವುದರಿಂದ ಸ್ನಾತಕೋತ್ತರ ಪದವಿ (ಎಂ.ಎಫ್.ಎ) ಪಡೆದುಕೊಂಡಿದ್ದಾರೆ. ಜಲವರ್ಣ ತೈಲವರ್ಣದಿಂದ ಹಲವಾರು ಕಲಾಕೃತಿ ರಚಿಸಿ ರಾಜ್ಯ ರಾಷ್ಟಮಟ್ಟದ ಕಲಾಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ದೇಹಲಿ, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಗುಲಬರ್ಗಾ ಹಮನಾಬಾದ, ಮುಂತಾದವುಗಳು. ಶ್ರೀ ಕಬಾಡಿಯವರಿಗೆ ತಮ್ಮ ಕಲಾ ಪ್ರತಿಭೆಯನ್ನು ಮೆಚ್ಚಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಧನಸಹಾಯದೊರಕಿದೆ.[೧೬೬]

ಇವರು ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. ಆರ್ಟ್‌ಗ್ರಫ್ ಶಹಬಾದ ಅರ್ಕಿಮಿಡಿಯಾ ಕಲಾ ಅಕಾಡೆಮಿ ಪಾಂಡಿಚೇರಿ ಮುಂತಾದವುಗಳು. ಕಬಾಡಿಯವರ ಅನೇಕ ಕಲಾ ಕೃತಿಗಳು, ಹುಬ್ಬಳ್ಳಿ, ಧಾರವಾಡ, ಗುಲಬರ್ಗಾ, ಗದಗ, ಕೊಪ್ಪಳ, ಪಾಂಡಿಚೇರಿ ಮುಂತಾದವುಗಳ ಕಡೆಗಳಲ್ಲಿ ಸಂಗ್ರಹಗೊಂಡಿದೆ.

ಎಂ.ಎಂ. ಕನ್ನೂರ : ಮಲ್ಲಿಕಾರ್ಜುನ ಎಂ. ಕನ್ನೂರರವರು ೧-೬-೧೯೭೩ರಂದು ಬಿಜಾಪೂರದಲ್ಲಿ ಜನಿಸಿದ್ದಾರೆ. ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಇರುವುದರಿಂದ ಪ್ರೌಢಶಾಲೆ ಬಜಾಪೂರದಲ್ಲಿ ಮುಗಿಸಿಕೊಂಡು ಚಿತ್ರಕಲಾ ಅಭ್ಯಾಸಕ್ಕಾಗಿ ಬಿಜಾಪೂರಸಿದ್ದೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಆರ್ಟ್‌ಮಾಸ್ಟರ ಪದವಿ ಪಡೆದುಕೊಂಡರು. ಸದಾಕಲಿಯುವ ಹಂಬಲದಲ್ಲಿರುವ ಕನ್ನೂರರವರು ಎಂ.ಎಫ್.ಎ. ಸ್ನಾತಕೋತ್ತರ ಪದವಿಯನ್ನು ವಿಜಯಕಲಾಮಂದಿರದಲ್ಲಿ ಪೂರೈಸಿದರು. ಜಲವರ್ಣ, ತೈಲವರ್ಣ ಅಕ್ರಾಲಿಕ್ ಮಾಧ್ಯಮದಲ್ಲಿ ಉತ್ತಮ ಕಲಾಕೃತಿ ರಚಿಸುವ ಇವರು ರೇಖಾಚಿತ್ರದಲ್ಲಿ ವಿಶೇಷ ಪರಿಣಿತಿಯನ್ನು ಪಡೆದುಕೊಂಡಿದ್ದಾರೆ. ರಾಜ್ಯ ಮಟ್ಟ ಚಿತ್ರಕಲಾ ಶಿಬಿರ ಕಲಾಪ್ರದರ್ಶನದಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ತಮ್ಮದಾಗಿಸಿಕೊಂಡಿದ್ದಾರೆ: ಅವುಗಳಲ್ಲಿ ಅನೇಕ ಕಲಾಮಹೋತ್ಸವ ಪ್ರಶಸ್ತಿ, ಬಿಜಾಪೂರ ೫೦ನೇ ಸ್ವಾತಂತ್ರ್ಯೋತ್ಸವ ಪ್ರಶಸ್ತಿ, ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಅಖಿಲ

೧೬೫. ರಮೇಶ ತೇರದಾಳರವರ ಸಂದರ್ಶನ ದಿನಾಂಕ : ೩೦-೧೦-೨೦೧೦

೧೬೬. ವೆಂಕಟೇಶ ಕಬಾಡಿಯವರ ದಾಖಲಾತಿಗಳ ಸಂಗ್ರಹ

ಭಾರತ ೫೯ನೇಯ ಕಲಾ ಪ್ರದರ್ಶನ ಪ್ರಶಸ್ತಿ, ಗುಲಬರ್ಗಾ ಜಿಲ್ಲಾರಾಜ್ಯೋತ್ಸವ ಪ್ರಶಸ್ತಿ, ಬಿಜಾಪೂರ, ೭೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಶಸ್ತಿ, ಬಿದರ, ಕಲಾ ಶಿರಿ ಪ್ರಶಸ್ತಿ, ಗದಗಹಿಗೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ.[೧೬೭]

ರಾಜ್ಯದ ಹೊರರಾಜ್ಯದಲ್ಲಿ ಹಲವಾರು ಕಲಾಪ್ರದರ್ಶನ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಬಿಜಾಪೂರ, ತುಮಕೂರು, ಬೆಂಗಳೂರು, ಗದಗ, ಗುಲಬರ್ಗಾ, ಪುಣೆ, ಶಹಬಾದ, ಬಿದರ, ನಾಗಪೂರ, ದೆಲ್ಲಿ, ಮೂಡಬಿದರಿ ಮುಂತಾದಕಡೆ ನಡೆದ ಕಲಾಶಿಬಿರ, ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ಉತ್ತಮ ಕಲಾವಿದರಾಗಿಸಿಕೊಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯುಧನ ಸಹಾಯದಿಂದ ಏಕವ್ಯಕ್ತಿ ಕಲಾಪ್ರದರ್ಶನ ಬೆಂಗಳೂರು, ಬಾಗೇವಾಡಿ, ಗುಲಬರ್ಗಾಗಳಲ್ಲಿ ಮಾಡಿದ್ದಾರೆ. ಇವರ ಅನೇಕ ಕಲಾಕೃತಿಗಳು, ಬೆಂಗಳೂರು, ನಾಗಪೂರ, ಗುಲಬರ್ಗಾ, ಬಿಜಾಪೂರ, ಗದಗ, ಹೈದರಾಬಾದ ಮುಂತಾದ ಸ್ಥಳಗಳಲ್ಲಿ ಸಂಗ್ರಹಗೊಂಡಿವೆ. ಸದ್ಯ ಇವರು ಬಿಜಾಪೂರದ ಶ್ರೀ ಸಿದ್ಧೇಶ್ವರ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

ಅಪ್ಪಣ್ಣ ಪೂಜಾರ : ಅಪ್ಪಣ್ಣ ಪೂಜಾರಿ ಇವರು ಬಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನಲ್ಲಿ ೧೯೭೭ರಲ್ಲಿ ಹುಟ್ಟಿದ್ದಾರೆ. ಚಿತ್ರಕಲಾ ಅಭ್ಯಾಸವನ್ನು ಸಿಂದಗಿಯಲ್ಲಿ ಪ್ರಾರಂಭಿಸಿ ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ವಿಜಯಕಲಾಮಂದಿರದಿಂದ ಎ.ಎಂ.ಜಿ.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ. ಸದಾ ಕಲಿಯುವ ಹಂಬಲದಲ್ಲಿರುವ ಅಪ್ಪಣ್ಣ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಿಂದ ಪಿ.ಜಿ. ಡಿಪ್ಲೋಮಾ ಪಡೆದುಕೊಂಡು ಬೆಂಗಳೂರಿನಲ್ಲಿಯೇ ಸ್ವತಂತ್ರಕಲಾ ವಿದರಾಗಿ ಕಲಾಬದುಕು ಸಾಗಿಸುತ್ತಿದ್ದಾರೆ.[೧೬೮] ಸಾಂಪ್ರದಾಯಕ ಶೈಲಿಯಲ್ಲಿ ವಿವಿಧ ಪ್ರಯೋಗಳನ್ನು ಮಾಡಿ ಉತ್ತಮ ಕಲಾಕೃತಿಗಳನ್ನು ರಚಿಸುತ್ತಿದ್ದಾರೆ. ಇವರ ಅನೇಕ ಕಲಾಕೃತಿಗಳು ಹೈದ್ರಾಬಾದ ಚೆನ್ನೈ, ಬೆಂಗಳೂರು ನಾಗಪೂರ, ದೆಹಲಿ, ಗದಗ, ಬದಾಮಿ, ಹಂಪಿ, ಮುಂತಾದವುಗಳಕಡೆಗೆ ಪ್ರದರ್ಶನಗೊಂಡಿವೆ. ರಾಜ್ಯ, ರಾಷ್ಟ್ರಮಟ್ಟದ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಕಲಾಕೃತಿಗಳಿಗೆ ದೆಹಲಿಯ ಆವಂತಿಕಾ ಪ್ರಶಸ್ತಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯಪ್ರಶಸ್ತಿ, ನಾಗೂಪೂರ ದಕ್ಷಿಣ ಪ್ರಾದೇಶಿಕ ಕೇಂದ್ರದ ಪ್ರಶಸ್ತಿ ಹೈದರಾಬಾದಿನ ಆರ್ಟ್‌ಹೌಸ್ ಪ್ರಶಸ್ತಿ ಡಿಕಾನ್ ಪ್ರಶಸ್ತಿ ರಾಜ್ಯಲಲಿತಕಲಾ ಅಕಾಡಮಿ ಪ್ರಶಸ್ತಿಗಳು ಲಭಿಸಿವೆ.

ಅಪ್ಪಣ್ಣ ಪೂಜಾರಿ ಇವರು ಕಿರುರೂಪ ಚಿತ್ರಶೈಲಿಯಲ್ಲಿ ಹೊಸ ಆವಿಷ್ಕಾರವನ್ನು ಹೊಸ ವಿನ್ಯಾಸಗಳಿಗಾಗಿ ರೂಪಿಸುತ್ತಿರುವ ಇವರು ಜಲವರ್ಣ ಆಕ್ರಾಲಿಕ್ ಮಧ್ಯಮದಿಂದ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ಇಂಗ್ಲೆಂಡ್, ಸ್ವಿಜರಲೆಂಡ್, ಜರ್ಮನಿ, ಬೆಂಗಳೂರು, ಗದಗ, ಹೈದ್ರಾಬಾದ, ನಾಗಪೂರ, ಹಂಪಿ, ಬದಾಮಿ, ಮುಂಬಯಿ, ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ.

ಕೆ.ಎಸ್. ಬಂಡಿ : ಶ್ರೀ ಕೆ.ಎಸ್.ಬಂಡಿ ಇವರು ೧೯೭೧, ಜೂನ್ ೨೦ ರಂದು ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ದೇವನೂರ ಎಂಬ ಚಿಕ್ಕ ಗ್ರಾಮದಲ್ಲಿ ಜನಿಸಿದ್ದಾರೆ. ಮೂಲತಃ

೧೬೭. ಎಮ್.ಎಮ್. ಕನ್ನೂರರವರ ದಾಖಲಾತಿಗಳಿಂದ ಸಂಗ್ರಹ
೧೬೮. ಅಪ್ಪಣ್ಣ ಪೂಜಾರರವರ ದಾಖಲಾತಿಗಳಿಂದ ಸಂಗ್ರಹ

ಇವರು ಗದಗ ಜಿಲ್ಲೆಯ ಕಿರಟಗೇರಿ ಗ್ರಾಮದವರು. ಚಿಕ್ಕವನಿರುವಾಗಲೇ ಚಿತ್ರಕಲೆಯ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ ಇವರು ಚಿತ್ರಕಲೆ ಉನ್ನತ ವ್ಯಾಸಂಗಕ್ಕಾಗಿ ಗದುಗಿನ ವಿಜಯ ಕಲಾಮಂದಿರದಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಡ್ರಾಯಿಂಗ ಮತ್ತು ಪೇಂಟಿಂಗ್ ಪದವಿಯನ್ನು ಪೂರೈಸಿದ್ದಾರೆ. ಹಾಗೂ ಬಿ.ಎಫ್.ಎ. ಚಿತ್ರಕಲಾ ಪದವಿಯನ್ನು ವಿಜಯ ಕಲಾಮಂದಿರದಲ್ಲಿ ಪೂರೈಸಿದ್ದಾರೆ. ನೈಜ ಶೈಲಿಯಲ್ಲಿ ಉತ್ತಮ ಕಲಾಕೃತಿಗಳನ್ನು ರಚಿಸುವ ಬಂಡಿಯವರು ಅನೇಕ ಭಾವಚಿತ್ರಗಳನ್ನು ರಚಿಸಿ ತಮ್ಮ ಕಲಾ ಪ್ರತಿಭೆಯನ್ನು ಸಾಬೀತುಪಡಿಸಿದ್ದಾರೆ. ಲೈಫ್, ನಿಸರ್ಗಚಿತ್ರ, ವಸ್ತುಚಿತ್ರ, ಚಿತ್ರ ಸಂಯೋಜನೆ ಇವು ಇವರ ಪ್ರೀತಿಯ ಕಲಾವಿಷಯಗಳು ಕೆ.ವಿ.ಕುಂದಗೋಳರವರ ಪ್ರೀತಿಯ ಶಿಷ್ಯರಾಗಿ ಎಲ್ಲ ಗುರುಗಳನ್ನು ಗೌರವದಿಂದ ಕಾಣುತ್ತ ಅವರಲ್ಲಿರುವ ಕಲಾ ಪ್ರತಿಭೆಯನ್ನು ಕಲಾಕೌಶಲ್ಯತೆಯನ್ನು ಪಡೆದುಕೊಂಡು ಎಲ್ಲರಿಗೆ ವಿಧೇಯರಾಗಿದ್ದಾರೆ.

ಶ್ರೀ ಕೆ.ಎಸ್. ಬಂಡಿಯವರು ಚಿತ್ರಕಲೆಯ ಜೊತೆಗೆ ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ. ಶ್ರೀ ಟಿ.ಪಿ. ಅಕ್ಕಿಯವರ ಭಾವಶಿಲ್ಪ ಸರಸ್ವತಿ, ಶ್ರೀ ನಾಗಲಿಂಗ ಅಜ್ಜನವರ ಶಿಲ್ಪ, ಲಕ್ಷ್ಮೀ ವಾಲ್ಮೀಕಿಯವರ ಭಾವಶಿಲ್ಪ ಹಾಗೂ ಸೃಜನಾತ್ಮಕವಾದ ಅನೇಕ ಶಿಲ್ಪಗಳನ್ನು ರಚಿಸಿದ್ದಾರೆ. ಸದಾ ಹಸನ್ಮುಖರಾದ ಬಂಡಿಯವರು ವಿಜಯ ಕಲಾ ಮಂದಿರದಲ್ಲಿ ಕೆಲವು ವರ್ಷಗಳ ಕಾಲ ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಸದಾ ಕ್ರಿಯಾಶೀಲರಾದ ಶ್ರೀ ಬಂಡಿಯವರು ರಾಜ್ಯದ ಅನೇಕ ಕಡೆಗಳಲ್ಲಿ ತಮ್ಮ ಕಲಾಪ್ರದರ್ಶನ ಮಾಡಿದ್ದಾರೆ. ಆಲ್. ಇಂಡಿಯಾ ಆರ್ಟ್ ಎಗ್ಸಿಬಿಷನ್, ರಿಜನಲ್ ಆರ್ಟ್ ಎಗ್ಜಿಮಿಷನ್ ಲಕ್ಕುಂಡಿ ಉತ್ಸವ, ಹೊಸಪೇಟೆ, ಗದಗ, ಹುಬ್ಬಳ್ಳಿ, ಬೆಂಗಳೂರು, ದೆಹಲಿ, ಧಾರವಾಡ ಮುಂತಾದ ಕಡೆಗಳಲ್ಲಿ ಇವರ ಚಿತ್ರಕಲಾ ಪ್ರದರ್ಶನಗಳು ನಡೆದಿವೆ.[೧೬೯]

ಶ್ರೀ ಬಂಡಿಯವರು ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ಹಲವಾರು ಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ. ವಿಜಯ ಕಲಾಮಂದಿರ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಡಿಸಿದ ಕಲಾಶಿಬಿರ, ಶ್ರೀ ತೋಂಟದಾರ್ಯ ಜಾತ್ರಾ ಮಹೋತ್ಸವ, ಕರ್ನಾಟಕ ಲಲಿತಕಲಾ ಅಕಾಡೆಮಿ ಕಲಾಶಿಬಿರ, ಶ್ರೀ ಎಂ.ಎ. ಚೆಟ್ಟಿಯವರ ಜನ್ಮಶತಮಾನೋತ್ಸವದ ಅಂಗವಾಗಿ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ. ಹುಬ್ಬಳ್ಳಿ, ಧಾರವಾಡ, ಮುಂತಾದ ಕಡೆಗಳಲ್ಲಿ ಕಲಾಶಿಬಿರದಲ್ಲಿ ಭಾಗವಹಿಸಿ ಉತ್ತಮ ನೈಜತೆಯ ಮತ್ತು ಸೃಜನಾತ್ಮಕ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ನೈಜ ಶೈಲಿಯದ್ದಾಗಿದ್ದು ಅನೇಕ ಮಠ ಮಂದಿರ ಮುಂತಾದ ಕಡೆಗಳಲ್ಲಿ ಅಲ್ಲದೇ ಅನೇಕ ಗಣ್ಯ ವ್ಯಕ್ತಿಗಳ ಮನೆಯಲ್ಲಿ ರಾರಾಜಿಸುತ್ತಿವೆ. ಗಂಗುಬಾಯಿ ಹಾನಗಲ್‌ವರ ಭಾವಚಿತ್ರ, ಮಾಜಿ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ಹೊರಟ್ಟಿಯವರ ಮನೆಯಲ್ಲಿ ತಮ್ಮ ತಾಯಿಯವರ ಭಾವಚಿತ್ರ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಗದಗ, ವಿಜಯ ಕಲಾಮಂದಿರ ಗದಗ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ಮೈಸೂರು ಮುಂತಾದ ಅನೇಕ ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಸಧ್ಯ ಇವರು ಕಲಾವಿದರಾಗಿ ಅನೇಕ ಕಲಾಕೃತಿಗಳನ್ನು ರಚಿಸುತ್ತ ಶಿಲ್ಪಕಲಾಕೃತಿಗಳನ್ನು ರಚಿಸುತ್ತ ಉತ್ತಮ ಕಲಾವಿದರಾಗಿ ಕೆಲಸ ಮಾಡುತ್ತಿದ್ದಾರೆ.[೧೭೦]

೧೬೯. ಕೆ.ಎಸ್. ಬಂಡಿರವರ ದಾಖಲಾತಿಗಳಿಂದ ಸಂಗ್ರಹ

೧೭೦. ಕೆ.ಎಸ್. ಬಂಡಿರವರ ಸಂದರ್ಶನ ದಿನಾಂಕ: ೧೫-೧೨-೨೦೧೦

ಸುರೇಶ ಡಿ.ಎಚ್. : ಶ್ರೀ ಸುರೇಶ ಡಿ.ಎಚ್.ರವರು ೧೯೭೫ ಎಪ್ರಿಲ್ ೨೦ ರಂದು ಗದಗನಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ ಸುರೇಶರವರು ಚಿತ್ರಕಲಾ ವಿದ್ಯಾಭ್ಯಾಸಕ್ಕಾಗಿ ವಿಜಯ ಕಲಾಮಂದಿರದಲ್ಲಿ ಬಿ.ಎಫ್.ಎ. ಪದವಿಯನ್ನು ೨ನೇ ರ್‍ಯಾಂಕ್ಕೊಂದಿಗೆ ಪಾಸು ಮಾಡಿಕೊಂಡಿದ್ದಾರೆ. ಸದಾ ಕ್ರಿಯಾಶೀಲರೂ ಆದ ಇವರು ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ಬೆಂಗಳೂರಿನ ಚಿತ್ರಕಲಾ ಪರಿಷತ್ನಲ್ಲಿ ಸ್ನಾತಕೋತ್ತರ ಪದವಿಯನ್ನು ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿ ಹಲವಾರು ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ.ಎಂ.ಎಫ್.ಎ. ಪದವಿ ಪಡೆದ ನಂತರ ವಿಜಯ ಕಲಾಮಂದಿರದಲ್ಲಿ ಗೌರವ ಉಪನ್ಯಾಸಕರಾಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರೆ. ಇವರು ಕುವೆಂಪು ವಿಶ್ವವಿದ್ಯಾಲಯ ದಾವಣಗೆರೆಯ ಸರಕಾರಿ ಚಿತ್ರಕಲಾ ಕಾಲೇಜಿನಲ್ಲಿ ಅತಿಥಿ ಅಧ್ಯಾಪಕರಾಗಿ ೨೦೦೩ ರಿಂದ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀ ಡಿ.ಎಚ್. ಸುರೇಶರವರು ಹಲವಾರು ಏಕವ್ಯಕ್ತಿ ಹಾಗೂ ಗುಂಪು ಪ್ರದರ್ಶನ ಮಾಡಿದ್ದಾರೆ. ಸೃಷ್ಠಿ ಆರ್ಟ್ ಗ್ಯಾಲರಿ ಬೆಂಗಳೂರು, ೭ನೇ ಮತ್ತು ೮ನೇ ಹಾಗೂ ೯ನೇ ರಾಷ್ಟ್ರೀಯ ಕಲಾಮೇಳ ದೆಹಲಿ ಹಾಗೂ ಬೆಂಗಳೂರು ವೆಂಕಟಪ್ಪ ಕಲಾ ಗ್ಯಾಲರಿ ಬೆಂಗಳೂರು, ಚಿತ್ರಕಲಾ ಪರಿಷತ್ ಬೆಂಗಳೂರು, ಯುವ ಕಲಾ ಪ್ರದರ್ಶನ ದೆಹಲಿ, ಯುವ ಕಲಾವಿದರ ಕಲಾಪ್ರದರ್ಶನ ಮುಂಬಯಿ, ಸಮೂಹ ಕಲಾಪ್ರದರ್ಶನ ಪ್ರತಿಮಾ ಆರ್ಟ್ ಗ್ಯಾಲರಿ ಬೆಂಗಳೂರು, ಏಕವ್ಯಕ್ತಿ ಕಲಾಪ್ರದರ್ಶನ ಬೆಂಗಳೂರು, ಮುಂತಾದ ಕಡೆಗಳಲ್ಲಿ ಏಕವ್ಯಕ್ತಿ ಕಲಾ ಪ್ರದರ್ಶನ ಮತ್ತು ಗುಂಪು ಕಲಾಪ್ರದರ್ಶನ ಮಾಡಿದ್ದಾರೆ. ಉತ್ತಮ ಕಲಾವಿದರಾದ ಶ್ರೀ ಸುರೇಶರವರು ತಮ್ಮದೇಯಾದ ಶೈಲಿಯಲ್ಲಿ ಹಲವಾರು ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಸಾಂಪ್ರದಾಯಿಕ ಕಲಾಶಿಬಿರ ಗದಗ, ಕಲಾಶಿಬಿರ ರಾಮನಗರ, ಬಾಲ್ಕಿ, ಸಾಂಪ್ರದಾಯಿಕ ಕಲಾಶಿಬಿರ ಸುರಪುರ, ಧಾರವಾಡ, ರಾಜ್ಯ ಮಟ್ಟದ ಕಲಾಶಿಬಿರ, ಬೆಂಗಳೂರು, ಬೆಳಗಾವಿ, ಮೈಸೂರು, ಮುಂತಾದ ರಾಜ್ಯ ರಾಷ್ಟ್ರಮಟ್ಟದ ಕಲಾ ಶಿಬಿರದಲ್ಲಿ ಭಾಗವಹಿಸಿ ಕಲಾಪ್ರತಿಭೇಯನ್ನು ತೋರಿಸಿದ್ದಾರೆ.[೧೭೧]

ಸುರೇಶರವರ ಕಲಾಕೃತಿಗಳಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ಮುಖ್ಯವಾಗಿ ೨೭ನೇ ಬೆಳ್ಳಿ ಮಹೋತ್ಸವ ಪ್ರಶಸ್ತಿ ಆಂದ್ರಪ್ರದೇಶ, ೯ನೇ ಅಖಿಲ ಭಾರತ ಕಲಾಪ್ರದರ್ಶನ ಮೆರಿಟ್ ಪ್ರಶಸ್ತಿ ನಾಗಪೂರ, ೧ನೇ ಅಖಿಲ ಭಾರತ ಕಲಾಪ್ರದರ್ಶನ ಮೆರಿಟ್ ಪ್ರಶಸ್ತಿ ಶಹಬಾದ್, ಕಾಳಿಕಾದೇವಿ ಕಲಾಪ್ರಶಸ್ತಿ ಶಿರಸಂಗಿ, ೨೭ನೇ ವಾರ್ಷಿಕ ಕಲಾಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು, ದ್ವಿತೀಯ ಬಹುಮಾನ ರೋಟರಿ ಕ್ಲಬ್ ಬೆಂಗಳೂರು, ಮೈಸೂರು ದಸರಾ ಪ್ರಶಸ್ತಿ, ಗಣರಾಜ್ಯೋತ್ಸವ ಪ್ರಶಸ್ತಿ, ಜಿಲ್ಲಾ ಆಡಳಿತ ಗದಗ ರಾಜ್ಯಮಟ್ಟದ ಕಲಾಪ್ರಶಸ್ತಿ, ಬೆಂಗಳೂರು ಹೀಗೆ ರಾಜ್ಯ ರಾಷ್ಟ್ರಮಟ್ಟದ ಕಲಾ ಪ್ರಶಸ್ತಿಗಳನ್ನು ಹಾಗೂ ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ಅಲ್ಲದೇ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಇವರಿಂದ ಯುವ ಕಲಾವಿದರ ಶಿಷ್ಯವೇತನ ಪಡೆದಿದ್ದಾರೆ.[೧೭೨] ಸುರೇಶ ಅವರು ರಚಿಸಿದ ಅನೇಕ ಕಲಾಕೃತಿಗಳು ರಾಜ್ಯ ಹೊರರಾಜ್ಯಗಳಲ್ಲಿ ಸಂಗ್ರಹಗೊಂಡಿವೆ. ಕೇಂದ್ರ ಲಲಿತಕಲಾ ಅಕಾಡೆಮಿ ದೆಹಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ

---

೧೭೧. ಸುರೇಶ ಬಿ.ಎಚ್.ರವರ ದಾಖಲಾತಿಗಳಿಂದ ಸಂಗ್ರಹದಿಂದ

೧೭೨. ಸುರೇಶ ಡಿ.ಎಚ್.ರವರ ಸಂದರ್ಶನ ದಿನಾಂಕ: ೨೮-೧-೨೦೧೧

ಬೆಂಗಳೂರು, ಗದಗ, ನಾಗಪೂರ, ಪ್ರಾಚ್ಯವಸ್ತು ಸಂಗ್ರಹಾಲಯ ಮೈಸೂರು, ಕುವೆಂಪು ವಿಶ್ವವಿದ್ಯಾಲಯ ದಾವಣಗೆರೆ, ತಂಜಾವೂರ, ಮುಂತಾದ ಸ್ಥಳಗಳಲ್ಲಿ ಸಂಗ್ರಹಿತವಾಗಿವೆ. ಹೀಗೆ ಸುರೇಶ ಡಿ.ಎಚ್.ರವರು ಉತ್ತಮ ವಿದ್ಯಾರ್ಥಿಯಾಗಿ ಉತ್ತಮ ಉಪನ್ಯಾಸಕರಾಗಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಸವರಾಜ ಸಿ. ಕುತ್ನಿ : ಬಸವರಾಜ ಇವರು ಗದಗ ಜಿಲ್ಲೆಯ ಮುಳಗುಂದದಲ್ಲಿ ೧೯೭೭ರಲ್ಲಿ ಜನಿಸಿದರು. ಇವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮುಳಗುಂದದಲ್ಲಿ ಮುಗಿಸಿಕೊಂಡು ನಂತರ ವಿಜಯ ಕಲಾಮಂದಿರದಿಂದ ಬಿ.ಎಫ್.ಎ. ಮತ್ತು ಎಂ.ಎಫ್.ಎ. ಪದವಿಗಳನ್ನು ಪಡೆದುಕೊಂಡಿದ್ದಾರೆ. ಇವರ ಕಲಾಕೃತಿಗಳು ಗದಗ, ಬೆಂಗಳೂರು, ಮೈಸೂರು, ಶಹಬಾದ, ಲಕ್ಕುಂಡಿ, ಬಿಜಾಪುರ, ದೆಹಲಿ ಚೆನ್ನೈ, ನಾಗಪುರ, ಹಾಸನ, ಉಡುಪಿ, ಹೈದರಾಬಾದ್, ಮುಂಬಯಿಗಳಲ್ಲಿ ಪ್ರದರ್ಶನಗೊಂಡಿವೆ. ಇವರ ಕಲಾಶಿಬಿರಗಳಲ್ಲಿ ಗದಗನಲ್ಲಿ ನಡೆದ ಉತ್ಸವ ಗುಲಬರ್ಗಾದಲ್ಲಿ ನಡೆದ ಪ್ರಾದೇಶಿಕ ಕಲಾಶಿಬಿರ, ಉಡುಪಿಯಲ್ಲಿ ನಡೆದ ಕಲಾಶಿಬಿರ, ಧರ್ಮಸ್ಥಳದಲ್ಲಿ ನಡೆದ ಕಲಾಶಿಬಿರಗಳು ಪ್ರಮುಖವಾಗಿವೆ. ಇವರ ಕಲಾಕೃತಿಗಳು ಮುಂಬಯಿ, ಬೆಂಗಳೂರು, ಪುಣೆ, ಭದ್ರಾವತಿ, ಗುಲಬರ್ಗಾ ಮತ್ತು ಉಡುಪಿಗಳಲ್ಲಿ ಸಂಗ್ರಹವಾಗಿವೆ.[೧೭೩]

ಇವರು ಎರಡು ಬಾರಿ ಕ್ಯಾಮ್ಲಿನ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಮೂರು ವರ್ಷಗಳವರೆಗೆ ವಿಜಯ ಕಲಾಮಂದಿರದಲ್ಲಿ ಕಲಾ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಹಾಗೂ ರೋಣದಲ್ಲಿ ಮತ್ತು ಉಡುಪಿಯಲ್ಲಿ ಕಲಾಶಾಲೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಈಗ ಸ್ವತಂತ್ರ ಕಲಾವಿದರಾಗಿ ಕೆಲಸ ಮಾಡುತ್ತಿದ್ದಾರೆ. ಈಗ ಗದಗದಲ್ಲಿ ವೃತ್ತಿ ಜೀವನವನ್ನು "ಕಮರ್ಶಿಯಲ್" ಆರ್ಟಿಸ್ಟ್ ಆಗಿ ಕಳೆಯುತ್ತಿದ್ದಾರೆ.

ವಿಜಯ ಕಲಾಮಂದಿರದ ಪ್ರತಿಭಾವಂತ ವಿದ್ಯಾರ್ಥಿಗಳು : ಎಸ್.ಎಂ. ಕಾಂಬಳೆ, ವಿಜಯ ಕಿರೇಸೂರ, ಫಹಜಾನ ಮುದಕವಿ, ವಿಜಯ ಸಾವಳಗಿ ಎಸ್.ಬಿ. ಬಿರಾದರ, ಅರೋನ ಅನಿಲ ಪ್ರಕಾಶ, ಸವಿತಾ, ಪಾಟೀಲ ಎಸ್.ವ್ಹಿ. ಜಲಗೇರಿಮಠ, ಎಸ್.ಜಿ.ಗೂಳಣ್ಣವರ, ಎಚ್.ಕೆ. ಹೂಗಾರ ಸೋಮಣ್ಣ ಚಿತ್ರಗಾರ, ಬಿ.ಆರ್.ಪಾಟೀಲ, ಡಿ.ಬಿ. ಶಿರಿಯಣ್ಣವರ, ಎಂ.ಎಸ್.ಹೊಗಾರ, ಮಾಲತೇಶ ಬಡಿಗೇರಿ, ಆರ್.ಎಸ್. ದೇಶಪಾಂಡೆ, ಎ.ವ್ಹಿ.ಗಂಧದ, ಬಿ.ಎಚ್. ಅಗಳವಾಳಿ ಆರ್.ವ್ಹಿ. ಹಳ್ಳಿಚೋಳ, ಎಸ್.ವ್ಹಿ.ಜಲಗೇರಿಮಠ ಅಶೋಕ. ತುಂಬಗಿ, ದೇವೇಂದ್ರ, ಹಾದಿಮನಿ, ಎಸ್.ಡಿ. ಕಪ್ಲಿಕೊಪ್ಪ ಮಹೇಶ ಹಂದಿಗೋಳ, ನಾಗರಾಜ, ಸೂರಣಗಿ, ಜೆ.ಡಿ. ಬೇವಿನಕಟ್ಟಿ, ಎಸ್.ಎಸ್.ಪ್ರಸಾದ, ಆರ್.ಎಸ್.ಹಾದಿಮನಿ. ಪ್ರಕಾಶ ತಟ್ಟಿ, ಬಿಂದು ನಾಯರ, ಸಿ.ಜಿ. ಕಮ್ಮಾರ, ಬಿಜಿವಾರಿ, ಪಿ.ಎಸ್. ಹಂದಿಗೋಳ, ಶೇಖರ ಕದಡಿ, ಈರಣ್ಣ ದಂಡಿನ, ಅಪ್ಪಾಸಾಹೇಬ, ಗಾಣಿಗೇರ, ಎಸ್.ಆರ್. ನಿಂಗೋಜಿ, ವ್ಹಿ.ಡಿ. ಗುಲಬಿಜಾರ. ಆರ್.ಜಿ. ಗಂಗಾವತಿ, ಡಾ. ಎಚ್.ಎನ್.ಚಿತ್ರಗಾರ, ವಿಶ್ವನಾಥ ಬುರಾಣಪೂರಕರ, ಜಿ.ಎಂ. ಹೆಗಡೆ, ಕೆ.ವ್ಹಿ. ಕಾಳೆ, ಎಸ್.ವ್ಹಿ. ಕಾಳೆ, ಧರಿಶ ಶಿರಿಯಣ್ಣವರ, ಸಾವಿತ್ರಿ ಯರಾಶಿ, ನಾಗರಾಜ ಚಿತ್ರಗಾರ, ಟಿ.ಎಸ್. ಬೆವಿನಮರದ, ಹನುಮಾನಸಿಂಗ್ ಬ್ಯಾಳಿ, ಡಿ.ಬಿ. ಶಿರಿಯಣ್ಣವರ, ಎಂ.ಎಸ್. ಹೂಗಾರ ಬಿ.ಆರ್. ಪಾಟೀಲ ಮುಂತಾದ ಅನೇಕ ವಿದ್ಯಾರ್ಥಿಗಳು ರಾಜ್ಯ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ವಿಜಯಕಲಾ ಮಂದಿರದ ಪ್ರತಿಭಾವಂತ ವಿದ್ಯಾರ್ಥಿಗಳಾಗಿದ್ದಾರೆ.

---

೧೭೩. ಬಸುವರಾಜ. ಕುತ್ನಿರವರ ದಾಖಲಾತಿಗಳಿಂದ ಸಂಗ್ರಹ

ಶೈಕ್ಷಣಿಕ ಕಲಾ ಚಟುವಟಿಕೆಗಳು : ವಿಜಯ ಕಲಾಮಂದಿರವು ಕಲಾ ಶಿಕ್ಷಣ ನೀಡುವುದರ ಜೊತೆಗೆ ಅನೇಕ ಶೈಕ್ಷಣಿಕ ಕಲಾ ಚಟುವಟಿಕೆಗಳನ್ನು ಮಾಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿದೆ.

ಸರ್ವಕಾಲಿನ ಸಂದರ್ಭದಲ್ಲಿ ಹೊಸ ಹೊಸ ಆಯಾಮಗಳನ್ನು ಕಲಾ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಮಹಾದಾಸೆಯಿಂದ ರಾಜ್ಯ ಹಾಗೂ ರಾಷ್ಟ್ರ ವಿವಿಧ ಆರ್ಟ್‌ಗ್ಯಾಲರಿ ವಿಕ್ಷೀಸುವುದು ಧಾರ್ಮಿಕ ನೈಸರ್ಗಿಕ ಮತ್ತು ಐತಿಹಾಸಿಕ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳುವುದು ಸುಂದರವಾದ ನೈಸರ್ಗಿಕ ತಾಣಗಳ ನಿಸರ್ಗ ಚಿತ್ರ ರಚಿಸುವದು ಕಲಾಶಿಬಿರಗಳನ್ನು ಸ್ಥಳದಲ್ಲಿಯೇ ಹಮ್ಮಿಕೊಳ್ಳುವುದು ಆಧುನಿಕ ಕಲಾ ಶೈಲಿಗಳನ್ನು ಹೊಸ ಹೊಸ ತಂತ್ರ ಗಾರಿಕೆಯನ್ನು ಅರಿತುಕೊಳ್ಳಲು ರಾಜ್ಯ ಹೊರ ರಾಜ್ಯಗಳ ಹೆಸರಾಂತ ಕಲಾ ವಿಮರ್ಶಕರ ಸಾಹಿತಿಗಳಿಂದ ಕಲೆಯ ಕುರಿತು ಚರ್ಚಾಕೊಟ, ಉಪನ್ಯಾಸ ಮಾಡಿಸುವುದು, ಕಲಾಕೃತಿಗಳ ವಿಡಿಯೋಶೋ, ಸ್ಲೇಡ್ ಶೋ ಮಾಡಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಹೊಸತನ ಬೆಳೆಸುವ ದಿಸೇಯಿಂದ ಮತ್ತು ಅದರಿಂದ ಉಪಯುಕ್ತ ಪಡೆಯಲೆಂದು ಅನೇಕ ಕಲಾಚಟುವಟಿಕೆಗಳನ್ನು ವಿಜಯ ಕಲಾಮಂದಿರವು ಮಾಡಿರುವುದನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಸಮೂಹ ಕಲಾ ಪ್ರದರ್ಶನಗಳು : ವಿಜಂಯ ಕಲಾಮಂದಿರವು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವದಿಶೆಯಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾಗ್ಯಾಲರಿಗಳಲ್ಲಿ ಹಲವಾರು ಕಲಾಪ್ರದರ್ಶನಗಳನ್ನು ಹಮ್ಮಿಕೊಂಡ ಶ್ರೇಯಸ್ಸು ವಿಜಯ ಕಲಾಮಂದಿರಕ್ಕೆ ಇದೆ. ಇಲ್ಲಿಂದ ಉಪನ್ಯಾಸಕರ ಹಾಗೂ ವಿದ್ಯಾರ್ಥಿಗಳ ಮತ್ತು ಸ್ಥಳಿಯ ಸಹಕಲಾವಿದರ ಶಿಲ್ಪ ಹಾಗೂ ಚಿತ್ರಕಲಾ ಕೃತಿಗಳ ಪ್ರದರ್ಶನವನ್ನು ದೇಶದ ನಾನಾ ಭಾಗಗಳಲ್ಲಿ ನಡೆಸುತ್ತ ಬಂದಿದೆ. ಅವುಗಳಲ್ಲಿ ಪ್ರಮುಖವಾಗಿ ೨೦೦೦ರಲ್ಲಿ "ಚಾಲುಕ್ಯ ಗ್ರೂಫ್ ಆರ್ಟ್ ಎಕ್ಸಿಬಿಷನ್ 'ರಿಜನಲ್ ಸೆಂಟರ್ ಲಲಿತಕಲಾ ಅಕಾಡೆಮಿ ಚೈನ್ನೈ ಹಾಗೂ ೨೦೦೦ರಲ್ಲಿ ರವೀಂದ್ರ ಭವನ ಅಕಾಡೆಮಿ ಗ್ಯಾಲರಿ ದೆಹಲಿಯಲ್ಲಿ ಪ್ರದರ್ಶನ ೧೯೯೧ರ ರಾಷ್ಟ್ರ ಮಟ್ಟದ ಕಲಾಕೃತಿಗಳನ್ನು ಸಂಗ್ರಹಿಸಿ ಸ್ಪರ್ಧೆ ಮತ್ತು ಪ್ರದರ್ಶನ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಆಲ್ ಇಂಡಿಯಾ' ಕಲಾಕೃತಿಗಳ ಪ್ರದರ್ಶನ, ೧೯೯೨ರಲ್ಲಿ ಪ್ರಾದೇಶಿಕ ಮಟ್ಟದ ಚಿತ್ರಕಲಾ ಪ್ರದರ್ಶನ ಗದಗ, ಜೆ.ಎನ್. ಕಲಾ ಮಹಾವಿದ್ಯಾಲಯ ಹೈದ್ರಬಾದ ವೆಂಕಟಪ್ಪ ಆರ್ಟ್ ಗ್ಯಾಲರಿ ಬೆಂಗಳೂರು, ಸರಕಾರಿ ಕಲಾವಿದ್ಯಾಲಯ ಗೋವಾ, ಕಲಾಭವನ ಪಣಜಿ, ಕಲ್ಕತ್ತಾ ಬಜ್ಜಿನ್, ಪಾಟ್ನಾ ಮದ್ರಾಸ್, ದೊನಿವಲ್ಲೈ ಹುಬ್ಬಳ್ಳಿ ಹಾಗೂ ಹಂಪೆಯ ವಿವಿಧ ದೃಶ್ಯಗಳನ್ನು ರಚಿಸಿ ವಿದ್ಯಾರ್ಥಿಗಳ ನಿಸರ್ಗ ಕಲಾಪ್ರದರ್ಶನ ಹೊಸಪೇಟೆಯಲ್ಲಿ ಮಾಡಲಾಗಿದೆ. ಅಲ್ಲದೆ ಸಂಸ್ಥೆಯ ಅನೇಕ ಕಲಾವಿದರು ವಿದ್ಯಾರ್ಥಿಗಳ ಕಲಾಕೃತಿಗಳ ಪ್ರದರ್ಶನವನ್ನು ರಾಷ್ಟ್ರದ ಮೂಲೆ ಮೂಲೆಗಳಲ್ಲಿ ಹಮ್ಮಿಕೊಂಡಿದೆ.[೧೭೪]

ಈ ಎಲ್ಲ ವಿಷಯಗಳ ಹಿನ್ನೆಲೆಯಲ್ಲಿ ಎಲ್ಲ ಪ್ರದರ್ಶನಗಳಲ್ಲಿ ಮಹಾವಿದ್ಯಾಲಯವು ಆಯ್ದು ವಿದ್ಯಾರ್ಥಿಗಳನ್ನು ಪ್ರದರ್ಶನದ ಮೇಲ್ವಿಚಾಕರಾಗಿ ಕಳುಹಿಸಿ ಕಲಾ ಪ್ರದರ್ಶನ ಹೇಗಿರಬೇಕು. ಎಂದು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿದೆ.

---

೧೭೪. ವಿಜಯಕಲಾಮಂದಿರ ದಾಖಲಾತಿಗಳಿಂದ ಸಂಗ್ರಹ

ಕಲಾಶಿಬಿರಗಳು ಹಾಗೂ ವಿಚಾರ ಸಂಕಿರಣಗಳು : ವಿಜಯ ಕಲಾಮಂದಿರವು ವಿದ್ಯಾರ್ಥಿಗಳ ಉಪಯುಕ್ತವಾಗುವಂಥ ಮಧುರವಾದ ಅನೇಕ ಕಲಾಶಿಬಿರಗಳು ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ಸೃಜನಶೀಲತೆ, ಸೂಕ್ಷ್ಮ ಸಂವೇದನಾಶೀಲ ಅಂಶಗಳು ಸರ್ವಕಾಲಿನ ಕಲೆಯ ಜೀವಾಳವಾಗಬೇಕೆಂಬ ಹಿನ್ನೆಲೆಯಲ್ಲಿ ಕಲಾವಿದ ನಿತ್ಯ ನಡೆಸುವ ಪ್ರಯತ್ನಗಳು ಸಫಲತೆಯನ್ನು ಹೊಂದಿದೆ. ಹೀಗೆ ಪ್ರತಿಯೊಬ್ಬ ಕಲಾವಿದ ನಡೆಸುವ ಪ್ರಯತ್ನಗಳು ಕಲಾಕ್ಷೇತ್ರದ ಕೊಡುಗೆಗಳಾಗಿವೆ ಕಲಾವಿದನು ತನ್ನ ಕಲಾಕೃತಿಯಲ್ಲಿ ಬಳಸುವ ಕೈಚಳಕ, ಹಾಗೂ ತಂತ್ರಗಳು ನವ್ಯಕಲೆಗೆ ದಾಖಲೆಗಳಾಗಿವೆ. ಇಂತಹ ನವ್ಯ ಕಲಾ ದಾಖಲೆಗಳ ಪ್ರಚಾರಕ್ಕೆ ಈ ಕಲಾ ಶಿಬಿರಗಳು ಅತ್ಯಅವಶ್ಯ ಎಂಬುದನ್ನು ಅರಿಯಬಹುದು.

ಈ ಹಿನ್ನಲೆಯಲ್ಲಿ ಗದುಗಿನ ವಿಜಯ ಕಲಾಮಂದಿರವು ಅನೇಕ ರಾಷ್ಟ್ರ ಹಾಗೂ ಅಂತರಾಷ್ಟ್ರ ಮಟ್ಟದ ಕಲಾಶಿಬಿರಗಳನ್ನು ಹಮ್ಮಿಕೊಂಡ ಶ್ರೇಯಸ್ಸನ್ನು ಪಡೆದುಕೊಂಡಿದೆ. ಚಿತ್ರಕಲಾ ಶಿಬಿರಗಳು, ಶಿಲ್ಪಕಲಾ ಶಿಬಿರಗಳು ಗ್ರಾಫಿಕ್ ಶಿಬಿರಗಳು, ಸಾಂಪ್ರದಾಯ ಚಿತ್ರಕಲಾ ಶಿಬಿರಗಳು ಹೀಗೆ ಹತ್ತು ಹಲವು ಕಲಾ ಶಿಬಿರಗಳನ್ನು ಏರ್ಪಡಿಸಿದೆ. ಜೊತೆಗೆ ಹೆಸರಾಂತ ಕಲಾ ವಿದರ ಕಲಾವಿಮರ್ಶಕರು ಸಾಹಿತಿಗಳಿಂದ ಉಪನ್ಯಾಸ ಮತ್ತು ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತ ಬಂದಿದೆ. ಹಿರಿಯ ಕಲಾವಿದರು ಸಂಶೋಧಕರಾದ ಡಾ॥ ಬಿ.ಕೆ.ಹಿರೇಮಠ, ಡಾ.ಎಸ್.ರಾಮನ್, ಡಾ. ಅ.ಲ.ನರಸಿಂಗನ್, ಡಾ. ಎಸ್. ಪಾಟೀಲ, ಡಾ. ಆನಂದ ದೇವ, ಡಾ. ಜೆ.ಎಸ್. ಖಂಡೇರಾವ್. ಡಾ. ವ್ಹಿ.ಜಿ.ಅಂದಾನಿ, ಡಾ. ಯಾದಪ್ಪ ಪರದೇಶಿ, ನಾಡೋಜ, ಆರ್.ಎಂ.ಹಡಪದ, ನಾಡೋಜ, ವ್ಹಿ.ಡಿ.ಕಾಳೆ, ಪ್ರೊ. ಎಸ್.ಎನ್.ಚಂದ್ರಶೇಬಿರ, ಶ್ರೀ ಪಿ.ಆರ್.ಆಪ್ಪಸ್ವಾಮಿ ಪ್ರೊ. ಎಂ.ಎಸ್. ನಂಜುಂಡರಾವ್. ಎಸ್.ಜಿ. ಗೂಳಣ್ಣವರ ಬಿ.ವ್ಹಿ.ಕೆ. ಶಾಸ್ತ್ರಿ, ಸುರೇಶ ಕುಲಕರ್ಣಿ, ಚಿ.ಸು.ಕೃಷ್ಣಶೆಟ್ಟಿ, ಕೆ.ವ್ಹಿ.ಸುಂಬ್ರಮಣ್ಯಂ, ಪರಮೇಶ್ವರ್ ತಳಬಾಳ, ಡಾ. ಮೋಹನ ಪಂಚಾಳ, ಮುಂತಾದ ಕಲಾ ವಿದರು, ಕಲಾಸಾಹಿತಿಗಳು ತಮ್ಮಲ್ಲಿರುವ ವಿಚಾರ ಧಾರೆಯನ್ನು ಮತ್ತು ಅನುಭವದ ಸಂಪತನ್ನು ವಿದ್ಯಾರ್ಥಿಗಳಿಗೆ ಉಪನ್ಯಾಸ ಮತ್ತು ಚರ್ಚೆಗಳ ಮೂಲಕ ಧಾರೆ ಎರೆದಿದ್ದಾರೆ.[೧೭೫]

ಕಲಾ ಪ್ರಾತ್ಯಕ್ಷತೆಗಳು : ವಿಜಯ ಕಲಾಮಂದಿರವು ಅನೇಕ ಕಲಾ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳಿಗೆ ಉಪಯೋಗವಾಗಲೆಂದು ರಾಜ್ಯ ರಾಷ್ಟ್ರಮಟ್ಟದ ಅನೇಕ ಕಲಾವಿದುರನ್ನು ಕಲೆಗೆ ಕಲಾಪ್ರತ್ಯಕ್ಷತೆಗಳು ನಡೆಸಿದೆ. ಅದರಲ್ಲಿ ಪ್ರಮುಖರಾದ ಜೋಳ ಮಂಡಳದ ಹಿರಿಯ ಕಲಾವಿದ ಶ್ರೀ ಕೆ.ಎಂ.ಆದಿಮೂಲು ಮುಂಬೈದ ಹಿರಿಯ ಕಲಾವಿದ ಶ್ರೀ ಎಸ್.ಕೆ.ಲಾಹೋಟಿ, ಪ್ರೊ. ಎ.ಎಂ.ಬೋಪ್ಲೇಕರ್, ಪುಣೆಯ ಹಿರಿಯ ಕಲಾವಿದ ಮುರಲಿಧರ ಲಾವೊಟೆ, ಜೆನ್ನೈ ಕಲಾವಿದ ಅವಿನಾಶದೇವ ಗೋವಾದ ಕಲಾವಿದ ಗೋಪಾಲ ಸುಬೇದಾರ, ಅರ್ಚನಾ ಭೂಪಾಲ, ಕಲಾವಿದ ಬೆಂಬಲಿನ್ಯ ನೈಜೇರಿಯಾ, ಬಿ.ದ.ದೈತೀಶ, ಕೇರಳದ ಎಸ್.ಖಂಡೆರಾವ್, ಡಾ. ವ್ಹಿ.ಜಿ.ಅಂದಾನಿ, ಜೆ.ಎಂ.ಎಸ್.ಪಣಿಬಂದ ಸಿಂಧೂರ, ಎಂ.ಬಿ.ಲೋಹಾರ, ಆರ್.ಎಂ. ಹಡಪದ, ರಾಜಾರಾವ ಪೊಪರೆ, ಎಂ.ಸಿ.ಚೆಟ್ಟಿ ವಿರೇಂದ್ರ ಶಹ, ಕೆ.ಎಲ್.ರಂಗೀದ, ವ್ಹಿ.ಟಿ. ಕಾಳೆ ವರ್ಣಸಿಂಧು ಬಿ.ಕೆ. ಬಡಿಗೇರ, ಗೌರಿಶಂಕರ, ಹೈದರಾಬಾದ್, ಜಯರಾಮನ್ ಪಾಂಡಿಚೇರಿ, ದಯಾನಂದ ಕಾಮಕರ್, ಬಾಬುರಾವ್ ನಾಡೋಣಿ, ಅರವಿಂದ

---

೧೭೫. ಪ್ರಕಾಶ ಅಕ್ಕಿರವರ ಸಂದರ್ಶನ ದಿನಾಂಕ ೨೮-೧೨-೨೦೧೦

ಅಕ್ಕಿ ಪಾಂಡಿಚೇರಿ. ಪ್ರಾ. ಪಿ.ಎಸ್. ಕಡೆಮನಿ, ಶ್ರೀಧರ ಚವ್ಹಾಣ, ಮುಂತಾದ ಖ್ಯಾತಕಲಾವಿದರು ಬಂದು ಭಾವಚಿತ್ರ, ವ್ಯಕ್ತಿಚಿತ್ರ, ಸಂಯೋಜನಾ ಚಿತ್ರಗಳ ಪ್ರಾತ್ಯಕ್ಷತೆಯನ್ನು ನೀಡುವುದರ ಮೂಲಕ ವಿದ್ಯಾರ್ಥಿಗಳಿಗೆ. ಉತ್ತಮವಾದ ಮಾರ್ಗದರ್ಶನವನ್ನು ಮಾಡಿದ್ದಾರೆ. ಇದು ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿದೆ. ಈ ಕಲಾ ಪ್ರತ್ಯಕ್ಷತೆಯಿಂದ ವಿದ್ಯಾರ್ಥಿಗಳಿಗೆ ಹೊಸ ಚೈತನ್ಯ ತುಂಬುದರ ಜೋತೆಗೆ ಬೆಲೆ ಕಟ್ಟಲಾಗದಷ್ಟು ಇರುವ ಉತ್ತಮ ಕಲಾಕೃತಿಗಳು ವಿಜಯಕಲಾ ಮಂದಿರದಲ್ಲಿ ಇವರ ಅನೇಕ ಕಲಾಕೃತಿಗಳು ಸಂಗ್ರಹಗೊಂಡಿವೆ.

ಗಣ್ಯರ ಸಂದರ್ಶನ : ಚಿತ್ರ, ಸಂಗೀತ, ಶಿಲ್ಪ, ನೃತ್ಯ, ನಾಟಕದ ಅಭಿರುಚಿಯನ್ನು ನೀಡುತ್ತಿರುವ ವಿಜಯಕಲಾಮಂದಿರಕ್ಕೆ ನಾಡಿನ ಅನೇಕ ಗಣ್ಯ ಮಾನ್ಯರ ಸಂದರ್ಶನ ನೀಡಿ ಶುಭಹಾರಿಸಿದ್ದಾರೆ ಅಂಥವರಲ್ಲಿ ಪ್ರಮುಖರಾದ ಪರಮಪೂಜ್ಯ ಜಗದ್ಗುರು ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ತೊಂಟದಾರ್ಯಮಠ, ಗದಗ, ಡಂಬಳ, ಶ್ರೀ ಡಾ॥ ಪುಟ್ಟರಾಜ ಕವಿಗವಾಯಿಗಳು, ಶ್ರೀ ವಿರೇಶ್ವರ ಪುಣ್ಯಾಶ್ರಮ ಗದಗ, ಪೂಜ್ಯ ನಿರ್ಭಯಾನಂದ ಮಹಾಸ್ವಾಮಿಗಳು, ರಾಮಕೃಷ್ಣ ಆಶ್ರಮ ಗದಗ, ಜಗದ್ಗುರು, ಅಭಿನವ ಶಿವಾನಂದ ಮಹಾಸ್ವಾಮಿಗಳು, ಶಿವಾನಂದಮಠ, ಗದಗ ಮುಂತಾದ ಪರಪೂಜ್ಯರ ಸಂದರ್ಶನ ನೀಡಿ ಆಶೀರ್ವದಿಸಿದ್ದಾರೆ."

ರಾಜ್ಯಪಾಲರಾದ ಶ್ರೀ ಧರ್ಮವಿರದ ಶ್ರೀ ಬಿ.ಡಿ. ಜತ್ತಿಯವರ ಹಾಗೂ ಮಾನ್ಯ ಶ್ರೀ ಎ.ಆರ್.ಕಂಠಿ, ಮಾನ್ಯ ಶ್ರೀ ಎಚ್.ಕೆ. ಪಾಟೀಲ ಮಾನ್ಯ ಶ್ರೀ ಎಂ.ಪಿ.ಪ್ರಕಾಶ ಮಾನ್ಯ ಶ್ರೀ ಎಸ್.ಎಸ್.ಪಾಟೀಲ, ಮಾನ್ಯ ಶ್ರೀ ಬಸವರಾಜ ಹೊರಟ್ಟಿ. ಮಾನ್ಯ ಶ್ರೀ ಡಿ.ಆರ್. ಪಾಟೀಲ ಶ್ರೀಮತಿ ಲಿಲಾದೇವಿ ಆರ್. ಪ್ರಸಾದ ಅಮೇರಿಕದ ಜಿ.ಇಸಿ.ತಂಡ, ಜರ್ಮನಿಂದ ಖ್ಯಾತವೈದ್ಯ ಡಾ.ಎಸ್.ಎನ್.ಕಿರುವಕ್ಕಿ ಯು.ಎಸ್.ಎ.ದ ಗರೈಕೊಂಲೊನ್, ಅಮೇರಿಕಾದ ಕೇಂಟ್ ಆಲ್ಡರ್‌ಶಾಫ್, ಸಿಜೆರಿಯಾದ ಮಹಿಳೆ ಬೆಂಜಲಿನ್. ಡಾ. ಚಂದ್ರಶೇಖರ್ ಕುಂಬಾರ ಡಾ. ವಿವೇಕ ರೈ. ಗ್ಯಾನ್‌ಸಿಂಗ್ ಅಮೃತಸರ್, ಪ್ರೊ. ಚಿಪ್ಪಾ ಕುಲಪತಿಗಳು ಅಜ್ಮೇಲ್ ರಾಜಸ್ಥಾನ ಪ್ರೊ. ದತ್ತಾ ಹೈದ್ರಾಬಾದ ಡಾ॥ ಸುಬಲದಾ ವೈಗೆನಕರ್ ಕೊಲ್ಲಾಪೂರ ವಿಶ್ವವಿದ್ಯಾಲಯ, ಗದುಗಿನ ಪ್ರಥಮ ಜಿಲ್ಲಾಧಿಕಾರಿ, ರಾಜಕುಮಾರ ಕಲೆ ಉಪವಿಭಾಗಾಧಿಕಾರಿ ಡಾ। ಜಿ.ಎಸ್. ಬೆಟಿಸೂರವರ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎನ್.ಎಚ್.ಕಟಕದೊಂಡ, ಶ್ರೀ ಎ.ಎನ್.ನಾಗರಳ್ಳಿ, ಶ್ರೀ ಡಿ.ವ್ಹಿ. ಬೆಲ್ಲದ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಐ.ಬಿ. ಬೆನಕೊಪ್ಪ ಮುಂತಾದ ಅನೇಕ ಅಧಿಕಾರಿಗಳು ಗಣ್ಯರು ವಿಜಯಕಲಾ ಮಂದಿರಕ್ಕೆ ಸಂದರ್ಶನ ನೀಡಿ ಅನೇಕ ಸಲಹೆಸೂಚನೆಗಳನ್ನು ನೀಡಿ ಕಲಾವಾತಾವರಣವನ್ನು ಮೆಚ್ಚಿ ಹೊಗಳಿದ್ದಾರೆ."

ಮೇಲಿನ ಎಲ್ಲ ಗಣ್ಯರ ಸಂದರ್ಶನ ಮಾರ್ಗದರ್ಶನದಿಂದ ವಿಜಯಕಲಾಮಂದಿರವು ಇನ್ನು ಎತ್ತರಕ್ಕೆ ಬೆಳೆಯಲು ಕಾರವಾಗಿದೆ ಎಂದರೆ ತಪ್ಪಾಗಲಾರದು ರಾಜ್ಯ ಹೊರರಾಜ್ಯದ ಕಲಾವಿದ ಕಲಾಸಾಹಿತಿಗಳಿಂದ ಅವರ ಮಾರ್ಗದರ್ಶನದಿಂದ ನಡೆಯಲು ಸಹಕಾರಿಯಾಗಿದೆ.

ಶೈಕ್ಷಣಿಕ ಪ್ರವಾಸಗಳು ಮತ್ತು ಕಲಾ ಗ್ಯಾಲರಿಗಳ ಸಂದರ್ಶನ : ವಿಜಯಕಲಾ ಮಂದಿರವು ಹಲವಾರ ಶೈಕ್ಷಣಿಕ ಕೇಲಸಗಳನ್ನು ಮಾಡುವುದರ ಮೂಲಕ ಅನೇಕ ಶೈಕ್ಷಣಿಕ ಪ್ರವಾಸಗಳನ್ನು ಕೈಗೊಂಡಿದೆ ಮತ್ತು ಹಲವಾರು ಕಲಾಗ್ಯಾಲರಿಗಳಿಗೆ ಬೆಟ್ಟಿನೀಡಿ ಅದರು ಉಪಯೋಗ ಪಡೆದುಕೊಂಡಿದೆ.




ವಿಜಯ ಕಲಾಮಂದಿರದ ಹಳೆಕಟ್ಟಡ



ವಿಜಯಕಲಾಮಂದಿರದ ನೂತನ ಕಟ್ಟಡ



ಪ್ರಾ. ಅಶೋಕ.ಟಿ.ಅಕ್ಕಿ ಯವರ ಕಲಾಕೃತಿಗಳು



ಚಿತ್ರ ೧.





ಚಿತ್ರ ೨.



ಚಿತ್ರ ೩.




ಚಿತ್ರ ೪.

ವಿಜಯ ಕಲಾಮಂದಿರ ಗದಗ



ಆರ್.ವ್ಹಿ.ಹೆಗಡೆ ಯವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪.




ವಿಜಯ ಕಲಾಮಂದಿರ ಗದಗ



ಶ್ರೀಮತಿ ಪ್ರೇಮಾ ಹಿರೇಮಠ ರವರ ಕಲಾಕೃತಿಗಳು




ಚಿತ್ರ ೧.



ಚಿತ್ರ ೨.



ಚಿತ್ರ ೩,



ಚಿತ್ರ ೪.



ಕೃಷ್ಣಾ .ಕೆ.ಎಂ ರವರ ಕಲಾಕೃತಿಗಳು



ಚಿತ್ರ ೨.



ಚಿತ್ರ ೧



ಚಿತ್ರ ೩.




ಚಿತ್ರ ೪.



ಶ್ರೀಮತಿ ಎಸ್.ಎಸ್.ಕಮ್ಮಾರ







ಶರಣಪ್ಪ ಬಿ.ಎಚ್.



ಶ್ರೀಮತಿ ಬಿ.ಜಿ. ಕುಲಕರ್ಣಿ



ವಿಜಯ ಕಲಾಮಂದಿರ ಗದಗ



ಪಿ.ವ್ಹಿ. ಬಡಿಗೇರ






ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಕಲಾಕೃತಿ



ಎಸ್.ವ್ಹಿ.ಗುಂಜಾಳ



ಶ್ರೀ.ಬಿ.ಎನ್. ಪರ್ವತಗೌಡರ





ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು




ಡಾ. ಬಿ.ಕೆ. ಹಿರೇಮಠ ರವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೪.



ಚಿತ್ರ ೩.

ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಶ್ರೀ ಎಂ.ಆರ್.ಬಾಳಿಕಾಯಿ ಯವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪.



ಚಿತ್ರ ೫.




ಡಾ. ಎಸ್.ಸಿ.ಪಾಟೀಲರವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.




ಚಿತ್ರ ೪.

ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಡಾ.ಡಿ.ಎ.ಉಪಾಧ್ಯ







ಟಿ.ವ್ಹಿ. ಗಣೇಶಗುಡಿ



ಚಿದಾನಂದ ಗಣೇಶಗುಡಿ




ವಿಜಯ ಕಲಾಮಂದಿರ ಗದಗ. ವಿದ್ಯಾರ್ಥಿಗಳು



ಶ್ರೀ ಎಂ.ಜೆ.ವಾಚೇದಮಠರವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪.



ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಪ್ರಾ.ಸಿ.ಬಿ.ಕಾಚಾಪೂರ







ಶ್ರೀ ಎಂ.ಜೆ.ಬಂಗ್ಲೇವಾಃ



ಶ್ರೀಸುರೇಶ ಕುಲಕರ್ಣಿ



ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಶ್ರೀ ಡಿ.ಎಂ.ಬಡಿಗೇರ ರವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.




ಚಿತ್ರ ೪.



ಚಿತ್ರ ೩.

ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಶ್ರೀ.ಎನ್.ಎಮ್.ದಾಟನಾಳ







ಶ್ರೀ ಎಂ.ಡಿ.ಕಡ್ಲಿಕೊಪ್ಪ



ಶ್ರೀ ಮಹಾದೇವ ಕವಿಶೆಟ್ಟಿ



ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಶ್ರೀ ಎ.ಬಿ.ಉಪ್ಪಾರ ರವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೪.



ಚಿತ್ರ ೩.

ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಎಸ್.ಎಫ್.ಬೆನಕಣ್ಣವರ








ಪಿ.ಎ.ಕುಲಕರ್ಣಿ



ಜಂಬುಕೇಶ್ವರ ಎಸ್.ಎಂ



ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು




ಜಿ.ಎಸ್.ಬೂಸಗೊಂಡ








ಎನ್.ಕೆ.ಹಾಳಕೆರಿ





ಡಾ. ಯಾದಪ್ಪ ಪರದೇಶಿ



ಎಂ.ಸಿ.ಚಟ್ಟಿ ಯವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪



ಚಿತ್ರ ೫.

ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಪಿ.ಡಿ.ಜೆಟ್ಟಣ್ಣವರ



ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಕಲಾಕೃತಿ




೭೩ನೇ ಕನ್ನಡ ಸಾಹಿತ್ಯ ಸಮ್ಮೇಳನ ಪ್ರಶಸ್ತಿ ಪಡೆದ ಕಲಾಕೃತಿ



ಮಹೇಶ ಹೊಸಳ್ಳಿಮಠ



ರಾಜು ತೆರದಾಳ



ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಶಂಕರ ಕುಂದಗೋಳ







ಓ.ಬಿ.ಶೈಲೇಶ



ಕಮಲ ಅಹ್ಮದ



ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು



ಡಾ. ನಿಂಗಪ್ಪ ಅಂಗಡಿ





ವಿ.ವಿ.ಹಿರೇಮಠ







ಮಂಜುನಾಥ ಮಾನೆ

ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು:



ಡಾ.ಶಶಿಕಲಾ ಹುಗಾರ







ಡಾ. ಮೊಹನರಾವ.ಪಾಂಚಾಳ



ಶ್ರೀಧರ ಚವ್ಹಾಣ



ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಕಲಾಕೃತಿ



ಆಶಾರಾಣಿ ನಡೋಣಿ

ವಿಜಯ ಕಲಾಮಂದಿರ ಗದಗ ವಿದ್ಯಾರ್ಥಿಗಳು




ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಕಲಾಕೃತಿ





ಎನ್.ಎಸ್.ಪತ್ತಾರ



ರಮೇಶ ತೆರದಾಳ





ವೇಂಕಟೇಶ ಕಬಾಡಿ







ಎಂ.ಎಂ.ಕನ್ನೂರ




ಅಪ್ಪಣ್ಣ ಪೂಜಾರ





ಕೆ.ಎಸ್.ಬಂಡಿ







ಸುರೇಶ ಡಿ.ಎಚ್

ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಕಲಾಕೃತಿ



ಬಸವರಾ ಕುತ್ನಿ



ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದ ಕಲಾಕೃತಿ

ವಿಜಯ ಕಲಾಮಂದಿರದ ಕಲಾಚಟುವಟಿಕೆಗಳು



ಕಲಾವಿದ ಡಾ. ಜೆ.ಎಸ್.ಖಂಡೇರಾವ ಇವರಿಂದ ಪ್ರಾತ್ಯಕ್ಷಿಕೆ



ಶ್ರೀ ಪುಂಚಿತಾಯ್ ಕಾಸರಗೊಡ ಇವರಿಂದ ಪ್ರಾತ್ಯಕ್ಷಿಕೆ



ಕಲಾವಿ ಎಂ.ಆರ್.ಬಾಳಿಕಾಯಿ ಇವರಿಂದ ಪ್ರಾತ್ಯಕ್ಷಿಕೆ



ಶ್ರೀ ಅಚ್ಯುತನ್ ಕಡ್ಲೂರಇವರಿಂದ ಪ್ರಾತ್ಯಕ್ಷಿಕೆ

ಶಿಕ್ಷಣ ಕೇವಲ ನಾಲ್ಕು ಗೋಡೆಗಳ ಮಧ್ಯೆ ನಡೆಯುವಂತದ್ದಲ್ಲ ನಡೆಯಲೂಬಾರದು ಇದರಿಂದ ವಿದ್ಯಾರ್ಥಿಗಳ ಸರ್ವೊತೋಮುಖ ಅಭಿವೃದ್ಧಿ ಯಾಗಲು ಸಾಧ್ಯವಾಗುವುದಿಲ್ಲ. ದೇಶ ನೋಡು ಕೋಶ ಓದು ಎಂಬುದು ಜ್ಞಾನಿಗಳ ಮಾತು ಅಕ್ಷರಶಃ ಸತ್ಯ ಕಲೆ, ಸಂಗೀತ, ಸಾಹಿತ್ಯ ಇವುಭವ್ಯ ಭಾರತದ ಸಾಂಸ್ಕೃತಿಕ ಪ್ರತಿಕ, ಭವ್ಯನಾಗರಿಕತೆಯ ಬದುಕಿಗೆ ಅತ್ಯುತ್ತಮ ಸಂಸ್ಕಾರವನ್ನು ನೀಡುತ್ತವೆ. ಭಾರತವು ವಿವಿಧ ಜನಾಂಗಗಳ ವಿವಿಧ ಭಾಷೆ ಕಲೆ, ಸಂಸ್ಕೃತಿ ಹಾಗೂ ನಡುಗೆ-ತೊಡುಗೆಗಳ ಸರ್ವ ಸಮ್ಮಿಲನತೆಗಳೊಂದಿಗೆ ಭಾರತದ ವಿವಿಧತೆಯಲ್ಲಿ ಏಕತೆಯ ಸಾರವನ್ನು ತಿಳಿಸುವವು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ಕಂಡಾಗ ಸಿಗುವ ಆನಂದ ಹಾಗೂ ಅನುಭವ ಪುಸ್ತಕ ಓದುವುದರಿಂದ ಸಿಗಲಾರದು ಎಂಬುದು ಸತ್ಯ."

ವಿದ್ಯಾರ್ಥಿ ಜೀವನದಲ್ಲಿ ಪ್ರವಾಸವು ಶಿಕ್ಷಣದ ಪ್ರಮುಖ ಅಂಗ. ವಿದ್ಯಾರ್ಥಿಗಳ ತಮ್ಮ ವಿದ್ಯಾರ್ಥಿ ಜೀವನದಲ್ಲಿಯೇ ಪ್ರವಾಸದ ಸವಿಯನ್ನು ಅನುಭವಿಸಬೇಕು, ಕಾರಣ Students Life is Golden Life ಜ್ಞಾನಿಗಳ ಮಾತು ಪ್ರತಿಯೊಬ್ಬ ವಿದ್ಯಾರ್ಥಿಯ ಈ ಪ್ರವಾಸದ ಅವಕಾಶವನ್ನು ತಪ್ಪಿಸಿಕೊಳ್ಳಬಾರದು. ಯಾಕೆಂದರೆ ನಾವು ವಿವಿಧ ಪುಸ್ತಕಗಳಲ್ಲಿ ಓದಿರುವ ಹಾಗೆ ಆಗ್ರಾದ ತಾಜಮಹಲ್ ಹೀಗೆದೆ ಹಾಗಿದೆ ಇದು ಅಮೃತ ಶಿಲೆಯಿಂದ ಕಟ್ಟಲ್ಪಟಿದೆ ಎಂದು ಕೇಳಿದರೆ ಅದನ್ನು ಪ್ರತ್ಯಕ್ಷವಾಗಿ ಕಂಡಾಗ, ಸಿಗುವ ಆನಂದ ಅನುಭವ ಪುಸ್ತಕ ಓದುವುದರಿಂದ ಸಿಗದು ಹಾಗೆಯೇ ಪ್ರತಿಯೊಂದು ಪ್ರಾಂತ್ಯದ ಆಚಾರ, ವಿಚಾರಗಳ ಕುರಿತು ಅಲ್ಲಿಗೆ ಹೋಗಿ ಅವರೊಡನೆ ಬೆರೆತಾಗ ಅವರಿಗೆ ವಿಸ್ತಾರವಾಗಿ ತಿಳಿಯುತ್ತವೆ. ಅದಕ್ಕಾಗಿ ಶಿಕ್ಷಣದಲ್ಲಿ ಪ್ರವಾಸಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿರುವುದು. ಇದೆಸೆಯಲ್ಲಿ ವಿಜಯಕಲಾ ಮಂದಿರ ಶೈಕ್ಷಣಿಕ ಪ್ರವಾಸದ ಪ್ರಯೋಜನೆಯನ್ನು ವಿದ್ಯಾರ್ಥಿಗಳಿಗೆ ನೀಡುತ್ತ ಬಂದಿದೆ."

ಹೀಗೆ ವಿಜಯಕಲಾ ಮಂದಿರವು ಅನೇಕ ಕಲಾಚಟುವಟಿಕೆಗಳನ್ನು ಮಾಡಿ ಅನೇಕ ಕಾರ್ಯಕ್ರಮಗಳನ್ನು ಮಾಡುವುದರ ಜೋತೆ ಹಲವಾರು ಶೈಕ್ಷಣಿಕ ಪ್ರವಾಸಗಳನ್ನು ಹಮ್ಮಿಕೊಂಡು ಅನೇಕ ಪ್ರೇಕ್ಷಣಿಕ ಐತಿಹಾಸಿಕ, ಸ್ಥಳಗಳನ್ನು ಆಯ್ದುಕೊಂಡು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಮಾಡುತಿದೆ. ಇದರಿಂದ ವಿಜಯಕಲಾಮಂದಿರವು ಇನ್ನು ಹೆಚ್ಚಿನ ರೀತಿಯಲ್ಲಿ ಪ್ರಚಲಿತವಾಗುತ್ತಿದೆ. ಜೋತೆಗೆ ಚಿತ್ರಕಲೆಗೆ ಹೆಚ್ಚಿನ ಮಾನ್ಯತೆ ಸಿಗುವಂತೆ ಕಾರ್ಯಮಾಡುತಿದೆ.

ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ, ಗದಗ-ಬೆಟಗೇರಿ :

ಬೆಟಗೇರಿಯು ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದ ಭಾಗವಾಗಿದ್ದು, ಇಲ್ಲಿ ಧಾರ್ಮಿಕ ರಾಜಕೀಯ, ಸಾಹಿತ್ಯಿಕ, ಕ್ರೀಡೆ, ಸಂಗೀತ, ನಾಟಕ, ಚಿತ್ರಕಲೆಯನ್ನು ಹೊಂದಿದ ಸುಸಂಸ್ಕೃತ ನಗರವಾಗಿದೆ. ಧಾರ್ಮಿಕವಾಗಿ ನೋಡಿದಾಗ ಶ್ರೀ ರಂಗಪ್ಪಜ್ಜನಮಠ, ಅಂಬಾಭವಾನಿ, ವೀರಭದ್ರೇಶ್ವರ ದೇವಸ್ಥಾನ, ಶ್ರೀ ನೀಲಕಂಠೇಶ್ವರ ಮಠ, ಹೀಗೆ ಹಲವಾರು ಧಾರ್ಮಿಕ ಕ್ಷೇತ್ರಗಳನ್ನು ಹೊಂದಿದೆ. ಶ್ರೀ ನೀಲಕಂಠೇಶ್ವರ ಮಠದಿಂದ ಒಂದು ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಬೇಕೆಂದು ಬೆಟಗೇರಿ ಕುರುಹಿನಶೆಟ್ಟಿ ಸಮಾಜದವರು ಬೆಟಗೇರಿ ಭಾಗದ ಕೆಲವು ಹಿರಿಯರು, ಗಣ್ಯವ್ಯಕ್ತಿಗಳು ಸೇರಿಕೊಂಡು ಕುರಟ್ಟಿಪೇಟೆಯಲ್ಲಿರುವ ಶ್ರೀ ನೀಲಕಂಠಸ್ವಾಮಿ ಮಠದಲ್ಲಿ ಶ್ರೀ ಮಜ್ಜಗದ್ಗುರು ಮುಮ್ಮಡಿ ನೀಲಕಂಠ ಪಟ್ಟದಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಕುರುಹಿನಶೆಟ್ಟಿ ಸಮಾಜದ ಜನರು ಸಕ್ರೀಯವಾಗಿ ಮುಂದೆಬರಬೇಕೆಂಬ

ಸದುದ್ದೇಶದಿಂದ ಅಖಿಲ ಭಾರತ ಕುರುಹಿನಶೆಟ್ಟಿ ಸಂಘ(ರಿ) ಬೆಂಗಳೂರು ಎಂಬ ಸಂಸ್ಥೆಯನ್ನು ಪ್ರಾರಂಭಿಸಿ, ಬೆಂಗಳೂರು ನೋಂದಣಿ ಕಛೇರಿಯಲ್ಲಿ ೧೯೮೦ರಲ್ಲಿ ಅಂದರೆ ೧೭-೫-೧೯೮೦ರಂದು ನೋಂದಣಿ ಮಾಡಿಕೊಂಡರು.[೧೭೬]

ಜೆ.ಎನ್.ಕಲಾಶಾಲೆ ನಡೆದು ಬಂದದಾರಿ : ಅಖಿಲ ಭಾರತ ಕುರುಹಿನ ಶೇಟ್ಟಿ ಸಂಘ (ರಿ) ಬೆಂಗಳೂರು ಈ ಸಂಘದಿಂದ ಹಿರಿಯ ಕಲಾವಿದರು ಸೇರಿಕೊಂಡು ಬೆಟಗೇರಿ ಭಾಗದಲ್ಲಿ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಬೇಕೆಂದು ೧೯೮೦-೮೧ನೇ ಸಾಲಿನಲ್ಲಿ ಜೆ.ಎನ್.ಕಲಾಶಾಲೆಯನ್ನು ಪ್ರಾರಂಭಿಸಿದರು. ಈ ಕಲಾಶಾಲೆಯ ಸಂಸ್ಥಾಪಕ ಅಧ್ಯಕ್ಷರಾಗಿ ಶ್ರೀ ನಾಗಪ್ಪ ಸೋಮಪ್ಪ ತುಕ್ಕಾ ಹಾಗೂ ಕಾರ್ಯದರ್ಶಿಗಳಾಗಿ ಶ್ರೀ ಗದಿಗೆಪ್ಪ ನೀಲಕಂಠಪ್ಪ ಜಾಡಗೌಡರ ಈ ಕಲಾಶಾಲೆಯು ಹುಟ್ಟುಹಾಕಲು ಕಾರಣೀಕರ್ತರು. ಗದುಗಿನ ವಿಜಯ ಕಲಾಮಂದಿರದಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಮಾಡ್ಲಿಂಗ್ ಡಿಪ್ಲೋಮಾ ಪದವಿ ಪಡೆದು, ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದ ಜಾಡಗೌಡರು ಸಂಗೀತಗಾರರೂ ಆಗಿದ್ದರು. ಉತ್ತಮ ಭಾಷಣಕಾರು, ಬರಹಗಾರರು, ಸಾಹಿತಿಗಳು, ಉತ್ತಮ ಕಲಾವಿದರಾದ ಇವರು ಬೆಟಗೇರಿ ಭಾಗದಲ್ಲಿ ಚಿತ್ರಕಲಾ ಶಾಲೆ ಪ್ರಾರಂಭಿಸಬೇಕೆಂಬ ಆಶಯನ್ನು ಹೊತ್ತವರಾಗಿದ್ದರು. ಅವರ ಕಲ್ಪನೆಯ ಕೂಸೇ ಜೆ.ಎನ್.ಕಲಾಶಾಲೆ.[೧೭೭]

ಎ.ಬಿ.ಕೆ.ಎಸ್. ಸಂಸ್ಥೆಯ ಅಧ್ಯಕ್ಷರಾಗಿದ್ದ ಶ್ರೀ ನಾಗಪ್ಪ ತುಕ್ಕಾ ಇವರು ಸಮಾಜದ ಹಿರಿಯರು. ರಾಜಕೀಯದಲ್ಲಿ ಪಳಗಿದವರೂ ಆಗಿದ್ದರು. ಇವರು ರಾಜ್ಯದ ಮಾಜಿ ಸಚಿವರೂ ಸಹಕಾರಿ ರಂಗದ ಭೀಷ್ಮರೆಂದೆನಿಸಿಕೊಂಡ ದಿವಂಗತ ಕೆ.ಎಚ್.ಪಾಟೀಲರ ಆಪ್ತರಾಗಿದ್ದರು. ಇವರ ರಾಜಕೀಯ ಪ್ರಭಾವ ಹಾಗೂ ಶ್ರೀ ಜಿ.ಎನ್.ಜಾಡಗೌಡರರವರ ಕಲಾಕೌಶಲ್ಯಗಳ ಮತ್ತು ಶಿಕ್ಷಣ ಕ್ಷೇತ್ರದ ಅನುಭವದ ಸಮ್ಮಿಶ್ರಣದಿಂದ ಅಂದು ಜೆ.ಎನ್.ಚಿತ್ರಕಲಾ ಶಾಲೆ ಹುಟ್ಟಲು ಕಾರಣವಾಯಿತು. ಇವರ ಜೊತೆ ಹಿರಿಯರೂ ಆದ ಶ್ರೀ ನಿಂಗಪ್ಪ ಬಾದರದಿನ್ನಿ, ಶ್ರೀ ಚನಬಸಪ್ಪ ಐಲಿ, ಶ್ರೀ ಡೋಕಪ್ಪ ಶಿರಿಗೇರಿ, ಶ್ರೀ ಬಿ.ಕೆ.ಆನಂದ, ಶ್ರೀ ಚನಬಸಪ್ಪ ಹಳ್ಳಿ, ಶ್ರೀ ಚನ್ನಬಸಪ್ಪ ಹಿಂಡಿ, ಶ್ರೀ ಜೆ.ದಿವಾಕರ ಮುಂತಾದವರು ಈ ಸಂಸ್ಥೆ ಬೆಳೆಯಲು ಪ್ರಮುಖ ವ್ಯಕ್ತಿಗಳಾದರು.

ಕುಲಸನ್ನಿಧಿಯಾಗಿದ್ದ ಸಮಾಜದ ಶ್ರೀ ಜಗದ್ಗುರು ಮುಮ್ಮಡಿ ನೀಲಕಂಠ ಪಟ್ಟದಾರ್ಯ ಮಹಾಸ್ವಾಮಿಗಳು ಸದಾ ಈ ಸಂಸ್ಥೆಯ ಬೆನ್ನೆಲುಬಾಗಿ ಉತ್ತಮವಾಗಿ ಈ ಸಂಸ್ಥೆಯು ನಡೆದುಕೊಂಡು ಹೋಗಬೇಕೆಂದು ಅವರ ಸದಾಶಯವಾಗಿತ್ತು. ಹಾಗೂ ಅದರಂತೆ ತಮ್ಮ ಉದಾರವಾದ ಸರ್ವ ಸಹಾಯ ನೀಡುತ್ತಾ ಬಂದರು. ಕಲಾಶಾಲೆಯು ಪ್ರಾರಂಭದಲ್ಲಿ ಶ್ರೀ ಮಠದ ಮೇಲ್ಭಾಗದಲ್ಲಿ ಪ್ರಾರಂಭವಾಯಿತು. ಕಲಾಶಾಲೆ ಪ್ರಾರಂಭಿಕ ವೇಳೆಯಲ್ಲಿ ಅನೇಕ ಹಿರಿಯ ಕಲಾವಿದರು ಇದಕ್ಕೆ ಮಾರ್ಗದರ್ಶನ ಹಾಗೂ ಅಳಿಲು ಸೇವೆ ಸಲ್ಲಿಸಿದ್ದಾರೆ. ಅಂಥವರಲ್ಲಿ ಹಿರಿಯ ಕಲಾವಿದರಾದ ಶ್ರೀ ಎಂ.ಎ. ಚೆಟ್ಟಿ, ಶ್ರೀ ಸಿ.ಎನ್. ಪಾಟೀಲ, ಶ್ರೀ ಎನ್.ಎ. ಹರ್ಲಾಪೂರ, ಶ್ರೀ ಎ.ಎ. ಶಿರಹಟ್ಟಿ, ಶ್ರೀ ಎನ್.ಕೆ. ಹಾಲಕೇರಿ, ಹಾಗೂ ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಾಶಿಕ್ಷಣವನ್ನು ಬಂಗಾರದ ಪದಕದೊಂದಿಗೆ ಉತ್ತೀರ್ಣರಾದ ಶ್ರೀ ಜಿ.ಎಸ್. ದೊಡ್ಡಿಹಾಳ ಮುಂತಾದವರು

---

೧೭೬. ಶ್ರೀ ಜೆ.ಎನ್. ಜಾಡಗೌಡ್ರ ಸಂದರ್ಶನ ದಿನಾಂಕ ೨೮-೩-೨೦೦೭

೧೭೭. ಎಮ್.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಕಲಾ ಶಾಲೆಯ ಕೊಡುಗೆ ಪು.ಸಂ. ೨೯

ಜೆ.ಎನ್.ಕಲಾಶಾಲೆಯ ಬೆಳವಣಿಗೆಗೆ ಶ್ರಮಿಸಿದ್ದಾರೆ ಉತ್ತಮ ಮಾಡ್ಲಿಂಗ್ ಕಲಾವಿದರೂ ಆದ ಶ್ರೀ ಎಂ.ಆರ್. ಬಾಗವಾನರವರು ವಿಜಯ ಕಲಾಮಂದಿರದಲ್ಲಿ ಹತ್ತು ವರ್ಷಗಳ ಕಾಲ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅನುಭವವಿದ್ದವರಾಗಿದ್ದರು. ಮತ್ತು ಜಿ.ಎನ್. ಜಾಡಗೌಡ ಅವರ ಆತ್ಮೀಯ ಸ್ನೇಹಿತರಾಗಿದ್ದರು. ಇವರ ಕಲಾಕೌಶಲ್ಯ, ಅನುಭವ ಕಲಾ ಪ್ರೌಢಿಮೆಯನ್ನು ಮನಗಂಡು ಜೆ.ಎನ್. ಕಲಾಶಾಲೆಯ ಸಂಸ್ಥಾಪಕ ಪ್ರಾಚಾರ್ಯರರನ್ನಾಗಿ ನೇಮಕ ಮಾಡಿದರು. ಶ್ರೀ ಎಂ.ಆರ್. ಬಾಗವಾನರವರು ಉತ್ತಮ ಆಡಳಿತಗಾರರು ಆಗಿದ್ದರು. ಈ ಕಲಾಶಾಲೆಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬಂದ ಅಗ್ಗಳಿಕೆ ಇವರದು. ಚಿತ್ರಕಲಾವಿದರ ತರಬೇತಿ, ಚಿತ್ರಕಲಾ ಶಿಕ್ಷಕರ ತರಬೇತಿ, ಮಾಡ್ಲಿಂಗ್ ಶಿಲ್ಪ ಇತ್ಯಾದಿ ಕಲೆಗಳನ್ನು ಕಲಿಸಲಾಗುತ್ತಿದ್ದ ಈ ಕಲಾಶಾಲೆ ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬಂತೆ ಒಳ್ಳೆಯ ಭರವಸೆಯನ್ನು ಮೂಡಿಸುವ ದಿಸೆಯಲ್ಲಿ ಈ ಕಲಾ ಸಂಸ್ಥೆ ಬೆಳೆಯುತ್ತಿದೆ.[೧೭೮]

ಒಂದು ಶಿಕ್ಷಣ ಸಂಸ್ಥೆಯು ಉತ್ತಮ ರೀತಿಯಲ್ಲಿ ಬೆಳೆದುಬರಬೇಕಾದರೆ ಅದಕ್ಕೆ ಎಲ್ಲರ ಸಹಕಾರ ಬಹುಮುಖ್ಯವಾದುದು. ಆ ಸಂಸ್ಥೆಯನ್ನು ನಡೆಸುವ ಆಡಳಿತ ಮಂಡಳಿ, ಅಲ್ಲಿನ ಅಧ್ಯಾಪಕವೃಂದ, ಬೋಧಕೇತರ ಮತ್ತು ವಿದ್ಯಾರ್ಥಿಗಳ ವೃಂದ ಇವರೆಲ್ಲರೂ ತಮ್ಮ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟುತನದಿಂದ ಮತ್ತು ಅಷ್ಟೇ ಶ್ರದ್ದೆಯಿಂದ ಕಾರ್ಯಗತಗೊಳಿಸುವ ಮನೋಭಾವನೆಯು ಒಂದು ಶಿಕ್ಷಣ ಸಂಸ್ಥೆ ಉತ್ತಮ ರೀತಿಯಲ್ಲಿ ಬೆಳೆಯಲು ಕಾರಣವಾಗುತ್ತದೆ. ಜೆ.ಎನ್.ಕಲಾಶಾಲೆಯಲ್ಲಿ ಕಲಾಶಾಲೆಯ ಕಲಾ ಚಟುವಟಿಕೆಗಳಿಗೆ ಅಧ್ಯಾಪಕ ವೃಂದದ ಕೊರತೆಯಿಂದಾಗಿ ಸ್ವಲ್ಪ ತೊಂದರೆ ಉಂಟಾಯಿತು. ಆದ್ದರಿಂದ ೧೯೮೩ ರಲ್ಲಿ ಶ್ರೀ ಬಿ.ಎಫ್.ಬಡಿಗೇರ ಇವರನ್ನು ಉಪನ್ಯಾಸಕರನ್ನಾಗಿ ಮತ್ತು ಶ್ರೀ ಎಂ.ಟಿ.ದಾಸರ ಇವರನ್ನು 'ಡಿ' ದರ್ಜೆಯ ನೌರರರನ್ನಾಗಿ ನೇಮಕಮಾಡಿಕೊಳ್ಳಲಾಯಿತು.[೧೭೯] ಕಲಾಶಾಲೆಯ ಎಲ್ಲ ಕೆಲಸಗಳು ಸುಗಮವಾಗಿ ನಡೆದವು. ಹಂತಹಂತವಾಗಿ ಬೆಳೆಯುತ್ತ ಬಂದ ಜೆ.ಎನ್.ಕಲಾಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಬಂತು. ಇದರಿಂದ ಉಪನ್ಯಾಸಕರ ಕೊರತೆಯಾಯಿತು. ಆಗ ಶ್ರೀ ಎಂ.ಆರ್. ಹೆಬ್ಬಳ್ಳಿ ಮತ್ತು ಶ್ರೀ ಎಂ.ಆರ್. ಹರ್ಲಾಪೂರ ಇವರು ಈ ಕಲಾಶಾಲೆಯಲ್ಲಿ ಕಲಿತ ಉತ್ತಮ ಕಲಾ ವಿದ್ಯಾರ್ಥಿಗಳಾಗಿದ್ದರಿಂದ ಅವರ ಕಲಾ ಪ್ರತಿಭೆಯನ್ನು ಮನಗಂಡು ೧೯೮೬ರಲ್ಲಿ ಶ್ರೀ ಎಂ.ಆರ್.ಹೆಬ್ಬಳ್ಳಿ ಹಾಗೂ ೧೯೮೭ರಲ್ಲಿ ಶ್ರೀ ಎಂ.ಆರ್.ಹರ್ಲಾಪೂರ ಇವರನ್ನು ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಳ್ಳಲಾಯಯಿತು.[೧೮೦]

ಹೀಗೆ ಅಧ್ಯಾಪಕ ವೃಂದವನ್ನು ಹಂತ ಹಂತವಾಗಿ ನೇಮಕ ಮಾಡಿಕೊಂಡ ಜೆ.ಎನ್.ಚಿತ್ರಕಲಾ ಶಾಲೆಯಲ್ಲಿ ಬೋಧನಾ ಪದ್ಧತಿ ಮತ್ತು ಕಲಾಚಟುವಟಿಕೆಗಳು ನಿರಂತರವಾಗಿ ನಡೆಯಲಾರಂಭಿಸಿದವು. ಬೆಟಗೇರಿ ಭಾಗದಲ್ಲಿ ಉತ್ತಮ ಕಲಾವಾತಾವರಣ ಪ್ರಾರಂಭವಾಯಿತು. ಅನೇಕ ವಿದ್ಯಾರ್ಥಿಗಳು ಇಲ್ಲಿ ಕಲಿತು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕವಾಗಿದ್ದಾರೆ. ಇದರಿಂದ ಕಲಾಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶಪಡೆದು ವಿದ್ಯಾರ್ಜನೆ ಮಾಡತೊಡಗಿದರು.

---

೧೭೮. ಡಾ. ಎಸ್.ಸಿ. ಪಾಟೀಲ ವರ್ಣ ಸಂಚಯ ಪು.ಸಂ. ೧೦೨

೧೭೯. ಎಂ.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯಗಳ ಕೊಡುಗೆ ಪು.ಸಂ.೩೭

೧೮೦. ಬಿ.ಎಫ್. ಬಡಿಗೇರಿ ಸಂದರ್ಶನ ದಿನಾಂಕ ೨೬-೭-೨೦೦೭

ಪ್ರತಿವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಇಲ್ಲಿ ಅಧ್ಯಾಪಕರ ಕೊರತೆ ಕಾಡಲಾರಂಭಿಸಿತು. ಮತ್ತು ಸಂಸ್ಥೆಯಲ್ಲಿ ಕೆಲವು ತೊಂದರೆಗಳು ಆಡಳಿತ ಮಂಡಳಿಯಲ್ಲಿ ೧೯೯೦ರಲ್ಲಿ ವ್ಯಾಜ್ಯ ಬಂತು. ಎರಡು ಬಣವಾಗಿ ಮತ್ತು ಪ್ರಾರಂಭದಿಂದ ೧೦ವರ್ಷಗಳ ಕಾಲ ಉತ್ತಮವಾಗಿ ಕಲಾಶಾಲೆಯನ್ನು ಬೆಳೆಸಿಕೊಂಡು ಬಂದ ಶ್ರೀ ಎಂ.ಆರ್. ಬಾಗವಾನರು ಕೆಲವು ಆಡಳಿತಾತ್ಮಕ ತೊಂದರೆಯಿಂದ ಸಂಸ್ಥೆಯವರಿಂದ ವಜಾಗೊಂಡರು. ಕಲಾಶಾಲೆಯ ಅಧ್ಯಕ್ಷರಾಗಿ ಜೆ.ದಿವಾಕರ ಇವರು ಅಧ್ಯಕ್ಷರಾಗಿ ಯಾವುದೇ ವ್ಯಾಜ್ಯಕ್ಕೆ ಎದೆಗುಂದದೆ ಕಲಾಶಾಲೆಯ ಉತ್ತಮ ರೀತಿಯಲ್ಲಿ ನಡೆಸುತ್ತಾ ಬಂದರು. ೧೯೯೩ರಲ್ಲಿ ಎಂಟು ಜನ ಅಧ್ಯಾಪಕ ವೃಂದವನ್ನು ನೇಮಕಾತಿ ಮಾಡಿಕೊಳ್ಳಲಾಯಿತು. ಅವರಲ್ಲಿ ಶ್ರೀ ಬಿ.ಎಲ್.ಲಮಾಣಿ, ಶ್ರೀ ಎಚ್.ಜಿ.ರಾಠೋಡ, ಶ್ರೀ ವ್ಹಿ.ವೈ.ಸೋಮನಕಟ್ಟಿ, ಶ್ರೀ ಎಸ್.ಎನ್.ಹರ್ಲಾಪೂರ, ಶ್ರೀ ಪಿ.ಬಿ.ಬಂಡಿ, ಶ್ರೀ ಎನ್.ಟಿ.ಮಾಳವದಕರ, ಶ್ರೀ ಪಿ.ಎಸ್.ಲಕ್ಕುಂಡಿ ಹಾಗೂ ಶ್ರೀ ವಿ.ಎಲ್.ಬೆಳಗಲಿ. ಈ ಎಂಟು ಜನ ಅಧ್ಯಾಪಕರನ್ನು ನೇಮಕಾತಿ ಮಾಡಿಕೊಂಡರು.[೧೮೧]

೧೯೯೩ರಿಂದೀಚೆಗೆ ಇಲ್ಲಿಯ ಅಧ್ಯಪಕವೃಂದದ ಕಾರ್ಯವೈಖರಿಯಿಂದಾಗಿ ಮತ್ತು ಕಲಾತ್ಮಕ ಚಟುವಟಿಕೆಗಳು ಉತ್ತಮ ರೀತಿಯಲ್ಲಿ ನಡೆದು ರಾಜ್ಯದಾದ್ಯಂತ ಪಸರಿಸತೊಡಗಿತು. ರಾಜ್ಯದಲ್ಲಿ ಹಲವಾರು ಭಾಗಗಳಲ್ಲಿ ಏರ್ಪಡಿಸಲಾಗುತ್ತಿದ್ದ ಕಲಾಪ್ರದರ್ಶನ, ಕಲಾಶಿಬಿರ, ವಿಶೇಷವಾಗಿ ಏರ್ಪಡಿಸಲಾಗುತ್ತಿದ್ದ ಕಾರ್ಯಾಗಾರಗಳಲ್ಲಿ ಇಲ್ಲಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸುತ್ತ ಕಲಾಶಾಲೆಗೆ ಉತ್ತಮ ಹೆಸರು ತರಲು ಪ್ರಯತ್ನಿಸತೊಡಗಿದರು. ಇದರಿಂದ ಜೆ.ಎನ್.ಕಲಾಶಾಲೆಯು ಕರ್ನಾಟಕದಲ್ಲಿ ತನ್ನದೆ ಆದ ಹೆಸರು ಗಳಿಸಲು ಕಾರಣವಾಯಿತು. ಮತ್ತು ಅನೇಕ ಕಾರ್ಯಗಳನ್ನು ನಡೆಸುತ್ತಾ ತನ್ನ ವೈಶಿಷ್ಟ್ಯತೆಯನ್ನು ಪಡೆಯುತ್ತ ಬೆಳವಣಿಗೆಯತ್ತ ಹೆಜ್ಜೆ ಹಾಕತೊಡಗಿತು. ಹಂತ ಹಂತವಾಗಿ ಬದಲಾವಣೆಗಳನ್ನು ಹೊಂದಿ ಬೆಳವಣಿಗೆಗೆ ಪೂರಕವಾತಾವರಣ ಸೃಷ್ಟಿಸಿಕೊಂಡು ಬಂದಿತು.

ಆದರೆ ಮುಂದೆ ಕಲಾಶಾಲೆಯ ಕೆಲವು ಆಡಳಿತಾತ್ಮಕ ತೊಂದರೆ ಪ್ರಾರಂಭವಾಗಿ ಎರಡು ಬಣಗಳಾಗಿ ವ್ಯಾಜ್ಯ ಉಂಟಾಗಿ ಕಲಾಶಾಲೆಯು ಕ್ಷೀಣಿಸುವ ಹಂತಕ್ಕೆ ತಲುಪಿತು. ಉಪನ್ಯಾಸಕರಾಗಿದ್ದ ಶ್ರೀ ಬಿ.ಎಲ್.ಲಮಾಣಿ ಇವರಿಗೆ ಎಲ್ಲ ಸಿಬ್ಬಂದಿಯವರ ಒತ್ತಾಸೆಯಂತೆ ಸಂಸ್ಥೆಯವರು ಪ್ರಭಾರಿ ಪ್ರಾಚಾರ್ಯರಾಗಿ ನೇಮಕಾತಿ ಆದೇಶ ನೀಡಿದರು. ಸಂಸ್ಥೆಯ ಆದೇಶದಂತೆ ಜೆ.ಎನ್.ಕಲಾಶಾಲೆಗೆ ಪ್ರಭಾರಿ ಪ್ರಾಚಾರ್ಯರಾಗಿ ಸೇವೆಗೆ ಹಾಜರಾದರು. ಸದಾ ಕಲಾಚಿಂತಕರು, ಉತ್ಸಾಹಿ ಆಡಳಿತಗಾರರಾದ ಶ್ರೀ ಬಿ.ಎಲ್.ಲಮಾಣಿ ಇವರು ಎಲ್ಲ ಹಿರಿಯ ಮತ್ತು ಸ್ನೇಹಿತ ಉಪನ್ಯಾಸಕರ ಜೊತೆಗೂಡಿ ಅನೇಕ ಉತ್ತಮವಾದ ಕಲಾಚಟುವಟಿಕೆಗಳನ್ನು ಮಾಡುತ್ತ ಜೆ.ಎನ್.ಕಲಾಶಾಲೆಯನ್ನು ರಾಜ್ಯಮಟ್ಟದಲ್ಲಿ ಹೆಸರು ಆಗುವಂತೆ ಮಾಡತೊಡಗಿದರು. ಯಾವುದೇ ಕಲಾಪ್ರದರ್ಶನ, ಕಲಾಶಿಬಿರಗಳು ಇದ್ದಲ್ಲಿ ಉಪನ್ಯಾಸಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಭಾಗವಹಿಸುವಂತೆ ಪ್ರಚೋದಿಸಿದರು.

ಕಲಾಶಾಲೆಯಲ್ಲಿ ಅನೇಕ ಉತ್ತಮ ಕಲಾಚಟುವಟಿಕೆಗಳು, ಕಾರ್ಯಗಾರಗಳು, ಕಲಾಶಿಬಿರಗಳನ್ನು ಹಮ್ಮಿಕೊಂಡು ಉತ್ತಮ ಕೆಲಸ ಮಾಡುತ್ತಿದ್ದರು. ಆದರೆ ಸಂಸ್ಥೆಯ ವ್ಯಾಜ್ಯವಿರುವುದರಿಂದ ಆರ್ಥಿಕವಾಗಿ ತೊಂದರೆ ತುಂಬಾ ಕಷ್ಟಕರವಾಗಿತ್ತು. ಇಂಥ ಸಂದರ್ಭದಲ್ಲಿಯೇ ಇಲಾಖೆಯ ಅಧಿಕಾರಿಗಳು ಕಲಾಶಾಲೆಯ

೧೮೧. ಎಂ.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯಗಳ ಕೊಡುಗೆ ಪು.ಸಂ.೩೭

ಕಟ್ಟಡ ಸರಿಯಾಗಿಲ್ಲವೆಂದು ಅಪಸ್ವರವೆತ್ತಿ ಬೇರೆ ಕಲಾಶಾಲೆಗೆ ಹೋಗುವಂತೆ ಕಟ್ಟಡ ನೋಡುವಂತೆ ನೋಟೀಸ ನೀಡಿದರು. ಸುಮಾರು ೧೪ವರ್ಷಗಳವರೆಗೆ ಶ್ರೀ ನೀಲಕಂಠೇಶ್ವರ ಮಠದ ಮೇಲೆ ಭಾಡಿಗೆ ಇಲ್ಲದೆ ನಡೆಂಯುತ್ತಿದ್ದ ಕಲಾಶಾಲೆಂಯು ೧೯೯೮ರಂದು ಭಾಡಿಗೆ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು.[೧೮೨] ಮೊದಲೇ ಸಂಸ್ಥೇಯವರು ಆರ್ಥಿಕ ತೊಂದರೆಯಲ್ಲಿದ್ದ ಕಾರಣ ಬೇರೆ ಕಟ್ಟಡದಲ್ಲಿ ಕಲಾಶಾಲೆಯನ್ನು ನಡೆಸಬೇಕಾದರೆ ಕಟ್ಟಡಕ್ಕೆ ಭಾಡಿಗೆ ನೀಡುವುದು ಅಸಾಧ್ಯವಾಗಿತ್ತು. ಹೀಗಾಗಿ ಕಟ್ಟಡದ ಭಾಡಿಗೆಯ ಹೊರೆಯನ್ನು ಕಲಾಶಾಲೆಯ ಸಿಬ್ಬಂದಿಯರೇ ಹೊರಬೇಕಾಯಿತು. ೧೯೯೮ರಿಂದ ೨೦೦೫ರ ವರೆಗೆ ಕಲಾಶಾಲೆಯ ಭಾಡಿಗೆಯನ್ನು ಸಿಬ್ಬಂದಿಯವರು ಕೊಡುತ್ತಾ ಕಲಾಶಾಲೆಯ ಅನೇಕ ಸಮಸ್ಯೆಗಳನ್ನು ಎದುರಿಸುತ್ತ ಕಲಾಶಾಲೆಯನ್ನು ಉತ್ತಮ ರೀತಿಯಲ್ಲಿ ನಡೆಸುತ್ತ ಬಂದರು.

೨೦೦೨ ರಿಂದ ಜೆ.ಎನ್.ಕಲಾಶಾಲೆಯ ಶ್ರೀ ಎನ್.ಎಸ್.ತುಕ್ಕಾರವರ ಮರಣವಾದ ನಂತರ ಅವರ ಸುಪುತ್ರರಾದ ಶ್ರೀ ರಘುನಾಥ ಎನ್. ತುಕ್ಕಾರವರು ಎ.ಬಿ.ಕೆ.ಎಸ್. ಸಂಸ್ಥೆಯ ಅಧ್ಯಕ್ಷರಾದರು. ಶ್ರೀ ರಘುನಾಥ ತುಕ್ಕಾರವರು ಅಧ್ಯಕ್ಷತೆಯನ್ನು ವಹಿಸಿಕೊಂಡನಂತರ ಕಲಾಶಾಲೆಯು ಉತ್ತಮ ರೀತಿಯಲ್ಲಿ ನಡೆಯುತ್ತಿತ್ತು. ವೃತ್ತಿಯಲ್ಲಿ ಸಿವಿಲ್ ಇಂಜಿನೀಯರರಾಗಿರುವುದರಿಂದ ಶಿಕ್ಷಣ ಸಂಸ್ಥೆಯ ನಿರ್ವಹಣೆ ಮಾಡಿಕೊಂಡು ಹೋಗುವುದು ಅವರಿಗೆ ಕಷ್ಟಕರವಾಯಿತು. ಯಾಕೆಂದರೆ ೨೦೦೩-೦೪ ರಿಂದ ರಾಜ್ಯದ ಎಲ್ಲ ಕಲಾಶಾಲೆಗಳು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟವು. ಹೊಸ ಪಠ್ಯಕ್ರಮವನ್ನು ಪ್ರಾರಂಭಿಸಿದರು. ಇದರಿಂದ ಹೊಸ ಪಠ್ಯಕ್ಕೆ ಕುರಿತಂತೆ ಕೆಲವು ಮೂಲಭೂತ ಸೌಲಭ್ಯವನ್ನು ಒದಗಿಸುವುದು ಬಹಳ ಕಷ್ಟಕರವಾಗಿತ್ತು, ಇದರಿಂದ ಸಂಸ್ಥೆಯು ಆರ್ಥಿಕ ತೊಂದರೆಯಲ್ಲಿ ಬಳಲುತ್ತಿತ್ತು.

ಶ್ರೀ ರಘುನಾಥ ತುಕ್ಕಾರವರು ಉತ್ತಮ ವಿದ್ಯಾವಂತರಾಗಿದ್ದು ಸರಳ ಸ್ವಭಾವದವರಾದವರು. ಜೆ.ಎನ್.ಕಲಾಶಾಲೆಯ ಸಿಬ್ಬಂದಿಗೆ ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂಬ ಸದುದ್ದೇಶದಿಂದ ಸದರ ಸಂಸ್ಥೆಯನ್ನು ಬೇರೆ ಯಾವುದಾದರೂ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವಂತ ಸಂಸ್ಥೆಗೆ ಹಸ್ತಾಂತರಿಸಬೇಕೆಂದು ಯೋಚಿಸಿದರು.[೧೮೩] ಈ ವಿಚಾರವನ್ನು ಎಲ್ಲ ಸಿಬ್ಬಂದಿಯವರ ಗಮನಕ್ಕೆ ತಂದರು. ಈ ವಿಷಯದ ಕುರಿತು ವಿಚಾರಿಸಿದ ಸಿಬ್ಬಂದಿಯವರು ಉತ್ತಮ ರೀತಿಯಿಂದ ನಡೆಸಿಕೊಂಡು ಹೋಗುವಂತಹ ಶಿಕ್ಷಣ ಸಂಸ್ಥೆಗೆ ಹಸ್ತಾಂತರಿಸಿದರೆ ಒಳ್ಳೆಯದಾಗುತ್ತದೆ ಎಂದು ಕೆಲವು ಶಿಕ್ಷಣ ಸಂಸ್ಥೆಗಳ ಕಡೆ ಮೊರೆಹೋದರು. ಈ ಸಂದರ್ಭದಲ್ಲಿ ಶಿಕ್ಷಕರ ಬಗ್ಗೆ ಸದಾ ಕಾಳಜಿ ಇರುವ ಶಿಕ್ಷಣ ಪ್ರೇಮಿ ಪ್ರೊಫೆಸರ್ ಎಸ್.ವ್ಹಿ. ಸಂಕನೂರರವರು ಸಾಕಷ್ಟು ಶ್ರಮವಹಿಸಿ ಕಲಾಶಾಲೆಯ ಸಿಬ್ಬಂದಿಗಳಿಗೆ ದಾರಿತೋರಿಸಿದರು. ಜೆ.ಎನ್. ಕಲಾಶಾಲೆ ಹಸ್ತಾಂತರಗೊಳಿಸಲಿಕ್ಕೆ ಪ್ರಮುಖ ಕಾರಣೀಕರ್ತರಾದರು.

ಪ್ರೊ. ಎಸ್.ವ್ಹಿ. ಸಂಕನೂರರವರು ಜೆ.ಎನ್. ಕಲಾಶಾಲೆಯ ಸಿಬ್ಬಂದಿಗಳ ಕಷ್ಟ ಕಾರ್ಪಣ್ಯಗಳಿಗೆ ನೋವು ನಲಿವುಗಳಿಗೆ ಸ್ಪಂದಿಸಿದವರು. ಅನೇಕ ಸಮಸ್ಯೆಗಳನ್ನು ತಾವು ಬಗೆಹರಿಸಿದ್ದರು. ಇವರಿಂದ

೧೮೨. ಎಂ.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯಗಳ ಕೊಡುಗೆ ಪು.ಸಂ.೩೭
೧೮೩. ಶ್ರೀ ರಘುನಾಥ, ತುಕ್ಕಾ ಸಂದರ್ಶನ ದಿನಾಂಕ ೧೮-೧೧-೨೦೦೯

ಈ ಸಂಸ್ಥೆಯನ್ನು ಬೇರೆಯವರಿಗೆ ಹಸ್ತಾಂತರಿಸಿದರೆ ಉತ್ತಮವಾಗಿ ನಡೆಸಿಕೊಂಡು ಹೋಗುವಂತ ಸಂಸ್ಥೆಗೆ ಹಸ್ತಾಂತರಿಸಬೇಕೆಂದು ತಿಳಿದು ತಾವು ಅನೇಕ ಸಂಸ್ಥೆಗಳನ್ನು ಗಮನಿಸಿದರು. ಅವುಗಳಲ್ಲಿ ೧೯೨೦ರಲ್ಲಿ ಸ್ಥಾಪಿಸಲಾದ ನಗರದ ಮಧ್ಯವರ್ತಿ ಸ್ಥಳದಲ್ಲಿರುವ ವಿದ್ಯೆಗೆ ದಾನವನ್ನು ನೀಡುತ್ತಿರುವ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾದ ವಿದ್ಯಾದಾನ ಸಮಿತಿ, ಗದಗ, ಇದರ ಅಧ್ಯಕ್ಷರಾದ ಶ್ರೀ ಡಿ.ಬಿ. ಹುಯಿಲಗೋಳ ಶ್ರೀ ಶ್ರೀನಿವಾಸ ಬಿ. ಹುಯಿಲಗೋಳರವರಿಗೆ ಭೇಟಿಯಾಗಿ ಜೆ.ಎನ್. ಕಲಾಶಾಲೆಯು ಅನುದಾನಿತ ಸಂಸ್ಥೆಯಾಗಿದ್ದು ಕಳೆದ ೨೫ ವರ್ಷಗಳಿಂದ ಉತ್ತಮ ಕೆಲಸ ಮಾಡುತ್ತ ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ನೀಡಿ ಉತ್ತಮ ಕಲಾವಿದರನ್ನು ಚಿತ್ರಕಲಾ ಶಿಕ್ಷಕರನ್ನು ನೀಡಿದೆ. ಆದರೆ ಕೆಲವು ತೊಂದರೆಗಳಿಂದ ಸಂಸ್ಥೆಗೆ ಮತ್ತು ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಸಂಸ್ಥೆಯನ್ನು ತಮ್ಮ ಮಡಿಲಿಗೆ ಹಾಕುತ್ತಿದ್ದೇವೆ.[೧೮೪] ಇದನ್ನು ತಮ್ಮ ಸಂಸ್ಥೆಗೆ ಹಸ್ತಾಂತರಿಕೊಂಡು ತೊಂದರೆಯಲ್ಲಿರುವ ಈ ಸಂಸ್ಥೆಗೆ ತಾವು ಜೀವದಾನ ನೀಡಬೇಕೆಂದು ಕೇಳಿಕೊಂಡರು.

ಶಿಕ್ಷಣ ಪ್ರೇಮಿಗಳಾದ ಶಿಕ್ಷಕರ ಹಿತಚಿಂತಕರೂ ಆದ ವಿದ್ಯಾದಾನ ಸಮಿತಿಯ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳು ಸೇರಿ ಜೆ.ಎನ್.ಕಲಾಶಾಲೆಯ ಕುರಿತು ವಿಚಾರಿಸಿ ಪ್ರೌಢಶಾಲೆ ಶಿಕ್ಷಕರಾದ ಶ್ರೀ ಪಿ.ಎ.ಕುಲಕರ್ಣಿ, ಪ್ರೊ.ಬಿ.ಎಸ್.ರಾಠೋಡ, ಶ್ರೀ ಬಿ.ಎಂ.ಕರಿಗೌಡರ ಎಲ್ಲರೂ ಸೇರಿ ವಿಚಾರಿಸಿ ಸುಧೀಂದ್ರ ಹುಯಿಲ್‌ಗೋಳ್, ಉದಯಕುಲಕರ್ಣಿ, ಪ್ರಾಚಾರ್ಯರು ಬಿ.ಎಡ್.ಕಾಲಜ, ಕಲಾಶಾಲೆಯ ಪ್ರಾಚಾರ್ಯರು ಹಾಗೂ ಸಿಬ್ಬಂದಿಗಳನ್ನು ನೋಡಿ ಎಷ್ಟೋ ಸಮಸ್ಯೆಗಳು ಬಂದರೂ ಎದುರಿಸಿ ಈ ಕಲಾಶಾಲೆಯನ್ನು ಉಳಿಸಿಕೊಂಡು ಬಂದಿದ್ದಾರಲ್ಲ ಎಂದು ಮನಗಂಡು ಜೆ.ಎನ್.ಕಲಾಶಾಲೆಯನ್ನು ಬೆಳೆಸುವುದಕ್ಕಾಗಿ ವಿದ್ಯಾದಾನ ಸಮಿತಿಗೆಹಸ್ತಾಂತರಿಸಕೊಳ್ಳುವದಾಗಿ ಭರವಸೆ ನೀಡಿದರು. ಕೆಲವು ಗಣ್ಯವ್ಯಕ್ತಿಗಳು ಹಾಗೂ ಪ್ರೊ. ಎಸ್.ವಿ.ಸಂಕನೂರ ಹಾಗೂ ಪ್ರಾ.ಬಿ.ಎಲ್.ಲಮಾಣಿ ಮತ್ತು ಎಲ್ಲ ಸಿಬ್ಬಂದಿಗಳ ಸಹಾಯ ಸಹಕಾರದಿಂದ ಮತ್ತು ಮುಖ್ಯವಾಗಿ ಹಸ್ತಾಂತರಗೊಳಿಸಲು ಕಾರಣೀಭೂತರಾದ ಶ್ರೀ ರಘುನಾಥ ತುಕ್ಕಾರವರ ತ್ಯಾಗ ಮನೋಭಾವದಿಂದ ಜೆ.ಎನ್.ಕಲಾಶಾಲೆಯನ್ನು ೨೦೦೬ ರಿಂದ ಸಂಪೂರ್ಣವಾಗಿ ವಿದ್ಯಾದಾನ ಸಮಿತಿ, ಗದಗ, ಇದಕ್ಕೆ ಹಸ್ತಾಂತರಿಸಿದರು.

೨೦೦೬ ರಿಂದ ವಿದ್ಯಾದಾನ ಸಮಿತಿಯ ಸಂಪೂರ್ಣ ಆಡಳಿತಕ್ಕೆ ಒಳಪಟ್ಟು ಉತ್ತಮವಾಗಿ ಬೆಳೆಯಲು ಪ್ರಾರಂಭವಾಯಿತು. ಪ್ರಾರಂಭಿಕ ಹಂತದಲ್ಲಿ ಕಲಾಶಾಲೆಗೆ ಎರಡು ಕೊಠಡಿಗಳಲ್ಲಿ ವ್ಯವಸ್ಥೆಯನ್ನು ಮಾಡಿಕೊಟ್ಟರು. ಇದರಿಂದ ಈ ಕಲಾಶಾಲೆಯು ಎಲ್ಲ ಕಲಾಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಅನುಕೂಲವಾಯಿತು. ಜೆ.ಎನ್.ಕಲಾಶಾಲೆಗೆ ಪ್ರತ್ಯೇಕವಾದ ನೂತನ ಕಟ್ಟಡವನ್ನು ಕಟ್ಟಿಸಿಕೊಟ್ಟರು. ಕಲಾಶಾಲೆಗೆ ಸ್ವಂತ ಕಟ್ಟಡವಿಲ್ಲದೆ ಇದ್ದ ಕೊರಗನ್ನು ವಿದ್ಯಾದಾನ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಬಿ.ಹುಯಿಲಗೋಳ ಶ್ರೀ ಶ್ರೀನಿವಾಸ ಬಿ.ಹುಯಿಲಗೋಳರವರು ತೊಡೆದು ಹಾಕಿದರು. ಮುಳುಗುವ ಡೋಣಿಗೆ ದಡ ಸೇರಿಸಿದ ಪ್ರೊ. ಎಸ್.ವ್ಹಿ.ಸಂಕನೂರ, ಶ್ರೀ ಡಿ.ಬಿ.ಹುಯಿಲಗೋಳ, ಶ್ರೀ ಶ್ರೀನಿವಾಸ ಬಿ. ಹುಯಿಲಗೋಳ ಇವರೆಲ್ಲರಿಗೂ ಕಲಾಶಾಲೆಯ ಪ್ರಾಚಾರ್ಯರು ಹಾಗೂ ಸಿಬ್ಬಂದಿಯವರು ಎಂದೆಂದಿಗೂ ಮರೆಯುವುದಿಲ್ಲ.

---

೧೮೪. ಪ್ರೋ. ಎಸ್.ವ್ಹಿ. ಸಂಕನೂರ ಸಂದರ್ಶನ ದಿನಾಂಕ ೧೪-೯-೨೦೦೮

ವಿದ್ಯಾದಾನ ಸಂಸ್ಥೆಗೆ ಹಸ್ತಾಂತರವಾದ ನಂತರ ಅನೇಕ ಉತ್ತಮವಾದ ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನ, ಶಿಬಿರಗಳನ್ನು ಮಾಡುವುದರ ಮೂಲಕ ಹೊಸ ಚೈತನ್ಯವನ್ನು ಪ್ರಾಚಾರ್ಯರಾದ ಬಿ.ಎಲ್.ಲಮಾಣಿ ಹಾಗೂ ಎಲ್ಲ ಸಿಬ್ಬಂದಿಯವರು ನೀಡುತ್ತಿದ್ದಾರೆ.

೨೦೦೭ರಲ್ಲಿ ಜೆ.ಎನ್.ಕಲಾಶಾಲೆಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿ, ಇವರಿಂದ ಚಿತ್ರಕಲಾ ಪದವಿ ಬಿ.ವಿ.ಎ. ತರಗತಿಗಳನ್ನು ಪ್ರಾರಂಭಿಸುವುದರ ಮೂಲಕ ವಿದ್ಯಾದಾನ ಸಮಿತಿಯು ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯವನ್ನಾಗಿ ಪರಿವರ್ತಿನೆಗೊಳಿಸಿತು. ಮತ್ತು ಇಲ್ಲಿಯ ಉತ್ಸಾಹಿ ಪ್ರಾಚಾರ್ಯರು ಹಾಗೂ ಅನೇಕ ಉಪನ್ಯಾಸಕ ಸಿಬ್ಬಂದಿಯು ಎಂ.ವಿ.ಎ. ಸ್ನಾತಕೋತ್ತರ ಪದವಿಯನ್ನು ಸರಕಾರಿ ಆದೇಶದಂತೆ ಮಾಡಿಕೊಂಡು ಚಿತ್ರಕಲಾ ಮಹಾವಿದ್ಯಾಲಯಕ್ಕೆ ಒಂದು ಹೊಸ ರೂಪ ನೀಡಿದರು. ಅದರಂತೆ ಇಲ್ಲಿ ಕಲಿಯುತ್ತಿದ್ದ ಅನೇಕ ವಿದ್ಯಾರ್ಥಿಗಳು ರಾಜ್ಯಮಟ್ಟದ ಕಲಾಪ್ರದರ್ಶನ, ಕಲಾಶಿಬಿರಗಳಲ್ಲಿ ಭಾಗವಹಿಸಿ ಸಂಸ್ಥೆಗೆ ಚಿತ್ರಕಲಾ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ. ಹೀಗೆ ಹಂತ ಹಂತವಾಗಿ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯವು ತನ್ನ ಅಸ್ತಿತ್ವವನ್ನು ಉಳಿಸಕೊಂಡು ಬೆಳವಣಿಗೆಯತ್ತ ಹೆಜ್ಜೆ ಹಾಕತೊಡಗಿತು. ಅಲ್ಲದೇ ಇದು ವಿದ್ಯಾದಾನ ಸಮಿತಿಯ ಅಧೀನಕ್ಕೊಳಪಟ್ಟು ರಾಜ್ಯದ ಪ್ರತಿಷ್ಠಿತ ಚಿತ್ರಕಲಾ ಶಿಕ್ಷಣ ನೀಡುವ ಸಂಸ್ಥೆಯಾಗಿ ಹೊರಹೊಮ್ಮಿದೆ.[೧೮೫]

ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯವು ವಿಶಾಲವಾದ ಆಟದ ಮೈದಾನ, ಭವ್ಯವಾದ ಕಟ್ಟಡ, ಕಂಪ್ಯೂಟರ ವಿಭಾಗ, ಉತ್ತಮವಾದ ಗ್ರಂಥಾಲಯ, ಉತ್ತಮ ಬೋಧನೆ ಮಾಡುವ ಮತ್ತು ವಿದ್ಯಾರ್ಹತೆಯನ್ನು ಹೊಂದಿದ ಅಧ್ಯಾಪಕರನ್ನು ಹೊಂದಿ ಅನೇಕ ಕಲಾಚಟುವಟಿಕೆ ಮಾಡುವುದರ ಮೂಲಕ ರಾಜ್ಯದಲ್ಲಿಯೇ ತನ್ನತನವನ್ನು ಉಳಿಸಿಕೊಂಡಿದೆ. ಈ ವಿದ್ಯಾಲಯವು ಏಳುಬೀಳುಗಳನ್ನು ಕಂಡು ಇಂದು ಎದ್ದುನಿಂತು ಚಿತ್ರಕಲೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ.

ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದ ಅಧ್ಯಾಪಕರ ಕೊಡುಗೆ :

ಒಂದು ಉತ್ತಮ ಶಿಕ್ಷಣ ಸಂಸ್ಥೆ ಬೆಳೆಯಬೇಕಾದರೆ ಆ ಸಂಸ್ಥೆಯಲ್ಲಿ ಕೆಲಸ ಮಾಡುವ ಶಿಕ್ಷಕರ ಪಾತ್ರ ಮಹತ್‌ವದ್ದಾಗಿರುತ್ತದೆ. ನಾಡಿನ ಉತ್ತಮ ಪ್ರಜೆಗಳನ್ನು ರೂಪಿಸುವ ಶಿಕ್ಷಕನು ಆಯಾ ದೇಶದ ಕಲೆ ಸಂಸ್ಕೃತಿಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ. ಅಂತಹ ಮಹತ್ವದ ಸ್ಥಾನವು ಶಿಕ್ಷಕರ ಅಥವಾ ಗುರುವಾದವನಿಗೆ ದೈವದತ್ತವಾಗಿ ಬಂದಿರುವ ಕೊಡುಗೆಯಾಗಿದೆ. ವೇದೋಕ್ತವಾಗಿ ಗುರು ಶಬ್ದದ ಅರ್ಥ ತುಂಬಾ ವ್ಯಾಪಕವಾದುದು ಗುರು ಬ್ರಹ್ಮಾ ಗುರು ವಿಷ್ಣು ಗುರುದೇವೋ ಮಹೇಶ್ವರ ಎಂಬ ಮಾತಿನಂತೆ ಗುರುವಾದವನು ಶಿಕ್ಷಕನಾಗಬೇಕೆ ಹೊರತು ಸಂಬಳದ ಉಪಾಧ್ಯಾಯನಾಗಬಾರದು. ಆರೋಗ್ಯ, ಸಂತೋಷ, ಕರುಣೆ ರಚನಾತ್ಮಕ ಆಲೋಚನೆ, ಸಹಕಾರ ಮನೋಭಾವನೆ, ಹಾಸ್ಯಪ್ರವೃತ್ತಿ, ತಾಳ್ಮೆ, ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಇವು ಶಿಕ್ಷಕನ ವ್ಯಕ್ತಿತ್ವವನ್ನು ರೂಪಿಸುವ ಗುಣಗಳಾಗಿವೆ.[೧೮೬] ಅಲ್ಲದೆ ಸದಾ ಕಲಿಯುವ ಹಂಬಲ, ಬದಲಾವಣೆಗಳನ್ನು ಗ್ರಹಿಸುವ ಸೂಕ್ಷ್ಮ ಸಂವೇದನೆ, ವಿದ್ಯಾರ್ಥಿಗಳ ಮೇಲಿನ ಪ್ರೀತಿ, ಕ್ಷಮಾಗುಣ ಇವು ಶಿಕ್ಷಕನಿಗೆ ಅತೀ

೧೮೫. ಎಮ್.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಕೊಡುಗೆ ಪು.ಸಂ. ೩೯

೧೮೬. ಪಿ.ಬಿ. ಬಂಡಿ ಚಿತ್ರಕಲಾಕ್ಷೇತ್ರ ವಿಜಯಕಲಾಮಂದಿರ ಕೊಡುಗೆ ಪು.ಸಂ. ೩೮

ಅವಶ್ಯಕವಾದವುಗಳು. "King of himself and servent of mankind" ಎಂಬ ಮಾತು ಆದರ್ಶ ಶಿಕ್ಷಕನಿಗೆ ಅನ್ವಯಿಸುತ್ತದೆ. ಸದಾ ಹಸನ್ಮುಖಿಯಾಗಿದ್ದು ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ಮನೋಭಾವ ಇರಬೇಕು. ತಾನೊಬ್ಬ ಆದರ್ಶ ವಿದ್ಯಾರ್ಥಿ ಎಂಬ ಭಾವನೆ ಶಿಕ್ಷಕನಲ್ಲಿರಬೇಕು.[೧೮೭] ಅಂದಾಗ ಸಮಾಜದಲ್ಲಿ ಗುರಿವಿಗೆ ದೊಡ್ಡ ಸ್ಥಾನಮಾನ ದೊರೆಯುತ್ತದೆ. ಯಾವುದೇ ಒಂದು ಶಿಕ್ಷಣ ಸಂಸ್ಥೆಯು ಬೆಳೆಯಬೇಕಾದರೆ ಅಲ್ಲಿನ ಶಿಕ್ಷಕರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರಮುಖರಾಗಿರುತ್ತಾರೆ. ವಿಶ್ವ ಪ್ರಸಿದ್ಧಿಯನ್ನು ಪಡೆದ ಶಾಂತಿನಿಕೇತನ ಕಲಾಶಾಲೆಯು ರಾಷ್ಟ್ರಮಟ್ಟದಲ್ಲಿ ಬೆಳೆಯಲು ಅಲ್ಲಿನ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಕೊಡುಗೆ ಅಮೂಲ್ಯವಾದುದು. ಮುಂಬಯಿಯ ಸರ್.ಜೆ.ಜೆ.ಕಲಾಶಾಲೆಯ ಕಲಾವಾತಾವರಣ ಉತ್ತಮವಾಗಿ ಮತ್ತು ಶಿಸ್ತಿನಿಂದ ನಡೆಯಬೇಕಾದರೆ ಅಂದಿನ ಅಧ್ಯಾಪಕರ ಉತ್ತಮ ಬೋಧನೆ ಮತ್ತು ಪರಿಶ್ರಮದ ಫಲವಾಗಿ ಬೆಳೆಯಿತೆನ್ನಬಹುದು. ಈ ಹಿನ್ನೆಲಯಲ್ಲಿ ನೋಡಿದಾಗದ ಕಲಾಶಾಲೆಗಳ ಬೆಳವಣಿಗೆಯಲ್ಲಿ ಅಲ್ಲಿನ ಅಧ್ಯಾಪಕರ ಕೊಡುಗೆ ಅಪಾರವಾದುದು ಎನ್ನಬಹುದು. ಕಲಾಗುರು ದಂಡಾವತಿಮಠರವರು ಕರ್ನಾಟಕದವರಾಗಿ ಮುಂಬಯಿಯಲ್ಲಿ ಕಲಿತು ಅಲ್ಲಿನ ನೂತನ ಕಲಾಮಂದಿರವನ್ನು ಸ್ಥಾಪಿಸಿ ಕಲಾವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಮಹತ್ ಕಾರ್ಯಮಾಡಿ ಕಲಾವಲಯಗಳು ಬೆಳೆಯುವಂತೆ ಮಾಡಿದ್ದಲ್ಲದೆ ನಾಡಿಗೆ ಅನೇಕ ಶ್ರೇಷ್ಠ ಕಲಾವಿದರನ್ನು ನೀಡಿದ್ದಾರೆ.

ಕಲಾವಿದರಾದ ಶ್ರೀ ಡಿ.ವಿ.ಹಾಲಭಾವಿಯವರು ಮುಂಬಯಿಯಲ್ಲಿ ಕಲಿತು ಕರ್ನಾಟಕದ ಅನೇಕ ಕಲಾವಿದರಿಗೆ ಮುಂಬಯಿಗೆ ಹೋಗಿ ಅಭ್ಯಾಸ ಮಾಡುವುದು ತುಂಬ ಕಷ್ಟಕರವಾಗಿತ್ತು. ಅಂಥ ಸಂದರ್ಭದಲ್ಲಿ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಡಿ.ವಿ.ಹಾಲಭಾವಿಯವರು ಧಾರವಾಡದಲ್ಲಿ ಸ್ಕೂಲ್ ಆಫ್ ಆರ್ಟ್ ಎಂಬ ಕಲಾಶಾಲೆಯನ್ನು ಪ್ರಾರಂಭಿಸಿದರು. ಅಲ್ಲದೇ ಅನೇಕ ಕಲಾವಿದರಿಗೆ ಕರ್ನಾಟಕದಲ್ಲಿ ಚಿತ್ರಕಲಾ ಅಭ್ಯಾಸ ಮಾಡುವಂತೆ ಶ್ರಮವಹಿಸಿದ ಶ್ರೇಷ್ಠ ಕಲಾ ಅಧ್ಯಾಪಕರೆಂದು ಹೇಳಿದರೆ ತಪ್ಪಾಗಲಾರದು.

ಅಧ್ಯಾಪಕರು ಉತ್ತಮ ಆಡಳಿತಗಾರರಾದ ಶ್ರೀ ನಂಜುಂಡರಾವ್‌ರವರು ಬೆಂಗಳೂರಿನ ಚಿತ್ರಕಲಾ ಪರಿಷತ್ತು ಇಂದು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆಯುವಂತೆ ಮಾಡಿದ್ದು ಅಲ್ಲಿನ ಶಿಕ್ಷಕ ವಿದ್ಯಾರ್ಥಿಗಳು ಎನ್ನಬಹುದು.

ಉತ್ತರ ಕರ್ನಾಟಕದವರಾದ ಶ್ರೇಷ್ಠ ಹಿರಿಯ ಕಲಾವಿದರು ಶ್ರೀ ಆರ್.ಎಂ.ಹಡಪದ ಮಾಸ್ತರರವರು ಬೆಂಗಳೂರಿನಲ್ಲಿ ಕೆನ್ ಕಲಾಶಾಲೆಯನ್ನು ಆರಂಭಿಸಿ ಈ ನಾಡಿಗೆ ಕಲಾವಿದರ ಪಡೆಯನ್ನು ನೀಡಿದ್ದು ಕಲಾಕ್ಷೇತ್ರದಲ್ಲಿ ಗಮನಾರ್ಹ ಸಂಗತಿಯೆಂದು ಹೇಳಬಹುದು. ಶ್ರೀಯುತರ ಶಿಷ್ಯಬಳಗ ದೇಶ ವಿದೇಶಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಕಲಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಇಂದಿಗೂ ಶ್ರೀ ಆರ್.ಎಂ.ಹಡಪದ ಅವರನ್ನು ಶ್ರೇಷ್ಠ ಕಲಾ ಮಾಸ್ತರ ಎಂದು ಗುರುತಿಸಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಗದಗ-ಬೆಟಗೇರಿ ಜೆ.ಎನ್.ಕಲಾಶಾಲೆಯ ಅಧ್ಯಾಪಕರ ಕೊಡುಗೆಗಳನ್ನು ಮತ್ತು ಅವರು ಕಲಾಶಾಲೆಯ ಬೆಳವಣಿಗೆಯಲ್ಲಿ ವಹಿಸಿದ ಪ್ರಮುಖ ಪಾತ್ರ, ನಾಡಿನ ಕಲಾಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಅಂಶಗಳನ್ನು ಪರಿಶೀಲಿಸಿ ಅಧ್ಯಯನ ಮಾಡುವ ಉದ್ದೇಶವನ್ನು

---

೧೮೭. ಪಿ.ಬಿ. ಬಂಡಿ ಚಿತ್ರಕಲಾಕ್ಷೇತ್ರ ವಿಜಯಕಲಾಮಂದಿರ ಕೊಡುಗೆ ಪು.ಸಂ. ೩೮

ಹೊಂದಿದೆ. ೧೯೮೦ರಲ್ಲಿ ಬೆಟಗೇರಿ ಭಾಗದಲ್ಲಿ ಆರಂಭಗೊಂಡ ಜೆ.ಎನ್.ಕಲಾಶಾಲೆಯು ರಾಜ್ಯ ಹೊರ ರಾಜ್ಯಗಳ ಅಭಿವೃದ್ಧಿಯ ಪಥದಲ್ಲಿ ಗುರುತಿಸುತ್ತಾ ಬಂದಿರುವುದನ್ನು ನೋಡಬಹುದಾಗಿದೆ. ಈ ಕಲಾಶಾಲೆಯನ್ನು ಆರಂಭಿಸಿದ ಶ್ರೀ ಜೆ.ಎನ್.ಜಾಡಗೌಡರರವರು ಉತ್ತಮ ಕಲಾವಿದರು. ಸಂಗೀತಗಾರರು, ಸಾಹಿತಿಗಳು ಆಗಿದ್ದರಲ್ಲದೆ ಉತ್ತಮ ಆಡಳಿತಗಾರರೂ ಆಗಿದ್ದರು. ದೂರದೃಷ್ಟಿ ಹೊಂದಿದ ಇವರು ಆಡಳಿತಾತ್ಮಕ ಕ್ರಮಗಳನ್ನು ನಿರ್ವಹಿಸುವುದರ ಜೊತೆಗೆ ಕಲಾಶಾಲೆಗೆ ಪ್ರತಿಭಾನಿವತ ಶಿಕ್ಷಕರನ್ನು ನೇಮಿಸಿಕೊಂಡು ರಾಜ್ಯದಲ್ಲಿ ಉತ್ತಮ ಕಲಾಶಾಲೆಯಾಗಿ ಹೊರ ಹೊಮ್ಮಿಬೇಕೆಂಬ ಕನಸನ್ನು ಕಲ್ಪಿಸಿದವರಾಗಿದ್ದರು.

ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ನಡೆದ ಚಿತ್ರಕಲಾ ಕೋರ್ಸುಗಳು :

ಕೆ.ಎಸ್.ಇ.ಇ. ಬೋರ್ಡ್ ಬೆಂಗಳೂರು ದಿಂದ ನಡೆಯುವ ಕೋರ್ಸುಗಳು :

೧. (ಡಿ.ಟಿ.ಸಿ) ಡ್ರಾಯಿಂಗ್ ಟೀಚರ್ ಕೋರ್ಸ್ – ೧೯೮೦

೨. ೩ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

೩. ೪ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

೪. ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

ಚಿತ್ರಕಲಾ ಶಿಕ್ಷಕರ ತರಬೇತಿ ಕೋರ್ಸುಗಳಾದ

೧. (ಡಿ.ಎಂ.ಸಿ) ಡ್ರಾಯಿಂಗ್ ಮಾಸ್ಟರ್ ಕೋರ್ಸ್ – ೧೯೮೧

೨. (ಎ.ಎಂ.ಸಿ) ಆರ್ಟ್ ಮಾಸ್ಟರ್ ಕೋರ್ಸ್ – ೧೯೮೫

ಹಂಪಿಯ ಕನ್ನಡ ವಿಶ್ವವಿದ್ಯಾಲಯ ದಿಂದ ನಡೆಯುವ ಕೊರ್ಸುಗಳು

೧. ದೃಶ್ಯಕಲಾ ಮೂಲ ಪ್ರಥಮ ವರ್ಷ – ೨೦೦೫

೨. ದೃಶ್ಯಕಲಾ ಮೂಲ ದ್ವಿತೀಯ ವರ್ಷ

೩. ಬಿ.ವಿ.ಎ. ಪ್ರಥಮ ವರ್ಷ (ಚಿತ್ರಕಲಾ ಪದವಿ) – ೨೦೦೭

೪. ಬಿ.ವಿ.ಎ ದ್ವಿತೀಯ ವರ್ಷ (ಚಿತ್ರಕಲಾ ಪದವಿ)

೫. ಬಿ.ಬಿ.ಎ. ತೃತೀಯ ವರ್ಷ (ಚಿತ್ರಕಲಾ ಪದವಿ)

ಜೆ.ಎನ್.ಕಲಾಶಾಲೆಯ ತರಗತಿ ಮತ್ತು ವಿದ್ಯಾರ್ಥಿಗಳು ಹೆಚ್ಚಾದಂತೆ ಅವಶ್ಯಕತೆಗೆ ಅನುಗುಣವಾಗಿ ಬೇರೆ ಬೇರೆ ಶಿಕ್ಷಕರನ್ನು ನೇಮಿಸಿಕೊಂಡಿದ್ದಾರೆ. ಇಲ್ಲಿ ಸೇವೆ ಸಲ್ಲಿಸಿದ ಮತ್ತು ಸೇವೆ ಸಲ್ಲಿಸುತ್ತಿರುವ ಶಿಕ್ಷಕ ವೃಂದದಲ್ಲಿ ಕೆಲವು ಜನ ಶ್ರೇಷ್ಠ ಕಲಾವಿದರು. ಉತ್ತಮ ಶಿಕ್ಷಕರೂ ಆಗಿದ್ದಾರೆ. ಈ ಹಿನ್ನೆಲೆಯಲ್ಲಿ ಕಲಾಶಿಕ್ಷಕರ ಕೊಡುಗೆಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡು ಅವಲೋಕಿಸಲಾಗಿದೆ.

೧. ಗೌರವ ಶಿಕ್ಷಕರು

೨. ಸೇವೆ ಸಲ್ಲಿಸಿದ ಸಲ್ಲಿಸುತ್ತಿರುವ ಪ್ರಾಚಾರ್ಯರು, ಅಧ್ಯಾಪಕರು

೧. ಗೌರವ ಶಿಕ್ಷಕರು :

ಶ್ರೀ ಎಂ.ಎ. ಚೆಟ್ಟಿ : ನಾಡಿನ ಖ್ಯಾತ ಕಲಾವಿದರಾದ ಶ್ರೀ ಎಂ.ಎ. ಚೆಟ್ಟಿಯವರು ಜೆ.ಎನ್. ಕಲಾಶಾಲೆಯಲ್ಲಿ ಅನೇಕ ವಿದ್ಯಾರ್ಥಿಗಳನ್ನು ಪಾಠಬೋಧನೆ ಮಾಡುವುದರ ಮೂಲಕ ಕಲಾಶಾಲೆಯ ತಳಹದಿಯನ್ನು ಹಾಕಿಕೊಟ್ಟಿದ್ದಾರೆ. ಶ್ರೀ ಎಂ.ಎ. ಚೆಟ್ಟಿಯವರ ಅನೇಕ ವಿಷಯಗಳನ್ನು ಜೆ.ಎನ್. ಚಿತ್ರಕಲಾಶಾಲೆಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಕಲಾಶಾಲೆಯಲ್ಲಿ ತಮ್ಮ ನೈಜ ಕಲೆಯನ್ನು ಹೇಳಿಕೊಟ್ಟ ಪರಿಣಾಮದಿಂದ ಇಂದಿಗೂ ನೈಜಕಲೆಯ ಕಡೆ ಹೆಚ್ಚಿನ ಆಸಕ್ತಿ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತದೆ. ಸುಮಾರು ಎರಡು ವರ್ಷಗಳ ಕಾಲ ಗೌರವ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ.[೧೮೮]

ಶ್ರೀ ಸಿ.ಎನ್. ಪಾಟೀಲ : ಹಿರಿಯ ಕಲಾವಿದರಲ್ಲಿ ಬಹು ಚಾತುರ್ಯದ ಶ್ರೀ ಸಿ.ಎನ್.ಪಾಟೀಲರು ಪ್ರಾರಂಭದಲ್ಲಿ ಹಲವು ಕಾಲ ಗೌರವ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ತಮ್ಮಲ್ಲಿರುವ ಕಲಾ ವಿದ್ವತ್‌ನ್ನು ಕಲಾಶಾಲೆಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಡುವುದರ ಮೂಲಕ ಧಾರೆ ಎರೆದಿದ್ದಾರೆ. ವಾಕ್ಚಾತುರ್ಯರು, ಉತ್ತಮ ಕಲಾವಿದರಾದ ಶ್ರೀ ಸಿ.ಎನ್.ಪಾಟೀಲರು ಸಂಯೋಜನಾ ಚಿತ್ರ ಭಾವಚಿತ್ರಗಳನ್ನು ನಿಸರ್ಗ ಚಿತ್ರಗಳನ್ನು ಹೇಳುವುದರ ಮೂಲಕ ಎಲ್ಲ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದರು. ಶ್ರೀ ಸಿ.ಎನ್.ಪಾಟೀಲರು ಉತ್ತಮ ಕಲಾವಿದರು, ಬರಹಗಾರರು, ನಾಟಕಕಾರರಾದ ಇವರು ಉತ್ತಮ ಪಾಠಬೋಧನೆ ಮಾಡುವುದರ ಮೂಲಕ ಜೆ.ಎನ್. ಕಲಾಶಾಲೆಗೆ ಭದ್ರ ಬುನಾದಿ ಹಾಕುವುದರ ಮೂಲಕ ಗೌರವ ಸೇವೆ ಸಲ್ಲಿಸಿದ್ದಾರೆ.[೧೮೯] ಇಂಥ ಹಿರಿಯ ಕಲಾವಿದರು ಹಾಕಿದ ಮಾರ್ಗದರ್ಶನದಲ್ಲಿ ಉತ್ತಮ ಬೆಳವಣಿಗೆಯಾಗಿ ಜೆ.ಎನ್.ಕಲಾಶಾಲೆಗೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ.

ಶ್ರೀ ಎನ್.ಎ. ಹರ್ಲಾಪೂರ : ಜಿಲ್ಲೆಯ ಹಿರಿಯ ಕಲಾವಿದರು, ಆಧುನಿಕ ಕಲಾಶೈಲಿಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡು ಉತ್ತಮ ಚಿತ್ರಕಲಾ ಶಿಕ್ಷಕರ ಸಂಘಟಕರಾದ ಶ್ರೀ ಎನ್.ಎ.ಹರ್ಲಾಪೂರ ಇವರ ಸೇವೆಯು ಜೆ.ಎನ್. ಕಲಾಶಾಲೆಗೆ ಸಮಯ ವ್ಯಯಿಸಿದ್ದಾರೆ. ಶ್ರೀ ಜಿ.ಎನ್. ಜಾಡಗೌಡರ ಆತ್ಮೀಯ ಸ್ನೇಹಿತರಾದ ಶ್ರೀ ಎನ್.ಎ. ಹರ್ಲಾಪೂರ ಕಲಾಶಾಲೆ ಪ್ರಾರಂಭಿಸಲು ಇವರ ಸಲಹೆಯು ಮುಖ್ಯವಾಗಿತ್ತು. ಸದಾ ಕ್ರಿಯಾಶೀಲರು ಉತ್ತಮ ಕಲಾವಿದರೂ ಇವರು ಜೆ.ಎನ್. ಕಲಾಶಾಲೆಯಲ್ಲಿ ಗೌರವಪೂರ್ವಕವಾಗಿ ತಮ್ಮ ಅಳಿಲು ಸೇವೆ ಮಾಡುವುದರ ಮೂಲಕ ಕಲಾಶಾಲೆ ಗಟ್ಟಿಗೊಳ್ಳಲಿಕ್ಕೆ ಕಾರಣೀಕರ್ತರು ಆಗಿದ್ದಾರೆ. ಸೃಜನಾತ್ಮಕ, ಆಧುನಿಕ ಶೈಲಿಯಲ್ಲಿ ವಿದ್ಯಾರ್ಥಿಗಳಿಗೆ ಪಾಠಬೋಧನೆ ಮಾಡಿ ಅನೇಕ ವಿದ್ಯಾರ್ಥಿಗಳಿಗೆ ಪ್ರೀತಿಯ ಗುರುಗಳಾಗಿದ್ದಾರೆ.[೧೯೦] ಶ್ರೀಯುತರ ಕಲಾಸೇವೆ ಉತ್ತಮ ಸಲಹೆ ಸೂಚನೆಗಳು ಇಂದಿಗೂ ಮಾರ್ಗಸೂಚಿಯಾಗಿವೆ. ಶ್ರೀ ಹರ್ಲಾಪೂರ ಅವರು ಕಲಾಸೇವೆಯು ಕಲಾಶಾಲೆಗೆ ಅನನ್ಯವಾಗಿದೆ.

---

೧೮೮. ಶ್ರೀ ಜೆ.ಎನ್. ಜಾಡಗೌಡರ ಕಲಾವಿದರು ಗದಗ ಸಂದರ್ಶನ ದಿನಾಂಕ ೨೯-೧೨-೨೦೦೮

೧೮೯. ಶ್ರೀ ಎನ್.ಎ. ಹರ್ಲಾಪೂರ ಕಲಾವಿದರ ಗದಗ ಸಂದರ್ಶನ ದಿನಾಂಕ ೨೪-೭-೨೦೦೮

೧೯೦. ಜೆ.ಎನ್.ಜಾಡಗೌಡ್ರ ಕಲಾವಿದರು ಸಂದರ್ಶನ ದಿನಾಂಕ ೨೫-೭-೨೦೦೮

ಶ್ರೀ ಜಿ.ಎನ್. ಜಾಡಗೌಡರು : ಶ್ರೀ ಜಿ.ಎನ್. ಜಾಡಗೌಡರ ಇವರು ಜೆ.ಎನ್. ಕಲಾಶಾಲೆಯು ಆರಂಭವಾಗಲಿಕ್ಕೆ ಮೂಲ ಕಾರಣೀಕರ್ತರು. ಸದಾ ಹಸನ್ಮುಖಿಯಾಗಿರುತ್ತಿದ್ದ ಇವರು ಉತ್ತಮ ಚಿತ್ರಕಲಾವಿದರು, ಸಂಗೀತಗಾರರು, ಸಾಹಿತಿಗಳು, ಆಡಳಿತಗಾರರು ಆಗಿದ್ದರು.[೯೧] ಸರಕಾರಿ ಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾದ ಇವರು ಕಲಾ ಇತಿಹಾಸದಲ್ಲಿ ವಿಶೇಷವಾದ ಪ್ರತಿಭೆಯನ್ನು ಹೊಂದಿದ್ದರು. ವಿಷಯವನ್ನು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಉತ್ತಮ ರೀತಿಯಲ್ಲಿ ಕಲಾ ಇತಿಹಾಸ ವಿಷಯವನ್ನು ಹೇಳುತ್ತಿದ್ದರು. ಶ್ರಿಯುತರು ಕಲಾ ಇತಹಾಸ ಹೇಳುವ ಶೈಲಿಯನ್ನು ಅವರ ವಿದ್ಯಾರ್ಥಿಗಳು ಇಂದಿಗೂ ನೆನೆಯುತ್ತಾರೆ. ಬಹುಮುಖ ಕಲಾಪ್ರತಿಭೆಯನ್ನು ಹೊಂದಿದ ಜಾಡಗೌಡರು ಉತ್ತಮವಾದ ಪಾಠಬೋಧನೆ ಮಾಡುವುದರ ಮೂಲಕ ಜೆ.ಎನ್. ಕಲಾಶಾಲೆಯನ್ನು ಗಟ್ಟಿಗೊಳಿಸಲಿಕ್ಕೆ ಕಾರಣೀಭೂತರಾದರು.

೧೯೪೭ರಲ್ಲಿ ಬೆಟಗೇರಿಯಲ್ಲಿ ಜನಿಸಿದ ಇವರು ಡಿಪ್ಲೋಮಾ ಪೇಂಟಿಂಗ್ ಹಾಗೂ ಡಿಪ್ಲೋಮಾ ಮಾಡಲಿಂಗ್ ಪರೀಕ್ಷೆಯನ್ನು ಪಾಸು ಮಾಡಿಕೊಂಡು ವಿಜಯ ಕಲಾಮಂದಿರದಲ್ಲಿ ಮಾಡ್ಲೆಲಿಂಗ್ ಶಿಕ್ಷಕರಾಗಿ ಹಲವಾರು ವರ್ಷಗಳವರೆಗೆ ಸೇವೆಸಲ್ಲಿಸಿದ್ದಾರೆ. ಗದಗ, ಧಾರವಾಡ, ಬೆಂಗಳೂರು, ನಡೆದ ಚಿತ್ರಕಲಾ ಗುಂಪು ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಚಿತ್ರಕಲಾ ಶಿಕ್ಷಕರಷ್ಟೆ ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಪ್ರಾವಿಣ್ಯತೆ ಪಡೆದುಕೊಂಡ ಇವರು ಚಿತ್ರಕಲಾ ಪರಿಷತ್ತು ಬೆಂಗಳೂರು, ದೆಹಲಿ ಗಜೇಂದ್ರಗಡ, ಲಕ್ಷೇಶ್ವರ, ಸೋಲ್ಲಾಪೂರ, ಗದಗ, ಮುಂಡರಗಿ, ಮುಂತಾದವುಗಳಕಡೆಗೆ ಕಾರ್ಯಕ್ರಮ ನೀಡಿದ್ದಾರೆ. ಹಲವಾರು ವರ್ಷಗಳವರೆಗೆ ಹೈಯರ್ ಆರ್ಟ್‌ಪರೀಕ್ಷೆ ಮಂಡಳಿಯ ಅಧ್ಯಕ್ಷರಾಗಿ, ಪರೀಕ್ಷಕರಾಗಿ, ಅಧಿಕ್ಷಕರಾಗಿ ಸೇವೆಮಾಡಿದ್ದಾರೆ.

ಮೈಸೂರು ರಾಜ್ಯದ ಪ್ರಥಮ ಗವರ್ನರ್‌ಗಳಾದ ದಿ. ಚಾಮರಾಜೇಂದ್ರ ಒಡೆಯರ್ ಅವರು ಗದಗ-ಬೆಟಗೇರಿಗೆ ಆಗಮಿಸಿದಾಗ ತಮ್ಮ ತಂದೆಯವರು ಬರೆದ ಸ್ವಾಗತಗೀತೆಯನ್ನು ಸುಶ್ರಾವ್ಯವಾಗಿ ಹಾಡಿ, ಒಡೆಯರ್, ಅವರಿಂದ ಮೆಚ್ಚುಗೆ ಗಳಿಸಿಕೊಂಡಿದ್ದಾರೆ. ತಮ್ಮ ಜೀವನದ ಒಂದೊಂದು ನಿಮಿಷವೂ ಅಮೂಲ್ಯವೆಂದು ಪರಿಗಣಿಸಿ ಶ್ರಮವಹಿಸಿ ದುಡಿದಿದ್ದಾರೆ. ಕಲೆಯಲ್ಲಿ ಸಾಕಷ್ಟು ಆಸಕ್ತಿ ಹೊಂದಿದ ಇವರು ೧೯೮೦ರಲ್ಲಿ ಅಖಿಲಭಾರತ ಕುರುಹಿನ ಶೆಟ್ಟಿ ಸಂಘ ಬೆಂಗಳೂರು ಎಂಬ ಸಂಘ ಕಟ್ಟಿ ಸಮಾಜದ ಏಳಿಗೆಗಾಗಿ ಬೆಟಗೇರಿಯಲ್ಲಿ ಜಗದ್ಗುರು ನೀಲಕಠೇಶ್ವರ ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿದರು.[೯೨] ಈ ಚಿತ್ರಕಲಾ ಶಾಲೆಗೆ ಗೌರವಕಾರ್ಯದರ್ಶಿಯಾಗಿ ಜೆ.ಎನ್.ಚಿತ್ರಕಲಾ ಶಾಲೆಪ್ರಾರಂಭವಾಗಿ, ಉತ್ತಮ ರೀತಿಯಲ್ಲಿ ನಡೆಯಲಿಕ್ಕೆ ಕಾರ್ಯಕರ್ತರಾಗಿದ್ದಾರೆ. ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕ ಒಂದು ದೊಡ್ಡ ಶಿಕ್ಷಣ ಸಂಸ್ಥೆಯನ್ನು ಕಟ್ಟಿ, ಉತ್ತಮವಾಗಿ ಬೆಳೆಯಲಿಕ್ಕೆ ಕಾರಣಿಭೂತರಾಗಿದ್ದು ಚಿತ್ರ ಸಂಗೀತ, ಸಾಹಿತ್ಯದಲ್ಲಿ ತಮ್ಮ ತಾವು ತೊಡಿಗಿಸಿಕೊಂಡ ಒಬ್ಬ ಉತ್ತಮ ಕಲಾವಿದರು. ಇವರ ಕಲಾಸೇವೆಯು ಜೆ.ಎನ್.ಚಿತ್ರಕಲಾ ವಿದ್ಯಾಲಯಕ್ಕೆ ಉಪಯುಕ್ತವಾಗಿದೆ.

ಶ್ರೀ ಎ.ಎ. ಶಿರಹಟ್ಟಿ : ಶ್ರೀ ಎ.ಎ. ಶಿರಹಟ್ಟಿಯವರು ಜೆ.ಎನ್.ಕಲಾಶಾಲೆ ಪ್ರಾರಂಭಿಕ ವೇಳೆಯಲ್ಲಿ ಗೌರವ ಶಿಕ್ಷಕರಾಗಿ ಉತ್ತಮ ಸೇವೆ ಮಾಡಿದ್ದಾರೆ. ಸರಳ ಸ್ವಭಾವದವರು ಉತ್ತಮ ಕಲಾವಿದರಾದ

---

೯೧. ಎನ್.ಎ. ಹರ್ಲಾಪೂರ ಕಲಾವಿದರ ಸಂದರ್ಶನ ದಿನಾಂಕ ೨೯-೧-೨೦೦೮

೯೨. ಶ್ರೀ ಎನ್.ಎ. ಹರ್ಲಾಪೂರ ಸಂದರ್ಶನ ದಿನಾಂಕ ೧೭-೧೦-೨೦೦೮

ಶ್ರೀ ಎ.ಎ. ಶಿರಹಟ್ಟಿಯವರು ಕಲಾಕೃತಿಗಳನ್ನು ರಚಿಸುವಾಗ ನೈಜತೆಯನ್ನು ಮೀರುವ ರೀತಿಯಲ್ಲಿ ತದ್ರೂಪವಾಗಿ ರಚಿಸುವ ಪ್ರತಿಭಾವಂತರಾಗಿದ್ದರು. ಉತ್ತಮ ಕಲಾವಿದರಾಗಿ ವಿದ್ಯಾರ್ಥಿಗಳಿಗೆ ಸರಳ ರೀತಿಯಲ್ಲಿ ತಿಳಿಯುವಂತೆ ಹೇಳುತ್ತಿದ್ದರು ನಯವಾದ ರೇಖೆ ಸ್ವಚ್ಛವಾದ ಕಲಾಕೃತಿಗಳನ್ನು ರಚಿಸುತ್ತಿದ್ದರು. ಬಣ್ಣಗಳ ಬಳಕೆ ನಯವಾದ ರೇಖೆಯಿಂದ ಉತ್ತಮವಾದ ಕಲಾಕೃತಿಗಳನ್ನು ರಚಿಸುತ್ತ ಅನೇಕ ವಿದ್ಯಾರ್ಥಿಗಳಿಗೆ ಪ್ರೀತಿಯ ಗುರುಗಳಾಗಿ ವಿದ್ಯಾರ್ಜನೆ ಮಾಡಿದ್ದಾರೆ.[೯೩] ಜೆ.ಎನ್. ಕಲಾಶಾಲೆಗೆ ತಮ್ಮದೇ ಆದ ಅಲ್ಪ ಸೇವೆಯನ್ನು ಮಾಡಿ ಅನೇಕ ವಿಷಯಗಳ ಕುರಿತು ಮಾರ್ಗದರ್ಶನ ಮಾಡಿದ್ದಾರೆ. ಶ್ರೀಯುತರ ಮಾರ್ಗದರ್ಶನವು ಕಲಾಶಾಲೆಗೆ ಬಹಳಷ್ಟು ಉಪಯೋಗವಾಗಿದೆ.

ಶ್ರೀ ಜೆ.ಎಸ್. ದೊಡ್ಡಿಹಾಳ : ಶ್ರೀ ಜೆ.ಎಸ್.ದೊಡ್ಡಿಹಾಳರವರು ಉತ್ತಮ ಕಲಾವಿದರಾಗಿದ್ದು, ಜೆ.ಜೆ. ಕಲಾಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ ಅಲ್ಲಿನ ಕಲಾ ಚಟುವಟಿಕೆ, ಕಲಾ ವಾತಾವರಣವನ್ನು ಬಲ್ಲವರಾಗಿದ್ದರು. ನಿಸರ್ಗಚಿತ್ರ, ಹಳ್ಳಿಯ ಹೊಲದ ದೃಶ್ಯವನ್ನು ಪೆಸ್ಟಲ್ ಮಾಧ್ಯಮದಿಂದ ಉತ್ತಮ ಕಲಾಕೃತಿ ರಚಿಸುವ ಪ್ರತಿಭಾವಂತ ಶಿಕ್ಷಕರಾದ ಶ್ರೀ ಜೆ.ಎಸ್.ದೊಡ್ಡಿಹಾಳರವರು ವಿದ್ಯಾರ್ಥಿಗಳಿಗೆ ಸರಳವಾಗಿ ತಿಳಿಯುವ ರೀತಿಯಲ್ಲಿ ಕಲಾ ಅಭ್ಯಾಸವನ್ನು ಹೇಳುತ್ತಿದ್ದರು.[೯೪] ಅನೇಕ ರೀತಿಯ ವಿವಿಧ ಮಾಧ್ಯಮಗಳನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕು, ಹೇಗೆ ಅವುಗಳನ್ನು ಉಪಯೋಗಿಸಬೇಕು ಎಂಬುದರ ಕುರಿತು ಸಮಗ್ರವಾಗಿ ವಿದ್ಯಾರ್ಥಿಗಳಿಗೆ ಹೇಳಕೊಡುತ್ತಿದ್ದರು. ಪ್ರತಿಯೊಂದು ವಿಷಯವನ್ನು ಸರಳ ರೀತಿಯಲ್ಲಿ ಹೇಳುತ್ತಿದ್ದರು. ಇಂಥ ಒಬ್ಬ ಪ್ರಬುದ್ಧತೆಯನ್ನು ಪಡೆದುಕೊಂಡು ಕಲಾವಿದ ಜೆ.ಎನ್. ಕಲಾಶಾಲೆಯ ಪ್ರಾರಂಭಿಕ ದಿನಗಳಲ್ಲಿ ಕಲಾಬೋಧನೆ ನೀಡುವುದರ ಮೂಲಕ ಕಲಾಶಾಗೆ ತಮ್ಮದೇ ಆದ ವಿಶಿಷ್ಟವಾದ ಕೊಡುಗೆ ನೀಡಿದ್ದಾರೆ. ಇಂಥ ಉತ್ತಮ ಕಲಾ ಪ್ರತಿಭೆಯನ್ನು ಹೊಂದಿದ ಕಲಾ ಶಿಕ್ಷಕರು ಜೆ.ಎನ್.ಚಿತ್ರಕಲಾ ಶಾಲೆಗೆ ಗೌರವ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ.

ಶ್ರೀ ಎನ್.ಕೆ. ಹಾಲಕೇರಿ : ಶ್ರೀ ಎನ್.ಕೆ.ಹಾಲಕೇರಿ ಇವರು ಗದಗ ಜಿಲ್ಲೆಯ ರೋಣ ತಾಲೂಕಿನ ಹಡಗಲಿಯಲ್ಲಿ ದಿನಾಂಕ ೧-೪-೧೯೫೫ರಲ್ಲಿ ಜನಿಸಿದ ಇವರು ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಯನ್ನು ವಿಜಯ ಕಲಾಮಂದಿರದಲ್ಲಿ ಮುಗಿಸಿದ್ದಾರೆ. ಉತ್ತಮ ಕಲಾಪ್ರತಿಭೆಯನ್ನು ಹೊಂದಿದ ಶ್ರೀಯುತರು ಸ್ಮರಣಚಿತ್ರ, ರೇಖಾಚಿತ್ರ, ವಸ್ತುಚಿತ್ರ, ಸಂಯೋಜನಾ ಚಿತ್ರದಲ್ಲಿ ಉತ್ತಮ ಕಲಾವಿದರೆನಸಿಕೊಂಡಿದ್ದಾರೆ. ಶ್ರೀ ಎನ್.ಕೆ.ಹಾಕೇರಿಯವರು ವಿಶೇಷವಾಗಿ ರೇಖಾಚಿತ್ರಗಳನ್ನು ಪೆನ್ಸಿಲ್‌ನಿಂದ ಸೃಜನಾತ್ಮವಾಗಿ ಸಂಯೋಜನೆ ಮಾಡುವ ಸರಳ ಸ್ವಭಾವದ ವ್ಯಕ್ತಿ, ಇವರು ಜೆ.ಎನ್. ಕಲಾಶಾಲೆಯಲ್ಲಿ ಗೌರವ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಈ ಶಾಲೆಗೆ ತಳಹದಿ ಹಾಕಿದವರಲ್ಲಿ ಇವರೂ ಒಬ್ಬರು. ಉತ್ತಮ ಶಿಕ್ಷಕರಾದ ಶ್ರೀ ಹಾಳಕೇರಿಯವರು ಅನೇಕ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಹೇಳುವುದರ ಮೂಲಕ ಉತ್ತಮ ಉಪನ್ಯಾಸಕರಾಗಿ ಗೌರವ ಪೂರ್ವಕ ಸೇವೆ ಸಲ್ಲಿಸಿದ್ದಾರೆ.[೯೫] ಸಧ್ಯ ಶ್ರೀ ಜೆ.ಎಸ್.ಎಸ್. ಹಾಲಭಾವಿ ಚಿತ್ರಕಲಾ ಮಹಾವಿದ್ಯಾಲಯ ಧಾರವಾಡ ಇಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

---

೯೩ .ಶ್ರೀ ಬಿ.ಎಫ್.ಬಡಿಗೇರ ಸಂದರ್ಶನ ದಿನಾಂಕ ೨೫-೧೧-೨೦೦೮

೯೪. ಎನ್.ಕೆ.ಹಾಲಕೇರಿ ಸಂದರ್ಶನ ದಿನಾಂಕ ೨೮-೮-೨೦೦೮

೯೫. ಎನ್.ಕೆ.ಹಾಲಕೇರಿಯವರ ದಾಖಲಾತಿಗಳು

ಅಲ್ಲದೇ ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ, ಶ್ರೀ ಕೆಂಚನಗೌಡ, ಶ್ರೀ ಅಶೋಕ ನಾಯ್ಕರ್, ಶ್ರೀ ಎಂ.ಎಸ್. ಹೊಸಮಠ, ಮುಂತಾದ ಶಿಕ್ಷಕರು ಇಲ್ಲಿ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿದ್ದಾರೆ. ಅನೇಕ ಖ್ಯಾತ ಚಿತ್ರಕಲಾವಿದರು, ಉತ್ತಮ ಶಿಕ್ಷಕರು ಜೆ.ಎನ್.ಕಲಾಶಾಲೆಗೆ ಸೇವೆ ಸಲ್ಲಿಸುವುದರ ಮೂಲಕ ತಮ್ಮದೇಯಾದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

ಸೇವೆ ಸಲ್ಲಿಸಿದ ಸಲ್ಲಿಸುತ್ತಿರುವ ಪ್ರಾಚಾರ್ಯರು ಅಧ್ಯಾಪಕರು :

ಜೆ.ಎನ್. ಕಲಾಶಾಲೆಯು ಹಂತ ಹಂತವಾಗಿ ಬೆಳೆಯುತ್ತ ಹೋದಂತೆ ಅನೇಕ ಅಧ್ಯಾಪಕ ವೃಂದವನ್ನು ನೇಮಕಾತಿ ಮಾಡಿಕೊಂಡರು. ಅಧ್ಯಾಪಕರ ಸಂಖ್ಯೆ ಹೆಚ್ಚಿಸಿಕೊಳ್ಳುತ್ತ ಬಂತು. ಸೇವೆ ಸಲ್ಲಿಸಿದ ಸಲ್ಲಿಸುತ್ತಿರುವ ಪ್ರಾಚಾರ್ಯರು ಅಧ್ಯಾಪಕರನ್ನು ಈ ಕೆಳಗಿನಂತೆ ಅವರ ಸಾಧನೆಗಳ ಕುರಿತು ಚಿತ್ರಕಲೆಗೆ ನೀಡಿದ ಕೊಡುಗೆ ಕುರಿತು ಇಲ್ಲಿ ಚರ್ಚಿಸಿ ಅಧ್ಯಯನ ಮಾಡಲಾಗಿದೆ.

ಪ್ರಾ. ಎಂ.ಆರ್. ಭಾಗವಾನ : ಶ್ರೀ ಎಂ.ಆರ್.ಬಾಗವಾನ ಅವರು ಬಾಗಲಕೋಟಿ ಜಿಲ್ಲೆಯ ಬಾದಾಮಿ ತಾಲೂಕಿನ ಜಾಲಿಹಾಳ ಎಂಬ ಸಣ್ಣ ಗ್ರಾಮದಲ್ಲಿ ೧-೩-೧೯೪೭ರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಬಡತನವನ್ನು ಅನುಭವಿಸಿದ ಶ್ರೀ ಎಂ.ಆರ್.ಬಾಗವಾನ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಜಾಲಿಹಾಳದಲ್ಲಿ ಪೂರೈಸಿ, ಪ್ರೌಢಶಿಕ್ಷಣವನ್ನು ಬಾದಾಮಿಯಲ್ಲಿ ಪೂರೈಸಿದ ಇವರು ಬಾಲ್ಯದಲ್ಲಿಯೇ ಕಲೆಯ ಗೀಳು ಅಂಟಿ ಕೊಂಡವದಾಗಿದ್ದರು. ಓದಿನ ಕಡೆಗೆ ಹೆಚ್ಚು ಆಸಕ್ತಿಯನ್ನು ನೀಡದೇ ಮೂರ್ತಿ ತಯಾರಿಸುವುದು ಮತ್ತು ಬಣ್ಣಗಳಿಂದ ವಿವಿಧ ಬಗೆಯ ಚಿತ್ರಗಳು ಮತ್ತು ನಿಸರ್ಗದ ಚಿತ್ರಗಳನ್ನು ರಚಿಸುತ್ತಿದ್ದರು. ಬಾಗವಾನರಲ್ಲಿ ಚಿತ್ರಕಲೆಯ ಆಸಕ್ತಿಯನ್ನು ಕಂಡು ಇವರನ್ನು ಚಿತ್ರಕಲೆಯ ಶಿಕ್ಷಣದತ್ತ ಕರೆದೊಯ್ಯಬೇಕೆಂಬ ಇವರ ತಂದೆ-ತಾಯಿಯವರ ಆಸೆ ಈಡೇರಲು ಹಣಕಾಸಿನ ತೊಂದರೆ ಇತ್ತು. ಇಂಥ ತೊಂದರೆಯನ್ನು ಗಮನಿಸಿದ ಹಿರಿಯರು ಇವರ ಚಿತ್ರಕಲೆಯನ್ನು ಮತ್ತು ಮೂರ್ತಿಗಳನ್ನು ರಚಿಸುವುದನ್ನು ಕಂಡು ಕೆಲವು ಗಣ್ಯ ವ್ಯಕ್ತಿಗಳು ತಮ್ಮ ಹಣಕಾಸಿನ ಉದಾರ ನೆರವನ್ನು ಇವರಿಗೆ ನೀಡಿದರು. ಗ್ರಾಮದ ಹಿರಿಯರ ನೆರವಿನಿಂದ ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ಗದುಗಿನ ವಿಜಯ ಕಲಾಮಂದಿರಕ್ಕೆ ಪ್ರವೇಶ ಪಡೆದರು.

ಶ್ರೀ ಎಂ.ಆರ್. ಬಾಗವಾನ ಅವರು ಶ್ರೀ ಟಿ.ಪಿ. ಅಕ್ಕಿ, ಎಂ.ಎ. ಚೆಟ್ಟಿ, ಸಿ.ಎನ್. ಪಾಟೀಲ, ಶ್ರೀ ಕಮಾನಗಾರ, ಎಸ್.ಎಂ. ಶಿರಹಟ್ಟಿ ಇವರಂತಹ ಹಿರಿಯ ಕಲಾವಿದರ ಶಿಷ್ಯರಾಗಿ ಇವರ ಕೈಯಲ್ಲಿ ಎ.ಎಂ., ಜಿ.ಡಿ. ಮಾಡೆಲಿಂಗ್‌ನಲ್ಲಿ ಡಿಪ್ಲೋಮಾ ಪದವಿಯನ್ನು ಪೂರೈಸಿದರು. ಎಲ್ಲ ಗುರುಗಳ ಪ್ರೀತಿಯ ಶಿಷ್ಯರಾಗಿ, ತಮ್ಮ ಸಹಪಾಠಿಗಳೊಂದಿಗೆ ಉತ್ತಮ ಸ್ನೇಹಿತರಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು, ವಿದ್ಯಾರ್ಥಿಯಾಗಿದ್ದಾಗ ಚಿತ್ರಕಲೆಗಿಂತ ಮಣ್ಣು ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಲ್ಲಿ ಅನೇಕ ಉಬ್ಬು ಕೆತ್ತನೆಯ ಮತ್ತು ರಿಲೀಫ್ ಮೂರ್ತಿಶಿಲ್ಪಗಳನ್ನು ರಚಿಸುತ್ತಿದ್ದರು. ಚಿತ್ರಕಲೆ ಮತ್ತು ಮೂರ್ತಿಕಲೆಯನ್ನು ಇವರು ಅತ್ಯಂತ ಸುಂದರವಾಗಿ ರಚಿಸುತ್ತಿದ್ದರು. ಇವರ ಪ್ರತಿಭೆಯನ್ನು ಮತ್ತು ಕಲಾಕೌಶಲ್ಯತೆಯನ್ನು ಅರಿತು ಕಲಾವಿದ ಶ್ರೀ ಜಿ.ಎನ್. ಜಾಡಗೌಡ ಇವರು ೧೯೭೦ರಲ್ಲಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯಕ್ಕೆ ಪ್ರಾಚಾರ್ಯರಾಗಿ ಸೇವೆಗೆ ನೇಮಕ ಮಾಡಿಕೊಂಡರು.

"ಚಿತ್ರಕಲೆಯ ವಿವಿಧ ಮಾಧ್ಯಮಗಳಲ್ಲಿ ಅವರು ಪ್ರಯೋಗಗಳನ್ನು ಮಾಡಿದ್ದಾರೆ. ಆದರೆ ಅವರ ಅತ್ಯಂತ ಆಸಕ್ತಿಯ ಕ್ಷೇತ್ರವಾದ ಶಿಲ್ಪಕಲೆ, ಮಾಡಲಿಂಗ್ ಇದರಲ್ಲಿ ಅನೇಕ ಒಳ್ಳೆಯ ಶಿಲ್ಪಕೃತಿಗಳನ್ನು ನಿರ್ಮಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ" ಇಂಥ ಅಪರೂಪದ ಕಲಾವಿದ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಬೆಳವಣಿಗೆಯಲ್ಲಿ ಶ್ರಮೀಸಿದವರಲ್ಲಿ ಒಬ್ಬರು.

"ಶ್ರೀ ಎಂ.ಆರ್. ಬಾಗವಾನ ಅವರು ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರಾಯಚಾರ್ಯರಾಗಿ ವಿದ್ಯಾರ್ಥಿಗಳಿಗೆ ಕಲಾಶಿಕ್ಷಣ ನೀಡುವುದರ ಜೊತೆಗೆ ಕಲಾ ಇತಿಹಾಸ ವಿಷಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಬೋಧಿಸುತ್ತಿದ್ದರು. ಇವರು ಪೇಂಟಿಂಗ್‌ಗಿಂತಲೂ ಮಾಡಲಿಂಗ್ ವಿಷಯ ಬಹು ಆಸಕ್ತಿದಾಯಕವಾಗಿದ್ದರಿಂದ ಮಣ್ಣು, ಪ್ಲಾಸ್ಟರ್ ಆಫ್ ಪ್ಯಾರಿಸ್, ಶಿಲಾ ಮಾಧ್ಯಮಗಳನ್ನು ಬಳಸಿಕೊಂಡು ಸಾವಿರಾರು ಮೂರ್ತಿಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ."[೧೯೬] ಅಲ್ಲದೇ ಶ್ರೀ ಎಂ.ಆರ್. ಬಾಗವಾನರವರು ಯಥಾದರ್ಶನ ವಿಷಯವನ್ನು ಬೋಧಿಸುವ ಕ್ರಮ ವಿಭಿನ್ನವಾಗಿತ್ತು. ಇಂದಿಗೂ ಅವರ ವಿದ್ಯಾರ್ಥಿಗಳು ಇವರನ್ನು ಬಹು ಗೌರವದಿಂದ ನೆನೆಯುತ್ತಾರೆ.

ಶ್ರಿ ಎಂ.ಆರ್.ಬಾಗವಾನರವರು ಮಾಡಲ್ ಆಗಿ ಕೂಡ್ರಿಸುತ್ತಿದ್ದ ವ್ಯಕ್ತಿಗಳನ್ನು ಇವರು ಮಣ್ಣಿನಲ್ಲಿ ಯಥಾವತ್ತಾಗಿ ರಚಿಸುವ ತಂತ್ರವು ಒಂದು ವಿಶಿಷ್ಠವಾಗಿತ್ತು. ಇವರು ಮಾಡೆಲ್ ಆಗಿ ಕೂಡ್ರಿಸುತ್ತಿದ್ದ ವ್ಯಕ್ತಿಗಳನ್ನು ಬರಿಮೈಯಲ್ಲಿ ಕೂಡ್ರಿಸಿ ಮಣ್ಣಿನಲ್ಲಿ ರಿಲೀಫ್ ಕೃತಿಗಳು ಬಹು ಕೌಶಲ್ಯಭರಿತವಾಗಿಯೂ, ಪ್ರಮಾಣಬದ್ಧವಾಗಿಯೂ ಮತ್ತು ಅಂಗಾಂಗಗಳು ಸ್ಪಷ್ಟವಾಗಿ ಕಾಣುವಂತೆ ರಚಿಸುತ್ತಿದ್ದರು. ಉಬ್ಬು ಕೆತ್ತನೆಗಿಂತಲೂ ರಿಲೀಫ್ ಮೂರ್ತಿ ಕಲಾಕೃತಿಗಳನ್ನು ರಚಿಸುವಲ್ಲಿ ಸಿದ್ಧಹಸ್ತರಾಗಿದ್ದರು. ಇವರು ಪ್ಲಾಸ್ಟರ್ ಮಾಧ್ಯಮದಲ್ಲಿ ಆಧುನಿಕ ಶೈಲಿಯನ್ನು ಅಳವಡಿಸಿಕೊಂಡು ರಚಿಸಿದ ರಿಲೀಫ್ ಕೃತಿಗಳು ಶ್ರೇಷ್ಠ ಕೃತಿಗಳಾಗಿವೆಯಲ್ಲದೇ ಜನರ ಪ್ರಶಂಸೆಗೆ ಪಾತ್ರವಾಗಿವೆ.[೧೯೭] ಅವುಗಳಲ್ಲಿ ನಾಲ್ಕು ಅಡಿ ಎತ್ತರದ ಗೊಮ್ಮಟೇಶ್ವರನ ಮೂರ್ತಿ ಇಟಗಿಯ ಭೀಮಾಂಭಿಕೆ ಮೂರ್ತಿ, ಗದುಗಿನ ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿನ ಶ್ರೀ ರೇಣುಕಾಚಾರ್ಯರ ಮೂರ್ತಿ, ಯಡಿಯೂರು ಸಿದ್ಧಲಿಂಗೇಶ್ವರ ಮೂರ್ತಿ ಮುಂತಾದವುಗಳು ಪ್ರಮುಖ ಮೂರ್ತಿಶಿಲ್ಪಗಳಾಗಿವೆ.

ಇಂಥ ಬಹುಮುಖ ಪ್ರತಿಭೆಯ ಕಲಾವಿದರ ಎಮ್.ಆರ್. ಬಾಗಮಾನರವರು ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಕಾಲೇಜಗಳಿಗೆ ಕಾರಣಿ ಕರ್ತರಾಗಿದ್ದಾರೆ. ನೇಮಕ ಮಾಡುವುದರ ಮೂಲಕ ವಿಜಯ ಕಲಾಮಂದಿರದ ಬೆಳವಣಿಗೆಗೆ ಕಾರಣೀಕರ್ತರಾಗಿ ಸಂಸ್ಥೆಗೆ ಗದಗ ಜಿಲ್ಲೆಗೆ ತಮ್ಮದೆಯಾದ ಕೊಡುಗೆ ನೀಡಿದ್ದಾರೆ.

ಪ್ರಾ. ಬಿ.ಎಲ್. ಲಮಾಣಿ (ಚವ್ಹಾಣ) : ಶ್ರೀ ಬಿ.ಎಲ್.ಚವ್ಹಾಣರವರು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಓಗಳಾಪೂರ ಸಣ್ಣತಾಂಡೆಯಲ್ಲಿ ತಂದೆ ಲಚ್ಚಪ್ಪ ತಾಯಿ ಸೋಮವ್ವ ಇವರ ದ್ವಿತೀಯ ಪುತ್ರರಾಗಿ ದಿನಾಂಕ ೪-೧೦-೧೯೬೯ರಂದು ಜನಿಸಿದರು. ಗ್ರಾಮೀಣ ಪ್ರದೇಶದಲ್ಲಿ ಬೆಳೆದ ಇವರು ಪ್ರಾಥಮಿಕ ಶಿಕ್ಷಣವನ್ನು ಓಗಳಾಪುರ ಸಣ್ಣ ತಾಂಡೆಯಲ್ಲಿ ಮುಗಿಸಿ ಪ್ರೌಢಶಿಕ್ಷಣವನ್ನು

---

೧೯೬. ಎಂ.ಆರ್. ಬಾಗವಾನರವರ ದಾಖಲಾತಿಗಳು

೧೯೭. ಎಂ.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯಗಳ ಕೊಡುಗೆ ಪು.ಸಂ.೪೮

ರಾಮದುರ್ಗದ ಶ್ರೀ ಬಸವೇಶ್ವರ ಸಂ.ಪ.ಪೂ. ಕಾಲೇಜಿನಲ್ಲಿ ಪೂರೈಸಿದರು. ಚಿಕ್ಕವನಿರುವಾಗಲೇ ಕಲೆಯ ಗೀಳಿಗಂಟಿಕೊಂಡಿದ್ದ ಭೀಮಪ್ಪ ಬಾಲ್ಯದಲ್ಲಿಯೇ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ೮ನೇ ತರಗತಿಯಲ್ಲಿ ಓದುತ್ತಿದ್ದಾಗ ಹಾಸ್ಟೇಲಿನ ತಮ್ಮ ಸ್ನೇಹಿತರಿಗೆ ಚಿತ್ರಗಳನ್ನು ರಚಿಸಿಕೊಡುತ್ತಿದ್ದರು. ವಿಜ್ಞಾನದ ಯಾವುದೇ ಚಿತ್ರಗಳನ್ನು ಹಾಸ್ಟೇಲಿನ ತಮ್ಮ ಸ್ನೇಹಿತರಿಗೆ ಚಿತ್ರಗಳನ್ನು ರಚಿಸಿಕೊಡುತ್ತಿದ್ದರು. ವಿಜ್ಞಾನದ ಯಾವುದೇ ಚಿತ್ರಗಳನ್ನು ಸರಳವಾಗಿ ಬಿಡಿಸಿಕೊಡುತ್ತಿದ್ದರು. ಬಡತನದ ಬವಣೆಯಲ್ಲಿ ಬೆಂದ ಇವರಿಗೆ ಚಿತ್ರಕಲಾ ಶಿಕ್ಷಕರಾದ ಶ್ರೀ ಪೂಜಾರ ಹಾಗೂ ಶ್ರೀ ಕಾಂಬಳೆ ಗುರುಗಳು ಬಾಲಕ ಭೀಮಪ್ಪನಿಗೆ ಚಿತ್ರಕಲಾ ಉನ್ನತ ಅಭ್ಯಾಸ ಮಾಡಲು ಪ್ರೇರೇಪಿಸಿ ಪ್ರೋತ್ಸಾಹಿಸಿದರು.[೧೯೮] ಪ್ರೌಢಶಿಕ್ಷಣ ಮುಗಿಸಿ ಉನ್ನತ ವ್ಯಾಸಂಗಕ್ಕಾಗಿ ಧಾರವಾಡಕ್ಕೆ ತೆರಳಿದರು. ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಮೆರಟ್ ಮುಖಾಂತರ ಆಯ್ಕೆಯಾಗಿ ಪ್ರವೇಶ ಪಡೆದರು.

ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಉತ್ತಮ ಶಿಕ್ಷಕರೂ ಖ್ಯಾತ ಕಲಾವಿದರೂ ಆದ ಶ್ರೀ ಎಂ.ಆರ್.ಬಾಳಿಕಾಯಿ, ಶ್ರೀ ಎನ್.ಎಂ.ದಾಟನಾಳ, ಶ್ರೀ ಐ.ಎಚ್.ಮುಲ್ಲಾ, ಶ್ರೀ ವಿ.ಜಿ.ಪತ್ತಾರ, ಶ್ರೀ ಸಿ.ಎಲ್.ಕೋಲಕಾರ ಗುರುಗಳ ಪ್ರೀತಿಯ ಶಿಷ್ಯರಾಗಿ ಎಲ್ಲ ಸ್ನೇಹಿತರ ಆತ್ಮೀಯ ಸ್ನೇಹಿತರಾಗಿ ಚಿತ್ರಕಲಾ ಅಭ್ಯಾಸ ಮಾಡಿದರು. ಸ್ಟಿಲ್‌ಲೈಫ್, ನೇಚರ್ ಡ್ರಾಯಿಂಗ, ಭಾವಚಿತ್ರ, ಸಂಯೋಜನಾ ಚಿತ್ರ, ನಿಸರ್ಗಚಿತ್ರಗಳನ್ನು ರಚಿಸುತ್ತಿದ್ದರು. ಭಾವಚಿತ್ರ, ಸೃಜನಾತ್ಮಕ ಸಂಯೋಜನಾ ಚಿತ್ರ, ಮತ್ತು ನಿಸರ್ಗ ಚಿತ್ರದಲ್ಲಿ ವಿಶೇಷ ಪರಿಣಿತಿಯನ್ನು ಪಡೆದುಕೊಂಡಿದ್ದಾರೆ. ಜಲವರ್ಣ, ತೈಲವರ್ಣ, ಅಕ್ರಾಲಿಕ್ ಮಾಧ್ಯಮದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಸದಾ ಸ್ನೇಹಜೀವಿಯಾದ ಭೀಮಪ್ಪನವರು ಕಾಲೇಜಿನಲ್ಲಿ ಎಲ್ಲರ ಜೊತೆ ಆತ್ಮೀಯತೆಯಿಂದ ನಡೆಯುವ ಸರಳ ಸ್ವಭಾವದವರಾಗಿದ್ದರು. ಕ್ರಿಯಾಶೀಲ ವ್ಯಕ್ತಿತ್ವವನ್ನು ವಿದ್ಯಾರ್ಥಿ ಜೀವನದಲ್ಲಿಯೇ ಅಳವಡಿಸಿಕೊಂಡಿದ್ದ ಭೀಮಪ್ಪ ವಿದ್ಯಾರ್ಥಿ ಜೀವನದಲ್ಲಿಯೇ ಅನೇಕ ಸಮಸ್ಯೆಗಳನ್ನು ಎದುರಿಸಿ, ಅನೇಕ ಕಲಾಚಟುವಟಿಕೆಗಳನ್ನು ಮಾಡುತ್ತಿದ್ದರು. ಯಾವುದೇ ಸಭೆ ಸಮಾರಂಭ ಕಾಲೇಜಿನಲ್ಲಿ ನಡೆದಾಗ ಮುಂಚೂಣೆಯಲ್ಲಿ ನಿಂತುಕೊಂಡು ಕೆಲಸ ಮಾಡುತ್ತಿದ್ದರು. ವಿದ್ಯಾರ್ಥಿ ದಿಸೆಯಲ್ಲಿಯೇ ಉತ್ತಮ ವಿದ್ಯಾರ್ಥಿಯಾಗಿ ಬೆಳೆದ ಶ್ರೀ ಬಿ.ಎಲ್.ಲಮಾಣಿ (ಚವ್ಹಾಣ)ರವರು ೧೯೯೧ರಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಹಾಗೂ ೧೯೯೨ರಲ್ಲಿ ಡ್ರಾಯಿಂಗ್ ಮತ್ತು ಪೆಂಟಿಂಗ್ ಡಿಪ್ಲೋಮಾ ಪದವಿಯನ್ನು ಪಡೆದುಕೊಂಡರು.

೧೯೯೩ರಲ್ಲಿ ಬಿ.ಎಲ್. ಚವ್ಹಾಣರವರ ಕಲಾಪ್ರತಿಭೆಯನ್ನು ಮೆಚ್ಚಿ ಗದಗ-ಬೆಟಗೇರಿಯ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದ ಕಾರ್ಯದರ್ಶಿಗಳು ಹಾಗೂ ಕಲಾವಿದರಾದ ಶ್ರೀ ಜಿ.ಎನ್. ಜಾಡಗೌಡರರವರು ಹಿರಿಯ ಕಲಾವಿದರ ಕಲಾಶಿಕ್ಷಕರಾದ ಶ್ರೀ ಎಂ.ಆರ್. ಬಾಳಿಕಾಯಿಯವರಿಗೆ ತಮ್ಮ ಸಂಸ್ಥೆಗೆ ಒಬ್ಬ ಉತ್ತಮ ಉಪನ್ಯಾಸಕರು ಬೇಕಾಗಿದ್ದಾರೆ. ಎಂದು ಕೇಳಿಕೊಂಡಾಗ ಬಾಳಿಕಾಯಿ ಗುರುಗಳ ಕಣ್ಣಿಗೆ ಬಿದ್ದವರು ಭೀಮಪ್ಪ. ಒಳ್ಳೆಯ ನಡತೆಯ ಹಾಗೂ ಉತ್ತಮ ಕಲಾಪ್ರತಿಭೆಯನ್ನು ಹೊಂದಿದ ಬಿ.ಎಲ್. ಚವ್ಹಾಣರವರ ಹೆಸರನ್ನು ಸೂಚಿಸಿದರು. ಇವರ ಕಲಾ ಪ್ರತಿಭೆಯನ್ನು ಗಮನಿಸಿದ ಶ್ರೀ ಜಿ.ಎನ್. ಜಾಡಗೌಡರ ಅವರು ೦೨-೦೮-೧೯೯೩ರಂದು ಉಪನ್ಯಾಸಕರನ್ನಾಗಿ ಸೇವೆಗೆ ಹಾಜರಾಗಲು ನೇಮಕಾತಿ ಆದೇಶ ನೀಡಿದರು.

---

೧೯೮. ಬಿ.ಎಲ್. ಚವ್ಹಾಣ ದಾಖಲಾತಿಗಳ ಸಂಗ್ರಹ

ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ೧೯೯೩ರಿಂದ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದ ಇವರು ತಮ್ಮ ಬೋಧನಾ ಕಾರ್ಯಗಳೊಂದಿಗೆ ಹಲವಾರು ಕಲಾಕೃತಿಗಳನ್ನು ರಚಿಸಿ ಅವುಗಳ ಪ್ರದರ್ಶನಗಳನ್ನು ಮಾಡಿದ್ದಾರೆ. ಕಲಾಶಾಲೆಯಲ್ಲಿ ಜರುಗುತ್ತಿದ್ದ ಅನೇಕ ಕಲಾಚಟುವಟಿಕೆಗಳಲ್ಲಿ ಜವಾಬ್ದಾರಿಯನ್ನು ಹೊತ್ತು ನಾಯಕತ್ವ ಗುಣಗಳನ್ನು ಬೆಳೆಸಿಕೊಂಡಿದ್ದಾರೆ. ಕಲಾಶಾಲೆಯ ಯಾವುದೇ ಕೆಲಸಗಳನ್ನು ಚಾಚೂ ತಪ್ಪದೆ ಉತ್ತಮವಾಗಿ ಮಾಡುವ ಪ್ರತಿಭಾವಂತರಾಗಿದ್ದಾರೆ. ಉಪನ್ಯಾಸಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಶ್ರೀ ಚವ್ಹಾಣರವರ ಕಲಾಚಟುವಟಿಕೆಯನ್ನು ಗುರುತಿಸಿ ದಿನಾಂಕ ೧೨-೭-೧೯೯೭ರಂದು ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದ ಪ್ರಭಾರಿ ಪ್ರಾಚಾರ್ಯರನ್ನಾಗಿ ನೇಮಿಸಿದರು. ಚಿತ್ರಕಲಾ ಮಹಾವಿದ್ಯಾಲಯದ ಎಲ್ಲ ಜವಾಬ್ದಾರಿಯನ್ನು ಹೊತ್ತು ಎಲ್ಲ ಹಿರಿಯ ಮತ್ತು ಕಿರಿಯ ಉಪನ್ಯಾಸಕರ ಸಹಾಯ ಸಹಕಾರದಿಂದ ವಿದ್ಯಾಲಯದ ಬೆಳವಣಿಗೆಯ ಹಂತಕ್ಕೆ ಕೊಂಡೊಯ್ದರು.

ಮುಂದೆ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯವು ಕೆಲವು ಆಡಳಿತಾತ್ಮಕ ಸಮಸ್ಯೆಯಿಂದ ಅನೇಕ ಜ್ವಲಂತ ಸಮಸ್ಯೆಗಳನ್ನು ಎದುರಿಸುವ ಪರಿಸ್ಥಿತಿ ಉಂಟಾಗಿ ವಿದ್ಯಾಲಯವು ಕ್ಷೀಣಿಸುವ ಸ್ಥಿತಿಗೆ ಬಂತು. ಈ ಸಂದರ್ಭದಲ್ಲಿ ಪ್ರಾಚಾರ್ಯ ಚವ್ಹಾಣರವರು ಎದೆಗುಂದದೆ ಎಲ್ಲ ಸಮಸ್ಯೆಗಳನ್ನು ಅತ್ಯಂತ ಪ್ರಬುದ್ಧವಾಗಿ ಎದುರಿಸಿ ಇಂದು ದೃಡವಾಗಿ ನಿಲ್ಲುವಂತೆ ಮಾಡಿದರು. ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಇನ್ನೇನು ಅವನತಿಯತ್ತ ಸಾಗುತ್ತಿದೆ ಎಂಬುದನ್ನು ಅರಿತು ಎಲ್ಲ ಸಿಬ್ಬಂದಿಯವರ ಸಹಕಾರದಿಂದ ವಿದ್ಯಾದಾನ ಸಮಿತಿಯವರಿಗೆ ಹಸ್ತಾಂತರಿಸಲು ಪ್ರಮುಖ ಪಾತ್ರ ವಹಿಸಿದರು. ಸರಳ ಸ್ವಭಾವದವರಾದ ಇವರು ಸದಾ ಕಲಾಚಟುವಟಿಕೆಯಲ್ಲಿ ತೊಡಗಿರುತ್ತಾರೆ. ಉತ್ತಮ ಆಡಳಿತಗಾರರಾಗಿ ಕಲಾಶಾಲೆಯಲ್ಲಿ ಅನೇಕ ಕಲಾಚಟುವಟಿಕೆಯನ್ನು ಮಾಡಿ ರಾಜ್ಯಮಟ್ಟದಲ್ಲಿ ವಿದ್ಯಾಲಯ ಗುರುತಿಸುವಂತೆ ಶ್ರಮಿಸಿದ್ದಾರೆ.

ಶ್ರೀ ಚವ್ಹಾಣರವರು ಅಧ್ಯಾಪಕ ವೃತ್ತಿಗೆ ಸೇರುವ ಮುನ್ನವೇ ತಾವು ವಿದ್ಯಾರ್ಥಿ ಜೀವನದಲ್ಲಿ ಗುರುಗಳ ಮಾರ್ಗದರ್ಶನದಲ್ಲಿ ಅನೇಕ ಕಲಾಚಟುವಟಿಕೆಗಳನ್ನು ನಡೆಸಿಕೊಂಡು ಬಂದ ಅನುಭವವು ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕ ವೃತ್ತಿಗೆ ಸೇರಿದ ನಂತರ ಆ ಅನುಭವವನ್ನು ಅತ್ಯಂತ ಉಪಯುಕ್ತವಾಗುವಂತೆ ಬಳಸಿಕೊಂಡರು.

ಸದಾ ಕಲಿಸುವ ಮತ್ತು ಕಲಿಯುವ ಹಂಬಲದಲ್ಲಿರುವ ಚವ್ಹಾಣರು ಬಿ.ಎಫ್.ಎ.ಪದವಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಎಂ.ಎ. ಇತಿಹಾಸ ಪದವಿಯನ್ನು, ಮೈಸೂರು ಮುಕ್ತ ವಿಶ್ವವಿದ್ಯಾಲಯದಿಂದ ಎಂ.ವಿ.ಎ.ಸ್ನಾತಕೋತ್ತ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಡೆದುಕೊಂಡಿದ್ದಾರೆ. ರಾಜ್ಯ ರಾಷ್ಟ್ರಮಟ್ಟದ ಕಲಾಪ್ರದರ್ಶನದಲ್ಲಿ ಭಾಗವಹಿಸಿ ಕಲಾಪ್ರದರ್ಶನ ಮಾಡಿದ್ದಾರೆ. ಬೆಂಗಳೂರು, ಗದಗ, ಬೆಳಗಾವಿ, ಹುಬ್ಬಳ್ಳಿ, ಹಂಪಿ ರಾಜಸ್ತಾನ, ದೆಹಲಿ, ಪೂಣಾ, ಕೇರಳ, ಧಾರವಾಡ, ಬಿಜಾಪುರ, ಹಾವೇರಿ, ರಾಮದುರ್ಗ, ಮುಂಬಯಿ ಮುಂತಾದ ಸ್ಥಳಗಳಲ್ಲಿ ಜರುಗಿದ ಸಮೂಹ

ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಗದಗ, ಧಾರವಾಡ, ಬೆಂಗಳೂರು, ಹಂಪಿ, ಹುಬ್ಬಳ್ಳಿ, ರಾಜಸ್ತಾನ, ಬಿಜಾಪೂರ ಮುಂತಾದ ರಾಜ್ಯ ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.[೧೯೯]

ಅನೇಕ ಸಂಘ-ಸಂಸ್ಥೆಗಳು ಶ್ರೀ ಚವ್ಹಾಣರವರನ್ನು ಗೌರವಿಸಿವೆ. ಅನೇಕ ಮಠಮಾನ್ಯಗಳು ಶ್ರೀ ಚವ್ಹಾಣರವರ ಕಲಾಪ್ರತಿಭೆಯನ್ನು ಗುರುತಿಸಿ ಸನ್ಮಾನಿಸಿವೆ. ಅವುಗಳಲ್ಲಿ ೨೦೦೨ರಲ್ಲಿ ಉತ್ತಮ ಕಲಾವಿದ ಪ್ರಶಸ್ತಿ, ೨೦೦೪ರಲ್ಲಿ ಕರ್ನಾಟಕ ಕಲಾಚೇತನ ಪ್ರಶಸ್ತಿ, ೨೦೦೫ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ, ೨೦೦೬ರಲ್ಲಿ ಜನಪ್ರಿಯ ಶಿಕ್ಷಕ ಪ್ರಶಸ್ತಿ ಹಾಗೂ ೨೦೧೦ರಲ್ಲಿ ಉರ್ದು ಅಕಾಡೆಮಿ ಬೆಂಗಳೂರು ಇವರಿಂದ ೧೦ ಸಾವಿರ ನಗದು ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇವರ ಅನೇಕ ಕಲಾಕೃತಿಗಳು ಗದಗ, ಧಾರವಾಡ, ಬೆಳಗಾವಿ, ಬಿಜಾಪೂರ, ಬೆಂಗಳೂರು, ರಾಜಸ್ಥಾನ ಹಾಗೂ ದೆಹಲಿ ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ.[೨೦೦]

ಮನುಷ್ಯ ಮನಪೂರ್ವಕ ಹೃದಯ ಸಂವೇದನೆಯನ್ನು ಪರಸ್ಪರ ಸ್ಪಂದಿಸಿ ಅಂತೆಯೇ ಭಾರತವೆಂಬ ರಥವನ್ನು ಅನವರತ ಎಳೆದುಕೊಂಡು ಸಾಗಿ ತಾವು ಮಾತ್ರವಲ್ಲದೇ ಲೋಕಕ್ಕೂ ಮಾದರಿಯಾಗವುಂತಹ ಜನ ಈ ನೆಲದಲ್ಲಿ ಉದಯಿಸುತ್ತಲೇ ಇದ್ದಾರೆ. ಇಂತಹ ಅನೇಕ ಹಿಂದುಳಿದ ಪಂಗಡದಲ್ಲಿ (ಲಂಬಾಣಿ ಅಥವಾ ಬಂಜಾರಾ) ಎನ್ನುವ ವರ್ಗದ ಗುಡ್ಡಗಾಡು ಪ್ರದೇಶದಲ್ಲಿ ಕಲ್ಲುಮುಳ್ಳುಗಳ ನಡುವೆ ಬದುಕಿ ಕಲ್ಲಿನಂತ ಹೃದಯವನ್ನು ಹೂವಿನಂತೆ ಪರಿವರ್ತಿಸಿಕೊಂಡು ನಾಡ ಜನರಿಗೆ ಮಲ್ಲಿಗೆಯಂತೆ ಪರಿಮಳ ಸೂಚಿಸುವ ಸೇವಾಕಾರ್ಯದ ಬಡ ಜನಾಂಗದವರಾಗಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಚವ್ಹಾಣರು.[೨೦೧] ಹಲವಾರು ಕ್ಷೇತ್ರದಲ್ಲಿ ತಮ್ಮ ಕಲಾ ಪ್ರತಿಭೆಯನ್ನು ಸಾರ್ಥಕವಾಗಿ ಪ್ರದರ್ಶನ ಮಾಡಿದ್ದಾರೆ.

ಸದಾ ಕಲಾಚಟುವಟಿಕೆಯಲ್ಲಿರುವ ಯುವ ಕಲಾವಿದ ಚವ್ಹಾಣರು ಅನೇಕ ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿಯೂ ಸಕ್ರೀಯವಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯ ಚಿತ್ರಕಲಾ ಮಹಾವಿದ್ಯಾಲಯಗಳ ಸಿಬ್ಬಂದಿ ಸಂಘದ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಾಗಿ, ಪರೀಕ್ಷಾ ಮಂಡಳಿಯ ಸದಸ್ಯರಾಗಿ, ಸ್ಪಂದನ ಕಲಾ ಪರಿಷತ್ತಿನ ಅಧ್ಯಕ್ಷರಾಗಿ, ಗದಗ ಜಿಲ್ಲಾ ಬಂಜಾರಾ ಸಂಘದ ಸದಸ್ಯರಾಗಿ, ನೌಕರರ ಸಂಘದ ಸಹಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಉತ್ತಮ ಕಲಾವಿದರಾಗಿ ಸಂಘಟಿಕರಾಗಿ ಗುರುತಿಸಿಕೊಂಡಿದ್ದಾರೆ.

ಬಿ.ಎಫ್. ಬಡಿಗೇರ : ಶ್ರೀ ಬಿ.ಎಫ್. ಬಡಿಗೇರರವರು ಹುಬ್ಬಳ್ಳಿಯ ಗೋಪನಕೊಪ್ಪ ಎಂಬ ಗ್ರಾಮೀಣ ಪ್ರದೇಶದಲ್ಲಿ ತಂದೆ ಫಕೀರಪ್ಪ ತಾಯಿ ಶಾಂತಮ್ಮನವರ ದ್ವಿತೀಯ ಮಗನಾಗಿ ೧-೫-೧೯೫೬ರಂದು ಜನಿಸಿದರು. ಚಿಕ್ಕವರಿರುವಾಗಲೇ ತಂದೆ-ತಾಯಿಯವರನ್ನು ಕಳೆದುಕೊಂಡ ಇವರು ತಮ್ಮ ಚಿಕ್ಕಪ್ಪ ಈಶ್ವರಪ್ಪ ಹಾಗೂ ಚಿಕ್ಕಮ್ಮ ಗಂಗಮ್ಮನವರ ಆಶ್ರಯದಲ್ಲಿ ಬೆಳೆದರು. ಪ್ರಾಥಮಿಕ

೧೯೯. ನಾಗರಿಕ ದಿನಪತ್ರಿಕೆ ದಿನಾಂಕ ೬-೨-೨೦೧೦

೨೦೦. ಅಶೋಕ ಅಕ್ಕಿ ಸಂ. ಕೃಪುರ ಕಲಾವಿದರ ಪು.ಸಂ. ೩೩

೨೦೧. ನವೋದಯ ದಿನಪತ್ರಿಕೆ ದಿನಾಂಕ : ೭-೩-೨೦೦೨

ಶಿಕ್ಷಣ ಗೋಪನಕೊಪ್ಪದಲ್ಲಿಯೇ ಮುಗಿಸಿ, ಪ್ರೌಢಶಿಕ್ಷಣವನ್ನು ಬಾಶೆಲ್ ಮಿಶನ್ ಪ್ರೌಢಶಾಲೆ, ಹುಬ್ಬಳ್ಳಿಯಲ್ಲಿ ೧೯೭೨ರಲ್ಲಿ ಮುಗಿಸಿದರು. ವಂಶಪಾರಂಪರಿಕವಾಗಿ ಬಂದಿರುವ ಬಡಿಗತನ ವೃತ್ತಿ, ತಂದೆ, ಚಿಕ್ಕಪನವರು, ಸಹೋದರರು ಎಲ್ಲರೂ ಕೂಡಿಕೊಂಡು ಕಟ್ಟಿಗೆಯ ಥೇರು, ಮೂರ್ತಿಶಿಲ್ಪಗಳನ್ನು ತಯಾರಿಸುತ್ತಿದ್ದರು. ಇದರಿಂದ ಪ್ರೇರಿತರಾದ ಬಸಪ್ಪನವರು ಉನ್ನತ ಚಿತ್ರಕಲಾ ವ್ಯಾಸಂಗಕ್ಕಾಗಿ ಶ್ರೀ ವಿಜಯ ಚಿತ್ರಕಲಾ ಮಹಾವಿದ್ಯಾಲಯ ಹುಬ್ಬಳ್ಳಿ ಇಲ್ಲಿ ಪ್ರವೇಶ ಪಡೆದು ಒಂದು ವರ್ಷದ ಡಿ.ಟಿ.ಸಿ. ಕೋರ್ಸ್ ಅಧ್ಯಯನ ಮಾಡಿದರು. ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಸರಕಾರಿ ಚಿತ್ರಕಲಾ ಶಾಲೆ, ಧಾರವಾಡದಲ್ಲಿ ಮುಗಿಸಿದರು. ಆರ್ಟ್ ಮಾಸ್ಟರ್ ಪದವಿಯನ್ನು ಡಿ.ವಿ.ಹಾಲಭವಿ ಸ್ಕೂಲ್ ಆಫ್ ಆರ್ಟ್‌ದಲ್ಲಿ ಪೂರೈಸಿದರು. ಶಾಂತ ಸ್ವಭಾವದವರಾದ ಬಡಿಗೇರರವರು ವಿದ್ಯಾರ್ಥಿಯಾಗಿದ್ದಾಗ ಅನೇಕ ಕಲಾಕೃತಿ ಮೂರ್ತಿ ಕಲಾಕೃತಿಗಳನ್ನು ಉತ್ತಮವಾಗಿ ರಚಿಸುವ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು.[೨೦೨] ಇವರು ೧೯೮೩ರಲ್ಲಿ ಜೆ.ಎನ್.ಚಿತ್ರಕಲಾ ಶಾಲೆಗೆ ಉಪನ್ಯಾಸಕರಾಗಿ ನೇಮಕಗೊಂಡರು.

ಶ್ರೀ ಬಿ.ಎಫ್. ಬಡಿಗೇರರವರು ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸುತ್ತ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಉತ್ತಮ ಶಿಲ್ಪಕಲಾವಿದರಾದ ಇವರು ನಕ್ಷಾಚಿತ್ರಣ, ವಸ್ತುಚಿತ್ರಣ, ಸ್ಟಿಲ್‌ಲೈಫ್, ಮೂರ್ತಿಶಿಲ್ಪಗಳನ್ನು ಮಣ್ಣು, ಮರ, ಶಿಲೆ, ಪ್ಲಾಸ್ಟರ್, ಸಿಮೇಂಟ್ ಹಾಗೂ ಪೇಪರ್ ಪಲ್ಪ ಮುಂತಾದ ಮಾಧ್ಯಮಗಳನ್ನು ಬಳಸಿಕೊಂಡು ಅನೇಕ ಮೂರ್ತಿಶಿಲ್ಪಗಳನ್ನು ರಚಿಸಿದ್ದಾರೆ. ಸರಳ ಸ್ವಭಾವದ ಶ್ರೀ ಬಡಿಗೇರರವರು ಯಾರಿಗೂ ಕೆಟ್ಟವರಾಗದೆ ಎಲ್ಲ ಉಪನ್ಯಾಸಕರಿಗೆ, ವಿದ್ಯಾರ್ಥಿಗಳಿಗೆ ಪ್ರೀತಿಯ ಗುರುಗಳಾಗಿ ಕಲಾಶಾಲೆಗೆ ತಮ್ಮದೆಯಾದ ಕಲಾಕೌಶಲ್ಯವನ್ನು ಧಾರೆಯೆರೆದಿದ್ದಾರೆ.[೨೦೩]

ಸದಾ ಕೆಲಸದಲ್ಲಿ ತೊಡಗುವ ಶ್ರೀ ಬಡಿಗೇರರವರು ಅನೇಕ ಅನುಭವ ಪಡೆದುಕೊಂಡು ತಮ್ಮದೆಯಾದ ರೀತಿಯ ಕಲಾಕೃತಿಗಳನ್ನು ರಚಿಸುವುದರ ಮೂಲಕ ಅನೇಕ ಶಿಲ್ಪಕಲಾಕೃತಿಗಳನ್ನು ರಚಿಸಿದ್ದಾರೆ. ಅನೇಕ ಕಲಾ ಪ್ರದರ್ಶನ ಮತ್ತು ಶಿಲ್ಪಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಲಕ್ಕುಂಡಿ ಉತ್ಸವದಲ್ಲಿ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿ ಉತ್ತಮವಾದ ಒಂದೇ ಅಖಂಡ ಶಿಲೆಯಲ್ಲಿ ಗಂಟೆ ಅದರೊಂದಿಗೆ ಸರಪಳಿಯನ್ನು ಶಿಲ್ಪಕಲಾ ಕೃತಿಯನ್ನು ರಚಿಸಿ ಅನೇಕ ಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಯ್ಕೆ ಮಾಡಿಕೊಂಡು ಉತ್ತಮ ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ. 'ರಾಧಾಕೃಷ್ಣ'ನ ಸಿಮೆಂಟ್ ಮಾಧ್ಯಮದಲ್ಲಿ ಗರಡು, ಕೃಷ್ಣ, ಎತ್ತು, ಮುಂತಾದ ಕಲಾಕೃತಿಗಳು ಪೇಪರ್ ಪಲ್ಪ ಮಾಧ್ಯಮದಿಂದ ಸುಂದರವಾದ ಮೂರ್ತಿಗಳನ್ನು ರಚಿಸಿದ್ದಾರೆ. ಶ್ರೀಯುತರು ಅನೇಕ ಮೂರ್ತಿ ಶಿಲ್ಪಗಳು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸಂಗ್ರಹಗೊಂಡಿವೆ. ಕುಂದಗೋಳ ತಾಲೂಕಿನ ಚಿಕ್ಕನರತಿ ಗ್ರಾಮದ ಶ್ರೀ ಕಲ್ಮೇಶ್ವರ ದೇವಾಲಯ, ಶ್ರೀ ಕಲ್ಮೇಶ್ವರ ರಥ, ರಾಮದುರ್ಗ ತಾಲೂಕಿನ ಸುರೇಬಾನ ಗ್ರಾಮದಲ್ಲಿ ಶ್ರೀ ಕಲ್ಮೇಶ್ವರ ದೇವಾಲಯದ ಶ್ರೀ ಕಲ್ಮೇಶ್ವರ ರಥ, ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಇಲಾಖಾಧಿಕಾರಿಗಳು, ಧಾರವಾಡ, ಸಹನಿರ್ದೇಶಕರು ಬೆಳಗಾವಿ, ಶ್ರೀ ಎಂ.ಆರ್. ಬಾಳಿಕಾಯಿ, ಶ್ರೀ ಡಿ.ವಿ. ಹಾಲಭಾವಿಯವರಿಗೆ ಕಾಣಿಕೆಯಾಗಿ ಮೂರ್ತಿಶಿಲ್ಪಗಳನ್ನು ನೀಡಿದ್ದು ಶಿಲ್ಪಕಲಾಕೃತಿಗಳು ಸಂಗ್ರಹಗೊಂಡಿವೆ.

---

೨೦೨. ಶ್ರೀ ಬಿ.ಎಫ್.ಬಡಿಗೇರ-ಸಂದರ್ಶನ ದಿನಾಂಕ ೨೬-೮-೨೦೦೭

೨೦೩. ಎಮ್.ಆರ್.ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಕೊಡುಗೆ ಪು.ಸಂ. ೪೯

ಹೀಗೆ ಸರಳ ಸ್ವಭಾವದ ಶ್ರೀ ಬಿ.ಎಫ್.ಬಡಿಗೇರ ಅವರು ಮರ, ಮಣ್ಣು, ಶಿಲೆ, ಪ್ಲಾಸ್ಟರ್, ಸಿಮೆಂಟ್ ಪೇಪರ್ ಪಲ್ಪ್ ಹೀಗೆ ಬಹುಮಾಧ್ಯಮಗಳಲ್ಲಿ ಅತ್ಯಂತ ಪ್ರಾವೀಣ್ಯತೆಯನ್ನು ಪಡೆದವರು. ತಮ್ಮ ಅಧ್ಯಾಪಕ ವೃತ್ತಿಯೊಂದಿಗೆ ಸದಾ ಮೂರ್ತಿಶಿಲ್ಪ ರಚನೆಯಲ್ಲಿ ತೊಡಗಿಕೊಂಡು ಬಂದವರಾಗಿದ್ದಾರೆ. ನಾಡಿನ ಹಿರಿಯ ಶಿಲ್ಪಕಲಾವಿದರಲ್ಲಿ ಒಬ್ಬರಾಗಿದ್ದಾರೆ. ಸೇವೆ ಸಲ್ಲಿಸುತ್ತಿರುವ ಶ್ರೀಯುತರು ಎಲೆ ಮರೆ ಕಾಯಿಯಂತೆ ಹಗಲಿರುಳು ಕಲಾಸೇವೆ ಮಾಡುತ್ತ ತಮ್ಮ ಕಲಾ ಸವೆಸುತ್ತಿರುವ ಶ್ರೀ ಬಿ.ಎಫ್.ಬಡಿಗೇರ ಅವರು ಒಬ್ಬ ಉತ್ತಮ ಮೂರ್ತಿಶಿಲ್ಪಕಲಾವಿದರಾಗಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯಕ್ಕೆ ಹಿರಿಯ ಅಧ್ಯಾಪಕರಾಗಿ ತಮ್ಮದೆಯಾದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

ಎಂ.ಆರ್. ಹೆಬ್ಬಳ್ಳಿ : ಶ್ರೀ ಎಂ.ಆರ್. ಹೆಬ್ಬಳ್ಳಿಯವರು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ತಂದೆ ರಹಿಮಾನಸಾಬ ತಾಯಿ ಅಮೀನಬಿ ಇವರ ಉದರದಲ್ಲಿ ಮೂವರು ಪುತ್ರಿಯರು ಹಾಗೂ ಇಬ್ಬರು ಪುತ್ರರಲ್ಲಿ ಕೊನೆಯವರಾಗಿ ೨೮-೫-೧೯೬೪ರಲ್ಲಿ ಜನಿಸಿದರು.

ತಂದೆ ರಹಿಮಾನಸಾಬರು ಉತ್ತಮ ನಾಟಕಕಕಾರರು. ಕರ್ನಾಟಕ ಘನ ಸರಕಾರದಿಂದ ೧೯೯೯ರಲ್ಲಿ ಪದ್ದಣ್ಣ ಶ್ರಮ ಪ್ರಶಸ್ತಿ ವಿಜೇತರು. ತಂದೆ ರಂಗಭೂಮಿಕಲಾವಿದರಾಗಿದ್ದರಿಂದ ನಾಟಕಗಳ ಪರದೆಯ ಮೇಲಿನ ಕಲಾಕೃತಿಗಳನ್ನು ನೋಡಿ ನಾಟಕದಲ್ಲಿ ಬರುವ ದೃಶ್ಯಗಳನ್ನು ನೋಡಿ ಕಲೆಯಲ್ಲಿ ಆಸಕ್ತಿ ಮೂಡಿಬರಲು ಪ್ರೇರಣೆಯಾಯಿತು. ಪ್ರಾಥಮಿಕ ಶಿಕ್ಷಣವನ್ನು ಹೊಂಬಳ ಗ್ರಾಮದಲ್ಲಿ ಮುಗಿಸಿ ಪ್ರೌಢಶಿಕ್ಷಣವನ್ನು ಕೆ.ಎಚ್.ಪಾಟೀಲ ಪ್ರೌಢಶಾಲೆಯಲ್ಲಿ ೧೯೮೦ರಲ್ಲಿ ಪೂರೈಸಿದರು. ಬಾಲ್ಯದಲ್ಲಿಯೇ ಕಲೆಯ ಗೀಳು ಅಂಟಿಕೊಂಡಿದ್ದ ಮೀರಾಸಾಬರು ಪ್ರೌಢಶಾಲಾ ಶಿಕ್ಷಕರು ಹಿರಿಯ ಕಲಾವಿದರಾದ ಶ್ರೀ ಎನ್.ಎ.ಹರ್ಲಾಪೂರ ಇವರ ಮಾರ್ಗದರ್ಶನದಿಂದ ಪ್ರೇರೇಪಿತರಾದವರು. ಶಾಲೆಯಲ್ಲಿ ಉತ್ತಮ ಕಲಾಕೃತಿಗಳನ್ನು ರಚಿಸುತ್ತಿದ್ದ ಬಾಲಕ ಮೀರಾಸಾಬರನ್ನು ಗಮನಿಸಿದ ಕಲಾಗುರು ಎನ್.ಎ.ಹರ್ಲಾಪೂರ ಅವರು ಉನ್ನತ ಚಿತ್ರಕಲಾ ಅಭ್ಯಾಸವನ್ನು ಮುಂದುವರೆಸಿ ಬದುಕನ್ನು ಕಟ್ಟಿಕೊಳ್ಳಲು ಪ್ರೋತ್ಸಾಹಿಸಿದರು. ಜೆ.ಎನ್.ಕಲಾಶಾಲೆಗೆ ೧೯೮೦ರಲ್ಲಿ ಡಿ.ಟಿ.ಸಿ. ತರಗತಿಗೆ ಪ್ರವೇಶ ಪಡೆದು ಕಲಾ ಅಧ್ಯಯನವನ್ನು ಪ್ರಾರಂಭಿಸಿದರು. ಅನೇಕ ಸ್ನೇಹಿತರೊಂದಿಗೆ ಬೆರೆತು ಉತ್ತಮ ಕಲಾಕೃತಿಗಳನ್ನು ರಚಿಸಲು ಪ್ರಾರಂಭಿಸಿದರು. ಪ್ರಾಚಾರ್ಯ ಎಂ.ಆರ್.ಬಾಗವಾನ ಮತ್ತು ಉಪನ್ಯಾಸಕರಾದ ಶ್ರೀ ಬಿ.ಎಫ್.ಬಡಿಗೇರ ಹಾಗೂ ಪರೀಕ್ಷೆ ಉಪನ್ಯಾಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದ ಎಲ್ಲ ಶಿಕ್ಷಕರ ಮಾರ್ಗದರ್ಶನದಲ್ಲಿ ಡಿ.ಎಂ.ಸಿ. ಪರೀಕ್ಷೆ ಮುಗಿಸಿದರು. ಇವರ ಕಲಾ ಪ್ರತಿಭೆಯನ್ನು ಮೆಚ್ಚಿ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ವತಿಯಿಂದ ಚಿಂಚಲಿ ಗ್ರಾಮದಲ್ಲಿ ಪ್ರಾರಂಭಿಸಲಾದ ಪ್ರೌಢಶಾಲೆಗೆ ಚಿತ್ರಕಲಾ ಶಿಕ್ಷಕರನ್ನಾಗಿ ಮೀರಾಸಾಬ ಹೆಬ್ಬಳ್ಳಿಯವರನ್ನು ನೇಮಕ ಮಾಡಿಕೊಂಡರು. ಒಂದು ವರ್ಷ ಇಲ್ಲಿ ಸೇವೆ ಸಲ್ಲಿಸಿ ಮುಂದೆ ೧೯೮೬ರಲ್ಲಿ ಆರ್ಟ್ ಮಾಸ್ಟರ್ ಪರೀಕ್ಷೆಯನ್ನು ಪಾಸುಮಾಡಿಕೊಂಡ ಇವರನ್ನು ಎ.ಬಿ.ಕೆ.ಎಸ್.ಸಂಸ್ಥೆಯ ಜೆ.ಎನ್.ಚಿತ್ರಕಲಾಶಾಲೆಯಲ್ಲಿ ೧೯೮೬ರಲ್ಲಿ ಉಪನ್ಯಾಸಕರೆಂದು ನೇಮಕಮಾಡಿಕೊಂಡರು.[೨೦೪] ಇಲ್ಲಿಂದ ಮೀರಾಸಾಬ ಹೆಬ್ಬಳ್ಳಿಯವರ ಕಲಾಬದುಕು ಹೊಸ ತಿರುವು ಪಡೆದುಕೊಂಡು ಮುನ್ನಡೆಯಿತು.

---

೨೦೪. ಎಮ್.ಆರ್.ಹೆಬ್ಬಳ್ಳಿ ಸಂದರ್ಶನ ದಿನಾಂಕ ೨೯-೧-೨೦೦೯

ಜೆ.ಎನ್.ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ಸೇವೆ ಪ್ರಾರಂಭಿಸಿದ ವರ್ಷದಲ್ಲಿಯೇ ಕಲಾಶಾಲೆಯ ವಿದ್ಯಾರ್ಥಿಗಳನ್ನು ಕಲಾಕೃತಿಗಲ ರಚನೆಯಲ್ಲಿ ಹೆಚ್ಚು ತೊಡಗುವಂತೆ ಮಾಡಿದರು. ಇದರ ಪರಿಣಾಮವಾಗಿ ಆ ವರ್ಷ ಅಂದರೆ ೧೯೮೭ರ ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯದಲ್ಲಿಯೇ ಹೆಚ್ಚು ಶೇಕಡಾ ಫಲಿತಾಂಶ ಪಡೆದ ಕಲಾಶಾಲೆಯೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ನಡೆಸಿ ಹೆಚ್ಚು ಕಲಾಕೃತಿ ರಚನೆಯಲ್ಲಿ ತೊಡಗಿಸುತ್ತಿದ್ದ ಎಂ.ಆರ್. ಹೆಬ್ಬಳ್ಳಿಯವರು ತಾವೂ ಸಹ ವಿದ್ಯಾರ್ಥಿಗಳೊಂದಿಗೆ ಕಲಾಕೃತಿಗಳ ರಚನೆಯಲ್ಲಿ ತೊಡಗಿರುತ್ತಿದ್ದರು.

ಹೆಬ್ಬಳ್ಳಿಯವರು ಜಲವರ್ಣ, ತೈಲವರ್ಣ, ಪೋಸ್ಟರ್ ಕಲರ್, ಅಕ್ರಾಲಿಕ್ ಮಾಧ್ಯಮದಿಂದ ಭಾವಚಿತ್ರ, ನಿಸರ್ಗ ಚಿತ್ರಗಳು, ಸ್ಟಿಲ್‌ಲೈಫ್, ಚಿತ್ರ ಸಂಯೋಜನೆ, ಯಥಾದರ್ಶನ ವಿಷಯಗಳಲ್ಲಿ ವಿಶೇಷ ಪರಿಣಿತಿ ಹೊಂದಿ ಬೋಧನೆ ಮಾಡುತ್ತಿದ್ದರು. ಉತ್ತಮ ಉಪನ್ಯಾಸಕರಾಗಿ ಕೆಲಸ ನಿರ್ವಹಿಸಿದ ಇವರಿಗೆ ೧೯೯೦ರಲ್ಲಿ ಒಂದು ವರ್ಷ ಹಾಗೂ ೨೦೦೩ರಲ್ಲಿ ಒಂದುವರ್ಷ ಪ್ರಭಾರಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಹೆಬ್ಬಳ್ಳಿಯವರಿಗೆ ಅಧ್ಯಾಪಕ ವೃತ್ತಿಯಲ್ಲಿಯೇ ಇವರಿಗೆ ಆಸಕ್ತಿ ಇದ್ದ ಕಾರಣ ಕಲಾಶಾಲೆಯಲ್ಲಿ ನಡೆಯುವ ಎಲ್ಲ ಕೆಲಸದಲ್ಲಿ ಭಾಗವಹಿಸಿ ಕಲಾಶಾಲೆಯ ಬೆಳವಣಿಗೆಯ ಪ್ರತಿಯೊಂದು ಹಂತದಲ್ಲಿಯೂ ಪ್ರಾಚಾರ್ಯರಿಗೆ ಸಹಾಯಕರಾಗಿ ಹಿರಿಯ ಉಪನ್ಯಾಶಕರಾಗಿ ಕೆಲಸ ಮಾಡಿದ್ದಾರೆ, ಮಾಡುತ್ತಿದ್ದಾರೆ, ಕಲಾಶಾಲೆಯ ಉಳಿವಿಗಾಗಿ ಹಗಲು ರಾತ್ರಿಯೆನ್ನದೇ ದುಡಿದು ಕಲಾಶಾಲೆಯ ಎಲ್ಲ ಚಟುವಟಿಕೆಗಳಲ್ಲಿ ಭಾಗಿಯಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀ ಎಂ.ಆರ್. ಹೆಬ್ಬಳ್ಳಿಯವರು ಸದಾ ಕಲಿಯುವ ಹಂಬಲದಲ್ಲಿಯೇ ಇರುವರು. ಇವರು ಎಂ.ವಿ.ಎ.ಸ್ನಾತಕೋತ್ತರ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ. ಅನೇಕ ಕಲಾಪ್ರದರ್ಶನ ಮಾಡಿದ್ದಾರೆ. ಗದಗ, ಧಾರವಾಡ, ಬೆಂಗಳೂರು, ಹುಬ್ಬಳ್ಳಿ, ಮೈಸೂರು, ಲಕ್ಕುಂಡಿ, ಪಟ್ಟದಕಲ್ಲು, ಆಂಧ್ರದ ಕುಪ್ಪಂನ ದ್ರಾವಿಡಿಯನ್ ವಿಶ್ವವಿದ್ಯಾಲಯ ಹೀಗೆ ಅನೇಕ ಕಡೆಗಳಲ್ಲಿ ಕಲಾಪ್ರದರ್ಶನ ಮಡಿದ್ದಾರೆ. ಗದಗ, ದಾವಣಗೆರೆ, ಕುಪ್ಪಂ, ಬೆಂಗಳೂರು, ಹಂಪಿ ಮುಂತಾದ ಕಡೆಗಳಲ್ಲಿ ಜರುಗಿದ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.[೨೦೫] ಅಲ್ಲದೆ ಶಿಕ್ಷಣ ಇಲಾಖೆಯಿಂದ ನಡೆದ ಹಲವಾರು ಚಿತ್ರಕಲಾ ಸ್ಪರ್ಧೆಯಲ್ಲಿ ನಿರ್ಣಾಯಕರಾಗಿ ಭಗವಹಿಸಿ ಸೇವೆ ಸಲ್ಲಿಸಿದ್ದಾರೆ. ಶ್ರೀ ಹೆಬ್ಬಳ್ಳಿಯವರು ರಚಿಸಿದ ಅನೇಕ ಸೃಜನಾತ್ಮಕ ಕಲಾಕೃತಿಗಳು ಬೇರೆ ಬೇರೆ ಕಡೆಗಳಲ್ಲಿ ಸಂಗ್ರಹಗೊಂಡಿವೆ. ಗದಗ, ಬೆಂಗಳೂರು, ಕುಪ್ಪಂ, ದಾವಣಗೆರೆ ಮುಂತಾದ ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಹೀಗೆ ಶ್ರೀ ಮಿರಾಸಾಬ ಹೆಬ್ಬಳ್ಳಿಯವರು ಕಲಾ ಉಪನ್ಯಾಸಕರಾಗಿ, ಕಲಾವಿದರಾಗಿ, ಚಿತ್ರಕಲಾ ಸ್ಪರ್ಧೆಗಳ ನಿರ್ಣಾಯಕರಾಗಿ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದಾರೆ.

ಎಂ.ಆರ್. ಹರ್ಲಾಪೂರ : ಶ್ರೀ ಎಂ.ಆರ್.ಹರ್ಲಾಪೂರ ಅವರು ೧-೬-೧೯೬೩ರಲ್ಲಿ ಗದುಗಿನಲ್ಲಿ ಜನಿಸಿದ್ದಾರೆ. ಪ್ರಾಥಮಿಕ ಪ್ರೌಢಶಿಕ್ಷಣವನ್ನು ಮಾಡೆಲೆ ಹೈಸ್ಕೂಲ್‌ನಲ್ಲಿ ಪೂರೈಸಿದರು. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿ ಇದ್ದ ಕಾರಣ ಇವರು ಉನ್ನತ ಚಿತ್ರಕಲಾ ಶಿಕ್ಷಣಕ್ಕೆ ಜೆ.ಎನ್.ಚಿತ್ರಕಲಾ

೨೦೫. ಅಶೋಕ ಅಕ್ಕಿ ಕೃತಪುರ ಕಲಾ ವೈಭವ ಚಿತ್ರ ಮತ್ತು ಶಿಲ್ಪ ಕಲಾವಿದ ಕೈಪಿಡಿ ಪು.ಸಂ. ೩೮

ಮಹಾವಿದ್ಯಾಲಯದಲ್ಲಿ ೧೯೮೨ರಲ್ಲಿ ಡಿ.ಎಂ.ಸಿ. ತರಗತಿಗೆ ಪ್ರವೇಶ ಪಡೆದರು. ವಿದ್ಯಾರ್ಥಿ ಜೀವನದಲ್ಲಿಯೇ ಅನೇಕ ಚಿತ್ರಗಳನ್ನು ರಚಿಸಿ ಉತ್ತಮ ವಿದ್ಯಾರ್ಥಿಯಾಗಿದ್ದರು. ಜಲವರ್ಣ, ತೈಲವರ್ಣ, ಮಿಶ್ರ ಮಾಧ್ಯಮದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ನೇಚರ, ವಸ್ತುಚಿತ್ರ, ಗ್ರಾಫಿಕ್, ಚಿತ್ರಸಂಯೋಜನೆ ಅವರ ಪ್ರೀತಿಯ ವಿಷಯಗಳಾಗಿದ್ದವು. ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿದವರು. ೧೯೮೭ರಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಪರೀಕ್ಷೆಯನ್ನು ಪಾಸುಮಾಡಿಕೊಂಡಿದ್ದಾರೆ.[೨೦೬] ಇವರು ವಿದ್ಯಾರ್ಥಿಯಾಗಿದ್ದಾಗ ಉತ್ತಮ ಕಲಾಕೃತಿಗಳನ್ನು ರಚಿಸುತ್ತಿದ್ದರು. ಇವರ ಕಲಾ ಪ್ರತಿಭೆಯನ್ನು ಮೆಚ್ಚಿ ತಾವು ಕಲಿತ ಕಲಾಶಾಲೆಯಲ್ಲಿ ಶ್ರೀ ಎಂ.ಆರ್. ಹರ್ಲಾಪೂರರವರು ಉಪನ್ಯಾಸಕರಾಗಿ ೧೯೮೭ರಲ್ಲಿ ಸೇವೆಗೆ ಸೇರಿದರು.

ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕವೃತ್ತಿ ಪ್ರಾರಂಭಿಸಿದ ನಂತರ ಹಲವಾರು ಕಲಾಶಿಬಿರ ಮತ್ತು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.[೨೦೭] ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಉತ್ತಮ ವಿದ್ಯಾರ್ಥಿಗಳನ್ನು ತಯಾರಿಸಿದ್ದಾರೆ. ಜೆ.ಎನ್.ಕಲಾಶಾಲೆಗೆ ಪ್ರಭಾರಿ ಪ್ರಾಚಾರ್ಯರಾಗಿ ೧೯೯೧ ರಿಂದ ೧೯೯೭ರ ವರೆಗೆ ಹಾಗೂ ೨೦೦೩-೦೪ನೇ ಸಾಲಿಗೆ ಇವರು ಪ್ರಭಾರಿ ಪ್ರಾಚಾರ್ಯ ಹುದ್ದೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು, ನಾಗಪುರ, ಗದಗ, ಮೈಸೂರು, ಹುಬ್ಬಳ್ಳಿ, ಲಕ್ಕುಂಡಿ, ಬಿಜಾಪುರ, ಪಟ್ಟದಕಲ್ಲು ಮುಂತಾದ ಕಡೆಗಳಲ್ಲಿ ಜರುಗಿದ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಅದಲ್ಲದೆ ಅನೇಕ ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಗದಗ, ಲಕ್ಕುಂಡಿ, ಆಳವಾಸ್ ಕಲಾಶಿಬಿರ ಮೂಡಬಿದರಿ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ ಹೀಗೆ ಮುಂತಾದ ಕಡೆಗಳಲ್ಲಿ ಜರುಗಿದ ಕಲಾಶಿಬಿರಗಳಲ್ಲಿ ಭಾಗವಹಿಸಿ ಉತ್ತಮ ಕಲಾಕೃತಿಗಳನ್ನು ರಚಿಸದ್ದಾರೆ. ೭ನೇ ರಾಜ್ಯಮಟ್ಟದ ಕುಂಚ ಸ್ಪರ್ಧೆ ಧರ್ಮಸ್ಥಳ, ಕನಕದಾಸರ ಕೀರ್ತನೆಯ ಮೇಲೆ ಚಿತ್ರಕಲಾ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಾರೆ. ಅಲ್ಲದೆ ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ.

ಶ್ರೀ ಎಂ.ಆರ್.ಹರ್ಲಾಪೂರ ಅವರು ರಚಿಸಿದ ಕಲಾಕೃತಿಗಳು ಬೆಂಗಳೂರು, ಗದಗ, ಗಜೇಂದ್ರಗಡ ಅಲ್ಲದೆ ಹಲವಾರು ನಗರ ಪಟ್ಟಣಗಳಲ್ಲಿ ಗಣ್ಯರ ಮನೆಯಲ್ಲಿ ಸಂಗ್ರಹಗೊಂಡಿವೆ. ಚಿತ್ರಕಲೆಯಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿ ಸೃಜನಾತ್ಮಕ ಕಲಾಕೃತಿಗಳನ್ನು ರಚಿಸಿ ತಮ್ಮದೆಯಾದ ಬಣ್ಣಗಾರಿಕೆಯನ್ನು ಮೈಗೂಡಿಸಿಕೊಂಡಿರುವ ಹರ್ಲಾಪೂರರವರು ಚಿತ್ರಕಲೆಯಲ್ಲಿ ಅನೇಕ ವಿಷಯಗಳನ್ನು ತಿಳಿದುಕೊಂಡವರು. ಜೆ.ಎನ್.ಕಲಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅನೇಕ ಸಾಮಾಜಿಕ ಕೆಲಸಗಳನ್ನು ಮಾಡಿ ಚಿತ್ರಕಲೆಗೆ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದಾರೆ.

ವ್ಹಿ.ವಾಯ್. ಸೋಮನಕಟ್ಟಿ : ಶ್ರೀ ವಿ.ವೈ.ಸೋಮನಕಟ್ಟಿಯವರು ೧-೬-೧೯೬೫ರಲ್ಲಿ ಆಗಿನ ಬಿಜಾಪುರ ಜಿಲ್ಲೆ ಹಾಗೂ ಇಂದಿನ ಬಾಗಲಕೋಟೆ ಜಿಲ್ಲೆಯ ಐತಿಹಾಸಿಕ ಪ್ರಸಿದ್ಧ ಸ್ಥಳವಾದ ಪಟ್ಟದಕಲ್ಲಿನ ಗ್ರಾಮೀಣ ಪರಿಸರದಲ್ಲಿ ಜನಿಸಿದ ಇವರು ಪ್ರಾಥಮಿಕ ಶಿಕ್ಷಣವನ್ನು ಪಟ್ಟದಕಲ್ಲಿನಲ್ಲಿಯೂ ಪ್ರೌಢಶಿಕ್ಷಣವನ್ನು

---

೨೦೬. ಎಮ್.ಆರ್.ಹರ್ಲಾಪೂರ ದಾಖಲಾತಿಗಳಿಂದ ಸಂಗ್ರಹದಿಂದ

೨೦೭. ಎಮ್.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಕಲಾ ಶಾಲೆಯ ಕೊಡುಗೆ ಪು.ಸಂ.೬೨

ಬಾದಾಮಿಯಲ್ಲಿ ಪೂರೈಸಿದ್ದಾರೆ. ಚಿಕ್ಕಂದಿನಲ್ಲಿಯೇ ಕಲೆಕಡೆಗೆ ಒಲವು ಬೆಳೆಯಿಸಿಕೊಂಡ ಸೋಮನಕಟ್ಟಿಯವರು ಪಟ್ಟದಕಲ್ಲಿನ ದೇವಾಲಯಗಳ ಸಂಕೀರ್ಣಗಳ ಕಲಾವೈಭವದೊಂದಿಗೆ ಬಾಲ್ಯವನ್ನು ಕಳೆದವರು ಇದರಿಂದ ಇವರು ಕಲೆಯ ಕಡೆಗೆ ಹೆಚ್ಚು ಒಲವು ಹೊಂದಲು ಕಾರಣವಾಯಿತಲ್ಲದೇ ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ಜೆ.ಎನ್. ಕಲಾಶಾಲೆಯಲ್ಲಿ ಡಿ.ಎಂ.ಸಿ.ತರಗತಿಗೆ ಪ್ರವೇಶ ಪಡೆಯುವುದರೊಂದಿಗೆ ತಮ್ಮ ಕಲಾ ಅಧ್ಯಯನವನ್ನು ಪ್ರಾರಂಭಿಸಿದರು. ಚಿತ್ರಕಲೆಯ ಜೊತೆಗೆ ಇವರು ದೈವದತ್ತವಾಗಿ ಬಂದ ಸಂಗೀತ ಕಲೆಯನ್ನೂ ಮೈಗೂಡಿಸಿಕೊಂಡವರು. ಸುಗಮ ಸಂಗೀತ, ಭಾವಗೀತೆ, ಜನಪದ ಗೀತೆಗಳನ್ನು ತಮ್ಮ ಸುಶ್ರಾವ್ಯ ಕಂಠಶಿರಿಯಿಂದ ಹಾಡುತ್ತರಾರೆ. ಡಿ.ಎಂ.ಸಿ. ಎರಡು ವರ್ಷದ ಚಿತ್ರಕಲಾ ಅಭ್ಯಾಸ ಮಾಡಿ ಬೆಳಗಾವಿಯ ಖ್ಯಾತ ಚಿತ್ರಕಲಾವಿದರೂ ಛಾಯಾಚಿತ್ರಕಾರರೂ ಆದ ಶ್ರೀ ಹಾಸಲಕರ ಅವರ ಸ್ಟುಡಿಯೋದಲ್ಲಿ ಸೇರಿಕೊಂಡು ಅವರ ಛಾಯಾಚಿತ್ರ ರಚನಾ ಕಾರ್ಯದಲ್ಲಿ ಕಲಾವಿದರಾಗಿಯೂ ಛಾಯಾಚಿತ್ರಕಾರರಾಗಿಯೂ ಸೇವೆ ಮಾಡತೊಡಗಿದರು.[೨೦೮] ಖ್ಯಾತ ಕಲಾವಿದರ ಕೈಯಲ್ಲಿ ಪಳಗಿದ ಸೋಮನಕಟ್ಟಿಯವರು ಚಿತ್ರಕಲಾ ಅಧ್ಯಯನವನ್ನು ಪೂರ್ಣಗೊಳಿಸಬೇಕೆಂದು ಆಶಿಸಿ ಮತ್ತೆ ಜೆ.ಎನ್.ಚಿತ್ರಕಲಾ ಶಾಲೆಯಲ್ಲಿ ಪ್ರವೇಶ ಪಡೆದು ಅಧ್ಯಯನ ಮಾಡಿ ಆರ್ಟ್ ಮಾಸ್ಟರ್ ಪರೀಕ್ಷೆಯನ್ನು ೧೯೯೨ರಲ್ಲಿ ಪೂರೈಸಿದರು. ಸರಳ ಮತ್ತು ಚುರುಕು ವ್ಯಕ್ತಿತ್ವವನ್ನು ಹೊಂದಿದ ಸೋಮನಕಟ್ಟಿಯವರು ೧೯೯೩ರಲ್ಲಿ ತಾವು ಕಲಾ ಅಧ್ಯಯನ ಮಾಡಿದ ಜೆ.ಎನ್.ಕಲಾಶಾಲೆಯಲ್ಲಿಯೇ ಅಧ್ಯಾಪಕರಾಗಿ ಸೇವೆಗೆ ಸೇರಿದರು.

೧೯೯೩ ರಿಂದ ಶ್ರೀ ಸೋಮನಕಟ್ಟಿಯವರು ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಪ್ರಾರಂಭಿಸಿದ ಇವರು ಉತ್ತಮ ಸೃಜನಾತ್ಮಕ ಶೈಲಿಯ ಮತ್ತು ನೈಜ ಶೈಲಿಯ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ತಮ್ಮ ಕಲಾಕೌಶಲ್ಯವನ್ನು ಧಾರೆ ಎರೆದಿದ್ದಾರೆ. ಜಲವರ್ಣ, ತೈಲವರ್ಣ, ಅಕ್ರಾಲಿಕ್ ಮಾಧ್ಯಮಗಳಲ್ಲಿ ಪರಿಣಿತಿಯನ್ನು ಪಡೆದ ಇವರು ಉತ್ತಮ ಕಲಾಕೃತಿಗಳಣ್ನು ರಚನೆ ಮಾಡಿದ್ದಾರೆ. ಭವಚಿತ್ರ, ನಿಸರ್ಗಚಿತ್ರ, ಸೃಜನ ಚಿತ್ರಗಳ ರಚನೆಯಲ್ಲಿ ಇವರು ಸಿದ್ಧಹಸ್ತರು. ಇವರು ಅನೇಕ ಕಲಾಪ್ರದರ್ಶನ, ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.[೨೦೯] ಸದಾ ಕಲಿಯುವ ಮತ್ತು ಕಲಿಸುವ ತವಕದಲ್ಲಿರುವ ಸೋಮನಕಟ್ಟಿಯವರು ಎಂ.ವಿ.ಎ. ಸ್ನಾತಕೋತ್ತ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯದಿಂದ ಪಡೆದುಕೊಂಡಿದ್ದಾರೆ. ಸ್ನಾತಕೋತ್ತರ ಪದವಿಯನ್ನು ಪೂರೈಸಿದ ಇವರು ತಾವು ಸಂಪಾದಿಸಿದ ಕಲಾಕೌಶಲ್ಯವನ್ನು ವಿದ್ಯಾರ್ಥಿಗಳಿಗೆ ಬೋಧನೆಯ ಮೂಲಕ ಪಸರಿಸಿದ್ದಾರೆ. ಸೃಜನಾತ್ಮಕ ಮತ್ತು ಸಾಂಪ್ರದಾಯಿಕ ಶೈಲಿಯಲ್ಲಿ ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಹಾಗೂ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿ ಉತ್ತಮ ಕಲಾಕೃತಿಗಳನ್ನು ರಚಿಸಿ ಬಹುಜನರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಗದಗ, ಪಟ್ಟದಕಲ್ಲು, ಧಾರವಾಡ, ಬೆಂಗಳೂರು, ಹುಬ್ಬಳ್ಳಿ, ಹಂಪಿ ಮುಂತಾದ ಪ್ರದೇಶಗಳಲ್ಲಿ ಇವರ ಕಲಾಕೃತಿಗಳು

---

೨೦೮. ವ್ಹಿ. ವಾಯ್. ಸೋಮನಕಟ್ಟಿ ದಾಖಲಾತಿಗಳಿಂದ ಸಂಗ್ರಹದಿಂದ

೨೦೯. ಎಮ್.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಚಿತ್ರಕಲಾ ಶಾಲೆಯ ಕೊಡುಗೆ ಪು.ಸಂ. ೭೩

ಪ್ರದರ್ಶನಗೊಂಡಿವೆ. ಬೆಂಗಳೂರು, ಹಂಪಿ ಹುಬ್ಬಳ್ಳಿ, ಬೆಳಗಾವಿ, ಲಕ್ಕುಂಡಿ, ಮೈಸೂರುಗಳಲ್ಲಿ ಜಗುರಿದ ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಕಲಾಕೃತಿಗಳು ರಾಜ್ಯದ ಅನೇಕ ನಗರ ಪಟ್ಟಣಗಳಲ್ಲಿ ಸಂಗ್ರಹಗೊಂಡಿವೆ.[೨೧೦]

ಶ್ರೀ ಸೋಮನಕಟ್ಟಿಯವರು ಅನೇಕ ಸಂಘ ಸಂಸ್ಥೆಗಳಿಂದ ಗೌರವಿಸಲ್ಪಟ್ಟಿದ್ದಾರೆ. ಇವರ ಕಲಾಕೃತಿಗಳು ನೋಡುಗರಿಗೆ ಬಹುವಿಶಿಷ್ಟತೆಯನ್ನು ಮೂಡಿಸಿ ಮೂಕವಿಸ್ಮಿತರನ್ನಾಗಿ ಮಾಡುತ್ತವೆ. ಇವರು ರಚಿಸುವ ಶೈಲಿಯಲ್ಲಿ ಹೊಸತನವನ್ನು ಕಾಣಲಾಗುತ್ತದೆ. ಇವರು ತಮ್ಮ ಕಲಾಕೃತಿಗಳನ್ನು ರಚಿಸಲು ಪೂರ್ವ ಸಿದ್ದತೆಯೊಂದಿಗೆ ಅನೇಕ ವಿಷಯಗಳನ್ನು ಚರ್ಚಿಸಿ ಅಧ್ಯಯನ ಮಾಡಿ ಕಲಾಕೃತಿ ರಚನೆ ಮಾಡುವುದು ಶ್ರೀ ಸೋಮನಕಟ್ಟಿಯವರ ತಂತ್ರವಾಗಿದೆ.

ಹೀಗೆ ಶ್ರೀ ಸೋಮನಕಟ್ಟಿಯವರು ತಮ್ಮದೆಯಾದ ಕೊಡುಗೆಯನ್ನು ಚಿತ್ರಕಲಾ ಕ್ಷೇತ್ರಕ್ಕೆ ನೀಡಿದ್ದಾರೆ. ಸದಾ ಸ್ನೇಹಿತರೊಂದಿಗೆ ಬೆರೆಯುವ ಇವರು ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದ ಬೆಳವಣಿಗೆಗೆ ತಮ್ಮ ಪಾಲಿನ ಬಹುಮುಖ್ಯ ಸೇವೆಯನ್ನು ಸಲ್ಲಿಸಿದ್ದಾರೆ. ಇವರೂ ಸಹ ಕೆಲವು ತಿಂಗಳುಗಳ ಕಾಲ ಈ ಕಲಾಶಾಲೆಯ ಪ್ರಭಾರಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಉತ್ತಮ ಕಲಾವಿದರೂ ಕಲಾ ಉಪನ್ಯಾಸಕರೂ ಆದ ಇವರು ವಿದ್ಯಾರ್ಥಿಗಳ ಪ್ರೀತಿಯ ಗುರುವಾಗಿ ಮಾರ್ಗದರ್ಶಕರಾಗಿ ತಮ್ಮ ವೃತ್ತಿ ಜೀವನವನ್ನು ಸವೆಸುತ್ತಿದ್ದಾರೆ.

ಎಸ್.ಎನ್. ಹರ್ಲಾಪೂರ : ಶ್ರೀ ಸಂಗಮೇಶ ಎನ್. ಹರ್ಲಾಪೂರ ಇವರು ಗದುಗಿನ ಹಿರಿಯ ಚಿತ್ರ ಹಾಗೂ ಶಿಲ್ಪಕಲಾವಿದರಾದ ಶ್ರೀ ಎನ್.ಎ. ಹರ್ಲಾಪೂರ ಇವರ ಜೇಷ್ಠ ಸುಪುತ್ರರಾಗಿ ಗದುಗಿನಲ್ಲಿ ೧೯-೧೨-೧೯೬೬ರಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಚಿತ್ರಕಲೆಯ ಗೀಳು ಅಂಟಿಕೊಂಡಿದ್ದ ಸಂಗಮೇಶ ತಂದೆ ಚಿತ್ರಕಲಾ ಶಿಕ್ಷಕರಾಗಿರುವುದರಿಂದ ಅವರ ಕಲಾಕೃತಿಗಳ ರಚನೆಯಿಂದ ಪ್ರಭಾವಿತರಾಗಿ ಚಿತ್ರಕಲೆಯ ಕಡೆಗೆ ಹೆಚ್ಚಿನ ಒಲವು ತೋರಲು ಕಾರಣವಾಯಿತು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಗದಗನಲ್ಲಿ ಪೂರೈಸಿ ಉನ್ನತ ಚಿತ್ರಕಲಾ ಅಭ್ಯಾಸಕ್ಕಾಗಿ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯಕ್ಕೆ ಡಿ.ಎಂ.ಸಿ.ತರಗತಿಗೆ ಪ್ರವೇಶ ಪಡೆದು ಕಲಾ ಅಧ್ಯಯನ ಮಾಡತೊಡಗಿದರು.[೨೧೧] ವಿದ್ಯಾರ್ಥಿ ಇದ್ದಾಗಲೇ ಅನೇಕ ಸುಂದರ ಪುಸ್ತಕಗಳ ಮುಖಪುಟಗಳನ್ನು ಮಾಡಿದ್ದಾರೆ. ಸಂಗಮೇಶರವರು ಭಾವಚಿತ್ರ, ನಿಸರ್ಗಚಿತ್ರ, ಸ್ಮರಣಚಿತ್ರ, ಸಂಯೋಜನಾ ಚಿತ್ರ, ಸೃಜನಚಿತ್ರ ಈ ಎಲ್ಲ ವಿಷಯಗಳಲ್ಲಿಯೂ ಗಣನೀಯವಾಗಿ ಪ್ರಭುತ್ವ ಹೊಂದಿದವರು ತಾವೊಬ್ಬ ಉತ್ತಮ ಕಲಾವಿದನಾಗಬೇಕು ಎಂಬ ಇಚ್ಚೆ ಇತ್ತು. ಸರಳ ಸುಂದರವಾದ ರೇಖೆಗಳ ಮೂಲಕ ಜಲವರ್ಣ, ತೈಲವರ್ಣ, ಅಕ್ರಾಲಿಕ್, ಪೇಸ್ಟಿಲ್ ಮುಂತಾದ ಮಾಧ್ಯಮಗಳಿಂದ ಕಲಾಕೃತಿಗಳನ್ನುರಚಿಸುತ್ತಿದ್ದರು ಎಲ್ಲರ ಆತ್ಮೀಯ ಸ್ನೇಹಿತರಾಗಿ ಪ್ರೀತಿಯ ವಿದ್ಯಾರ್ಥಿಯಾಗಿ ಸಂಗಮೇಶರವರು ಆರ್ಟ್ ಮಾಸ್ಟರ್ ಡಿಪ್ಲೋಮಾ ಚಿತ್ರಕಲಾ ಪದವಿಯನ್ನು ಪಡೆದುಕೊಂಡರು.

---

೨೧೦. ಪ್ರಾ. ಅಶೋಕ ಅಕ್ಕಿ ಕೃತಪೂರ ಕಲಾ ವೈಭವ ಕೈಪಿಡಿ ಪು.ಸಂ. ೫೧

೨೧೧. ಪ್ರಾ. ಅಶೋಕ ಅಕ್ಕಿ ಕೃತಪೂರ ಕಲಾ ವೈಭವ ಕೈಪಿಡಿ ಪು.ಸಂ. ೬೭

ಶ್ರೀ ಸಂಗಮೇಶ ಹರ್ಲಾಪೂರ ಅವರು ಕಲಾ ಪ್ರತಿಭೆಯನ್ನು ಮೆಚ್ಚಿ ಜೆ.ಎನ್.ಕಲಾಶಾಲೆಗೆ ಉಪನ್ಯಾಸಕರಾಗಿ ೧೯೯೩ರಲ್ಲಿ ಉಪನ್ಯಾಸಕರಾಗಿ ಸೇವೆಗೆ ನೇಮಕಾತಿ ಹೊಂದಿದರು ಜೆ.ಎನ್.ಕಲಾಶಾಲೆಗೆ ಅಧ್ಯಾಪಕರಾಗಿ ಉತ್ತಮವಾದ ಕಲೆಸ ಮಾಡುವುದರ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಇವರ ರೇಖೆಗಳು ಅತಿ ಸರಳ ಮತ್ತು ಸುಂದರವಾಗಿದ್ದು ಎಲ್ಲರಿಗೆ ಪ್ರಿಯವಾಗಿವೆ. ಸರಳ ಸ್ವಭಾವದವರಾದ ಇವರು ಜಲವರ್ಣದಲ್ಲಿ ಭಾವಚಿತ್ರವನ್ನು ತದ್ರೂಪವಾಗಿ ರಚಿಸುವ ದೈವಿಶಕ್ತಿಯನ್ನು ಪಡೆದುಕೊಂಡಿದ್ದಾರೆ ಎನ್ನಬಹುದು. ಯಾರಿಗೂ ಬೇಸರತರದೆ ಸದಾ ಕಲಾಕೃತಿಗಳನ್ನು ರಚಿಸುವ ಕಾರ್ಯದಲ್ಲಿ ತೊಡಗಿಕೊಳ್ಳುವ ಇವರು ಅನೇಕ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ. ಯಾವಾಗಲೂ ಕಲಿಸುವ ಕಲಿಯುವ ಹಂಬಲದಲ್ಲಿರುವ ಇವರು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಎಂ.ವಿ.ಎ. ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ.

ಸೃಜನಾತ್ಮಕ ಕ್ರಿಯಾಶೀಲರಾದ ಸಂಗಮೇಶರವರು ಕಲಾಕೃತಿಗಳನ್ನು ರಚಿಸುವುದರ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಅನೇಕ ಕಡೆಗಳಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನ ಮಾಡಿದ್ದಾರೆ. ಗದಗ, ಗಜೇಂದ್ರಗಡ, ಬಾಗಲಕೋಟೆ, ಕಪ್ಪಳ, ಧಾರವಾಡ, ಬೆಳಗಾವಿ, ಬೆಂಗಳೂರು, ಮತ್ತು ಕುವೆಂಪು ತಿರುಗಾಟ ಪ್ರದರ್ಶನ, ಪಟ್ಟದಕಲ್ಲು, ಉತ್ಸವ, ಲಕ್ಕುಂಡಿ ಉತ್ಸವ, ಕರ್ನಾಟಕ ಲಲಿತಕಲಾ ಅಕಾಡೆಮಿ ಆಯೋಜಿಸಿದ ನಿಮ್ಮೊಂದಿಗೆ ನಾವು ಹೀಗೆ ಹಲವಾರು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.[೨೧೨]

ಜಲವರ್ಣ ಕಲಾಶಿಬಿರ ಹಂಪಿ, ಲಕ್ಕುಂಡಿ ಉತ್ಸವ, ಸೌಹಾರ್ಧ ಕಲಾಶಿಬಿರ, ಬೆಳಗಾವಿ, ವಿಜಾಪುರ, ಕರ್ನಾಟಕ ಕಲಾಮೇಳ ಬೆಂಗಳೂರು, ೭೬ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಗದಗ, ನೀರಲ್ಲಿ ಭಿತ್ತಿಚಿತ್ರಕಲಾ ಶಿಬಿರ, ಲಕ್ಕುಂಡಿ ಮುಂತಾದ ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಶಿಬಿರಗಳಲ್ಲಿ ಭಾಗವಹಿಸಿ ಜನಮನ್ನಣೆ ಗಳಿಸಿದ್ದಾರೆ. ಸಂಗಮೇಶರು ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿದ್ದು, ಅನೇಕ ಮಠಮಾನ್ಯಗಳಲ್ಲಿ ಸಂಗ್ರಹಗೊಂಡಿವೆ. ಬೆಂಗಳೂರು, ಬೆಳಗಾವಿ, ಧಾರವಾಡ, ಅಮೇರಿಕಾ, ಗದಗ, ಹಂಪಿ ಮುಂತಾದ ಅನೇಕ ಗಣ್ಯಮಾನ್ಯರ ಮನೆಗಳಲ್ಲಿ ಸಾಧು ಸತ್ಪುರುಷರ ಅನೇಕ ಕಲಾಕೃತಿಗಳು ಬೇರೆ ಬೇರೆ ಸ್ಥಳಗಳಲ್ಲಿ ಸಂಗ್ರಹಗೊಂಡಿವೆ. ಅನೇಕ ಚಿತ್ರಕಲಾ ಸ್ಪರ್ಧೆಗಳ ನಿರ್ಣಾಯಕರಾಗಿ ಸೇವೆ ಸಲ್ಲಿಸಿದ್ದಾರೆ.

ಪಿ.ಬಿ. ಬಂಡಿ : ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಅಮೀನಗಡದಲ್ಲಿ ೧೫-೪-೧೯೬೮ರಲ್ಲಿ ಜನಿಸಿದ ಪ್ರಕಾಶ ಬಂಡಿಯವರ ತಂದೆಯವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸಿದವರು. ಇವರು ತಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಅಮೀನಗಡದಲ್ಲಿಯೇ ಪೂರೈಸಿದರು. ಬಾಲ್ಯದಲ್ಲಿಯೇ ಚಿತ್ರಕಲೆಯ ಕಡೆಗೆ ಒಲವು ಇದ್ದ ಕಾರಣ ಇವರಿಗೆ ಶಿಕ್ಷಕರಾದ ತಂದೆ ಬಸಪ್ಪ ಬಂಡಿಯವರು ಮಗನಿಗೆ ಚಿತ್ರಕಲಾ ಅಭ್ಯಾಸ ಮಾಡಿಸುವುದು ಸೂಕ್ತವೆಂದು ಅರಿತು ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ಗದುಗಿನ ವಿಜಯ ಕಲಾಮಂದಿರಕ್ಕೆ ಪ್ರವೇಶ ಪಡೆಯಲು ಕರೆದುಕೊಂಡು ಬಂದರು. ಡಿ.ಎಂ.ಸಿ. ತರಗತಿಗೆ ಪ್ರವೇಶ ಪಡೆದ ಪ್ರಕಾಶರವರು ಡಿ.ಎಂ.ಸಿ. ದ್ವಿತೀಯ

---

೨೧೨. ಪ್ರಾ. ಅಶೋಕ ಅಕ್ಕಿ ಕೃತಪೂರ ಕಲಾ ವೈಭವ ಕೈಪಿಡಿ ಪು.ಸಂ. ೩೮

ವರ್ಷವನ್ನು ಎಲ್ಲ ಗುರುಗಳ ಮಾರ್ಗದರ್ಶನದಲ್ಲಿ ಉತ್ತಮ ಶ್ರೇಣಿಯಲ್ಲಿ ಪಾಸು ಮಾಡಿಕೊಂಡರು. ನಂತರ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಮೂರನೆಯ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ತರಗತಿಗೆ ಪ್ರವೇಶ ಪಡೆದು ಕಲಾ ಅಧ್ಯಯನ ಮಾಡತೊಡಗಿದರು. ೧೯೯೧ರಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಪರೀಕ್ಷೆ ಹಾಗೂ ೧೯೯೨ರಲ್ಲಿ ಪೇಂಟಿಂಗ್ ಡಿಪ್ಲೋಮಾ ಪದವಿಯನ್ನು ಪಾಸುಮಾಡಿಕೊಂಡರು.[೨೧೩] ಇವರು ವಿದ್ಯಾರ್ಥಿಯಾಗಿದ್ದಾಗ ಅನೇಕ ಉತ್ತಮವಾದ ಕಲಾಕೃತಿಗಳನ್ನು ರಚಿಸುತ್ತಿದ್ದರು. ಪ್ರಕಾಶರವರ ಕಲಾಪ್ರತಿಭೆಯನ್ನು ಗಮನಿಸಿದ ಶ್ರೀ ಜಿ.ಎನ್.ಜಾಡಗೌಡರು ಜೆ.ಎನ್.ಕಲಾಶಾಲೆಗೆ ಉಪನ್ಯಾಸಕರನ್ನಾಗಿ ೧೯೯೩ರಲ್ಲಿ ನೇಮಕಮಾಡಿಕೊಂಡರು. ಅಂದಿನಿಂದ ಪ್ರಕಾಶ ಬಸಪ್ಪ ಬಂಡಿಯವರ ವೃತ್ತಿಜೀವನ ಪ್ರಾರಂಭವಾಯಿತು.

ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯಕ್ಕೆ ಅದ್ಯಾಪಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ವಸ್ತುಚಿತ್ರ, ನಿಸರ್ಗಚಿತ್ರ, ಯಥಾದರ್ಶನ, ಕಲಾ ಇತಿಹಾಸ, ಕಲಾಶಿಕ್ಷಣ ಇವರ ಮೆಚ್ಚಿನ ವಿಷಯಗಳಾಗಿವೆ. ಕಲಾ ಇತಿಹಾಸದಲ್ಲಿ ವಿಶೇಷವಾದ ಅಧ್ಯಯನ ಮಾಡಿ ವರ್ಗದಲ್ಲಿ ವಿದ್ಯಾರ್ಥಿಗಳಿಗೆ ಮನಮುಟ್ಟುವ ರೀತಿಯಲ್ಲಿ ಬೋಧನೆ ಮಾಡುತ್ತಾರೆ. ಉತ್ತಮ ಬರಹಗಾರರಾದ ಇವರು ಅನೇಕ ಲೇಖನಗಳನ್ನು ಬರೆದಿದ್ದಾರೆ. ಅನೇಕ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದಾರೆ. ಹಾಗೂ ಅನೇಕ ಕಲಾ ಇತಿಹಾಸಕ್ಕೆ ಸಂಬಂಧಪಟ್ಟ ಉಪನ್ಯಾಸಗಳನ್ನು ಮಾಡಿದ್ದಾರೆ. ಕಲಾಶಾಲೆಯ ಬೆಳವಣಿಗೆಗೆ ಪ್ರಾಚಾರ್ಯರ ಜೊತೆಗೂಡಿ ಸಾಕಷ್ಟು ಕೆಲಸ ನಿರ್ವಹಿಸುತ್ತಿದ್ದಾರೆ. ಶ್ರೀ ಪ್ರಕಾಶ ಬಂಡಿಯವರು ಜೆ.ಎನ್.ಕಲಾಶಾಲೆಯ ಪ್ರಭಾರಿ ಪ್ರಾಚಾರ್ಯರಾಗಿ ಹಲವು ದಿನಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಸದಾ ಕಲಿಯುವ ಹಂಬಲದಲ್ಲಿರುವ ಪಿ.ಬಿ.ಬಂಡಿಯವರು ಕನ್ನಡ ವಿಶ್ವವಿದ್ಯಾಲಯದಿಂದ ಎಂ.ವಿ.ಎ. ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ. ಅನೇಕ ಸೃಜನಾತ್ಮಕ ಕಲಾಕೃತಿಗಳನ್ನು ರಚಿಸಿದ್ದಾರೆ. ಅನೇಕ ಕಡೆ ಪ್ರಕಾಶ ಬಂಡಿಯವರು ಉತ್ತಮವಾದ ಕಲಾಕೃತಿಗಳ ಪ್ರದರ್ಶನ, ಶಿಬಿರಗಳಲ್ಲಿ ಭಗವಹಿಸಿದ್ದಾರೆ.

ಶ್ರೀ ಪಿ.ಬಿ. ಬಂಡಿಯವರು ಅನೇಕ ರಾಜ್ಯಮಟ್ಟದ ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಗಜೇಂದ್ರಗಡ, ಧಾರವಾಡ, ಗದಗ, ಇಳಕಲ್ಲ, ಬೆಂಗಳೂರು, ಮೈಸೂರು ಮತ್ತು ಲಕ್ಕುಂಡಿ ಉತ್ಸವ, ಸುವರ್ಣ ಸಂಸ್ಕೃತಿ ದಿಬ್ಬಣ ಗದಗ ೨ನೇ ಕರ್ನಾಟಕ ಕಲಾಮೇಳ ಬೆಂಗಳೂರು, ಹಾಗೂ ಧಾರವಾಡ ಸರಕಾರಿ ಆರ್ಟ್‌ಗ್ಯಾಲರಿ, ಇಳಕಲ್ಲಿನ ವಿಜಯ ಚಿತ್ರಕಲಾ ಮಹಾವಿದ್ಯಾಲಯದ ದಶಮಾನೋತ್ಸವ ಕಲಾಪ್ರದರ್ಶನ, ೭ನೇ ಕರ್ನಾಟಕ ಕಲಾಮೇಳ ಬೆಂಗಳೂರು, ಚಿತ್ರಸಂತೆ ಬೆಂಗಳೂರು, ಸ್ಪಂದನ ಕಲಾಪ್ರದರ್ಶನ ಗದಗ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕಲಾಪ್ರದರ್ಶನ ಗದಗ ಹೀಗೆ ಹಲವಾರು ಕಡೆಗಳಲ್ಲಿ ಕಲಾಪ್ರದರ್ಶನಗಳಲ್ಲಿ ಬಂಡಿಯವರು ಕಲಾಪ್ರದರ್ಶನ ಮಾಡಿದ್ದಾರೆ.

ಪ್ರಕಾಶ ಬಂಡಿಯವರು ಅನೇಕ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಜಲವರ್ಣ ಕಾರ್ಯಾಗಾರ ಹಂಪಿ, ಗ್ರಾಫಿಕ್ ಕಾರ್ಯಾಗಾರ ಗದಗ, ರಾಜ್ಯಮಟ್ಟದ ಚಿತ್ರಕಲಾ ಶಿಬಿರ ತೋಂಟದಾರ್ಯಮಠ ಗದಗ, ಸಂಯೋಜನಾ ಕಾರ್ಯಾಗಾರ ಧಾರವಾಡ, ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರ ಮೌಂಟ್‌ಅಬು,

೨೧೩. ಪ್ರಕಾಶ ಬಂಡಿ ದಾಖಲಾತಿಗಳ ಸಂಗ್ರಹದಿಂದ

ಲಲಿತಕಲಾ ಅಕಾಡೆಮಿ ಕಲಾಶಿಬಿರ ಗದಗ, ಅಖಿಲ ಭಾರತ ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಲಾಶಿಬಿರ ಗದಗ ಮುಂತಾದ ಅನೇಕ ಕಲಾಶಿಬಿರಗಳಲ್ಲಿ ಭಗವಹಿಸಿ ಕಲಾಕೃತಿ ರಚನೆ ಮಾಡಿದ್ದಾರೆ. ಅಲ್ಲದೇ ಅನೇಕ ಚಿತ್ರಕಲಾ ಸ್ಪರ್ಧೆಯಲ್ಲಿ ನಿರ್ಣಾಯಕರಾಗಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡಿದ್ದಾರೆ. ಅನೇಕ ಸಂಘ ಸಂಸ್ಥೆಗಳಲ್ಲಿ ಸಾಮಾಜಿಕ ಕೆಲಸ ಮಾಡಿದ್ದಾರೆ ಕರ್ನಾಟಕ ರಾಜ್ಯ ಲಿಂಗವಂತ ನೌಕರರ ಸಂಘ ಗದಗ, ಇದರ ಸಂಘಟಿಕರಾಗಿ ಲಿಂಗವಂತ ನೌಕರರ ಸಹಕಾರಿ ಪತ್ತಿನ ಸಂಘದ ನಿರ್ದೇಶಕರಾಗಿ, ಶ್ರೀ ನೀಲಕಂಠೇಶ್ವರ ವಿದ್ಯಾವರ್ಧಕ ಸಂಘ ಗದಗ, ಬಸವಕೇಂದ್ರ, ಕನ್ನಡ ಸಾಹಿತ್ಯ ಪರಿಷತ್ ಮುಂತಾದವುಗಳ ಸದಸ್ಯರಾಗಿದ್ದಾರೆ.[೨೧೪] ಶ್ರೀ ಪ್ರಕಾಶ ಬಂಡಿಯವರು ಹತ್ತು ಹಲವು ಕಲಾಪ್ರದರ್ಶನ, ಶಿಬಿರ, ಕಾರ್ಯಗಾರ, ಉಪನ್ಯಾಸ ನೀಡುವುದರ ಜೊತೆಗೆ ಉತ್ತಮ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಅನೇಕ ಕಲಾಕೃತಿಗಳು ಗದಗ, ಬೆಂಗಳೂರು, ಹಂಪಿ, ಧಾರವಾಡ ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿವೆ.

ಹೀಗೆ ಪ್ರಕಾಶ ಬಂಡಿಯವರು ಅನೇಕ ಕಲಾಚಟುವಟಿಕೆಗಳನ್ನು ಮಾಡುವುದರ ಜೊತೆಗೆ ಹೆ.ಎನ್.ಕಲಾಶಾಲೆಯಲ್ಲಿ ಉತ್ತಮ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತ ಗದಗ ಜಿಲ್ಲೆಗೆ ತಮ್ಮದೆಯಾದ ಕೊಡುಗೆಯನ್ನು ನೀಡುತ್ತಿದ್ದಾರೆ.

ಎನ್.ಟಿ. ಮಾಳವದಕರ : ನಂದಕುಮಾರ ಮಾಳವದಕರರವರು ದಿನಾಂಕ ೨೭-೩-೧೯೭೦ರಲ್ಲಿ ಹುಬ್ಬಳ್ಳಿಯಲ್ಲಿ ಜನಿಸಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಹುಬ್ಬಳ್ಳಿಯಲ್ಲಿ ಮುಗಿಸಿದರು. ಬಾಲ್ಯದಲ್ಲಿಯೇ ಅನೇಕ ಚಿತ್ರಗಳನ್ನು ರಚಿಸುತ್ತಿದ್ದ ಇವರ ಕಲೆಯನ್ನು ಗಮನಿಸುತ್ತಿದ. ತಂದೆ ತುಕಾರಾಮ ಮಾಳವದಕರ ಇವರಿಂದ ಧಾರವಾಡದ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ. ಧಾರವಾಡ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ತನ್ನ ವರ್ಣಚಿತ್ರ ಇಲ್ಲಿ ಹಚ್ಚಬೇಕೆಂದು ನಿರ್ಧರಿಸಿದ. ಉನ್ನತ ಚಿತ್ರಕಲಾ ಶಿಕ್ಷಣಕ್ಕಾಗಿ ನಂದಕುಮಾರನೀಗೆ ಧಾರವಾಡ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯಕ್ಕೆ ಪ್ರವೇಶ ಕೊಡಿಸಿದರು. ಚಿತ್ರಕಲಾ ಅಭ್ಯಾಸ ಉತ್ತಮ ರೀತಿಯಲ್ಲಿ ಮಾಡಿ ಅನೇಕ ಸ್ನೇಹಿತರ ಗುರುಗಳ ಪ್ರಿತೀಯಿಂದ ಶಿಷ್ಯರಾಗಿ. ಮಾಸ್ಟರ ಡಿಪ್ಲೋಮಾ ಮತ್ತು ಡ್ರಾಯಿಂಗ್ ಮತ್ತು ಪೇಂಟಿಗ್ ಪದವಿಯನ್ನು ಪಾಸುಮಾಡಿದರು. ವಸ್ತು ಚಿತ್ರ ಸ್ಥಿರ ಚಿತ್ರ ನಿಸರ್ಗ ಚಿತ್ರ ಯಥಾದರ್ಶನ, ಮತ್ತು ಕಲಾ ಇತಿಹಾಸ ವಿಷಯದಲ್ಲಿ ವಿಶೇಷವಾದ ಅಧ್ಯಯನಮಾಡಿದ ನಂದಕುಮಾರ ಚಿತ್ರವರೂ ಕಲಾವಿದ ಅಧ್ಯಪಕರಾಗಲು ಅರ್ಹರಾಗಿದ್ದರು.

"ತಂದೆಯ ಸ್ನೇಹಿತರಾದ ಶ್ರೀ ಜೆ.ಎನ್. ಜಾಡಗೌಡರ ಮತ್ತು ಸಂಸ್ಥೆಗೆ ಉತ್ತಮಕಲಾ ಉಪನ್ಯಾಸಕರ ಬೇಕಾಗಿದೆ ಎಂದು ಕೆಳಿದಾಗ ನಂದಕುಮಾರ ನನ್ನಮಗ ಎಂದು ಪರಿಚಿಯಿಸಿದರು"[೨೧೫] ಅವರ ಕಲಾಕೃತಿಗಳನ್ನು ಗಮನಿಸಿದ ಜಾಡಗೌಡರು ಜೆ.ಎನ್.ಶಾಲೆಗೆ ಉಪನ್ಯಾಸಕರಾಗಿ ನೇಮಕಾತಿ ಆದೇಶ ನೀಡಿದರು.

---

೨೧೪. ಪ್ರಾ. ಅಶೋಕ ಅಕ್ಕಿ ಕೃತಪುರ ಕಲಾ ವೈಭವ ಪು.ಸಂ. ೩೦

೨೧೫. ಎಮ್.ಆರ್. ಹೆಬ್ಬಳ್ಳಿ ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್.ಚಿತ್ರಕಲಾ ಶಾಲೆಯ ಕೊಡುಗೆ ಪು.ಸಂ. ೭೧

೧೯೯೩ರಲ್ಲಿ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆಗೆ ಸೇರಿದರು, ಉತ್ತಮ ಕಲಾಕೃತಿ ರಚಿಸಿದರ ಮೂಲಕ ವಿದ್ಯಾರ್ಥಿಗಳಿಗೆ ಬೋಧನೆಮಾಡುವುದರ ಮೂಲಕ ಉತ್ತಮ ಸೇವೆ ಮಾಡತೋಡಗಿದರು. ಮುಗ್ದ ವಯಸಿನವರಾದ ಮಾಳವದಕರ ಅನೇಕೆ ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆನೋಡಿ ಅನೇಕ ವಿದ್ಯಾರ್ಥಿಗಳಿಗೆ ಪ್ರಿತಿಯ ಗುರುಗಳಾದರು. ಎಲ್ಲ ಉಪನ್ಯಾಸಕರಿಗೆ ಪ್ರೇತಿಯಿಂದ ಕಂಡರು ಹೀಗೆ ಎಲ್ಲರ ಪ್ರೀತಿಗೆ ಪಾತ್ರರಾದ ನಂದಕುಮಾರರವರು ಅನೇಕ ಕಲಾ ಕೃತಿಗಳನ್ನು ಕ್ಯಾನ್ವಸ್ ಮೇಲೆ ತೈಲವರ್ಣ, ಅಕ್ರಾಲಿಕ ಮದ್ಯವರಿಂದ "ಅವರ ಡಾಟರ" "ನನ್ನ ಮಗಳು" ಎಂಬ ಶಿರ್ಶಿಕೆಯಲ್ಲಿ ಅನೇಕ ವಿಬಿನ್ನರೀತಿಯ ವರ್ಣರಂಜಿತ ಕಲಾಕೃತಿಯನ್ನು ರಚಿಸಿದ್ದಾರೆ ತಮ್ಮ ಮಗಳು ಹೋಲುವರೀತಿಯಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ ಹೆಣ್ಣಿನ ಷೋಷಣೆ ಸಾಮಾಜಿಕಳಕಳಿ ಜಾನಪದ ನೃತ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಅಯ್ಕೆ ಮಾಡಿಕೊಂಡು ಸರಳ ರೇಖೆಗಳ ಮೂಲಕ ಹಲವಾರೂ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ.

ನಂದಕರರವರು ಯಾವಾಗಲು ಕಲಿಸುವ ಮತ್ತು ಕಲಿಯುವ ಹಂಬಲದಲ್ಲಿ ಇವರು ಚಿತ್ರಕಲೆಯಲ್ಲಿ ಎಂ.ವ್ಹಿ.ಎ ಸ್ನಾತಕೋತ್ತರ ಪದವಿಯನ್ನು ಸೇವಾನೀರತ ಅಧ್ಯಾಪಕರಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಪಡೆದುಕೊಂಡರು. ಈ ಪದವಿಯಿಂದ ಕಲಾಚಿತ್ರ ರಚನೆಯನ್ನು ಕಲಾ ಇತಿಹಾಸ ವಿಷಯದಲ್ಲಿ ಹೆಚ್ಚಿನಆಸಕ್ತಿ ಹೊಂದಿದರು 'ಅಧ್ಯಪಕ ವೃತ್ತಿಯೊಂದಿಗೆ ಅನೇಕ ಕಲಾ ಚಟುವಟಿಕೆಯಲ್ಲಿ ಭಗವಹಿಸಿ ಕಲಾಶಾಲೆ ಬೆಳವಣಿಯಲ್ಲಿ ಇವರು ಉತ್ತಮ ಸೇವೆಸಲ್ಲಿಸುತ್ತಿದ್ದಾರೆ' ಯಾವುದೇ ಕೆಲಸ ಹೆಳಿದರು ಜವಾಬ್ದಾರಿಯಿಂದ ಕೆಲಸ ಮಾಡುವ ಪ್ರವೃತ್ತಿವಳವರಾಗಿದ್ದಾರೆ. ಜೆ.ಎನ್ ಕಲಾ ಶಾಲೆಯ ಗ್ರಂಥಾಲಯದ ಮುಖ್ಯಸ್ಥರಾಗಿ ೧೯೯೮ರಿಂದ ಉತ್ತಮ ಕೆಲಸ ಮಾಡುತ್ತಿದ್ದಾರೆ. ಕಲಿಸುವುದರ ಜೊತೆಗೆ ಅನೇಕ ಕಲಾಕೃತಿಗಳನ್ನು ರಚಿಸಿ ಹಲವಾರು ಕಡೆಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ."[೨೧೬] ಧಾರವಾಡ, ಪಟ್ಟದಕಲ್ಲು ಗದಗ, ಬಿಜಾಪುರ, ಹಾಗೂ ಬೆಂಗಳೂರು" ಗೋವಾ, ಲಕ್ಕುಂಡಿ, ಹುಬ್ಬಳ್ಳಿ, ಬೆಳಗಾಂವ, ಹಂಪಿ ಮುಂತಾದ ಅನೇಕ ಕಡೆ ಕಲಾಪ್ರದರ್ಶನವನ್ನು ಮಾಡಿದ್ದಾರೆ.

ನಂದಕುಮಾರ ಮಾಳವದಕರರವರು ಅನೇಕ ಕಲಾಕೃತಿಗಳನ್ನು ರಚಿಸಿ, ವಿದ್ಯಾಥಿಗಳಿಗೆ ಬೋಧನೆ ಮಾಡುತ್ತ ಪ್ರಾಮುಖ್ಯತೆಯನ್ನು ತಡೆದಿದ್ದಾರೆ. ಹಲವಾರು ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಕಾಂಪೋಜಿಷನ್ ಧಾರವಾಡ, ವರ್ಣ ಮೇಳ ಕಲಾಶಿಬಿರ, ಗ್ರಾಫಿಕ್, ವರ್ಕ್‌ಶಾಫ್ ಗದಗ, ಕರ್ನಾಟಕ ಲಲಿತಕಲಾ ಅಕಾಡಮಿ ಗ್ರಾಫಿಕ್ ಕಾರ್ಯಗಾರ" ಕಲಾಶಿಬಿರ ಕನ್ನಡ ವಿಶ್ವವಿದ್ಯಾಲಯ ಹಂಪಿ, ಸೌಹಾರ್ದಾ ಕಲಾಶಿಬಿರ ಹುಬ್ಬಳ್ಳಿ ಮುಂತಾದ ಅನೇಕ ಕಲಾ ಶಿಬಿರದಲ್ಲಿ ಭಾಗವಹಿಸಿ ಉತ್ತಮ ಕಲಾಕೃತಿಗಳನ್ನು ರಚಿಸಿ. ಕಲಾಪ್ರಾವಿಣ್ಯತೆ ಪಡೆದುಕೊಂಡಿದ್ದಾರೆ. ಇವರ ಅನೇಕ ಕಲಾಕೃತಿಗಳು, ಗದಗ, ಹುಬ್ಬಳ್ಳಿ ಬೆಳಗಾಂವ, ಬೆಂಗಳೂರು, ಗೋವಾ, ಧಾರವಾಡ, ಮುಂತಾದ ಸ್ಥಳಗಳಲ್ಲಿ ಸಂಗ್ರಹಗೊಂಡಿವೆ. ಹೀಗೆ ನಂದಕುಮಾರರವರು ಅನೇಕ ಕಲಾಕೃತಿ ರಚಿಸುವುದರ ಜೋತೆಗೆ ಉತ್ತಮ ಬೋಧನೆ ಮಾಡುತ್ತಾ ಕಲಾ ಕ್ಷೇತ್ರಕ್ಕೆ ತಮ್ಮದೆಯಾದ ಕಲಾ ಕೊಡುಗೆಯನ್ನು ನೀಡಿದ್ದಾರೆ.

---

೨೧೬. ಎನ್.ಟಿ. ಮಾಳವದಕರ ಅವರ ದಾಖಲಾತಿಗಳಿಂದ

ಪಿ.ಎಸ್. ಲಕ್ಕುಂಡಿ : ಪಂಚಪ್ಪ ಶ್ರೀ ಶೈಲಪ್ಪ ಲಕ್ಕುಂಡಿ ಇವರು ಗದಗ ಬೆಟಗೇರಿಯಲ್ಲಿ ದಿನಾಂಕ ೨೦-೭-೧೯೭೦ರಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿ ಕಲೆಯ ಗೀಳುಗಿದ್ದ ಪಂಚಪ್ಪ ಪ್ರಾಥಮಿಕ ಶಿಕ್ಷಣವನ್ನು ಬೆಟಗೇರಿಯಲ್ಲಿ ಮುಗಿಸಿ. ಪ್ರೌಢಶಿಕ್ಷಣವನ್ನು ಗದಗ ನಗರದ ಮಾಡೆಲ್ ಹೈಸ್ಕೂಲಿನಲ್ಲಿ ಪೂರೈಸಿದರು. ಉನ್ನತ ಚಿತ್ರಕಲಾ ಅಭ್ಯಾಸ ಮಾಡಬೇಕೆಂದು ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದರು. ಉತ್ತಮಕಲಾ ಶಿಕ್ಷಣ ಪಡೆಯುತ್ತ ಉತ್ತಮ ವಿದ್ಯಾರ್ಥಿಯಾಗಿ ಕಲಾಕೃತಿಗಳನ್ನು ರಚಿಸತೊಡಗಿದರು. ನಿಸರ್ಗಚಿತ್ರ ವಸ್ತು ಚಿತ್ರಣ ಭಾವಚಿತ್ರಣ, ಪೂರ್ಣಭಾವಚಿತ್ರ, ವಿಶೇಷವಾಗಿ ಯಥಾದರ್ಶನವು ಇವರ ಅತಿಪ್ರೀಯ ವಿಷಯವಾಗಿತ್ತು ಅಲ್ಲದೆ. ನವ್ಯ ಶೈಲಿಯಲ್ಲಿ ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸುತ್ತ ಎಲ್ಲ ಸ್ನೇಹಿತರ ಶಿಕ್ಷಕರ ಆತ್ಮೀಯರಾಗಿ ೧೯೯೧ರಲ್ಲಿ ಆರ್ಟ್‌ಮಾಸ್ಟರ್ ಡಿಪ್ಲೋಮಾ ಮತ್ತು ೧೯೯೨ರಲ್ಲಿ ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಪಡೆದುಕೊಂಡರು.[೨೧೭]

ಪಂಚಪ ಲಕ್ಕುಂಡಿಯವರ ಕಲಾ ಕೌಶ್ಯಲ್ಯವನ್ನು ಮೆಚ್ಚಿದ ಸಂಸ್ಥೆಯವರು ತಾವುಕಲಿತ ಶಾಲೆಯಲಿಯೇ ಅಧ್ಯಾಪಕರಾಗಿ ಸೇವೆಗೆ ಸೆರಲು ಆದೇಶ ನೀಡಿದರು. ೧೯೯೩ರಲ್ಲಿ ಸೇವೆಗೆ ಸೇರಿ ಅಧ್ಯಾಪಕರ ವೃತ್ತಿ ಪ್ರಾರಂಭಿಸಿದರು. ಶ್ರೀ ಲಕ್ಕುಂಡಿಯವರು ವಿದ್ಯಾರ್ಥಿಗಳಿಗೆ ನಿಸರ್ಗಚಿತ್ರ ಭಾವಚಿತ್ರ, ಸಂಯೋಜನಾಚಿತ್ರ, ಯಥಾದರ್ಶನವನ್ನು ಮನಮಟ್ಟಿರುವಂತೆ ಭೋಧನೆ ಮಾಡುತ್ತಾರೆ. ಜಲವರ್ಣ, ತೈಲವರ್ಣ ಅಕ್ರಾಲಿಕ್ ಮಾಧ್ಯಮದಿಂದ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಸದಾ ಕ್ರಿಯಾಶಿಲರಾದ ಪಂಚಾಪ್ಪ ಚಿತ್ರಕಲಾ ಬೋಧನೆಯ ಜೊತೆಗೆ ಕಂಪ್ಯೂಟರ ವಿಷಯದಲ್ಲಿ ವಿಶೇಷವಾದ ಅಧ್ಯಯನ ಮಾಡಿದ್ದಾರೆ. ತಂತ್ರಜ್ಞಾನದ ಬಳಕೆಯ ಕುರಿತು ವಿಡಿಯೋ ಎಡಿಟಿಂಗ್ ಮಾಡುವದು ಎನಮೇಶ್‌ನ ಕುರಿತು, ವಿದ್ಯಾರ್ಥಿಗಳಿಗೆ ಕಂಪ್ಯೂಟರ ಭೋಧನೆಯು ಉತ್ತಮರೀತಿಯಲ್ಲಿ ಮಾಡುತ್ತಿದ್ದಾರೆ.

ಅತ್ಯಅವಶ್ಯಕವಾದ ಕಂಪ್ಯೂಟರ ಶಿಕ್ಷಣವನ್ನು ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ವಿಶೇಷವಾದ ಅಧ್ಯಯನಮಾಡಿ ವಿದ್ಯಾರ್ಥಿಗಳಿಗೆ ಕಲಿಸಬೇಕು ಇದರ ಜೋತೆ ತಾವು ಕಲಿಯಬೇಕು ಎಂಬ ಹಾತುರದಲ್ಲಿರುವ ಲಕ್ಕುಂಡಿಯವರು ಪ್ರತಿದೀನ ಹೊಸಹೊಸ ತಾಂತ್ರಿಕತೆಗೆ ಅಧ್ಯಯನಮಾಡಿ ವಿದ್ಯಾರ್ಥಿಗಳಿಗೆ ಹೇಳುತ್ತ ಕಂಪ್ಯೂಟರ ಶಿಕ್ಷಣವನ್ನು ಉತ್ತಮ ರೀತಿಯಲ್ಲಿ ಭೋಧನೆಮಾಡುತ್ತ ಕಂಪ್ಯೂಟರ ವಿಭಾಗದ ಮುಖ್ಯಸ್ಥರಾಗಿ ಉತ್ತಮವಾದ ಸೇವೆಸಲ್ಲಿಸುತ್ತಿದ್ದಾರೆ.

ಸದಾ ಕಲಿಕೆಯನ್ನು ಬಯಸುವ ಲಕ್ಕುಂಡಿಯವರು ಕಂಪ್ಯೂಟರ ಅಧ್ಯಯನದಂತೆ ಎಂ.ಫ್ಹಿ.ಎ ಸ್ನಾತಕೋತ್ತರ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಡೆದುಕೊಂಡಿದ್ದಾರೆ. ಇದರಿಂದ ಅನೇಕ ಹೊಸ ಹೊಸ ವಿಷಯಗಳು ಯಾವ ರೀತಿಯಲ್ಲಿ ಕಲಾವಿದ ಅರಿತುಕೊಳ್ಳಬೇಕು ಎಂಬುದಾಗಿ ವಿದ್ಯಾರ್ಥಿಗಳಿಗೆ ಭೋಧನೆಯನ್ನು ಮಾಡುವುದನ್ನು ತಿಳಿದುಕೊಂಡಿದ್ದಾರೆ ಸದಾ ಹಸನನ್ಮಾಖಾರಾದ ಶ್ರೀ ಪಿ.ಎಸ್. ಲಕ್ಕುಂಡಿಯವರು ಕಲಿಸುತ್ತ ಅನೇಕ ಕಲಾಕೃತಿಗಳನ್ನು ರಚನೆಮಾಡಿ ಬೇರೆ ಬೇರೆ ಸ್ಥಳಗಳಲ್ಲಿ ಪ್ರದರ್ಶನಮಾಡಿದ್ದಾರೆ.

"ಶ್ರೀ ಪಿ.ಎಸ್.ಲಕ್ಕುಂಡಿಯವರು ಉತ್ತಮ ಕಲಾಕೃತಿಗಳನ್ನು ರಚಿಸಿದಲ್ಲದೇ ಅನೇಕ ಕಲಾಪ್ರದರ್ಶನ ಹಾಗೂ ಕಲಾ ಶಿಬಿರಗಳಲ್ಲಿ ಭಾಗ ವಹಿಸಿದ್ದಾರೆ.[೨೧೮] ಅವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ

೨೧೭. ಪ್ರಾ. ಅಶೋಕ ಅಕ್ಕಿ ಕೃತಪೂರ ಕಲಾ ವೈಭವ ಕೈಪಿಡಿ ಪು.ಸಂ. ೪೬

೨೧೮. ಪಿ.ಎಸ್. ಲಂಕ್ಕುಂಡಿ ದಾಖಲಾತಿಗಳ ಸಂಗ್ರಹದಿಂದ

ನೀಡಲಾಗಿದೆ" ಪಟ್ಟದಕಲ್ಲು ಗದಗ, ಲಕ್ಕುಂಡಿ ಉತ್ಸವ, ಕಲರ್‌ಸ್ಕೋರ್ ಕಲಾಪ್ರದರ್ಶನ ಧಾರವಾಡ, ಚಿತ್ರಸಂತೆ ಬೆಂಗಳೂರು, ಸ್ಪಂದನ ಕಲಾಪರಿಷತ್ ಕಲಾ ಪ್ರದರ್ಶನ್ ಗದಗ, ಹುಬ್ಬಳ್ಳಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಅಖಿಲಭಾರತ ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಲಾಪ್ರದರ್ಶನ ಮುಂತಾದ ಹಲವಾರು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

ಉತ್ತಮ ಕಲಾಕೃತಿಗಳನ್ನು ರಚಿಸುತ್ತ ಅನೇಕ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. "ಗ್ರಾಫಿಕ್ ಕ್ಯಂಪ ಗದಗ, ಚಿತ್ರಕಲಾ ಶಿಬಿರ (ಮೌಂಟ ಅಬು) ರಾಜಸ್ಥಾನ ಹಾಗೂ ಲಲಿತಕಲಾ ಅಕಾಡೆಮಿ ಕಲಾಶಿಬಿರ" ಅಖಿಲ ಭಾರತ ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನ, ಕಲಾಶಿಬಿರ, ಲಕ್ಕುಂಡಿ ಉತ್ಸವ ಕಲಾ ಶಿಬಿರ, ಹುಬ್ಬಳ್ಳಿ ಬೆಂಗಳೂರ, ಧಾರವಾಡ, ಮುಂತಾದ ಹಲವು ಕಲಾ ಶಿಬಿರಗಳಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರೌಡಿಮೆಯನ್ನು ಸಾಬಿತು ಪಡಿಸಿಕೊಂಡಿದ್ದಾರೆ. ಶ್ರೀ ಪಿ.ಎಸ್. ಲಕ್ಕುಂಡಿಯವರು ರಚಿಸಿದ ತೈಲವರ್ಣ ಜಲವರ್ಣದ, ಅಂಕ್ರಾಲೀಕ್ ಮಾಧ್ಯಮದ ಹಲವಾರು ಕಲಾಕೃತಿಗಳು ಬೇರೆ ಬೇರೆ ಸ್ಥಳಗಳಲ್ಲಿ ಸಂಗ್ರಹ ಗೊಂಡಿವೆ ಗದಗ, ಧಾರವಾಡ, ಬೆಂಗಳೂರು ಬೆಳಗಾಂವ ಹಂಪಿ, ಮುಂತಾದ ಅನೇಕ ಕಡೆ ಸಂಗ್ರಹಗೊಂಡಿವೆ. ಹೀಗೆ ಬಹು ಮುಖ ಪ್ರತಿಭೆಯನ್ನು ಹೊಂದಿದೆ ಪಿ.ಎಸ್. ಲಕ್ಕುಂಡಿಯವರು ತಮ್ಮದೆ ಆದ ವಿಶಿಷ್ಟವಾದ ಅಳಿಲು ಸೇವೆ ಮಾಡುತ್ತ ಕಲಾಶಾಲೆಗೆ ಮತ್ತು ಗದಗ ಜಿಲ್ಲೆಗೆ ಉತ್ತಮವಾದ ಕೊಡುಗೆಯನ್ನು ನೀಡಿದ್ದಾರೆ.

ವ್ಹಿ.ಎಲ್. ಬೆಳಗಲಿ : ವಿಜಯಕುಮಾರ, ಲಿಂಗಪ್ಪ ಬೆಳಗಲಿಯವರು ೧೯೬೫ ಮೇ ೭ ರಂದು ಗದಗಿನಲ್ಲಿ ಜನಿಸಿದ್ದಾರೆ. ವಿಜಯಕುಮಾರ ಬಾಲ್ಯದಲ್ಲಿ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದವರಾಗಿದ್ದರು ಪ್ರಾಥಮಿಕ ಶಾಲೆಯಲ್ಲಿರುವಾಗ ಅನೇಕ ಚಿತ್ರಗಳನ್ನು ಬರೆಯುತ್ತಿದ್ದರು. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಗದುಗಿನ ಮಾಡೆಲ್ ಹೈಸ್ಕೂಲನಲ್ಲಿ ಪೂರೈಸಿದರು. ಮುಂದೆ ಉನ್ನತ ಚಿತ್ರಕಲಾ ಶಿಕ್ಷಣಕ್ಕಾಗಿ ಜೆ.ಎಸ್. ಚಿತ್ರಕಲಾ ಮಹಾವಿದ್ಯಾಲಯಕ್ಕೆ ಪ್ರವೇಶಪಡೆದು ಚಿತ್ರಕಲಾ ಅಧ್ಯಯನ ಮಾಡತೊಡಗಿದರು.[೨೧೯] ಎಂ.ಆರ್. ಭಾಗವಾನ ಬಿ.ಎಫ್.ಬಡಿಗೇರಿ ಎಂ.ಆರ್. ಹೆಬ್ಬಳ್ಳಿ ಎಂ.ಆರ್. ಹರ್ಲಾಪೂರ ಇವರ ಕೈಯಲ್ಲಿ ವಿಜಯಕುಮಾರ ಚಿತ್ರಕಲಾ ಅಭ್ಯಾಸ ಮಾಡಿದ್ದಾರೆ. ಸದಾ ಸ್ನೇಹ ಜೀವಿಯಾದ ಇವರು ಯಾವಾಗಲು ಶಿಸ್ತಿನ ಸಿಪಾಯಿಯಾಗಿದ್ದಾರೆ. ಶಿಸ್ತು ಇವರ ಉತ್ತಮ ಭವಿಷ್ಯ ನೀಡಿತು. ವಸ್ತುಚಿತ್ರ, ಸಂಯೋಜನಾ ಚಿತ್ರ ಭಾವಚಿತ್ರ, ಸ್ಥಿರಚಿತ್ರಗಳು ಹಾಗೂ ಯಥಾದರ್ಶನ ಇವರಿಗೆ ಅತಿಪ್ರಿಯವಾದ ವಿಷಯವಾಗಿತ್ತು ಜಲವರ್ಣ ತೈಲವರ್ಣ ಮಾಧ್ಯಮದಿಂದ ಉತ್ತಮ ಕಲಾಕೃತಿಗಳನ್ನು ರಚಿಸುತ್ತಿದ್ದರು. ತಾವು ಕಲಿತ ಶಾಲೆಯಲ್ಲಿಯೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಲು ಅವಕಾಶ ಬಂತು.

೧೯೯೩ರಲ್ಲಿ ಸೇವೆಗೆ ಸೇರಿದ ವಿಜಯಕುಮಾರ ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆ ಮಾಡುತ್ತ ಜೀವನದಲ್ಲಿ ಯಾವ ರೀತಿ ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳುಕೊಡುತ್ತಿದ್ದರು ವಿದ್ಯಾರ್ಥಿಗಳಿಗೆ ತಮಗೆ ಕಲಿಸಿದ ಗುರುಗಳಿಗೆ ಎಂದು ಮರೆಯಬಾರದು ಒಳ್ಳೆಯದನ್ನು ಪಡೆದುಕೊಂಡು ಜೀವನ ಸಾಗಿಸುವ ನೀತಿ ಭೊಧನೆಯನ್ನು ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ವೇಷ ಭೂಷಣಗಳು ಉತ್ತಮ ರೀತಿಯಲ್ಲಿ ಧರಿಸುತ್ತಿದ ಇವರು ಯಾವಾಗಲು ಶಿಸ್ತಿನಂದ ಇರುತ್ತಾರೆ. ಎಲ್ಲ ವಿದ್ಯಾರ್ಥಿಗಳಿಗೆ

೨೧೯. ಪ್ರಾ. ಅಶೋಕ ಅಕ್ಕಿ ಕೃತಪೂರ ಕಲಾ ವೈಭವ ಕೈಪಿಡಿ ಪು.ಸಂ. ೪೪

ತಮ್ಮಕಡೆ ಸೇಳೆಯುವ ಆಕರ್ಷಣೆ ಇವರಲ್ಲಿದೆ. ಇವರು ಭಾವಚಿತ್ರ ಮತ್ತು ಸ್ಥಿರಚಿತ್ರದಲ್ಲಿ ವಿಶೇಷವಾದ ಅಧ್ಯಯನಮಾಡಿ ಇದೆ ವಿಷಯವನ್ನು ವಿದ್ಯಾರ್ಥಿಗಳಿಗೆ ಭೂಧನೆ ಮಾಡುತ್ತಾರೆ ಅನೇಕ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಿದ್ದಾರೆ. [೨೨೦]

ವಿ.ಎಲ್.ಬೆಳಗಲಿಯವರು ಕಲಾ ಶಾಲೆಯ ಅನೇಕ ಚಟುವಟಿಕೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಕ್ರೀಡೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ ಇವರು ಕ್ರೀಡೆ ಚಟುವಟಿಗಳನ್ನು ವಿದ್ಯಾಲಯದಲ್ಲಿ ಏರ್ಪಡಿಸಿ ಕ್ರೀಡಾ ಮನೂಭಾವವನ್ನು ವಿದ್ಯಾರ್ಥಿಗಳಲ್ಲಿ ಮಾಡುವಂತೆ ಮಾಡಿದ್ದಾರೆ. ವಿಜಯ ಕುಮಾರ ಬೆಳಗಲಿಯವರು ಜಲವರ್ಣ, ತೈಲವರ್ಣ, ಅಕ್ರಾಲಿಕ್ ಮಧ್ಯಮದಿಂದ ಸಿಸ್ಟರ, ಎಂಬ ಶಿರ್ಶಿಕೆಯಲ್ಲಿ ಅನೇಕ ಸೃಜನಾತ್ಮಕ ಕಲಾಕೃತಿಗಳನ್ನು ರಚಿಸಿದ್ದಾರೆ. ಅನೇಕ ಉತ್ತಮವಾದ ಸ್ಥಿರಚಿತ್ರಗಳನ್ನು ರಚಿಸಿದ್ದಾರೆ. ಹಲವಾರು ಕಡೆ ತಮ್ಮ ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಗದಗ ಧಾರವಾಡ, ಚಿತ್ರಸಂತೆ ಬೆಂಗಳೂರು, ಪಟ್ಟದಕಲ್ಲು ಉತ್ಸವ, ಲಕ್ಕುಂಡಿ ಉತ್ಸವ" ಹಂಪಿ ಹುಬ್ಬಳ್ಳಿ ಮುಂತಾದ ಅನೇಕ ಕಡೆಗೆ ತಮ್ಮ ಕಲಾಪ್ರದರ್ಶನವನ್ನು ಮಾಡಿದ್ದಾರೆ.

ಶ್ರೀ ವಿಜಯಕಲಾಮಂದಿರ ಬೆಳಗಲಿಯವರು ಹಲವಾರು ಕಲಾ ಚಟುವಟಿಕೆಗಳಲ್ಲಿ ಭಾಗವಹಿಸಿದ್ದು ಅನೇಕ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಲಕ್ಕುಂಡಿ ಉತ್ಸವ ಕಲಾ ಶಿಬಿರ, ಗ್ರಾಫಿಕ್ ಕಾರ್ಯಗಾರ, ಏಡ್ಸ ಜಾಗೃತಿ ಆಂದೋಲನ, ಗದಗ, ರಾಜ್ಯಮಟ್ಟದ ಚಿತ್ರಕಲಾ ಶಿಬಿರ, ಮೌಂಟ್ ಅಬು, ರಾಜಸ್ಥಾನ, ಭಿತ್ತಿಚಿತ್ರಕಲಾ ಶಿಬಿರ ನಿರಲಗಿ, ಭಿತ್ತಿಚಿತ್ರಕಲಾ ಶಿಬಿರ ಲಕ್ಕುಂಡಿ ಚಿತ್ರಕಲಾ ಶಿಬಿರ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಅಖಿಲಭಾರತ ೭೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಗದಗ ಮುಂತಾದ ಅನೇಕ ಕಲಾ ಶಿಬಿರಗಳಲ್ಲಿ ಭಾಗವಹಿಸಿ ಉತ್ತಮವಾದ ಕಲಾಕೃತಿಗಳನ್ನು ರಚಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ಗದಗ, ಬೆಳಗಾಂವ, ಹುಬ್ಬಳ್ಳಿ, ಹಂಪಿ, ಬೆಂಗಳೂರು ರಾಜಸ್ಥಾನ ಮುಂತಾದವುಗಳ ಕಡೆಗೆ ಸಂಗ್ರಹಗೊಂಡಿವೆ. ಹೀಗೆ ವಿಜಯಕುಮಾರ ಬೆಳಗಲಿಯವರು ಚಿತ್ರಕಲೆಯಲ್ಲಿ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದಾರೆ.

ಎಚ್.ಜಿ. ರಾಠೋಡ : ಇವರು ಎ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ಅನೇಕ ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆ ಮಾಡಿದ್ದಾರೆ. ಹಾಗೂ ಆರ್.ಬಿ. ಬುಸಾರಿ ಅವರು ಬೆಳಗಾಂವಿ ಉಮಾ ಕಲಾಶಾಲೆಯಿಂದ ವರ್ಗವಾಗಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯಕ್ಕೆ ಬಂದು ತಮ್ಮ ಅನುಪಮ ಸೇವೆ ಸಲ್ಲಿಸಿ ೨೦೦೫ರಲ್ಲಿ ವಿಧಿವಶರಾಗಿದ್ದಾರೆ.

ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಅಧ್ಯಾಪಕರ ಕೊಡಗೆಗಳನ್ನು ಸ್ಥೂಲವಾಗಿ ಇಲ್ಲಿ ನಿರಿಕ್ಷಿಸಲಾಗಿದ್ದು ಕೆಲವು ಪ್ರಮುಖ ಅಂಶಗಳು ಇದರಿಂದ ಕಂಡುಬರುತ್ತದೆ. ಮೊದಲನೆಯ ಹಂತದ ಅಧ್ಯಾಪಕರ ಗೌರವಪೂರ್ವಕ ಕೆಲಸ ಮಾಡಿದ್ದು ಇವರು ಹಿರಿಯ ತಲೆಮಾರಿನರಿದ್ದು ಜೆ.ಜೆ. ಕಲಾಶಾಲೆಯಲ್ಲಿ ಅಧ್ಯಯನ ಮಾಡಿಬಂದವರಾಗಿದ್ದು ನೈಜ ಶೈಲಿಯಲ್ಲಿ ಕಲಾಕೃತಿಗಳನ್ನು ರಚಿಸುವ ಪ್ರಾವಿಣ್ಯತೆಯನ್ನು ಪಡೆದುಕೊಂಡಿದವರಾಗಿದ್ದಾರೆ. ನವ್ಯ ಕಲೆಯ ವಾತಾವರಣಕ್ಕೆ ಹೊಂದಿಕೊಳ್ಳದ ಇವರು ಅನುಸರಿಸುತ್ತಿದ್ದ ಬ್ರಿಟಿಷ್ ಕಂಪನಿ ಕಲಾಶೈಲಿಯನ್ನು ಗಮನಿಸುವ ಅಂಶವಾಗಿದೆ. ಮತ್ತೆ

೨೨೦. ವಿ.ಎಲ್. ಬೆಳಗಲಿ ಇವರ ಸಂದರ್ಶನ ದಿನಾಂಕ : ೨೮-೭-೨೦೦೯

ಕೆಲವರು ಇದೆ ಸಂದರ್ಭದಲ್ಲಿ ಬಂಗಾಳದಲ್ಲಿ ಹುಟ್ಟಿಕೊಂಡ ಬಂಗಾಲಿ ಕಲಾಶೈಲಿಯ ಪದ್ದತಿಯಲ್ಲಿ ಸಹಿತ ಚಿತ್ರರಚನೆ ಮಾಡುತ್ತಿದ್ದರು. ಇವರ ಶೈಲಿಯನ್ನು ನೋಡಿದಾಗ ಕಲಾಶೈಲಿಗಳ ಪ್ರಾವಕ್ಕೆ ಒಳಗಾದವರಂತೆ ತೊರುತ್ತದೆ. ವ್ಯಕ್ತಿ ಚಿತ್ರ, ಭಾವಚಿತ್ರ ರಚನೆಯಲ್ಲಿ ಮತ್ತು ನಿಸರ್ಗ ಚಿತ್ರಗಳರಚನೆಯಲ್ಲಿ ಮತ್ತು ಸ್ಥಿರ ಚಿತ್ರ ರಚನೆಯಲ್ಲಿ ಕಂಪನಿ ಶೈಲಿ ಕಂಡು ಬಂದರೆ, ಸಂಯೋಜನಾ ಚಿತ್ರಗಳಲ್ಲಿ ಬಂಗಾಲಿ ಶೈಲಿಯಿಂದ ಅನುಕರಣೆ ಗೋಚರವಾಗುತ್ತದೆ.

ಎರಡನೆಯ ಹಂತದ ಕಲಾ ಅಧ್ಯಾಪಕರನ್ನು ಸ್ಥೂಲವಾಗಿ ಗಮನಿಸಿದಾಗ ಹೆಚ್ಚಾಗಿ ಇದೇ ಕಲಾಶಾಲೆಯಲ್ಲಿ ಕಲಿತು ಇಲ್ಲಿಯೇ ಶಿಕ್ಷಕರಾಗಿ ಸೇವೆ ಮಾಡುವರಾಗಿದ್ದಾರೆ. ಕಲಾ ಶೈಲಿಯ ದೃಷ್ಠಿಯಿಂದ ಇವರ ಕಲಾಕೃತಿಗಳು ಹಿಂದಿನ ಹಂತದ ಶಿಕ್ಷಕರಗಿಂತ ವಿಭಿನ್ನವಾಗಿ ಕಂಡುಬರುತ್ತವೆ. ಹಿಂದಿನ ಹಂತದ ಶಿಕ್ಷಕರಲ್ಲಿ ಕಂಪನಿ ಶೈಲಿ ಮತ್ತು ಬಂಗಾಲಿ ಶೈಲಿ ಮಿಶ್ರಣ ಕಂಡು ಬಂದರೆ ಎರಡನೆ ಹಂತದ ಕಲಾಶೈಲಿಕರ ಕಲಾ ಶಿಕ್ಷಕರ ಕಲಾ ಶೈಲಿಯಲ್ಲಿ ಸಮ್ಮಿಶ್ರಣದ ಕಲಾಕೃತಿಗಳು ಕಂಡುಬರುತ್ತದೆ. ಪ್ರತಿಯೊಬ್ಬರ ಚಿತ್ರಗಳು ವಿಭಿನ್ನವಾಗಿ ಕಂಡು ಬಂದರು ಸಹಿತ ಒಟ್ಟಾರೆ ಗಮನಿಸಿದಾಗ ಅವುಗಳ ಸಮ್ಮಿಶ್ರಣದ ಗುಣಲಕ್ಷಣಗಳು ಸ್ಥೂಲವಾಗಿ ಕಂಡುಬರುತ್ತದೆ. ಶಿಕ್ಷಕರು ಸಂಯೋಜನಾ ಚಿತ್ರ, ಭಾವಚಿತ್ರ, ವ್ಯಕ್ತಿಚಿತ್ರ, ಸ್ಥಿರಚಿತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ನಿಡುತ್ತಿದ್ದು ಕಂಡುಬರುತ್ತದೆ.

ಮೂರನೆಯ ಹಂತದ ಕಲಾ ಅಧ್ಯಾಪಕರಲ್ಲಿ ಹೆಚ್ಚಿನ ವಿಶಿಷ್ಠತೆಯು ಕಂಡು ಬರುತ್ತದೆ. ಬೇರೆ ಭಾಗದಿಂದ ಕಲಾಶಿಕ್ಷಣಪಡೆದುಕೊಂಡು ಬಂದಂಥವರು ಇಲ್ಲಿ ಸೇವೆ ಮಾಡುವುದು ಕಂಡುಬರುತ್ತದೆ. ಇವರ ಭೋಧನಾಕ್ರಮ ವಿಶಿಷ್ಠವಾದ ಅಡಳಿತಗಳ ಗಮನಾರ್ಹ ಅಂಶವಾಗಿದೆ. ಇಂತಹ ಬದಲಾವಣೆಗಳು ಈ ಕಲಾಶಾಲೆ ಬೆಳವಣಿಗೆಯ ಕೂರಿತಾಗಿ ಕಂಡುಬರುತ್ತದೆ. ಹೀಗೆ ನಿರಂತರ ಬದಲಾವಣೆ ಹೊಂದುತ್ತ ಬಂದಿರುವ ಮತ್ತು ವೈವಿಧ್ಧತೆಯನ್ನು ಮೈಗೂಡಿಸಿಕೊಂಡಿರುವ ಇಲ್ಲಿನ ಶಿಕ್ಷಣ ಸಂಸ್ಥೆ ಮತ್ತು ವಿದ್ಯಾರ್ಥಿಗಳ ಅಭಿವೃದ್ಧಿಯ ಹಿನ್ನಲೆಯಲ್ಲಿ ಕಲಾಶಿಕ್ಷಕರ ಕೊಡುಗೆಗಳ ಅನುಗುಣವಾಗಿದೆ.

ಜೆ.ಎನ್.ಶಾಲೆಯ ಕಲಾವಿದ್ಯಾರ್ಥಿಗಳು :

ಬಿ.ಎಂ. ಕುರಿ : ಇವರು ಈ ಗದಗ ಜಿಲ್ಲೆಯ ರೋಣ, ತಾಲೂಕಿನ ಹಿರೇಮಣ್ಣೂನಲ್ಲಿ ಜನಿಸಿದ್ದಾರೆ. ಪ್ರಾಥಮಿಕ ಪ್ರೌಢಶಿಕ್ಷಣ ಮುಗಿಸಿ ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದು ಆರ್ಟ್‌ಮಾಸ್ಟ ಡಿಪ್ಲೋಮಾ ಪದವಿಯನ್ನು ಪಾಸುಮಾಡಿದ್ದಾರೆ. ಜಲವರ್ಣ, ತೈಲವರ್ಣ ಅಕ್ರಾಲಿಕ್ ಮಾಧ್ಯಮದಿಂದ ಅನೇಕ ಕಲಾಕೃತಿಗಳನ್ನು ಮಾಡಿ ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ, ಪ್ರದರ್ಶನವನ್ನು ಭಾಗವಹಿಸಿದ್ದಾರೆ. ಬೆಂಗಳೂರು, ಗದಗ, ಧಾರವಾಡ ಮೈಸೂರ, ಹುಬ್ಬಳ್ಳಿ, ಮುಂತಾದ ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿದೆ. ಹಲವು ಸಂಘ ಸಮಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ.[೨೨೧] ಸದಾಕಲಿಯುವ ಆಶೆಯನ್ನು ಹೊಂದಿದ ಕುರಿಯವರು ಎಂ.ವ್ಹಿ.ಪಿ ಸ್ನಾತಕೊತ್ತರ ಪದವಿಯನ್ನು ಕನ್ನಡ ವಿಶ್ವವಿದ್ಯಾಯದಿಂದ ಪಡೆದುಕೊಂಡಿದ್ದಾರೆ. ಸದ್ಯ ಇವರು ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ ಧಾರವಾಡದಲ್ಲಿ ಉಪನ್ಯಾಸಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಕಲಾ ಇತಿಹಾಸ ವಿಷಯವನ್ನು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಹೆಳುತ್ತ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.

---

೨೨೧. ವಿ.ಎಲ್. ಬೆಳಗಲಯವರ ದಾಖಲಾತಿಗಳದಿಂದ ಸಂಗ್ರಹ

ಆರ್.ಸಿ. ಉಮಚಗಿ : ಆರ್.ಸಿ. ಉಮಚಗಿ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಶಿರೋಳ ಗ್ರಾಮದಲ್ಲಿ ೧೯೭೫ ಎಪ್ರಿಲ್ ೨೬ರಂದು ಜನಿಸಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಶಿರೋಳದಲ್ಲಿ ಪ್ರೌಢಶಿಕ್ಷಣವನ್ನು ಲಕ್ಷ್ಮೇಶ್ವರದಲ್ಲಿ ಪೂರೈಸಿ ಉನ್ನತ ಚಿತ್ರಕಲಾ ಶಿಕ್ಷಣ ಆರ್ಟ್‌ಮಾಸ್ಟರ್ ಡಿಪ್ಲೋಮಾ ಹಾಗೂ ಐದನೆಯ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಜೆ.ಎನ್ ಚಿತ್ರಕಲಾ ಮಹಾವಿದ್ಯಾಲಯ ಗದಗದಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ನೈಜಶೈಲಿಯಲ್ಲಿ ಸಿದ್ಧಹಸ್ಥರಾದ ಉತ್ತಮ ಕಲಾಕೃತಿಗಳನ್ನು ಜಲವರ್ಣ, ತೈಲವರ್ಣ, ಮತ್ತು ಅಕ್ರಾಲಿಕ್ ಮಾಧ್ಯಮದಲ್ಲಿ, ಭಾವಚಿತ್ರ, ಲೈಫ್, ಸಂಯೋಜನಾ ಚಿತ್ರ, ನಿಸರ್ಗ ಚಿತ್ರ ಹಾಗೂ ಸೃಜನಾತ್ಮಕತೆಯಿಂದ ರಚಿಸಿದ್ದಾರೆ. ಇವರ ಕಲಾಕೃತಿಗಳು ಗದಗ, ಧಾರವಾಡ, ಬೆಂಗಳೂರು, ಹುಬ್ಬಳ್ಳಿ, ಮೈಸೂರ ಮುಂಬೆ, ಲಕ್ಷೇಶ್ವರ, ಮುಂತಾದ ಅನೇಕ ಕಡೆಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ.

ಶ್ರೀ ಆರ್.ಸಿ. ಉಮಚಗಿಯವರು ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ನಡೆದ ಚಿತ್ರಕಲಾ ಶಿಬಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ. ಕರ್ನಾಟಕ ಕಲಾಮೇಳ, ಹುಬ್ಬಳ್ಳಿ, ಧಾರವಾಡ, ಮೂಡಬಿದಿರಿ, ಗದಗ ೭೬ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳದ ಕಲಾಶಿಬಿರದಲ್ಲಿ ಭಾಗವಹಿಸಿದ್ದಾರೆ. ರಾಜ್ಯ ಮಟ್ಟದ ಚಿತ್ರಕಲಾ ಶಿಕ್ಷಕರ ಕಲಾಶಿಬಿರಹಾಸನ, ಪ್ರೌಢಶಾಲಾ ಶಿಕ್ಷಕರ ಕಲಾ ಶಿಬಿರ, ಗದಗ, ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ ಗದಗ, ಹೀಗೆ ಅನೇಕ ಕಲಾ ಶಿಬಿರಗಳಲ್ಲಿ ಭಾಗವಹಿಸಿ ಉತ್ತಮ ಕಲಾವಿದರಾಗಿ ಕಾರ್ಯನಿರ್ವಹಿಸಿಸುತ್ತಿದ್ದಾರೆ. ಇವರ ಕಲಾ ಕೃತಿಗಳನ್ನು ಮೆಚ್ಚಿ ಅನೇಕ ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ಪಡೆದುಕೊಂಡಿದ್ದಾರೆ. ೨೦೦೩ರಲ್ಲಿ ಉತ್ತಮ ಚಿತ್ರಕಲಾ ಶಿಕ್ಷಕ ಪ್ರಶಸ್ತಿ, ೨೦೦೪ರಲ್ಲಿ ೧೯೯೮ರಲ್ಲಿ ಉತ್ತಮ ವಿದ್ಯಾರ್ಥಿಪ್ರಶಸ್ತಿ ೧೯೯೬ರಲ್ಲಿ ಜಿಲ್ಲಾಮಟ್ಟದ ಚಿತ್ರಕಲಾ ಪ್ರಶಸ್ತಿ ೧೯೯೫ರಲ್ಲಿ ತಾಲೂಕಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ೧೯೯೮ರಲ್ಲಿ ಗದುಗಿನ ತೊಂಟದ ಶ್ರೀಗಳಿಂದ ಸನ್ಮಾನ ಹಿಗೆ ಅನೇಕ ಪ್ರಶಸ್ತಿ ಪುರಸ್ಕಾರವನ್ನು ಪಡೆದುಕೊಂಡಿದ್ದಾರೆ.

ಶ್ರೀ ಉಮಚಗಿಯವರ ಅನೇಕ ಉತ್ತಮವಾದ ಕಲಾಕೃತಿಗಳು ಅನೇಕ ಕಡೆ ಸಂಗ್ರಹಿತಗೊಂಡಿವೆ. ಹುಬ್ಬಳ್ಳಿ, ಕೊಪ್ಪಳ, ಗದಗ ಹಾನಗಲ್ಲ ಜಮಖಂಡಿ, ಮುಂಡರಗಿ, ಉಡುಪಿ, ಮುಂತಾದ ಅನೇಕ ಸ್ಥಳಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಹೀಗೆ ರಾಜೇಶ ಉಮಚಗಿಯವರು ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸುವುದರ ಮೂಲಕ ತಮ್ಮದೆಯಾದ ಕಲಾ ಪ್ರೌಡಿಮೇಯನ್ನು ಬೆಳೆಸಿಕೊಂಡಿದ್ದಾರೆ. ಸದ್ಯ ಇವರು ಶ್ರೀಮತಿ. ಐ.ಎಸ್.ಬಿಡಿ ಬಾಲಕಿಯರ ಪ್ರೌಢಶಾಲೆ ಲಕ್ಷ್ಮೇಶ್ವರದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.[೨೨೨]

ಎಸ್.ವ್ಹಿ. ಪಾಟೀಲ : ಎಸ್.ವ್ಹಿ. ಪಾಟೀಲ ಗದಗ ಜಿಲ್ಲೆಯ ರೋಣ ತಾಲೂಕಿನ ಮಾರನಬಸರಿ ಗ್ರಾಮದಲ್ಲಿ ೧೯೭೭ರಲ್ಲಿ ಹುಟ್ಟಿದ ಇವರು ತಮ್ಮ ಪ್ರಾಥಮಿಕ ಪ್ರೌಢಶಿಕ್ಷಣವನ್ನು ಗದುಗಿನಲ್ಲಿ ಮುಗಿಸಿ, ಉನ್ನತ ಚಿತ್ರಕಲಾ ವ್ಯಾಸಂಗಕ್ಕಾಗಿ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಗದಗ ಇಲ್ಲಿ ಆರ್ಟ್ ಮಾಸ್ಟರ ಡಿಪ್ಲೊ ಮತ್ತು ಐದನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಯನ್ನು ಉನ್ನತ

೨೨೨. ಬಿ.ಎನ್.ಕುರಿ ದಾಖಲಾತಿಗಳಿಂದ ಸಂಗ್ರಹ

ಶ್ರೇಣಿಯಲ್ಲಿ ಪಾಸುಮಾಡಿಕೊಂಡಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿ ಹಲವಾರು ಉತ್ತಮ ಕಲಾಕೃತಿಗಳನ್ನು ರಚಿಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಸದಾಕಲಿಯುವ ಹಂಬಲದಲ್ಲಿ ಪಾಟೀಲರು ಬಿ.ಎಫ್.ಎ ಪದವಿಯನ್ನು ಕನ್ನಡ ವಿಶ್ವವಿದ್ಯಾಲಯ, ಧಾರವಾಡದಿಂದ ಪಡೆದುಕೊಂಡಿದ್ದಾರೆ.

ಸದಾ ಕಲಾ ಕೃತಿ ರಚನೆಯಲ್ಲಿರುವ ಪಾಟೀಲ ಕಲಾ ಪ್ರೌಢಿಮೆಯನ್ನು ಮೇಟಿ ರೋಣದ ರವೀಂದ್ರ ಚಿತ್ರಕಲಾ ನಿಕೇತನದಲ್ಲಿ ಕೇಲವು ವರ್ಷಗಳು ಪ್ರಾಚಾರ್ಯರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ಇವರ ಕಲಾಕೃತಿಗಳು ಗದಗ, ಲಕ್ಕುಂಡಿ, ಮೈಸೂರು, ರೋಣ, ಹಂಪಿ, ಬೆಂಗಳೂರು ಧಾರವಾಡ, ದೆಹಲಿ, ಗೋವಾ ಮುಂತಾದ ಅನೇಕ ಕಡೆ ಇವರ ಕಲಾಕೃತಿಗಳು ಪ್ರದರ್ಶನ ಗೊಂಡಿವೆ, ಕ್ರಿಯಾಶೀಲ ಕಲಾವಿದರಾದ ಪಾಟೀಲರು ಸೌಹಾರ್ಧ ಕಲಾ ಶಿಬಿರ ಹುಬ್ಬಳ್ಳಿ ಐದನೆ ವಾಷಿಕೋತ್ಸವ ಕಲಾ ಪ್ರದರ್ಶನ ಮುದ್ದೇಬಿಹಾಳ, ಲಕ್ಕುಂಡಿ ಉತ್ಸವ ಕಲಾಶಿಬಿರ, ಲಕ್ಕುಂಡಿ, ೭೭ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕಲಾಶಿಬಿರ, ಗದಗ ಮೂಡಬಿದರಿ ಕಲಾಶಿಬಿರ, ಜಿಲ್ಲಾಮಟ್ಟ ಪ್ರೌಢಶಾಲಾ ಶಿಕ್ಷಕರ ಕಲಾಶಿಬಿರ, ಗದಗ, ಮುಂತಾದ ಅನೇಕ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಎಸ್.ವ್ಹಿ. ಪಾಟೀಲರು, ಜಲವರ್ಣ, ತೈಲವರ್ಣ, ಕ್ರೆಯಾನ್ಸ್ ಪೊಸ್ಟರ ಮಾಧ್ಯಮದಲ್ಲಿ ಭಾವಚಿತ್ರ, ನಿಸರ್ಗಚಿತ್ರಗಳು, ಲೈಫ್ ಚಿತ್ರ ಸಂಯೋಜನೆ, ಸೃಜನಾತ್ಮಕ ಕಲಾಕೃತಿಗಳು ರೇಖಾವಿನ್ಯಾಸವು ಇವರ ವೈಶಿಷ್ಟತೆಗಳಾಗಿವೆ. ಇದರ ಅನೇಕ ಕಲಾಕೃತಿಗಳು, ರೋಣ, ಗದಗ, ಹಂಪಿ, ಬೆಂಗಳೂರು, ಮಂಡ್ಯ, ಹುಬ್ಬಳ್ಳಿ, ಮುದ್ದೇಬಿಹಾಳ, ಇಳಕಲ್, ಮತ್ತು ಮೌಂಟಅಬು (ರಾಜಸ್ಥಾನ) ಧಾರವಾಡ, ಮುಂತಾದ ಹಲವಾರು ಸ್ಥಳಗಳಲ್ಲಿ ಸಂಗ್ರಹಗೊಂಡಿವೆ. ಸದ್ಯ ಇವರು ಕೊಟ್ಟರು ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಉತ್ತಮ ಕೆಲಸ ಮಾಡುತ್ತಿದ್ದಾರೆ.[೨೨೩]

ಶಂಕರಗೌಡ ಪಾಟೀಲ : ಶಂಕರಗೌಡ ಪಾಟೀಲರು ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿ ಇತ್ತು. ಈ ಆಸಕ್ತಿ ಮುಂದೆ ಉನ್ನತ ಚಿತ್ರಕಲಾ ಅಭ್ಯಾಸಕ್ಕಾಗಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರವೇಶಪಡೆದು ಆರ್ಟ್ ಮಾಸ್ಟರ ಡಿಪ್ಲೋಮಾ ಪದವಿಯನ್ನು ಪಡೆದುಕೊಂಡಿದ್ದಾರೆ. ನಿಸರ್ಗಚಿತ್ರ, ಭಾವಚಿತ್ರ, ಲೈಫ್ ರೇಖಾಚಿತ್ರಗಳನ್ನು ತಮ್ಮದೆಯಾದ ವಿಶಿಷ್ಠ ಶೈಲಿಯಲ್ಲಿ ರಚಿಸುವ ಚಾತುರ್ಯವು ಶಂಕರಗೌಡರಲ್ಲಿದೆ. ಅನೇಕ ರೇಖಾ ಚಿತ್ರಗಳನ್ನು ವಿವಿಧ ರೀತಿಯಲ್ಲಿ ಸುಂದರವಾಗಿ ರಚಿಸಿದ್ದಾರೆ. ಕ್ರೇಯಾ ಶೀಲರು ಮತ್ತು ಸೃಜನಶೀಲರಾದ ಇವರು ಅನೇಕ ಕಲಾಕೃತಿಗಳನ್ನು ರಚಿಸಿ ಹಲವಾರು ಕಡೆ ತಮ್ಮ ಕಲಾ ಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ. ಉತ್ತಮ ಸಂಘಟನೆಕಾರರಾದ ಶಂಕರಗೌಡಪಾಟೀಲರು ಗದುಗಿನಲ್ಲಿ ಚಿತ್ರಕಲಾ ಸಂಘಟನೆಯಾದ ಲಯಕಲಾ ಮನೆ ಎಂಬ ಸಂಘವನ್ನು ಸ್ಥಾಪಿಸಿ ಚಿತ್ರಕಲಾ ಪ್ರದರ್ಶನ, ಕಲಾ ಶಿಬಿರ, ಹಿರಿಯಕಲಾವಿದರಿಗೆ ಸನ್ಮಾನ, ಮಾಡುವುದರ ಮೂಲಕ ಅನೇಕ ಕಲಾ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ.[೨೨೪]

---

೨೨೩. ಆರ್.ಸಿ. ಉಮಚಗಿಯವರಿಂದ ದಾಖಲಾತಿಗಳಿಂದ ಸಂಗ್ರಹ

೨೨೪. ಎಸ್.ವಿ. ಪಾಟಿಲ ಅವರ ದಾಖಲಾತಿಗಳಿಂದ ಸಂಗ್ರಹ

ಧಾರವಾಡ, ಹುಬ್ಬಳ್ಳಿ, ದೇಹಲಿ, ದಾವಣಗೇರೆ, ಬಾಗಲಕೋಟೆ, ಬೆಂಗಳೂರು, ಚಿತ್ರದುರ್ಗ, ಬಿಜಾಪೂರ, ಜೋಗ್‌ಪಾಲ್ಸ್ ಹಾಗೂ ಮೈಸೂರು, ಲಕ್ಕುಂಡಿ ಉತ್ಸವ, ಕರ್ನಾಟಕ ಕಲಾಮೇಳ ಬೆಂಗಳೂರು, ಮುಂತಾದ ಅನೇಕ ಸಮೂಹಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.[೨೨೫] ಕರ್ನಾಟಕ ಕಲಾಮೇಳ, ಬೆಂಗಳೂರು, ಸೌಹಾರ್ದ ಕಲಾ ಶಿಬಿರ, ಹುಬ್ಬಳ್ಳಿ ಪಟ್ಟದಕಲ್ಲು ಉತ್ಸವ ಪಟ್ಟದಕಲ್ಲು, ಲಕ್ಕುಂಡಿ ಉತ್ಸವ, ೭೬ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಗದಗ ಮುಂತಾದ ಶಿಬಿರಗಳಲ್ಲಿ ಭಾಗವಹಿಸಿ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ಸದಾ ಕ್ರೀಯಾಶೀಲರಾದ ಶಂಕರಗೌಡರು ಅನೇಕ (ಸ್ತಬ್ದಚಿತ್ರ) ಮಾಡಿದ್ದಾರೆ. ಮೈಸೂರ ದಸರಾದಲ್ಲಿ ಸ್ತಬ್ದಚಿತ್ರವನ್ನು ಗದುಗಿನ ವೀರನಾರಾಯಣ, ಒನಕೆ ಒಬ್ಬವ್ವ ಚಿತ್ರದುರ್ಗದ ಕಲ್ಲಿನ ಕೋಟೆ, ಗಣೇಶ ಚತುರ್ಥಿಯಲ್ಲಿ ಅನೇಕ ಅಲಂಕಾರಗಳನ್ನು ಮಾಡಿ ಜನಮೆಚ್ಚಿಗೆಯನ್ನು ಪಡೆದುಕೊಂಡಿದ್ದಾರೆ. ಶಂಕರಗೌಡರ ಅನೇಕ ಉತ್ತಮವಾದ ಕಲಾಕೃತಿಗಳು ದೇಹಲಿ, ಬೆಂಗಳೂರು ಧಾರವಾಡ, ಹುಬ್ಬಳ್ಳಿ, ಗದಗ ಮುಂತಾದ ಅನೇಕ ಸ್ಥಳಗಳಲ್ಲಿ ಇವರ ಕಲಾಕೃತಿಗಳ ಸಂಗ್ರಹಗೊಂಡಿವೆ. ಉತ್ತಮ ಸಂಘಟಿಕರಾದ ಶಂಕರಗೌಡಪಾಟೀಲರು "ಲಯಕಲಾಮನೆ" ಎಂಬ ಸಂಘಟನೆ ಕಟ್ಟಿ ಅದಕ್ಕೆ ಸಂಸ್ಥಾಪಕ ಅಧ್ಯಕ್ಷರಾಗಿ, ಕಲಾ ಪ್ರದರ್ಶನಗಳನ್ನು ಮಾಡಿದ್ದಾರೆ. ಅನೇಕ ಶಿಬಿರಗಳನ್ನು ರಾಜ್ಯ ಮಟ್ಟದಲ್ಲಿ ಕಲಾಪ್ರದರ್ಶನ ಕಲಾಶಿಬಿರ ಏರ್ಪಡಿಸಿ ಹಲವಾರು ಶಿಬಿರ ಹೀರಿಯ ಕಲಾವಿದ್ದರಿಗೆ ಸನ್ಮಾನ ಪ್ರಾತ್ಯಕ್ಷತೆ, ಹೀಗೆ ಹಲವಾರು ಪ್ರೌಢಶಾಲೆಯಲ್ಲಿ ಕಲಾಪ್ರದರ್ಶನಮಾಡಿ ಅಲ್ಲಿಯ ಅನೇಕ ವಿದ್ಯಾರ್ಥಿಗಳಲ್ಲಿ ಕಲಾ ಪ್ರದರ್ಶನವನ್ನು ಮಾಡುತ್ತಾ ಎಲೆಮರೆಕಾಯಿಂತೆ ಇರುವ ಕಲಾವಿದರಿಗೆ ಕಲಾಪ್ರದರ್ಶನ ಮಾಡುವುದು. ಹೀರಿಯ ಕಲಾವಿದರಿಗೆ ಕುಂಚ ಬ್ರಹ್ಮ ಎಂ.ಎ. ಚೆಟ್ಟಿಯವರ ಹೆಸರಲ್ಲಿ ಪ್ರಶಸ್ತಿಗಳನ್ನು ನೀಡುತ್ತಾ ಉತ್ತಮ ಕಲಾ ಸಂಘಟೀಕರಾಗಿದ್ದಾರೆ. ಹೀಗೆ ಶಂಕರ ಗೌಡ ಪಾಟೀಲರು ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೆ ಆದ ಶಿಕ್ಷಕ ತಮ್ಮದೆಯಾದ ಕೊಡುಗೆಯನ್ನು ನೀಡಿದ್ದಾರೆ.

ಆರ್.ಎಲ್. ಕಮ್ಮಾರ : ಶ್ರೀ ಆರ್.ಎಲ್. ಕಮ್ಮಾರ ಇವರು ಗದಗ ಜಿಲ್ಲೆಯ ಹರ್ಲಾಪೂರ ಗ್ರಾಮದಲ್ಲಿ ೧೯೬೩ ಮೇ ೧೭ರಂದು ಜನಿಸಿದ್ದಾರೆ. ಬಾಲ್ಯದಲ್ಲಿ ಚಿತ್ರಕಲೆಯ ಕಡೆಗೆ ಹೆಚ್ಚಿನ ಆಸಕ್ತಿ ಹೊಂದಿದ್ದರಿಂದ ಚಿತ್ರ ಕಲೆಯನ್ನು ಅಭ್ಯಾಸ ಮಾಡಲು ಆರ್ಟ್‌ಮಾಸ್ಟರ ಪದವಿಯನ್ನು ಜೆ.ಎನ್ ಚಿತ್ರಕಲಾ ಮಹಾವಿದ್ಯಾಲಯ. ಗದಗ ಬೆಟಗೇರಿ ಇಲ್ಲಿ ಪೂರೈಸಿದರು. ಇವರು ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಗದಗ ಹುಬ್ಬಳ್ಳಿ ಧಾರವಾಡ ಬಿಜಾಪೂರ, ಹಾಸನ ಮುಂತಾದ ಅನೇಕ ಕಡೆ ಚಿತ್ರಕಲಾ ಪ್ರದರ್ಶನವನ್ನು ಮಾಡಿದ್ದಾರೆ. ಹಲವಾರು ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಬೆಳಗಾಂವ ವಿಭಾಗಮಟ್ಟದ ಚಿತ್ರಕಲಾ ಶಿಬಿರ ಕಲಾವಿದ ಎಂ.ಎ. ಚೆಟ್ಟಿಯವರ ಜನ್ಮಶತಮಾನೋತ್ಸವ ಕಲಾಶಿಬಿರ, ಜಿಲ್ಲಾ ಮಟ್ಟದ ಚಿತ್ರಕ ಶಿಕ್ಷಕರ ಕಲಾ ಶಿಬಿರ, ಕಲಾ ಉತ್ಸವ ಕಲಾಶಿಬಿರ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಗದಗ ಮುಂತಾದ ಅನೇಕ ಚಿತ್ರಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ ಚಿತ್ರ ಸಂಯೋಜನೆ, ನಿಸರ್ಗ ಚಿತ್ರಣ ವಸ್ತು ಚಿತ್ರಣ, ಭಾವಚಿತ್ರಗಳಲ್ಲಿ ಹೆಚ್ಚಿನ ಪರಿಣತಿಯನ್ನು ಹೊಂದಿದವರಾಗಿದ್ದಾರೆ.

---

೨೨೫. ಶಂಕರಗೌಡ ಅವರ ದಾಖಲಾತಿಗಳಿಂದ ಸಂಗ್ರಹ

ಸದಾ ಕ್ರೀಯಾಶೀಲರಾದ ಎಲ್.ಆರ್. ಕುಮ್ಮಾರರವರು ಶ್ರೀ ಕೆ.ಆರ್. ರಂಗರಾವ್ ಕುಲಕರ್ಣಿ ಸರಕಾರಿ ಪ್ರೌಢಶಾಲೆ ನೆರೆಗಲ್ಲ ತಾಲೂಕ ರೋಣ ಜಿಲ್ಲಾ ಗದಗ ಇಲ್ಲಿ ಚಿತ್ರಕಲಾ ಶಿಕ್ಷಕರಾಗಿ ಉತ್ತಮ ಕಲಾಸೇವೆಯನ್ನು ಮಾಡುತ್ತಿದ್ದಾರೆ. ಜಿಲ್ಲಾ ಮಟ್ಟ ರಾಜ್ಯಮಟ್ಟ ಚಿತ್ರಕಲಾ ಶಿಬಿರ, ಪ್ರದರ್ಶನಗಳಲ್ಲಿ ಭಾಗವಹಿಸಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಪ್ರೌಢಶಾಲೆಯಲ್ಲಿ ಚಿತ್ರಕಲೆಯ ಎಷ್ಟು ಅವಶ್ಯಕ ಎಂಬುದು ಅರಿತವರಾಗಿದ್ದಾರೆ. ಇವರ ಹಲವಾರು ಉತ್ತಮ ಕಲಾಕೃತಿಗಳು ರಚನೆಮಾಡಿದ್ದು ಗದಗ, ಹಾವೇರಿ, ಹುಬ್ಬಳ್ಳಿ ಧಾರವಾಡ ಮುಂತಾದ ಅನೇಕ ಕಡೆ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.[೨೨೬] ಚಿತ್ರಕಲೆಯ ಜೊತೆಗೆ ನಾಟಕ, ಸಂಗೀತ, ಕವನ ರಚನೆ ಮಾಡುವುದು ಇವರ ಹವ್ಯಾಸಗಳಾಗಿವೆ.

ರಮೇಶ ಮುರಗೋಡ : ಶ್ರೀ ರಮೇಶ ಮರಗೊಡರವರು ದಿನಾಂಕ ೧.೭. ೧೯೭೨ರಲ್ಲಿ ರಾಣೆಬೆನ್ನೂರದಲ್ಲಿ ಜನಿಸಿದ್ದಾರೆ. ಪ್ರೌಢಶಾಲೆಯನ್ನು ಬಾಗಲಕೋಟದಲ್ಲಿ ಮುಗಿಸಿ ಉನ್ನತ ಚಿತ್ರ ಅಧ್ಯಯನಕ್ಕಾಗಿ ಗದುಗಿನ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದು ಎಲ್ಲ ಶಿಕ್ಷಕರ ಪ್ರೀತಿಯ ವಿದ್ಯಾರ್ಥಿಯಾಗಿ, ಆರ್ಟ್‌ಮಾಸ್ಟರ ಡಿಪ್ಲೋಮಾ ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಪಡೆದುಕೊಂಡಿದ್ದಾರೆ. ಜಲವರ್ಣ, ತೈಲವರ್ಣ, ಅಕ್ರಾಲಿಕ್ ಮಾಧ್ಯಮದಿಂದ ಅನೇಕ ಕಲಾಕೃತಿ ರಚಿಸಿದ ಇವರು ರಾಜ್ಯ ಮಟ್ಟದಲ್ಲಿ ನಡೆದ ಅನೇಕ ಚಿತ್ರಕಲಾ ಶಿಬಿರ ಪ್ರದರ್ಶನಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. ಶ್ರೀ ರಮೇಶ ಮುರಗೋಡರವರು ಅನೇಕ ಕಲಾಕೃತಿಗಳು ಧಾರವಾಡ, ಹುಬ್ಬಳ್ಳಿ ಹಾವೇರಿ ಬೆಂಗಳೂರು, ಗದಗ ಬೆಳಗಾಂವಗಳಲ್ಲಿ ನಡೆದ ಚಿತ್ರಕಲಾ ಪ್ರದರ್ಶನದಲ್ಲಿ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ ಇವರ ಅನೇಕ ಕಲಾಕೃತಿಗಳು, ಬೆಂಗಳೂರ, ಧಾರವಾಡ, ದಾವಣಗೇರಿ, ಅಮೇರಿಕಾ ಗದಗ, ಹುಬ್ಬಳ್ಳಿ ಮುಂತಾದವುಗಳ ಕಡೆಗಳಲ್ಲಿ ಸಂಗ್ರಹಗೊಂಡಿವೆ. ಶ್ರೀ ರಮೇಶ ಮುರಗೋಡರವರು ಹಾವೇರಿ ಜಿಲ್ಲೆಯ ಸವಣೂರ ತಾಲೂಕಿನ ಸರಕಾರಿ ಪ್ರೌಢಶಾಲೆ ಹೆಸರೂರರಲ್ಲಿ ಚಿತ್ರಕಲಾ ಶಿಕ್ಷಕರಾಗಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.[೨೨೭]

ಸುಭಾಸ. ಟಿ. ರಜಪೂತ : ಸುಭಾಸ ರಜಪೂತರವರು ಗದಗ ಬೆಟಗೇರಿಯಲ್ಲಿ ೧೯೭೮ ನೆವೆಂಬರ ೧ರಂದು ಜನಿಸಿದ್ದಾರೆ. ಬಾಲ್ಯದಲ್ಲಿ ಚಿತ್ರಕಲೆಯಲ್ಲಿ ಆಸಕ್ತಿ ಇದ್ದ ಇವರು ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಗದಗ ಬೆಟಗೇರಿಯಲ್ಲಿ ಪ್ರವೇಶ ಪಡೆದು ಆರ್ಟ್ ಮಾಸ್ಟರ ಡಿಪ್ಲೋಮಾ ಮತ್ತು ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ಪಾಸು ಮಾಡಿಕೊಂಡಿದ್ದಾರೆ. ಜಲವರ್ಣ, ತೈಲವರ್ಣ ಅಕ್ರಾಲಿಕ್, ಪೆನ್ ಆ್ಯಂಡ್ ಇಂಕ್ ಮಾಧ್ಯಮದಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ಉತ್ತಮ ಕಲಾವಿದರಾದ ಸುಭಾಸರವರು ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ, ಕಲಾಪ್ರದರ್ಶನದಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ಕೊಂಡಿದ್ದಾರೆ. ಗದಗ, ಧಾರವಾಡ, ಹುಬ್ಬಳ್ಳಿ, ಮೈಸೂರ, ಪಟ್ಟದಕಲ್ಲ್ ಬೆಂಗಳೂರು ಮುಂತಾದ ಕಡೆಗಳಲ್ಲಿ ನಡೆದ ಚಿತ್ರಕಲಾ ಶಿಬಿರ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಸ್ವತಂತ್ರ ಕಲಾವಿದರಾಗಿ ಕೆಲಸ ಮಾಡುತ್ತಿರುವ

೨೨೬. ಪ್ರಾ, ಅಶೋಕ ಅಕ್ಕಿ (ಸಂ) ಕೃತಪೂರ ಕಲಾವಿದರ ಪು.ಸಂ. ೪೭

೨೨೭. ಆರ್.ಡಿ. ಕಮ್ಮಾರ ದಾಖಲಾತಿಗಳ ಸಂಗ್ರಹ

ರಜಪೂತರವರ ಹಲವಾರು ಕಲಾಕೃತಿಗಳು ಬೆಂಗಳೂರು ಹಾವೇರಿ ಲಕ್ಕುಂಡಿ ಧಾರವಾಡ, ಗದಗ, ಮೈಸೂರ ಮುಂತಾದವುಗಳ ಕಡೆಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.[೨೨೮]

ಶಿವಾನಂದ ಎಸ್. ಹಡಪದ : ಶ್ರೀ ಶಿವಾನಂದ ಹಡಪದರವರು ಗದಗ ಜಿಲ್ಲೆಯ ರೋಣದಲ್ಲಿ ೧೯೭೬ ಜುಲೈ ೪ ರಂದು ಜನಿಸಿದ್ದಾರೆ. ಪ್ರಾಥಮಿಕ ಪ್ರೌಢ ಶಿಕ್ಷಣವನ್ನು ರೋಣದಲ್ಲಿ ಮುಗಿಸಿ, ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದು ಆರ್ಟ್‌ಮಾಸ್ಟರ ಡಿಪ್ಲೋಮಾ ಪರೀಕ್ಷೆಯನ್ನು ಪಾಸುಮಾಡಿಕೊಂಡಿದ್ದಾರೆ. ಉತ್ತಮ ಕಲಾ ಕೃತಿಗಳನ್ನು ರಚಿಸುವ ಶಿವಾನಂದರು ರಾಜ್ಯದ ಅನೇಕ ಕಲಾ ಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರು, ಹಂಪಿ, ಗದಗ, ಹುಬ್ಬಳ್ಳಿ, ಮೈಸೂರ, ಗದಗ, ಧಾರವಾಡ, ಹುಬ್ಬಳ್ಳಿ, ರೋಣ ಬಿಜಾಪೂರ, ಬದಾಮಿ ಮುಂತಾದವುಗಳ ಕಡೆಗಳಲ್ಲಿ ಸಂಗ್ರಹಗೊಂಡಿದೆ. ಸಧ್ಯ ಇವರು ಉಪನ್ಯಾಸಕರಾಗಿ ವೈಜಯಂತಿ ಲಲಿತಕಲಾ ಮಹಾವಿದ್ಯಾಲಯ ಮೈಸೂರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.[೨೨೯]

ಜೆ.ಕೆ. ಬಾಗವಾನ : ಶ್ರೀ ಜೆ.ಕೆ. ಬಾಗವಾನರವರು ಮುಂಡರಗಿಯಲ್ಲಿ ಜನಿಸಿದ ಇವರು ಬಾಲ್ಯದಲ್ಲಿಯೇ ಚಿತ್ರಕಲೆಯ ಕಡೆಗೆ ಆಸಕ್ತಿ ಹೊಂದಿದವರು ಆಗಿದ್ದಾರು. ಉನ್ನತ ಚಿತ್ರಕಲಾ ಶಿಕ್ಷಣಕ್ಕೆ ಜೆ.ಎನ್. ಚಿತ್ರಕಲಾ ಮಹವಿದ್ಯಾಲಯ ಗದಗ ಬೆಟಗೇರಿ ಪ್ರವೇಶ ಪಡೆದು, ಆರ್ಟ್ ಮಾಸ್ಟರ ಡಿಪ್ಲೋಮಾ ಮತ್ತು ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಯನ್ನು ಉನ್ನತ ಶ್ರೇಣಿಯಲ್ಲಿ ಪಾಸಮಾಡಿಕೊಂಡಿದ್ದಾರೆ. ಜಲವರ್ಣ, ತೈಲವರ್ಣ, ಅಕ್ರಾಲಿಕ್ ಮಾಧ್ಯಮದಿಂದ ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ರಾಜ್ಯಮಟ್ಟ, ವಿಭಾಗಮಟ್ಟದ ಚಿತ್ರಕಲಾ ಶಿಬಿರ, ಕಲಾ ಪ್ರದರ್ಶನದಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ಕೊಂಡಿದ್ದಾರೆ. ಸಂಪ್ರದಾಯಿಕ ಶೈಲಿಯಲ್ಲಿ ವಿಶೇಷ ಅಧ್ಯಯನಮಾಡಿರುವ ಬಾಗವನರವರು ತಮ್ಮದೇ ಆದ ಶೈಲಿಯಲ್ಲಿ ಅನೇಕ ಉತ್ತಮ ಕಲಾಕೃತಿ ರಚಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು, ಬೆಂಗಳೂರು, ಗದಗ, ಹುಬ್ಬಳ್ಳಿ, ಧಾರವಾಡ, ಬೆಳಗಾಂವ, ಮುಂಡರಗಿ ಮುಂತಾದ ಸ್ಥಳಗಳಲ್ಲಿ ಸಂಗ್ರಹಗೊಂಡಿವೆ. ಸಧ್ಯ ಇವರು ಸರಕಾರಿ ಪ್ರೌಢಶಾಲೆ ಹಳ್ಳಿಗುಡಿಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ.[೨೩೦]

ಎನ್.ಎನ್. ಡಂಬಳ : ಶ್ರೀ ನಜೀರ. ಎನ್. ಡಂಬಳರವರು ಗದಗದಲ್ಲಿ ೨೦-೦೭-೧೯೭೭ರಲ್ಲಿ ಜನಿಸಿದ್ದಾರೆ. ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಗದಗದಲ್ಲಿ ಮೂಗಿಸಿ ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ಕಲಾವಿದ ಎನ್. ಎ. ಹರ್ಲಾಪೂರ ರವರ ಮಾರ್ಗದರ್ಶನದಿಂದ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯಕ್ಕೆ ಪ್ರವೇಶ ಪಡೆದು ಆರ್ಟ್ ಮಾಸ್ಟರ ಡಿಪ್ಲೋಮಾ ಮತ್ತು ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಯನ್ನು ಉನ್ನತ ಶ್ರೇಣಿಯಲ್ಲಿ ಪಾಸುಮಾಡಿಕೊಂಡಿದ್ದಾರೆ. ಸಾಂಪ್ರದಾಯಿಕ, ಕಲೆ, ಸ್ಥಿರಚಿತ್ರ, ಭಾವಚಿತ್ರ ಸಂಯೋಜನೆ, ಚಿತ್ರ,ಗಳನ್ನು ತೈಲವರ್ಣ, ಜಲವರ್ಣ, ಮತ್ತು ಅಕ್ರಾಲಿಕ್ ಮಾಧ್ಯಮದಿಂದ ಅನೇಕ ಕಲಾಕೃತಿಗಳನ್ನು ರಚಿಸಿ,

---

೨೨೮. ರಮೇಶ ಮೂರಗೋಡರವರ ದಾಖಲಾತಿಗಳ ಸಂಗ್ರಹ

೨೨೯. ಸುಭಾಷ ರಜಪುತರವರ ಪರಿಚಯಪತ್ರಗಳಿಂದ ಸಂಗ್ರಹ

೨೩೦. ಶಿವಾನಂದ ಹಡಪದರವರ ದಾಖಲಾತಿಗಳ ಸಂಗ್ರಹ

ರಾಜ್ಯದ ಅನೇಕ ಭಾಗಗಳಲ್ಲಿ ನಡೆದ ಚಿತ್ರ ಶಿಬಿರ, ಪ್ರದರ್ಶನದಲ್ಲಿ ಭಗವಹಿಸಿದ್ದಾರೆ. ಡಂಬಳರವರ ಅನೇಕ ಕಲಾಕೃತಿಗಳು, ಗದಗ, ಧಾರವಾಡ, ಹುಬ್ಬಳ್ಳಿ, ಹಾವೇರಿ, ಬೆಂಗಳೂರು, ಮೈಸೂರು, ಮುಂತಾದ ಕಡೆಗಳಲ್ಲಿ ಸಂಗ್ರಹಗೊಂಡಿದೆ. ಸಧ್ಯ ಇವರು ಸರಕಾರಿ ಪ್ರೌಢಶಾಲೆ ತಟ್ಟಮ್ಮನಹಳ್ಳಿ ಹಗರಿಬೊಮ್ಮನಹಳ್ಳಿ ತಾಲೂಕದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ.[೨೩೧]

ಮಹಾಂತೇಶ ಹಿರೇಮಠ : ಶ್ರೀ ಮಹಾಂತೇಶ ಹಿರೇಮಠರವರು ಬಾಮಿ ತಾಲೂಕಿನ ಚೊಳಚಗುಡ್ಡದಲ್ಲಿ ೧೯೭೬ ಜೂನ ೧ ರಂದು ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ ಮಾಂತೇಶರವರು ಉನ್ನತ ಚಿತ್ರಕಲಾ ಅಧ್ಯಯನಕ್ಕಾಗಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಗದಗ ಬೆಟಗೇರಿಯಲ್ಲಿ ಪ್ರವೇಶ ಪಡೆದು ಆರ್ಟ್ ಮಾಸ್ಟರ ಡಿಪ್ಲೋಮಾ, ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್ ಪರೀಕ್ಷೆಯನ್ನು ಉನ್ನತ ಶ್ರೇಣಿಯಲ್ಲಿ ಪಾಸುಮಾಡಿಕೊಂಡಿದ್ದಾರೆ. ಜಲವರ್ಣ, ತೈಲವರ್ಣ, ಅಕ್ರಾಲಿಕ ಮಾಧ್ಯಮಿದಿಂದ ನೈಜ ಶೈಲಿಯಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದಾರೆ. ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ ಪ್ರದರ್ಶನದಲ್ಲಿ ಭಾಗವಹಿಸಿದ, ಶ್ರೀ ಮಹಾಂತೇಶರವರು ಬೆಂಗಳೂರ, ಧಾರವಾಡ, ಹುಬ್ಬಳ್ಳಿ, ಗದಗ, ರೋಣ ಮುಂತಾದವುಗಳ ಕಡೆಗಳಲ್ಲಿ ಅವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಸಧ್ಯ ಇವರು ಗದಗ ಜಿಲ್ಲೆಯ ಸರಕಾರಿ ಪ್ರೌಢಶಾಲೆ ಶ್ಯಾಗೋಟಿಯಲ್ಲಿ ಉತ್ತಮ ಚಿತ್ರಕಲಾ ಶಿಕ್ಷಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.[೨೩೨]

ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಪ್ರತಿಭಾವಂತ ವಿದ್ಯಾರ್ಥಿಗಳು :

ಸುರೇಶ ಕಲ್ಲೂರ, ವಾಗೇಶ ಕಾಶಿನಾಥಯ್ಯ ಡಿ.ಜೆ. ಈಟಿ, ಎಫ್.ಎಚ್.ಬೆಲೂರ, ಎಸ್.ಎಫ್. ಕಿನ್ನಾಳ, ಮಹಾಂತೇಶ ಹಡಗಲಿ, ಗೋಪಿ ತುಕ್ಕಾ, ಕೆ.ಜಿ. ಹುಯಿಲಗೋಳ, ಗಿರಿಧರ ಪೂಜಾರ, ಆರ್.ಎಸ್. ಆಲೂರ, ಎಂ.ವ್ಹಿ. ಗಡ್ಡಿ, ಎಲ್.ಡಿ. ರಾಠೋಡ, ಎಂ.ಎಸ್. ಹುಣಸಿಮರದ, ಶ್ರೀಮತಿ ಗುಡಿಹಾಳ, ಎಲ್.ಎಸ್. ಕೋಟಿ, ರವಿ ರಾಠೋಡ, ಸುಶಿಲ, ಪ್ರವಿಣ ಸಂಗನಾಳ, ವಸಂತ ಪಟ್ಟೆದ, ಎಂ.ವ್ಹಿ. ಸೂರತಾನಿ, ಎನ್.ಎನ್. ಶಿಂಗವಾಲೂರ, ಬಸವರಾಜಕುಮ್ಮಾರ, ಶಿವರಾಮ, ಬಣ್ಣದ ಬಾವಿ, ಎಸ್.ವ್ಹಿ. ಕಣವಿ ವಾಯ್.ಟಿ. ನಡವಿನಮನಿ, ಆರ್.ಎಸ್.ರಾಠೋಡ, ಅಶೋಕ ನಾಯ್ಕರ, ಗೋವಿಂದ, ದೇವರಡ್ಡಿ, ಎಸ್.ಬಿ. ಅಂಗಡಿ, ಎಸ್.ಎಸ್. ತಟ್ಟಿ, ಎಚ್.ಎಸ್.ರಾಜನಾಳ ಜಿ.ಎಸ್.ಅಡಿಗ, ವಿಶ್ವನಾಥ ನಾಲ್ವವಾಡದ, ವ್ಹಿ.ವಾಯ್. ಜಿತೂರಿ, ವಲ್ಲಯ ಎಸ್. ಮೇಗಳಮಠ, ರತ್ನ ಓಂಕಾರ, ಜಿ.ವ್ಹಿ. ಗೆದಗೇರಿ ವ್ಹಿ.ಬ್ಹಿ. ತಾಳಿಕೋಟಿ, ಎಸ್.ಜೆ. ನಾಯಕ, ಎನ್.ಕೆ. ಮಲ್ಲಿಗವಾಡ, ಎಂ.ಬಿ. ಹಂಚಿನಾಳ, ಎ.ಎನ್. ಹರ್ಲಾಪೂರ, ಬಿ.ಎಸ್. ಹರ್ಲಾಪೂರ, ಪಿ.ಆಯ್. ಹಾವೇರಿ, ಮುಂತಾದ ಅನೇಕ ವಿದ್ಯಾರ್ಥಿಗಳು ರಾಷ್ಟ್ರ ರಾಷ್ಟ್ರಮಟ್ಟದೆಲ್ಲ ಹೆಸರು ಮಾಡಿದ ಕಲಾವಿದ್ಯಾರ್ಥಿಗಳು ಇದ್ದಾರೆ.[೨೩೩]

---

೨೩೧. ಜೆ.ಕೆ. ಬಾಗವಾನರವರ ದಾಖಲಾತಿಗಳ ಸಂಗ್ರಹ

೨೩೨. ಎನ್.ಎಮ್.ಡಂಬಳರವರ ದಾಖಲಾತಿಗಳ ಸಂಗ್ರಹ

೨೩೩. ಮಹಾಂತೇಶ ಹಿರೇಮಮಠ ದಾಖಲಾತಿಗಳ ಸಂಗ್ರಹ

ಶೈಕ್ಷಣಿಕ ಕಲಾ ಚಟುವಟಿಕೆಗಳು : ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಕಲಾ ಶಿಕ್ಷಣ ನೀಡುವುದರ ಜೋತೆಗೆ ಅನೇಕ ಶೈಕ್ಷಣಿಕ ಕಲಾ ಚಟುವಟಿಕೆಗಳನ್ನು ಮಾಡುವುದರ ಮೂಲ ವಿದ್ಯಾರ್ಥಿಗಳಲ್ಲಿ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿದೆ.

ಸಮಕಾಲಿನ ಸಂದರ್ಭದಲ್ಲಿ ಹೊಸ ಕಲಾ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಮಹಾದಾಸೆಯಿಂದ ರಾಜ್ಯ ಹಾಗೂ ರಾಷ್ಟ್ರದ ವಿವಿಧ ಆರ್ಟ್‌ಗ್ಯಾಲರಿ ವೀಕ್ಷಿಸುವುದರ ಮೂಲಕ ಹಾಗೂ ಧಾರ್ಮಿಕ ನೈಸರ್ಗಿಕ ಮತ್ತು ಇತಿಹಾಸಿಕ ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳುವುದು ಸುಂದರವಾದ ನೈಸರ್ಗಿಕ ತಾಣಗಳ ನಿಸರ್ಗ ಚಿತ್ರ ರಚಿಸುವುದು. ಹಾಗೂ ಕಲಾ ಶಿಬಿರಗಳನ್ನು ಸ್ಥಳದಲ್ಲಿಯೇ ಹಮ್ಮಿಕೊಳ್ಳುವುದು, ಆಧುನಿಕ ಕಲಾ ಶೈಲಿಗಳನ್ನು ಹೊಸ ಹೊಸ ತಂತ್ರಗಾರಿಕೆಯನ್ನು ಅರಿತುಕೊಳ್ಳಲು ರಾಜ್ಯ ಹೊರರಾಜ್ಯಗಳ ಹೆಸರಾಂತ ಕಲಾವಿದರಿಂದ ಕಲಾ ಪ್ರತ್ಯಕ್ಷತೆ ಮತ್ತು ಪ್ರದರ್ಶನ ಏರ್ಪಡಿಸುವುದು, ಕಲಾವಿದರ ವಿಮರ್ಶಕರ ಸಾಹಿತ್ಯಗಳಿಂದ ಕಲೆಯ ಕುರಿತು ಚರ್ಚಾಕೂಟ ಉಪನ್ಯಾಸ ಮಾಡಿಸುವುದು, ಕಲಾಕೃತಿಗಳ ವಿಡಿಯೋ ಶೋ ಸ್ಲೆಡ್ ಶೋಮಾಡಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಹೊಸತನ ಬಳಸುವ ದಿಸೇಯಿಂದ ಅನೇಕ ಕಲಾ ಚಟುವಟಿಕೆಯನ್ನು ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಈ ಕೆಳಗಿನಂತೆ ಚರ್ಚಿಸಲಾಗಿದೆ.

ಸಮೂಹ ಕಲಾ ಪ್ರದರ್ಶನಗಳು : ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವದಿಶೆಯಲ್ಲಿ ರಾಜ್ಯ ಹಾಗೂ ರಾಷ್ಟ್ರದ ಕಲಾ ಗ್ಯಾಲರಿಗಳಲ್ಲಿ ಹಲವಾರು ಕಲಾಪ್ರದರ್ಶನಗಳನ್ನು ಹಮ್ಮಿಕೊಂಡಿದ್ದೆವೆ. ೨೦೦೪ರಲ್ಲಿ ರಾಷ್ಟ್ರೀಯ ಕಲಾಪ್ರದರ್ಶನ ಬೆಂಗಳೂರು ಹಾಗೂ ೨೦೦೮ರಲ್ಲಿ ಕಲಾ ಪ್ರದರ್ಶನ ಪಟ್ಟದಕಲ್ಲು, ಲಕ್ಕುಂಡಿ, ಉತ್ಸವ, ಧಾರವಾಡ, ೨೦೦೦ರಲ್ಲಿ ನುಡಿಹಬ್ಬ, ಕಲಾ ಪ್ರದರ್ಶನ ಹಂಪಿ, ೨೦೦೬ ಮತ್ತು ಗ್ರೂಫ್ ಕಲಾ ಪ್ರದರ್ಶನ ದೆಹಲಿ, ೨೦೦೭ರಲ್ಲಿ ಹಾಗೂ ಪೂನಾ, ಗ್ರೋಫ್ ಕಲಾಪ್ರದರ್ಶನ ೨೦೦೮ ಮತ್ತು ಕ.ಲ.ಕ. ಆಕಾಡಮಿ ಬೆಂಗಳೂರ ೨೦೦೯ ಬಿಜಾಪೂರ ೨೦೦೮ ಹುಬ್ಬಳ್ಳಿ ಧಾರವಾಡ ಮೈಸೂರ ಕ.ಲ.ಕ.ಆ. ಬೆಂಗಳೂರ ೨೦೦೯. ಮಂಗಳೂರು ಬೆಂಗಳೂರ ೨೦೧೦ರಲ್ಲಿ ಕಲಾ ಪ್ರದರ್ಶನಗಳೊಂಡಿವೆ. ಕಲಾಪ್ರದರ್ಶನದಿಂದ ಚಿತ್ರಕಲಾ ವಿದ್ಯಾರ್ಥಿಗಳಿಗೆ. ಅರಿವು ಮೂಡಿಸಿದ್ದಾರೆ.

"ಕಲಾ ಶಿಬಿರಗಳು ಹಾಗೂ ವಿಚಾರ ಸಂಕೀರಣಗಳು" ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯವು ವಿದ್ಯಾರ್ಥಿಗಳು ಉಪಯುಕ್ತವಾಗುವಂತೆ ಅನೇಕ ಕಲಾಶಿಬಿರಗಳನ್ನು ವಿಚಾರ ಸಂಕೀರ್ಣಗಳನ್ನು ಹಮ್ಮಿಕೊಂಡು ಸೃಜನ ಶೀಲತೆ ಹಾಗೂ ಸಂವೇದನಾ ಶೀಲ ಅಂಶಗಳು ಸಮಕಾಲಿನ ಕಲೆಯ ಜೀವಾಳುವಾಗಬೇಕೆಂಬ ಹಿನ್ನಲೆಯಲ್ಲಿ ಕಲಾವಿದ ನಿತ್ಯ ನಡೆಸುವ ಪ್ರಯತ್ನಗಳು ಸಫಲತೆಯನ್ನು ಹೊಂದಿದೆ ಹೀಗೆ ಪ್ರತಿಯೊಬ್ಬ ಕಲಾವಿದನ ಡೆಸುವ ಪ್ರಯತ್ನಗಳ ಕಲಾಕ್ಷೇತ್ರದ ಕೊಡುಗಳಾಗಿವೆ. ಕಲಾವಿದನು ಕಲಾ ಕೃತಿಯಲ್ಲಿ ಬಳಸುವ ಕೈಚಳಕ ಹಾಗೂ ತಂತ್ರಗಳ ನವ್ಯಕಲೆಗೆ ದಾಖಲೆಗಳಾಗಿವೆ. ಇಂತಹ ನವ್ಯ ಕಲಾ ದಾಖಲೆಗಳ ಪ್ರಚಾರಕ್ಕೆ ಈ ಕಲಾ ಶಿಬಿರಗಳು ಅತ್ಯಂತ ಅವಶ್ಯ ಎಂಬುವುದ ಕಲಾಶಿಬಿರಗಳನ್ನು ಹಮ್ಮಿಕೊಂಡ ಶ್ರೇಯಸ್ಸನ್ನು ಪಡೆದುಕೊಂಡಿದೆ. ಜೆ.ಎನ್. ಚಿತ್ರಕಲಾ

ಮಹಾವಿದ್ಯಾಲಯದಲ್ಲಿ ಹಲವಾರು ಕಲಾ ಶಿಬಿರಗಳನ್ನು ಏರ್ಪಡಿಸಿದೆ ಜೋತೆಗೆ ಹೆಸರಾಂತ ಕಲಾವಿದರು, ಕಲಾವಿಮರ್ಶಕರು ಹಾಗೂ ಉಪನ್ಯಾಸಕರು, ವಿಚಾರ ಸಂಕೀರಣಗಳನ್ನು ಏರ್ಪಡಿಸುತ್ತ ಬಂದಿದೆ. ಡಾ. ಎಸ್.ಸಿ. ಪಾಟೀಲ, ಶ್ರೀ ಎಮ್.ಆರ್. ಬಾಳಿಕಾಯಿ, ಎಮ್.ಎನ್. ದಾಟನಾಳ ಕೆ.ವಿ. ಕುಂದಗೊಳ, ಶ್ರಿಯಾದಪ ಪರದೇಶೆ, ಎನ್. ಎ. ಹರ್ಲಾಪೂರ, ಸಿ.ಎನ್.ಪಾಟೀಲ ಡಾ. ಲಕ್ಷ್ಮೀದೇವಿ ಗವಾಯಿ ಶ್ರೀ ವಿಠ್ಠಲರಡ್ಡಿ ಚೂಳಕಿ, ಶ್ರೀ ಸುರೇಶ ಹಾಲಭಾವಿ ಪ್ರಾ. ಚಂದ್ರಶೇಖರ ವಸ್ತ್ರದ, ಪ್ರಾ. ಎಸ್.ವಿ. ಸಂಕನೂರ, ಪ್ರೊ. ಸಿ.ವ್ಹಿ. ಕೆರೆಮನಿ ಪ್ರೊ. ಬಿ.ಎಸ್. ರಾಠೋಡ ಇನು ಮುಂತಾದ ಸಾಹಿತ್ಯಗಳು ತಮ್ಮಲ್ಲಿರುವ ವಿಚಾರ ಧಾರೆಯ ಮತ್ತು ಅನುಭವದ ಸಂಪತನ್ನು ವಿದ್ಯಾರ್ಥಿಗಳಿಗೆ ಉಪನ್ಯಾಸ ಚರ್ಚೆಗಳ ಮೂಲಕ ಧಾರೆ ಎರೆದಿದ್ದಾರೆ.

ಕಲಾ ಪ್ರಾತ್ಯಕ್ಷಿತೆಗಳು : ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ, ಅನೇಕ ಕಲಾವಿದರನ್ನು ಬರಮಾಡಿಕೊಂಡು ಕಲಾ ಪ್ರಾತ್ಯಕ್ಷೇತೆಗಳು ನದಿವೆ ಅದರಲ್ಲಿ ಪ್ರಮುಖರಾದ ಹಿರಿಯ ಕಲಾವಿದರು ಅಮೇರಿಕಾ ಕಲಾವಿದ ಡಾಜ. ವಿಲ್ಸನ್ ಡಾ. ಜೆ.ಎಸ್. ಖಂಡೇರಾವ, ವಿ.ಟಿ. ಕಾಳೆ, ಬಾಬುರಾವ, ನಡೋನಿ, ಕೆ.ವಿ. ಕುಂದಗೋಳ, ಶ್ರೀ ಸಿ.ಎನ್. ಪಾಟೀಲ, ಅಶೋಕ ಅಕ್ಕಿ ಎನ್.ಎ.ಹರ್ಲಾಪೂರ ಕೆ.ಎಸ್.ಬಂಡಿ ಪ್ರಲ್ಹಾದ ಸಾಬಣನವರ ಕಮ್ಮಲ್ ಮಹ್ಮದ ಶ್ರೀ ಸಿ.ಜಿ.ಕೊಟ್ಟರ, ಶ್ರೀ ಡಿ.ಎಮ್.ಬಡಿಗೇರ ಎಸ್.ಎಮ್.ಲೋಹಾರ, ಸಿ.ಡಿ. ಜಟ್ಟೆಣ್ಣವರ ಡಿ.ಕೆ.ಕಾಮಕರ ಶ್ರೀಧರ ಚವ್ಹಾಣ ಪಿ.ಎ.ಕುಲಕರ್ಣಿ, ಮುಂತಾದ ಖ್ಯಾತಕಲಾವಿದರು ಭಾವ ಚಿತ್ರ, ವ್ಯಕ್ತಿ ಚಿತ್ರ ಸಂಯೋಜನಾ ಚಿತ್ರಗಳ ಪ್ರತ್ಯಕ್ಷತೆಯನ್ನು ನೀಡುವುದರ ಮೂಲಕ ವಿದ್ಯಾರ್ಥಿಗಳಿಗೆ ಉತ್ತಮವಾದ ಮಾರ್ಗದರ್ಶನವನ್ನು ಮಾಡಿದ್ದಾರೆ. ಇದು ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾಗಿದೆ. ಈ ಕಲಾ ಪ್ರತ್ಯಕ್ಷೆತೆಯಿಂದ ವಿದ್ಯಾರ್ಥಿಗಳಿಗೆ ಹೊಸ ಚೈತನ್ಯ ತುಂಬುದರ ಜೊತೆಗೆ ಬೆಲೆಕಟ್ಟಲಾಗದಿರುವ ಇರುವ ಈ ಕಲಾಕೃತಿಗಳು ಜೆ.ಎನ್. ಕಲಾ ಶಾಲೆಯಲ್ಲಿ ಅನೇಕ ಕಲಾಕೃತಿಗಳು ಸಂಗ್ರಹಗೊಂಡಿವೆ.

ಗಣ್ಯರ ಸಂದರ್ಶನ : ಚಿತ್ರ ಹಾಗೂ ಶಿಲ್ಪ ಕಲಾಕೃತಿಗಳು ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯಕ್ಕೆ ಈ ನಾಡಿನ ಅನೇಕ ಗಣ್ಯ ಮಾನ್ಯರ ಸಂದರ್ಶನ ನೀಡಿ ಶುಬ ಹಾರೈಸಿದ್ದಾರೆ. ಜಗದ್ಗುರು ನೀಲಕಂಠ ಮುಮ್ಮಡಿಸ್ವಾಮಿಗಳು ಪರಮಪೂಜ್ಯ, ಜಗದ್ಗುರು, ಡಾ॥ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಗದಗ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಮುಂತಾದವರು, ಪರಮಪೂಜ್ಯರ ಸಂದರ್ಶನ ನೀಡಿ ಆರ್ಶಿರ್ವದಿಸಿದ್ದಾರೆ. ಗಣ್ಯ ಮಾನ್ಯರು ಶ್ರೀ ಎಚ್.ಕೆ.ಪಾಟೀಲ ಬಸವರಾಜ ಹೊರಟಿ, ನಾಡೋಜ, ಡಾ. ಜೆ.ಎಸ್.ಖಂಡೇರಾವ, ನಾಡೋಜ, ವಿ.ಟಿ.ಕಾಳೆ ಎಮ್.ಆರ್.ಬಾಳಿಕಾಯಿ, ಶ್ರೀ ಚಿ.ಸು.ಕೃಷ್ಣಶೆಟ್ಟಿ ಶ್ರೀ ಡಿ. ಆರ್.ಪಾಟೀಲ, ಜಿಲ್ಲಾ ಅಧಿಕಾರಿ ಪೇಟೇಲ, ಡಿ.ವಿ.ಬೆಲ್ಲದ ಪ್ರೊ॥ ಎಸ್.ವಿ. ಸಂಕನೂರ ಶ್ರೀ ಚೆಂದ್ರಶೇಖರ ಸ್ವಾಮಿ, ಡಾ. ವಿವೇಕರೈ ಡಾ॥ ಎ. ಮುರಿಗೆಪ್ಪ ಡಾ॥ ಎಸ್.ಸಿ.ಪಾಟೀಲ ಶ್ರೀಬಾಬುರಾವ್, ಶ್ರೀ ಎ.ಎಸ್. ನಾಗರಹಳ್ಳಿ ಜಗನಾಥೆರಾವ್, ಇನ್ನೂ ಅನೇಕ ಅಧಿಕಾರಿಗಳು ಗಣ್ಯರು ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯಕ್ಕೆ ಸಂದರ್ಶನ ನೀಡಿ ಅನೇಕ ಸಲಹೆ ಸೂಚನೆಗಳನ್ನು ನೀಡಿ ಕಲಾವಾತಾವರಣವನ್ನು ಮೆಚ್ಚಿ ಹೂಗಳಿದ್ದಾರೆ.

ವಿ.ಡಿ.ಎಸ್.ಜೆ.ಎನ್.ಚಿತ್ರಕಲಾಮಹಾವಿದ್ಯಾಲಯ ಗದಗ



ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಬಾಡಿಗೆ ಕಟ್ಟಡ



ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದ ನೂತನ ಕಟ್ಟಡ



ಪ್ರಾ. ಎಂ.ಆರ್.ಬಾಗವಾನರವರ ಶಿಲ್ಪ ಕಲಾಕೃತಿಗಳು



ಚಿತ್ರ . ೧



ಚಿತ್ರ . ೨



ಚಿತ್ರ . ೩



ಚಿತ್ರ . ೪



ಚಿತ್ರ . ೫


ವಿ.ಡಿ.ಎಸ್ ಟಿ.ಎನ್.ಚಿತ್ರಕಲಾಮಹಾವಿದ್ಯಾಲಯ ಗದಗ



ಪ್ರಾ ಬಿ.ಎಲ್. ಚವ್ಹಾಣ ರವರ ಕಲಾಕೃತಿಗಳು



ಕರ್ನಾಟಕ ಉರ್ದು ಅಕಾಡೆಮಿ,ಯಿಂದ ರಾಷ್ಟ್ರ ಪ್ರಶಸ್ತಿ ಪಡೆದ ಕಲಾಕೃತಿ



ಚಿತ್ರ . ೧



ಚಿತ್ರ . ೪



ಚಿತ್ರ . ೨



ಚಿತ್ರ . ೩



ಬಿ.ಎಫ್.ಬಡಿಗೇರ ರವರ ಶಿಲ್ಪ ಕಲಾ ಕೃತಿಗಳು



ಚಿತ್ರ . ೨



ಚಿತ್ರ . ೧



ಚಿತ್ರ . ೪



ಚಿತ್ರ . ೩



ಚಿತ್ರ . ೫



ಎಂ.ಅರ್. ಹೆಬ್ಬಳ್ಳಿಯವರ ಕಲಾಕೃತಿಗಳು







ಎಂ.ಅರ್. ಹರ್ಲಾಪೂರವರ ಕಲಾಕೃತಿಗಳು








ಸಂಗಮೇಶ ಎನ್.ಹರ್ಲಾಪೂರವರ ಕಲಾಕೃತಿಗಳು



ಚಿತ್ರ . ೧



ಚಿತ್ರ . ೨



ಚಿತ್ರ . ೩



ಚಿತ್ರ . ೪



ವಿ.ವ್ಹಾಯ್.ಸೋಮನಕಟ್ಟಿಯವರ ಕಲಾಕೃತಿಗಳು



ಚಿತ್ರ . ೧



ಚಿತ್ರ . ೨



ಚಿತ್ರ . ೩



ಚಿತ್ರ . ೪



ಪಿ.ಬಿ.ಬಂಡಿ








ವಿ.ಎಲ್.ಬೆಳಗಲಿ





ಎನ್.ಟಿ..ಮಾಳವದಕರ










ಪಿ.ಎಸ್‌ಲಕ್ಕುಂಡಿ.



ಬಿ.ಎಚ್.ಕುರಿಯವರ







ರಾಜು ಉಮಚಗಿ



ಎಸ್.ಸಿಪಾಟೀಲ





ಶಂಕರಗೌಡ ಪಾಟೀಲ







ಆರ್. ಎಲ್.ಕಮ್ಮಾರ





ರಮೇಶ ಮುರಗೋಡ



ಸುಭಾಸ ರಜಪೂತ







ಶಿವಾನಂದ ಹಡಪದ



ಜೆ.ಕೆ.ಬಾಗವಾನರ







ಎನ್.ಎನ್.ಡಂಬಳ



ಮಹಾಂತೇಶ ಹಿರೇಮಠ






ಕಲಾವಿದ ಸಿ.ಎನ್. ಪಾಟೀಲರು ಪ್ರಾತ್ಯಕ್ಷಿತೆ ನೀಡುತಿರುವುದು



ಕಲಾವಿದ ಕೆ.ವಿ.ಕುಂದಗೋಳ ರವರು ಪ್ರಾತಿಕ್ಷೀತೆ ಮಾಡುತ್ತಿರುವುದು



ಕಲಾವಿದ ಡಿ.ಎಂ. ಬಡಿಗೇರ ರವರು
ಪ್ರಾತಿಕ್ಷಿತೆ ಮಾಡುತ್ತಿರುವುದು



ಕಲಾವಿದ ದಯಾನಂದ ಕಾಮಕರ ರವರು ಪ್ರಾತಿಕ್ಷಿತೆ ಮಾಡುತ್ತಿರುವುದು



ಕಲಾವಿದ ಬಾಬುರಾವ್ ನಡೋನಿಯವರು ಪ್ರಾತಿಕ್ಷಿತೆ ಮಾಡುತ್ತಿರುವುದು

ಶೈಕ್ಷಣಿಕ ಪ್ರವಾಸಗಳು ಮತ್ತು ಕಲಾ ಗ್ಯಾಲರಿಗಳ ಸಂದರ್ಶನ : ಜೆ.ಎನ್.ಚಿತ್ರಕಲಾವಿದ್ಯಾಲಯ ಹಲವಾರು ಶೈಕ್ಷಣಿಕ ಕೆಲಸಗಳನ್ನು ಮಾಡುವ ಮೂಲಕ ಅನೇಕ ಐತಿಹಾಸಿಕ ಪ್ರವಾಸಗಳ ಕೈಗೊಂಡಿದೆ ಮತ್ತು ಹಲವಾರು ಕಲಾಗ್ಯಾಲರಿಗಳಿಗೆ ಭೇಟಿ ನೀಡಿದ್ದಾರೆ. ಶಿಕ್ಷಣ ಕೇವಲ ನಾಲ್ಕು ಗೋಡೆಗಳ ಮಧ್ಯೆ ನಡೆಯುವಂತಲ್ಲಿ ವಿದ್ಯಾರ್ಥಿಗಳಿಗೆ ಸರ್ವೋತೋಮುಖ ಅಭಿವೃದ್ಧಿಯಾಗಲು ಸಾಧ್ಯಯವಾಗುವುದಿಲ್ಲ ದೇಶ ನೋಡು ಕೋಶ ಓದು ಎಂಬುದು ಜ್ಞಾನಿಗಳ ಮಾತು ಅಕ್ಷರಶ ಸತ್ಯ ಕಲೆ ಸಂಗೀತ ಸಾಹಿತ್ಯ ಇವು ಭವ್ಯ ಭಾರತದ ಸಾಂಸ್ಕೃತಿಕ ಪ್ರಾಕೃತಿಕ ಭವ್ಯ ನಾಗರಿಕತೆಯ ಬದುಕಿಗೆ ಅತ್ಯುತ್ತಮವಾದ ಸಂಸ್ಕೃತಿಯನ್ನು ನೀಡುತ್ತದೆ ಭಾರತವು ವಿವಿಧ ಜನಾಂಗಗಳ ವಿವಿಧ ಭಾಷೆ ಕಲೆ ಸಂಸ್ಕೃತಿ ಹಾಗೂ ಉಡುಗೆ ತೊಡುಗೆಗಳ ಸಮ್ಮಿಲನತೆಗಳೊಂದಿಗೆ ಭಾರತದ ವಿವಿಧತೆಯಲ್ಲಿ ಏಕತೆಯ ಸಾರವನ್ನು ತಿಳಿಸುವು ಇವೆಲ್ಲವುಗಳನ್ನು ಪ್ರತ್ಯಕ್ಷ ಕಂಡಾಗ ಸಿಗುವ ಆನಂದ ಹಾಗೂ ಅನುಭವ ಪ್ರಸ್ತಕ ಓದುವೂದರಿಂದ ಸಿಗಲಾರದು ಎಂಬುದು ಸತ್ಯ ವಿದ್ಯಾರ್ಥಿ ಜೀವನದಲ್ಲಿ ಪ್ರವಾಸವು ಶಿಕ್ಷಣದ ಪ್ರಮುಖ ಅಂಗ ಅಂಶಕವಾಗಿದೆ. ಜೆ.ಎನ್ ಕಲಾಶಾಲೆಯವು ಶೈಕ್ಷಣಿಕ ಪ್ರವಾಸದ ಪ್ರಯೋಜನೆಯನ್ನು ವಿದ್ಯಾರ್ಥಿಗಳಿಗೆ ನೀಡುತ್ತಾ ಬಂದಿದೆ. ಹಂಪಿ ಬದಾಮಿ, ಐಹೊಳ್ಳೆ, ಜೋಗ, ಶ್ರೀರಂಗ ಪಟ್ಟಣ ಬೇಲೂರು – ಹಳೆಬೀಡು, ಸಿರಶಿ, ಬನವಾಸಿ, ಹೊರನಾಡು, ಮುಡಗೋಡೆ, ಬೆಂಗಳೂರ, ಪ್ರಸಿದ್ಧ ಕಲಾಗ್ಯಾಲರಿ ಹಂಪಿ, ಶಿಲ್ಪಿ ಗ್ಯಾಲರಿ ಇನ್ನೊ ಮುಂತಾದ ಕಡೆಗಳಲ್ಲಿ ಕಲಾವಿದರ ಗ್ಯಾಲರಿಗಳ ಮತ್ತು ಶೈಕ್ಷಣಿಕ ಸ್ಥಳಗಳ ಪರಿಚರಿಯದೊಂದಿಗೆ ರಾಜ್ಯಗಳಲ್ಲಿ ವಿವಿಧ ಪ್ರಕಾರ ಕಲಾ ಸ್ವರೂಪವನ್ನು ಅರಿಯಲು ಜೆ.ಎನ್. ಕಲಾ ವಿದ್ಯಾಲಯ ಅನೇಕ ಕಾರ್ಯಕ್ರಮಗಳನ್ನು ಮಾಡುವುದರ ಜೊತೆ ಹಲವಾರು ಶೈಕ್ಷಣಿಕಗಳ ಪ್ರವಾಸಗಳನ್ನು ಹಮ್ಮಿಕೊಂಡು ಅನೇಕ ಐತಿಹಾಸಿಕ ಸ್ಥಳಗಳನ್ನು ಆಯ್ದುಕೊಂಡು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಮಾಡುತ್ತಿದೆ ಇದರಿಂದ ಕಲಾಶಾಲೆಯ ಹೆಚ್ಚಿನ ರೀತಿಯಲ್ಲಿ ಪ್ರಚಲಿತವಾಗುತ್ತದೆ ಜೋತೆಗೆ ಚಿತ್ರಕಲೆಗೆ ಹೆಚ್ಚಿನ ಪ್ರೊತ್ಸಾಹಕೊಡುತಿದೆ.[೨೩೪]

ರವೀಂದ್ರ ಚಿತ್ರಕಲಾ ನಿಕೇತನ ರೋಣ :

ಈ ಚಿತ್ರಕಲಾ ಮಹಾವಿದ್ಯಾಲಯವನ್ನು ಶ್ರೀ ಮಡಿವಾಳ ಮಾಚದೇವ ವಿದ್ಯಾ ಸಂಸ್ಥೆ ರೋಣದವರು ಗ್ರಾಮಿಣ ಭಾಗದಲ್ಲಿ ಚಿತ್ರಕಲೆ ಬೆಳೆಸಬೇಕು ಎಂಬ ಸದುದ್ದೇಶದಿಂದ ತಾಲೂಕಾ ಸ್ಥಳವಾದ ರೋಣದಲ್ಲಿ ಈ ಕಲಾಶಾಲೆಯನ್ನು ಪ್ರಾರಂಭವಾಯಿತು. ೧೯೯೧–೧೯೯೨ ಶ್ರೀ ಬಾಬುರಾರ್ವರವರು ಪ್ರಾರಂಭಿಸಿದರು ಅವರ ಆಡಳಿತದಲ್ಲಿ ಉತ್ತಮ ಕಲಾಶಾಲೆಯು ನಡೆಯತೊಡಗಿತ್ತು. ಕೆಲವು ವರ್ಷಗಳನಂತರ ಇದನ್ನು ಬೆರೆಯವರಿಗೆ ಹಸ್ತಾಂತರಿಸಲಾಯಿತು. ಈಗ ಇದು ಶ್ರೀ ಶಾಂತವೀರ ಸಂಸ್ಥೆಯ ಆಶ್ರಯದಲ್ಲಿ ಶ್ರೀ ಸಾಲಿಮನಿಯವರ ನಿರ್ದೇಶನದಲ್ಲಿ ನಡೆಯುತ್ತಿದೆ. ಯಾರಿಗೂ ಸದ್ದಿಲ್ಲದೆ ಈ ಕಲಾಶಾಲೆಯು ಉತ್ತಮವಾಗಿ ನಡೆಯುತ್ತಿದೆ.[೨೩೫]

---

೨೩೪. ಬಿ.ಎಫ್. ಬಡಿಗೇರ ರವರ ಸಂದರ್ಶನ ೨೪–೧೦–೨೦೧೦

೨೩೫. ರವೇಂದ್ರ ಕಲಾನಿಕೇತನ ರೋಣ ದಾಖಲಾತಿಗಳ ಸಂಗ್ರಹ

ಈ ವಿದ್ಯಾಲಯದಲ್ಲಿ ನಡೆದ ಮತ್ತು ನಡೆಯುತ್ತಿರುವ ಕೊರ್ಸ್‌ಗಳು :

ಕರ್ನಾಟಕ ಪ್ರೌಢಶಿಕ್ಷ ಪರೀಕ್ಷಾ ಮಂಡಳಿಯಿಂದ ನಡೆಯುವ ಕೊರ್ಸ್‌ಗಳು :

೧. ಡಿ ಎಂ.ಸಿ. ಆಯ್. ಡ್ರಾಯಿಂಗ್ ಟೀಚರ ಕೊರ್ಸ್

೨. ೩ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

೩. ೪ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

೪. ೫ನೇ ವರ್ಷದ ಡ್ರಾಯಿಂಗ್ ಮತ್ತು ಪೇಂಟಿಂಗ್

೫. ಎ.ಎಂ. ಆರ್ಟ್ ಮಾಸ್ತರ ಡಿಪ್ಲೋಮಾ

ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ನಡೆಯುವ ಕೊರ್ಸ್‌ಗಳು

೧. ದೃಶ್ಯ ಕಲಾ ಮೂಲ ಪ್ರಥಮ

೨. ದೃಶ್ಯಕಲಾ ಮೂಲ ದ್ವಿತೀಯ

೩. ೩ನೇ ವರ್ಷದ ವಿಶೇಷ ಪರಿಣಿತಿ

೪. ೪ನೇ ವರ್ಷದ ವಿಶೇಷ ಪರಿಣಿತಿ

೫. ೫ನೇ ವರ್ಷದ ವಿಶೇಷ ಪರಿಣಿತಿ

ರವೀಂದ್ರ ಕಲಾ ನೀತನ ವಿದ್ಯಾಲಯದಲ್ಲಿ ಅನೇಕ ಶಿಕ್ಷಕರು ಸೇವೆ ಸಲ್ಲಿಸಿದ್ದಾರೆ ಅವರನ್ನು ಈ ಕೆಳಗಿನಂತಿದ್ದಾರೆ.

ಶ್ರೀ ಆರ್. ಹಾದಿಮನಿ, ಶ್ರೀ ಚಕ್ರಣ್ಣವರ, ಶ್ರೀ ರಮೇಶ ಚವ್ಹಾಣ, ಶ್ರೀ ಎಸ್.ವ್ಹಿ. ಪಾಟೀಲ ಶ್ರೀ ಬಡಿಗೇರ, ರಾಠೋಡ, ಶಿವಾನಂದ ಹಡಪದ, ಶ್ರೀ ಎಫ್. ಎಚ್. ಬೇಲೂರ, ಮುಂತಾದ ಅನೇಕ ಶಿಕ್ಷಕರು ಇಲ್ಲಿ ಸೇವೆ ಸಲ್ಲಿಸಿ ತಮ್ಮದೇಯಾದ ಕೊಡುಗೆಯನ್ನು ನೀಡಿದ್ದಾರೆ.

ಪ್ರಾ, ರಮೇಶ ಚವ್ಹಾಣ : ರಮೇಶ ಚವ್ಹಾಣ ಇವರು ೧೯೭೭ ರಂದು ಬಿಜಾಪೂರದಲ್ಲಿ ಜನಿಸಿದ್ದಾರೆ. ಚಿತ್ರಕಲೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ ಇವರು ತುಮಕುರಿನ ರವಿಂದ್ರಕಲಾ ನಿಕೇತ ಚಿತ್ರಕಲಾ ವಿದ್ಯಾಲಯ ಪ್ರವೇಶ ಪಡೆದು ಎಲ್ಲ ಶಿಕ್ಷಕರ ಪ್ರೀತಿಯ ವಿದ್ಯಾರ್ಥಿಯಾಗಿ ಆರ್ಟ್ ಮಾಸ್ತರ ಡಿಪ್ಲೋಮಾ ಪದವಿಯನ್ನು ಪಡೆದುಕೊಂಡಿದ್ದಾರೆ. ಜಲವರ್ಣ, ತೈಲವರ್ಣ ಅಕ್ರಾಲಿಕ್ ಮಾದ್ಯಮದಿಂದ ಉತ್ತಮ ಕಲಾಕೃತಿ ರಚಿಸುವ ಇವರು ಅನೇಕ ರಾಜ್ಯ, ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರ, ಪ್ರದರ್ಶನಗಳಲ್ಲಿ ಭಾಗವಹಿಸಿ ಹಲವಾರು ಪ್ರಶಸ್ತಿ ಪುರಸ್ಕಾರ ಪಡೆದುಕೊಂಡಿದ್ದಾರೆ. ಇವರ ಕಲಾ ಪ್ರತಿಭೆಯಿಂದ ರೋಣದ ರವೀಂದ್ರ ಕಲಾ ನಿಕೇತನ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರ ಸೇವೆಗೆ ಸೇರಲು ಅವಕಾಶ ಒದಗಿ ಬಂತು ಸದಾ ಕ್ರೀಯಾಶೀಲರಾದ ರಮೇಶರವರು ವಿದ್ಯಾಲಯದಲ್ಲಿ ಹಲವಾರು ಬದಲಾವಣೆಯನ್ನು ತಂದು ಉತ್ತಮ ರೀತಿಯ ನಡೆಸತೊಡಗಿದ್ದರು ಇವರು ಮಾರ್ಗದರ್ಶನದಲ್ಲಿ ಅನೇಕ ವಿದ್ಯಾರ್ಥಿಗಳು ಹೊರಬಂದರು.[೨೩೬]

೨೩೬. ರಮೇಶ ಚವ್ಹಾಣರವರ ದಾಖಲಾತಿಗಳ ಸಂಗ್ರಹ

ರಮೇಶ ಚವ್ಹಾಣರವರು ಸದಾಕಲಿಯಬೇಕು ಏನಾದರು ಜೀವನದಲ್ಲಿ ಸಾಧಿಸ ಬೇಕು ಎಂಬ ಛಲವಂತರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪಿ.ಜಿ ಡಿಪ್ಲೋಮಾ ಪದವಿಯನ್ನು ಪಡೆದುಕೊಂಡಿದ್ದಾರೆ. ರಾಜ್ಯದ ಹಲವಾರು ಕಡೆಗಳಲ್ಲಿ ಕಲಾ ಶಿಬಿರ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಬಿಜಾಪೂರ, ತುಮಕುರ, ಬೆಂಗಳೂರು, ಗದಗ, ಹೈದರಾಬಾದ, ಬಿದರ ಗೋವಾ, ಚೆನ್ನೈ, ಮೈಸೂರ ಮುಂತಾದವುಗಳ ಕಡೆ ನಡೆದ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಬಿಜಾಪೂರ, ಹಂಪೆ, ಆರಳಗುಪ್ಪೆ, ಬೆಂಗಳೂರು ಧಾರವಾಡ, ಮುಡಬಿದರಿ, ಉಡುಪಿ, ಅಬ್ರಾಡ್, ಮುಂತಾದಕಡೆ ನಡೆದ ಚಿತ್ರಕಲಾ ಶಿಬಿರದಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರತಿಬೆಯನ್ನು ತೋರಿಸಿದ್ದಾರೆ. ಇವರ ಕಲಾಕೃತಿಗಳಿಗೆ ಮೈಸೂರ ದಸರಾ ಪ್ರಶಸ್ತಿ ಉತ್ತಮ ಶಿಕ್ಷಕರ ಪ್ರಶಸ್ತಿ ಟಿ.ಪಿ.ಅಕ್ಕಿ ಕಲಾಪ್ರದರ್ಶನ ಪ್ರಶಸ್ತಿ ಉತ್ತಮ ಛಾಯಾಚಿತ್ರಕಾರ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇವರ ಅನೇಕ ಕಲಾಕೃತಿಗಳು ಬೆಂಗಳೂರು, ಬಿಜಾಪೂರ, ಗದಗ, ಧಾರವಾಡ ಕೊಲ್ಲಾಪೂರ, ಪುಣೆ ಮುಂತಾದವುಗಳ ಕಡೆ ಸಂಗ್ರಹಗೊಂಡಿವೆ. ಸದ್ಯ ಇವರು ಸ್ವತಂತ್ರಕಲಾ ವಿದರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಹೀಗೆ ರವೀಂದ್ರ ಕಲಾ ನಿಕೇತನದಲ್ಲಿ ಉತ್ತಮ ವಿದ್ಯಾರ್ಥಿಗಳು ಕಲಿತ ಉತ್ತಮ ಕಲವಿದರಾಗಿ ಹಲವುಕಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಶಶಿಕಾಂತ ಬಸರಿಕಟ್ಟಿ : ಶಶಿಕಾಂತ ಬಸರಿಕಟ್ಟಿಯವರು ೧೯೭೭ ಜೂನ ೧ ರಂದು ಗದಗ ಜಿಲ್ಲೆಯ ರೋಣದಲ್ಲಿ ಜನಿಸಿದ್ದಾರೆ. ಚಿತ್ರಕಲೆಯಲ್ಲಿ ಆಸಕ್ತಿ ಇದ್ದ ಇವರು ರವೀಂದ್ರ ಕಲಾ ನಿಕೇತನ ರೋಣದಲ್ಲಿ ಪ್ರವೇಶಪಡೆದಿದ್ದಾರೆ ಉತ್ತಮ ಕಲಾವಿದ್ಯಾರ್ಥಿಇವರು ಅನೇಕ ಕಲಾಕೃತಿಗಳನ್ನು ಜಲವರ್ಣ, ತೈಲವರ್ಣ ಅಕ್ರಾಲಿಕ್ ಮಾಧ್ಯಮದಿಂದ ಉತ್ತಮಕಲಾಕೃತಿ ರಚಿಸಿ ಹಲವು ಕಡೆಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ರವೀಂದ್ರಕಲಾ ನಿಕೇತನದಿಂದ ಆರ್ಟ್ ಮಾಸ್ಟರ ಪದವಿಯನ್ನು ಪಡೆದುಕೊಂಡಿದ್ದಾರೆ. ಸದಾಕಲಿಯುವ ಆಸೇಯನ್ನು ಹೊತ್ತ ಶಶಿಕಾಂತರವರು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಎಂ.ವ್ಹಿ.ಎ. ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡಿದ್ದಾರೆ. ಮತ್ತು ಕನ್ನಡ ವಿಶ್ವವಿದ್ಯಾಲಯದಿಂದ ಕಲಘಟಗಿಯ ಕಲೆಯ ಕುರಿತು ಎಂ.ಫಿ.ಲ್ ಪದವಿಯನ್ನು ಪಡೆದು, ಕೊಂಡಿದ್ದಾರೆ. ಕನ್ನಡ ವಿಶ್ವವಿದ್ಯಾಲಯ ಹಂಪಿ, ಶಿಲ್ಪಕಲಾ ವಿಭಾಗದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.[೨೩೭]

ಇವರು ರಾಜ್ಯ, ರಾಷ್ಟ್ರ ಮಟ್ಟದ ಚಿತ್ರಕಲಾ ಶಿಬಿರ, ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಹಂಪಿ, ಬೆಂಗಳೂರು, ಬಿಜಾಪೂರ, ತುಮಕುರ, ದೇಲ್ಲಿ ಬದಾಮಿ, ಬೆಳಗಾಂಮಿ, ಗದಗ, ರೋಣ, ಮುಂತಾದ ಕಡೆ ನಡೆದ ಚಿತ್ರಕಲಾ ಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಶಶಿಕಾಂತ ಬಸರಿಕಟ್ಟಿಯವರು ಹವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ರವೀಂದ್ರ ಕಲಾ ನಿಕೇತನ ರೋಣ ೧೯೯೯ ಜೆ.ಎನ್ ಚಿತ್ರಕಲಾ ಮಹಾವಿದ್ಯಾಲಯ ಗದಗ ೧೯೯೯ ಚಿತ್ತಾರ ಆರ್ಟ್‌ಗ್ಯಾಲರಿ ಧಾರವಾಡ ೨೦೦೨, ಗುಂಬಜ ಆರ್ಟ್ ಬಿಜಾಪೂರ ೨೦೦೨ ನಿಸರ್ಗ ಚಿತ್ರಕಲಾ ಪ್ರಶಸ್ತಿ–೨೦೦೩ ಮುಂತಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರ ಅನೇಕ ಕಲಾಕೃತಿಗಳು ಗದಗ, ಧಾರವಾಡ, ಹಂಪಿ, ಬೆಂಗಳೂರು, ರೋಣ, ಬದಾಮಿ ಮುಂತಾದವುಗಳ ಕಡೆಗೆ ಸಂಗ್ರಹಗೊಂಡಿವೆ.

---

೨೩೭. ಶಂಶಿಕಾತ ಬಸರಿಕಟ್ಟಿ ದಾಖಲಾತಿಗಳ ಸಂಗ್ರಹ

ಆದರ್ಶ ಚಿತ್ರಕಲಾ ಮಹಾವಿದ್ಯಾಲಯ ಲಕ್ಷ್ಮೇಶ್ವರ : ಈ ಚಿತ್ರಕಲಾ ಮಹಾವಿದ್ಯಾಲಯವು ಹಳ್ಳಿಯುಜನರಲ್ಲಿ ಕಲೆಯು ಕುರಿತು ಆಸಕ್ತಿ ಮೂಡಲೆಂದು, ಹಳ್ಳಿಯು ವಿದ್ಯಾರ್ಥಿಗಳಿಗೆ ಅನೂಕೂಲವಾಗಲೆಂದು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರ ಎಂಬ ಗ್ರಾಮದಲ್ಲಿ ಕಲಾವಿದ ಕಲಾ ಶಿಕ್ಷಕರಾದ ಶ್ರೀ ಬಿ.ಎಸ್. ಆಲೂರರವರು ೧೯೯೩ರಲ್ಲಿ ಪ್ರಾರಂಭಿಸಿದರು ಈ ಚಿತ್ರಕಲಾ ಮಹಾವಿದ್ಯಾಲಯಕ್ಕೆ ಶ್ರೀ ಆರ್.ಬಿ. ಬಿಬಾನವರರವರು ಪ್ರಾಚಾರ್ಯರಾಗಿ, ಶ್ರೀಮತಿ ಅಕ್ಕಿಯವರು ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತದ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಈ ವಿದ್ಯಾಲಯದಲ್ಲಿ ಕಲಿತ ಅನೇಕ ವಿದ್ಯಾರ್ಥಿಗಳು ಪ್ರೌಢಶಾಲಾ ಶಿಕ್ಷಕರಾಗಿ ಕಲಾವಿದರಾಗಿ ಸೇವೆಸಲ್ಲಿಸುತ್ತಿದ್ದಾರೆ. ಆದರೆ ಕಾರಣಾಂತರದಿಂದ ಈ ಕಲಾ ಶಾಲೆಯು ಮುಂದುವರಿಯಲು ಆಗದೆ ಸ್ಥಗಿತ ಗೊಂಡಿದೆ.[೨೩೮]

ಚಿತ್ರ ಕಲಾ ಮಹಾವಿದ್ಯಾಲಯ ಮುಂಡರಗಿ : ಈ ಚಿತ್ರಕಲಾ ಮಹಾವಿದ್ಯಾಲಯವು ತಾಲೂಕಾ ಸ್ಥಳವಾದ ಮುಂಡರಗಿಯಲ್ಲಿ ಗದಗುಗಿನ ತೋಂಟದಾರ್ಯ ವಿದ್ಯಾಪೀಠದಿಂದ ಪ್ರಾರಂಭವಾಗಿತ್ತು. ಇಲ್ಲಿ ಶ್ರೀ ಹಿರೆಮಠ, ಕಮಲ ಅಹ್ಮದ, ನಿಂಬನಗೌಡರರವರು ಉಪನ್ಯಾಸಕರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅನೇಕ ವಿದ್ಯರ್ಥಿಗಳು ಈ ವಿದ್ಯಾಲಯದಲ್ಲಿ ಪ್ರವೇಶ ಪಡೆದು ಪ್ರಾಥಮಿಕ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕನಾಗಿ, ಕಲಾವಿದರಾಗಿ ಸೇವೆಸಲ್ಲಿಸುತ್ತಿದ್ದಾರೆ. ಉತ್ತಮ ಕಾರ್ಯಮಾಡುತ್ತಿದ, ತೊಂಟದಾರ್ಯ ವಿದ್ಯಾಪೀಠವು ಕೆಲವು ಕಾರಣಾಂತರದಿಂದ ನಡೆಸಲು ಆಗದೆ ಸ್ಥಗಿತಗೊಳಿಸಿದ್ದಾರೆ.[೨೩೯]

n n n

೨೩೮. ಲಕ್ಷ್ಮೇಶ್ವರ ದಾಖಲಾತಿಗಳ ಸಂಗ್ರಹ

೨೩೯. ಮುಂಡರಗೀ ದಾಖಲಾತಿಗಳ ಸಂಗ್ರಹ

ಅಧ್ಯಾಯ - ಆರು

ಗದಗ ಜಿಲ್ಲೆಯ ಹಿರಿಯ ಕಲಾವಿದರು ಮತ್ತು ಕಲಾಕೃತಿಗಳು



ಚಿತ್ರಕಲೆಯನ್ನು ಗಮನಿಸಿದಾಗ ಭಾರತೀಯ ಪರಂಪರೆ ಹಾಗೂ ಪಾಶ್ಚಾತ್ಯರ ತಂತ್ರಗಳ ಅತ್ಯುತ್ತಮ ಸಮನ್ವಯವನ್ನು ಚಿತ್ರ ರಚಿಸುವುದರ ಮೂಲಕ ಸಾಧನೆ ಮಾಡಿದ ಬಹುಜನ ಕಲಾವಿದರು ನಮ್ಮಲ್ಲಿ ಆಗಿದ್ದಾರೆ. ಐತಿಹಾಸಿಕ, ಪೌರಾಣಿಕ, ಧಾರ್ಮಿಕ ಚಿತ್ರಗಳನ್ನು ರಚಿಸಿ ಬದುಕಬಹುದು ಎಂಬುದನ್ನು ತೋರಿಸಿದ ಸುಖ-ದುಃಖದ ಬಾಳನ್ನು ಕಂಡುಕೊಂಡ ಹಿರಿಯ ಕಲಾವಿದರಿದ್ದಾರೆ. ಹಾಗೆಯೇ ರಾಜಾಶ್ರಯದಲ್ಲಿ ದುಡಿದ ಅತ್ಯುತ್ತಮ ಕಲಾವಿದರು ಅಲಂಕಾರಿಕ ಸೂಕ್ಷ್ಮ ಕಲೆ ಮತ್ತು ನೈಜಕಲೆಗಳಲ್ಲಿ ಖ್ಯಾತಿವೆತ್ತ ಹಾಗೂ ನವ್ಯ ಕಲಾತಂತ್ರದಲ್ಲಿ ಪ್ರಯೋಗ ನಡೆಸಿದ ಹಾಗೂ ನಡೆಸುತ್ತಿರುವ ಕಲಾವಿದರ ಸಾಧನೆ ಈ ನಾಡಿಗೆ ಕೀರ್ತಿ ತರುವುದರ ಜೊತೆಗೆ ಚಿತ್ರಕಲಾ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಅವರನ್ನು ಪರಿಚಯಿಸಿ ದಾಖಲೆಗಳನ್ನು ಮಾಡುವುದು ತುಂಬಾ ಮಹತ್ವದ್ದಾಗಿರುತ್ತದೆ. ಇತಿಹಾಸ ರಚಿಸುವ ಸಂದರ್ಭದಲ್ಲಿ ಈ ದಾಖಲೆಗಳು ಮಹತ್ವದ ಆಕರಗಳಾಗುತ್ತವೆ. ವಿದೇಶಿಯ ಕಲಾಪರಂಪರೆಯನ್ನು ಗಮನಿಸಿದಾಗ ಅಲ್ಲಿ ದಾಖಲೆಯ ಆಕಾರಗಳು ಹೇರಳವಾಗಿ ಲಭಿಸುತ್ತವೆ.

ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಸಾವಿರಾರು ಕಲಾಕೃತಿಗಳನ್ನು ನಿರ್ಮಿಸಿ, ತಮ್ಮದೇ ಆದಬಹುಮುಖ ವ್ಯಕ್ತಿತ್ವದಿಂದ ಕರ್ನಾಟಕದ ಕಲಾಕ್ಷೇತ್ರಕ್ಕೆ ಅಮೂಲ್ಯಕೊಡುಗೆ ನೀಡಿದ ನೂರಾರು ಕಲಾವಿದರಿದ್ದಾರೆ. ಅಂಥವರ ಕಲಾಕೃತಿಗಳ ಕುರಿತು ದಾಕಲಿಸುವುದ ಬಹಳ ಅವಶ್ಯವಾಗಿದೆ. ಅವು ಮುಂದಿನ ಪೀಳಿಗೆಗಳಿಗೆ ಉಪಯೋಗವಾಗುತ್ತವೆ.

ಗದಗ ಜಿಲ್ಲೆಯು ಚಿತ್ರಕಲಾ ಕ್ಷೇತ್ರದಲ್ಲಿ ತನ್ನದೆ ಆದ ಬಹುದೊಡ್ಡ ಕೊಡುಗೆಯನ್ನು ನೀಡಿದೆ. ಈ ಜಿಲ್ಲೆಯ ಖ್ಯಾತ ಕಲಾವಿದರಾದ ಶ್ರೀ ಶಿವಾನಂದ ಅಕ್ಕಿಯವರು ಚಿತ್ರಕಲೆಯಲ್ಲಿ ಸಾಕಷ್ಟು ಕೃಷಿ ಮಾಡಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆದಿದ್ದಾರೆ. ಹಿರಿಯ ಕಲಾವಿದರಾದ ಶ್ರೀ ಅಮೀನಸಾಹೇಬ ಕಮಡೊಳ್ಳಿಯವರು, ವೆಂಕಟಪ್ಪ ಪ್ರಶಸ್ತಿ ಪಡೆದ ಕಲಾವಿದ ಶ್ರೀ ಎಂ.ಎ.ಚೆಟ್ಟಿಯವರು ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೇ ವಿಶಿಷ್ಟ ಕೊಡುಗೆಯನ್ನು ನೀಡಿ ಗದುಗಿನ ಕೀರ್ತಿಯನ್ನು ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳಗಿಸಿದ್ದಾರೆ. ಕಲಾತಪಸ್ವಿ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಭುವನೇಶ್ವರಿಯ ಪ್ರಥಮ ಕಲಾಕೃತಿ ರಚಿಸಿ ರಾಜ್ಯಮಟ್ಟದಲ್ಲಿ ಗದುಗಿನ ಹೆಸರನ್ನು ಬೆಳೆಯಲಿಕ್ಕೆ ಶ್ರಮಿಸಿದ ಕಲಾಚಾರ್ಯ ಶ್ರೀ ಸಿ.ಎನ್. ಪಾಟೀಲ, ಗದಗ ಜಿಲ್ಲೆಯಲ್ಲಿ ಸಾಕಷ್ಟು ಸೇವೆ

ಸಲ್ಲಸಿ ಚಿತ್ರಕಲಾ ಸಾಹಿತ್ಯಕ್ಕೆ ಅನುಪಮ ಸೇವೆ ಸಲ್ಲಿಸಿದ ಹಿರಿಯ ಕಲಾವಿದ ಶ್ರೀ ವ್ಹಿ.ಟಿ.ಕಾಳೆ, ನೈಜ ಮತ್ತು ಸೃಜನಾತ್ಮಕ ಕಲಾಕೃತಿಗಳನ್ನು ರಚಿಸುವುದರ ಮೂಲಕ ಉತ್ತರ ಕರ್ನಾಟಕದಲ್ಲಿ ಏಕೈಕ ಆಧುನಿಕ ಕಲಾವಿದರೆಂದು ಹೆಸರು ಪಡೆದ ಕಲಾವಿದ ಶ್ರೀ ಎನ್.ಎ. ಹರ್ಲಾಪೂರ, ದಕ್ಷ ಆಡಳಿತಗಾರರಾದ ವಿಜಯ ಕಲಾಮಂದಿರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಶ್ರೀ ವಸಂತ ಅಕ್ಕಿ, ವಾಕ್‌ಚಾತುರ್ಯರು, ಕಲಾವಿದ ಶ್ರೀ ಕೆ.ವಿ. ಕುಂದಗೋಳ ಕಲಾಸಾಹಿತಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಕಲಾವಿದ ಎಸ್.ಎಂ.ಶಿರಹಟ್ಟಿ ಶ್ರೀ ಎ.ಆಯ್. ಕಮಾನಗಾರ, ಎ.ಎ. ಶಿರಹಟ್ಟಿ, ಶ್ರೀ ಎನ್.ಕೆ.ಹೂಗಾರ ಮುಂತಾದ ಅನೇಕ ಹಿರಿಯ ಕಲಾವಿದರು ಈ ಜಿಲೆಯಲ್ಲಿ ಬೆಳೆದು ಚಿತ್ರಕಲಾ ಕ್ಷೇತ್ರಕ್ಕೆ ಬಹದೊಡ್ಡ ಕೊಡುಗೆ ನೀಡಿದ್ದಾರೆ.

ಇವರಲ್ಲಿ ಅಧ್ಯಯನದ ವಿಷಯದ ವ್ಯಾಪ್ತಿಗನುಸಾರವಾಗಿ ರಾಷ್ಟ್ರಮಟ್ಟದಲ್ಲಿ ಬೆಳೆದು ಚಿತ್ರಕಲಾಕ್ಷೇತ್ರಕ್ಕೆ ಅನುಪಮ ಸೇವೆ ಸಲ್ಲಿಸಿದ ಹಿರಿಯ ಕಲಾವಿದರನ್ನು ಮಾತ್ರ ಈ ಅಧ್ಯಾಯದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವರ ಕಲಾಕೃತಿ, ಕಲಾ ಬದುಕು, ವೃತ್ತಿ ಜೀವನ, ಗೌರವ, ಪ್ರಶಸ್ತಿ ಪುರಸ್ಕಾರಗಳ ಕುರಿತು ಸ್ಥೂಲ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಶ್ರೀ ಅಮೀನಸಾಹೇಬ ಕಮಡೊಳ್ಳಿ

ಶ್ರೀ ಅಮೀನಸಾಹೇಬ ಕಮಡೊಳ್ಳಿಯವರು ೧೯೦೦ರಲ್ಲಿ ಲಕ್ಷ್ಮೇಶ್ವರದ ಸುಸಂಸ್ಕೃತ ಮನೆತನದಲ್ಲಿ ಜನಿಸಿದರು[೧]. ಬಾಲ್ಯದಲ್ಲಿ ಚಿತ್ರಕಲೆಯ ಕಡೆಗೆ ಹೆಚ್ಚಿನ ಆಸಕ್ತಿ ಇದ್ದ ಕಲಾವಿದ ಕಮಡೊಳ್ಳಿಯವರು ಪ್ರಾಥಮಿಕ ಶಾಲೆಯಲ್ಲಿ ಇದ್ದಾಗಲೇ ಅನೇಕ ಕಲಾಕೃತಿಗಳನ್ನು ರಚಿಸುತ್ತಿದ್ದರು. ಈ ಬಾಲಕನ ಕಲಾಭಿಲಾಷೆಯನ್ನು ಗುರುತಿಸಿದ ಹಿತೈಷಿಗಳು ಅಮೀನಸಾಹೇಬ ಉತ್ತಮ ಕಲಾವಿದನಾಗುತ್ತಾನೆ. ಆದ್ದರಿಂದ ಉನ್ನತ ಚಿತ್ರಕಲಾ ಅಭ್ಯಾಸ ಮಾಡಲು ಮುಂಬಯಿಯ ಜೆ.ಜೆ. ಕಲಾ ಶಾಲೆಗೆ ಕಳಿಸಿಕೊಟ್ಟರೆ ಉತ್ತಮ ಕಲಾವಿದ ನಾಗಬಲ್ಲ ಎಂದು ಅಮೀನಸಾಹೇಬ ಕಮಡೊಳ್ಳಿ ಅವರ ಹಿತೈಷಿಗಳು ಸಲಹೆ ನೀಡಿದರು.

ಬಾಲ್ಯದಲ್ಲಿಯೇ ತಂದೆತಾಯಿಯವರನ್ನು ಕಳೆದುಕೊಂಡಿದ್ದ ಅಮೀನ ಸಾಹೇಬರಿಗೆ ಅಣ್ಣ ಇಮಾಮಸಾಹೇಬನೇ ಆಶ್ರಯವಾಗಿದ್ದರು. ತಂದೆ ತಾಯಿಯವರ ಕೊರತೆಯನ್ನು ಇವರು ನೀಗಿಸಿದರು. ಯಾವುದೇ ರೀತಿಯ ಕೊರತೆಯಾಗದಂತೆ ನೋಡಿಕೊಂಡರು. ಉಚ್ಚ ಕಲಾ ಶಿಕ್ಷಣಕ್ಕಾಗಿ ಮುಂಬಯಿಗೆ ಹೋಗಲು ಎಲ್ಲ ರೀತಿಯ ವ್ಯವಸ್ಥೆ ಮಾಡಿದರು. ಇದೇ ವೇಳೆ ಶ್ರೀ ಶಿವಾನಂದ ಅಕ್ಕಿಯವರು ಉಚ್ಚ ಕಲಾ ಶಿಕ್ಷಣಕ್ಕೆ ಹೋಗಲು ತಯಾರಿ ನಡೆಸಿದ್ದರು. ಶಿವಾನಂದ ಅಕ್ಕಿ ಹಾಗೂ ಅಮೀನಸಾಹೇಬ ಕಮಡೊಳ್ಳಿಯವರು ಜೊತೆಗೂಡಿದರು. ೧೯೧೭ರಲ್ಲಿ ಮುಂಬಯಿಯ ಸರ್. ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಉಚ್ಚ ಕಲಾಶಿಕ್ಷಣಕ್ಕೆ ತಮ್ಮ ಪ್ರವೇಶ ಪಡೆದು ಕಲಾ ಅಧ್ಯಯನ ನಡೆಸಿದರು. ಕರ್ನಾಟಕದಿಂದ ಮುಂಬಯಿಯ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ಗೆ ಉಚ್ಚ ಕಲಾಶಿಕ್ಷಣ ಪಡೆಯಲು ಪ್ರಪ್ರಥಮವಾಗಿ ಹೋದ ಕೀರ್ತಿ ಶ್ರೀ ಅಮೀನಸಾಹೇಬ ಕಮಡೊಳ್ಳಿ ಮತ್ತು ಶ್ರೀ ಶಿವಾನಂದ ಅಕ್ಕಿಯವರಿಗೆ ಸಲ್ಲುತ್ತದೆ.[೨]

---

೧. ಲೇ. ಡಾ. ಲಕ್ಷ್ಮೀದೇವಿಗವಾಯಿ, ಕಲಾವಿದರ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು ಪು.ಸಂ. ೧೩೪

೨. ಸಂ. ವಿ.ಟಿ.ಕಾಳೆ ಲೇ. ಶಿವಾನಂದ ಅಕ್ಕಿ, ಕ.ಲ.ಕ ಅ.ಪು.ಸಂ.೯

ಅವರ ನಂತರ ಮುಂಬಯಿಯಲ್ಲಿ ಕಲಾ ಶಿಕ್ಷಣ ಪಡೆಯಲು ಹಿಂದಿನ ಮುಂಬಯಿ ಪ್ರಾಂತದ ಡ್ರಾಯಿಂಗ್ ಇನ್ಸಪೆಕ್ಟರ್‌ರಾಗಿದ್ದ ಶ್ರೀ ಡಿ.ಜಿ. ಬಡಿಗೇರ ಮತ್ತು ಶ್ರೀ ಎಂ.ಎ. ಚೆಟಿ ಶ್ರೀ ಜಿ.ಎಸ್.ದಂಡಾವತಿ ಮಠ ಶ್ರೀ ಎಂ.ವಿ. ಮಿನಜಗಿ, ಶ್ರೀ ಸಿ.ವಿಕಾರಡಗಿ ಮುಂತಾದವರು ಉತ್ತ ಕರ್ನಾಟಕದಿಂದಲೂ ಶ್ರೀ ಎಂ.ವೀರಪ್ಪ, ಶ್ರೀ ಸುಬ್ರಹ್ಮಣ್ಯರಾಜು. ಶ್ರೀ ಸೂಫಿಯವರು ಹಳೆ ಮೈಸೂರ ಸಂಸ್ಥಾನದಿಂದಲೂ ಹೋಗಿ ಉಚ್ಚ ಕಲಾ ಶಿಕ್ಷಣವನ್ನು ಪಡೆದು ಕರ್ನಾಟಕಕ್ಕಷ್ಟೇ ಅಲ್ಲ ಇಡೀ ಭಾರತ ದೇಶಕ್ಕೆ ಕೀರ್ತಿ ತಂದ ಕಲಾವಿದರೆನಿಸಿಕೊಂಡರು. ಅವರದೇ ಆದ ಸಂಪ್ರದಾಯ ನಿರ್ಮಾಣ ಮಾಡಿ ಸೃಜನಶೀಲ ದೈತ್ಯ ಕಲಾವಿದರು.[೩]

ಇಂದು ಮಹಾನ್ ಕಲಾವಿದರ ಜೊತೆಯಲ್ಲಿ ಕಲಾ ಅಭ್ಯಾಸ ಮಾಡಲು ಸರ್. ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನಲ್ಲಿ ಪ್ರವೇಶ ಪಡೆದ ಅಮೀನಸಾಹೇಬರು ಅನೇಕ ಉತ್ತಮವಾದ ಕಲಾಕೃತಿಗಳನ್ನು ರಚಿಸುತ್ತಿದ್ದರು. ಗುರುಗಳ ಮಾರ್ಗದರ್ಶನದಲ್ಲಿ ಪ್ರತಿಭಾವಂತ ವಿದ್ಯಾರ್ಥಿಯಾಗಿ ಪುಸ್ಕಾರದ ಶಿಷ್ಯವೇತವನ್ನು ಪಡೆದಿದ್ದರು. ಕಲಾವಿದ್ಯಾರ್ಥಿಯಾಗಿದ್ದಾಗಲೇ ಅವರ ಸ್ಕೆಚ್ ಇನ್ನ ಹಾರ್ಡ್‌ನ್, ತಾಜ ಆಫ್ ಆಗ್ರಾ, ಸ್ಕೇ ಆಫ್ ಲಕ್ಷ್ಮೇಶ್ವರ ಜಲವರ್ಣಗಳಿಗೆ ಬಹುಮಾನಗಳು ದೊರಕಿದ್ದವು, ಆಯಾಸ್ಕಾಂತದಂತಹ ಪ್ರತಿಭೆ, ಸರ್ವಗ್ರಾಹಿಯಾದ ಆಸಕ್ತಿ ಅದರೊಟ್ಟಿಗೆ ಸೃಜನಶೀಲತೆ ಪ್ರಯೋಗಶೀಲತೆಗಳು ಹಾಸುಹೊಕ್ಕಾಗಿ ಬೆಳೆದು ನಿಂತ ವ್ಯಕ್ತಿತ್ವವನ್ನು[೪] ಅಮೀನಸಾಹೇಬರು ಹೊಂದಿದವರಾಗಿದ್ದರು.

ಶ್ರೀ ಅಮೀನಸಾಹೇಬ ಕಮಡೊಳ್ಳಿಯವರು ವಿದ್ಯಾರ್ಥಿ ದಿಸೆಯಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದರು. ಯಾವುದೇ ವಿಷಯವಾದರೂ ಸರಿ ಆತ್ಮ ವಿಶ್ವಾಸದಿಂದ ಚಿತ್ರಿಸಬಲ್ಲ ಕಲಾವಂತಿಕೆ ಅವರಲ್ಲಿ ಇತ್ತು. ಭಾವಚಿತ್ರಗಳು, ನಿಸರ್ಗಚಿತ್ರಗಳು, ಸಂಯೋಜನಾ ಚಿತ್ರಗಳುಮುಂತಾದ ಕಲಾವಿಷಯಗಳು ಅದರಂತೆ ತೈಲವರ್ಣ, ಜಲವರ್ಣ, ಮೇಣವರ್ಣ, ಪುಡಿವರ್ಣಗಳ ಮಾಧ್ಯಮದಿಂದ ಅನೇಕ ಕಲಾಕೃತಿಗಳನ್ನು ನಿರ್ಮಾಣ ಮಾಡಿದ್ದಾರೆ. ಟಿಪ್ಪು ಸಮಾಧಿ, ಹಳ್ಳಿಯ ಸಂತೆ ಡೊಂಬರು, ಬುಡಬುಡಕೆಯವರು, ಮಂಗನಾಡಿಸುವ[೫] ಮುಂತಾದ ನಿತ್ಯ ಬದುಕಿನ ಚಿತ್ರಗಳಾಗಿವೆ. ಇವರು ತಮ್ಮ ಹೃದಯವನ್ನು ಸ್ಪಂದಿಸಿದ ಯಾವುದೇ ವಸ್ತುವಿನಲ್ಲಿಯೂ ಜೀವ ತುಂಬಿದ ಪ್ರತಿಭಾನ್ವಿತ ಕಲಾವಿದರಾಗಿದ್ದಾರೆ.

೧೯೨೦ರಲ್ಲಿ ಅವರು ಅಡ್ವಾನ್ಸ್ ಪೇಂಟಿಂಗ್ ಅಭ್ಯಾಸ ಮಾಡುತ್ತಿರುವಾಗ ಭಿತ್ತಿಚಿತ್ರ ರಚನಾ ಅಭ್ಯಾಸವನ್ನು ಕೈಗೊಂಡಿದ್ದರು. ಅದರಲ್ಲಿ ಉತ್ತಮ ಪ್ರಾವಿಣ್ಯವನ್ನು ಸಾಧಿಸಿರು. ಐದನೆ ವರ್ಷದ ಕಲಾ ಅಭ್ಯಾಸವನ್ನು ಪೂರೈಸಿ ಅಲ್ಲಿಯೇ ಕಲಾಶಿಕ್ಷಕರಾಗಿ ಕೃತಿಗಳನ್ನು ರಚಿಸಿ ದೇಶಾದ್ಯಂತ ನಡೆಯುತ್ತಿದ್ದ ಪ್ರಮುಖ ಮತ್ತು ಪ್ರಖ್ಯಾತ ಕಲಾಪ್ರದರ್ಶನಗಳಿಗೆ ಕಳಿಸಿಕೊಡುತ್ತಿದ್ದರು. ಅಮೀನಸಾಹೇಬ ಕಮಡೊಳ್ಳಿಯವರು ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿದ್ದಾರೆ. ಸುಮಾರು ೧೧ ವರ್ಷಗಳ ಅವಧಿಯಲ್ಲಿ ಬಂಗಾರದ ಪದಕ, ೧೩ ಬೆಳ್ಳಿಯ ಪದಕ, ೨ ಕಂಚಿನ ಪದಕ,

---

೩. ಸಂ. ವಿ.ಟಿ.ಕಾಳೆ ಲೇ. ಶಿವಾನಂದ ಅಕ್ಕಿ, ಕ.ಲ.ಕ ಅ.ಪು.ಸಂ.೯

೪. ಸಂ. ಅಶೋಕ ಅಕ್ಕಿ ಕೃತಪುರ ಕಲಾವೈಭವ ಚಿತ್ರ ಮತ್ತು ಶಿಲ್ಪಕಲಾವಿದರ ಕೈಪಿಡಿ ಲಕ್ಕುಂಡಿ ಉತ್ಸವ ೨೦೦೯ ಪು.ಸಂ. ೨೬

೫. ಸಂ. ಅಶೋಕ ಅಕ್ಕಿ ಕೃತಪುರ ಕಲಾವೈಭವ ಚಿತ್ರ ಮತ್ತು ಶಿಲ್ಪಕಲಾವಿದರ ಕೈಪಿಡಿ ಲಕ್ಕುಂಡಿ ಉತ್ಸವ ೨೦೦೯ ಪು.ಸಂ. ೨೬

೧೪ ನಗದು ಬಹುಮಾನ (೫೦ ರಿಂದ ೨೦೦ ರೂ). ಹಾಗೂ ೨೬ ಅತ್ಯಂತ ಪ್ರಮುಖ ಪ್ರಶಸ್ತಿ ಪತ್ರಗಳನ್ನು ಪಡೆದಿದ್ದಾರೆ.[೬] ಇಂತಹ ಪ್ರಶಸ್ತಿಗಳನ್ನು ಸಿಮ್ಲಾ, ಮುಂಬಯಿ, ಮದ್ರಾಸ್, ಮೈಸೂರು ಮತ್ತು ಬೆಂಗಳೂರು ಪಟ್ಟಣಗಳ ಕಲಾಸಂಸ್ಥೆಗಲು ಕೊಡಮಾಡಿವೆ.

ಶ್ರೀ ಅಮೀನಸಾಹೇಬ ಕಮಡೊಳ್ಳಿಯವರು ಮುಂಬಯಿಯ ಸುತ್ತಮುತ್ತಲಿನ ಎಲ್ಲ ನಿಸರ್ಗ ರಮಣೀಯತೆಯನ್ನು ತಮ್ಮ ಕಲಾಕೃತಿಗಳಲ್ಲಿ ಸೆರೆಹಿಡಿದಿದ್ದಾರೆ. ತಮ್ಮ ಚಿತ್ರಗಳ ಗುಣಾವಗುಣಗಳನ್ನು ಸ್ನೇಹಿತರೊಂದಿಗೆ ಚರ್ಚೆ ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಅವರು ಹೇಳುತ್ತಿದ್ದ ಮಾತುಗಳು ಗಮನಾರ್ಹ, ನಿಸರ್ಗ ಚಿತ್ರರಚನೆ ಬರೀ ಗುಡ್ಡ, ಗಿಡ, ಮೋಡಗಳನ್ನು ಚಿತ್ರಿಸುವುದಲ್ಲ. ಬದಲಾಗಿ ಆಯಾ ಪ್ರದೇಶದ ಪರಿಸರದ ವೈಶಿಷ್ಟ್ಯತೆಗಳನ್ನು ಚಿತ್ರದಲ್ಲಿ ತುಂಬಬೇಕಲ್ಲದೆ ಅದರಲ್ಲಿ ಗಾಳಿ ಸುಳಿದಾಡುವ ಅನುಭವೂ ಆಗಬೇಕು, ಮಳೆ, ಬಿಸಲು, ಮೋಡ ಕವಿದ ವಾತಾವರಣ ಪ್ರತಿಯೊಂದರ ಅನುಭವವು ಚಿತ್ರದಿಂದ ನಮಗಾಗಬೇಕು, ಅಲ್ಲದೇ ನಾವು ಸಾಧ್ಯವಾಗುವ ವಾತಾವರಣವನ್ನು ಮರೆಯುವಂತೆ ಮಾಡಿ ಚಿತ್ರದಲ್ಲಿರುವ ವಾತಾವರಣದೊಡನೆ ಒಂದಾಗುವ ಅನುಭವವನ್ನು ಅವು ತಂದುಕೊಡಬೇಕು[೭] ಎಂದು ಕಮಡೊಳ್ಳಿಯವರ ಅಭಿಪ್ರಾಯವಾಗಿತ್ತು.

ಸುಂದರವಾದ ನಿಸರ್ಗ ದೃಶ್ಯಗಳನ್ನು ತಮ್ಮ ಕೈಚಳಕದಿಂದ ಕುಂಚ ಬಣ್ಣದಿಂದ ಸರೆಹಿಡಿದ ಅನೇಕ ದೃಶ್ಯಗಳು ನೋಡುಗರಿಗೆ ಬೆರಗಾಗುವ ರೀತಿಯಲ್ಲಿ ರಚಿಸಿದ್ದಾರೆ. ಹಿಮಾಲಯದ ಕೆಲವು ಭಾಗ, ಕಾಶ್ಮೀರ, ಸಿಮ್ಲಾ, ನೈನಿತಾಲ, ಮಹಾಬಳೇಶ್ವರ, ಆಗ್ರಾ, ಮುಂಬಯಿ, ಗೋವಾ ಮತ್ತು ಕರ್ನಾಟಕದ ನಿಸರ್ಗಚಿತ್ರಗಳನ್ನು ಕಮಡೊಳ್ಳಿಯವರು ರಚಿಸಿದ್ದು ದವಂಗತ ಅನಕ್ಕ ಅವರು ಕಮಡೊಳ್ಳಿಯವರ ನಿಸರ್ಗ ಚಿತ್ರಗಳನ್ನು ಮೆಚ್ಚಿ ಆ ಬಗ್ಗೆ ವಿವರಗಳನ್ನೊಳಗೊಂಡ ಲೇಖನವನ್ನೇ ಬರೆದಿದ್ದಾರೆ. ಅವರ ನಿಸರ್ಗ ಚಿತ್ರಗಳ ರಸವಿಮರ್ಶೆಯನ್ನು ಮಾಡುತ್ತ "ಇವರು ರಚಿಸಿರುವ ಹುಬ್ಬಳ್ಳಿಯ ದೃಶ್ಯಗಳು, ಗೋವಾದ ಕರಂಜೋಲಿ ಕೊನೆ, ಕಾವಲಿನ ನಿಲ್ದಾಣದ ಹಿಂದಿರುವ ಭವ್ಯ ನಿಸರ್ಗ ನೋಟ, ಕ್ಯಾಸರ್‌ಲಾಕ್‌ನ ಹಾದಿಯಲ್ಲಿ ಗಾಢ ಗಂಭೀರತೆಗಳೆರಡೂ ಅತ್ಯಂತ ಮಾರ್ಮಿಕ, ಕರಂಜೋಲಿನ ನೋಟದಲ್ಲಿ ಚೇತೋಹಾರಿಯಾದ ಪ್ರಕೃತಿ ಸೂರ್ಯಕಾಂತಿಯೊಂದಿಗೆ ಚೆಲ್ಲಾಟ ಮಾಡುವಂತಿದೆ. ಎಷ್ಟು ಸುಂದರ, ಆದರೆ ಎಂತಹ ಮೌನ ಹೀಗೆ ಸಹೃದಯದಿಂದ ಕಲಾವಿದಂದ, ಕಲಾ ವಿಮರ್ಶಕರಿಂದ ಪ್ರಶಂಸಿಲ್ಪಟ್ಟ ಚಿತ್ರಗಳು, ಭಾರತದಲ್ಲಿ ಹಲವಾರು ವೈಯಕ್ತಿಕ ಹಾಗೂ ಸಂಘ ಸಂಸ್ಥೆಗಳಲ್ಲಿ ಸಂಗ್ರಹಿಸಲ್ಪಟ್ಟಿವೆ."[೮]

ಕಮಡೊಳ್ಳಿಯವರ ಬಹುಮುಖ ಪ್ರತಿಭೆಯನ್ನು ಕಂಡು ಅವರ ಸಂಯೋಜನ ಚಿತ್ರಗಳ ಬಗ್ಗೆ ಶ್ರೀ ಬಿ.ಕೆ.ಹಿರೇಮಠ ಅವರ ಈ ರೀತಿ ಹೇಳಿದ್ದಾರೆ. ಕಮಡೊಳ್ಳಿಯವರು ಸಂಯೋಜನಾ ಚಿತ್ರಗಳಲ್ಲಿ ಕಲಾವಿದನ ಉನ್ನತವಾದ ಸಂಸ್ಕಾರಗಳನ್ನು ಕವಿ ಹೃದಯವನ್ನು ಸಾಮಾಜಿಕತೆಯ ಅಡಿಯನ್ನು ಒಟ್ಟು ಜೀವನದ ಬಗೆಗೆ ಇರುವ ಕಳಕಳಿಯನ್ನು ಕಾಣಬಹುದು. ಎಲ್ಲಕಿಂತ ಹೆಚ್ಚಾಗಿ ಪಾಶ್ಚಾತ್ಯ ಕಲೆಯ ಗಾಢ ಪ್ರಭಾವದ ಮಧ್ಯದಲ್ಲಿಯೂ ಭಾರತೀಯ ಸಾಂಸ್ಕೃತಿಕ ಅಂಶಗಳನ್ನು ಭಾರತೀಯತೆಯನ್ನು

---

೬ ಡಿ.ವಿ.ಹಾಲಭಾವಿಯರ My contemporory Artists

೭ ಸಂ. ಡಾ. ಬಿ.ಕೆ. ಹಿರೇಮಠ ಲೆ, ಅಮೀನಸಾಹೇಬ ಕಮಡೊಳ್ಳಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೩

೮. ಲೇ. ಡಾ. ಲಕ್ಷ್ಮೀದೇವಿಗವಾಯಿ, ಎಂ.ಎ. ಚೆಟ್ಟಿ ಕಲಾ ಬದುಕು ಮತ್ತು ಕಲಾ ಕೃತಿಗಳು ಪು.ಸಂ. ೮೯

ಉಳಿಸಿಕೊಂಡು ಚಿತ್ರ ರಚನೆ ಮಾಡಿದ್ದು ಅವರ ಹಿರಿಮೆ. ಅವರ ಈ ವಿಶೇಷತೆಯನ್ನು ಎತ್ತಿ ಬರೆದ ಸರ್, ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನ ಮುಖ್ಯ ಪತ್ರಿಕೆಯಲ್ಲಿ ಕಮಡೊಳ್ಳಿಯವರ "ಚಳಿಗಾಲ" ಎಂಬ ಕೃತಿಯನ್ನು ವಿಮರ್ಶಿಸುತ್ತಾ "Western in its treatments, but pure Indian in the inspiration of its subject, this pand corresponds more others best to the clecorative traditions of than the modern frame Kamdoli's strength liesin colour" ಎಂದಿರುವುದು ಕಮಡೊಳ್ಳೀಯವರ ಕಲಾಕೃತಿಗಳ ಮಹತ್ವದ ಅಂಶವನ್ನು ಸೂಚಿಸುತ್ತದೆ. ಅಲ್ಲದೆ ಇವರೂ ಸಹ (ವಾಯಿಸ್‌ಲಿಗಲ್ ರಾಜ) ಈಗಿನ ರಾಷ್ಟ್ರಪತಿ ಭವನದ ಗುಮ್ಮಟದ ಮೇಲೆ ತಮ್ಮ ಕಲೆಯಿಂದ ಅಲಂಕರಿಸಿದ ಶ್ರೇಯಸ್ಸನ್ನು ಪಡೆದುಕೊಂಡರು.[೯] ಚಿತ್ರಕಲೆಯಲ್ಲಿ ಅಭೂತ ಪೂರ್ವ ಸಾಧನೆ ಮಾಡಿದ ಕಮಡೊಳ್ಳಿಯವರು ರಚಿಸಿದ ಅನೇಕ ಚಿತ್ರಗಳಲ್ಲಿ ಕೆಲವು ಕಲಾಕೃತಿಗಳು ಕಮಡೊಳ್ಳಿಯವರ ಶ್ರೇಯಸ್ಸಿಗೆ ಕಾರಣವಾದ ಕಲಾಕೃತಿಗಳಿವೆ.

ಮಾರ್ಕಂಡೇಯ, ರಾವಣ, ಜಟಾಯು, ಶುಕ್ರ ಮುಂತಾದ ಚಿತ್ರಗಳು ಕಲಾವಿದನ ಪೌರಾಣಿಕ ಪ್ರಜ್ಞೆಯ ಸಮೃದ್ಧವಾದ ಸುಂದರ ಕಲ್ಪನಾ ಚಿತ್ರಗಳಾಗಿವೆ. ಮಂಗನಾಟವಾಡಿಸುವವ, ಡೊಂಬರು, ಹಳ್ಳಿಯ ಸಂತೆ, ನಿತ್ಯಕಮರ ನೂಲಿನ ಮರಾಠಿಗೆ, ಮುಂತಾದ ಚಿತ್ರಗಳು ಜೀವನದ ವೈವಿಧ್ಯತೆಯ ನಗ್ನ ಸತ್ಯವನ್ನು ಮೂಡಿಸಿದ ಜೀವಂತ ಕಲಾಕೃತಿಗಳು, Nothing sweeter than, ತಾಯಿ ಮಗುವಿನ ವಾತ್ಸಲ್ಯವನ್ನು ನಿರೂಪಿಸಿದರೆ, Sketch in a garden, Taj at Agra, Southen Mecca Jumma Masjid ಮತ್ತು Sketch at Laxmeshwar, Bombay hom Malabar hill, ಮುಂತಾದ ಚಿತ್ರಗಳು ಕಮಡೊಳ್ಳಿಯವರ ಕಲಾಪ್ರತಿಭೆಯನ್ನು ಎತ್ತಿಹಿಡಿದು ಕಲಾ ಪ್ರಶಸ್ತಿಗಳನ್ನು ಗಳಿಸಿವೆ.[೧೦]

ಲಂಬಾಣಿ ಮುದುಕಿ ಕಮಡೊಳ್ಳಿಯವರು ರಚಿಸಿದ ಇನ್ನೊಂದು ಭಾವಚಿತ್ರ ಇದರ ವಿಮರ್ಶೆಯನ್ನು ಮಾಡುತ್ತ ಅನಕೃ ಅವರು ಹೇಳಿದ ಮಾತು ಗಮನಾರ್ಹ. "ಕಮಡೊಳ್ಳಿಯವರ ಕಲಾಪ್ರತಿಭೆಯನ್ನು ಸಾರುವ ಕೃತಿಗಳಲ್ಲಿ ಇದೊಂದು ಜೀವನದ ಸಾಧನೆಯನ್ನು ಸಮೀಕರಿಸಿದ ಲಂಬಾಣಿ ಮುದುಕಿ ಸಂತೆಯಲ್ಲಿ ಕೋಳಿಗಳನ್ನು ಮಾರಲು ಕುಳಿತಿದ್ದಾಳೆ. ಆದರೆ ವ್ಯಾಪಾರದ ಕಡೆಗೆ ಲಕ್ಷ್ಯವಿಲ್ಲ. ಮನಸೆಲ್ಲೋ ಹರಿದಾಡುತ್ತಿದೆ. ಯಾವುದೋ ಹಳೆಯ ನೆನಪು. ಅವಳ ಕಣ್ಣುಗಳಲ್ಲಿ ಅಪಾರವೇದನೆ, ಚಿಂತನೆ, ನೆನಹುಗಳು, ನಲಿಯದ ತುಟಿ ಬಾಳಿನ ಕಹಿಯನ್ನು ಎತ್ತಿ ತೋರುವ ಕೊರಳು, ಒಣಗಿದ ಕೈಕಾಲುಗಳು ಕುಳಿತಿರುವ ಸಹಜ ಭಂಗಿ, ಹೊಸೆದ ಹಗ್ಗದಂತಿರುವ ತಲೆಗೂದಲು ಚಿತ್ರಕ್ಕೆ ಅಪೂರ್ವವಾದ ಜೀವನ ಸಾಮಿಪ್ಯವನ್ನು ತಂದುಕೊಟ್ಟರೆ ಮನಸ್ಸಿನ ಕ್ಷೋಭೆ ಆಂದೋಲನಗಳಲ್ಲು ಸೂಕ್ಷವಾಗಿಯೂ ಚಿತ್ರ ವಿದ್ರಾವಕವಾಗಿಯೂ ತೋರುವ ಕೃತಿಗಳಲ್ಲಿ 'ಲಂಬಾಣಿ ಮುದುಕಿ' ಹಿರಿಯ ಸ್ಥಾನವನ್ನು ಪಡೆಯಸುತ್ತದೆ. ಇದು ತ್ರೀಕೋನ ಕೃತಿಯ ಜಾತಿಗೆ ಸೇರಿದೆ. ನೋಟಕನ ದೃಷ್ಟಿ ಕೇಂದ್ರೀಕೃತವಾಗಿ ಚಿತ್ರದ ಮುಖದ ಮೇಲೆ ಬೀಳುವುದೇ ಈ ಶೈಲಿಯ ಉದ್ದೇಶ, ಕಮಡೊಳ್ಳಿ ತಮ್ಮ ಉದ್ದೇಶವನ್ನು ಉತ್ಕೃಷ್ಠ ರೀತಿಯಲ್ಲಿ ಸಾಧಿಸಿದ್ದಾರೆ. ಅನಕೃ ಅವರು ಈ ವಿಮರ್ಶೆಯಲ್ಲಿ ಕಮಡೊಳ್ಳಿಯವರ ಕಲೆಯ ಗುಣಾತಿಶಯಗಳನ್ನೆಲ್ಲ ಎತ್ತಿ ತೋರಿಸಿದ್ದಾರೆ.[೧೧]

---

೯. ಲೇ. ಡಾ. ಲಕ್ಷ್ಮೀದೇವಿಗವಾಯಿ, ಎಂ.ಎ. ಚೆಟ್ಟಿ ಕಲಾ ಬದುಕು ಮತ್ತು ಕಲಾ ಕೃತಿಗಳು ಪು.ಸಂ. ೯೦

೧೦. ಲೇ. ಡಾ. ಲಕ್ಷ್ಮೀದೇವಿಗವಾಯಿ, ಎಂ.ಎ. ಚೆಟ್ಟಿ ಕಲಾ ಬದುಕು ಮತ್ತು ಕಲಾ ಕೃತಿಗಳು ಪು.ಸಂ. ೯೦

೧೧. ಲೇ. ಡಾ. ಲಕ್ಷ್ಮೀದೇವಿಗವಾಯಿ, ಎಂ.ಎ. ಚೆಟ್ಟಿ ಕಲಾ ಬದುಕು ಮತ್ತು ಕಲಾ ಕೃತಿಗಳು ಪು.ಸಂ. ೯೧

ಅಮೀನಸಾಹೇಬ ಕಮಡೊಳ್ಳಿಯವರು ಲಂಡನ್ನಿಗೆ ಪ್ರದರ್ಶನಕ್ಕೆ ಕಳಿಸಿದ ನೂಲುವ ಮಕಾರಿಗನ ಚಿತ್ರ ಕಮಡೊಳ್ಳಿಯವರ ಪ್ರತಿಭೆ ಹಾಗೂ ಕುಂಚದ ಕೌಶಲ್ಯವನ್ನು ಇಲ್ಲಿ ಗುರುತಿಸಬಹುದು. ಕೈಯಲ್ಲಿ ತಕಲಿಯನ್ನು ಹಿಡಿದು ನೂಲವ ಈ ವ್ಯಕ್ತಿ ಚಿತ್ರದ ಉದ್ದಕ್ಕೂ ಪ್ರಧಾನವಾಗಿ ನಿಂತ ಆಕೃತಿ. ನೂಲುವುದರಲ್ಲಿ ತನ್ಮಯವಾದಂತೆ ಮುಖಭಾವ, ಯುರೋಪಿಯನ್ ಕಲಾ ಶಿಕ್ಷಣದಂತೆ ದಷ್ಟಪುಷ್ಟವಾದ ದೇಹ, ಉದ್ದವಾದ ಕೃತಿ ಮೂರ್ತಿಯಾಗಿ ನಿಂತಿರುವ ಆ ವ್ಯಕ್ತಿಯೇ ಕಲಾಕೃತಿಯ ಕೇಂದ್ರ ಬಿಂದು. ಬಣ್ಣಗಳ ಸಮತೋಲನದಿಂದ ನೋಡುವವನ ದೃಷ್ಟಿ ಆ ವ್ಯಕ್ತಿಯನ್ನು ದಾಟಿ, ಅವನು ಕೆಲಸ ಮಾಡುತ್ತಿರುವ ಅವನ ಕೈಯಿಂದ ಇಳಿಬಿದ್ದ ತಕಲಿಯಲ್ಲಿ ನೆಡುತ್ತದೆ. ಯಾಕೆಂದರೆ ಅದರ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಲಾಗಿದೆ. ನಂತರ ಹಿನ್ನೆಲೆಯಲ್ಲಿರುವ ಚರಕಗಳಲ್ಲಿ ಸುಳಿದು ಇಡೀ ಚಿತ್ರದ ಸೌಂದರ್ಯವನ್ನು ಪ್ರದರ್ಶಿಸಿದೆ.[೧೨]

೧೯೨೪ರಲ್ಲಿ ಲಂಡನ್‌ನಲ್ಲಿ ನಡೆದ ವೆಂಜ್ಲೆ ಎಂಪಾಯರ್ ಕಲಾಪ್ರದರ್ಶನದಲ್ಲಿ ಭಾರತೀಯ ಚಿತ್ರಕಲೆ ಪ್ರದರ್ಶಿಸುವ ಸಲುವಾಗಿ ಇವರು "Venus" ಶುಕ್ರಗ್ರಹ ದೇವತೆಯನ್ನು ಚಿತ್ರಿಸಿದ್ದಾರೆ. ಈ ಪ್ರದರ್ಶನದಲ್ಲಿ ಯಾವ ರೀತಿ ಭಾಗವಹಿಸಲಾಯಿತೆಂಬುದನ್ನು ರಾವ್ ಬಹದ್ದೂರ ಧುರಂಧರ ಅವರು ಈ ರೀತಿ ಹೇಳಿದ್ದಾರೆ. "ವೆಂಜ್ಲೆ ಪ್ರದರ್ಶನದ ಸಲುವಾಗಿ ೨೦,೦೦೦ ರೂ. ಸರಕಾರದಿಂದ ಮಂಜೂರಾಗಿ ಬಂದಿತು. ಅದರಂತೆ ಭಾರತಿಯ ಚಿತ್ರಕಲೆಯನ್ನು ಪ್ರದರ್ಶಿಸುವ ಸಲುವಾಗಿ ಲಂಡನ್ನಿನಲ್ಲಿ ಭಾರತೀಯ ಕೋಣೆಯನ್ನು ಅತ್ಯಂತ ಸುಂದರವಾಗಿ ಅಲಂಕರಿಸಲಾಗಿತ್ತು. ಅದರ ಮೇಲೆ ಚಿತ್ರಗಳನ್ನು ತೂಗು ಬಿಡಲಾಗಿತ್ತು. ಆಪ್ಟೇ, ಜೋಶಿ, ಫರ್ನಾಂಡಿಸ್, ಕಮಡೊಳ್ಳಿ, ನಗರಕರ, ಸಮೀರಖಾನ ಇವರೆಲ್ಲ ಛತ್ತಿನ ಮೇಲೆ ನವಗ್ರಹದ ದೇವತೆಗಳನ್ನು ಚಿತ್ರಿಸಿದ್ದರು.[೧೩] ಈ ಕಲಾಕೃತಿಗಳು ಇಂದಿಗೂ ರಾಯಲ್ ಕಲಾ ಪ್ರದರ್ಶನದಲ್ಲಿ ಇಡಲಾಗಿದೆ. ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಶ್ರೀ ಅಮೀನಸಾಹೇಬ ಕಮಡೊಳ್ಳಿಯವರು ಅನಾರೋಗ್ಯದ ಕಾರಣವಾಗಿ ಮೀರಜ ಆಸ್ಪತ್ರೆಗೆ ಸೇರಬೇಕಾಯಿತು. ಆಗ ಅವರ ಹತ್ತಿರ ದುಡ್ಡಿರಲಿಲ್ಲ. ಅವರೊಬ್ಬ ಕಲಾವಿದರೆಂದು ತಿಳಿದ ಕೂಡಲೇ ಡಾಕ್ಟರ್ ಮೊದಲುಗೊಂಡು ಅವರನ್ನು ತುಂಬಾ ಕಾಳಜಿ ವಹಿಸಿ ಗೌರವದಿಂದ ಕಂಡರು. ಅವರು ತಮ್ಮ ಜೊತೆ ಬಣ್ಣ ಕುಂಚ ಮೊದಲಾದ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿದ್ದರು. ಅಲ್ಲಿ ವಿರಾಮವಾಗಿದ್ದಾಗಲೆಲ್ಲ ನಿಸರ್ಗ ಚಿತ್ರಗಳನ್ನು ಸಂಯೋಜನಾ ಚಿತ್ರಗಳನ್ನು ರಚಿಸುತ್ತಿದ್ದರು. ಅವುಗಳಲ್ಲಿ ಕೆಲವು ಕಲಾಕೃತಿಗಳನ್ನು ಡಾಕ್ಟರಿಗೆ ಕಾಣಿಕೆಯಾಗಿ ಕೊಟ್ಟು ಮತ್ತೆ ಕೆಲವನ್ನು ಅವರೇ ಆಸಕ್ತಿಯಿಂದ ಕೊಂಡುಕೊಂಡರು. ಅಂತು ಆಸ್ಪತ್ರೆಯಿಂದ ಆರಾಮಾಗಿ ಮುಂಬಯಿಗೆ ಹೊರಟು ನಿಂತಾಗ ನನ್ನ ಕೈಯಲ್ಲಿ ಸ್ವಲ್ಪ ಹಣ ಇತ್ತು ಕೆಲವು ಕಲಾಕೃತಿಗಳು ಇದ್ದವು.[೧೪] ಎಂದು ಹೇಳುತ್ತಿದ್ದರಂತೆ. ಹೀಗೆ ಅಮೀನಸಾಹೇಬ ಕಮಡೊಳ್ಳಿಯವರು ಯಾವಾಗಲೂ ಕಲಾಕೃತಿಗಳನ್ನು ರಚಿಸುವುದರ ಮೂಲಕ ಉತ್ತಮ ಕಲಾವಿದರಾಗಿ ತಮ್ಮದೇಯಾದ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದರು.

---

೧೨. ಲೇ. ಡಾ. ಲಕ್ಷ್ಮೀದೇವಿಗವಾಯಿ, ಎಂ.ಎ. ಚೆಟ್ಟಿ ಕಲಾ ಬದುಕು ಮತ್ತು ಕಲಾ ಕೃತಿಗಳು ಪು.ಸಂ. ೯೧

೧೩. ಲೇ. ಡಾ. ಲಕ್ಷ್ಮೀದೇವಿಗವಾಯಿ, ಎಂ.ಎ. ಚೆಟ್ಟಿ ಕಲಾ ಬದುಕು ಮತ್ತು ಕಲಾ ಕೃತಿಗಳು ಪು.ಸಂ. ೮೯

೧೪. ಡಾ. ಬಿ.ಕೆ. ಹಿರೇಮಠ, ಲೇ ಅಮೀನ ಸಾಹೇಬ ಕಮಡೊಳ್ಳಿ ಕ.ಲ.ಕೆ. ಅ. ಬೆಂ, ಪು.ಸಂ. ೨೦

ಅಮೀನಸಾಹೇಬ ಕಮಡೊಳ್ಳಿಯವರ ಆರೋಗ್ಯವು ಸರಿಯಾಗಿ ಇರಲಿಲ್ಲ. ಡ್ರಾಯಿಂಗ್ ಇನ್ಸಪೆಕ್ಟರ್ ಆಗಿದ್ದ ಮೇಸ್ತ್ರಿ ಅವರು ಇವರ ಕಲೆಯನ್ನು ಮೆಚ್ಚಿಕೊಂಡು ಅವರ ಆರೋಗ್ಯ ದೃಷ್ಟಿಯಿಂದ ಹುಬ್ಬಳ್ಳಿಗೆ ವರ್ಗಾಯಿಸಿದರು. ಶ್ರೀ ಅಮೀನಸಾಹೇಬ ಕಮಡೊಳ್ಳಿಯವರನ್ನು ಹುಬ್ಬಳ್ಳಿಯ ಆಂಗ್ಲೋ ಉರ್ದು ಶಾಲೆಯಲ್ಲಿ ಕಲಾಶಿಕ್ಷಕರಾಗಿ ವಿದ್ಯಾರ್ಥಿಗಳಿಗೆ ಉತ್ತಮವಾಗಿ ಬೋಧನೆಯನ್ನು ಮಾಡುತ್ತಿದ್ದರು. ಇವರ ಮಾರ್ಗದರ್ಶನದಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಚಿತ್ರಕಲೆಯ ಕುರಿತು ಹೆಚ್ಚಿನ ಆಸಕ್ತಿಯನ್ನು ಹೊಂದಿದವರಾಗಿದ್ದರು. ಎಲ್ಲ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರಾದರು. ಮುಂದೆ ಸ್ವಲ್ಪ ದಿನ ಅವರ ಅಣ್ಣನವರು ತೆಗೆದ ಫೋಟೋ ಸ್ಟುಡಿಯೋದಲ್ಲಿ ಸ್ಥಿರ ಮತ್ತು ಚಲನ ಛಾಯಾಚಿತ್ರಗ್ರಹಣದಲ್ಲಿಯೂ ಆಸಕ್ತಿ ತೋರಿಸಿ, ಕಲಾತ್ಮಕ ಛಾಯಾ ಚಿತ್ರಗಳ ಅಭಿರುಚಿಯನ್ನು ಜನತೆಯಲ್ಲಿ ತರಲು ಪ್ರಯತ್ನಿಸಿದರು. ಮುಂದೆ ಅಮೀನಸಾಹೇಬ ಕಮಡೊಳಳಿಯವರು ಧಾರವಾಡದ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಚಿತ್ರಕಲಾ ಶಿಕ್ಷಕರಾಗಿ ಅನೇಕ ಕಲಾಚಟುವಟಿಕೆಗಳನ್ನು ನಡೆಸಿದರು. ಹಲವಾರು ವಿದ್ಯಾರ್ಥಿಗಳಿಗೆ ಪಾಠಬೋಧನೆ ಮಾಡಿದರು. ಹಾಗೂ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಒಂದು ವಿಶೇಷವಾದ ಕಾರ್ಡ್ ಬೋಡ್ ಮಾಡಲಿಂಗ್ ತರಬೇತಿ ವರ್ಗಗಳನ್ನು ನಡೆಸಿದರು.[೧೫]

ಒಬ್ಬ ಕಲಾವಿದ ತನ್ನ ಬದುಕಿನ ಅನೇಕ ಹಂತಗಳಲ್ಲಿ ಬೇರೆ ಬೇರೆ ಪ್ರಭಾವಗಳಿಗೆ ಒಳಗಾಗಿ ವೈವಿಧ್ಯಮಯವಾದ ಕಲಾಕೃತಿಗಳನ್ನು ಸೃಷ್ಟಿ ಮಾಡುವಂತೆ ಕೆಲವೊಮ್ಮೆ ಎಲ್ಲ ಹಂತಗಳಲ್ಲೂ ಒಂದೇ ರೀತಿಯ ಪ್ರಭಾವಕ್ಕೆ ಒಳಗಾಗಿರಲೂ ಬಹುದು. ಈ ಸಮಾಜದಲಿ ನಡೆಯುವ ಅನೇಕ ಘಟನೆಗಳು ಪ್ರಕೃತಿಯಲ್ಲಿ ಕಂಡುಬರುವ ವಿಶಿಷ್ಟ ಸೌಂದರ್ಯ, ಇತ್ಯಾದಿ ಅಂಶಗಳು ಕಲಾವಿದನ ವೈಯಕ್ತಿಕ ರಸ ರುಚಿಗಳನ್ನು ಪ್ರಭಾವಿಸುತ್ತದೆ. ಅವನು ಆ ಪ್ರಭಾವಕ್ಕೆ ಪ್ರತಿಕ್ರಿಯಿಸಿ ಅಭಿವ್ಯಕ್ತಿಸುವ ರೀತಿ ಭಿನ್ನಭಿನ್ನವಾಗಿರುತ್ತದೆ. ಹೀಗೆ ಕಲಾಕೃತಿಯ ಕಲಾವಿದನೊಬ್ಬನ ಯಾವುದೇ ಅನುಭವಾದ ಅವನದೇ ಆದ ಅಂತರಗಂದ ಭಾವನಾತ್ಮಕ ಪ್ರಜ್ಞೆಯ ಅಭಿವ್ಯಕ್ತಿಯಾಗಿರುತ್ತದೆ. ಅಂತಹ ವಿಭಿನ್ನ ಭಾವನಾತ್ಮಕ ಪ್ರತಿಕಿಯೆಗಳನ್ನು ಈ ಸಮಕಾಲೀನ ಕಲಾವಿದರಲ್ಲಿ ಕಾಣುತ್ತೇವೆ.[೧೬] ಹೀಗೆ ಅಮೀನಸಾಹೇಬ ಕಮಡೊಳ್ಳಿಯವರ ಮುಂಬಯಿ ಸರ್. ಜೆ.ಜೆ. ಕಲಾಶಾಲೆಯಲ್ಲಿ ಉತ್ತಮವಾದ ಕಲಾಶಿಕ್ಷಣವನ್ನು ಪಡೆದು ಒಬ್ಬ ಶ್ರೇಷ್ಠ ಕಲಾವಿದರಾಗಿದ್ದರು. ಶೀಯುತರ ಬಣ್ಣಗಳ ಬಳಕೆ ಕಲಾಕೃತಿಗಳನ್ನು ರಚಿಸುವ ವಿಧಾನ ತತ್ರಗಾರಿಕೆಯು ಬಹಳ ವಿಭಿನ್ನ ರೀತಿಯದಾಗಿತ್ತು. ಒಬ್ಬ ಸಮರ್ಥಕಲಾವಿದ ಸಮರ್ಥ ಕಲಾಶಿಕ್ಷಕನಾಗಿ ಸೇವೆ ಸಲ್ಲಿಸಿಸುವುದರ ಮೂಲಕ ಗದಗ ಜಿಲ್ಲೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

೧೯೫೬ರಲ್ಲಿ ತಮ್ಮ ಶಿಕ್ಷಕ ವೃತ್ತಿಯಿಂದ ನಿವೃತ್ತರಾದರು. ಆ ವರ್ಷವೇ ಸೆಪ್ಟಂಬರ್ ತಿಂಗಳು ಕಲಾವಿದ ಕಮಡೊಳ್ಳಿಯವರು ನಮ್ಮನ್ನಗಲಿದರು. ಇವರ ಅಗಲಿಕೆಯಿಂದ ಕಲಾಕ್ಷೇತ್ರವು ಒಬ್ಬ ಪ್ರತಿಭಾವಂತ ಸಂಪನ್ನ ಹಿರಿಯ ಕಲಾವಿದನನ್ನು ಕಳೆದುಕೊಂಡಿತು.[೧೭] ಶ್ರೀ ಅಮೀನಸಾಹೇಬ

---

೧೫. ಲೇ. ಡಾ. ಲಕ್ಷ್ಮಿದೇವಿಗವಾಯಿ, ಐಂ. ಎ. ಚೆಟ್ಟಿಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೯೦
೧೬. ಲೇ. ಡಾ. ಲಕ್ಷ್ಮಿದೇವಿಗವಾಯಿ, ಐಂ. ಎ. ಚೆಟ್ಟಿಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೯೧
೧೭. ಲೇ. ಡಾ. ಲಕ್ಷ್ಮಿದೇವಿಗವಾಯಿ, ಐಂ. ಎ. ಚೆಟ್ಟಿಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೯೦

ಕಮಡೊಳ್ಳಿಯವರು ನಮ್ಮ ಜೊತೆಯಲ್ಲಿ ಇಲ್ಲ. ಆದರೆ ಅವರು ರಚಿಸಿದ ಅನೇಕ ಕಲಾಕೃತಿಗಳು ಮುಂದಿನ ಯುವಪೀಳಿಗೆಗಳಿಗೆ ಉಪಯುಕ್ತವಾಗಿದೆ.

ಅಮಿನ ಸಾಹೇಬ ಕವಡೊಳ್ಳಿಯವರು ತಮ್ಮದೇ ಆದ ಕಲಾಶೈಲಿಯಲ್ಲಿ ಕಲಾಕೃತಿಗಳನ್ನು ರಚಿಸುತ್ತಿದ್ದರು ಅವರ ಕಲಾ ಕೃತಿಗಳು ಈ ಕೆಳಗಿನಂತೆ ವಿಂಗಡಿಸಿ ಚರ್ಚಿಸಲಾಗಿದೆ.

೧. ನಿಸರ್ಗ ಚಿತ್ರಗಳು ೨. ರೂಪದರ್ಶಿಯ ಚಿತ್ರಗಳು ೩. ಸಂಯೋಜನೆಯ ಚಿತ್ರಗಳು.

೧. ನಿಸರ್ಗ ಚಿತ್ರಗಳು : ೧. ಕಾಶ್ಮೀರಿಗುಡ್ಡ : ಈ ನಿಸರ್ಗ ಕಲಾಕೃತಿಯ ಕಾಶ್ಮೀರ ಗುಡ್ಡದ ಜಲವರ್ಣದಿಂದ ರಚಿಸಿದ ಚಿತ್ರವಾಗಿದ್ದು ಗುಡ್ಡದ ಮೇಲೆ ಹಿಮಬಿದ್ದಷ್ಟು ಆಕರ್ಷಕವಾಗಿದೆ. ಗುಡ್ಡದಲ್ಲಿ ಸಾಲಾಗಿ ಬೆಳೆದಿರುವ ಗಿಡಗಳು ಹಿಂದೆ ಮುಂದೆ ಇರುವ ಕಲ್ಪನೆಯನ್ನು ಕಲಾವಿದ ವರ್ಣ ಮತ್ತು ಸ್ಥಳಾವಕಾಶದಿಂದ ತೊರಿಸಿದ್ದಾರೆ. ಚಿತ್ರದಲ್ಲಿ ಮುಂದಿನ ಭಾಗದಲ್ಲಿ ದೊಡ್ಡದಾದ ಗುಡ್ಡವಿದೆ. ಗುಡ್ಡದ ಕೆಳಗಡೆ ದೊಡ್ಡದಾದ. ಕಾಶ್ಮೀರ ಉದ್ದನೆಯ ಗಿಡವು ಅತ್ಯಂತ ಸುಂದರವಾಗಿದೆ. ಹಿನ್ನೆಲೆಯಾಗಿ ಗುಡ್ಡದ ಮೇಲೆ ಹಿಮ ಬಿದ್ದಿರುವಂತೆ ಆಕಾಶ ಮತ್ತು ಹಿಮವನ್ನು ಅತ್ಯಕರ್ಷಕವಾಗಿ ರಚಿಸಿದ್ದಾರೆ.

ಚಿತ್ರ : ೨.೩ : ಐತಿಹಾಸಿಕ ಸ್ಥಳ : ಈ ಕಲಾಕೃತಿಯು ಜಲವರ್ಣದಾಗಿದ್ದು ಐತಿಹಾಸಿಕ ಸ್ಥಳಗಳ ಕೊಟೆಯ ನಿಸರ್ಗ ಚಿತ್ರವಾಗಿದೆ. ಕಪ್ಪು ಬಿಳಿಪಿನ ಚಿತ್ರವು ಬಿದರದ ಕೋಟೆಯ ಚಿತ್ರದಂತೆ ಕಾಣುತ್ತದೆ. ಕೋಟೆಯ ಮಹಾದ್ವಾರ, ದ್ವಾರದಿಂದ ಬರುತ್ತಿರುವ ಜನರ ಚಿತ್ರವನ್ನು ನೆರಳು ಬೆಳಕಿನಲ್ಲಿ ಉತ್ತಮವಾಗಿ ಕಾಣುವಂತೆ ಸ್ಥಳಾವಕಾಶವನ್ನು ಬಳಸಿಕೊಂಡು ರಚಿಸಿದ್ದಾರೆ. ಮಹಾದ್ವಾರದ ಮೇಲೆ ಗೋಪುರ ವಿರುವ ಗುಡಿಯ ಅಥವಾ ಮಹಲಿನ ಚಿತ್ರವನ್ನು ಪ್ರಮಾಣಬದ್ಧವಾಗಿ ರಚಿಸಿದ್ದಾರೆ. ಕೋಟೆಯನ್ನು ನೋಡುತ್ತಿರುವ ಜನರ ಚಿತ್ರವನ್ನು ಉತ್ತಮರೀತಿಯಲ್ಲಿ ರಚಿಸಿದ ನಿಸರ್ಗಚಿತ್ರಗಳಾಗಿವೆ.

೨. ರೂಪದರ್ಶಿಯ ಚಿತ್ರಗಳು : ಚಿತ್ರ : ೧. ಲಂಬಾಣಿ ಮುದುಕಿ :ಈ ಚಿತ್ರವು ಜಲವರ್ಣದಾಗಿದ್ದು ಮುದುಕಿಯು ಕೊಳಿ ಮಾರುತ್ತಿದ್ದಾಳೆ ಆದರೆ ಯಾರು ಈ ಕೊಳಿಯನ್ನು ಕೊಂಡು ಕೊಳ್ಳಲಿಕ್ಕೆ ಬರುತ್ತಿಲ ಎಂಬ ಭಾವನೆಯನ್ನು ಕಲಾವಿದ ಕಮಡೊಳ್ಳಿಯವರು ಲಂಬಾಣಿ ಮುದುಕಿಯ ಚಿತ್ರದಲ್ಲಿ ತುಂಬಿದ್ದಾರೆ. ಹಣ್ಣಾದ ಮುದುಕಿಯು ಮುಂದೆಕೊಳಿಗಳನ್ನು ಇಟ್ಟುಕೊಂಡು ಕುಳಿತಿರುವ ದೃಶ್ಯವನ್ನು ಸುಂದರವಾಗಿ ರಚಿಸಿದ್ದಾರೆ. ಮುದುಕಿಯ ವೇಶ ಭೂಷಣಗಳನ್ನು ನೇರಳು ಬೆಳಕಿನಿಂದ, ಬಟ್ಟೆಯ ನಿರಿಗೆಗಳನ್ನು ಸುಂದರವಾಗಿ ರಚಿಸಿದ್ದಾರೆ. ಈ ಕಲಾಕೃತಿಯನ್ನು ನೊಡಿದ್ದಾಗ ನಿರಾಶೆಯಿಂದ ಕುಳಿತಿರುವ ಲಂಬಾಣಿ ಮುದುಕಿಯ ದೃಶ್ಯವನ್ನು ಕಲಾವಿದ ಕಮಡೊಳ್ಳಿಯವರು ಸುಂದರವಾಗಿ ಬಿಂಬಿಸಿದ್ದಾರೆ.

ಚಿತ್ರ : ೨ . ತಕ್ಕಲಿ ಹಿಡಿದ ವ್ಯಕ್ತಿ : ಈ ಕಲಾಕೃತಿಯನ್ನು ಕಲಾವಿದ ಜಲವರ್ಣದಿಂದ ರಚಿಸಿದ್ದಾರೆ. ತಕ್ಕಲಿಯನ್ನು ತಿರುಗಿಸುತ್ತಿರುವ ದಪ್ಪ ಮುಷ್ಟಾದ ವ್ಯಕ್ತಿಯ ಚಿತ್ರ ಇದಾಗಿದೆ. ವ್ಯಕ್ತಿಯ ಚಿತ್ರವು ಪ್ರಮಾಣಕ್ಕೆ ತಕ್ಕಂತಿವೆ, ನೆರಳು ಬೆಳಕಿನ ಕಡೆಗೆ ಹೆಚ್ಚಿನ ಪ್ರಮುಖ್ಯತೆಯನ್ನು ಈ ಚಿತ್ರದಲ್ಲಿ ಕಂಡುಬರುತ್ತದೆ. ಕೈ, ಕಾಲು, ಮುಖ, ಧರಿಸಿರುವ ಧೊತರವು ಸುಂದರವಾಗಿದೆ. ಕೈಯಲ್ಲಿ ತಕ್ಕಲಿಹಿಡಿದು ತಿರುಗಿಸುತ್ತಿರುವ ಈ ಚಿತ್ರವು ಅತ್ಯಂತ ಸುಂದರವಾಗಿದೆ ಹಿನ್ನೆಲೆಯಗಿ ಚರಕವನ್ನು ನೈಜ ರೀತಿಯಲ್ಲಿ ರಚಿಸಿದ್ದಾರೆ. ದಷ್ಟ ಮುಷ್ಟಾದ ವ್ಯಕ್ತಿಯ ಮೈಯನ್ನು ಕಲಾವಿದ ಅತ್ಯಂತ ಸುಂದರವಾಗಿ ಚಿತ್ರವನ್ನು ನೋಡಿದಾಗ ವ್ಯಕ್ತಿಯ ಮುಖ ಭಾವನೆಯನ್ನು ಸುಂದರವಾಗಿ ರಚಿಸಿದ್ದಾರೆ.


ಚಿತ್ರ : ೩ : ಲಂಬಾಣಿ ಮಹಿಳೆ : ಈ ಕಲಾಕೃತಿಯ ಮುಷ್ಠಿ ಕಟ್ಟಿಕೊಂಡಿರುವ ಲಂಬಾಣಿ ಮಹಿಳೆಯ ಚಿತ್ರವಾಗಿದ್ದು ಜಲವರ್ಣದಿಂದ ರಚಿಸಿದ್ದಾರೆ. ತಲೆಯ ಮೇಲಿನ, ಬುಟ್ಟಿಯನ್ನು ಅತ್ಯಂತ ಸುಂದರವಾಗಿ ಕಾಣುವಂತೆ ಕಲಾವಿದ ರಚಿಸಿದ್ದಾರೆ. ಲಂಬಾಣಿ ಮಹಿಳೆಯ ವೇಷಭೂಷಣಗಳನ್ನು ಉತ್ತಮ ರೀತಿಯಲ್ಲಿ ಧರಿಸಿದ್ದಾರೆ. ಬುಟ್ಟಿಯನ್ನು ಒಂದು ಕೈಯಿಂದ ಹಿಡಿದು ಇನ್ನೊಂದು ಕೈಯಿಂದ ಶೇರಗ ಹಿಡಿದುಕೊಂಡಿರುವ ಲಂಬಾಣಿ ಮಹಿಳೆಯ ಚಿತ್ರವನ್ನು ಪ್ರಮಾಣ ಬದ್ಧವಾಗಿ ನೇರಳು ಬೆಳಕನ್ನು ಪ್ರಾಮುಖ್ಯತೆ ನೀಡಿ, ಉತ್ತಮ ಕಲಾಕೃತಿಯನ್ನು ಕಲಾವಿದ ರಚಿಸಿದ್ದಾರೆ. ಹಿನ್ನಲೆಯಾಗಿ ಕಾಡಿನ ದೃಶ್ಯವನ್ನು ರಚಿಸಿದ್ದಾರೆ.

ಚಿತ್ರ : ೪ : ರೂಪದರ್ಶಿ : ಈ ಕಲಾಕೃತಿಯ ಜಲವರ್ಣದಿಂದ ರಚಿತವಾಗಿದ್ದು ಕಲಾವಿದ ರೂಪದರ್ಶಿಯ ಚಿತ್ರವನ್ನು ಯಥಾವತ್ತಾಗಿ ರಚಿಸಿದ್ದಾರೆ. ಈ ರೂಪದರ್ಶಿಯ ಚಿತ್ರವು ಕಮಡೊಳ್ಳಿಯವರು ಕಲಿಯುವ ಸಂದರ್ಭದಲ್ಲಿ ಜೆ.ಜೆ. ಕಲಾಶಾಲೆಯಲ್ಲಿ ಕಲಿಯವಾಗ ರೂಪದರ್ಶಿಯಾಗಿ ಕುಳಿತ ಚಿತ್ರ ಇದ್ದಾಗಿದೆ ಮಹಿಳೆಯ ನಗ್ನವಾಗಿ ಒಂದು ಕಟ್ಟೆಯ ಮೇಲೆ ಹಿಂದೆ ಕೈ ಇಟ್ಟುಕುಳಿತ್ತಿದ್ದಾಳೆ ಇನ್ನೊಂದು ಕೈಯನ್ನು ಎದೆಯ ಮೇಲೆ ಇಟ್ಟುಕೊಂಡು ಕುಳಿತಿರುವ ಚಿತ್ರ ಇದಾಗಿದೆ. ರೂಪದರ್ಶಿಯ ಕೆಳಮುಖಹಾಕಿಕೊಂಡು ಕುಳಿತ್ತಿದ್ದಾಳೆ. ಮುಂದೆ ಕಾಲು ಚಾಚಿ ಕುಳಿತುಕೊಂಡಿದ್ದಾಳೆ. ಕಲಾವಿದ ಕಮಡೊಳ್ಳಿಯವರು ಪ್ರಮಾಣಕ್ಕೆ ತಕ್ಕಂತೆ ಈ ಕಲಾಕೃತಿಯನ್ನು ರಚಿಸಿದ್ದಾರೆ ಸಂಯೋಜನೆಯ ಚಿತ್ರಗಳು.


ಸಂಯೋಜನೆಯ ಚಿತ್ರ : ಚಿತ್ರ : ೧. ಡೊಂಬರ ಆಟ : ಈ ಕಲಾಕೃತಿಯು ಡೊಂಬರ ಆಟವಾಡುತ್ತಿರುವ ಕಲಾಕೃತಿಯಾಗಿದೆ. ಜಲವರ್ಣದಿಂದ ರಚಿತವಾಗಿದೆ. ಎರಡು ಕೈಯ ಮೇಲೆ ನಡೆಯುತ್ತಿರುವ ಬಾಲಕ ಅದಕ್ಕೆ ಹಲಗೆ ಬಾರಿಸುತ್ತ ಪ್ರಚೋದನೆ ಮಾಡುತ್ತಿರು ಡೊಂಬರ ಆಟಗಾರರ ದೃಶ್ಯವನ್ನು ಕಲಾವಿದ ಅತ್ಯಂತ ಆಕರ್ಷಕವಾಗಿ ರಚಿಸಿದ್ದಾರೆ. ಸುತ್ತಲು ಆಟವನ್ನು ನೋಡುತ್ತಿರುವ ಜನರನ್ನು ಹಳ್ಳಿಯ ದೃಶ್ಯಮನೆ ಗುಡಿಸಲುಗಳ ಚಿತ್ರವನ್ನು ಸ್ಥಳಾವಕಾಶಕ್ಕೆ ತಕ್ಕಂತೆ ಪ್ರಮಾಣಬದ್ಧವಾಗಿ ಕಲಾಕೃತಿಯನ್ನು ರಚಿಸಿದ್ದಾರೆ. ನೇರಳು ಬೆಳಕಿನಿಂದ ಸ್ಥಳಾವಕಾಶವನ್ನು ಸರಿಯಾಗಿ ಬಳಸಿಕೊಂಡು ಸುಂದರವಾದ ಚಿತ್ರವನ್ನು ಕಲಾವಿದ ರಚಿಸಿದ್ದಾರೆ. ಉತ್ತಮ ಸಂಯೋಜನೆಯನ್ನು ಹೊಂದಿರುವ ಚಿತ್ರವಾಗಿದೆ.

ಚಿತ್ರ : ೨. ಮಂಗನ ಆಟಡಿಸುವ : ಈ ಕಲಾಕೃತಿಯನ್ನು ಕಮಡೊಳ್ಳಿಯವರು ಜಲವರ್ಣದಿಂದ ಉತ್ತಮ ಸಂಯೋಜನೆಯನ್ನು ರಚಿಸಿದ್ದಾರೆ. ಮಂಗಗಳೊಂದಿಗೆ ಆಟವಾಡುತ್ತಿರುವ ವ್ಯಕ್ತಿಯ ಚಿತ್ರವನ್ನು ಉತ್ತಮ ರೇಖೆ ವರ್ಣಗಳಿಂದ ರಚಿಸಿದ್ದಾರೆ. ಆಟಕ್ಕೆ ಸಹಾಯಕಿಯಾಗಿ ಮಹಿಳೆಯ ಸಾಥ ನಿಡುತ್ತಿದ್ದಾಳೆ. ಇನ್ನೊಂದು ಮಂಗವು ಕೈಯಲ್ಲಿ ಬಡಗಿಯನ್ನು ಹಿಡಿದುಕೊಂಡು ನೊಡುತ್ತಿದೆ. ಸೂತ್ತಲು ಜನರು ಮಂಗನ ಆಟನೊಡುತ್ತಿರುವ ಜನರ ಚಿತ್ರವನ್ನು ಕಲಾವಿದ ಕಮಡೊಳ್ಳಿಯವರು ಉತ್ತಮವಾಗಿ ರಚಿಸಿದ್ದಾರೆ ಈ ಚಿತ್ರವು ಸ್ಥಳಾವಕಾಶವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಸುಂದರವಾದ ಕಲಾ ಕೃತಿಯನ್ನು ರಚಿಸಿದ್ದಾರೆ. ಕಲಾಕೃತಿಯನ್ನು ನೋಡಿದಾಕ್ಷಣ ಮಂಗನ ಆಟ ಆಡಿಸುವವರ ಚಿತ್ರವನ್ನು ಕಲ್ಪನೆಗೆ ಬರುವಂತೆ, ರಚಿತವಾಗಿದೆ.

ಅಮಿನಸಾಹೇಬ ಕಮಡೊಳ್ಳಿಯವರ ಕಲಾಕೃತಿಗಳು




ಅಮಿನಸಾಹೇಬ ಕಮಡೊಳ್ಳಿ



೧.ಚಿತ್ರ



೨..ಚಿತ್ರ



೩.ಚಿತ್ರ

ಅಮಿನಸಾಬ ಕಮಡೊಳ್ಳಿಯವರ ಕಲಾಕೃತಿಗಳು



೪.ಚಿತ್ರ



೭.ಚಿತ್ರ


ಅಮಿನಸಾಬ ಕಮಡೊಳ್ಳಿಯವರ ಕಲಾಕೃತಿಗಳು



೧.ಚಿತ್ರ



೨.ಚಿತ್ರ



೩.ಚಿತ್ರ



೪.ಚಿತ್ರ

ಶ್ರೀ ಶಿವಾನಂದ ಅಕ್ಕಿ

ಗದಗ ತಾಲೂಕಿನ ಸೊರಟೂರು ಎಂಬ ಗ್ರಾಮದ ಶ್ರೀ ಪ್ರಭಪ್ಪ ಅಕ್ಕಿ ಅವರು ಲಕ್ಷ್ಮೇಶ್ವರದ ಸುಪ್ರಸಿದ್ಧ ವ್ಯಾಪಾರಿ ಮನೆತನದ ಶ್ರೀ ಅಣ್ಣಪ್ಪ ಭಾವಿಕಟ್ಟಿಯವರ ಸೋದರಿ ಮುದುಕಮ್ಮನ ಕೈಹಿಡಿದರು. ಶ್ರೀ ಪ್ರಭಪ್ಪ ಮತ್ತು ಶ್ರೀಮತಿ ಮುದುಕಮ್ಮ ದಂಪತಿಗಳ ಎರಡನೆಯ ಮಗನಾಗಿ ಶಿವಾನಂದ ಅಕ್ಕಿಯವರು ೧೯೦೦ ಮಾರ್ಚ್ ೫ ರಂದು ಲಕ್ಷ್ಮೇಶ್ವರದಲ್ಲಿ ಜನಿಸಿದರು. ಶ್ರೀ ಪ್ರಭಪ್ಪನವರಿಗೆ ಶಂಕರಪ್ಪ, ಶಿವಾನಂದ, ಟಾಕಪ್ಪ, ಈಶ್ವರಪ್ಪ ಎಂಬ ನಾಲ್ಕು ಜನ ಪುತ್ರರೂ ಚನ್ನಬಸಮ್ಮ ಎಂಬ ಪುತ್ರಿಯು ಜನಿಸಿ ಕುಟುಂಬ ಸಾಕಷ್ಟು ದೊಡ್ಡದಾಗಿತ್ತು. ಶ್ರೀ ಪ್ರಭಪ್ಪನವರಿಗಿದ್ದುದು ಒಂದೇ ಆಸೆ "ಮಕ್ಕಳು ಸುಶಿಕ್ಷಿತರಾಗಬೇಕು, ಗುಣವಂತರಾಗಬೇಕು"[೧೮] ಎಂಬುದು. ಬಾಲ್ಯದಲ್ಲಿಯೇ ಚಿತ್ರಕಲೆಯ ಕಡೆಗೆ ಹೆಚ್ಚಿನ ಆಸಕ್ತಿ ಹೊಂದಿದ ಶಿವಾನಂದರು ಪ್ರಾಥಮಿಕ ಶಾಲೆಯಲ್ಲಿಯೇ ಅನೇಕ ಕಲಾಕೃತಿಗಳನ್ನು ರಚಿಸುತ್ತಿದ್ದರು. ಶಾಲೆಯಿಂದ ಮನೆಗೆ ಬರುವಾಗ, ಮನೆಯಿಂದ ಶಾಲೆಗೆ ಹೋಗುವಾಗ ದಾರಿಯಲ್ಲಿ ಕಾಣಬರುತ್ತಿದ್ದ ಸಾಲು ಮರಗಳನ್ನು ದೂರದ ಗುಡ್ಡಬೆಟ್ಟಗಳನ್ನು ಮಂತ್ರಮುಗ್ಧನಂತೆ ತಾಸುಗಟ್ಟಲೇ ನಿಂತು ನೋಡುತ್ತಿದ್ದ ಶಿವಾನಂದನ ಸೌಂದರ್ಯಾನ್ವೇಷಣೆಯ ಬುದ್ಧಿಯನ್ನು ಕಂಡುಕೊಂಡ ಅವರ ಗುರುಗಳು ಚಿತ್ರಕಲೆಯನ್ನು ಕಲಿಯುವಂತೆ ಪ್ರೇರೇಪಿಸಿದರು. ರೋಗಿ ಬಯಸಿದ್ದೂ ಹಾಲೂ ಅನ್ನ ವೈದ್ಯರು ಹೇಳಿದ್ದು ಹಾಲೂ ಅನ್ನ ಎಂಬಂತಾಯಿತು. ಮುಂಬಯಿ ಸರಕಾರದವರು ನಡೆಸುತ್ತಿದ್ದ ಆಗಿನ ಎಲಿಮೆಂಟರಿ ಮತ್ತು ಇಂಟರ್ ಮಿಡಿಯೆಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳಲ್ಲಿ ಶಿವಾನಂದ ಉತ್ತಮ ಶ್ರೇಣಿಯಲ್ಲಿ ಪಾಸಾದರು. ಶಿವಾನಂದರಲ್ಲಿ ಇದ್ದ ಸೂಕ್ತವಾಗಿದ್ದ ಕಲೆಯನ್ನು ಅವರ ಗುರುಗಳು ಹಿರಿಯರು ಕಂಡುಕೊಂಡರು. ಇವರಿಗೆ "ಯೋಗ್ಯ ಚಿತ್ರಕಲಾ ಶಿಕ್ಷಣ ದೊರೆತರೆ ಶಿವಾನಂದನೊಬ್ಬ ಉತ್ತಮ ಕಲಾವಿದನಾಗಬಲ್ಲ ಎಂದೆಲ್ಲಾ ಮಾತನಾಡಿಕೊಂಡಿರು." ಈ ದಿಶೆಯಲ್ಲಿ ತಾಯಿ ಮುದುಕಮ್ಮ ಹುಬ್ಬಳ್ಳಿಯವರಲ್ಲಿ ಪ್ರಸ್ತಾಪವೆತ್ತಿದ್ದರು. ಶಿವಾನಂದ ಒಳ್ಳೆಯ ಕಲಾವಿದನಾಗುತ್ತಾನೆಂದು ಎಲ್ಲರೂ ಹೇಳುತ್ತಾರೆ. ಅದೆಲ್ಲ ನನಗೆ ತಿಳಿಯದು, ಕಲಾಶಿಕ್ಷಣ ನೀಡಬಲ್ಲ ಕಲಾಶಾಲೆಗಳು ಮುಂಬಯಿಯನ್ನು ಬಿಟ್ಟರೆ ಇನ್ನೆಲ್ಲಿಯೂ ಇರುವುದಿಲ್ಲ. ಅವನನ್ನು ಮುಂಬಯಿ ಕಲಾಶಾಲೆಗೆ ಕಳಿಸಿರಿ ಎಂದು ಹೇಳುತ್ತಾರೆ. ಏನು ಮಾಡಬೇಕೆಂದು ನನಗೆ ತಿಳಿಯುತ್ತಿಲ್ಲ.[೧೯] ಎಂದು ಮುದುಕಮ್ಮ ತಮಗಿರುವ ಆತಂಕವನ್ನು ಮನಬಿಚ್ಚಿ ತೋಡಿಕೊಂಡರು. ಇದನ್ನು ಅರಿತ ಹುಬ್ಬಳ್ಳಿಯವರು ಶಿವಾನಂದರಿಗೆ ಶಿರಸಂಗಿ ಲಿಂಗರಾಜ ದತ್ತಿಯ ಸ್ಕಾಲರ್‌ಶಿಫ್ ಸಿಗುವಂತೆ ಮಾಡಿದರು. ಶಿವಾನಂದರು ಈ ವೇಳೆಗಾಗಲೇ ಮ್ಯಾಟ್ರಿಕ್ ಪರೀಕ್ಷೆ ಪಾಸುಮಾಡಿ ಹೈಸ್ಕೂಲ ಶಿಕ್ಷಣವನ್ನು ಪೂರ್ತಿಗೊಳಿಸಿದ್ದರು. ಮುಂಬಯಿಗೆ ಹೋಗಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡರು. ಆದರೆ ಶಿವಾನಂದರಿಗೆ ಮುಂಬಯಿಯ ಭಾಷೆ ಸಂಸ್ಕೃತಿ ಎಲ್ಲ ಅಪರಿಚಿತವಾಗಿದ್ದರಿಂದ ಹೇಗೆ ಮಾಡಬೇಕು ಎಂಬ ಸಮಸ್ಯೆ ಕಾಡುತ್ತಿತ್ತು. ಆಗ ಮುಂಬಯಿಯಲ್ಲಿ ಕನ್ನಡಿಗರೇ ನಡೆಸುತ್ತಿರುವ ಗೌರಿಶಂಕರ ಪ್ಯಾಕ್ಟರಿ ಎಂಬುದೊಂದಿದೆ. ಅಲ್ಲದೆ ಕನ್ನಡಿಗರೇ ಆದ ಶ್ರೀ ತೋಟಪ್ಪ ಕೋಟಿ, ಶ್ರೀ ಸಿ.ಎನ್. ಹುಲಕೋಟಿ, ಶ್ರೀ ಎಸ್.ಸಿ.ಅಂಗಡಿ, ಶ್ರೀ ಹನಮಸಾಗರ,

೧೮. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೪

೧೯. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೬

ಶ್ರೀ ನವಲೇ ಮುಂತಾದವರು ಅಲ್ಲಿಯೆ ಕಾನೂನು ಅಭ್ಯಾಸ ಮಾಡುತ್ತಿದ್ದಾರೆಂದು ಶಿವಾನಂದರಿಗೆ ತಿಳಿಯಿತು. 'ಅವರೆಲ್ಲರ ಸಹಾಯ ಸಹಕಾರಗಳು ನನಗೆ ಖಂಡಿತ ದೊರೆಯುತ್ತದೆ.' ಎಂಬ ನಿರ್ಧಾರಕ್ಕೆ ಬಂದರು ಮುಂಬಯಿಗೆ ಹೋಗುವ ಸಕಲ ಸಿದ್ಧತೆಗಳನ್ನು ಮಾಡಿಕೊಂಡರು. ಹುಬ್ಬಳ್ಳಿಯ ಅನೇಕ ಜನಗಳು ಸಹಾಯ ನೀಡಿ ಶಿವಾನಂದರು ಮುಂಬಯಿಗೆ ಹೋಗುವಂತೆ ಪ್ರಚೋದಿಸಿದರು.[೨೦] ಇದೇ ವೇಳೆಯಲ್ಲಿ ಶ್ರೀ ಅಮೀನಸಾಹೇಬ ಕಮಡೊಳ್ಳಿಯವರೂ ಸಹ ಉಚ್ಚ ಚಿತ್ರಕಲಾ ಶಿಕ್ಷಣಕ್ಕಾಗಿ ಮುಂಬಯಿಗೆ ಹೋಗಲು ಶ್ರೀ ಶಿವಾನಂದರ ಜತೆಗೂಡಿದರು. ಶ್ರೀ ಶಿವಾನಂದ ಅಕ್ಕಿ ಹಾಗೂ ಶ್ರೀ ಅಮೀನಸಾಹೇಬ ಕಮಡೊಳ್ಳಿಯವರು ಸರ್. ಜೆ.ಜೆ.ಸ್ಕೂಲ್ ಆಪ್ ಆರ್ಟ್‌ನಲ್ಲಿ ತಮ್ಮ ಉಚ್ಚ ಕಲಾಶಿಕ್ಷಣಕ್ಕೆ ತೊಡಗಿದರು. ಉನ್ನತ ಚಿತ್ರಕಲಾ ಅಭ್ಯಾಸಕ್ಕಾಗಿ ಹೋದ ಕರ್ನಾಟಕದ ಪ್ರಥಮರು ಎಂದರೆ ಶ್ರೀ ಶಿವಾನಂದ ಅಕ್ಕಿ ಹಾಗೂ ಶ್ರೀ ಅಮೀನಸಾಹೇಬ ಕಮಡೊಳ್ಳಿಯವರು. ಈ ಶ್ರೇಯಸ್ಸು ಶ್ರೀ ಶಿವಾನಂದ ಹಾಗೂ ಶ್ರೀ ಅಮೀನಸಾಹೇಬ ಕಮಡೊಳ್ಳಿಯವರಿಗೆ ಸಲ್ಲುತ್ತದೆ. ತದನಂತರ ಮುಂಬಯಿ ಪ್ರಾಂತದ ಡ್ರಾಯಿಂಗ್ ಇನ್‌ಸಪೆಕ್ಟರ್‌ರಾಗಿದ್ದ ಶ್ರೀ ಡಿ.ಜಿ. ಬಡಿಗೇರ ಮತ್ತು ಶ್ರೀ ಎಂ.ಎ.ಚೆಟ್ಟಿ, ಶ್ರೀ ಜಿ.ಎಸ್.ದಂಡಾವತಿಮಠ, ಶ್ರೀ ಎಂ.ವೀರಪ್ಪ, ಶ್ರೀ ಸುಬ್ರಹ್ಮಣ್ಯರಾಜು, ಶ್ರೀ ಸೂಫಿ ಮುಂತಾದರು.[೨೧]

ಶ್ರೀ ಶಿವಾನಂದ ಅಕ್ಕಿ ಅವರು ಕೇವಲ ಕಲಾಕೃತಿಗಳನ್ನು ರಚಿಸುತ್ತ ಸದಾ ಭಾವಲೀನರಾಗಿ ಮೂಲೆಯಲ್ಲಿ ಕುಳಿತುಕೊಳ್ಳುವ ಮುಗ್ಧ ಚಿತ್ರಕಾರರಾಗಿದ್ದರು. ಅಚ್ಚುಕಟ್ಟಾದ ಉಡಿಗೆ ತೊಡಿಗೆಗಳಿಂದಲೂ ಸದಾ ಕಂಠದಲ್ಲಿ ಶೊಭಿಸುವ ಒಂದನ್ನು ಧರಿಸಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತ ಸರ್ವರ ಮೆಚ್ಚುಗೆ ಮನ್ನಣೆಗಳಿಗೆ ಪಾತ್ರರಾಗಿದ್ದ ಸುಸಂಸ್ಕೃತ ವಿದ್ಯಾರ್ಥಿಯಾಗಿ ಪರಿವರ್ತನೆಗೊಂಡಿದ್ದರು. ಹಾಸ್ಯ ಪ್ರವೃತ್ತಿಯವರಾದ ಶ್ರೀ ಶಿವಾನಂದರು ಸದಾ ಕ್ರೀಡಾ ಆಸಕ್ತಿ ಹೊಂದಿದವರಾಗಿದ್ದರು, ಕ್ರೀಡೆಯೇ ಎಲ್ಲ ಎನ್ನುವಷ್ಟರ ಮಟ್ಟಿಗೆ ಅವರು ಆಟ-ಪಾಠಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುತ್ತಿದ್ದರು.[೨೨] ಸೃಜನಶೀಲರಾದ ಶ್ರೀ ಅಕ್ಕಿಯವರನ್ನು ಕಂಡ ಕ್ಯಾಪ್ಟನ್ ಗ್ಲ್ಯಾಡ್‌ಸನ್ ಸೊಲೋಮನ್ ಅವರು ಅಭ್ಯಾಸ ಯಾತ್ರೆಗೆಂದು ಆರಿಸಿದ ವಿದ್ಯಾರ್ಥಿಗಳ ತಂಡದೊಂದಿಗೆ ಶಿವಾನಂದರನ್ನು ದೆಹಲಿಗೆ ಕರೆದುಕೊಂಡು ಹೋದರು. ಅಲ್ಲಿ ಶಿವಾನಂದರು ರಚಿಸಿದ ನಿಸರ್ಗ ಚಿತ್ರಕಲಾ ಕೃತಿಗಳು ನೋಡುಗರನ್ನು ಮಂತ್ರಮುಗ್ಧರನ್ನಾಗಿ ಮಾಡುವ ಅದ್ಭುತ ರಮ್ಯ ಕೃತಿಗಳಾಗಿದ್ದವು. ನಿಸರ್ಗ ಸೌಂದರ್ಯದೊಂದಿಗೆ ಸುಸ್ಪಷ್ಟವಾಗಿ ಬೆರೆತುಹೋಗುವ ತಾದಾತ್ಮ್ಯತೆ ಶಿವಾನಂದರಿಗೆ ಬಾಲ್ಯಾವಸ್ಥೆಯಲ್ಲಿಯೇ ಮೈಗೂಡಿತ್ತು.

೧೯೨೪ರಲ್ಲಿ ಶ್ರೀ ಶಿವಾನಂದ ಅವರು ಸರ್ ಜೆ.ಜೆ.ಕಲಾಶಾಲೆಯ ಅತ್ಯುನ್ನತ ಪದವಿ ಪರೀಕ್ಷೆಯಾದ ಆರ್ಟ್ ಮಾಸ್ಟರ್ ಪರೀಕ್ಷೆಯನ್ನು ಉಚ್ಚ ಶ್ರೇಣಿಯಲ್ಲಿ ಪಾಸು ಮಾಡಿದರು. ಶ್ರೀ ಶಿವಾನಂದರು ಐತಿಹಾಸಿಕ ಅವಶೇಷಗಳನ್ನು ಕಂಡಾಗ ಅವುಗಳ ಹಿಂದಿನ ವೈಭವ ಹೇಗಿದ್ದರಬೇಕೆಂದು ಊಹಿಸಿ ಮನದಲ್ಲಿಯೇ ನೊಂದುಕೊಳ್ಳುತ್ತಿದ್ದರು. ನಾಸಿಕ, ಗದಗ, ಲಕ್ಕುಂಡಿ, ದೆಹಲಿ, ಮಹಾಬಲೇಶ್ವರ, ಪಂಚಗಣಿ ಮುಂತಾದ ಐತಿಹಾಸಿಕ ಸ್ಥಳಗಳ ಚಿತ್ರಣಕ್ಕಾಗಿ ಭಾರತದ ಪೂರ್ವದಿಂದ ಪಶ್ಚಿಮ,

೨೦. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೮

೨೧. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೯

೨೨. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೧೧

ದಕ್ಷಿಣದಿಂದ ಉತ್ತರದುದ್ದಕ್ಕೂ ಸಂಚರಿಸಿ ಅಲ್ಲಿ ಅವರಿಗೆ ಕಂಡ ಅದ್ಭುತ ಸ್ಮಾರಕಗಳ ಚಿತ್ರಗಳನ್ನು ಚಿತ್ರಿಸಿದರು. ಹೀಗೆ ಅವರು ಚಿತ್ರೀಸಿದ ಖಂಡಾಳಾ ಘಾಟ್‌ಗಳ ಸುಂದರ ನಿವೇಶನಗಳ ವರ್ಣಚಿತ್ರಗಳು ಅತ್ಯದ್ಭುತವಾಗಿದ್ದವು.[೨೩]

ಸದಾ ಕಲಾ ಚಟುವಟಿಕೆಯಲ್ಲಿ ತೊಡಗಿರುವ ಶಿವಾನಂದ ಅಕ್ಕೆಯವರು ಚಿತ್ರಕಲಾ ಶಿಕ್ಷಣ ಭಾರತದ ಜನರಿಗೆ ಸಿಗಲೇಬೇಕು. ಭರತದ ತುಂಬೆಲ್ಲ ಕಲಾಶಾಲೆಗಳು ಹುಟ್ಟಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಚಿತ್ರಕಲೆಯ ಸದುಪಯೋಗ ಆಗಬೇಕು ಅವರಿಗೆ ಮಾರ್ಗದರ್ಶನ ಮಾಡಬೇಕು ಅಂದಾಗ ಗುರುಗಳ ಕನಸು ನನಸಾಗುವುದು ಎಂದುಕೊಂಡು ಶಿವಾನಂದ ಅಕ್ಕಿಯವರು ಮುಂಬಯಿಯಲ್ಲಿಯೇ ತಮ್ಮದೇ ಆದ ಕಲಾಶಾಲೆಯನ್ನು ತೆರೆಯಲು ನಿರ್ಧರಿಸಿಕೊಂಡರು. ಈ ಮೂಲಕ ಕಲಾಶಿಕ್ಷಣ ಕ್ಷೇತ್ರಕ್ಕೆ ತಮ್ ಅಳಿಲು ಸೇವೆ ಸಲ್ಲಬೇಕು ಎಂದುಕೊಂಡರು. ಈ ವಿಷಯ ಕುರಿತು ಗುರುಗಳಾದ ರಾವಬಹದ್ದೂರ ದುರಂಧರ್ ಅವರಲ್ಲಿ ಪ್ರಸ್ತಾಪವೆತ್ತಿದರು. ಗುರುಗಳು ಬೇಡವೆನ್ನಲಿಲ್ಲ. ಶಿವಾನಂದರ ಬೆನ್ನು ಚಪ್ಪರಿಸಿ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.[೨೪]

೧೯೨೪ರಲ್ಲಿಯೇ ಮುಂಬಯಿಯ ಗಾಂಧರ್ವ ಮಹಾವಿದ್ಯಾಲಯದ ಕಟ್ಟಡದಲ್ಲಿ ಕಲಾಶಾಲೆಯನ್ನು ಪ್ರಾರಂಭಿಸಿದರು. ಶಿಷ್ಯನ ಸಾಹಸ ಪ್ರವೃತ್ತಿಯನ್ನು ಮೆಚ್ಚಿಕೊಂಡ ರಾವಬಹುದ್ದೂರ್ ದುರಂಧರ ಅವರು ಶಿವಾನಂದರು ತೆರೆದ ಕಲಾಶಾಲೆಯ ಪ್ರಾರಂಭೋತ್ಸವಕ್ಕೆ ಸ್ವತಃ ಮುಖ್ಯ ಅತಿಥಿಗಳಾಗಿ ಬಂದು ಕಲಾಶಾಲೆಯನ್ನು ಉದ್ಘಾಟಿಸಿ, ಶಿವಾನಂದರನ್ನು ಹರಿಸಿಹೋದರು. ಶಿಷ್ಯನ ಭವಿಷ್ಯ ಉಜ್ವಲವಾಗಬೇಕೆಂದರು.

ಮನೆತನದ ಭಾರದೊಂದಿಗೆ ಕಲಾಶಾಲೆಯನ್ನು ನಡೆಸುತ್ತಿದ್ದ ಶಿವಾನಂದ ಅಕ್ಕಿ ಕಲಾಕೃತಿಗಳ ರಚನೆಯನ್ನು ಕೈಬಿಡಲಿಲ್ಲ. ಸುಂದರವಾದ ಐತಿಹಾಸಿಕ ಅವಶೇಷದ ಅಸ್ತಿತ್ವ ಇಂಥಲ್ಲಿ ಇದೆ ಎಂದು ತಿಳಿದರೆ ಸಾಕು, ಅದೆಷ್ಟೇ ದೂರವಿರಲಿ ಎಷ್ಟೇ ಕಷ್ಟವಾಗಲಿ ಅಲ್ಲಿಗೆ ಹೋಗಿ ಅದರೆದುರು ಕುಳಿತು ಅದನ್ನು ಚಿತ್ರಿಸಿಕೊಂಡು ಬರುವ ಜಾಯಮಾನದವರು ಶಿವಾನಂದರು. ಸದಾ ಕ್ರಿಯಾಶೀಲರಾದ ಇವರು ರಚಿಸಿದ ಮುಂಬಯಿಯ ಸಮುದ್ರ ಸೌಂದರ್ಯದ ಗಂಭೀರತೆಯ ದೃಶ್ಯಗಳ ಕ್ರಿಯಾಶೀಲರಾದ ಇವರು ರಚಿಸಿದ ಮುಂಬಯಿಯ ಸಮುದ್ರ ಸೌಂದರ್ಯದ ಗಂಭೀರತೆಯ ದೃಶ್ಯಗಳ ಜಲವರ್ಣ ಚಿತ್ರಗಳು ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿವೆ ತಮ್ಮ ಚಿತ್ರಗಳನ್ನು ಮುಂಬಯಿ, ಕಲ್ಕತ್ತಾ, ಸಿಮ್ಲಾ, ನವದೆಹಲಿ, ಪುಣೆ ಹೀಗೆ ಮುಂತಾದೆಡೆ ಕಲಾಕೃತಿಗಳನ್ನು ಪ್ರದರ್ಶಿಸಿ ಪ್ರಶಂಸೆ ಪುರಸ್ಕಾರ ಗಳಿಸಿದ್ದಾರೆ.[೨೫]

ಶಿವಾನಂದರು ತಾವೇ ಚಿತ್ರಿಸಿದ ವರ್ಣಚಿತ್ರ ಕಲಾಕೃತಿಗಳಲ್ಲಿ ಅಪಾರವಾದ ಭರವಸೆ ಇತ್ತು. ಮುಂಬಯಿ, ಕಲ್ಕತ್ತಾ ಪಟಿಯಾಲ, ಸಿಮ್ಲಾ, ನವದೆಹಲಿ, ಪುಣೆ ಮುಂತಾದ ಕಡೆಗಳಲ್ಲೆಲ್ಲಾ ತಮ್ಮ

---

೨೩. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೧೨

೨೪. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೧೨

೨೫. ಸಂ. ಅಶೋಕ ಅಕ್ಕಿ. ಕಲಾವೈಭವ ಕರತಪುರ ಚಿತ್ರ ಮತ್ತು ಶಿಲ್ಪ ಕಲಾವಿದರ ಕೈಪಿಡಿ. ಲಕ್ಕುಂಡಿ ಉತ್ಸವ ೨೦೦೬ ಪು.ಸಂ. ೨೫

ಕಲಾಕೃತಿಗಳನ್ನು ಪ್ರದರ್ಶಿಸಿದರು. ಸಿದ್ಧಹಸ್ತ ಚಿತ್ರಕಲಾವಿದನೆಂದು ಭಾರತದ ಎಲ್ಲೆಡೆ ಖ್ಯಾತಿಯನ್ನು ಗಳಿಸಿದರು. ಪಟಿಯಾಲದಲ್ಲಿ ಪ್ರದರ್ಶಿಸಿದ ಅವರ ಕಲಾಕೃತಿಗಳಿಗೆ ಪ್ರಶಂಸೆ, ಪುರಸ್ಕಾರ ಹಾಗು ಬಹುಮಾನಗಳ ಸುರಿಮಳೆಯೇ ಆಯಿತು. ಅವರು ಚಿತ್ರಿಸಿದ ಬಿಜಾಪುರದ "ತಿಂಗಳ ಬೆಳಕಿನಲ್ಲಿ ಗೋಳಗುಮ್ಮಟ್ಟ", "ಇಬ್ರಾಹಿಮ್ ರೋಜಾ", "ಗದುಗಿನ ಸೋಮೇಶ್ವರ ದೇವಸ್ಥಾನ" ಮುಂತಾದ ಕಲಾಕೃತಿಗಳನ್ನು ನೋಡಿ ತುಂಬಾ ಮೆಚ್ಚಕೊಂಡು ಪಟಿಯಾಲಾ ಮಹಾರಾಜರು ಅವುಗಳನ್ನು ಖರೀದಿಸಿ ಶಿವಾನಂದರ ಕಲಾಕೃತಿಗಳಿಗೆ ಪ್ರೋತ್ಸಾಹಿಸಿದರು. ಮುಂಬಯಿಯ ಆರ್ಟ್ ಸೊಸೈಟಿಯಲ್ಲಿ ಪ್ರದರ್ಶಿಸಲಾದ ನಿಸರ್ಗದೃಶ್ಯ ಚಿತ್ರವೊಂದನ್ನು ವೀಕ್ಷಿಸಿದ ವೀಕ್ಷಕರು ಅದನ್ನು ಖರೀದಿಸಲು ಪೈಪೋಟಿಯನ್ನೇ ನಡೆಸಿದರು. ಆ ಕಲಾಭಿಮಾನಿಗಳನ್ನು ಸಂತೈಸಲು ಶಿವಾನಂದರು ಅದೇ ಚಿತ್ರದ ಮತ್ತೊಂದು ಪ್ರತಿಯನ್ನು ಮಾಡಿಕೊಟ್ಟು ಅವರನ್ನು ಸಮಾಧಾನ ಪಡಿಸಿದರು.[೨೬] ಅಕ್ಕಿಯವರ ಕೈಚಳಕ, ವರ್ಣಮಾಧ್ಯಮಗಳೇ ಜನರಿಗೆ ಆಕರ್ಷಿತವಾಗಿದ್ದವು. ಜಲವರ್ಣ ಮಾಧ್ಯಮದಲ್ಲಿ ಅಸಾಧಾರಣವಾದ ಚಮತ್ಕಾರ ಮಾಡಬಲ್ಲ, ಸೃಷ್ಟಿಸಬಲ್ಲ ಮೋಡಿಕಾರ. ಚಿತ್ರರಚನಾ ಶೈಲಿಯಲ್ಲಿ ತಮ್ಮದೇ ಆದ ಪ್ರಾಮಾಣಿಕ ತಂತ್ರಗಳನ್ನು ರೂಢಿಸಿಕೊಂಡ ಶಿವಾನಂದರು ಕೇವಲ ತಂತ್ರಜ್ಞರಾಗಿರಲಿಲ್ಲ. ಸತ್ಯಕ್ಕೆ ಹತ್ತಿರವಾದ, ಕಣ್ಣಿಗೆ ಕಂಡದ್ದನ್ನು ಕಂಡಂತೆಯೇ ತಮ್ಮ ವರ್ಣಚಿತ್ರಗಳಲ್ಲಿ ಸೆರೆಹಿಡಿಯುವ ಪ್ರಾಮಾಣಿಕ ಚಿತ್ರಕಲಾವಿದರಾಗಿದ್ದರು.

ಶ್ರೀ ಶಿವಾನಂದ ಅಕ್ಕಿ ಅವರು ಕೇವಲ ನಿಸರ್ಗದೃಶ್ಯಗಳ ಚಿತ್ರಗಳನ್ನು ಮಾತ್ರ ಚಿತ್ರಿಸಿದವರಲ್ಲ. ವ್ಯಕ್ತಿಚಿತ್ರಗಳು (Portraite) ಚಿತ್ರಸಂಯೋಜನೆಗಳು (Compossition) ವಸ್ತುಚಿತ್ರ, ಸ್ಥಿರಚಿತ್ರ ಮುಂತಾದ ಅಸಂಖ್ಯ ಚಿತ್ರಕಲಾಕೃತಿಗಳನ್ನು ಅವರು ಚಿತ್ರಿಸಿದ್ದಾರಾದರೂ ಕೇವಲ ಕೆಲವೇ ನಿಸರ್ಗದೃಶ್ಯ ಚಿತ್ರಗಳನ್ನು ಬಿಟ್ಟರೆ ಉಳಿದ ಯಾವುದೇ ಕಲಾಕೃತಿಯನ್ನು ನೋಡಿ ಸಂತಸಪಡುವ ಭಾಗ್ಯವನ್ನು ಮಾತ್ರ ನಾವು ಪಡೆದಿಲ್ಲ.[೨೭] ಮುಂಬಯಿಯಲ್ಲಿ ಪ್ರಾರಂಭಿಸಿದ ಕಲಾಶಾಲೆಯಲ್ಲಿ ಕೇವಲ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳಿಂದ ಮಾತ್ರ ನಡೆಯುತ್ತಿತ್ತು. ಸರ್ ಜೆ.ಜೆ. ಕಲಾಶಾಲೆಯಂಥ ಶಾಲೆಯಲ್ಲಿಯೇ ಕೇವಲ ಹತ್ತಾರು ವಿದ್ಯಾರ್ಥಿಗಳು ಮಾತ್ರ ಕಲಾಭ್ಯಾಸ ಮಾಡುತ್ತಿದ್ದ ಆಗಿನ ದಿನಗಳಲ್ಲಿ ಇನ್ನುಳಿದ ಖಾಸಗಿ ಕಲಾಶಾಲೆಗಳ ಅಭಿವೃದ್ಧಿ, ಪ್ರಗತಿಗಳು ಕೇವಲ ಕನಸು. ಗಾಳಿಗೋಪುರುವಾಗಿತ್ತು. ಶಿವಾನಂದರು ಮುಂಬಯಿ ಶಹರದಲ್ಲಿ ಇದ್ದುಕೊಂಡು ಕಲಾಶಾಲೆ ನಡೆಸುವುದು ಗದುಗಿನಲ್ಲಿರುವ ತಾಯಿ ತಮ್ಮಂದಿರ ಬದುಕು ತಮ್ಮಂದಿರಿಗೆ ಶಿಕ್ಷಣ ಕೊಡಿಸುವುದು ಶಿವಾನಂದರಿಗೆ ಕಷ್ಟಕರವಾಗಿತ್ತು. ಇದನ್ನು ಶಿವಾನಂದರು ತಮ್ಮ ಗುರುಗಳಾದ ರಾವಬಹದ್ದೂರ, ಎಂ.ಎ. ದುರಂಧರ ಅವರ ಹತ್ತಿರ ತಮ್ಮ ಅಳಲನ್ನು ತೋಸಿಕೊಂಡರು. ಇದಕ್ಕೆ ಶ್ರೀ ದುರಂಧರ ಅವರು "ನಿನ್ನ ಕಲಾಶಾಲೆಗೆ ಹಾಗೆ ನಡೆಯುತ್ತಿರಲಿ, ನಾನು ನಿನಗಾಗಿ ಬೇರೆಡಯಲ್ಲಿ ನೌಕರಿಗೆ ಪ್ರಯತ್ನಿಸುತ್ತೇನೆ. ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ, ನಿನ್ನ ಹಸನ್ಮುಖ ಸದಾ ಹಸನ್ಮುಖಿಯಾಗಿಯೇ ಇರಲಿ, ನಿನ್ನ ಹಾಸ್ಯ ಪ್ರವೃತ್ತಿ ಮಾಸದಿರಲಿ, ದೇವರಿದ್ದಾನೆ"

೨೬. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ.ಅ. ಬೆಂಗಳೂರು ಪು.ಸಂ. ೧೫

೨೭. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ. ಅ. ಬೆಂಗಳೂರು ಪು.ಸಂ. ೧೬

ಕೆಲವು ದಿನಗಳ ನಂತರ ಶಿವಾನಂದರನ್ನು ಹತ್ತಿರ ಕರೆದು "ನಿನಗಾಗಿ ಒಂದು ನೌಕರಿಯನ್ನು ದೊರಕಿಸಿಕೊಡಲು ನಾನು ಸಾಕಷ್ಟು ಪ್ರಯತ್ನಿಸಿದೆ. ನಿನ್ನ ದುರ್ದೈವವೋ ಅಥವಾ ನನ್ನ ದುರ್ದೈವವೋ ನಾನು ನನ್ನ ಪ್ರಯತ್ನದಲ್ಲಿ ಸಫಲವಾಗಲಿಲ್ಲ." ಎಂದು ಹೇಳಿದರು.

ಶ್ರೀ ಶಿವಾನಂದ ಅಕ್ಕಯವರಿಗೆ ಮಾನಸಿಕ ಆಘಾತವಾಗಲು ಗುರುಗಳ ಇದೊಂದೇ ಮಾತು ಸಾಕಾಯಿತು. ಗುರುಗಳು ಯಾವುದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ ಎಂದರೋ ಶಿವಾನಂದರು ಹಚ್ಚಿಕೊಂಡರು. ಗುರುಗಳು ನಿನ್ನ ಹಸನ್ಮುಖ ಸದಾ ಹಸನ್ಮುಖವಾಗಿರಲಿ ಎಂದರು, ಅಂದೇ ಶಿವಾನಂದರ ಹಸನ್ಮುಖ ಬಾಡಿತು. ಗುರುಗಳು ನಿನ್ನ ಹಾಸ್ಯ ಪ್ರವೃತ್ತಿ ಮಾಸದಿರಲಿ ಎಂದರು, ಅಂದೇ ಶಿವಾನಂದರ ಹಾಸ್ಯ ಪ್ರವೃತ್ತಿ ಮಾಸಿಹೋಯಿತು. ಗುರುಗಳು ದೇವರಿದ್ದಾನೆ ಎಂದರು, ಶಿವಾನಂದರಿಗೆ ಮಾತ್ರ ಜೀವನ ಪರ್ಯಂತ ಬೇಜಾರ ಇಲ್ಲದೇ ಹೋದ. ಕಾಲನ ಕ್ರೂರ ದೃಷ್ಟಿಯಿಂದಾಗಿ ಶ್ರೀ ಶಿವಾನಂದ ಅಕ್ಕಿ ಅವರು ತಮ್ಮ ಎಂಭತ್ತು ವರುಷಗಳ ದೀರ್ಘಾವಧಿ ಜೀವನದುದ್ದಕ್ಕೂ ಬುದ್ಧಿ ಭ್ರಮಣೆಯನ್ನೇ ಅನುಭವಿಸಬೇಕಾಯಿತು. ಅಂದೇ ಕಲಾಕೃತಿಗಳ ರಚನೆ ಸ್ಥಗಿತಗೊಂಡಿತು. ಈ ಘಟನೆ ಘಟಿಸಿದ ೧೯೩೦ ರಲ್ಲಿ ಭಾರತದ ಎರ್ನಾರ್ ಗೆನ್ಸ ಬರೋ ಆಗಬೇಕಿದ್ದ ಶಿವಾನಂದರು ಜೀವನ ದುರಂತ ನಾಯಕನ ಜೀವನವಾಗಿ ಪರ್ಯವಸಾನವಾಯಿತು.[೨೮] ಕಟ್ಟಿದ ಕನಸು ನನಸಾಗಲಿಲ್ಲ. ಮುಂಬಯಿಯಲ್ಲಿ ಕಟ್ಟಿದ ಕಲಾಶಾಲೆಯು ಮುಚ್ಚಿಹೋಯಿತು. ಶಿವಾನಂದ ಅಕ್ಕಿಯವರಿಗೆ ಎಷ್ಟೋ ವೈದ್ಯರ ಕಡೆಗೆ ತೋರಿಸಿದರೂ ಪ್ರಯೋಜನವಾಗಲಿಲ್ಲ. ಬುದ್ಧಿ ಸೀಮಿತಕ್ಕೆ ಬರಲೇ ಇಲ್ಲ. ಅಕ್ಕಿ ಅವರ ಕುಟುಂಬದ ಮೇಲೆ ಬಲವಾದ ಬಿರುಗಾಳಿ ಬೀಸಿತು. ಬರಸಿಡಲು ಬಡಿಯಿತು. ತಮ್ಮಂದಿರಾದ ಶ್ರೀ ಟಿ.ಪಿ.ಅಕ್ಕಿ ಮತ್ತು ಈಶ್ವರಪ್ಪ ಅಕ್ಕಿ ನಿರುಪಾಯರಾಗಿ ಬದುಕಿನ ಸಮಸ್ಯೆಯನ್ನು ಎದುರಿಸಲು ಸನ್ನದ್ಧರಾದರು.

ಕೆಲವು ದಿನಗಳ ನಂತರ ಶ್ರೀ ಟಿ.ಪಿ.ಅಕ್ಕಿ ಅವರು ಸೋದರ ಶ್ರೀ ಈಶ್ವರಪ್ಪ ಅಕ್ಕಿಯವರನ್ನು ಕರೆದು ಹೇಳಿದರು. "ಅಣ್ಣನ ಆಶೆ ಅಕಾಂಕ್ಷೆಗಳೆಲ್ಲಿ ಇಲ್ಲಿಗೇ ಕಮರಿ ಹೋಗಬೇಕಾ ? ಅದಕ್ಕಾಗಿ ನಾವೇನು ಮಾಡಲೂ ಸಾಧ್ಯವಿಲ್ಲವೇ ? ಲೌಕಿಕವಾಗಿ ಹುಚ್ಚನೆಂದೆನ್ನಿಸಿದ ಅಣ್ಣನವರ ಜಾಗೃತ ಅಂತಾರಾತ್ಮ ಪರಿತಪಿಸುವುದಂತೂ ನಿಶ್ಚಿತ. ಆ ಪವಿತ್ರಾತ್ಮನ ಅಂಥಃಶಾಂತಿಗೆ ನಾವು ಏನನ್ನಾದರೂ ಮಾಡಲೇ ಬೇಕು" ಎಂದರು. ಚಿತ್ರಕಲಾ ಶಾಲೆಯನ್ನು ಪ್ರಾರಂಭಿಸಿ ತನ್ಮೂಲಕ ನಾಡಿನ ಚಿತ್ರಕಲಾಸಕ್ತ ವಿದ್ಯಾರ್ಥಿಗಳಿಗೆ ಚಿತ್ರಕಲಾ ವಿದ್ಯಾದಾನ ಮಾಡುವುದೇ ಅಣ್ಣನವರ ಮಹತ್ವಾಕಾಂಕ್ಷೆಯಾಗಿತ್ತಲ್ಲವೇ ? ಅವರು ಮುಂಬಯಿಯಲ್ಲಿ ಪ್ರಾರಂಭಿಸಿದ ಕಲಾಶಾಲೆಯಂತೂ ಮುಚ್ಚಿಹೋಯಿತು. ಅವರ ಆಶೆಯಂತೆ ಇಲ್ಲಿಯೇ ಗದುಗಿನಲ್ಲಿಯೇ ಕಲಾಶಾಲೆಯೊಂದನ್ನು ನಾವೇಕೆ ಪ್ರಾರಂಭಿಸಬಾರದು ?[೨೯] ಇದರಿಂದ ನಮ್ಮ ಕರ್ನಾಟಕದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಮತ್ತು ಅಣ್ಣನ ಆಸೆ ಪೂರೈಸಿದಂತಾಗುತ್ತದೆ ಎಂದರು. ಗದುಗಿನಲ್ಲಿ ೧೯೪೭ರಲ್ಲಿ ವಿಜಯ ಕಲಾಮಂದಿರ ಪ್ರಾರಂಭಿಸಿ ಅಣ್ಣ ಶಿವಾನಂದ ಅಕ್ಕಿಯವರ ಆಸೆ ಪೂರೈಸಿದರು.[೩೦]

---

೨೮. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ. ಅ. ಬೆಂಗಳೂರು ಪು.ಸಂ. ೧೭

೨೯. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ. ಅ. ಬೆಂಗಳೂರು ಪು.ಸಂ. ೨೦

೩೦. ವಿ. ಟಿ. ಕಾಳೆ ಲೇ. ಶಿವಾನಂದ ಅಕ್ಕಿ ಕ.ಲ.ಕ. ಅ. ಬೆಂಗಳೂರು ಪು.ಸಂ. ೨೦

ಶ್ರೀ ಶಿವಾನಂದ ಅಕ್ಕಿ ಅವರು ಬುದ್ಧಿ ಭ್ರಮಣೆಯಿಂದ ಬಳಲುತ್ತಿದ್ದರೂ ಕಲಾಪ್ರಪಂಚಕ್ಕೆ ಸೋದರರ ಕೊಡುಗೆ ಮತ್ತು ಅವರ ಸಾಧನೆಗಳನ್ನು ಅವರು ಅರಿಯದೇ ಇರಲಿಲ್ಲ. ತಮ್ಮಿಂದ ಅಸಾಧ್ಯವಾದುದನ್ನು ತಮ್ಮ ಸಹೋದರರು ಸಾಧ್ಯವಾಗಿಸಿದ್ದಾರೆಂದು ಅವರು ಪರಿಶುದ್ಧ ಅಂತಾರಾತ್ಮಕ್ಕೆ ಸಂಪೂರ್ಣ ಅರಿವಾಯಿತು. ಶ್ರೀ ಶಿವಾನಂದ ಅವರ ಜನರ ಮುಖ ಪರಿಚಯವನ್ನು ತಮ್ಮ ಸಾವಿನ ಪರ್ಯಂತ ಮರೆತಿರಲಿಲ್ಲ. ಯಾರೇ ಬಂದರೂ ಅವರನ್ನು ಗುರುತಿಸುತ್ತಿದ್ದರು. ಒಂದು ಸಾರೆ ಶ್ರೀ ಡಿ.ಜಿ. ಬಡಿಗೇರ ವಿಜಯ ಕಲಾಮಂದಿರಕ್ಕೆ ಪರಿವೀಕ್ಷಕರಾಗಿ ಬಂದಾಗ ಶಿವಾನಂದ ಅಕ್ಕಿಯವರನ್ನು ಕಂಡು ದುಃಖತಪ್ತರಾದರು. "ಅಕ್ಕಿಯವರೇ ನನ್ನ ಗುರುತು ಸಿಕ್ಕಿತೆ?" ನಾನು ಯಾರು ಎಂದು ಹೇಳಿ ನೋಡೋಣ" ಎಂದು ಕೇಳಿದರು. ಶ್ರೀ ಶಿವಾನಂದ ಅಕ್ಕಯವರು ಒಂದುಕ್ಷಣ ಕತ್ತೆತ್ತಿ ನೋಡಿ ತಕ್ಷಣ ಹೇಳಿದರು "ನೀವು ಬಡಿಗೇರ ಸಾಹೇಬರು, ನನಗೆ ಗೊತ್ತು ನಡೆಯಿರಿ, ಮೇಲೆ ನಡೆಯಿರಿ ಊಟಕ್ಕೆ ಹೊತ್ತಾಯಿತು"[೩೧] ಎಂದು ಹೇಳಿ ಮತ್ತೆ ತಾರಕಮಂತ್ರವನ್ನು ಜಪಿಸುತ್ತ ಮುಖವನ್ನು ಕೆಳಗೆ ಮಾಡಿ ಕುಳಿತರು.

ಶಿವಾನಂದ ಅಕ್ಕಿಯವರು ಒಬ್ಬ ಮಹಾನ್ ಕಲಾವಿದನಾಗಿ ದೇಶ ವಿದೇಶಗಳಲ್ಲಿ ಹೆಸರು ಮಾಡಬೇಕಿದ್ದ ಹುಟ್ಟು ಕಲಾವಿದನೊಬ್ಬನ ಬದುಕು ಅಪೂರ್ಣವಾಗಿ ದುರಂತ್ರಮಯವಾದುದನ್ನು ನೆನಪಿಸಿಕೊಂಡರೆ ನಮಗೆ ದಿಗ್‌ಬ್ರಮೆಯಾಗುತ್ತದೆ. ವಿಧಿಯ ವಿಪರ್ಯಾಸ ನಮ್ಮನ್ನು ಮೂಕವಿಸ್ಮಿತರ್‌ನ್ನಾಗಿಸುತ್ತದೆ. ೧೯೮೧ರಲ್ಲಿ ತಮ್ಮ ೮೧ನೇ ವಯಸ್ಸಿನಲ್ಲಿ ಇಹವನ್ನು ತ್ಯಜಿಸಿದ ಶ್ರೀ ಶಿವಾನದ ಅಕ್ಕಿ ಅವರ ಭೌತಿಕ ಮನಸ್ಸು ವಿಕಲವಾಗಿದ್ದರೂ ಅವರ ಅಂತಾರಾತ್ಮದ ಪರಿಶುದ್ಧ ಮನಸ್ಸು ಮಾತ್ರ ಅವರ ಸಹೋದರನ ಸಾಧನೆಯಿಂದ ಸಂಪೂರ್ಣ ಸಂತೃಪ್ತವಾಗಿತ್ತು ಎಂಬುದಲ್ಲಿ ಯಾವ ಸಂದೇಹವೂ ಇಲ್ಲ.[೩೨] ಶಿವಾನಂದ ಅಕ್ಕಿಯವರ ಆಸೆ ಆಕಾಂಕ್ಷೆಯನ್ನು ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರವನ್ನು ಕಟ್ಟುವುದರ ಮೂಲಕ ಪೂರೈಸಿದ್ದಾರೆ.

ಈ ರೀತಿ ಶಿವಾನಂದ ಅಕ್ಕಿಯವರು ಭಾರತದ ವ್ಯಾನ್‌ಗಾಗ್ (Van Gogh) ಎಂದೆನ್ನುವಾಗಲೇ ಇಹವನ್ನು ತಬರೆದು ನಮ್ಮಿಂದ ಎಂದೆಂದಿಗೂ ಕಣ್ಮರೆಯಾದ ಶಿವಾನಂದ ಅಕ್ಕಿಯವರ ಕಲಾಬದುಕು ಪ್ರತಿಯೊಬ್ಬ ಕನ್ನಡಿಗನಿಗೂ ನಿತ್ಯ ಸ್ಮರಣೀಯವಾದುದು. ಹೀಗೆ ಶಿವಾನಂದ ಅಕ್ಕಿಯವರ ಜೀವನದಲ್ಲಿ ಏಳು ಬೀಳುಗಳನ್ನು ಸುಖ ದುಃಖಗಳನ್ನು ಅರಿಯುವುದು ವಿಶಿಷ್ಟ ರೀತಿಯದಾಗಿದೆ.

ಶಿವಾನಂದ ಅಕ್ಕಿಯವರು ಅನೇಕ ಕಲಾಕೃತಿಗಳನ್ನು ರಚಿಸಿದ್ದು ಕಲಾಕೃತಿಯನ್ನು ನೊಡಿದ್ದಾಗ ಶಿವಾನಂದ ಅಕ್ಕಿಯವರ ಕಲಾಕೃತಿ ಎಂದು ಹೇಳುವಷ್ಟು ತಮ್ಮದೇ ಆದ ರೇಖೆ, ಬಣ್ಣಗಳ ಬಳಸಿದ್ದು ಕಂಡುಬರುತ್ತದೆ. ಇವರ ಅನೇಕ ಕಲಾಕೃತಿಗಳನ್ನು ರಚಿಸಿದ್ದು ಪ್ರಸ್ತುತ ಅಧ್ಯಯದಲ್ಲಿ ಈ ಕೆಳಗಿನಂತೆ ವಿಂಗಡಿಸಿ ಚರ್ಚಿಸಲಾಗಿದೆ.

---

೩೧. ಶ್ರೀ ವಸಂತ ಅಕ್ಕಿ ಅವರ ಸಂದರ್ಶನ ದಿನಾಂಕ, ೨೭/೯/೨೦೧೦

೩೨. ವಿ.ಟಿ. ಕಾಳೆ ಲೇ, ಶಿವಾನಂದ ಅಕ್ಕಿ ಕ.ಲ.ಕ. ಅ. ಬೆಂ. ಪು.ಸಂ. ೨೩

೧. **ನಿಸರ್ಗಚಿತ್ರಗಳು :**

ಚಿತ್ರ : ೧. ಮನೆಗಳು : ಈ ನಿಸರ್ಗಕಲಾಕೃತಿಗಳು ಜಲವರ್ಣದಿಂದ ರಚಿತಗೊಂಡಿದು ಒಂದು ಓಣಿಯದೃಶ್ಯವಾಗಿದೆ ಬಣ್ಣ ಮತ್ತು ರೇಖೆಗಳ ಮೂಲಕ ಮನೆಗಳ ಚಿತ್ರವನ್ನು ರಚಿಸಿದ್ದು ಒಂದು ಓಣಿಯಂತೆ ಸುಂದರವಾಗಿ ತೋರಿಸಿದ್ದಾರೆ ಎರಡು ಚಿತ್ರಗಳು ಬೇರೆ ಬೇರೆ ರಚಿಸಿದ್ದಾರೆ. ಆಯ್ಕೆ ಮಾಡಿಕೊಂಡ ಸ್ಥಳಾವಕಾಶವನ್ನು ತೋರಿಸಿದ ರೀತಿಯ ಒಂದೇಯಾಗಿದೆ. ನೆರಳು ಬೆಳಕಿನಿಂದ ಸುಂದರವಾದ ಕಲಾಕೃತಿ ರಚನೆಯಾಗಿದೆ. ಒಂದು ಚಿತ್ರದಲ್ಲಿ ಮನುಷ್ಯ ಕೃತಿವಿದ್ದರೆ ಇನ್ನೊಂದು ಚಿತ್ರದಲ್ಲಿ ಮನುಷ್ಯ ಆ ಕೃತಿಗಳು ಇಲ್ಲ ಆದರೆ ಬಳಸಿದ ಬಣ್ಣ ಉಪಯೋಗಿಸಿದ ರೇಖೆಗಳು ಒಂದೇ ಶೈಲಿಯಲ್ಲಿ ಕಂಡು ಬರುತ್ತದೆ. ಕಲಾ ಕೃತಿಯನ್ನು ಬಣ್ಣಗಳ ಬಳಕೆಯಿಂದ ಆಕರ್ಷಕವಾಗಿ ರಚನೆಯಾಗಿದ್ದಾರೆ.

ಚಿತ್ರ : ೩. ಮರಗಳು : ಈ ಚಿತ್ರವನ್ನು ಜಲವರ್ಣದಿಂದ ರಚನೆ ಮಾಡಿದ್ದಾರೆ. ಚಿತ್ರದಲ್ಲಿ ಎರಡು ಮರಗಳನ್ನು ಪ್ರಮುಖವಾಗಿ ಬಳಸಿಕೊಂಡು ಸುಂದರವಾದ ನಿಸರ್ಗಚಿತ್ರವನ್ನು ರಚಿಸಿದ್ದಾರೆ. ರೇಖೆಗಳು ಬಣ್ಣಗಳ ಬಳಸಿದ ರೀತಿಯನ್ನು ಉತ್ತಮವಾಗಿದೆ. ಗಿಡದ ನೆರಳು ಬೆಳಕು, ರೋಡಿನ ಚಿತ್ರವು ಉತ್ತಮ ರೀತಿಯಿಂದ ಕಲಾವಿದ ಶಿವಾನಂದ ಅಕ್ಕಿಯವರು ಅತ್ಯಂತ ಸುಂದರವಾಗಿ ರಚಿಸಿದ್ದಾರೆ. ಸ್ಥಳಾವಕಾಶ ಹಿಂದೆ ಮುಂದೆ ಎಂಬ ಕಲ್ಪನೆ ಬರುವಂತೆ ಸುಮದರವರ್ಣಗಳನ್ನು ಬಳಸಿಕೊಂಡು ಉತ್ತಮವಾದ ನಿಸರ್ಗ ಚಿತ್ರವಾಗಿದೆ.

ಚಿತ್ರ : ೪ : ಸಂತೆ : ಈ ಕೃತಿಯು ಸಂತೆಯ ದೃಶ್ಯವನ್ನು ಕಲಾವಿದ ಜಲವರ್ಣದಿಂದ ರಚಿಸಿದ್ದಾರೆ. ಈ ಕಲಾಕೃತಿಯಲ್ಲಿ ಸಂತೆ ಮಾಡುತ್ತಿರುವ ಜನರ ಚಿತ್ರವನ್ನು ಅಕ್ಕಿಯವರು ಸುಂದರವಾಗಿ ರಚಿಸಿದ್ದಾರೆ. ಸಂತೆಯಲ್ಲಿ ಟೆಂಟ್‌ಹಾಕಿರುವ ದೃಶ್ಯ ಆಕರ್ಷಕವಾಗಿದೆ. ಸಂತೆಯಲ್ಲಿ ಅನೇಕ ಜನರು ಸಂತೆ ಮಾಡುತ್ತಿದ್ದು ಜನರು ಹೊಗುತ್ತಿರುವ ಬರುತ್ತಿರು ದೃಶ್ಯವನ್ನು ಉತ್ತಮ ರೀತಿ ಕುಂಚದಿಂದ ಸೇರೆ ಹಿಡಿದ್ದಾರೆ. ಕಲಾಕೃತಿಯಲ್ಲಿ ಬಣ್ಣಗಳಿಂದ ದೂರ ಸಮಿಪದ ಕಲ್ಪನೆಯನ್ನು ಮಾಡಿದ್ದಾರೆ. ಈ ದೃಶ್ಯವು ಸಂತೆಯ ಕಲ್ಪನೆಯನ್ನು ಕೊಡುವ ಚಿತ್ರವಾಗಿದೆ. ಹಿನ್ನೆಲೆಯಾಗಿ ಮನೆಗಳು ಕೆಂಪು, ಹಳದಿಯ ವರ್ಣಗಳು ಹೆಚ್ಚಾಗಿ ಬಳಸಿದ್ದು ಬಣ್ಣಗಳು ನೊಡಿದಾಗ ಶಿವಾನಂದ ಅಕ್ಕಿಯವರ ಬಣ್ಣಗಳು ಎಂಬಂತೆ ಸ್ಪಷ್ಟವಾಗಿ ಕಂಡುಬರುತ್ತದೆ. ಅಕ್ಕಿಯವರು. ಜಲವರ್ಣದ ಬಳಸುವ ರೀತಿಯ ವಿಶೇಷವಾಗಿ ಕಂಡು ಬರುತ್ತದೆ.

ಭಾವಚಿತ್ರಗಳು : ಚಿತ್ರ, ೧, ೨, ೩, ಮಹಿಳಾ ರೂಪದರ್ಶಿಯರು : ಈ ಕಲಾಕೃತಿಗಳು ಮಹಿಳೆಯರ ಭಾವ ಚಿತ್ರವಾಗಿದ್ದು ಚಿತ್ರಗಳು ಬೇರೆ ಬೇರೆಗಳಾಗಿದ್ದು ಆಯಾಚಿತ್ರಗಳ ರೇಖೆ, ವರ್ಣಗಳ ಬಳಸಿದ ಬಣ್ಣ ಒಂದೆಯಾಗಿದೆ. ಭಾವಚಿತ್ರಗಳನ್ನು ಅಕ್ಕಿಯವರು ನೈಜವಾಗಿ ಕಾಣುವಂತೆ ಮುಖಭಾವನೆ ನೆರಳು ಬೆಳಕು ಕಣ್ಣುಗಳು, ಬಾಯಿ, ಮೂಗುಗಳು ಪ್ರಮಾಣ ಭದ್ಧವಾಗಿ ರಚನೆಗೊಂಡಿದೆ. ರೂಪದರ್ಶಿಯರ ಮೂಖಭಾವನೆ ಬೇರೆಯಾದರು ಒಂದೇ ತರನಾದ ವರ್ಣ ಬಳಸಿದ ರೀತಿಯ ಒಂದಾಗಿದೆ. ಈ ಚಿತ್ರಗಳು ಕಪ್ಪು ಬಿಳುಪು ಭಾವನೆಯಿಂದ ಪೂರ್ಣಗೊಳಿಸಿದ್ದಾರೆ. ಮಹಿಳೆಯರ ಹಣೆಯ ಮೇಲಿನ ಕುಂಕುಮವನ್ನು ಆಕರ್ಷಕವಾಗಿ ರಚಿಸಿದ್ದಾರೆ. ಭಾರತ ನಾರಿಯರಲ್ಲಿ ಇರುವ ಕಲ್ಪನೆಯನ್ನು ಅಕ್ಕಿಯವರು

ಶ್ರೀ ಶಿವಾನಂದ ಅಕ್ಕಿಯವರ ನಿಸರ್ಗ ಕಲಾಕೃತಿಗಳು




ಶಿವಾನಂದ ಅಕ್ಕಿ



೧.ಚಿತ್ರ



೨.ಚಿತ್ರ



೩.ಚಿತ್ರ



೪.ಚಿತ್ರ

ಶಿವಾನಂದ ಅಕ್ಕಿಯವರ ಶಿರಭಾವ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪.

ಈ ಚಿತ್ರಗಳಲ್ಲಿ ತುಂಬಿ ಕಲಾಕೃತಿಗಳ ವೈವಿದ್ಯತೆಯನ್ನು ತೊರಿಸಿದ್ದಾರೆ. ಪ್ರತಿಯೊಬ್ಬ ಮಹಿಳೆಯರ ಚಿತ್ರಗಳು ಬೇರೆ ಬೇರೆ ರೀತಿಯಲ್ಲಿ ಕುಳಿತಿರುವ ಚಿತ್ರಗಳು ಇವೆ ಆದರೆ ಬಳಸಿದ ರೇಖೆ ಬಣ್ಣಗಳು ಒಂದೇ ರೀತಿಯದ್ದಾಗಿದೆ.

ಚಿತ್ರ : ೪ . ಭಾವಚಿತ್ರ : ಈ ಭಾವಚಿತ್ರವು ಒಬ್ಬ ವ್ಯಕ್ತಿಯ ಚಿತ್ರವಾಗಿದೆ ವ್ಯಕ್ತಿಯ ಮುಖ ಭಾವನೆಯನ್ನು ಅಕ್ಕಿಯವರು ಛಾಯಾ ಚಿತ್ರವನ್ನು ಮಿರಿಸುವ ರೀತಿಯಲ್ಲಿವೆ. ಮುಖಭಾವನೆ ಕಣ್ಣು ಮೂಗು ಬಾಯಿ, ಗಡ್ಡವನ್ನು ಅತ್ಯಂತ ನೈಜತೆಯಿಂದ ರಚಿಸಿದ್ದಾರೆ. ಕಪ್ಪಾದ ವ್ಯಕ್ತಿಯ ಚಿತ್ರವಾದರು ಸೌಂದರ್ಯತೆಯನ್ನು ತೋರುತ್ತವೆ. ವ್ಯಕ್ತಿಯ ಗಡ್ಡಗಳು ಅಕ್ಕಿಯವರ ಭಾವಚಿತ್ರವನ್ನು ಗಮನಿಸಿದಾಗ ಒಂದೆ ರೀತಿಯಲ್ಲಿ ಇರುವುದು ಕಂಡು ಬರುತ್ತದೆ ಇವರು ಪ್ರಮಾಣಕ್ಕೆ ಮತ್ತು ನೆರಳು ಬೆಳಕಿನ ಕಡೆಗೆ ಹೆಚ್ಚಿನ ಪ್ರಧ್ಯಾನ್ಯತೆಯನ್ನು ನೀಡುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ. ಇವರ ಕಲಾಕೃತಿಯನ್ನು ನೋಡಿದಾಗ ನಿಸರ್ಗ ಚಿತ್ರ ಭಾವಚಿತ್ರಗಳು ಜಲವರ್ಣದಿಂದ ರಚನೆಯಾಗಿರುವುದು ಕಂಡುಬರುತ್ತದೆ.

ಟಿ.ಪಿ. ಅಕ್ಕಿ :

ಸಾವಿರಾರು ಅರ್ಜುನ, ಭೀಷ್ಮ, ದುರ್ಯೋಧನರನ್ನು ಸೃಷ್ಟಿಸಲು ಸಾಧ್ಯವಿದೆ. ಒಬ್ಬ ದ್ರೋಣಾಚಾರ್ಯರನ್ನು ಸೃಷ್ಟಿಸುವುದು ಕಷ್ಟಸಾಧ್ಯ. ದ್ರೋಣಾಚಾರ್ಯರ ಹಿರಿಮೆ ಗರಿಮೆಗಳು ಅವರ ಪರಿಶುದ್ಧವಾದ ನಿಸ್ವಾರ್ಥ ಚಿತ್ರವೃತ್ತಿಯ ಮುಖ್ಯಾಂಶಗಳು. ಸಕಲ ಶಸ್ತ್ರ ವಿದ್ಯಾಪಾರಂಗತರಾದ ಆಚಾರ್ಯರು ಕುರು ಪಾಂಡವಪುತ್ರರಿಗೆ ತಮ್ಮ ಅಗಾಧ ಶಸ್ತ್ರ ವಿದ್ಯೆಯನ್ನು ಧಾರೆಯೆರೆಯದೇ ಹೋಗಿದ್ದರೆ ಕುರಕ್ಷೇತ್ರ ಮಹಾಯುದ್ಧವು ನಡೆಯುತ್ತಿತ್ತೋ ಇಲ್ಲವೂ ! ಸತ್ಯಮೇವ ಜಯತೆ ಎಂಬ ನಿತ್ಯ ಸತ್ಯವು ಪ್ರಪಂಚದ ತಿಳಿವಿನ ಕಕ್ಷೆಗೆ ಬರುತ್ತಿತ್ತೋ ಇಲ್ಲವೋ ತಮಗೆ ತಿಳಿದ ಶಸ್ತ್ರ ವಿದ್ಯೆಯನ್ನು ದ್ರೋಣಾಚಾರ್ಯರು ಸ್ವಾರ್ಥಕ್ಕೆ ಬಳಸಿಕೊಂಡು ಕುರು ಪಾಂಡವರನ್ನೇ ನಿರ್ಮಾಮಗೊಳಸಿ ಸಕಲ ಭೂಮಂಡಲದ ಏಕ ಚಕ್ರಾಧಿಪತ್ಯವನ್ನು ಅನುಭವಿಸಬಹುದಿತ್ತು. ಆದರೆ ದ್ರೋಣರ 'ಆಚಾರ್ಯಬುದ್ಧಿ' ಅದಕ್ಕೊಪ್ಪದೇ ತಮ್ಮೆಲ್ಲ ವಿದ್ಯೆಯನ್ನು ಧಾರೆಯರೆದು "ಆಚಾರ್ಯಪುರುಷ" ಪದವಿಗೇರಿದರು. ಗುರುಬ್ರಹ್ಮ, ಗುರುವಿಷ್ಣು, ಗುರುದೇವೋ ಮಹೇಶ್ವರ[೩೩] ಎಂಬ ಆರ್ಯೋಕ್ತಿಗೆ ಸತ್ಯಸಾಕ್ಷಿಯಾದರು. ಇದೇ ಮಾತು ಇದೇ ಬಣ್ಣನೆ ಕಲಾಚಾರ್ಯ ಟಿ.ಪಿ.ಅಕ್ಕಿ ಅವರಿಗೂ ಸಲ್ಲುತ್ತದೆ. ಟಿ.ಪಿ. ಅಕ್ಕಿ ಚಿತ್ರಕಲಾ ಶಿಕ್ಷಣ ಕ್ಷೇತ್ರದಲ್ಲಿ ಬಹುದೊಡ್ಡ ಹೆಸರು. ಸಾಧನೆಯ ಇತಿಮಿತಿಗಳನ್ನು ಮೀರಿ ಬೆಳೆದ ಮಹಾ ಮೇರು. ಅಕ್ಕಿ ಅವರನ್ನು ಕುರಿತು ಹೇಳುವಾಗ ದ್ರೋಣಾಚಾರ್ಯರ ನೆನಪು ಅನಿವಾರ್ಯ ಎಂದು ಹೇಳಬಹುದು.

ಕೆಲವರು ಕೀರ್ತಿಗಾಗಿ ಬೆನ್ನು ಹತ್ತುತ್ತಿದ್ದಾರೆ. ಕೀರ್ತಿಯೇ ಕೆಲವರ ಬೆನ್ನು ಹತ್ತುತ್ತದೆ.[೩೪] ಗದುಗಿನ ವಿಜಯ ಕಲಾಮಂದಿರ ಸ್ಥಾಪಕರಾದ ಶ್ರೀ ಟಾಕಪ್ಪ ಅಕ್ಕಿ ಅವರು ಆಡಂಬರಕ್ಕಾಗಿ, ಕೀರ್ತಿಗಾಗಿ ಇವರು ಎಂದೂ ಕೆಲಸ ಮಾಡಿದವರಲ್ಲ. ಇವರ ಕುರಿತು ಶ್ರೀ ಗದಿಗೇಶ್ವರ ಸಾ. ಗದಗ ಇವರು ಒಂದು ಕಾವ್ಯವನ್ನು ಬರೆದಿದ್ದಾರೆ.

---

೩೩. ವಿ.ಟಿ. ಕಾಳೆ ಲೇ, ಶಿವಾನಂದ ಅಕ್ಕಿ ಕ.ಲ.ಕ. ಅ. ಬೆಂ. ಪು.ಸಂ. ೨೪

೩೪. ವಿ.ಟಿ. ಕಾಳೆ ಪಿ.ಪಿ. ಅಕ್ಕಿ, ಕ.ಲ.ಕ ಅ.ಬೆಂ.ಪು.ಸಂ. ೧

ಕೃತಪುರದೊಳಿಹ ಕಲಾಮಂದಿರದ ಒಡೆಯರೇ
ಶ್ರುತಕೀರ್ತಿ ಗುರುವರ್ಯ ಶ್ರೀ ಅಕ್ಕಿಯವರೇ
ಶ್ರುತಿದೇವಿಯೊಲುಮೆಯಲಿ ವಿಕಸಿಸುವ ಪುರಷರೆ
ಕಲೆಯ ಬಲೆ ಬೀಸಿ ಕರೆ ನೀಡಿದಾ ಮಹನೀಯರೇ
ಲಲಿತಕಲೆಯನ್ನು ಬೀರಿ ನಲಿಯತೊಡಗಿಸಿದವರೆ
ಸಲುಗೆಯಲ್ಲಿ ಶಿಷ್ಯರನ್ನು ಕರುಣದಿಂದ ಕಂಡವರೇ
ಪಲರಾಹಿತ ಕಲೆಯ ಕರುಣಿಸಿದವರೇ

ಎಂದು ಅಕ್ಕಿಯವರ ಕುರಿತು ಹೇಳುವ ಗದಿಗೇಶ್ವರರ ಕಾವ್ಯ ಸ್ತುತ್ಯವಾದುದು.

ಹತ್ತು ಶತಮಾನಗಳ ಪೂರ್ವದಿಂದ ಸಂಸ್ಕೃತಿ, ಕಲೆ, ಧರ್ಮವನ್ನು ಎತ್ತಿ ಹಿಡಿದ ಗದಗ ಇಂದಿಗೂ ಅವುಗಳನ್ನು ಪೋಷಿಸುತ್ತ ಬಂದುದು ಹೆಮ್ಮೆಯೆನಿಸುತ್ತದೆ. ಉತ್ತರದ ಬದರಿನಾಥದಿಂದ ನರನಾರಾಯಣನು ಕೃತಪುರಕ್ಕೆ ಆಗಮಿಸಿ ಇಲ್ಲಿಯ ದುಷ್ಟಶಕ್ತಿಯಾದ ಕಪೋತರೋಮ ರಾಕ್ಷಸ ಅಸುರನನ್ನು ಸಂಹಿರಿಸಿ, ವೀರನಾರಾಯಣನಾಗಿ ನೆಲಸಿ, ಶಕ್ತಿ ಸ್ಪೂರ್ತಿಯ ಸೆಲೆಯಾಗಿ ಗದಗನ್ನು ಶಾಂತಿ ನೆಲೆಯನ್ನಾಗಿ ಮಾಡಿದಂತೆ, ಉತ್ತರದಲ್ಲಿರುವ ಮುಂಬಯಿಯಲ್ಲಿ ಕಲಾಭ್ಯಾಸ ಹಾಗೂ ಹಲವಾರು ಪ್ರಮುಖ ನಗರಗಳಲ್ಲಿ ಕಲಾ ಸೇವೆ ಗೈದು ಆನಂತರ ಗದುಗಿಗೆ ಬಂದು ಇಲ್ಲಿಯ ಚಾಲುಕ್ಯರ ಕಾಲದ ಕಲಾ ಸೌಂರ್ಯೋಪಾಸನೆಯ ಹಿರಿಮೆಯನ್ನು ಪುನರ್‌ಜೀವನಗೊಳಿಸುವುದಕ್ಕಾಗಿ[೩೫] ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಶ್ರೀ ಟಿ.ಪಿ.ಅಕ್ಕಿ ಅವರು ಲಲಿತಕಲೆಗಳ ಪ್ರಸಾರಕ್ಕಾಗಿ ಗದಗನ್ನು ತಮ್ಮ ಕರ್ಮಭೂಮಿಯನ್ನಾಗಿ ಮಾಡಿಕೊಂಡರು.

ಸಾಹಿತ್ಯ, ಸಂಗೀತ, ಚಿತ್ರಕಲೆ, ವಾಸ್ತುಶಿಲ್ಪ, ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಗದಗ ಜಿಲ್ಲೆಯ ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ನೀಡಿದೆ. ಗದಗ ಜಿಲ್ಲೆಯು ಚಿತ್ರಕಲಾ ಕ್ಷೇತ್ರದಲ್ಲಿ ಶ್ರಮಿಸಿ ಚಿತ್ರಕಲೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡು ಅತ್ಯಮೂಲ್ಯವಾದ ಸಂಸ್ಥೆಯನ್ನು ಕಟ್ಟಿದವರು ಶ್ರೀ ಟಿ.ಪಿ. ಅಕ್ಕಿಯವರು.

ಬಾಲ್ಯ ಹಾಗೂ ಶಿಕ್ಷಣ

ಶ್ರೀ ಟಿ.ಪಿ.ಅಕ್ಕಿಯವರು ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ೩೧-೧೨-೧೯೦೫ರಲ್ಲಿ ಜನಿಸಿದರು. ಇವರು ಬಾಲ್ಯದಲ್ಲಿಯೇ ಉತ್ತಮ ಸಂಸ್ಕಾರದಲ್ಲಿ ಬೆಳೆದವರು.[೩೬] ಬಾಲ್ಯದಲ್ಲಿಯೇ ಉತ್ತಮ ಕಲಾಪ್ರೌಢಿಮೆಯನ್ನು ಹೊಂದಿದರು. ಪ್ರಭಪ್ಪನವರು ಕಂದಾಯ ಇಲಾಖೆಯಲ್ಲಿ ಕರಣಿಕರಾಗಿ ಕೆಲಸ ಮಾಡುತ್ತಿದ್ದರಲ್ಲದೇ ಸಾಹಿತ್ಯಾರಾಧಕರೂ ಆಗಿ ಕಾವ್ಯ, ನಾಟಕಗಳ ಕರ್ತೃಗಳೂ ಆದ ಕಲೋಪಾಸಕರಾಗಿದ್ದರು. ತಾಯಿ ಮುದಕಮ್ಮನವರು ಲ್ಕಷ್ಮೇಶ್ವರದ ಸಿರಿವಂತ ಸುಸಂಸ್ಕೃತ ಮನೆತನದ ಪುತ್ರಿಯಾಗಿ ಒಂಭತ್ತು ದಶಕಗಳ ಹಿಂದೆಯೇ ಮುಲ್ಕಿ ಪರೀಕ್ಷೆಯನ್ನು ಮಾಡಿಕೊಂಡ ಸುಸಂಸ್ಕೃತ ಮಹಿಳೆ ಪತಿಯ ಅಕಾಲ ಮರಣದಿಂದಾದ ಆಘಾತವನ್ನು ನುಂಗಿಕೊಂಡು ಮಕ್ಕಳ ವಿದ್ಯಾಭ್ಯಾಸಕ್ಕಾಗಿ

೩೫. ಶ್ರೀ ಪಿ.ಪಿ. ಅಕ್ಕಿ ಅವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಪು.ಸಂ. ೪೭
೩೬. ಶ್ರೀ ಪಿ.ಪಿ. ಅಕ್ಕಿ ಅವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಪು.ಸಂ. ೧೬

ಅವರನ್ನು ಸುಸಂಸ್ಕೃತರನ್ನಾಗಿ ಮಾಡಲು ಅವರಿತವಾಗಿ ಶ್ರಮಿಸಿ ಅವರ ಉತ್ಕೃಷ್ಟವನ್ನು ಕಣ್ಣಾರೆ ಕಂಡು ಶಿವಸಾಯುಜ್ಯವನ್ನು ಪಡೆದ ಆದರ್ಶ ಸ್ತ್ರೀರತ್ನ. ಅಂಥ ಮಾತಾಪಿತರ ಮೂರನೆಯ ಮಗನಾಗಿ ಜನಿಸಿದರೇ ಟಿ.ಪಿ.ಅಕ್ಕಿಯವರು.[೩೭]

ಪ್ರಭಪ್ಪನವರಿಗೆ ನಾಲ್ಕು ಜನ ಗಂಡುಮಕ್ಕಳು ಹಾಗೂ ಒಬ್ಬ ಪುತ್ರಿ. ಹಿರಿಯ ಮಗ ಶಂಕರಪ್ಪ ಭಾವಿಕಟ್ಟಿಯವರ ಮನೆತನಕ್ಕೆ ದತ್ತಕ ಪುತ್ರನಾಗಿ ಹೋದರು. ಎರಡನೆಯ ಮಗ ಶಿವಾನಂದ ಮೂರನೆಯ ಮಗ ಟಾಕಪ್ಪ, ನಾಲ್ಕನೆಯ ಮಗ ಈಶ್ವರಪ್ಪ, ಚಂಪಾಬಾಯಿ ಮಗಳು. ಶ್ರೀ ಟಿ.ಪಿ. ಅಕ್ಕಿಯವರು ೯ ವರ್ಷದ ಬಾಲಕನಾಗಿರುವಾಗಲೇ ತಂದೆ ಪ್ರಭಪ್ಪನವರು ಶಿವಸಾಮ್ರಾಜ್ಯವನ್ನು ಪಡೆದರು. ಮುಂದೆ ತಂದೆ ಪ್ರಭಪ್ಪನವರ ಆಪ್ತ ಸ್ನೇಹಿತರಾದ ಶ್ರೀ ಹುಬ್ಬಳ್ಳಿ ಸಾಹೇಬರ ಮೇಲ್ವಿಚಾರಣೆಯಲ್ಲಿ ಟಾಕಪ್ಪ, ಶಿವಾನಂದ ಹಾಗೂ ಈಶ್ವರಪ್ಪ ತಮ್ಮ ಪ್ರಥಾಮಿಕ ಶಿಕ್ಷಣವನ್ನು ಗದುಗಿನಲ್ಲಿಯೇ ಪೂರೈಸಿದರು. ಕಾರಣಾಂತರಗಳಿಂದ ಹುಬ್ಬಳ್ಳಿಗೆ ಹೋಗಬೇಕಾಗಿ ಬಂದುದರಿಂದ ಅಕ್ಕಿಯವರ ಮನೆತನ ಕೆಲವು ದಿವಸ ಹುಬ್ಬಳ್ಳಿಯಲ್ಲಿಯೇ ವಾಸ್ತವ್ಯ ಮಾಡಬೇಕಾಯಿತು. ಹುಬ್ಬಳ್ಳಿಯ ಲ್ಯಾಮಿಂಗ್‌ಟನ್ ಹೈಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿದರು. ಧಾರವಾಡ ಕರ್ನಾಟಕ ಕಾಲೇಜಿನಲ್ಲಿಯೂ ಅಭ್ಯಾಸಗೈದರು.

ಇಷ್ಟೊತ್ತಿಗೆ ಶ್ರೀ ಶಿವಾನಂದರು ಮುಂಬಯಿಯಲ್ಲಿ ಒಳ್ಳೆಯ ಕಲಾವಿದರೆಂದು ಖ್ಯಾತಿವೆತ್ತು ತಾಯಿ ತಮ್ಮಂದಿರ ಚಿಕ್ಕ ಜೀವನ ನೌಕೆಯನ್ನು ಸಾಗಿಸುವಷ್ಟು ಶಕ್ತಿಯನ್ನು ಪಡೆದುಕೊಂಡು ಎಲ್ಲರನ್ನು ಮುಂಬಯಿಗೆ ಕರೆಯಿಸಿಕೊಂಡರು. ಶ್ರೀ ಟಿ.ಪಿ.ಅಕ್ಕಿಯವರು ಜೆ.ಡಿ.ಎ. (ಅಕೌಂಟೆಂಟ್ ಡಿಪ್ಲೋಮಾ) ಪದವಿ ಪಡೆಯಲು ಸಿಡನ್ಯಾಮ್ ಕಾಲೇಜ ಸೇರಿದವರು. ಆದರ ಅಣ್ಣನ ಕಲಾಪ್ರೌಢಿಮೆ ಕಲಾಗೌರವಗಳೆಲ್ಲ ಕಂಡ ಶ್ರೀ ಅಕ್ಕಿಯವರು ಕುಂಚವನ್ನು ಹಿಡಿಯುದಷ್ಟೇ ಅಣ್ಣ ಶಿವಾನಂದರವರ ಸದಾನಂದ ದಿವ್ಯದರ್ಶನದಲ್ಲಿ ಲೀನರಾಗಿ ಸಂಸಾರದಲ್ಲಿದ್ದರೂ ಇಲ್ಲದಂತಾದುದು ಶ್ರೀ ಟಿ.ಪಿ. ಅಕ್ಕಿಯವರ ಜೀವನಕ್ಕೆ ಬರಸಿಡಿಲು ಬಡಿದಂತಾಯಿತು. ಅಭ್ಯಾಸದ ಆತುರ ಅಳಿಯಿತು.[೩೮]

ಟಿ.ಪಿ. ಅಕ್ಕಿಯವರು ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಯ "ಆರ್ಟ್ ಮಾಸ್ಟರ್" ಪದವೀಧರರಾಗಿ ಗದುಗಿಗೆ ಬಂದು ಚಿತ್ರಕಲಾ ಶಿಕ್ಷಕ ವೃತ್ತಿಯುನ್ನು ಅವಲಂಬಿಸದಿದ್ದರೆ. ಮುಂಬಯಿಯಲ್ಲಿಯೇ ಉಳಿದ ಕಲಾಕೃತಿಗಳನ್ನು ರಚಿಸುತ್ತಾ ಪ್ರದರ್ಶನಗಳನ್ನೇ ಏರ್ಪಡಿಸುತ್ತಾ ಪತ್ರಿಕಾ ಪ್ರಚಾರವನ್ನು ಗಿಟ್ಟಿಸುತ್ತಾ ಹೋಗಿದ್ದರೆ. ಟಿ.ಪಿ. ಅಕ್ಕಿಯವರು ಸಹ ಅನೇಕ ಹೆಸರಾಂತ ಕಲಾವಿದರಂತೆ ವಿಶ್ವಮಾನ್ಯತೆಯನ್ನು ಸಂಪತ್ತನ್ನುಗಳಿಸಿ ಸುಖಲೋಲುಪತೆಯ ಬದುಕನ್ನು ಬದುಕಬಹುದಿತ್ತು. ಬಹಳವಾದರೆ ಅವರಿಂದ ವಿಶ್ವಮಾನ್ಯ ಕಲಾಕೃತಿಗಳ ಬಳುವಳಿ ನಮಗೆ ದೊರಕಬಹುದ್ದಿತ್ತು. ಕರ್ನಾಟಕದ ಕಲಾಭಂಡಾರಕ್ಕೆ ಇನ್ನಷ್ಟು ಕಲಾಸಂಪತ್ತಿನ ಸೇರ್ಪಡೆಯಾಗಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಬದಲಾಗಿ ನನ್ನೊಬ್ಬನಿಂದ ಕನ್ನಡ ಕಲಾಲಕ್ಷ್ಮಿಯ ಸಂಪತ್ತು

೩೭. ಸಂ. ಅಶೋಕ ಅಕ್ಕಿ ಕೃತಪುರ ಕಲಾವೈಭವ ಚಿತ್ರ ಮತ್ತು ಶಿಲ್ಪಕಲಾ ವಿದರ ಕೈಪಿಡಿ, ಲಕ್ಕುಂಡಿ ಉತ್ಸವ –೨೦೦೯. ಪು.ಸಂ. ೨೪

೩೮. ಸಂ.ವಿ.ಟಿ. ಕಾಳೆ ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ.ಪು.ಸಂ. ೪

ಬೆಳೆಯುವುದು ಸಾಧ್ಯವಿಲ್ಲ. ನಾನು ಹಾಗೆ ಆಸೆಪಡುವುದು ಸಾಧವೂ ಅಲ್ಲ. ಅದಕ್ಕೆ ಅಸಂಖ್ಯಾತ ಕಲಾವಿದರ ಕೈಗಳೇ ಆಗಬೇಕು. ನಾಡಿನ ನಾಲ್ಕು ನಿಟ್ಟಿನಿಂದ ಕಲಾವಿದರು ಹುಟ್ಟಿ ಬರಬೇಕು.[೩೯] ಅವರನ್ನು ಪ್ರಬುದ್ಧರನ್ನಾಗಿಸುವ ಕಲಾಶಾಲೆಗಳು ಸೃಷ್ಠಿಯಾಗಬೇಕು ಎಂದು ಆಶಿಸಿದರು.

ಕಲಾಶಿಕ್ಷಕ

ಶ್ರೀ ಟಿ.ಪಿ.ಅಕ್ಕಿಯವರು ತಮ್ಮ ಶಿಕ್ಷಣವನ್ನು ಪೂರೈಸಿಕೊಂಡು ಗದುಗಿಗೆ ಬಂದ ಹೊಸತರಲ್ಲಿ ಉತ್ತರ ಕರ್ನಾಟಕದಲ್ಲಿ ಧಾರವಾಡದ ಹಿರಿಯ ಕಲಾವಿದ ಶ್ರೀ ಡಿ.ವಿ.ಹಾಲಭಾವಿ ಅವರ ಕಲಾಶಾಲೆ, ಹಳೆಯ ಮೈಸೂರು ಸಂಸ್ಥಾನದಲ್ಲಿ ಮೈಸೂರಿನ ಜಯಚಾಮರಾಜೇಂದ್ರ ತಾಂತ್ರಿಕ ಕಲಾಶಿಕ್ಷಣವನ್ನು ಬಿಟ್ಟರೆ ಅಖಂಡ ಕರ್ನಾಟಕದ ಯಾವ ಭಾಗದಲ್ಲಿಯೂ ಕಲಾ ಶಿಕ್ಷಣವನ್ನು ನೀಡಬಲ್ಲ ಕಲಾಶಾಲೆಗಳೇ ಇರಲಿಲ್ಲ. ಕೈಬೆರಳೆಣಿಕೆಯಷ್ಟು ಕಲಾವಿದ್ಯಾರ್ಥಿಗಳಿಂದಲೇ ಈ ಕಲಾಶಾಲೆಗಳು ತಮ್ಮ ಕೈಂಕರ್ಯವನ್ನು ಕೈಕೊಂಡಿದ್ದವು. ಕಲಾಶಿಕ್ಷಣ ಈ ಕೊರತೆಯನ್ನು ತುಂಬುವುದು ಹೇಗೆ? ಎಂದು ಚಿಂತಿಸಿದ ಅಕ್ಕಿಯವರು ಗದುಗಿನಲ್ಲಿಯೇ ಒಂದು ಕಲಾಶಾಲೆಯನ್ನು ಸ್ಥಾಪಿಸುವ ನಿರ್ಧಾರವನ್ನು ಕೈಗೊಂಡರು. ಗದಗಿನಂತಹ ವ್ಯಾಪಾರಿ ಮನೋವೃತ್ತಿಯ ನಗರದಲ್ಲಿ ಕಲಾವಿದ್ಯಾರ್ಥಿಗಳು ಬಂದಾರೆಯೇ ಎಂದು ಚಿಂತಿಸುವ ಗೋಜಿಗೂ ಅವರು ಹೋಗಲಿಲ್ಲ. ಕೈಗೆ ಸಿಕ್ಕ ನಾಲ್ಕಾರು ವಿದ್ಯಾರ್ತಿಗಳಿಂದಲೇ ಗದಗಿನ ಮುಸಿಪಲ್ ಹೈಸ್ಕೂಲಿನ ಚಿತ್ರಕಲಾ ತರಗತಿಯ ಕೊಠಡಿಯಲ್ಲಿ ಕಲಾಶಾಲೆಯನ್ನು ಪ್ರಾರಂಭಿಸಿದರು.[೪೦]

೧೯೩೦ ರಿಂದ ೩೬೮ ವರೆಗೆ ಕಲಾಸೇವೆಗೈದು ಗದುಗಿಗೆ ಬಂದರು ೩೦ವರ್ಷಗಳ ವಿವಿಧ ರೀತಿಯ ಅನುಭವವನ್ನು ಪಡೆದು ಅನುಭವದ ಖಣಿಯಾಗಿ ಕರ್ಪುರದಂತೆ ತನ್ನನ್ನೇ ತಾನು ಸಟ್ಟುಕೊಂಡು ಇತರರಿಗೆ ಬೆಳಕನ್ನು ನೀಡುವ ಪವಿತ್ರ ಶಿಕ್ಷಕನ ಕಾರ್ಯಗೈದರು. ಮುಂಬಯಿಯ ಈ ಕಲಾಶಿಕ್ಷಣದ ಮೂರ್ತಿ ಗದುಗಿನ ಮಕ್ಕಳಿಗೆ ಚೇತನಪರ ಅಧಿದೇವತೆಯಾಯಿತು.[೪೧] ಸದಾ ಹಸನ್ಮುಖರಾದ ಇವರು ಗದುಗಿನ ಮುನ್ಸಿಪಲ್ ಹೈಸ್ಕೂಲಿನ ವಾತಾವರಣವನ್ನು ಬದಲಾಯಿಸಿದರು. ಇಲ್ಲಯೇ ಅಕ್ಕಿಯವರು ಸಾಧಿಸಬೇಕಿದ್ದ ತಮ್ಮಜೀವನದ ಸಾಧನೆಯನ್ನು ತಳಪಾಯದಿಂದ ಭದ್ರಮಾಡಿಕೊಂಡರು.

ಆಯಸ್ಕಾಂತದಂತಹ ಶ್ರೀ ಅಕ್ಕಿಯವರ ವ್ಯಕ್ತಿತ್ವ ಅನೇಕ ಗಣ್ಯರನ್ನು ತನ್ನತ್ತ ಸೆಳೆದುಕೊಂಡಿತು. ವಿದ್ಯಾರ್ಥಿಗಳಿಗಂತೂ ಅಕ್ಕಿಯವರು ಅಭಿಮಾನಿದೇವತೆಯಾದರು. ಶಿಕ್ಷಕ ವೃತ್ತಿಯಿಂದ ನಿವೃತ್ತರಾಗುವರೆಗೂ ಕ್ರೀಡಾ ಚಟುವಟಿಕೆ, ಸಾಂಸ್ಕೃತಿಕ ಚಟುವಟಿಕೆ, ಸ್ಕೌಟು, ಕಲಾಪ್ರದರ್ಶನಗಳು ಯಾವುದೆಂದರೂ ಅಕ್ಕಿಯವರ ನಗುಮೊಗದ ಚೈತನ್ಯಪೂರ್ಣ ಓಡಾಟ ಇದ್ದದ್ದೆ. ತಾವಾಯಿತು ತಮ್ಮ ಕರ್ತವ್ಯವಾಗಿಯಿತು. ಅನ್ಯವನ್ನು ಕಣ್ಣೆತ್ತಿ ನೋಡಿದವರಲ್ಲ. ಅಕ್ಕಿಯವರು ಗುಪ್ತ ಭಕ್ತನ ಹಾಗೆ ಕಲೆಗಾಗಿ ದುಡಿಯುತ್ತಲೇ ಇದ್ದರು. ಸಣ್ಣ ಪ್ರಮಾಣದಲ್ಲಿ ವಿದ್ಯಾರ್ಥಿಗಳನ್ನು ತರಬೇತಿಗೊಳಿಸಿ ಅವರಿಗೆ ಅವಶ್ಯವಿದ್ದಾಗ ಕೈಯಿಂದ

೩೯. ಪ್ರೊ. ಸಂ. ಸಿ.ಎನ್.ಪಾಟೀಲ ಶ್ರೀ ಪಿ.ಪಿ.ಅಕ್ಕಿ ಅವರ ಷಷ್ಯಬ್ದಿ ಪೂರ್ತಿ ಸಮಾರಂಭ ಲೇ, ವಿ.ಸಿ.ಮಾಲಗಿತ್ತು ಪು.ಸಂ. ೪೮

೪೦. ಸಂ. ವಿ.ಟಿ. ಕಾಳೆ ಪಿ.ಪಿ.ಅಕ್ಕಿ ಕ.ಲ.ಕ.ಅ. ಬೆಂ ಪು.ಸಂ, ೩

೪೧. ಸಂ. ವಿ.ಟಿ. ಕಾಳೆ ಪಿ.ಪಿ.ಅಕ್ಕಿ ಕ.ಲ.ಕ.ಅ. ಬೆಂ ಪು.ಸಂ, ೩

ಹಣವನ್ನು ಕೊಟ್ಟು ಮುಂಬಯಿಗೆ ಕಳುಹಿಸುತ್ತಿದ್ದರು. ನಿವೃತ್ತ ಕಾಲ ಸಮೀಪಿಸಿದಂತೆ ಅವರು ವಿಶ್ರಾಂತಿಯನ್ನು ಬಯಸಲಿಲ್ಲ.[೪೨] ರಾಜ್ಯದಲ್ಲಿ ಉತ್ತಮ ಕಲಾಶಾಲೆಯನ್ನು ಕಟ್ಟಲು ಯೋಚಿಸಿದರು. ಕರ್ನಾಟಕದಿಂದ ಮುಂಬಯಿಗೆ ಹೋಗಿ ಪರೀಕ್ಷೆ ಕಟ್ಟಿಸುವುದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿತ್ತು. ಆದ್ದರಿಂದ ಗದುಗಿನಲ್ಲಿಯೇ ಯಾಕೆ ಕಲಾಶಾಲೆ ಸ್ಥಾಪಿಸಬಾರದೆಂದು ಯೋಚಿಸಿದರು.

೧೯೪೭ರಲ್ಲಿ ಭಾರತವು ಬ್ರಿಟೀಷರು ಆಳ್ವಿಕೆಯಿಂದ ಮುಕ್ತಗೊಂಡು ಇಡೀ ಭಾರತವೇ ಸಂತೋಷ, ಸಂಭ್ರಮದಿಂದ ತುಳುಕುತ್ತಿತ್ತು. ಬ್ರಿಟೀಷರು ದಾಶ್ಯದಿಂದ ಅದೇ ತಾನೆ ಮುಕ್ತವಾಗಿ ಗರಿಬಿಚ್ಚಿ ಹಕ್ಕಿಗಳಾದ ಭಾರತಮಾತೆಯ ಮಕ್ಕಳ ಮನಸ್ಸಿಗೆ ಮುದ ನೀಡಲೆಂದೋ ಹಾಗೂ ಆ ಮಕ್ಕಳ ಮನದಾಳದಲ್ಲಿ ಭಾರತೀಯ ಕಲಾ ಸಂಸ್ಕೃತಿ, ಬೆಳಕನ್ನು ಬಿತ್ತರಿಸಲೆಂದೋ ೧೯೪೭ರಲ್ಲಿಯೇ ಕಲಾತಪಸ್ವಿ ಶ್ರೀ ಟಿ.ಪಿ.ಅಕ್ಕಿಯವರು ವಿಜಯ ಕಲಾಮಂದಿರವನ್ನು ಗದುಗಿನಲ್ಲಿ ಹುಟ್ಟುಹಾಕಿದರು. ಲಲಿತಕಲೆಗಳ ತವರೂರು ಎಂದೇ ಖ್ಯಾತಿ ಪಡೆದ ಉತ್ತರ ಕರ್ನಾಟಕದಲ್ಲಿ ಕಲಾರಸಿಕರು, ಕಲಾಭಿಮಾನಿಗಳು ಹಾಗೂ ಕಲಾ ಪೋಷಕರು ಈ ಭಾಗದ ಮಣ್ಣಲ್ಲಿ ಜನ್ಮ ತಳೆದ ಲಲಿತಕಲೆಗಳನ್ನು ಪೂಜಿಸಿ ಪ್ರೋತ್ಸಾಹಿಸಿ ಇಷ್ಟವಾದಂತಹ ಕಲಾ ಪರಂಪರೆಗಳನ್ನು ಹಾಗೂ ಪ್ರತಿಭಾನ್ವಿತ ಕಲಾವಿದರನ್ನು ನಾಡಿಗೆ ಸಮರ್ಪಿಸಿದರು.[೪೩]

ಟಿ.ಪಿ.ಅಕ್ಕಿಯವರು ಗದುಗಿನ ಐತಿಹಾಸಿಕ ಮಹತ್ವವನ್ನು ತಿಳಿದವರಾಗಿದ್ದರು. ಚಾಲುಕ್ಯರು, ಹೊಯ್ಸಳರು, ನಿರ್ಮಿಸಿದ ಭವ್ಯವೂ ಸುಂದರವೂ ಕಲಾತ್ಮಕ ಆದ ದೇವಾಲಯಗಳು ಟಿ.ಪಿ.ಅಕ್ಕಿಯವರ ಮನಸ್ಸನ್ನು ಸೆಳೆದವು. ಲಕ್ಕುಂಡಿ, ಹಂಪಿ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದ ಐತಿಹಾಸಿಕ ಸ್ಥಳಗಳು ಅಕ್ಕಿಯವರಿಗೆ ತೀರ ಕಣ್ಣಮುಂದೆಯೇ ಸುಳಿದಾಡಿದಂತಾಯಿತು. ಈ ದಿಸೆಯಲ್ಲಿ ಗದಗು ಅಥವಾ ಹಿಂದಿನ ಕೃತಪುರದ ನೆಲವು ಎಷ್ಟೊಂದು ಪ್ರಶಸ್ತವಾಗಿದೆ. ಇಲ್ಲಿಯೇ ಕಲಾಶಿಕ್ಷಣವನ್ನು ನೀಡಬಲ್ಲ ಒಂದು ಕಲಾಶಾಲೆಯನ್ನು ಸ್ಥಾಪಿಸುವುದು ನಿಜಕ್ಕೂ ಒಂದು ಮಹತ್ವದ ಕಾರ್ಯವೆನಿಸಿತು. ಇಲ್ಲಿನ ಪರಿಸರ ಈ ಸಾಹಸಕ್ಕೆ ಪೂರಕವಾಗಿದೆ ಎಂಬ ಕನಸನ್ನು ಕಟ್ಟಿಕೊಂಡಿದ್ದರು. ಕಲಾಶಿಕ್ಷಣ ಕಲೆ ಮುಂತಾದ ನಿಗೂಢ ವಿದ್ಯೆಯನ್ನು ಸಂಪೂರ್ಣವಾಗಿ ಮರೆತುಹೋದ ಜನತೆಯಲ್ಲಿ ಕಲಾಪ್ರಜ್ಞೆಯನ್ನು ಮೂಡಿಸುವುದು ಹೇಗೆ ? ಎಂಬ ಸಮಸ್ಯ ಟಿ.ಪಿ.ಅಕ್ಕಿಯವರನ್ನು ಕಾಡತೊಡಗಿತು. ಮಾಧ್ಯಮಿಕ ಶಾಲಾಮಟ್ಟದಲ್ಲಿ ನಡೆಯುತ್ತಿದ ಎಲಿಮೆಂಟರಿ ಹಾಗೂ ಇಂಟರ್ ಮಿಡಿಯೆಟ್ ಚಿತ್ರಕಲಾ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳನ್ನು ಅಣಿಗೊಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಸಾಗುವಂತೆ ತರಬೇತಿ ನೀಡತೊಡಗಿದರು. ಪ್ರತಿವರ್ಷ ನೂರರಿಂದ ನಾಲ್ಕುನೂರರವರೆಗೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅಕ್ಕಿಯವರನ್ನು ಸುತ್ತವರಿಯತೊಡಗಿದರು. ಪ್ರತಿವರುಷ ಮೂರುನೂರರಿಂದ ನಾಲ್ಕು ನೂರರವರೆಗಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅಕ್ಕಿ ಅವರನ್ನು ಸುತ್ತುವರಿಯತೊಡಗಿದರು. ಅಕ್ಕಿಯವರ ವಾತ್ಸಲ್ಯಮಯ ಪ್ರೇರಣೆಯಿಂದಾಗಿ ವಿದ್ಯಾರ್ಥಿಗಳಲ್ಲಿಯೂ ಸಹೋದ್ಯೋಗಿಗಳಲ್ಲಿಯೂ ಆತ್ಮೀಯತೆಯ ಗಾಢವಾಗಿ

೪೨. ಪು.ಸಂ. ಸಿ.ಎನ್. ಪಾಟೀಲ, ಲೇ ವಿ.ಸಿ. ಮಾಲಗಿತ್ತಿ ಪಿ.ಪಿ. ಅಕ್ಕಿ ಅವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಪು.ಸಂ. ೪೮

೪೩. ಅಶೋಕ ಅಕ್ಕಿ, ಪು.ಸಂ. ಲೇ. ಡಾ. ಬಿ.ಕೆ. ಹಿರೇಮಠ ವಜ್ರವಿಜಯ ೨೦೦೮ ಪು.ಸಂ. ೧೦

ಬೆಳೆಯತೊಡಗಿತು. ಹೀಗಾಗಿ ಕೆಲವೇ ದಿನಗಳಲ್ಲಿ ವಿದ್ಯಾರ್ಥಿಗಳ ಕಲಾಪ್ರಜ್ಞೆ ದ್ವಿಗುಣಗೊಂಡಿತು. ಅಕ್ಕಿ ಅವರಿಗೆ ಕಲಾಶಾಲೆಗೆ ಪ್ರಾರಂಭಕ್ಕೆ ಕಾಲಪಕ್ವಾಗಿದೆ ಎಂದೆನಿಸಿತು. ಕೆಲವೇ ಕೆಲವು ವಿದ್ಯಾರ್ಥಿಗಳಿಂದ ಹೈಸ್ಕೂಲಿನಲ್ಲಿ ಉಚ್ಚ ಕಲಾ ತರಬೇತಿಯನ್ನು ಪ್ರಾರಂಭಿಸಿದರು. ಸಾವಿರದ ಒಂಬೈನೂರ ನಲ್ವತ್ತೇಳರಲ್ಲಿ ಪ್ರಾರಂಭಿಸಿದ ಈ ಕಲಾಶಾಲೆಗೆ ತಮ್ಮ ಪುತ್ರ ವಿಜಯನ ಹೆಸರನ್ನೇ ಸ್ಥಿರಗೊಳಿಸಿ "ವಿಜಯ ಕಲಾಮಂದಿರ" ಎಂಬ ಹೆಸರಿನ್ನಿಟ್ಟರು. ಕಮಾನಗಾರ, ಪಿಂಜಾರ, ಮತ್ತೂರ, ಕಂಬಿಮಠ ಇವೇ ನಾಲ್ಕು ಜನ ಉಚ್ಚಕಲಾ ಶಿಕ್ಷಣಕ್ಕೆ ಬಂದ ವಿದ್ಯಾರ್ಥಿಗಳು. ನಂತರ ಕರ್ನಾಟಕ ರಾಜ್ಯದ ಅಸಿಸ್ಟಂಟ್ ಡಿ.ಪಿ.ಐ. (ಡ್ರಾಯಿಂಗ್) ಆಗಿ ನಿವೃತ್ತರಾಗಿ ನಿಧನರಾದ ಎಸ್.ಜೆ.ಗೊಳಣ್ಣನವರ ಅವರು ಕಲಾವಿದ್ಯಾರ್ಥಿಗಳ ಬಳಗದಲ್ಲಿ ಸೇರಿಕೊಂಡರು.[೪೪] ಹೀಗೆ ವಿಜಯ ಕಲಾಮಂದಿರವು ಗದುಗಿನಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತು. ಅದೇ ವರ್ಷ ಭಾರತ ಪಾರತಂತ್ರ್ಯ ಸಂಕೋಲೆಯನ್ನು ಕಳಚಿಕೊಂಡು ಸರ್ವತಂತ್ರ ಸ್ವತಂತ್ರವನ್ನು ಪಡೆಯಿತು ಭಾರತಕ್ಕೆ ದೊರೆತ ಸಂಭ್ರಮದಿಂದ ಅಕ್ಕಿ ಅವರು ಇನ್ನಷ್ಟು ಉತ್ತೇಜಿತರಾದರು.

ವಿಜಯ ಕಲಾಮಂದಿರವು ಸರಿಯಾಗಿ ತನ್ನ ಕಾರ್ಯವನ್ನು ನಿರ್ವಹಿಸುವಲ್ಲಿ ಸಮರ್ಥ ಡಿಪ್ಲೋಮಾ ಹಾಗೂ ಆರ್ಟ್ ಮಾಸ್ಟರ್ ಪದವೀಧರನಾದ ಇನ್ನೊಬ್ಬ ಕಲಾಶಿಕ್ಷಕನ ಅವಶ್ಯಕತೆ ತಲೆದೋರಿದಾಗ ಟಿ.ಪಿ.ಅಕ್ಕಿಯವರ ಆತ್ಮೀಯ ಶಿಷ್ಯರಾದ ಸಿ.ಎನ್. ಪಾಟೀಲ ಅವರು ಅಕ್ಕಿಯವರ ಕಣ್ಣಿಗೆ ಬಿದ್ದರು. ಸಿ.ಎನ್.ಪಾಟೀಲರು ಬಡತನದ ಕುಟುಂಬದಿಂದ ಬಂದವರಾಗಿದ್ದರು. ಅವರಲ್ಲಿನ ಸುಪ್ತವಾಗಿದ್ದ ಕಲಾಶಕ್ತಿಯು ಶ್ರೀ ಅಕ್ಕಿಯವರಿಗೆ ಸ್ಪಷ್ಟವಾಗಿ ಗೋಚರಿಸಿತು.[೪೫] ಸಿ.ಎನ್.ಪಾಟೀಲರನ್ನು ಮುಂಬಯಿ ಜೆ.ಜೆ. ಕಲಾಶಾಲೆಗೆ ಕಳುಹಿಸಬೇಕು, ವಿದ್ಯುಕ್ತವಾದ ಅತ್ಯುತ್ತಮವಾದ ಕಲಾಶಿಕ್ಷಣ ಅವನಿಗೆ ದೊರೆತಲ್ಲಿ ಅವನೊಬ್ಬ ಅತ್ಯತ್ತಮ ಕಲಾವಿದನಾಗಬಲ್ಲ. ಮುಂದೆ ವಿಜಯ ಕಲಾಮಂದಿರಕ್ಕೆ ಕಲಿಯಲು ಬರುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬಲ್ಲ ಎಂಬುದನ್ನು ತಿಳಿದ ಅಕ್ಕಿ ಅವರು ಪ್ರಯತ್ನ ಮಾಡಿ ಸಿರಸಂಗಿ ಲಿಂಗರಾಜ ದತ್ತಿಯ ಶಿಷ್ಯವೇತನವು ಸಿ.ಎನ್. ಪಾಟೀಲರಿಗೆ ದೊರೆಯುವಂತೆ ಮಾಡಿ ಪಾಟೀಲರನ್ನು ಮುಂಬಯಿಗೆ ಕಳಿಸಿಕೊಟ್ಟರು. ಮೇಧಾವಿಯಾದ ಸಿ.ಎನ್.ಪಾಟೀಲರು ಸುಲಭವಾಗಿಯೇ ಜೆ.ಜೆ. ಕಲಾಶಾಲೆಯಲ್ಲಿ ಕಲಿಯಲು ಅವಕಾಶ ದೊರಕಿಸಿಕೊಂಡರು. ವಿಶ್ವವಿಖ್ಯಾತ ಕಲಾವಿದರೆಂದು ಖ್ಯಾತರಾದ ವಿ.ಬಿ. ಪರಬ, ಲಕ್ಷ್ಮಣ ಪೈ, ಪೋಪಳೆ, ಅಕಬರ ಪದವಶಿ, ಸ್ವಸ್ತಿಕ್, ಭವೆ ಮುಂತಾದ ಪ್ರಭೃತಿಗಳ ಸಹಪಾಠಿಯಾಗಿ ಜೆ.ಜೆ. ಕಲಾಶಾಲೆಯ ಕಣ್ಮಣಿಯಾಗಿದ್ದರು. ಅಡ್ವಾನ್ಸ ಪರೀಕ್ಷೆ ಚಿತ್ರಕಲಾ ಶಿಕ್ಷಕರ ತರಬೇತಿಯನ್ನು ಉನ್ನತ ಶ್ರೇಣಿಯಲ್ಲಯೇ ಪಾಸಾಗಿ ಸಿ.ಎನ್.ಪಾಟೀಲ ಗದುಗಿಗೆ ಮರಳಿ ಬಂದರು. ಸಿ.ಎನ್.ಪಾಟೀಲರಿಗೆ ಟಿ.ಪಿ.ಅಕ್ಕಿ ಅವರ ವಿಜಯ ಕಲಾಮಂದಿರದಿಂದ ಪ್ರಾಚಾರ್ಯ ಪಟ್ಟಿ ಕಟ್ಟಿದರು. ಸಿ.ಎನ್.ಪಾಟೀಲರ ಸೃಜನಶೀಲ ಪ್ರತಿಭೆ ವಿಜಯ ಕಲಾಮಂದಿರಕ್ಕೆ ಬರುವ ಕಲಾವಿದ್ಯಾರ್ಥಿಗಳ ಮೇಲೆ ಉತ್ತಮವಾದ ಪ್ರಭಾವ ಬೀರಿತು.[೪೬] ತತ್ಪರಿಣಾಮವಾಗಿ ವಿದ್ಯಾರ್ಥಿಗಳ ಸಂಖ್ಯೆ ಆರರಿಂದ ಹತ್ತಕ್ಕೇರಿತು. ಹೀಗೆ ಹಂತಹಂತವಾಗಿ ವಿಜಯ ಕಲಾಮಂದಿರವು ಬೆಳೆಯತೊಡಗಿತು.

---

೪೪. ಅಶೋಕ ಅಕ್ಕಿ, ಪು.ಸಂ. ಲೇ. ಡಾ. ಬಿ.ಕೆ. ಹಿರೇಮಠ ವಜ್ರವಿಜಯ ೨೦೦೮ ಪು.ಸಂ. ೧

೪೫. ವಿ.ಟಿ. ಕಾಳೆ ಸಂ. ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ. ಪು.ಸಂ.೮

೪೬. ವಿ.ಟಿ. ಕಾಳೆ ಸಂ. ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ. ಪು.ಸಂ.೯

ಕಲಾಶಾಲೆ ಪ್ರಾರಂಭವಾದ ಹೊಸತರಲ್ಲಿ ಅಕ್ಕಿಯವರ ಈ ಸಾಹಸವನ್ನು "ಹುಚ್ಚುಸಾಹಸ" ಎಂದು ಅವಹೇಳನ ಮಾಡಿದರು. ಕಲಾವಿದ್ಯಾರ್ಥಿಗಳು ಲೈಫ್‌ಸ್ಟಡಿ (ಭಾವಚಿತ್ರ) ಮಾಡುವಾಗ ಮಾಡೆಲ್‌ಗಳನ್ನು ಸ್ತ್ರೀ ಮತ್ತು ಪುರುಷರನ್ನು ಎದುರಿಗೆ ಕುಳ್ಳಿರಿಸಿಕೊಂಡು ಚಿತ್ರಿಸುವುದನ್ನು ಕೂಡ ಸಾಂಪ್ರದಾಯವಾದಿಗಳು "ಅಕ್ಕಿಯವರು ಕಲಾಮಂದಿರದಲ್ಲಿ ಊರಿನ ಹೆಣ್ಣುಮಕ್ಕಳನ್ನು ಎದುರಿಗೆ ಕುಳ್ಳಿರಿಸಿ ವಿದ್ಯಾರ್ಥಿಗಳಿಂದ ಚಿತ್ರ ತೆಗೆಸುತ್ತಾರೆ, ಎಂಥ ಅಸಹ್ಯಕರವಾದ ಸಂಸ್ಕೃತಿಗೆ ದಾರಿ ಮಾಡಿಕೊಡುತ್ತಿದ್ದಾರೆ!" ಎಂದು ಅವಹೇಳನಕರವಾದ ಮಾತುಗಳನ್ನಾಡುತ್ತಿದ್ದರು. ಇಂಥ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುತ್ತಲೇ ಅಕ್ಕಿಯವರು ಕಲಾಮಂದಿರಲ್ಲಿ ಸಂಗೀತ, ನೃತ್ಯ, ನಾಟಕ ಮಾಡಲು "ವಿಜಯ ನಾಟ್ಯಸಂಘ" ಎಂಬ ಸೋದರ ಸಂಸ್ಥೆಯನ್ನು ಹುಟ್ಟುಹಾಕಿದರು.[೪೭] ಕಲಾಮಂದಿರವು ದಕ್ಷಿಣ ಭಾರತದ ಶಾಂತಿನಿಕೇತನವಾಗಬೇಕೆಂದು ಆಶಿಸಿದರು. ಹಂತ ಹಂತವಾಗಿ ಬೆಳೆಯುತ್ತ ರಾಜ್ಯದಲ್ಲಿಯೇ ತನ್ನದೇ ಆದ ಹೆಸರನ್ನು ವಿಜಯ ಕಲಾಮಂದಿರ ಮಾಡತೊಡಗಿತು.

ವಿಜಯ ಕಲಾಮಂದಿರ ಬೃಹದಾಕಾರ ತಾಳಿ, ತನ್ನದೇ ಆದ ಕಟ್ಟಡ, ಪ್ರಭಾವೀ ಶಿಕ್ಷಕರುಗಳನ್ನು ಮೈಗೂಡಿಸಿಕೊಂಡು ವಾಮನಾವತರದಿಂದ ತ್ರಿವಿಕ್ರಮಾವತಾರವನ್ನು ಪಡೆಯಿತು. ಇಂದು ಈ ಕಲಾಶಾಲೆಯನ್ನು ಸಂದರ್ಶಿಸುವ ಪ್ರತಿಯೊಬ್ಬ ಕಲಾಪ್ರೇಮಿಯೂ ಅಕ್ಕಿಯವರು ಇಂಥ ಒಂದು ಸಂಸ್ಥೆಯನ್ನು ಕಟ್ಟುವಲ್ಲಿ ತೋರಿದ ಸಾಹಸ, ಪಟ್ಟಶ್ರಮವನ್ನು ಕಂಡು ಬೆರಳು ಕಚ್ಚುತ್ತಾರೆ.[೪೮] ಅಕ್ಕಿಯವರ ರಚನಾತ್ಮಕ ಕ್ರಿಯಾಶಕ್ತಿಯ ಹಿರಿಮೆಯನ್ನು ಕಂಡು ತಬ್ಬಿಬ್ಬಾಗುತ್ತಾರೆ. ಮನೆತನದಿಂದ ಶ್ರೀಮಂತರೇನೂ ಅಲ್ಲವಾದರೂ ತಮ್ಮ ಕ್ರಿಯಾತ್ಮಕ ಶಕ್ತಿಗಳಿಂದ ವಿಜಯ ಕಲಾಮಂದಿರವನ್ನು ರಾಜ್ಯದಲ್ಲಿಯೇ ಹೆಸರು ಪಡೆಯುವಂತೆ ಮಾಡಿದರು. ಶ್ರೀ ಸಿ.ಎನ್. ಪಾಟೀಲ, ಶ್ರೀ ಎಂ.ಎ.ಚೆಟ್ಟಿ, ಶ್ರೀ ಕಮಾನಗಾರ, ಶ್ರೀ ಎಸ್.ಎಂ.ಶಿರಹಟ್ಟಿ, ಶ್ರೀ ಎನ್.ಎಸ್. ಶಿಲ್ಪಿ ಇವರೆಲ್ಲರು ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರಾಗಿ ಭದ್ರಬುನಾದಿ ಹಾಕುವುದರ ಮೂಲಕ ತಮ್ಮದೆ ಆದ ಉತ್ತಮವಾದ ಕಲಾಸೇವೆಯನ್ನು ಸಲ್ಲಿಸಿ ರಾಜ್ಯಮಟ್ಟದಲ್ಲಿಯೇ ಉತ್ತಮ ಕಲಾಶಾಲೆಯಾಗಿ ಬೆಳೆಯಲು ಕಾರಣೀಭೂತರಾದರು.

ಶ್ರೀ ಟಿ.ಪಿ. ಅಕ್ಕಿಯವರು ತಮ್ಮ ಶಿಷ್ಯರು ರಾಷ್ಟ್ರಮಟ್ಟದಲ್ಲಿ ಬೆಳೆಯಬೇಕು. ತಮಗೆ ಮತ್ತು ಸಂಸ್ಥೆಗೆ ಹೆಸರು ತರಬೇಕು ಎಂಬುದು ಅಕ್ಕಿಯವರ ಅಭಿಮತವಾಗಿತ್ತು. ಹೌದು ಅಕ್ಕಿಯವರ ಶಿಷ್ಯವಾತ್ಸಲ್ಯತೆಯೇ ಅಂಥಹದು ತಮ್ಮ ಶಿಷ್ಯರು ವಿಶ್ವವಿಖ್ಯಾತರಾಗಲೇಂದೆ ತಮ್ಮ ಜೀವನ ಪರ್ಯಂತವು ಆಶೆಪಟ್ಟ ಮಹಾಚೇತನ, ಶ್ರೀ ಟಿ.ಪಿ. ಅಕ್ಕಿ ಸರಕಾರದಿಂದ ಸಾಕಷ್ಟು ಸಹಾಯಧನ ದೊರೆಯದಿದ್ದಾಗ ಹೈಸ್ಕೂಲು ಚಿತ್ರಕಲಾ ಶಿಕ್ಷಕ ಸೇವೆಯನ್ನು ಮೊಟಕುಗೊಳಿಸಿ, ಸೇವೆಗೆ ರಾಜೀನಾಮೆಯಿತ್ತು ತಮ್ಮ ಭವಿಷ್ಯನಿದಿ (Provident Fund) ಯನ್ನು ತಕ್ಷಣವೇ ತರಿಸಿಕೊಂಡು ಶಿಷ್ಯರ, ಸಂಸ್ಥೆಯ ಏಳಿಗೆಗಾಗಿ ಬಳಸಿದ ಹೃದಯವಂತರು. ಮುಂಬಯಿಗೆ ಪರೀಕ್ಷೆಗೆಂದು ಹೋದ ಶಿಷ್ಯ ಹಣಕ್ಕಾಗಿ ಪತ್ರ ಬರೆದಾಗ ಧರ್ಮಪತ್ನಿಯ ಕಂಠಹಾರವನ್ನು ಒತ್ತೆ ಇಟ್ಟು (ಗಿರವಿ ಇಟ್ಟು) ಶಿಷ್ಯನಿಗೆ ಹಣ ಕಳಿಸಿದ ಅನೇಕ ಪ್ರಸಂಗಗಳು ಇವೆ.[೪೯] ಅವರ ಮಾತಿನಲ್ಲಿದ್ದ ಮಾಧುರ್ಯ, ಹೃದಯದಲ್ಲಿದ್ದ ದಯೆ, ದೃಷ್ಟಿಯಲ್ಲಿದ್ದ ಸೌಜನ್ಯಗಳು ಗುರು-ಶಿಷ್ಯರ ಮೈತ್ರಿ ಬಹುದೊಡ್ಡದಾಗಿತ್ತು.

---

೪೭. ವಿ.ಟಿ. ಕಾಳೆ ಸಂ. ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ. ಪು.ಸಂ.೧೦

೪೮. ವಿ.ಟಿ. ಕಾಳೆ ಸಂ. ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ. ಪು.ಸಂ.೧೨

೪೯. ವಿ.ಟಿ. ಕಾಳೆ ಸಂ. ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ. ಪು.ಸಂ.೧೨

ಉತ್ತರ ಕರ್ನಾಟಕದಲ್ಲಿ ಖ್ಯಾತರಾದ ಕೆಲವು ಕಲಾವಿದರಲ್ಲಿ ಸಿ.ಎನ್.ಪಾಟೀಲ, ಎ.ಐ.ಕಮಾನಗಾರ, ಸಿ.ಟಿ.ರಾಯಕರ, ಬಿ.ಜಿ.ವಾರಿ, ಎನ್.ಎಸ್.ಶಿಲ್ಪಿ, ಎಸ್.ಜಿ.ಗುಳಗಣ್ಣವರ, ಸಿ.ವೈ.ಕಾಮಾಜಿ, ಡಾ. ಬಿ.ಕೆ.ಹಿರೇಮಠ, ಎಂ.ಜಿ.ವಾಚೇದಮಠ, ಆರ್.ಎಂ.ಹಡಪದ, ಎಂ.ಎ.ಕೊಟ್ಟೂರ, ಆರ್.ಎಫ್.ಮಿಸ್ಕಿನ್, ಎಸ್.ಬಿ.ಸುಂಕದ, ಎಸ್.ಕೆ.ಹೂಗಾರ, ಕುಲಕರ್ಣಿ, ರಬ್ಬನಗೌಡರ, ಗಣೇಶಗುಡಿ, ಮಹದೇವ ಕವಿಶೆಟ್ಟಿ, ಎಂ.ಆರ್.ಬಾಳಿಕಾಯಿ, ಎಸ್.ಎಂ. ಶಿರಹಟ್ಟಿ, ಜಿ.ಎನ್.ಜಾಡಗೌಡರ, ಎನ್.ಎ. ಹರ್ಲಾಪೂರ, ಎ.ಎ. ಶಿರಹಟ್ಟಿ ಕೆ.ವಿ. ಕುಂದಗೋಳ ಮುಂತಾದವರೆಲ್ಲ ಟಿ.ಪಿ.ಅಕ್ಕಿಯವರ ಶಿಷ್ಯರೇ ಆಗಿದ್ದು ಕಲಾವಿದರಾಗಿ ಪ್ರಭಾವೀ ಶಿಕ್ಷಕರಾಗಿ ಕನ್ನಡ ನಾಡಿಗೆ ಸೇವೆ ಸಲ್ಲಿಸಿದ್ದಾರೆ ಸಲ್ಲಿಸುತ್ತಿದ್ದಾರೆ.[೫೦] ಇನ್ನು ಅನೇಕ ಶಿಷ್ಯಬಳಗ ಇದ್ದು ಅವರೆಲ್ಲರ ಹೆಸರನ್ನು ಹೆಸರಿಸಲು ಸ್ಥಳಾವಕಾಶದ ಅಭಾವದಿಂದ ಸಾಧ್ಯವಾಗದೇ ಇರುವುದಕ್ಕಾಗಿ ಪ್ರಮುಖ ವಿದ್ಯಾರ್ಥಿಗಳನ್ನು ಮಾತ್ರ ಹೆಸರಿಸಲಾಗಿದೆ. ಕಷ್ಟಪಟ್ಟು ಕಟ್ಟಿದ ಕಲಾಮಂದಿರದ ಪ್ರಾಂಶುಪಾಲರಾಗಿ, ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಮೇಶ ಅಕ್ಕಿ ಬೆಂಗಳೂರಿನಲ್ಲಿ ನೆಲೆಸಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಇಂಜನೀಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರೊಬ್ಬ ಪ್ರತಿಭಾವಂತ ಕಲಾವಿದರಾಗಿದ್ದಾರೆ.[೫೧] ಒಟ್ಟಿನಲ್ಲಿ ಶ್ರೀ ಟಿ.ಪಿ. ಅಕ್ಕಿಯವರ ಕುಟುಂಬವು ಕಲಾಕ್ಷೇತ್ರಕ್ಕೆ ಅರ್ಪಿತವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಒಳ್ಳೆಯ ಆಡಳಿತಗಾರರಾದ ಶ್ರೀ ಟಿ.ಪಿ. ಅಕ್ಕಿಯವರು ಕೈಗೂಂಡ ಚಿಕ್ಕಪುಟ್ಟ ಕಾರ್ಯಗಳಾದವು. ಮೊದಲೇ ವಿಚಾರಿಸಿ ಅವರ ಅಭಿವೃದ್ಧಿ, ಯಶಸ್ಸುಗಳಿಗಾಗಿ ಸ್ವಚ್ಚತೆ ತಾನಗಳೆಷ್ಟು ರೀತಿಯಲ್ಲಿ ಬೇಕೋ ಅಷ್ಟನ್ನೇ ಉಪಯೋಗಿಸುವರು. ಕಲಾಮಂದಿರ ಹಾಗೂ ಅಲ್ಲಿಯ ತುಂಬಾ ಚಟುವಟಿಕೆಗಳ ಮೇಲ್ವಿಚಾರಣೆ, ಆಡಳಿತ, ಪ್ರತವ್ಯವಹಾರ, ಪಾಠ, ಅತಿಥಿಗಳೊಡನೆ ಸಂದರ್ಶನಗಳೆಲ್ಲದರಲ್ಲೂ ವ್ಯವಸ್ಥಿತ ರೀತಿಯ ಅಚ್ಚುಕಟ್ಟುತನವನ್ನು ಬಳಸುವ ಇವರ ವಿಶಿಷ್ಠ ರೀತಿಯೂ ಆದರ್ಶವೂ ಆಗಿದೆ.

ಸದಾ ಶಿಸ್ತಿನ ಸಿಪಾಯಿಯಾಗಿದ್ದ ಇವರು ಸೂಟು ಧರಿಸಿ ಎಳೆ ಬಿಳುಪಿನ ಕೂದಲು, ಸಾಧಾರಣ ಎತ್ತರದ ಈ ವ್ಯಕ್ತಿ ರೋಟರಿ, ಲಾಯನ್ಸ್, ಸ್ಕೌಟ್ ಮೊದಲಾದ ಅಂತಾರಾಷ್ಟ್ರೀಯ ಸಂಘಗಳ ಚಟುವಟಿಕೆಗಳಲ್ಲಿ ಓಡಾಡುವದೆಂದರೆ ಬಲುಹುರುಪು. ಇವರಿಗೆ ದಿನವಿಡೀ ಚಟುವಟಿಕೆಗಳಲ್ಲಿರುವ ಇವರ ಉತ್ಸಾಹ ಕಲಾಮಂದಿರದಿಂದ ಹುಚ್ಚನ್ನು ಹಸನಾದ ಹುಬ್ಬಳ್ಳಿಗಳ ತೋಟದಲ್ಲಿ ಮೋಗ್ಗಾಗಿ ಮಾಡಿಬಿಟ್ಟಿತು. ಇದು ಅವರ ಸೌಂದರ್ಯೋಪಾಸನೆಯ ಹೆಗ್ಗುರುತಾಗಿದೆ.[೫೨] ಸದಾ ಕಾಯಕಯೋಗಿಯಾದ ಇವರು ೧೯೮೧ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಆಯ್ಕೆಯಾಗಿ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಕಲಾವಿದರಿಗೆ ಗೌರವ ಪ್ರಶಸ್ತಿ, ಕಲಾಪ್ರದರ್ಶನ, ಚಿತ್ರಕಲಾ ಶಿಬಿರಗಳನ್ನು ಮಾಡಿಸುವುದರ ಮೂಲಕ ಅನೇಕ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಅನೇಕ ಸಾಮಾಜಿಕ ಕೆಲಸಗಳನ್ನು ಮಾಡಿದ್ದಾರೆ.

---

೫೦. ವಿ.ಟಿ. ಕಾಳೆ ಸಂ. ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ. ಪು.ಸಂ.೧೪

೫೧. ವಿ.ಟಿ. ಕಾಳೆ ಸಂ. ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ. ಪು.ಸಂ.೨೦

೫೨. ವಿ.ಟಿ. ಕಾಳೆ ಸಂ. ಪಿ.ಪಿ. ಅಕ್ಕಿ ಕ.ಲ.ಕ.ಅ.ಬೆಂ. ಪು.ಸಂ.೨೨

ಶ್ರೀ ಟಿ.ಪಿ. ಅಕ್ಕಿಯವರು ಮುಂಬಯಿ ರಾಜ್ಯದಲ್ಲಿದ್ದಾಗಲೇ ರಾಜ್ಯದ ಕಲಾಶಿಕ್ಷಣ ಮಂಡಳಿಯ ಸದಸ್ಯರೆಂದು ೧೯೫೦ರಲ್ಲಿಯೇ ನಾಮಕರಣಗೈದ ಗೌರವ ಕರ್ನಾಟಕದಲ್ಲಿ ಯಾರಿಗೂ ದೊರೆತಿಲ್ಲ. ಉತ್ತರ ಕರ್ನಾಟಕದಲ್ಲಿ ಹೆಸರಿಗಾಗಿ ಇದ್ದ ಕಲಾ ಸಂಸ್ಥೆ (Art Society)ಗೆ ಶ್ರೀ ಅಕ್ಕಿಯವರು ಕಾರ್ಯದರ್ಶಿ ಸ್ಥಾನದಿಂದ ಹೊಸ ಚೈತನ್ಯ ಹೊಂದಿ, ಸರಕಾರದಿಂದ ಮಾನ್ಯತೆ ಕೊಡಸಿದವರು. ರಾಜ್ಯ ಪುನರ್ವಿಂಗಡಣೆಯ ನಂತರ ಮೈಸೂರು ರಾಜ್ಯದಲ್ಲಿ ಕಲಾಶಿಕ್ಷಣವು ತೀರ ಅವನತಿಗಿಳಿದಿತ್ತು. ಆಗ ಶ್ರೀ ಅಕ್ಕಿಯವರ ಸ್ಫೂರ್ತಿಯಿಂದ ೧೯೬೧ರಲ್ಲಿ ಕಲಾಶಿಕ್ಷಣ ಮಂಡಳಿ ರಚನೆಯಾಯಿತ. ಇಲ್ಲಿ ಗೌರವ ಸದಸ್ಯರಾಗಿ ಅಕ್ಕಿಯವರು ಕಲಾಕ್ಷೇತ್ರದ ಶಿಕ್ಷಣ ರೂಪಿಸುವಲ್ಲಿ ಪ್ರಯತ್ನಿಸುತ್ತಿದ್ದಾರೆ. ರಾಜ್ಯದ ಲಲಿತಕಲಾ ಪರಿಷತ್ತಿಗೆ ಸದಸ್ಯರಾಗಿ ಚಿತ್ರಕಲೆಯ ಅನೇಕ ಕೆಲಸ ಮಾಡಿದ್ದಾರೆ.

೧೯೬೭ರಲ್ಲಿ ಮೈಸೂರು ರಾಜ್ಯದ ಪ್ರತಿನಿಧಿಯಾಗಿ ಕಲ್ಕತ್ತೆಯ ಅಖಿಲ ಭಾರತೀಯ ಕಲಾವಿದರ ಪರಿಷತ್ತಿಗೂ, ೧೯೬೨ರಲ್ಲಿ ಅಂತಾರಾಷ್ಟ್ರೀಯ ಮಕ್ಕಳ ಚಿತ್ರಕಲಾ ಸ್ಪರ್ಧೆಗಾಗಿ ದಿಲ್ಲಿಗೂ ಹೋಗಿ ಬಂದರು. ಚಿತ್ರಕಲಾ ಶಿಕ್ಷಕರ ಸಂಘದ ನಾಲ್ಕನೆಯ ಪರಿಷತ್ತು ಗದುಗಿನಲ್ಲಾದಾಗ ಜೀವನ ನೌಕೆಯು ಸಂಪೂರ್ಣ ಮುಳುಗಿ ನಿರಾಶೆಯಲ್ಲಿದ್ದ ಕಲಾಶಿಕ್ಷಕರಿಗೆ ಆಶಾದಾಯಕವಾದ ಬೆಳಕೊಂದನ್ನು ತೋರಿಸಿದ ಕಲಾಶಿಕ್ಷಕರ ನಿಜವಾದ ಹಿತಚಿಂತಕರೆಂದು ಪ್ರಶಂಸೆಗೆ ಪಾತ್ರರಾಗಿದ್ದಾರೆ.[೫೩] ಹೀಗೆ ಟಿ.ಪಿ. ಅಕ್ಕಿಯವರು ಚಿತ್ರಕಲಾ ಶಿಕ್ಷಣಕ್ಷೇತ್ರದಲ್ಲಿ ಉತ್ತಮ ಆಡಳಿತಗಾರರಾಗಿ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ್ದಾರೆ.

ಶ್ರೀ ಟಿ.ಪಿ. ಅಕ್ಕಿಯವರು ತಮ್ಮ ಸುತ್ತಲಿರುವ ಪ್ರಪಂಚವನ್ನೇ ಮರೆತು ಕಲಾಭಿವೃದ್ಧಿಯ ತಪಸ್ಸಿನಲ್ಲಿಯೇ ಸತತವು ತನ್ಮಯರಾಗಿ ತಮಗೆ ಸಂದ ಅಧಿಕಾರ, ಮಾನ, ಸಮ್ಮಾನ ಮತ್ತು ಗೌರವಗಳಿಗೆ ಎಂದೂ ತಾವೇ ಬೆನ್ನುಹತ್ತಿದವರಲ್ಲ. ಅಂತೆಯೇ ಇವೆಲ್ಲ ಬಂದು "ದಾಸನ್ನ ಮಾಡಿಕೋ ಎನ್ನ" ಎಂದರೂ ತಲೆಯತ್ತಿ ನೋಡಿದವರಲ್ಲ. ಅಂತೆಯೇ ಇವೆಲ್ಲ ಅಕ್ಕಿಯವರನ್ನು ಆಶ್ರಯಿಸಿ ಕೃತಾರ್ಥವಾಗಿವೆ ಎಂದರೆ ಹೆಚ್ಚು ಒಪ್ಪುತ್ತದೆ. ಹಿಂದೆ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಲಾವಿದರ ಪರಿಷತ್ತಿಗೂ, ದಿಲ್ಲಿಯಲ್ಲಿ ಜರುಗಿದ ಅಂತರರಾಷ್ಟ್ರೀಯ ಮಕ್ಕಳ ಚಿತ್ರಕಲಾ ಸ್ಪರ್ಧೆ ನಡೆದಾಗ ನಮ್ಮ ರಾಜ್ಯದ ಪ್ರತಿನಿಧಿಯಾಗಿಯೂ ಅವರು ಅಲ್ಲೆಲ್ಲ ಭಾಗವಹಿಸಿದ್ದಾರೆ. ರಾಜ್ಯ ಲಲಿತಕಲಾ ಅಕಾಡೆಮಿಯು ೧೯೬೯–೭೦ನೇ ಸಾಲಿನಲ್ಲಿ ಅವರಿಗೆ ರಾಜ್ಯ ಪ್ರಶಸ್ತಿಯನ್ನು ಕೊಟ್ಟು ಪುರಸ್ಕರಿಸಿದೆ. ಹಾಗೆಯೇ ಕೇಂದ್ರ ಲಲಿತಕಲಾ ಅಕಾಡಮಿಯಿಂದ ಸದಸ್ಯರಾಗಿ ನಮ್ಮ ರಾಜ್ಯವನ್ನು ಪ್ರತಿನಿಧಿಸಿದ್ದಾರೆ. ಶ್ರೀ ಟಿ.ಪಿ. ಅಕ್ಕಿಯವರು ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿಯೂ ಆಯ್ಕೆಯಾಗಿದ್ದಾರೆ.[೫೪]

ಹೀಗೆ ಶ್ರೀ ಟಿ.ಪಿ. ಅಕ್ಕಿಯವರು ಉತ್ತಮ ವಿದ್ಯಾರ್ಥಿಯಾಗಿ ವಿದ್ಯಾರ್ಥಿ ಜೀವನದಲ್ಲಿ ಅನೇಕ ಕಷ್ಟನಷ್ಟಗಳನ್ನು ಎದುರಿಸಿ ಚಿತ್ರಕಲೆಯಲ್ಲಿ ಸಾಕಷ್ಟು ಕೆಲಸ ಮಾಡಿ ಉತ್ತರ ಕರ್ನಾಟಕದಲ್ಲಿಯೇ ಒಂದು ಬೃಹತ್ ಆಕಾರದ ಕಲಾಸಂಸ್ಥೆಯನ್ನು ಸ್ಥಾಪಿಸಿ ರಾಜ್ಯದ ಅನೇಕ ಕಲಾಸಕ್ತರಿಗೆ ಪ್ರೋತ್ಸಾಹಿಸಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ತಂದೆಯಾಗಿ, ಪೋಷಕರಾಗಿ ಚಿತ್ರಕಲಾ ಅಭ್ಯಾಸ ಮಾಡುವಂತೆ ಪ್ರಚೋದಿಸಿ

---

೫೩. ಸಿ.ಎನ್. ಪಾಟೀಲ, ಪ್ರೊ. ಸಂ. ಲೇ. ಎಸ್. ಎಂ. ಶಿರಹಟ್ಟಿ ಶ್ರೀ ಪಿ.ಪಿ. ಅಕ್ಕಿ ಅವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಪು.ಸಂ. ೫೦

೫೪. ಸಿ.ಎನ್. ಪಾಟೀಲ, ಪ್ರೊ. ಸಂ. ಲೇ. ಎಸ್. ಎಂ. ಶಿರಹಟ್ಟಿ ಶ್ರೀ ಪಿ.ಪಿ. ಅಕ್ಕಿ ಅವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ ಅಭಿನಂದನಾ ಗ್ರಂಥ ಪು.ಸಂ. ೫೧

ಪ್ರೋತ್ಸಾಹಿಸಿದ್ದಾರೆ. ಕ್ರಿಯಾಶೀಲ ಅವ್ಯಕ್ತಿಯಾಗಿ ಈ ನಾಡಿನ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾಮಂದಿರ ಸಂಸ್ಥೆಯನ್ನು ಹುಟ್ಟುಹಾಕಿ ಅನೇಕ ಜನರಿಗೆ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ. ಗದಗ ಜಿಲ್ಲೆಯ ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೆಯಾದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

ನಾಡಿನ ತುಂಬ ಅಕ್ಕಿಯವರ ಶಿಷ್ಯಬಳಗವಿದ್ದು ಅವರ ಮಾರ್ಘದರ್ಶನ ಅಕ್ಕಿಯವರು ಹಾಕಿಕೊಟ್ಟ ದಾರಿಯನ್ನೇ ತುಳಿದು ಉತ್ತಮ ಕಲವಿದರಾಗಿ, ಸಾಮಾಜ ಸೇವಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಟಿ.ಪಿ.ಅಕ್ಕಿಯವರ ಕಲಾಸೇವೆ ಅಪಾರವಾದದ್ದು. ಶ್ರೀಯುತರು ಸುಮಾರು ೮೬ ವರ್ಷಗಳವರೆಗೆ ಬದುಕಿ ಚಿತ್ರಕಲಾ ಕ್ಷೇತ್ರದಲ್ಲಿ ಉತ್ತಮ ಕೃಷಿ ಮಾಡಿ ರಾಜ್ಯದ ತುಂಬ ಪರಿಮಳ ಬೀರಿ ದಿನಾಂಕ ೩೧-೩-೧೯೯೪ರಂದು ಹೃದಯಘಾತದಿಂದ ನಿಧನರಾದರು. ಇವರ ನಿಧನದಿಂದ ಚಿತ್ರಕಲಾ ಕ್ಷೇತ್ರದ ಪ್ರಕಾಶಮಾನವಾದ ಬೆಳ್ಳಿಚುಕ್ಕಿ ಮರೆಯಾಗಿ ಚಿತ್ರಕಲಾ ಕ್ಷೇತ್ರದ ಕಲಾವಿದರಿಗೆ, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಕಲಾಪೋಷಕರಿಗೆ ಅತೀವ ದುಃಖವನ್ನುಂಟು ಮಾಡಿದೆ.

ಟಿ.ಪಿ.ಅಕ್ಕಿಯವರು ಆಡಳಿತ ಮಾಡುವುದರೊಂದಿಗೆ ಹಲವಾರು ಕಲಾಕೃತಿಗಳನ್ನು ಮಾಡಿದ್ದು ಜಲವರ್ಣದ ಕಲಾಕೃತಿಗಳು ಹೆಚ್ಚಾಗಿ ಇರುವುದು ಕಂಡು ಬರುತ್ತವೆ. ಅವುಗಳನ್ನು ಕೆಳಗಿನಂತೆ ಚರ್ಚಿಸಲಾಗಿದೆ.

ಚಿತ್ರ ೧. ವಿರೋಪಾಕ್ಷ ದೇವಾಲಯ : ಈ ನಿಸರ್ಗ ಚಿತ್ರವನ್ನು ಜಲವರ್ಣದಿಂದ ರಚಿಸಿದ್ದಾರೆ. ಹಂಪೆಯ ಪ್ರಸಿದ್ಧ ದೇವಾಲಯವಾದ ವಿರೋಪಾಕ್ಷದೇವಾಲಯವನ್ನು ಸುಂದರವಾಗಿ ರಚಿಸಿದ್ದಾರೆ. ಬಣ್ಣಗಳು ಬಳಸಿದ ರೀತಿಯ ತಮ್ಮದೇ ಆದ ಶೈಲಿಯಲ್ಲಿವೆ ಕಲಾಕೃತಿಯಲ್ಲಿ ದೂರ ಸಮಿಪದ ಪರಿಕಲ್ಪನೆಯು ಉತ್ತಮವಾಗಿ ಮೂಡಿಬಂದಿದೆ ದೇವಸ್ಥಾನಕ್ಕೆ ಹೊಗುತ್ತಿರುವ ಜನರ ಚಿತ್ರವನ್ನು ಪ್ರಾಮಾಣಕ್ಕೆ ತಕ್ಕಂತೆ ಚಿತ್ರಿಸಿದ್ದಾರೆ. ಕಲಾಕೃತಿಯ ಯಥಾದರ್ಶನ ತಿಳಿಯಲು ಮುಂದಿರುವ ಭಾಗದೊಡ್ಡದಾದ ಗಿಡವನ್ನು ರಚಿಸಿ ಸ್ಥಳಾವಕಾಶ ಮಾಡಿಕೊಂಡಿದ್ದಾರೆ. ಎತ್ತರವಾದ ವಿರೋಪಾಕ್ಷದೇವಾಲಯದ ಚಿತ್ರವನ್ನು ಪ್ರಾಮಾಣಕ್ಕೆ ತಕ್ಕಂತೆ ರಚಿಸಿದ್ದಾರೆ. ದೇವಸ್ಥಾನಕ್ಕೆ ಹೋಗುವ ದಾರಿಯನ್ನು ಕಂಡು ಮಿಶ್ರಿತ ವರ್ಣದಿಂದ ರಸ್ತೆಯ ಕಲ್ಪನೆಯ ಬರುವಂತೆ ರಚಿಸಿದ್ದಾರೆ.

ಚಿತ್ರ : ೨ : ಬಿಜಾಪೂರದ ನಿಸರ್ಗ ಚಿತ್ರ. ಈ ಕಲಾಕೃತಿಯನ್ನು ಟಿ.ಪಿ.ಅಕ್ಕಿಯವರು ಜಲವರ್ಣದಿಂದ ರಚಿಸಿದ್ದಾರೆ. ಚಿತ್ರದಲ್ಲಿ ನೆರಳು ಬೆಳಕಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದಾರೆ. ದೊಡ್ಡದಾದ ದ್ವಾರ ಅಕ್ಕಿಯವರು ಪ್ರಮಾಣ ಬದ್ಧವಾಗಿ ರಚಿಸಿದ್ದಾರೆ. ದ್ವಾರ ಒಳಗಿಂದ ದೇವಾಲಯದ ಹಳೆಯದಾದ ದೃಶ್ಯವನ್ನು ಅಕ್ಕಿಯವರು ಉತ್ತಮ ರೀತಿಯಿಂದ ಸಮಿಪ ದೂರದ ಕಲ್ಪನೆಯನ್ನು ನಿಡಿದ್ದಾರೆ. ದ್ವಾರದ ಕೆಳಗೆ ಒಬ್ಬ ಯಜಮಾನ ಕೈಯಲ್ಲಿ ಬಡಗಿಯನ್ನು ಹಿಡಿದುಕೊಂಡು ಹೊಗುತ್ತಿರುವ ದೃಶ್ಯವನ್ನು ಅಕ್ಕಿಯವರು ಸೆರೆಹಿಡಿದ್ದಾರೆ. ಕಲಾಕೃತಿಯ ಪೇಪರಿಗೆ ತಕ್ಕಂತೆ ಪ್ರಮಾಣಬದ್ಧವಾಗಿದೆ.

ಚಿತ್ರ ೩. ನದಿಯದಡ : ಈ ನಿಸರ್ಗಚಿತ್ರವನ್ನು ಅಕ್ಕಿಯವರು ಜಲವರ್ಣದಿಂದ ರಚಿಸಿದ್ದಾರೆ. ಮನೆಗಳ ದೃಶ್ಯವನ್ನು ಆಯ್ಕೆಮಾಡಿಕೊಂಡಿದ್ದಾರೆ ನದಿಯ ದಡದಲ್ಲಿರುವ ಮನೆಗಳು ಪ್ರತಿಬಿಂಬಿಸುತ್ತಿವೆ. ನದಿಯಲ್ಲಿ ಮನೆಗಳ ನೆರಳನ್ನು ಅತ್ಯಂತ ನೈಜವಾಗಿ ರಚಿಸಿದ್ದಾರೆ. ನದಿಗೆ ನೀರ ತುಂಬಲು ಬಂದಿರುವ




ಟಿ.ಪಿ.ಅಕ್ಕಿಯವರ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩

ಜನರನ್ನು ಅತಿಸೂಕ್ಷವಾಗಿ ರಚಿಸಿ ಯಥಾದರ್ಶನವನ್ನು ಅಳವಡಿಸಿ ಕಲಾಕೃತಿಯನ್ನು ರಚಿಸಿದ್ದಾರೆ. ನದಿಯ ಸುತ್ತಲು ಇರುವ ಮನೆಗಳು ಮನೆಗಳ ಹಿಂಧೆ ಇರುವ ಗಿಡಗಳ ಆಕಷ್ಯಣಿಯವಾಗಿವೆ. ನೀಲಿ ವರ್ಣದ ಆಕಾಶವನ್ನು ಸುಂದರವಾಗಿ ರಚಿಸಿದ್ದಾರೆ. ಈ ಕಲಾಕೃತಿಯು ಬಹಳಷ್ಟು ಕಸ್ಟಕರವಾಗಿದೆ. ಆದರೂ ಟಿ.ಪಿ.ಅಕ್ಕಿಯವರು ಉತ್ತಮವಾದ ನಿಸರ್ಗ ಚಿತ್ರವನ್ನು ತಮ್ಮದೇ ಆದ ಶೈಲಿಯಲ್ಲಿ ವರ್ಣಗಳ ಮೇಳವನ್ನು ತೋರಿಸಿದ್ದಾರೆ. ಕಲಾಕೃತಿಯ ನೋಡಲು ಸುಂದರವಾಗಿದೆ.

ಎಂ.ಎ.ಚೆಟ್ಟಿ

ಸಂಸ್ಕೃತಿ ಪರಂಪರೆ ಮತ್ತು ಕಲೆಗಳಿಗಾಗಿಯೇ ತಮ್ಮ ಬದುಕನ್ನು ಸಮರ್ಪಿಸಿಕೊಂಡವರಲ್ಲಿ ಉತ್ತರ ಕರ್ನಾಟಕದ ರವಿವರ್ಮರೆಂದೇ ಪ್ರಖ್ಯಾತಿ ಪಡೆದ ಗದುಗಿನ ವರ್ಣಬ್ರಹ್ಮ ಎಂ.ಎ. ಚೆಟ್ಟಿಯವರು ಒಬ್ಬರು.[೫೫]

ಗೌರವಿಸು ಜೀವನವ ಗೌರವಿಸುಚೇತನವ ।
ಆರದೋ ಹಗವೆಂದು ಬೇಧವೆಣಿಸಿದಿರು ॥
ಹೋರುವುದೇ ಜೀವನಸಮೃದ್ಧಿಗೊಸುಗ ನಿನಗೆ ।
ದಾರಿಯಾತ್ಮೋನ್ನತಿಗೆ ಮಂಕುತಿಮ್ಮ ॥

ಜಗತ್ತು ಯಾರದೋ ಏನೋ ನನಗೆ ಸಂಬಂಧಿಸಿದುದಲ್ಲ ಎಂದು ವ್ಯತ್ಯಾಸ ಮಾಡಬೇಡ. ಜೀವನವನ್ನು ಮತ್ತು ಚೇತನವನ್ನು ಗೌರವಿಸುವ ಜೀವನ ಸಮೃದ್ಧಿಪಡಿಸುವುದಕ್ಕಾಗಿ ಹೋರಾಡು ಅದೇ ನಿನ್ ಆತ್ಮದ ಉನ್ನತಿಗೆ ದಾರಿ.[೫೬]

ಈ ಧೋರಣೆಯನ್ನಿಟ್ಟುಕೊಂಡೇ ಕುಂಚಬ್ರಹ್ಮ ಎಂ.ಎ.ಚೆಟ್ಟಿಯವರು ಜೀವನ ಮತ್ತು ಚೇತನವನ್ನು ಸದಾಕಾಲ ಕಾದಿಟ್ಟು ಗೌರವಿಸಿದರು. ಮನುಷ್ಯನ ಬದುಕಿನ ಗೂಢಾರ್ಥಗಳನ್ನು ಅರ್ಥೈಸಿಕೊಳ್ಳುತ್ತಲೇ ಆ ಗೂಡಾರ್ಥಗಳಿಗೆ ತಮ್ಮ ಕೃತಿಗಳಲ್ಲಿ ಒಂದು ಸ್ಪಷ್ಟ ರೂಪಕೊಟ್ಟವರು ಚೆಟ್ಟಿಯವರು. ತಾವು ನಡೆದು ಬಂದ ಬದುಕಿನ ದಟ್ಟ ಅನುಭವದಿಂದ ಕಟ್ಟಿಕೊಂಡಿದ್ದಾರೆ. ಅದೇ ಆತ್ಮೋನ್ನತಿಯ ದಾರಿ ಎಂದು ಭಾವಿಸಿಕೊಂಡವರು ಅವರ ಕಲಾಚಿಂತನೆಯೇ ಅವರ ವ್ಯಕ್ತಿತ್ವದ ದರ್ಪಣ ಎಂದು ಹೇಳಬಹುದು.

ಲಲಿತಕಲೆಗಳಲ್ಲಿ ಒಂದಾದ ಚಿತ್ರಕಲೆಯು ಪ್ರಮುಖವಾಗಿದೆ. ಈ ಕ್ಷೇತ್ರಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡವರೇ ಕಲಾವಿದ ಚೆಟ್ಟಿಯವರು. ಶರಣತ್ವದಲ್ಲಿ ನಿಷ್ಠೆಹೊಂದಿದ ಆಧ್ಯಾತ್ಮದ ಬದುಕನ್ನು ಸವಿದವರು. ಚಿತ್ರಕಲೆಯೇ ಅವರ ಬದುಕಿನ ದೈವ, ದೇವರು, ಅದರಲ್ಲಿಯೇ ಜೀವನದ ಸಾರ್ಥಕವನ್ನು ಕೂಡ ಕಂಡುಕೊಂಡವರು.[೫೭] ಹೀಗಾಗಿ ಎಂ.ಎ. ಚೆಟ್ಟಿಯವರು ತಮ್ಮದೇ ಆದ ವಿಶಿಷ್ಟ ಮತ್ತು ವಿನೂತವಾದ ಕಲಾಬದುಕನ್ನು ನಿರ್ಮಿಸಿದ್ದಾರೆ.

---

೫೫. ಅಶೋಕ ಅಕ್ಕಿ, ಪು.ಸಂ. ಡಾ.ಬಿ.ಕೆ. ಹಿರೇಮಠ ಲೇ. ವಜ್ರ ವಿಜಯ ಸ್ಮರಣ ಸಂಚಿಕೆ ಪು.ಸಂ.೧೦
೫೬ ಅಶೋಕ ಅಕ್ಕಿ, ಪು.ಸಂ. ಕಲಾವೈಭವ, ಕೃತಪುರ ಚಿತ್ರ ಮತ್ತು ಶಿಲ್ಪ ಕಲಾವಿದರ ಕೈಪಿಡಿ ಲಕ್ಕುಂಡಿ ೨೦೦೯ ಪು.ಸಂ.೧೧
೫೭ ಡಾ. ಬಿ.ಕೆ. ಹಿರೇಮಠ ಪ್ರಸಂ. ಲೇ.ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಕ.ಲ.ಕ.ಅ.ಬೆಂ ಪು.ಸಂ. ೧೧

೧೯ನೆಯ ಶತಮಾನದ ಅಥಣಿ ಶಿವಯೋಗಿಗಳ ಕಾರ್ಯಕ್ಷೇತ್ರ ಅಥಣಿ. ಇಲ್ಲಿಯ ಗಚ್ಚಿನಮಠದಲ್ಲಿ ತಮ್ಮ ಭಕ್ತಿ ಜ್ಞಾನ ವೈರಾಗ್ಯಗಳಿಂದ ಲೋಕದ ಗೌರವಕ್ಕೆ ಪಾತ್ರರಾದರು. ಇಂತಹ ಶರಣ ಸಂಸ್ಕೃತಿಯ ಮಠಕ್ಕೆ ಭಕ್ತರಾಗಿ ನಿಷ್ಠೆಯಿಂದ ಬದುಕಿದ ಮನೆತನ ಚೆಟ್ಟಿಯವರದು.[೫೮] ಇಂತಹ ಆಧ್ಯಾತ್ಮಿಕ ಶರಣರ ಸಂಪ್ರದಾಯದ ಪರಿಸರದಲ್ಲಿ ಎಂ.ಎ. ಚೆಟ್ಟಿಯವರು ಹುಟ್ಟಿ ಬೆಳೆದವರು.

ಶಿವಗಂಗವ್ವ ಪ್ರತಿದಿನ ಮುಂಜಾನೆ ಸ್ನಾನ ಲಿಂಗಪೂಜೆ ಮುಗಿದ ನಂತರ ಗಚ್ಚಿನಮಠಕ್ಕೆ ಹೋಗಿ ಎಡೆಕೊಡುವ ರೂಢಿ ಇತ್ತು. ಒಂದು ದಿನ ಅಮವಾಸ್ಯೆಯಂದು ತಾಯಿ ಗಚ್ಚಿನಮಠಕ್ಕೆ ಎಡೆಕೊಡಲು ಹೋದಾಗ ಶಿವಯೋಗಿಗಳ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡಳಂತೆ ಕಣ್ಣಾಲೆಗಳು ತುಂಬಿ ನಿಂತಿದ್ದವು. ಶಿವಯೋಗಿಗಳು ಮುಗುಳು ನಗುತ್ತ "ಯಾಕವಾs..... ತಂಗಿ ಗಂಡಮಕ್ಕಳ ಆಸೆ ಆಗೇತನವಾs... ಆಗಲಿ ಸಂತೋಷ" ಎಂದು ನುಡಿದವರೇ ತಾಯಿಯ ಉಡಿಯಲ್ಲಿ ಎರಡು ಉತ್ತತ್ತಿ ಹಾಕಿದರಂತೆ. "ಏನ್ ಚಿಂತಿ ಮಾಡಬ್ಯಾಡವಾs... ಶಿವಾ ಇದ್ದಾನs... ಅಪ್ಪ ಅದಾನs... ಹೋಗು ತಾಯಿ ಎರಡು ಗಂಡುಮಕ್ಕಳು ಹುಟ್ಟುತಾವ"[೫೯] ಎಂದು ಆಶೀರ್ವದಿಸಿದಾಗ ಶಿವಗಂಗವ್ವ ಶಿವಯೋಗಿಗಳ ಪಾದಕ್ಕೆ ನಮಸ್ಕರಿಸಿ ಗಂಡುಮಗು ಹುಟ್ಟುವನೆಂಬ ಸಂತೋಷದಲ್ಲಿ ಮುಗಿಲೇಳುವಾಗ ಉಡಿಯಲ್ಲಿದ್ದ ಎರಡು ಉತ್ತತ್ತಿಗಳಲ್ಲಿ ಒಂದು ಜಾರಿ ಕೆಳಕ್ಕೆ ಬಿದ್ದಿತು. ಆಗ ಶಿವಯೋಗಿಗಳು ಆಶೀರ್ವಾದ ಮಾಡಿ ಗಟ್ಟಿ ಹಿಡಿಯಬೇಕವಾ ಎಂದು ನುಡಿದು ಒಂದು ಕ್ಷಣ ಕಣ್ಮುಚ್ಚಿಕೊಂಡು "ಆಯಿತು ಶಿವನಿಚ್ಛೆ" ಎಂದರಂತೆ. ತ್ರಿಕಾಲಜ್ಞಾನಿಯಾದ ಶಿವಯೋಗಿಗಳು ಬಿದ್ದಂತಹ ಉತ್ತತ್ತಿ ತೆಗೆದುಕೊಂಡು ಶಿವಗಂಗಮ್ಮ ಮನೆಗೆ ಬಂದು ನಡೆದ ಸಂಗತಿ ಮನೆಯವರಿಗೆ ತಿಳಿಸಿದಳು. ಆಗ ಎಲ್ಲರಿಗೆ ಆನಂದವಾಯಿತು. ಆ ನಂತರವೇ ಮುರಿಗೆಪ್ಪ ಚೆಟ್ಟಿಯವರು ಜನಿಸಿದರು.[೬೦]

ಹೀಗೆ ಚೆಟ್ಟಿಯವರು ಶರಣರ ಆಶೀರ್ವಾದದಿಂದ ಜನ್ಮತಾಳಿದ ಇವರು ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ೧೯೦೭ರ ಮಾರ್ಚ್ ೮ ರಂದು ಜನಿಸಿದ್ದಾರೆ. ಶರಣ ತತ್ವದಲ್ಲಿ ನಡೆಯುವ ತಂದೆ ಅಡಿವೆಪ್ಪನವರು ವಿಶಾಲ ಹೃದಯಿಗಳೂ ಪ್ರೀತಿ ವಾತ್ಸಲ್ಯ ಹಾಗೂ ಕುರಣಾಮಯಿಗಳೂ ಆಗಿದ್ದರು. ಹೀಗಾಗಿ ಮುರಿಗೆಪ್ಪನವರು ಶಿವಯೋಗಿಗಳ ಕೃಪಾರ್ಶಿವಾದದಿಂದ ಶಿವಯೋಗಿಗಳವರ ಹೆಸರನ್ನೇ (ಮುರುಗೇಶ) ಇಟ್ಟರಂತೆ.[೬೧] ಶಿವಯೋಗಿಗಳ ಕೃಪಾಶೀರ್ವಾದದಿಂದ ಜನಿಸಿದ ಚೆಟ್ಟಿಯವರು ಶರಣರ ಮಾರ್ಗದಲ್ಲಿ ನಡೆದು ಶರಣ ಸಂಪ್ರದಾಯವನ್ನು ಪಾಲಿಸಿದ್ದಾರೆ. ಬಾಲ್ಯದಲ್ಲಿಯೇ ಚೆಟ್ಟಿಯವರು ಚಿತ್ರಕಲೆಯ ಗೀಳು ಅಂಟಿಸಿಕೊಂಡವರು. ಮುರಿಗೆಪ್ಪನವರು ಒಂದು ಸಲ ತಮ್ಮ ಬಸೆಟ್ಟೆಪ್ಪನವರು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಾ ಫಿ ತುಂಬಲು ಹಣದ ಕೊರತೆ ಆದಾಗ ಆಗ ನಮ್ಮ ತಂದೆಯವರು ತಮ್ಮ ಕೊರಳಲ್ಲಿಯ ಬೆಳ್ಳಿಚಾಕ್ (ಲಿಂಗದಕಾಯಿ) ಒತ್ತೆ ಇಟ್ಟು ಫೀ ಹಣ ತುಂಬಿದರಂತೆ. ಈ ಮಾತನ್ನು ಸ್ವತಃ ನನ್ನ ಚಿಕ್ಕಪ್ಪ ಅವರು ಆಗಾಗ ಸ್ಮರಿಸಿಕೊಂಡು ಹೇಳುತ್ತಾ ಇರುತ್ತಾರೆ." ಎಂದು ಚೆಟ್ಟಿಯವರು ತಮ್ಮ ಲೇಖನದಲ್ಲಿ ಬರೆದಿದ್ದಾರೆ ಎಂದು ಡಾ. ಲಕ್ಷ್ಮೀದೇವಿ ಗವಾಯಿಯವರು ತಾವು

---

೫೮. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೧೫

೫೯. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೧೬

೬೦. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೧೮

೬೧. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೧೯

ಬರೆದ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಬಾಲಕ ಚೆಟ್ಟಿಯವರು ಚಿತ್ರಕಲೆಯ ಜೊತೆ ಸಂಗೀತದಲ್ಲಿಯೂ ಆಸಕ್ತಿ ಬೆಳೆಸಿಕೊಂಡವರು, ಆದುರಿಂದ ಅವರ ಮನೆಯಲ್ಲಿ ಒಂದು ಹಾರ್ಮೋನಿಯಂ ಕೂಡ ಇದೆ. ಬೆಳಿಗ್ಗೆ ೫ ರಿಂದ ೬ ಗಂಟೆಯವರಿಗೆ ಶ್ರತಿ ಹಿಡಿದು ದೇವರ ನಾಮ ಹೇಳ್ತಾ ಇದ್ದರು ಎಂದು ಅವರ ಮಗ ಬಸವರಾಜ ಹೇಳುತ್ತಾರೆ. ಮನಸ್ಸಿಗೆ ಸಂತೋಷ. ಆನಂದ ಉಂಟುಮಾಡುವ ಕಲೆ ಎಂದರೆ ಸಂಗೀತ ಮತ್ತು ಚಿತ್ರಕಲೆ. ಹೀಗಾಗಿ ಚೆಟ್ಟಿಯವರು ಎರಡರಲ್ಲಿಯೂ ಆಸಕ್ತಿ ಹೊಂದಿದವರಾಗಿದ್ದರು. ಚೆಟ್ಟಿಯವರಿಗೆ ಐದು ವರ್ಷವಿರುವಾಗ ಅಥಣಿಯಲ್ಲಿಯೇ ಮನೆಗೆ ಸಮೀಪದಲ್ಲಿ ಮಿರ್ಜಿ ಹೆಸರಿನ ಕನ್ನಡ ಶಾಲೆ ಇತ್ತು. ಮೊದಲು ರಾಜವಾಡೆ ಇದ್ದು ಅದು ನಶಿಸಿಹೋಗಿದ್ದರಿಂದ ಆ ಸ್ಥಳದಲ್ಲಿ ಈ ಶಾಲೆಯನ್ನು ಪ್ರಾರಂಭಿಸಲಾಯಿತು. ಈ ಶಾಲೆಯಲ್ಲಿ ೧೯೧೭ರವರೆಗೆ ಐದನೆಯ ಇಯತ್ತೆಯವರೆಗೆ ಕಲಿತರು.[೬೨]

ಚೆಟ್ಟಿಯವರು ತಮ್ಮ ತಂದೆಯವರು ತೋರುತ್ತಿದ್ದ ಪ್ರೀತಿಯ ಕುರಿತು ಈ ರೀತಿ ಹೇಳಿದ್ದಾರೆ. “ನಮ್ಮ ತಂದೆಯವರಿಗೆ ನನ್ನ ಮೇಲೆ ಬಹಳ ಪ್ರೀತಿ. ಬಹುಶಃ ಮೂರು ಹೆಣ್ಣುಮಕ್ಕಳ ಮೇಲೆ ಜನಿಸಿದ್ದೇ ಕಾರಣವಿರಬಹುದು. ಮೂರು ಹೆಣ್ಣುಮಕ್ಕಳ ಮ್ಯಾಲ ಹುಟ್ಯಾನ. ಪ್ರಸಿದ್ಧ ವ್ಯಕ್ತಿ ಆಗ್ತಾನ, ಅಷ್ಟೇ ಅಲ್ಲ ಶಿವಯೋಗಿ ಅಪ್ಪನ ಕೃಪಾನು ಅದ” ಎಂದು ತಮ್ಮ ಗೆಳೆಯರೊಂದಿಗೆ ನನ್ನ ಬಗ್ಗೆ ಆಗ್ಗಾಗೆ ಮಾತನಾಡುತ್ತಿದ್ದರಂತೆ.[೬೩] ಅಲ್ಲದೇ “ನನ್ನ ತಂದೆಯವರು ನನ್ನ ಹಾಗೂ ನನ್ನ ತಮ್ಮನ ಮೇಲೆ ವಿಶೇಷ ಪ್ರೀತಿ ತೋರುತ್ತಿದ್ದರು. ಜರದ ಮಕ್‌ಮಲ್ ಕೋಟು ಅದೇ ರೀತಿಯ ಚೊಣ್ಣ, ಮಕ್‌ಮಲ್ ಟೋಪ್ಪಿಗೆ ಹಾಕಿಕೊಂಡು ಕೈಯಲ್ಲಿ ಪಾಟಿ ಹಿಡಿದುಕೊಂಡು ಶಾಲೆಗೆ ಹೋಗುವುದೆಂದರೆ ಅದೊಂದು ಹಿಗ್ಗು, ಸಂಭ್ರಮ. ಹೀಗೆ ಮುರಿಗೆಪ್ಪನವರ ಬಾಲ್ಯದ ಬದುಕು ಬಹಳಷ್ಟು ಆನಂದಮಯವಾಗಿತ್ತು. “ಮನೆಯಲ್ಲಿ ಮುದ್ದಿಸುವ ತಂದೆ ಪ್ರೀತಿಸುವ ಅವ್ವ, ತಮ್ಮ, ಚಿಕ್ಕಪ್ಪ, ಚಿಕ್ಕವರ ವಾತ್ಸಲ್ಯ ಅಕ್ಕಂದಿರ ವಿಶೇಷ ಒಲವು[೬೪] ಬಾಳಸಂಪುಟದಲ್ಲಿ ಅಳಿಸಲಾರದ ಮಧುರ ಭಾವಗೀತೆ” ಎನ್ನುವ ಕವಿವಾಣಿಯಂತೆ ನನ್ನ ಬಾಲ್ಯವು ಮಧುರ ಭಾವಗೀತೆಯಂತೆ ಹೃದಯಂಗಮವಾಗಿತ್ತು”[೬೫] ಎನ್ನುತ್ತಾರೆ ಮುರಿಗೆಪ್ಪನವರು.

“ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು” ಎಂಬ ಗಾದೆ ಮಾತಿನಂತೆ ಚೆಟ್ಟಿಯವರು ಬಾಲ್ಯದಲ್ಲಿಯೇ ರವಿವರ್ಮ, ಸರಸ್ವತಿ, ಗಣಪತಿಯ ಚಿತ್ರಗಳನ್ನು ನಕಲು ಮಾಡುತ್ತಿದ್ದರು. ೧೯೨೧ರಲ್ಲಿ ಡ್ರಾಯಿಂಗ್ ಎಲಿಮೆಂಟರಿ ಗ್ರೇಡ್ ಪಾಸಾಗಿ ೧೯೨೨ರಲ್ಲಿ ಇಂಟರ್‌ಮಿಡಿಯಟ್ ಗ್ರೇಡ್ ಪರೀಕ್ಷೆಯಲ್ಲಿ ೧ನೇ ನಂಬರದಲ್ಲಿ ಪಾಸಾದೆನು.[೬೬] ಎಂದೆಲ್ಲ ಹೇಳುವ ಚೆಟ್ಟಿಯವರು ೧೯೨೪ರ ವರೆಗೆ ಮ್ಯಾಟ್ರಿಕ್ ಕಲಿತು ಉತ್ತೀರ್ಣರಾದರು ಎಂದು ಡಾ. ಲಕ್ಷ್ಮೀದೇವಿ ಗವಾಯಿಯವರು ಉಲ್ಲೇಖಿಸಿದ್ದಾರೆ. ಚಿಕ್ಕಂದಿನಿಂದಲೇ ಕಲೆಯಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡ ಇವರಿಗೆ ಕಲಾಶಾಲೆಗೆ ಸೇರಬೇಕೆಂಬ

---

೬೨. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೧೯

೬೩. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೨೦

೬೪. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೧೧೫

೬೫. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೧೧೫

೬೬. ಡಾ. ಲಕ್ಷ್ಮೀದೇವಿಗವಾಯಿ ಲೇ. ಎಂ.ಎ. ಚೆಟ್ಟಿ ಕಲಾಬದುಕು, ಮತ್ತು ಕಲಾಕೃತಿಗಳು ಪು.ಸಂ. ೨೨

ತವಕ ಆಗ ಹುಟ್ಟಿಕೊಂಡಿತು. ಮನಸ್ಸಿನಲ್ಲಿ ದ್ವಂದ್ವ ಪ್ರಾರಂಭವಾಯಿತು. ಒಂದು ಕಡೆ ಕಲೆ ಎಳೆಯುತ್ತಿದ್ದರೆ ಇನ್ನೊಂದೆಡೆ ಬಿ.ಎ.ಎಲ್.ಎಲ್.ಬಿ. ಮುಗಿಸಿ ತಮ್ಮ ಚಿಕ್ಕಪ್ಪನವರಂತೆ ಸರಕಾರಿ ಅಧಿಕಾರಿಯಾಗಬೇಕೆಂಬ ಸೆಳೆತ ಈ ಸೆಳೆತಗಳ ಮಧ್ಯದಲ್ಲಿ ಹೊಯ್ದಾಡಿ ಒಂದು ನಿರ್ಧಾರಕ್ಕೆ ಬಂದೇ.[೬೭] ಅದೇನೆಂದರೆ ಕಲೆಯ ಅಭ್ಯಾಸ ಮಾಡಲು ಕಲಾ ಅಧ್ಯಯನಕ್ಕೆ ಮುಂಬಯಿಗೆ ಹೋಗುವ ನಿರ್ಧಾರವನ್ನು ತೆಗೆದುಕೊಂಡರು.

ಚೆಟ್ಟಿಯವರು ತಾವು ಮುಂಬಯಿಗೆ ಉನ್ನತ ಚಿತ್ರಕಲಾ ಅಭ್ಯಾಸಕ್ಕಾಗಿ ಹೋಗುತ್ತೇನೆಂದು ಹೇಳಿದಾಗ ಚಿಕ್ಕಪ್ಪ ಅವರಿಗೆ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಯಿತು. ಹೇಗೆ ಮುಂಬಯಿಗೆ ಕಳಿಸಿಕೊಡಬೇಕೆಂಬ ತವಕದಲ್ಲಿರುವಾಗ ಸಿರಸಂಗಿ ಲಿಂಗರಾಜರ ಟ್ರಸ್ಟ್ ಫಂಡಿನಿಂದ ಸ್ಕಾಲರ್‌ಸಿಪ್ ಹಣ ದೊರೆಯಿತು. ಈ ಎಲ್ಲ ಅನುಕೂಲತೆಗಳಿಂದ ೧೯೨೪ರಲ್ಲಿ ಮುಂಬಯಿಂದ ಜೆ.ಜೆ.ಸ್ಕೂಲ ಆಫ್ ಆರ್ಟ್ ಸೇರಿ ಚಿತ್ರಕಲಾ ಅಭ್ಯಾಸ ಪ್ರಾರಂಭಿಸಿದರು. ಒಬ್ಬ ಕಲಾವಿದ ಗಟ್ಟಿನೆಲೆಯಲ್ಲಿ ವ್ಯವಹರಿಸಬೇಕಾದರೆ ಅವನಿಗೆ ಕಲೆಯ ವ್ಯಾಕರಣ ತಿಳಿದಿರುವುದೊಳ್ಳೆಯದು. ಶಿಕ್ಷಣ ಇರುವುದೊಳ್ಳೆಯದು ಏಕೆಂದರೆ ಶಿಕ್ಷಣದಿಂದ ಆತ್ಮವಿಶ್ವಾಸ ಚಿರುಗುತ್ತದೆ. ಅಧ್ಯಯನದ ಕಾರಣ ಮನಸ್ಸಿಗೆ ಹೊಸ ಹೊಸ ಆಯಾಮಗಳು ಹೊಳೆಯಬಹುದು.[೬೮] ಹೀಗೆ ಹುಟ್ಟು ಕಲಾವಿದರಾದ ಚೆಟ್ಟಿಯವರಿಗೆ ಕಲೆಯ ವ್ಯಾಕರಣ ಶಿಕ್ಷಣದ ಅವಶ್ಯಕತೆ ಇತ್ತು. ಚೆಟ್ಟಿಯವರ ಒಲವು ಕೂಡಾ ಹೆಚ್ಚಿನ ವ್ಯಾಸಂಗಕ್ಕಾಗಿ ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್ ಸಂಸ್ಥೆಯನ್ನು ಸೇರಿ ಅಭ್ಯಾಸ ಕೈಗೊಳ್ಳಬೇಕು, ಕಲಾರಾಧನೆ ಮಾಡಿ ಕಲಾದೇವಿಯ ಕೃಪೆಗೆ ಒಳಗಾಗಬೇಕೆಂಬುದಾಗಿತ್ತು.[೬೯] ಅವರ ದೃಢ ನಿರ್ಧಾರವೇ ಅವರಿಗೆ ಶ್ರೀರಕ್ಷೆಯಾಯಿತು.

ಆದರೆ ಮುಂಬಯಿಗೆ ಕಲಾ ಅಭ್ಯಾಸಕ್ಕೆ ಹೋಗುವಾಗ ಕೆಲವು ನಿಬಂಧನೆಗಳನ್ನು ಹಾಕಿದರು "ನಳದ ನೀರು ಕುಡಿಯಬಾರದು, ಖಾನಾವಳಿಗೆ ಹೋಗಬಾರದು, ಸ್ವತಃ ಅಡಿಗೆ ಮಾಡಿಕೊಂಡೇ ಊಟಮಾಡಬೇಕು" ಎಂದು ಹಲವಾರು ಕರಾರುಗಳಿಗೆ ಒಪ್ಪಿಕೊಂಡರು. 'ಆಗ ಮುಂಬಯಿಯಲ್ಲಿ ಶ್ರೀ ನಿಜಲಿಂಗಪ್ಪಣ್ಣ ಹತ್ತರಕಿ ಅವರ ಅಡಕಿ ಅಂಗಡಿ ಇತ್ತು. ಅವರು ನಮ್ಮ ಆಪ್ತರೆ, ಅವರ ಅಂಗಡಿಯಲ್ಲೆ ವಾಸ. ಅಲ್ಲಿಯೇ ಸ್ನಾನ, ಊಟ, ಅಡಿಗೆ ಮಾಡಿಕೊಂಡು ಕಲಾ ಅಭ್ಯಾಸವನ್ನು ಮುಂದುವರಿಸಬೇಕೆಂದು ಅಲ್ಲಿ ಅವರು ವ್ಯವಸ್ಥೆ ಮಡುವಂತೆ ಶ್ರೀ ವಿರುಪಾಕ್ಷಪ್ಪ ಚಿಕ್ಕಪ್ಪ ಬೆಂಬಳಗಿಯವರಿಗೆ ಪತ್ರ ಬರೆದು ಕೊಟ್ಟರು,[೭೦] ಕರ್ನಾಟಕ ಅನೇಕ ಉದ್ದಿಮೆ ವ್ಯಾಪಾರಸ್ಥರು ಮುಂಬಯಿಯಲ್ಲಿ ವಾಸ್ತವ್ಯ ಮಾಡುತ್ತಿದ್ದರು. ಅಂಥವರಲ್ಲಿ ನಿಜಲಿಂಗಪ್ಪಣ್ಣ ಹತ್ತರಕಿ, ಶ್ರೀ ಗಂಗಾಧರಪ್ಪ ಸಾಬೋಜಿಯವರಂಥ ಉದಾರ ಆಶ್ರಯಗಳಿಸಿದ್ದರು. ಇವರು ಕರ್ನಾಟಕದಿಂದ ಮುಂಬಯಿಗೆ ಕಲಿಯಲು ಹೋದ ವಿದ್ಯಾರ್ಥಿಗಳಿಗೆ ಬಹಳ ಸಹಾಯ ಮಾಡುತ್ತಿದ್ದರು.[೭೧] ಇದರಿಂದ ಕರ್ನಾಟಕದಿಂದ ಬಂದ ಕಲಾವಿದ್ಯಾರ್ಥಿಗಳಿಗೆ ಬಹಳಷ್ಟು ಸಹಾಯವಾಗುತ್ತಿತ್ತು. "ಶಿಕ್ಷಣ ದಾರಿಯ ದೀಪವಾಗಬಹುದು ಆದರೆ

---

೬೭. ಮಹಾಲಿಂಗ ಯೊಳಗಿ ಸಂ.ಎಂ.ಎ. ಚಟ್ಟಿ ನೆನಪಿನ ಕಿಟಿಕಿಯಿಂದ ಅಭಿನಂದ ಗ್ರಂಥ ಪು.ಸಂ. ೧೨೧

೬೮. ಕು.ಶಿ. ಹರಿದಾಸಭಾಪ, ಲೇ. ಕೆ.ಕೆ. ಹೆಬ್ಬಾರ ಕಲೇ (ಮತ್ತು ಬದುಕು) ಬದುಕು ಪು.ಸಂ. ೩೧

೬೯. ಡಾ. ಲಕ್ಷ್ಮೀದೇವಿ ಗವಾಯಿ ಕಲಾವಿದ ಎಂ.ಎ. ಚೆಟ್ಟಿ ಕಲಾಜೀವನ ಕಲಾಕೃತಿಗಳು ಪು.ಸಂ.೪೩

೭೦. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿ ಕಲಾಬದುಕು ಕಲಾಕೃತಿಗಳು ಪು.ಸಂ.೪೩

೭೧. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿ ಕಲಾಬದುಕು ಕಲಾಕೃತಿಗಳು ಪು.ಸಂ.೪೪

ದೀಪ ಚೆಲ್ಲುವ ಬೆಳಕಿನಲ್ಲಿ ನಡೆದು ಗುರಿ ಮುಟ್ಟಬೇಕಾದದ್ದು ಮಾತ್ರ ಪ್ರಮಾಣಿಕನ ಕೆಲಸ. ದೀಪವೇ ನಡೆಬಾರದು ಎಂದಿದ್ದರೂ ದೀಪ ಬೆಳಗುವ ಹೆದ್ದಾರಿಯಲ್ಲಿ ದಿಕ್ಕು ತೋರಿಸು ಕೈಗಂಬ ಇರುವಂತೆ".[೭೨] ಆದ್ದರಿಂದ ಜೆ.ಜೆ.ಕಲಾಶಾಲೆಯು ಚೆಟ್ಟಿಯವರ ಕಲಾಜೀವನದಲ್ಲಿ ಬೆಳಕು ಚೆಲ್ಲುವ ದೀಪವಾಯಿತು. ನೈಜ ಕಲೆಯ ರಸ್ಯಷಿಯಾಗಲು ಮಾರ್ಗ ತೋರಿಸಿದರು. ಚೆಟ್ಟಿಯವರಿಗೆ ಮರಾಠಿ ಬರಲಿಲ್ಲ. ಶ್ರೀ ನಿಜಲಿಂಗಪ್ಪಣ್ಣ, ರೇವಣ್ಣಪ್ಪ ಹತ್ತರಕಿ ಇವರ ಅಂಗಡಿಯು ಕಾಳಿಕಾಂಭಾ ದೇವಿಯ ದೇವಸ್ಥಾನ ರೋಡಿನಲ್ಲಿ ಇತ್ತು. ಆ ಸ್ಥಳ ಚೆಟ್ಟಿಯವರ ವಾಸಸ್ಥಳವಾಗಿತ್ತು.[೭೩] ಹೀಗೆ ಚೆಟ್ಟಿಯವರು ಬಹಳಷ್ಟು ಕಷ್ಟಪಟ್ಟು ಅನೇಕ ತೊಂದರೆಗಳನ್ನು ಎದುರಿಸಿ ಮುಂಬಯಿಯಂಥ ಮಹಾನಗರದಲ್ಲಿ ಚಿತ್ರಕಲಾ ಶಿಕ್ಷಣ ಪಡೆಯಲು ಪ್ರಾರಂಭವಾಯಿತು. ಚೆಟ್ಟಿಯವರು ಜೆ.ಜೆ.ಕಲಾಶಾಲೆಗೆ ಸೇರಿ ಅಧ್ಯಯನ ಮಾಡುವಾಗ "ಮುಖ್ಯ ಗುರುಗಳಾಗಿದ್ದ ಶ್ರೀ ಕೆ.ಬಿ.ತಾಸ್ಕರರು ಒಪ್ಪಿಕೊಂಡು ಸೇರಿಸಿಕೊಂಡರು. ಇದೇ ಸಂದರ್ಭದಲ್ಲಿ ಶಿರಸಂಗಿ ಲಿಂಗರಾಜ ಟ್ರಸ್ಟ್ ಫಂಡಿನಿಂದ ಸ್ಕಾಲರ್ ಶಿಫ್ ಬೇರೆ ದೊರೆತು ಹೆಚ್ಚಿಗೆ ಅನುಕೂಲವಾಯಿತು."[೭೪]

ಸಪ್ತವರ್ಣ ಅಂದರೆ ಏಳುಬಣ್ಣದ ಕಲಾವಿದರು ೧. ಎಂ.ವಿ.ಮಿಣಜಗಿ ೨. ಎಂ.ಎ.ಚೆಟ್ಟಿ ೩.ಡಿ.ಜಿ.ಬಡಿಗೇರ ೪. ಅಮೀನ್‌ಸಾಹೇಬ ಕಮಡೊಳ್ಳಿ ೫. ಶ್ರೀ ಕಾರಡಗಿ ೬. ಶ್ರೀಣಾಯ್ ೭. ಡಿ.ವಿ.ಹಾಲಭಾವಿ ಇವರೆಲ್ಲರನ್ನೂ ದಂಡಾವತಿಮಠರು ಸಪ್ತವರ್ಣದ ಕನ್ನಡದ ಗುಂಪು ಎಂದು ಕರೆದಿದ್ದಾರೆ.[೭೫] ಹೀಗೆ ಸಪ್ತವರ್ಣದ ಗುಂಪು ಸೇರಿ ಅಭ್ಯಾಸ ಮಾಡತೊಡಗಿದ್ದಾರೆ. ಹಾಲಭಾವಿಯವರು ಚೆಟ್ಟಿಯವರನ್ನು ೧೫ನೇ ಶತಮಾನದ ಬಾಟಸೆಲ್ಲಿಗೆ ಹೋಲಿಸಿದ್ದಾರೆ ಬಾಟಿಸೆಲ್ಲಿ ಕ್ರಿಶ್ಚಿಯನ್ ಧರ್ಮದ ಕುರಿತು ಅಸಂಖ್ಯೆ ಚಿತ್ರಗಳನ್ನು ಚಿತ್ರಿಸಿದರೆ ಕರ್ನಾಟಕದ ಕಲಾವಿದ ಚೆಟ್ಟಿಯವರು ವೀರಶೈವ ಧರ್ಮ ಪರಂಪರೆಯ ಕುರಿತು ಅಸಂಖ್ಯೆ ಚಿತ್ರಗಳನ್ನು ಚಿತ್ರಿಸಿದ್ದಾರೆ.[೭೬] ಎಂದು ಹೇಳಿದ್ದಾರೆ. ಶ್ರೀ ಸಿ.ಎನ್.ಪಾಟೀಲರು ಚೆಟ್ಟಿಯವರ ಆತ್ಮೀಯರಾಗಿದ್ದರು. ಅವರ ಕುರಿತು ಹೀಗೆ ಹೇಳಿದ್ದಾರೆ. "ಚೆಟ್ಟಿಯವರು ಕಲಾವಿದರಲ್ಲಿಯೇ ಶ್ರೇಷ್ಠತೆಯನ್ನು ಪಡೆದ ಕಲಾವಿದರು. ಅವರ ಕುಂಚಗಳಿಗೆ ವಿಶ್ರಾಂತಿ ಎಂಬುದಿಲ್ಲ. ಅವರು ಬಾಟಿಸೆಲ್ಲಿಯೂ ಹೌದು ರವಿವರ್ಮರೂ ಹೌದು[೭೭] ಎಂದು ಹೇಳಿದ್ದಾರೆ. ಹೀಗೆ ಚೆಟ್ಟಿಯವರು ವಿದ್ಯಾರ್ಥಿ ಜೀವನದಲ್ಲಿಯೇ ಉತ್ತಮ ಕಲಾವಿದರಾಗಿದ್ದರು.

೧೯೨೪ರಲ್ಲಿ ಚೆಟ್ಟಿಯವರು ಸರ್.ಜೆ.ಜೆ. ಕಲಾಶಾಲೆಯನ್ನು ಪ್ರವೇಶಿಸಿದಾಗ ಅವರಿಗಿದ್ದ ಪಠ್ಯಕ್ರಮ ಈ ರೀತಿಯದಾಗಿತ್ತು. ಮೊದಲ ವರ್ಷ ಇದ್ದಿಲು ಕಡ್ಡಿಯಿಂದ ಚಿತ್ರ ರಚಿಸುವುದು. ಮೂರ್ತಿಶಿಲ್ಪ ಇರಿಸಿ ಮಸಿಕಡ್ಡಿಯಲ್ಲಿ ಹೊರರೇಖೆ ಹಾಕಿ ಪುಡಿ ಬಣ್ಣಗಳಿಂದ ತುಂಬುವುದು, ಸಿಲ್ಪದ ಉಬ್ಬು-ತಗ್ಗುಗಳನ್ನು ಗುರುತಿಸುವುದು, ಛಾಯಾಚಿತ್ರದಂತೆ ನೆರಳು-ಬೆಳಕನ್ನು ತೋರಿಸುವ ಮಾದರಿಯದು,

೭೨. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿ ಕಲಾಬದುಕು ಕಲಾಕೃತಿಗಳು ಪು.ಸಂ.೪೪
೭೩. ಮಹಾಲಿಂಗ ಯಾಳಗಿ ಸಂ. ಡಾ. ಎಸ್.ಸಿ.ಪಾಟೀಲ ಎಂ.ಎ. ಚೆಟ್ಟಿಯವರ ನೆನಪಿನ ಕಿಟಿಕಿಯಿಂಗ ಪು.ಸಂ. ೧೨೩
೭೪. ಮಹಾಲಿಂಗ ಯಾಳಗಿ ಸಂ. ಡಾ. ಎಸ್. ಸಿ.ಪಾಟೀಲ ಲೇ ನೆನಪಿನ ಕಿಟಕಿಯಿಂಗ ಪು.ಸಂ.೧೨೩
೭೫. ಮಹಾಲಿಂಗ ಯಾಳಗಿ ಸಂ. ಎಂ.ಎ. ಚೆಟ್ಟಿಯವರ ಅಭಿನಾಂದ ಗ್ರಂಥ ಪು.ಸಂ. ೬
೭೬. ಎಂ.ಎ. ಚೆಟ್ಟಿಯವರ ಅಭಿನಾಂದ ಗ್ರಂಥ ಪು.ಸಂ. ೬
೭೭. ಎಂ.ಎ. ಚೆಟ್ಟಿಯವರ ಅಭಿನಾಂದ ಗ್ರಂಥ ಪು.ಸಂ. ೨೭

ಎರಡನೆ ವರ್ಷದಲ್ಲಿ ದೃಗ್‌ದರ್ಶನ, ಮೂರನೆಯ ವರ್ಷದಲ್ಲಿ ಬಣ್ಣಗಳ ಬಳಕೆ, ಭಾವಚಿತ್ರ, ಸಥಿರಚಿತ್ರ ಇತ್ಯಾದಿ ಅಭ್ಯಾಸ ಮಾಡಬೇಕಿತ್ತು. ನಾಲ್ಕನೆಯ ವರ್ಷದಲ್ಲಿ ನ್ಯೂಡ್ (ನಗ್ನ) ಸ್ಟಡಿ ಇರುತ್ತಿತ್ತು. ದೇಹ ರಚನಾ ಶಾಸ್ತ್ರ ಅಗತ್ಯವಿತ್ತು. ಕೊನೆಯ ಅಂದರೆ ಐದನೆಯ ವರ್ಷ ಸಂಯೋಜನೆ ಚಿತ್ರ ಮಾತ್ರ ಇರುತ್ತಿತ್ತು.[೨೮] ಈ ವಿಷಯಗಳಿಂದ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಅಭ್ಯಾಸವಾಗಿ ಒಬ್ಬ ಉತ್ತಮ ಕಲಾವಿದರನಾಗಲು ಪಠ್ಯಕ್ರಮದ ಅಭ್ಯಾಸದ ಜೊತೆಗೆ ಚೆಟ್ಟಿಯವರಿಗೆ ಉತ್ತಮ ಕಲಾಬೋಧಕರು ಅಧ್ಯಾಪಕರು ಜೆ.ಜೆ. ಕಲಾಶಾಲೆಯಲ್ಲಿ ಅಧ್ಯಯನ ಮಾಡುವಾಗ ಸಿಕ್ಕಿದರಿಂದ ಎಂ.ಎ. ಚೆಟ್ಟಿಯವರು ಒಬ್ಬ ಉತ್ತಮ ನೈಜ ಕಲಾವಿದರಾಗಲು ಕಾಣೀಭೂತರಾಗಿದ್ದರು ಎಂದು ಹೇಳಬಹುದು. ಸರ್. ಜೆ.ಜೆ. ಕಲಾಶಾಲೆಯಲ್ಲಿ ಅಧ್ಯಾಪಕರು ಬ್ರಿಟೀಷ್ ಡೈರೆಕ್ಟರ್ ಕೆಳಗೆ ಪಳಗಿದವರಾಗಿದ್ದರು. ಆದ್ದರಿಂದ ಶಿಸ್ತು, ರೀತಿ, ಸಮಯಪ್ರಜ್ಞೆ, ಕಾರ್ಯನಿಷ್ಠೇ ಎಲ್ಲಾ ಕೆಲಸ ಕಾರ್ಯಗಳು ನಿಯಮಬದ್ಧವಾಗಿ ನಡೆಯಬೇಕು. ಯಾವುದೇ ರೀತಿಯ ಅಹಿತಕರ ಘಟನೆ, ವಾತಾವರಣವನ್ನು ಸಹಿಸುತ್ತಿರಲಿಲ್ಲ. ಶಿಸ್ತುಬದ್ವಾದ ವಾತಾವರಣವು ಅಧ್ಯಾಪಕರಲ್ಲಿ ಇರುತ್ತಿತ್ತು. ಸರ್.ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನ ನಿಯಮಕ್ಕನುಗುಣವಾಗಿ ಮನಸ್ಸುಕೊಟ್ಟು ಕಲಿಯುತ್ತಿದ್ದರು. ಈ ಕುರಿತು ಚೆಟ್ಟಿಯವರು ಹೀಗೆ ಹೇಳಿದ್ದಾರೆ. "ನಮಗೆ ಕಲಿಸತಕ್ಕ ಗುರುವರ್ಯರು ಸಹ ಅಂಥವರೇ. ದಪ್ಪ ಮೀಸೆಯ ಅವರ ಗಂಭೀರ ಮುಖಮುದ್ರೆಯನ್ನು ನೆನೆಸಿದರೆ ಸಾಕು, ಭಯ ಭಕ್ತಿಯಿಂದ ಮಸ್ತಕವು ತಾನೇ ತಾನಾಗಿ ಬಾಗುತ್ತಿತ್ತು. ಅಂದಿನ ಆ ಗುರುಗಳ ಪ್ರೋತ್ಸಾಹ ಸಹಿತ ಅಷ್ಟೇ ಠೀವಿಯಿಂದ ಇರುತ್ತಿತ್ತು. ಶ್ರೀದುರಂಧರರ ಥ್ರೀ ಪೀಸ್ ಸೂಟು, ಕನ್ನಡ ಸುಂದರವಾಗಿ ಇರುತ್ತಿತ್ತು. ತಲೆಯ ಮೇಲ ಜರತಾರಿಯ ಸುಂದರ ಕೆಂಪು ಪಾಗಡಿ. ನೀಳವಾದ ಕಪ್ಪುಕೋಟು ಉತ್ತರೀಯತ್ತು ಧೋತರ ಶಿಸ್ತುಬದ್ಧತೆಯಿಂದ ನಡೆದುಕೊಳ್ಳುತ್ತಿದ್ದರು. ಆಗ ಬ್ರಿಟೀಷ್ ವ್ಯಕ್ತಿ ಕ್ಯಾಪ್ಟನ್ ಸಾಲೋಮನ್‌ರವರು ಪ್ರಿನ್ಸಿಪಾಲರಾಗಿದ್ದರು. ಅವರು ಕೂಡಾ ಯೂರೋಪಿಯನ್ ರೀತಿಯ ಶಿಸ್ತಿನ ಪೋಷಾಕು ಧರಿಸುತ್ತಿದ್ದರು. ಪೋಷಾಕಿನ ಜೊತೆ ಅವರ ವ್ಯಕ್ತಿತ್ವ ಕೂಡಾ ಅಷ್ಟೆ ಶಿಸ್ತಿನದಾಗಿತ್ತು. ಹೀಗೆ ಅಧ್ಯಾಪಕರ ಶಿಸ್ತು, ಗಾಂಭೀರ್ಯತೆಯು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುತ್ತಿತ್ತು. ವಿದ್ಯಾರ್ಥಿಗಳ ಮೇಲೆ ಎಷ್ಟೊಂದು ಪ್ರಭಾವ ಬೀರಿತೆಂದರೆ ಅದಕ್ಕೆ ಎಂ.ಎ.ಚೆಟ್ಟಿಯವರೇ ಸಾಕ್ಷಿ.[೨೯] ದಪ್ಪ ಮೀಸೆ ವಯಸ್ಸಾಗಿದ್ದರೂ ಕಪ್ಪಾಗಿ ಕಾಣುವಂತೆ ಮೀಸೆ ಸದಾಶಿಸ್ತು, ಕಾರ್ಯ ಹೀಗೆ ಪ್ರತಿಯೊಂದು ವಿಷಯದಲ್ಲಿಯೂ ಆಗಿನ ಅಧ್ಯಾಪಕರ ಪ್ರಭಾವವನ್ನು ಚೆಟ್ಟಿಯವರಲ್ಲಿ ಕಾಣುತ್ತೇವೆ. ಹೀಗೆ ಕಲಾಪ್ರಬುದ್ಧತೆಯನ್ನು ಪಡೆದುಕೊಂಡ ಕಲಾವಿದರ ಕೈಯಲ್ಲಿ ಪಳಗಿದ ಚೆಟ್ಟಿಯವರು ಕಲಿಯುವಂಥ ಪ್ರಸಂಗದಲ್ಲಿ ಒಮ್ಮೆ ಅವರ ಗುರುಗಳು ಕೋಪಗೊಂಡದ್ದನ್ನು ಕಂಡು ಹೀಗೆ ಹೇಳಿದ್ದಾರೆ. "ನಾನು ಎರಡನೆ ವರ್ಷದಲ್ಲಿ ಕಾಲಿರಿಸಿದಾಗ ಒಂದು ಘಟನೆ ಜರುಗಿತು ನಾನು ಲೈಫ್ ಚಿತ್ರ ಮಾಡುತ್ತಿದ್ದೆ. ಶ್ರೀ ಕೆ.ಬಿ.ಜೋರ್ಡೆಕರ ಎನ್ನುವವರು ಆಗ ಆ ವಿಷಯವನ್ನು ಕಲಿಸುತ್ತಿದ್ದರು ನಾನು ಮಾಡುತ್ತಿದ್ದ ಚಿತ್ರನ್ನು ನೋಡಿ ತಿದ್ದಲು ಬಣ್ಣ ಕೇಳಿದರು. ಆ ಬಣ್ಣವು ನನ್ನ ಹತ್ತಿರ ಇರಲಿಲ್ಲ.

೨೮. ಡಾ. ಲಕ್ಷ್ಮೀದೇವಿಗವಾಯಿ ಎಂ.ಎ. ಚೆಟಿ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೫೩

೨೯. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿಯ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೫೩

ಒಮ್ಮಿಂದೊಮ್ಮಿಗೆ ಅವರು ಸಿಟ್ಟಿಗೆದ್ದು ನನ್ನ ಕಪಾಳಪಕ್ಕೆ ಜೋರಾಗಿ ಹೊಡೆದರು. ಆ ಬಣ್ಣ ತೆಗೆದುಕೊಳ್ಳಲು ನನ್ನ ಹತ್ತಿರ ಹಣ ಇಲ್ಲವೆಂಬುದನ್ನು ನನ್ನ ಗೆಳೆಯರಿಂದ ಅರಿತುಕೊಂಡು ನನ್ನನ್ನು ಕರೆದು ಸಮಾಧಾನ ಪಡಿಸಿದರು."[೮೦]

ಅಂದರೆ ಜೆ.ಜೆ. ಕಲಾಶಾಲೆಯ ಅಧ್ಯಾಪಕರು ಚಿತ್ರಕಲೆಯನ್ನು ಕಲಿಸುವುದರಲ್ಲಿ ಎಷ್ಟು ದಕ್ಷರಿದ್ದರೋ ಅಷ್ಟೇ ಕರುಣಾಮಯಿಗಳೂ ಆಗಿದ್ದರೆಂಬುದು ಚೆಟ್ಟಿಯವರ ಈ ಒಂದು ಪ್ರಸಂಗದಿಂದ ಕಂಡುಬರುತ್ತದೆ. ಹೀಗೆ ಚೆಟ್ಟಿಯವರು ತಮ್ಮ ಕಲಾ ಅಭ್ಯಾಸವನ್ನು ಉತ್ತಮ ರೀತಿಯಲ್ಲಿ ಮಾಡಿ ತಾವೊಬ್ಬ ಪ್ರತಿಭಾಶಾಲಿ ಸೃಜನಶೀಲ ಕಲಾವಿದನೆಂದು ರುಜುಮಾಡಿದ್ದಾರೆ. ೧೯೩೦ರಲ್ಲಿ ಜೆ.ಡಿ. ಆರ್ಟ್, ಅಂತಿಮ ಪೇಂಟಿಂಗ್ ಪರೀಕ್ಷೆಯಲ್ಲಿ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ಗೆ ಪ್ರಥಮರಾಗಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ರಜತ ಹಾಗೂ ಸುವರ್ಣ ಪದಕಗಳೆಲ್ಲವನ್ನು ತಮ್ಮದಾಗಿಸಿಕೊಂಡರು. ೧೯೩೨ ರಿಂದ ೧೯೩೪ರವರೆಗೆ ಸರ್ ಜೆ.ಜೆ. ಸೂಲ್ಕ್ ಆಫ್ ಆರ್ಟ್‌ನ ಫೆಲೋ ಆಗಿ ಮೂರು ಫೆಲೋಶಿಫ್‌ಗಳನ್ನು ಪಡೆದ ಅಗ್ಗಳಿಕೆ ಚಟ್ಟಿಯವರಾಗಿದೆ.[೮೧]

ಚೆಟ್ಟಿಯವರು ವಿದ್ಯಾರ್ಥಿಯಾಗಿದ್ದಾಗ ಪ್ರಸಿದ್ಧಿಯ ಉತ್ತುಂಗಕ್ಕೇರಿದ ಕೀರ್ತಿ ಅಲ್ಲಿಗೆ ನಿಲ್ಲಲಿಲ್ಲ ಸತತ ಅಭ್ಯಾಸ, ಕಷ್ಟ ಸಹಿಷ್ಣುತೆ ಜೀವನದಲ್ಲಿ ಮಹತ್ತರವಾದುದನ್ನು ಸಾಧಿಸುವ ಛಲ, ಸಹೋದ್ಯೋಗಿ ಕಲಾವಿದರಲ್ಲಿಯ ಸ್ಪರ್ಧಾತ್ಮಕ ಮನೋಭಾವನೆ. ಅವರಲ್ಲಿ ಸದಾ ಜಾಗೃತಿಯನ್ನು ಮೂಡಿಸುತ್ತಿದ್ದವು. ೧೯೩೩ರಲ್ಲಿ ಡಬ್ಲೂ. ಡಿ.ಗ್ಲ್ಯಾಡ್‌ಸ್ಟನ್ ಸಾಲೋಮನ್ನರ ನೇತೃತ್ವದಲ್ಲಿ ಕಲಾವಿದ್ಯಾರ್ಥಿಗಳ ತಂಡವೊಂದು ನಿಸರ್ಗಚಿತ್ರ ರಚನೆಗಾಗಿ ಪ್ರವಾಸವೊಂದನ್ನು ಏರ್ಪಡಿಸಲಾಗಿತ್ತು ಅದರಲ್ಲಿ ಚೆಟ್ಟಿಯವರೂ ಇದ್ದರು ಹದಿನೈದು ದಿನಗಳವರೆಗೆ ಉದಯಪುರ ಮುಂತಾದ ಪ್ರೇಕ್ಷಣಿಯ ಐತಿಹಾಸಿಕ ಸ್ಮಾರಕಗಳನ್ನು ಸಂದರ್ಶಿಸಿ ಅಲ್ಲಿಯ ಅನೇಕ ಸ್ಥಳಗಳಲ್ಲಿ ಚಿತ್ರಗಳನ್ನು ರಚಿಸಿದರು. ಚೆಟ್ಟಿಯವರು ರಚಿಸಿದ ಅನೇಕ ಚಿತ್ರಗಳು ಚೇತೋಹಾರಿ ಜಗನ್ಮೋಹನ ಮಹಾರಾಜರ ಮೆಚ್ಚಿಗೆಗಳಿಸಿಕೊಂಡವು. ಚೆಟ್ಟಿಯವರ ಕುಂಚದ ಮೋಡಿಗೆ ಮಾರು ಹೋದ ಅವರು ಚೆಟ್ಟಿಯವರನ್ನು ಪ್ರೋತ್ಸಾಹಿಸುವುದರ ಜೊತೆಗೆ ಗೌರವಿಸಿದರು.[೮೨] ಹೀಗೆ ಚೆಟ್ಟಿಯವರು ವಿದ್ಯಾರ್ಥಿ ಜೀವನದಲ್ಲಿ ಅನೇಕ ಕಷ್ಟ ಸುಖಗಳನ್ನು ಅನುಭವಿಸಿ ಒಬ್ಬ ಪ್ರಬುದ್ಧ ಕಲಾವಿದರಾಗಿ ಕರ್ನಾಟಕದಲ್ಲಿಯೇ ಬೆಳೆಯಬೇಕು ಎಂಬ ದಿಟ್ಟ ನಿರ್ಧಾರವನ್ನು ತೆಗೆದುಕೊಂಡರು ಕಲೆಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿ ಇಟ್ಟರು.

೧೯೩೯ರಲ್ಲಿ ಚೆಟ್ಟಿಯವರು ಮುಂಬಯಿಯ ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನಿಂದ ಚಿತ್ರಕಲಾ ಪದವಿ ಪಡೆದುಕೊಂಡು ಗದುಗಿಗೆ ಬಂದು ನೆಲೆಸಿದರು. ನಂತರ ೧೯೪೦ರಲ್ಲಿ ಅವರ ಚಿಕ್ಕಪ್ಪ ಮಾಮಲೆದಾರ ವೃತ್ತಿಯಿಂದ ನಿವೃತ್ತಿ ಹೊಂದಿದರು. ಗದುಗಿನಲ್ಲಿ ತಾವಿದ್ದ ಮನೆಯಲ್ಲಿಯೇ ಮುರಿಗೆಪ್ಪನವರನ್ನು ಉಳಿಸಿದರು. ತಾವು ಅಥಣಿಯಲ್ಲಿನ ಆಸ್ತಿ ಸಂರಕ್ಷಣೆಗಾಗಿ ಹೋದರು.[೮೩] ಅಥಣಿಗೆ

೮೦. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿಯ ಕಲಾಬದುಕು ಮತ್ತು ಕಲಾ ಕೃತಿಗಳು ಪು.ಸಂ.೫೪

೮೧. ಮಾಹಾಲಿಂಗಯೊಳಗಿ ಸಂ, ಡಾ. ಎಸ್.ಸಿ.ಪಾಟೀಲ ಲೇ, ಎಂ. ಎಂ.ಚೆಟ್ಟಿಯವರ ಅಭಿನಂದನಾ ಗ್ರಂಥ ಪು.ಸಂ. ೭

೮೨. ಮಾಹಾಲಿಂಗಯೊಳಗಿ ಸಂ, ಡಾ. ಎಸ್.ಸಿ.ಪಾಟೀಲ ಲೇ, ಎಂ. ಎಂ.ಚೆಟ್ಟಿಯವರ ಅಭಿನಂದನಾ ಗ್ರಂಥ ಪು.ಸಂ. ೭

೮೩. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿಯವರ ಕಲಾ ಬದುಕು ಮತ್ತು ಕಲಾ ಕೃತಿಗಳ ಪು.ಸಂ. ೯

ಹೋಗುವ ಮುನ್ನ ಮುರಿಗೆಪ್ಪನವರಿಗೆ ಒಂದು ಮಾತನ್ನು ಹೇಳಿದರು. "ಉದಯವಾಗೋ ಸೂರ್ಯನನ್ನು ಎಲ್ಲರೂ ಪೂಜೆ ಮಾಡ್ತಾರ ಮುಳಗೋ ಸೂರ್ಯನನ್ನು ಯಾರೂ ಪೂಜೆ ಮಾಡೊದಿಲ್ಲ. ಬದುಕಿನಲ್ಲಿ ನಾವು ನಮ್ಮ ಶೀಲ, ಸಚ್ಚಾರಿತ್ರ್ಯದಿಂದ ಪ್ರತಿಷ್ಠೆಯನ್ನು ಗಳಿಸಿಕೊಂಡರೆ ಮಾತ್ರ ಎಲ್ಲರ ಬಾಯಲ್ಲಿ ಉಳಿಯುತ್ತೇವೆ." ಅಂದರೆ ಮನುಷ್ಯ ಸಮಾಜದಲ್ಲಿ ಒಳ್ಳೆಯವನಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿರಬೇಕು. ಎಲ್ಲರೂ ಮೆಚ್ಚುವಂತೆ ಬಾಳಬೇಕು.[೮೪] ಎಂಬ ಅರ್ಥದಲ್ಲಿ ಹೇಳಿದ್ದಾರೆ. ಚಿಕ್ಕಪ್ಪನವರು ಹೇಳಿದ ಮಾತಿನಂತೆ ಚೆಟ್ಟಿಯವರು ನಡೆದುಕೊಂಡರು. ಕಲಾಕೃತಿಗಳನ್ನು ರಚಿಸುವುದರ ಮೂಲಕ ಚೆಟಿಯವರು ಉದಯವಾಗುವ ಸೂರ್ಯನಂತೆ ಕಲಾರಂಗದಲ್ಲಿ ಉದಯಿಸಿದ್ದಾರೆ ೧೯೪೪ರಲ್ಲಿ ಗದುಗಿನ ಶಹಪೂರಪೇಟೆಯಲ್ಲಿರುವ (ಈಗಿನ ಬಸವೇಶ್ವರನಗರ) ತಾಡಪತ್ರಿ ಹನುಮಂತರಾಯರ ಮನೆಯನ್ನು ಬಾಡಿಗೆ ಹಿಡಿದು ಸ್ವಪ್ರಯತ್ನದಿಂದ ಆ ಮನೆಯನ್ನು ಖರೀದಿಸಿಕೊಂಡು ಖಾಯಂ ಆಗಿ ಗದುಗಿನ ನಿವಾಸಿಯಾಗುಳಿದರು. ಹೀಗೆ ಚೆಟ್ಟಿಯವರು ಕಲೆಯ ಕುರಿತು ಆಳವಾಗಿ ಅಧ್ಯಯನ ಮಾಡಿದ್ದರಿಂದ ಹಾಕಿದ ಗೆರೆಗಳು ಭದ್ರತೆಯನ್ನು ಪಡೆದುಕೊಂಡವು. ಲೇಪಿಸಿದ ಬಣ್ಣಗಳು ವಿಷಯ ಸಂಯೋಜನೆಗೆ ತಕ್ಕಂತೆ ಲೇಪನಗೊಂಡವು. ಇದೇ ಸಂದರ್ಭದದಲ್ಲಿ ಕಲಾತಪಸ್ವಿ ಶ್ರೀ ಟಿ.ಪಿ.ಅಕ್ಕಿಯವರು ಗದುಗಿನ ಕಲಾ ಚರಿತ್ರೆಯ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತೆ ವಿಜಯ ಕಲಾಮಂದಿರವನ್ನು ೧೯೪೭ರಲ್ಲಿ ಸ್ಥಾಪಿಸಿದರು. ಈ ಶಾಲೆಯಲ್ಲಿ ಚಿತ್ರಕಲಾ ಅಭ್ಯಾಸದ ಜೊತೆಗೆ ಮೂರ್ತಿಶಿಲ್ಪ, ಚಿತ್ರಕಲೆಯಲ್ಲಿ ಡಿಪ್ಲೋಮಾ ಕಲಾಶಿಕ್ಷಣ ತರಬೇತಿಯ ಡಿ.ಟಿ.ಸಿ. ಡಿ.ಎಂ. ವರ್ಗಗಳನ್ನು ಪ್ರಾರಂಭಿಸಿದರು.[೮೫] ವಿಜಯ ಕಲಾಮಂದಿರದಲ್ಲಿ ಸುಮಾರು ಮೂವತ್ತೆರಡು ವರ್ಷಗಳ ವರೆಗೆ ಕಲಾಶಿಕ್ಷಕರಾಗಿ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಸೌಭಾಗ್ಯ ನನಗೆ ಒದಗಿ ಬಂದಿತ್ತು. ಶ್ರೀ ಅಕ್ಕಿ ಮಾಸ್ತರರು ನನ್ನನ್ನು ಮುರಿಗೆಪ್ಪಣ್ಣಾ ಎಂದೇ ಕೂಗುತ್ತಿದ್ದರು. ಆ ಕೂಗಿನಲ್ಲಿ ಭ್ರಾತೃವಾತ್ಸಲ್ಯ ಅಡಗಿದೆ ಎಂದು ಚೆಟ್ಟಿಯವರ ಮಾತು ಇಂಥ ಪ್ರೀತಿಯಿಂದ ಚೆಟ್ಟಿಯವರು ವಿಜಯ ಕಲಾಮಂದಿರದಲ್ಲಿ ಸಾಕಷ್ಟು ದುಡಿದರು. ಚೆಟ್ಟಿಯವರ ಉತ್ತಮ ಬೋಧನೆಯನ್ನು ಮಾಡುವುದರ ಜೋತೆಗೆ ವಿಜಯ ಕಲಾಮಂದಿರಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು.

ಶಿಸ್ತಿನ ಸಿಪಾಯಿಗಳಾದ ಚೆಟ್ಟಿಯವರು ಪಾಠಬೋಧನೆಮಾಡುವ ಸಂದರ್ಭದಲ್ಲಿ ಮುಂಬಯಿಯ ಸರ್.ಜೆ.ಜೆ.ಕಲಾಶಾಲೆಯ ಮಾದರಿಯನ್ನೇ ಅನುಸರಿಸಿದ್ದರು. ಅದೇ ಶಿಸ್ತಿನ ಪೋಷಾಕು, ಮಾತು ಕಡಿಮೆ ಕೆಲಸ ಜಾಸ್ತಿ, ಚೆಟ್ಟಿಯವರು ಯಾವಾಗಲೂ ಹೇಳುವ ಮಾತುಗಳಿವು ಸದಾ ಕ್ರಿಯಾಶೀಲರಾದ ಚೆಟ್ಟಿಯವರು ತಮ್ಮ ಚಿತ್ರಗಳ ಮುಖಾಂತರ ಇಡಿಲೋಕವನ್ನು ಮಾತನಾಡಿಸಿದರು.[೮೬] ಇಂಥ ಒಬ್ಬ ನೈಜ ಶೈಲಿಯ ಕಲಾವಿದ ಮನಷ್ಯರು ಮತ್ತು ಪ್ರಾಣಿಗಳ ದೇಹರಚನೆಯನ್ನು ಆಕೃತಿಗಳ ಉಬ್ಬುತಗ್ಗುಗಳನ್ನು ನೆರಳು ಬೆಳಕನ್ನು ಅತ್ಯಂತ ನೈಜವಾಗಿ ಚಿತ್ರಿಸಿ ವಿದ್ಯಾರ್ಥಿಗಳಿಗೆ ತೋರಿಸುತ್ತಿದ್ದರು. ಚೆಟ್ಟಿಯವರ ಜೊತೆ ಇದ್ದಾಗ ಅನಾಟಮಿ ಅಭ್ಯಾಸ ಮಾಡಬೇಕೆನ್ರಿ ಅಂತ ಕೇಳಿದಾಗ ಏನೋಪಾ ಮರಾಯ ಅದಿಲ್ದ ಹ್ಯಾಂಗ್ ಯಾವ್ದರ ಚಿತ್ರ ಚಿತ್ರಿಸಲಿಕ್ಕೆ ಸಾಧ್ಯ ಅದ ಏನು ? ಎನ್ನುತ್ತಿದ್ದರು. ಚಿತ್ರಕಲೆಯ ಮೂಲಭೂತವಾದ ವ್ಯಾಕರಣವೆಂದರೆ ನೈಜ ಚಿತ್ರಕಲೆ ಎಂದು ಹೇಳಬಹುದು. ಆದರೆ ಈಗಿನ

---

೮೪. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿಯವರ ಕಲಾ ಬದುಕು ಮತ್ತು ಕಲಾ ಕೃತಿಗಳ ಪು.ಸಂ. ೯೮

೮೫. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿಯವರ ಕಲಾ ಬದುಕು ಮತ್ತು ಕಲಾ ಕೃತಿಗಳ ಪು.ಸಂ. ೯೮

೮೬. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ. ಚೆಟ್ಟಿಯವರ ಕಲಾ ಬದುಕು ಮತ್ತು ಕಲಾ ಕೃತಿಗಳ ಪು.ಸಂ. ೧೦೦

ಕಲಾವಿದ್ಯಾರ್ಥಿಗಳು ಇದಾವುದನ್ನು ಅರಿಯದೆ ಬೇಗನೆ ನವ್ಯಕಲೆಯ ಶೈಲಿಯಲ್ಲಿ ಚಿತ್ರಗಳನ್ನು ರಚಿಸಿ ಹೆಸರು ಮಾಡಬೇಕೆನ್ನುವ ತವಕ ಹೊಂದಿದ್ದಾರೆ. ಕಲಾವಿದ ನವ್ಯಕಲೆಯತ್ತ ಸಾಗಬೇಕಾದರೆ ವ್ಯಾಕರಣಬದ್ಧವಾದ ಚಿತ್ರಕಲಾ ಅಭ್ಯಾಸದ ಅವಶ್ಯಕತೆ ಇದೆ. ನವ್ಯ ಕಲಾ ಶೈಲಿಯನ್ನು ಅಳವಡಿಸಿಕೊಂಡಂಥ ಎಲ್ಲ ಹಿರಿಯ ಕಲಾವಿದರೂ ಮೊದಲು ವ್ಯಾಕರಣ ಬದ್ಧವಾದ ಚಿತ್ರಕಲಾ ಅಭ್ಯಾಸವನ್ನು ಮಾಡಿದವರೆ. ಉದಾ : ಕೆ.ಕೆ. ಹೆಬ್ಬಾರ, ಆರ್. ಎಂ. ಹಡಪದ, ಜೆ.ಎಸ್.ಖಂಡೆರಾವ್, ವ್ಹಿ.ಬಿ.ಹಿರೇಗೌಡರ. ಬಿ.ಕೆ.ಎಸ್.ವರ್ಮ, ಎಂ.ಬಿ.ಪಾಟೀಲ ಮುಂತಾದವರನ್ನು ಹೆಸರಿಸಬಹುದು.

ಚೆಟ್ಟಿಯವರು ವಿದ್ಯಾರ್ಥಿಗಳಿಗೆ ಪಾಠಬೋಧನೆ ಮಾಡುವಾಗ ನಿಸರ್ಗಚಿತ್ರ, ಭಾವಚಿತ್ರ, ವ್ಯಕ್ತಿಚಿತ್ರ, ಸಂಯೋಜನಾ ಚಿತ್ರ ಯಾವುದೇ ವಿಷಯವನ್ನು ಪ್ರತ್ಯಕ್ಷತೆ ನೀಡುವುದರ ಮೂಲಕ, ಸ್ವತಃ ತಾವೇ ಮಾಡಿತೋರಿಸುತ್ತಿದ್ದರು. ನಮ್ಮನ್ನು ಕೆಲ ಸ್ಥಳಗಳಿಗೆ ಕೆರೆದುಕೊಂಡು, ಹೋಗಿ ಗುಡ್ಡ ಹ್ಯಾಂಗ ಕಾಣಸ್ತದ ಹಂಗ ಬಣ್ಣಗಳನ್ನು ಹಾಕಬೇಕು, ಭಾವಚಿತ್ರ ಮಾಡುವಾಗ ಭಾವಚಿತ್ರ ಹ್ಯಾಂಗ್ ಕಾಣಿಸ್ತದ ಹಂಗ ಬಣ್ಣಗಳನ್ನು ಹಾಕಬೇಕು. ನೆರಳು-ಬೆಳಕು ಹ್ಯಾಂಗ ಅದ ಹಂಗ ಕಲಾಕೃತಿಗಳನ್ನು ರಚಿಸಬೇಕು ಎಂದು ಕೆಲವು ಪ್ರಶ್ನೆಗಳನ್ನು ಕೇಳುತ್ತ ನಮಗೆ ಮನವರಿಗೆ ಆಗುವ ರೀತಿಯಲ್ಲಿ ಹೇಳುತ್ತಿದ್ದರು.[೮೭] ಚೆಟ್ಟಿಗುರುಗಳಿಗೆ ಬಣ್ಣಗಳ ಬಗ್ಗೆ ಆಳವಾದ ಜ್ಞಾನವಿತ್ತು. ಬಣ್ಣದ ಹಲಗೆ (ಪ್ಯಾಲೆಟ್) ಮೇಲೆ ಯಾವ ಬಣ್ಣದ ಹತ್ತಿರ ಯಾವ ಬಣ್ಣ ಇರಬೇಕು ಎಂಬುದನ್ನು ಹೇಳುತ್ತಿದ್ದರು. ನೋಡಲಾಗದೇ ತಮಗೆ ಯಾವ ಬಣ್ಣ ಬೇಕು ಆ ಬಣ್ಣ ಮೇಲೆ ಕೈ ಹೋಗುತ್ತಿತ್ತು. ಅವರು ಬಣ್ಣಗಳನ್ನು ಮಿಶ್ರಣ ಮಾಡುವ ರೀತಿ ಬಣ್ಣದ ಪ್ಲೇಟನ್ನು ಹೇಗೆ ಸ್ವಚ್ಛವಾಗಿಡಬೇಕು. ಉಪಯೋಗಿಸುವ ವಿಧಾನ, ಕಲಾಕೃತಿಗಳಿಗೆ ಬಣ್ಣ ಲೇಫಿಸುವುವ ರೀತಿಯನ್ನು ಹೇಳುವಾಗ ಎಲ್ಲರಿಗೂ ಬಹಳಷ್ಟು ಸಂತೋಷವಾಗುತ್ತಿತ್ತು.[೮೮] ಎಂದು ಕೆ.ವಿ.ಕುಂದಗೋಳ ಅವರು ತಮ್ಮ ಗುರುಗಳಾದ ಚೆಟ್ಟಿಯವರ ಕುರಿತು ಹೆಮ್ಮೆಯಿಂದ ಹೇಳುತ್ತಾರೆ.

ಸದಾ ಕಲಾಕೃತಿ ರಚನೆಯಲ್ಲಿರುವ ಚೆಟ್ಟಿಯವರು ಭಾವಚಿತ್ರ ರಚಿಸುವಾಗ ಲೈಫ್ ಚಿತ್ರದ ಪ್ರಾತ್ಯಕ್ಷತೆ ನೀಡುವಾಗ ಎಲ್ಲರೂ ನೋಡುವುದೇ ನಮಗೊಂದು ಹಬ್ಬವಾಗುತ್ತಿತ್ತು ಎಂದು ಡಾ. ಎಸ್.ಸಿ.ಪಾಟೀಲ ಅವರು ತಮ್ಮ ಗುರುಗಳ ಬಗ್ಗೆ ಬರೆದಿದ್ದಾರೆ.[೮೯] ಹೀಗೆ ಅನೇಕ ವಿದ್ಯಾರ್ಥಿಗಳಿಗೆ ಚೆಟ್ಟಿಯವರ ಬೋಧನೆ ಮಾಡುವಾಗ ಎಲ್ಲರಿಗೂ ತಿಳಿಯುವ ಹಾಗೆ ಕರ್ತವ್ಯ ಪ್ರಜ್ಞೆ ಬೆಳೆಸುತ್ತಿದ್ದರು. ಪಾಠದೊಂದಿಗೆ ಶಿಸ್ತು, ಸಂಯಮ, ಸತ್‌ಚಾರಿತ್ರ್ಯ ಕುರಿತು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯ ಕುರಿತು ಅವರ ಉನ್ನತಿಗಾಗಿ ಶ್ರಮಿಸುತ್ತಿದ್ದರು. ಹಾಗೂ "ಚೆಟ್ಟಿಯವರು ವಿಜಯ ಕಲಾಮಂದಿರದಲ್ಲಿ ೧೯೪೭ರಿಂದ ೧೯೭೨ರವರೆಗೆ ಉಪಪ್ರಾಚಾರ್ಯರಾಗಿ ಉತ್ತಮ ಸೇವೆ ಸಲ್ಲಿಸುತ್ತ ಕಲಾಮಂದಿರದ ಸರ್ವತೋಮ್ಮುಖ ಬೆಳವಣಿಗೆಗೆ ಶ್ರಮಿಸುತ್ತಿದ್ದರು ಎಂದು ಟಿ.ಪಿ.ಅಕ್ಕಿಯವರೇ ಹೇಳುತ್ತಿದ್ದರು ಎಂದು ಡಾ. ಲಕ್ಷ್ಮಿದೇವಿ ಗವಾಯಿಯವರು ಉಲ್ಲೇಖಿಸಿದ್ದಾರೆ.[೯೦] ಚೆಟ್ಟಿಯವರು ವಿಜಯ ಕಲಾಮಂದಿರದಲ್ಲಿ

೮೭. ಎಂ.ಆರ್. ಬಾಳಿಕಾಯಿ ಅವರ ಸಂದರ್ಶನ ದಿನಾಂಕ ೨೪-೧೧-೨೦೦೯

೮೮. ಕೆ.ವಿ. ಕುಂದಗೂಳ ಅವರ ಸಂದರ್ಶನ ದಿನಾಂಕ ೨೯-೧೨-೨೦೦೯

೮೯. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ.ಚೆಟ್ಟಿ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೧೦೩

೯೦. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ.ಚೆಟ್ಟಿ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೧೦೨

ಅಧ್ಯಾಪಕರಾಗಿ ಕೆಲಸ ಮಾಡುತ್ತ ಮನೆಯಲ್ಲಿ ಅನೇಕ ಸಾಧು ಸತ್‌ಪುರುಷರ ಭಾವಚಿತ್ರಗಳನ್ನು ಮಾಡುತ್ತಿದ್ದರು. ಯಾವಾಗಲೂ ಕಲಾಕೃತಿ ರಚನೆಯಲ್ಲಿ ತೊಡುಗುತ್ತಿದ್ದರು. ರಜೆಯಲ್ಲಿ ವಿದ್ಯಾರ್ಥಿಗಳಿಗೆ ಮನೆಗೆ ಕರೆಸಿ ತಾವು ರಚಿಸುತ್ತಿದ್ದ ಕಲಾಕೃತಿಗಳ ಕುರಿತು ಮನೆಯಲ್ಲಿ ಹೇಳುತ್ತಿದ್ದರು. ಹೀಗೆ ಸದಾ ಕಲಾಕೃತಿಗಳನ್ನು ರಚಿಸುವುದರ ಮೂಲಕ ರಾಜ್ಯ ಹೊರರಾಜ್ಯಗಳಲ್ಲಿ ಹೆಸರು ಪಡೆದರು.

ಚೆಟ್ಟಿಯವರು ಬಾಲ್ಯದಿಂದಲೂ ಚಿತ್ರಕಲೆಗಾಗಿಯೇ ತಮ್ಮ ಜೀವನದ ಬಹುಪಾಲನ್ನು ಮೀಸಲಾಗಿಟ್ಟವರು. ಸಾವಿರಾರು ಕಲಾಕೃತಿಗಳನ್ನು ತೈಲವರ್ಣ, ಜಲವರ್ಣ, ಪೆಸ್ಟಲ್, ಕ್ರೆಯಾನ್ಸ್, ಪೆನ್ಸಿಲ್ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ. ಭಾವಚಿತ್ರ ವ್ಯಕ್ತಿಚಿತ್ರಗಳನ್ನು ರಚಿಸಿದ್ದಾರೆ. ವೀರಶೈವ ಪುರಾಣಗಳ ಅನೇಕ ಘಟನೆಗಳ ಕುರಿತು ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ಅನೇಕ ಸಾಧುಸತ್‌ಪುರುಷರ ಕಲಾಕೃತಿಗಳು, ದೇವ-ದೇವತೆಗಳ, ರಾಜ ಮಹಾರಾಜರ ಕಲಾಕೃತಿಗಳು, ಧಾರ್ಮಿಕ, ಸಾಮಾಜಿಕ, ಪೌರಾಣಿಕ, ನಿಸರ್ಗಚಿತ್ರಗಳು ಹೀಗೆ ಹಲವಾರು ರೀತಿಯ ಬೇರೆ ಬೇರೆ ವಿಷಯಗಳ ಕುರಿತು ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ಹೀಗೆ ಚೆಟ್ಟಿಯವರು ಸಾವಿರಾರು ಕಲಾಕೃತಿಗಳನ್ನು ರಚಿಸಿದ್ದು ಹಲವಾರು ಮಠಮಂದಿರಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಹಲವಾರು ಶ್ರೀಮಂತ ವ್ಯಕ್ತಿಗಳ ಮನೆಗಳಲ್ಲಿ ಸಂಗ್ರಹಗೊಂಡಿವೆ. ಚೆಟ್ಟಿಯವರು ರಚಿಸಿದ ಅನೇಕ ಕಲಾಕೃತಿಗಳು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿವೆ. ಚಿತ್ರಕಲಾ ಅಂತಿಮ ಪರೀಕ್ಷೆಯಲ್ಲಿ ಮುಂಬಯಿ ಪ್ರಾಂತ್ಯಕ್ಕೆ ಪ್ರಥಮವಾಗಿ ಒಂದು ರಜತ ಹಾಗೂ ಚಿನ್ನದ ಪದಕ ಗಳಿಸುವದಲ್ಲದೆ ಮೂರು ವರ್ಷ ಜೆ.ಜೆ.ಸ್ಕೂಲ್ ಆಫ್ ಆರ್ಟ್‌ನ ಫೇಲೋ ಆಗಿದ್ದರು. ಎಂಬುದು ಸರ್ವವಿಧಿತ ಅಲ್ಲಿಯೇ ಅವರು ಚಿತ್ರಿಸಿದ ಮರದ ಬೊಡ್ಡೆಯ ಚಿತ್ರಕ್ಕೆ ಪ್ರಶಸ್ತಿ ಬಹುಮಾನ ಅಲ್ಲದೆ ಪ್ರಿನ್ಸಿಪಾಲ್ ಸೋಲೋಮನ್‌ರಿಂದ ಪ್ರಶಂಸೆ. ಇದೆ ಚಿತ್ರಕ್ಕೆ ಇಂಗ್ಲೆಂಡಿನ ಅಂತಾರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದಲ್ಲಿ ಪ್ರಶಸ್ತಿಯೊಂದಿಗೆ ಬಹುಮಾನ ಪಡೆದುಕೊಂಡಿದ್ದಾರೆ. ಬಾಳಾಸಾಹೇಬ ಮಹಾರಾಜರಿಂದ ೫೦೦ರೂಪಾಯಿ ಬಹುಮಾನದೊಂದಿಗೆ ಶ್ರೇಷ್ಠ ಕಲಾವಿನೆಂಬ ಸನ್ಮಾನಕ್ಕೆ ಒಳಗಾದರು. ಅಕ್ಕಲಕೋಟೆಯ ಮಹಾರಾಜರಿಂದ ಬೊಂಬಾದೇವಿ ಹಾಗೂ ಸಿದ್ಧರಾಮೇಶ್ವರ ಮಂದಿರದ ಚಿತ್ರಗಳಿಗೆ ಚಿನ್ನದ ಪದಕ ಮತ್ತು ಪ್ರಶಸ್ತಿ ಹಾಗೂ ಬಹುಮಾನಗಳನ್ನು ಪಡೆದಿದ್ದಾರೆ. ೧೯೩೬ ರಿಂದ ೧೯೩೮ರವರೆಗೆ ಮುಂಬಯಿ ಸರಕಾರದ ಆರ್ಟ್ ಸೊಸಾಯಿಟಿಯಿಂದ ಸತತವಾಗಿ ಇವರ ಕಲಾಕೃತಿಗಳಿಗೆ ಬಹುಮಾನಗಳು ಬಂದಿವೆ. ಗ್ವಾಲಿಯರದ ಕಾಳಿದಾಸ ಸೊಸಾಯಿಟಿಯ ಬಹುಮಾನವನ್ನು ಪಡೆದಿದ್ದಾರೆ. ಮೈಸೂರು ದಸರಾ ಚಿತ್ರಕಲಾ ಪ್ರದರ್ಶನದಲ್ಲಿ ಪ್ರಶಸ್ತಿ ಪಡೆದುಕೊಂಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರದರ್ಶನದಲ್ಲಿ ಬಹುಮಾನ ಪಡೆದುಕೊಂಡಿದ್ದಾರೆ. ಹಲವಾರು ಪ್ರಶಸ್ತಿಗಳನ್ನು ಚೆಟ್ಟಿಯವರು ತಮ್ಮದಾಗಿಸಿಕೊಂಡಿದ್ದಾರೆ.

ಚೆಟ್ಟಿಯವರ ಕಲಾ ಪ್ರತಿಭೆಯನ್ನು ಮೆಚ್ಚಿ ಹಲವಾರು ಸಂಘ-ಸಂಸ್ಥೆಗಳವರು, ಮಠಮಾನ್ಯಗಳು ಸಾರ್ವಜನಿಕರು ಸನ್ಮಾನಿಸಿ ಕಲಾತಪಸ್ವಿ ಇತ್ಯಾದಿ ಬಿರುದುಗಳನ್ನಿತ್ತು ಹೊಗಳಿದ್ದಾರೆ. ಅವುಗಳಲ್ಲಿ ಧಾರವಾಡದ ಶ್ರೀ ಎಂ.ಪಿ.ಮಠ, ಹುಬ್ಬಳ್ಳಿ ಮೂರುಸಾವಿರ ಮಠ, ತೇಲಸಂಗದ ಹಿರೇಮಠ, ಜೇವರ್ಗಿಯ ಷಣ್ಮುಖ ಶಿವಯೋಗಿಗಳು,, ಹುಬ್ಬಳ್ಳಿಯ ಶ್ರೀ ಮಿಣಜಗಿಯವರ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಸ್ಕೂಲ್ ಆಫ್ ಆರ್ಟ್ ಧಾರವಾಡ, ವಿಜಯ ಕಲಾಮಂದಿರ ಗದಗ, ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಗದಗ ಹೀಗೆ ಹತ್ತು ಹಲವು ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು

ಪಡೆದುಕೊಂಡಿದ್ದಾರೆ. ೧೯೩೬ – Gladstone Soloman Scholarship Found Exhibition, ೧೯೩೯– Atrand Home hand Exhibition, Gold Medial, ೧೯೬೫ ರಲ್ಲಿ ಅಖಿಲ ಭಾರತ ೪೫ನೇ ಕನ್ನಡ ಸಾಹಿತ್ಯ ಸಮ್ಮೇಳನ ಕಾರವಾರ, ೧೯೬೮ರಲ್ಲಿ ಮೈಸೂರು ರಾಜ್ಯದ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೭೫Mysor Dasara Industrial and Cultural Exhibition, Mysore ೧೯೮೦ರಲ್ಲಿ ಏಳನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ, ೧೯೮೩ರಲ್ಲಿ ಇಪ್ಪತ್ತನೆಯ ಮಹಾ ಅಧಿವೇಶನ ಅಖಿಲ ಭಾರತ ವೀರಶೈವ ಮಹಾಸಭಾ ಮೈಸೂರು, ೧೯೮೮ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಬೆಂಗಳೂರು, ೧೯೯೬ರಲ್ಲಿ ಎಂ.ಟಿ.ವಿ.ಆಚಾರ್ಯ ಪ್ರಶಸ್ತಿ, ೧೯೯೬ರಲ್ಲಿ ವೆಂಕಟಪ್ಪ ಪ್ರಶಸ್ತಿ[೯೧] ಮುಂತಾದ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ಚೆಟ್ಟಿಯವರು ರಚಿಸಿದ ಸಾವಿರಾರು ಕಲಾಕೃತಿಗಳು ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಸಂಚರಿಸಿದ ಅನುಭವವುಳ್ಳ ಇವರ ಕಲಾಕೃತಿಗಳು ದೆಹಲಿ, ಗ್ವಾಲಿಯರ್, ಇಂದೂರ್, ಮುಂಬಯಿ, ಸೊಲ್ಲಾಪೂರ, ಬಳ್ಳಾರಿ, ಅಕ್ಕಲಕೋಟೆ, ಬೆಂಗಳೂರು, ಧಾರವಾಡ, ಅಥಣಿ, ಶ್ರವಣಬೆಳಗೋಳ[೯೨] ಬಿಜಾಪೂರ, ಬೀದರ, ಬಾಗಲಕೋಟೆ, ಬೆಳಗಾವಿ, ದಾವಣಗೆರೆ, ಗದಗ, ಹಾಸನ, ಕಾರವಾರ, ಮೈಸೂರು, ರಾಯಚೂರು, ತುಮಕೂರು, ಮಂಗಳೂರು, ಗೋಕಾಕ, ನಿಡಸೋಸಿ, ಸಾವಳಗಿ, ಸಂಕೇಶ್ವರ, ನಿಪ್ಪಾಣಿ, ತೆಲಸಂಗ ಕಿತ್ತೂರ, ಅವರಾದಿ, ಅಣ್ಣಿಗೇರಿ, ಮುಳಗುಂದ, ಮುಂಡರಗಿ, ನರಗುಂದ ಉಳವಿ, ಎಡೇಯೂರ, ಧರ್ಮಸ್ಥಳ[೯೩] ಮುಂತಾದ ಅನೇಕ ಕಡೆ ರಾಜ್ಯ ಹೊರ ರಾಜ್ಯದಲ್ಲಿ ಚೆಟ್ಟಿಯವರ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಚೆಟ್ಟಿಯವರು ರಚಿಸಿದ ಕಲಾಕೃತಿಗಳಲ್ಲಿ ಧಾರ್ಮಿಕ, ಪೌರಾಣಿಕ, ಸಾಮಾಜಿಕ, ಕಲಾಕೃತಿಗಳನ್ನು ರಚಿಸಿದ್ದಾರೆ. ಅಕ್ಕಮಹಾದೇವಿ, ಶ್ರವಣಕುಮಾರನ ಪಿತೃಭಕ್ತಿ, ಬುದ್ಧನ ಉಪದೇಶ, ನಟರಾಜ, ಜೋಗತಿ ನೃತ್ಯ, ಭಸ್ಮಾಸುರ ಮೋಹಿನಿ, ಕಿತ್ತೂರ ರಾಣಿ ಚನ್ನಮ್ಮಾ ಕಲಬುರ್ಗಿ ಮಸೀದಿ, ಶಿವಾನುಭವ ಮಂಟಪದಲ್ಲಿ ಅಲ್ಲಮಪ್ರಭುದೇವರು, ವೀಣಾಪಾಣಿ, ಲಂಭಾಣಿ ಮಹಿಳೆ, ಯಡಿಯೂರ ಸಿದ್ಧಲಿಂಗೇಶ್ವರ, ಜಗಜ್ಯೋತಿ ಬಸವೇಶ್ವರ ಮುಂತಾದ ಶ್ರೇಷ್ಠ ಕಲಾಕೃತಿಗಳೊಂದಿಗೆ ಹಲವಾರು ಪುಣ್ಯ ಪುರುಷರ ಭಾವಚಿತ್ರಗಳು ನಿಸರ್ಗಚಿತ್ರಗಳು ರೇಖಾಚಿತ್ರಗಳು ಮತ್ತು ಸಂಯೋಜನಾ ಚಿತ್ರಗಳನ್ನು ರಚಿಸಿ ಕುಂಚ ಬ್ರಹ್ಮನಾಗಿದ್ದಾರೆ. ಚೆಟ್ಟಿಯವರ ಸುಮಾರು ಹತ್ತುಸಾವಿರಕ್ಕೂ ಹೆಚ್ಚು ಚಿತ್ರಗಳನ್ನು ನೋಡಿದ ಹಿರಿಯ ಸಾಹತಿ ಅ.ನ.ಕೃಷ್ಣರಾಯರು ಚೆಟ್ಟಿಯವರು "ಕನ್ನಡ ನಾಡಿನ ರವಿವರ್ಮ" ಎಂದು ಹೊಗಳಿದ್ದಾರೆ. ಕಲೆಯ ವ್ಯಾಕರಣದಲ್ಲಿ ಅಭಿವ್ಯಕ್ತಿಗಿಂತ ಶರಣ ಪರಂಪರೆಯ ಕಥಾವಸ್ತುವಿಗೆ ಚಿತ್ರರೂಪ ನೀಡಿದವರಲ್ಲಿ ಚೆಟ್ಟಿಯವರು ಮೊದಲಿಗರು[೯೪] ಎನ್ನಬಹುದು.

ಚೆಟ್ಟಿಯವರ ಕಲಾವೈಖರಿಯನ್ನು ಕಂಡು ರ್‍ಯಾಂಗ್ಲರ್ ಡಿ.ಸಿ. ಪಾವಟೆಯವರು ಮಂತ್ರಮುಗ್ಧರಾಗಿ "ವಿದೇಶಕ್ಕೆ ಹೋಗಿ ಬಂದವರಿಗಿಂತಲೂ ಇಲ್ಲಿಯೇ ಇರುವ ಮುರಿಗೆಪ್ಪನವರ ಚಿತ್ರಗಳು ಎಷ್ಟೋ

---

೯೧. ಡಾ. ಲಕ್ಷ್ಮೀದೇವಿ ಗವಾಯಿ ಎಂ.ಎ.ಚೆಟ್ಟಿ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೧೦೨
೯೨. ಅಶೋಕ ಅಕ್ಕಿ ಸಂ, ಕೃತಪುರ ಕಲಾವೈಭವ. ಚಿತ್ರ ಮತ್ತು ಶಿಲ್ಪ ಕಲಾವಿದರ ಕೈಪಿಡಿ, ಲಕ್ಕುಂಡಿ ಉತ್ಸವ ೨೦೦೯ ಪು.ಸಂ. ೧೩
೯೩. ಡಾ. ಲಕ್ಷ್ಮೀದೇವಿ ಗವಾಯಿಲೇ ಎಂ.ಎ. ಚೆಟ್ಟಿ ಕಲಾಬದುಕು ಮತ್ತು ಕಲಾ ಕೃತಿಗಳು ಪು.ಸಂ. ೧೩
೯೪. ಅಶೋಕ ಅಕ್ಕಿ ಸಂ, ಕೃತಪುರ ಕಲಾವೈಭವ. ಚಿತ್ರ ಮತ್ತು ಶಿಲ್ಪ ಕಲಾವಿದರ ಕೈಪಿಡಿ, ಲಕ್ಕುಂಡಿ ಉತ್ಸವ ೨೦೦೯ ಪು.ಸಂ. ೧೩

ಪಾಲು ಮೇಲಾಗಿವೆ" ಎಂದು ಪ್ರಶಂಸಿದ್ದಾರೆ. ಚೆಟ್ಟಿಯವರ ಕಲಾಜೀವನ ಅಮೋಘವಾಗಿದ್ದರೂ ಕೂಡಾ ಅವರಿಗೆ ಸಲ್ಲಬೇಕಾದ ಗೌರವ ಸಂದಿಲ್ಲ ಎಂದೇ ಹೇಳಗಬೇಕಾಗಿದೆ. ಕಾಲನ ಮಹಿಮೆಯೋ ಇಲ್ಲವೆ ಕೇವಲ ಕಲಾಕೃತಿಗಳನ್ನು ರಚಿಸುವುದರಲ್ಲಿಯೇ ತಮ್ಮ ಜೀವನವನ್ನು ಸವೆಸಿದ ಮುಗ್ಧ, ಪ್ರಾಮಾಣಿಕ ಕಲಾಜೀವಿಯ ದುರ್ದೈವವೋ ಗೊತ್ತಾಗುತ್ತಿಲ್ಲ. ಚೆಟ್ಟಿಯವರಂತಹ ಖ್ಯಾತ ಕಲಾವಿದರನ್ನು ಕಂಡು ಕರ್ನಾಟಕ ಅದರಲ್ಲೂ ಗದುಗಿನಂತಹ ಕಲಾಪೋಷಕರ ನಾಡಿನಲ್ಲಿ ಹಿರಿಯ ಜೀವಿ ಮುರಿಗೆಪ್ಪ ಚೆಟ್ಟಿಯವರಿಗೆ ಗೌರವ ದೊರಕಲಿಲ್ಲವೆಂದೇ ಹೇಳಬೇಕಾಗಿದೆ. ಕೇವಲ ಕಲಾಕೃತಿಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರೆ ಸಾಲದು, ಅವರ ವ್ಯಯಕ್ತಿಕ ಬದುಕು ಹೇಗಿದೆ ಎಂಬುದನ್ನು ಎಲ್ಲರೂ ಜಿಜ್ಞಾಸೆಗೆ ಒಳಪಡಿಸಬೇಕು. ಅಂದಾಗ ಅದು ಕಲಾವಿದನಿಗೆ ನೀಡಿದ ಗೌರವ. ಚೆಟ್ಟಿಯವರ ಹೆಸರಿನಲ್ಲಿ ಗದುಗಿನಲ್ಲಿ ಇನ್ನೊವರೆಗೂ ಒಂದು ಗ್ಯಾಲರಿ ಸ್ಥಾಪನೆಗೊಳ್ಳದಿರುವುದಕ್ಕೆ ಕಲಾಕ್ಷೇತ್ರದ ಎಲ್ಲ ವರ್ಗ, ಕಲಾವಿದರಲ್ಲೂ ಅಸಮಾಧಾನವಿದೆ. ಗಣ್ಯರು, ರಾಜಕೀಯ ಮುಖಂಡರು, ಅಧಿಕಾರಿಗಳು ಇತ್ತ ಗಮನಹರಿಸುವುದು ಅತ್ಯವಶ್ಯಕವಾಗಿದೆ. ಚೆಟ್ಟಿಯವರ ಕಲಾಕೃತಿಗಳನ್ನು ಮೆಚ್ಚಿ ಅನೇಕ ಸಾಹಿತಿಗಳು ಗಣ್ಯರು ಮಠಮಾನ್ಯರು ರಾಜಕಾರಣಿಗಳು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಹೀಗೆ ಎಂ.ಎ. ಚೆಟ್ಟಿಯವರು ಜೀವನದುದ್ದಕ್ಕೂ ಕಲಾಕೃತಿಗಳನ್ನು ರಚಿಸುತ್ತಾ ತಮ್ಮದೇ ಆದ ಕಲಾವೈಶಿಷ್ಟತೆಯನ್ನು ತೋರಿಸಿದ್ದಾರೆ. ಲಕ್ಷಾಂತರ ಬೆಲೆ ಬಾಳುವ ಇವರ ಕಲಾಕೃತಿಗಳು ಅಮೂಲ್ಯವಾದ ಕೊಡುಗೆ ನೀಡಿದ್ದಾರೆ. ಇವರು ಅನೇಕ ಕಲಾಕೃತಿಗಳನ್ನು ವಿವಿಧ ರೀತಿಯಲ್ಲಿ ರಚಿಸಿದ್ದಾರೆ. ಅವುಗಳನ್ನು ಈ ಕೆಳಗನಂತೆ ವಿಂಗಡಿಸಿ ಚರ್ಚಿಸಲಾಗಿದೆ.

೧. ಸಾಧು ಸತ್ ಪುರುಷರು : ೨. ಜೀವಮಾದರಿಯ ಚಿತ್ರಗಳು : ೩. ನಿಸರ್ಗ ಚಿತ್ರ

೧. ಸಾಧು ಸತ್ ಪುರುಷರು :

ಚಿತ್ರ ೧. ಶ್ರೀ ಬಸವೇಶ್ವರರು : ಈ ಕಲಾಕೃತಿಯ ತೈಲವರ್ಣದ್ದಾಗಿದೆ. ಶ್ರೀ ಬಸವೇಶ್ವರರು ವಚನಗಳನ್ನು ಬರೆಯುವಂತೆ ತಾಳೆಗರಿಯನ್ನು ಹಿಡಿದು ಕೊಂಡಿದ್ದಾರೆ. ಬಲಗೈಯಲ್ಲಿ ಲೆಕ್ಕಣಿಕೆಯನ್ನು ಹಿಡಿದುಕೊಂಡು ಮೈಮೇಲೆ ವಿಭೂತಿ ಧರಿಸಿರುವುದು ಆಕರ್ಷಕವಾಗಿದೆ. ಕೊರಳಲ್ಲಿ ಧರಿಸಿದ ಲಂಗು ರುದ್ರಾಕ್ಷಿಯ ಸರಗಳು ಪ್ರಾಮಾಣಕ್ಕೆ ತಕ್ಕಂತೆ ರಚಿಸಿದ್ದಾರೆ. ಬಸವೇಶ್ವರರು. ಮೈ ಮೇಲೆ ಧರಿಸಿಕೊಂಡಿರುವ ಶಾಲ ಆಕರ್ಷಕವಾಗಿದೆ. ತಾಳಗರಿಗಳ ಹಸ್ತ ಪ್ರತಿಯನ್ನು ಕೆಂಪುವಸ್ತ್ರದಲ್ಲಿ ಇಟ್ಟುರುವು ತುಂಬ ಸೊಗಸಾಗಿದೆ ಬಸವೇಶ್ವರರ ಎಡಗಡೆಗೆ ಸಿಂಹದ ಶಿಲ್ಪವು ಇದೆ ಬಲಗಡೆಗೆ ಒಂದು ಸಿಂಹದ ಚಿತ್ರವಿದೆ. ಹಿನ್ನಲೆಯಾಗಿ ಹಳೆಯ ಶಿಲ್ಪಗಳು ಕಾಣುವಂತೆ ರಚಿಸಿದ್ದಾರೆ. ಈ ಕಲಾಕೃತಿಯ ದಿನದರ್ಶಿಕೆಯಾಗಿ ಮುದ್ರಣಗೊಂಡಿದೆ ಈ ಕಲಾಕೃತಿಯು ಅಡವಿಸೊಮಾಪೂರದ ಒಂದು ಚಿಕ್ಕ ಅಂಗಡಿಯಲ್ಲಿದೆ.

ಚಿತ್ರ : ೨. ಶ್ರೀ ಮಹಾಂತಪ್ಪಗಳರವರು : ಈ ಕಲಾಕೃತಿಯು 4×6 ಅಳತೆಯದಾಗಿದ್ದು ತೈಲವರ್ಣದಿಂದ ಕಲಾವಿದ ಚೆಟ್ಟಿಯವರು ಪೂರ್ಣಗೊಳಿಸಿದ್ದಾರೆ. ಶ್ರೀ ಮಹಾಂತಪ್ಪನವರು ಕ್ಯಾವಿ ಬಟ್ಟೆಯನ್ನು ಧರಿಸಿಕೊಂಡು ಸುಂದರವಾದ ವನದಲ್ಲಿ ನಿಂತಿದ್ದಾರೆ. ಕೊರಳಲ್ಲಿ ಕ್ಯಾವಿಬಟ್ಟೆಯಲ್ಲಿ ಲಿಂಗುಧರಿಸಿದ್ದಾರೆ. ಹಣೆಗೆ ವಿಭೂತಿಯು ಆಕರ್ಷಕವಾಗಿದೆ. ಕೈ ಕಾಲುಗಳು ನೈಜ ರೀತಿಯಲ್ಲಿವೆ. ಉಟ್ಟಿರುವ ಬಟ್ಟೆಯ ನಿರಿಗೆಗಳು ನಯವಾಗಿ ರಚಿಸಿದ್ದಾರೆ. ಈ ಕಲಾಕೃತಿಯು ಧಾರವಾಡದ

ಶ್ರೀ ಮೂರುಘಾ ಮಠದಲ್ಲಿ ಸಂಗ್ರಹಗೊಂಡಿದೆ. ಮಹಾಂತಪನವರ ಈ ಚಿತ್ರವು ಕ್ಯಾನವಾಸಕ್ಕೆ ತಕ್ಕಂತೆ ಪ್ರಮಾಣಬದ್ಧವಾಗಿದೆ.

ಚಿತ್ರ : ೩. ಶ್ರೀ ಮೃತ್ಯುಂಜಯ ಸ್ವಾಮಿಗಳು : ಈ ಕಲಾಕೃತಿಯ ಅಳತೆಯದಾಗಿದೆ. ತೈಲವರ್ಣದಿಂದ ಚೆಟ್ಟಿಯವರು ಮೃತ್ಯುಂಜಯ ಸ್ವಾಮಿಯವರ ಚಿತ್ರವನ್ನು ರಚಿಸಿದ್ದಾರೆ. ಸ್ವಾಮಿಜಿಯವರು ಕ್ಯಾವಿ ಬಣ್ಣದ ವಸ್ತ್ರವನ್ನು ಮೈತುಂಬಾ ಹಾಕಿಕೊಂಡು ಕೈಯಲ್ಲಿ ಊರುಗೋಲನ್ನು ಹಿಡಿದುಕೊಂಡು ನಿಂತಿದ್ದಾರೆ. ತಲೆಯ ಮೇಲೆ ಕ್ಯಾವಿ ಬಣ್ಣದ ಪಟಕಧರಿಸಿದ್ದಾರೆ. ಕನ್ನಡಕವನ್ನು ಧರಿಸಿಕೊಂಡು ನಿಂತಿರುವ ಸ್ವಾಮಿಗಳ ಭಾವನೆಯನ್ನು ಕಲಾವಿದ ಚೆಟ್ಟಿಯವರು ಅತ್ಯಂತ ಸುಂದರವಾಗಿದೆ. ಮುಖಲಕ್ಷಣ ಹಾವಭಾವವನ್ನು ಕೈ ಕಾಲುಗಳನ್ನು ಅತ್ಯಂತ ಆಕರ್ಷಕವಾಗಿ ರಚಿಸಿದ್ದಾರೆ ಸ್ವಾಮಿಜಿಯವರ ಹಿಂದೆ ಗಿಡಗಳನ್ನು ನೈಜವಾಗಿಯು ರಚಿಸಿದ್ದಾರೆ. ಕಾಲಲ್ಲಿ ಕಟ್ಟಿಗೆಯ ಪಾದುಕೆಗಳು ಧರಿಸಿನಿಂತಿರುವ ಈ ಕಲಾ ಕೃತಿಯು ಧಾರವಾಡ ಮೂರ್ಘಾಮಠದಲ್ಲಿ ಸಂಗ್ರಹವಾಗಿದೆ.

ಚಿತ್ರ : ೪ ನಟರಾಜ : ಈ ಕಲಾಕೃತಿಯು ಜಲವರ್ಣ ಹಾಗೂ ಪೊಸ್ಟರ ವರ್ಣಗಳಿಂದ ರಚನೆಯಾಗಿದೆ. ರೇಖಾಪ್ರಧಾನವಾದ ಈ ಕಲಾ ಕೃತಿಯು ೧೦ಕೈಗಳ ಶಿವಸ್ವರೂಪವಾಗಿದೆ. ನಟರಾಜನು ಡಮರಿನ ಮೇಲೆ ನೃತ್ಯ ಮಾಡುತ್ತಿರುವ ಶಿವ ಕಿರೀಟಧರಿಸಿದ್ದಾರೆ. ಅದರ ಮೇಲೆ ಕಪ್ಪು ವರ್ಣದ ಜಡೆ ಇದೆ. ಶಿವನ ಪ್ರತಿಯೊಂದು ಕೈಯಲ್ಲಿ ಒಂದೊಂದು ಆಯುಧಗಳನ್ನು ಹಿಡಿದು ನೃತ್ಯ ಮಾಡುತ್ತಿರುವುದು, ಶಿವನ ಹಿಂದೆ ಆತನವಾಹವಾದ ಬಸವ ನೃತ್ಯಕ್ಕೆ ತಕ್ಕಂತೆ ತಾಳಹಾಕುತ್ತಿದ್ದಾರೆ. ಇದರ ಮೇಲೆ ಕೆಂಪು ವಸ್ತ್ರವಿದೆ. ನಟರಾಜನ ಹಿಂಭಿನಕೈಯಲ್ಲಿ ಡಮರು, ತ್ರಿಶೂಲ, ಮಂತ್ರೊಂದಕ್ಕೆಯಲ್ಲಿ ಆದಿಶೇಷವನ್ನು ಹಿಡಿದಿದ್ದಾರೆ. ಚಿತ್ರದ ಹಿನ್ನಲೆಯಲ್ಲಿ ಮೋಡ, ಗುಡ್ಡಗಳ ಪರಿಸರವನ್ನು ಜಲವರ್ಣದಿಂದ ಸೌಮ್ಯವರ್ಣದಲ್ಲಿ ರಚಿಸಿದ್ದಾರೆ. ನಟರಾಜನ ಸೌಂದರ್ಯವನ್ನು ತೊರುವಂತೆ ಪ್ರಮಾಣ ಬದ್ಧವಾಗಿ ವಿಶಿಷ್ಠರೀತಿಯಲ್ಲಿ ರಚನೆ ಮಡಿದ್ದಾರೆ. ಈ ಕಲಾಕೃತಿಯು ಸುಂದರವಾದ ಕಲಾಕೃತಿಯಾಗಿದೆ.

ಚಿತ್ರ : ೫ ಬಸವಣ್ಣ : ಈ ಕಲಾಕೃತಿಯ ಪೊಸ್ಟರ ಮಾಧ್ಯಮದಿಂದ ಪೇಪರ ಮೇಲೆ ರಚಿತವಾದ ಕಲಾಕೃತಿಯಾಗಿದೆ. ಚೆಟ್ಟಿಯವರು ಕಲ್ಪನೆಯಿಂದ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣನವರು ಶ್ವೇತವರ್ಣದ ಕುದುರೆಯ ಮೇಲೆ ಕುಳಿತು ಹೋಗುತ್ತಿದ್ದಾರೆ. ತಲೆಯ ಮೇಲಿನ ಕೀರಿಟವು ಸುಂದರವಾಗಿದ್ದು ಮುತ್ತಿನ ಸರದ ವಿನ್ಯಾಸದಿಂದ ಕೂಡಿದೆ. ಕಣ್ಣು ಮೂಗು ಬಾಯಿ ಅತ್ಯಂತ ಆಕರ್ಷಕವಾಗಿ ರಚಿಸಿದ್ದಾರೆ. ಉತ್ತಮವಾದ ಕೊರಳ ಆಭರಣಗಳನ್ನು ಧರಿಸಿದ್ದು ಮೈ ಮೇಲಿನ ವಸ್ತ್ರವು ಹಳದಿಯ ವರ್ಣದಿಂದ ರಚಿಸಿದ್ದಾರೆ. ಕೆಂಪುವರ್ಣದ ವಸ್ತ್ರವನ್ನು ನಡಕ್ಕೆ ಕಟ್ಟಿದ್ದು ಬಲಗೈಯಲ್ಲಿ ಚಾಟಿ, ಹಿಡಿದು ಎಡಗೈಯಲ್ಲಿ ಕುದುರೆಯ ಲಗಾಮದ ಹಗ್ಗವನ್ನು ಹಿಡಿದಷ್ಟು, ಹೊರಟಿರುವ ಸನ್ನಿವೇಶವನ್ನು ಆಕರ್ಷಕವಾಗಿ ರಚಿಸಿದ್ದಾರೆ. ಕಂದುರೆಯ ಮುಂದೆ ರಾಜಸೇವಕನು ಹೊರಟಿದ್ದಾನೆ. ಕೆಂಪು ವರ್ಣದ ವಸ್ತ್ರವನ್ನು ತೊಟ್ಟಿದ್ದಾರೆ. ಕೆಂಪುವರ್ಣದ ಪಟಕಾ ಧರಿಸಿದಾರಿತೋರಿಸುತ್ತ ಮುಂದೆ ಹೋಗುತ್ತಿದ್ದಾರೆ. ಉರಿಬಿಸಿಲಿನಲ್ಲಿ ಬಿಜ್ಜಳನ ಅರಮನೆಗೆ ಹೊಗುತ್ತಿದ್ದಾಗ ಉರಿಬಿಸಿಲಿನಲ್ಲಿ ಛತ್ರಿ ಚಾಮರವನ್ನು ಹಿಡಿದು ಬಸವಣ್ಣನವರಿಗೆ ನೆರಳು ಮಾಡುತ್ತಿರುವ ಸೇವಕನ ಚಿತ್ರ ಹಿನ್ನಲೆಯಾಗಿ ಸುಂದರವಾದ ಕಲಾ ಕೃತಿಯನ್ನು ಕಲಾವಿದ ಚೆಟ್ಟಿಯವರು ರಚನೆ ಮಾಡಿದೆ. ಬಸವಣ್ಣನವರು ಕುದುರೆ ಮೇಲೆ ಕುಳಿತು ಹೊಗುತ್ತಿರುವ ಸನ್ನಿವೇಶವನ್ನು ಆಕರ್ಷಣೆಯಾಗಿ ರಚಿಸಿದ್ದಾರೆ.

ಚಿತ್ರ : ೬. ಶ್ರೀ ಸಿದ್ಧಲಿಂಗಯತಿಗಳು : ಈ ಕಲಕೃತಿಯನ್ನು ತೈಲವರ್ಣದಿಂದ ರಚನೆ ಮಾಡಿದ್ದಾರೆ. ಅಳತೆಯ ಕಲಾಕೃತಿಯನ್ನು ಚಟ್ಟಿಯವರು ದೃಶ್ಯಂತಕವಾಗಿ ತೋರಿಸಿದ್ದಾರೆ ಸಿದ್ಧಲಿಂಗ ಶ್ರೀಗಳು ಬರುತ್ತಿದ್ದು ನದಿಯು ಎಲ್ಲರಿಗೆ ದಾರಿ ಕೊಡುತ್ತಿದೆ ಈ ದೃಶ್ಯವನ್ನು ಚೆಟ್ಟಿಯವರು ಅತ್ಯಂತ ಸುಂದರವಾಗಿ ರಚನೆ ಮಡಿದ್ದಾರೆ. ಆಕರ್ಷಕವಾದ ಮುಖ ಕಣ್ಣು ಮೂಗುಳನ್ನು ರಚಿಸಿದ್ದು ಯತಿಗಳ ಹಾಗೆಯ ಮೇಲಿನ ವಿಭೂತಿ ಧರಿಸಿದ್ದಾರೆ. ಬಲಗೈಯಿಂದ ಆಶೀರ್ವಾದ ನೀಡುತ್ತಿದಂತೆ ನದಿಯಲ್ಲಿ ಸಿದ್ಧಲಿಂಗ ಶ್ರೀಗಳಿಗೆ ದಾರಿಬಿಡುತ್ತಿರುವ ದೃಶ್ಯವನ್ನು ಅತ್ಯಂತ ಆಕರ್ಷಕವಾಗಿ ಚೆಟ್ಟಿಯವರು ರಚಿಸಿದ್ದಾರೆ. ನದಿಯಲ್ಲಿ ಹಾವು ಕಪ್ಪೆ, ಮಿನುಗಳನ್ನು ಅತ್ಯಂತ ಸುಂದರವಾಗಿ ರಚಿಸಿದ್ದಾರೆ. ಸಿದ್ಧಲಿಂಗಯತಿಗಳ ಅನುಯಾಯಿಗಳ ಚಿತ್ರವು ಇದರಂತೆ ಕ್ಯಾವಿ ವರ್ಣಧರಿಸಿದ್ದು ಬರುತ್ತಿರುವ ದೃಶ್ಯವನ್ನು ಕಲಾವಿದ ಚಟ್ಟಿಯವರು ಸುಂದರವಾಗಿ ರಚಿಸಿದ್ದಾರೆ. ಯತಿಗಳ ಕಾಲಾಗಿನ ಪಾದುಕೆ ಎಡಗೈಯಿಂದ ವಸ್ತ್ರ ಹಿಡಿದುಕೊಂಡ ನದಿಯನ್ನು ದಾಟುತ್ತಿರುವರ ದೃಶ್ಯವನ್ನು ಅತ್ಯಂತ ಸುಂದರವಾಗಿ ಭವ್ಯತೆಯನ್ನು ಬಿಂಬಿಸಿದ್ದಾರೆ.

ಚಿತ್ರ : ೭. ಬುದ್ಧ : ಈ ಚಿತ್ರವು ಪೊಸ್ಟರವರ್ಣದಾಗಿದ್ದು ಸಿದ್ಧಾರ್ಥನು ಬುದ್ದನಾಗಿ ಭಿಕ್ಷುಕನಾಗಿ ಬಂದ ದೃಶ್ಯವನ್ನು ಅತ್ಯಂತ ಸುಂದರವಾಗಿ ರಚಿಸಿದ್ದಾರೆ. ಯಶೋಧರೆ ಹಾಗೂ ಆತನ ಪುತ್ರ ರಾಹುಲರು ಕೈಮುಗಿದು ಕೃಪಾಭಿಕ್ಷೆ ಕೊರುತ್ತಿರುವರು. ಅವರ ಹಿಂದೆ ಬಂದ ರಾಜರಿವಾರವನ್ನು ಹಿನ್ನಲೆಯಾಗಿದೆ. ಸಿದ್ಧಾರ್ಥನು ಜ್ಞಾನವಂತ ದೇವಾತಾವಾದಿ ಎನ್ನುವಂತೆ ಎತ್ತರವಾಗಿ ಅವರ ಹೆಂಡತಿ ಮಕ್ಕಳನ್ನು ಮಾನವಚಾದಿ ಎನ್ನುವಂತೆ ಚಿಕ್ಕದಾಗಿ ತೋರಿಸಿದ್ದಾರೆ. ಈ ಕಲಾಕೃತಿಯಲ್ಲಿ ಸಾಂಪ್ರದಾಯಕ ರೇಖಾ ವಿನ್ಯಾಸದಿಂದ ಕಣ್ಣುಗಳಿಗೆ ಆನಂದವನ್ನು ನೀಡುವಂತೆ ಮತ್ತು ಬಕ್ತಿಯನ್ನು ಪ್ರೇರೆಪಿಸುವಂತೆ, ಚೆಟ್ಟಿಯವರು ವರ್ಣಗಳ ಬಳಕೆಯನ್ನು ಸೌಮ್ಯತೆಯಿಂದ ಆನಂದ ನಿಡುವಂತೆ ರಚಿಸಿದ್ದಾರೆ. ಈ ಕಲಾಕೃತಿಯು ಅಳತೆಯಲ್ಲಿದೆ.

ಚಿತ್ರ : ೮. ಬಾಲ ಶಿವಲಿಂಗೇಶರಿಗೆ ಘಟಸರ್ಪವು ನೆರಳು ನೀಡಿದ್ದು : ಈ ಕಲಾಕೃತಿಯು ಪೊಸ್ಟರ ಮಾಧ್ಯಮದ್ದಾಗಿದ್ದು, ಬಾಲ ಶಿವಲಿಂಗೇಶನು ಆಡವಿಗೆ ಗೋವುಗಳನ್ನು ಕಾಯಲು ಹೊದಾಗ, ಮಂದಕೆಳಗೆ ಮಲಗಿದ್ದಾನೆ. ನಿದ್ದೆಯಲ್ಲಿ ಹೋದ ಆತನಿಗೆ ಘಟಸರ್ಪಬಂದು ನೆರಳು ಮಾಡಿದೆ ಈ ಸನ್ನಿವೇಶವನ್ನು ನೋಡಿದ ಬಾಲಕನ ತಂದೆ ತಾಯಿಗಳಲ್ಲ ಗಾಂಬರಿಯಾಗಿ ಕೈ ಮುಗಿದು ನಿಂತಿದ್ದಾರೆ. ಯಾವುದೆ ಪದಿವೆಯೇ ಇಲ್ಲದೆ ಅರಾಮವಾಗಿ ಮಲಗಿದ್ದಾನೆ. ಕಲಾಕೃತಿಯ ಹಿಂದೆ ನವಿಲು ಆನಂದದಿಂದ ಗರಿಬಿಚ್ಚಿ ಕುಣಿಯುತ್ತಿದೆ. ಊರಜನರೆಲ್ಲ ಹೆದರಿ ದೂರದಲ್ಲಿ ನಿಂತಿದ್ದಾರೆ. ಹಿನ್ನಲೆಯಾಗಿ ಶಿವಮಂಟಪ, ಎದುರಿಗೆ ನಂದಿ, ಸುತ್ತಲು ಹಾವಿನ ಸುತ್ತಗಳು ಇವೆ. ಗಿಡದ ಮೈವಳಿಕೆಯನ್ನು ಉತ್ತಮವಾಗಿ ಚಿತ್ರಸಿದ್ದಾರೆ. ಈ ಕಲಾಕೃತಿಯಲ್ಲಿ ಜೋಡು ನಡುವಿನ ಬಣ್ಣಗಳ ಸಾಮರಸ್ಯತೆಯನ್ನು ಉತ್ತಮರೀತಿಯಲ್ಲಿ ಕಲಾ ಕೃತಿಯನ್ನು ಪೂರ್ಣಗೊಳಿಸಿದ್ದಾರೆ.

ಜೀವಮಾದರಿಯ ಚಿತ್ರಗಳು :

ಚಿತ್ರ : ೨. ಶ್ರೀಮತಿ ತಾರಾದೇವಿ ಕುಷ್ಟಗಿ : ಈ ಕಲಾಕೃತಿಯು ಅಳತೆಯದಾಗಿದೆ. ಕಲಾವಿದ ಚೆಟ್ಟಿಯವರು ತೈಲವರ್ಣದಿಂದ ರಚಿಸಿದ ಅತ್ಯಂತ ಆಕರ್ಷವಾದ ಕಲಾಕೃತಿಯಾಗಿದೆ. ಈ ಜೀವಮಾದರಿಯ ಕಲಾಕೃತಿಯನ್ನು ನೋಡಿದಾಗ ಅವರು ಧರಿಸಿರು ಆಭರಣ ತೊಟ್ಟಿರುವ ಕುಪ್ಪಸ

ಉಟ್ಟಿರುವ ಗೀರೆಯು ಬಂಗಾರದ ಜರತಾರಿಯಿಂದ ಇರುವುದನ್ನು ಚೆಟ್ಟಿಯವರು ಅತ್ಯಂತ ಸೂಕ್ಮ ಮತ್ತು ನೈಜವಾಗಿ ರಚಿಸಿದ್ದಾರೆ. ಈ ಕಲಾಕೃತಿಯನ್ನು ನೋಡಿದಾಕ್ಷಣ ಅತ್ಯಂತ ಶ್ರೀಮಂತರು ಎಂದು ಹೇಳಬಹುದು ಅಷ್ಟುಸುಂದರವಾಗಿ ರಚಿಸಿದ್ದಾರೆ. ತಾರಾದೇವಿಯ ಧರಿಸಿದ ರೇಷ್ಮೆಯ ಸೀರೆಯ ಒಳಗಿನ ನಕ್ಷೆಯನ್ನು ಅತ್ಯಂತ ನೈಜರೀತಿಯಲ್ಲಿ ರಚಿಸಿದ್ದಾರೆ. ಸೀರೆಯ ಧಡಿ ಮಡಿಕೆಗಳು ಛಾಚಾಚಿತ್ರವನ್ನು ಮೀರಿಸುವಂತಿದೆ. ಎಡಗಡೆಗೆ ಗಳಿಲಾಬಿಹೂಗಳು ಕೆಳಗೆ ಹಾಸಿದ ನೆಲಹಾಸಿ ಮೇಲೆ ಇರುವ ಹೂವಿನ ಚಿತ್ರಗಳನ್ನು ನೇರಳು ಬೆಳಕಿನಿಂದ ರಚಿಸಿದ್ದಾರೆ. ಹಿನ್ನಲೆಯಾಗಿ ಕೆಂಪುವರ್ಣದ ಪರದೆಗಳು ಮಸುಕಾಣಿಗಿ ರಚಿಸಿದ್ದಾರೆ. ಈ ಕಲಾಕೃತಿಯ ಗದುಗಿನ ನಗರೇಶ್ವರದೇವಸ್ಥಾನದಲ್ಲಿದೆ.

ಚಿತ್ರ. ೪. ಶ್ರೀ ರಾಮಚಂದ್ರಪ್ಪ ಕುಷ್ಟಗಿ : ಈ ಕಲಾಕೃತಿಯು ಅಳತೆಯ ತೈಲವರ್ಣದ ಈ ಕಲಾಕೃತಿಯಾದೆ. ಚೆಟ್ಟಿಯವರು ಈ ಕಲಾ ಕೃತಿಯನ್ನು ಅಷ್ಟೆ ಸೂಕ್ಷ್ಮವಾಗಿ ಮತ್ತು ನೈಜವಾಗಿಯೂ ರಚಿಸಿದ್ದಾರೆ. ಕುಷ್ಟಗಿಯವರು ಧರಿಸಿದ ಕೊಟು ಹೆಗಲಮೇಲೆ ಹಾಕಿಕೊಂಡ ಶಾಲು, ಬಿಳಿ ಧೋತರ ತಲೆಯ ಮೇಲೆ ರುಮಾಲುಗಳನ್ನು ನೇರಳು ಬೆಳಕಿನಿಂದ ಅತ್ಯಂತ ಸುಂದರವಾಗಿ ರಚಿಸಿದ್ದಾರೆ. ಕುಳಿತಂತ ಕುರ್ಚಿಯ ಕಟ್ಟಿಗೆಯದಾಗಿದ್ದು ಅದರಲ್ಲಿರುವ ನಕ್ಷೆಗಳನ್ನು ನೈಜರೀತಿಯಲ್ಲಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಪ್ರತಿಯೊಂದು ವಸ್ತುವಿನ ಮೈಬಳಿಕೆಯನ್ನು ನೆರಳು ಬೆಳಗಿನಿಂದ ನೈಜ ಆನುಭವ ನೀಡುವಂತೆ ರಚಿಸಿದ್ದಾರೆ. ಕೈ ಕಾಲುಗಳಲ್ಲಿರುವ ನರಗಳನ್ನು ಅತ್ಯಂತ ಸೂಕ್ಷ್ಮವಾಗಿ ರಚಿಸಿದ್ದಾರೆ. ಈಜೀವ ಮಾದರಿಯ ಚಿತ್ರವು ಕಲಿಯುವವರಿಗೆ ಮಾದರಿಯಾಗಿದೆ. ಈ ಕಲಾಕೃತಿಯು ಗದುಗಿನ ನಗರೇಶ್ವರದೇವಸ್ಥಾನದಲ್ಲಿದೆ. 3×4

ಚಿತ್ರ : ೩. ಧ್ಯಾನದಲ್ಲಿ ಕುಳಿತ ಸ್ವಾಮಿಗಳು : ಈ ಕಲಾಕೃತಿಯನ್ನು ತೈಲಿವರ್ಣದಿಂದ ರಚಿಸಿದ್ದಾರೆ. ಧ್ಯಾನದಲ್ಲಿ ಕುಳಿತ ಸ್ವಾಮಿಗಳ ಜೀವ ಮಾದರಿಯ ಚಿತ್ರವಾಗಿದೆ. ಪ್ರಾಮಾಣಬದ್ಧವಾದ ಚಿತ್ರವಾಗಿದ್ದು ಸ್ವಾಮಿಗಳ ಮಿಸೆ, ಗಡ್ಡ, ಹಣೆಯ ಮೇಲಿನ ವಿಭೂತಿಯನ್ನು ಕೊರಳಲ್ಲಿ ರುದ್ರಾಕ್ಷಿಯಸರವನ್ನು ಉತ್ತಮರೀತಿಯಲ್ಲಿ ರಚಿಸಿದ್ದಾರೆ. ಸ್ವಾಮಿಗಳ ಕೈಯಲ್ಲಿ ನರಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಎದೆಯ ಮೇಲೆ ಕ್ಯಾವಿ ವರ್ಣದ ಪಂಜೆಯನ್ನು ಹಾಕಿಕೊಂಡಿದ್ದಾರೆ. ಚಿತ್ರದಲ್ಲಿ ಅರೆ ಮುಚ್ಚಿದ ಕಣ್ಣುಗಳಿಂದ ಸ್ವಾಮಿಗಳು ಧ್ಯಾನದಲ್ಲಿರುವಂತೆ ಗೊಚರಿಸುತ್ತದೆ. ಈ ರೂಪದರ್ಶಿಯ ಕಲಾಕೃತಿಯನ್ನು ನೋಡಿದಾಗ ಚೆಟ್ಟಿಯವರು ಲಿಂಗ ಶಾಸ್ತ್ರದ ಆಳವಾದ ಅಭ್ಯಾಸದ ಪ್ರತೀಕವಾಗಿವೆ. ಈ ಕಲಾಕೃತಿಯ ಛಾಯಾಚಿತ್ರವನ್ನು ಶ್ರೀ ಕೆ.ವ್ಹಿ. ಕುಂದಗೋಳರವರಿಂದ ಪಡೆದು ಕೊಳ್ಳಲಾಯಿತು.

ಚಿತ್ರ : ೪. ಚಿಲುಮೆಸೇದುವಯಜಮಾನ : ಈ ಕಲಾಕೃತಿಯನ್ನು ಚೆಟ್ಟಿಯವರು ತೈಲವರ್ಣದಿಂದ ರಚಿಸಿದ್ದಾರೆ. ಯಜಮಾನನ ಮುಖಭಾವಗಳನ್ನು ಉದ್ದಾದಮಿಸೆಯನ್ನು ನೈಜರೀತಿಯ ರಚಿಸಿದ್ದಾರೆ. ಕೈಯಲ್ಲಿ ಚೆಲುಮೆ ಹಿಡಿದು ಸೇದುವ ಚಿಲುಮೇಯಿಂದ ಹೊಗೆ ಬರುತ್ತಿರುವಂತೆ ಚಿತ್ರಿಸಿದ್ದಾರೆ. ಅಜ್ಜನು ಹಾಕಿಕೊಂಡಿರು ಬಟ್ಟೆಗಳು ಬಿಳಿವರ್ಣದಾಗಿದ್ದಾರು ಅವುಮಸುಕಾಗಿವೆ. ಅಂಗಿ ಮತ್ತು ಧೋತರದಲ್ಲಿ ಬಿದ್ದಿರುವ ನಿರಿಗೆಗಳು ನೈಜತೆಯನ್ನು ಮಿರಿಸುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಕೈ ಕಾಲುಗಳು ಪ್ರಮಾಣಕ್ಕೆ ತಕ್ಕಂತೆ ನೈಜವಾಗಿ ರಚಿಸಿದ್ದಾರೆ. ಹಿನ್ನೆಲೆಯ ವರ್ಣವನ್ನು ನೀಲಿ ವರ್ಣದಿಂದ ಪೂರ್ಣಗೊಳಿಸಿದ್ದಾರೆ. ಅಜ್ಜನ ಬಲಗಡೆ ಒಂದು ಚರಗಿಯನ್ನು ಮತ್ತು ಕೋಲು ರಚಿಸಿದ್ದಾರೆ. ಈ ಚಿತ್ರವು ಅನೇಕರಿಂದ

೨೦. ಎ.ಚೆಟ್ಟಿಯವರ ಸಾಮುಸತ್ ಪುರಾಷರ ಕಲಾಕೃತಿಗಳು



ಎಂ.ಎ.ಚೆಟ್ಟಿ



ಚಿತ್ರ .೧ ಶ್ರೀ ಬಸವೇಶ್ವರರು




ಚಿತ್ರ ೨ : ಶ್ರೀ ಮಹಾಂತಪ್ಪಗಳು



ಚಿತ್ರ : ೩ ಶ್ರೀ ಮೃತ್ಯುಂಜಯ ಸ್ವಾಮಿಗಳು

ಎಂ .ಎ.ಚೆಟ್ಟಿಯವರ ಸಾದುಸತ್ ಪುರುಷರ ಕಲಾಕೃತಿಗಳು



ಚಿತ್ರ .೪ ನಟರಾಜ




ಚಿತ್ರ .೫ ಬಸವಣ್ಣ



ಚಿತ್ರ .೩ ಶ್ರೀ ಸಿದ್ಧಲಿಂಗ ಯತಿಗಳು



ಚಿತ್ರ .೭ ಬುದ್ಧ



ಚಿತ್ರ .೮ ಬಾಲ ಶಿವಲಿಂಗೇಶ್ವರಿಗೆ ಘಟಸರ್ಪವು ನೆರಳು ನೀಡಿದ್ದು

ಎಂ.ಎ. ಚೆಟ್ಟಿಯವರ ಜೀವಮಾದರಿಯ ಚಿತ್ರಗಳು



ಚಿತ್ರ .೧ ಶ್ರೀ ರಾಮಚಂದ್ರಪ್ಪ ಕುಷ್ಟಗಿ



ಚಿತ್ರ ೨ ಶ್ರೀಮತಿ ತಾರಾದೇವಿ ಕುಷ್ಟಗಿ



ಚಿತ್ರ .೩ ದ್ಯಾನದಲ್ಲಿ ಕುಳಿತ ಸ್ವಾಮಿಗಳು



ಚಿತ್ರ .೪ಚಿಲುಮೆ ಸೇದುವ ಯಜಮಾನ

ಎಂ .ಎ.ಚೆಟ್ಟಿಯವರ ಸಾದುಸತ್ ಪುರುಷರ ಕಲಾಕೃತಿಗಳು



ಚಿತ್ರ೧.



ಚಿತ್ರ೨.



ಚಿತ್ರ ೩.

ಪ್ರಸಂಶೆಯನ್ನು ಪಡೆದುಕೊಂಡಿದೆ. ಛಾಯಾಚಿತ್ರವನ್ನು ಮಿರಿಸುವರೀತಿಯಲ್ಲಿ ಚೆಟ್ಟಿಯವರು ರಚಿಸಿದ್ದಾರೆ.

ನಿಸರ್ಗಚಿತ್ರಗಳು : ಚಿತ್ರ : ೧. ಈ ಚಿತ್ರವು ಗುಮ್ಮಟ ಚಿತ್ರವಾಗಿದ್ದು, ಜಲವರ್ಣದಿಂದ ರಚಿಸಿದ್ದಾರೆ. ಕಲಾಕೃತಿಯಲ್ಲಿ ಸ್ಥಳಾವಕಾಶದ ಹಿಂದೆ ಮುಂದೆ ಎನ್ನುವ ಪರಿಕಲ್ಪನೆಯನ್ನು ಸೆರೆಹಿಡಿದಿದ್ದಾರೆ. ಈ ಕಲಾಕೃತಿಯು ಮುಸ್ಲಿಮ ಧರ್ಮಕ್ಕೆ ಸೇರಿದ ವರಂತೆ ಕಾಣುತ್ತದೆ. ಇದರ ಮುಂದೆ ಜನ ಸಂದಣಿಯಿಂದ ಹೊಗಿ ಬರುತ್ತಿರುವ ಜನರನ್ನು ಚೆಟ್ಟಿಯವರು ಉತ್ತಮ ರೀತಿಯಲ್ಲಿ ರಚಿಸಿದ್ದಾರೆ. ಈ ನಿಸರ್ಗಚಿತ್ರವು ಪ್ರಮಾಣ ಬದ್ಧವಾಗಿದ್ದೂ ಆಕರ್ಷವಾಗಿದೆ.

ಚಿತ್ರ : ೨. : ಈ ಚಿತ್ರವು ಬಿಜಾಪೂರದ ದ್ವಾರದ ಚಿತ್ರವಾಗಿದೆ. ದೊಡ್ಡದಾದದ್ವಾರವನ್ನು ಅತ್ಯಂತ ಸುಂದರವಾಗಿ ರಚಿಸಿದ್ದಾರೆ. ಹಾಳರತಿ ಬಿದ್ದಿರುವಂತೆ ಕಾಣುವ ಈ ಮಹಾದ್ವಾರದ ಚಿತ್ರವನ್ನು ಚೆಟ್ಟಿಯವರು ಬಣ್ಣಗಳ ಬಳಿಕೆಯಿಂದ ಉತ್ತಮವಾಗಿ ರಚಿಸಿದ್ದಾರೆ. ಈ ಕಲಾಕೃತಿಯಲ್ಲಿ ನೇರಳು ಬೆಳಕಿನ ಪರಿಕಲ್ಪನೆಯನ್ನು ಸುಂದರವಾಗಿ ರಚಿಸಿದ್ದಾರೆ. ಈ ದ್ವಾರದ ಮುಂದೆ ಹೊಗಿ ಬರುವವ ಜನರನ್ನು ಉತ್ತಮರೀತಿಯಲ್ಲಿ ಚಿತ್ರಿಸಿದ್ದಾರೆ.

ಚಿತ್ರ : ೩. ಈ ನಿಸರ್ಗಚಿತ್ರವು ಬಿಜಾಪೂರದ ಅಗಸೆ ಬಾಗಿಲು ಚಿತ್ರವಾಗಿದೆ. ಮಹಾದ್ವಾರವನ್ನು ಹೊಂದಿರುವ ಇದು ಮೇಲ್ಭಾಗ ಬಿದ್ದು ಹೊಗಿದೆ. ಈ ಕಲಾಕೃತಿಯಲ್ಲಿ ನೆರಳು ಬೆಳಕಿನಿಂದ ರಚಿಸಿದ ಉತ್ತಮ ಚಿತ್ರವಾಗಿದೆ. ದ್ವಾರದ ಒಳಗಿನ ದೂರದ ಮತ್ತು ಸಮೀಪವನ್ನು ಬಣ್ಣಗಳ ಮೂಲಕ ಆಕರ್ಷಣೆಯವಾಗಿ ರಚಿಸಿದ್ದಾರೆ. ಬಣ್ಣಗಳ ಬಳಕೆಯನ್ನು ಬಳಸಿದ ರೀತಿಯನ್ನು ಈ ಕಲಾಕೃತಿಯಿಂದ ತಿಳಿದುಕೊಳ್ಳಬಹುದಾಗಿದೆ. ಬಣ್ಣದಲ್ಲಿಯೇ ಕಲಾಕೃತಿಯ ಸಮೀಪದೂರವನ್ನು ತಿಳಿಸಿದ್ದಾರೆ ದ್ವಾರದ ಮುಂದೆ ಜನರು ಹೊಗುತ್ತಿರುವ ಬರುತ್ತಿರುವಂತೆ ನೈಜರೀತಿಯಲ್ಲಿ ನಿಸರ್ಗಚಿತ್ರದಲ್ಲಿ ರಚಿಸಿದ್ದಾರೆ.

ಒಟ್ಟಾರೆ ಚೆಟ್ಟಿಯವರ ಕಲಾಕೃತಿಗಳನ್ನು ನೋಡಿದಾಗ ಸಾಂಪ್ರದಾಯಿಕ ಕಲೆ, ನೈಜಕಲೆಯಲ್ಲಿ ವಿಶೇಷವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಧಾರ್ಮಿಕ, ಪುರಾಣ, ಕಥೆಗಳ ಕಲಾಕೃತಿಗಳು ರಚನೆ ಮಾಡುತ್ತ ನೈಜ ಕಲೆಯ ಆರಾಧಕರಾಗಿದ್ದರು ಎಂಬುದಾಗಿ ಕಲಾಕೃತಿಗಳಿಂದ ರೇಖಾಚಿತ್ರಗಳಿಂದ ನಿಸರ್ಗ ಚಿತ್ರಗಳಿಂದ ತಿಳಿದು ಬರುತ್ತದೆ. ಎಂಬ ಚೆಟ್ಟಿಯವರು ತಮ್ಮದೇಆದ ಶೈಲಿಯೊಂದಿದೆ ರೇಖಾ ಚಿತ್ರಗಳು ಜಲವರ್ಣ ತೈಲವರ್ಣ ಪೊಸ್ಟರವರ್ಣಗಳಿಂದ ನೈಜತೆಯಲ್ಲಿ ಕಲಾಕೃತಿಯನ್ನು ರಚಿಸಿದ್ದಾರೆ.

ಸಿ.ಎನ್. ಪಾಟೀಲ :

ರಾಷ್ಟ್ರ, ಅಂತರಾಷ್ಟ್ರೀಯ ಖ್ಯಾತಿ ಪಡೆದ ಸಾವಿರಾರು ಕಲಾಕೃತಿಗಳನ್ನು ನಿರ್ಮಿಸಿ, ತಮ್ಮದೇ ಆದ ಬಹುಮುಖ ವ್ಯಕ್ತಿತ್ವದಿಂದ ಕರ್ನಾಟಕದ ಕಲಾಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ ನೂರಾರು ಕಲಾವಿದರಿದ್ದಾರೆ. ಅಂಥವರಲ್ಲಿ ಶ್ರೀ ಚನ್ನವೀರಗೌಡ ನಿಂಗನಗೌಡ ಪಾಟೀಲರು ಕರ್ನಾಟಕದ ಚಿತ್ರಕಲಾ ಕ್ಷೇತ್ರದಲ್ಲಿ ಪ್ರಮುಖ ಹಿರಿಯ ಕಲಾವಿದರಲ್ಲಿ ಒಬ್ಬರು. ರಾಜ್ಯದ ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯ ಕಲೆಗೆ ಹೆಸರು ಪಡೆದ ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಪುಟ್ಟ ಗ್ರಾಮವಾದ (ಬಟ್ಟೂರು) ನಿಟ್ಟೂರು ಅವರ ಜನ್ಮಸ್ಥಳ. ಊರಿನ ಮುಖಂಡರು ಜನೀನುದಾರರಾದ ಶ್ರೀ ನಿಂಗನಗೌಡರ ಮಗನಾಗಿ

೧೯೨೩ ಅಗಸ್ಟ ೧೬ ರಂದು ಜನಿಸಿದ್ದಾರೆ. ನಿಂಗನಗೌಡರಿಗೆ ನಾಲ್ಕು ಜನ ಮಕ್ಕಳು, ಅವರಲ್ಲಿ ಹಿರಯರೇ ಸಿ.ಎನ್. ಪಾಟೀಲರು. ಇವರಿಗೆ ಇಬ್ಬರು ತಮ್ಮಂದಿರು ಮತ್ತು ಒಬ್ಬ ತಂಗಿ. ಸಿ.ಎನ್.ಪಾಟೀಲರು ತಮ್ಮ ಬಾಲ್ಯವನ್ನು ನಿಟ್ಟೂರಿನಲ್ಲಿ ಕಳೆದರು. ತಂದೆ ನಿಂಗನಗೌಡರು ತೀರಿಕೊಂಡ ಮೇಲೆ ಸಿ.ಎನ್. ಪಾಟೀಲರು ೬ನೇ ವಯಸ್ಸಿನಲ್ಲಿ ಇವರ ಕಿರಿಯ ಅತ್ತೆಯವರಾದ ಶ್ರೀಮತಿ ಲಕ್ಷ್ಮವ್ವ ಜಂಗಮನಿಯವರು ಗದುಗಿಗೆ ಕರೆದುಕೊಂಡು ಬಂದರು. ಉಳಿದ ತಮ್ಮಂದಿರು ಅಲ್ಲಿಯೇ ಬಟ್ಟೂರ ಗ್ರಾಮದಲ್ಲಿ ಉಳಿದರು.[೯೫] ಸಿ.ಎನ್.ಪಾಟೀಲರು ಗದುಗಿಗೆ ಬಂದು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದರು. "ಬಾಲ್ಯಾವಸ್ಥೆಯಲ್ಲಿಯೇ ಚಿತ್ರಕಲೆಯ ಗೀಳಿಗಂಟಿಕೊಂಡವರಾಗಿದ್ದರು.[೯೬]"

ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದ ಬಾಲಕ ಸಿ.ಎನ್.ಪಾಟೀಲರು ಅಂದಿನ ಮುಂಬಯಿಯ ಪ್ರಾಂತದ ಶಿಕ್ಷಣ ಮಂತ್ರಿಗಳಾದ ಸರ್ ಸಿದ್ದಪ್ಪ ಕಂಬಳಿ ಅವರ ಭಾವಚಿತ್ರವನ್ನು ರಚಿಸಿ ಮಂತ್ರಿಗಳಿಂದ ಶಹಬಾಶಗಿರಿಯನ್ನು ಪಾರೀತೋಷಕವನ್ನು ಪಡೆದರು. ಇದರಿಂದ ಉತ್ತೇಜಿತರಾದ ಪಾಟೀಲರು "ನಾನೊಬ್ಬ ಕಲಾವಿದನಾಗಬೇಕು" ಎಂದು ನಿರ್ಧರಿಸಿದರು. ಪ್ರೌಢಶಿಕ್ಷಣವನ್ನು ಗದುಗಿನಲ್ಲಿ ಪಡೆದರು. ಮೆಟ್ರಿಕ್ ಪರೀಕ್ಷೆ ಪಾಸಾದ ನಂತರ ಬೆಳಗಾವಿಯಲ್ಲಿರುವ ಲಿಂಗರಾಜ ಕಾಲೇಜನಲ್ಲಿ ಪ್ರವೇಶ ಪಡೆದರು. ಅಲ್ಲಿರುವಾಗಲೇ "ರಾಯಲ್ ಏರ್‌ಫೋರ್ಸ್" ಸೇರ್ಪಡೆಯಾದರೂ ಸಹ ಚಿತ್ರ ರಚಿಸುವ ಆಸೆಯಿಂದ ವಿಮುಖವಾಗದೇ ಮೇಲಾಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಸಿ.ಎನ್. ಪಾಟೀಲರು ಕಲಾ ಅಭ್ಯಾಸಕ್ಕಾಗಿ ಕಲಾಗುರುವನ್ನು ಅರಸಿಕೊಂಡು ಗದುಗಿಗೆ ಬಂದರು, ಅಂದು ಕಲಾಶಾಲೆ ಇರಲಿಲ್ಲ. ಆದರೆ ಕಲಾಗುರು ಟಿ.ಪಿ.ಅಕ್ಕಿಯವರಿದ್ದರು. ಟಿ.ಪಿ.ಅಕ್ಕಿಯವರು ಪಾಟೀಲರಿಗಿರುವ ಕಲಾಸಕ್ತಿ, ಕಲಾಪ್ರೌಢಿಮೆಯನ್ನು ಮೆಚ್ಚಿ ಶಿರಸಂಗಿ ಲಿಂಗರಾಜರ ಫಂಡದಿಂದ ಸಿ.ಎನ್.ಪಾಟೀಲರಿಗೆ ಮುಂಬಯಿಯ ಸರ ಜೆ.ಜೆ. ಸ್ಕೂಲ್ ಆಫ್ ಆರ್ಟ್‌ಗೆ ಕಳಿಸಿಕೊಟ್ಟರು.

ಪಾಟೀಲರು ಎಷ್ಟು ಬುದ್ಧಿವಂತರಿದ್ದರು ಎಂಬುದಕ್ಕೆ ತಾವು ಬರೆದ ಹಸ್ತಪ್ರತಿಯು ಕಂಡು ಬರುತ್ತದೆ. ಪಾಟೀಲರು ಉತ್ತಮ ಕಲಾವಿದನಾಗಲು ತಮ್ಮನ್ನು ತಾವು ಮೈಗೂಡಿಸಿಕೊಂಡರು. ಇವರು ಮೆಟ್ರಿಕ್ ವರ್ಗದಲ್ಲಿದ್ದಾಗ ಕನ್ನಡ ವಿಷಯದ ತಪಾಸಣಾ ಅಧಿಕಾರಿಗಳು ವರ್ಗಕ್ಕೆ ಬಂದಾಗ ಯಾರಾದರೊಬ್ಬರು ಕೆಲವು ನುಡಿಗಳನ್ನು ಹೇಳತಕ್ಕದ್ದು ಎಂದು ಆದೇಶಿಸಿದರು. ಸಿ.ಎನ್. ಪಾಟೀಲರು ಎದ್ದು ನಿಂತು ರಾಮನಂ ಭೂವನಾಬ ರಾವಣಂ ಪದ್ಯವನ್ನು ಹೇಳಲು ಪ್ರಾರಂಭಿಸಿದರು. ಅದನ್ನು ಕೇಳಿ ಸಾಹೇಬರಿಗೆ ಅಚ್ಚರಿಯಾಯಿತು. ಇದು ನಿಮ್ಮ ಪಠ್ಯಪುಸ್ತಕದಲ್ಲಿಯೇ ಇಲ್ಲ. ಅಂದಾಗ ಕನ್ನಡ ವಿಷಯ ಬೋಧಿಸುವ ಗುರುಗಳು ಅವನನ್ನು ೧೨ನೇ ವಯಸ್ಸಿನಲ್ಲಿಯೇ ಮಹಾಭಾರತದ ಅಭ್ಯಾಸ ಶುರುಮಾಡಿರುವದನ್ನೇ ಅದರ ಸಂದಿ ರಾಮಾಯಣದ ಬಗೆಗೆ ಇದೆ. ಅದನ್ನು ಮೂರ್ತಿಯಾಗಿ ಹೇಳಬಲ್ಲೆನು ಎಂದಾಗ ಸಾಹೇಬರು ತುಂಬಾ ಸಂತೋಷಪಟ್ಟು ಮುಂದಿನ ವರ್ಗಕ್ಕೆ ನಡೆದರು. ಅಲ್ಲಿಂದ ಇಲ್ಲಿಯವರೆಗೆ ಮಹಾಕಾವ್ಯಗಳು ಕಾದಂಬರಿಗಳು ಕಥೆಗಳು ಸುಮಾರು ೧೦೦ಕ್ಕೂ ಹೆಚ್ಚು ಕಂಠಪಾಠವಾಗಿತ್ತು.[೯೭] ಎಂದು ಸಿ.ಎನ್. ಪಾಟೀಲರು ಬರೆದಿರುವ ಅಪ್ರಕಟಿತ ಹಸ್ತಪ್ರತಿಯಿಂದ ತಿಳಿದು ಬರುತ್ತದೆ.

---

೯೫. ಸಿ.ಎನ್. ಪಾಟೀಲರು, ಬರದ ಅಪ್ರಕಟತೆ ಹಸ್ತಪ್ರತಿ

೯೬ ವಿ.ಟಿ. ಕಾಳೆ. ದೃಶ್ಯಕತೆಯ ಆರಾಧಕರು ೧೯೯೦ ಪು.ಸಂ. ೩೫

೯೭ ಸಿ.ಎನ್. ಪಾಟೀಲರು ಬರೆದ ಅಪ್ರಕಟಿತ ಹಸ್ತಪ್ರತಿ

"ಹರಿಶ್ಚಂದ್ರ ಕಾವ್ಯ ರಾಜಶೇಖರ ವಿಳಾಸ, ಮಹಾಕವಿಗಳಾದ ಪಂಪ, ರನ್ನ, ಕುಮಾರವ್ಯಾಸ, ಚೆನ್ನಬಸವ, ಪುರಾಣ, ಇನ್ನೊ ಸಾಕಷ್ಟು ಮಹಾಕಾವ್ಯಗಳು, ಕವನಗಳನ್ನು ಸಿ.ಎನ್.ಪಾಟೀಲರು ಕಂಠಪಾಠ ಮಾಡಿದ್ದಾರೆ. ಪ್ರಪಂಚ ಕರ್ನಾಟಕ ಬಂಧು ಪತ್ರಿಕೆಗಳಲ್ಲಿ ಪಾಟೀಲರ ಹಲವಾರು ಲೇಖನಗಳು ಪ್ರಕಟಿಸಲ್ಪಟ್ಟಿವೆ.[೯೮] ಸಿ.ಎನ್.ಪಾಟೀಲರು ಕೇವಲ ಚಿತ್ರಕಲೆಯಷ್ಟೇ ಅಲ್ಲ ಕ್ರೀಡೆಯಲ್ಲಿಯೂ ಸಹ ಆಸಕ್ತರಾಗಿದ್ದರು. ತಮ್ಮ ವಿದ್ಯಾಭ್ಯಾಸದ ಜೊತೆಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರಿಕೆಟ್, ವಾಲಿಬಾಲ್, ಹಾಕಿ ಪುಟ್ಬಬಾಲ್, ಕಬಡ್ಡಿ, ಖೋ ಖೋ ಮುಂತಾದ ಆಟಗಳಲ್ಲಿ ಬಹಳ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಹೀಗಾಗಿ ಪಾಟೀಲರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಶ್ರೇಷ್ಠ ಕ್ರೀಡಾ ಪಟುವೆಂದು ಹೆಸರು ಪಡೆದರು. ಸಾಹಿತ್ಯ, ನಾಟಕ ಕಲೆಯು ಸಿ.ಎನ್.ಪಾಟೀಲರಿಗೆ ಕಲಾಗಾರಿಕೆ ದೇವರ ದೇಣಿಗೆಯಾಗಿ ಬಂದ ಐಸಿರಿ[೯೯] ಎಂದು ಹೇಳಬಹುದು.

ಸರ್. ಜೆ.ಜೆ.ಕಲಾಶಾಲೆ ಮುಂಬಯಿಯಲ್ಲಿ ಕಲಾ ಅಭ್ಯಾಸವನ್ನು ಪ್ರಾರಂಭಿಸಿದ ಸಿ.ಎನ್.ಪಾಟೀಲರು ತಮ್ಮ ಕಲಾ ಪ್ರತಿಭೆಯಿಂದ ನೆಚ್ಚಿನ ವಿದ್ಯಾರ್ಥಿಯಾಗಿದ್ದರು. ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದ ಕಲಾವಿದರಾದ ಸಿ.ಎನ್.ಪಾಟೀಲರ ಗುರುಗಳಾಗಿದ್ದರು. ಶ್ರೀ ಜಗನ್ನಾಥ ಅಹಿವಾಸಿ, ಶ್ರೀ ಎ.ಎ.ಬೋಸ್ಲೇ ಮೊದಲಾದ ಪ್ರತಿಭಾ ಸಂಪನ್ನರೂ ದೇಶದ ಹೆಸರಾಂತ ಕಲಾವಿದರು ಪಾಟೀಲರ ಗುರುಗಳಾಗಿದ್ದಾರೆಂಬುದು ಅವರ ಭಾಗ್ಯ, ಅಹಿವಾಸಿ, ದೋಪೆಶ್ವರಕರ ಅವರು ಭಾರತೀಯ ಚಿತ್ರಕಲಾ ಸಂಪ್ರದಾಯದ ದಾರ್ಶನಿಕರಾಗಿದ್ದಾರೆ. ಶ್ರೀ ಎ.ಎ. ಬೋಸ್ಲೆ ಅವರು ಪಾಶ್ಚಿಮಾತ್ಯ ಶೈಲಿಯ ವ್ಯಕ್ತಿಚಿತ್ರಣ ರಚನೆಯಲ್ಲಿ ಹೆಸರು ವಾಸಿಯಾಗಿದ್ದರು. "ಕಲಾಮಂದಿರದ ನಿರ್ದೇಶಕರಾಗಿದ್ದ ಶ್ರೀ ವಿ.ಆರ್.ರಾವ್ ಅವರು ಬ್ರಿಟಿಷರ ಕಾಲದಲ್ಲಿದ್ದ ದೊಡ್ಡ ಬಂಗ್ಲೆಯಲ್ಲಿ ಇರುತ್ತಿದ್ದರು. ಅವರು ನನ್ನ ಮೇಲಿನ ಅಭಿಮಾನದಿಂದ ತಮ್ಮ ಬಂಗಲೆಯಲ್ಲಿಯೇ ಇರುಲು ಒಂದು ರೂಮನ್ನು ಕೊಟ್ಟರು. ಅಲ್ಲದೇ ಅವರು ನಿತ್ಯ ಮುಂಜಾವಿನ ಸಮಯದಲ್ಲಿ ನಿಸರ್ಗ ಚಿತ್ರವನ್ನು ರಚಿಸಲು ಹೊರಗೆ ಹೋಗುವಾಗ ನನ್ನನು ಸಹ ಕರೆದುಕೊಂಡು ಹೋಗುತ್ತಿದ್ದರು. ಇದರಿಂದ ನನಗೆ ಎರಡು ಲಾಭಗಳಾದವು. ಅದಕ್ಕಾಗಿ ನಾನು ಅವರೊಡನೆ ನಿಷ್ಠಾವಂತನಾಗಿ ನಡೆದುಕೊಂಡು ಅವರ ಪ್ರೀತಿಗೆ ಪಾತ್ರನಾದೆನು[೧೦೦] ಎಂದು ಪಾಟೀಲರು ಅಂದಿನ ದಿನಗಳನ್ನು ನೆನೆಯುತ್ತಾರೆ.

ಸಿ.ಎನ್.ಪಾಟೀಲರು ತಮ್ಮ ಕಲಾಚಾತುರ್ಯದಿಂದ, ಸೃಜನಶೀಲ ಪ್ರತಿಭೆಯಿಂದ ೧೯೪೯ರಲ್ಲಿ ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಯಿಂದ ಉನ್ನತ ಕಲಾವ್ಯಾಸಂಗ ಮಾಡಿ ಆರ್ಟ್ ಮಾಸ್ಟರ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಇವರ ಕಲಾ ಪ್ರೌಢಿಮೆಯನ್ನು ಮೆಚ್ಚಿ ಜೆ.ಜೆ. ಕಲಾಶಾಲೆಯಲ್ಲಿ ಕಲಾಶಿಕ್ಷಕರಾಗಲು ಅಹ್ವಾನ ಬಂದರೂ ಸಹ ತಾಯಿನಾಡಿನ ಮಣ್ಣಿನ ಋಣ ತೀರಿಸಲು ರಾಜ್ಯಕ್ಕೆ ಮರಳಿ ಗದುಗಿಗೆ ಬಂದರು ಈ ವೇಳೆಗಾಗಲೇ ಕಲಾತಪಸ್ವಿ ಟಿ.ಪಿ.ಅಕ್ಕಿಯವರು ಗದುಗಿನಲ್ಲಿ ವಿಜಯ ಕಲಾಮಂದಿರವನ್ನು ಪ್ರಾರಂಭಿಸಿದರು. ಸಿ.ಎನ್. ಪಾಟೀಲರು ಈ ನೂತನ

---

೯೮. ಸಿ.ಎನ್. ಪಾಟೀಲರು ಬರೆದ ಅಪ್ರಕಟಿತ ಹಸ್ತಪ್ರತಿ

೯೯. ಪ್ರಶಸ್ತಿ ಪಡೆದ ಕಲಾವಿದರು ಕ.ಲ.ಕ.ಅ.ಬೆಂ. ೧೯೬೫-೯೩ ಪು. ೯೯

೧೦೦. ಸಿ.ಎನ್.ಪಾಟೀಲ ಸಂದರ್ಶನ ದಿನಾಂಕ ೮-೧೧-೨೦೦೬

ಕಲಾಶಾಲೆಯ ಪ್ರಾಚಾರ್ಯರಾಗಿ ಸೇವೆ ಪ್ರಾರಂಭಿಸಿದರು. ೧೯೪೯ರಿಂದ ೧೯೬೪ರ ವರೆಗೆ ವಿಜಯ ಕಲಾಮಂದಿರದ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತ ಇದರ ಸರ್ವತೋಮುಖ ಬೆಳವಣಿಗೆಗೆ ಕಾರಣೀಕರ್ತರಾದರು. ಸಿ.ಎನ್.ಪಾಟೀಲರ ಶಿಷ್ಯಬಳಗ ಹೆಚ್ಚಳವಾಗತೊಡಗಿತು. ಅವರಲ್ಲಿ ಪ್ರಮುಖರೆಂದರೆ ಖ್ಯಾತ ಕಲಾವಿದರೂ ನಾಡೋಜ ಶ್ರೀ ಆರ್. ಎಂ. ಹಡಪದ, ಶ್ರೀ ವಿ.ಟಿ.ಕಾಳೆ, ಶ್ರೀ ಕೆ.ಡಿ. ರಾಘವಪ್ಪನವರ, ಶ್ರೀ ಬಿ.ಕೆ.ಹಿರೇಮಠ, ಶ್ರೀ ಎಂ.ಆರ್. ಬಾಳಿಕಾಯಿ, ಡಾ. ಎಸ್.ಸಿ.ಪಾಟೀಲ, ಎನ್.ಎಸ್,ಹರ್ಲಾಪೂರ ಮುಂತಾದ ಅನೇಕ ಖ್ಯಾತ ಕಲಾವಿದರ ಮಾರ್ಗದರ್ಶನಕಾದರು. ನೂರಾರು ಚಿತ್ರಕಲಾ ಶಿಕ್ಷಕರ ಗುರುಗಳಾಗಿ ಚಿತ್ರಕಲಾ ಶಿಕ್ಷಣ ಕ್ಷೇತ್ರಕ್ಕೆ ಸೇವೆ ಸಲ್ಲಸಿದ್ದಾರೆ.

ಅಸಾಮಾನ್ಯ ವಾಕ್ ಚಾತುರ್ಯವುಳ್ಳ ಸಿ.ಎನ್.ಪಾಟೀಲರು ಅಂದು ರಾಜಕೀಯ ಕ್ಷೇತ್ರಕ್ಕೆ ಇಳಿದಿದ್ದರೆ ಅಮೋಘ ಪ್ರಭಾವಿ ಮುಖಂಡರಾಗುತ್ತಿದ್ದರೇನೋ. ಆದರೆ ಕಲಾದೇವಿ ಅವರನ್ನು ತನ್ನ ಸೇವೆಗೆ ಸೆಳೆದುಕೊಂಡಳು. ಕನ್ನಡಕ್ಕೊಬ್ಬ ಕಲಾವಿದನನ್ನು ನೀಡಿದಳು. ಕಲಾಚಾರ್ಯ ಸಿ.ಎನ್. ಪಾಟೀಲರು ತಮ್ಮದೇ ಆದ ಕಲಾಚಾತುರ್ಯದಿಂದ ಕಲೆಯ ಅಭಿರುಚಿಯನ್ನು ಜನರಿಗೆ ತೋರಿಸಿಕೊಟ್ಟರು ಕರ್ನಾಟಕ ಏಕೀಕರಣ ಹೋರಾಟದ ಸಮಯದಲ್ಲಿ ಪಾಟೀಲರು "ಕರ್ನಾಟಕ ಭುವನೇಶ್ವರಿ" ದೇವಿಯ ಭವ್ಯಗಾತ್ರದ ಚಿತ್ರ ರಚಿಸಿ ಭುವನೇಶ್ವರಿ ದೇವಿಯ ಕಲಾಕೃತಿ ರಚಿಸಿದ ಕರ್ನಾಟಕದ ಪ್ರಪ್ರಥಮ ಕಲಾವಿದರು ಎಂಬ ಹೆಗ್ಗಳಿಕೆಗೆ ಪಾತ್ರರಾದರು. ತಾಯಿ ಭುವನೇಶ್ವರೀಯ ಕಲಾಕೃತಿಯು ಬಹಳಷ್ಟು ಸುಮಧುರವಾಗಿದ್ದು ಅಸಂಖ್ಯ ಜನರಿಂದ ಮೆಚ್ಚುಗೆ ಪಡೆದ ಕಲಾಕೃತಿಯಾಗಿದೆ.[೧೦೧]

ಸಿ.ಎನ್. ಪಾಟೀಲರು ಅನೇಕ ಮಾಧ್ಯಮಗಳಲ್ಲಿ ಉತ್ತಮವಾದ ಕೃತಿಗಳನ್ನು ರಚಿಸಿದ್ದಾರೆ. ಜಲವರ್ಣ, ತೈಲವರ್ಣ, ಪೋಸ್ಟರ್ ಕಲರ್, ಪೆಸ್ಟಲ್, ಕ್ರಯಾನ್ಸ, ಪೆನ್ ಮತ್ತು ಇಂಕ್, ಪ್ಲಾಸ್ಟರ್ ಆಫ್ ಪ್ಯಾರಿಸ್ ಹೀಗೆ ಮಿಶ್ರಮಾಧ್ಯಮದಲ್ಲಿ ಕಲಾಕೃತಿಗಳನ್ನು ರಚಿಸಿ ಕಲಾಪ್ರಭುತ್ವತೆಯನ್ನು ಪಡೆದವರಾಗಿದ್ದಾರೆ. ಒಮ್ಮೆ ನೋಡಿದ ವ್ಯಕ್ತಿಯನ್ನು ತಮ್ಮ ಕೈಚಳಕದಿಂದ ವ್ಯಕ್ತಿಯ ಭಾವಚಿತ್ರವನ್ನು ಕೇವಲ ಐದಾರು ನಿಮಿಷಗಳಲ್ಲಿ ತದ್ರೂಪವಾಗಿ ಚಿತ್ರಿಸುವ ಇವರು ಕಲಾವೈಖರಿ ವಿಸ್ಮಯಕಾರಕವಾಗಿದೆ. ಸಂಪೂರ್ಣವಾಗಿ ಭಾರತೀಯ ಸಂಪ್ರದಾಯಿಕ ಚಿತ್ರಕಲಾ ಶೈಲಿಯಲ್ಲಿಯೇ ತಮ್ಮ ಕಲಾ ಜೀವನವನ್ನು ನಡೆಸಿಕೊಂಡು ಬಂದ ಸಿ.ಎನ್.ಪಾಟೀಲರು "ನವ್ಯಕಲೆ"ಯನ್ನು ತಿರಸ್ಕರಿಸುವುದಿಲ್ಲ. 'ಕಲೆಗೆ ಹೊಸ ತಿರುವು ಬೇಕೆ ಬೇಕು ಎಂಬುದು ಅವರವಾದ. ಅದಕ್ಕಿರುವ ಚೌಕಟ್ಟನ್ನು ಕಲಾವಿದ ಮೀರಿವರ್ತಿಸಬಾರದು ಎಂಬ ಮನೋಭಾವನೆಯ ಸಿ.ಎನ್.ಪಾಟೀಲರು ಸಹ ನವ್ಯ ಶೈಲಿಯಲ್ಲಿ ಕಲಾಕೃತಿಗಳ ರಚನೆಯನ್ನು ಮಾಡಿದ್ದಾರೆ.

ಸಿ.ಎನ್.ಪಾಟೀಲರು ಒಬ್ಬ ಒಳ್ಳೆಯ ಆಡಳಿತಗಾರರೂ ಹೌದು. ರಾಜ್ಯದ ಪಠ್ಯಪುಸ್ತಕ ರಚನಾ ಸಮಿತಿಯ ಚಿತ್ರಕಲಾ ವಿಭಾಗದ ಸದಸ್ಯರಾಗಿ, ರಾಜ್ಯ ಮಟ್ಟದ ಸಮ್ಮೇಳನದ ಕಲಾವಿಭಾಗದ ಸದಸ್ಯರಾಗಿ, ಹಲವಾರು ಸಲಹೆ ಸೂಚನೆಯನ್ನು ನೀಡುವುದರ ಮೂಲಕ ಕಲಾಸೇವೆ ಮಾಡಿದ್ದಾರೆ. ಅಲ್ಲದೆ ಮೈಸೂರು ದಸರಾ ಕಲಾಪ್ರದರ್ಶನ ಸಮಿತಿಯ ಸದಸ್ಯರಾಗಿ, ಧಾರವಾಡದ ಕರ್ನಾಟಕ ಆರ್ಟ್ ಸೊಸಾಯಿಟಿಯ ಸದಸ್ಯರಾಗಿ, ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಸದಸ್ಯರಾಗಿ, ಇನ್ನೂ

೧೦೧. ಸಿ.ಎನ್. ಪಾಟೀಲ ಸಂದರ್ಶನ ದಿನಾಂಕ ೯-೧೧-೨೦೦೬

ಅನೇಕ ಸಂಘ-ಸಂಸ್ಥೆಗಳ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಸಾಹಿತ್ಯರತ್ನ ಪದವೀಧರರಾದ ಶ್ರೀ ಸಿ.ಎನ್.ಪಾಟೀಲರು ಕಲೆಯ ಬಗೆಗೆ ಹಲವಾರು ಲೇಖನಗಳನ್ನು ಬರೆದಿರುವರಲ್ಲದೆ ಕಲೆಯ ಕುರಿತು ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ.

೧೯೪೭ರಲ್ಲಿ ವಿಜಯ ಕಲಾಮಂದಿರದ ಪ್ರಾರಂಭದಲ್ಲಿ ಗೌರವ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ದಕ್ಷ ಆಡಳಿತಗಾರರಾದ ಶ್ರೀ ಸಿ.ಎನ್. ಪಾಟೀಲರು ೧೯೪೯ರಲ್ಲಿ ಉಚ್ಚಕಲಾ ತರಗತಿಯ ಅಡ್ವಾನ್ಸ್ ಡ್ರಾಯಿಂಗ ಮತ್ತು ಡಿ.ಟಿ.ಸಿ. ಪರೀಕ್ಷೆಯನ್ನು ಮುಂಬಯಿನ ಸರ್ ಜೆ.ಜೆ. ಕಲಾಶಾಲೆಯಲ್ಲಿ ರಾಜ್ಯಕ್ಕೆ ಪ್ರಥಮ ರಾಯಂಕ್ ಪಡೆದು ಪಾಸಾದರು ಅಲ್ಲಿರುವ ಮುಖ್ಯಸ್ಥರು ಪಾಟೀಲರನ್ನು ಅದೇ ಕಲಾಶಾಲೆಯಲ್ಲಿ ಕಲಾಶಿಕ್ಷಕರಾಗಲು ಆಹ್ವಾನ ನೀಡಿದರು. ಪಾಟೀಲರು ಅದನ್ನು ನಯವಾಗಿ ತಿರಸ್ಕರಿಸಿದರು. ಪಾಟೀಲರು ಶಿಕ್ಷಣ ಮುಗಿಸಿ ೧೯೫೦ರಲ್ಲಿ ಗದುಗಿಗೆ ಬಂದರು. ಇದರಿಂದ ಅಕ್ಕಿಯವರ ಆಸೆಗೆ ಹೆಚ್ಚಿನ ಬಲಬಂದಿತು. ಅಕ್ಕಿಯವರು ಸಿ.ಎನ್.ಪಾಟೀಲರನ್ನು ವಿಜಯ ಕಲಾಮಂದಿರದ ಗೌರವ ಪ್ರಾಂಶುಪಾಲರನ್ನಾಗಿ ಮಾಡಿ ಎ.ಆಯ್.ಕಮಾನುಗಾರ ಅವರನ್ನು ಶಿಕ್ಷಕ ಸಿಬ್ಬಂದಿಯಲ್ಲಿ ಸೇರ್ಪಡೆ ಮಾಡಿಕೊಂಡರು. ಅವರಿಬ್ಬರ ಜೀವನ ನಿರ್ವಹಣೆಗೆ ಗದುಗಿನಲ್ಲಿ ಹೊಸದಾಗಿ ಶ್ರೀ ಸಿ.ಎನ್.ಪಾಟೀಲರು ಪ್ರಾರಂಭಿಸಿದ್ದ ಮಾಡೆಲ್ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರನ್ನಾಗಿ ನೇಮಕವಾದರು. ಸಿ.ಎನ್.ಪಾಟೀಲರು ಗದುಗಿನ ಮುನಸಿಪಲ್ ಸ್ಕೂಲ್ ಬೋರ್ಡ್‌ನವರು ನಡೆಸುತ್ತಿದ್ದ ಹತ್ತಾರು ಪ್ರಾಥಮಿಕ ಶಾಲೆಗಳಲ್ಲಿ ಎ.ಆಯ್.ಕಮಾನುಗಾರ ಅವರನ್ನು ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸಲು ಅಕ್ಕಿಯವರು ಅನುವು ಮಾಡಿಕೊಟ್ಟರು.[೧೦೨]

ವಿದ್ಯಾರ್ಥಿಗಳ ಸಂಖ್ಯೆಯನ್ನು ಹಂತ ಹಂತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯುವ ಹಾಗೆ ಉತ್ತಮ ಕೆಲಸಗಳನ್ನು ಮಾಡಿದರು. ಇಂದಿಗೂ ಸಿ.ಎನ್.ಪಾಟೀಲರು ವಿಜಯ ಕಲಾಮಂದಿರಕ್ಕೆ ಉಪಪ್ರಾಚಾರ್ಯರಾಗಿ ಕೆಲಸ ಮಾಡಿದ ರೀತಿಗಳನ್ನು ವಿದ್ಯಾರ್ಥಿಗಳಾದ ಶ್ರೀ ಎಂ.ಆರ್. ಬಾಳಿಕಾಯಿಯವರು ಹೇಳುತ್ತಾರೆ.[೧೦೩] ದಕ್ಷ ಆಡಳಿತಗಾರರಾದ ಸಿ.ಎನ್. ಪಾಟೀಲರವರು ವಿಜಯ ಕಲಾಮಂದಿರ ಬೆಳೆಯಲು ತಳಹದಿಯನ್ನು ಹಾಕಿಕಟ್ಟವರಲ್ಲಿ ಪ್ರಮುಖರಾಗಿದ್ದಾರೆ.

ಸಿ.ಎನ್. ಪಾಟೀಲರು ಚಿತ್ರಕಲೆಯ ಜೊತೆಗೆ ಉತ್ತಮ ನಾಟಕ ನಿರ್ದೇಶನವನ್ನು ಮಾಡುವ ಪ್ರತಿಭೆಯನ್ನು ಹೊಂದಿದ್ದರು. ಶ್ರೀಯುತರು ಬರೆದ ಅನೇಕ ನಾಟಕಗಳಲ್ಲಿ "ಚಿಕ್ಕಮ್ಮ" "ರಾಷ್ಟ್ರವೀರ" "ನಾಟಕ" "ಶಾಂತಿ ಸಾಮ್ರಾಟ" ದೊಡ್ಡಾಟದ ಜೊತೆಯಲ್ಲಿಯೇ ಹಲವಾರು ಜಾನಪದ ಗೀತೆ, ಕಥನಗಳನ್ನು ಬರೆದಿದ್ದಾರೆ. ಇವರು ಬರೆದ "ರಾಷ್ಟ್ರವೀರ" ನಾಟಕಕ್ಕೆ ಕೇಂದ್ರ ಸರಕಾರದಿಂದ ೫೦೦೦-೦೦ರೂ ನಗದು ಬಹುಮಾನ ಮತ್ತು ಪ್ರಶಸ್ತಿ ದೊರೆತಿದೆ. ನಾಗರಿಕ ನಾಟಕಗಳನ್ನು ನಿರ್ದೇಶಿಸಿರುವ ಸಿ.ಎನ್.ಪಾಟಿಲರು ಅಣ್ಣ - ತಮ್ಮ, ಟಿಪ್ಪುಸುಲ್ತಾನ, ದಸರಾ, ಬೂದಿಮುಚ್ಚಿದ ಕೆಂಡ, ಮಾಂಗಲ್ಯ

---

೧೦೨. ಜಮಾದಾರ ಲೇ, ಸಿ.ಎನ್. ಪಾಟೀಲ ಬದುಕು ಮತ್ತು ಕಲಾಕೃತಿಗಳು ಪು.ಸಂ. ೩೪

೧೦೩. ಪ್ರಾ ಅಶೋಕ ಅಕ್ಕಿ ಪ್ರಸಂ. ವಿ.ಟಿ. ಕಾಳೆ. ಲೇ. ವಜ್ರವಿಜಯ ನೆನಪಿನ ಸಂಚಿಕೆ ಪು.ಸ. ೧೯

ಭಾಗ್ಯ, ಗುರುಕಾಣಿಕೆ ಮೊದಲಾದ ನಾಟಕಗಳಲ್ಲಿ ಪ್ರಧಾನ ಪಾತ್ರವಹಿಸಿರುವರು. "ಜಗಜ್ಯೋತಿ ಬಸವೇಶ್ವರ" ನಾಟಕವನ್ನು ನಿರ್ದೇಶಿಸಿದರಲ್ಲದೇ ಅದರಲ್ಲಿ ಬಿಜ್ಜಳನ ಪಾತ್ರವಹಿಸಿದ್ದಾರೆ. ರಕ್ತಗತವಾಗಿರುವ ಈ ಕಲೆಯಿಂದಾಗಿ ಅವರು ತಮ್ಮ ರಚನಾ ಸಾಮರ್ಥ್ಯವನ್ನು ಮೆರೆಸಿದ್ದಾರೆ.[೧೦೪]

ಸಿ.ಎನ್.ಪಾಟೀಲರು ಉತ್ತಮ ಕಾವಿದರು, ಉತ್ತಮ ಆಡಳಿಗಾರರು, ಉತ್ತಮ ನಾಟಕ ನಿರ್ದೇಶಕರು, ಉತ್ತಮ ಸಾಹಿತಿಗಳು ಹೀಗೆ ಅನೇಕ ಗ್ರಂಥಗಳಿಗೆ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಭಾರತ ಸ್ಕೌಟ್ ಹಾಗೂ ಜಿಲ್ಲಾ ಸ್ಮರಣ ಸಂಚಿಕೆ, ಕಲಾತಪಸ್ವಿ ಶ್ರೀ ಟಿ.ಪಿ.ಅಕ್ಕಿ ಅವರ ಸಂಭಾವನಾ ಗ್ರಂಥ "ಕಾಯಕ ಕಲೆ" ಮುಂತಾದ ಸ್ಮರಣ ಸಂಚಿಕೆಗಳ ಸಂಪಾಧಕರಾಗಿ "ನವರಾಜ" ಹೊತ್ತಿಗೆಯ ಸಹ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಹೀಗೆ ಹಲವಾರು ಚಿತ್ರಕಲಾ ಶಿಕ್ಷಣಕ್ಕೆ ತಮ್ಮ ಜೀವನವನ್ನು ಮುಡಪಾಗಿಟ್ಟಿದ್ದಾರೆ. ೧೯೮೬ರಲ್ಲಿ ನರಗುಂದ ಬಾಬಾಸಾಹೇಬರ ಮನೆಯಲ್ಲಿನ ಭಿತ್ತಿಚಿತ್ರಗಳ ಪ್ರತಿಕೃತಿಗಳನ್ನು ಮಾಡಿ ಅಪೂರ್ವವಾದ ಕೃತಿಗಳನ್ನು ಸಂಗ್ರಹಮಾಡಿದ್ದಾರೆ.

ಸಿ.ಎನ್.ಪಾಟಿಲರು ಅನೇಕ ಉತ್ತಮವಾದ ಕಲಾಕೃತಿಗಳನ್ನು ರಚಿಸುತ್ತಾ ನಾಡಿನ ಅನೇಕ ಸಂಘ-ಸಂಸ್ಥೆಗಳಿಂದ ಸರಕಾರಗಳಿಂದ, ಅಕಾಡೆಮಿಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ೧೯೮೧-೮೨ನೇ ಸಾಲಿನ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಗದುಗಿನಲ್ಲಿ ನಡೆದ ರಾಜ್ಯಮಟ್ಟದ ಕಲಾ ಪ್ರದರ್ಶನದಲ್ಲಿ ಸಂಯೋಜನ ಚಿತ್ರಕ್ಕೆ ಪ್ರಥಮ ಬಹುಮಾನ, ಕಲಾಬ್ರಹ್ಮ ಲಲಿತಕಲಾ ಭೂಷಣ, ಕಲಾ ಕುಂಜ, ಗುರುಸೇವಕ, ಸಾಹಿತ್ಯ ಸುಧಾರಕ, ಗಮಕ ಕಲಾವಿದ್ವನ್ ಬಡವಿದ್ಯಾರ್ಥಿಗಳ ಬಂಧು ಹೀಗೆ ಹಲವಾರು ಪ್ರಶಸ್ತಿಗಳು ಇವರಿಗೆ ಸಂದಿವೆ. ಅನೇಕ ಸಂಮಾನಗಳನ್ನು ಸ್ವೀಕರಿಸಿದ್ದಾರೆ. ೧೯೭೧ರಲ್ಲಿ ಜನಗಣತಿಯ ಸೂಪರ್‌ವೈಜರ್‌ರಾಗಿ ಉತ್ತಮ ಸೇವೆ ಸಲ್ಲಿಸಿ ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಿದ್ದಾರೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಅವರು ಕಲಾಕ್ಷೇತ್ರಕ್ಕೆ ಯುವ ಪೀಳಿಗೆಗಳಿಗೆ ಕೊಡಮಾಡಿರುವ ನೂರಾರು ಕಲಾಕೃತಿಗಳು ನಾಡಿನ ಅಮೂಲ್ಯವಾದ ಆಸ್ತಿಗಳಾಗಿವೆ. ಸಿ.ಎನ್.ಪಾಟೀಲರು ರಚಿಸಿದ ಅನೇಕ ಕಲಾಕೃತಿಗಲು ಪ್ರದರ್ಶನಗಳು ಹಲವು ಕಡೆಗಳಲ್ಲಿ ನಡೆದಿವೆ. ಗದಗ, ಬೆಂಗಳೂರು, ದೆಹಲಿ, ಪೂನಾ, ಬಾಂಬೆ, ಬಿಜಾಪೂರ, ಹುಬ್ಬಳ್ಳಿ, ಧಾರವಾಡ, ಕಾರವಾರ ಮುಂತಾದ ಅನೇಕ ಸ್ಥಳಗಳಲ್ಲಿ ಸಿ.ಎನ್.ಪಾಟೀಲರವರ ಕಲಾಕೃತಿಗಳು ಸಂಗ್ರಹಗೊಂಡಿವೆ. ಅಸಂಖ್ಯ ಚಿತ್ರಗಳನ್ನು ರಚಿಸಿರುವ ಶ್ರೀ ಪಾಟೀಲರು ಅನ್ನದಾನಪ್ಪ ದೊಡ್ಡಮೇಟಿ ಅವರ ಕರ್ನಾಟಕ ಏಕೀಕರಣ ಆಂದೋಲನದ ಮಹಾದ್ಯೋತಕವಾದ ರಾಜರಾಜೇಶ್ವರಿಯ ಬೃಹತ್ ಚಿತ್ರವನ್ನು ರಚಿಸಿಕೊಟ್ಟ ಕೀರ್ತಿ ಪಾಟೀಲರದು. ಈ ಚಿತ್ರ ಏಕೀಕರಣದ ಸ್ಪೂರ್ತಿಯ ಸೆಲೆಯಾಗಿ ನಾಡಿನ ಉದ್ದಗಲ ಸಂಚರಿಸಿ ಕರ್ತನಿಗೆ ಅಪಾರ ಕೀರ್ತಿಯನ್ನು ತಂದುಕೊಟ್ಟಿತು. ಕರ್ನಾಟಕ? ಮಾನಕರಣೋತ್ಸವ ಸಮಯದಲ್ಲಿ ಇದೇ ಚಿತ್ರ 'ಪ್ರಜಾಮತ'ದ ಮುಖಪುಟವಾಗಿ ಲಕ್ಷಾಂತರ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಯಿತು.[೧೦೫] ತಾಯಿ ಭುವನೇಶ್ವರಿಯ ಕಲಾ ಕೃತಿಯನ್ನು ಮೂರು ಕಲಾಕೃತಿಗಳನ್ನು ರಚಿಸಿದ್ದಾರೆ. ಒಂದು ಕಲಾಕೃತಿಯು ಅನ್ನದಾನಪ್ಪ ದೊಡ್ಡಮೇಟಿಯವರ ಮನೆಯಲ್ಲಿ ಇದೆ. ಇನ್ನೊಂದು ಕಲಾಕೃತಿಯು

---

೧೦೪. ಜ್ಯೋತಿರ್ಲಿಂಗ, ಸುವರ್ಣ ಮಹೋತ್ಸವ ಸಂಚಿಕೆ ಪು.ಸಂ. ೬೫

೧೦೫. ಪ್ರಶಸ್ತಿ ಪಡೆದ ಕಲಾವಿದರು, ಕ.ಲ.ಕ.ಅ.ಬೆಂ. ೧೯೬೫-೯೩ ಪು. ಸಂ. ೯೯

ಗದುಗಿನ ಉಪವಿಭಾಗಾಧಿಕಾರಗಳವರ ಕಛೇರಿಯಲ್ಲಿದೆ. ಮತ್ತೊಂದು ಕಲಾಕೃತಿಯು ವಿಧಾನಸೌಧ ಬೆಂಗಳೂರಿನಲ್ಲಿದೆ. ಹೀಗೆ ತಾಯಿ ಭುವನೇಶ್ವರಿಯ ಕಲಾಕೃತಿಯನ್ನು ರಚಿಸಿ ರಾಜ್ಯದ ಪ್ರಥಮ ಕಲಾವಿದರಾಗಿದ್ದಾರೆ. ಸಿ.ಎನ್. ಪಾಟೀಲರ ಅನೇಕ ಕಲಾಕೃತಿಗಳು ಹಲವಾರು ದೇವಸ್ಥಾನಗಳಲ್ಲಿ, ಮಠಗಳಲ್ಲಿ, ಶ್ರೀಮಂತರ ಮನೆಗಳಲ್ಲಿ ಸಂಗ್ರಹಗೊಂಡಿವೆ. ಶ್ರೀ ಅನ್ನದಾನಪ್ಪ ದೊಡ್ಡಮೇಟಿಯವರು ಮನೆಯಲ್ಲಿ ಶ್ರೀ ಹಿರೇಗೌಡರ ರವರ ಮನೆಯಲ್ಲಿ, ತೋಂಟದಾರ್ಯ ಮಠದಲ್ಲಿ, ಶ್ರೀ ಅನ್ನದಾನೇಶ್ವರಮಠ. ಮುಂಡರಗಿ, ಡಾ.ಪಂಪುಟ್ಟರಾಜ ಗವಾಯಿಗಳರವರ ಮಠದಲ್ಲಿ ಗದಗ-ಬೆಟಗೇರಿ ನಗರಸಭೆಯಲ್ಲಿ ೧೯ ಕಲಾಕೃತಿಗಳಲ್ಲಿ ೯ ಶ್ರೀ ಸಿ.ಎನ್.ಪಾಟೀಲರವರ ಕಲಾಕರತಿಗಳು. ಶ್ರೀ ಬಳಗಾನೂರ ಮಠದಲ್ಲಿ ಸಿ.ಎನ್.ಪಾಟೀಲರ ಚೆನ್ನವೀರ ಶರಣರ ಕಲಾಕೃತಿಯನ್ನು ರಚಿಸಿದ್ದು ಶ್ರೀಮಠದಲ್ಲಿ ಸಂಗ್ರಹವಾಗಿದೆ. ಇವರ ತೈಲವರ್ಣ ಜಲವರ್ಣದ ಅನೇಕ ಚಿತ್ರಗಳು ಭಾರತದ ಪ್ರಮುಖ ನಗರಗಳಲ್ಲಿಯಲ್ಲದೇ ದೇಶ ವಿದೇಶಗಳ ಅನೇಕ ಕಡೆಗಳಲ್ಲಿ ಸಂಗ್ರಹಗೊಂಡು ಕಲಾರಸಿಕರನ್ನು ಮೆಚ್ಚಿಸಿವೆ.[೧೦೬]

ಹೀಗೆ ಕಲಾಕೃತಿಗಳನ್ನು ರಚಿಸುವುದರ ಮೂಲಕ ಒಬ್ಬ ಶ್ರೇಷ್ಠ ಕಲಾವಿದರಾದ[೧೦೭] ಶ್ರೀ ಪಾಟೀಲರು ಕೇವಲ ಚಿತ್ರಕಲೆಯಲ್ಲಷ್ಟೇ ಅಲ್ಲ ಕ್ರೀಡೆಯಲ್ಲಿಯೂ ಆಸಕ್ತಿ ಹೊಂದಿದ್ದರು. ತಮ್ಮ ವಿದ್ಯಾಭ್ಯಾಸದ ಜೊತೆಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದರು. ಕ್ರಿಕೇಟ್, ವಾಲಿಬಾಲ್, ಹಾಕಿ, ಪುಟ್‌ಬಾಲ್, ಕಬಡ್ಡಿ, ಖೊ ಖೊ, ಮುಂತಾದ ಆಟಗಳಲ್ಲಿ ಬಹಳ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಹೀಗಾಗಿ ಪಾಟೀಲರು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಶ್ರೇಷ್ಠ ಕ್ರೀಡಾಪಟುವೆಂದು ಹೆಸರು ಪಡೆದರು. ಮುಂದೆ ಗದಗನಲ್ಲಿಯೇ ಪ್ರತಿ ವರ್ಷ ಆಲ್ ಇಂಡಿಯ ಪುಟ್‌ಬಾಲ್ ಸ್ಪರ್ಧೆ ನಡೆಯುತ್ತಾದರೂ ಅದು ಒಂದೆಡರು ವರ್ಷಗಳಲ್ಲಿ ನಿಂತಿತು. ಮುಂದೆ ಹಾಕಿ ಸ್ಪರ್ಧೆಯು ಪ್ರಾರಂಭವಾಯಿತು. ರಾಷ್ಟ್ರದ ಹಲವಾರು ಕಡೆಗಳಿಂದ ಆಟಗಾರರು ಬಂದರು, ಮುಂಬಯಿ, ಪಂಜಾಬ್, ಪೂನಾ, ಸಿಂಗಾಪೂರ, ನರಗುಂದಗಳ ಕ್ರೀಡಾ ಪಟುಗಳು ಸಹ ಭಾಗಿಯಾಗುತ್ತಿದ್ದರು. ಆಗ ರಾಷ್ಟ್ರದ ಹಾಕಿ ಟೀಮಿನ ನೇತಾರ ಶ್ರೀ ಬಲವೀರಸಿಂಗ್‌ರವರು ಉದ್ದಾವ್‌ಸಿಂಗ್, ಮುಂತಾದವರೆಲ್ಲರೂ ಗದುಗಿಗೆ ಆಗಮಿಸಿದ್ದರು. ನನಗೆ ಶ್ರೀ ಬಲವೀರಸಿಂಗ್ ಅವರೊಡನೆ ಗಾಢವಾದ ಮೈತ್ರಿಯಾಯಿತೆಂದು ಸಿ.ಎನ್. ಪಾಟೀಲರು ತಮ್ಮ ಹಸ್ತಲಿಖಿತ ಪುಸ್ತಕದಲ್ಲಿ ಒಂದು ಕಡೆ ಹೇಳಿದ್ದಾರೆ.[೧೦೮] ಹೀಗೆ ಸಿ.ಎನ್.ಪಾಟೀಲರು ಚಿತ್ರಕಲೆಯ ಜೊತೆಗೆ ಉತ್ತಮ ಕ್ರೀಡಾಪಟುಗಳಾಗಿ ಸಾಧನೆ ಮಾಡಿದ್ದಾರೆ.

ಹೀಗೆ ಸಿ.ಎನ್.ಪಾಟೀಲರು ಹಲವಾರು ಮುಖಗಳಿಂದ ಕನ್ನಡ ನಾಡು ನುಡಿಗಾಗಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿತ್ರಕಲಾ ಕ್ಷೇತ್ರಕ್ಕೆ ತಮ್ಮದೇ ಆದ ವಿಶೇಷ ಸೇವೆ ಸಲ್ಲಿಸಿದ್ದಾರೆ. ಪಾಟೀಲರು ಗದಗ ಜಿಲ್ಲೆಗೆ ಉತ್ತಮ ಕಲಾಕೃತಿ ರಚಿಸುವುದರ ಮೂಲಕ ಚಿತ್ರಕಲಾ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ.

---

೧೦೬. ಪ್ರಶಸ್ತಿ ಪಡೆದ ಕಲಾವಿದರು, ಕ.ಲ.ಕ.ಅ.ಬೆಂ. ೧೯೬೫-೯೩ ಪು. ಸಂ.೧೦೦

೧೦೭. ಸಿ.ಎನ್. ಪಾಟೀಲರು ಬರೆದ ಅಪ್ರಕಟಿತ ಲೇಖನ

೧೦೮. ಸಿ.ಎನ್. ಪಾಟೀಲರು ಬರೆದ ಅಪ್ರಕಟಿತ ಲೇಖನ

ಸಿ.ಎನ್. ಪಾಟೀಲರ ಕಲಾಕೃತಿಗಳು

ರೇಖಾಚಿತ್ರಗಳು : ಚಿತ್ರ : ೧. ಯಕ್ಷಗಾನ : ಈ ಚಿತ್ರವನ್ನು ಕಪ್ಪು ಸ್ಕೆಚ್ ಪೆನ್ನಿನಿಂದ ಚಿತ್ರಿಸಲಾಗಿದೆ ಇದರಲ್ಲಿ ಮೂವರು ಮಾನವಕೃತಿಗಳಿದ್ದು, ರೇಖೆಗಳಿಂದ ಪೂರ್ಣಗೊಳಿಸಿದ್ದಾರೆ. ಕಿರೀಟ ಮೈಯಲ್ಲಿದ್ದ ಆಭರಣಗಳು ಸ್ಪಷ್ಟವಾದ ನಕ್ಷೆಯಲ್ಲಿದಿದ್ದರೂ ಸಹ ಉಡುಗೆ-ತೊಡುಗೆಗಳನ್ನು ಸಮರ್ಪಕವಾಗಿ ಕಾಣುವಂತೆ ಇವೆ. ಒಬ್ಬರ ಕೈಯಲ್ಲಿ ಬರ್ಚಿಯು ಹಿಡಿದಿದ್ದು ಅವನ ಹಿಂದೆ ಮಹಿಳೆಯು ನಿಂತಿದ್ದು, ಎದುರುಗಡೆ ಮತ್ತೊಬ್ಬ ವ್ಯಕ್ತಿ ನಿಂತಿದ್ದು ಅವನು ಶಂಕು ಆಕಾರದ ಬರ್ಚಿಯು ಹಿಡಿದುಕೊಂಡಿರುವಂತೆ ಕಾಣುತ್ತದೆ. ಇವರ ಮುಖದಲ್ಲಿ ಕಣ್ಣು, ಮೂಗು, ಬಾಯಿ, ಸ್ಪಷ್ಟವಾದ ರೇಖೆಗಳಿಂದ ರಚಿಸಿದೆ. ಇದೊಂದು ಉತ್ತಮ ರೇಖಾ ಚಿತ್ರಣವಾಗಿದೆ.

ಚಿತ್ರ : ೨. ಧಾರ್ಮಿಕ ಹಿನ್ನಲೆ : ಈ ಚಿತ್ರಣವನ್ನು ಸಿ.ಎನ್. ಪಾಟೀಲರವರು, ಕಪ್ಪು ಕಡ್ಡಿ, ಪೆನ್ನಿನಿಂದ ಸ್ಪಷ್ಟವಾದ ರೇಖೆಗಳಿಂದ ರಚಿಸಿದ್ದಾರೆ. ಕಿರೀಟ ಆಭರಣಗಳನ್ನು ಮಿತವಾಗಿ ಕೇವಲ ರೇಖೆಗಳಿಂದ ಚಿತ್ರಿಸಲಾಗಿದೆ. ಕಣ್ಣು, ಮುಗು ಸ್ಪಷ್ಟವಾಗಿಲ್ಲ. ಅವುಗಳ ಪೂರ್ಣತೆಯ ಅನುಭವ ಬರುವಂತೆ ಸೀಮಿತ ರೇಖೆಗಳಿಂದ ಚಿತ್ರಿಸಲಾಗಿದೆ. ಹಿಂದೆ ಕೈಯಲ್ಲಿ ದೀಪ, ಹಣ್ಣು, ಹಂಪಲ ಮುಂತಾದವುಗಳನ್ನು ಹಿಡಿದುಕೊಂಡು ಸೇವಕ ನಿಂತಿದ್ದಾನೆ. ವೀರಭದ್ರೇಶ್ವರನ ಕೈಯಲ್ಲಿ ಖಡ್ಗಾ ಹಿಡಿದುಕೊಂಡಿರುವುದು ತಲೆಯ ಮೇಲೆ ಕಿರೀಟ ಇದೆ. ಭೂತದೇವ ಪೂಜೆಯಲ್ಲಿ ಮಗ್ನವಾಗಿ ಕೈಯಲ್ಲಿ ಗದೆ ಹಡಿದುಕೊಂಡು ಕುಳಿತುರುವುದು, ಪಕ್ಕದಲ್ಲಿ ಸ್ತ್ರೀ ತನ್ನ ಹಣೆಗೆ ಕೈ ಹಚ್ಚಿ ಮನಕಾಲು ಊರಿ ಕುಳಿತ್ತಿದ್ದಾಳೆ ಈ ಚಿತ್ರಣವನ್ನು ಉತ್ತಮ ರೇಖೆಗಳಿಂದ ರಚಿಸಿದ್ದಾರೆ.

ಚಿತ್ರ : ೩. ಅಂಜಂತಾ ಪರಿಸರದ ಭೂ ದೃಶ್ಯ : ಈ ಚಿತ್ರಣವನ್ನು ಪೆನ್ಸಿಲ ಮಾಧ್ಯಮದಿಂದ ಚಿತ್ರಿಸಲಾಗಿದೆ. ಇದರಲ್ಲಿ ನಿಸರ್ಗದೃಶ್ಯಗಳ ಹಿನ್ನೆಲೆಯಲ್ಲಿ ಭವ್ಯವಾದ ಗುಡ್ಡಗಳನ್ನು ಕಾಣುತ್ತೇವೆ. ಮತ್ತು ಅಜಂತಾ ಗುಹೆಗಳಿಗೆ ಎಡಭಾಗದಲ್ಲಿ ಕಲ್ಲು ಬಂಡೆಗಳ ಮೇಲೆ ಹೋಗುವ ದಾರಿ ಮಧ್ಯದಲ್ಲಿ ಜುಳುಜುಳು ಹರಿಯುತ್ತಿರುವ ನದಿಯು. ಮಧ್ಯಭಾಗದಲ್ಲಿ ದೊಡ್ಡದಾದ ಬೆಟ್ಟ ಇದೆ. ಬೆಟ್ಟದ ತುದಿಯಲ್ಲಿ ಒಂದು ಮಂದಿರ ಇದೆ. ಇಲ್ಲಿಗೆ ಹೋಗುವ ಮಾರ್ಗವನ್ನು ಚಿತ್ರಿಸಿದ್ದಾರೆ. ಚಿತ್ರದ ಒಂದು ಭಾಗ ಮೋಡ ಇದ್ದು. ಮೂರು ಭಾಗ ಬೆಟ್ಟಗಳು ಗುಹೆಗಳನ್ನು ನದಿಯ ಚಿತ್ರಣವನ್ನು ಚಿತ್ರಿಸಿದ್ದಾರೆ. ಈ ಚಿತ್ರದ ನೆರಳು ಬೆಳಕಿನಿಂದ ಕೂಡಿದ್ದು. ದೂರ ಸಮೀಪದ ಯಥಾದರ್ಶನ ತತ್ವವು ಸ್ಪಷ್ಟವಾಗಿ ಕಂಡು ಬರುತ್ತದೆ. ಇದು ಸಿ.ಎನ್. ಪಾಟೀಲರವರ ಕಲಾಕೃತಿಯ ಕರುಪ್ರತಿಯನ್ನು ರಚಿಸಿದ್ದು, ಉತ್ತಮ ರೇಖೆಗಳಿಂದ ಕೂಡಿದ ಚಿತ್ರಣವಾಗಿದೆ.

೪. ರಾಶಿ ಮಾಡುವಲ್ಲಿ ನಿರತ : ಈ ಚಿತ್ರಣವನ್ನು ಕಪ್ಪು ಪೆನ್ನಿನಿಂದ ಸ್ಪಷ್ಟವಾದ ರೇಖೆಳಿಂದ ಪೂರ್ಣಗೊಳಿಸಿದ್ದಾರೆ. ಇದು ದೈನಂದಿನ ರೇಖಾ ಚಿತ್ರವಾಗಿದೆ. ಇದರಲ್ಲಿ ವ್ಯಕ್ತಿಗಳು ಹಲವಾರು ಇದ್ದುರ ಅಸ್ಪಷ್ಟವಾಗಿ ರಚಿಸಿದ್ದಾರೆ. ಎಡಭಾಗದಲ್ಲಿ ಎತ್ತರದ ಅಟ್ಟದ ಮೇಲೆ ನಿಂತು ರಾಶಿ ಸುರಿಯುತ್ತಿರುವುದು. ಬಲಭಾಗದಲ್ಲಿ ಭತ್ತ ಬಡೆಯುತ್ತಿರುವುದು ಮಧ್ಯಭಾಗದಲ್ಲಿ ಧಾನ್ಯವನ್ನು ತಂದು ಕೊಡುತ್ತಿರುವ ಚಿತ್ರವಿದೆ. ಹಿನ್ನಲೆಯಲ್ಲಿ ಗಿಡ, ಗುಡ್ಡಗಳು ಕಾಣುತ್ತವೆ. ಅಸ್ಪಷ್ಟವಾದ ಮಾನವಾಕೃತಿ ಇದ್ದರು, ವಿಷಯ ಸ್ಪಷ್ಟವಾಗಿ ತಿಳಿದುಬರುತ್ತದೆ.

ಭಾವಚಿತ್ರಗಳು : ೧. ಚಿತ್ರ : ಮೌಲಾನ ಅಬ್ದುಲ್ ಕಲಾಮ್ ಆಝಾದ್ : ತೈಲವರ್ಣ ಮಧ್ಯದಲ್ಲಿ "೨೦x೩೦" ಅಳತೆಯ ಕ್ಯಾನವಾಸ್ ಮೇಲೆ ಚಿತ್ರಿಸಿದ ಅಬ್ದುಲ್ ಕಲಾಮರವರು ಭಾವ ಚಿತ್ರವಿದು. ಆಝಾದ್ ಬ್ಯಾಂಕ್ ಗದಗನಲ್ಲಿ ಸಂಗ್ರಹಗೊಂಡಿದೆ. ಕಟ್ಟಿಗೆಯ ಚೇರು ಮೇಲೆ ಪುಸ್ತಕವನ್ನು ಹಿಡಿದು ಕುಳಿತ್ತಿದ್ದಾರೆ. ತಲೆಯ ಮೇಲೆ ಕಪ್ಪು ವರ್ಣದ ಟೋಪಿ ಇದೆ. ತಿಳಿ ಹಳದಿಯ ಕೋಟನ್ನು ಧರಿಸಿದ್ದಾರೆ. ಮುಖದಲ್ಲಿ ಸೌಮ್ಯತೆಯಿಂದ ಗಂಭೀರವಾಗಿ, ಕಣ್ಣಿನ ದೃಷ್ಟಿಕೋನ, ನೇರವಾಗಿದೆ, ಬಿಳಿ, ಕುಂಚುಮೀಸೆ, ಫ್ರೆಂಚಕಟ್ ಗಡ್ಡವಿದೆ. ನೇರವಾದ ಮೂಗು, ಗಲ್ಲದಲ್ಲಿ ಮೂಡಿದೆ ಮಡಿಕೆ ಸ್ಪಷ್ಟವಾಗಿ ಚಿತ್ರದಲ್ಲಿ ಮೂಡಿ ಬಂದಿದೆ. ಹಿನ್ನಲೆಯಲ್ಲಿ ನೀಲಿ ವರ್ಣದ ಬಟ್ಟೆಯ ಮೈವಳಿಕೆಯ ತುಂಬಾ ನೈಜವಾಗಿ ಚಿತ್ರಿಸಿದ್ದಾರೆ. ನೆರಳು ಬೆಳಕಿನ ಛಾಯೆಯನ್ನು ಸ್ಪಷ್ಟವಾಗಿ ಕಾಣುತ್ತವೆ. ಪಾಟೀಲರು ತಮ್ಮ ವಿಶೇಷ ಕಲಾ ಕೌಶಲ್ಯದಿಂದ ಈ ಭಾವಚಿತ್ರವನ್ನು ರಚಿಸಿದ್ದಾರೆ.

ಚಿತ್ರ : ೨. ಲಾರ್ಡ್ ಬೇ-ಟನ್ ಪಾವೆಲ್ : ಈ ಶಿರಭಾವ ಚಿತ್ರವು ೧೬x೧೮ ಅಳತೆಯ ೧೯೫೪ಳರಲ್ಲಿ ಜಲವರ್ಣ ಮಾಧ್ಯಮದಿಂದ ರಚಿಸಿದ್ದಾರೆ. ಬಿಳಿ ವರ್ಣ ಮಿಶ್ರಿತ ಫೆಬ್ರಿಕ್ ಮಾಧ್ಯಮ ಬಳಸಿದ್ದಾರೆ. ಈ ಚಿತ್ರವು ಮುನ್ಸಿಪಾಲ್ ಹೈಸ್ಕೂಲನಲ್ಲಿ ಸಂಗ್ರವಾಗಿದೆ. ಮುಖದಲ್ಲಿ ಮಂದಹಾಸ ನಗೆ ಇದ್ದು ಕಣ್ಣು ಕಂದು ವರ್ಣದಿಂದ ನೈಜವಾಗಿ ಚಿತ್ರಿಸಿದ್ದಾರೆ ತಲೆಯ ಮೇಲೆ ಹಸಿರು ಮತ್ತು ಹಳದಿ ವರ್ಣದ ಪಟ್ಟೆಯ ಪೇಠಾ ಇದೆ. ಕೊರಳಲ್ಲಿ ತಿಳಿ ನೀಲಿ ವರ್ಣದ ಟೈ ಹಾಕಿಕೊಂಡಿದ್ದಾರೆ. ಸ್ಕೌಟ್ ಮತ್ತು ಗೈಡ್, ಖಾಖಿಯ ಬಟ್ಟೆ ಯುನಿಫಾರ್ಮ ಧರಿಸಿದ್ದಾರೆ. ನೇರವಾದ ಮೂಗು ಎರಡು ಗಲ್ಲದಲ್ಲಿ ಮೂಡಿದ ಭಾವನೆ ಸ್ಪಷ್ಟವಾಗಿ ಮೂಡಿ ಬಂದಿದೆ. ಎಡಗಡೆಯ ಕಿವಿಯ ಅರ್ಧಭಾಗ ಕಾಣುತ್ತದೆ. ಎರಡು ಎದೆ ಭಾಗದಲ್ಲಿ ಚಿಹ್ನೆಯ ಪಟ್ಟಿಯ ಸ್ಪಷ್ಟವಾಗಿ ತೋರಿಸಿದ್ದಾರೆ. ಹಿನ್ನಲೆಯಲ್ಲಿ ತಿಳಿ ನೀಲಿ ಮತ್ತು ಕಪ್ಪ ನೀಲಿ ಮಿಶ್ರಿತ ವರ್ಣದಿಂದ ಚಿತ್ರವನ್ನು ತಮ್ಮ ಕಲಾ ಕೌಶಲ್ಯದಿಂದ ಪೂರ್ಣಗೊಳಿಸಿದ್ದಾರೆ.

ಪೂರ್ಣ ಭಾವ ಚಿತ್ರಗಳು : ಚಿತ್ರ : ೧. ಶ್ರೀ ಪಂಡಿತ ಡಾ. ಪುಟ್ಟರಾಜ ಕವಿ ಗವಾಯಿ : ಈ ಕಲಾಕೃತಿ "೪x೮" ಅಡಿ ಭವ್ಯ ಗಾತ್ರವಿದದ್ದು ವಿರೇಶ್ವರ ಪುಣ್ಯಾಶ್ರಮದಲ್ಲಿ ಸಂಗ್ರಹವಾಗಿದೆ. ಈ ಕಲಾಕೃತಿಯು ತೈಲವರ್ಣದಿಂದ ರಚಿತವಾಗಿದ್ದು. ಶ್ರೀ ಡಾ. ಪುಟ್ಟರಾಜ ಗವಾಯಿಗಳವರು ಕಟ್ಟಿಗೆಯ ಸಿಂಹಾಸನದ ಮೇಲೆ ಕುಳಿತಿರುವ ಭಂಗಿ ಇದೆ. ಹಿನ್ನಲೆಯಲ್ಲಿ ನಟರಾಜನ ವಿಗ್ರಹವಿದ್ದು ಕತ್ತಲೆಯಲ್ಲಿರುವಂತೆ ಇದೆ. ಕೊರಳಲ್ಲಿ ಕೆಂಪು ಬಣ್ಣ ಶಾಲ್ ಇದ್ದು ಹಳದಿ ವರ್ಣದ ನಕ್ಷೆಯನ್ನು ಹೊಂದಿದೆ. ಕಲಾವಿದರು ಈ ಕಲಾಕೃತಿಯಲ್ಲಿ ಮುಖ್ಯ ಆಕೃತಿಯನ್ನು ಪ್ರಧಾನಗೊಳಿಸಿದ್ದಾರೆ. ಒಟ್ಟಾರೆ ನೋಡುಗರಲ್ಲಿ ಭಕ್ತಿ ಮೂಡಿಸುವಷ್ಟು ನೈಜವಾಗಿ ಚಿತ್ರಿಸಿದ್ದಾರೆ.

ಚಿತ್ರ : ೨. ಶ್ರೀ ಸಚ್ಚಿದಾನಂದ ಸ್ವಾಮಿಗಳು : ಈ ಕಲಾಕೃತಿಯು "೩x೪" ಅಳತೆಯ ಹಾರ್ಡ್‌ಬೋರ್ಡ್ ಮೇಲೆ ಇತ್ತೀಚೆಗೆ ರಚಿಸಿದ ಕಲಾಕೃತಿಯಾಗಿದೆ. ಈ ಕಲಾಕೃತಿಯು ಶ್ರೀ ಸಚ್ಚಿದಾನಂದ ಮಠದಲ್ಲಿ ಸಂಗ್ರಹಿತವಾಗಿದೆ. ಸಚ್ಚಿದಾನಂದ ಸ್ವಾಮಿಗಳು ಪದ್ಮಾಸನವಾಗಿ ಹುಲಿಯ ತೊಗಲಿನ ಮೇಲೆ ಕುಳಿತಿದ್ದಾರೆ. ಮುಖದಲ್ಲಿ ಸಮಾಧಾನವಾಗಿ ಕಣ್ಣುಗಳು ದೃಷ್ಟಿ ನೇರವಾಗಿದ್ದು, ಮೂಗು ಬಾಯಿ ನೈಜವಾಗಿ ಚಿತ್ರಿಸಿದ್ದಾರೆ. ಕೊರಳಲ್ಲಿ ಮುತ್ತಿನ ಹಾರ ಮತ್ತು ರುದ್ರಾಕ್ಷಿ ಸರವಿದೆ. ಹಿನ್ನಲೆಯಲಿ ನೀಲಿ

ಮತ್ತು ಬಿಳಿ ಮಿಶ್ರಿತವಾದ ತಲೆಯ ಹಿಂದೆ ಬಿಳಿ ವರ್ಣ ವೃತ್ತಾಕಾರದ ಬಿಂಬಿಸುವಂತೆ ಕಾಣುತ್ತವೆ. ಈ ಕಲಾಕೃತಿಯು ಆಕರ್ಷಕವಾಗಿದ್ದು ನೆರಳ ಬೆಳಕಿನ ಕಡೆಗೆ ಹೆಚ್ಚಿನ ಆದ್ಯತೆ ನಿಡಿದ್ದಾರೆ.

ಚಿತ್ರ : ೩. ಶ್ರೀ ರವೀಂದ್ರನಾಥ ಠಾಗೋರ : ಈಪೂರ್ಣ ಭಾವಚಿತ್ರವು "೩x೪" ಅಳತೆಯ ಹೊಂದಿದ್ದು, ಕ್ಯಾನವಾಸನ ಮೇಲೆ ತೈಲವರ್ಣ ಮಾಧ್ಯಮದಿಂದ ಪೂರ್ಣಗೊಂಡಿದೆ. ಇದು ನಗರಸಭೆ ಗದಗ ಬೆಟಗೇರಿಯಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯು ರಾಷ್ಟ್ರಕವಿ ರವೀಂದ್ರನಾಥ ಠಾಗೋರರವರು ಇದ್ದು, ಈ ಕಲಾಕೃತಿಯಲ್ಲಿ ಠಾಗೋರರವರು ಖುರ್ಚಿಯ ಮೇಲೆ ಬುಕ್ಕನ್ನು ಹಿಡಿದುಕೊಂಡು ವಿಚಾರವನ್ನು ಮಾಡುತ್ತಿರುವ ಹಾಗೆ ಕಂಡುಬರುತ್ತದೆ. ಮುಖದಲ್ಲಿ ಬರ್ನಟ್ ಸೇನಾ, ಕೆಂಪು, ಹಳದಿ ಮತ್ತು ನೀಲಿ ವರ್ಣಗಳಿಂದ ಕೂಡಿದೆ. ಮೈಮೇಲಿನ ಬಟ್ಟೆಯ ಹಳದಿ ವರ್ಣದಿಂದ ಇದ್ದು ಅದೇ ಬಣ್ಣದಿಂದ ನೆರಳು ಬೆಳಕುಗಳಿಂದ ಕೂಡಿದ್ದು, ಒಂದು ಸುಂದರವಾದ ಕಲಾಕೃತಿ ರಚನೆಗೊಂಡಿದೆ ಅಲ್ಲದೇ ಈ ಕಲಾವಿದರು ನೆರಳು ಸ್ಪಷ್ಟವಾಗಿ ತೋರಿಸಿದ್ದಾರೆ. ಹಿನ್ನಲೆಯಲ್ಲಿ ಹೂವಿನ ಗಿಡಗಳಿದ್ದು ಮುಖ್ಯ ಆಕೃತಿ, ಹೂದಾನಿ, ಪುಸ್ತಕಗಳಿಗೆ ಬಳಸಿದ ಪ್ರಖರ ವರ್ಣಗಳನ್ನು ಹೆಚ್ಚಾಗಿ ಬೆಳಸದೆ ಸೌಮ್ಯ ವರ್ಣಗಳಿಂದ ಕೂಡಿದೆ. ಹೀಗಾಗಿ ರವೀಂದ್ರನಾಥ ಟ್ಯಾಗೋರ್ ಚಿತ್ರ ಸ್ಪಷ್ಟವಾಗಿ ಮೂಡಿಬಂದಿದ್ದು ಕಲಾವಿದರ ವರ್ಣ ಜಾಣ್ಮೆಯನ್ನು ತೋರಿಸುತ್ತದೆ. ಮತ್ತು ಹೂದಾನಿಯನ್ನು ಸುಂದರವಾಗಿ ಚಿತ್ರಿಸಿ ಅದರ ನೆರಳು ಪುಸ್ತಕದ ಮೇಲೆ ಬಿದ್ದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಒಟ್ಟಾಗಿ ನೋಡುಗರುನ್ನು ಕಲಾಕೃತಿಯನ್ನು ನೋಡುವಂತೆ ಮಾಡುತ್ತದೆ. ರವೀಂದ್ರನಾಥ ಟ್ಯಾಗೋರ್‌ರ ವ್ಯಕ್ತಿತ್ವವನ್ನು ಈ ಕಲಾಕೃತಿ ಬಿಂಬಿಸುತ್ತದೆ. ಅವರ ಮುಖಭಾವ ನೀಳ ಕೇಶರಾಶಿ, ಧರಿಸಿದ ಬಟ್ಟೆಯ ನಿರಿಗೆಗಳು ಸ್ಪಷ್ಟವಾಗಿ ಮೂಡಿ ಬಂದಿವೆ.

೪. ಶ್ರೀ ಬಸವೇಶ್ವರರು : ಈ ಕಲಾಕೃತಿಯು "೪x೮" ಅಡಿ ಭವ್ಯ ಗಾತ್ರವಾಗಿದೆ. ಈ ಕಲಾಕೃತಿಯು ಜಗಜ್ಯೋತಿ ಬಸವೇಶ್ವರರ ಕೃತಿ ಇದ್ದು ತೈಲವರ್ಣದಲ್ಲಿ ರಚಿತವಾಗಿದೆ. ಈ ಕೃತಿಯಲ್ಲಿ ಸುಂದರವಾದ ವೇಷ ಭೂಷಣಗಳಿಂದ ಕುಡಿದ್ದಾಗಿದೆ. ಈ ಕಲಾಕೃತಿಯಲ್ಲಿ ಕಿರೀಟವನ್ನು ಕೆಂಪು ಮಿಶ್ರ ಹಳದಿ ವರ್ಣದಿಂದ ಕೂಡಿದೆ. ಇದರಲ್ಲಿ ಅನೇಕ ಸೂಕ್ಷ್ಮವಾದ ನಕ್ಷೆಗಳನ್ನು ಒಳಗೊಂಡಿದೆ, ಉದ್ದವಾದ ಅಂಗಿಯನ್ನು ಧರಿಸಿದ್ದಾರೆ. ಈ ಅಂಗಿಯ ತೋಳಗಳಲ್ಲಿ ಸುಂದರವಾದ ನಕ್ಷೆಯನ್ನು ಚಿತ್ರಿಸಲಾಗಿದೆ. ಈ ನಕ್ಷೆಯಲ್ಲಿ ಕೆಂಪು ಹಸಿರು. ನೀಲಿ ವರ್ಣ ಮುತ್ತುಗಳಂತೆ ಕಾಣುವ ಆಕಾರವನ್ನು ಈ ಅಂಗಿಯ ಪಟ್ಟಿಕೆಯನ್ನು ಸುಂದರವಾಗೆ ಕಾಣುವಂತೆ ಮಾಡಿದ್ದಾರೆ. ಕೃತಿಯ ಎಡಭಾಗದಲ್ಲಿ ಖಡ್ಗದ ಕವಚದ ಮೇಲೆ ಸುಂದರವಾದ ನಕ್ಷೆಯನ್ನು ಚಿತ್ರಿಸಿದೆ. ಎಡಭಾಗದಲ್ಲಿ ಒಂದು ಅಲಂಕಾರಿಕ ಮೇಜಿನ ನಕ್ಷೆಯುಳ್ಳ ಅರಿವೆಯನು ಹೊದಿಸಿ ಅದರ ಮೇಲೆ ಪುಸ್ತಕವನ್ನು ಇಟ್ಟಿದ್ದಾರೆ. ಒಟ್ಟಾರೆಯಾಗಿ ಕಲಾಕೃತಿಯು ಸುಂದರವಾಗಿ ರೂಪಗೊಂಡಿದೆ. ಈ ಕಲಾಕೃತಿಯು ಗದುಗಿನ ತೋಂಟದಾರ್ಯಮಠದಲ್ಲಿ ಸಂಗ್ರಹಗೊಂಡಿದೆ.

೫. ಚಿತ್ರ : ಕೆ.ಎಸ್. ಪಾಟೀಲ : ಈ ಪೂರ್ಣಭಾವ ಚಿತ್ರವು "೧೪x೧೮" ಇಂಚು ಅಳತೆಯ ಪೇಪರಿನ ಮೇಲೆ ಜಲವರ್ಣ ಮಾಧ್ಯಮದಿಂದ ರಚಿಸಿದ್ದಾರೆ. ಇದರಲ್ಲಿ ಬಿಳಿ ವರ್ಣ ಮಿಶ್ರಿತ ಕ್ರೇಯಾನ ಮಾಧ್ಯಮವನ್ನು ಬಳಸಿದ್ದಾರೆ. ಈ ಕಲಾಕೃತಿಯಲ್ಲಿ ಬೆತ್ತದ ಕುರ್ಚಿಯಲ್ಲಿ ಕುಳಿತ ದೃಶ್ಯವಿದ್ದು

ಕುಳಿತಿರುವ ವ್ಯಕ್ತಿಯ ಕರಿಕೋಟು, ಬಿಳಿ ಧೋತರ, ಕೈಯಲ್ಲಿ ಕೋಲು ಪಕ್ಕದಲ್ಲಿ ಟೇಬಲ್ ಮೇಲೆ ಹೂದಾನಿ ಪುಸ್ತಕಗಳಿದ್ದು, ನೋಡುಗರಿಗೆ ಗಂಭೀರ ಸ್ವಭಾವವನ್ನು ಹೋಲುವ ವ್ಯಕ್ತಿತ್ವವನ್ನು ಈ ಕಲಾ ಕೃತಿಯಲ್ಲಿ ಕಲಾವಿದರು ತಮ್ಮ ಕೈಚಳಕವನ್ನು ಮೂಡಿಸಿದ್ದಾರೆ. ಹಿನ್ನಲೆಯಲ್ಲಿ ನೀಲಿ ವರ್ಣದ ಬಟ್ಟೆಹಾಕಿದ್ದು ಅದರ ಮಡಿಕೆಗಳನು ನೈಜವಾಗಿ ಮೂಡಿಬಂದಿವೆ. ಅಲ್ಲದೆ ಹೂದಾನಿ ಹಿಂದೆ ದಪ್ಪನೆಯ ಕಂಬವಿದ್ದು ಒಟ್ಟಾರೆ ಆ ಕಲಾಕೃತಿಗೆ ಸರಿಹೊಂದುವಂತೆ ಚಿತ್ರಿಸಿದ್ದಾರೆ.

೬. ಚಿತ್ರ : ಶ್ರೀ ಸಿ.ಪಿ. ಮಾಳಶೆಟ್ಟಿ : ಈ ಪೂರ್ಣ ಭಾವಚಿತ್ರವು "೪ x೬" ಅಳತೆಯ ಭವ್ಯ ಗಾತ್ರ ಹೊಂದಿದ್ದು, ಗದಗ ಬೆಟಗೇರಿ ನಗರಸಭೆಯಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯಲ್ಲಿ ಪೂರ್ಣ ಭಾವಚಿತ್ರಣವಿದೆ, ಮುಖ್ಯ ಆಕೃತಿಯ ಮುಖವು ಯತಾವತ್ತಾಗಿ ಚಿತ್ರಿತವಾಗಿದೆ. ಹಾಗೂ ನೈಜತೆಯಿಂದ ಕೂಡಿದೆ. ಚಿತ್ರದಲ್ಲಿರುವ ವ್ಯಕ್ತಿಯು ಕೈಯಲ್ಲಿ ಕೊಡೆ ಇನ್ನೊಂದು ಕೈಯಲ್ಲಿ ಚಿಕ್ಕ ಪುಸ್ತಕವನ್ನು ಹಿಡಿದಕೊಂಡು ನಿಂತಿರುವ ಆಕೃತಿಯು ಇದೆ. ಹಿನ್ನಲೆಯು ಅಷ್ಟೇ ಸುಂದರವಾಗಿ ಚಿತ್ರಿತಗೊಂಡಿದೆ.

೭. ಚಿತ್ರ : ರಾಣಾಪ್ರತಾಪ ಸಿಂಹ : ಈ ಪೂರ್ಣ ಭಾವಚಿತ್ರವು "೪ x೬" ಅಳತೆಯ ಭವ್ಯ ಗಾತ್ರ ಹೊಂದಿದ್ದು, ಗದಗ ಬೆಟಗೇರಿ ನಗರಸಭೆಯಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯು ಮಹಾರಾಣಾಪ್ರತಾಪ ಸಿಂಹರವರ ಕಲಾಕೃತಿ ಇದ್ದು ಕಲಾಕೃತಿಯು ತೈಲವರ್ಣದಿಂದ ರಚನೆಯಾಗಿದೆ.ರಾಣಾಪ್ರತಾಪ ಸಿಂಹ ಕೈಯಲ್ಲಿ ಭರ್ಚಿಯನ್ನು ಹಿಡಿದು ಒಂದು ಪಾದವನ್ನು ಕಲ್ಲು ಬಂಡೆಯ ಮೇಲೆ ಇಟ್ಟು ನಿಂತಿರುವ ಕೃತಿಯಾಗಿದೆ. ಈ ಕೃತಿಯಲ್ಲಿ ಹೆಚ್ಚಾಗಿ ನೀಲಿ ಬಣ್ಣವನ್ನು ಬಳಕೆ ಮಾಡಿದ್ದಾರೆ. ಪ್ರತಾಪ ಸಿಂಹ ಧೈರ್ಯಶಾಲಿಯಾಗಿ ನಿಂತಿರುವ ಕಲಾಕೃತಿಯಾಗಿದೆ. ಈ ಕಲಾಕೃತಿಯಲ್ಲಿ ಎದೆಯ ಮೇಲಿನ ರಕ್ಷಾ ಕವಚವನ್ನು ಹಳದಿ ವರ್ಣದಿಂದ ರಚನೆಗೊಂಡಿದೆ ಹಾಗೆಯೇ ಕಲಾಕೃತಿಯಲ್ಲಿ ಕೊರಳಲ್ಲಿ ಹಾಕಿದ ಮುತ್ತಿನ ಹಾರವನ್ನು ತುಂಬಾ ಸುಂದರವಾಗಿ ಚಿತ್ರಿತವಾಗಿದೆ. ಕಲಾಕೃತಿಯ ಹಿಂಭಾಗ ಅರಮನೆಯ ಚಿತ್ರಣವಿದ್ದು ಅರಮನೆಯ ಮೇಲೆ ಕೆಂಪು ಮತ್ತು ಕೇಸರಿ ವರ್ಣದ ಬಾವುಟ ಹಾರಾಡುತ್ತಿವೆ. ಮತ್ತು ಅರಮನೆಯ ಅಂಗಳದಲ್ಲಿ ಒಂದು ಬಿಳಿಯ ಕುದುರೆಯನ್ನು ಕೂಡ ಚಿತ್ರಿಸಲಾಗಿದೆ. ಒಟ್ಟಾರೆ ಕಲಾಕೃತಿ ಭಾವ ಪೂರ್ಣವಾಗಿ ರಚನೆಗೊಂಡಿದೆ ಇದು ತೈಲವರ್ಣದಲ್ಲಿ ರಚನೆಗೊಂಡಿದೆ.

ಸಂಯೋಜನೆಯ ಕಲಾಕೃತಿಗಳು :

ಚಿತ್ರ : ೧. ಅಥಣಿ ಶಿವಯೋಗಿಗಳು : ಈ ಕಲಾಕೃತಿಗಳಲ್ಲಿ ಸ್ವಾಮಿಯವರು ಆರ್ಶಿವಾದ ಭಂಗಿ ಇದ್ದು ಹಿನ್ನಲೆಯ ದೊಡ್ಡ ಮರ ಗಿಡ ನದಿ ಸುಂದರವಾಗಿ ಚಿತ್ರಿಸಲ್ಪಟ್ಟಿವೆ. ಜಿಂಕೆ, ಹಾವು, ಹುಲಿಗಳ ಚಿತ್ರಣವಿದು ಹುಲಿಯು ಸ್ವಾಮಿಜಿಯವರಿಗೆ ನಮಸ್ಕರಿಸುವಂತೆ ಚಿತ್ರಿಸಲಾಗಿದೆ. ಈ ಕೃತಿಯು ಕಾಲನ ಕೈಗೆ ಸಿಕ್ಕಿದ್ದಿರಿಂದಲೋ ಸಂರಕ್ಷಣೆ ರಹಿತದಿಂದಲೋ ಆಸ್ಪಷ್ಟವಾಗಿದೆ. ಆದರೂ ಕಲಾವಿದರ ನೈಜ ಚಿತ್ರಣ ಇದೆ. ಈ ಕಲಾಕೃತಿಯನ್ನು ಒಟ್ಟಾರೆ ನೋಡಲಾಗಿ ವ್ಯಾಘ್ರ ಮೃಗವೊಂದು ಸ್ವಾಮೀಜಿಯವರಿಗೆ ಶರಣಾದಂತೆ ಸ್ವಾಮೀಜಿಯವರಿಗೆ ಶರಣಾದಂತೆ ಸ್ವಾಮೀಜಿಯವರ ಪ್ರಭಾವ ಮತ್ತು ಭಕ್ತರಸ ಉತ್ಪನ್ನವಾಗುವಂತೆ ಚಿತ್ರ ರಚನೆಯಾಗಿದ್ದು ಕಾಣಸಿಗುತ್ತದೆ. ಇದು ತೈಲವರ್ಣದಲ್ಲಿ ರಚನೆಗೊಂಡಿದೆ.


ಚಿತ್ರ : ೨. ವಿಶ್ರಮಿಸುತಿರುವ ರಾಧಾ : ಈ ಕಲಾಕೃತಿಯು "೨೦ x ೩೦" ಇಂಚು ಅಳತೆಯ ಗಾತ್ರವಿದೆ. ಸಿ.ಎನ್. ಪಾಟೀಲರು ಈ ಕಲಾಕೃತಿಯನ್ನು ಬಂಗಾಲಿ ಶೈಲಿಯಲ್ಲಿ ರಚಿಸಿರುತ್ತಾರೆ. ಪೇಪರಿನ ಮೇಲೆ ಜಲವರ್ಣದಿಂದ ಚಿತ್ರಿಸಿ, ಪ್ರಧಾನ ರೇಖೆರಹಿತ ರಚನೆಯು ಈ ಶೈಲಿಯ ಪ್ರಮುಖ ಲಕ್ಷಣವಾಗಿದೆ. ಹೀಗಾಗಿ ಸಿ.ಎನ್. ಪಾಟೀಲರು ಈ ಕಲಾಕೃತಿಯಲ್ಲಿ ಮಹಿಳೆ ಅವಳ ಹಿಮದಿರುವ ಕಮಲದ ದೊಡ್ಡ ಹೂ ಹಾಗೂ ಅವಳ ಕೆಳಗೆ ಒಂದು ತಂಬೂರಿ, ಹಿನ್ನಲೆಯಲ್ಲಿ ಬಿಳಿ ಪಕ್ಷಿಗಳನ್ನು ತುಂಬಾ ಸುಂದರ ಹಾಗೂ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಜಲವರ್ಣವನ್ನು ವಾರ್ಶಮೆಥೇಡ್‌ನಲ್ಲಿ ಬಳಸಿ ನೋಡುಗರನ್ನು ಆಕರ್ಷಿಸುವಂತೆ ಮಾಡಿದ್ದಾರೆ. ಈ ಕಲಾಕೃತಿಯು ವಿಜಯಕಲಾ ಮಂದಿರದಲ್ಲಿ ಸಂಗ್ರಹಗೊಂಡಿದೆ.

೩. ಚಿತ್ರ : ಸಾರು ಹೇಳುವವರು : ಈ ಕಲಾಕೃತಿಯು "೧೪ x ೨೦" ಅಳತೆಯನ್ನು ಹೊಂದಿದ್ದು ೧೯೯೧ರಲ್ಲಿ ಕ್ಯಾನವಾಸ್ ಮೇಲೆ ತೈಲವರ್ಣ ಮಾಧ್ಯಮದಲ್ಲಿ ರಚಿಸಲಾಗಿದೆ. ಯೋಗಿಗಳು ತ್ರಿಶೂಲವನ್ನು ಹಿಡಿದುಕೊಂಡು ಮಳಿಗಳ ನಾಟ ಮೇಲೆ ನಿಂತಿದ್ದಾರೆ. ಇವರ ಮುಖದಲ್ಲಿ ಗಂಭೀರವಾಗಿ ನೇರ ದೃಷ್ಟಿಯಾಗಿದೆ. ಬಿಳಿ ವರ್ಣದ ದಪ್ಪನೆಯ ಮೀಸೆ ಮತ್ತು ಗಡ್ಡವಿದೆ. ತಲೆಯ ಮೇಲೆ ಹಳದಿ ವರ್ಣದ ರುಮಾಲಿದೆ. ಎಡಭಾಗದ ಕೈಯನ್ನು ಮುಷ್ಠಿಯಾಗಿ ಅರ್ಧಭಾಗ ಮಡಚಿದ್ದಾರೆ. ಕೆಂಪು ಮತ್ತು ಹಸಿರು ಮಿಶ್ರಿತ ಬಟ್ಟೆ ಧರಿಸಿದ್ದಾರೆ. ಕೊರಳಲ್ಲಿ ಕಂದು ವರ್ಣದ ಬಟ್ಟೆ ಹಾಕಿದ್ದಾರೆ. ಬಿಗಿಯಾದ ಹಳದಿ ಪಾಯಿಜಾಮ್ ಧರಿಸಿದ್ದಾರೆ. ಹಿನ್ನಲೆಯಲ್ಲಿ ದೇವಸ್ಥಾನಕ್ಕೆ ಹೋಗುತ್ತಿರುವ ಜನರು, ಮನೆಗಳು, ಆಕಾಶವನ್ನು ಯಥಾದರ್ಶನ ತೋರಿಸಿದ್ದಾರೆ. ಈ ಕಲಾಕೃತಿಯು ಸೌತ್ತ ನಾಗಪೂರ ಅಕಾಡೆಮಿಯಲ್ಲಿ ಪ್ರದರ್ಶಿತಗೊಂಡಿದೆ.

೪. ಚಿತ್ರ : ರಾಧಾ ಮತ್ತು ಜಿಂಕೆ : ಈ ಕಲಾಕೃತಿಯು "೨೪*೩೦" ಇಂಚು ಅಳತೆಯದಾಗಿದ್ದು ಪೇಪರಿನ ಮೇಲೆ ಜಲವರ್ಣ ಮಧ್ಯದಲ್ಲಿ ರಚಿಸಿದ್ದಾರೆ. ಪ್ರಧಾನ ರೇಖೆರಹಿತ ರಚನೆಯು ಈ ಶೈಲಿಯ ಪ್ರಮುಖ ಲಕ್ಷಣವಾಗಿದೆ. ಈ ಕಲಾಕೃತಿಯಲ್ಲಿ ಮಹಿಳೆ ಕಟ್ಟೆಯ ಮೇಲೆ ಒಂದು ಕೈಯಲ್ಲಿ ವೀಣೆಯನ್ನು ಹಿಡಿದುಕೊಂಡು ಕುಳಿತಿರುವುದು ಮತ್ತೊಂದು ಕೈಯಿಂದ ಜಿಂಕೆಗೆ ಹುಲ್ಲನ್ನು ತಿನಿಸುತ್ತಿದ್ದಾಳೆ. ಮತ್ತೊಂದು ಜಿಂಕೆಯು ಮೇಲೆ ಮುಖ ಮಾಡಿ ಅವಳನ್ನು ನೋಡುತ್ತಿದೆ. ಹಿನ್ನಲೆಯಲ್ಲಿ ಹಸಿರು ವರ್ಣ ಮಿಶ್ರಿತ ಸಂಪ್ರದಾಯಿಕ ಎಲೆಗಳ ಗಿಡಗಳಿವೆ. ದೂರದಲ್ಲಿ ಗುಡ್ಡಗಳು ಮಧ್ಯದಲ್ಲಿ ನದಿ ಹರಿದು ಬಂದು ಬಿಳುತ್ತಿರುವುದು ಯಥಾದರ್ಶನವಾಗಿ ನೈಜವಾಗಿ, ಅಲಂಕಾರಿಕ, ಸುಂದರವಾಗಿ, ಚಿತ್ರಿಸಿದ್ದಾರೆ. ಬಿಳಿ ಮಿಶ್ರಿತ ಛಾಪಮೇಥೇಡ್ ಪದ್ಧತಿಯಲ್ಲಿ ಬಳಸಿದ್ದಾರೆ ಈ ಕಲಾಕೃತಿಯ ದೆಹಲಿ ಅಕಾಡೆಮಿಯಲ್ಲಿ ಸಂಗ್ರಹಗೊಂಡಿದೆ.

೫. ಚಿತ್ರ : ಭುವನೇಶ್ವರಿ : ಈ ಕಲಾಕೃತಿಯು "೪ x ೮" ಅಳತೆಯ ಭವ್ಯ ಗಾತ್ರವನ್ನು ಹೊಂದಿದ್ದು ಗದಗ ಬೆಟಗೇರಿ ನಗರಸಭೆಯಲ್ಲಿ ಸಂಗ್ರಹಗೊಂಡಿದೆ. ಈ ಕಲಾಕೃತಿಯು ಭುವನೇಶ್ವರಿಯು ಕಲಾಕೃತಿ ಇದ್ದು ಕ್ಯಾನವಾಸ್ ಮೇಲೆ ತೈಲವರ್ಣದಿಂದ ರಚಿತವಾಗಿದೆ. ಮಾತೆ ಭುವನೇಶ್ವರಿಯ ನಿಂತ ಭಂಗಿಯು ಮನಮೋಹಕವಾಗಿ ಚಿತ್ರಣಗೊಂಡಿದೆ. ಭುವನೇಶ್ವರಿಯ ಕಲಾಕೃತಿಯಲ್ಲಿ ನಾಲ್ಕು ಕೈಗಳು ಕಲಾಕೃತಿ ಇದ್ದು ಬಂಗಾರದ ಕಿರೀಟವನ್ನು ಧರಿಸಿದ್ದಾಳೆ ಮತ್ತು ಕೊರಳಲ್ಲಿಯ ಚಿನ್ನದ

ಸಿ.ಎನ್.ಪಾಟೀಲ ರವರ ರೇಖಾ ಚಿತ್ರಗಳು




ಸಿ.ಎನ್.ಪಾಟೀಲ




ಚಿತ್ರ: ೧.



ಚಿತ್ರ: ೨.



ಚಿತ್ರ: ೩.



ಚಿತ್ರ: ೪.

ಎನ್ ಪಾಟೀಲ ರವರ ಪೂರ್ಣ ಭಾವಚಿತ್ರಗಳು



ಚಿತ್ರ: ೧. ಪಂಡಿತ ಡಾ.ಪುಟ್ಟರಾಜ ಕವಿ ಗವಾಯಿಗಳು



ಚಿತ್ರ: ೨.ಶ್ರೀಮನ್ ನಿರಮಜನ ಜಗದ್ಗುರು



ಚಿತ್ರ: ೩.ಶ್ರೀ ರವೀಂದ್ರನಾಥ ಠಾಗೋರ



ಚಿತ್ರ: ೪.ಶ್ರೀ ಬಸವೇಶ್ವರರು

ಕೆ.ಎಸ್.ಪಾಟೀಲ ರವರ ಪೂರ್ಣ ಭಾವಚಿತ್ರಗಳು



ಚಿತ್ರ: ೫.ಶ್ರೀ ಚನ್ನವೀರ ಕಣವಿ



ಚಿತ್ರ: ೬.ಶ್ರೀ ಕೆ.ಎಸ್.ಪಾಟೀಲ



ಚಿತ್ರ: ೭.ಶ್ರೀ ಸಿ.ಪಿ.ಮಾಳಶೆಟ್ಟಿ



ಚಿತ್ರ: ೮. ಶ್ರೀ ಮಹಾರಾಣ ಪ್ರತಾಪ ಸಿಂಹ

ಬಿ.ಎನ್ ಪಾಟೀಲ ರವರ ಸಂಯೋಜನಾ ಚಿತ್ರಗಳು



ಚಿತ್ರ: ೧.



ಚಿತ್ರ: ೨.




ಚಿತ್ರ: ೩.




ಚಿತ್ರ: ೪.

ಎಸ್ ಪಾಟೀಲರ ಭುವನೇಶ್ವರಿ ಕಲಾಕೃತಿಗಳು



ಚಿತ್ರ: ೧.



ಚಿತ್ರ ೨.



ಚಿತ್ರ: ೧.



ಚಿತ್ರ: ೨.

[illegible].ಎನ್.ಪಾಟೀಲ ರವರ ನಿಸರ್ಗಚಿತ್ರಗಳು



ಚಿತ್ರ: ೧.



ಚಿತ್ರ: ೨.



ಚಿತ್ರ: ೩.



ಚಿತ್ರ: ೪.

ಆಭರಣಗಳನ್ನು ತುಂಬಾ ನೈಜವಾಗಿ ಚಿತ್ರಣ ಮಾಡಿದ್ದಾರೆ. ಕೃತಿಯಲ್ಲಿ ಮುಖದ ಭಾವವು ತುಂಬಾ ನಗುಮೊಗದಿಂದ ಕೂಡಿದ್ದು ಹಿಂಭಾಗದ ಬಲಗೈಲ್ಲಿ ತ್ರಿಶೂಲವನ್ನು ಹಡಿದಿದ್ದು ಮತ್ತು ಮುಂದಿನ ಭಾಗದ ಕೈಯ ಅಭಯ ಹಸ್ತವಾಗಿದೆ, ಇನ್ನೂ ಎಡಭಾಗದ ಹಿಂದಿನ ಕೈಯಲ್ಲಿ ಪುಸ್ತಕವನ್ನು ಮತ್ತು ಮುಂಭಾಗದ ಕೈಯಲ್ಲಿ ಕಮಲವನ್ನು ಹಿಡಿದಿದ್ದಾಳೆ. ಕಲಾಕೃತಿಯ ಬಲಭಾಗಕ್ಕೆ ಒಂದು ಪುರಾತನ ದೇವಾಲಯದ ಕಂಬವನ್ನು ಬಳಸಿಕೊಂಡಿದ್ದಾರೆ. ಕೃತಿಯ ಮೇಲ್ಭಾಗದಲ್ಲಿ ಬೇಲೂರು, ಹಳೇಬೀಡು, ಹಂಪೆಯ ಗಣಪತಿ ಮತ್ತು ಕಲೆಯ ವೈಭವವನ್ನು ಚಿತ್ರಿಸಿದ್ದಾರೆ. ಕೃತಿಯ ಹಿನ್ನಲೆಯ ಎಡಭಾಗಕ್ಕೆ ಶ್ರವಣಬೆಳಗೋಳದ ಗೊಮ್ಮಟೇಶ್ವರ, ಜೋಗ ಜಲಪಾತ ಮತ್ತು ಇತಿಹಾಸ ಪ್ರಸಿದ್ಧವಾದ ಬಿಜಾಪುರದ ಗೋಲಗುಂಬಜವನ್ನು ಚಿತ್ರಿಸಿದ್ದಾರೆ. ಭೌಗೋಳಿಕ ವ್ಯಾಪ್ತಿಯಲ್ಲಿ ಒಟ್ಟಾರೆಯಾಗಿ ಕರ್ನಾಟಕ ಇತಿಹಾಸ ಪ್ರಸಿದ್ಧವಾದ ಸ್ಥಳಗಳನ್ನು ಈ ಕಲಾಕೃತಿಯಲ್ಲಿ ಚಿತ್ರಗೈದಿದ್ದಾರೆ. ಈ ಕಲಾಕೃತಿಯು ಕಲಾವಿದರಿಗೆ ತುಂಬಾ ಪ್ರಸಿದ್ಧಿಯನ್ನು ತಂದುಕೊಟ್ಟಿದೆ. ಅಲ್ಲದೇ ತಾವೇ ರಚಿಸಿದ ಈ ಕೃತಿಯನ್ನು ಹಲವಾರು ಬಾರಿ ಪ್ರತಿಕೃತಿ ಮಾಡಿದ್ದಾರೆ. ಪ್ರಥಮ ಕಲಾಕೃತಿಯು ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಚಿತ್ರಿತಗೊಂಡಿದ್ದು ದೊಡ್ಡ ಮೇಟಿ ಅಂದಾನಪ್ಪನವರ ಮನೆಯಲ್ಲಿದೆ ದ್ವಿತೀಯ ಕಲಾಕೃತಿಯು ಗದಗ ಬೆಟಗೇರಿ ನಗರಸಭೆಯಲ್ಲಿದೆ. ತೃತೀಯ ಕಲಾಕೃತಿಯು ಗದಗ, ಎ.ಸಿ. ಆಫೀಸಿನಲ್ಲಿ ಸಂಗ್ರಹಗೊಂಡಿದೆ.

ಚಿತ್ರ : ೬.೭. ನಿಸರ್ಗ ಚಿತ್ರಗಳು : ನಿಸರ್ಗ ಚಿತ್ರಗಳನ್ನು ಹಿಂದಿನಿಂದ ಇಂದಿನವರೆಗೂ ಒಂದೇ ರೀತಿಯಲ್ಲಿ ರಚಿಸುತ್ತಾ ಬಂದಿದ್ದಾರೆ. ಭಾರತೀಯ ಭೂದೃಶ್ಯ ಕಲೆ ತನ್ನದೇ ಆದ ವೈಶಿಷ್ಟ್ಯ, ಶೈಲಿಯನ್ನು ಇಂಪ್ರೇಷನಿಸ್ಟರ ತಂತ್ರಗಳಲ್ಲಿ ಚಿತ್ರಿಸುತ್ತಿರುವ ಈ ಕಲಾವಿದರು ಭಾರತೀಯ ಭೂದೃಶ್ಯಗಳನ್ನು ಯೂರೋಪಿನ ಕಲಾವಿದರು ಪರಿಭಾವಿಸುವಂತೆಯೇ ಚಿತ್ರಿಸುತ್ತಿದ್ದಾರೆ. ಎನ್ನುವ ಮಾತು ಸತ್ಯ ಅದೇ ಪಾಶ್ಚಾತ್ಯ ಶೈಲಿಯ ಕಲಾಶಾಲೆಯಲ್ಲಿ ಸಿ.ಎನ್. ಪಾಟೀಲರು ಕಲಿತದ್ದರಿಂದ ಅವರ ನಿಸರ್ಗ ಚಿತ್ರದಲ್ಲಿ ಆ ಪ್ರಭಾವ ಕಂಡು ಬರುತ್ತದೆ.

ಸಂಯೋಜನಾ ಚಿತ್ರಗಳಲ್ಲಿ ಹಿನ್ನಲೆಯಾಗಿ ಈ ನಿಸರ್ಗವನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ. ಅಲ್ಲಿ ನಮ್ಮ ಭಾರತೀಯ ಶೈಲಿಯ ಕಿರುರೂಪ ಚಿತ್ರದ ಪ್ರಭಾವ ಕಂಡುಬರುತ್ತದೆ. ಗಿಡ, ಮರ, ಬಳ್ಳಿ, ಪಕ್ಷಿಗಳು ಎಲ್ಲವನ್ನು ವಿವರವಾಗಿ ಚಿತ್ರಿಸಿದ್ದಾರೆ. ಇವರು ಚಿತ್ರಿಸಿದ ನಿಸರ್ಗ ಚಿತ್ರದ ವಸ್ತುಗಳು ಹೆಚ್ಚಾಗಿ ಗಿಡಮರಗಳು, ಹಾಳು ಕೋಟಿ, ಮಸೀದಿ, ಮಂಟಪ ಹೊಂಡ, ದೇವಾಲಯದ ಚಿತ್ರಗಳಾಗಿವೆ. ಬಣ್ಣಗಳ ಬಳಕೆಯ ತಮ್ಮದೇ ಆದ ರೀತಿಯಲ್ಲಿ ಬಳಿಸಿದ್ದಾರೆ.

ವ್ಹಿ.ಟಿ. ಕಾಳೆ :

ಸೃಜನಶೀಲ ವ್ಯಕ್ತಿಯ ಅಭಿವ್ಯಕ್ತಿಗೆ ಸರಿಯಾದ ಪ್ರೋತ್ಸಾಹ ಅವಕಾಶಗಳು ಮತ್ತು ಅವನಲ್ಲಿರುವ ನಿರಂತರ ಪರಿಶ್ರಮ, ಪ್ರಯತ್ನಗಳಿದ್ದರೆ ಆ ವ್ಯಕ್ತಿಯ ಪ್ರತಿಭೆ ಬಹುಕೃತವಾಗಿ ಬೆಳೆದು ದೈತ್ಯ ರೂಪದಲ್ಲಿ ಬೆಳಕಿಗೆ ಬರುತ್ತಾರೆ. ಇಂತಹ ವ್ಯಕ್ತಿಗಳು ನಮಗೆ ಅಪರೂಪವಾಗಿ ಕಾಣಸಿಗುತ್ತಾರೆ. ಸಮಾನ್ಯವಾಗಿ ಸಾಧಕರು ತಮ್ಮ ಎಲ್ಲ ಸಾಮರ್ಥ್ಯವನ್ನು ಕೇಂದ್ರೀಕರಿಸಿ ಒಂದೊಂದು ಕ್ಷೇತ್ರದಲ್ಲಿಯೇ ಯಶಸ್ಸಿನ ಮೆಟ್ಟಿಲೇರುತ್ತ ಹೋದವರಿಗೇನೂ ಕಡಿಮೆಯಿಲ್ಲ. ಆದರೆ ಹಲವಾರು ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿ ಆಯಾ ಕ್ಷೇತ್ರದ ದಿಗಂತವನ್ನು ವಿಸ್ತರಿಸುವಲ್ಲಿ ಸಕ್ರಿಯವಾಗಿ ತಮ್ಮ ಅಮೂಲ್ಯವಾದ ಕಾಣಿಕೆಯನ್ನು

ನೀಡುವ ವ್ಯಕ್ತಿಗಳು ಬೆರಳೆಣಿಕೆಯಷ್ಟು. ಇಂತಹ ಅಪರೂಪದ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಕರ್ನಾಟಕದ ಹಿರಿಯ ತಲೆಮಾರಿನ ಕಲಾವಿದರಲ್ಲಿ ಎದ್ದು ಕಾಣುವ ಪ್ರಮುಖ ಹೆಸರು ಶ್ರೀ ವಿ.ಟಿ. ಕಾಳೆಯವರದು.[೧೦೯]

ಉತ್ತರ ಕರ್ನಾಟಕ ಕಲಾಶಿಕ್ಷಕರ ಉದಾತ್ತ ಪರಂಪರೆಯಲ್ಲಿ ಬೆಳೆದು ಬಂದ ಶ್ರೀ ವಿ.ಟಿ.ಕಾಳೆಯವರು ಕರ್ನಾಟಕ ಚಿತ್ರಕಲಾ ರಂಗದಲ್ಲಿ ಅದರಲ್ಲಿ ಅದರಲ್ಲಿಯೂ ಶಿಕ್ಷಣ ರಂಗದಲ್ಲಿ ಸಲ್ಲಿಸಿದ ಸೇವೆ ಅಪಾರ. ಶ್ರೀ ವಿ.ಟಿ. ಕಾಳೆಯವರು ಕಲಾವಿದ, ಶಿಕ್ಷಕ, ಬರಹಗಾರ, ನಾಟಕಕಾರ, ನಿರ್ದೇಶಕ ಹಾಗೂ ಸಿನಿಮಾ ನಟನಾಗಿಯೂ ಬಹುಮುಖ ಪ್ರತಿಭೆಯನ್ನು ಪಡೆದಿದ್ದಾರೆ.[೧೧೦] ತುಳಜಾರಾವ್ ಕಾಳೆಯವರು ಮತ್ತು ಭಂಬವ್ವ ದಂಪತಿಗಳ ೮ನೇಯ ಮಗನಾಗಿ ೧೯೩೪ ರಲ್ಲಿ ವೆಂಕಟೇಶ ಕಾಳೆಯವರು ಬಾಗಲಕೋಟೆ ಜಿಲ್ಲೆಯ ಹುನಗುಂದದ ಬಡರೈತ ಕುಟುಂಬದಲ್ಲಿ ಜನಿಸಿದರು. ಹತ್ತುಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳನ್ನು ಹೊಂದಿದ ದೊಡ್ಡ ಸಂಸಾರವನ್ನು ನಿಭಾಯಿಸುವುದು ಇವರ ತಂದೆಯವರಿಗೆ ಕಠಿಣವಾಗಿತ್ತು. ಒಣ ಬೇಸಾಯ, ಅನಿಶ್ಚಿತ ಮಳೆಯಿಂದಾಗಿ ಬರಗಾಲ ಮೇಲಿಂದ ಮೇಲೆ ಉಂಟಾಗುತ್ತಿತ್ತು. ಇಂಥ ದುರಂತಗಳಿಂದಾಗಿ ಹಲವಾರು ಬವಣೆಪಟ್ಟು, ಗದುಗಿನಲ್ಲಿ ನೆಲೆಸುವಂತಾಯಿತು.[೧೧೧] ಗದುಗಿಗೆ ಬಂದು ಚಿತ್ರಕಲಾ ಅಭ್ಯಾಸ ಮಾಡಲು ಅನುಕೂಲವಾಯಿತು ಎಂದು ಶ್ರೀ ವಿ.ಟಿ. ಕಾಳೆ ಹೇಳುತ್ತಾರೆ. ಪ್ರಾಥಮಿಕ ಶಾಲೆಯಲ್ಲಿಯೇ ಇರುವಾಗ ಉತ್ತಮ ಚಿತ್ರಗಳನ್ನು ರಚಿಸುತ್ತಿದ್ದರು. ವಿ.ಟಿ. ಕಾಳೆಯವರು ವಾಸಿಸುತ್ತಿದ್ದ ಪಕ್ಕದ ಮನೆಯಲ್ಲಿಯೇ ಶ್ರೀ ಎಂ.ಸಿ. ಮುನವಳ್ಳಿಯವರು ಪೌಡರ್ ಫಿನಿಸಿಂಗ್ ಮೂಲಕ ಚಿತ್ರಗಳನ್ನು ರಚಿಸುತ್ತಿದ್ದರು. ಇದನ್ನು ಗಮನಿಸಿದ ಬಾಲಕ ವೆಂಕಟೇಶ ಕಾಳೆಯವರ ಆಸಕ್ತಿ ಮನಸ್ಸು ಅತ್ತಕಡೆಗೆ ಸರಿಯಿತು. ಪ್ರತಿ ದಿನವೂ ಮುನವಳ್ಳಿಯವರು ಚಿತ್ರಿಸುತ್ತಿದ್ದಾಗ ತದೇಕ ಚಿತ್ತದಿಂದ ನೋಡುತ್ತಿದ್ದರು. ಕಾಳೆಯವರು ರಚಿಸಿದ ಕಲಾಕೃತಿಗಳನ್ನು ಒಂದು ದಿನ ಮುನವಳ್ಳಿಯವರು ನೋಡಿ ಹರ್ಷಚಿತ್ತರಾಗಿ, ಕಲಾಗುರು ಟಿ.ಪಿ. ಅಕ್ಕಿಯವರ ಬಳಿಗೆ ಇವರನ್ನು ಕರೆತಂದು ಪರಿಚಯಿಸಿದರು. ಶ್ರೀ ಟಿ.ಪಿ. ಅಕ್ಕಿಯವರು ವೆಂಕಟೇಶ ಕಾಳೆಯವರ ಸುಪ್ತ ಕಲಾ ಪ್ರತಿಭೆಯನ್ನು ಗುರುತಿಸುತ್ತಾರೆ. ಅಲ್ಲಿಂದ ಕಾಳೆಯವರ ಕಲಾ ಬದುಕಿನ ಕಲಾ ಜೀವನದ ಅಧ್ಯಾಯ ಪ್ರಾರಂಭಗೊಂಡಿತು.

೧೯೪೮ರಲ್ಲಿ ಮುನ್ಸಿಪಲ್ ಹೈಸ್ಕೂಲ್ ಗದಗ ಇಲ್ಲಿ ಎಂಟನೆಯ ತರಗತಿಗೆ ಪ್ರವೇಶ ಪಡೆದ ಕಾಳೆಯವರಿಗೆ ಟಿ.ಪಿ. ಅಕ್ಕಿಯವರ ಮಾರ್ಗದರ್ಶನ ದೊರಕಿದ್ದು ಅವರ ಜೀವನದ ಮಾರ್ಗವೇ ನಿರ್ಧಾರವಾಗಿ ಹೋಯಿತೆನ್ನಬಹುದು. ವಿದ್ಯಾರ್ಥಿ ದೆಸೆಯಿಂದ ಹಿಡಿದು ಮುಂದೆ ಅವರ ಬದುಕಿನುದ್ದಕ್ಕು ಸ್ಪಂದಿಸಿ ಅವರೊಬ್ಬ ಬಹುದೊಡ್ಡ ಕಲಾವಿದರಾಗಿ ರೂಪುಗೊಳ್ಳಲು ಟಿ.ಪಿ. ಅಕ್ಕಿಯವರು ನೀಡಿದ ಪ್ರೋತ್ಸಾಹ ಅನನ್ಯವಾದುದು. ಟಿ.ಪಿ. ಅಕ್ಕಿಯವರಿಗೆ ವಿದ್ಯಾರ್ಥಿಗಳೆಂದರೆ ಪಂಚಪ್ರಾಣ. ಪ್ರತಿಭಾವಂತ ವಿದ್ಯಾರ್ಥಿಗಳಿದ್ದರೆ ಅವರಿಗೆ ಏನೆಲ್ಲ ಸಹಾಯವನ್ನು ಮಾಡಲೂ ಇವರು ಮುಂದಾಗುತ್ತಿದ್ದರು.

---

೧೦೯. ವಿ.ಟಿ. ಕಾಳೆ. ಸಂ, ಕ.ಲ.ಕ.ಅ.ಬೆಂ. ಡಾ.ಎಸ್.ಸಿ.ಪಾಟೀಲ ಲೇ.ಪು.ಸಂ.೧

೧೧೦. ಪ್ರಶಸ್ತಿ ಪಡೆದ ಕಲಾವಿದರು ಕ.ಲ.ಕ.ಅ.ಬೆಂ. ಪು.ಸಂ.೧೪೫

೧೧೧. ವಿ.ಟಿ. ಕಾಳೆ (ಸಂ) ಕ.ಲ.ಕ.ಅ.ಬೆಂ.ಡಾ.ಎಸ್.ಸಿ.ಪಾಟೀಲ ಪು.ಸಂ.೧

ಟಿ.ಪಿ.ಅಕ್ಕಿಯವರ ಶಿಷ್ಯರಾಗಿದ್ದು ಒಂದು ಭಾಗ್ಯ ಎಂದು ಅವರ ಅನೇಕ ವಿದ್ಯಾರ್ಥಿಗಳಿಂದ ಕೇಳಿಬರುತ್ತದೆ.[೧೧೨] ಇಂಥ ಒಬ್ಬ ಕಲಾಗುರುಗಳ ಕೈಯಲ್ಲಿ ಪಳಗಿದ ಕಾಲೆಯವರು ಪುಣ್ಯವಂತರು.

ಟಿ.ಪಿ. ಅಕ್ಕಿಯವರು ತಮ್ಮ ಶಿಷ್ಯರ ಶ್ರೇಯೋಭಿವೃದ್ಧಿಗೆ ತಮ್ಮ ಭವಿಷ್ಯನಿಧಿಯ ಹಣವನ್ನು ಅಷ್ಟೇ ಏಕೆ ಹೆಂಡತಿಯ ಕೊರಳಲ್ಲಿಯ ಕಂಠಹಾರವನ್ನೇ ಒತ್ತೆ ಇಟ್ಟು ಮುಂಬಯಿಯಲ್ಲಿ ಕಲಿಯುವ ನನ್ನಂತ ಅನೇಕ ವಿದ್ಯಾರ್ಥಿಗಳಿಗೆ ಹಣದ ಸಹಾಯ ಮಾಡಿದವರು. ತಮ್ಮ ಶಿಷ್ಯರು ಮುಂದೆ ಬರಲೇಂದು ತಮ್ಮ ಜೀವನ ಪರ್ಯಂತ ತ್ಯಾಗ ಜೀವಿಯಾಗಿ ಬದುಕಿದ ಮಹಾಚೇತನ ಅವರು.[೧೧೩] ಎಂದು ಹೇಳುವ ಕಾಳೆಯವರ ಈ ಮಾತುಗಳಲ್ಲಿ ಅಕ್ಕಿಯವರ ಬಗೆಗಿನ ಅವರ ಗೌರವಾದರ ಎಂತಹದು ಎಂಬುದನ್ನು ಕಾಣಬಹುದು. ಇಂತಹ ಶ್ರೇಷ್ಠ ಗುರುವಾತ್ಸಲ್ಯದಲ್ಲಿ ಬೆಳೆದ ಕಾಳೆಯವರು ಅವರಂತೆಯೇ ನಡೆ ನುಡಿಯನ್ನು ಅಳವಡಿಸಿಕೊಂಡು ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ.

ಚಿತ್ರಕಲೆ ಕುರಿತು ಸಾಕಷ್ಟು ಪ್ರೀತಿ ಇರುವ ಕಾಳೆಯವರು ಗದುಗಿನ ಮುನ್ಸಿಫಲ್ ಹೈಸ್ಕೂಲಿನಲ್ಲಿ ಎಲಿಮೆಂಟರಿ ಮತ್ತು ಇಂಟರ್‌ಮಿಡಿಯಟ್ ಡ್ರಾಯಿಂಗ್ ಗ್ರೇಡ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾರೆ. ಅದರಲ್ಲೂ ಮುಂಬಯಿ ಸರಕಾರ ನಡೆಸುತ್ತಿದ್ದ ಈ ಪರೀಕ್ಷೆಯಲ್ಲಿ ಎಲಿಮೆಂಟರಿ ಡ್ರಾಯಿಂಗ್ ಗ್ರೇಡ್‌ನಲ್ಲಿ ಮೂರು ಹಾಗೂ ಇಂಟರ್‌ಮಿಡಿಯಟ್‌ನಲ್ಲಿ ಎರಡು ಬಹುಮಾನಗಳೊಂದಿಗೆ ತೇರ್ಗಡೆಯಾದದ್ದು ಇವರ ಪ್ರತಿಭೆ ಪರಿಶ್ರಮದ ದ್ಯೋತಕವಾಗಿದೆ.[೧೧೪] ವಿ.ಟಿ. ಕಾಳೆಯವರು ಇಷ್ಟು ಸಾಲದೆಂದು ೧೯೫೨ರಲ್ಲಿ ಮುಂಬಯಿ ಸರ್ ಜೆ.ಜೆ. ಕಲಾಶಾಲೆಯಿಂದ ಚಿತ್ರಕಲೆಯ ಗವರ್ನಮೆಂಟ್ ಡಿಪ್ಲೋಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಿನ ಸಂದರ್ಭದಲ್ಲಿ ಕರ್ನಾಟಕದ ಕಲಾವಿದ್ಯಾರ್ಥಿಗಳು ಮುಂಬಯಿಗೆ ಹೋಗಿ ಪರೀಕ್ಷೆಗಳನ್ನು ಬರೆಯಬೇಕಾಗಿತ್ತು. ಕಾಳೆಯವರು ಮುಂಬಯಿಗೆ ಹೋಗುವಾಗಲೂ ಹಣದ ಅಡಚಣೆ ಉಂಟಾಯಿತು. ಒಂದು ಹಂತದಲ್ಲಿ ಕಾಳೆಯವರ ಆಪ್ತ ಗುರುಗಳಾದ ಬಿ.ಎಸ್.ಚವ್ಹಾಣ್ ಡಿ.ಎಫ್.ಪಾಟೀಲ ಮತ್ತು ಕಾಲವಾಡಮಠ ಎಂಬುವವರು ಊರಲ್ಲಿ ಅವರಿವರನ್ನು ಬೇಡಿ ಹಣವನ್ನು ಸಂಗ್ರಹಿಸಿಕೊಟ್ಟು ಮುಂಬಯಿಗೆ ಕಳಿಸಿದ್ದುದನ್ನು ಕಾಳೆಯವರು ಈಗಲೂ ನೆನಪಿಸಿಕೊಳ್ಳುತ್ತಾರೆ.[೧೧೫] ಜೆ.ಜೆ. ಕಲಾಶಾಲೆಯಲ್ಲಿ ಪರೀಕ್ಷೆ ಬರೆದು ಉತ್ತಮ ರೀತಿಯ ಫಲಿತಾಂಶವನ್ನು ಪಡೆದುಕೊಂಡ ಶ್ರೀ ವಿ.ಟಿ. ಕಾಳೆಯವರು ಟಿ.ಪಿ.ಅಕ್ಕಿಯವರು ಮಾಡಿದ ಉಪಕಾರ ತೀರಿಸುವುದು ಬಹಳ ಇದೆ ಎಂದು ಹೇಳುತ್ತಾರೆ. ಉತ್ತಮ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಾರೆ ಎಂದು ಕಾಳೆಯವರು ಅಭಿವ್ಯಕ್ತಪಡಿಸುತ್ತಾರೆ. ವಿದ್ಯಾರ್ಥಿ ದಿಸೆಯಲ್ಲಿ ಅನೇಕ ಕಲಾಕೃತಿಗಳನ್ನು ರಚಿಸಿದ್ದ ಕಾಳೆಯವರ ನಿಸರ್ಗಚಿತ್ರ, ಸ್ಟಿಲ್‌ಲೈಫ್, ಭಾವಚಿತ್ರ, ಚಿತ್ರಸಂಯೋಜನೆಯನ್ನು ಉತ್ತಮ ರೀತಿಯಿಂದ ಕಲಾಕೃತಿಗಳನ್ನು ಅನೇಕ ಶಿಕ್ಷಕರ ಮಾರ್ಗದರ್ಶನದಲ್ಲಿ ರಚಿಸಿ ತಮ್ಮ ಕಲಾ ಪ್ರೌಢಿಮೆಯನ್ನು ಮೆರೆದಿದ್ದಾರೆ.

ಶ್ರೀ ವಿ.ಟಿ.ಕಾಳೆಯವರು ತಾವು ಕಲಿತ ಶಾಲೆಯಾದ ವಿಜಯ ಕಲಾಮಂದಿರದಲ್ಲಿಯೇ ಉಪನ್ಯಾಸಕರಾಗಿ ನೇಮಕಗೊಂಡಿದ್ದು ವಿ.ಟಿ. ಕಾಳೆಯರ ಪುಣ್ಯವಂತರು. ಇವರು ವಿಜಯ

೧೧೨. ವಿ.ಟಿ. ಕಾಳೆ (ಸಂ) ಕ.ಲ.ಕ.ಅ.ಬೆಂ.ಡಾ.ಎಸ್.ಸಿ.ಪಾಟೀಲ ಮ.ಸಂ.೨

೧೧೩. ವಿ.ಟಿ. ಕಾಳೇ (ಸಂ) ಕ.ಲ.ಕ.ಅ.ಬೆಂ.ಡಾ.ಎಸ್.ಸಿ.ಪಾಟೀಲ. ಮ.ಸಂ.೩

೧೧೪. ಕರ್ನಾಟಕ ಚಿತ್ರಕಲಾ ಶಿಕ್ಷಕರ ಸರಿಪು –ಚಿತ್ತಾರ ಸ್ಮರಣ ಸಂಚಿಕೆ ಮ.ಸಂ. ೭೮

೧೧೫. ವಿ.ಟಿ. ಕಾಳೆ ಕ.ಲ.ಅ.ಬೆಂ. ಡಾ. ಎಸ್.ಸಿ.ಪಾಟೀಲ ಮ.ಸಂ. ೩

ಕಲಾಮಂದಿರದಲ್ಲಿ ಚಿತ್ರಕಲಾ ಉಪನ್ಯಾಸಕರಾಗಿ ೧೯೫೨ ರಿಂದ ೧೯೬೪ರವರೆಗೆ ಉತ್ತಮ ಸೇವೆ ಸಲ್ಲಿಸಿದ್ದಾರೆ. ಕಲಾಶಿಕ್ಷಕರಾಗಿ ಅಸಂಖ್ಯಾತ ವಿದ್ಯಾರ್ಥಿಗಳನ್ನು ಪಡೆದುಕೊಂಡಿದ್ದು ಅವರು ದೇಶ ವಿದೇಶಗಳಲ್ಲಿ ನೆಲೆಸಿದ್ದಾರೆ. ಹೀಗೆ ಶ್ರೇಷ್ಠ ಚಿತ್ರಕಲಾವಿದರಾಗಿ, ಕಲಾಶಿಕ್ಷಕರಾಗಿ ಜೊತೆಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಸೇವೆಗೈದ ಹಿರಿಮೆ ಇವರದಾಗಿದೆ. ಬೋಧನೆಯ ಜೊತೆ ಜೊತೆಗೆ ಇವರ ಕುಂಚದಿಂದ ಸಾವಿರಾರು ಅತ್ಯಮೂಲ್ಯ ಕಲಾಕೃತಿಗಳು ಮೂಡಿ ಬಂದು ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದ್ದು ಇವರ ಹೆಗ್ಗಳಿಕೆಯಾಗಿದೆ. ಇವರ ಬಗ್ಗೆ ಅಧ್ಯಯನ ಮಾಡಿ ಕೃತಿ ರಚಿಸಿರುವ ಡಾ. ಎಸ್.ಸಿ.ಪಾಟೀಲರವರು ಕಾಳೆಯವರ ಕಲಾಕೃತಿಗಳನ್ನು ಎಂಟು ರೀತಿಯಲ್ಲಿ ಬಿಂಬಿಸಿದ್ದಾರೆ. ೧. ಭಾವಚಿತ್ರ ಮತ್ತು ವ್ಯಕ್ತಿಚಿತ್ರಗಳು ೨. ದೇವತಾ ಚಿತ್ರಗಳು ೩. ಸಂಯೋಜನಾ ಚಿತ್ರಗಳು ೪. ನಿಸರ್ಗ ಚಿತ್ರಗಳು ೫. ಭಿತ್ತಿಚಿತ್ರಗಳು ನಕಲು ಚಿತ್ರಗಳು ೬. ನವ್ಯ ಶೈಲಿಯ ಸೃಜನಾತ್ಮಕ ಚಿತ್ರಗಳು ೭. ರೇಖಾಚಿತ್ರಗಳು ೮. ಶಿಲ್ಪಕಲಾಕೃತಿಗಳು ಎಂದು ವಿಂಗಡಿಸಿದ್ದಾರೆ.[೧೧೬] ಹೀಗೆ ಹಲವು ಮುಖಗಳಿಂದ ಉತ್ತಮ ಕಲಾಕೃತಿಗಳನ್ನು ರಚಿಸಿದ ಶ್ರೀ ವಿ.ಟಿ.ಕಾಳೆಯವರು ಒಬ್ಬ ಸಮರ್ಥಕಲಾವಿದರಾಗಿದ್ದಾರೆ.

ಶ್ರೀ ವಿ.ಟಿ.ಕಾಳೆಯವರು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು. ವಿದ್ಯಾರ್ಥಿಗಳ ಬಗ್ಗೆ ಪ್ರೀತಿ, ಒಲವು, ಅಂತಃಕರಣಗಳನ್ನು ಹೊಂದಿದ್ದ ಇವರು ಕಲಿಕೆಯ ವಿಷಯದಲ್ಲಿ ಶಿಸ್ತಿನ ಸಿಪಾಯಿಯಾಗಿದ್ದರು. ನಿಸರ್ಗಚಿತ್ರಣ, ವ್ಯಕ್ತಿಚಿತ್ರಣ, ಕರಡುಚಿತ್ರಣ, ಲೇಖನ (ಸ್ಕೆಚ್ಚಿಂಗ್), ಸಂಯೋಜನಾ ಚಿತ್ರಣ ಮುಂತಾದ ವಿಷಯಗಳನ್ನು ಇವರಿಂದ ಕಲಿತುಕೊಳ್ಳುವುದೇ ವಿದ್ಯಾರ್ಥಿಗಳಲ್ಲಿ ಒಂದು ಅಭಿಮಾನ ಮತ್ತು ಧನ್ಯತೆಯ ಪ್ರತೀಕವಾಗಿತ್ತು. ಕಲಾವಿದ್ಯಾರ್ಥಿಗಳಿಗೆ ಇವರುತಿಳಿಸಿಕೊಡುತ್ತಿದ್ದ ವಿಧಾನವು ಬಹಳ ಆಕರ್ಷಿತವಾಗಿತ್ತು. ವಿ.ಟಿ.ಕಾಳೆಯವರು ಸ್ಕೆಚ್ ಮಾಡುವ ವಿಧಾನ, ಬಣ್ಣ ಬಳಸುವ ವಿಧಾನ, ಬಣ್ಣಗಳ ಸಮ್ಮಿಶ್ರಣ, ಕುಂಚಗಳ ಬಳಸುವಿಕೆ, ಪ್ಯಾಲೇಟ್ ಉಪಯೋಗಿಸುವ ರೀತಿ, ಪೆನ್ಸಿಲ್ ಹಿಡಿದು ಸ್ಕೆಚ್ ಮಾಡುವ ವಿಧಿವಿಧಾನಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿದ್ದವು. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಉತ್ಸಾಹ ಆಗುತ್ತಿತ್ತು. ಹೀಗೆ ಕಲಾತಂತ್ರಗಾರಿಕೆಯಿಂದ ವಿದ್ಯಾರ್ಥಿಗಳಿಗೆ ಸುಲಭರೀತಿಯಲ್ಲಿ ತಿಳಿಯುವಂತೆ ಬೋಧನೆ ಮಾಡುತ್ತಿದ್ದರು. ವಿ.ಟಿ.ಕಾಳೆಯವರು ಉತ್ತಮ ಕಲಾವಿದರು ಮತ್ತು ಉತ್ತಮ ಕಲಾ ಇತಿಹಾಸಕಾರರೂ ಹೌದು. ಕಲಾ ಇತಿಹಾಸವನ್ನು ಸಾಕಷ್ಟು ಓದಿಕೊಂಡವರಾಗಿದ್ದರು. ಹೀಗಾಗಿ ಪಾಠ ಮಾಡುವಾಗ ವಿದ್ಯಾರ್ಥಿಗಳಿಗೆ ತಿಳಿಯುವಂತೆ ರಸವತ್ತಾಗಿ ಹೇಳುತ್ತಿದ್ದರು. ಈ ಕುರಿತು ಅವರ ವಿದ್ಯಾರ್ಥಿಯಾದ ಡಾ. ಬಿ.ಕೆ.ಹಿರೇಮಠರು ಈಗಲೂ ಸ್ಮರಿಸುತ್ತಾರೆ.

ವಿಜಯ ಕಲಾಮಂದಿರವು ಬೋಧನಾರಂಗವೇ ಸಾಧನಾರಂಗವೂ ಆಗಿ ಅವರ ಮುಂದಿನ ಕಲಾತ್ಮಕ ಬದುಕಿನ ಭವ್ಯ ಸೌಧಕ್ಕೆ ಅಡಿಪಾಯ ಹಾಕಿಕೊಟ್ಟಿತು. ಬೋಧನೆಯೊಂದಿಗೆ ಇವರ ಕುಶಲಕುಂಚ ಈ ಹಂತದಲ್ಲಿ ಸಾವಿರಾರು ಕಲಾಕೃತಿಗಳ ರಚನಾ ವಿನ್ಯಾಸಕ್ಕೆ ಕಾರಣೀಭೂತವಾಯಿತು.[೧೧೭] ವಿದ್ಯಾರ್ಥಿಗಳ ಕಲಾಸಾಧನೆಯಲ್ಲಿ ಕಾಳೆಯವರ ಪಾತ್ರ ಬಹುಮುಖ್ಯವಾದುದು. ಅವರ ಮಾರ್ಗದರ್ಶನದ ಪಾಲನ್ನು ಮರೆಯುವಂತಿಲ್ಲ. ಒಬ್ಬ ಒಳ್ಳೆಯ ಶಿಕ್ಷಕ ಉತ್ತಮ ಸ್ನೇಹಿತ, ಉತ್ತಮ ಮಾರ್ಗದರ್ಶಕ, ಉತ್ತಮ

---

೧೧೬. ಕ. ಚಿತ್ರಕಲಾ ಶಿಕ್ಷಕರ ಸಂಘ. ಚಿತ್ತಾರ ಸ್ಮರಣ ಸಂಚಿಕೆ ಪು.ಸಂ. ೭೮

೧೧೭. ವಿ.ಟಿ. ಕಾಳೆ. ಕ.ಲ.ಅ.ಬೆಂ. ಡಾ.ಎಸ್.ಸಿ.ಪಾಟೀಲ. ಲೇ. ಪು.ಸಂ. ೪

ತತ್ವಜ್ಞಾನಿಯಂತೆ ಇರಬೇಕು ಎಂಬ ಇಂಗ್ಲೀಷ್ ಗಾದೆಗೆ ವಿ.ಟಿ.ಕಾಳೆಯವರು ನಿದರ್ಶನದಂತಿದ್ದಾರೆ. ಅವರೊಬ್ಬ ಒಳ್ಳೆಯ ಸ್ನೇಹಿತನಾಗಿ, ಒಳ್ಳೆಯ ಮಾರ್ಗದರ್ಶಿಯಾಗಿ, ಅನುಭವಗಳನ್ನು ಧಾರೆ ಎರೆಯುವಲ್ಲಿ ತತ್ವಜ್ಞಾನಿಯಂತೆ ಇರುವುದನ್ನು ಅವರ ನೂರಾರು ವಿದ್ಯಾರ್ಥಿಗಳು ಇಂದಿಗೂ ಸ್ಮರಿಸುತ್ತಾರೆ. ಇದೇ ವೇಳೆಯಲ್ಲಿ ಟಿ.ಪಿ. ಅಕ್ಕಿಯವರು ವಿಜಯ ಕಲಾಮಂದಿರದಲ್ಲಿ ವಿಜಯ ನಾಟ್ಯ ಸಂಘ ಎಂಬ ಅಂಗಸಂಸ್ಥೆಯನ್ನು ಸ್ಥಾಪಿಸಿ ನಾಟಕದ ಕಲೆಯ ಹವ್ಯಾಸದ ತಮ್ಮ ಶಿಷ್ಯರಾದ ವಿ.ಟಿ. ಕಾಳೆ, ಎಂ.ಜೆ. ವಾಚೇದಮಠ, ಎಲ್.ಜಿ. ಹಂದಿಗೋಳ, ಎಚ್.ಎನ್. ಹೂಗಾರ ಮೊದಲಾದವರಿಗಾಗಿಯೇ ಪ್ರಾರಂಭಿಸಿದರು. ಇದಕ್ಕಾಗಿ ರಂಗಭೂಮಿಯ ಪರಿಕರಗಳು ಮತ್ತು ನಾಟಕ ರಚನೆ, ಅಭಿನಯ ಹಾಗೂ ನಿರ್ದೇಶನಗಳ ಅಭ್ಯಾಸಕ್ಕಾಗಿ ಅಕ್ಕಿಯವರು ಕಾಳೆಯವರನ್ನು ವೃತ್ತಿ ನಾಟಕ ಕಂಪನಿಗೆ ತರಬೇತಿ ಪಡೆಯಲು ಕಳುಹಿಸುತ್ತಾರೆ. ಅಲ್ಲಿಂದ ಬಂದ ಕಾಳೆಯವರು ವಿಜಯ ನಾಟ್ಯ ಸಂಘದ ಮೂಲಕ ಅನೇಕ ನಾಟಕಗಳನ್ನು ಆಡುತ್ತಾ ನಿರ್ದೇಶಿಸುತ್ತಾ ತಮ್ಮ ಕಲಾಪ್ರತಿಭೆಯ ಜೊತೆಗೆ ನಾಟ್ಯ ಸಂಘವನ್ನು ಬೆಳೆಸಿದರು.[೧೧೮] ಹೀಗೆ ವಿ.ಟಿ.ಕಾಳೆಯವರು ಚಿತ್ರಕಲೆಯ ಜೊತೆಗೆ ನಾಟಕ ನಿರ್ದೇಶಕರಾಗಿ, ಉತ್ತಮ ಕೆಲಸ ಮಾಡಿ ತಮ್ಮದೇ ಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

ವಿ.ಟಿ.ಕಾಳೆಯವರ ಕಲಾಪ್ರತಿಭೆಯನ್ನು ಹುಡಿಕಿಕೊಂಡು ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. ಅವುಗಳಲ್ಲಿ ಕೆಲವನ್ನು ಹೆಸರಿಸಲಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯು ೧೯೬೨, ೧೯೬೮, ೧೯೮೫-೮೬ರಲ್ಲಿ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ೧೯೫೯-೧೯೬೦ರಲ್ಲಿ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲಾಗಿದೆ. ೧೯೫೬ರಲ್ಲಿ ಗದುಗಿನ ವಿಜಯ ಕಲಾಮಂದಿರದ ಸುವರ್ಣ ಮಹೋತ್ಸವ ಪ್ರಶಸ್ತಿ, ೨೦೦೪ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಇವರ ಮುಡಿಗೇರಿವೆ. ೨೦೦೫ರಲ್ಲಿ ಅಮೋಘವರ್ಷ ನೃಪತುಂಗ ರಾಜ್ಯ ಪ್ರಶಸ್ತಿ, ೨೦೦೫ರಲ್ಲಿ ಬೆಂಗಳೂರಿನ ಮರಾಠಾ ಮಹಾಸಭಾದವರು ಛತ್ರಪತಿ ಶಿವಾಜಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.[೧೧೯] ೨೦೦೮-೦೯ರಲ್ಲಿ ರಾಯಚೂರಿನ ಮ್ಯಾದಾರ್ ಲಲಿತಕಲಾ ಪ್ರತಿಷ್ಠಾನದವರು ಕೊಡಮಾಡುವ ಎಂ.ಶಂಕರ್‌ರಾವ್ ರಾಜ್ಯ ಪ್ರಶಸ್ತಿ, ೨೦೦೮ರಲ್ಲಿ ಹೊಸಪೇಟೆಯ ಹೈದರಾಬಾದ್-ಕರ್ನಾಟಕ ನಾಗರಿಕ ವೇದಿಕೆಯವರು ಶ್ರೀಕೃಷ್ಣದೇವರಾಯ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. ಅಲ್ಲದೆ ಕಾಳೆಯವರಿಗೆ ಅನೇಕ ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ೧೯೯೧ರಲ್ಲಿ ಬಳ್ಳಾರಿ ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ೧೯೯೨ರಲ್ಲಿ ಸೊಂಡೂರಿನ ರೋಟರಿ ಕ್ಲಬ್‌ನಿಂದ, ೧೯೯೬ರಲ್ಲಿ ರಾಯಚೂರಿನ ಶ್ರೀಗುರು ಕಲಾಮಂದಿರದಿಂದ, ಸಂಡೂರಿನ ಶ್ರೀ ಪ್ರಭುದೇವರ ಸಂಸ್ಥಾನ ವಿರಕ್ತಮಠದಿಂದ ಸನ್ಮಾನಿತರಾಗಿದ್ದಾರೆ. ೨೦೦೩ರಲ್ಲಿ ಅಖಿಲ ಭಾರತ ಚಿತ್ರಕಲಾವಿದರ ಶಿಬಿರ ಹಂಪಿಯಲ್ಲಿ ಸಂಸ್ಕಾರ ಭಾರತಿ ಸಂಘಟನೆಯವರಿಂದ ಸನ್ಮಮಾನವಾಗಿದೆ.[೧೨೦] ಹೀಗೆ ಕಾಳೆಯವರು ಚಿತ್ರಕಲೆಯನ್ನು ನೋಡಿ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿರುವುದು ಶ್ಲಾಘನೀಯವಾಗಿದೆ.

೧೧೮. ವಿ.ಟಿ. ಕಾಳೆ. ಕ.ಲ.ಅ.ಬೆಂ. ಡಾ.ಎಸ್.ಸಿ.ಪಾಟೀಲ. ಲೇ. ಪು.ಸಂ. ೪

೧೧೯. ಕ. ಚಿತ್ರಕಲಾ ಶಿಕ್ಷಕರ ಸಂಘ, ಚಿತ್ತಾರ, ಸ್ಮರಣ ಸಂಚಿಕೆ ಪು.ಸಂ. ೭೯

೧೨೦. ಕ. ಚಿತ್ರಕಲಾ ಶಿಕ್ಷಕರ ಸಂಘ, ಚಿತ್ತಾರ, ಸ್ಮರಣ ಸಂಚಿಕೆ ಪು.ಸಂ. ೭೯

ಶ್ರೀ ವಿ.ಟಿ.ಕಾಳೆಯವರು ಕಲಾಸಾಹಿತ್ಯದಲ್ಲಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಕಲಾ ಇತಿಹಾಸದಲ್ಲಿ ವಿಶಿಷ್ಟವಾದ ಸಾಧನೆ ಮಾಡಿದ್ದಾರೆ. ಚಿತ್ರಕಲಾ ಪರಿಚಯ, ಪುಸ್ತಕವನ್ನು ಬರೆದಿದ್ದಾರೆ. ಈ ಪುಸ್ತಕವು ಉನ್ನತ ಚಿತ್ರಕಲಾ ಪ್ರವೇಶ ಪಡೆದವರಿಗೆ ಬಹಳಷ್ಟು ಉಪಯುಕ್ತವಾಗಿದೆ. ಇದರಲ್ಲಿ ವಸ್ತುಚಿತ್ರಣ, ಸ್ಮರಣಚಿತ್ರಣ, ನಿಸರ್ಗಚಿತ್ರಣ, ಮತ್ತು ರೇಖಾಚಿತ್ರಗಳ ಕುರಿತು ವಿವರಣೆ ನೀಡಲಾಗಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡ ಚಿತ್ರಕಲಾ ದರ್ಪಣ ಪುಸ್ತಕವು ಉತ್ತಮ ರೀತಿಯಲ್ಲಿ ಬರೆದಿದ್ದಾರೆ. ಭಾರತೀಯ ಚಿತ್ರಕಲೆ, ಪಹಾಡಿ ಕಲೆ, ಸಂಪ್ರದಾಯಿಕ ಚಿತ್ರಕಲೆ ಕುರಿತು ವಿವರಣೆ ನೀಡಿದ್ದಾರೆ. ಎಸ್.ಎಂ.ಪಂಡಿತ, ಟಿ.ಪಿ.ಅಕ್ಕಿ, ಕಲಾಕೋಶದ ಸಹಸಂಪಾದಕರಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ ಪ್ರಕಟಗೊಂಡ ಅನೇಕ ಗ್ರಂಥಗಳಿಗೆ ಸಂಪಾದಕರಾಗಿ, ಸಹ ಸಂಪಾದಕರಾಗಿ, ಚಿತ್ರಕಲೆಯ ಕುರಿತು ಅನೇಕ ಲೇಖನಗಳನ್ನು ಶ್ರೀ ವಿ.ಟಿ.ಕಾಳೆಯವರು ಬರೆದಿದ್ದಾರೆ. ಚಿತ್ರಕಲೆಯ ಜೊತೆಗೆ ಕಲಾ ಇತಿಹಾಸವನ್ನು ಅಧ್ಯಯನ ಮಾಡಿದ ಕಾಳೆಯವರು ಸಾಹಿತ್ಯದಲ್ಲಿಯೂ ಅಷ್ಟೇ ಪ್ರಾವೀಣ್ಯತೆಯನ್ನು ಪಡೆದುಕೊಂಡಿದ್ದಾರೆ. ವಿ.ಟಿ. ಕಾಳೆಯವರು ಮೂಲತಃ ವ್ಯಾಕರಣಬದ್ಧ ಕಲಾಶಿಕ್ಷಣ ಪಡೆದವರು. ಮತ್ತು ಅದರಲ್ಲೇ ಹೆಚ್ಚು ಒಲವು ಹೊಂದಿರುವುದು ಅವರ ಕಲಾಕೃತಿಗಳನ್ನು ನೊಡಿದಾಗ ಗ್ರಹಿಸಬಹುದು. ಕಾಳೆಯವರ ಕಲಾಕೃತಿಗಳನ್ನು ಪ್ರಮುಖವಾಗಿ ಎಂಟು ರೀತಿಯಲ್ಲಿ ವಿಂಗಡಿಸಬಹುದು.

೧. ಭಾವಚಿತ್ರ ಮತ್ತು ವ್ಯಕ್ತಿ, ೨. ದೇವತಾ ಚಿತ್ರಗಳು, ೩. ಸಂಯೋಜನಾ ಚಿತ್ರಗಳು, ೪. ನಿಸರ್ಗಚಿತ್ರಗಳು, ೫. ಭಿತ್ತಿಚಿತ್ರಗಳ ನಕಲು ಚಿತ್ರಗಳು, ೬. ನವ್ಯಶೈಲಿಯ ಸೃಜನಾತ್ಮಕ ಚಿತ್ರಗಳು, ೭. ರೇಖಾಚಿತ್ರಗಳು, ೮. ಶಿಲ್ಪಕಲಾಕೃತಿಗಳು.[೧೨೧]

ಹೀಗೆ ವಿ.ಟಿ. ಕಾಳೆಯವರು ಎಂಟು ಪ್ರಕಾರದಲ್ಲಿ ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸಿ ರಾಜ್ಯ ಹೊರರಾಜ್ಯದಲ್ಲಿ ಜಗತ್ತಿನ ಶ್ರೇಷ್ಠ ವಸ್ತುಸಂಗ್ರಹಾಲಯಗಳಲ್ಲಿ ಅನೇಕ ಮಠ ಮಂದಿರಗಳಲ್ಲಿ ಸಂಗ್ರಹಗೊಂಡಿದ್ದು ಗಮನಾರ್ಹ, ಅಮೇರಿಕಾ, ಲಂಡನ್, ಪಾಕಿಸ್ತಾನ, ಮುಂಬಯಿ, ಬೆಂಗಳೂರು, ಸಂಡೂರಿನ ಎಂ.ವೈ ಘೋರ್ಪಡೆ ಅವರ ಸಿವಪುರ ಅರಮನೆ ಹಾಗೂ ಸಂಡೂರಿನ ಶಿವವಿಲಾಸ ಅರಮನೆಗಳಲ್ಲಿ, ಗದುಗಿನ ವಿಜಯ ಕಲಾಮಂದಿರದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ, ಹುಬ್ಬಳ್ಳಿಯ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಪಂಡಿತ ಪಂಚಾಕ್ಷರ ಗವಾಯಿಗಳವರ ವೀರೇಶ್ವರ ಪುಣ್ಯಾಶ್ರಮ, ಹಾಗೂ ಗದುಗಿನ ಅಂಬಾಭವಾನಿ ದೇವಸ್ಥಾನ, ನಗರಸಭೆ ಗದಗ-ಬೆಟಗೇರಿ ಹಾಗೂ ಸಂಡೂರಿನ ಶ್ರೀ ಪ್ರಬುದೇವರ ಸಂಸ್ಥಾನ ವಿರಕ್ತ ಮಠದಲ್ಲಿ ಹೀಗೆ ಅನೇಕ ಪ್ರತಿಷ್ಠಿತ ಸ್ಥಳಗಳಲ್ಲಿ ಕಲಾಕೃತಿಗಳು ಸಂಗ್ರಹವಾಗಿರುವುದು ಇವರ ಪ್ರತಿಭೇಗೆ ಹೆಗ್ಗಳಿಕೆಯಾಗಿದೆ.[೧೨೨] ವಿ.ಟಿ. ಕಾಳೆಯವರು ರಚಿಸಿದ ಅನೇಕ ಕಲಾಕೃತಿಗಳು ಮುಂದಿನ ಯುವಪೀಳಿಗೆಗೆ ಮಾರ್ಗದರ್ಶನವಾಗಿವೆ. ಇವರು ಬಳಸುವ ಬಣ್ಣ, ರೇಖಾವಿನ್ಯಾಸ, ಸೃಜನಾತ್ಮಕ ತಾಂತ್ರಿಕೆಯು ವಿಶಿಷ್ಟವಾದ ರೀತಿಯದ್ದಾಗಿದೆ.

ವ್ಹಿ.ಟಿ. ಕಾಳೆಯವರು ಕಲಾಕೃತಿಗಳ ವೈಶಿಷ್ಟ್ಯತೆಗಳು ನೈತೆಯ ಸಾಂಪ್ರದಾಯಿಕ, ರೇಖಾ ಚಿತ್ರಗಳು ನಿಸರ್ಗ ಚಿತ್ರಗಳು ಮತ್ತು ಭಾವಚಿತ್ರ ಪೂರ್ಣ ಭಾವ ಚಿತ್ರ ಸೃಜನಾತ್ಮಕ ಚಿತ್ರಗಳನ್ನು ಜಲವರ್ಣ, ತೈಲವರ್ಣ ಪೆನ್ನು, ಪೊಸ್ಟರ ಮಾಧ್ಯಮಗಳಿಂದ ಕಲಾಕೃತಿಗಳನ್ನು ತಮ್ಮದೆ ಆದ ಶೈಲಿಯಲ್ಲಿ ರಚಿಸಿದ್ದು ಅವುಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

೧೨೧.ಡಾ. ಎಸ್.ಸಿ. ಪಾಟೀಲ ಲೇ ವಿ.ಟಿ. ಕಾಳೆ ಕ.ಲ.ಕ.ಅ. ಬೆಂಗಳೂರು ಪು.ಸಂ. ೭

೧೨೨. ಕ. ಚಿತ್ರಕಲಾ ಶಿಕ್ಷಕರ ಸಂಘ – ಚಿತ್ತಾರ ಸ್ಮರಣ ಸಂಚಿಕೆ ಪು.ಸಂ. ೭೮

೧. ರೇಖಾಚಿತ್ರಗಳು : ಚಿತ್ರ : ೧. ಈ ಕಲಾಕೃತಿಯ ಪೇನ್ನಿನಿಂದ ರಚನೆ ಮಾಡಿದ ಕಲಾಕೃತಿಯಾಗಿದ್ದು. ಕುರ್ಚಿಯ ಮೇಲೆ ಕುಳಿತ ಮಹಿಳೆಯ ಮುಖಲಕ್ಷಣ ಹಾವ, ಭಾವಗಳನ್ನು ಪ್ರಮಾಣ ಬದ್ಧವಾಗಿ ರಚಿಸಿದ್ದಾರೆ. ಮಹಿಳೆಯ ಸೀರೆ ಮೇಲಿನ ಧಡಿಯು ನಿರ್ಗೆಗಳನ್ನು ಕಲಾವಿದ ಪೇನ್ ಮತ್ತು ಇಂಕ್‌ದಿಂದ ಉತ್ತಮವಾಗಿ ರಚಿಸಿದ್ದಾರೆ. ಈ ಚಿತ್ರದಲ್ಲಿ ರೇಖೆಯನ್ನು ತಮ್ಮದೇ ಆದ ಶೈಲಿಯಲ್ಲಿ ಕಲಾವಿದ ರಚಿಸಿದ್ದಾರೆ.

ಚಿತ್ರ : ೨. ೩. ಈ ಕಲಾ ರೇಖಾಚಿತ್ರವು ರಾಜರ ಭಾವಚಿತ್ರದ ರೇಖಾಚಿತ್ರವಾಗಿದೆ ಶ್ರೀ ವ್ಹಿ.ಟಿ. ಕಾಳೆಯವರು ರಾಜರ ಮುಖಭಾವನೆ ಕಣ್ಣು, ಮೂಗು, ತೇಲೆಯ ಮೇಲಿನ ಪೇಶಾವನ್ನು ಅತ್ಯಂತ ಆಕರ್ಷಕವಾಗಿ ಚಿತ್ರಿಸಿದ್ದಾರೆ. ಮಹಾರಾಜರ ಮಿಸೆ ಕಣ್ಣಿನ ದೃಷ್ಠಿಯನ್ನು ಧರಿಸಿರುವ ಕೊಚಸುಂದರವಾದ ರೇಖೆಗಳಿಂದ ರಚಿಸಿದ್ದಾರೆ. ಮಹಾರಾಜರು ಎಂಬ ಕಲ್ಪನೆಯನ್ನು ಅತ್ಯಂತ ಸುಂದರವಾದ ರೇಖೆಗಳನ್ನು ಉತ್ತಮ ಭಾವಚಿತ್ರವನ್ನು ರಚಿಸಿದ್ದಾರೆ.

ಸತ್‌ಪುರುಷರ ಕಲಾಕೃತಿಗಳು :

ಚಿತ್ರ : ೧. **ಶ್ರೀ ಛತ್ರಪತಿ ಶಿವಾಜಿ** : ಈ ಕಲಾಕೃತಿಯ ಅಳತೆಯದಾಗಿದ್ದು ತೈಲವರ್ಣದಿಂದ ವ್ಹಿ.ಟಿ.ಕಾಳೆಯವರು ಪ್ರಾಮಾಣ ಬದ್ಧವಾಗಿ ರಚಿಸಿದ್ದಾರೆ. ಶಿವಾಜಿಯ ಮಹಾರಾಜ ಕುಚಿಯ ಮೇಲೆ ರಾಜರ ವೇಶದಲ್ಲಿ ರಾಜವಿಯಲ್ಲಿ ಮೊಣಕಾಲ ಮೇಲೆ ಕೈಊರಿ ಕುಳಿತ್ತಿದ್ದಾರೆ. ಶಿವಾಜಿಯ ಕಿರಿಟ ಕಿರಿಟದ ಮೇಲಿನ ಮುತ್ತಿನ ಸರವನ್ನು ತಿಅತ್ಯಂತ ಆಕರ್ಷಣೆಯದಾಗಿದೆ. ಕಣ್ಣು, ಮೂಗು, ಬಾಯಿ, ಶಿವಾಜಿಯವರ ಉದ್ದನೆಯದಾಟಿಯನ್ನು ನೈಜತೆಯಿಂದ ಕೂಡಿದೆ. ಕೊರಳ ಆಭರಣ, ಕಿವಿಯ ಆಭರಣವನ್ನು ಸುಂದರವಾಗಿ ರಚಿತವಾಗಿದೆ. ಬಲಭಾಗದಲ್ಲಿ ಖಡ್ಗವನ್ನು ಉತ್ತಮವಾಗಿ ರಚಿಸಿದ್ದಾರೆ. ಹಿನ್ನಲೆಯಾಗಿ ಹಸಿರುವರ್ಣದಿಂದ ರಚಿತವಾಗಿದೆ. ಒಟ್ಟಾರೆ ಈ ಕಲಾಕೃತಿಯ ಶಿವಾಜಿಯವರ ಆಕರ್ಷಕ ಕಲಾ ಕೃತಿಯಾಗಿದ್ದು ಇದು ನಗರ ಸಭೆಯಲ್ಲಿ ಸಂಗ್ರಹ ಗೊಂಡಿದೆ.

ಚಿತ್ರ : ೨. **ಪಂಚಾಕ್ಷರಿಗವಾಯಿಗಳು** : ಈ ಕಲಾಕೃತಿಯನ್ನು ತೈಲವರ್ಣದಿಂದ ರಚಿಸಿದ್ದಾರೆ. ಅಳತೆಯದಾಗಿದೆ ಈ ಕಲಾಕೃತಿಯು ಪಂ. ಪಂಚಾಕ್ಷರಿಗವಾಯಿಗಳವರ ಪೂರ್ಣಭಾವಚಿತ್ರವಾಗಿದೆ. ಗವಾಯಿಗಳವರ ಪೇಠ ಬಿಳಿಅಂಗಿ ಧೋತರವನ್ನು ಹೆಗಳ ಮೇಲೆ ಹಾಕಿರುವ ಹಳದಿ ಹೆಗಳಮೇಲೆ ಹಾಕಿರುವ ಹಳದಿ ವಹಾನದ ಶಾಲನ್ನು ಆಕರ್ಷಕವಾಗಿ ರಚಿಸಿದ್ದಾರೆ. ಕೈಯಲ್ಲಿ ಬಡಿಗೆ ಪಂಚಾಕ್ಷರಿಗವಾಯಿಗಳವರ ಎಡಗಡೆ ದುಂಡನೆಯ ಟೇಬಲ ಅದಕ್ಕೆ ತಿಳಿಗುಲಾಬಿ ವರ್ಣದ ಬಟ್ಟೆಹಾಕಿ ಅದರ ಮೇಲೆ ಕುಂಚಿನ ಶಿಲ್ಪವನ್ನು ನೈಜರೀತಿಯಿಂದ ರಚಿಸಿದ್ದಾರೆ. ಕಣ್ಣು ಇಲ್ಲದೆ ದ್ಯಾನಸ್ಥರಾದ ಪಂಚಾಕ್ಷರಿಗವಾಯಿಗಳವರ ಮುಕಭಾವನೆಯನ್ನು ಆಕರ್ಷಕವಾಗಿದೆ ರಚಿಸಿದ್ದಾರೆ ಪಂಚಾಕ್ಷರಿಗಳಾಯಿಗಳು ದೇವತಾವಾದಿಗಳು ಎನ್ನವುದಕ್ಕೆ ಹಸಿರು ವರ್ಣವನ್ನು ತಲೆಯ ಹಿಂದೆ ಪ್ರಕಾಶ ಮಾನವಾಗಿ ಕಾಣುವಂತೆ ರಚಿಸಿದ್ದಾರೆ. ಈ ಕಲಾಕೃತಿಯ ಶ್ರೀ ಪಂಚಾಕ್ಷರಿಗವಾಯಿಗಳವರ ಪುಣ್ಯಾಶ್ರಮ ಗದಗದಲ್ಲಿ ಸಂಗ್ರಹಗೊಂಡಿದೆ.

ಚಿತ್ರ : ೩. **ಶ್ರೀ ಸಹಸ್ರಾರ್ಜುನ** : ಈ ಕಲಾಕೃತಿಯ ತೈಲವರ್ಣದಾಗಿದ್ದು ಅಳತೆಯದಾಗಿದೆ ಸಹಪ್ರದರ್ಶನದ ಕಿರಿಟ ಕೊರಳ ಆಭರಣ ಕೈ ಆಭರಣಗಳನ್ನು ಸೂಕ್ಷ್ಮವಾಗಿ ನೈಜತೆಯನ್ನು ಮಿರಿಸುವಂತೆ

ರಚಿಸಿದ್ದಾರೆ. ಆಬ್ಬರದಲ್ಲಿರುವ ಮುತ್ತಿನ ಸರ ಬಂಗಾರದ ಸರಗಳನ್ನು ಅತ್ಯಂತ ಸುಂದರವಾಗಿ ರಚಿಸಿದ್ದಾರೆ. ಒಂದು ಕೈಯಿಂದ ಬಿಲ್ಲು ಹಿಡಿ ಇನ್ನೊಂದು ಕೈಯಿಂದ ಬಾಣಹಿಡಿದಿರುವ ಶಿವಿಯನ್ನು ಆಕರ್ಷರೀತಿಯಲ್ಲಿ ರಚಿಸಿದ್ದಾರೆ ಒಟ್ಟಿರುವ ದ್ರೋತರ ನಡಕ್ಕೆ ನೀಲಿವರ್ಣದ ಶಲ್ಲೆಯನ್ನು ಕಟ್ಟಿ ಕೋಪದಿಂದ ನಿಂತಿರುವ ಭಂಗಿಯನ್ನು ಕಲಾವಿದ ಉತ್ತಮ ರೀತಿಯಲ್ಲಿ ಜನಿಸಿದ್ದಾರೆ. ಹಿನ್ನಲೆಯಾಗಿ ದೊಡ್ಡದಾದ ಚಿತ್ರವನ್ನು ಸಹಸ್ರಾರ್ಜುನರ ಚಿತ್ರವನ್ನು ರಚಿಸಿದ್ದಾರೆ. ಈ ಕಲಾಕೃತಿಯನ್ನು ಕಾಳೆಯವರು ಬಹುಶ ಸೂಕ್ಷ್ಮ ಮತ್ತು ನೈಜತೆಯಿಂದ ರಚಿಸಿದ ಸುಂದರವಾದ ಚಿತ್ರವಾಗಿದೆ ಇದು ಎಸ್.ಎಸ್.ಕೆ. ಸಮಾಜದ ಅಂಭಾಭವಾನಿ ದೇವಸ್ಥಾನ ಗದಗದಲ್ಲಿ ಸಂಗ್ರಹಗೊಂಡಿದೆ.

ಸಂಯೋಜನ ಚಿತ್ರಗಳು :


ಚಿತ್ರ : ೧. ಈ ಕಲಾಕೃತಿಯು ಸಂಪ್ರದಾಯಕ ಶೈಲಿಯಲ್ಲಿದೆ ತೈಲ ವರ್ಣ್ಯದಿಂದ ಉತ್ತಮ ಕಲಾಕೃತಿಯನ್ನು ಕಲಾವಿದ ರಚಿಸಿದ್ದಾರೆ. ಕಮಲದ ಮೇಲೆ ನಿಂತಿರುವ ಲಕ್ಷ್ಮೀಯ ಚಿತ್ರ ಇದ್ದಾಗಿದೆ. ಪ್ರಮಾಣಕ್ಕೆ ತಕ್ಕಂತೆ ರಚಿತವಾದ ಈ ಕೃತಿ ಸುಂದರವಾದ ಕೀರಿಟ ಕೊರಳ ಕೈ ಆಭರಣವನ್ನು ಧರಿಸಿದ್ದಾಳೆ ಬಳಿಕ ಮಲದ ಹಣವಿನ ಮೇಲೆ ನಿಂತಿರುವ ಲಕ್ಷ್ಮೀಯ ಚಿತ್ರ, ಲಕ್ಷ್ಮೀಯ ಚಂಚಲೆ ಎನ್ನುವುದಕ್ಕೆ ನೀರಿನಲ್ಲಿ ಕಮಲದ ಹೂವಿನ ಮೇಲೆ ನಿಂತಿದ್ದಾಳೆ ಕೈಯಲ್ಲಿ ಕಮಲದ ಹೂ ಹಿಡಿದು ಕೊಂಡಿದ್ದಾಳೆ ಅದನ್ನು ನವಿಲು ನೋಡುತ್ತಿರುವ ದೃಶ್ಯವು ಬಹಳ ಮಾರ್ಮಿಕವಾಗಿದೆ. ಹಿನ್ನೆಲೆಯಾಗಿ ನೀಲಿವರ್ಣದಿಂದ ರಚಿತಗೊಂಡಿದೆ ಕಲಾಕೃತಿಯ ಸಮಾನತೆಯನ್ನು ಅಲ್ಲೊಂದು ಇಲ್ಲೊಂದು ಬಿಳಿಕಮಲದ ಹೂವಿನ ಚಿತ್ರವನ್ನು ರಚಿಸಿ ಸುಂದರಗೊಳಿಸಿದ್ದಾರೆ.

ಚಿತ್ರ : ೨. ಈ ಕಲಾಕೃತಿಯ ಲೇಖಣದ ಬನ್ನಿಂದದಿಂದ ರಚನೆಗೊಂಡಿದ್ದು ಕಲಾವಿದ ಫ಼ಿ. ಪಿ.ಕಾಳೆಯವರು ಸೃಜನಾತ್ಮಕವಾಗಿ ರಚಿಸಿದ್ದಾರೆ. ರೇಖೆ ಬಣ್ಣಗಳಿಂದ ಮೈವಳಿಕೆಯನ್ನು ಫಾರ್ಮಗಳನ್ನು ಬಳಸಿ, ಬಣ್ಣಗಳ ಏರಿಳಿತವನ್ನು ಈ ಕಲಾಕೃತಿಯಲ್ಲಿ ಅ ವ್ಯಕ್ತಿಗೊಳಿಸಿದ್ದಾರೆ. ಕಲಾಕೃತಿಯನ್ನು ನೋಡಿದಾಗ ಬೇರೆ ಬೇರೆರೀತಿಯಲ್ಲಿ ಈ ಕಲಾಕೃತಿಯಲ್ಲಿ ಚಿತ್ರಗಳು ಕಂಡು ಬರುತ್ತದೆ. ವಿವಿಧ ಬಗೆಯಲ್ಲಿ ಕಲಾಕೃತಿಯ ಕಾಣುತ್ತದೆ ಕೆಂಪು, ನೀಲ, ಹಳದಿ, ವರ್ಣಗಳ ಸಮಿಶ್ರಣದಿಂದ ರಚಿತವಾದ ಈ ಕಲಾಕೃತಿಯು, ಹೊಸ ಆಯಾಮವಾಗಿ, ಮೂಡಿಬಂದಿದೆ.

ಚಿತ್ರ : ೩. ಈ ಕಲಾಕೃತಿಯು ಬುಣ್ಣದಿಂದ ರಚನೆಗೊಂಡಿದೆ. ಈ ಕಲಾಕೃತಿಯು ನವ್ಯಶೈಲಿಯಲ್ಲಿ ರಚನೆಗೊಂಡಿದ್ದು ಭಾರತೀಯ ಸಾಂಪ್ರದಾಯಕ ನೈಜಶೈಲಿಯಲ್ಲಿ ಕಲಾಕೃತಿಗಳನ್ನು ರಚಿಸುತ್ತಿದ್ದ ಇವರು ಭಾರತೀಯ ಮತ್ತು ಪ್ರಾಶ್ಚತ್ಯರ ಕಲಾ ಇತಿಹಾಸವನ್ನು ಅಧ್ಯಯನ ಮಾಡಿದ ಕಾಳೆಯವರ ಸಮಕಾಲಿನ ಮತ್ತು ಸಾಂಪ್ರದಾಯಿಕ ಎರಡು ಸಂದರ್ಭದಲ್ಲಿ ಆಯಾ ಸಮಯ ಸಂದರ್ಭಗಣುಗುಣವಾಗಿ ಕಲಾಕೃತಿಗಳ ಬೆಡಿಕೆಯ ಅನುಗುಣವಾಗಿ, ಕಲಾಕೃತಿಗಳು ರಚಿಸಿದ್ದಾರೆ. ಕಾಳೆಯವರು ಸಾಂಪ್ರದಾಯಿಕ ಶೈಲಿಯೊಂದಿಗೆ ಸೃಜನಾತ್ಮಕ ಕಲಾಕೃತಿಯನ್ನು ಕಾಳೆಯವರು ರಚಿಸಿ ಎಲ್ಲದರಲ್ಲಿಯು ವಿಶೇಷತೆಯನ್ನು ತೋರಿಸಿ ಕಲಾಕೃತಿಯನ್ನು ರಚನೆಮಾಡಿದ್ದಾರೆ.

ಶ್ರೀ ವ್ಹಿ.ಟಿ.ಕಾಳೆಯವರ ರೇಖಾ-ಚಿತ್ರಗಳು





ಚಿತ್ರ ೧



ಚಿತ್ರ ೨



ಚಿತ್ರ: ೪.



ಚಿತ್ರ ೩.

ಶ್ರೀ ವ್ಹಿ.ಟಿ.ಕಾಳೆಯವರ ಪೂರ್ಣಭಾವ ಚಿತ್ರಗಳು



ಚಿತ್ರ: ೧.ಶ್ರೀ ಛತ್ರಪತಿ ಶಿವಾಜಿ



ಚಿತ್ರ: ೨. ಪಂ.ಪಂಚಾಕ್ಷರಿ ಗವಾಯಿಗಳು



ಚಿತ್ರ: ೩.ಶ್ರೀ ಛತ್ರಪತಿ ಶಿವಾಜಿ



ಚಿತ್ರ: ೪.ಶ್ರೀ ಸಹಸ್ರಾರ್ಜುನ

ಶ್ರೀ ವ್ಹಿ.ಟಿ.ಕಾಳೆಯವರ ಸಂಯೋಜನೆ ಚಿತ್ರಗಳು



ಚಿತ್ರ: ೧.



ಚಿತ್ರ: ೨.



ಚಿತ್ರ: ೩.


ಶ್ರೀ ವ್ಹಿ.ಟಿ.ಕಾಳೆಯವರ ನಿಸರ್ಗ ಚಿತ್ರಗಳು



ಚಿತ್ರ: ೧.



ಚಿತ್ರ: ೨.



ಚಿತ್ರ: ೩.

ನಿಸರ್ಗ ಚಿತ್ರಗಳ :

ಚಿತ್ರ : ೧. ಈ ಕಲಾಕೃತಿಯು ಜಲವರ್ಣದಿಂದ ರಚಿಸಿದ ಹಂಪೆಯ ಕಲ್ಲಿನ ರಥದ ಚಿತ್ರವಾಗಿದೆ. ಇದರಲ್ಲಿ ನೇರಳು ಬೆಳಕನ್ನು ಸುಂದರವಾಗಿ ರಚಿಸಿದ್ದಾರೆ. ಕಲಾಕೃತಿಯ ಪೇಪರಿಗೆ ತಕ್ಕಂತೆ ಇದ್ದು ಸ್ಥಳವಕಾಶ ಹಿಂದೆ ಮುಂದೆ ಎಂಬ ಪರಿಕಲ್ಪನೆಯನ್ನು ಚಿತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಕಲ್ಲಿನ ರಥದ ಹಿಂದೆ ಇರುವ ದೇವಾಲಯವನ್ನು ದೂರದಲ್ಲಿದೆ ಎಂಬ ಭಾವನೆಯನ್ನು ಕಾಳೆಯವರು ಅಭಿವ್ಯಕ್ತಗೊಳಿಸಿದ್ದಾರೆ. ಕಲ್ಲಿನ ರಥವನ್ನು ನೊಡುತ್ತಿರುವ ವ್ಯಕ್ತಿಯನ್ನು ಚಿತ್ರಿಸಿದ್ದಾರೆ. ರಥದಗಾಲಿಯನ್ನು ಅದರಲ್ಲಿರುವ ನಕ್ಷೆಗಳನ್ನು ಸ್ಪಷ್ಟವಾಗಿ ಕಾಣುವಂತೆ ಸೂಕ್ಷ್ಮವಾಗಿ ರಚನೆ ಮಾಡಿದ್ದಾರೆ. ಈ ಕಲಾಕೃತಿಯ ಪ್ರಮಾಣಕ್ಕೆ ತಕ್ಕಂತೆ ರಚನೆ ಮಾಡಿದ್ದಾರೆ.

ಚಿತ್ರ : ೨. ಈ ಕಲಾಕೃತಿಯು ಜಲವರ್ಣದಾಗಿದ್ದು ದೇವಸ್ಥನದ ನಿಸರ್ಗಚಿತ್ರವನ್ನು ಪ್ರಮಾಣಬದ್ಧವಾಗಿ ಕಾಳೆಯವರು ರಚಿಸಿದ್ದಾರೆ. ದೇವಾಲಯದ ಗೊಪುರ, ಮತ್ತು ಕಪೌಂಡವನ್ನು ನೈಜತೆಯಂತೆ ಕೆಂಪು ಮತ್ತು ಬಿಳಿವರ್ಣದಿಂದ ರಚನೆ ಮಾಡಿದ್ದಾರೆ ಆಕಾಶದ ಬಣ್ಣ ನೀಲಿ ಭೂಮಿಯ ಬಣ್ಣ ಕಂದು ಗೆಂಪು ವರ್ಣವನ್ನು ಬಳಸಿ ಉತ್ತಮ ಕೃತಿಯನ್ನು ರಚಿಸಿದ್ದಾರೆ ದೇವಸ್ಥಾನದ ಹತ್ತಿರ ಒಂದು ದೊಡ್ಡ ಆಲದ ಮರ ವಿದ್ದು ವಶಕ್ಕೆ ತಕ್ಕಂತೆ ಟೊಂಗೆ ಎಲೆಗಳನ್ನು ಬಣ್ಣಗಳಿಂದ ರಚಿಸಿ ಹಿಂದೆ ಮುಂದೆ ಎಂಬ ಕಲ್ಪನೆ ಬರುವಂತೆ ವರ್ಣಗಳ ಮೂಲ ತಿಳಿಸಿದ್ದಾರೆ.

ಚಿತ್ರ : ೩. ಈ ಕಲಾಕೃತಿಯು ಜಲವರ್ಣದ್ದಾಗಿದ್ದು ನೊಡಲಿಕ್ಕೆ ಆಕರ್ಷಕವಾಗಿ ರಚಿತವಾಗಿದೆ ಗುಡಿಯ ಕಲಾಕೃತಿ ಗುಡಿಯ ಮುಂದೆ ದೀಪಸ್ಥಂಬವನ್ನು ಕಾಳೆಯವರು ಅತ್ಯಂತ ಆಸಕ್ತಿವಹಿಸಿ ರಚಿಸಿದ್ದಾರೆ. ಗುಡಿಯ ಹಿಂದೆ ವಿರುವ ಗುಡ್ಡವನ್ನು ಗುಡ್ಡದ ಮೇಲೆ ಒಂದು ದೇವಸ್ಥಾನ ವಿರುವುದು ಕಂಡುಬರುತ್ತದೆ. ಮುಖ್ಯದೇವಸ್ಥಾನಕ್ಕೆ ಸುತ್ತಲು ಕಲ್ಲಿನಿಂದ ಕಟ್ಟಿದ ಕಪೌಂಡವನ್ನು ನೋಡಿದರೆ ನಿಜವಾಗಿ ಕಲಿನಂತೆ ಗೋಚರಿಸುತ್ತದೆ ಆಷ್ಟು ನೈಜತೆಯಿಂದ ಈ ಗೋಡೆಯನ್ನು ಕಟ್ಟಿದ್ದಾರೆ ಕಂಪೌಂಡ ಹೊರಗೆ ಒಂದು ದೊಡ್ಡದಾದ ಬರವನ್ನು ಸುಂದರವಾಗಿ ರಚಿಸಿದ್ದಾರೆ. ಇದರಿಂದ ದೂರ ಸಮಿಪವನ್ನು ನೊಡಬಹುದಾಗಿದೆ. ದೇವಸ್ಥಾನಕ್ಕೆ ಜನರು ಹೊಗಿ ಬರುವುದನ್ನು ಬಣ್ಣಗಳ ಮುಖಾಂತರ ರೇಖೆಗಳ ಮಖಾಂತರ ಉತ್ತಮರೀತಿಯಲ್ಲಿ ತೋರಿಸಿದ್ದಾರೆ. ಒಟ್ಟಾರೆ ಈ ಕಲಾಕೃತಿಯು ಉತ್ತಮ ಬಣ್ಣವನ್ನು ಬಳಸಿ ಸುಂದರ ನಿಸರ್ಗ ಕಲಾಕೃತಿಯಾಗಿದೆ.

ಎನ್.ಎ. ಹರ್ಲಾಪೂರ :

ಸಂಗೀತ, ಸಾಹಿತ್ಯ, ಚಿತ್ರಗಳಂತಹ ಸಾಂಸ್ಕೃತಿಕ ರಂಗಗಳ ಸಾಧನೆ ಸದಾ ಸ್ಮರಣೀಯ. ಸಾಹಿತಿಗಳು ಇಂದಿಗೂ ತಮ್ಮ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆ ಇತರ ಯುವ ಕಲಾವಿದರಿಗೆಲ್ಲ ಮಾದರಿಯಾಗಿದೆ. ಅಂತಹ ತೆರೆಮರೆಯ ಕಲಾಸಾಧಕರ ಸಾಲಿನಲ್ಲಿ ಬರುವ ಪ್ರಮುಖರಲ್ಲಿ ಶ್ರೀ ಎನ್.ಎ.ಹರ್ಲಾಪೂರ ಒಬ್ಬರ. ಚಿತ್ರಕಲೆ ಮತ್ತು ಶಿಲ್ಪಕ್ಕೆ ಈ ಎರಡೂ ಪಂತಗಳಲ್ಲಿ ತಾವು ತೊಡಗಿಸಿಕೊಂಡು ಗುರುತಿಸಿಕೊಂಡಿದ್ದಾರೆ.

ಶ್ರೀ ನೀಲಕಂಠಪ್ಪ ಅಡಿವೆಪ್ಪ ಹರ್ಲಾಪೂರ ಇವರು ಗದಗ ಜಿಲ್ಲೆಯ ರೋಣ ತಾಲೂಕಿನ ಸೂಡಿ ಎಂಬ ಚಿಕ್ಕಗ್ರಾಮದಲ್ಲಿ ೧೯೪೪ ಫೆಬ್ರವರಿ ೧೮ರಂದು ಜನಿಸಿದರು. ಬಾಲ್ಯದಲ್ಲಿಯೇ ಚಿತ್ರಕಲೆಯ

ನಂಟು ಬೆಳೆಸಿಕೊಂಡಿದ್ದ ನೀಲಕಂಠಪ್ಪ ಪ್ರಾಥಮಿಕ ಶಾಲೆಯಲ್ಲಿಯೇ ಅನೇಕ ಕಲಾಕೃತಿಗಳನ್ನು ರಚಿಸಿ ಎಲ್ಲ ಗುರುಗಳ ಪ್ರೀತಿಗೆ ಪಾತ್ರರಾಗಿದ್ದರು. ರಾಷ್ಟ್ರಪ್ರಶಸ್ತಿ ವಿಜೇತ ಶ್ರೀ ಬಿ.ಜಿ. ಅಣ್ಣೀಗೇರಿ ಗುರುಗಳ ಆಶ್ರಮದಲ್ಲಿ ನಾಲ್ಕನೆಯ ತರಗತಿ ಇರುವಾಗಲೇ ಸೇರಿಕೊಂಡಿದ್ದರು. ಆಶ್ರಮದಲ್ಲಿ ತಮ್ಮ ಸ್ನೇಹಿತರಿಗೆ ವಿಜ್ಞಾನ ವಿಷಯದಲ್ಲಿ ಬರುವ ಕಲಾಕೃತಿಗಳನ್ನು ಮಾಡೆಲ್‌ಗಳನ್ನು ಸರಳವಾಗಿ ರಚಿಸಿಕೊಡುತ್ತಿದ್ದರು. ಇದನ್ನು ಗಮನಿಸುತ್ತಿದ್ದ ಬಿ.ಜಿ. ಅಣ್ಣಿಗೇರಿ ಗುರುಗಳು ಪ್ರೌಢಶಾಲೆಗೆ ಮಾಡೆಲ್ ಹೈಸ್ಕೂಲ್‌ಗೆ ಪ್ರವೇಶ ನಿಡಿದರು. ಸದಾ ಚಿತ್ರಕಲೆಯ ಕುರಿತು ಅಧ್ಯಯನ ಮಾಡುತ್ತಿದ್ದ ನೀಲಕಂಠಪ್ಪನವರಿಗೆ ಚಿತ್ರಕಲಾ ಶಿಕ್ಷಕರಾಗಿದ್ದ ಖ್ಯಾತ ಕಲಾವಿದ ಶ್ರೀ ಸಿ.ಎನ್.ಪಾಟೀಲರೇ ಸಿಕ್ಕರು. ಪ್ರೌಢಶಾಲೆಯಲ್ಲಿಯೇ ಅನೇಕ ಉತ್ತಮವಾದ ಕಲಾಕೃತಿಗಳನ್ನು ರಚಿಸಿ ಎಲ್ಲರ ಮೆಚ್ಚುಗೆಯನ್ನು ಪಡೆದ ಹರ್ಲಾಪೂರರವರು ಪ್ರೌಢಶಿಕ್ಷಣವನ್ನು ಪೂರೈಸಿದರು.[೧೨೩]

ಚಿತ್ರಕಲಾ ಉನ್ನತ ವ್ಯಾಸಂಗಕ್ಕೆ ಹೋಗಲು ಖ್ಯಾತ ಕಲಾವಿದರೂ ಮಾಡೆಲ್ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದ ಸಿ.ಎನ್.ಪಾಟೀಲರು ಮಾರ್ಗದರ್ಶನದಲ್ಲಿ ಗದುಗಿನ ವಿಜಯ ಕಲಾಮಂದಿರಕ್ಕೆ ಶ್ರೀ ಟಿ.ಪಿ. ಅಕ್ಕಿಯವರನ್ನು ಹೇಳಿಕೊಂಡು ಪ್ರವೇಶ ಕೊಡಿಸಿದರು. ವಿಜಯ ಕಲಾಮಂದಿರದಲ್ಲಿ ಅನೇಕ ಸ್ನೇಹಿತರಿಗೆ ಪ್ರೀತಿಯಿಂದ ಕಂಡ ಶ್ರೀ ಎನ್.ಎ.ಹರ್ಲಾಪೂರರವರು ನಿಸರ್ಗಚಿತ್ರ, ಸ್ಮರಣಚಿತ್ರಣ, ವಸ್ತುಚಿತ್ರಣ, ನೇಚರ್, ಭಾವಚಿತ್ರಣ ಇವೆಲ್ಲವೂ ಹರ್ಲಾಪೂರರವರ ಪ್ರೀತಿಯ ವಿಷಯಗಳಾಗಿದ್ದವು. ಕ್ರಿಯಾಶೀಲ ವ್ಯಕ್ತಿತ್ವವನ್ನು ಹೊಂದಿದ್ದ ಹರ್ಲಾಪೂರರವರು ಅನೇಕ ಕಲಾಚಟುವಟಿಕೆಗಳು ವಿದ್ಯಾರ್ಥಿ ಇದ್ದಾಗಲೇ ಮಾಡುತ್ತಿದ್ದರು. ಸದಾ ಹಸನ್ಮುಖದವರಾದ ನೀಲಕಂಠಪ್ಪ ಖ್ಯಾತ ಕಲಾವಿದ ಎಂ.ಎ.ಚೆಟ್ಟಿ, ಸಿ.ಎನ್.ಪಾಟೀಲ, ಕಮಾನಗಾರ, ಎಸ್.ಎಂ.ಶಿರಹಟ್ಟಿ, ಎನ್.ಎಸ್.ಶಿಲ್ಪಿ ಮುಂತಾದ ಖ್ಯಾತ ಕಲಾವಿದರ ಕೈಯಲ್ಲಿ ಪಳಗಿದವರು.

ಶ್ರೀ ಎಂ.ಎ.ಚೆಟ್ಟಿ, ಶ್ರೀ ಸಿ.ಎನ್.ಪಾಟೀಲ, ಟಿ.ಪಿ.ಅಕ್ಕಿ, ಎಸ್.ಎಂ.ಶಿರಹಟ್ಟಿ, ಶ್ರೀ ಕಮಾನಗಾರ, ಶ್ರೀ ಎನ್.ಎಸ್.ಶಿಲ್ಪಿ ಮುಂತಾದ ಖ್ಯಾತ ಕಲಾವಿದರ ಕೈಯಲ್ಲಿ ಪಳಗಿದ ನೀಲಕಂಠಪ್ಪ ಹರ್ಲಾಪೂರ ಇವರು ಗುರುಗಳಿಗೆ ತಕ್ಕ ಶಿಷ್ಯರಾಗಿದ್ದರು. ಪ್ರತಿಯೊಬ್ಬ ಗುರುಗಳ ಪ್ರೀತಿಯ ಶಿಷ್ಯರಾಗಿ ಅವರ ಪ್ರೀತಿಗೆ ಪಾತ್ರರಾದರು.

ಎಲ್ಲ ಗುರುಗಳಿಂದ ಒಂದೊಂದು ವಿಷಯವನ್ನು ಆಯ್ದುಕೊಂಡು ಒಬ್ಬ ಉತ್ತಮ ವಿದ್ಯಾರ್ಥಿಯಾಗಿ ಬೆಳೆದರು. ಶ್ರೀ ಎಂ.ಎ. ಚೆಟ್ಟಿಯವರ ಶ್ರೀ ಸಿ.ಎನ್.ಪಾಟೀಲರವರ ಮಾರ್ಗದರ್ಶನದಿಂದ ಪ್ರಭಾವಿತರಾದ ಎನ್.ಎ.ಹರ್ಲಾಪೂರವರು ಮಾಡ್ಲಿಂಗ್ ಡಿಪ್ಲೋಮಾ ಪರೀಕ್ಷೆಯಲ್ಲಿ ೧೯೬೭ರಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಪಾಸಾದರು ವಿದ್ಯಾರ್ಥಿ ಇರುವಾಗಲೇ ಹರ್ಲಾಪೂರವರು ಅನೇಕ ಉತ್ತಮ ಕಲಾಕೃತಿಗಳನ್ನು ರಚಿಸುವುದನ್ನು ನೋಡಿ ಇವರ ಕಲಾಪ್ರತಿಭೆಯನ್ನು ಮೆಚ್ಚಿ ಮಾಡೆಲ್ ಹೈಸ್ಕೂಲ್‌ನಲ್ಲಿ ಒಂದು ವರ್ಷ (೧೯೬೫) ಚಿತ್ರಕಲಾ ಶಿಕ್ಷಕರಾಗಿ ಕೆಲಸ ಮಾಡಿದರು. ನಂತರ ೧೯೬೭ಕ್ಕೆ ಕ್ರಿಯಾಶೀಲರಾದ ಶ್ರೀ ಎನ್.ಎ.ಹರ್ಲಾಪೂರ ಇವರನ್ನು ನಗರದ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಕೆ.ಎಚ್.ಪಾಟೀಲ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆಗೆ ಸೇರಿಕೊಂಡರು.[೧೨೪]

೧೨೩. ಎನ್.ಎ.ಹರ್ಲಾಪೂರ ಅವರ ಸಂದರ್ಶನ ದಿನಾಂಕ ೨೮-೬-೨೦೦೭

೧೨೪. ಎನ್.ಎ. ಹರ್ಲಾಪೂರ ಅವರ ಸಂದರ್ಶನ ದಿನಾಂಕ ೧೫-೯-೨೦೦೮

"ಕಲೆಗಾಗಿ ಕಲೆಅಲ್ಲ ಕಲೆ ಸಮಾಜಕ್ಕಾಗಿ" ಎನ್ನುವಂತೆ ಎನ್.ಎ.ಹರ್ಲಾಪೂರ ಇವರು ಚಿತ್ರಕಲೆಯನ್ನು ಸಮಾಜಕ್ಕಾಗಿ ವಿನಿಯೋಗಿಸಿದರು. ಅನೇಕ ವಿದ್ಯಾರ್ಥಿಗಳಿಗೆ ಚಿತ್ರಕಲೆಯ ಕುರಿತು ಅಭಿರುಚಿಯನ್ನು ಮೂಡಿಸಿದರು. ಪ್ರೌಢಶಾಲೆಯ ಅನೇಕ ವಿದ್ಯಾರ್ಥಿಗಳಿಗೆ ಆತ್ಮೀಯತೆಯಿಂದ ಚಿತ್ರಕಲೆಯ ಕುರಿತು ಬೋಧನೆ ಮಾಡುತ್ತಿದ್ದರು.

ಶ್ರೀ ಎನ್.ಎ.ಹರ್ಲಾಪೂರ ಅವರು ಪ್ರೌಢಶಾಲೆಯ ಮಟ್ಟದಲ್ಲಿ ಚಿತ್ರಕಲೆಯನ್ನು ಇತರೆ ವಿಜ್ಞಾನ ಹಾಗೂ ಸಮಾಜ ಇತ್ಯಾದಿ ವಿಷಯಗಳಂತೆ ಕಲಿಸುವದು ಹಾಗೂ ಕಲಿಯುವವರು ಕಡಿಮೆಯಾಗಿರುವ ಇಂದಿನ ದಿನಮಾನಗಳಲ್ಲಿ ಹರ್ಲಾಪೂರ ಮಾಸ್ತರರು ತಮ್ಮ ಶಾಲೆಯಿಂದ ಪ್ರತಿ ವರ್ಷ ಚಿತ್ರಕಲೆ ವಿಷಯದ ಹೈಯರ್ ಗ್ರೇಡ್ ಮತ್ತು ಲೊಯರ್ ಗ್ರೇಡ್ ಪರೀಕ್ಷೆಗಳಲ್ಲಿ ಬಹುಸಂಖ್ಯಾತ ವಿದ್ಯಾರ್ಥಿಗಳನ್ನು ಕೂಡ್ರಿಸಿ, ಶಾಲಾ ಅವಧಿ ಮುಗಿದ ನಂತರ ವಿಶೇಷ ತರಗತಿಗಳನ್ನು ನಡೆಸಿ ಚಿತ್ರಕಲೆಯ ವಿವಿಧ ವಿಷಯಗಳ ಬಗ್ಗೆ ಮಾದರಿ ಪಾಠ ಹೇಳುತ್ತಿದ್ದರು.[೧೨೫] ಇದರಿಂದ ಚಿತ್ರಕಲೆಯ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ಹೆಚ್ಚಿನ ಆಸಕ್ತಿ ಮೂಡುತ್ತಿತ್ತು. ಪಾಠ ಮಾಡುವಾಗ ವಿದ್ಯಾರ್ಥಿಗಳಿಗೆ ಚಿತ್ರಕಲೆಯ ವಿಷಯಗಳ ಮನಮುಟ್ಟುವಂತೆ ಪಾಠ ಬೋಧನೆ ಮಾಡುತ್ತಿದ್ದರು.

ಸದಾ ಕಲಿಸುವ ಹಂಬಲದಲ್ಲಿರುವ ಹರ್ಲಾಪೂರ ಗುರುಗಳು ೧೯೮೫ರಲ್ಲಿ ಆರ್ಟ್ ಮಾಸ್ಟರ್ ಡಿಪ್ಲೋಮಾ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದು ಪಾಸಾದರು.[೧೨೬] ಇದರಿಂದ ಹನ್ನೂ ಹೆಚ್ಚಿನ ಉತ್ಸಾಹಿತರಾದ ಇವರು ಅನೇಕ ಸ್ನೇಹಿತರಿಗೆ ಪ್ರೀತಿಯಿಂದ ಕಂಡು ಸಂಘಟಿಕರಾದರು. ಸಂಘಟನೆ ಮನೋಭಾವನೆ ಹೊಂದಿದವರಾಗಿದ್ದರು. ಸೃಜನಾತ್ಮಕ ಕಲಾಕೃತಿಗಳನ್ನು ರಚಿಸುವ ಇವರು ಪ್ರೌಢಶಾಲೆ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಚಿತ್ರಕಲಾ ಪ್ರದರ್ಶನ ಚಿತ್ರಕಲಾ ಶಿಬಿರ, ವಿಚಾರ ಸಂಕಿರಣ, ಪ್ರತಿಭಾನ್ವಿತ ಶಿಕ್ಷಕರಿಗೆ ಸನ್ಮಾನ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ಹೀಗೆ ಅನೇಕ ಕೆಲಸಗಳನ್ನು ಮಾಡುವುದರ ಮೂಲಕ ಉತ್ತಮ ಸಂಘಟಿಕರಾಗಿ ಸಾಬೀತು ಪಡಿಸಿದ್ದಾರೆ. ೧೯೯೩ರಲ್ಲಿ ಲಯ ಕಲಾ ಮನೆ ಎಂಬ ಸಾಂಸ್ಕೃತಿಕ ಕಲಾ ಚಟುವಟಿಕೆಯ ಸಂಘವನ್ನು ಹುಟ್ಟುಹಾಕಿ ಅದಕ್ಕೆ ಗೌರವಾಧ್ಯಕ್ಷರಾಗಿ ಅನೇಕ ಕಲಾಚಟುವಟಿಕೆಗಳನ್ನು ಮಾಡಿದ್ದಾರೆ. ಇದರಿಂದ ಯುವ ಕಲಾವಿದರಿಗೆ, ಪ್ರೌಢಶಾಲಾ ಮಕ್ಕಳಿಗೆ ಒಳ್ಳೆಯ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ಶ್ರೀ ಎನ್.ಎ.ಹರ್ಲಾಪೂರ ಅವರು ಉತ್ತಮ ಕಲಾವಿದ ಒಳ್ಳೆಯ ಸಂಘಟನಾಕಾರರಾಗಿ ಗದಗ ಜಿಲ್ಲೆಯ ಎಲ್ಲ ಶಿಕ್ಷಕರ ಪ್ರೀತಿಗೆ ಪಾತ್ರರಾಗಿ ಈ ಸಂಸ್ಥೆಯಿಂದ ಅನೇಕ ರೀತಿಯ ವಿಭಿನ್ನ ವಿಶಿಷ್ಟ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಸೃಜನಾತ್ಮಕ ಕ್ರೀಯೇಟಿವ್, ಆಧುನಿಕ ಕಲೆರಚಿಸುವುದರಲ್ಲಿ ಉತ್ತರ ಕರ್ನಾಟಕದಲ್ಲಿಯೇ ಪ್ರಥಮ ಕಲಾವಿದರಾಗಿದ್ದಾರೆ. ರೇಖೆಗಳ ಕೈಚಳಕ ವರ್ಣಗಳ ತಂತ್ರಗಾರಿಕೆ, ವರ್ಣಲೇಪನ ಮುಂತಾದ ತಂತ್ರಗಳ ಮೂಲಕ ಅನೇಕ ಸೃಜನಾತ್ಮಕ ಕಲಾಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಶ್ರೀ ಎನ್.ಎ. ಹರ್ಲಾಪೂರರವರು ಮಣ್ಣಿನಿಂದ, ಸಿಮೆಂಟ್‌ನಿಂದ ಪ್ಲಾಸ್ಟರ್ ಆಫ್ ಮುಂತಾದ ಮಾಧ್ಯಮಗಳಿಂದ ಅನೇಕ ಉತ್ತಮವಾದ ಕಲಾಕೃತಿಗಳನ್ನು ರಚಿಸಿದ್ದಾರೆ. ಪ್ಲಾಸ್ಟರ್‌ನಿಂದ ತಯಾರಿಸಿದ

---

೧೨೫. ನವೋದಯ ಕನ್ನಡ ದಿನಪತ್ರಿಕೆ

೧೨೬. ಎನ್.ಎ.ಹರ್ಲಾಪೂರ ಅವರ ದಾಖಲಾತಿಗಳು

ವ್ಯಕ್ತಿ ಚಿತ್ರಗಳು, ಮಾಡೆಲ್‌ಗಳ ತಯಾರಿಕೆಯಲ್ಲಿ ಇವರದು ಎತ್ತಿದ ಕೈ. ಇವರು ತಯಾರಿಸಿದ ಅನೇಕ ಮೂರ್ತಿಗಳಲ್ಲಿ ಗಾನಯೋಗಿ ಪಂಚಾಕ್ಷರ ಗವಾಯಿಗಳು, ಸಹಕಾರ ರಂಗದ ಭೀಷ್ಮ ಕೆ.ಎಚ್.ಪಾಟೀಲರ ಮೂರ್ತಿಗಳು, ಹುಯಿಲಗೋಳ ನಾರಾಯಣರಾವ್ ಡಾ. ಅಂಬೇಡ್ಕರ್, ಜವಾಹರಲಾಲ ನೆಹರು, ಮುಂತಾದ ಅನೇಕ ಮಹಾತ್ಮರ ಮೂರ್ತಿಕಲಾಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಗದುಗಿನ ಸಾಯಿಬಾಬಾ ಮಂದಿರದಲ್ಲಿ ಅನೇಕ ಸಾಯಿಬಾಬಾರವರ ಜೀವನ ಆಧಾರಿತ ಬಾಬಾರವರು ಮಾಡಿದ ಪವಾಡಗಳ ಕುರಿತು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಉಬ್ಬು ಕೆತ್ತನೆಯ(ರಿಲಿಫ್) ಶಿಲ್ಪಗಳನ್ನು ಪ್ರಮಾಣಬದ್ಧವಾಗಿ ಸಾಮಾನ್ಯ ಜನರಿಗೆ ತಿಳಿಯುವ ರೀತಿಯಲ್ಲಿ ಸರಳ ರೇಖಾ ವಿನ್ಯಾಸಗಳ ಜೋಡಣೆಯಿಂದ ಸಾಯಿಬಾಬಾರವರ ಜೀವನದ ಪ್ರಮುಖ ಘಟನೆಗಳನ್ನು ರಚಿಸಿ ಉತ್ತಮ ಶಿಲ್ಪ ಕಲಾವಿದರು ಎಂದು ಸಾಬೀತುಪಡಿಸಿದ್ದಾರೆ. ಹೀಗೆ ವಿಭಿನ್ನ ರೀತಿಯ ಕಲಾಕೃತಿಗಳನ್ನು ರಚಿಸಿದ ಎನ್.ಎ.ಹರ್ಲಾಪೂರ ಅವರು ಹತ್ತು ಹಲವು ಕಡೆಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶನ ಮಾಡಿದ್ದಾರೆ.

೧೯೬೭ ಮಹಾತ್ಮಾ ಗಾಂಧೀಜಿಯವರ ಜೀವನ ಚರಿತ್ರೆಯ ಕುರಿತು ಜಲವರ್ಣದಿಂದ ರಚಿಸಿದ ಕಲಾಕೃತಿಗಳ ಪ್ರದರ್ಶನವನ್ನು ಗದಗ, ಹುಲಕೋಟಿಯಲ್ಲಿ ಮಾಡಿದ್ದಾರೆ. ೧೯೮೧ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಧನಸಹಾಯದೊಂದಿಗೆ ವಿಜಯ ಕಲಾಮಂದಿರದಲ್ಲಿ ಹಾಗೂ ಬಾಗಲಕೋಟೆಯಲ್ಲಿ,[೧೨೭] ೧೯೮೩ರಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಹುಬ್ಬಳ್ಳಿಯಲ್ಲಿ, ೧೯೮೫ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಧನಸಹಾಯದಿಂದ ಬಾಗಲಕೋಟೆಯಲ್ಲಿ, ೨೦೦೪ರಲ್ಲಿ ವಿಶ್ವರಂಗ ದಿನಾಚರಣೆಯ ಅಂಗವಾಗಿ ಗದಗಿನ ಮಾಹಾತ್ಮಾಗಾಂಧಿ ವೃತ್ತದಲ್ಲಿ, ೨೦೧೦ರಲ್ಲಿ ಡಿ.ವಿ.ಜಿ ವಚನಗಳ ಆಧಾರಿತ ಕಲಾಪ್ರದರ್ಶನ, ಶ್ರೀ ತೋಂಟದಾರ್ಯಮಠಗದಗ ಮುಂತಾದ ಹಲವು ಏಕವ್ಯಕ್ತಿ ಕಲಾಪ್ರದರ್ಶನವನ್ನು ಮಾಡಿ ಜನಮನ್ನಣೆ ಪಡೆದುಕೊಂಡಿದ್ದಾರೆ.

ಶ್ರೀ ಎನ್.ಎ.ಹರ್ಲಾಪೂರವರು ಕ್ರಿಯೇಟಿವ್ ಕಲಾಕೃತಿಗಳು ನೈಜ ಕಲಾಕೃತಿಗಳು ಮತ್ತು ವಚನ ಆಧಾರಿತ ಕಲಾಕೃತಿಗಳನ್ನು ರಚಿಸಿದ್ದು, ಅವುಗಳನ್ನು ಅನೇಕ ಕಡೆ ಕಲಾಪ್ರದರ್ಶನ ಮಾಡಿದ್ದಾರೆ. ೧೯೭೪ರಲ್ಲಿ ೭ನೇ ಅಖಿಲ ಭಾರತ ಕಲೆ ಹಾಗೂ ಕೈಗಾರಿಕೆಗಳ ಕಲಾಪ್ರದರ್ಶನ ಚಿತ್ರಕಲಾ ಪ್ರದರ್ಶನ ಚಿತ್ರಕಲಾ ಪರಿಷತ್ ಬೆಂಗಳೂರು, ೧೯೭೮ರಲ್ಲಿ ಅಖಿಲ ಕರ್ನಾಟಕ ಡಾ. ರಾಜಕುಮಾರ ಅಭಿಮಾನಿಗಳ ಸಂಘದ ಆಶ್ರಯದಲ್ಲಿ ಚಿತ್ರಕಲಾ ಪ್ರದರ್ಶನ ಬೆಂಗಳೂರು, ರೇನ್ಬೋ ಆರ್ಟ್ ಕೌನ್ಸಿಲ್ ಚಿತ್ರಕಲಾ ಪ್ರದರ್ಶನ ಧಾರವಾಡ, ಅಖಿಲ ಭಾರತ ವೀರಶೈವ ಮಹಾಸಭಾ ೨೦ನೇ ಅಧಿವೇಶನದ ಅಂಗವಾಗಿ ಏರ್ಪಡಿಸಿದ ಚಿತ್ರಕಲಾ ಪ್ರದರ್ಶನ ಮೈಸೂರು, ಚಿತ್ರಕಲಾ ಪ್ರದರ್ಶನ ಪಟ್ಟದಕಲ್ಲು, ರಾಜ್ಯ ಚಿತ್ರಕಲಾ ಶಿಕ್ಷಕರ ಸಮ್ಮೇಳನ ಬೆಂಗಳೂರು, ಅಖಿಲ ಭಾರತ ಚಿತ್ರಕಲಾ ಪ್ರದರ್ಶನ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ರಿಜನಲ್ ಆರ್ಟ್ ಕಲಾಪ್ರದರ್ಶನ ವಿಜಯ ಕಲಾಮಂದಿರ, ಗದಗ, ೧೪ನೇ ಅಖಿಲ ಭಾರತ ಕಲಾ ಹಾಗೂ ಕೈಗಾರಿಕೆಯ ಚಿತ್ರಕಲಾ ಪ್ರದರ್ಶನ ಚಿತ್ರಕಲಾ ಪರಿಷತ್ ಬೆಂಗಳೂರು, ಚಿತ್ರಕಲಾ ಪ್ರದರ್ಶನ ಲಕ್ಕುಂಡಿ, ಕಲಾ ಉತ್ಸವ ಗದಗ, ೫೩ನೇ ಕನ್ನಡ ಸಾಹಿತ್ಯ ಸಮ್ಮೇಳನ ಕೊಪ್ಪಳ, ಕರ್ನಾಟಕ ಲಲಿತಕಲಾ ಅಕಾಡೆಮಿ ವಾರ್ಷಿಕ ಕಲಾಪ್ರದರ್ಶನ ಬೆಂಗಳೂರು, ದೆಹಲಿ, ನಾಗಪೂರ, ಗೋವಾ, ಬಾಗಲಕೋಟೆ ಮುಂತಾದ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನಗೊಂಡಿವೆ.

---

೧೨೭. ಅಶೋಕ ಅಕ್ಕಿ (ಸಂ) ಕೃತಪುರ ಕಲಾವೈಭವ ಚಿತ್ರ, ಮತ್ತು ಶಿಲ್ಪಕಲಾವಿದರ ಕೈಪಿಡಿ ಲಕ್ಕುಂಡಿ ಉತ್ಸವ ೨೦೦೯ ಪು.ಸಂ. ೩೫

ಶ್ರೀ ಎನ್.ಎ.ಹರ್ಲಾಪೂರ ಅವರು ಉತ್ತಮ ಕಲಾವಿದರು ಉತ್ತಮ ಸಂಘಟಿಕರೂ ಆಗಿರುವ ಇವರು ಹಲವು ಕಲಾಶಿಬಿರ ಸಂಘಟಿಸುವುದರ ಜೊತೆಗೆ ಅನೇಕ ಕಲಾಶಿಬಿರಗಳಲ್ಲಿ ಭಾಘವಹಿಸಿದ್ದಾರೆ. ರಿಜನಲ್ ಆರ್ಟ್ ಕಲಾ ಪ್ರದರ್ಶನ ವಿಜಯ ಕಲಾಮಂದಿರ, ಗದಗ, "ಏಕತೆಗಾಗಿ ನಾವು-ನೀವು" ೨೦೦ ಅಡಿಯ ಕ್ಯಾನ್‌ವಾಸ್ ಮೇಲೆ ಕಲಾಕೃತಿ ರಚನೆ, ಬೆಂಗಳೂರು, ವಿಶ್ವರಂಗ ದಿನಾಚರಣೆಯ ಅಂಗವಾಗಿ ಲಯ ಕಲಾ ಮನೆ ಗದಗ ಇವರಿಂದ ೫೦ ಅಡಿ ಉದ್ದದ ಬೃಹತ್ ಕ್ಯಾನ್‌ವಾಸ್ ಮೇಲೆ ಮಹಾತ್ಮಾ ಗಾಂಧೀಜಿ ವೃತ್ತದಲ್ಲಿ ಚಿತ್ರಕಲಾ ಶಿಬಿರ, ಶ್ರೀ ತೋಟದಾರ್ಯ ಶ್ರೀ ಸಿದ್ಧಲಿಂಗೇಶ್ವರ ಜಾತ್ರಾಮಹೋತ್ಸವ ಗದಗ, ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಮತ್ತು ರಾಷ್ಟ್ರ ಶಿಕ್ಷಣ ಸಂಗೋಪನೆ ಹಾಗೂ ತರಬೇತಿ ಇವರಿಂದ ಕಲಾಶಿಬಿರ ಚಿತ್ರಕಲಾ ಪರಿಷತ್ ಬೆಂಗಳೂರು, ಕರ್ನಾಟಕ ಲಲಿತಕಲಾ ಅಕಾಡೆಮಿ ಕಲಾಶಿಬಿರ, ಶ್ರೀ ತೋಂಟದಾರ್ಯ ಕಲ್ಯಾಣ ಮಂಟಪ ಗದಗ, ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಿಂದ ೧೦೦ ಅಡಿ ಕ್ಯಾನ್‌ವಾಸ್ ಮೇಲೆ ಏಡ್ಸ್ ಜಾಗೃತಿ ಕಲಾಶಿಬಿರ, ಮಹಾತ್ಮಾಗಾಂಧೀಜಿ ವೃತ್ತ ಗದಗ, ಶ್ರೀ ಎಂ.ಎ.ಚೆಟ್ಟಿ ಜನ್ಮಶತಮಾನೋತ್ಸವ ಶಿಬಿರ ವಿ.ಡಿ.ಎಸ್.ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಗದಗ, ಭಿತ್ತಿಚಿತ್ರಕಲಾ ಶಿಬಿರ, ನೀರಲಗಿ, ಹೀಗೆ ಹಲವಾರು ಕಲಾಶಿಬಿರಗಳಲ್ಲಿ ಭಾಗವಹಿಸಿ ಉತ್ತಮವಾದ ಕಲಾಕೃತಿಗಳನ್ನು ರಚಿಸಿದ್ದಾರೆ.[೧೨೮] ಇವರ ಕಲಾಕೃತಿಗಳನ್ನು ಮೆಚ್ಚಿ ಹಲವಾರು ಸಂಘ-ಸಂಸ್ಥೆಗಳು ಸನ್ಮಾನಿಸಿ ಗೌರವಿಸಿದ್ದಾರೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ಇವರಿಂದ ಬಾಗಲಕೋಟೆಯಲ್ಲಿ ನಡೆದ ೩೪ ಮತ್ತು ೩೫ನೇ ವಾರ್ಷಿಕ ಕಲಾಪ್ರದರ್ಶನದಲ್ಲಿ ಗೌರವ ಪ್ರಶಸ್ತಿ, ಗದಗನಲ್ಲಿ ನಡೆದ ಅಖೀಲ ಭಾರತ ೭೬ನೇ ಸಾಯಿತ್ಯ ಸಮ್ಮೇಳನದಲ್ಲಿ ಕಲಾಶಾಧನೆಗೆ ಗೌರ ಪ್ರಶಸ್ತಿ, ಅಖಿಲ ಭಾರತ ನಿರುದ್ಯೋಗಿ ಚಿತ್ರಕಲಾ ಶಿಕ್ಷಕರ ಸಂಘ ಹಾಗೂ ಚಿತ್ರಕಲಾ ಶಿಕ್ಷಕರ ಸಂಘ, ಸಂಗೀತ ಸಂಘದಿಂದ ಸನ್ಮಾನ, ವಿ.ಡಿ.ಎಸ್.ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಗದಗ ಇವರಿಂದ ಸನ್ಮಾನ ವಿಜಯ ಕಲಾಮಂದಿರ ಇವರಿಂದ ಸನ್ಮಾನ, ಕುಂಚಬ್ರಹ್ಮ ಶ್ರೀ ಎಂ.ಎ. ಚೆಟ್ಟಿಯವರ ಹೆಸರಿನಲ್ಲಿ "ವರ್ಣಬಿಂಧು" ಪ್ರಶಸ್ತಿಸಹಿತ ರೂ. ೫೦೦೦-೦೦ಗಳ ನಗದು ಬಹುಮಾನ, ಜಗದ್ಗುರು ತೋಂಟದಾರ್ಯಮಠದಲ್ಲಿ ಶಿವಾನಭವ ಕಾರ್ಯಕ್ರಮದಲ್ಲಿ ಸನ್ಮಾನ, ಹೀಗೆ ಎನ್.ಎ.ಹರ್ಲಾಪೂರ ಅವರು ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ತಮ್ಮ ಕಲಾಜೀವನವನ್ನು ಸಾರ್ಥಕ ಮಾಡಿಕೊಂಡಿದ್ದಾರೆ. ಇವರ ಕುರಿತು ಅನೇಕ ದಿನಪತ್ರಿಕೆಗಳಲ್ಲಿ ಲೇಖನಗಳು ಮತ್ತು ಅವರ ಕಲಾಕೃತಿಗಳ ಕುರಿತು ಲೇಖನಗಳು ಪ್ರಕಟಗೊಂಡಿವೆ.

ಎನ್.ಎ. ಹರ್ಲಾಪೂರರವರು ಕಲಾಕೃತಿಗಳ ವಸ್ತು ವಿಷಯವನ್ನು ಗಮನಿಸಿದಾಗ ಇವರು ನೈಜಶೈಲಿಯೊಂದಿಗೆ ಸೃಜನಾತ್ಮ ಕಲಾ ಕೃತಿಗಳನ್ನು ರೇಖಾಚಿತ್ರಗಳು, ಪ್ಲಾರ್ಟ್‌ಆಫ್ ಪ್ಯಾಸ್‌ದಿಂದ ಜಲವರ್ಣ, ತೈಲವರ್ಣ, ಕ್ರೇಯಾನ್, ಮತ್ತು ಕ್ಲೇಮಾಡಲಿಂಗ್ ಮುಂತಾದ ಮಾಧ್ಯಮಿಗಳಿಂದ ಕಲಾಕೃತಿಗಳನ್ನು ರಚಿಸಿದ್ದಾರೆ. ಕಲಾರಸಿಕರಿಗೆ ರಸಾನುಭವ ನೀಡುವತ್ತ ಇವರ ಕಲಾ ಕೃತಿಗಳು ಶೈಲಿತಂತ್ರಗಳಿಂದ ವಿಶಿಷ್ಟವಾಗಿ ರಚನೆಯಾಗಿರುವುದನ್ನು ಇವರ ರಚಿಸಿದ ಕಲಾಕೃತಿಗಳಿಂದ ಕಾಣಬಹುದು. ಅವುಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

---

೧೨೮. ಎನ್.ಎ. ಹರ್ಲಾಪೂರ ಅವರ ದಾಖಲಾತಿಗಳು

ಚಿತ್ರ :೧. ಹೂಮಾರುವ ಬಾಲಕ : ಈ ಕೃತಿಯನ್ನು ನೈಜವಾಗಿ ಚಿತ್ರಿಸಲಾಗಿದೆ. ಕಪ್ಪು ಬಣ್ಣದ ಬಾಲಕನು ಓಣಿಯಲ್ಲಿ ಹೂವನ್ನು ಮಾರುತ್ತ ಹೊರಟ ದೃಶ್ಯವಿದ್ದು, ತನ್ನ ಮಗ್ಗುಲಿಗೆ ಬಿದುರು ಬುಟ್ಟಿಯನ್ನು ಹಾಕಿಕೊಂಡು ಅದರಲ್ಲಿ ಮಲ್ಲಿಗೆಯ ಹೂವಿನ ಸರ ತುಂಬಿ ತನ್ನ ಬಲಕೈಯಲ್ಲಿ ಅದನ್ನು ಹಿಡಿದುಕೊಂಡು ಬದಿಗೆ ಹೊರಟಿರುವ ಚಿತ್ರ ನೈಜಚಿತ್ರವನ್ನು ತೋರಿಸುತ್ತದೆ. ಪ್ರಮಾಣ ಬದ್ಧವಾದ ಬಾಲಕನ ಚಿತ್ರದಲ್ಲಿ ಅವನಿಗೆ ತೊಡಿಸಿದ ಬಟ್ಟೆಗಳು ತುಂಬ ಸುಂದರವಾಗಿ ಮೂಡಿವೆ. ನೆರಳು ಮತ್ತು ಬೆಳಕಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ತೋರಿಸಿದ ಹಿನ್ನೆಲೆಯಲ್ಲಿ ಮನೆ, ಗಿಡ, ಮರಗಳನ್ನು ಚಿತ್ರಿಸಿಲಾಗಿದೆ. ಸಮೀಪ ದೃಷ್ಟಿ ಮತ್ತು ದೂರ ದೃಷ್ಟಿಯು ಸಹಜವಾಗಿ ಮೂಡಿಸಲಾಗಿದೆ. ದೂರದ ಮನೆಗಳು ಹಿನ್ನೆಯಲ್ಲಿ ಅಸ್ಪಷ್ಟವಾಗಿ ತೋರಿಸಿ ದೂರ ಬಿಂಬವನ್ನು ಚಿತ್ರಿಸಲು ಕಲಾವಿದ ಪಳಗಿದ್ದಾರೆ. ತೈಲವರ್ಣದಲ್ಲಿ ಚಿತ್ರಿಸಿದ ಈ ಕೃತಿಯಲ್ಲಿ ಬಳಸಿದ ಬಣ್ಣಗಳು ಓವರ್ ಲ್ಯಾಪ್ ಮಾಡಿ ಪ್ಯಾಚ್‌ವರ್ಕ್‌ನೊಂದಿಗೆ ಕೃತಿ ರಚಿಸಿದ್ದಾರೆ.

ಚಿತ್ರ : ೨. ಕುಟುಂಬ : ಜಲವರ್ಣ ಮಾಧ್ಯಮದ ಸಂಯೋಜನಾ ಚಿತ್ರವಾಗಿದ್ದು ಇದು ಒಂದು ರೈತನ ವಿಭಕ್ತ ಕುಟುಂಬದ ದೃಶ್ಯವಾಗಿದ್ದು ಅಜ್ಜಿ ರೈತ ಆತನ ಹೆಂಡತಿ, ಮಕ್ಕಳು ಒಟ್ಟಾಗಿ ಇರುವ ಚಿತ್ರ ಇದಾಗಿದೆ. ಶ್ರೀ ಎನ್.ಎ. ಹರ್ಲಾಪೂರವರು ವಿಭಕ್ತ ಕುಟುಂಬದಿಂದ ಬಂದ ಹಿನ್ನೆಲೆಯ ಕಲ್ಪನಾ ಲಹರಿಯನ್ನು ಈ ಚಿತ್ರದಲ್ಲಿ ಮೂಡಿಸಿದ್ದಾರೆ. ಬಳಸಿದ ಬಣ್ಣದಲ್ಲಿ ನೈಜತೆ ಮತ್ತು ಉಡುಗೆ ವಿನ್ಯಾಸದೊಂದಿಗೆ ಒಬ್ಬ ಹಳ್ಳಿಯ ಕುಟುಂಬದ ಕೃತಿಯನ್ನು ರಚಿಸಿ ತಮ್ಮ ಹಳ್ಳಿಯ ಬಗೆಗಿನ ಪ್ರೀತಿಯನ್ನು ಈ ಚಿತ್ರದ ಮೂಲಕ ವ್ಯಕ್ತಪಡಿಸಿದ್ದಾರೆ.

ಚಿತ್ರ : ೩. ತಾಯಿ ಮತ್ತು ಮಗು :ಈ ಚಿತ್ರವು ತಾಯಿ ಮತ್ತು ಮಗುವಿನ ಸಂಬಂಧ ಸೂಚಕವಾಗಿ ಚಿತ್ರಸಲಾಗಿದೆ. ತಾಯಿ ತನ್ನಲ್ಲಿನ ಎಲ್ಲ ನೋವುಗಳನ್ನು ತನ್ನ ಮಗುವಿನಿಂದ ಮರೆತು ಜೀವನದಲ್ಲಿಯ ಸಂತೋಷವನ್ನು ವ್ಯಕ್ತಪಡಿಸುವ ಅವಳ ಮುಖವನ್ನು ಚಿತ್ರಿಸಿದ್ದಾರೆ. ತನ್ನ ದೃಷ್ಟಿಯನ್ನು ಸಂತೋಷದ ಅಲೆಯಲ್ಲಿ ಹರಿಬಿಟ್ಟ ಅವಳ ಕಣ್ಣುಗಳು ಸಂತೋಷದ ನೋಟವಾಗಿವೆ. ಮಹಿಳೆಯ ಚಿತ್ರದ ಪ್ರಮಾಣವು ತುಸು ಹೆಚ್ಚಾಗಿದ್ದು ಅದು ಅವಳಿಗಾದ ಆನಂದದ ದ್ಯೋತಕಾಗಿಯೂ ಬಳಸಿಕೊಳ್ಳಲಾಗಿದೆ. ಪಕ್ಕದಲ್ಲಿ ಮರ, ಮತ್ತು ಬಿದಿರಿನ ಪುಟ್ಟಿಯ ಚಿತ್ರವಿದ್ದು ಹಿನ್ನೆಲೆಯ ಮನೆಯ ಚಿತ್ರದಲ್ಲಿ ಒಂದು ಗೋಣನ ಜಾಗದಲ್ಲಿ ಪಣತಿ ಇದೆ. ಇದನ್ನು ಗಮನಿಸಿದಾಗ ಇವಳು ಒಬ್ಬ ಹಳ್ಳಿಯ ಹೆಂಗಸಿನ ವಾತಾವರಣದ ಅನುಭವ ನೀಡುವಲ್ಲಿ ಹರ್ಲಾಪೂರವರು ಚಿತ್ರವನ್ನು ಸೊಗಸಾಗಿ ಬಿಡಿಸಿದ್ದಾರೆ.

ಸೃಜನಾತ್ಮಕ ಕಲಾಕೃತಿಗಳು :

ಚಿತ್ರ : ೧. ಗಣಪತಿ : ಈ ಕಲಾಕೃತಿಯನ್ನು ತೈಲವರ್ಣದಿಂದ ಕಲಾವಿದ ಎನ್.ಎ. ಹರ್ಲಾಪೂರರವರು ರಚಿಸಿದ್ದು. ಗಣೇಶನ ಮುಖವನ್ನು ತಂತ್ರಗಾರಿಕೆಯನ್ನು ಬಳಸಿ ರಚಿಸಿದ್ದಾರೆ. ಕ್ಯಾನವಾಸಿಗೆ ಬಣ್ಣಗಳನ್ನು ಲೇಪಿಸಿ ನಂತರ ನಮಗೆ ಯಾವ ರೀತಿಯಲ್ಲಿ ಬೇಕು ಆ ರೀತಿಯಲ್ಲಿ ಬಳಸಿಕೊಂಡು ರಚಿಸಿದ ಕಲಾಕೃತಿಯಾಗಿದೆ. ಗಣೇಶನ ಮುಖ, ಕಿವಿ, ಕಣ್ಣುಗಳು ಸೂಕ್ಷ್ಮವಾಗಿ ಗಮನಿಸಿದಾಗ ಕಾಣುತ್ತವೆ. ಸೃಜನಾತ್ಮಕತೆಯಿಂದ ಕಲಾಕೃತಿಯ ರಚಿಸಿದಲ್ಲಿ ಹರ್ಲಾಪೂರರವರ ಕಲಾಕೌಶ್ಯಲ್ಯತೆಗೆ ಹೆಚ್ಚಿನ ಮಹತ್ವ ನೀಡಿದೆ.

ಚಿತ್ರ : ೨. ಆಕಾಶ ಮತ್ತು ಭೂಮಿ : ಈ ಕಲಾಕೃತಿಯನ್ನು ತೈಲವರ್ಣದಿಂದ ಆಕಾಶ ಮತ್ತು ಭೂಮಿ ಎಂಬ ವಿಷಯವನ್ನು ನೇರವಾಗಿ ಕಾಣುವಂತೆ ಸರಳರೀತಿಯಲ್ಲಿ ಬಣ್ಣಗಳ ಬಳಸುವಿಕೆಯಿಂದ ರಚಿಸಿದ್ದಾರೆ. ಭೂಮಿ ಮೇಲೆ ಇರುವ ಕಲ್ಲುಗಳು ಕೆಂಪು ಮಣ್ಣುಗಳು ಎಂಬ ಕಲ್ಪನೆಯನ್ನು ಸರಳಿಕರಿಸಿ ವರ್ಣಗಳ ಮತ್ತು ಮೈವಳಿಕೆಯಿಂದ ರಚಿಸಿದ್ದಾರೆ. ಅದೇ ರೀತಿ ಆಕಾಶ ಎಂದಾಗ ನೀಲಿವರ್ಣವನ್ನು ನಾವು ಕಾಣುವಂತೆ ಅದನ್ನು ಸ್ಪಷ್ಟವಾಗಿ ಸೃಜನಾತ್ಮಕವಾಗಿ ರಚಿಸಿದ್ದಾರೆ. ಸೂಕ್ಷ್ಮವಾಗಿ ಈ ಕಲಾ ಕೃತಿಯನ್ನು ಗಮನಿಸಿದಾಗ ಕೆಳಗಡೆ ಮಿರಗಲ್ಲುಗಳು ವಿರುವಂತೆ ಕಂಡು ಬರುತ್ತದೆ. ಆಕಾಶ ಭೂಮಿ ಎಂಬ ಶಿರ್ಶಿಕೆಯ ಈ ಕಲಾಕೃತಿಯನ್ನು ಕಲಾವಿದ ತಮ್ಮದೇ ಆದ ಶೈಲಿಯಲ್ಲಿ ರಚಿಸಿದ್ದಾರೆ.

ಚಿತ್ರ : ೩. ಸಂಗೀತಗಾರ : ಈ ಕಲಾಕೃತಿಯನ್ನು ಕಲಾವಿದ ತೈಲವರ್ಣದಿಂದ ಸೃಜನಾತ್ಮಕವಾಗಿ ರಚಿಸಿದ್ದಾರೆ. ಒಬ್ಬ ಸಂಗೀತಗಾರ ಯಾವರೀತಿಯಲ್ಲಿ ಕುಳಿತು ತಮ್ಮವಾದ್ಯವನ್ನು ನುಡಿಸುತ್ತಾರೆ. ಎಂಬುದರ ಕುರಿತು ಉತ್ತಮವಾಗಿ ಬಿಂಬಿಸಿದ್ದಾರೆ. ದಪ್ಪವಾಗಿ ವರ್ಣಗಳನ್ನು ಬಳಸಿದ್ದು ಈ ಕಲಾಕೃತಿಯ ವೈಶಿಷ್ಟವಾಗಿದೆ. ಕಲಾ ಕೃತೀಯ ಉತ್ತಮ ಸ್ಥಳಾವಕಾಶವನ್ನು ಹೊಂದಿದು, ಸಮತೋಲತೆ ಕಾಪಾಡಲು ಬಣ್ಣಗಳನ್ನು ಬಳಸಿದ್ದಾರೆ. ಇದರಲ್ಲಿ ವಿಣೆಯನ್ನು ಆಕರ್ಷಕವಾಗಿ ರಚಿಸಿದ್ದಾರೆ. ಈ ಕಲಾಕೃತಿಯ ಸೃಜನಾತ್ಮಕತೆಯ ಜೊತೆಗೆ ಅಕಾಡೆಮಿಕ ಶೈಲಿಯಲ್ಲಿ ರಚಿತಗೊಂಡಿದೆ.


ಚಿತ್ರ : ೪. ಕ್ರಿಯೇಶನ್ : ಈ ಕಲಾಕೃತಿಯನ್ನು ಕಲಾವಿದ ಉತ್ತಮರೀತಿಯಲ್ಲಿ ತೈಲವರ್ಣದಿಂದ ರಚಿಸಿದ್ದಾರೆ. ಚಲನೆ ಎಂಬ ಕಲ್ಪನೆಯನ್ನು ಕಲಾಕೃತಿಯಲ್ಲಿ ಬಣ್ಣಗಳ ರೇಖೆಗಳ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಯಾವುದೇ ಒಂದು ವಸ್ತುವಿನ ನಡುವೆ ನಡೆಯುವ ಕ್ರೀಯನ್ನು ಕೆಂಪು ನೀಲಿ ಕಪ್ಪು, ಮತ್ತು ಹಳದಿ ವರ್ಣಗಳಿಂದ ರಚಿಸಿದ್ದಾರೆ. ಕಲಾಕೃತಿಯಲ್ಲಿ ಮೈವಳಿಕೆಯನ್ನು ಅತ್ಯಂತ ಆಕರ್ಷಕವಾಗಿ ರಚಿಸಿದ್ದಾರೆ. ಈ ಕಲಾಕೃತಿಯ ಸರಳ ರೀತಿಯಾಗಿ ರಚಿತವಾಗಿದ್ದು ನೊಡುಗನ ದೃಷ್ಟಿಯ ಮೇಲೆ ತಿಳಿದುಕೊಳ್ಳಬಹುದಾಗಿದೆ.

ಪ್ಲಾಸ್ಪರ್ ಆಫ್ ಪ್ಯಾರಿಸ ಕಲಾ ಕೃತಿಗಳು :

ಚಿತ್ರ : ೧. ಸಾಯಿಬಾಬಾ : ಸಾಯಿಬಾಬಾರವರ ಮೂಲ ಛಾಯ ಚಿತ್ರದಿಂದ ರಚಿಸಿದ ಕಲಾಕೃತಿ ಇದಾಗಿದೆ. ಕಾಲ ಮೇಲೆ ಕಾಲು ಹಾಕಿಕೊಂಡು ನಿಂತಿರುವ ಭಂಗಿಯನ್ನು ಬಾಬಾರವರಿಗೆ ಛತ್ರಿ ಹಿಡಿದಿರುವ ಸನ್ನವೇಶ ಸಾಯಿಬಾಬಾರವರ ಅನುಯಾಯಿಗಳು ಭಕ್ತರು ಎರಡು ಕಡೆ ನಿಂತಿರುವ ಕಲಾಕೃತಿಯಾಗಿದ್ದು ಕಲಾವಿದ ಎನ್.ಎ. ಹರ್ಲಾಪೂರರವರು ಪ್ಲಾಸ್ಪರ ಆಫ್ ಪ್ಯಾರಿಸ್ ಮಾಧ್ಯಮದಿಂದ ಉಬು ಶೈಲಿಯನ್ನು ಮಾಡಿದ್ದಾರೆ. ಶ್ರೀ ಸಾಯಿಬಾಬಾರವರ ಹಾವ ಭಾವವನ್ನು ಪ್ರಮಾಣ ಬದ್ಧವಾಗಿ ಉತ್ತಮರೀತಿಯಲ್ಲಿ ಕಲಾಕೃತಿಯನ್ನು ರಚಿಸಿದ್ದಾರೆ. ಈ ಕಲಾಕೃತಿ ಗದುಗಿನ ಶ್ರೀ ಸಾಯಿಬಾಬಾ ಗುಡಿಯಲ್ಲಿ ಸಂಗ್ರಹವಾಗಿದೆ. ಪ್ಲಾಸ್ಪರ ಆಫ್ ಪ್ಯಾರಿಸ್‌ದ ಮೇಲೆ ಬ್ರಾಂಜದ ವರ್ಣವಕಾಣುವಂತೆ ರಚಿಸಿದ್ದಾರೆ. ನೋಡುಗರಿಗೆ ಇದು ಬ್ರಾಂಜದಿಂದ ರಚಿಸಿದಂತೆ ಭಾಸವಾಗುತ್ತದೆ.

ಶ್ರೀ ಎನ್.ಎ.ಪರ್ಲಾಪೂರ ರವರ ಸಂಯೋಜನೆ ಕಲಾಕೃತಿಗಳು





ಚಿತ್ರ: ೨.ಹೂ ಮಾರುವ ಬಾಲಕ



ಚಿತ್ರ: ೧.




ಚಿತ್ರ : ೧.ಕುಟುಂಬ




ಚಿತ್ರ: ೪.ತಾಯಿ ಮತ್ತು ಮಗು

ಶ್ರೀ ಎಸ್.ಎ.ಹರ್ಲಾಪೂರ ರವರ ಪ್ಲಾಸ್ಟರ ಆಫ್ ಪ್ಯಾರಿಸ್ ಕಲಾಕೃತಿಗಳು




ಚಿತ್ರ: ೧.



ಚಿತ್ರ: ೨ .



ಚಿತ್ರ: ೩.



ಚಿತ್ರ: ೪.

ಶ್ರೀ ಎನ್.ಎ.ಹರ್ಲಾಪೂರ ರವರ ಸೃಜನಾತ್ಮಕ ಕಲಾಕೃತಿಗಳು



ಚಿತ್ರ ೧.ಗಣಪತಿ



ಚಿತ್ರ: ೨.ಆಕಾಶ ಮತ್ತು ಭೂಮಿ



ಚಿತ್ರ: ೩.ಸಂಗೀತ ಗಾಂತಿ



ಚಿತ್ರ: ೪.ಕ್ರೀಯೆಶನ್

ಚಿತ್ರ : ೨. ಈ ಕಲಾ ಕೃತಿಯು ಪ್ಲಾಸ್ಟರ ಆಫ್ ಪ್ಯಾರಿಸನಿಂದ ರಚಿತವಾಗಿದ್ದು ಶ್ರೀ ಸಾಯಿಬಾಬಾರವರು ಸ್ವತ ತಾವೇ ತಮ್ಮ ಕೈಯಿಂದ ರೋಗಿಗಳಿಗೆ ಚಿಕಿತ್ಸೆಯನ್ನು ನೀಡುತ್ತಿದ್ದಾರೆ. ಒಬ್ಬ ಯಜಮಾನ ಔಷಧವನ್ನು ಅರಿಯುತ್ತಿದ್ದಾರೆ. ಔಷದ ಹಾಕಲಿಕೆ ಪಾತ್ರೆಗಳು ಮಣ್ಣಿನ ಗಡಗಿಗಳು ಸುಂದರವಾಗಿ ರಚಿಸಿದ್ದಾರೆ. ರೋಗಿಯನ್ನು ನೋಡುತ್ತಿರುವ ಮಹಿಳೆಯರು, ಯಜಮಾನ ಮನುಷ್ಯರ ಚಿತ್ರವನ್ನು ಕಲಾವಿದ ಹರ್ಲಾಪೂರರವರು ಉಬುಗೆತ್ತನೆಯಲ್ಲಿ ಉತ್ತಮರೀತಿಯಲ್ಲಿ ರಚಿಸಿದ್ದಾರೆ.

ಚಿತ್ರ : ೩. ಈ ಕಲಾ ಕೃತಿಯು ಶಿರಡಿಗೆ ಬಾಬಾರವರು ಮೊದಲಬಾರಿಗೆ ಬಂದ ಸನ್ನಿವೇಶದ ಕಲಾಕೃತಿಯದಾಗಿದೆ. ಜನರು ಬಾಬಾರವರನ್ನು ಸ್ವಾಗತಿಸಿ ಶಿರಡಿಗೆ ಕರೆಯುತ್ತಿರುವುದು ಊರಿನ ಪ್ರಮುಖರು ಪುರುಹಿತರು, ಗಣ್ಯವ್ಯಕ್ತಿಗಳು ಚಿತ್ರವನ್ನು ರಚಿತಗೊಂಡಿದೆ. ಬಾಬಾರವರ ಹಿಂದೆ ದೀಪವನ್ನು ಹಿಡಿದುಕೊಂಡ ವ್ಯಕ್ತಿ ಮತ್ತು ಅವರ ಭಕ್ತರನ್ನು ಕಲಾಕೃತಿಯಲ್ಲಿ ರಚಿಸಿದ್ದಾರೆ. ಈ ಕಲಾಕೃತಿಯು ಗದುಗಿನ ಶ್ರೀ ಶಿರಡಿ ಸಾಯಿಬಾಬಾರವರ ಮಂದಿರದಲ್ಲಿ ಸಂಗ್ರಹವಾಗಿದೆ. ಇದು ಅಳತೆಯದಾಗಿದೆ.

ಚಿತ್ರ : ೪. ಈ ಕಲಾ ಕೃತಿಯು ಬಾಬಾರವರು ದ್ವಾರಕಾಮಯದಲ್ಲಿ ಹೊತ್ತಿಸಿದ ಬೆಂಕಿಯ ಬುದಿಯನ್ನು ಭಕ್ತರಿಗೆ ಹಂಚಿ ಎಲ್ಲ ತೊಂದರೆಗಳನ್ನು ನಿವಾರಸುತಿರುವ ಉಬ್ಬು ಶಿಲ್ಪವಾಗಿದೆ ಪವಾಡಪುರಷರಾದ ಶ್ರೀ ಶಿರಡಿ ಸಾಯಿ ಬಾಬಾರವರು ಉತ್ತಮ ಸಂಯೋಜನೆಯನ್ನು ಹೊಂದಿರುವ ಕಲಾಕೃತಿಯಾಗಿದೆ. ಹಿನ್ನೆಲೆ ಸ್ಥಳಾವಕಾಶವನ್ನು ಕಲಾವಿದ ಉತ್ತಮ ರೀತಿಯಲ್ಲಿ ಉಪಯೋಗಿಸಿ ಈ ಕಲಾಕೃತಿಯನ್ನು ರಚಿಸಿದ್ದಾರೆ. ಪುರೋಹಿತರು ಮೈಮೇಲೆ ಹಾಕಿಕೊಂಡಿರುವ ಶಾಲು ಅದರಲ್ಲಿ ಬದ್ದಿರುವ ನಿರಿಗೆಳನ್ನು ಸುಂದರವಾಗಿ ರಚಿಸಿದ್ದಾರೆ. 4×8 ಈ ಕಲಾಕೃತಿಯ ಸಾಯಿಮಂದಿರದಲ್ಲಿದೆ.

ಚಿತ್ರ : ೫. ಈ ಕಲಾಕೃತಿಯು ವಿಶೇಷವಾಗಿದೆ. ಎಲ್ಲ ಕಲಾಕೃತಿಯಲ್ಲಿ ಬಾಬಾರವರ ಪವಾಡವಿದ್ದರೆ ಈ ಕಲಾ ಕೃತಿಯಲ್ಲಿ ಬಾಬಾರು ಮಕ್ಕಳ ಪ್ರೀಯರು ಎಂಬುದಕ್ಕೆ ಈ ಕಲಾಕೃತಿಯಿಂದ ತಿಳಿದುಬರುತ್ತದೆ. ಬಾಬಾರೊಂದಿಗೆ ಮಾತನಾಡುತ್ತ ಗಿಡಗಳನ್ನು ನೆಡುತ್ತಿರುವ ಈ ಕಲಾಕೃತಿಗಳ ಬಹಳಷ್ಟು ಆಕರ್ಷಕವಾಗಿದೆ ತಮ್ಮ ತಮ್ಮ ಕೆಲಸದಲ್ಲಿ ತೊಡಗಿರುವ ಮಕ್ಕಳ ಚಿತ್ರಗಳನ್ನು ಕಲಾವಿದ ಉತ್ತಮ ರೀತಿಯಲ್ಲಿ ಬಿಂಬಿಸಿದ್ದಾರೆ ಹಿನ್ನಲೆಯಾಗಿ ಗಿಡಗಳು ಗುಡಿಗಳನ್ನು ಸಮಿದೂರದ ಕಲ್ಪನೆಯನ್ನು ಕಲಾಕೃತಿಯಲ್ಲಿ ಬಹಳಷ್ಟು ಮಾರ್ಮಿಕವಾಗಿ ರಚಿಸಿದ್ದಾರೆ. ಈ ಕಲಾ ಕೃತಿಯು ಸಾಯಿ ಮಂದಿರ ಗದಗದಲ್ಲಿ ಸಂಗ್ರಹಗೊಂಡಿದೆ.

ಎ.ಎ. ಶಿರಹಟ್ಟಿ :

ಶ್ರೀ ಎ.ಎ. ಶಿರಹಟ್ಟಿಯವರು ೧೦ನೇ ಮಾರ್ಚ್ ೧೯೪೪ರಲ್ಲಿ ಆಯಿಶಾಬಿ ಅವರ ಉದರದಿಂದ ಅಬ್ದುಲ್ ಅಜೀಜ್‌ರವರು ಜನಿಸಿದರು. ಚಿಕ್ಕವರಿರುವಾಗಲೇ ಚಿತ್ರಕಲೆಯ ಕಡೆಗೆ ಹೆಚ್ಚಿನ ಆಸಕ್ತಿಹೊಂದಿದ್ದ ಶಿರಹಟ್ಟಿಯವರು ೫ನೇ ತರಗತಿಯಲ್ಲಿ ಓದುತ್ತಿದ್ದಾಗ ಗದಗ–ಬೆಟಗೇರಿ ಶಹರದ ಸುಂದರ ಬರಹ ಸ್ಪರ್ಧೆಯಲ್ಲಿ ಅಬ್ದುಲ್‌ರವರು ಪ್ರಥಮ ಸ್ಥಾನ ಪಡೆದು ಬೆಳ್ಳಿ ಪದಕ ಮತ್ತು ಪ್ರಮಾಣ ಪತ್ರ ಪಡೆದುಕೊಂಡರು. ಇದರಿಂದ ಮತ್ತಷ್ಟು ಪ್ರೋತ್ಸಾಹದೊರೆತು ಶಿರಹಟ್ಟಿಯವರು ತಮಗೆ ಆಸಕ್ತಿ ಇದ್ದ ಪಠ್ಯಪುಸ್ತಕದಲ್ಲಿ ಚಿತ್ರಗಳನ್ನು ನಕಲು ಮಾಡಿ ಆನಂದಿಸುತ್ತಿದ್ದರು. ಹಾಗೂ ತಮಗೆ ಕೊಟ್ಟ ಹಣವನ್ನು ಕೂಡಿಟ್ಟು ಹಣದಿಂದ ಕುಂಚ, ಬಣ್ಣಗಳನ್ನು ಕೊಳ್ಳುತ್ತಿದ್ದರು.

ಮಾಧ್ಯಮಿಕ ಶಿಕ್ಷಣವನ್ನು ಬೆಳಗಾವಿಯ ಇಸ್ಲಾಮಿಯಾ ಹೈಸ್ಕೂಲ್‌ನಲ್ಲಿ ೮ನೇ ತರಗತಿಗೆ ಪ್ರವೇಶ ಪಡೆದರು. ಆಗ ಆ ಪ್ರೌಢಶಾಲೆಯಲ್ಲಿ ಎಂಟನೆಯ ತರಗತಿಯಿಂದ ಮಾತ್ರ ಇಂಗ್ಲೀಷ ವಿಷಯ ಕಲಿಸುವ ರೂಢಿ ಇತ್ತು. "ಶ್ರೀ ಶಿರಹಟ್ಟಿ ಅವರು ಇಲ್ಲಿ ಪ್ರಾರಂಭದಿಂದಲೇ ಇಂಗ್ಲೀಷ್ ಕಲಿತು ಉತ್ತಮ ಸಾಧನೆ ಮಾಡಿದರು. ಅದೇ ಶಾಲೆಯ ಒಂದನೆಯ ಅಂತಸ್ತಿನ ಮೇಲೆ ಬೆಳಗಾವಿಯ ಪ್ರಸಿದ್ಧ ಕಲಾಶಾಲೆ "ಖಯ್ಯಾಮ್ ಸ್ಕೂಲ್ ಆಫ್ ಆಟ್" ಇತ್ತು. ಜೆ.ಜೆ. ಸ್ಕೂಲ ಆರ್ಟ್ ಮುಂಬಯಿಯಲ್ಲಿ ಶಿಕ್ಷಣ ಪಡೆದ ಶ್ರೀ ಸಾವಂತ ಅವರು ಈ ಕಲಾಶಾಲೆಯ ಪ್ರಿನ್ಸಿಪಾಲರಾಗಿದ್ದರು. ಅವರೊಬ್ಬ ಉತ್ತಮ ಕಲಾಕಾರರಾಗಿದ್ದರು. ಕಲೆಯಲ್ಲಿ ಆಸಕ್ತಿಯುಳ್ಳ ಶಿರಹಟ್ಟಿ ಅವರಿಗೆ ಕಲೆಯ ಅಭ್ಯಾಸ ಮಾಡಲು ಇಲ್ಲಿ ಬಹಳ ಅನುಕೂಲಾಯಿತು.[೧೨೯]

ಸಾವಂತರು ತಮ್ಮ ಹತ್ತಿರ ಕಲಿಯಲು ಬಂದ ಉತ್ಸಾಹಿ ಉತ್ತಮ ವಿದ್ಯಾರ್ಥಿಗಳನ್ನು ಡ್ರಾಯಿಂಗ್ ಎಲಿಮೆಂಟರಿ ಹಾಗೂ ಇಂಟರ್ ಮಿಡಿಯಟ್ ಕಲಾಪರೀಕ್ಷೆಗೆ ಕೂಡ್ರಿಸುತ್ತಿದ್ದರು. ಶ್ರೀ ಶಿರಹಟ್ಟಿ ಅವರು ಶ್ರೀ ಸಾವಂಥರ ಪ್ರೀತಿಯ ಶಿಷ್ಯರಾಗಿ ಕಲೆಯ ಅಭ್ಯಾಸ ಮಾಡಿ ಎಲಿಮೆಂಟರಿ ಹಾಗೂ ಇಂಟರ್‌ಮೆಡಿಯಟ್ ಎರಡೂ ಕಲಾಪರೀಕ್ಷೆಯಲ್ಲಿ ಉತ್ತೀರ್ಣರಾದರು. ಬೆಳಗಾವಿಯಲ್ಲಿಯೇ ಅವರು ಪಾಟಗೇಕರ ಹಿಂದಿ ವಿಶ್ವವಿದ್ಯಾಲಯದಿಂದ ರಾಷ್ಟ್ರಭಾಷಾ ಹಿಂದಿ ಪರೀಕ್ಷೆ ಉತ್ತೀರ್ಣರಾಗಿ ಪ್ರನಃ ಗದುಗಿಗೆ ಮರಳಿ ಬಂದಾಗ ಇಲ್ಲಿ ಗ್ರೇನ್ ಮಾರ್ಕೆಟ್‌ನಲ್ಲಿ ವಾಸವಾಗಿದ್ದ ಸ್ವಾತಂತ್ರಯೋಧ ಶ್ರೀ ಆರ್. ಆರ್.ಶರ್ಮಾ ಅವರಿಂದ ಹಿಂದಿ ಪ್ರವೀಣದಂತಹ ಉಚ್ಚ ಪರೀಕ್ಷೆಗಳನ್ನು ಪಾಸು ಮಾಡಿಕೊಂಡರು. ಹೀಗೆ ಶಿರಹಟ್ಟಿಯವರು ತಮ್ಮ ಪ್ರೌಢಶಾಲಾ ಹಂತಹದಲ್ಲಿ ಉತ್ತಮ ಚಿತ್ರಕಲೆಯ ಜೊತೆಗೆ ಹಿಂದಿ ವಿಷಯವನ್ನು ಕರಗತಮಾಡಿಕೊಂಡಿದ್ದರು.

ಶ್ರೀ ಎ.ಎ.ಶಿರಹಟ್ಟಿಯವರು ಚಿತ್ರಕಲೆಯನ್ನು ಕಲಿಯಲು ವಿಜಯ ಕಲಾಮಂದಿರದಲ್ಲಿ ೧೯೬೨ರಲ್ಲಿ ಉನ್ನತ ಚಿತ್ರಕಲಾ ಅಧ್ಯಯನಕ್ಕೆ ಪ್ರವೇಶ ಪಡೆದರು. ಶಿರಹಟ್ಟಿಯವರು ಪ್ರವೇಶ ಪಡೆದಾಗ ಉತ್ತಮ ಚಿತ್ರಕಲಾವಿದರ ಸ್ನೇಹಿತರು ಇದ್ದರು. ವಿಜಯ ಕಲಾಮಂದಿರ ಸ್ಥಾಪಕರಾದ ಟಿ.ಪಿ.ಅಕ್ಕಿ ಗುರುಗಳು ಬಾಂಬೆಯ ಜೆ.ಜೆ. ಕಲಾಶಾಲೆಯಲ್ಲಿ ಅಧ್ಯಯನ ಮಾಡಿ ಗೋಲ್ಡ್ ಮೆಡೆಲಿಸ್ಟ್ ಎಂ.ಎ. ಚೆಟ್ಟಿಯವರು ನಮಗೆ ವಿದ್ಯಾಗುರುಗಳಾಗಿದ್ದರು. ಜೊತೆಗೆ ಕಲಾ ಆಚಾರ್ಯ ಶ್ರೀ ಸಿ.ಎನ್.ಪಾಟೀಲ, ಶ್ರೀ ವಿ.ಟಿ.ಕಾಳೆ, ಶ್ರೀ ಎನ್.ಎಸ್.ಶಿಲ್ಪಿ ಹಾಗೂ ಶ್ರೀ ಎ.ಆಯ್.ಕಮಾನಗಾರ ಮುಂತಾದವರು ನನಗೆ ಚಿತ್ರಕಲೆಯ ತಳಹದಿಹಾಕಿದ ಮಹಾನಕಲಾಕಾರರ ಮಾರ್ಗದರ್ಶನದಲ್ಲಿ ಕಲಾ ಅಭ್ಯಾಸ ಪಡೆದಿರುವುದು ನನ್ನ ಭಾಗ್ಯ ಎಂದು ಎ.ಎ.ಶಿರಹಟ್ಟಿಯವರು ಸಂತೋಷದಿಂದ ಹೇಳಿಕೊಳ್ಳುತ್ತಾರೆ.[೧೩೦]

ಶ್ರೀ ಎಂ.ಆರ್.ಬಾಳಿಕಾಯಿ, ಶ್ರೀ ಎನ್.ಎ.ಹರ್ಲಾಪೂರ ಅವರಂಥ ಒಳ್ಳೆಯ ಸ್ನೇಹಿತರ ಜೊತೆ ಕಲಾಅಭ್ಯಾಸ ಮಾಡುತ್ತಿದ್ದ ಶಿರಹಟ್ಟಿಯವರು ಯಾವುದೇ ಕಲಾಕೃತಿಯನ್ನು ನೋಡಿದರು ಅದರಂತೆ ತದ್ರೂಪವಾಗಿ ರಚಿಸುವ ಕೌಶಲ್ಯವನ್ನು ಹೊಂದಿದ್ದರು. ನಿಸರ್ಗಚಿತ್ರಣ, ವಸ್ತುಚಿತ್ರಣ, ಸ್ಟಿಲ್‌ಲೈಫ್, ಯಥಾದರ್ಶನ, ಸ್ಮರಣ ಚಿತ್ರಣ, ಚಿತ್ರಸಂಯೋಜನೆ ವಿಷಯಗಳಲ್ಲಿ ಉತ್ತಮ ಸಾಧನೆಗೈದ

---

೧೨೯. ಎ.ಎಲ್.ಬೆಳಗೆಲಿ.ಲೇ. ಕಲಾವಿದ ಎ.ಎ. ಶಿರಹಟ್ಟಿ ಅವರ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೧೬

೧೩೦. ಕಲಾವಿದ ಎ.ಎ. ಶಿರಹಟ್ಟಿ ಅವರ ಸಂದರ್ಶನ ದಿನಾಂಕ – ೨೨-೧೦-೨೦೦೮

ಶಿರಹಟ್ಟಿಯವರು ಎಲ್ಲ ಸ್ನೇಹಿತರ ಹಾಗೂ ಕಲಾಗುರುಗಳ ಮಾರ್ಗದರ್ಶನದಲ್ಲಿ ಉತ್ತಮ ಕಲಾವಿದರಾಗಿ ಕಲಾಶಿಕ್ಷಕರಾಗಲು ಅರ್ಹತೆಯನ್ನು ಪಡೆದುಕೊಂಡರು. ೧೯೬೩ರಲ್ಲಿ ಎ.ಎ. ಶಿರಹಟ್ಟಿ ಅವರಿಗೆ ಬೆಳಗಾವಿ ಜಿಲ್ಲೆಯ ಗೋಕಾಕ ಅಬ್ದುಲ್ ಕಲಾಮ್ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಕೆಲಸ ಮಾಡಲು ಕರೆ ಬಂದಿತು. ಆಗ ಶಿರಹಟ್ಟಿಯವರಿಗೆ ೧೯ವರ್ಷ ವಯಸ್ಸಾಗಿತ್ತು. ಹೊಸದಾಗಿ ಪ್ರಾರಂಭವಾದ ಪ್ರೌಢಶಾಲೆಯಲ್ಲಿ ಉತ್ತಮ ಚಿತ್ರಕಲಾ ಶಿಕ್ಷಕರಾಗಿ ಹಾಗೂ ಹಾಸ್ಟೇಲ್ ಸುಪ್ರಿಡೆಂಟ್ಆಗಿ ಒಂದು ವರ್ಷ ಸೇವೆ ಸಲ್ಲಿಸಿದರು. ಗೋಕಾಕನಲ್ಲಿ ತಮಗೆ ಸರಿಯಾದ ಹವಾಮಾನ ಹಿಡಿಸಲಿಲ್ಲ. ಹಾಗೂ ಶಿರಹಟ್ಟಿಯವರ ತಾಯಿ ಒಬ್ಬಂಟಿಯಾಗಿದ್ದರಿಂದ ವೃದ್ಧ ತಾಯಿಯ ಸೇವೆ ಸಲ್ಲಿಸಲು ಗೋಕಾಕ ಪ್ರೌಢಶಾಲೆಗೆ ರಾಜೀನಾಮೆ ಕೊಟ್ಟು ಪುನಃ ಗದುಗಿಗೆ ಬಂದರು.

ಶಿರಹಟ್ಟಿಯವರು ಶ್ರೀ ಫಕೀರಸ್ವಾಮಿಗಳವರ ನೂತನವಾಗಿ ಪ್ರಾರಂಭಗೊಳ್ಳುತ್ತಿದ್ದ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಸಂಶಿ ಹಾಗೂ ಹಾವೇರಿ ಜಿಲ್ಲೆಯ ನೆಗಳೂರು ಪ್ರೌಢಶಾಲೆಗಳಿಗೆ ಕಲಾಶಿಕ್ಷಕರ ಜಾಗೆಗೆ ಅರ್ಜಿ ಹಾಕಿಕೊಂಡರು. ಒಂದು ವಾರದಲ್ಲಿ ನೆಗಳೂರು ಪ್ರೌಢಶಾಲೆಗೆ ಹಾಜರಾಗಲು ಕರೆ ಬಂತು. ಎ.ಎ. ಶಿರಹಟ್ಟಿಯವರು ಕೂಡಲೇ ಅಲ್ಲಿಗೆ ಹೋಗಿ ತಮ್ಮ ಕೆಲಸ ಆರಂಭಿಸಿದರು. ನೆಗಳೂರು ಪ್ರೌಢಶಾಲೆಯಲ್ಲಿ ಉತ್ತಮ ಮಾರ್ಗದರ್ಶನ ಮಾಡಿದ ಶಿರಹಟ್ಟಿಯವರು ಅನೇಕ ವಿದ್ಯಾರ್ಥಿಗಳಿಗೆ ನೆಚ್ಚಿನ ಶಿಕ್ಷಕರಾದರು.[೧೩೧] ಶ್ರೀ ಎ.ಎ. ಶಿರಹಟ್ಟಿಯವರು ಸದಾ ಶ್ರಮಜೀವಿಗಳಾಗಿದ್ದರು. ಯಾವುದೇ ಕೆಲಸವನ್ನು ಚಾಚುತಪ್ಪದೆ ಮಾಡುತ್ತಿದ್ದರು. ಕಲಾಕೃತಿಗಳನ್ನು ರಚಿಸುವಾಗ ನಿಧಾನವಾಗಿ ಮತ್ತು ಸುಂದರವಾಗಿ ರಚಿಸುತ್ತಿದ್ದರು. ಬಣ್ಣಗಳ ಬಳಕೆಯನ್ನು ಸುಂದರವಾಗಿ ಬಳಸುತ್ತಿದ್ದರು. ಲಂಭವಾದ ರೇಖೆಗಳು ಇವರ ವಿಶಿಷ್ಟವಾಗಿತ್ತು. ಕಲಾಕೃತಿಗಳನ್ನು ರಚಿಸುವಾಗ ತಮ್ಮದೆಯಾದ ವಿಶಿಷ್ಟವಾದ ರೇಖೆಗಳ ಮೂಲಕ ತಾವೊಬ್ಬ ಉತ್ತಮ ಕಲಾವಿದ ಎಂಬುದನ್ನು ಸಾಬೀತು ಮಾಡಿದರು. ಶ್ರೀ ಶಿರಹಟ್ಟಿಯವರು ಇವರ ಕಲಾಕೃತಿಗಳನ್ನು ಗಮನಿಸಿದಾಗ ನೈಜತೆಯ ಕಡೆಗೆ ಹೆಚ್ಚಿನ ಆಸಕ್ತಿ ಇರುವುದು ಅವರ ಕಲಾಕೃತಿಗಳನ್ನು ನೋಡಿದಾಗ ಕಂಡುಬರುತ್ತದೆ. ನಿಸರ್ಗಚಿತ್ರ, ಸಂಯೋಜನಾ ಚಿತ್ರ, ಭಾವಚಿತ್ರ, ಸರಳಗೈ ಚಿತ್ರಗಳನ್ನು ರಚಿಸಿದ್ದು ಕಂಡುಬರುತ್ತದೆ. ಕಲಾಕೃತಿಗಳಲ್ಲಿ ಬಣ್ಣಗಳನ್ನು ಕಡಿಮಿ ಬಳಸಿ ಉತ್ತಮ ಕಲಾಕೃತಿಗಳನ್ನು ರಚಿಸುವ ಕಲಾಕೌಶಲ್ಯ ಶಿರಹಟ್ಟಿಯವರಲ್ಲಿ ಇತ್ತು.

ಶಿರಹಟ್ಟಿಯವರು ಚಿತ್ರಕಲೆಯನ್ನು ಅಭ್ಯಾಸ ಮಾಡುವಾಗ ಚಿತ್ರಕಲಾ ಶಿಕ್ಷಕರಾಗಿ ಕೆಲವು ದಿನಗಳ ವರೆಗೆ ಕೆಲಸ ಮಾಡಿ ಹೆಸರು ಪಡೆದುಕೊಂಡಿದ್ದರು. ಆದರೆ ಚಿತ್ರಕಲಾ ಶಿಕ್ಷಕರಾಗಲು ಆಗದೆ ೧ನೇ ಜುಲೈ ೧೯೬೫ರಿಂದ ಎ.ಎ. ಶಿರಹಟ್ಟಿಯವರು ಬೆಟಗೇರಿಯ ಉರ್ದು ಶಾಲೆಯಲ್ಲಿ ಸಾಮಾನ್ಯ ಶಿಕ್ಷಕರಾಗಿ ಸೇವೆಗೆ ಸೇರಿದರು. ಹೈಸ್ಕೂಲ್ ಬಿಟ್ಟು ಪ್ರಾಥಮಿಕ ಶಾಲೆಗೆ ಬಂದಿರುವುದು ಕೇಳಿ ಅಲ್ಲಿಯ ಕೆಲ ಶಿಕ್ಷಕರಿಗೆ ಸೋಜಿಗವೆನ್ನಿಸಿತು. ಆದರೆ ವೃದ್ಧ ತಾಯಿಯವರ ಸೇವೆ ಮಾಡುತ್ತ ಹುಟ್ಟೂರಿನ ತಾನು ಕಲಿತ ಶಾಲೆಯಲ್ಲಿಯೇ ಶಿಕ್ಷಕನಾಗಿ ಕೆಲಸ ಮಾಡುವುದು ತಮ್ಮ ಸೌಭಾಗ್ಯ ಎಂದುಕೊಂಡರೊ.[೧೩೨] ಇಪ್ಪತ್ತನೆಯ ವಯಸ್ಸಿನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಉತ್ತಮ

---

೧೩೧. ಎ.ಎ. ಶಿರಹಟ್ಟಿ ಅವರ ಸಂದರ್ಶನ ದಿನಾಂಕ -೨೨-೧೦-೨೦೦೮

೧೩೨. ಶ್ರೀ ಎ.ಎ. ಶಿರಹಟ್ಟಿ ಅವರ ಕಲಾಬದುಕು ಮತ್ತು ಕಲಾಕೃತಿಗಳು ವಿ.ಎಲ್. ಬೆಳಗಲಿ, ಲೇ, ಪು.ಸಂ. ೧೬

ಪಾಠ ಹೇಳುವುದರ ಮೂಲಕ ತಮ್ಮ ಶ್ರೇಷ್ಠತೆಯನ್ನು ಮೆರೆದುಕೊಂಡಿದ್ದರು. ಶಿರಹಟ್ಟಿಯವರು ಅವರ ತಾಯಿಯವರ ಮೇಲೆ ಹೆಚ್ಚು ಪ್ರೀತಿ, ರಿಹಾನಾ ಬೇಗಂ, ಹಾಗೂ ಬೀಬಿ ಆಯಿಷಾ ರವರನ್ನು ಮದುವೆಯಾಗಿ ಸುಂದರವಾದ ಜೀವನವನ್ನು ಪ್ರಾರಂಭಿಸಿದರು. ಶಿರಹಟ್ಟಿಯವರು ಪ್ರಾಥಮಿಕ ಶಾಲೆಯಲ್ಲಿ ಸಾಮಾನ್ಯಶಿಕ್ಷಕರಾದರೂ ಚಿತ್ರಕಲೆಯನ್ನು ಬಿಡದೆ ವಿದ್ಯಾರ್ಥಿಗಳಿಗೆ ಚಿತ್ರಕಲೆಯ ಕುರಿತು ಹೇಳುತ್ತಿದ್ದರು.

ಶಾಲೆಯಲ್ಲಿ ಮಕ್ಕಳಿಗೆ ಬಹು ಶ್ರದ್ಧೆಯಿಂದ ಎಲ್ಲ ವಿಷಯಗಳನ್ನು ಪಾಠಬೋಧನೆ ಮಾಡುತ್ತಿದ್ದರು. ಪ್ರತಿವರ್ಷ ವರ್ಗಗಳು ಬದಲಾದಂತೆ ತಮ್ಮ ವರ್ಗವನ್ನು ಶೃಂಗರಿಸಿ ಮಕ್ಕಳ ಪಾಠ ಬೋಧನೆಗೆ ಸಂಬಂಧಿಸಿದ ಚಿತ್ರಗಳನ್ನು ವರ್ಗದಕೋಣೆಯ ತುಂಬ ಬಿಡಿಸುತ್ತಿದ್ದರು. ಮಕ್ಕಳು ಮಾಡಿದ ಚಟುವಟಿಕೆ ಹಾಗೂ ಇನ್ನಾವುದಾದರೂ ಒಂದು ಚಾರ್ಟು ಮಾಡಿ ಗೋಡೆಗೆ ಅಂಟಿಸುತ್ತಿದ್ದರು. ಆದರೆ ಏನೇ ಮಾಡಿದರೂ ನಾನು ಕಲಾಶಿಕ್ಷಕನಾಗಲಿಲ್ಲ ಎಂಬ ಕೊರಗು ಸದಾ ಅವರಿಗೆ ಕಾಡುತ್ತಿತ್ತು. ಹಾಗೆಂದು ಅವರು ಮೌನವಾಗಿ ಕುಳಿತುಕೊಳ್ಳದೇ ತಮ್ಮ ಕಲೆ ಮತ್ತು ಶೈಕ್ಷಣಿಕ ಶಿಕ್ಷಣವನ್ನು ಮುಂದುವರಿಸಿ ೧೯೭೭ರಲ್ಲಿ ಬಾಹ್ಯ ವಿದ್ಯಾರ್ಥಿಯಾಗಿ ಬಿ.ಎ. ಹಾಗೂ ೧೯೭೮ರಲ್ಲಿ ಅವರು ಆರ್ಟ್ ಮಾಸ್ಟರ್ ಡಿಪ್ಲೋಮಾ ಮತ್ತು ಗೌವರ್ನಮೆಂಟ್ ಡಿಪ್ಲೋಮಾ ಚಿತ್ರಕಲಾ ಪದವಿಯನ್ನು ಪಾಸುಮಾಡಿಕೊಂಡರು. ಸದಾ ಕಲಾಚಟುವಟಿಕೆಯಲ್ಲಿರುವ ಶಿರಹಟ್ಟಿಯವರು ಉನ್ನತ ವ್ಯಾಸಂಗದಿಂದ ಹೆಚ್ಚಿನ ಲಾಭಪಡೆದರು. ಹಿರಿಯ ಅಧಿಕಾರಿಗಳು ಅವರ ಕಲೆಯನ್ನು ಮೆಚ್ಚಿದರು. ಗದಗ-ಬೆಟಗೇರಿ ನಗರದಲ್ಲಿ ನಡೆಯುವ ಯಾವುದೇ ಶೈಕ್ಷಣಿಕ ಕಾರ್ಯಕ್ರಮವಿದ್ದರೂ ಕಲಾಸೇವೆಗಾಗಿ ಶಿರಹಟ್ಟಿಯವರಿಗೆ ಆಹ್ವಾನ್ ಬರುತ್ತಿತ್ತು. ಅಷ್ಟೇ ಶ್ರದ್ಧೆಯಿಂದ ಶಿರಹಟ್ಟಿಯವರು ತಮಗೆ ಹೇಳಿದ ಕೆಲಸಗಳನ್ನು ಮಾಡಿಕೊಡುತ್ತಿದ್ದರು.[೧೩೩]

ಸದಾ ಕ್ರಿಯಾಶೀಲರಾದ ಶ್ರೀ ಎ.ಎ. ಶಿರಹಟ್ಟಿಯವರು ೧೯೮೧ರಲ್ಲಿ ಗದಗ ಜಿಲ್ಲಾ ಹವ್ಯಾಸಿ ಕಲಾಕಾರರ ಸಂಗದವರು ಶ್ರೀ ಎ.ಎ. ಶಿರಹಟ್ಟಿಯವರನ್ನು ಸಂಘದ ಉಪಾಧ್ಯಕ್ಷರನ್ನಾಗಿ ಮಾಡಿದರು. ಈ ಕಲಾ ಸಂಘದಿಂದ ಕಲಾವಿದರಿಗೆ ಅನುಕೂಲವಾಗುವಂತೆ ಅನೇಕ ಕಲಾಚಟುವಟಿಕೆಗಳನ್ನು ಮಾಡಿದರು. ಸದಾ ಕಲಿಯುವ ಹಂಬಲದಲ್ಲಿರುವ ಶಿರಹಟ್ಟಿಯವರು ಕೇವಲ ಮೆಟ್ರಿಕ್ಯೂಲೇಶನ್ ಮೇಲೆ ಶಿಕ್ಷಕರ ಆಯ್ಕೆ ಮಾಡಲಾಗುತ್ತಿತ್ತು. ಕಾರಣ ಸರಕಾರದವರು ೧೯೭೩ ರಿಂದ ೭೫ರ ವರೆಗೆ (ಎರಡು ವರ್ಷ) ಟಿ.ಸಿ.ಎಚ್. ಮಾಡಿಕೊಳ್ಳಲು ಎ.ಎ. ಶಿರಹಟ್ಟಿಯವರನ್ನು ಧಾರವಾಡ ಶಿಕ್ಷಕರ ಟ್ರೇನಿಂಗ್ ಕಾಲೇಜಕ್ಕೆ ಆಯ್ಕೆ ಮಾಡಿ ಕಳುಹಿಸಿದರು. ಈ ಎರಡು ವರ್ಷದ ಅವಧಿ ಎ.ಎ. ಶಿರಹಟ್ಟಿಯವರಿಗೆ ಟಿ.ಸಿ.ಎಚ್. ಜೊತೆಗೆ ಕಲಾಅಭ್ಯಾಸ ಮಾಡಲು ಅನುಕೂಲವಾಯಿತು.[೧೩೪] ಇದರಿಂದ ಶಿರಹಟ್ಟಿಯವರಿಗೆ ಹೆಚ್ಚಿನ ವಿದ್ಯಾರ್ಜನೆ ಮಾಡಲು ಅವಕಾಶ ಸಿಕಿತು. ಒಂದು ಸಲ ಕಾಲೇಜಿನಲ್ಲಿ ಸರ್ವಜ್ಞನ ಕವಿಯ ಜನ್ಮ ಶತಾಬ್ದಿ ಸಮಾರಂಭ ಆಚರಿಸುವ ಸಂದರ್ಭ ಬಂದಾಗ ಸರ್ವಜ್ಞ ಕವಿಯ ಚಿತ್ರರಚಿಸುವ ಸ್ಪರ್ಧೆ ಏರ್ಪಡಿಸಲಾಗಿತ್ತು ಎ.ಎ. ಶಿರಹಟ್ಟಿ ಅವರು ಸ್ಪರ್ಧೆಯಲ್ಲಿ ಭಾಗವಹಿಸಿ ಸರ್ವಜ್ಞ ಕವಿಯ ಚಿತ್ರವನ್ನು ಬಿಡಿಸಿಕೊಟ್ಟರು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಚ್.ಜಿ.ಜೋಶಿ ಅವರು ಸಹಜ ಸುಂದರವಾದ ಸರ್ವಜ್ಞನ ಚಿತ್ರವನ್ನು ನೊಡಿ ಬೆರಗಾದರು. ಪ್ರಿನ್ಸಿಪಾಲರು ಶ್ರೀ ಶಿರಹಟ್ಟಿಯವರಿಗೆ

---

೧೩೩. ಎ.ಎ. ಶಿರಹಟ್ಟಿ ಅವರ ಸಂದರ್ಶನ ದಿನಾಂಕ ೨೫.೨-೨೦೦೭

೧೩೪. ವಿ.ಎಲ್. ಬೆಳಗಲಿ ಲೇ, ಕಲಾವಿದ ಎ.ಎ. ಶಿರಹಟ್ಟಿ ಅವರ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೧೬

ಕಾಲೇಜಿಗೆ ಪ್ರಥಮ ಬಹುಮಾನ ಕೊಟ್ಟು ಗೌರವಿಸಿದರು. ಹಾಗೂ ಅವರು ಅಲ್ಲಿಯೇ ಪ್ರಕಟಗೊಳ್ಳುವ ಜೀವನ ಶಿಕ್ಷಣ ಪತ್ರಿಕೆಗೆ ಒಂದು ಮುಖಪುಟವನ್ನು ರಚಿಸಲು ಹೇಳಿದರು. ಎ.ಎ. ಶಿರಹಟ್ಟಿ ಅವರು ಅದಕ್ಕೆ ಒಪ್ಪಿಕೊಂಡು ಆಗಿನ ರಾಷ್ಟ್ರಪತಿಯಾದ ಶ್ರೀ ಫಕ್ರುದ್ದೀನ ಅಲಿ ಅಹ್ಮದ ಅವರ ಭಾವಚಿತ್ರವನ್ನು ರಚಿಸಿಕೊಟ್ಟರು. ಅದು ಆ ತಿಂಗಳ ಸಂಚಿಕೆಯ ಮುಖಪುಟವಾಗಿ ಪ್ರಕಟಗೊಂಡಿತು. ಇದನ್ನು ಗಮನಿಸಿದ ಕಾಲೇಜಿನ ಮೆಸ್ ಸುಪರಿಂಟೆಂಡೆಂಟ್ ಶ್ರೀ ಆರ್.ಬಿ.ನಾಯಕ್ ಅವರಿಗೆ ಎ.ಎ. ಶಿರಹಟ್ಟಿಯವರ ಪರಿಚಯ ಮಾಡಿಕೊಟ್ಟರು. ಆಗ ಖ್ಯಾತ ಸಾಹಿತಿ ಶ್ರೀ ಚೆನ್ನವೀರ ಕಣವಿ ಅವರು ವಿಸ್ತರಣಾ ವಿಭಾಗದ ಡೈರೆಕ್ಟರಾಗಿದ್ದರು. ಶ್ರೀ ನಾಯಕ ಅವರ ನಿರ್ದೇಶನದಂತೆ ಎ.ಎ. ಶಿರಹಟ್ಟಿಯವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ವಿಸ್ತರಣಾ ವಿಭಾಗದಲ್ಲಿ ಪ್ರಕಟಗೊಳ್ಳುತ್ತಿದ್ದ ಪುಸ್ತಕ ಹಾಗೂ ವ್ಯಾಖ್ಯಾನ ಮಾಲೆಗಳ ಮುಖ ಪುಟಗಳನ್ನು ರಚಿಸಲು ಆರಂಭಿಸಿದರು.[೧೩೫] ಶಿರಹಟ್ಟಿಯವರ ಕಲಾಕೃತಿಗಳ ರಚನೆಯಲ್ಲಿ ಸೂಕ್ಷತೆ ಮತ್ತು ಸರಳತೆಯಿಂದ ಉತ್ತಮ ಕಲಾಕೃತಿಗಳನ್ನು ರಚಿಸುತ್ತ ಉತ್ತಮ ಮುಖಪುಟಗಳನ್ನು ಮಾಡುತ್ತಿದ್ದರು.

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಚಂದ್ರಶೇಖರ ಕುಂಬಾರ ಅವರು ಆಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಶಿರಹಟ್ಟಿಯವರಿಗೆ ಪರಿಚಯವಾಗಿ ಕಂಬಾರವರ "ಕೇಳೋ ಭಗವಂತ" ಕವನ ಸಂಕಲನಕ್ಕೆ ಕಲಾವಿದ ಎ.ಎ.ಶಿರಹಟ್ಟಿ ಅವರಿಂದ ಮುಖಪುಟ ರಚಿಸಿಕೊಂಡರು.[೧೩೬] ಹೀಗೆ ಶಿರಹಟ್ಟಿಯವರು ಟ್ರೇನಿಂಗ್ ಕಾಲೇಜಿನಲ್ಲಿ ಅನೇಕ ಗಣ್ಯವ್ಯಕ್ತಿಗಳಿಗೆ ಪರಿಚಯವಾಗಿ ಉತ್ತಮ ಕಲಾವಿದರಾಗಿ ಗುರುತಿಸಿಕೊಂಡರು. ಟ್ರೇನಿಂಗ್ ಕಾಲೇಜ ಹತ್ತಿರದಲ್ಲಿಯೇ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯ ಇತ್ತು. ಇಲ್ಲಿ ಶ್ರೀ ಎ.ಎ. ಶಿರಹಟ್ಟಿಯವರ ಆತ್ಮಿಯ ಸ್ನೇಹಿತರಾದ ಕಲಾವಿದ ಎಂ.ಆರ್.ಬಾಳಿಕಾಯಿಯವರು ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದರು. ಬಿಡುವಿನ ವೇಳೆಯಲ್ಲಿ ಶಿರಹಟ್ಟಿಯವರು ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದರು. ಬಿಡುವಿನ ವೇಳೆಯಲ್ಲಿ ಶಿರಹಟ್ಟಿಯವರು ಸರಕಾರಿ ವಿದ್ಯಾಲಯಕ್ಕೆ ಭೇಟಿ ನೀಡಿ ಬಾಳಿಕಾಯಿಯವರ ಜೊತೆ ಸೇರಿ ಕಲೆಯ ಕುರಿತು ಚಿಂತನೆ ಮಾಡುತ್ತಿದ್ದರು. ಅನೇಕ ವಿಷಯಗಳ ಕುರಿತು ವಿಮರ್ಶಾತ್ಮಕ ವಿಷಯಗಳನ್ನು ಚರ್ಚಿಸುತ್ತಿದ್ದರು. ಇದರಿಂದ ನನಗೆ ಬಹಳ ಉಪಯುಕ್ತವಾಗುತ್ತಿತ್ತು ಎಂದು ಶಿರಹಟ್ಟಿಯವರು ಸಂತೋಷದಿಂದ ತಮ್ಮ ಅನುಭವದ ಮಾತಿನಿಂದ ಹೇಳುತ್ತಾರೆ.[೧೩೭] ಹೀಗೆ ಶಿರಹಟ್ಟಿಯವರು ತಮ್ಮ ಟ್ರೇನಿಂಗ್ ಅವಧಿಯಲ್ಲಿ ಅನೇಕ ವಿಷಯಗಳನ್ನು ಅನೇಕ ಗಣ್ಯವ್ಯಕ್ತಿಗಳ ಪರಿಚಯವಾಗಿ ಶಿರಹಟ್ಟಿಯವರಿಗೆ ಸಾಕಷ್ಟು ಉಪಯೋಗವಾಯಿತು.

ಗದುಗಿನಲ್ಲಿ ವಿಜಯ ಕಲಾಮಂದಿರವು ಏಕೈಕ ಕಲಾಶಾಲೆಯಾಗಿತ್ತು. ಕಲಾವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂದು ಬೆಟಗೇರಿ ವಿಭಾಗದಲ್ಲಿ ಚಿತ್ರಕಲಾ ಶಾಲೆ ಪ್ರಾರಂಭಿಸಬೇಕೆಂದು ಸದಾಶಯದಿಂದ ಎ.ಎ. ಶಿರಹಟ್ಟಿಯವರು ಹಾಗೂ ಅವರ ಸ್ನೇಹಿತವೃಂದ ವಿಶೇಷವಾಗಿ ಶ್ರೀ ಜಿ.ಎನ್.ಜಾಡಗೌಡರ,

---

೧೩೫. ವಿ.ಎಲ್. ಬೆಳಗಲಿ (ಲೇ) ಎ.ಎ. ಶಿರಹಟ್ಟಿ ಅವರ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೨೨
೧೩೬. ವಿ.ಎಲ್.ಬೆಳಗಲಿ (ಲೇ) ಎ.ಎ. ಶಿರಹಟ್ಟಿ ಅವರ ಕಲಾಬದುಕು ಮತ್ತು ಕಲಾಕೃತಿಗಳು ಪು.ಸಂ. ೨೨
೧೩೭. ಎ.ಎ. ಶಿರಹಟ್ಟಿ ಅವರ ಸಂದರ್ಶನ ದಿನಾಂಕ ೨೯-೯-೨೦೦೯

ಶ್ರೀ ಎನ್.ಎ.ಹರ್ಲಾಪೂರ, ಶ್ರೀ ಅಣ್ಣೀಗೇರಿ, ಶ್ರೀ ಎಂ.ಆರ್. ಬಾಗವಾನ ಇವರೆಲ್ಲರೂ ಸೇರಿ ಬೆಟಗೇರಿ ಜನರಿಗೆ ಉಪಯೋಗವಾಗಲಿ ಎಂದು ಜಗದ್ಗುರು ನೀಲಕಂಠೇಶ್ವರ ಸ್ವಾಮಿಗಳವರ ಸಾನಿಧ್ಯದಲ್ಲಿ ಜೆ.ಎನ್.ಕಲಾಶಾಲೆ ಬೆಟಗೇರಿ ಎಂಬ ನಾಮಕರಣ ಮಾಡಿ ಕಲಾಶಾಲೆಯನ್ನು ಪ್ರಾರಂಭಿಸಿದರು. ಇಲ್ಲಿ ಎ.ಎ. ಶಿರಹಟ್ಟಿಯವರು ಒಂದು ವರ್ಷ ಗೌರವ ಸೇವೆ ಸಲ್ಲಿಸಿದ್ದಾರೆ. ಮಕ್ಕಳಿಗೆ ಸುಲಭವಾಗಿ ಬಣ್ಣಗಳನ್ನು ತಯಾರಿಸುವ ವಿಧಾನವನ್ನು ಹೇಳುತ್ತಾ ಸರಳವಾಗಿ ಉತ್ತಮ ಬೋಧನೆಯನ್ನು ಮಾಡುತ್ತಿದ್ದರು. ಶಿರಹಟ್ಟಿಯವರ ಮಾರ್ಗದರ್ಶನದಲ್ಲಿ ವಿದ್ಯಾರ್ಜನೆ ಮಾಡಿದ ಅನೇಕ ವಿದ್ಯಾರ್ಥಿಗಳು ಇಂದಿಗು ಅವರನ್ನು ನೆನೆಯುತ್ತಾರೆ. ಹೀಗೆ ಶಿರಹಟ್ಟಿಯವರು ಉತ್ತಮ ಶಿಕ್ಷಕರು, ಉತ್ತಮ ಕಲಾವಿದರು, ಉತ್ತಮ ಬರಹಗಾರರಾಗಿ ಅನೇಕ ಗ್ರಂಥಗಳಿಗೆ ಮುಖಪುಟ ಮಾಡುವುದರ ಮೂಲಕ ತಮ್ಮ ಕಲಾ ಪ್ರತಿಭೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಉರ್ದು ಅಕ್ಷರಗಳನ್ನು ಶ್ರೀ ಶಿರಹಟ್ಟಿಯವರು ಟಾಕ್‌ಪೆನ್‌ನಿಂದ ಪ್ರಿಂಟ್‌ಆಗುವ ಹಾಗೆ ಬರೆಯುವ ಜಾಣ್ಮೆ ಹೊಂದಿದ್ದರು. ಇವರ ಬರವಣಿಗೆಯನ್ನು ನೋಡಿದ ಸುಮದರವಾಗಿದ್ದು ಪ್ರಿಂಟಿಂಗ್ ಮೀರಿಸುವ ರೀತಿಯಲ್ಲಿ ಬರವಣಿಗೆಯನ್ನು ಬರೆಯುತ್ತಿದ್ದರು ಸೂಕ್ಷತೆ, ಸರಳತೆಗೆ ಮತ್ತು ಸ್ವಚ್ಚತೆಗೆ ಹೆಚ್ಚಿನ ಮಹತ್ವ ನೀಡುತ್ತಿದ್ದ ಶಿರಹಟ್ಟಿಯವರು ಉತ್ತಮ ಕಲಾಕೃತಿಗಳನ್ನು ರಚಿಸುತ್ತ ಅನೇಕ ಪುಸ್ತಕಗಳಿಗೆ ಮುಖಪುಟ ಮಾಡುವುದರ ಮೂಲಕ ತಮ್ಮದೆಆದ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

ಶ್ರೀ ಎ.ಎ. ಶಿರಹಟ್ಟಿಯವರ ಕಲಾಕೃತಿಗಳು ವಿಭಿನ್ನವಾಗಿವೆ ನೈಜತೆ ಮತ್ತು ಸಾಂಪ್ರದಾಯಿಕ ಶೈಲಿಯಲ್ಲಿ ರಚನೆವಾಗಿವೆ ಸೂಕ್ಷರೇಖೆಗಳು ಬಣ್ಣಗಳನ್ನು ಬಳಸಿ ಉತ್ತಮ ಕಲಾಕೃತಿಯನ್ನು ರಚಿಸುವ ಒಬ್ಬ ಉತ್ತಮ ಕಲಾವಿದರಾಗಿದ್ದಾರೆ. ಅವರ ಕಲಾಕೃತಿಗಳ ಕುರಿತು ಈ ಕಳಗಿನಂತೆ ಚರ್ಚಿಸಲಾಗಿದೆ ರೇಖಾಚಿತ್ರಗಳು.

ಚಿತ್ರ : ೧. ಈ ಕಲಾಕೃತಿಯು ಪೇನ್ ಮತ್ತು ಶಾಹಿಯಿಂದ ರಚಿಸಿದ್ದು ಇದರಲ್ಲಿ ಕಲಾವಿದ ಶಿರಹಟ್ಟಿಯವರು ಬಹಳ ಸೂಕ್ಷವಾಗಿ ರಚಿಸಿದ್ದಾರೆ. ನಂದಿಯ ಚಿತ್ರವು ಪ್ರಮಾಣಬದ್ಧವಾಗಿದೆ. ಕೊರಳಲ್ಲಿ ಇರುವ ಆಭರಣಗಳು ಸೂಕ್ಷ್ಮವಾಗಿ ನೈಜವಾಗಿ ರಚಿಸಿದ್ದಾರೆ. ನಂದಿಯ ಕಣ್ಣು, ಬಾಯಿ, ಕಿವಿ, ಸ್ಪಷ್ಟವಾಗಿ ರಚಿಸಿದ್ದಾರೆ. ಕೊರಳಲ್ಲಿ ಗೆಜ್ಜೆಯ ಸರ, ದೊಡ್ಡದಾದ ಗೆಜ್ಜೆ ಸರಪಳಿ, ಗಂಟೆಗಳನ್ನು ಬಹಳಷ್ಟು ಸುಂದರವಾಗಿ ರಚಿಸಿದ್ದಾರೆ. ಹಿನ್ನೆಲೆಯಾಗಿ ಗಿಡಗಳು ರಚಿಸಿ ದೂರ ಸಮಿಪವನ್ನು ತೊರಿಸಿದ್ದಾರೆ. ಕಲಾಕೃತಿಯಲ್ಲಿ ಹೆಚ್ಚಿನ ನೇರಳು ಬೆಳಕಿನಿಂದ ಕೂಡಿದು ಉತ್ತಮ ರೀತಿಯಲ್ಲಿ ರಚಿಸಿದ್ದಾರೆ.

ಚಿತ್ರ : ೨. ಈ ಕಲಾಕೃತಿಯ ಜಲವರ್ಣದಿಂದ ರಚಿತಗೊಂಡಿದ್ದು ತ್ರಿಮುಖ ಉಳ್ಳ ಬ್ರಹ್ಮನ ಚಿತ್ರ ಇದಾಗಿದೆ. ಕಲಾಕೃತಿಯನ್ನು ಉತ್ತಮ ವಿನ್ಯಾಸವನ್ನು ಕಿರಿಟದಲ್ಲಿ ರಚಿನೆ ಮಾಡಿದ್ದಾರೆ. ಕಣ್ಣು ಮೂಗು, ಬಾಯಿಗಳನ್ನು ನಯವಾಗಿ ರಚಿಸಿದ್ದಾರೆ. ಕೊರಳ ಆಭರಣ, ಕಿವಿ, ಆಭರಣಗಳನ್ನು ಸೂಕ್ಷ್ಮವಾಗಿ ರಚಿಸಿದ್ದಾರೆ. ಮೂರು ಮೂಖ ಉಳ್ಳ ಬ್ರಹ್ಮನ ಈ ಕಲಾಕೃತಿಯು ಶಿಲ್ಪದ ಕಲಾಕೃತಿಯಂತೆ ನೈಜ ಶೈಲಿಯಲ್ಲಿ ರಚನೆಮಾಡಿದ್ದಾರೆ. ನೊಡಿದರೆ ಶಿಲ್ಪದ ಕಲಾಕೃತಿಯಂತೆ ಭಾಸವಾಗುತ್ತದೆ. ಅಷ್ಟು ನೈಜವಾಗಿ ರಚಿಸಿದ್ದಾರೆ. ಶಿರಹಟ್ಟಿಯವರ ಸೂಕ್ಷ್ಮವಾದ ಕಲಾಕೃತಿಗಳು ಉತ್ತಮ ಮೈ ಉಳಿಕೆಯನ್ನು ಹೊಂದಿದೆ.

ಚಿತ್ರ : ೩. ಈ ಕಲಾಕೃತಿಯು ಪೇನ್ಸು ಮತ್ತು ಶಾಯಿಯಿಂದ ರಚಿಸಿದ ಕಲಾಕೃತಿಯಾದೆ ನವಿಲುಗಳು ಗೇರೆ ಬಿಚ್ಚಿ ನಿಂತಿರುವ ಒಂದು ನವಿಲಾದರೆ ಯಾರನ್ನು ನೋಡುತ್ತಿರುವ ಇನ್ನೊಂದು ನವಿಲ ವಿದೆ. ಮತ್ತೊಂದು ನವಿಲು ಆಹಾರಕ್ಕೆ ನೋಡುತ್ತಿದೆ. ನವಿಲಿ ಗೆರೆಗಳು, ಸೂಕ್ಷ್ಮವಾಗಿ ಆಕರ್ಷಕವಾಗಿ ಚಿತ್ರಿಸಿದ್ದಾರೆ. ಹಿನ್ನೆಲೆಯಾಗಿ ದೂರದಲ್ಲಿರುವ ಮನೆಗಳನ್ನು ಚಿತ್ರದಲ್ಲಿ ತೊರಿಸಿ ನವಿಲಿನ ಚಿತ್ರಗಳು ದೊಡ್ಡದಾಗಿ ರಚಿಸಿದ್ದಾರೆ ಮೊಡಗಳು ನೈಜವಾಗಿ ಕಾಣುವಂತೆ ಸುಂದರವಾಗಿ ರಚಿಸಿದ್ದಾರೆ. ಕಪ್ಪು ಬಿಳಿ, ವರ್ಣದಿಂದ ರಚಿಸಿದ ಈ ಕಲಾಕೃತಿ ನೊಡಲಿಕ್ಕೆ ಆನಂದವನ್ನು ನೀಡುತ್ತದೆ.

ಸಂಯೋಜನೆ ಚಿತ್ರಗಳು :

ಚಿತ್ರ : ೧. ಈ ಕಲಾಕೃತಿಯು ಧಾರ್ಮಿಕತೆಯನ್ನು ಬಿಂಬಿಸುವ ಚಿತ್ರವಾಗಿದೆ ಆಕಾಶದಲ್ಲಿ ದಬಡ್ಡದಾದ ಜ್ಯೋತಿಯನ್ನು ಬಹಳ ಸುಂದರವಾಗಿ ಪೊಸ್ಟರ ಮಾಧ್ಯಮದಿಂದ ರಚಿಸಿದ್ದಾರೆ. ಕೈಯಿಂದ ಹಿಡಿದಿರುವ ಈ ಜ್ಯೋತಿಯ ಸುಂದರವಾದ ನಕ್ಷೆಯಿಂದ ರಚಿಸಿದ್ದಾರೆ. ಆ ಜ್ಯೋತಿಯನ್ನು ಒಬ್ಬ ವ್ಯಕ್ತಿ ಹೆಗಲಮೇಲಿನ ವಸ್ತ್ರ ಕೇಸರಿ ವರ್ಣದಾಗಿದ್ದು ಗಾಳಿಗೆ ಹಾರಾಡುತ್ತಿದೆ ಕಲಾವಿದ ಈ ಕಲಾಕೃತಿಯನ್ನು ಕಪ್ಪುವರ್ಣವನ್ನು ಹೆಚ್ಚಾಗಿ ಬಳಸಿ ಪ್ರಕಾಶವಾಗಿ ಜ್ಯೋತಿ ಕಾಣಲು ಬಳಸಿದ್ದು ಕಂಡು ಬರುತ್ತದೆ. ವರ್ಣಗಳ ಸಮತೋಲತೆಯನ್ನು ಈ ಕಲಾಕೃತಿಯಲ್ಲಿ ಕಂಡು ಬರುತ್ತದೆ.

ಚಿತ್ರ : ೨. ಈ ಕಲಾಕೃತಿಯನ್ನು ಪೊಸ್ಟರ ವರ್ಣದಿಂದ ರಚನೆ ಮಾಡಿದ್ದಾರೆ. ತಾಯಿ ಮತ್ತು ಮಗು ಎಂಬ ವಿಷಯವಿರುವ ಈ ಕಲಾಕೃತಿಯನ್ನು ಕಲಾವಿದ ನೇರಳು ಬೆಳಕನ್ನು ಉತ್ತಮವಾಗಿ ಬಿಂಬಿಸಿದ್ದಾರೆ ರಾತ್ರಿಯ ಸನ್ನಿವೇಶ ವಿರುವ ಈ ಕಲಾಕೃತಿಯು ಕತ್ತಲಲ್ಲಿ ದೀಪ ಹಚ್ಚಿದ್ದು ಹಳದಿ ವರ್ಣದಿಂದ ಬೆಳಕಿನ ಛಾಯೆಯನ್ನು ಮಾಡಿದ್ದಾರೆ ತಾಯಿ ತಮ್ಮ ಮಗುವನ್ನು ಎತ್ತಿಕೊಂಡು ಎದೆ ಹಾಲು ಕುಡಿಸುತ್ತಿದ್ದಾಳೆ ಹಾಲು ಕುಡಿಸಬೇಕಾದರೆ ಮಗುವನ್ನು ಎತ್ತಿಕೊಂಡು ಸೀರೆ ಹೊಚ್ಚಿ ಹಾಲು ಕುಡಿಸುತ್ತಿದ್ದಾಳೆ. ಮಹಿಳೆಯ ಸೀರೆಯ ನಿರಿಗೆಗಳು ಉತ್ತಮರೀತಿಯಲ್ಲಿ ರಚನೆ ಮಾಡಿದ್ದಾರೆ.

ಚಿತ್ರ : ೩. ಈ ಕಲಾಕೃತಿಯು ಮಿನಗಾರರ ಚಿತ್ರವಾಗಿದೆ. ಮಿನುಗಾರರು ಬಲೆಯಲ್ಲಿ ಮಿನು ಹಿಡಿದುಕೊಂಡು ಬುಟ್ಟಿಯಲ್ಲಿ ಮಿನು ತುಂಬಿಸುತ್ತಿದ್ದ ಮಹಿಳೆಯವರ ಚಿತ್ರವನ್ನು ಕಲಾವಿದ ಸುಂದರವಾಗಿ ರಚಿಸಿದ್ದಾರೆ. ಬಿಳಿ ವಸ್ತ್ರ ತಲೆಗೆ ಸುತ್ತಿರುವ ಯಜಮಾನ ಚಿತ್ರವನ್ನು, ಯಜಮಾನ ಬುಟ್ಟಿಯಲ್ಲಿ ಮಿನು ತುಂಬುತ್ತಿದ್ದಾನೆ ದೂರದಲ್ಲಿ ಸಮುದ್ರದ ಹಡಗುವಿದೆ. ಅದನ್ನು ಕಲಾವಿದ ಉತ್ತಮ ರೀತಿಯಲ್ಲಿ ರಚಿಸಿದ್ದಾರೆ. ಸಮುದ್ರದ ಸೂತ್ತಲು ಗಿಡಗಳು ಇರುವಂತೆ ರಚಿಸಿದ್ದಾರೆ. ಪೇಪರತಕ್ಕಂತೆ ಉತ್ತಮ ಸಂಯೋಜಯನೆಯನ್ನು ಮಾಡಿದ್ದಾರೆ.

ಚಿತ್ರ : ೪. ಈ ಕಲಾಕೃತಿಯು ಪೊಸ್ಟರವರ್ಣದಿಂದ ಡೆಕಾರೆಟ್ ಫಾರ್ಮದಲ್ಲಿ ನೀರುತ್ತರುತ್ತಿರುವ ಮಹಿಳೆಯರ ಚಿತ್ರವನ್ನು ಕಲಾವಿದ ರಚಿಸಿದ್ದು ಕಂಡುಬರುತ್ತದೆ. ಚಿತ್ರದಲ್ಲಿ ಇಬ್ಬರು ಮಹಿಳೆಯರು ಇದ್ದು ಒಟ್ಟಾರೆ ಹಳದಿ ಸೀರೆ ಉಟ್ಟಿದ್ದಾಳೆ ಇನ್ನೊಬಾಕೆ ಬಿಳಿಸೀರೆಯನ್ನು ಉಟ್ಟಿದ್ದಾಳೆ ಕೆಂಪು ವರ್ಣದ ಕುಪ್ಪಸ ತೊಟ್ಟಿದ್ದಾಳೆ. ಚಿತ್ರದಲ್ಲಿ ಮಣ್ಣಿನ ಕೊಡ ಸುಂದರ ನಕ್ಷೆಗಳಿಂದ ರಚಿತಗೊಂಡಿದೆ. ನೀಲಿವರ್ಣದ ಆಕಾಶ ಕೆಂಪುವರ್ಣದ ನೇಲವನ್ನು ತೋರಿಸಿದ್ದಾರೆ. ಬದಿಯಲ್ಲಿ ಭಾವಿಯ ಚಿತ್ರ ಗಿಡದ ಚಿತ್ರವನ್ನು ಡೆಕಾರೆಟಿವ್ ಫಾರ್ಮನಲ್ಲಿ ರಚಿಸಿದ್ದಾರೆ.


ಶಿರಹಟ್ಟಿಯವರ ರೇಖಾ ಕಲಾಕೃತಿಗಳು



ಎ.ಎ.ಶಿರಹಟ್ಟಿ



ಚಿತ್ರ ೧



ಚಿತ್ರ: ೨



ಚಿತ್ರ: ೩.

ಶ್ರೀ ಎ.ಎ.ಶಿರಹಟ್ಟಿ ಯವರ ಸಂಯೋಜನೆ ಕಲಾಕೃತಿಗಳು



ಚಿತ್ರ: ೧.



ಚಿತ್ರ: ೨.



ಚಿತ್ರ: ೩



ಚಿತ್ರ: ೪.

ಶ್ರೀ ವಸಂತ ಅಕ್ಕಿ :

ಕಲಾವಿದರ ಮನೆತನದಲ್ಲಿ ಕಲಾವಿದ ಉತ್ತಮ ಆಡಳಿತಗಾರರು, ವಿಜಯ ಕಲಾಮಂದಿರ ಕಟ್ಟಿದ ಕಲಾತಪಸ್ವಿ ಶ್ರೀ ಟಿ.ಪಿ.ಅಕ್ಕಿಯವರ ಜೇಷ್ಠ ಸುಪುತ್ರರಾಗಿ ೧೯೪೦ ಜೂನ್ ೨೦ ರಂದು ವಸಂತ ಟಿ.ಅಕ್ಕಿಯವರು ಜನಿಸಿದರು. ಇವರ ದೊಡ್ಡಪ್ಪ ಶ್ರೀ ಶಿವಾನಂದ ಅಕ್ಕಿಯವರು ಉತ್ತಮ ಕಲಾವಿದ. ಚಿಕ್ಕಪ್ಪ ಶ್ರೀ ಈಶ್ವರಪ್ಪ ಅಕ್ಕಿ ಇವರು ಕಲಾವಿದರು. ತಂದೆಯವರು ಕಲಾವಿದರು. ಇಂಥಹ ಒಂದು ವಂಶಪಾರಂಪರಿಕವಾದ ಕಲಾವಿದರ ಮನೆತನದಲ್ಲಿ ಸುಂದರವಾದ ಕಲಾಪರಿಸರದಲ್ಲಿ ಹುಟ್ಟಿದ ವಸಂತ ಅಕ್ಕಿಯವರು ಚಿತ್ರಕಲಾವಿದರಾಗಿ ಬೆಳೆಯಬೇಕು ಎಂಬ ಆಸೆಯು ಪ್ರಾಥಮಿಕ ಹಂತದಲ್ಲಿಯೇ ಮೂಡಿತು.

ವಸಂತ ಅಕ್ಕಿಯವರು ಬೆಳೆದಂತೆ ಅವರಲ್ಲಿ ಸುಪ್ತವಾಗಿದ್ದ ಕಲಾಚೇತನ ಜಾಗೃತವಾಗುತ್ತ ಮನಸ್ಸು ಉಳಿದೆಲ್ಲ ವಿಚಾರಗಳಿಗಿಂತ ಮುಖ್ಯವಾದುದು.[೧೩೮] ಎನ್ನಬಹುದು. ಬಾಲ್ಯದಲ್ಲಿಯೇ ಚಿತ್ರಕಲೆಯ ನಂಟಿಗೆ ಅಂಟಿಕೊಂಡಿದ್ದ ವಸಂತರು ದೊಡ್ಡಪ್ಪನವರಾದ ಶ್ರೀ ಶಿವಾನಂದ ಅಕ್ಕಿಯವರಿಂದ ಪ್ರಭಾವಿತಾರದರು. ಭಾರತದ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರು ಅವರ ಹುಟ್ಟುಹಬ್ಬದ ಅಂಗವಾಗಿ ಕಲಾ ಮತ್ತು ಕೈಗಾರಿಕಾ ಪ್ರದರ್ಶನದಲ್ಲಿ ಬಾಲ-ಬಾಲಕಿಯರ ವಿಭಾಗದಲ್ಲಿ ವಸಂತ ಅಕ್ಕಿಯವರ ಕಲಾಕೃತಿಗೆ ಬಹುಮಾನ ದೊರೆಯಿತು. ಇದರಿಂದ ಚಿತ್ರಕಲೆಯಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ಪಡೆದುಕೊಂಡರು. ಮುಂದೆ ಹದಿನೈದನೆಯ ವಯಸ್ಸಿನವರಾಗಿದ್ದಾಗ ಚಿತ್ರಕಲಾ ಸ್ಪರ್ಧೆಯಲ್ಲಿ ದೆಹಲಿಯಿಂದ ಬಹುಮಾನ ಪಡೆದರು. ಬಾಲ್ಯದಲ್ಲಿಯೇ ಚಿತ್ರಕಲೆಯಲ್ಲಿ ಸಾಧನೆ ಮಾಡುತ್ತಿದ್ದ ವಸಂತ ಅಕ್ಕಿಯವರು ಪ್ರಾಥಮಿಕ ಪ್ರೌಢಶಿಕ್ಷಣವನ್ನು ಗದುಗಿನ ಮುನ್ಸಿಫಲ್ ಹೈಸ್ಕೂಲ್‌ನಲ್ಲಿ ಪಡೆದುಕೊಂಡರು.[೧೩೯]

ಚಿತ್ರಕಲೆಯಲ್ಲಿ ಉನ್ನತ ವ್ಯಾಸಂಗಕ್ಕಾಗಿ ಶ್ರೀ ವಸಂತ ಅಕ್ಕಿಯವರು ವಿಜಯ ಕಲಾಮಂದಿರದಲ್ಲಿ ಪ್ರವೇಶ ಪಡೆದರು. ಖ್ಯಾತ ಕಲಾವಿದರಾದ ಎಂ.ಎ.ಚೆಟ್ಟಿ, ಸಿ.ಎನ್.ಪಾಟೀಲ, ಎಸ್.ಎಂ.ಶಿರಹಟ್ಟಿ, ಎನ್.ಎಸ್.ಶಿಲ್ಪಿ, ಕಮಾನಗಾರ ಮುಂತಾದ ಕಲಾವಿದರ ಮಾರ್ಗದರ್ಶನದಲ್ಲಿ ಕಲಾ ಅಭ್ಯಾಸವನ್ನು ಉತ್ತಮ ರೀತಿಯಲ್ಲಿ ಪಡೆದುಕೊಂಡರು. ನಿಸರ್ಗಚಿತ್ರ, ಭಾವಚಿತ್ರ, ಸಂಯೋಜನಾ ಚಿತ್ರಗಳು, ಮಾಡಲಿಂಗ್ ಕಲಾಕೃತಿಗಲು ಸುಂದರವಾಗಿ ರಚಿಸುತ್ತಿದ್ದರು. ವಿದ್ಯಾರ್ಥಿ ಜೀವನದಲ್ಲಿ ಹೂದೋಟ, ಛಾಯಾಚಿತ್ರ, ಸಂಗೀತ, ಹವ್ಯಾಸವಾಗಿ ಬೆಳೆಸಿಕೊಂಡಿದ್ದರು. ವಸಂತ ಅಕ್ಕಿಯವರು ರಚಿಸಿದ ಸುಂದರವಾದ ಕಲಾಕೃತಿಗಳು ಮಾತಾಜಿ, ನೆಹರು, ರವೀಂದ್ರನಾಥ ಠಾಗೋರ, ಅರವಿಂದ ಮಹರ್ಷಿಗಳು ಅವರ ಭಾವಚಿತ್ರದ ಜೊತೆಗೆ ಮಾಡ್ಲಿಂಗ್ ವಿಷಯದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಸದಾ ಸ್ನೇಹಜೀವಿಯಾದ ಇವರು ಖ್ಯಾತ ಸಂಶೋಧಕರಾದ ಶ್ರೀ ಬಿ.ಕೆ.ಹಿರೇಮಠ, ಬಿ.ಜಿ. ವಾರಿ, ಸಿ.ವೈ.ಖಾಮೋಜಿ, ಮುಂತಾದ ಖ್ಯಾತ ಕಲಾವಿದರು ಸ್ನೇಹಿತರಾಗಿದ್ದರು. ಶ್ರೀ ವಸಂತ ಅಕ್ಕಿಯವರು ವರ್ಗಗಳಲ್ಲಿ ಉತ್ತಮ ಕಲಾಕೃತಿ ರಚಿಸುವುದರ ಮೂಲಕ ಡಿಪ್ಲೋಮಾ ಮಾಡ್ಲಿಂಗ್ ಪದವಿಯಲ್ಲಿ ರಾಜ್ಯಕ್ಕೆ ಎರಡನೆಯ ರ್‍ಯಾಂಕ್ ಪಡೆದುಕೊಂಡರು. ಇಂಥ ಪ್ರತಿಭಾವಂತ ವಿದ್ಯಾರ್ಥಿಯಾದ ವಸಂತ ಅಕ್ಕಿಯವರು ಒಳ್ಳೆಯ

೧೩೮. ಡಾ. ಬಿ. ಕೆ. ಕುಲಕರ್ಣಿ

೧೩೯. ಕೆ.ವಿ. ಕುಂದಗೋಳ ಅವರ ಸಂದರ್ಶನ ದಿನಾಂಕ ೨೮-೩-೨೦೦೯

ಕಲಾವಿದರನಾಗಬೇಕೆಂಬ ಆಸೆಯನ್ನು ಇಟ್ಟುಕೊಂಡಿದ್ದರು. ಆದರೆ ತಂದೆಯವರು ಕಟ್ಟಿದ ವಿಜಯ ಕಲಾಮಂದಿರಕ್ಕೆ ಸುಸೂತ್ರವಾಗಿ ನಡೆಸಿಕೊಂಡು ಹೋಗುವಂತ ಉತ್ತಮ ಆಡಳಿತಗಾರರನ್ನು ಹುಡುಕುತ್ತಿದ್ದರು. ಇದಕ್ಕೆ ಸರಿಯಾದ ವ್ಯಕ್ತಿಯೆಂದರೆ ವಸಂತ ಎಂದುಕೊಂಡರು.

ವಸಂತ ಅಕ್ಕಿಯವರು ಗದುಗಿನ ವಿಜಯ ಕಲಾಮಂದಿರದ ಪ್ರಾಚಾರ್ಯರಾಗಿ ನೇಮಕಗೊಂಡು ಅನೇಕ ಉತ್ತಮವಾದ ಕಲಾಚಟುವಟಿಕೆಗಳನ್ನು ಮಾಡತೊಡಗಿದರು. ವಸಂತ ಅಕ್ಕಿಯವರು "ಶಿಸ್ತುಬದ್ಧ ಜೀವನ ಶೈಲಿಯನ್ನು ಅಳವಡಿಸಿಕೊಂಡು ಅಚ್ಚುಕಟ್ಟುತನದಿಂದ ಎಲ್ಲವನ್ನೂ ನಿಭಾಯಿಸುವಂತಹ ಗುಣವುಳ್ಳವರಾಗಿದ್ದಾರೆ." ದಕ್ಷ ಆಡಳಿತಗಾರರಾದ ಇವರು ಉತ್ತಮ ಬೋಧನೆಯನ್ನು ಮಾಡುತ್ತಿದ್ದರು. ಜಲವರ್ಣ, ಪೆನ್ಸಿಲ್, ಇಂಕ್, ಪೋಸ್ಟರ್, ಆಯಿಲ್ ಕಲರ, ಮುಂತಾದ ಮಾಧ್ಯಮಗಳಲ್ಲಿ ಉತ್ತಮವಾದ ಕಲಾಕೃತಿಗಳನ್ನು ರಚಿಸತೊಡಗಿದರು. ಅನೇಕ ಭಾವಚಿತ್ರಗಳನ್ನು ಸೃಜನಾತ್ಮಕ ಚಿತ್ರಗಳು, ಸಂಯೋಜನಾತ್ಮಕ ಚಿತ್ರಗಳನ್ನು ರಚಿಸಿದ್ದಾರೆ. ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಅನೇಕ ಮೂರ್ತಿಗಳನ್ನು ತಯಾರಿಸಿದ್ದಾರೆ. ಛತ್ರಪತಿ ಶಿವಾಜಿ ಮೂರ್ತಿ, ಬುದ್ಧ, ಮಹಿಳೆಯ ಶಿರಭಾವ ಶಿಲ್ಪ, ಮರದ ಮೂರ್ತಿಗಳನ್ನು ಸುರಂದರವಾಗಿ ರಚಿಸಿದ್ದಾರೆ.[೧೪೦] ನೆಹರು, ಗಾಂಧೀಜಿ, ಲಾಲಬಹದ್ದೂರ ಶಾಸ್ತ್ರೀಜಿ ಮುಂತಾದ ಅನೇಕ ಗಣ್ಯಮಾನ್ಯರ ಭಾವಚಿತ್ರಗಳನ್ನು ತೈಲವರ್ಣದಿಂದ ರಚಿಸಿದ್ದಾರೆ. ಕಲಾಮಂದಿರದಿಂದ ಎಲ್ಲ ಉಪನ್ಯಾಸಕರ ಜೊತೆಗೂಡಿ ಅನೇಕ ವಿದ್ಯಾರ್ಥಿಗಳಿಗೆ ಉತ್ತಮ ಪಾಠಬೋಧನೆ ಮಾಡಿ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ. ಅನೇಕ ವಿದ್ಯಾರ್ಥಿಗಳಿಗೆ ವಸಂತ ಅಕ್ಕಿಯವರು ಮಾರ್ಗದರ್ಶನ ಮಾಡಿದ್ದಾರೆ. ಈ ಕುರಿತು ಅಭಿಮಾನದಿಂದ ಹೇಳುತ್ತಾರೆ. ಯಾವುದೆ ತೊಂದರೆಗಳು ಬಂದರು ಅವುಗಳನ್ನು ಸರಳವಾಗಿ ಬಗೆಹರಿಸುತ್ತಿದ್ದರು ಎಂದು ಅವರ ವಿದ್ಯಾರ್ಥಿಗಳು ಸಂತೋಷದಿಂದ ಹೇಳಿಕೊಳ್ಳುತ್ತಾರೆ. ಇಂಥ ಒಬ್ಬ ಉತ್ತಮ ಕಲಾವಿದ ವಿಜಯ ಕಲಾಮಂದಿರವನ್ನು ಉತ್ತಮ ರೀತಿಯಿಂದ ನಡೆಸಿಕೊಂಡು ರಾಜ್ಯದಲ್ಲಿಯೇ ಒಂದು ಮಾದರಿ ಕಲಾಶಾಲೆಯನ್ನು ಮಾಡಲು ಶ್ರಮಿಸಿದ್ದಾರೆ. ಶ್ರೀ ವಸಂತ ಅಕ್ಕಿಯವರು ಸದಾ ಅಧ್ಯಯನಶೀಲ ವ್ಯಕ್ತಿಗಳಾಗಿದ್ದರು. ತಮ್ಮ ಕಲಾಬದುಕಿನ ಉದ್ದಕ್ಕೂ ನೂರಾರು ಕಲಾಕೃತಿಗಳನ್ನು ಮತ್ತು ಮಾಡಲಿಂಗ್ ಕಲಾಕೃತಿಗಳನ್ನು ರಚನೆ ಮಾಡಿ ತಮ್ಮದೇ ಆದ ರಚನಾಕ್ರಮ, ತಂತ್ರಗಾರಿಕೆಯನ್ನು ಹೊಂದಿದವರಾಗಿದ್ದಾರೆ.

ವಸಂತ ಅಕ್ಕಿಯವರು ರಚಿಸಿದ ಅನೇಕ ಕಲಾಕೃತಿಗಳು ರಾಜ್ಯ ಹೊರರಾಜ್ಯಗಳಲ್ಲಿ ಪ್ರದರ್ಶನಗೊಂಡಿವೆ. ಅನೇಕ ಚಿತ್ರಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರ ಅನೇಕ ಕಲಾಕೃತಿಗಳು ಗದಗ, ಧಾರವಾಡ, ಹುಬ್ಬಳ್ಳಿ, ಬೆಂಗಳೂರು, ಪಾಂಡಿಚೇರಿ ಮುಂತಾದ ಸ್ಥಳಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.[೧೪೧]

ವಸಂತ ಅಕ್ಕಿಯವರ ಕಲಾಕೃತಿಗಳನ್ನು ಮೂರು ಭಾಗವಾಗಿ ವಿಂಗಡಿಸಬಹುದು.

೧. ಭಾವಚಿತ್ರ ೨. ಸಂಯೋಜನ ಚಿತ್ರ ೩. ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಚಿತ್ರಗಳು.

---

೧೪೦. ಕೆ.ವಿ. ಕುಂದಗೋಳ ಅವರ ದಾಖಲಾತಿಗಳು

೧೪೧. ಕೆ.ವಿ. ಕುಂದಗೋಳ ಅವರ ಸಂದರ್ಶನ ದಿನಾಂಕ ೨೯-೩-೨೦೦೯

೧. **ಮಾತಾಜಿಯವರ ಭಾವಚಿತ್ರಗಳು :** ಈ ಕಲಾಕೃತಿಯು ೨೨X೩೦ ಇಂಚು ಹೊಂದಿದ್ದು, ಮಾತಾಜಿಯವರ ಮುಖಗಳಲ್ಲಿ ಭಾವನೆಗಳನ್ನು ಕಲಾವಿದ ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ಚಿತ್ರಿಸಿದ್ದಾರೆ. ಈ ಕಲಾಕೃತಿಯು ತೈಲವರ್ಣದ್ದಾಗಿದ್ದು ನೈಜತೆಯನ್ನು ಹೊಂದಿದೆ. ಉತ್ತಮವಾದ ರೇಖೆಗಳನ್ನು ಬಳಸಿ ಬಿಳಿ, ನೀಲಿ, ಹಳದಿ ಬ್ರಂಟ್‌ಸೆನಾ ಬಣ್ಣಗಳನ್ನು ಪ್ರಮುಖವಾಗಿ ಇಟ್ಟುಕೊಂಡು ನೆರಳು-ಬೆಳಕಿನ ಕಲ್ಪನೆಯನ್ನು ಬಹಳ ಸುಂದರವಾಗಿ ಮಾಡಿದ್ದಾರೆ. ವೇಷಭೂಷಣಗಳು ನೈಜತೆಯನ್ನು ಮೀರಿಸುವಂತಿದೆ. ನೋಡುಗರಿಗೆ ಕಲಾಕೃತಿಯ ಉತ್ತಮ ರೀತಿಯಲ್ಲಿದ್ದು ಸುಂದರವಾದ ಬಣ್ಣಗಳನ್ನು ಬಳಸಿಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಈ ಕಲಾಕೃತಿಯನ್ನು ನೋಡಿದ ಮಾತಾಜಿಯವರು ಉತ್ತಮ ಕಲಾಕೃತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿ ಆರ್ಶಿವದಿಸಿದ್ದಾರೆ.

೨. **ಮಹಾತ್ಮ ಗಾಂಧೀಜಿಯವರ ಭಾವಚಿತ್ರ :** ಕಲಾವಿದ ವಸಂತ ಅಕ್ಕಿಯವರು ಮಹಾತ್ಮಾ ಗಾಂಧೀಜಿಯವರ ಭಾವಚಿತ್ರವನ್ನು ೨೨X೩೦ ಇಂಚು ಅಳತೆಯಲ್ಲಿ ತೈಲವರ್ಣದಿಂದ ರಚಿಸಿದ್ದಾರೆ. ಕಲಾಕೃತಿಯು ನೈಜತೆಯನ್ನು ಮೀರಿಸುವಂತಿದೆ. ಬ್ರಂಟ್‌ಸೆನಾ, ಎಲೋಆಕರ್, ಬಿಳಿ, ನೀಲಿ, ಕಂದುಕೆಂಪು ಮುಂತಾದ ಬಣ್ಣಗಳಿಂದ ನೆರಳು-ಬೆಳಕನ್ನು ಉತ್ತಮ ರೀಥಿಯಲ್ಲಿ ಕಲಾವಿದ ತಮ್ಮ ಕಲಾಕೃತಿ ತಮ್ಮದೆ ಆದ ಬಣ್ಣಗಳ ಬಳಕೆ ಶೈಲಿಯನ್ನು ಉಪಯೋಗ ಮಾಡಿಕೊಂಡು ಉತ್ತಮವಾದ ನೈಜತೆಯನ್ನು ಗಾಂಧೀಜಯವರ ಭಾವನೆಗಳನ್ನು ಕಲಾಕೃತಿಯಲ್ಲಿ ಮೂಡಿಸಿದ್ದಾರೆ.

೩. **ಲಂಬಾಣಿ ಮಹಿಳೆಯ ಭಾವಚಿತ್ರ :** ಈ ಕಲಾಕೃತಿಯು ೧೮X೨೪ ಇಂಚು ಅಳತೆಯದಾಗಿದ್ದು ತೈಲವರ್ಣದಿಂದ ರಚಿಸಿದ್ದಾರೆ. ಲಂಬಾಣಿ ಮಹಿಳೆಯ ವೇಷಭೂಷಣಗಳು ಭಾವನೆಗಳನ್ನು ನೋಡಿದಾಗ ಲಂಬಾಣಿ ಮಹಿಳೆಯು ಸುಂದರವಾಗಿ ಪರಿಕಲ್ಪನೆಯನ್ನು ಕಲಾವಿದ ನೀಡಿದ್ದಾನೆ. ಲಂಬಾಣಿಯ ಮಹಿಳೆಯು ತಲೆ ಮೇಲೆ ಹಾಕಿರುವ ವಸ್ತ್ರವಿನ್ಯಾಸವು ಬಹಳ ಆಕರ್ಷಕವಾಗಿ ಮೂಡಿಬಂದಿದೆ. ಸುಂದರವಾಗಿ ಅಲಂಕೃಗೊಂಡಿರುವ ಲಂಬಾಣಿ ಮಹಿಳೆಯು ಭಾವಚಿತ್ರವು ನೋಡುಗರಿಗೆ ಬಹಳಷ್ಟು ಆಕರ್ಷಣೀಯವಾಗಿದೆ. ಈ ಕಲಾಕೃತಿಯಲ್ಲಿ ಹೆಚ್ಚಾಗಿ ಕೆಂಪು ಬಣ್ಣ ಲೇಪನವಾಗಿದೆ. ಎಲ್ಲೋಆಕರ್, ಬ್ರಂಟಸೆನಾ, ಬಿಳಿ, ನೀಲಿ ಕರಿ ಬಣ್ಣಗಳನ್ನು ಉಪಯೋಗಿಸಿಕೊಂಡು ಸುಮದರವಾಗಿ ರಚಿಸಿದ್ದಾರೆ. ಲಂಬಾಣಿ ಮಹಿಳೆಯ ಆಭರಣಗಳನ್ನು ಅಷ್ಟೇ ನಾಜೂಕಾಗಿ ರಚಿಸಿದ್ದಾರೆ. ಮೂಗಿನಲ್ಲಿ ಹಾಕಿಕೊಂಡ ಮೂಗುನತ್ತು ಬಹಳ ಸುಂದರವಾಗಿ ರಚಿಸಿದ್ದಾರೆ. ಒಟ್ಟಾರೆ ಈ ಕಲಾಕೃತಿಯನ್ನು ನೋಡಿದಾಗ ನೆರಳು-ಬೆಳಕಿನ ಪರಿಕಲ್ಪನೆ ಹಾಗೂ ಲಂಬಾಣಿ ಮಹಿಳೆಯು ಧರಿಸಿರುವ ಆಭರಣಗಳನ್ನು ಕಲಾವಿದ ಅತ್ಯಂತ ನಾಜೂಕತೆ ಮತ್ತು ಸುಂದರತೆಯನ್ನು ಒಳಗೊಂಡಿದೆ. ಸುಂದರವಾದ ವಸ್ತ್ರವಿನ್ಯಾಸ, ಆಭರಣಗಳಿಂದ ಅಲಂಕೃತಗೊಂಡ ಲಂಬಾಣಿ ಮಹಿಳೆಯ ಭಾವಚಿತ್ರವು ತುಂಬಾ ನೈಜತೆಯಿಂದ ಮನಮೋಹಕವಾಗಿ ರಚಿತಗೊಂಡಿದೆ.

೪. **ಪಂಡಿತ ಜವಾಹರಲಾಲ ನೆಹರು :** ಈ ಕಲಾಕೃತಿಯು ೨೨X೩೦ ಇಂಚು ಅಳತೆಯದ್ದಾಗಿದ್ದು, ತೈಲವರ್ಣದಿಂದ ರಚಿಸಿದ್ದಾರೆ. ಪಂಡಿತ ಜವಾಹರಲಾಲ ನೆಹರುವರು ಧರಿಸಿರುವ ಉಡುಪುಗಳನ್ನು ಮತ್ತು ಗಾಂಧೀ ಟೊಪ್ಪಿಗೆಯನ್ನು ಸುಂದರವಾಗಿ ರಚಿಸಿದ್ದಾರೆ. ನೆಹರುರವರ ಭಾವಚಿತ್ರವು ಮೈಬಣ್ಣವನ್ನು ಎಲೋ ಆಕರ್, ಬ್ರಂಟ್‌ಸೆನಾ, ಕೆಂಪು, ಬಿಳಿ, ಕರಿ ಬಣ್ಣಗಳನ್ನು

ಬಳಸಿಕೊಂಡು ನೈಜ ರೀತಿಯಲ್ಲಿ ಕಲಾಕೃತಿಯನ್ನು ರಚಿಸಿದ್ದಾರೆ. ನೆಹರುರವರ ಭಾವನೆ ಕಲ್ಪನೆಯನ್ನು ಮೀರಿ ರಚಿಸಿದ್ದಾರೆ. ಕಣ್ಣು, ಮೂಗು, ಬಾಯಿಗಳನ್ನು ನೋಡಿದಾಗ ಪ್ರಮಾಣಬದ್ಧತೆಯಾಗಿ ರಚಿತಗೊಂಡಿರುವುದು ಸ್ಪಷ್ಟವಾಗಿದೆ. ನೆರಳು ಬೆಳಕಿನ ಛಾಯೆಯನ್ನು ಸುಂದರವಾಗಿ ರಚಿಸಿದ್ದಾರೆ. ಈ ಕಲಾಕೃತಿಯು ನೊಡುಗರಿಗೆ ಬಹಳಷ್ಟು ಆಕರ್ಷಕವಾಗಿ ರಚಿತಗೊಂಡಿದೆ. ಕಲಾವಿದ ತಮ್ಮ ಬಣ್ಣದ ಬಳಕೆ, ರೇಖಾ ವಿನ್ಯಾಸವು ಸುಂದರವಾಗಿ ರಚಿಸುವುದರ ಮೂಲಕ ಉತ್ತಮ ಕಲಾವಿದನೆಂದು ಸಾಬೀತುಪಡಿಸಿಕೊಂಡಿದ್ದಾರೆ.

ಸಂಯೋಜನೆ ಚಿತ್ರಗಳು :

ಚಿತ್ರ :೧. ಈ ಕಲಾಕೃತಿಯ ಸೃಜನಾತ್ಮಕ ಮತ್ತು ಡೆಕಾರೇಟವ್‌ಶೈಲಿಯಲ್ಲಿ ರಚಿಸಿದ ಕಲಾಕೃತಿಗಳಿದೆ ಇದರಲ್ಲಿ ಮೂರು ಮಹಿಳೆಯರು ನೀರುತರುತ್ತಿರು ಚಿತ್ರವಾಗಿದೆ. ಮಹಿಳೆಯರ ವೇಶಭೂಷಣಗಳನ್ನು ತಾಂತ್ರಿಕತೆಯನ್ನು ಉಪಯೊಗಿಸಿ, ಬಣ್ಣಗಳಿಂದ ಸ್ಥಳವಕಾಶವನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು ರಚಿಸಿದ್ದಾರೆ. ಮಣ್ಣಿನ ಗಡಗಿ ಕೈ ಕಾಲುಗಳನ್ನು ತಮ್ಮದೆಯಾದ ಶೈಯಲ್ಲಿ ರಚನೆ ಮಾಡಿದ್ದಾರೆ. ಇದರಲ್ಲಿ ಮಹಿಳೆಯರ ಚಿತ್ರವನ್ನು ಉದ್ದವಾಗಿ ರಚನೆ ಮಾಡಿದ್ದು ಕಂಡು ಬರುತ್ತದೆ. ಕೆಂಪು, ನೀಲಿ, ಹಳದಿವರ್ಣದಿಂದ ರಚಿಸಿದ ಕಲಾಕೃತಿಯಾಗಿದೆ.

ಚಿತ್ರ : ೨. ಈ ಕಲಾಕೃತಿಯು ತೈಲವರ್ಣದಿಂದ ರಚನೆಯಾಗಿದ್ದು ಸಂಗೀತದ ವಾದ್ಯಗಳ ಚಿತ್ರರಚಿಸಿ ಸಂಯೋಜನೆ ಮಾಡಿದ್ದಾರೆ. ವೀಣೆ, ತಬಲ, ತಂಬುರಿ, ತಾರ, ಕೊಳಲು ಮುಂತಾದ ಸಂಗೀತ ಪರಿಕರದಿಂದ ರಚಿಸಿದ ಸುಂದರ ಕಲಾಕೃತಿಯಾಗಿದೆ. ಬಣ್ಣಗಳ ಸಮತೊಲತೆ ಕೆಂಪು, ನೀಲಿ ಹಳದಿ, ಬಣ್ಣಗಳು ಈ ಕಲಾ ಕೃತಿಯಲ್ಲಿ ಬಳಸಿದ್ದಾರೆ. ವಿಷಯಕ್ಕೆ ತಕ್ಕಂತೆ ಈ ಕಲಾಕೃತಿಯನ್ನು ರಚನೆ ಮಾಡಿದ್ದಾರೆ.


ಚಿತ್ರ : ೩. ಈ ಕಲಾಕೃತಿಯು ಪೊಸ್ಪರ ಮಾಧ್ಯಮದಿಂದ ರಚಿಸಿದ ಕಲಾಕೃತಿಯಾಗಿದೆ. ಗೌತಮ ಬುದ್ದನ ಕಲಾಕೃತಿಯನ್ನು ವಸಂತ ಅಕ್ಕಿಯವರು ಸೃಜನಾತ್ಮಕವಾಗಿ ಅಧುನಿ ಶೈಲಿಯಲ್ಲಿ ರಚಿಸಿದ್ದಾರೆ. ಸಾಂಕೇತಿಕವಾಗಿ ಬುದ್ಧನ ಕೈ ಕಾಲುಗಳನ್ನು ತೊರಿಸಿದ್ದಾರೆ. ಬುದ್ಧನ ಹಿನ್ನೆಲೆಯಾಗಿ ನೀರಿನ ತೇರೆಗಳು ಇದ್ದಂತೆ ರಚಿಸಿದ್ದಾರೆ. ಕಲಾಕೃತಿಯ ಮೇಲ್ಬಾಗದಲ್ಲಿ ಸೂರ್ಯನ ಚಿತ್ರವನ್ನು ರಚಿಸಿದ್ದಾರೆ. ಬಣ್ಣಗಳು ಬಳಕೆಯಿಂದ ಕಲಾಕೃತಿಯ ಸಮತೋಲತೆಯನ್ನು ಕಾಯ್ದುಕೊಂಡಿದ್ದಾರೆ.

ಚಿತ್ರ : ೪. ಈ ಕಲಾಕೃತಿಯು ಪೊಸ್ಪರ ಮಾಧ್ಯಮದಿಂದ ರಚಿಸಿದ್ದಾರೆ. ವಸಂತ ಅಕ್ಕಿಯವರು ಲಂಬಾಣಿ ಮಹಿಳೆಯ ಚಿತ್ರವನ್ನು ಸುಂದರವಾಗಿ ರಚಿಸಿದ್ದಾರೆ. ಲಂಬಾಣಿ ಮಹಿಳೆಯ ವೇಶಭೂಷಣವನ್ನು ಸರಳ ರೀತಿಯಲ್ಲಿ ಸ್ಪ್ರೆಡ್ ಮೆಥೆಡ್‌ದಿಂದ ರಚಿಸಿದ್ದಾರೆ. ಮಹಿಳೆಯಧರಿಸಿರುವ ಆಭರಣಗಳು ಕೈ ಬಳೆಗಳು ಉಡುಗೆ-ತೊಡುಗೆಯನ್ನು ಸುಂದರವಾಗಿ ರಚಿಸಿದ್ದಾರೆ. ಹಣೆಯ ಮೇಲಿನ ಕುಂಕುಮವನ್ನು ಭಾರತೀಯ ನಾರಿ ಎಂಬ ಕಲ್ಪನೆಯಿಂದ ದೊಡ್ಡದಾದ ಕುಂಕುಮ ಧರಿಸಿದ್ದನ್ನು ರಚಿಸಿದ್ದಾರೆ.

ಒಟ್ಟಾರೆ ವಸಂತ ಅಕ್ಕಿಯವರು ಕಲಾಕೃತಿ ಗದಗ ನೈಜಶೈಲಿ, ಆಧುನಿ ಶೈಲಿ, ಸೃಜನಾತ್ಮಕವಾದ ಕಲಾಕೃತಿಗಳು ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದಿಂದ ರಚಿದ್ದು ಕಂಡು ಬರುತ್ತದೆ. ತೈಲವರ್ಣ, ಜಲವರ್ಣ, ಕ್ರೇಯಾನ್ಸಗಳಿಂದ ರಚಿಸಿದ್ದು ಕಂಡು ಬರುತ್ತದೆ.

ವಸಂತ ಅಕ್ಕಿಯವರ ಛಾಯಾಚಿತ್ರಗಳು





ಚಿತ್ರ ೨



ಚಿತ್ರ ೧.



ಚಿತ್ರ ೩.



ಚಿತ್ರ ೪




ಚಿತ್ರ: ೧



ಚಿತ್ರ: ೨.



ಚಿತ್ರ: ೩.



ಚಿತ್ರ: ೪.

ಕೆ.ವಿ. ಕುಂದಗೋಳ :

ಕವಿ ಚಿತ್ರಕೋವಿದನು ಪರತತ್ವ ಶೋಧನು ।
ವಿವಿಧ ವಾದನ ಗೀತ ನೃತ್ಯಕುಶಲಿಗಳು ॥
ಸಮಾನತೆಯಂ ಮನಸಿಗೀವಲ್ಲ ಕಲೆಗಾರ ।
ರವರಿಂದ ಸುಂದರತೆ ಮಂಕುತಿಮ್ಮ ॥

"ಕವಿ, ಚಿತ್ರಕಾರ, ಪರತತ್ವವನ್ನು ಶೋಧಿಸುವವನು, ವಿವಿಧವಾದ ವಾದನ ನೃತ್ಯ ಮತ್ತು ಗೀತಕುಶಲಿಗಳು ಮನಸ್ಸಿಗೆ ನವ್ಯತೆಯನ್ನು ನೀಡುತ್ತಾರೆ ಮತ್ತು ಅವರಿಂದಲೇ ಈ ಪ್ರಪಂಚಕ್ಕೆ ಸುಂದರತೆ" ಎಂದು ಡಿ.ವಿ.ಜಿಯವರು ಮೂಲತಃ ಕವಿಯಾಗಿದ್ದರೂ ಎಲ್ಲ ಲಲಿತಕಲೆಗಳ ಬಗ್ಗೆ ಕಲಾವಿದರ ಬಗ್ಗೆ ಅಪಾರ ಪ್ರೀತಿ, ಗೌರವವನ್ನು ಹೊಂದಿ ಅವುಗಳ ಮರ್ಮ ಅರಿತವರು. ಪ್ರಪಂಚದ ಸೌಂದರ್ಯ ವೃದ್ಧಿಯಾಗಬಲ್ಲ ಕಲಾವಿದರ ಪಾಲ್ಗೊಳ್ಳುವಿಕೆ ಮುಖ್ಯವಾದುದು. ಕಲಾಕ್ರಿಯೆ ಎಂಬುದು ಆತ್ಮಕ್ಕೆಸ ಸಂಭಂಧಪಟ್ಟಿದ್ದು, ಅದೇ ಆತ್ಮೋನ್ನತಿಯ ಮಾರ್ಗವೂ ಹೌದು ಎನ್ನುವುದಾದರೆ ಆ ಅಭಿವ್ಯಕ್ತಿಯಲ್ಲಿ ಮನುಷ್ಯ, ಪ್ರಕೃತಿ, ಧರ್ಮ ಮುಂತಾದ ಪ್ರೀತಿಗಳಿಗೆ ಸ್ಥಾನವುಂಟು. ಆ ಮುಖೇನ ವ್ಯಕ್ತಿಗತ, ಸಂಶೋಧನಾತ್ಮಕ, ವೈಚಾರಿಕ, ಧಾರ್ಮಿಕ, ಸಾಂಸ್ಕೃತಿಕ ಮುಂತಾದ ಇನ್ನೂ ಅನೇಕ ನೆಲೆಗಳ ಲೇಖನಗಳು ಹಾಗೂ ದೃಶ್ಯ ಕಾವ್ಯಗಳು ಅಭಿವ್ಯಕ್ತಿಪಡೆಯುತ್ತವೆ. ಅಂಥವರಲ್ಲಿ ಆಂತರಿಕ ಸ್ವರೂಪದ ಒಲವು ನಿಲುವುಗಳು ಗೋಚರವಾಗುತ್ತವೆ.[೧೪೨]

ಅಂಥ ಗೋಚರವಾಗುವ ರೀತಿಯಲ್ಲಿ ಚಿತ್ರಕಲೆಯಲ್ಲಿ ಸಾಕಷ್ಟು ಕೃಷಿ ಮಾಡಿದ ಅನೇಕ ಕಲಾವಿದರಲ್ಲಿ ಶ್ರೀ ಕೆ.ವಿ.ಕುಂದಗೋಳ ಅವರು ಒಬ್ಬರು. ಇವರು ೧೯೪೭ ಫೆಬ್ರವರಿ ೧ ರಂದು ಬೆಟಗೇರಿಯಲ್ಲಿ ಜನಿಸಿದ್ದಾರೆ. ಬಾಲ್ಯದಲ್ಲಿಯೇ ಚಿತ್ರಕಲೆಯ ಗೀಳು ಅಂಟಿಕೊಂಡಿದ್ದ ಶ್ರೀ ಕಾಶಪ್ಪ ಕುಂದಗೋಳರವರು ಪ್ರಾಥಮಿಕ ಶಿಕ್ಷಣ ಮುಗಿಸಿ ಜೆ.ಟಿ.ಕಾಲೇಜಿನಲ್ಲಿ ಬಿ.ಎಸ್.ಸಿ. ಪದವಿಯನ್ನು ಮುಗಿಸಿದರು. ನಂತರ ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ವಿಜಯ ಕಲಾಮಂದಿರಕ್ಕೆ ಪ್ರವೇಶವನ್ನು ಪಡೆದ ಕುಂದಗೋಳರವರು ಬಿ.ಎಸ್.ಸಿ. ಪಧವೀದರರಾಗಿ ಚಿತ್ರಕಲೆಯ ಕಡೆ ಬರಲು ಕಾರಣವೆಂದರೆ ಕಲಾಗುರು ಟಿ.ಪಿ.ಅಕ್ಕಿಯವರ ಪ್ರೋತ್ಸಾಹ ಮುಖ್ಯ ಎಂದು ಹೇಳುತ್ತಾರೆ. ಶಿಸ್ತುಬದ್ಧವಾದ ಕುಂದಗೋಳರವರು ಚಿತ್ರಕಲೆಯಲ್ಲಿ ಸಾಕಷ್ಟು ಅಭ್ಯಾಸ ಮಾಡತೋಡಗಿದರು. ವರ್ಗದ ಎಲ್ಲ ಸ್ನೇಹಿತರ ಪ್ರೀತಿಯ ಸ್ನೇಹಿತರಾಗಿ ಎಲ್ಲ ಗುರುಗಳ ಪ್ರೀತಿಯ ವಿದ್ಯಾರ್ಥಿಯಾಗಿ ಕಲಾ ಅಧ್ಯಯನ ಮಾಡತೊಡಗಿದರು.[೧೪೩]

ಕೆ.ವಿ.ಕುಂದಗೋಳರವರು ಕುಂಚಬ್ರಹ್ಮ ಎಂ.ಎ.ಚೆಟ್ಟಿಯವರ ಕಲಾಕೃತಿಗಳಿಂದ ಪ್ರಭಾವಿತರಾಗಿ ಚೆಟ್ಟಿಯವರು ರಚಿಸಿದ ಅನೇಕ ಕಲಾಕೃತಿಗಳನ್ನು ಪ್ರತಿಕೃತಿ ಮಾಡಿದ್ದಾರೆ. ಭಾವಚಿತ್ರ, ನಿಸರ್ಗಚಿತ್ರ, ರೇಖಾಚಿತ್ರಗಳನ್ನು ಸುಂದರವಾಗಿ ರಚಿಸುತ್ತಿದ್ದರು. ಚೆಟ್ಟಿ ಗುರುಗಳ ಪರಮ ಶಿಷ್ಯರಾಗಿ ಚೆಟ್ಟಿಯವರಿಂದ,

---

೧೪೨. ಪಿ.ಬಿ. ಬಂಡಿ (ಲೇ) ಚಿತ್ರಕಲಾಕ್ಷೇತ್ರಕ್ಕೆ ವಿಜಯ ಕಲಾಮಂದಿರದ ಕೊಡುಗೆ – ಪು.ಸಂ. ೫೦

೧೪೩. ಕೆ. ವಿ. ಕೊಂದಗೋಳರವರ ಸಂದರ್ಶನ ದಿನಾಂಕ ೨೯–೩–೨೦೦೮

ಸಿ.ಎನ್.ಪಾಟೀಲರು, ಕಮಾನಗಾರ, ವಿ.ಟಿ.ಕಾಳೆ ಮುಂತಾದ ಪ್ರಖ್ಯಾತ ಕಲಾವಿದರ ಮಾರ್ಗದರ್ಶನದಲ್ಲಿ ಕಲಾ ಅಭ್ಯಾಸ ಮಾಡಿ ಆರ್ಟ್ ಮಾಸ್ಟರ್ ಮತ್ತು ಡ್ರಾಯಿಂಗ್ ಮತ್ತು ಪೇಂಟಿಂಗ್ ಪದವಿಯನ್ನು ಪೂರೈಸಿದರು. ಶ್ರೀ ಕೆ.ವಿ. ಕುಂದಗೋಳರು ಉತ್ತಮ ಕಲಾವಿದರಾಗಿ ಕಲಾಕೃತಿಗಳನ್ನು ರಚಿಸುವುದು ಮಾತಾಡುವಾಗ ಉತ್ತಮ ಮಾತನಾಡುವ ಕಲಾನೈಪುಣ್ಯತೆಯನ್ನು ಪಡೆದುಕೊಂಡರವರು. ಇದನ್ನು ನೋಡಿ ಅಕ್ಕಿಯವರು ಕುಂದಗೋಳ ಅವರನ್ನು ವಿಜಯ ಕಲಾಮಂದಿರಕ್ಕೆ ಉಪನ್ಯಾಸಕರನ್ನಾಗಿ ನೇಮಕ ಮಾಡಿಕೊಂಡರು. ಇದರಿಂದ ಸಂತೋಷಗೊಂಡ ಕೆ.ವಿ.ಕುಂದಗೋಳ ಅವರು ತಾವು ಕಲಿತ ಕಲಾಶಾಲೆಯಲ್ಲಿಯೇ ಉಪನ್ಯಾಸಕರಾಗಿ ಕೆಲಸ ಮಾಡುವುದು ನನ್ನ ಪುಣ್ಯ ಎಂದು ಹರ್ಷ ವ್ಯಕ್ತಪಡಿಸುತ್ತಾರೆ. ಶ್ರೀ ಕೆ.ವಿಕುಂದಗೋಳರವರು ಎಂ.ಎ. ಚೆಟ್ಟಿಯವರ ಕೈಯಲ್ಲಿ ಪಳಗಿರುವುದರಿಂದ ಅವರ ಜೀವನ ಶೈಲಿ ಮತ್ತು ಕಲಾಶೈಲಿಯನ್ನೇ ಬಹುಪಾಲು ಪಾಲಿಸಿದ್ದಾರೆ. ತಾವು ಬೋಧನೆ ಮಾಡುವಾಗ ಶಿಸ್ತಿನಿಂದ ಬೋಧನೆ ಮಾಡುತ್ತಿದ್ದ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಸಿದ್ದಾರೆ. ಜೀವನದಲ್ಲಿ ಶಿಸ್ತಿಗೆ ಮತ್ತು ವೇಳೆಗೆ ಸರಿಯಾಗಿ ಮಹತ್ವ ನೀಡಿದ್ದರು. ಯಾವುದೇ ವ್ಯಕ್ತಿ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳುವುದಾದರೆ ಅವರಲ್ಲಿ ಶಿಸ್ತಿನೊಂದಿಗೆ ಸಮಯ ಪ್ರಜ್ಞೆಯ ಅವಶ್ಯಕವಾಗಿದೆ ಎಂದು ಕುಂದಗೋಳರವರು ಹೇಳುತ್ತಾರೆ. ಪಾಠಬೋಧನೆ ಮಾಡುವಾಗ ಎಲ್ಲ ವಿದ್ಯಾರ್ಥಿಗಳಿಗೆ ತಿಳಿಯುವ ರೀತಿಯಲ್ಲಿ ಹೇಳುತ್ತಿದ್ದರು. ಚಿತ್ರ ಸಂಯೋಜನೆ, ಭಾವಚಿತ್ರ, ಲೈಫ್, ಮಾನವ ಶರೀರ ಶಾಸ್ತ್ರ ಕುರಿತು ವಿಶೇಷ ಅಧ್ಯಯನ ಮಾಡಿ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ. ಸೃಜನಾತ್ಮಕ ಆಧುನಿಕ, ನೈಜ, ಪ್ರಕೃತಿಗಳ ಚಿತ್ರಣಗಳನ್ನು ಸಾಕಷ್ಟು ಮಾಡಿದ್ದಾರೆ. ತೈಲವರ್ಣ, ಜಲವರ್ಣ, ಅಕ್ರಾಲಿಕ್ ಮಾಧ್ಯಮದಲ್ಲಿ ಸುಂದರವಾದ ಕಲಾಕೃತಿಗಳನ್ನು ರಚಿಸಿ, ರಾಜ್ಯದ ಅನೇಕ ಭಾಗಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ.

ಶ್ರೀ ಕೆ.ವಿ. ಕುಂದಗೋಳರವರು ಹುಬ್ಬಳ್ಳಿ, ಧಾರವಾಡ, ಬಾಗಲಕೋಟೆ, ಬಿಜಾಪುರ, ಹೈದರಾಬಾದ್, ಮುಂಬಯಿ, ಮೈಸೂರು, ಗೋವಾ, ಗುಂಟೂರ, ಬೆಂಗಳೂರು, ದೆಹಲಿ, ಚೆನ್ನೈ, ರಾಜಸ್ಥಾನ, ಲಕ್ಕುಂಡಿ ಉತ್ಸವ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಂತಾದ ಅನೇಕ ಕಡೆಗಳಲ್ಲಿ ಕಲಾಪ್ರದರ್ಶನ ಮಾಡಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ೧೯೯೮, ಮೈಸೂರು ದಸರಾ ಮೈಸೂರು-೧೯೯೮, ಗುಂಟೂರು ಕಲಾಪ್ರದರ್ಶನ-೧೯೯೫, ರಿಜನಲ್ ಅಕಾಡೆಮಿ ಪ್ರದರ್ಶನ ಚೆನ್ನೈ-೧೯೯೫, ೩೮ನೇ ರಾಷ್ಟ್ರೀಯ ಚಿತ್ರಕಲಾಪ್ರದರ್ಶನ ದೆಹಲಿ ೧೯೯೫ರಲ್ಲಿ ಹೀಗೆ ಹಲವಾರು ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಪ್ರದರ್ಶನಗಳಲ್ಲಿ ಇವರ ಕಲಾಕೃತಿಗಳು ಆಯ್ಕೆಗೊಂಡಿವೆ.[೧೪೪]

ಶ್ರೀ ಕಾಶಪ್ಪ ಕುಂದಗೋಳರವರು ಸಮೂಹ ಕಲಾಪ್ರದರ್ಶನದ ಜೊತೆಗೆ ಏಕವ್ಯಕ್ತಿ ಕಲಾಪ್ರದರ್ಶನವನ್ನು ಗದಗ, ಹುಬ್ಬಳ್ಳಿ, ಧಾರವಾಡ,[೧೪೫] ಮುಂತಾದ ಕಡೆ ಹತ್ತುಹಲವಾರು ಏಕವ್ಯಕ್ತಿ ಕಲಾಪ್ರದರ್ಶನವನ್ನು ಮಾಡಿ ತಮ್ಮಲ್ಲಿರುವ ಕಲಾಪ್ರತಿಭೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಶ್ರೀ ಕೆ.ವಿ. ಕುಂದಗೋಳರವರು ಉತ್ತಮ ಕಲಾಕೃತಿಗಳನ್ನು ರಚಿಸುವುದರ ಮೂಲಕ ಹಲವಾರು ಕಲಾಶಿಬಿರಗಳಲ್ಲಿ

೧೪೪. ಎಸ್.ಎಸ್. ಕಮ್ಮಾರ(ಲೇ) ವಸಂತ ಅಕ್ಕಿಯವರ ಜೀವನ ಮತ್ತು ಕಲಾ ಕೃತಿಗಳು ಪು.ಸಂ.೧೪

೧೪೫. ವಸಂತ ಅಕ್ಕಿಯವರ ಸಂದರ್ಶನ ದಿನಾಂಕ ೨-೮-೨೦೦೯

ಭಾಗವಹಿಸಿದ್ದರೆ. ೧೯೯೨ರಲ್ಲಿ ಕರ್ನಾಟಕ ಕಲಾಮೇಳ ಬೆಂಗಳೂರು, ೧೯೯೨ರಲ್ಲಿ ಆಲ್ ಇಂಡಿಯಾ ಕಲಾಶಿಬಿರ ಧಾರವಾಡ, ೧೯೯೩ ಆಲ್ ಇಂಡಿಯಾ ಕಲಾಶಿಬಿರ ಬಿಜಾಪೂರ ೧೯೯೬ ನ್ಯಾಶನಲ್ ಆರ್ಟಿಸ್ಟ್ ಕಲಾಶಿಬಿರ ಚೆನ್ನೈ,೨೦೦೬ ಕರ್ನಾಟಕ ಲಲಿತಕಲಾ ಅಕಾಡೆಮಿ ಕಲಾಶಿಬಿರ ಗದಗ, ಎಂ.ಎ.ಚೆಟ್ಟಿ ಶತಮಾನೋತ್ಸವದ ಅಂಗವಾಗಿ ಚಿತ್ರಕಲಾ ಶಿಬಿರ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಗದಗ, ೧೯೯೪ರಲ್ಲಿ ನ್ಯಾಶನಲ್ ಕಲಾಶಿಬಿರ ತ್ರೀಕೋಟೇಶ್ವರ ದೇವಸ್ಥಾನ ಗದಗ, ಲಕ್ಕುಂಡಿ ಉತ್ಸವ, ಮೌಂಟ್‌ಅಬು ರಾಜಸ್ಥಾನ, ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಗದಗ ಮುಂತಾದ ಅನೇಕ ರಾಜ್ಯ ಮತ್ತು ರಾಷ್ಟ್ರಮಟ್ಟದ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

ಸದಾ ಕ್ರಿಯಾಶೀಲರಾದ ಕಾಶಪ್ಪ ಕುಂದಗೋಳರವರು ತಮ್ಮಲ್ಲಿರುವ ಕಲಾಪ್ರೌಢಿಮೆಯನ್ನು ಅನೇಕ ಕಲಾಶಾಲೆಗಳಿಗೆ ಹೋಗಿ ಪ್ರಾತ್ಯಕ್ಷಿತೆ ನೀಡುವುದರ ಮೂಲಕ ವಿದ್ಯಾರ್ಥಿಗಳಿಗೆ ತೋರಿಸಿಕೊಟ್ಟಿದ್ದಾರೆ. ಹುನಗುಂದತಾಲೂಕಿನ ಅಮೀನಗಡ ಕಲಾಶಾಲೆ, ಶ್ರೀ ಸಿದ್ದೇಶ್ವರ ಕಲಾಮಂದಿರ ಬಿಜಾಪೂರ, ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯ ಗದಗ, ಹಂಪಿ ಲಲಿತಕಲಾ ಮಹಾವಿದ್ಯಾಲಯ ಹೊಸಪೇಟೆ ಮುಂತಾದ ಹಲವಾರು ಕಡೆ ಕಲಾಪ್ರಾತ್ಯಕ್ಷಿಕೆ ನೀಡಿದ್ದಾರೆ. ಹಾಗೂ ಅನೇಕ ಕಲಾಶಿಬಿರಗಳಲ್ಲಿ ನಿರ್ದೇಶಕರಾಗಿ ಕಾರ್ಯ್ ಮಾಡಿದ್ದಾರೆ. ತಾಲೂಕಾ ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಕಲಾಪ್ರತಿಭೋತ್ಸವದಲ್ಲಿ ಚಿತ್ರಕಲಾ ಸ್ಪರ್ಧೆಗಳ ನಿರ್ಣಾಯಕರಾಗಿ ಕಾರ್ಯಗೈದಿದ್ದಾರೆ. ಕೆ.ವಿ. ಕುಂದಗೋಳರವರು ಕಲೆಯೇ ತಮ್ಮ ಬದುಕಾಗಿ ಸದಾ ಕಲಾಕೃತಿ ರಚನೆ ಮಾಡುವುದು, ಪುಸ್ತಕ ಓದುವುದು ಇವರ ಹವ್ಯಾಸವಾಗಿದೆ. "ಪುಸ್ತಕ ಮುಖಪುಟ ವಿನ್ಯಾಸಗಳನ್ನು ಸಹಿತ ಇವರು ರಚನೆ ಮಾಡಿದ್ದು ಅದರಲ್ಲಿ ಹೊಳಲಮ್ಮ ಶತಕ, ಹುಚ್ಚೀರೇಶ್ವರ ಶತಕ, ಕಪ್ಪತದ ಕಲ್ಪವೃಕ್ಷ ಪರಂಪರೆಯ ಪತನ, ಕಡಕೋಳ ಅಯ್ಯಪ್ಪಜ್ಜ, ಸಿದ್ಧಲಿಂಗ ಕಾವ್ಯಸುಧೆ, ಈ ಕೃತಿಗಳು ಪ್ರಮುಖವಾಗಿವೆ. ಇದಲ್ಲದೆ ಹೊಳಲಮ್ಮ ಶತಕ ಮತ್ತು ಸಿದ್ಧಲಿಂಗ ಕಾವ್ಯಸುಧೆ ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದಾರೆ."[೧೪೬]

ಚಿತ್ರಕಲೆಯ ಜೊತೆಗೆ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಕುಂದಗೋಳರವರು ಬಸವೇಶ್ವರ ಯುವಕ ಸಂಘ, ವೀರಶೈವ ಪ್ರಗತಿಶೀಲ ಯುವಕ ಸಂಘ, ಅಭಿನಯರಂಗ, ಹೊಳಲಮ್ಮದೇವಿ ಟ್ರಸ್ಟ, ಮುಂತಾದಸಂಘಗಳಲ್ಲಿ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಕೆಲಸ ಮಾಡಿದ್ದಾರೆ. ಹೀಗೆ ಸಾಮಾಜಿಕ ಸಂಘಟನೆಯಲ್ಲಿ ಬೆಳೆಯುತ್ತಿರುವ ಕೆ.ವಿ.ಕುಂದಗೋಳರವರು ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ೧೯೭೮ ಬೆಸ್ಟ್ ಆರ್ಟಿಸ್ಟ್ ಜೆ.ಟಿ.ಕಾಲೇಜ ಗದಗ, ೧೯೭೦ರಲ್ಲಿ ಬೆಸ್ಟ್ ರಂಗೋಳಿ ಜೆ.ಟಿ.ಕಾಲೇಜ ಗದಗ, ೧೯೯೫ರಲ್ಲಿ ವಿಜಯ ಕಲಾಮಂದಿರ ಮೆರಿಟ್ ಆವಾರ್ಡ್, ೧೯೯೬ರಲ್ಲಿ ಗೋಲ್ಡಮೆಡಲ್ ಲಿಯೋ ಮತ್ತು ಲೈನ್ಸ ಕ್ಲಬ್ ಆಫ್ ಗದಗ, ೨೦೦೬ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಲುರ ಇವರಿಂದ ಗೌರವ ಪ್ರಶಸ್ತಿ, ೨೦೦೫ರಲ್ಲಿ ಕಲಾಶ್ರಿ ಪ್ರಶಸ್ತಿ, ಭಾರತೀಯ ಜೆ.ಸಿ.ವಲಯ ೧೪ ಮತ್ತು ೧೫ರಲ್ಲಿ ಕೊಪ್ಪ ಜೆಸಿಸ್, ೨೦೦೪ ಪ್ರಜಾರಾಜ್ಯೋತ್ಸವ ದಿನಾಚರಣೆ ಪ್ರಶಸ್ತಿ ಜಿಲ್ಲಾಡಳಿತ ಗದಗ, ೨೦೦೪ರಲ್ಲಿ ಕ್ರೀಡಾ ಸಿರಿ, ಕ್ರೀಡಾ ಅಭಿವೃದ್ಧಿ ಸಂಘ ಗದಗ, ೨೦೦೪ರಲ್ಲಿ ಸರ್ಟಿಫಕೇಟ್ ಆಫ್ ಅಸೋಶಿಯೇಶನ್ ಮೌಂಟ ಅಬು

೧೪೬.ಎಸ್.ಎಸ್.ಕಮ್ಮಾರ ಲೇ, ವಸಂತ ಅಕ್ಕಿಯವರ, ಜೀವನ ಮತ್ತು ಕಲಾಕೃತಿಗಳು ಪು.ಸಂ. ೧೬

ರಾಜಸ್ಥಾನ, ೨೦೦೭ರಲ್ಲಿ ಸ್ವತಂತ್ರ ದಿನಾಚರಣೆಯ ಗೌರವ ಪ್ರಶಸ್ತಿ ಜಿಲ್ಲಾಡಳಿತ ಗದಗ, ಹೀಗೆ ಹತ್ತು ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡ ಕುಂದಗೋಳರವರು ಅನೇಕ ಸಂಘ ಸಂಸ್ಥೆಗಳಿಗೆ ಸನ್ಮಾನ ಗೌರವವನ್ನು ಪಡೆದುಕೊಂಡಿದ್ದಾರೆ.

ಇವರ ಅನೇಕ ಸುಂದರವಾದ ಕಲಾಕೃತಿಗಳು ಗದಗ, ಬಿಜಾಪೂರ, ರಿಜನಲ್ ಅಕಾಡೆಮಿ ಚೆನ್ನೈ, ಯು.ಎಸ್.ಎ. ಬೆಲ್ಜಿಯಂ, ಬೆಂಗಳುರು, ಹುಬ್ಬಳ್ಳಿ, ಧಾರವಾಡ, ರಾಜಸ್ಥನ, ದೆಹಲಿ, ಮುಂಬಯಿ ಮುಂತಾದ ರಾಜ್ಯ ಹೊರರಾಜ್ಯಗಳಲ್ಲಿ ಶ್ರೀಯುತರ ಕಲಾಕೃತಿಗಳು ಸಂಗ್ರಹಗೊಂಡಿವೆ.[೧೪೭] ಹೀಗೆ ಶಿಸ್ತಿನ ಸಿಪಾಯಿಗಳು, ವಾಕ್‌ಚಾತುರ್ಯ ಪ್ರತಿಭೆ ಹೊಂದಿದ ಕುಂದಗೋಳರವರು ಹಲವಾರು ಕಲಾಕೃತಿಗಳನ್ನು ರಚಿಸುವುದರ ಮೂಲಕ ಗದಗ ಜಿಲ್ಲೆಗೆ ತಮ್ಮದೆಯಾದ ವಿಶಿಷ್ಟವಾದ ಕೊಡುಗೆಯನ್ನು ನಿಡಿದ್ದಾರೆ. ಅವರು ರಚಿಸಿದ ಚಿತ್ರಸಂಯೋಜನೆ, ರೇಖಾಚಿತ್ರ, ಭಾವಚಿತ್ರ, ಲೈಫ್, ನಿಸರ್ಗಚಿತ್ರಗಳನ್ನು ರಚಿಸಿದ್ದು, ಅವುಗಳ ಕುರಿತು ಈ ಕೆಳಗಿನಂತೆ ವಿವರಣೆ ಮಾಡಲಾಗಿದೆ.

ಕೆ.ವ್ಹಿ. ಕುಂದಗೋಳರವರ ಕಲಾಕೃತಿಗಳ ವೈವಿಧ್ಯತೆ :

ಕೆ.ವ್ಹಿ. ಕುಂದಗೋಳರವರ ಕಲಾಕೃತಿಗಳು ವಿವಿಧ ಮಾಧ್ಯಮದಿಂದ ರಚಿಸಿದ್ದು ಕಂಡುಬರುತ್ತದೆ. ತೈಲವರ್ಣ ಜಲವರ್ಣ ಅಕ್ರಾಲಿಕ ಪೆನ್ ಆ್ಯಂಡ ಇಂಕ್ ಮಾಧ್ಯಮದಿಂದ ರಚಿಸಿದ ಕಲಾಕೃತಿಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವು ಕಲಾಕೃತಿಗಳು ಈ ಕೆಳಗಿನಂತೆ ಚರ್ಚಿಸಲಾಗಿದೆ.


ಚಿತ್ರ:೧. ಈ ಕಲಾಕೃತಿಯ ವಚನಾಧಾರಿತ ಕಲಾಕೃತಿಯಾಗಿದೆ. ಅಕ್ಕಮಹಾದೇವಿಯ ಬಸವಣ್ಣನನ್ನು ನೆನೆಸುತ್ತ ಫಲ ಒಳಗೆ ಪಕ್ವಗಿದೆಯಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡೆದೆ ಕಾಮದ ಮುದ್ರೆಯ ಕಂಡು ನಿಮಗೆ, ನೋವಾಗಿತೆಂದು ಆ ಭಾವದಿಂದ ಮುಚ್ಚಿದೆ, ಇದಕ್ಕೆ ನೋವೇಕೆ? ಕಾಡಬರಣ್ಣಾ ಚೆನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾರವಳ ಎಂದು ಹೆಳಿದ ಅಕ್ಕಮಹಾದೇವಿಯ ವಚನಾಧಾರತಿ ಅರ್ಥಗರ್ಭಿತ ಕಲಾಕೃತಿಯಾಗಿದೆ. ಇದನ್ನು ಕಲಾವಿದ ಉತ್ತಮ ಬಣ್ಣಗಳ ಮೈಬಳಿಕೆಯಿಂದ ಕಲಾಕೃತಿಯ ಮೂಲಕ ಅಕ್ಕಮಹಾದೇವಿ ತಮ್ಮ ಮನೊವಿಲಾಶೇಯನ್ನು ವ್ಯಕ್ತಪಡಿಸಿದ ಚಿತ್ರವಾಗಿದೆ.

ಚಿತ್ರ : ೨. ಈ ಕಲಾಕೃತಿಯು ಅಕ್ಕಮಹಾದೇವಿಯ ಬಸವಣ್ಣನನ್ನು ಸ್ಮರಿಸುತ್ತ, ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದುಂತಾಯಿತ್ತು ಬರಲುಗೊಂಡ ಸಸಿಗೆ ಮಳೆಸುರಿದಂತಾಯಿತ್ತು ನೋಡಾ ಇಂದೆ ನಗೆ ಇಹದ ಸುಖ, ಪರದ ಗತಿ ನಡೆದು ಬಂದಂತಾಯಿತ್ತು ನೋಡಾ ಎನಗೆ ಚೆನ್ನ ಮಲ್ಲಿಕಾರ್ಜುನಯ್ಯ ಗುರುಪಾದವ ಕರಡು ಧನ್ಯಳಾದೆ ನೋಡಾ ಎಂದು ಅರ್ಥಗರ್ಭಿತವಾದ ಈ ವಚನಾಧಾರಿತ ಕಲಾಕೃತಿಯು ಕಲಾವಿದ ತಮ್ಮದೇ ಆದ ಶೈಲಿ ಬಣ್ಣಗಳ ಬಳಕೆಯನ್ನು ಬಳಸಿ ರಚಸಿದ ಕಲಾಕೃತಿಯಾಗಿದೆ.

ಚಿತ್ರ : ೩. ಈ ಕಲಾಕೃತಿಯ ಜೀವನ ಕಲಾಕೃತಿಯಾಗಿದೆ. ಶರಣರ ಬಂದು ತತ್ವದಲ್ಲಿ ಕಲಾವಿದ ನೈಜತೆಯಿಂದ ಸೃಜನಾತ್ಮಕತೆಯನ್ನು ಈ ಕಲಾಕೃತಿಯಲ್ಲಿ ತೋರಿಸಿದ್ದಾರೆ. ಹಿನ್ನಲೆಯಾಗಿ ಕೆಲವೊಂದು ಧಾರ್ಮಿಕಗಳನ್ನು ಬಳಸಿ ನೀಲಿವರ್ಣದಿಂದ ರಚಿಸಿದ್ದಾರೆ. ಆದರೆ ಶಿವನ ಮುಖವನ್ನು ಹಳದಿವರ್ಣದಿಂದ

೧೪೭. ವಸಂತ ಅಕ್ಕಿಯವರ ಸಂದರ್ಶನ ದಿನಾಂಕ ೨೫-೭-೨೦೧೦

ಕೆ.ವ್ಹಿ.ಕುಂದಗೋಳ ರವರ ಸಂಯೋಜನೆ ಚಿತ್ರಗಳು




ಶ್ರೀ ಕೆ.ವ್ಹಿ.ಕುಂದಗೋಳ



ಚಿತ್ರ: ೧.



ಚಿತ್ರ: ೨



ಚಿತ್ರ: ೩

ಕೆ ವ್ಹಿ ಕುಂದಗೋಳ ರವರ ಸಂಯೋಜನೆ ಚಿತ್ರಗಳು



ಚಿತ್ರ: ೧.



ಚಿತ್ರ: ೨.



ಚಿತ್ರ: ೩



ಚಿತ್ರ: ೪.

ರಚಿಸಿದ್ದಾರೆ. ಕಣ್ಣು ಮೂಗು ಬಾಯಿಗಳನ್ನು ನೈಜತೆಯಿಂದ ಕುಡಿದೆ. ಶಿವನ ಕೊರಳಲ್ಲಿ ಧಾರಿಸಿರುವ ಹಾವು ಇವುಗಳೆಲ್ಲವು ನೋಡಿದರೆ ಧಾರ್ಮಿಕ ಹಿನ್ನಲೆಯನ್ನು ನಿಡುವ ಕಲಾಕೃತಿಯಾಗಿದೆ.

ಸೃಜನಾತ್ಮಕ ಸಂಯೋಜನಾ ಚಿತ್ರಗಳು :

ಚಿತ್ರ : ೧. ಈ ಕಲಾಕೃತಿಯನ್ನು ಕಲಾವಿದ ತೈಲವರ್ಣದಿಂದ ರಚಿಸಿದ್ದಾರೆ. ಅನಾಥರ ಕುರಿತು ರಚಿಸಿದ ಈ ಕಲಾಕೃತಿಯಾಗಿದೆ. ಯಾರು ಸಹಾಯ ಮಾಡಿದೆ. ಅನಾಥರಾಗಿ ಬಿದ್ದಿರುವ ಮನುಷ್ಯರ, ಪ್ರಾಣಿಗಳ ಚಿತ್ರವನ್ನು ಕಲಾವಿದ ತಮ್ಮದೇ ಅದ ಶೈಲಿ ಬಣ್ಣಗಳ ಬಳಕೆಯನ್ನು ಬಳಸಿಕೊಂಡು ಉತ್ತಮ ಕಲಾಕೃತಿಯನ್ನು ಕಲಾವಿದ ರಚಿಸಿದ್ದಾರೆ. ಹಿನ್ನಲೆಯಾಗಿ ಯಲೋ ಆಕಾರವರ್ಣವನ್ನು ಬಳಸಿ ಕಲಾಕೃತಿಯ ಸ್ಪಷ್ಟವಾಗಿ ಬರುವಂತೆ ರಚಿಸಿದ್ದಾರೆ.

ಚಿತ್ರ : ೨. ಈ ಕಲಾಕೃತಿಯ ಅಕ್ರಾಲಿಕ್, ಪೇಸ್ಟಲ್ ಮಾಧ್ಯಮದಿಂದ ರಚಸಿದ ಕಲಾಕೃತಿಯಾಗಿದೆ. ಆಧುನಿಕ ಶೈಲಿಯಲ್ಲಿ ಕೆಲವು ಫಾರ್ಮಗಳನ್ನು ಬಳಸಿಕೊಂಡಿದ್ದಾರೆ. ಕಲಾಕೃತಿಯ ವಿಜ್ಞಾನ ಮತ್ತು ತಂತ್ರ ಜ್ಞಾನವು ಎಷ್ಟು ಮುಂದೆ ಹೊಗಿದೆ ಚಂದ್ರ ಲೋಕಕ್ಕೆ ಮನೆಕಟ್ಟಲು ಸಾಧ್ಯ ಎಂಬ ಪರಿಕಲ್ಪನೆಯನ್ನು ಕಲಾವಿದ ಉತ್ತಮ ಸಂಯೋಜನೆಯನ್ನು ಮಾಡಿದ್ದಾರೆ. ಬಣ್ಣಗಳ ಬಳಕೆ ಮೈಬಳಕೆಯನ್ನು ಅತ್ಯಂತ ಸುಂದರವಾಗಿ ನಿರುಪಿಸಿದ್ದಾರೆ.

ಚಿತ್ರ : ೩. ಈ ಕಲಾಕೃತಿಯನ್ನು ಕಲಾವಿದ ತೈಲ ವರ್ಣದಿಂದ ರಚಿಸಿದ್ದಾರೆ. ಇದರಲ್ಲಿ ಮೂರು ಭಾಗಮಾಡಿ, ಒಂದು ಸ್ವರ್ಗಲೋಕ, ಎರಡು ಮರ್ಥಲೋಕ ಮತ್ತು ಪಾತಾಳ ಲೋಕ ಎಂಬ ವಿಷಯವನ್ನು ಸೃಜನಾತ್ಮಕವಾಗಿ ರಚಿಸಿದ್ದಾರೆ. ಸ್ವರ್ಗಲೋಕಕ್ಕೆ ಮರ್ಥಲೋಕಕ್ಕಿಂತ ಪಾತಾಳ ಲೋಕವು ಉತ್ತಮ ಎಂಬ ಭಾವನೆಯನ್ನು ವರ್ಣಗಳ ಮೂಲಕ ಅಭಿವ್ಯಕ್ತ ಗೊಳಿಸಿದ್ದಾರೆ. ಈ ಕಲಾಕೃತಿಯಲ್ಲಿ ಹಳದಿ ಕೆಂಪು ಮತ್ತು ಹಸಿರು ವರ್ಣಗಳು ಹೆಚ್ಚಾಗಿ ಬಳಸಿದ್ದು ಕಂಡುಬರುತ್ತವೆ.

ಚಿತ್ರ : ೪. ಈ ಕಲಾಕೃತಿಯು ತೈಲವರ್ಣದಿಂದ ರಚಿಸಿದ್ದಾರೆ. ಅನಿರ್ಭಯ ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಅಮೂರ್ತಕಲೆಯಲ್ಲಿ ಕಲಾಕೃತಿಯನ್ನು ರಚಿಸಿದ್ದಾರೆ. ಯಾವುದೇ ಜೀವಿಗೆ ಬಂದನ ಅನ್ನುವುದು ವಿದ್ದರೆ. ಅದು ಒಂದು ಆಕಾರದಲ್ಲಿ ಇರುತ್ತದೆ ಅದೇ ಬಂಧನ ವಿವರಿಸಿದ್ದಾರೆ ಅದರ ಆಕಾರ ವಿಕಾರವಾಗುವುದು. ಎಂಬ ವಿಷಯವನ್ನು ವರ್ಣಗಳ ಮೂಲಕ ಉತ್ತಮ ರೀತಿಯಿಂದ ಅಭಿವ್ಯಕ್ತಗೊಳಿಸಿದ್ದಾರೆ. ಚಿತ್ರದ ಕೆಳಗೆ ಭೂಮಿ ಮೇಲೆ ಜೀವಿಯ ಚಿತ್ರವನ್ನು ಉತ್ತಮ ರೀತಿಯಿಂದ ರಚಿಸಿದ್ದಾರೆ.

ಗದಗ ಜಿಲ್ಲೆಯ ಕಲಾವಿಧರು ಜಿಲ್ಲೆಯಲ್ಲಿ ಕಲಿತ ವಿದ್ಯಾರ್ಥಿಗಳು ರಾಜ್ಯ ರಾಷ್ಟ್ರ ಮಟ್ಟದಲ್ಲಿ ಅನೇಕ ಕಲಾವಿದರು ಹೆಸರು ಮಾಡಿ ಗದಗ ಜಿಲ್ಲೆಗೆ ಚಿತ್ರಕಲಾ ಕ್ಷೇತ್ರಕ್ಕೆ, ತಮ್ಮದೆಯಾದ ಕೊಡುಗೆ ನಿಡಿದ್ದಾರೆ. ಅಂಥವರ ಕುರಿತು ಈ ಕೆಳಗಿನಂತೆ ವಿಂಗಡಿಸಿ ಪಟ್ಟಿ ಮಾಡಲಾಗಿದೆ.

೧. ಪಿ.ಹೆಚ್.ಡಿ ಪದವಿ ಪಡೆದವರು, ಡಿ.ಲಿಟ್ ಪದವಿ ಪಡೆದವರು, ಎಂಫಿಲ್ ಪದವಿ ಪಡೆದವರು.

೨. ಕೇಂದ್ರ ಲಲಿತಕಲಾ ಅಕಾಡೆಮಿ ಅಧ್ಯಕ್ಷರು, ಸದಸ್ಯರು ಪ್ರಶಸ್ತಿ ಪಡೆದ, ಕಲಾಕೃತಿ, ಆಯ್ಕೆಯಾದ ಕಲಾವಿದರು

೩. ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರು, ಸದಸ್ಯರು, ಪ್ರಶಸ್ತಿ ಪಡೆದ ಕಲಾವಿದರು

೪. ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದ ಕಲಾವಿದರು.

೧. ಪಿ.ಹೆಚ್.ಡಿ ಪದವಿಪಡೆದವರು :

೧. ಡಾ. ಬಿ.ಕೆ. ಹಿರೇಮಠ	ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ ಕರ್ನಾಟಕ ವಿ.ವಿ. ಧಾರವಾಡ ೧೯೮೭
೨. ಡಾ. ಎಸ್.ಸಿ. ಪಾಟೀಲ	ಕರ್ನಾಟಕ ಜನಪದ ಚಿತ್ರಕಲೆ ವಿ.ವಿ. ಧಾರವಾಡ ಕರ್ನಾಟಕ ವಿ.ವಿ. ಧಾರವಾಡ ೧೯೯೧
೩. ಡಾ. ಯಾದಪ್ಪ ಪರದೇಶಿ	ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ ಒಂದು ಅಧ್ಯಯನ ಕನ್ನಡ ವಿ.ವಿ. ಹಂಪಿ ೨೦೦೧
೪. ಡಾ. ಲಕ್ಷ್ಮೀದೇವಿ ಬಾಯಿ	ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು ಕನ್ನಡ ವಿ.ವಿ. ಹಂಪಿ ೨೦೦೭
೫. ಡಾ. ಎಸ್.ಸಿ.ಪಾಟೀಲ	ಎಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್ ಎಜ್ಯುಕೇಶನ್ ಆಫ್‌ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರೆನ್ಸ್ ಟು ಡ್ರಾಯಿಂಗ್ ಆಂಡ್ಯ ಪೇಂಟಿಂಗ್ ಕರ್ನಾಟಕ ವಿ.ವಿ. ಧಾರವಾಡ ೨೦೦೩
೬. ಡಾ ಶಶಿಕಲಾ ಹೂಗಾರ	ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ ಕನ್ನಡ ವಿ.ವಿ. ಹಂಪಿ ೨೦೦೫
೭. ಡಾ. ಎಚ್.ಎನ್. ಚಿತ್ರಗಾರ	ಕರ್ನಾಟಕ ಹಸ್ತಪ್ರತಿ ಚಿತ್ರಕಲೆ : ಕರ್ನಾಟಕ ವಿ.ವಿ. ಹಂಪಿ
೮. ಡಾ. ಮೋಹನ್ ಪಾಂಚಾಳ	ಕಲಾವಿದ ಎಸ್.ಎಮ್. ಪಂಡಿತ ಬದುಕು ಮತ್ತು ಕಲೆ ಗುಲಬರ್ಗಾ ವಿ.ವಿ. ಗುಲಬರ್ಗಾ ೨೦೦೮
೯. ಡಾ. ನಿಂಗಪ್ಪ ಅಂಗಡಿ	ಕರ್ನಾಟಕದ ಗಾಜಿನ ಮೇಲಿನ ಚಿತ್ರಗಳು ಒಂದು ಅಧ್ಯಯನ ಕನ್ನಡ ವಿ.ವಿ. ಹಂಪಿ ೨೦೧೧
೧೦. ಶಂಕರಪ್ಪ ಕುಂದಗೋಳ	ಕರ್ನಾಟಕದ ಗಂಜಿಫಾ ಚಿತ್ರಕಲೆ ಕನ್ನಡ ವಿ.ವಿ. ಹಂಪಿ ೨೦೧೧

೨. ಡಿ.ಲಿಟ್ ಪದವಿ ಪಡೆದವರು :

೧. ಡಾ. ಡಿ.ಎ. ಉಪಾಧ್ಯಯ	ದೃಶ್ಯಕಲೆಗಳ ತೌಲನಿಕ ಅಧ್ಯಯನ ಕನ್ನಡ ವಿ.ವಿ. ಹಂಪಿ ೨೦೦೫

೩. ಎಂ.ಫಿಲ್ ಪದವಿ ಪಡೆದವರು :

೧. ಶ್ರೀ ಸಿ.ಡಿ. ಜೆಟ್ಟೆಣ್ಣವರ	ಕಲಾವಿದ ಡಾ. ಎಂ.ವ್ಹಿ. ಮಿಣಜಗಿಯವರ ಜೀವನ ಮತ್ತು ಕಲಾಕೃತಿಗಳು ಕನ್ನಡ ವಿ.ವಿ. ಹಂಪಿ. ೨೦೦೫
೨. ಶ್ರೀ ಶಂಕ್ರರಪ್ಪ. ಕುಂದಗೋಳ	ಕಲಾವಿದ ಡಿ.ವ್ಹಿ. ಹಾಲಬಾವಿಯವರ ಬದುಕು ಮತ್ತು ಕಲಾಕೃತಿಗಳು ಕನ್ನಡ ವಿ.ವಿ. ಹಂಪಿ ೨೦೦೫
೩. ಶ್ರೀ ಶಶಿಕಾಂತ ಬಸರರಿಕಟ್ಟಿ	ಕಲಘಟಗಿ ಕಲೆ ಕನ್ನಡ ವಿ.ವಿ. ಹಂಪಿ ೨೦೦೭
೪. ಶ್ರೀ ಮಹೇಶ ಉಮತಾರ	ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ ಕನ್ನಡ ವಿ.ವಿ. ಕನ್ನಡ ಎ.ಎ. ಹಂಪಿ ೨೦೦೮
೫. ಶ್ರೀ ಶಾನವಾಜ ಜಮಾದಾರ	ಕಲಾವಿದ ಸಿ.ಎನ್. ಪಾಟೀಲರವರು ಬದುಕು ಮತ್ತು ಕಲಾಕೃತಿಗಳು ಕನ್ನಡ ವಿ.ವಿ. ಹಂಪಿ – ೨೦೦೮

೨. ಕೇಂದ್ರ ಲಲಿತಕಲಾ ಅಕಾಡೆಮಿ ಅಧ್ಯಕ್ಷರು, ಸದಸ್ಯ ಪ್ರಶಸ್ತಿ ಪಡೆದವರು ಆಯ್ಕೆ ಆದವರು

ಪ್ರಾ. ಶ್ರೀ ಅಶೋಕ ಅಕ್ಕಿ ಸದಸ್ಯರು, ಹಾಗೂ ಪ್ರಶಸ್ತಿ ಪಡೆದಿದ್ದಾರೆ.

ಕೇಂದ್ರ ಲಲಿತಕಲಾ ಅಕಾಡೆಮಿ ಕಲಾಕೃತಿ ಆಯ್ಕೆಯಾದವರು :

ಶ್ರೀ ರಾಮಚಂದ್ರ ಹೆಗಡೆ, ಶ್ರೀ ಕಮಲ ಅಹ್ಮದ, ಶ್ರೀ ಡಿ.ಎಚ್. ಸುರೇಶ, ಶ್ರೀ ವಿಜಯ ಸಾವಳಗಿ.

೩. ಕರ್ನಾಟಕ ಲಲಿಕಲಾ ಅಕಾಡೆಮಿ ಅಧ್ಯಕ್ಷರು, ಸದಸ್ಯರು, ಪ್ರಶಸ್ತಿ ಪಡೆದವರು

ಶ್ರೀ ಟಿ.ಪಿ. ಅಕ್ಕಿ, ಅಧ್ಯಕ್ಷರು, ಆರ್.ಎಂ. ಹಡಪದರು ಶ್ರಿ ವ್ಹಿ.ಟಿ. ಕಾಳೆ, ಅಧ್ಯಕ್ಷರು,

ಸದಸ್ಯರು : ಶ್ರೀ ಅಶೋಕ ಅಕ್ಕಿ, ಶ್ರೀ ಎಂ.ಜೆ. ಬಂಗ್ಲೇವಾಲೆ, ಡಾ. ಎಸ್.ಸಿ. ಪಾಟೀಲ, ಡಾ. ಲಕ್ಷ್ಮೀದೇವಿ ಗವಾಯಿ, ಶ್ರೀ ಶೇಖರ ಕದಡಿ, ಶ್ರೀ ಜೆ.ಎಸ್. ಭೂಸಗೊಂಡ, ಶ್ರೀ ಶಶಿಧರ ಲೋಹಾರ, ಶ್ರೀ ಎಂ.ಸಿ. ಚೆಟ್ಟಿ, ಶ್ರೀ ಡಿ.ಎಂ. ಬಡಿಗೇರ, ಶ್ರೀ ಸಿ.ಡಿ. ಜೆಟ್ಟೆಣ್ಣವರ, ಶ್ರೀ ರಮೇಶ ತೇರದಾಳ, ಶ್ರೀ ಶಂಕರಪ್ಪ ಎಂ. ಕುಂದಗೋಳ, ಜಂಬು ಕೇರ್ಶ್ವ ಎಂ.ಎಂ.

ಲಲಿಕಲಾ ಅಕಾಡೆಮಿ ಗೌರವ ಪ್ರಶಸ್ತಿ ಪಡೆದವರು : ಶ್ರೀ ಎಂ.ಎ. ಚೆಟ್ಟಿ, ಶ್ರೀ ಸಿ.ಎನ್. ಪಾಟೀಲ, ಆರ್. ಎಂ. ಹಡಪದ ವ್ಹಿ.ಟಿ. ಕಾಳೆ, ಎಂ.ಆರ್. ಬಾಳಿಕಾಯಿ, ಎನ್.ಎ. ಹರ್ಲಾಪೂರ, ಡಾ. ಎಸ್.ಸಿ. ಪಾಟೀಲ, ಪ್ರಾ. ಸಿ.ಬಿ. ಕಾಚಾಪೂರ, ಶ್ರೀ ಎನ್.ಎಂ. ದಾಟನಾಳ, ಶ್ರೀ ಕೆ.ವ್ಹಿ. ಕುಂದಗೂಳ ಮುಂತಾದವರು.

ಲಲಿತಕಲಾ ಅಕಾಡಮಿ ಪ್ರಶಸ್ತಿ ಪಡೆದವರು : ಎಂ.ಎ ಚೆಟ್ಟೆ, ವ್ಹಿ.ಟಿ. ಕಾಳೆ, ಕಮಲ ಅಹ್ಮದ, ಸಿ.ಡಿ ಜೆಟ್ಟೆಣ್ಣವರ, ಶ್ರೀಮತಿ ಪ್ರೇಮಾ ಹಿರೇಮಠ, ಬಸವರಾಜ ಕುತ್ನಿ, ಬಿಂದು ನಾಯರ, ಅಪ್ಪಣ್ಣ ಪೂಜಾರ, ಶ್ರೀ ಪ್ರಸಾದ, ಎನ್.ಎಸ್. ಪತ್ತಾರ, ಶ್ರೀ ರಾಜು ತೇರದಾಳ, ಶ್ರೀಮತಿ ಆಶಾರಾಣಿ ನಡೋಣಿ,

ಶ್ರೀ ಎಸ್.ವ್ಹಿ. ಗುಂಜಾಳ ಶ್ರೀಮತಿ ಪ್ರೇಮಾ ಹೇರಮಠ, ಶ್ರೀ ಶಶಿಧರ ಲೋಹಾರ, ಶ್ರೀಧರ ಚವ್ಹಾಣ, ಶ್ರೀ ವಿಲ್ಸನ ಸೊನಘರ, ಶ್ರೀ ಅರೋನ ಅನಿಲ ಪ್ರಕಾಶ, ಶ್ರೀ ಸುರೇಶ ಡಿ.ಎಚ್, ಶ್ರೀ ರಮೇಶ ತೇರದಾಳ, ಮುಂತಾದವರು.

ರಾಜ್ಯ ರಾಷ್ಟ್ರಮಟ್ಟದ ಪ್ರಶಸ್ತಿ ಪಡೆದವರು : ಶ್ರೀ ಎಂ.ಎ. ಚೆಟ್ಟಿಯವರು ವೆಂಕಟಪ್ಪ ಪ್ರಶಸ್ತಿ, ಮಹದೇವ ಕವಿಶೇಟ್ಟಿ ರಾಜ್ಯ ಪ್ರಶಸ್ತಿ, ಶ್ರೀ ವ್ಹಿ.ಟಿ. ಕಾಳೆ, ನಾಡೋಜ ಗೌರವ ಪ್ರಶಸ್ತಿ, ಬಿ.ಎಲ್. ಚವ್ಹಾಣ, ರಾಷ್ಟ್ರಮಟ್ಟದ ಪ್ರಶಸ್ತಿ ಶ್ರೀ ಸುರೇಶ ಡಿ.ಎಚ್, ಶ್ರೀ ವಿಜಯ ಕಿರೇಸೂರ, ಕ್ಯಾಮ್ಲಿನ್ ಪ್ರಶಸ್ತಿ, ಪಡೆದಿದ್ದಾರೆ. ಶ್ರೀ ಮಹೇಶ ಹೊಸಳ್ಳಿಮಠ, ಶ್ರೀ ಪ್ರವೀಣ ಸಂಗಳ, ಶ್ರೀಮತಿ ಸವಿತಾ ಪಾಟೀಲ ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. ಶ್ರೀ ಎ.ಬಿ. ಉಪ್ಪಾರ ರಾಜ್ಯಮಟ್ಟದ ಪ್ರಶಸ್ತಿ ಪಡೆದಿದ್ದಾರೆ.

■■■

ಅಧ್ಯಾಯ – ಏಳು

ಗದಗ ಜಿಲ್ಲೆಯ ಸಂಗ್ರಾಹಾಲಯದಲ್ಲಿ ಸಂಗ್ರಹಗೊಂಡ ಕಲಾಕೃತಿಗಳು



ಪ್ರಾಚೀನ ಕಾಲದಿಂದಲು ನಾವು ನೋಡಿದಾಗ ಚಿತ್ರಕಲಾವಿದರಿಗೆ ಪ್ರೋತ್ಸಾಹ ನಿಡುತ್ತ ಬಂದಿರುವು ರಾಜ ಮಹಾರಾಜರು ನಂತರ ರಾಜ್ಯದ ಅನೇಕ ಕಡೆ ನೋಡಿದಾಗ ಕಲಾವಿದ ಕಲಾಕೃತಿಗಳು ಸಂಗ್ರಹಿಸುತ್ತ ಕಲಾವಿದರಿಗೆ ಪೋತ್ಸಾಹ ನೀಡುತ್ತಿರುವುದು ಮಠಮಾನ್ಯಗಳು. ಅನೇಕ ಮಠಗಳಲ್ಲಿ ಸಾದುಸತ್ ಪುರುಷರ ಕಲಾಕೃತಿಗಳನ್ನು ಸಂಗ್ರಹಿಸಿಕೊಳ್ಳುತ್ತ ಬಂದಿದ್ದು ಕಂಡು ಬರುತ್ತದೆ ತದನಂತರದಲ್ಲಿ ಚಿತ್ರಕಲಾ ವಿದ್ಯಾಲಯಗಳಲ್ಲಿ ಸಂಗ್ರಹಗೊಂಡವು ಅನೇಕ ಹಿರಿಯ ಕಿರಿಯ ಕಲಾವಿದರ ಕಲಾಕೃತಿಗಳು ಸಂಗ್ರಹಗೊಂಡಿದ್ದು ನಮಗೆ ತಿಳಿದುಬರುತ್ತದೆ.[೧]

ರಾಜ್ಯದಲ್ಲಿ ಅನೇಕ ಗ್ಯಾಲರಿಗಳು ಹುಟ್ಟಿಕೊಂಡು ಅನೇಕ ಕಲಾವಿದ ಕಲಾಕೃತಿಗಳನ್ನು ಸಂಗ್ರಹಿಸಿ ಪ್ರದರ್ಶನಿಡುತ್ತಾ ಬಂದಿವೆ. ವೆಂಕಟಪ್ಪ ಆಟಗ್ಯಾಲರಿ, ಚಿತ್ರಕಲಾ ಪರಿಷತ್ ಗುಲಬರ್ಗಾ, ಧಾರವಾಡ ಆರ್ಟ್‌ಗ್ಯಾಲರಿ ಮುಂತಾದವುಗಳು ಅನೇಕ ಹಿರಿಯ ಕಿರಿಯ ಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿ ಪ್ರದರ್ಶನ ಗೊಳಿಸಿರುವುದು ಕಂಡುಬರುತ್ತದೆ. ಅದರಂತೆ ರಾಜ್ಯದ ಪ್ರಾಚ್ಯವಸ್ತು ಸಂಗ್ರಹಾಲಯಗಳಲ್ಲಿ ಅನೇಕ ಹಿರಿಯ ಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿರುವು ಕಂಡುಬರುತ್ತದೆ ಅದರಂತೆ ಪ್ರಾಚ್ಯವಸ್ತು ಸಂಗ್ರಾಹಾಲಯ ಗದಗ ಇದು ಗದಗ ಪರಿಸರದಲ್ಲಿ ದೊರೆತ ಶಿಲ್ಪಗಳು ಸಂಗ್ರಹಿಸುತ್ತಾ ಅನೇಕ ದೇವತಾ ವಿಗ್ರಹಗಳು ಈ ಪ್ರಾಚ್ಯವಸ್ತು ಸಂಗ್ರಾಹಾಲಯದಲ್ಲಿ ಪ್ರದರ್ಶಿಸಲಾಗಿದೆ. ಜೈನ ಧರ್ಮವು ಗದಗ ಪ್ರಾಂತದಲ್ಲಿ ಬಹಳ ಪ್ರಾಮುಖ್ಯತೆ ಪಡೆದಿದೆ ಇಲ್ಲಿ ದಾನ ಚಿಂತಾಮಣಿ ಅತ್ತಿಮಬ್ಬೆ ಜೈನ ಬಸದಿ ಕಟ್ಟಿಸಲು ನೀಡಿದ ಧಾನ ಶಾಸನ ಮತ್ತು ಅನೇಕ ಶಿಲ್ಪಗಳನ್ನು ಈ ವಸ್ತುಸಂಗ್ರಾಹಾಲಯದಲ್ಲಿ ಪ್ರದರ್ಶಿಸಲಾಗಿದೆ. ರಾಜ್ಯ ಅನೇಕ ಹಿರಿಯ ಕಿರಿಯ ಕಲಾವಿದರ ಕಲಾಕೃತಿಗಳು ಪ್ರಾಚ್ಯವಸ್ತು ಸಂಗ್ರಾಹಾಲಯದಲ್ಲಿ ಸಂಗ್ರಹಗೊಂಡು ಪ್ರದರ್ಶನ ಮಾಡಲಾಗಿದೆ.[೨] ಅವುಗಳು ಸಾರ್ವಜನಿಕರಿಗೆ ನೊಡಲು ಬಹಳ ಉಪಯುಕ್ತವಾಗಿವೆ. ಗದಗ ಜಿಲ್ಲೆಯ ಪ್ರಾಚ್ಯವಸ್ತು ಸಂಗ್ರಾಹಾಲಯವು ಈ ಕಲಾಕೃತಿಗಳನ್ನು ಸಂಗ್ರಹ ಮಾಡುವುದರ ಮೂಲಕ ತಮ್ಮದೆಯಾದ ಕೊಡುಗೆ ನೀಡಿವೆ. ಅದರಂತೆ

---

೧. ಶ್ರೀ ಅ.ದ. ಕಟ್ಟಿಮನಿ ಸಂದರ್ಶನ ದಿನಾಂಕ : ೨೪.೧೦.೨೦೧೦

೨. ಪ್ರಾ. ಅಶೋಕ ಅಕ್ಕಿ ಸಂದರ್ಶನ ದಿನಾಂಕ : ೨೮.೧೦.೨೦೧೦

ಜಿಲ್ಲೆ ಪ್ರಸಿದ್ಧ ಮಠಗಳಲ್ಲಿ ಸೌಹಾರ್ದತೆಗೆ ಪ್ರಸಿದ್ಧಿ ಪಡೆದ ಶ್ರೀಮಠ ತೋಂಟದ ಸಿದ್ಧಲಿಂಗ ಸ್ವಾಮಿಗಳವರ ಮಠವು ಅನೇಕ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಕೆಲಸ ಮಾಡುತ್ತ ಅನೇಕ ಕಲಾವಿದರಿಗೆ ಪ್ರೋತ್ಸಾಹಿಸುವದಕ್ಕಾಗಿ ಅನೇಕ ಗ್ರಂಥಗಳನ್ನು ಪ್ರಕಟಗೊಳಿಸಿವೆ. ಅದರಂತೆ ಜಿಲ್ಲೆಯ ಅನೇಕ ಹಿರಿಯ ಕಿರಿಯ ಕಲಾವಿದರ ಕಲಾಕೃತಿಗಳು ಸಂಗ್ರಹಿಸಿ ಪ್ರದರ್ಶನಗೊಳಸಿದ್ದಾರೆ. ಶ್ರೀ ಮಠದ ದಾಸೋಹದ ಮನೆಯಲ್ಲಿ ಈ ಕಲಾಕೃತಿಗಳು ಪ್ರದರ್ಶನಗೊಂಡಿವೆ.[೩] ಸಾರ್ವಜನಿಕರಿಗೆ ನೋಡಲು ಸಿಗುತ್ತವೆ. ಅದರಂತೆ ಗದಗ ಜಿಲ್ಲೆಯ ಶ್ರೀ ಬಳಗಾನೂರ ಮಠದಲ್ಲಿ ಅನೇಕ ಕಲಾವಿದರ ಸಾದು ಸತ್‌ಪುರುಷರ ಕಲಾಕೃತಿಗಳು ಸಂಗ್ರಹಗೊಂಡಿವೆ. ಶ್ರೀ ವಿರೇಶ್ವರ ಪುಣ್ಯಾಶ್ರಮ, ಶ್ರೀ ಅನ್ನದಾನೇಶ್ವರ ಮಠಗಳಲ್ಲಿ ಕೆಲವು ಕಲಾಕೃತಿಗಳು ಸಂಗ್ರಹಗೊಂಡಿದೆ.[೪]

ಜಿಲ್ಲೆಯ ಚಿತ್ರಕಲಾ ವಿದ್ಯಾಲಯಗಳಿಂದ ವಿಜಯ ಕಲಾಮಂದಿರ ಇದು ಅನೇಕ ಹಿರಿಯ ಕಿರಿಯ ಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿದೆ ಅದರಂತೆ ವಿದ್ಯಾದಾನ ಸಮಿತಿಯ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯವು ಅನೇಕ ಹಿರಿಯ ಕಿರಿಯಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿ ಮುಂದಿನ ಪಿಳಿಗೆಗಳಿಗೆ ಉಪಯುಕ್ತವಾಗುವಂತೆ ಸಾರ್ವಜನಿಕರಿಗೆ ಪ್ರದರ್ಶನ ನೀಡುತ್ತ ಬಹುದೊಡ್ಡ ಕಲೆಗಳನ್ನು ನೀಡಿದೆ.[೫] ಗದಗ ಜಿಲ್ಲೆಯ ಕಲಾಸಂಗ್ರಹಾಲಯದಲ್ಲಿ ಸಂಗ್ರಹವಾದ ಕಲಾಕೃತಿಗಳ ಕುರಿತು ಪ್ರಸುತ್ತ ಅಧ್ಯಯನದಲ್ಲಿ ಅಧ್ಯಯನ ಮಾಡಿ ದಾಖಲೆ ಮಾಡುವ ಪ್ರಯತ್ನ ಮಾಡಲಾಗಿದೆ. ಸಂಗ್ರಗೊಂಡ ಕಲಾಕೃತಿಯ ಸ್ಥಳಗಳನ್ನು ಈ ಕೆಳಗಿನಂತೆ ವಿಂಗಡಿಸಿ, ಅಲ್ಲಿ ಸಂಗ್ರಹವಾದ ಕಲಾಕೃತಿಗಳ ಕುರಿತು ಚರ್ಚಿಸಲಾಗಿದೆ.

೧. ಪ್ರಾಚ್ಯವಸ್ತುಸಂಗ್ರಹಾಲಯ ಗದಗ
೨. ಜಗದ್ಗುರು ತೋಂಟದಾರ್ಯಸಿದ್ಧಲಿಂಗೇಶ್ವರ ಮಠ, ಗದಗ
೩. ಚಿಕ್ಕೆನಕೊಪ್ಪ ಶ್ರೀ ಶಾರಿತವೀರ ಶರಣರ ಮಠ, ಬಳಗಾನೂರ
೪. ವಿಜಯಕಲಾಮಂದಿರ ಗದಗ
೫. ವ್ಹಿ.ಡಿ.ಎಸ್. ಜೆ.ಎನ್ ಚಿತ್ರಕಲಾ ಮಹಾವಿದ್ಯಾಲಯ, ಗದಗ

೧. ಪ್ರಾಚ್ಯ ವಸ್ತು ಸಂಗ್ರಾಹಾಲಯದಲ್ಲಿ ಸಂಗ್ರಹಗೊಂಡ ಕಲಾ ಕೃತಿಗಳು :

ಚಿತ್ರ ೧ : ಕಿಟಕಿ : ಈ ಕಲಾಕೃತಿಯನ್ನು ರಾಜ್ಯದ ಹಿರಿಯ ಖ್ಯಾತಕಲಾವಿದ ನಾಡೋಜ ಜೆಎಸ್ ಖಂಡೇರಾವ್‌ರವರು ತೈಲ ವರ್ಣದಿಂದ ರಚನೆ ಮಾಡಿದ್ದಾರೆ. ಕಲಾಕೃತಿಯ $2\times2\frac{1}{2}$ ಅಳತೆಯದಾಗಿದೆ. ಶ್ರೀ ಖಂಡೇರಾವ್‌ರವರು ತಂಪುವರ್ಣದಿಂದ ಕಿಟಕಿ ಎಂಬ ವಿಷಯವನ್ನು ತೆಗೆದುಕೊಂಡು ಜಾಮಿತಿಕ ಫಾರ್ಮಗಳನ್ನು ಬಳಸಿಕೊಂಡು ಕಲಾಕೃತಿಯನ್ನು ತಮ್ಮದೆ ಆದ ಶೈಲಿಯಲ್ಲಿ

---

೩. ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ ಸಂದರ್ಶನ ದಿನಾಂಕ : ೨೫.೦೯.೨೦೧೦
೪. ಶ್ರೀ ಎನ್.ಎಂ. ನಿಂಬನಗೌಡರ ಸಂದರ್ಶನ ದಿನಾಂಕ : ೨೮.೧೧.೨೦೧೦
೫. ಶ್ರೀ ಬಿ.ಎಫ್. ಬಡಿಗೇರ ಸಂದರ್ಶನ ದಿನಾಂಕ : ೦೬.೧೨.೨೦೧೦

ರಚನೆಮಾಡಿದ್ದಾರೆ. ಕಲಾಕೃತಿಯಲ್ಲಿ ನೆರಳು ಬೆಳಕಿಗೆ ಹೆಚ್ಚಿನ ಪ್ರಾದಾನ್ಯತೆ ಕೊಟ್ಟಿದ್ದಾರೆ. ಕ್ಯಾನವಾಸದಲ್ಲಿ ಕಲಾಕೃತಿಯು ಸ್ಥಳಾವಕಾಶವನ್ನು ಉತ್ತಮ ರೀತಿಯಿಂದ ಬಳಸಿಕೊಂಡಿದ್ದಾರೆ. ವರ್ಣಗಳ ಸಂಯೋಜನೆಯನ್ನು ಉತ್ತಮ ರೀತಿಯಿಂದ ಬಳಸಿಕೊಂಡು ಉತ್ತಮವಾದ ಕಲಾಕೃತಿಯನ್ನು ರಚಿಸಿದ್ದು ಕಂಡು ಬರುತ್ತದೆ. ಈ ಕಲಾಕೃತಿಯ ಸಾರ್ವಜನಿಕರಿಗೆ ಮೆಚ್ಚುಗೆ ಪಡೆದುಕೊಂಡ ಕಲಾಕೃತಿಯಾಗಿದೆ.

ಚಿತ್ರ : ೨: ನೆನಪು : ಈ ಕಲಾ ಕೃತಿಯು ಬಿಜಾಪುರದ ಕಲಾವಿದ ಪ್ರಾಚಾರ್ಯ ಪಿ.ಎಸ್. ಕಡೆಮನಿಯವರು ರಚಿಸಿದ ತೈಲವರ್ಣದ ಕಲಾಕೃತಿಯಾಗಿದೆ ಅಳತೆಯ ಈ ಕಲಾಕೃತಿಯು ಸೌಮ್ಯವರ್ಣದ್ದಾಗಿದ್ದು ಕಡಿಮೆ ವರ್ಣದಿಂದ ಪೂರ್ಣಗೊಳಿಸಿದ ಉತ್ತಮ ಕಲಾಕೃತಿಯಾಗಿದೆ. ಒಬ್ಬ ಮಹಿಳೆಯ ನಗ್ನವಾಗಿ ಮಲಗಿದ್ದು ತಮ್ಮ ಪ್ರೇಮಿ ಯೊಂದಿಗೆ ಇರಬಯಸುವ ನೆನಪು ಮಡುತ್ತಿರುವಂತೆ ಕಡೆಮನಿಯವ ಉತ್ತಮವಾದ ವರ್ಣಗಳನ್ನು ಬಳಸಿಕೊಂಡು ಕಲಾಕೃತಿಯನ್ನು ರಚಿಸಿದ್ದಾರೆ. ಬಣ್ಣಗಳಿಂದ ಕಲಾಕೃತಿಯ ಸ್ಥಳಾವಕಾಶವನ್ನು ಸಮತೋಲಾಗಿ ನೊಡಿಕೊಂಡಿದ್ದಾರೆ. ಹಿನ್ನೆಲೆಯಾಗಿ ನೆನಪು ಎಂಬ ಸಾಂಕೆತಿಕವಾಗಿ ಇನ್ನೊಂದು ಚಿತ್ರರಚಿಸಿದ್ದು ಕಂಡು ಬರುತ್ತದೆ. ಒಟ್ಟಾರೆ ಈ ಕಲಾಕೃತಿಯು ಸೌಮ್ಯವರ್ಣದ ಉತ್ತಮ ಕಲಾಕೃತಿಯಾಗಿದೆ.

ಚಿತ್ರ : ೩: ಜೀವನ : ಈ ಕಲಾಕೃತಿಯು ಧಾರವಾಡದ ಕಲಾವಿದೆ ಶ್ರೀಮತಿ ರೇಣುಕಾ ಮಾರ್ಕಖಂಡೆಯವರು ರಚಿಸಿದ ಕಲಾಕೃತಿಯಾಗಿದೆ. ಕಲಾಕೃತಿಯು 18'X24" ಅಳತೆಯದಾಗಿದೆ. ತೈಲವರ್ಣದಿಂದ ರಚನೆಗೊಂಡ ಈ ಕಲಾಕೃತಿಯನ್ನು ಮಾರ್ಕಖಂಡೆಯವರು ಒಂದು ಗುಂಡು ಹೆಣ್ಣಿನ ಸಂಬಂಧ ಯಾವ ರೀತಿಯಲ್ಲಿ ಇರಬೇಕು ಎಂಬುದರನ್ನು ಕಲಾಕೃತಿಯಲ್ಲಿ ಒಂದು ಗುಂಡು ಒಂದು ಹೆಣ್ಣಿನ ಚಿತ್ರವನ್ನು ಮಲಗಿಸಿದ್ದಾಳೆ ಹಿನ್ನಲೆಯಾಗಿ ಎರಡು ಜೋಡಿಗಳು ಆನಂದದಿಂದ ಬರುತ್ತಿರುವಂತೆ ಕತ್ತಲಿಂದ ಬೆಳಕಿನ ಕಡೆಗೆ ಎಂಬಂತೆ ಹಿನ್ನಲೆ ಕಪ್ಪು ಬಿಳಿವರ್ಣವನ್ನು ಬಳಸಿ ಉತ್ತಮವಾಗಿ ರಚಿಸಿದ್ದಾರೆ. ಇನ್ನೊಂದು ಕಡೆ ಇಬ್ಬರು ನಿಂತಿರುವಂತೆ ಮೂರು ಕಡೆ ಬೇರೆ ಬೇರೆ ಬಣ್ಣಗಳಿಂದ ಕಲಾಕೃತಿಯ ಸಮತೋಲತೆಯನ್ನು ಮಾಡಿದ್ದಾರೆ. ತಮ್ಮದೆ ಯಾದ ಶೈಲಿಯಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ.

ಚಿತ್ರ : ೪ : ಚರ್ಚೆ : ಕಲಾಕೃತಿಯನ್ನು ಗುಲಬರ್ಗಾದ ಕಲಾವಿದ ಶ್ರೀ ಎಸ್.ಎನ್. ಬಿರಾದರವರು ತೈಲವರ್ಣದಿಂದ ರಚಿಸಿದ್ದಾರೆ. ಈ ಕಲಾಕೃತಿಯು ಅಳತೆಯದಾಗಿದೆ. ತಮ್ಮದೆಯಾದ ಶೈಲಿಯಲ್ಲಿ ಬಿರಾದರರವರು ಈ ಕಲಾಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಇಬ್ಬರು ಲಂಬಾಣಿ ಮಹಿಳೆಯರು ತಮ್ಮ ಸಾಂಪ್ರದಾಯಿಕ ಉಡುಗೆ ತೊಡುಗೆಗಳನ್ನು ಧರಿಸಿದ್ದು ಅತ್ಯಾಕರ್ಷಕವಾಗಿದೆ. ಯಾವುದೊ ಒಂದು ವಿಷಯವನ್ನು ಚರ್ಚಿಸುತ್ತಿರುವಂತೆ ಬಾಸವಾಗುತ್ತದೆ. ಮಹಿಳೆಯ ಕಪ್ಪು ಮತ್ತು ಬಿಳಿವರ್ಣದ ಮೈಬಣ್ಣ ಬಳಸಿ ಹಿಂದೆ ಮುಂದೆ ಕಾಣುವಂತೆ ವರ್ಣಗಳ ಮೂಲಕ ಕಲಾಕೃತಿಯನ್ನು ರಚಿಸಿದ್ದಾರೆ. ಒಂದು ಮನೆಯ ಹೊರಭಾವಣಿಯಲ್ಲಿ ಕುಳಿತು ಚರ್ಚಿಸುತ್ತಿರುವ ಈ ಮಹಿಳೆಯ ಕಲಾಕೃತಿಯು ನೊಡಲಿಕ್ಕೆ ಬಹಳಷ್ಟು ಆಕರ್ಷಕವಾಗಿದೆ. ಮನೆಯ ಒಳಗೆ ಮಣ್ಣಿನ ಮಡಿಕೆಯ ಚಿತ್ರವನ್ನು ಕಲಾವಿದ

ಸುಂದರವಾಗಿ ರಚಿಸಿದ್ದಾರೆ. ಈ ಕಲಾಕೃತಿಯ ನೆರಳು ಬೆಳಕಿನೊಂದಿಗೆ ರಚಿತವಾದ ಉತ್ತಮ ಕಲಾಕೃತಿಯಾಗಿದೆ.

ಚಿತ್ರ ೫. ಬಾತಿಂಗ್ : ಈ ಕಲಾಕೃತಿಯು ಯುವ ಕಲಾವಿದರಾದ ಶ್ರೀ ಎನ್.ಎಸ್.ಪತ್ತಾರರವರು ರಚಿಸಿದ ಅಳತೆಯ ತೈಲವರ್ಣದ ಕಲಾಕೃತಿಯಾಗಿದೆ. ಕಲಾವಿದ ಪತ್ತಾರರವರು ಸ್ವಿಮಿಂಗ್ ಘುಲದಲ್ಲಿ ಸ್ನಾನಮಾಡುತ್ತಿರುವ ಇಬ್ಬರು ಮಹಿಳೆಯರ ಕಲಾಕೃತಿಯನ್ನು ರಚಿಸಿದ್ದಾರೆ ಅರೆನಗ್ನವಾಗಿ ಸ್ನಾನಮಾಡುತ್ತಿರುವುದು ನೀರಲ್ಲಿ ಮಿನುಗಳು ಆಟವಾಡುತ್ತಿರುವು ಸುಂದರವಾಗಿದೆ. ಹಿನ್ನಲೆಯಾಗಿ ಗಿಡಗಳು ಮತ್ತು ಮನೆಗಳ ಚಿತ್ರವನ್ನು ಪತ್ತಾರರವರು ಪ್ರಖರವರ್ಣದಿಂದ ರಚನೆಮಾಡಿದ್ದಾರೆ. ನೀರಿನಲ್ಲಿ ಈಜುತ್ತಿರುವ ಮಹಿಳೆಯು ಕಲಾಕೃತಿಯಲ್ಲಿ ಆಕರ್ಷಕವಾಗಿ ಮುಡಿಬಂದಿದೆ. ಅವಳ ಈಜುತ್ತಿರುವುದನ್ನು ಇನ್ನೊಂದು ಮಹಿಳೆ ನೊಡುತ್ತಿರುವ ಸುಂದರವಾದ ದೃಶ್ಯವನ್ನು ಬಣ್ಣ, ರೇಖೆಗಳ ಮೂಲಕ ಪತ್ತಾರರವರು ಉತ್ತಮ ಸೃಜನಾತ್ಮಕ ಕಲಾಕೃತಿಯನ್ನು ರಚಿಸಿದ್ದಾರೆ.

ಚಿತ್ರ ೬. ಹೊರಿಗಳು : ಈ ಕಲಾಕೃತಿಯು ಪೊಸ್ಟರ ಮಾಧ್ಯಮದ್ದಾಗಿದ್ದು 18'X24" ಅಳತೆಯಾಗಿದೆ. ಕಲಾವಿದ ಸಾಂಪ್ರದಾಯಿಕ ಶೈಲಿಯಲ್ಲಿ ರಚನೆಗೊಂಡ ಈ ಕಲಾಕೃತಿಯು ಕಾಡಿನಲ್ಲಿ ಸಂತೋಷದಿಂದ ಒಡಾಡುತ್ತಿರುವ ಹೊರಿಗಳ ಚಿತ್ರವನ್ನು ಬಿಳಿವರ್ಣದಿಂದ ವಿವಿಧ ಭಂಗಿಯಲ್ಲಿರುವ ಹೊರಿಗಳ ಚಿತ್ರವನ್ನು ಕಲಾವಿದ ನೈಜವಾಗಿ ರಚಿಸಿದ್ದಾನೆ ಸುತ್ತಲು ಗಿಡಗಳ ಚಿತ್ರವನ್ನು ಸುಂದರವಾಗಿ ಬಿಂಬಿಸಿದ್ದಾರೆ. ಹೊರಿಗಳಿಗೆ ನವಿಲುಗಳು ಆನಂದದಿಂದನೊಡುತ್ತಿವೆ,[1] ಇನ್ನೊಂದು ಕಡೆ ಇಬ್ಬರು ಗೆಳತಿಯರು ನಿಂತು ನೋಡುತ್ತಿದ್ದಾರೆ. ಬಹುಶಃ ಈ ಹೊರಿಗಳಿಗೆ ಮೆಯಿಸಲು ಬಂದಿರುವ ಮಹಿಳೆಯವರು ಇರಬಹುದು. ಸಾಂಪ್ರದಾಯಿಕ ಶೈಲಿಯಲ್ಲಿ ಈ ಕಲಾಕೃತಿಯನ್ನು ರಚಿಸಿದ್ದು ವರ್ಣಗಳ ಸಮತೋಲನವನ್ನು ಕಲಾಕೃತಿಯಲ್ಲಿ ಕಂಡು ಬರುತ್ತದೆ ಗಿಡಗಳ ರಚನಶೈಲಿ ನವಿಲಿನ ರಚನಾ ಶೈಲಿಯು ಸಾಂಪ್ರದಾಯಕ ಶೈಲಿಯಂತೆ ಕಂಡುಬರುತ್ತದೆ. ಕಲಾವಿದನ ಬಳಸಿದ ವರ್ಣ ರೇಖೆಗಳು ಉತ್ತಮರೀತಿಯಿಂದ ಬಳಸಿ ಉತ್ತಮ ಕಲಾಕೃತಿಯನ್ನು ರಚಿಸಿದ್ದಾರೆ.

ಚಿತ್ರ ೭. ಫಿಲಿಂಗ್ : ಈ ಕಲಾಕೃತಿಯು 24'X18" ಅಳತೆಯದಾಗಿದ್ದು, ಪೆನ್ನ ಆ್ಯಂಡ್ ಇಂಕ್ ಮಾಧ್ಯಮದಿಂದ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಒಬ್ಬವ್ಯಕ್ತಿ ತನ್ನ ಪ್ರೀತಿಯ ನೆನಪಲ್ಲಿ ಅಥವಾ ಪ್ರೀತಿಕಳೆದುಕೊಂಡು ಬೆಸರಪಟ್ಟು ಕೆಳಮುಖ ಹಾಕಿಕೊಂಡ ಚಿತ್ರ ಇದಾಗಿದೆ. ಒಂದು ಟೇಬಲ ಮೇಲೆ ಪುಸ್ತಕಗಳನ್ನು ಇಟ್ಟಿದ್ದಾರೆ. ಒಂದು ಮೂಲೇಯಲ್ಲಿ ಮಹಿಳೆಯ ಆ ನಗ್ನ ಶಿಲ್ಪವನ್ನು ಇಟ್ಟಿದ್ದಾರೆ. ಹಿನ್ನೆಲೆಯಾಗಿ ಬಾಳೆ ಹಣ್ಣಿನ ಗಿಡವನ್ನು ಸುಂದರವಾಗಿ ಮತ್ತು ಕಲಾ ಕೃತಿಯನ್ನು ನೆರಳು ಬೆಳಕನ್ನು ಸುಂದರವಾಗಿ ತೊರಿಸಿದ್ದಾರೆ. ಈ ಕಲಾಕೃತಿಯಲ್ಲಿ ಮಸ್ತಕ, ಅರೆನಗ್ನ ಶಿಲ್ಪಗಳನ್ನು ನೊಡಿದರೆ, ಪ್ರೇಮ ಭಗ್ನಗೊಂಡು ಬೆಸರಗೊಂಡು ಕುಳಿತಿರುವಂತೆ ಕಲಾವಿದನು ಪೆನ್ನು ಮತ್ತು ಇಂಕ್, ಮಾಧ್ಯಮದಿಂದ ಕಲಾಕೃತಿಯ ಹಿಂದೆ ಮುಂದೆ ಕಲ್ಪನೆ ಬರುವಂತೆ ಸುಂದರವಾಗಿ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ.

ಚಿತ್ರ ೮. ಶ್ರೀ ಗುರು ರಾಘವೇಂದ್ರ : ಈ ಕಲಾಕೃತಿಯನ್ನು ಕಲಾವಿದ ಎನ್.ಎಸ್. ಸಿನರವರು ಅಳತೆಯಲ್ಲಿ ನೈಜ ಶೈಲಿಯಲ್ಲಿ ತೈಲವರ್ಣದಿಂದ ಶ್ರೀ ಗುರುರಾಘವೇಂದ್ರರವರ ರಥದ ಮೇಲೆ ಕುಳಿತು ದಶ ಕುದುರೆಗಳು ರಥವನ್ನು ಎಳೆಯುತ್ತಿರುವುದು ಆಕರ್ಷಕವಾಗಿದೆ. ರಾಘವೇಂದ್ರ ರಥದ ಹಿಂದೆ ವಿಷ್ಣು ತಮ್ಮ ಹೆಂಡತಿಯರಾದ ಲಕ್ಷ್ಮೀ ಮತ್ತು ಪದ್ಮಾವತಿಯ ರೊಡನೆ ನಿಂತಿರುವುದನ್ನು ಕಲಾವಿದ ನೈಜವಾಗಿ ಮತ್ತು ಪ್ರಮಾಣ ಬದ್ದವಾಗಿ ರಚನೆ ಮಾಡಿದ್ದಾರೆ. ಹಿನ್ನಲೆಯಾಗಿ ಕಾಡಿನ ದೃಶ್ಯ ಅದರಲ್ಲಿ ಜಿಂಕೆ, ನವಿಲುಗಳು ನೊಡುತ್ತಿವೆ. ವಿಷ್ಣು ಅವತಾರ ತಾಳಿರುವ ರಾಘವೇಂದ್ರರ ಈ ಕಲಾಕೃತಿಯನ್ನು ಕಲಾವಿದ ಸಿಗ್ಗನರವರು ನೈಜ ಶೈಲಿಯಲ್ಲಿ ಆಕರ್ಷಕವಾಗಿ ಕಾಣುವಂತೆ ರಚಿಸಿದ್ದಾರೆ. ಈ ಚಿತ್ರದಲ್ಲಿ ಪ್ರತಿಯೊಂದು ಕುದುರೆಯು ಬೇರೆ ಬೇರೆ ಭಾವನೆಗಳಿಂದ ಕುಡಿರುವುದು ಆಕರ್ಷಕವಾಗಿದೆ. ನೈಜತೆಯನ್ನು ಮಿರಿಸುವ ರೀತಿಯಲ್ಲಿ ಈ ಕಲಾಕೃತಿಯನ್ನು ರಚಿಸಿದ್ದಾರೆ. ಸೂಕ್ಷ್ಮ ಮತ್ತು ಸುಂದರ ವಿನ್ಯಾಸದಿಂದ ರಥವನ್ನು ರಚಿಸಿದ್ದಾರೆ. ರಥದ ಗೋಪುರ ಕಂಬಗಳು ಚಿತ್ರದ ಆಕರ್ಷಣೆಯವಾಗಿದೆ.

ಚಿತ್ರ ೯. ವ್ಹಿಯಿಟು : ಈ ಕಲಾಕೃತಿಯನ್ನು ರಮೇಶ ಬಾಳಿಕಾಯಿಯವರು ಪೇಪರ ಮೇಲೆ ರೇಖಾಚಿತ್ರವನ್ನು ರಚಿಸಿದ ಕೃತಿಯಾಗಿದೆ ಈ ಕಲಾಕೃತಿಯೂ 10'X12" ಅಳತೆಯಲ್ಲಿದೆ ನಾವಿಬ್ಬರು ಎಂಬ ಶಿರ್ಶಕೆಯಲ್ಲಿ ಪೇಪರ ಮೇಲೆ ಪೆನ್ನಿನಿಂದ ರೇಖಾಚಿತ್ರಮಾಡಿ ನಂತರ ಅದಕ್ಕೆ ಮೇಣಬತ್ತಿಯಿಂದ ಅಲ್ಲಲ್ಲಿ ಸುಟ್ಟಿರುವುದು ಕಂಡುಬರುತ್ತದೆ. ಇದರಿಂದ ಕಲಾಕೃತಿಗೆ ಹೊಸರೂಪಕೊಂಡಿದ್ದಾರೆ. ಪೇಪರಿಗೆ ತಕ್ಕಂತೆ ರೇಖಾ ಚಿತ್ರರಚಿಸಿ ಕಂದು ಬಣ್ಣದಿಂದ ರಚಿಸಿರುವ ಕಲಾಕೃತಿಯಂತೆ ಇದು ಕಾಣುತ್ತವೆ. ಕಲಾವಿದನ ಕೈಚಳಕವನ್ನು ಅತ್ಯಂತ ಸಮರ್ಪಕವಾಗಿ ರೇಖೆಗಳ ರಚಿಸಿ, ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಹೆಣ್ಣು ಗಂಡಿನ ರೇಖಾ ಚಿತ್ರವನ್ನು ಬಾಳಿಕಾಯಿಯವರು ಸೃಜನಾತ್ಮಕ ಶೈಲಿಯಿಂದಾಗಿ ರಚಿಸಿದ್ದು ಕಂಡುಬರುತ್ತವೆ.

ಚಿತ್ರ ೧೦. ಅನ್‌ಟೈಟಲ್ : ಈ ಕಲಾಕೃತಿಯು ಅಕ್ರಾಲಿಕ ಮಾಧ್ಯಮದ್ದಾಗಿದ್ದು ಇಬ್ಬರ ಯುವತಿಯರು ತಮ್ಮ ಹಳೆಯ ನೆನಪನ್ನು ನೆನೆಸುತ್ತ ಬಾಲ್ಯದ ಜೀವನದ ಕುರಿತು ಚರ್ಚೆಸುತ್ತಿದ್ದಾರೆ. ನೀಲವರ್ಣದಿಂದ ಕಲಾಕೃತಿಯನ್ನು ಅಳತೆಯಲ್ಲಿ ರಚಿಸಿದ್ದಾರೆ. ಕಲಾವಿದ ಯಾವುದೆ ಪ್ರಖರವರ್ಣ ಬಳಸಿದ ಸೌಮ್ಯವರ್ಣದಿಂದ ರಚಿಸಿದ್ದಾರೆ. ಇಬ್ಬರುಗೆಳತಿಯರ ಚಿತ್ರದಲ್ಲಿ ಒಂದು ಚಿತ್ರಕ್ಕೆ ಬಳೆಗಳನ್ನು ಧರಿಸಿದ್ದಾರೆ ಇನ್ನೊಂದು ಚಿತ್ರಕ್ಕೆ ಬಟ್ಟೆ ಹಾಕದೆ ಅರೇನಗ್ನವಾಗಿ ಚಿತ್ರಿಸಿದ್ದಾರೆ. ತಲೆ ಮೇಲೆ ಬಿಳಿ ವಸ್ತ್ರವನ್ನು ಹಾಕಿದ್ದಾರೆ. ಕಲಾ ಕೃತಿಯ ಕೆಳಭಾಗದಲ್ಲಿ ಒಂದು ಯುವತಿಯು ಮಲಗಿಕೊಂಡು ಯಾವುದೋ ಕನಸನ್ನು ಕಾಣುತ್ತಿದ್ದಾಳೆ. ಮೇಲ್ಭಾಗದಲ್ಲಿ ಡೋಣಿಯಲ್ಲಿ ಆಟವಾಡುತ್ತಿರುವಂತೆ ರಚಿಸಿದ್ದಾರೆ. ಇನ್ನೊಂದು ಕಡೆ ಕೆಳ ಮೂಖ ಮಾಡಿರುವ ಚಿತ್ರವನ್ನು ರಚಿಸಿದ್ದಾರೆ. ಈ ಶಿರ್ಶಿಕೆರಹಿತ ಚಿತ್ರವು ಬಣ್ಣ, ರೇಖೆಗಳ ಜೋಡಣೆಯಿಂದ ಸುಂದರವಾಗಿ ಕಲಾವಿದ ರಚಿಸಿದ್ದು ಕಂಡು ಬರುತ್ತದೆ. ಕಲಾವಿದ ಹೆಣ್ಣಿನಭಾವನೆಯನ್ನು ಇದರಲ್ಲಿ ಉತ್ತಮವಾಗಿ ಅಭಿವ್ಯಕ್ತಗೊಳಿಸಿರುವುದು ಕಂಡುಬರುತ್ತದೆ.

ಚಿತ್ರ ೧೧. ನಿಸರ್ಗ ಚಿತ್ರ : ಈ ಕಲಾಕೃತಿಯು ಜಲವರ್ಣದಿಂದ 15'X24" ಅಳತೆಯಲ್ಲಿ ರಚಿಸಿದ ಕಲಾಕೃತಿ ಯಾಗಿದೆ. ಯಾವೊದೊ ಒಂದು ಐತಿಹಾಸಿಕ ವಿರುವ ಗುಡಿಯಾಗಿದ್ದು ಗುಡಿಯ

ನಾಲ್ಕು ಮೂಲೆಯಲ್ಲಿ ಗೊಪುರಗಳಿವೆ. ಮದ್ಯಭಾಗದಲ್ಲಿ ದೊಡ್ಡದಾದ ಸುಂದರ ನಕ್ಷೆಗಳಿಂದ ರಚಿಸಿದ್ದ ಈ ಗೋಪುರವು ನೆರಳು ಬೆಳಕಿನಿಂದ ರಚಿತವಾಗಿದೆ. ಗುಡಿಯ ಮುಂದೆ ಬಿಕ್ಷುಕರು ಕುಳಿತು ಬಿಕ್ಷೆ ಬೆಡುತ್ತಿರುವ ಚಿತ್ರವು ಸೊಗಸಾಗಿದೆ. ಆ ಚಿತ್ರವನ್ನು ನೋಡಿದಾಗ ಅಂದರು ಇರುವಂತೆ ಕಾಣುತ್ತದೆ. ಕಲಾಕೃತಿಯ ಹಿನ್ನೆಲೆಯಾಗಿ ಆಕಾಶ, ಗಿಡಗಳು ಮನೆಗಳನ್ನು ಸುಂದರವಾಗಿ ರಚಿಸಿದ್ದಾರೆ. ರಸ್ತೆಯಲ್ಲಿ ಇಬ್ಬರು ಮಹಿಳೆಯರು ಇದ್ದು ಒಬ್ಬಳು ಗುಡಿಯಕಡೆ ಹೊರಟಿದ್ದಾಳೆ ಇನ್ನೊಬಾಕೆಯು ಗುಡಿಯಿಂದ ತಲೆಯ ಬಲೆ ಬುಟ್ಟಿ ಇಟ್ಟುಕೊಂಡು ಬರುತ್ತಿರುವ ಚಿತ್ರವನ್ನು ಕಲಾವಿದ ಯಥಾ ವತ್ತಾಗಿ ರಚಿಸಿದ್ದಾನೆ. ಈ ಕಲಾಕೃತಿಯನ್ನು ಗಮನಿಸಿದಾ ಹಿಂದೆ ಮುಂದೆ ಕಾಣುವಂತೆ ರೇಖೆ, ಬಣ್ಣಗಳಿಂದ ಸುಂದರವಾಗಿ ರಚಿಸಿದ್ದಾರೆ.

ಚಿತ್ರ ೧೨. ಪಕ್ಷಿ ನೋಟ : ಈ ಕಲಾಕೃತಿಯನ್ನು ಬಿಜಾಪುರದ ಕಲಾವಿದ ಬಿ.ಎಸ್.ಪಾಟೀಲರು ರಚಿಸಿದ ನಿಸರ್ಗ ಚಿತ್ರವಾಗಿದೆ. ಜಲವರ್ಣದಿಂದ ಆಕರ್ಷಕವಾಗಿ ರಚಿಸಿರುವ ಈ ಚಿತ್ರ ಪೇಪರ ಮೇಲೆ 18'X24" ಅಳತೆಯಿದಿದೆ. ನಿಸರ್ಗಚಿತ್ರದಲ್ಲಿ ವಿಶೇಷ ಪರಣಿತಿಯನ್ನೂ ಪಡೆದಿರುವ ಬಿ.ಎಸ್. ಪಾಟೀಲರು ಈ ನಿಸರ್ಗಚಿತ್ರವನ್ನು ಪಕ್ಷಿನೋಟದಿಂದ ರಚಿಸಿದ್ದು ವಿಶೇಷವಾಗಿದೆ. ಒಂದು ಹಳ್ಳಿಯ ದೃಶ್ಯವನ್ನು ಗುಡ್ಡದ ಮೇಲೆ ಕುಳಿತು ರಚಿಸಿರುವ ಈ ಚಿತ್ರವು ಬಹಳಷ್ಟು ಆಳವಾಗಿ ದೂರದಲ್ಲಿರುವಂತೆ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆಕಾಶವನ್ನು ಅತ್ಯಂತ ಸುಂದರವಾಗಿ ತಮ್ಮ ಬಣ್ಣದ ಕೈ ಚಳಕದಿಂದ ರಚಿಸಿದ್ದಾರೆ. ಮೇಲಿನಿಂದ ನೋಡಿದಾಗ ಯಾವ ರೀತಿಯಲ್ಲಿ ಕಾಣುತ್ತದೆಯೋ ಅದೇರೀತಿಯಲ್ಲಿ ಒಂದು ಹಳ್ಳಿದೃಶ್ಯವನ್ನು ಕುಂಚದಿಂದ ಪಾಟೀಲರು ಶೇರೆಹಿಡಿದಿದ್ದಾರೆ. ದೂರ ಸಮಿಪ ಎಂಬ ಕಲ್ಪನೆಯನ್ನು ಅತ್ಯಂತ ಸುಂದರವಾಗಿ ನೇರಳು ಬೆಳಕಿನ ಕಲ್ಪನೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ಈ ಕಲಾಕೃತಿಯನ್ನು ಅತ್ಯಂತ ಸ್ಪಸ್ಟತೆಯಿಂದ ರಚಿಸಿದ್ದಾರೆ. ಮೊಡಗಳಿಂದ ಧರೆಗೆ ನೀರು ಸುರಿಯುವಂತೆ ಆಕರ್ಷಕವಾದ ಬಣ್ಣಗಳನ್ನು ಬಳಸಿ ಪಕ್ಷಿನೋಟದಿಂದ ರಚಿಸಿದ ಕಲಾಕೃತಿಯ ಇದಾಗಿದೆ.

ಜಗದ್ಗುರು ತೋಂಟ ಸಿದ್ಧಲಿಂಗೇಶ್ವ ಸ್ವಾಮಿಗಳರವರ ಮಠ ಗದಗದಲ್ಲಿರುವ ಕಲಾಕೃತಿಗಳು :

ಶ್ರೀಮಠವು 'ಸಂಸ್ಕೃತಿಕ', 'ಧಾರ್ಮಿಕ', ಶೈಕ್ಷಣಿಕವಾಗಿ ಉತ್ತಮ ಸೇವೆ ಮಾಡುವುದರೊಂದಿಗೆ ಅನೇಕ ಹಿರಿಯ ಕಿರಿಯ ಕಲಾವಿದರ ಕಲಾಕೃತಿಗಳನ್ನು ಮಠದಲ್ಲಿ ಸಂಗ್ರಹ ಮಾಡುವುದುರೊಂದಿಗೆ ಬಹು ದೊಡ್ಡ ಕೊಡುಗೆ ನೀಡಿದೆ. ಈ ಹಿನ್ನೇಲೆಯಲ್ಲಿ ತೋಂಟದಾರ್ಯ ಮಠದಲ್ಲಿ ಸಂಗ್ರಹಗೊಂಡ ಕಲಾಕೃತಿಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಸಾಂಪ್ರದಾಯಿ ಕಲಾಕೃತಿಗಳು

೨. ಸತ್‌ಪುರುಷರ ಕಲಾಕೃತಿಗಳು

೩. ಪವಾಡ ಪುರುಷರ ಕಲಾಕೃತಿಗಳು

ಸಾಂಪ್ರದಾಯಿಕ ಕಲಾಕೃತಿಗಳು :

೧. ನಂದಿಯ ಮೇಲೆ ಆಸಿನರಾದ ಶಿವ ಪಾರ್ವತಿಯರು : ಈ ಕಲಾಕೃತಿಯನ್ನು ಗದುಗಿನ ಯುವಕಲಾವಿದರಾದ ಶ್ರೀ ಕಮಲ ಅಹ್ಮದರವರು ರಚಿಸಿದ್ದಾರೆ. ಕಲಾಕೃತಿಯು ೧೫'X೧೫" ಅಳತೆಯದಾಗಿದೆ. ಶಿವನು ನಂದಿಯಮೇಲೆ ಆಸಿನರಾಗಿದ್ದು ಪಾರ್ವತಿಯನ್ನು ತನ್ನ ತೋಡೆಯ

ಮೇಲೆ ಮತ್ತು ಗಂಗೆಯನ್ನು ಜಡೆಯಲ್ಲಿ ಕುಳ್ಳರಿಸಿಕೊಂಡಿದ್ದಾನೆ. ಚಿತ್ರದ ಒಂದು ಬದಿಯಲ್ಲಿ ನಂದಿಯ ಸಂತೋಷದಿಂದ ಮೃದಂಗ ಬಾರಿಸುತ್ತಿದ್ದಾರೆ. ಇನ್ನೊಂದು ಬದಿಯಲ್ಲಿ ನಂದಿ ತಾಳ ಬಾರಿಸುತ್ತಿರುವ ದೃಶ್ಯ ಸುಂದರವಾಗಿದೆ. ಶಿವನ ಎಡಗಡೆಗೆ ಋಷಿಮೋನಿಯೊಬ್ಬ ಸಂಗೀತವಾದ್ಯವನ್ನು ನುಡಿಸುತ್ತಿದ್ದು. ಸಂಗೀತದಲ್ಲಿ ತಲ್ಲಿನರಾಗಿದ್ದಾನೆ. ಇನ್ನೊಂದುಕಡೆ ಋಷಿಒಬ್ಬ ಸಂಗೀತಕ್ಕೆ ತಕ್ಕಂತೆ ತಾಳ ಹಾಕುತ್ತಿದ್ದಾನೆ. ನಂದಿಯ ಮೇಲೆ ಕುಳಿತ ಶಿವಪಾರ್ವತಿಯರಿಗೆ ನೇರಳಾಗಿ ಸುಂದರ ನಕ್ಷೆಯನ್ನು ಹೊಂದಿದ ಚಿತ್ರವನ್ನು ರಚಿಸಿದ್ದಾರೆ. ಈ ಚಿತ್ರದ ಹಿನ್ನೆಲೆಯಲ್ಲಿ ಕಲಾವಿದರನು ಕೆಂಪು ಬಣ್ಣವನ್ನು ಲೆಪಿಸಿ ಚಿತ್ರಕ್ಕೆ ಸುಂದರ ಮೇರಗನ್ನು ನಿಡಿದ್ದಾನೆ. ಚಿತ್ರಕ್ಕೆ ಸಂಯೋಜನೆಗೊಳ್ಳಲು ಉತ್ತಮ ನಕ್ಷೆಯೊಂದಿಗೆ ಕಮಾನನ್ನು ರಚಿಸಿದ್ದಾನೆ. ಚಿತ್ರದ ಎರಡು ಕಡೆಗೆ ಮೇಲಿಂದ ಕೆಳಗೆ ಬರುವಂತೆ ಎರಡು ನಂದಾದೀಪವನ್ನು ಎಳೆ ಬಿಡಲಾಗಿದೆ. ಈ ಕಲಾಕೃತಿಯು ಮೈಸೂರ ಶೈಲಿಯಂತಿದೆ. ಕಲಾವಿದ ಸ್ಥಳವಕಾಶ, ವರ್ಣಗಳ ಜೊಡನೆಯಿಂದ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾನೆ.

೨. ನಾಟ್ಯ ಶಿವ : ಈ ಕಲಾಕೃತಿಯನ್ನು ಕಲಾವಿದ ಶ್ರೀ ಕಮಲ ಅಹ್ಮದರವರು ರಚಿಸಿದ್ದಾರೆ. ೧೫'X೧೫" ಅಳತೆಯ ಈ ಕಲಾಕೃತಿಯ ನೃತ್ಯ ಮಾಡುತ್ತಿರುವ ಶಿವನ ಸಾಂಪ್ರದಾಯಿಕ ಕಲಾಕೃತಿಯಾಗಿದೆ. ಶಿವನಿಗೆ ನಾಲ್ಕು ಕೈಗಳಿವೆ. ಶಿವನ ಮೈಬಣ್ಣ ತಿಳಿಕೆಂಪುವರ್ಣದ್ದಾಗಿದೆ. ಕೊರಳಲ್ಲಿ ಶೆಷವಧರಿಸಿದ್ದಾನೆ. ಅದು ನೃತ್ಯ ಆಲಿಸುತ್ತಿದೆ ಕೆಂಪು ವರ್ಣದ ಧೊತರಧರಿಸಿದ್ದು ಧೊತರದ ಅಂಚಿನಲ್ಲಿ ಸುಂದರವಾದ ವಿನ್ಯಾಸಗಳನ್ನು ರಚಿಸಿದ್ದಾನೆ. ಶಿವನು ತೊಡೆಯಮೇಲೆ ವಿನಾಯಕನನ್ನು ಕುಳಿತುಕೊಂಡಿದ್ದು ಸುಂದರವಾದ ಕೀರಟವನ್ನು ಧರಿಸಿದ್ದಾನೆ. ನೃತ್ಯ ಮಾಡುತ್ತಿರುವ ಶಿವನ ಹಿಂದೆಮುಂದೆ ದೇವತೆ ಮತ್ತು ಋಷಿ ಮುನಿಗಳು ಶಿವನೊಂದಿಗೆ ನೃತ್ಯಮಾಡುತ್ತಿರುವ ದೃಶ್ಯ ಕಂಡುಬರುತ್ತದೆ. ಶಿವನ ಕೆಳಗಿನ ಪಟ್ಟಿಯು ಕೆಂಪು ವರ್ಣದ ಹಿನ್ನೇಲೆಯನ್ನು ಹೊಂದಿದು ಅದರಲ್ಲಿ ಶಿವನ ಭಕ್ತರು ನೃತ್ಯಕ್ಕೆ ತಕ್ಕಂತೆ ಎಲ್ಲರು ಹೆಜ್ಜೆಹಾಕುತ್ತಿರುವ ದೃಶ್ಯ ಸುಂದರವಾಗಿ ಮೂಡಿಬಂದಿದೆ ಕಲಾಕೃತಿಯ ಹಿನ್ನೇಲೆಯನ್ನು ನೀಲವರ್ಣದಿಂದ ರಚನೆಗೊಂಡಿದ್ದು ಒಂದು ಮೂಲೆಯಲ್ಲಿ ನೃತ್ಯ ಮಾಡುತ್ತಿರುವ ಚಿಕ್ಕವಾದ ಶಿವನ ಚಿತ್ರ ರಚಿಸಲಾಗಿದೆ. ಇನ್ನೊಂದು ಭಾಗದಲ್ಲಿ ಅಶ್ವಮೇಧವು ಓಡಿಹೋಗುತ್ತಿರುವ ಚಿತ್ರವನ್ನು ಕಲಾವಿದ ಅಶ್ವಮೇಧವನ್ನು ಬಿಳಿವರ್ಣದಿಂದ ರಚನೆ ಮಾಡಿದ್ದಾನೆ ಅಶ್ವದ ಮೇಲ್ಬಾಗದಲ್ಲಿ ಕೆಂಪು ವರ್ಣದ ಶಾಲವನ್ನು ಹೊದಿಸಲಾಗಿದೆ. ಈ ಕಲಾಕೃತಿಯನ್ನು ಕಲಾವಿದ ಬಣ್ಣಗಳ ಜೊಡನೆ, ಸ್ಥಳಾವಕಾಶವನ್ನು ಉತ್ತಮರೀತಿಯಲ್ಲಿ ಬಳಸಿಕೊಂಡಿದ್ದಾನೆ. ಸಂಪ್ರದಾಯಿಕ ಶೈಲಿಯಲ್ಲಿ ರಚನೆಮಾಡಿದ ಈ ಚಿತ್ರ ಕಲಾವಿದನ ವಯಕ್ತಿಕ ಶೈಲಿಯನ್ನು ಬಳಸಿಕೊಂಡು ತಮ್ಮದೇ ಆದ ವಿಶಿಷ್ಠ ಶೈಲಿಯನ್ನು ಬಣ್ಣಗಳನ್ನು ಬಳಸಿ ಕಲಾವಿದ ಒಂದು ಸುಂದರವಾದ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾನೆ.

೩. ಕಾಳಿಂಗ ಮರ್ಧನ : ಈ ಕಲಾಕೃತಿಯನ್ನು ಕಲಾವಿದ ೧೨'X೧೫" ಅಳತೆಯಲ್ಲಿ ಸಾಂಪ್ರದಾಯಕ ಶೈಲಿಯಲ್ಲಿ ತಮ್ಮತನವನ್ನು ಅಳವಡಿಸಿಕೊಂಡು ಕಲಾಕೃತಿಯನ್ನು ರಚಿಸಿದ್ದಾರೆ. ಬಾಲಕೃಷ್ಣನು ಕಾಳಿಂಗ ಸರ್ಪದ ಹೆಡೆಯಮೇಲೆ ನಿಂತು ನೃತ್ಯ ಮಾಡುತಿರುವ ದೃಶ್ಯವಾಗಿದೆ. ಕೃಷ್ಣನು ಕೈಯಲ್ಲಿ ಕೊಳಲು ಹಿಡಿದುಕೊಂಡು ಕಾಳಿಂಗ ಸರ್ಪವನ್ನು ಮರ್ಧನ ಮಾಡುತ್ತಿರುವುದು ಆಕರ್ಷಕವಾದ ಸನ್ನಿವೇಶವಾಗಿದೆ ಸಮುದ್ರದಲ್ಲಿರುವ ಮಿನಕನ್ಯೆಯರು ಕೃಷ್ಣನಿಗೆ ಶಾಂತತೆ ಕಾಪಾಡಿಕೊಳ್ಳುವಂತೆ ಬೆಡಿಕೊಳ್ಳುತ್ತಿವೆ. ಗೋವುಗಳು, ಗೋಪಿಕಾ ಸ್ತ್ರೀಯರು ಕೃಷ್ಣನನ್ನು ನೋಡಿ ಗಾಭರಿಯಾಗುತ್ತಾ ನೋಡುತ್ತಿದ್ದಾರೆ. ಈ ಚಿತ್ರವು ಸಮುದ್ರ

ಸನ್ನಿವೇಶ ಇರುವುದರಿಂದ ಕಲಾವಿದ ಕಲಾಕೃತಿಯ ಹಿನ್ನೆಲೆಯಾಗಿ ನೀಲಿವರ್ಣವನ್ನು ಬಳಸಿದ್ದಾನೆ. ಕಲಾಕೃತಿಯಲ್ಲಿ ಕಾಳಿಂಗ ಸರ್ಪ ಭೌವ್ಯವಾದ ರೂಪವನ್ನು ಕಲಾವಿದ ರಚಿಸಿದ್ದಾನೆ. ಕೃಷ್ಣನನ್ನು ಮುಖ್ಯ ಸ್ಥಾನ ನೀಡಿದ್ದಾರೆ. ಕೃಷ್ಣನ ಮೈಬಣ್ಣವು ನೀಲಿ ವರ್ಣದ್ದಾಗಿದ್ದು ಧೊತರವನ್ನು ಕೇಸರಿ ವರ್ಣದಿಂದ ಅಂಚಿನಲ್ಲಿ ಬಿಳಿವರ್ಣದ ವಿನ್ಯಾಸದಿಂದ ಪೂರ್ಣಗೊಳಿಸಿದ್ದಾರೆ. ಚಿತ್ರದ ಮೇಲೆ ಶನಿದೇವನು ತನ್ನ ವಾಹನವಾದ ಗರುಡನ ಮೇಲೆ ಕುಳಿತು ಕೃಷ್ಣ ಹಿಂದೆ ಬರುತ್ತಿರುವ ಸನ್ನಿವೇಶವನ್ನು ಕಲಾವಿದ ಉತ್ತಮ ರೀತಿಯಿಂದ ಅಭಿವ್ಯಕ್ತಗೊಳಿಸಿದ್ದಾನೆ. ಈ ಸಂಪ್ರದಾಯಿಕ ಶೈಲಿಯ ಕಲಾಕೃತಿಯಲ್ಲಿ ಕಾಳಿಂಗ ಸರ್ಪನ ಬಾಲವು ಕಲಾಕೃತಿಯ ಸೂತ್ತಲು ಅಂಚಿನಿಂದ ಬಳಸಿಕೊಂಡು ಮೇಲಿಂದ ಬಾಲ ಕೆಳಗೆ ಸ್ವಲ್ಪಕಾಣುವಂತೆ ರಚನೆ ವಾಡಿ ಕಲಾಕೃತಿಯ ಸ್ಥಳಾವಕಾಶವನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡಿದ್ದಾನೆ. ವಿಷಯಕ್ಕೆ ತಕ್ಕಂತೆ ಬಣ್ಣಗಳನ್ನು ಬಳಸಿಕೊಂಡಿದ್ದು ಕಲಾವಿದನ ಕಲಾಕೌಶಲ್ಯವನ್ನು ಅಭಿವ್ಯಕ್ತಗೊಳಿಸಿದ್ದಾನೆ.

೪. ಕೊಳಲು ನುಡಿಸುವ ಕೃಷ್ಣ : ಈ ಕಲಾಕೃತಿಯು ೧೨'X೧೫" ಅಳತೆಯದಾಗಿದೆ. ಕೃಷ್ಣನಿಗೆ ೧೦ಕೈಗಳಿದ್ದು ಮೈ ಬಣ್ಣವು ನೀಲಿವರ್ಣದ್ದಾಗಿದೆ. ಕೃಷ್ಣನು ಎರಡು ಕೈಗಳಿಂದ ಕೊಳಲು ನುಡಿಸುತ್ತಿದ್ದು ಕೈಯಲ್ಲಿ ಕೊರಳಲ್ಲಿ ಸುಂದರವಾದ ಆಭರಣಗಳನ್ನು ಧರಿಸಿದ್ದಾನೆ. ತಲೆಯ ಮೇಲೆ ಸುಂದರ ವಿನ್ಯಾಸದಿಂದ ಕೂಡಿದ ಪ್ರಭಾವಳಿ ಇದೆ ಸೂತ್ತಲು ನಕ್ಷೆಯುಳ್ಳ ಕಂಬಗಳು ಕಮಾನನ್ನು ಕಲಾವಿದ ಉತ್ತಮ ರೀತಿಯಲ್ಲಿ ಅಭಿವ್ಯಕ್ತಿ ಗೊಳಿಸಿದ್ದಾನೆ. ಕೃಷ್ಣನಿಗೆ ದ್ವಾರಕನ್ಯೆಯರು ನಡದ ಮೇಲೆ ಕೈ ಇಷ್ಟು ಚಾಮರವನ್ನು ಬಿಸುತ್ತಿದ್ದಾರೆ. ಒಂದು ಬದಿಯಲ್ಲಿ ನೀಲಿವರ್ಣದ ಸೀರೆ, ಕೆಂಪುವರ್ಣದ ಕುಪ್ಪಸ ತೊಟ್ಟಿದ್ದಾರೆ ಕನ್ಯೆಯರು ಜಾಮರ ಬಿಸುತ್ತಿದ್ದಾರೆ. ಇನ್ನೊಂದರ ಕಡೆ, ಹಳದಿ ವರ್ಣದ ಸೀರೆ, ಹಳದಿವರ್ಣದ ಕಪ್ಪುಸ ಅಂಚಿನಲ್ಲಿ ಕೆಂಪುವರ್ಣದಿಂದ ಲೇಪನವಾಗಿದೆ. ಹಿನ್ನೇಲೆಯಾಗಿ ಕಲಾಕೃತಿ ಎದ್ದು ಕಾಣಲೇಂದು ಕೆಂಪುವರ್ಣವನ್ನು ಬಳಸಿದ್ದಾನೆ. ಕೃಷ್ಣನೀಗೆ ಬಿಳಿವರ್ಣದ ಧೊತರ, ಹಳದಿ ವರ್ಣದ ಅಂಚಿನ ವಿನ್ಯಾಸವನ್ನು ಹೊಂದಿದೆ. ಕಲಾವಿದನು ಈ ಸಂಪ್ರದಾಯಕವಾದ ಕಲಾಕೃತಿಯನ್ನು ತಮ್ಮದೆ ಆದ ರೇಖಾ ವಿನ್ಯಾಸ ವರ್ಣ ಕಲಾಕೃತಿಯ ಸ್ಥಳಾವಕಾಶವನ್ನು ಬಳಸಿಕೊಂಡು ಉತ್ತಮರೀತಿಯಲ್ಲಿ ರಚಿಸಿದ್ದಾನೆ. ಈ ಕಲಾ ಕೃತಿಯಲ್ಲಿ ಕೃಷ್ಣನ ಕಿರೀಟ ವಿಶೇಷ ರೀತಿಯದ್ದಾಗಿದೆ ಮತ್ತು ಕೃಷ್ಣನ ನಾಮ ಎದ್ದು ಕಾಣುವ ರೀತಿಯಲ್ಲಿ ರಚಿಸಿದ್ದು ವಿಶೇಷವಾಗಿದೆ. ಕಮಾನಿನ ಮೇಲಿನ ನಕ್ಷೆಯು ಮೈಸೂರ ಶೈಲಿಯಲ್ಲಿ ರಚಿತವಾಗಿದೆ. ಒಟ್ಟಾರೆ ಈ ಕಲಾಕೃತಿಯನ್ನು ಉತ್ತಮ ರೀತಿಯಲ್ಲಿ ರಚನೆಮಾಡಿ ಕಲಾವಿದ ಪೂರ್ಣಗೊಳಿಸಿದ್ದಾನೆ.

೫. ಚಿತ್ರ : ನಂದಿ ಶಿವಪಾರ್ವತಿಯರು : ಈ ಕಲಾ ಕಲಾಕೃತಿಯು ೧೨'X೧೪" ಅಳತೆಯುದ್ದಾಗಿದ್ದು ಕಲಾವಿದ ಪೂಸ್ಟರವರ್ಣದಿಂದ ರಚಿಸಿದ್ದಾನೆ. ವಿವಿಧ ರೀತಿಯನ್ನು ಹೊಂದಿದ ಶಿವನು ಈ ಕಲಾಕೃತಿಯಲ್ಲಿ ಶಿವನು ಪಾರ್ವತಿಯನ್ನು ತನ್ನ ತೊಡೆಯ ಮೇಲೆ ಕುಳ್ಳರಿಸಿಕೊಂಡು, ಗಂಗೆಯನ್ನು ಜಡೆಯಲ್ಲಿ ಕುಳ್ಳುರಿಸಿಕೊಂಡಿದ್ದಾನೆ. ಗಂಗೆಯ ಬಾಯಿಂದ ನೀರು ಜೋರಾಗಿ ಹೊರ ಚಿಮ್ಮುತ್ತಿರುವ ದೃಶ್ಯ ಮನಮೊಹಕವಾಗಿದೆ. ಶಿವನು ತಲೆಯ ಮೇಲೆ ಚಂದ್ರ, ಕೊರಳಲ್ಲಿ ಹಾವನ್ನು ಧರಿಸಿದ್ದು ಈ ಜಡೆಯ ವಿಶಿಷ್ಟರೀತಿಯಿಂದ ಕಲಾವಿದ ರಚಿಸಿದ್ದಾನೆ. ಕೈಯಲ್ಲಿ ಡಮರು, ತ್ರಿಶುಲವನ್ನು ಹಿಡಿದು ನಂದಿಯ ಮೇಲೆ ಕುಳಿತು ಸವಾರಿ ಮಾಡುತ್ತಿದ್ದಾನೆ. ನಂದಿಯ ವರ್ಣವು ಬಿಳಿದಾಗಿದ್ದು ಹೆಜ್ಜೆ

ಇಡುತ್ತ ನಂದಿಯು ಶಿವ ಪಾರ್ವತಿಯನ್ನು ಹೊತ್ತುಕೊಂಡು ಹೊಗುತ್ತಿರುವುದು ಸುಂದರವಾಗಿದೆ. ಶಿವನು ರುದ್ರಾಕ್ಷೆಯನ್ನು ಕೊರಳಲ್ಲಿ ಧರಿಸಿದ್ದಾನೆ. ಹುಲಿಯ ಚರ್ಮವನ್ನು ಉಡುಗೋರೆಯಾಗಿ ತೊಟ್ಟಿದ್ದಾನೆ. ಹಸಿರು ವರ್ಣದ ಸುಂದರ ವಿನ್ಯಾಸದಿಂದ ಶೆಲ್ಲೆಯನ್ನು ಧರಿಸಿದ್ದಾನೆ. ಕೆಂಪು ವರ್ಣದ ಸಿರೆಯನ್ನು ಹಳದಿವರ್ಣದ ಕುಪ್ಪಸವನ್ನು ಪಾವರ್ತಿ ತೊಟ್ಟಿದ್ದಾಳೆ. ಸವಾರಿ ಮಾಡುತ್ತಿರುವ ಶಿವನು ಹೊಗುತ್ತಿರುವ ದಾರಿಯನ್ನು ಕಲಾವಿದ ಹಸಿರುವರ್ಣವನ್ನು ಹಿನ್ನೆಲೆಯಾಗಿ ತಿಳಿಹಳದಿವರ್ಣವನ್ನು ಬಳಿಸಿದ್ದಾನೆ. ಕಲಾಕೃತಿಗೆ ಅಂದಗೊಳಿಸುವಂತೆ ಸುಂದರವಾದ ನಕ್ಷೆಗಳಿಂದ ತಿಳಿನೀಲಿ ವರ್ಣದ ಕಮಾನವನ್ನು ಕಲಾವಿದ ರಚಿಸಿ ಕಲಾಕೃತಿಯ ಸೌಂದರ್ಯತೆ ಮತ್ತು ಸ್ಥಳಾವಕಾಶವನ್ನು ಸಮತೋಲನ ಮಾಡಿದ್ದಾನೆ. ಈ ಕಲಾಕೃತಿಯು ವಿಶಿಷ್ಟವಾದ ಶಿವನ ಕಲಾಕೃತಿಯಾಗಿದ್ದು ಅಂದವಾದ ವರ್ಣವನ್ನು ಬಳಸಿ ಕಲಾವಿದ ಪೂರ್ಣಗೊಳಿಸಿದ್ದಾನೆ.

ಸತ್‌ಪುರುಷರ ಕಲಾಕೃತಿಗಳು :

ಚಿತ್ರ . ೧. ಹಾನಗಲ್ಲ ಕುಮಾರ ಸ್ವಾಮಿಗಳು : ಈ ಕಲಾಕೃತಿಯನ್ನು ೨'X೩" ಅಳತೆಯದಾಗಿದ್ದು ತೈಲವರ್ಣದಿಂದ ಚಿತ್ರ ಕಲಾವಿದ ಎಂ.ಎ. ಚೆಟ್ಟಿಯವರು ರಚಿಸಿದ್ದಾರೆ. ಕಲಾಕೃತಿಯು ಹಾನಗಲ್ಲ ಕುಮಾರ ಸ್ವಾಮಿಗಳು ಚಿತ್ರವಾಗಿದ್ದು ಸ್ವಾಮಿಗಳು ಕ್ಯಾವಿ ಬಟ್ಟೆಯನ್ನು ಧರಿಸಿದ್ದು ಬಟ್ಟೆಯ ಮೇಲೆ ಬಿದ್ದಿರುವ ನೀರಿಗೆಗಳು ನೈಜತೆಯನ್ನು ಮಿರಿಸುವಂತಿದೆ. ಮುಖದ ಹಾವ ಭಾವಗಳನ್ನು ಕೈಯಲ್ಲಿ ಹಿಡಿದಿರುವ ಬಡಿಗೆಯು ನೈಜವಾಗಿದೆ. ಶ್ರೀಗಳ ಪೂರ್ಣ ಭಾವಚಿತ್ರವು ಸಂಪೂರ್ಣವಾಗಿ ಶಾಸ್ತ್ರ ಬದ್ಧವಾಗಿ ಕಲಾಕೃತಿಯನ್ನು ರಚಿಸುವಲ್ಲಿ ಕಲಾವಿದನು ತಮ್ಮ ಕಲಾನೈಪೂಣ್ಯತೆಯನ್ನು ತೊರಿಸಿದ್ದಾರೆ. ಮುಖದ ಭಾವನೆ ಹಣೆಯ ಮೇಲಿನ ವಿಭೂತಿಯು ಆಕರ್ಷಕವಾಗಿದೆ. ಕಲಾಕೃತಿಯು ಹಿನ್ನೆಲೆಯನ್ನು ನೈಸರ್ಗಿಕವಾದ ಗಿಡ, ಮರಗಳು ಸುರ್ಯಾಸ್ಥವಾಗುವ ದೃಶ್ಯವನ್ನು ಬಣ್ಣಗಳ ಮೂಲಕ ಕಲಾವಿದ ಚೆಟ್ಟಿಯವರು ಅಭಿವ್ಯಕ್ತಗೊಳಿಸಿದ್ದಾರೆ. ಶ್ರೀಗಳು ತಲೆಗೆ ಕ್ಯಾವಿ ಬಣ್ಣದ ಪಟಕಾವನ್ನು ಸುತ್ತೊಕೊಂಡು ಶಾಂತ ಸ್ವಭಾವವದವರಾಗಿ ಕುಳಿತು ಕೊಂಡಿರುವ ಶ್ರೀಗಳ ನೈಜಕಲಾಕೃತಿಯಾಗಿದ್ದು ನೊಡುಗರಿಗೆ ಸುಂದರತೆಯನ್ನು ಬಿಂಬಿಸುತ್ತದೆ.

ಚಿತ್ರ . ೨. ಚಿತ್ತರಗಿಯ ಮಹಾಂತ ಸ್ವಾಮಿಗಳು : ಈ ಕಲಾಕೃತಿಯು ೨'X೩" ಅಳತೆಯದಾಗಿದ್ದು ತೈಲವರ್ಣದಿಂದ ಕಲಾವಿದ ಎಂ.ಎ. ಚೆಟ್ಟಿಯವರು ರಚಿಸಿದ್ದಾರೆ. ಚಿತ್ತಗಿ ಶ್ರೀಗಳು ಮೈಯಲ್ಲಿ ವಿಭೂತಿಯನ್ನು ಧರಿಸಿ ಧ್ಯಾನದಲ್ಲಿ ಮಗ್ನನಾಗಿದ್ದರೆ. ಕೊರಳಲ್ಲಿ ರುದ್ರಾಕ್ಷಿ ಹಾಗೂ ಲಿಂಗಧರಿಸಿದ್ದು ಅತ್ಯಕರ್ಷವಾಗಿದೆ ಶ್ರೀಗಳ ಹಾವಭಾವ ಉತ್ತಮರೀತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಸ್ವಾಮಿಜಿಯವರು ಕೆಂಪು ಧೋತರ ಧರಿಸಿದ್ದು ಧೋತರದ ಅಂಚಿನಲ್ಲಿ ಹಳದಿವರ್ಣದಿಂದ ವಿನ್ಯಾಸವನ್ನು ಮಾಡಿದ್ದಾರೆ. ಕಲಾಕೃತಿಯ ಹಿನ್ನೆಲೆಯನ್ನು ಹಸಿರು ವರ್ಣದಿಂದ ರಚಿಸಿದ್ದಾರೆ. ಕೆಂಪು ಜಮಖಾನದಮೇಲೆ ಕಾಲ ಮೇಲೆ ಕಾಲ ಇಟ್ಟುಕೊಂಡು ಕುಳಿತಿರುವ ಭಂಗಿಯು ಅತ್ಯಕರ್ಷಕವಾಗಿದೆ. ಸ್ವಾಮಿಗಳ ದೇಹದ ಬಣ್ಣ ನೈಜತೆಯಿಂದ ಕೂಡಿದೆ. ಮೈಮೇಲೆ ಹಚ್ಚಿಕೊಂಡಿದ ವಿಭೂತಿಯು ನೈಜತೆಯನ್ನು ಮಿರಿಸುವಂತಿದೆ. ಕಲಾವಿದನು ಈ ಕಲಾಕೃತಿಯನ್ನು ಸುಂದರವಾಗಿ ರಚಿಸಿದ್ದಾರೆ.

ಚಿತ್ರ ೩. ಮಹಾ ಮಾನವತಾವಾದಿಗಳು : ಈ ಕಲಾಕೃತಿಯು ೨.೧/೨'X೩" ಅಳತೆಯದಾಗಿದ್ದು ತೈಲವರ್ಣದಿಂದ ಕಲಾವಿದ ಸುರೇಶ ಡಿ.ಎಚ್.ರವರು ರಚಿಸಿದ್ದಾರೆ. ಕಲಾಕೃತಿಯನ್ನು ಗಮನಿಸಿದ್ದಾಗ ನಮ್ಮ ಭಾರತಕ್ಕಾಗಿ ಶ್ರಮಿಸಿದ ವ್ಯಕ್ತಿಗಳ ಭಾವಚಿತ್ರವಾಗಿದೆ. ಸೌರ್ಹದತೆ ಪ್ರತಿಕವಾದ ಚಿತ್ರವಾಗಿದೆ. ಯೇಸು, ಗೌತಮ, ಬುದ್ಧ, ಅಲ್ಲಾ, ಬಸವಣ್ಣ, ಮಹಾತ್ಮಾ ಗಾಂಧಿಜಿ, ಸ್ವಾಮಿ ವಿವೇಕಾನಂದರು, ಡಾ. ಬಿ.ಆರ್. ಅಂಬೆಡ್ಕರ, ಮದರ ಥೇರಿಸಾ, ಇವರೆಲ್ಲರ ಮಧ್ಯದಲ್ಲಿ ಡಾ. ತೊಂಟದ ಶ್ರೀಗಳ ಭಾವಚಿತ್ರವು ಇದೆ ಕಲಾಕೃತಿಯ ಹಿನ್ನೆಲೆಯಾಗಿ ರಾಷ್ಟ್ರಧ್ವಜದ ಕೆಸರಿ, ಬಿಳಿ, ಹಸಿರು, ವರ್ಣದಿಂದ ಲೇಪಿಸಿದ್ದಾನೆ. ಇದು ಧಾರ್ಮಿಕ ಬಣ್ಣಗಳ ಸಂಕೇತವನ್ನು ಸೂಚಿಸುತ್ತದೆ. ಹಿಂದೂ, ಮುಸ್ಲಿಂ, ಕ್ರೀಶ್ಚಯನ್ ಮೂರು ಧರ್ಮದವರೆಲ್ಲರೂ ಒಂದೆ ಎನ್ನುವ ಕಲ್ಪನೆಯ ಈ ಚಿತ್ರದಲ್ಲಿ ಕಲಾವಿದ ಪ್ರತಿಬಿಂಬಿಸಿದ್ದಾನೆ.

ಈ ಕಲಾಕೃತಿಯನ್ನು ಸೂಕ್ಷವಾಗಿ ಗಮನಿಸಿದಾಗ ಎಲ್ಲ ಮಹಾತ್ಮರ ಭಾವಚಿತ್ರವನ್ನು ಏಕವರ್ಣದಿಂದ ರಚಿಸಿದ್ದಾನೆ. ಇವರೆಲ್ಲರು ಸಮಾಜಕ್ಕೆ ಅನೇಕ ಸಾಧನೆಗಳನ್ನು ಮಾಡಿ ಮಹಾತ್ಮರಾಗಿದ್ದಾರೆ. ಎಂಬ ಕಲ್ಪನೆ ಕೊಡುತ್ತದೆ. ಆದರೆ ಡಾ. ತೋಂಟದ ಶ್ರೀಗಳ ಭಾವಚಿತ್ರದ ವರ್ಣ ಕೇಸರವರ್ಣದಿಂದ ಪೂರ್ಣಗೊಳಸಿದ್ದಾರೆ. ತ್ಯಾಗಮಯವಾದ ತೋಂಟದಶ್ರೀಗಳು ಅನೇಕ ಉತ್ತಮ ಕೆಲಸವನ್ನು ರಾಷ್ಟ್ರಮಟ್ಟದಲ್ಲಿ ಮಾಡಿದ್ದಾರೆ, ಮಾಡುತ್ತಿದ್ದಾರೆ. ಶಿಕ್ಷಣಕ್ಕೆ ಧಾರ್ಮಿಕವಾಗಿ, ಸಾಮಾಜಿಕ, ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ಉತ್ತಮರೀತಿಯಲ್ಲಿ, ಬೆಳೆಸಿಕೊಳ್ಳಲು ಹಲವಾರು ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸಿ, ಜನರಿಗೆ ಭೊಧನೆ ಮಾಡುತ್ತಿದ್ದಾರೆ. ಹಿಂದು ಮುಸ್ಲಿಮ, ಕ್ರಿಶ್ಚೈಯನ್, ಎಲ್ಲ ಧರ್ಮದವರಿಗೆ ಮಠಕ್ಕೆ ಕರೆಯಿಸಿ ಸೌಹಾರ್ದತೆಯ ಪ್ರತಿಕವಾಗಿ ಹೊಗುತ್ತಿದ್ದಾರೆ. ಎಂಬ ಕಲ್ಪನೆಯನ್ನು ಚಿತ್ರಗಳ ಮೂಲಕ ಕಲಾವಿದ ರಚಿಸಿದ್ದು ವಿಶೇಷವಾಗಿದೆ. ಕೋಮು ಸೌಹಾರ್ದತೆಯಗಾಗಿ ರಾಷ್ಟ್ರಪತಿಗಳಿಂದ ಕೋಮುಸೌಹಾರ್ದತೆ ಪ್ರಶಸ್ತಿ ಪಡೆದಿದನ್ನು ಇಲ್ಲಿ ಸ್ಮರಿಸ ಬಹುದು, ನೈಜಶೈಲಿಯ ಸಂಯೋಜನೆಯನ್ನು ಉತ್ತಮ ಬಣ್ಣಗಳ ಸಂಯೋಜನೆಯನ್ನು ಕಲಾವಿದ ಸುರೇಶರವರು ರಚಿಸಿದ್ದಾರೆ.

ಚಿತ್ರ ೪. ಕ್ರಾಂತಿಯೋಗಿ ಬಸವಣ್ಣನವರು : ಈ ಕಲಾಕೃತಿಯು ೪'X೬" ಅಳತೆಯದಾಗಿದು. ಮಿಶ್ರಮಾಧ್ಯಮದಿಂದ ಖ್ಯಾತಕಲಾವಿದ ಸಿ.ಎನ್. ಪಾಟೀಲರವರು ರಚಿಸಿದ್ದಾರೆ. ಬಸವಣ್ಣನವರು ಸಿಂಹಾಸನಮೇಲೆ ಕುಳಿತ್ತಿದ್ದಾನೆ ಕೊರಳಲ್ಲಿ ರುದ್ರಾಕ್ಷಿ ಮತ್ತು ಲಿಂಗುವನ್ನು ಧರಿಸಿದ್ದಾನೆ ಬಿಳಿವರ್ಣದ ರಾಜರು ಧರಿಸು ಅಂಗಿಯನ್ನು ಧರಿಸಿದ್ದು ಅಂಗಿಯ ಅಂಚಿನಲ್ಲಿ ಬಣ್ಣ ಬಣ್ಣದ ಟಿಕಳಿ, ಮಿಂಚುಗಳನ್ನು ಬಳಸಿ ಸುಂದರವಾದ ವಿನ್ಯಾಸವನ್ನು ಮಾಡಿದ್ದಾರೆ. ಅದೇ ರೀತಿ ಸಿಂಹಾಸನದ ಬಣ್ಣ ಕೆಂಪದಾಗಿದ್ದು ಅದಕ್ಕೆ ಹೊಂದುವ ರೀತಿಯಲ್ಲಿ ಹಳದಿ, ಕೆಂಪು ವರ್ಣದ ಟಿಕಳಿ, ಮಿಂಚುಗಳನ್ನು ಬಳಸಿ ಸಿಂಹಾಸನವನ್ನು ಸುಂದರಗೊಳಿಸಿದ್ದಾರೆ. ಬಸವಣ್ಣನವರು ಧರಿಸಿದ ಕಿರೀಟವು ಅತ್ಯಂತ ಸಮರ್ಪಕವಾಗಿದ್ದು ಅದನ್ನು ಬಣ್ಣ ಬಣ್ಣದ ಟಿಕಳಿ, ಮಿಂಚು ಮತ್ತು ಮುತ್ತುಗಳನ್ನು ಬಳಸಿ ಸುಂದರವಾಗಿ ರಚಿಸಿದ್ದಾರೆ. ಬಸವಣ್ಣನವರು ಅರಮನೆಯಲ್ಲಿ ಕುಳಿತಿರುವಂತೆ ಕಲಾವಿದ ಅರಮನೆಯ ದೃಶ್ಯವನ್ನು ರಚಿಸಿದ್ದಾನೆ. ಕಂಬಗಳಲ್ಲಿ ಸುಂದರವಾದ ಸೂಳುವುಗಳು ಬಳಸಿ ಪೂರ್ಣಮಾಡಿದ್ದಾರೆ. ಹಣೆಗೆ ವಿಭೂತಿ ಧರಿಸಿದ್ದು ಬಸವಣ್ಣನವರ ಮುಖಕ್ಕೆ ಸೌಂದರ್ಯವನ್ನು ಹೆಚಿಸಿದೆ. ಬಸವಣ್ಣನವರು ದೇವತಾವಾದಿ ಎಂದು ಹಿಂದೆ ಸೂರ್ಯಕೀರಣಗಳಂತೆ ಮಿಂಚನ್ನು ಬಳಸಿಯೂ ಯಾವ ಕೀರಣಗಳನ್ನು ರಚಿಸಿದ್ದಾರೆ ಅದೇ ರೀತಿ ಬಸವಣ್ಣನವರ ಮುದ್ರೆಯನ್ನು ಬಲಬದಿಯಲ್ಲಿ ಚಿತ್ರಿಸಿದ್ದಾರೆ. ಬಲಭಾಗದ ಮೇಲೆ ಕೂಡ ಸಂಗಮದ

ಬಸವಣ್ಣನವರ ಐಕ್ಯ ಸ್ಥಳವನ್ನು ಸೊಗಸಾದ ನಿಸರ್ಗ, ಆನಂದದಿಂದ ಹರಿಯುತ್ತಿರುವ ನದಿಯ ಚಿತ್ರವನ್ನು ಕಲಾವಿದ ಸಿ.ಎನ್. ಪಾಟೀಲರು ವಿಷಯಕ್ಕೆ ತಕ್ಕಂತೆ ಸ್ಥಳಾವಕಾಶವನ್ನು ಬಳಸಿಕೊಂಡು ಉತ್ತಮರೀತಿಯಲ್ಲಿ ಮಿಶ್ರ ಮಾಧ್ಯಮದಿಂದ ಕಲಾಕೃತಿ ರಚಿಸಿದ್ದಾರೆ.

ಚಿತ್ರ : ೧.ಪೂಜೆಯಲ್ಲಿ ಮಗ್ನವಾದ ಎಡೆಯೂರ ಸಿದ್ಧಲಿಂಗೇಶ್ವರ : ಈ ಕಲಾಕೃತಿಯು ೨'X೩" ಅಳತೆಯದಾಗಿದ್ದು ತೈಲ ವರ್ಣದಿಂದ ಕಲಾವಿದ ಎಂಬ ಚೆಟ್ಟಿಯವರು ರಚನಮಾಡಿದ್ದಾರೆ ಹೂತ್ತದಲ್ಲಿ ಕುಳಿತು ದ್ಯಾನಸ್ಥರಾಗಿ ಪೂಜೆ ಮಾಡುತ್ತಿರುವುದು ನೈಜತೆಯನ್ನು ಮಿರಿಸುವ ರೀತಿಯಲ್ಲಿ ಕಲಾಕೃತಿ ರಚಿತಗೊಂಡಿದೆ ಸುತ್ತಲು ಶ್ರೀಗಳಿಗೆ ಹುತ್ತು ಹಬ್ಬಿದ್ದು ಆದರಲ್ಲಿ ಅನೇಕ ಹಾವು ಕ್ರೀಮಿಕಿಟಗಳು ಹರೆದಾಡುತ್ತಿವೆ. ಅವುಗಳ ಪರಿವೆಯಿಲ್ಲದೆ ಎಡೆಯೂರ ಶ್ರೀಗಳು ದ್ಯಾನದಲ್ಲಿ ಮಗ್ನವಾಗಿದ್ದಾರೆ. ಆಕಳು ಬಂದು ಹುತ್ತದಲ್ಲಿ ಕುಳಿತ ಶ್ರೀಗಳಿಗೆ ಹಾಲುಕರೆಯುತ್ತಿದೆ. ಭಾರವಾದ ಆಕಳು ಹುತ್ತದ ಮೇಲೆ ನಿಂತ್ತು ಹಾಲು ನಿಡುತ್ತದೆ ಆಕಳ ಭಾರವನ್ನು ಹುತ್ತು ಹೊರ ಬಲ್ಲದೆ? ಎಂಬ ಪ್ರಶ್ನೆಗೆ ಧಾರ್ಮಿಕತೆಯನ್ನು ನೋಡಿದಾಗ ಇದು ಪವಾಡನೆಂದು ಹೇಳಬಹುದು ಈ ಹಿನ್ನೆಲೆಂಯುಲ್ಲಿ ಕಲಾವಿದ ಸೂರ್ಯೋದಯವಾಗುತ್ತಿರುವ ದೃಶ್ಯ ದೊಡ್ಡದಾದ ಆಲದ ಮರ ಬೆಳೆದಿರುವ ಹುತ್ತ ಸುತ್ತಲಿನ ಪರಿಸರವನ್ನು ಸುಂದರವಾಗಿ ರಚಿಸಿದ್ದಾನೆ. ಶ್ರೀಗಳ ಕೊರಳಲ್ಲಿ ಲಿಂಗು, ರುದ್ರಾಕ್ಷಿ, ಕೈಯಲ್ಲಿ, ಜಪಮಾಲೆ, ಧರಿಸಿದ ವಿಭೂತಿಯು ಅತ್ಯಾಕರ್ಷಕವಾಗಿದೆ. ಶ್ರೀಗಳು ಪದ್ಮಾಸನದಲ್ಲಿ ಕುಳಿತು ದ್ಯಾನ ಮಾಡುತ್ತಿದ್ದಾರೆ. ಕ್ಯಾವಿ ಬಟ್ಟೆಯನ್ನು ಧರಿಸಿದ್ದಾರೆ. ಮಂಡಲ, ಪೂಜಾಸಾಮಾನುಗಳು ಶ್ರೀಗಳ ಬಲಬದಿಯಲ್ಲಿ ರಚಿಸಿದ್ದಾರೆ.

ಒಟ್ಟಾರೆ ಈ ಕಲಾಕೃತಿಯು ಪ್ರಮಾಣ $2\frac{1}{2}\times3$ ಬದ್ಧತೆಯಿಂದ ಬೆಳೆದಿರುವ ಹುತ್ತ, ಶ್ರೀಗಳ ವೇಷಭೂಷಣಗಳು, ಹಾಲುಕರೆಯುತ್ತಿರುವ ಆಕಳು ಶ್ರೀಗಳಿಗೆ ಮಾತಾಡಿಸುತ್ತಿರುವಂತೆ ಭಾಸವಾಗುತ್ತದೆ. ಹಿನ್ನೆಲೆಯು ಶಾಂತವಾದ ವಾತಾವರಣವನ್ನು ಹೊಂದಿದೆ. ಬಣ್ಣಗಳ ಜೋಡಣೆ ಸ್ಥಳಾವಕಾಶವನ್ನು ಉತ್ತಮ ರೀತಿಯಿಂದ ಬಳಸಿ ಸುಂದರವಾದ ಕಲಾಕೃತಿಯನ್ನು ರಚಿಸಿದ್ದಾರೆ.

ಚಿತ್ರ ೨. ಅಥಣಿಯ ಶ್ರೀ ಮುಘೇಂದ್ರ ಸ್ವಾಮಿಗಳು : ಈ ಕಲಾಕೃತಿಯನ್ನು ಕಲಾವಿದರಾದ ಶ್ರೀ ಸಿ.ಎನ್. ಪಾಟೀಲರು ಮಿಶ್ರಮಾಧ್ಯಮದಿಂದ ರಚಿಸಿದ್ದಾರೆ. ಅಳೆಯತದಾಗಿದೆ. ಮುರಘೇಂದ್ರ ಶ್ರೀಗಳು ಹುಲಿಯ ಚರ್ಮದ ಮೇಲೆ ಮೈಗಳಿಗೆಲ್ಲ ವಿಭೂತಿ ಧರಿ ಕುಳಿತ್ತಿದ್ದಾರೆ. ಕೊರಳಲ್ಲಿ ಲಿಂಗ ಮತ್ತು ರುದ್ರಾಕ್ಷಿಯನ್ನು ಧರಿಸಿದ್ದಾರೆ. ಶ್ರೀಗಳು ೬೫ ವರ್ಷದವರಾಗಿದ್ದರು ಅವರ ಮುಖದಲ್ಲಿರುವ ಮಂದಹಾಸ ಕಣ್ಣು, ಮೂಗು, ಬಾಯಿ, ನೊಡಲಿಕ್ಕೆ ಸುಂದರವಾಗಿ ರಚಿಸಿದ್ದಾರೆ. ಕೈ ಕಾಲುಗಳು ನೈಜರೀತಿಯಲ್ಲಿ ರಚಿಸಿದ್ದಾರೆ. ಶ್ರೀಗಳ ಹಿಂದೆ ಸೂರ್ಯ ಪ್ರಕಾಶಿಸುವಂತೆ ಹಳದಿವರ್ಣದಲ್ಲಿ ಸೂರ್ಯನ ಕಿರಣಗಳ ಛಾಯೇಯು ಹಿನ್ನೆಲೆಯಾಗಿ ನೀಲಿವರ್ಣದಿಂದ ರಚಿಸಿದ್ದಾರೆ. ಶ್ರೀಗಳ ಬಲಗಡೆ ಒಂದು ದೊಡ್ಡ ಚರಗಿ ಅದರ ಮೇಲೆ ಒಂದು ಸಣ್ಣ ಚರಗಿಯನ್ನು ಸುಂದರವಾಗಿ ಅದಕ್ಕೆ ಟಿಕಳಿಗಳನ್ನು ಅಂಟಿಸಿ ಪೂರ್ಣ ಗೊಳಿಸಿದ್ದಾರೆ. ಈ ಕಲಾಕೃತಿಗೆ ಮೆರಗು ಬರಲು ಪ್ಲಾವುಡದಿಂದ ಕಮಾನು ರಚಿಸಿ ಅದಕ್ಕೆ ಹಳದಿ ವರ್ಣದ ಮಿಂಚು, ಟಿಕಳಿಗಳನ್ನು ಹಚ್ಚಿ ಉತ್ತಮವಾದ ವಿನ್ಯಾಸಗಳನ್ನು ಎಲೆ, ಹೂ, ಬಳ್ಳಿಗಳಿಗೆ ಸುಂದರವಾಗಿ ರಚಿಸಿದ್ದಾರೆ ಕಮಾನಿಗೆ ತಕ್ಕಂತೆ ಕಂಬಗಳು ರಚಿಸಿ. ಮುರಘೇಂದ್ರ ಶ್ರೀಗಳ ಕಲಾಕೃತಿ ಎದ್ದು ಕಾಣುವ ರೀತಿಯಲ್ಲಿ ಮಿಂಚು, ಟಿಕಳಿಗಳ ಜೋಡಣೆಯು ಅತ್ಯಂತ ಸುಂದರವಾಗಿ

ನಿರ್ಮಿಸಿದ್ದಾರೆ. ಅಥಣಿಯ ಮುರಘೇಂದ್ರ ಶ್ರೀಗಳು ನಿಜವಾಗಿ ಕುಳಿತಿರುವಂತೆ ನೈಜರೀತಿಯಿಂದ ಕಲಾವಿದ ಸಿ.ಎನ್. ಪಾಟೀಲರು ರಚಿಸಿದ್ದಾರೆ. ಈ ಕಲಾಕೃತಿಯು ತೋಂಟದಾರ್ಯಮಠದ ಬಲಗಡೆಯ ಆಫಿಸ ಕೊಠಡಿಯಲ್ಲಿ ಇದೆ. ಸಿ.ಎನ್. ಪಾಟೀಲರು ಎಡೆಯೂರಸಿದ್ಧಲಿಂಗ ಸ್ವಾಮಿಗಳು, ಮತ್ತು ಬಸವಣ್ಣನವರ ರಚಿಸಿದ ಮಾಧ್ಯಮದಿಂದ ಈ ಕಲಾಕೃತಿಯನ್ನು ರಚಿಸಿದ್ದಾರೆ. ನೋಡಲಿಕ್ಕೆ ಬಹಳಷ್ಟು ಆಕರ್ಷಕವಾಗಿದೆ.

ಚಿತ್ರ ೩. ಶ್ರೀ ಎಡೇಯೂರ ಸಿದ್ಧಲಿಂಗ ಮಹಾಸ್ವಾಮಿಗಳು : ಈ ಕಲಾಕೃತಿಯು ೪'X೬" ಅಳತೆಯದಾಗಿದ್ದು ಮಿಶ್ರ ಮಾಧ್ಯಮದಿಂದ ಕಲಾವಿದ ಸಿ.ಎನ್. ಪಾಟೀಲರು ರಚಿಸಿದ್ದಾರೆ. ಎಡೆಯೂರ ಸಿದ್ಧಲಿಂಗ ಶ್ರೀಗಳು ಧ್ಯಾನಸ್ಥರಾಗಿದ್ದು ಶ್ರೀಗಳ ಸೂತ್ತಲು ಹುತ್ತ ಬೆಳೆದರು ಪರಿವೆ ಇಲ್ಲದೆ ಧ್ಯಾನದಲ್ಲಿ ಮಗ್ನರಾಗಿದ್ದಾರೆ. ಹುತ್ತದಿಂದ ಹಾವುಗಳು ಶ್ರೀಗಳನ್ನು ನೊಡುತ್ತಿರುವಂತೆ ಕಲಾವಿದ ಸಿ.ಎನ್. ಪಾಟೀಲರು ರಚಿಸಿದ್ದಾರೆ. ಶ್ರೀಗಳ ಕೊರಳಲ್ಲಿ ಲಿಂಗು, ರುದ್ರಾಕ್ಷಿ, ಮತ್ತು ದಾರದಿಂದ ಮಾಡಿದ ಹೂ ಮಾಲೆಗಳನ್ನು ಕೃತಕವಾಗಿ ಇರುವುದನ್ನು ಬಳಸಿದ್ದಾರೆ ಹುತ್ತವನ್ನು ಫ್ಲಾವುಡ್ಡದಿಂದ ಕತ್ತರಿಸಿ ತಯಾರು ಮಾಡಿದ್ದಾರೆ. ಹುತ್ತದ ಮೇಲೆ ಆಕಳು ಬಂದು ಹಾಲು ನೀಡುತ್ತಿರುವ ದೃಶ್ಯ ಬಹಳಷ್ಟು ಆಕರ್ಷಣೆಯಾಗಿವೆ. ಶ್ರೀಗಳಿಗೆ ಪೂಜೆಗೆ ಬೇಕಾಗುವ ಎಲ್ಲ ಸಾಮಾನುಗಳು ಪ್ಲಾವುಡದಿಂದ ಕತ್ತರಿಸಿ ನಂತರ ಬಣ್ಣಗಳನ್ನು ಹಚ್ಚಿ ಕಲಾಕೃತಿಗೆ ಹೊಂದಾಣಿಕೆಯಾಗುವ ರೀತಿಯಲ್ಲಿ ರಚಿಸಿದ್ದಾರೆ ಹಿನ್ನೆಲೆಯಾಗಿ ನಿಸರ್ಗದ ಸನ್ನಿವೇಶ ಸೂರ್ಯಸ್ಥವಾಗುವಂತೆ ಬಣ್ಣಗಳಿಂದ ರಚಿಸಿ, ಕಲಾಕೃತಿಗೆ ಸೌಂದರ್ಯತೆ ಹೆಚ್ಚುವಂತೆ ಮಾಡಿದ್ದಾರೆ. ಹಾಲು ಕೊಡುತ್ತಿರುವ ಆಕಳು ಹಾಲು ನೀಡುತ್ತ ಶ್ರೀಗಳಿಗೆ ಮಾತನಾಡಲು ಪ್ರಯತ್ನಿಸುತ್ತಿದೆ.

ಕೊರಳಲ್ಲಿ ಕೈಯಲ್ಲಿ ರುದ್ರಾಕ್ಷಿ ಧರಿಸಿಕೊಂಡಿರುವ ಶ್ರೀಗಳು ಪೂಜೆಗೆ ಕುಳಿತುಕೊಳ್ಳುವ ಭಂಗಿಯಲ್ಲಿ ಕುಳಿತು ಧ್ಯಾನ ಮಾಡುತ್ತಿದ್ದಾರೆ. ಕ್ಯಾವಿ ಬಣ್ಣದ ಧೋತರ ಧರಿಸಿರುವ ಶ್ರೀಗಳು ತಪಸ್ಸಿನಲ್ಲಿ ಮಗ್ನನಾಗಿರವಂತೆ ಕಲಾಕೃತಿ ರಚಿಸಿದ್ದಾರೆ. ಸಿ.ಎನ್. ಪಾಟೀಲ ಮತ್ತು ಎಂ.ಎ. ಚೆಟ್ಟಿಯವರು ಸಿದ್ಧಲಿಂಗಶ್ರೀಗಳ ಕಲಾ ಕೃತಿ ರಚಿಸಿದ್ದಾರೆ. ಅದರಲ್ಲಿ ಸಿ.ಎನ್. ಪಾಟೀಲರ ಈ ಕಲಾಕೃತಿಯು ಶ್ರೀಮಠದ ಮುಖ್ಯ ಗದ್ದುಗೆಯ ಎಡಭಾಗದಲ್ಲಿ ಬರುವಜನರಿಗೆ ಕೈಬಿಸಿಕರೆಯುತ್ತಿವೆ ಚೆಟ್ಟಿಯವರ ಕಲಾಕೃತಿ ದಾಸೋಹದ ಕೋಣೆಯು ಬಾಗಿಲಮೇಲೆ ತೂಗುಹಾಕಿದ್ದಾರೆ. ಸಿ.ಎನ್.ಪಾಟೀಲರ ಕಲಾಕೃತಿಗಳು ಮಿಶ್ರಮಾಧ್ಯಮದಿಂದ ಸೌಂದರ್ಯತೆಯು ಹೆಚ್ಚಿಸುವಂತೆ ಕಲಾಕೃತಿಗಳನ್ನು ರಚಿಸಿದ್ದಾರೆ.

ಚಿತ್ರ ೪. ಸಿದ್ಧಲಿಂಗೇಶ್ವರ ದೀಕ್ಷಾ ಸಮಾರಂಭ : ಈ ಕಲಾ ಕೃತಿಯು ೨'X೩" ಅಳತೆಯದಾಗಿದ್ದು ಪೊಸ್ಟರ ವರ್ಣದಿಂದ ಕಲಾವಿದ ಎಂ.ಎ. ಚೆಟ್ಟಿಯವರು ರಚಿಸಿದ್ದಾರೆ. ಎಡೆಯೂರ ಸಿದ್ಧಲಿಂಗ ಸ್ವಾಮಿಗಳಿಗೆ ದೀಕ್ಷೆ ಕೊಡುವ ದೃಶ್ಯವಾಗಿದೆ. ಈ ದೀಕ್ಷೆಯನ್ನು ಹರಪನಹಳ್ಳಿಯ ಗೋಸಲ ಚೆನ್ನಬಸವ ಸ್ವಾಮಿಗಳು ನೀಡುತ್ತಿದ್ದಾರೆ. ದೀಕ್ಷೆಗೆ ಬೇಕಾಗುವ ಎಲ್ಲ ಪೂಜೆ ಸಾಮಾನುಗಳು ಹೂ, ಹಣ್ಣು, ಕಾಯಿ, ಆರತಿ, ನೀರಿನ ಕೊಡಗಳ ಚಿತ್ರ ಉತ್ತಮ ರೀತಿಯಲ್ಲಿ ರಚಿಸಿದ್ದಾರೆ. ಸ್ವಾಮಿಗಳ ದೀಕ್ಷೆ ಸಮಾರಂಭಕ್ಕೆ ಅನೇಕ ಸ್ವಾಮಿಗಳು ಆಗಮಿಸಿದ್ದು, ಎಲ್ಲರು ಪೂಜಾ, ಮಂತ್ರಗಳನ್ನು ಹೇಳುತ್ತಿದ್ದಾರೆ. ಚೆನ್ನಬಸವ ಸ್ವಾಮಿಗಳು ಕ್ಯಾವಿವಸ್ತ್ರವನ್ನು ಧರಿಸಿ, ಕೊರಳಲ್ಲಿ ಲಿಂಗ, ರುದ್ರಾಕ್ಷಿ, ಕೈಯಲ್ಲಿ ರುದ್ರಾಕ್ಷಿಯನ್ನು ಧರಿಸಿದ್ದಾರೆ. ಕುಳಿತ ಪಿಠದ ಹಿಂದೆ ಒಂದು ಎಂದು ಬರೆಯಲಾಗಿದೆ ಸುತ್ತಲು ನೂರಾರು ಶ್ರೀಗಳು ಸಮಾರಂಭದಲ್ಲಿ ಭಾಗವಹಿಸಿದ ಕಲಾಕೃತಿಯನ್ನು ಕಲಾವಿದ ಎಂ.ಎ. ಚೆಟ್ಟಿಯವರು ತಮ್ಮ ಕೈಚಳಕದಿಂದ ಸುಂದರವಾಗಿ

ರಚಿಸಿದ್ದಾರೆ. ಈ ಕಲಾಕೃತಿಯನ್ನು ನೋಡಿದ್ದಾಗ ನಿಜವಾಗಿ ಸಿದ್ಧಲಿಂಗ ಶ್ರೀಗಳು ದಿಕ್ಷಾಪಡೆಯುತ್ತಿದ್ದಾರೆ.

ಚಿಕ್ಕನಕೊಪ್ಪ ಶರಣರ ಮಠ ಬಳಗಾನೂರ ಇಲ್ಲಿ ಸಂಗ್ರಹವಾದ ಕಲಾಕೃತಿಗಳು ಈ ಕೆಳಗಿನಂತೆ ಚರ್ಚಿಸಲಾಗಿದೆ.

ಚಿತ್ರ ೧. ಶ್ರೀ ಮ.ನಿ. ಪ್ರ ಸ್ವ ಮಹಾಂತ ಶಿವಯೋಗಿಗಳು : ಈ ಚಿತ್ರವು ಪೊಟ್ರೇಟ್ ಕಲಾಕೃತಿಯಾಗಿದೆ. ಶ್ರೀ ಶಿವಯೋಗಿಗಳ ಮುಖದಲ್ಲಿ ವಿಭೂತಿ ಹಾಗೂ ಚಾಳೀಸು ಧರಿಸಿ ಅವರು ಮಾತಾಡುತ್ತಿದ್ದಾರೆಯೇ ಎಂಬಂತೆ ಭಾಸವಾಗುತ್ತದೆ. ಅವರ ತುಟಿ, ಹಲ್ಲು, ಅವರ ನೋಟ ಚಿಕ್ಕ, ಚಿಕ್ಕ ಗಡ್ಡವನ್ನು ಕಲಾವಿದನು ಸುಂದರವಾಗಿ ಚಿತ್ರಿಸಿದ್ದಾನೆ. ಅವರು ಧರಿಸಿದಂತಹ ವಸ್ತ್ರವನ್ಯಾಸದಲ್ಲಿಯ ಸೂಕ್ಷ್ಮವಾದ ನೀರಿಗೆಯ ದೃಶ್ಯ ಹಾಗೂ ರುದ್ರಾಕ್ಷಿಗಳು ಅದ್ಬುತವಾಗಿ ಮೂಡಿ ಬಂದಿವೆ. ಹಿನ್ನೆಲೆಯಾಗಿ ಗೋಡೆಯ ದೃಶ್ಯವನ್ನು ಕಲಾವಿದ ಮಲ್ಲಣ್ಣ ಸಾವಳಗಿಯವರು ೩'X೪" ಅಳತೆ ತೈಲವರ್ಣದಿಂದ ಸುಂದರವಾಗಿ ಚಿತ್ರಿಸಿದ್ದಾರೆ.

ಚಿತ್ರ ೨. ಶ್ರೀ ಶರಣ ಬಸವೇಶ್ವರರು : ಶ್ರೀ ಶರಣ ಬಸವೇಶ್ವರರು ಹಾಗೂ ಅವರ ಗುರುಗಳ ಭಾವ ಚಿತ್ರವಾಗಿದೆ. ಈ ಚಿತ್ರದಲ್ಲಿ ಕಲಾವಿದ ಶ್ರೀ ಶರಣರ ಮುಖದಲ್ಲಿ ಹುಬ್ಬು, ಕಣ್ಣು, ಮೀಸೆ ಹಾಗೂ ಅವರು ಧರಿಸಿದಂತಹ ರುಮಾಲು ಅದರಲ್ಲಿಯ ಹೂ, ಕಿವಿಯಲ್ಲಿಯ ರುದ್ರಾಕ್ಷಿಯನ್ನು ಕಲಾವಿದ ನೈಜ ಶೈಲಿಯಲ್ಲಿ ಚಿತ್ರಿಸಿದ್ದಾರೆ. ಮತ್ತು ಶ್ರೀ ಶರಣರ ಹೂವಿನ ಸರ ಹಾಗೂ ಅವರು ಧರಿಸಿದ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಶ್ರೀ ಶರಣರ ಲಿಂಗವಿರುವ ಗುಂಡುಗಡಿಗೆಯನ್ನು ಕಲಾವಿದ ನೈಜ ರೂಪದಂತೆ ಚಿತ್ರಿಸಲು ಪ್ರಯತ್ನಿಸಿದ್ದಾನೆ. ಶ್ರೀ ಶರಣರ ಮುಂದೆ ಪೂಜಾ ಸಾಮಗ್ರಿ ಹಾಗೂ ಮಂಟಪದ ದೃಶ್ಯ ಹಿನ್ನೆಲೆಯಾಗಿ ಅವರ ತಲೆಯ ಮೇಲಿರುವ ಸ್ಕಾರ್ಫ ಹಾಗೂ ಹುಲಿಯ ಮುಖದ ಚಿತ್ರಣವನ್ನು ಕಲಾವಿದ ಜಿ.ಆರ್. ಕಿನ್ನಾಳ ನೈಜ ಶೈಲಿಯಲ್ಲಿ ಪೋಸ್ಟರ್ ಕಲರ್‌ಗಳಿಂದ ೧೦'X೫" ಅಳತೆ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ.

ಚಿತ್ರ ೩. ಶ್ರೀ ಅಥಣಿ ಮುರುಗೇಂದ್ರ ಶಿವಯೋಗಿಗಳು : ಈ ಕಲಾಕೃತಿಯು ಅಥಣಿ ಶಿವಯೋಗಿಗಳು ಕುಳಿತಿರುವ ಕಲಾಕೃತಿಯಾಗಿದೆ. ಶಿವಯೋಗಿಗಳ ಚಿತ್ರವು ನೈಜವಾಗಿ ಅತೀ ಸುಂದರವಾಗಿ ಮೂಡಿಬಂದಿದೆ. ಈ ಚಿತ್ರದಲ್ಲಿ ಶಿವಯೋಗಿಯ ಮುಖದ ವಿಭೂತಿಯು ತುಂಬಾ ಆಕರ್ಷಕವಾಗಿದೆ. ಅದೇ ರೀತಿ ಶಿವಯೋಗಿಗಳ ಎದೆ, ಹಾಗೂ ಹೊಟ್ಟೆಯ ಚಿತ್ರಣ ಮತ್ತು ಅವರ ಮುಖದಲ್ಲಿಯ ಸಣ್ಣದಾದ ಗಡ್ಡ, ಮೀಸೆಗಳು ತಲೆಗೂದಲು ಚಿಕ್ಕ ಚಿಕ್ಕದಾಗಿದ್ದು, ಸುಂದರವಾಗಿ ನೈಜ ರೂಪಯನ್ನು ತೋರಿಸಿದೆ. ಅವರು ಕೊರಳಲ್ಲಿ ಧರಿಸಿದ ರುದ್ರಾಕ್ಷಿ ಮಾಲೆಯು ಮತ್ತು ಲಿಂಗ ವಸ್ತ್ರವು ಸುಂದರವಾಗಿದೆ. ಅವರು ಕುಳಿತಂತಹ ಭಂಗಿಯು ಒಂದು ಹೆಗಲು ಮೇಲೆ ಬಾಗಿದ ಸ್ಥಿತಿಯು ತುಂಬಾ ಸುಂದರವಾಗಿದೆ. ಅವರು ಕುಳಿರಿತುವುದು ಹುಲಿಯ ಹಾಸಿಗೆಯ ಮೇಲೆ ಹುಲಿಯ ಕಣ್ಣುಗಳು ಮೇಲ್ನೋಟವನ್ನು ನೋಡುತ್ತಿದ್ದು ಅದರ ಬಾಯಿಯಲ್ಲಿ ಚೂಪಾದ ಹಲ್ಲುಗಳು ತಿಳುವಾದ ಕೂದಲು ಅದರ ದೇಹದ ಚರ್ಮವು ತುಂಬಾ ಸೊಗಸಾಗಿ ಮೂಡಿ ಬಂದಿದೆ. ಶ್ರೀ ಶಿವಯೋಗಿಗಳ ಪಾದರಕ್ಷೆಯು ಮತ್ತು ಮಗ್ಗುಲಲ್ಲಿರುವ ತಂಬಿಗೆಯು ನೈಜತೆಯನ್ನು ಹೋಲುತ್ತದೆ. ಶಿವಯೋಗಿಗಳ ಹಿಂದೆ ಬಿದ್ದಂತಹ ಸೂರ್ಯನ ಕಿರಣದಂತೆ ಪ್ರಜ್ವಲಿಸಿರುವ ಕಿರಣಗಳು ತುಂಬಾ ಸೊಗಸಾಗಿ ಕಲಾವಿದ ಮಲ್ಲಣ್ಣ ಸಾವಳಗಿಯವರು ತೈಲವರ್ಣದಿಂದ ತುಂಬಾ ನೈಜತೆಯನ್ನು ಹೋಲುವಂತೆ ಚಿತ್ರಿಸಿದ್ದಾರೆ. ಶಿವಯೋಗಿಗಳು ದೈವಿ ಸ್ವರೂಪವೆಂಬಂತೆ ಭಾವನೆ ನೋಡುಗರಲ್ಲಿ ಹುಟ್ಟುವಂತೆ ಮಾಡಲು ಕಲಾವಿದ ಹಿನ್ನೆಲೆಯಲ್ಲಿ ಪ್ರಕಾಶಮಾನವಾದ ಬೆಳಕನ್ನು ತೋರಿಸಿದ್ದಾರೆ.

ಚಿತ್ರ ೪. ಸಜ್ಜಲಗುಡ್ಡ, ಶರಣಮ್ಮನವರು : ಶರಣಮ್ಮನವರ ಕಲಾಕೃತಿಯ ೨'X೩" ಮೋಟ ಅಳತೆಯ ತೈಲವರ್ಣದ ಚಿತ್ರವಾಗಿದೆ. ಜಗನ್ಮಾತೆ ಶರಣಮ್ಮನವರ ಮುಖದಲ್ಲಿಯ ಭಾವನೆಯ ಸೂಕ್ಷ್ಮತೆಯನ್ನು ಪ್ರತಿಬಿಂಬಿಸುತ್ತವೆ ಆ ಭಾವವು ಆಳವಾದ ವಿಚಾರ ಮಗ್ನವಾಗಿರುವಂತೆ ಕಣ್ಣುಗಳನ್ನು ಹೊಂದಿವೆ. ಮುಖದಲ್ಲಿನ ಭಾವವು ಸುಮಾರು ೮೦ ಕ್ಕಿಂತ ಹೆಚ್ಚಿನ ವಯಸ್ಸನ್ನು ಪ್ರೀತಿಬಿಂಬಿಸುತ್ತವೆ. ಶರಣಮ್ಮನವರು ತೊಟ್ಟ ಬಟ್ಟೆಯ ಬಣ್ಣ ಕೇಸರಿ ಬಣ್ಣವಾಗಿದ್ದು ಬಟ್ಟೆಯು ನೈಜತೆಯಿಂದ ಹೊಂದಿದೆ ಅಮ್ಮನವರ ಕೈಯಲ್ಲಿರುವ ರುದ್ರಾಕ್ಷಿಗಳು ನೈಜವಾಗಿದ್ದು ಮುಂದೆ ಇಟ್ಟಿರುವ ಕಮಂಡಲವು ಸೊಗಸಾಗಿ ಮೂಡಿ ಬಂದಿದೆ ಅಮ್ಮನವರು ಕುಳಿತಿರುವ ಹುಲಿಯ ಚರ್ಮವು ಅತೀ ಸೂಗಸಾಗಿ ಕಾಣುವಂತೆ ನೈಜವಾಗಿ ಬಣ್ಣಗಳೊಂದಿಗೆ ಕಲಾಕೃತಿ ಚಿತ್ರಿಸಿದ್ದು ಹಿನ್ನೆಲೆಯಾಗಿ ವರ್ಣವು ಜಾಂಬಳಿ ಮತ್ತು ತಿಳಿನೀಲಿ ಬಣ್ಣದಿಂದ ಪೂರ್ಣಗೋಳಿಸಲಾಗಿದೆ. ಒಟ್ಟಾರೆಯಾಗಿ ಈ ಚಿತ್ರವನ್ನು ನೋಡುವಾಗ ಸುಂದರವಾದ ನರಳು ಬೆಳಕಿನೊಂದಿಗೆ ನೈಜ ಚಿತ್ರಣಕ್ಕೆ ಅತೀ ಹತ್ತಿರವಾಗುವಂತೆ ಕಲಾವಿದ ಹನುಮಂತಾಚಾರ ಬಿ, ಹಿರೇಹಾಳ ತೈಲವರ್ಣದಿಂದ ಚಿತ್ರಿಸಿದ್ದಾರೆ.

ಚಿತ್ರ ೫. ಶ್ರೀ ಮನಿಜಗುಣ ಶಿವಯೋಗಿಗಳು : ಶಿವಯೋಗಿಗಳ ಚಿತ್ರಣವು ತುಂಬಾ ಸೊಗಸಾಗಿ ಕಲಾವಿದ ಹನುಮಂತಾ ಚಾರ್ಯರು ನೈಜ ಶೈಲಿಗೆ ಹೊಂದುವಂತೆ ತೈಲವರ್ಣದಿಂದ ರಚಿಸಿದ್ದಾರೆ, ಶಿವಯೋಗಿಗಳ ಮುಖದ ಲಕ್ಷಣವು ತುಂಬಾ ಸೊಗಸಾಗಿ ಮೂಡಿ ಬಂದಿದೆ. ಶಿವಯೋಗಿಗಳು ವಿಣೆಯನ್ನು ನುಡಿಸುತ್ತಿರುವ ಚಿತ್ರಣವು ತುಂಬಾ ಸೊಗಸಾಗಿದೆ. ಅವರ ಕೊರಳಲ್ಲಿ ಧರಿಸಿದಂತಹ ಲಿಂಗವಸ್ತ್ರ ರುದ್ರಾಕ್ಷೀ ಮೈಮೇಲೆ ಮೂಡಿಬರುವ ವಿಭೂತಿ ತುಂಬಾ ಸುಂದರವಾಗಿ ಮೂಡಿ ಬಂದಿದೆ. ಶಿವಯೋಗಿಗಳು ಧರಿಸಿದಂತಹ ಬಟ್ಟೆಯ ನೀರಿಗೆಯ ಹಿನ್ನೆಲೆಯಾಗಿ ವಿವೇಕ ಚಿಂತಾಮಣಿ ವಿಚಾರ ಸಾಗರ ಪರಮಾರ್ತ ಗೀತೆ, ಪರಮಾಣು ಭವ ಭೋಪಿ, ಲಿಪಿಗಳು ಅದರ ಹಿಂದೆ ಇರುವ ಶಿವಯೋಗಿಗಳ ತಂಬಿಗೆಯು ನೈಜ ಶೈಲಿಯನ್ನು ಹೋಲುತ್ತವೆ. ಶಿವಯೋಗಿಗಳು ಜಿಂಕೆಯ ಚರ್ಮದ ಮೇಲೆ ಕುಳಿತಿರುವ ಜಿಂಕೆಯ ಚರ್ಮವು ತುಂಬಾ ಸೊಗಸಾಗಿ ನೈಜತೆಯನ್ನು ಹೊಂದಿದೆ ಹಿನ್ನೆಲೆಯಾಗಿ ಶಿವಯೋಗಿಗಳ ಮುಖದ ಹಿಂದುಗಡೆ ಬೆಳಕು ಚೆಲ್ಲುವಂತೆ ಅತ್ಯಂತ ಸುಂದರವಾಗಿ ಕಲಾವಿದನು ೨'X೩" ಸೈಜಿನಲ್ಲಿ ಚಿತ್ರಿಸಿದ್ದಾನೆ.

ಚಿತ್ರ ೬. ಶ್ರೀ ನಲ್ವತ್ತವಾಡ ವೀರೇಶ್ವರ ಶರಣರು : ಈ ಚಿತ್ರವು ನಲ್ವತ್ತವಾಡ ಶ್ರೀ ವೀರೇಶ್ವರ ಶರಣರು ಕುಳಿರಿತುವ ದೃಶ್ಯ ಶ್ರೀ ಶರಣರ ಮುಖದಲ್ಲಿರುವ ವಿಭೂತಿ, ಗಡ್ಡ, ಮೀಸೆ, ಗಂದವನ್ನು ಕಲಾವಿದ ತುಂಬಾ ಸುಂದರವಾಗಿ ಚಿತ್ರಿಸಿದ್ದಾರೆ. ಶ್ರೀ ಶರಣರ ತಲೆಯ ಮೇಲೆ ಇರುವ ವಸ್ತ್ರ ಹಾಗೂ ಶ್ರೀ ಗಳು ಧರಿಸಿದಂತಹ ಬಟ್ಟೆಯನ್ನು ಕಲಾವಿದ ನೈಜ ರೂಪದಂತೆ ಚಿತ್ರಿಸಿದ್ದಾರೆ. ಅವರ ಕೊರಳಲ್ಲಿ ಧರಿಸಿದಂತಹ ರುದ್ರಾಕ್ಷಿ ಹಾಗೂ ಕೈಯಲ್ಲಿ ಹಿಡಿದ ಪುಸ್ತಕ ಹಾಗೂ ಕೈ ಕಾಲುಗಳ ಚಿತ್ರಣವು ಸುಂದರವಾಗಿ ಮೂಡಿ ಬಂದಿವೆ. ಅವರು ಕುಳಿತಿರುವ ಗದ್ದುಗೆಯ ಮೇಲಿನ ಬಟ್ಟೆಯು ನೈಜ ರೂಪವನ್ನು ಹೋಲುತ್ತದೆ. ಮತ್ತು ಶ್ರೀ ಶರಣರ ಹಿನ್ನೆಲೆಯಾಗಿ ಮಠದಲ್ಲಿ ಕುಳಿತಿರುವಂತೆ ಕಿಟಕಿ ಹಾಗೂ ಗೋಡೆಯನ್ನು ಕಲಾವಿದ ನೈಜ ರೂಪದಂತೆ ೨'X೩ ಅಳತೆಯಲ್ಲಿ ಈ ಕಲಾಕೃತಿ ಚಿತ್ರಿಸಿದ್ದಾನೆ.

ಚಿತ್ರ ೭. ಚಿತ್ತರಗಿ ಶ್ರೀ ವಿಜಯ ಮಹಾಂತ ಶಿವಯೋಗಿಗಳು : ಚಿತ್ತರಗಿ ಶ್ರೀ ವಿಜಯ ಮಹಾಂತ ಶಿವಯೋಗಿಗಳು ಸಿಂಹಾಸನದ ಮೇಲೆ ಕುಳಿತಿರುವ ದೃಶ್ಯವಾಗಿದೆ. ಶ್ರೀ ಶರಣರ ಮುಖದ ಲಕ್ಷಣವನ್ನು

ಕಲಾವಿದ ಬಿ.ಎಸ್.ವೆಂಕಟೇಶ್ ನೈಜಶೈಲಿ ರೀತಿಯಲ್ಲಿ ಚಿತ್ರಿಸಿದ್ದಾನೆ. ಶ್ರೀ ಶರಣರು ಧರಿಸಿದಂತಹ ರುಮಾಲು ಹಾಗೂ ತೊಟ್ಟಂತಹ ಬಟ್ಟೆ ಸುಂದರವಾಗಿ. ಮತ್ತು ಅವರು ಎರಡು ಕಾಲುಗಳ ಮೇಲೆ ತಮ್ಮ ಎರಡು ಕೈಗಳನ್ನು ಇಟ್ಟಿರುವ ದೃಶ್ಯವನ್ನು ಕಲಾವಿದ ಚಿತ್ರಿಸಲು ಪ್ರಯತ್ನಿಸಿದ್ದಾನೆ. ಅವರ ಪಾದ ಮತ್ತು ಅವರ ಮುಂದೆ ಇರುವ ಎತ್ತು, ಕುಳಿತಿರುವ ಎರಡು ಬದಿ ಸಿಂಹದ ಚಿತ್ರ ದೈವೀ ಸ್ವರೂಪದಂತೆ ಗೋಚರವಾಗುವ ಬೆಳಕು ಮತ್ತು ದೇವಸ್ಥಾನದ ಚಿತ್ರ ಮತ್ತು ಬಟ್ಟೆಯ ಕಂಬವನ್ನು ಅತ್ಯಂತ ಸುಂದರವಾಗಿ ಕಲಾವಿದನು ಚಿತ್ರಿಸಿದ್ದಾನೆ. ಅವರ ಕಾಲುಗಳ ಕೆಳಗೆ ಇರುವ ಬಟ್ಟೆಯನ್ನು ಹೊದೆಸಿದಂತಹ ಮಂಚ ಹಾಗೂ ಅವರ ಪಾದರಕ್ಷೆ ಕೊರಳಲ್ಲಿ ಧರಿಸಿದಂತಹ ವಸ್ತ್ರವು ಸುಂದರವಾಗಿ ಅತ್ಯಾಕರ್ಷಕವಾಗಿದೆ ಈ ಕಲಾಕೃತಿಯು ೨'X೩" ಅಳತೆಯಲ್ಲಿ.

ಚಿತ್ರ ೮. ಶ್ರೀ ಕಾಶೀಪತಿ ಗಂಗಾಧರ ಶರಣರ : ಓಂ ಏಕಲಾಕ ಐಂಸಿ ಹಜಾರ ಪಾಂಚೋ ಪೀಠ ಪೈಗಂಬರ ಮೌನಾಧೀನ ಜೀತಾ ಪೈಗಂಬರ ಮೌನಾಧೀನ ಕಾಶೀಪತಿ ಗಂಗಾಧರ ಹರಹರ ಮಹಾದೇವ ಎಂಬ ಶರಣರ ವಾಣಿಯಂತೆ ಶ್ರೀ ಗಂಗಾಧರ ಶಿವ ಶರಣರ ವಾಣಿಯಂತೆ ಶ್ರೀ ಗಂಗಾಧರ ಶಿವ ಶರಣರ ಚಿತ್ರಣವು ಕುಳಿತಿರುವ ದೃಶ್ಯಯ ಅಧ್ಬುತವಾಗಿ ಮೂಡಿ ಬಂದಿದೆ. ಶ್ರೀ ಅವರ ಮುಖದಲ್ಲಿಯ ಲಕ್ಷಣ ಹಾಗೂ ಗಡ್ಡ, ತಲೆಯ ಮೇಲಿನ ಕೂದಲು, ಮುಖದಲ್ಲಿಯ ಕುಂಕುಮದ ವಿಭೂತಿ, ಕೊರಳಲ್ಲಿರುವ ರುದ್ರಾಕ್ಷಿ, ಕೈಯಿಂದ ಆಶಿರ್ವದಿಸುತ್ತಿರುವ ಹಾಗೂ ಕೈಯಲ್ಲಿ ಹಿಡಿದಂತಹ ಕೊಡಲಿ ಮತ್ತು ಮಡಚಿದ ಬೆರಳುಗಳನ್ನು ನೈಜ ಶೈಲಿಯಲ್ಲಿ ಕಲಾವಿದ ಬಿ. ಹನುಮಂತಾಚಾರ್ ಚಿತ್ರಿಸಿದ್ದಾರೆ. ಶ್ರೀಗಳು ಧರಿಸಿದಂತಹ ವಸ್ತ್ರ ವಿನ್ಯಾಸ ಸುಂದರವಾಗಿ ಈ ಚಿತ್ರದಲ್ಲಿ ಮೂಡಿ ಬಂದಿದೆ. ಶ್ರೀ ಶರಣರು ಕುಳಿತಿರುವ ಕಾಲು ಹಾಗೂ ಪಾದ ಎಡಗಡೆ ಇರುವ ಪೂಜಾ ಸಾಮಗ್ರಿ, ಹೂವಿನ ಬಳ್ಳಿ, ಹೂವನ್ನು ಕಲಾವಿದ ಸುಂದರವಾಗಿ ಚಿತ್ರಿಸಿದ್ದಾನೆ. ಹಿನ್ನೆಲೆಯಾಗಿ ಗುಡಿಯದಲ್ಲಿ ಮೋಡದ ಚಿತ್ರ ಹಾಗೂ ಸಂಜೆಯ ವೇಳೆ ಎಂದು ಕಾಣುವಂತೆ ಚಿತ್ರಿಸಿದ್ದಾನೆ. ೨'X೩" ಅಳತೆ ಪೋಸ್ಟರ್ ಕಲರನ್ನು ಬಳಸಿ ಸುಂದರವಾಗಿ ಚಿತ್ರಿಸಿದ್ದಾನೆ.

ಚಿತ್ರ ೯. ಶ್ರೀ ಜಗಜ್ಯೋತಿ ಬಸವೇಶ್ವರರ : ಶ್ರೀ ಬಸವೇಶ್ವರರು ಪೂಜೆಗೆ ಕುಳಿತ ದೃಶ್ಯವಾಗಿದೆ. ಶ್ರೀ ಬಸವೇಶ್ವರರ ಮುಖದ ಮೇಲಿನ ಲಕ್ಷಣ ಹಾಗೂ ಹಣೆಯ ಮೇಲಿನ ವಿಭೂತಿ ಹಾಗೂ ಅವರ ಎಡಗೈಯನ್ನು ಮೇಲೆ ಮಾಡಿ ಬಲಗೈಯಿಂದ ಪತ್ರಿಯನ್ನು ಶಿವಲಿಂಗಕ್ಕೆ ಎದರಿಸುತ್ತಿರುವ ದೃಶ್ಯವನ್ನು ಕಲಾವಿದ ರಾಮಚಂದ್ರ ಇಳಕಲ್‌ರವರು ಸುಂದರ ಚಿತ್ರಿಸಿದ್ದಾರೆ. ಶ್ರೀ ಬಸವೇಶ್ವರರ ಮೈ ಮೇಲಿನ ವಿಭೂತಿ ಕೊರಳಲ್ಲಿಯ ರುದ್ರಾಕ್ಷಿ, ಅವರು ಧರಿಸಿದಂತಹ ವಸ್ತ್ರ, ವಿನ್ಯಾಸ ಸುಂದರವಾಗಿ ಮೂಡಿ ಬಂದಿದೆ. ಮುಂದೆ ಹಣ್ಣು ಹೂವು ಪತ್ರಿ ಪೂಜಾ ಸಾಮಗ್ರಿ ಹಾಗೂ ಸಣ್ಣ ಮಂಚದ ಮೇಲೆ ಇಟ್ಟಿರುವ ದೃಶ್ಯ ತುಂಬಾ ಸೊಗಸಾಗಿದೆ. ಅವರ ಎರಡೂ ಬದಿ ದೊಡ್ಡದಾದ ದೀಪಗಳಿದ್ದು, ಅವು ಉರಿಯುತ್ತಿವೆಯೇ ಎಂಬಂತ್ತಾಗುತ್ತದೆ. ಉರಿಯ ಚಿತ್ರಣ ಹಾಗೂ ವಿಭೂತಿ ಧೂಪದ ಸಮೆಯ ಹೂವಿನ ಪುಟ್ಟಿ ತುಂಬಾ ಸುಂದರವಾಗಿ ಮೂಡಿವೆ. ಹಿನ್ನೆಲೆಯಾಗಿ ಶ್ರೀ ಬಸವೇಶ್ವರರು ಮಂಚದ ಮೇಲೆ ಕುಳಿತಿರುವ ಹಾಗೂ ಹಿನ್ನೆಲೆಯು ಮಂಚದ ಗೋಪುರ ಅದರ ಹಿನ್ನೆಲೆಯಾಗಿ ಅವರ ಪೂಜಾ ಕೋಣೆ ೨'X೩" ಅಳತೆಯಲ್ಲಿದೆ. ನೆಲದ ನೋಟವನ್ನಾಗಿ ಕೆಂಪು ಮಿಶ್ರಿತ ಬಣ್ಣದಿಂದ ತೈಲವರ್ಣದ ಬಣ್ಣವನ್ನು ಬಳಸಿಕೊಂಡು ನೈಜ ರೂಪವಾಗಿ ಸುಂದರವಾಗಿ ಕಲಾವಿದನು ರಚಿಸಿದ್ದಾನೆ.

ಚಿತ್ರ ೧೦. ಶ್ರೀ ಬೂದೀಶ್ವರ ಸ್ವಾಮಿಗಳು : ೭೭೫ ವರ್ಷ ಬದುಕಿದ ತಪೋನಿಧಿ ಶ್ರೀ ಬೂದೀಶ್ವರರು ಹೊಸಳ್ಳಿ ಶ್ರೀ ಶರಣರ ಚಿತ್ರಣವಾಗಿದೆ. ಈ ಚಿತ್ರದಲ್ಲಿ ಶ್ರೀ ಶರಣರ ಮುಖದಲ್ಲಿನ ಭಾವನೆ, ಕೂದಲು, ವಿಭೂತಿ, ಬಿಳಿಯದಾದ ಗಡ್ಡ, ಮೀಸೆ ಹಾಗೂ ರುದ್ರಾಕ್ಷಿ ಅತ್ಯಾಕರ್ಷಣೀಯವಾಗಿದೆ. ಶ್ರೀ ಶರಣರು ಧರಿಸಿದಂತಹ ವಸ್ತ್ರ, ಮತ್ತು ಅವರು ಕುಳಿತ ದೃಶ್ಯ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಅವರು ಎರಡೂ ಕೈಗಳನ್ನು ಒಂದರ ಮೇಲೆ ಮತ್ತೊಂದು ಇಟ್ಟಿರುವ ದೃಶ್ಯ ಹಾಗೂ ಅವರು ಎರಡೂ ಕಾಲುಗಳನ್ನು ಮಡಚಿ ಕುಳಿತಿರುವ ದೃಶ್ಯ ಮನಮೋಹಕವಾಗಿದೆ. ಅವರ ಬಲ ಬದಿಯಲ್ಲಿ ಜಪದ ತಂಬಿಗೆ ಹಾಗೂ ದಂಡ ಕಮಂಡಲ ಎಡಬದಿಯಲ್ಲಿ ಪಾದರಕ್ಷೆ ಹಾಗೂ ಅವರು ಕುಳಿತಿರುವ ವಸ್ತ್ರವನ್ನು ಕಲಾವಿದ ನೈಜ ಶೈಲಿಯಲ್ಲಿ ಚಿತ್ರಿಸಿದ್ದಾನೆ. ಹಿನ್ನೆಲೆಯಾಗಿ ಸುಂದರವಾಗಿ ನಿಸರ್ಗ ಚಿತ್ರಣವನ್ನು ಕಲಾವಿದ ರಚಿಸಿದ್ದಾನೆ. ಮರ, ಎಲೆ, ಹೂವು, ಕಲ್ಲು ಹಾಗೂ ನೀರು ಮತ್ತು ಮಂಜಾದ ಬೆಟ್ಟ, ಮೋಡಗಳನ್ನು ಕಲಾವಿದ ಶ್ರೀ ಶರಣರು ತಪಸ್ಸಿಗೆ ಕುಳಿತಿರುವ ದೃಶ್ಯವನ್ನು ಕಲಾವಿದ ನೀ. ದೇಸಾಯಿ ೨'X೩" ಅಳತೆಯಲ್ಲಿ ತೈಲವರ್ಣದಿಂದ ಸುಂದರವಾಗಿ ಚಿತ್ರಿಸಿದ್ದಾರೆ.

ಚಿತ್ರ ೧೧. ಶ್ರೀ ಮ.ನಿ.ಪ್ರ ಮರಿಶಾಂತ ಮಹಾಸ್ವಾಮಿಗಳು : ಶ್ರೀ ಶರಣರು ಮಂಚದಲ್ಲಿ ಕುಳಿರಿತುವ ಚಿತ್ರವಾಗಿದೆ. ಶ್ರೀ ಶರಣರ ಮುಖವು ಹಾಗೂ ಅವರ ವಿಭೂತಿ, ಸಣ್ಣದಾದ ಬಿಳಿ ಹಾಗೂ ಕಪ್ಪು ಮಿಶ್ರಿತ ಗಡ್ಡ, ಕೊರಳಲ್ಲಿನಲ್ಲಿ ರುದ್ರಾಕ್ಷಿಯನ್ನು ಕಲಾವಿದ ನೈಜ ಶೈಲಿಯಲ್ಲಿ ಚಿತ್ರಿಸಿದ್ದಾನೆ. ಬಲಗೈಯಲ್ಲಿ ಚಿತ್ರವನ್ನೂ ಎಡಗೈಯನ್ನು ಮೊಣಕಾಲ ಮೇಲೆ ಇಟ್ಟುಕೊಂಡಿರುವ ಚಿತ್ರಣ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಎರಡೂ ಪಾದಗಳು, ಅವರು ಧರಿಸಿದಂತಹ ವಸ್ತ್ರವಿನ್ಯಾಸ ಹೀಗೆ ಅದರಲ್ಲಿಯ ಧಡಿಯ ಚಿತ್ರಣ ಮತ್ತು ಬಟ್ಟೆಯ ಮಡಿಕೆ ಸುಂದರವಾಗಿ ಮೂಡಿ ಬಂದಿದೆ. ಅವರ ಪಾದರಕ್ಷೆ ಮತ್ತು ಬಲಬದಿ ಇರುವ ಸಣ್ಣದಾದ ಮಂಚ, ನೆಲದ ಚಿತ್ರಣ ಮಂಚದ ಮೇಲಿನ ಬಟ್ಟೆ ಅದರಲ್ಲಿ ಧಡಿ ಸುಂದರವಾಗಿ ಮೂಡಿ ಬಂದಿದೆ. ಎಡಬದಿಯಲ್ಲಿ ಕಮಂಡಲ ಹಾಗೂ ಹಿನ್ನೆಲೆಯಾಗಿ ಬಿಳಿ ಮಿಶ್ರಿತ ಕಂದು ವರ್ಣನಿಂದ ರಚಿಸಿದ ಗೋಡೆ ದೈವೀ ಸ್ವರೂಪದ ಬಿಳಿಯದಾದ ಬಣ್ಣದಿಂದ ಕಲಾವಿದ ಮಲ್ಲಣ್ಣಾ ಸಾವಳಗಿಯವರು ತೈಲವರ್ಣದಿಂದ ೨'X೩" ಸೃಜನಲ್ಲಿ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಮತ್ತು ಅವರ ಬಲಬದಿಯಲ್ಲಿ ನೀರು ಬೀಳುತ್ತಿರುವ ಹಾಗೂ ಬಾತುಕೋಳಿ, ಎಡಬದಿಯಲ್ಲಿ ಸಾಗರದ ಚಿತ್ರವನ್ನು ಕಲಾವಿದ ನೈಜ ರೂಪದಲ್ಲಿ ಚಿತ್ರಿಸಿದ್ದಾನೆ. ಹಿನ್ನೆಲೆಯಾಗಿ ಬಿಳಿ, ಹಸಿರು, ಬಣ್ಣದಿಂದ ಮಿಶ್ರಿತವಾದ ದೈವೀ ಸ್ವರೂಪದ ಬೆಳಕು ಅದರ ಹಿನ್ನೆಲೆಯಾಗಿ ಮೋಡ, ದೊಡ್ಡದಾದ ಬಂಡೆಕಲ್ಲುಗಳು ಸುಂದರವಾಗಿ ಮೂಡಿವೆ. ಅವರು ಕುಳಿತಿರುವ ಹುಲಿಯ ಚರ್ಮವನ್ನು ಕಲಾವಿದ ನೈಜ ಶೈಲಿಯಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದಾನೆ. ಕಲಾವಿದ ಮಲ್ಲಣ್ಣಾ ಸಾವಳಗಿಯವರು ತೈಲವರ್ಣದಿಂದ ೨'X೩" ಸೃಜಿನಲ್ಲಿ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ.

ಚಿತ್ರ ೧೨. ಶಿವಶರಣೆ ಇಟಗಿ ಭೀಮಾಂಬಿಕಾ : ಶ್ರೀ ಶಿವಶರಣೆ ಭೀಮಾಂಬಿಕೆಯ ಚಿತ್ರಣವಾಗಿದೆ. ಶ್ರೀ ಭೀಮಾಂಬಿಕೆ ನೂಲನ್ನು ನೇಯುತ್ತಿರುವ ದೃಶ್ಯವಾಗಿದೆ. ಶಿವಶರಣೆ ಭೀಮಾಂಬಿಕೆಯ ಮುಖದಲ್ಲಿನ ಭಾವನೆಯು ನೈಜ ರೂಪದಲ್ಲಿ ಚಿತ್ರಿಸಲು ಕಲಾವಿದ ಪ್ರಯತ್ನಿಸಿದ್ದಾನೆ. ಶರಣೆ ಭೀಮಾಂಬಿಕೆಯ ಸೀರೆಯನ್ನು ಸಹ ಕಲಾವಿದ ನೈಜವಾಗಿ ಚಿತ್ರಿಸಲು ಪ್ರಯತ್ನಿಸಿದ್ದಾನೆ. ಬಲಗೈಯಿಂದ ಚಕ್ರವನ್ನು ತಿರುಗಿಸುತ್ತಾ ಎಡಗೈಯನ್ನು ಮೇಲೆ ಮಾಡಿ ನೂಲನ್ನು ಹಿಡಿದಿರುವ ದೃಶ್ಯವಾಗಿದೆ. ಶ್ರೀ ಭೀಮಾಂಬಿಕೆಯ

ಕೈಗಳು ಸುಂದರವಾಗಿ ಮೂಡಿವೆ. ಕೊರಳಲ್ಲಿಯ ಸರ, ಹಣೆಯ ಮೇಲಿನ ವಿಭೂತಿ, ನೈಜ ಶೈಲಿಯಲ್ಲಿ ಚಿತ್ರಣವಾಗಿದೆ. ಹಿನ್ನೆಲೆಯಾಗಿ ಮನೆಯ ಬಾಗಿಲಿನ ದೃಶ್ಯ ಸುಂದರವಾಗಿದೆ. ಬಲಗಡೆ ಬಸವಣ್ಣನ ಮೂರ್ತಿ ಮತ್ತು ಅದರ ಮೇಲ್ಗಡೆ ಕಿಟಕಿ, ನೀಲಿ, ಬಿಳಿ ಮಿಶ್ರಿತ ಬಣ್ಣದ ಗೋಡೆ ಸುಂದರವಾಗಿ ಮೂಡಿವೆ. ನೂಲನ್ನು ನೇಯುವ ಚಕ್ರವು ಮತ್ತು ಅದರ ಕೆಳಗೆ ಇರುವ ವಸ್ತ್ರದ ವಿನ್ಯಾಸ ಪೋಸ್ಟರ್ ಕಲರ್‌ನಿಂದ ಕಲಾವಿದ ೨'X೩" ಅಳತೆಯಲ್ಲಿ ಚಿತ್ರಿಸಿದ್ದಾನೆ.

ವಿಜಯ ಕಲಾ ಮಂದಿರದಲ್ಲಿ ಸಂಗ್ರಹಗೊಂಡ ಕಲಾಕೃತಿಗಳು :

೧. ಸಂಯೋಜನಾತ್ಮಕಗಳು

೨. ಭಾವಚಿತ್ರಗಳು

೩. ಪೂರ್ಣಭಾವಚಿತ್ರ

೧. ಚಿತ್ರ –೧ ಕ್ರೀಯೇಶನ್ : ನಾಡಿನ ಹೆಸರಾಂತ ಹಿರಿಯ ಕಲಾವಿದ ಡಾ॥ ಜೆ.ಎಸ್. ಬಂಡೇರಾವ್ ಮೂಲತಹ ಗುಲಬರ್ಗಾದವರು ಪ್ರಸ್ತೂತ ಕರ್ನಾಟಕ ಲಲಿತ ಕಲಾ ಅಕಾಡಮಿಯ ಅಧ್ಯಕ್ಷರಾದ ಇವರು, ಪೊಟ್ರೇಚ್, ಹಾಗೂ ಕ್ರಿಯೇಟಿವ್ ಪೆಂಟಿಂಗ್ಸ್‌ಗಳ ರಚನೆಯಲ್ಲಿ ಸಿದ್ಧ ಹಸ್ತರು, ಇವರ ಪೊಟ್ರೇಟ್ ಕಲಾಕೃತಿಗಳಿಂತು ನೈಜತೆಯನ್ನ ನಾಚಿಸುವಂತೆ ವರ್ಣಸಂಯೋಜಿಸಿ ಚಿತ್ರರಚಿಸಿದ ಶ್ರೀಯುತರು, "ವಿಂಡೋ" ಶೀರ್ಷಿಕೆಯ ಸರಣೆ ಕಲಾಕೃತಿಗಳೆಂತು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಇವರ ಖ್ಯಾತಿಯನ್ನು ಹೆಚ್ಚಿಸಿದವು, ಸೌಮ್ಯ ವರ್ಣಗಳ ಸಂಯೋಜನೆಯಲ್ಲಿಯೇ ನೆರಳು ಬೆಳಕಿನ ಪ್ರಭಾವ ಹಾಗೂ ವಿಶಿಷ್ಠ ವಿನ್ಯಾಸಗಳನ್ನು ಸೃಷ್ಟಿಸುತ್ತದೆ. ಕಲಾಕೃತಿಯಲ್ಲಿ ಕಲಾವಿದರು ಬಳಸುವ ವೈವಿದ್ಯಮಯ ಬಣ್ಣಗಳ ಬೆಳಕಿನ ಪ್ರತಿಫಲನಗಳು ಪ್ರೇಕ್ಷಕರನ್ನು ಕಟ್ಟಿ ಹಾಕುವಲ್ಲಿ ಯಶಸ್ವಿಯಾಗುತ್ತಾರೆ, ಇದು ಕಲಾವಿದರ ನಿಪೂಣತೆ, ಮತ್ತು ಪ್ರೌಢತೆಯನ್ನು ಎತ್ತಿ ತೋರಿಸುತ್ತದೆ, ಸರಳ ಸಜ್ಜನಿಕೆಯ ಈ ಕಲಾವಿದರ ಕಲಾ ಕೃತಿಗಳಿಗೆ ಸಮನಾಗಿ ನಿಲ್ಲಬಲ್ಲ ಕಲಾ ಕೃತಿಗಳು ಎಂದರೆ ಅವು ಡಾ॥ ಜೆ.ಎಸ್. ಬಂಡೇರಾವ ಅವರ ಕಲಾಕೃತಿಗಳೇ ಹೊರತು ಬೇರೆ ಕಲಾ ಕೃತಿಗಳನ್ನು ಹೊಲಿಸಲು ಸಾದ್ಯವಾಗಲಾರದು, ಅಂತಹ ಶ್ರೇಷ್ಠ ಕಲಾಕೃತಿಗಳ ಧೀಮಂತ ಕಲಾ ವಿದರು ಡಾ॥ ಜೆ.ಎಸ್. ಖಂಡೇರಾವ ಅವರು. ಕಲಾಕೃತಿ $2\times2\frac{1}{2}$

೨. ಚಿತ್ರ –'ನಿಸರ್ಗಚಿತ್ರ' :ಕರ್ನಾಟಕ ಕಲಾಕ್ಷೇತ್ರದಲ್ಲಿ ಇನುಗಿದಾಗ ಪ್ರತ್ಸೂತದಲ್ಲಿ ಮತ್ತೆ ಮತ್ತೆ ಕೇಳಿಬರುವ ಹೆಸರು ಎಂದರೆ, ಶ್ರೀ ಎಂ. ಸಿ. ಚೆಟ್ಟಿಯವರದು ಮೂಲತ ಹುಬ್ಬಳ್ಳಿಯ ವಿಜಯ ಮಹಾಂತೇಶ ಚಿತ್ರಕಲಾ ಮಹಾವಿದ್ಯಾಲಯದ ಹಿರಿಯ ಉಪನ್ಯಾಸಕರಾದ ಶ್ರೀ ಎಂ.ಸಿ. ಚೆಟ್ಟಿಯವರು, ಪೋಟ್ರೇಟ್ ಕಲಾಕೃತಿ ರಚಿಸುವಲ್ಲಿ ಸಿದ್ದ ಹಸ್ತರು, ಕರ್ನಾಟಕದ ಹೆಸರಾಂತ ಪೋಟ್ರೈರೈ ರಚಿವ ಕಲಾವಿದರ ಸಾಲಿನಲ್ಲಿ ಹೆಚ್ಚು ಕೇಳಿಬರುವ ಹೆಸರು ಇದೇ ಶ್ರೀ ಎಂ.ಸಿ. ಚಟ್ಟಿಯವರದು, ಜೊತೆಗೆ ಸೃಜನಶೀಲ ಚಿತ್ರ ರಚನೆಯಲ್ಲಿಯು ವಿಶಿಷ್ಟ ಸಾಧನೆಯನ್ನು ಮಾಡಿರುವ ಶ್ರೀಯುತರು ಇತ್ತೀಚಿಗೆ ರೇಖಾ ಪ್ರದಾನವಾದ ಸರಣಿ ಚಿತ್ರಗಳನ್ನು ರಚಿಸಿ ಗಮನ ಸೆಳೆದಿದ್ದಾರೆ. ಮನುಷ್ಯ ಆಕೃತಿಯ ವಿವಿಧ ಬಂಗಿಗಳನ್ನೊಳಗೊಂಡ ಇತ್ತೀಚಿನ ಅವರ ಕಲಾಕೃತಿಗಳನ್ನು ಅವಲೋಕಿಸಿದಾಗ ಪ್ರಖರ ವರ್ಣ ಸಂಯೋಜನೆ, ಮತ್ತು ರೇಖಾ ಪ್ರಧಾನವಾದ ಇವರು ಕಲಾಕೃತಿಗಳು ನಾಡಿನ ಹೆಸರಾಂತ ಕಲಾವಿದರ

ಸಾಲಿನಲ್ಲಿ ಎದ್ದು ನಿಲ್ಲುತ್ತವೆ. ಜೊತೆಗೆ, ಶ್ರೀ ಎಂ.ಸಿ. ಚಟಿಯವರ ಕಲಾ ಪ್ರೌಢಿಮೆಗೆ, ಸಾಕ್ಷಿಯಾಗಿವೆ, ಅಲ್ಲದೆ ಅವರ ನಿಸರ್ಗ ಚಿತ್ರಗಳಲ್ಲಿ ನಿಸರ್ಗದತ್ತವಾದ ಹಸಿರು ಹೊದಿಕೆಯ ಸೌಂದರ್ಯವನ್ನು ಹೂ, ವೃಕ್ಷಗಳನ್ನು ಮೇಳೈಯಿಸಿ ವಿಶಿಷ್ಟವಾಗಿ ರಚಿಸಿದ್ದನ್ನು ನಾವು ಕಾಣುತ್ತೇವೆ, ಅಕ್ರಾಲಿಕ್, ತೈಲ್‌ವರ್ಣ, ಜಲವರ್ಣಮತ್ತು ಕ್ರೆಯಾನ್‌ಸ ಬಳಿಸಿ ರಚಿಸುವ ಇವರ ಇತ್ತಿಚೀನ ಚಿತ್ರಗಳು ಶ್ರೇಷ್ಠ ಕಲಾ ಕೃತಿಗಳಾಗಿವೆ. ಈ ಕಲಾಕೃತಿಯ 2×3 ಅಳತೆಯದಾಗಿದೆ.

೩. **ಚಿತ್ರ ಜೋಕಾಲಿಯಾಡುವ ಮಹಿಳೆ** : ಕರ್ನಾಟಕದ ಕಲಾಕ್ಷೇತ್ರದಲ್ಲಿ ಮುಂಚೂನಿಯಲ್ಲಿ ಕೇಳಿ ಬರುವ ಹೆಸರು ಕಲಾವಿದ ಶ್ರೀ ಜೆ.ಎಂ.ಎಸ್. ಬೆಂಗಳೂರಿನ ಹೆಸರಾಂತ ಕೆನ್‌ಕಲಾ ಶಾಲೆಯ ಪ್ರಾಚಾರ್ಯರಾಗಿ ಉತ್ತಮ ಕಾರ್ಯ ನಿರ್ವಹಿಸಿ ಇದೀಗ ನಿವೃತ್ತಿ ಹೊಂದಿ ಪೂರ್ಣಾವದಿಯನ್ನು ಚಿತ್ರರಚನೆಗಾಗಿಯೇ ಮೀಶಲಿಟ್ಟ ಹಿರಿಯ ಕಲಾವಿದ ಶ್ರೀ ಜೆ.ಎಂ.ಎಸ್. ಮಣಿಯವರು, ನೈಜ ದೃಶ್ಯಗಳನ್ನು ತಮ್ಮ ಕಲಾ ಕೃತಿಗಳಲ್ಲಿ ಸೆರೆಹಿಡಿದು, ಅವುಗಳಿಗೆ ತಮ್ಮ ಆಘಾದ ಪಾಂಡಿತ್ಯವಾದ ವರ್ಣ ವಿನ್ಯಾಸ ಹಾಗೂ ಸೃಜನಶೀಲತೆಯ ಮೆರಗು ಕೊಟ್ಟು ದೃಶ್ಯ ವಿನ್ಯಾಸವನ್ನು ವಿಶೀಷ್ಠ ರೀತಿಯಲ್ಲಿ ಪ್ರೇಕ್ಷಕರ ಎದುರು ಪ್ರದರ್ಶಿಸುವ ಅವರ ಪಾಂಡಿತ್ಯ ಪರಿಪೂರ್ಣವಾದದ್ದು, ಅಂತಹದರಲ್ಲಿ "ಜೋಕಾಲಿ ದೃಶ್ಯ"ದ ಅವರ ಕೃತಿ ನೋಡುಗರ ಗಮನ ಸೆಳೆಯುತ್ತದೆ. ವರ್ಣ ಮತ್ತು ಆಕೃತಿಗಳ ವಿನ್ಯಾಸ, ಜೋಕಾಲಿ ಆಡುವ ಮಹಿಳೆಯ ಬಂಗಿಯಂತು ಸರ್ವರ ಗಮನವನ್ನು ಸೆಳೆಯುತ್ತದೆ ಇಂತಹ ಅವರ ಅನೇಕ ಕಲಾಕೃತಿಗಳು ವಿಶಿಷ್ಟವು ಮತ್ತು ವಿಶೇಷವಾದಂತವುಗಳು, ಜೊತೆಗೆ ಕಲಾಕೃತಿಗಳ ಮಾರ್ಕೆಟ್ ಮಾರ್ಗದಲ್ಲಿ ಮುಂಚುಗಿಯಲ್ಲಿದ್ದು ಬೇಡಿಕೆಯ ಕಲಾಕೃತಿಗಳಾಗಿ ಹೊರ ಹೊಮ್ಮುವ ಇವರ ಕಲಾ ಕೃತಿಗಳನ್ನು ನೋಡುವುದೇ ಒಂದು ಭಾಗ್ಯ. ಈ ಕಲಾಕೃತಿಯು ಅಳತೆಯದಾಗಿದೆ.

೪. **ಚಿತ್ರ ಪ್ರಕೃತಿ ವಿಕೋಪ** :ಹುಬ್ಬಳ್ಳಿಯ ಶ್ರಿ ವಿಜಯ ಮಹಾಂತೇಶ ಚಿತ್ರಕಲಾ ಮಹಾವಿದ್ಯಾಲಯದ ಉಪನ್ಯಾಸಕರು ಕಲಾವಿದ ಶ್ರೀ ಸಿ.ಡಿ. ಜಟ್ಟೆಣ್ಣವರ ಅವರ ಅಕ್ರಾಲಿಕ್ ಕಲಾ ಕೃತಿಗಳನ್ನು ನೋಡುವುದೇ ಸೌಭಾಗ್ಯ ಮಕ್ಕಳ ವಿವಿಧ ಭಂಗಿಗಳನ್ನು ಮುಖ್ಯ ವಸ್ತುವನ್ನಾಗಿ ಸಂಯೋಜಿಸಿ ರಚಿಸಿದ ಅವರ ಕಲಾಕೃತಿಗಳು ಕಲಾ ಪ್ರೇಕ್ಷಕರ ದೃಷ್ಟಿಯನ್ನು ಸೆಳೆಯುತ್ತವೆ. ಜೊತೆಗೆ ಪ್ರಕೃತಿಯ ವಿಕೋಪಕ್ಕೆ ಸಿಕ್ಕು ನಲುಗುತ್ತಿರುವವರ ದೃಶ್ಯವನ್ನು ಅಕಾಲಿಕ್ ಮಾಧ್ಯಮದಲ್ಲಿ ರಚಿಸಿದ ಅವರಕೃತಿಯನ್ನು ನೋಡಿದಾಗ ಭಯ, ಆತಂಕ ಹಾಗೂ ರಕ್ಷಣೆಗಾಗಿ ಸಹಾಯ ಹಸ್ತಕ್ಕೆ ಕೋರಿ ಕೈಚಾಚಿದ ಆಕೃತಿಗಳ ಬಂಗಿ, ದೃಶ್ಯ, ಹಾಗೂ ವರ್ಣ ವಿನ್ಯಾಸವು ವಿಷಯದ ದೃಡತೆಯನ್ನು ವರ್ಣಿಸುವಂತಿದೆ, ಈ ಕೃತಿಯನ್ನು ನೋಡಿದಾಗ ಪ್ರಕೃತಿಯ ವಿಕೋಪದ ಕ್ರೂರತೆಯು ಕಣ್ಣ ಮುಂದೆ ಕಟ್ಟದಂತಾಗುತ್ತದೆ ಇಂತಹ ಕಲಾಕೃತಿಗಳನ್ನು ರಚಿಸಿದ ಕಲಾವಿದ ಸಿ.ಡಿ. ಜಟ್ಟೇಣ್ಣವರ ಅವರು ತಮ್ಮ ಕಲಾ ಕೃತಿಗಳಲ್ಲಿ ಸಾಮಾಜಿಕ ನೋವು, ನಲಿವು, ಹಾಗೂ ಸಾಂಧರ್ಬಿಕವಾಗಿ ಅನುಭವಿಸುವ ದುಸ್ತರ ಪರಿಸ್ಥಿತಿಗಳನ್ನು ಸೆರೆಹಿಡಿದು ಅದಕ್ಕೆ ಸೃಜನಶೀಲತೆಯ ಮೆರುಗುನೀಡಿ ಪ್ರೇಕ್ಷಕರ ಮುಂದೆ ಇಡುವ ಇವರು ನೈಜತೆಯನ್ನು ಕಲಾಕೃತಿಗಳಲ್ಲಿ ಅಳವಡಿಸಿ ಚಿತ್ರಿಸಲು ಇಚ್ಚಿಸುತ್ತಾರೆ. ಈ ಕಲಾಕೃತಿಯು ಅಳತೆಯಿಲ್ಲದೆ.

೫. **ಚಿತ್ರ 'ಗೂಳಿ'** : ಗದಗ ಜಿಲ್ಲೆಯ ಕಿರಟಗೇರಿ ಗ್ರಾಮದ ಶ್ರೀ ಕೆ. ಎಸ್. ಬಂಡಿಯವರು ಗದುಗಿನ ವಿಜಯ ಕಲಾಮಂದಿರದಲ್ಲಿ ಚಿತ್ರಕಲಾ ಶಿಕ್ಷಣ ಪಡೆದು ಚಿತ್ರಕಲೆಯಲ್ಲಿ ವಿಶಿಷ್ಟವಾದ ಪ್ರೌಢಮೆಯನ್ನು ಪಡೆದವರು, ತೈಲ್ ವರ್ಣ ಜಲವರ್ಣಗಳಲ್ಲಿ ಸೂಲಲಿತವಾಗಿ ಚಿತ್ರ ರಚಿಸುವ

ಇವರ ರೇಖಾಚಿತ್ರಗಳು ನೋಡುಗರ ಮನಸೆಳೆಯುತ್ತವೆ. ರಿಯಾಲಿಸ್ಟಿಕ್ ಕಲಾಕೃತಿಗಳನ್ನು ರಚಿಸುವಲ್ಲಿ ವಿಶೇಷ ಆಸಕ್ತಿಯುಳ್ಳ ಇವರು, ವಿವಿಧ ಹಳ್ಳಿಯ ದೃಶ್ಯಗಳನ್ನು ಆಯುದಕೊಂಡು ರಚಿಸಿದ ಇವರ ಕಲಾ ಕೃತಿಗಳು ಅತ್ಯುತ್ತಮ ಕಲಾಕೃತಿಗಳು ಇದರಲ್ಲಿ ತೈಲ್ ವರ್ಣಗಳಂತು ಜನಸಾಮಾನ್ಯರ ಮನಸ್ಸಿನಿಂದ ಅಳಿಸಲಾಗದಷ್ಟು ಪ್ರಭಾವ ಬೀರಿವೆ, ಅದರಲ್ಲಿ ಈ ಗೂಳಿಗಳ ವಿವಿಧ ಬಂಗಿಗಳನ್ನು ನೈಜವಾಗಿ ಉತ್ತಮ ಚಿತ್ರರಚನೆ, ಮಾಡಿದ್ದಾರೆ, ಜೊತೆಗೆ ಶಿಲ್ಪಕಲಾಕೃತಿಗಳನ್ನು ರಚಿಸುವುದರಲ್ಲಿಯು ಶ್ರೀ ಕೆ.ಎಸ್. ಬಂಡಿಯವರು ಸಿದ್ಧ ಹಸ್ತರು.

ಚಿತ್ರ ೬ : ಲಂಬಾಣಿ ಮಹಿಳಿಯವರು : ಮೂಲತಃ, ಬಿಜಾಪೂರದವರಾದ ಶ್ರೀ ಶ್ರೀಧರ ಚವ್ಹಾಣ ಅವರು ವಿವಿಧ ಕಲಾ ತಂತ್ರಗಳ ಅನ್ವೇಶಣಾ ಕಲಾವಿದರು, ಸದಾ ಪ್ರಯೋಗ ಶೀಲದಲ್ಲಿಯೇ ನಿರತ ಇವರು ಲಂಬಾಣಿ ಮಹಿಳೆಯವರ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ದೃಶ್ಯಗಳನ್ನು ಆಯ್ದುಕೊಂಡು ರಚಿಸಿದ ಕಲಾಕೃತಿಗಳು ಸರ್ವರ ಮನಸ್ಸನ್ನು ಸೆಳೆ ಬಲ್ಲಂತವು, ಅಕಾಲಿಕ್ ವರ್ಣ ಸಂಯೋಜನಯಲ್ಲಿ ರಚಿತ ಈ ದೃಶ್ಯಗಳಲ್ಲಿ ಆಕೃತಿಗಳ ವಿನ್ಯಾಸ, ಬಣ್ಣಗಳ ವಿನ್ಯಾಸ ನಿಸರ್ಗದೃಶ್ಯಗಳನ್ನೊಳಗೊಂಡ ಬಾಕ್‌ಗ್ರೌಂಡ್ ನೋಡುಗರನ್ನು ಸುಲಭವಾಗಿ ದೃಶ್ಯ ಎಕರೂಪಗೊಳಿಸುತ್ತವೆ, ಇಂತಹ ಅಪರೂಪದ ಕಲಾಕೃತಿಗಳನ್ನು ರಚಿಸುವ ಕಲಾವಿದ ಶ್ರೀಧರ ಚವ್ಹಾಣ ಅವರು, ಜಲವರ್ಣದಲ್ಲಿ ನಿಸರ್ಗ ಚಿತ್ರಗಳನ್ನು ರಚಿಸುವುದರಲ್ಲಿಯು ಸಿದ್ಧಹಸ್ತ ಇದರಲ್ಲಿ ಐತಿಹಾಸಿಕ ಸ್ಥಳಗಳಾದ, ವಿಜಾಪೂರ, ಬದಾಮಿ, ಹಂಪಿಯದೃಶ್ಯಗಳನ್ನು ಅವರು ಜಲವರ್ಣದಲ್ಲಿ ಸೇರೆಹಿಡಿದ ಬಗೆಯನ್ನು ನೋಡಿದರೆ, ಅವರೊಬ್ಬ ಅಪರೂಪದ ದೃಷ್ಟಿಹೊಂದಿದ ಕಲಾಕಾರನೆಂಭ ಛಾಪು ಹುಟ್ಟುತ್ತದೆ. ಈ ಕಲಾಕೃತಿಯ ಅಳತೆಯ

೭. ಚಿತ್ರ ಮ್ಯೂಜಿಸಿಯನ್ : ಕರ್ನಾಟಕ ಕಲಾಕ್ಷೇತ್ರದ ಇನ್ನೋರ್ವ ಮೇರು ಪ್ರತಿಭೆ ಡಿ.ಕೆ. ಕಾಮಕರ ರವರ ಈ ಕಲಾಕೃತಿ ಗ್ರಾಮೀಣಭಾಗದ ಮಹಿಳೆಯರಲ್ಲಿ ಸಂಗೀತ ಕಲೆಯನ್ನು ಪುಸ್ತೂತ ಪಡಿಸುವ ಈ ದೃಶ್ಯವನ್ನು ಪ್ರಸ್ತೂತ ಶೈಲಿಗಳ ಜೊತೆಗೆ ಮೇಳೈಸಿ, ಎಲೋ ಆಕಾರ್, ಆರೆಂಜ್, ಹಾಗೂ ಕಪ್ಪು ವರ್ಣಗಳನ್ನು ಉಪಯೋಗಿಸಿಕೊಂಡು ನೈಜತೆಯೊಂದಿಗೆ ಕ್ರಿಯೇಶನ್ ಬಳಸಿಕೊಂಡು ಅದ್ಭೂತ ಚಿತ್ರರಚನೆ ಮಾಡಿದ್ದಾರೆ, ಈ ಕಲಾಕೃತಿಗಳಲ್ಲಿ ಮುಖ್ಯವಾಗಿ ವರ್ಣ ಬಳಕೆ ಹಾಗೂ ಉಪಯೋಗದಲ್ಲಿ ವಿಶೀಷ್ಟವಾಗಿ ತಂತ್ರಗಾರಿಕೆಯನ್ನು ಕಲಾವಿದರು ಬಳಸಿಕೊಂಡಿದ್ದಾರೆ. ಹೀಗಾಗಿ ಕಲಾ ಕ್ಷೇತ್ರದಲ್ಲಿ ಈ ಕಲಾ ವಿದರ ಕಲಾಕೃತಿಗಳು ವಿಶೇಷ ಸ್ಥಾನ ಪಡೆದುಕೊಂಡು ಬೇಡಿಕೆಯ ಕಲಾ ಕೃತಿಗಳಾಗಿ ಹೊರ ಹೊಮ್ಮಿವೆ. ಈ ಕಲಾಕೃತಿಯ ಅಳತೆಯಲ್ಲಿದೆ.

೮. ವೆಟಿಂಗ್ : ತರ್ಕಬದ್ಧ ವಿಷಯ ಮತ್ತು ಅಮೂರ್ತತೆಯನ್ನು ಬಿಚ್ಚಿಡುವ ಅಂದರೆ "ಸತ್ಯ" ವಿತ್ಯಗಳಗಳನ್ನು ಪ್ರತಿಬಿಂಬಿಸುವ ಕಲಾಕೃತಿಯಿದು ಕೆಂಪು ನೀಲಿ ವರ್ಣಗಳ ವಿನ್ಯಾಸದೊಂದಿಗೆ ವಿಷಯ ಸ್ಪಷ್ಟತೆಗೆ ಆದ್ಯತೆ ನೀಡಿದನ್ನು ನಾವಿಲ್ಲಿ ಕಾಣುತ್ತೇವೆ. ನೀಳಕಾಯದ ಮಹಿಳೆಯ ಚಿತ್ರವನ್ನು ಅರ್ದಮರೆಯಲ್ಲಿ ನಿಂತ ಬಂಗಿಯನ್ನು ನೋಡಿದು ಪ್ರಕೃತಿಯ ಸತ್ಯವನ್ನು ತೆರೆದಿಡುವ ಪ್ರಯತ್ನ ಕಲಾವಿದರಿಗೆ ಇರಬಹುದೆಂಬ ಬಾಷವಾಗುತ್ತದೆ, ಒಟ್ಟಿನಲ್ಲಿ ದೃಶ್ಯಗಳು, ಹಾಗೂ ವರ್ಣಗಳ ವಿನ್ಯಾಸವನ್ನು ಕಲಾವಿದ ವಿಲ್ಸನ ಎನ್. ಎಸ್. ಅವರು ಉತ್ತಮ ರೀತಿಯಲ್ಲಿ ಚಿತ್ರಿಸುವುದನ್ನು ನಾವು ಈ ಕಲಾಕೃತಿಯಿಂದ ನೋಡಬಹುದು.

೯. ಚಿತ್ರ ಮಹಿಳೆ (ಉಮನ್) : ನಾಡಿನ ಶ್ರೇಷ್ಟ ಕಲಾಕೃತಿಗಳಲ್ಲಿ ಶ್ರೀ ಎಂ.ಬಿ. ಪಾಟೀಲರ ಕಲಾಕೃತಿಗಳು ವಿಶಿಷ್ಠ ರೀತಿಯಲ್ಲಿ ಗಮನ ಸೇಳೆಯುವುದನ್ನು ನಾವು ಕಾಣುತ್ತೇವೆ. ಮಹಿಳೆಯ ದೇಹ ಸೌಂದರ್ಯದ ಸುಂದರತೆಯ ಚಿತ್ರಿಸುವಲ್ಲಿ ನಿಷ್ಣೂತರಾದ ಇವರು ಮಹಿಳೆಯ ವಿವಿಧ ಬಂಗಿಗಳನ್ನು ಉಪಯೋಗಿಸಿಕೊಂಡು, ಸ್ವೇತ ವರ್ಣ ವಿನ್ಯಾಸ ಮಾಡಿ ಕೃತಿ ರಚಿಸುವ ಇವರ ಶೈಲಿ ವಿಶಿಷ್ಟವಾದದ್ದು ಕೆಂಪು ನೀಲಿ ಹಳದಿ ಹಾಗೂ ಸ್ವೇತ ವರ್ಣ ವಿನ್ಯಾಸದ ಈ ಕೃತಿಯನ್ನು ನೋಡಿದಾಗ ಮಹಿಳೆ ಯಾವುದೇ ಆಲೋಚನೆಯಲ್ಲಿರುವುದು ಕಂಡು ಬರುತ್ತದೆ, ಜೊತೆಗೆ ನೋಡುಗರ ಕಣ್ಮನ ಸೆಳೆಯುತ್ತದೆ. ಈ ಕಲಾಕೃತಿಯ $2\times2\frac{1}{2}$ ಅಳತೆಯಲ್ಲಿ ಇದೆ.

೧೦. **ಚಿತ್ರ :ಅನ್‌ಟೈಟಲ್** : ಹೊರರಾಜ್ಯದ ಕಲಾವಿದ ಶ್ರೀ ಗೌರಿಶಂಕರರವರು ಒಬ್ಬ ರಾಷ್ಟ್ರಮಟ್ಟದ ಕಲಾವಿದ ಅನೇಕ ಕಲಾಕೃತಿಗಳ ಪ್ರದರ್ಶನ ಮಾಡಿದ್ದಾರೆ ಹಲವಾರು ಕಲಾಶಿಬಿರದಲ್ಲಿ ಭಾಗವಹಿಸಿ ಉತ್ತಮ ಕಲಾಕೃತಿಗಳನ್ನು ರಚಿಸಿದ್ದಾರೆ ಈ ಕಲಾಕೃತಿಯ ತೈಲಮಾಧ್ಯಮದಾಗಿದ್ದು ಕಲಾ ವಿನ್ಯಾಸ ಮೇಲೆ ರಚನೆ ಮಡಿದ್ದಾರೆ ವರ್ಣಗಳ ಸಂಯೋಜನೆಯನ್ನು ಈ ಕಲಾಕೃತಿಯಲ್ಲಿ ಕಾಣುತ್ತವೆ ಇದು ಒಂದು ಅಂಗಡಿಯಲ್ಲಿ ಇಡುವಸ್ತುವಿನಂತೆ ಗೋಚರಿಸುತ್ತವೆ. ಕೆಳಭಾಗದಲ್ಲಿ ಕೆಂಪು ವರ್ಣದಿಂದ ರಚಿಸಿದ್ದಾರೆ ಸ್ವಲ್ಪು ಹಳದಿ ಮಿಂತ ವರ್ಣದಾಗಿದೆ ಕಲಾಕೃತಿಯ ತಕ್ಕಂತೆ ಚಿತ್ರ ಸಂಯೋಜನೆಯು ಸುಂದರವಾಗಿದೆ ಸುಂದರತೆಯನ್ನು ಕಾಣುವ ರೀತಿಯಲ್ಲಿ ಸೃಜನಾತ್ಮಕವಾಗಿ ಗೌರಿಶಂಕರರವರು ಕಲಾಕೃತಿಯನ್ನು ರಚಿಸಿದ್ದಾರೆ.

ಚಿತ್ರ ೧೧. ಸ್ಟಿಲ್ ಲೈಫ್ : ಕಾಸರಗೂಡಿನ ಖ್ಯಾತಕಲಾ ವಿದರಾದ ಶ್ರೀ ಪುಂಚಿತಾಯ ಇವರು ಹೆಚ್ಚಾಗಿ ತೈಲ ಮಾಧ್ಯಮದಿಂದ ಸುಂದರವಾದ ಕಲಾಕೃತಿರಚಿಸುವಲ್ಲಿ ಪ್ರಬುದ್ಧತೆಯ್ನು ಪಡೆದವರಾಗಿದ್ದಾರೆ. ಕಲಾಕೃತಿಯನ್ನು ರಚಿಸುವಾಗ ಬ್ರೆಸ್‌ಗಳನ್ನು ಉಪಯೋಗಿಸದೆ ಸ್ವಂಜದಿಂದ ರಚಿಸುವ ಪ್ರಾವಿಣ್ಯತೆಯನ್ನು ಹೊಂದಿದ್ದಾರೆ. ಬಣ್ಣಗಳ ಸಂಯೋಜನೆ ವಸ್ತುವಿನ ಸ್ಥಳಾವಕಾಶವನ್ನು ಉತ್ತಮನಾಗಿ ಬಳಸಿಕೊಂಡು ಈ ಕಲಾಕೃತಿಯನ್ನು ಪುಂಚಿತಾಯರವರು ರಚಿಸಿದ್ದಾರೆ $2\frac{1}{2}\times3$ ಅಳತೆಯದಾಗಿದೆ. ಈ ಕಲಾಕೃತಿಯಲ್ಲಿ ಒಂದು ಪಾಟವನ್ನು ಪ್ರಮುಖವಾಗಿ ಇಟ್ಟುಕೊಂಡು ಅದರಲ್ಲಿರುವ ಹೂ ಎಲೆಗಳನ್ನು ಸುಂದರವಾಗಿ ರಚಿಸಿದ್ದಾ ನೆರಳು ಬೆಳಕಿನ ಕಡೆಗೆ ಹೆಚ್ಚಿಗೆ ಗಮನಹರಿಸಿದ್ದಾರೆ. ಒಟ್ಟಾರೆ ಈ ಕಲಾಕೃತಿಯನ್ನು ಗಮನಿಸಿದಾಗ ಹಸಿರು ವರ್ಣ ಹೆಚ್ಚಾಗಿ ಕಂಡು ಬರುತ್ತದೆ. ಕೆಂಪು ಹಳದಿ ಮತ್ತು ಬಿಳಿವರ್ಣವನ್ನು ಬಳಸಿ ಸುಂದರವಾದ ಸ್ಟಿಲ್‌ವೈಫ್ ಚಿತ್ರವು ಇದಾಗಿದೆ.

ಚಿತ್ರ ೧೨. ಅನ್‌ಟೈಬಲ್ : ಈ ಕಲಾಕೃತಿಯನ್ನು ಖ್ಯಾತಕಲಾವಿದರು ದಾವಣಗೇರಿ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಸೇವೆಸಲ್ಲಿಸಿದ ಕಲಾವಿದ ರಾದ ಶ್ರಿ ವ್ಹಿ.ಬಿ. ಹಿರೆಗೌಡರವರು ರಚಿಸಿದ್ದಾರೆ. ಕಲಾಕೃತಿ $2\frac{1}{2}\times3$ ಅಳತೆಯದಾಗಿದೆ ತೈಲವರ್ಣದಿಂದ ಸೌಮ್ಯವರ್ಣಗಳನ್ನು ಬಳಸಿ ಉತ್ತಮವಾದ ಕಲಾಕೃತಿಯನ್ನು ರಚಿಸಿದ್ದಾರೆ. ಈ ಕಲಾಕೃತಿಯ ಹಳದಿ, ಗುಲಾಬಿ, ನೀಲಿ, ಮತ್ತು ಬಿಳಿವರ್ಣಗಳಿಂದ ಇದೆ. ಕಲಾವಿದ ಹಿರೆಗೌಡರು ಬಣ್ಣಗಳ ಬಳಸಿದ ರೀತಿಯು ಉತ್ತಮವಾಗಿದೆ. ಕ್ಯಾನವಾಸವನ್ನು ಸರಿಯಾದ ರೀತಿಯಲ್ಲಿ ಸೃಜನಾತ್ಮಕವಾಗಿ ಕಲಾಕೃತಿಯನ್ನು ರಚಿಸಿದ್ದಾರೆ. ಕಲಾಕೃತಿಯ

ಸರ್ವತೋಕಾಪಾಡಲು ಬಿಳಿವರ್ಣದಿಂದ ಪೂರ್ಣಗೊಳಿಸಿದ್ದಾರೆ. ಶಿರ್ಷಿಕೆರಹಿತ ಕಲಾಕೃತಿ ಈದಾಗಿದು ನೋಡುಗರರಿಗೆ ಸುಂದತೆಯನ್ನು ಬಣ್ಣಗಳ ಬಳಕೆ ರೇಖಾ ವಿನ್ಯಾಸ ಸ್ಥಳಾವಕಾಶ, ವರ್ಣಗಳ ಸಮತೋಲತೆಯ ಈ ಕಲಾಕೃತಿಯಲ್ಲಿ ಎದು ಕಾಣುತ್ತದೆ. ಶ್ರಿ ಹಿರೇಗೌಡರರವರ ರಚಿಸಿದ ಈ ಕಲಾಕೃತಿಯ ಪ್ರಬುದ್ದ ಕಲಾ ವಿದರೆಂಬುದಕ್ಕೆ ಕಲಾಕೃತಿಯೇ ಸಾಕ್ಷಿ ಎಂದು ಹೇಳಬಹುದು.

ಚಿತ್ರ ೧೩. ಅನ್‌ಟೈಟಲ್ : ಈ ಕಲಾಕೃತಿಯನ್ನು ಧಾರವಾಡದ ಸರಕಾರಿ ಚಿತ್ರಕಲಾ ಮಹಾವಿದ್ಯಾಲಯದ ಉಪನ್ಯಾಸಕರು ಹಾಗು ಉತ್ತಮ ಕಲಾವಿದರು ಆದ ಶ್ರಿ ಡಿ.ಎಂ. ಬಡಿಗೇರರವರು ರಚನದ ಕಲಾ ಕೃತಿಯಾಗಿದೆ $7\times7\frac{1}{2}$ ಅಳತೆಯದಾಗಿದೆ ತೈಲವರ್ಣದಿಂದ ಈ ಕಲಾಖುತಿಯನ್ನು ಪೂರ್ಣಗೊಳಿಸಿದ್ದಾರೆ. ಕಲಾಕೃತಿಯು ಅಮೂರ್ತತೆಯಿಂದ ಕೂಡಿದು ಬಣ್ಣಗಳ ಬಳಕೆಯನ್ನು ಕಲಾವಿದರವರು ಉತ್ತಮವಾಗಿ ಬಳಸಿದ್ದಾರೆ. ಕೆಂಪು, ಕಂದು, ಕೆಂಪುವರ್ಣವು ಈ ಕಲಾಕೃತಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಬಿಳಿ, ಆಕಾಶ ನೀಲಿ ವರ್ಣಗಳು ಕಲಾಕೃತಿಯಲ್ಲಿ ಎದ್ದು ಕಾಣುತ್ತವೆ ಕ್ಯಾನವಾಸವನ್ನು ಉತ್ತವಾಗಿ ಉಪಯೋಗಿಸಿ ಬಣ್ಣಗಳ ಉಪಯೋಗಿಸಿದ ರೀತಿಯು ಬಹಳ ಸುಂದರವಾಗಿದೆ. ಬಣ್ಣಗಳ ಸಮತೋಲನವು ಉತ್ತಮವಾಗಿ ಕಾಪಾಡಿಕೊಂಡಿದ್ದಾರೆ. ನೋಡುಗರಿಗೆ ಆನಂದವನ್ನು ನೀಡುವ ಉತ್ತಮವಾದ ಕಲಾಕೃತಿಯು ಇದಾಗಿದೆ.

ಚಿತ್ರ ೧೪. ಚರ್ಚೆ : ಈ ಕಲಾಕೃತಿಯನ್ನು ಗದುಗಿನ ಕಲಾವಿದ ಪ್ರಾ. ಬಿಎಲ್. ಚವ್ಹಾಣರವರು ರಚಿಸಿದ ಕೃತಿಯಾಗಿದೆ. ಹೆಚ್ಚಾಗಿ ಮಹಿಳೆಯವರ ಮೇಲೆ ಕಲಾಕೃತಿ ರಚಿಸುವ ಇವರು ತೈಲವರ್ಣದಿಂದ ಚರ್ಚೆಮಾಡುತ್ತಿರುವ ಮಹಿಳೆಯ ಕಲಾ ಕೃತಿಯಿದಾಗಿದೆ $2\times2\frac{1}{2}$ ಅಳತೆಯಲ್ಲಿ ರಚಿಸಿದ್ದಾರೆ ನೈಜ ಮತ್ತು ಸೃಜನಾತ್ಮಕತೆಯಿಂದ ಸುಂದರವಾಗಿ ರಚಿಸಿದ್ದಾರೆ. ಕೆಲಸದಲ್ಲಿ ನಿರತರಾದ ಮಹಿಳೆಯ ಜೊತೆ ಇನ್ನೊಂದು ಮಹಿಳೆಯು ತನ್ನ ಮಗುವಿಗೆ ಹಾಲು ಕುಡಿಸುತ್ತ ಯಾವುದೋ ಒಂದು ವಿಷಯಕುರಿತು ಚರ್ಚೆ ಮಾಡುತ್ತಿದ್ದಾರೆ. ಇಬ್ಬರು ಮಹಿಳೆಯರಲ್ಲಿ ತಮ್ಮ ಸಾಂಪ್ರದಾಯಿಕ ಉಡುಗೆ ತೊಡುಗೆಗಳು ಕೈ ಆಭರಣ, ಕೊರಳ ಆಭರಣ ಮತ್ತು ಕೇಶಲಂಕಾರದ ಆಭೃಣಗಳು ಸುಂದತರವಾಗಿ ಕಲಾವಿದ ರಚಿಸಿದ್ದಾನೆ ಕಸೂತಿಮಾಡುತ್ತಿರುವ ಮಹಿಳೆ ತಲೆಯ ಮೇಲೆ ಸುಂದರ ನಕ್ಷೆಯನ್ನು ಹೊಂದಿರುವ ವಸ್ತ್ರ ಧರಿಸಿದ್ದಾಳೆ ಇನ್ನು ಮಹಿಳೆಯ ತಲೆಯ ಕುದಲನ್ನು ಎಳೆಬಿಟ್ಟು ಚರ್ಚಿಸುತ್ತಿರುವ ದೃಶ್ಯವನ್ನು ಕಲಾವಿದ ಬಿ.ಎಲ್. ಚವ್ಹಾಣರವರು ಸುಂದರವಾಗಿ ಹಿನ್ನಲೆ, ಸ್ಥಳಾವಕಾಶವನ್ನು ಬಳಸಿದ್ದಾರೆ. ಈ ಕಲಾಕೃತಿಯನ್ನು ಕೆಂಪು ನೀಲಿ ಹಳದಿ ಬಿಳಿವರ್ಣಗಳಿಂದ ಪೂರ್ಣಗೊಳಿಸಿದ್ದಾರೆ.

ಚಿತ್ರ ೧೫. ಶಿವ ಪಾರ್ವತಿ : ಈ ಕಲಾಕೃತಿಯು ೪' x ೬' ಅಳತೆಯದಾಗಿದ್ದು ತೈಲವರ್ಣದಿಂದ ಪೂರ್ಣಗೊಳಿಸಿದ್ದಾರೆ. ಶಿವ ಮತ್ತು ಪಾರ್ವತಿಯರು ವಿವಾಹ ಮಾಡಿಕೊಳ್ಳುತ್ತಿರುವ ದೃಶ್ಯವು ಉತ್ತಮ ರೀತಿಯಲ್ಲಿ ಕಲಾವಿದ ಚಿತ್ರಿಸಿದ್ದಾರೆ. ಋಷಿ ಮುಖಗಳು ಕಮಂಡಲ್‌ಗಳನ್ನು ಸೇರಿಸಿ ಹಿನ್ನಲೆಯಾಗಿ ಬ್ರಹ್ಮವಿಷ್ಣು ನಿಂತು ಆಶಿರ್ವಾದಮಾಡುತ್ತಿದ್ದಾರೆ. ಕಲಾಕೃತಿಯ ಮುಂದೆ ಕಾಳಿಯನ್ನು ಉಡುತ್ತಿರುವ ಚಿತ್ರವನ್ನ ಸೊಗಸಾಗಿ ರಚಿಸದ್ದಾರೆ.

ಈ ಕಲಾಕೃತಿಯನ್ನು ಕಲಾವಿದ ಭಾರತೀಯ ಸಾಂಪ್ರದಾಯಿಕ ಶೈಲಿಯಲ್ಲಿ ರಚನೆಮಾಡಿದ್ದಾನೆ. ಶಿವನ ಬಲಗಡೆ ಹಾವೂ ಎದುರುಗಡೆ ಕುಳಿತ ನಂದಿಯ ಚಿತ್ರವನ್ನು ಹಿನ್ನಲೆಯ ತಕ್ಕಂತೆ ರಚನೆ

ಮಾಡಿದ್ದಾರೆ ನೆರಳೂ ಬೆಳಕು ಈ ಕೃತಿಯಲ್ಲಿ ಕಲಾ ವಿಧ ಸುಂದರವಾಗಿ ತೋರಿಸಿದ್ದು ಬಣ್ಣಗಳ ಬಳಕೆ, ರೇಖಾ ವಿನ್ಯಾಸವನ್ನು ನಯವಾಗಿ ರಚನೆ ಮಾಡಿದ್ದಾರೆ.

ಚಿತ್ರ ೧೬. ಗೆಳತಿಯರು : ಈ ಕಲಾಕೃತಿಯನ್ನು ಹುಬ್ಬಳ್ಳಿಯ ಹಿರಿಯ ಕಲಾವಿದ ಶ್ರೀ ಎಸ್. ಪ್ರಹ್ಲದರವರು $2\times2\frac{1}{2}$ ಅಳತೆಯಲ್ಲಿದೆ. ತೈಲವರ್ಣ ವರ್ಣದಿಂದ ಎರಡು ಗೇಳತಿಯರ ಈ ಕಲಾ ಕೃತಿಯಲ್ಲಿ ಒಂದು ಯುವತಿಯು ಬಿಳಿ ಶೇರೆಯನ್ನು ಉಟ್ಟುಗೊಂಡಿದ್ದಾಳೆ ಇನ್ನೊಂದು ಯುವತಿಯ ಕೆಂಪು ಸೀರೆ ಮತ್ತು ಬ್ಲೊಜು ಕೆಂಪುವರ್ಣದಾಗಿದೆ. ಕಣ್ಣು ಮೂಗು ಅಮೂರ್ತತೆಯಿಂದ ಕುಡಿದರು ನೂಡುಗರಿಗೆ ಸುಂದರವಾಗಿ ಕಾಣುತ್ತದೆ. ಭಾರತೀಯ ಸಂಸ್ಕೃತಿಗೊಸ್ಕರ ಯುವತಿಯವರ ಕೈ ಬಳೆಗಳು ಕೈ ಕೊರಳಲ್ಲಿನ ಆಭರಣಗಳನ್ನು ಬಿಳಿವರ್ಣದಿಂದ ಎಸ್. ಪ್ರಹ್ಲಾದರವರ ರಚಿಸಿದ್ದಾರೆ. ತಮ್ಮ ಬಣ್ಣಗಳ ಕೈ ಚಳಕದಿಂದ ಕಲಾಕೃತಿಯನ್ನು ಸಮತೊಲತೆಯನ್ನು ಕಾಯ್ದುಕೊಂಡಿದ್ದಾರೆ.

ಎನ್. ಪ್ರಹ್ಲಾದರವರು ಕಲಾಕೃತಿಗಳ ಕಣ್ಣು, ಮೂಗು ಬಾಯಿಗಳನ್ನು ಪೂರ್ಣವಾಗಿ ಮಾಡದೆ ಅಮೂರ್ತಿವಾಗಿ ರಚಿಸಿದ್ದಾರೆ. ಹಿನ್ನೆಲೆಯಾಗಿ ನೀಲಿ ಕಂದು ಕೆಂಪು ಬಣ್ಣಗಳನ್ನು ಬಳಸಿ ಹಿಂದೆ ಮುಂದೆ ಕಾಣುವಂತೆ ಉತ್ತಮವಾದ ಸ್ಥಳಾವಕಾಶವನ್ನು ಬಳಸಿ ಕಲಾಕೃತಿಯನ್ನು ರಚಿಸಿದ್ದಾರೆ.

ಚಿತ್ರ ೧೭. ಭಿಕ್ಷುಕ : ಈ ಕಲಾಕೃತಿಯ ೪'X೬' ಅಳತೆಯದಾಗಿದ್ದು ತೈಲವರ್ಣದಿಂದ ಕಲಾವಿದ ಸಂಯೋಜನಾ ಚಿತ್ರವನ್ನು ರಚಿಸಿದ್ದಾರೆ. ದೇವಾಲಯದ ಮುಂದೆ ಕುಳಿತು ಬಿಕ್ಷೆ ಬೆಡುತ್ತಿರುವ ಭಿಕ್ಷುಕನು ಮೈಗೆ ಅಂಗಿಯನ್ನು ಹಾಕದೆ ಬಿಕ್ಷಾ ಪಾತ್ರೆಯನ್ನು ಮುಂದೆ ಇಟ್ಟುಕೊಂಡು ಭಿಕ್ಷೆ ಬೆಡುತ್ತಿದ್ದಾನೆ ದೇವಸ್ಥಾನಕ್ಕೆ ಹೋಗಿ ಬರುತ್ತಿರುವ ಮಹಿಳೆ ಮತ್ತು ಮಕ್ಕಳು ಭಿಕ್ಷುಕನಿಗೆ ಭೆಕ್ಷೆ ಹಾಕುತ್ತಿರುವ ದೃಶ್ಯವನ್ನು ಕಲಾವಿದ ಸುಂದರವಾಗಿ ಸೆರೆ ಹಿಡಿದಿದ್ದಾನೆ ಮಹಿಳೆಯರ ಹಾಕಿಕೊಂಡ ಸುಂದರವಾದ ಆಭರಣಗಳು ಉಡಿಗೆ ತೊಡುಗೆಗಳನ್ನು ಕಲಾವಿದ ಸುಂದರವಾಗಿ ರಚಿಸಿದ್ದಾನೆ. ವಿಷಯಕ್ಕೆ ತಕ್ಕಂತೆ ಸ್ಥಳಾವಕಾಶವನ್ನು ಉಪಯೋಗಿಸಿಕೊಂಡು ಸುಂದರವಾದ ನೈಜ ರೀತಿಯ ಸಂಯೋಜನಾ ಚಿತ್ರವನ್ನು ರಚಿಸಿದ್ದಾರೆ.

ಈ ಕಲಾಕೃತಿಯುನ್ನು ನೋಡಿದಾಗ ಬಣ್ಣಗಳ ಬಳಸಿದ ರೀತಿ ಕಲಾಕೃತಿಯುನ್ನು ಸಮತೋಲನಕಾಯ್ದು ಕೊಂಡಿದೆ. ಬಿಕ್ಷುಕನು ಭಿಕ್ಷೆ ಬೇಡುತ್ತಿರುವ ಸನ್ನಿವೇಶವು ಕಲಾಕೃತಿಯನ್ನು ನೋಡಿದಾಕ್ಷಣ ನಮಗೆ ಗೊಚರಿಸುವಂತೆ ಸುಂದರವಾಗಿ ಕಲಾವಿದ ಪೂರ್ಣಗೊಳಿಸಿದ್ದಾರೆ.

ಚಿತ್ರ ೧೮. ಬಾಲಕೃಷ್ಣ : ಈ ಕಲಾಕೃತಿಯು ೪'X೬' ಅಳತೆಯದಾಗಿದ್ದು ತೈಲವರ್ಣದಿಂದ ಕಲಾವಿದ ರಚಿಸಿದ್ದಾನೆ. ವಿಷಯಕ್ಕೆ ತಕ್ಕ ಸಂಯೋಜನೆಯನ್ನು ಮಾಡಿದ್ದಾರೆ. ಈ ಕಲಾಕೃತಿಯಲ್ಲಿ ಸುಂದರವಾದ ಉಡುಗೆ ತೊಡಿಗೆಗಳನ್ನು ಧರಿಸಿರುವ ಆರು ಮಹಿಳೆಯರಿದ್ದು ಬಾಲಕನು ಎಲ್ಲರ ಮಧ್ಯದಲ್ಲಿದ್ದಾನೆ. ಬಾಲಕನ ಮೈಬಣ್ಣ ನೀಲಿಯದಾಗಿರುವುದನ್ನು ನೋಡಿದರೆ ಬಾಲಕೃಷ್ಣನ ಚಿತ್ರವಿದೆ, ಎಂದು ಸಹಜ ಎನಿಸುತ್ತದೆ. ಎಲ್ಲ ಮಹಿಳೆಯರು ಜೋಗುಳ ಹಾಡಿ ಕೃಷ್ಣನಿಗೆ ಶೃಂಗಾರಗೊಳಿಸುತ್ತಿರುವುದು ಪ್ರತಿಯೋದು ಮಹಿಳೆಯರು ವಿಭಿನ್ನ ರೀತಿಯಲ್ಲಿರುವ ಕಲಾಕೃತಿಗಳನ್ನು ಕಲಾವಿದ ಸುಂದರವಾದ ರೇಖೆ ಬಣ್ಣಗಳಿಂದ ಪೂರ್ಣಗೊಳಿಸಿದ್ದಾರೆ. ವಿಷಯಕ್ಕೆ ತಕ್ಕಂತೆ ಹಿನ್ನೆಲೆಯಾಗಿ ಅರಮನೆಯ ಸನ್ನಿವೇಶವನ್ನು ರಚಿಸಿದ್ದಾರೆ.

ಈ ಸಂಯೋಜನಾ ಕಲಾಕೃತಿಯನ್ನು ಗಮನಿಸಿದಾಗ ಪ್ರತಿಯೊಬ್ಬ ಮಹಿಳೆಯರಲ್ಲಿ ಒಂದೊಂದು ಭಾವನೆಗಳು ಇರುವುದು ಕಂಡು ಬರುತ್ತವೆ.

ಭಾವಚಿತ್ರಗಳು :

ಚಿತ್ರ ೧. ವಿದ್ಯಾರ್ಥಿನಿ : ಈ ಕಲಾಕೃತಿಯನ್ನು ಪುಣೆಯ ನೈಜಶೈಲಿಯಕಲಾವಿದ ಶ್ರೀ ಸಂಜಯ ಕೊಹಲೆಯವರು ರಚಿಸಿದ್ದಾರೆ. ವಿಜಯ ಕಲಾಮಂದಿರದ ವಿದ್ಯಾರ್ಥಿನಿಯ ಭಾವಚಿತ್ರ ಇದಾಗಿದೆ. ೨'X೨' ಅಳತೆಯದಾಗಿದೆ. ಕಲಾಕೃತಿಯನ್ನು ಸಂಜಯರವರು ತೈಲವರ್ಣದಿಂದ ಸುದರವಾಗಿ ರಚಿಸಿದ್ದಾರೆ ಮುಖದಲ್ಲಿರುವ ಭಾವನೆಯು ಕಣ್ಣು, ಮುಗು, ಬಾಯಿ, ಕಿವಿಗಳು ನೈಜತೆಯಿಂದ ಕುಡಿದೆ. ಕೊರಳಲ್ಲಿ ಚೈನ್, ಕಿವಿಗೆ ಹಾಕಿಕೊಂಡಿರುವ ಆಭರಣಗಳು ಭಾವಚಿತ್ರಕ್ಕೆ ತಕ್ಕಂತಿವೆ. ಅನೇಕ ಉತ್ತಮ ಕಲಾಕೃತಿಯನ್ನು ರಚಿಸಿ ಹೆಸರುವಾಸಿಯಾಗಿರುವ ಶ್ರೀ ಸಂಚಯ ಸೋಹಲೆಯವರು ಬಣ್ಣ ಬಳಸಿದ ರೀತಿಯ ನೊಡುಗರಿಗೆ ಆನಂದವನ್ನು ಕೊಡುತ್ತವೆ. ಹಿನ್ನಲೆಯ ವರ್ಣ ಕೆಂಪು, ಹಳದಿ, ಮತ್ತು ನೀಲಿ, ಬಿಳಿ ಬಣ್ಣಗಳನ್ನು ಬಳಸಿ ಧರಿಸಿರುವ ಚೂಡಿದಾರದ ವರ್ಣವನ್ನು ಬ್ಯಾಕ ಗ್ರೌಂಡದಲ್ಲಿ ಮಿಶ್ರಣಗೊಳಿಸಿದ್ದಾರೆ. ಭಾವಚಿತ್ರವನ್ನು ನೇರಳು ಬೆಳಕಿನಿಂದ ಪೂರ್ಣಗೊಳಿಸಿದ್ದಾರೆ. ಈ ಕಲಾಕೃತಿಯ ಉತ್ತಮವಾದ ಕಲಾಕೃತಿಯಾಗಿದೆ.

ಚಿತ್ರ ೨. ವಿದ್ಯಾರ್ಥಿ : ಈ ಕಲಾಕೃತಿಯು ತೈಲವರ್ಣದಾಗಿದೆ ೨'X೨೧/೨' ಅಳತೆಯ ಕಲಾಕೃತಿಯಾಗಿದ್ದು ತೈವರ್ಣದಿಂದ ಉತ್ತಮವಾಗಿ ಕಲಾಕೃತಿಯ ರಚಿಸಿದ್ದಾರೆ. ಕಣ್ಣು, ಮೂಗು, ಬಾಯಿ, ನೈಜವಾಗಿ ಕಲಾವಿದ ಬಣ್ಣಗಳ ಬಳಸಿ ಸುಮದರವಾದ ಭಾವಚಿತ್ರವನ್ನು ರಚಿಸಿದ್ದಾರೆ. ಮೈ ಬಣ್ಣವನ್ನು ಪಾಶ್ಚಾತ್ಯ ಕಲಾ ಶೈಲಿಯಂತೆ ಲೆಪಿಸಿದ್ದರು ಬಿಳಿ ಅಂಗಿಯನ್ನು ಯತಾವತ್ತಾಗಿ ಸುಂದರವಾಗಿ ರಚಿಸಿದ್ದಾರೆ ಕಲಾಕೃತಿಯ ಹಿನ್ನಲೆಯಾಗಿ ಕೆಂಪುವರ್ಣವನ್ನು ಬಳಸಿ ಬಾಕ್‌ಗ್ರೌಡ ಪೂರ್ಣಗೊಳಿಸಿದ್ದಾರೆ. ಬಣ್ಣದ ಬಳಕೆಯ ಕಲಾವಿದ ಸರಳವಾಗಿ ಉಪಯೋಗಿಸಿ ಕಲಾಕೃತಿಯ ಸೌಂದರ್ಯತೆಯನ್ನು ಹೆಚ್ಚಿಸಿದ್ದಾರೆ ಒಟ್ಟಾರೆ ಈ ಭಾವಚಿತ್ರವು ಶಾಲಾ ವಿದ್ಯಾರ್ಥಿ ಮಾರ್ಗದರ್ಶಕ ಉತ್ತಮವಾದ ಕಲಾಕೃತಿಯಾಗಿದೆ.

ಚಿತ್ರ ೩. ಟಿ.ಪಿ. ಅಕ್ಕಿಯವರ ಭಾವಚಿತ್ರ : ವಿಜಯಕಲಾಮಂದಿರದ ಸ್ಥಾಪಕರಾದ ಶ್ರೀ ಟಿ.ಪಿ. ಅಕ್ಕಿಯವರ ಭಾವಚಿತ್ರ ಇದಾಗಿದೆ. ರಾಜ್ಯ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ಖ್ಯಾತಕಲಾವಿದ ಶ್ರೀ ವಿಜಯ ಸಿಂಧೂರರವರು ತೈಲವರ್ಣದಿಂದ ಕಲಾ ಗುರು ಟಿ.ಪಿ. ಅಕ್ಕಿಯವರ ಸುಂದರವಾದ ಭಾವಚಿತ್ರವನ್ನು ರಚಿಸಿದ್ದಾರೆ. ಅಕ್ಕಿಯವರ ಭಾವನೆಯ ನೋಡುಗರಿಗೆ ಮಂತ್ರ ಮುಗ್ದರನ್ನಾಗಿ ಮಾಡುತ್ತದೆ. ನೈಜಶೈಲಿಯಲ್ಲಿ ತಂಪೂವರ್ಣ ಬಳಸಿದ್ದಾರೆ. ಅಕ್ಕಿಯವರ ರೂಪು ಮತ್ತು ಶರಿರನ್ನು ಸುಂದರವಾಗಿ ವಿಜಯಸಿಂಧೂರರವರು ರಚಿಸಿದ್ದಾರೆ. ತಲೆಯ ಕುದಲು ನೈಜತೆಯನ್ನು ಮಿರಿಸುವಂತೆ ವಿಜಯ ಸಿಂಧೂರರವರು ಹಿನ್ನಲೆಯಾಗಿ ಬಿಳಿಮಿಶ್ರಿತ ಕಂದು ವರ್ಣವನ್ನು ರಚಿಸಿದ್ದಾರೆ. ಮುಖಭಾವನೆ ನೆರಳು ಬೆಳಕ್ಕಿನ ಸ್ಥಳಾವಕಾಶವನ್ನು ಕಲಾವಿದ ಈ ಕಲಾತಿಯಲ್ಲಿ ಬಳಸಿದ್ದಾರೆ. ಟಿ.ಪಿ. ಅಕ್ಕಿಯವರ ಸುಂದರವಾದ ಭಾವ ಚಿತ್ರವನ್ನು ಸಿಂಧೂರರವರು ೧೧/೧'X೨' ಅಳತೆಯಲ್ಲಿ ರಚಿಸಿದ್ದಾರೆ.

ಚಿತ್ರ ೪. ರೂಪದರ್ಶಿಯ ಭಾವಚಿತ್ರ : ಈ ಭಾವಚಿತ್ರವನ್ನು ತೈಲವರ್ಣದಿಂದ ಕ್ಯಾನವಾಸ ಮೇಲೆ ಕಲಾವಿದ ಶ್ರೀ ಕೃಷ್ಣ ಕೆ ಎಂಥವರು ರಚಿಸಿದ್ದಾರೆ. ವ್ಯಕ್ತಿಯ ಮುಖದಲ್ಲಿಯ ಭಾವನೆಯನ್ನು

ಕೃಷ್ಣಾರವರು ತಮ್ಮ ಕುಂಜದಿಂದ ಸೇರೆಹಿಡಿದು ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಕನ್ನಡಕವನ್ನು ನೈಜತೆಯನ್ನು ಮಿರಿಸುವಂತೆ ರಚಿಸಿದ್ದಾರೆ. ಕಂದು ಕೆಂಪು ವರ್ಣವನ್ನು ಮುಖದಲ್ಲಿ ಬಳಸಿದ್ದಾರೆ. ಬಿಳಿ, ನೀಲಿ, ಹಳದಿ ವರ್ಣವನ್ನು ಈ ಕಲಾಕೃತಿಯಲ್ಲಿ ಕೃಷ್ಣರವರು ತಂಪುವರ್ಣವನ್ನು ಉಪಯೋಗಿಸಿ ಉತ್ತಮವಾದ ಕೃತಿಯ್ನು ರಚಿಸಿದ್ದಾರೆ. ವ್ಯಕ್ತಿಯ ಮುಖದಲ್ಲಿರುವ ನಯವಾದ ದಾಡಿ, ಬಿಳಿ, ಮತ್ತು ನೀಲಿವರ್ಣ, ಬಿಳವರ್ಣವನ್ನು ಹೆಚ್ಚಾಗಿ ಈ ಕಲಾಕೃತಿಯಲ್ಲಿ ಕಂಡು ಬರುತ್ತದೆ. ನೆರಳು ಬೆಳಕಿನ ಕಡೆಗೆ ಹೆಚ್ಚಿನ ಗಮನಹರಿಸಿ ಕಲಾಕೃತಿಯ ಕುಂಚದ ಕೈ ಚಳಕವನ್ನು ಮೂಡುವುದರಲ್ಲಿ ಯಶಸ್ವಿಯಾಗಿದ್ದಾರೆ.

ಪೂರ್ಣಭಾವ ಚಿತ್ರಗಳು :

ಚಿತ್ರ ೧. ರೂಪದರ್ಶಿಯಾಗಿ ಕುಳಿತ ವ್ಯಕ್ತಿ : ಈ ಕಲಾಕೃತಿಯನ್ನು ಶ್ರೀ ಪ್ರಕಾಶ ತಟ್ಟಿಯವರು ತೈಲವರ್ಣದಿಂದ ರಚನೆಮಾಡಿದ್ದಾರೆ. ೨'X೨೧/೨" ಅಳತೆಯದಾಗಿದೆ ೫೦ವರ್ಷದ ಯಜಮಾನ ಕೈಯಲ್ಲಿ ಕೊಲು ಹಿಡಿದು ಕೆಂಪು ವರ್ಣದ ರೂಫ ಮಾಲನ್ನು ಧರಿಸಿದರುವ ಈ ವ್ಯಕ್ತಿ ಶ್ವೇತವರ್ಣದ ಅಂಗಿ ಧೋತರವನ್ನು ಉಟ್ಟುಕೊಂಡಿದ್ದಾನೆ. ಅಂಗಿ ಧೋತರದಲ್ಲಿರುವ ನೇರಳು ಬೆಳಕಿನಿಂದ ಕಲಾಕೃತಿಯನ್ನು ಕಲಾವಿದ ಪ್ರಕಾರ ತಟ್ಟಿಯವರು ರಚಿಸಿದ್ದಾರೆ. ಹಿನ್ನಲೆಯಾಗಿ ನೀಲಿ, ಬಿಳಿವರ್ಣದಿಂದ ವಿಷಯಕ್ಕೆ ತಕ್ಕಂತೆ ವ್ಯಕ್ತಿ ಚಿತ್ರವನ್ನು ರಚಿಸಿದ್ದಾರೆ. ಬಿಳಿ ಮಿಸೆ ಕೈಯಲ್ಲಿ ವಾಚು, ಬಂಗಾರದ ಉಂಗುರ ಧರಿಸಿದ್ದಾರೆ. ಇವು ನೈಜತೆಯನ್ನು ಮಿರುವಂತಿವೆ. ಅಂಗಿಯಲ್ಲಿ ಮತ್ತು ಧೋತರದಲ್ಲಿ ನೆರಳು ಬೆಳಕಿನ ಛಾಯೆಯನ್ನು ಕಣ್ಣು, ಮೂಗು, ಬಾಯಿಗಳನ್ನು ಸುಂದರವಾಗಿ ರಚಿಸಿದ್ದಾರೆ. ಕುಳಿತ ವ್ಯಕ್ತಿಯ ಹಿನ್ನೆಲೆ ಒಂದು ಕಲಾಕೃತಿ ಗೋಡೆಗೆ ಹಾಕಿದ್ದು ಅದನ್ನು ತಟ್ಟಿಯವರು ಸುಂದರವಾಗಿ ರಚಿಸಿದ್ದಾರೆ.

ಚಿತ್ರ ೨. ರೂಪದರ್ಶಿಯಾಗಿ ಕುಳಿತ ಯುವತಿ : ಈ ಕಲಾಕೃತಿಯನ್ನು ಕಲಾವಿದ ಸ್ಥಳಾವಕಾಶಕ್ಕೆ ತಕ್ಕಂತೆ ರಚನೆ ಮಾಡಿದ್ದಾರೆ ಅಕ್ರಾಲಿಕ್ ಮಾಧ್ಯಮದಿಂದ ಈ ಕಲಾಕೃತಿಯನ್ನು ರಚಿಸಿದ್ದಾರೆ. ಕೆಂಪು ವರ್ಣದ ಮೇಲು ವಸ್ತ್ರ ಬಿಳಿವರ್ಣದ ಚೂಡಿದಾರವನ್ನು ಯತಾವತ್ತಾಗಿ ಕಲಾವಿದ ಬಣ್ಣಹಾಕಿ ಕಲಾಕೃತಿಗೆ ಜೀವ ತುಂಬಿದ್ದಾರೆ. ಹಿನ್ನೆಲೆಯಾಗಿ ಹಳೆಯದಾದ ಗೊಡೆಯ ಚಿತ್ರವನ್ನು ಕಂದು ಕೆಂಪು ಬಣ್ಣದಿಂದ ರಚಿತಗೊಂಡಿದೆ ನಯವಾದ ಕೂದಲು ಸುಂದರವಾದ ಕಣ್ಣು, ಮೂಗುಗಳನ್ನು ಕಲಾವಿದ ಉತ್ತಮವಾಗಿ ರಚಿಸಿದ್ದಾರೆ. ಬಿಳಿಬಣ್ಣ ವಿಷಯಕ್ಕೆ ತಕ್ಕಂತೆ ಕಲಾಕೃತಿಯನ್ನು ರಚಿಸಿದ್ದಾರೆ. ಕೈಯನ್ನು ಬಲತೊಡೆಯ ಮೇಲೆ ಇಟ್ಟುಕೊಂಡ ಕುಳಿತಿರುವ ಯುವತಿಯ ಪೂರ್ಣಭಾವಚಿತ್ರವನ್ನು ಬಹು ಆಕರ್ಷಕವಾಗಿ ರಚನೆಮಾಡಿದ್ದಾರೆ.

ಚಿತ್ರ ೩. ರೂಪದರ್ಶಿಯಾಗಿ ಕುಳಿತ ವ್ಯಕ್ತಿಯ ಚಿತ್ರ : ಈ ಕಲಾಕೃತಿಯ ವ್ಯಕ್ತಿಯ ತಲೆ ಮೇಲೆ ಸುತ್ತಿ ಪೇಠಾ(ರೂಮಾಲ)ವು ಬಿಳಿವರ್ಣದಾಗಿದೆ ತೊಟ್ಟಿರುವ ಅಂಗಿಯ ಕೆಂಪುವರ್ಣದಾಗಿದೆ. ಹಳದಿವರ್ಣವು ಧೋತರವಾಗಿದೆ. ಹಿನ್ನಲೆಯ ವರ್ಣವು ಹಳದಿ ವರ್ಣವನ್ನು ಲೆಪಿಸಿದ್ದಾರೆ ನೆರಳು ಬೆಳಕು ಪ್ರಮಾಣ ಬದ್ದತೆಯಿಂದ ಕಣ್ಣು, ಮೂಗು, ಬಾಯಿ, ಮತ್ತು ಬಿಳಿಮಿಸೆಯನ್ನು ಕಲಾವಿದ ಉತ್ತಮವಾಗಿ ರಚಿಸಿದ್ದಾರೆ. ಬ್ಯಾಕಗ್ರೌಂಡವನ್ನು ಕಲಾಕೃತಿಗೆ ತಕ್ಕಂತೆ ವರ್ಣವನ್ನು ಬಳಸಿದ್ದಾರೆ ಒಟ್ಟಾರೆ ಈ ಕಲಾಕೃತಿಯು ನೋಡುಗರಿಗೆ ಆನಂದ ಕೊಡುವ ಕಲಾಕೃತಿಯಾಗಿದೆ.

ಚಿತ್ರ ೪. ರೂಪದರ್ಶಿಯಾಗಿ ಕುಳಿತ ವ್ಯಕ್ತಿ : ಈ ಕಲಾಕೃತಿಯು ಅಭ್ಯಾಸ ಮಾಡಲಿಕ್ಕೆ ಕಾಲೇಜಿನಲ್ಲಿ ರೂಪದರ್ಶಿಯಾಗಿ ಕುಳಿತ ವ್ಯಕ್ತಿಯ ಚಿತ್ರವಾಗಿದೆ. ಕಲಾವಿದ ಪ್ರಕಾಶ ತಟ್ಟಿಯವರು ತೈಲವರ್ಣದಿಂದ ರಚನೆಮಾಡಿದ್ದಾರೆ. ೨'X೨೧/೨' ಅಳತೆಯಲ್ಲಿದೆ ಕಲಾಕೃತಿಯ ಕ್ಯಾನವಾಸಕ್ಕೆ ತಕ್ಕಂತೆ ಇದೆ. ಮುಖದಲ್ಲಿ ನೆರಳು ಬೆಳಕಿನಿಂದ ಉತ್ತಮವಾಗಿ ರಚಿಸಿದ್ದಾರೆ. ತಲೆಯ ಮೇಲೆ ಟೊಪ್ಪಿಗೆಯು ಬಿಳಿ ವರ್ಣದಾಗಿದೆ ಆದರೆ ನೇರಳು ಬೆಳಕಿನಿಂದ ಕಲಾವಿದ ಅದರ ಮೇಲೆ ಯಾವ ಯಾವವರ್ಣಗಳು ಪ್ರತಿ ಫಲಿಸಿವೆ ಎಂಬುದನ್ನು ತೊರಿಸಿದ್ದಾರೆ. ಬಿಳಿ, ಅಂಗಿ, ಬಿಳಿಧೊತರವನ್ನು ಧರಿಸಿರುವ ವ್ಯಕ್ತಿಯ ಕುಳಿತ ಭಂಗಿ ಉತ್ತಮವಾಗಿದೆ. ಹಿನ್ನೆಲೆಯಾಗಿ ನೀಲಿ, ಬಿಳಿ ವರ್ಣದಿಂದ ತೋರಿಸಿದ್ದಾರೆ. ರೂಪದರ್ಶಿ ಬಲಗಡೆ ಕಮಂಡಲ ರೀತಿಯಲ್ಲಿರುವ ಹೂಜಿಯನ್ನು ಹಳದಿ, ಕೆಂಪು, ವರ್ಣದಿಂದ ಚಿತ್ರಿತವಾಗಿದೆ.

ಒಟ್ಟಾರೆ ಈ ರೂಪದರ್ಶಿಯ ಕಲಾಕೃತಿಯು ನೇರಳು ಬೆಳಕು, ಮತ್ತು ಅಂಗಿ, ಧೋತರಗಳಲ್ಲಿ ಬಿದ್ದಿರು ನಿಗೆಗಳನ್ನು ರಚಿಸುವಲ್ಲಿ ಕಲಾವಿದ ತಟ್ಟಿಯವರು ತಮ್ಮ ಕುಂಚದಿಂದ ಉತ್ತಮವಾಗಿ ರಚಿದ್ದಾರೆ.

ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಸಂಗ್ರಹಗೊಂಡ ಕಲಾಕೃತಿಗಳು :

ಗದುಗಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ವಿದ್ಯಾದಾನ ಸಮಿತಿಯ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯವು ಅನೇಕ ಚಿತ್ರ ವಿಧರನ್ನು ಚಿತ್ರಕಲಾ ಶಿಕ್ಷಕರನ್ನು ತಯಾರಿಸುವುದರ ಜೊತೆಗೆ ಅನೇಕ ಹಿರಿಯ ಕೀರೆಯ ಚಿತ್ರಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸಿದೆ.

ಜೆ.ಎನ್. ಚಿತ್ರಕಲಾ ವಿದ್ಯಾಲಯಕ್ಕೆ ಅನೇಕ ಖ್ಯಾತ ಕಲಾವಿದರು ಯುವಕಲಾವಿದರು ತಮ್ಮ ಅಮೂಲ್ಯವಾದ ಕಲಾಕೃತಿಗಳನ್ನು ಕಾಣಿಕೆಯಾಗಿ ನಿಡಿದ್ದಾರೆ. ಅವುಗಳ ಕುರಿತು ಈ ಕೆಳಗಿನಂತೆ ನಾಲ್ಕು ಭಾಗಗಳಾಗಿ ವಿಂಗಡಿಸಿ ವಿವೆಚಿಸಲಾಗಿದೆ.

೧. ಭಾವ ಚಿತ್ರಗಳು

೨. ನೈಜ ಚಿತ್ರಗಳು

೩. ನಿಸರ್ಗ ಚಿತ್ರಗಳು

೪. ಸೃಜನಾತ್ಮಕ ಕಲಾಕೃತಿಗಳು

೧. ಭಾವ ಚಿತ್ರಗಳು :

ಚಿತ್ರ . ೧.ಕಲಾವಿದ ಎಂ.ಎ. ಚಟ್ಟಿ ಭಾವ ಚಿತ್ರ : ಈ ಕಲಾಕೃತಿಂಯು ೨'X೨' ಅಳತೆಯತೆಯದಾಗಿದ್ದು ತೈಲವರ್ಣದಿಂದ ಕ್ಯಾನವಾಸಮೇಲೆ ಕಲಾವಿದ ರಾಜು ಉಮಚಗಿಯವರು ಚೆಟ್ಟಿಯವರ ಭಾವ ಚಿತ್ರವನ್ನು ತಮ್ಮದೇ ಆದ ರೇಖೆಗಳು ಬಣ್ಣಗಳ ಬಳಕೆಯಿಂದ ಪೂರ್ಣಗೊಳಿಸಿದ್ದಾರೆ. ಈ ಕಲಾಕೃತಿಯನ್ನು ಸೂಕ್ಷ್ಮವಾಗಿ ನೋಡಿದಾಗ ಚೆಟ್ಟಿಯವರ ಬದುಕು ಮತ್ತು ಕಲಾ ಹೊರಾಟದ ಜೀವನಗಳ ಕುರಿತು ವಿಷಯ ಅಭಿವ್ಯಕ್ತಗೊಳಿಸಿದ್ದಾನೆ. ಹಿನ್ನೆಲೆಯಲ್ಲಿ ಚೆಟ್ಟಿಯವರ ಬಣ್ಣದ ಬದುಕು ಎಷ್ಟು ಕಷ್ಟಕರವಾಗಿತ್ತು ಎಂಬುದನ್ನು ಬೆಳಕು ಮತ್ತು ಕತ್ತಲೆಯ ಬಣ್ಣಗಳ ಮೂಲಕ ಬಿತ್ತರಿಸಿದ್ದಾರೆ. ಈ ಭಾವಚಿತ್ರದಲ್ಲಿ ಚೆಟ್ಟಿಯವರು ಬಿಳಿ, ರೂಮಾಲು, ಬಿಳಿ, ಅಂಗಿ ಮತ್ತು ನೀಲಿ ಕೊರ್ಟಧರಿಸಿದ್ದಾರೆ.

ಸಿಸ್ತು ಮತ್ತು ಸ್ವಚ್ಚತೆಯನ್ನು ಪಾಲಿಸುತ್ತಿದ ಚೆಟ್ಟಿಯವರು ಧರಿಸಿರುವ ಉಡಿಗೆ ತೋಡಿಗೆ ಅರ್ಥವಾಗುವ ರೀತಿಯಲ್ಲಿ ಕಲಾವಿದ ಬಣ್ಣಗಳ ರೇಖೆಗಳ ಮೂಲ ಚೆಟ್ಟಿಯವರ ಭಾವಚಿತ್ರದಲ್ಲಿ ತೋರಿಸಿದ್ದಾರೆ. ಕಪ್ಪು, ಬಣ್ಣದ, ಮಿಸೆಯ ಚಟ್ಟಿಯವರ ಗಾಂಭಿರ್ಯವನ್ನು ರೂಪಿಸುತ್ತದೆ. ದೊಡ್ಡದಾದ ಕಿವಿ ಕಪ್ಪಾದ ಮಿಸೆ, ಸಾಂಪ್ರದಾಯಕವಾದ ಪೇಠ, ಕನ್ನಡಕ, ಕಲಾಕೃತಿಯಲ್ಲಿ ಆಕರ್ಷಣೆಯನ್ನು ಪಡೆದುಕೊಂಡಿದೆ.

ಚಿತ್ರ ೨. ಮಧರ ಥೇರಿಸಾ : ಈ ಕಲಾಕೃತಿಯು ೨'X೨೧/೨' ಅಳತೆಯಲ್ಲಿದೆ ಅಕ್ರಾಲಿಕ ಮಾಧ್ಯಮದಿಂದ ಕಲಾವಿದ ರಾಜು ಉಮಚಗಿಯವರು ರಚಿಸಿದ್ದಾರೆ. ಲಕ್ಷೇಶ್ವರದ ಕಲಾವಿದರಾದ ರಾಜು ಅವರು ಭಾವಚಿತ್ರ ರಿತಿಯಲ್ಲಿ ವಿಶೇಷ ಅಧ್ಯಯನಮಾಡಿ ನೈಜ ರೀತಿಯ ಕಲಾಕೃತಿಗಳನ್ನು ರಚಿಸುವ ಕೌಶಲ್ಯವನ್ನು ಬೆಳೆಸಿಕೊಂಡಿದ್ದಾರೆ. ಮದರಥೇರಿಸಾಳ ತ್ಯಾಗ ಮನೋಭಾವನೆ ಶಾಂತತೆಯ ಕುರಿತು ಕಲಾವಿದ ಅವರ ವ್ಯಕ್ತಿತ್ವದ ಕುರಿತು ಹಿನ್ನೆಲಗೆ ಬಣ್ಣಗಳ ಬಳಸುವುದರ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಕೆಸರಿ, ಬಿಳಿ, ಹಸಿರು, ವರ್ಣಗಳು, ಥೇರಿಸಾರ ಬದಕನ್ನು ಕಟ್ಟಿಕೊಂಡಿವೆ. ಮೂಖದಲ್ಲಿರುವ ತೆಜಸ್ಸು, ಕಣ್ಣು, ಮೂಗು ಬಾಯಿಗಳು ಮೂಖದ ಮೇಲಿನ ಭಾವನೆ ಮತ್ತು ವಯಸ್ಸನ್ನು ಚಿತ್ರ ನೊಡಿದ ತಕ್ಷಣ ನಮಗೆ ಗೊಚರಿಸುತ್ತವೆ. ಮದರ ಥೇರಿಸಾ ಉಟ್ಟಿರುವ ಸೀರೆ, ಥರಿಸಿರುವ ಕೊಟು, ಕಲಾಕೃತಿಗೆ ತಕ್ಕಂತಿವೆ. ಬಿಳಿ ಬಣ್ಣದ ಅಂಗಿಯನ್ನು, ಸೀರೆ, ಕಂದು ಬಣ್ಣದ ಕುದಲು ಥೇರೆಸಾರವರಿಗೆ ಅತ್ಯಕರ್ಷಕವಾಗಿದೆ ಕಣ್ಣು, ಮೂಗು, ಭಾಯಿಗಳನ್ನು ನೋಡಿದಾಗ, ಮದರಥೇರಿಸಾಳ ವಯಸ್ಸಿನ ಭಾವನೆಯನ್ನು ಉತ್ತಮ ರೀತಿಯಲ್ಲಿ ಕಲಾವಿದ ರಚಿಸಿದ್ದಾರೆ. ಮುಖದ ಮೇಲೆ ನೇರಳು ಬೆಳಕಿನಿಂದ ಕಲಾಕೃತಿಯನ್ನು ರಚೆಸಿದ್ದಾರೆ. ಕಲಾಕೃತಿಯ ಸ್ಥಳಾವಕಾಶ ಸಂಯೋಜನೆ ಬಣ್ಣಗಳ ಸಂಯೋಜನೆಯನ್ನು ಕಲಾವಿದ ಕಲಾಕೃತಿಯ ತಕ್ಕಂತೆ ರಚನೆಮಾಡಿದ್ದಾರೆ.

ಚಿತ್ರ ೩. ವಿದ್ಯಾರ್ಥಿಯ : ಕಲಾಕೃತಿಯು ಬಲವರ್ಣದಿಂದ ೧೨'X೧೫' ಅಳತೆಯಲ್ಲಿ ಪೇಪರ ಮೇಲೆ ಕಲಾವಿದರಾದ ಶ್ರಿ ಪಿ.ಎಸ್. ಲಕ್ಕುಂಡಿಯವರು ರಚಿಸಿದ್ದಾರೆ. ಬಲವರ್ಣದಿಂದ ಅನೇಕ ಕಲಾಕೃತಿಯನ್ನು ರಚಿಸಿದ ಲಕ್ಕುಂಡಿಯವರು ಕಾಲೇಜ ವಿದ್ಯಾರ್ಥಿಯ ಭಾವಚಿತ್ರವನ್ನು ಉತ್ತಮ ರೀತಿಯಿಂದ ಬಣ್ಣಗಳ ಬಳಕೆಯನ್ನು ಬಳಸಿದ್ದಾರೆ. ಕಲಾಕೃತಿಯನ್ನು ನೇರಳು ಬೆಳಕಿನಿಂದ, ಅಭಿವ್ಯಕ್ತಗೊಳಿಸಿದ್ದಾರೆ. ಮುಖದಲ್ಲಿ ಹಾವ ಭಾವವನ್ನು, ಕಣ್ಣು, ಮೂಗು, ಬಾಯಿಯನ್ನು ನೈಜರೀತಿಯಿಂದ ರಚಿಸಿದ್ದಾರೆ. ತಲೆಯ ಕೂದಲು ಕೆಂಪು ಬಣ್ಣಗಳಿಂದ ಅವಶ್ಯವಿರುವಷ್ಟೆ ಬ್ರೆಸ್‌ನಿಂದ ಬಣ್ಣಗಳನ್ನು ಬಳಸಿ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಈ ಕಲಾ ಕೃತಿಯು ಅಕಾಡೆಮಿಕ ಶೈಲಿಯಲ್ಲಿದ್ದು ಬಣ್ಣಗಳನ್ನು ಸರಳತೆಯಿಂದ ಬಳಸಿದ್ದಾರೆ. ಭಾವಚಿತ್ರದ ಅಂಗಿಯ ಬಣ್ಣವನ್ನು ಕೆಂಪುಬಣ್ಣ, ಸುಂದರವಾಗಿ ಪೂರ್ಣಗೊಳಿಸಿದ್ದಾರೆ.

ಒಟ್ಟಾರೆ ಈ ಕಲಾಕೃತಿಯಲ್ಲಿ ತೇಜತನ ಎದ್ದುಕಾಣುತ್ತದೆ. ಕಲಾವಿದನು ಬಳಸಿದ ಬಣ್ಣಗಳು ಪ್ರೌಡಿಮೆಯನ್ನು ಹೊಂದಿದೆ.

೨. ನೈಜ ಸಂಯೋಜನಾ ಕಲಾ ಕೃತಿಗಳು :

ಚಿತ್ರ ೧. ಡೊಳ್ಳು ಕುಣಿತ : ನಮ್ಮ ಜಾನಪದ ಸಂಸ್ಕೃತಿಯು ನೋಡಿದಾಗ ಡೊಳ್ಳು ಕುಣಿತವು ಪ್ರಮುಖವಾಗಿದೆ. ಈ ಕಲಾಕೃತಿಯ ೨'X೨' ಅಳತೆಯದಾಗಿದ್ದು ಅಕ್ರಾಲಿಕ್ ಮಾಧ್ಯಮದಿಂದ

ಯುವಕಲಾವಿದ ಶ್ರೀ ಕೆ.ಎಸ್. ಬಂಡಿಯವರು ರಚಿಸಿದ್ದಾರೆ. ಡೊಳ್ಳು ಕುಣಿತದಲ್ಲಿ ಕಲಾವಿದ ಸಂಯೋಜನೇಯನ್ನು ಮಾಡಿಕೊಂಡು ಬಣ್ಣಗಳ ಬಳಕೆಯನ್ನು ಸುಂದರವಾಗಿ ರಚಿಸಿದ್ದಾರೆ. ಇದರಲ್ಲಿ ಮೂರು ವ್ಯಕ್ತಿಗಳು ಇದ್ದು ಇಬ್ಬರು ಡೊಳ್ಳು ಬಾರಿಸುತ್ತಿದ್ದಾರೆ. ಒಬ್ಬ ತಾಳ ಬಾರಿಸುತ್ತಿದ್ದಾನೆ. ಡೊಳ್ಳನ್ನು ಭಾವಾವೇಷವಾಗಿ ಬಾರಿಸುತ್ತಿರುವ ರೀತಿಯು ಅತ್ಯಕರ್ಷಣೆಯಾಗಿದೆ. ಪ್ರತಿಯೊಬ್ಬರು ಬಿಳಿ ಪಟಗ, ಕೆಂಪು ಶಾಲವನ್ನು ಬಿಳಿಧೊತರವನ್ನು ಧರಿಸಿದ್ದಾರೆ. ಪ್ರತಿಯೊಬ್ಬರ ಮೈ ಬಣ್ಣವು ಬೇರೆ ಬೇರೆಯಾಗಿವೆ. ಈ ಸಂಯೋಜನಾ ಚಿತ್ರದಲ್ಲಿ ಹಿನ್ನಲೆಯಾಗಿ ಸೃಜನಾತ್ಮಕವಾಗಿ ಬಾಗಿಲು ಎಲೆ ಹೂಗಳನ್ನು ತೋರಿಸಿದ್ದಾರೆ. ಕ್ಯನವಾಸಕ್ಕೆ ತಕ್ಕಂತೆ ಕಲಾವಿದ ಸಂಯೋಜನಾ ಚಿತ್ರವನ್ನು ರಚಿಸಿದ್ದಾರೆ. ಎಲ್ಲರ ಹಣೆಯ ಮೇಲೆ ಕೈ ಮೈಗಳ ಮೇಲೆ ವಿಭೂತಿಧರಿಸಿದ್ದು ನೋಡುಗರಿಗೆ ಆಕರ್ಷಿತವಾದ ಕಲಾಕೃತಿ ಇದಾಗಿದೆ.

ಚಿತ್ರ ೨. ಜೋಕಾಲಿ : ಈ ಕಲಾಕೃತಿಯನ್ನು ಕಲಾವಿದ ಕೆ.ಎಸ್. ಬಂಡಿಯವರು $2'\times2\frac{2}{3}'$ ಅಳತೆಯ ಕ್ಯಾನವಾಸ ಮೇಲೆ ತೈಲವರ್ಣದಿಂದ ರಚಿಸಿದ್ದಾರೆ. ಇಬ್ಬರು ಬಾಲಕಿಯರು ಜೋಕಾಲಿ ಆಡುತ್ತಿದ್ದಾರೆ. ಒಂದು ಗಿಡಕ್ಕೆ ಜೋಕಾಲಿ ಹಗ್ಗವನ್ನು ಕಟ್ಟಿ ಆಟವಾಡುತ್ತಿರುವ ದೃಶ್ಯವು ನೈಜತೆಯಿಂದ ಕೂಡಿದೆ. ಹಳದಿ, ನೀಲಿ, ಬಣ್ಣದ ಬಟ್ಟೆಧರಿಸಿದ್ದಾಳೆ ಇನ್ನೊಬ್ಬಳು ಹಸಿರು ಕೆಂಪು ಬಣ್ಣದ ಜಂಪರ, ಲಂಗ, ಧರಿಸಿದ್ದಾಳೆ, ಹಿನ್ನಲೆಯಾಗಿ ಹಳ್ಳಿಯ ದೃಶ್ಯ ಮತ್ತು ಒಬ್ಬ ಬಾಲಕ ಆಟ ಆಡುತ್ತಿದ್ದಾರೆ. ಹಚ್ಚ ಹಸರಾದ ಗೀಡ, ಹಿನ್ನಲೆಯಾಗಿ ಸುಂದರವಾದ ಮನೆಗಳನ್ನು ಕಲಾವಿದ ಬಂಡಿಯವರು ರಚಿಸಿದ್ದಾರೆ. ಹಳ್ಳಿಯ ವಾತಾವರಣವನ್ನು ನೈಜ ಶೈಲಿಯಲ್ಲಿ ಕಲಾವಿದ ಬಂಡಿಯವರು ಬಹಳ ಸುಂದರವಾಗಿ ರಚಿಸಿದ್ದಾರೆ. ವಿಷಯಕ್ಕೆ ತಕ್ಕಂತೆ ಪ್ರಮಾಣ ಬದ್ಧತೆ ಸ್ಥಳಾವಕಾಶವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಸುಂದರವಾದ ಕಲಾಕೃತಿಯನ್ನು ಕಲಾವಿದ ಕೆ.ಎಸ್.ಬಂಡಿಯವರು ರಚಿಸಿದ ಕಲಾಕೃತಿ ಇದಾಗಿದೆ.

ಚಿತ್ರ ೩. ಚರ್ಚೆ : ಈ ಕಲಾಕೃತಿಯನ್ನು ಕಲಾವಿದ ಶ್ರೀ ಸಂಗಮೇಶ ಹರ್ಲಾಪೂರರವರು ಕ್ಯಾನವಾಸ ಮೇಲೆ ೧$^{೧/೧}$'X೨' ಅಳತೆಯದಾಗಿದೆ ಅಕ್ರಾಲೀಕ್ ಮಾಧ್ಯಮದಿಂದ ರಚಿಸಿದ್ದಾರೆ ಈ ಕಲಾಕೃತಿಯು ಸಂಯೋಜನಾ ಚಿತ್ರವಾಗಿದೆ ಇಬ್ಬರು ಮಹಿಳೆಯರು ಇದ್ದ ಇವರಲ್ಲಿ ಒಬ್ಬ ಮಹಿಳಯು ಬುಟ್ಟಿಯನ್ನು ಹೆಣೆಯುತ್ತ ಇನ್ನೊಬ್ಬ ಹೆಣ್ಣು ಮಕ್ಕಳ ಜೊತೆ ಮಾತನಾಡುತ್ತಿರುವ ಸುಂದರವಾದ ಕಲಾಕೃತಿ ಇದಾಗಿದೆ. ಇನ್ನೊಬ್ಬ ಮಹಿಳೆ ತಲೆಯಮೇಲೆ ಬುಟ್ಟಿ ಕೈಯಲ್ಲಿ ಬುಟ್ಟಿ ಹಿಡಿದುಕೊಂಡು ಮಾತಿನಲ್ಲಿ ತಲ್ಲಿನರಾಗಿದ್ದಾರೆ. ಹಿನ್ನಲೆಯಾಗಿ ಬಟ್ಟೆಗಳನ್ನು ಒಣಗಿ ಹಾಕಿರುವ ಚಿತ್ರವನ್ನು ಸಂಗಮೇಶ ಹರ್ಲಾಪೂರರವರು ಉತ್ತಮವಾಗಿ ನೈಜರೀತಿಯಲ್ಲಿ ನೇರಳು ಬೆಳಕಿನ ಕಡೆಗೆ ಹೆಚ್ಚು ಬತ್ತ ನೀಡಿ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ.

ಈ ಕಲಾಕೃತಿಯು ವಿಷಯಕ್ಕೆ ತಕ್ಕಂತೆ ಇದ್ದು ಕಲಾವಿದ ಬಳಸಿದ ಬಣ್ಣ ರೇಖೆಗಳು ನಯವಾಗಿವೆ. ಮತ್ತು ವರ್ಣಗಳ ಸಮತೊಲತೆಯು ಈ ಕಲಾಕೃತಿಯಲ್ಲಿ ಕಂಡು ಬರುತ್ತದೆ. ಒಟ್ಟಾರೆ ಪ್ರಮಾಣಕ್ಕೆ ತಕ್ಕಂತೆ ಸುದರವಾದ ಕಲಾಕೃತಿಯಾಗಿದೆ.

ಚಿತ್ರ ೪. ಗೆಳತಿಯರು : ಈ ಕಲಾಕೃತಿಯ ೨$^{೧/೨}$'X೨' ಅಳತೆಯದ್ದಾಗಿದೆ ಕ್ಯಾನವಾಸ ಮೇಲೆ ಅಕ್ರಾಲಿಕ್ ವರ್ಣದಿಂದ ಕಲಾವಿದ ಶ್ರೀ ಸಿ.ಡಿ. ಜೆಟ್ಟಣ್ಣವರ ಪೂರ್ಣಗೊಳಿಸಿದ್ದಾರೆ ಸಮುದ್ರದ

ದಡದಲ್ಲಿರುವ ಇಬ್ಬರ ಗೆಳತಿಯರು ಕೈಯಲ್ಲಿ ಕೆಂಪು ಚೀಲ, ಹಿಡಿದುಕೊಂಡಿದ್ದಾರೆ. ಹಿನ್ನಲೆಯಾಗಿ ಆಕಾಶ ಮತ್ತು ಸಮುದ್ರದ ನೀರು ಒಂದಾದಂತೆ ಉತ್ತಮರೀತಿಯಲ್ಲಿ ಕಲಾವಿದ ರಚಿಸಿದ್ದಾರೆ. ಬಳಸಿದ ಬಣ್ಣಗಳು ರೇಖೆಗಳು ಉತ್ತಮವಾಗಿದ್ದು ಇಬ್ಬರು ಗೇಳತಿಯರ ಚಿತ್ರವು ಸ್ಪಷ್ಟವಾಗಿ ಕಾಣುವಂತೆ ರಚಿಸಿದ್ದಾರೆ. ಒಟ್ಟಾರೆ ಈ ಕಲಾಕೃತಿಯಲ್ಲಿ ನೀಲಿ, ಬಿಳಿ, ಕೆಂಪು, ಹಳದಿ ವರ್ಣಗಳನ್ನು ಉಪಯೋಗಿಸಿದ್ದು ಕಂಡುಬರುತ್ತದೆ. ಸಮುದ್ರದ ಅಲೆಗಳು ಬರುತ್ತಿರುವಂತೆ ನೈಜರೀತಿಯಲ್ಲಿ ಸುಂದರವಾಗಿ ರಚಿಸಿದ್ದಾರೆ. ಮುಖ ಕಣ್ಣು, ಮೂಗು, ಸ್ಪಷ್ಟವಾಗಿ ಕಾಣುವುದಿಲ್ಲ ಆದರು ಕಲಾಕೃತಿಯ ಪ್ರಮಾಣಬದ್ಧವಾಗಿ ವಿಷಯಕ್ಕೆ ತಕ್ಕಂತ ಕಲಾವಿದ ಸಿಡಿ. ಜೆಟ್ಟಣ್ಣವರ ಉತ್ತಮವಾಗಿ ಈ ಕಲಾ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಬಣ್ಣಗಳು ಬಳಸಿದ ರೀತಿಯು ವಿಶಿಷ್ಠವಾಗಿದೆ ಮತ್ತು ಸೌಂದರ್ಯತೆಯನ್ನು ಕಾಣುತ್ತವೆ.

೩. ನಿಸರ್ಗ ಕಲಾಕೃತಿಗಳು :

ಚಿತ್ರ ೧. ಭೂಮಿ ಮತ್ತು ಆಕಾಶ : ಈ ಕಲಾಕೃತಿಯನ್ನು ಕಲಾವಿದ ಪ್ರಾ ಅಶೋಕ ಅಕ್ಕಿಯವರು ೨'X೨೧/೨' ಅಳತೆಯ ಕ್ಯಾನವಾಸ ಮೇಲೆ ತೈಲವರ್ಣದಿಂದ ಸುಂದರವಾದ ನಿಸರ್ಗ ಚಿತ್ರವನ್ನು ರಚಿಸಿದ್ದಾರೆ. ಆಕಾಶಕ್ಕೆ ನೀಲಿ ವರ್ಣದಿಂದ ಹಿಂದೆ ಮುಂದೆ ಇರುವ ಕಲ್ಪನೆಯನ್ನು ಅಕ್ಕಿಯವರು ಬಹಳ ಸುಂದರವಾಗಿ ರಚಿಸಿದ್ದಾರೆ. ಆಕಾಶ ಮತ್ತು ಭೂಮಿ ಕೂಡಿರುವಂತ ಬಣ್ಣಗಳ ಬಳಕೆಯಿಂದ ಸುಂದರವಾಗಿ ರಚಿಸಿದ್ದಾರೆ. ಹಸಿರು ವರ್ಣದಿಂದ ಭೂಮಿಯ ಮೇಲೆ ಹೂ ಗಿಡ ಬಳ್ಳಿಗಳಿರುವ ದೃಶ್ಯವನ್ನು ಸುಂದರವಾಗಿ ರಚಿಸಿದ್ದಾರೆ. ಆಕಾಶ ಮತ್ತು ಭೂಮಿಯ ಮಧ್ಯದಲ್ಲಿ ಕೇಸರಿ ಹಳದಿ ವರ್ಣದಿಂದ ಎರಡು ಭಾಗವಾಗುವಂತೆ ಬಣ್ಣದ ಪರಿಕಲ್ಪನೆಯನ್ನು ಕಲಾವಿದ ನೀಡಿದಲ್ಲಿ ವಿಶೇಷವಾಗಿದೆ. ಇದರಿಂದ ಒಟ್ಟಾರೆ ಕಲಾಕೃತಿಗೆ ಹೆಚ್ಚಿನ ರೀತಿಯಲ್ಲಿ ಉತ್ತಮವಾಗಿ ಕಾಣುವಂತೆ ಎಲ್ಲರೀತಿಯಿಂದ ಬಳಸಿದ ಬಣ್ಣ ರೇಖೆಗಳನ್ನು ಈ ಕಲಾಕೃತಿಯಲ್ಲಿ ಕಾಣುತ್ತವೆ.

ಚಿತ್ರ ೨. ಹಳ್ಳಿಯ ದೃಶ್ಯ : ಈ ಕಲಾ ಕೃತಿಯನ್ನು ಕಲಾವಿದ ಶ್ರೀ ಧರ ಚವ್ಹಾಣರವರು ೧೧/೨'X೨' ಅಳತೆಯಲ್ಲಿ ಕ್ಯಾನವಾಸ ಮೇಲೆ ತೈಲವರ್ಣದಿಂದ ಸುಮದರವಾಗಿ ರಚಿಸಿದ್ದಾರೆ ಕಲಾಕೃತಿಯನ್ನು ನೋಡಿದಾಕ್ಷಣ ಹಳ್ಳಿಯ ದೃಶ್ಯವು ಕಣ್ಣಿಗೆ ರೋಚರಿಸುವಂತೆ ಶ್ರೀಧರ ಚವ್ಹಾನರವರು ನೈಪದಿಂದ ಸುರಂತರವಾಗಿ ಕ್ಯಾನವಾಸಕ್ಕೆ ತಕ್ಕಂತೆ ರಚಿಸಿದ್ದಾರೆ ಹಿನ್ನಲೆಯಾಗಿ ಆಕಾಶಕ್ಕೆ ನೀಲಿ, ಜಾಂಬಳಿ, ಬಿಳಿ, ವರ್ಣಗಳಿಂದ ಪೂರ್ಣಗೊಳಸಿದ್ದಾರೆ. ಈ ಕಲಾ ಕೃತಿಯಲ್ಲಿ ಹೇಚ್ಚಾಗಿ ಕೆಂಪು ವರ್ಣದಿಂದ ಪೂರ್ಣಗೊಳಿಸಿದ್ದಾರೆ. ಭೂಮಿಯ ಬಣ್ಣ, ನಿಸರ್ಗ ಚಿತ್ರದಲ್ಲಿ ಸ್ಥಳಾವಕಾಶಕ್ಕೆ ತಕ್ಕಂತೆ ಚಿತ್ರವನ್ನು ಸುಂದರವಾಗಿ ರಚಿಸಿದ್ದರೆ. ಕಲಾಕೃತಿಯನ್ನು ನೋಡಿದಾಗ ಹಿಂದೆ ಮುಂದೆ ಇರುವ ಕಲ್ಪನೆಯನ್ನು ಬಣ್ಣಗಳ ಬಳಕೆಯಿಂದ ಎದ್ದು ಕಾಣುತ್ತವೆ. ನಿಸರ್ಗಚಿತ್ರದಲ್ಲಿ ಮೂರು ಜನ ತಮ್ಮ ಮನೆಗೆ ಹೊರಟಿರುವಂತೆ ಮತ್ತು ಅವರಿಗೆ ನೆರಳು ಬೆಳಕನ್ನು ಸುಂದರವಾಗಿ ರಚಿಸಿದ್ದಾರೆ. ಈ ನಿಸರ್ಗ ಕಲಾ ಕೃತಿಯ ಪ್ರಮಾಣ ಬದ್ಧತೆಯಿಂದ ಸುಂದರವಾಗಿ ರಚಿಸಿದ್ದಾರೆ.

ಚಿತ್ರ ೩. ಸಮುದ್ರದಲ್ಲಿ ಹಡಗು : ಈ ಕಲಾಕೃತಿಯನ್ನು ಕಲಾವಿದ ಡಿ.ಜೆ. ಇಟಿಯವರು ಕ್ಯಾನವಾಸ ಮೇಲೆ ತೈಲವರ್ಣದಿಂದ ರಚಿಸಿದ್ದಾರೆ ೨'X೨'ಅಳತೆಯಲ್ಲಿರುವ ನಿಸರ್ಗ ಚಿತ್ರವು ಆಕಾಶ ಮತ್ತು ಸಮುದ್ರವು ಕೂಡಿದಂತೆ ಕಾಣುತ್ತದೆ. ಸಮುದ್ರದಲ್ಲಿರುವ ಹಡಗು ದಡಸೇರಲಿರುವ ದೃಶ್ಯವನ್ನು

ಕಲಾವಿದ ಡಿ.ಜೇ. ಈಟಿಯವರು ತಮ್ಮ ಬಣ್ಣದ ಕೈಚಳಕವನ್ನು ಈಟಿಯವರು ಉತ್ತಮವಾಗಿ ಕಾಣುತ್ತವೆ. ಆಕಾಶದ ಬಣ್ಣವು ಮತ್ತು ಒಂದುಕಡೆ ಹಳದಿ ವರ್ಣವನ್ನು ಮತ್ತು ಸಮುದ್ರದಲ್ಲಿ ಚಲಿಸುತ್ತಿರುವ ಹಡಗು ನೀರಿನ ತೇರೆಗಳನ್ನು ನೈಜತೆಗಳ ಮೀರುವಂತೆ ಸಮುದ್ರದ ಅಲೆಗಳನ್ನು ರಚಿಸಿದ್ದಾರೆ. ಕೆಂಪುವರ್ಣದ ಹಡಗನ್ನು ಮಾಡಿ ಹಿನ್ನಲೆಯಾಗಿ ಬಿಳಿ, ನೀಲಿವರ್ಣದಿಂದ ಸಮುದ್ರ ನೀರನ್ನು ಸುಂದರವಾಗಿ ಕಲಾಕೃತಿಯನ್ನು ರಚಿಸಿದ ಈಟಿಯವರು ಒಬ್ಬ ಸಮರ್ಥಕಲಾವಿದನೆಂದುಸದ ಈ ಕಲಾಕೃತಿಯು ತೋರಿಸುತ್ತದೆ.

೪. ಸೃಜನಾತ್ಮಕ ಕಲಾಕೃತಿಗಳು :

ಚಿತ್ರ ೧. ಕಾಯುವಿಕೆ : ಈ ಕಲಾಕೃತಿಯನ್ನು ಕಲಾವಿದ ಬಿ.ಎಲ್. ಚವ್ಹಾಣರವರು ೨'X೨' ಅಳತೆಯಲ್ಲಿ ಅಕ್ರಾಲಿಕ್ ವರ್ಣದಿಂದ ರಚಿಸುವ ಸುಂದರವಾದ ಕೃತಿಯು ಇದಾಗಿದೆ ಹಲವಾರು ಮಹಿಳೆಯರ ಶೋಷಣೆಯ ಕುರಿತು ಅನೇಕ ಸರಣಿ ಚಿತ್ರಗಳನ್ನು ಮಾಡಿದ ಚವ್ಹಾಣರು. ಈ ಕಲಾಕೃತಿಯಲ್ಲಿ ಮಹಿಳೆಯು ತನ್ನ ಪ್ರೀಯತಮೆಗೊಸ್ಕರ ಗುಲಾಬಿ ಹೂವನ್ನು ಹಿಡಿದು ಕೊಂಡು ಕಾಯುತ್ತಿರುವ ಮಹಿಳೆಯ ಚಿತ್ರವು ಇದಾಗಿದ್ದು ತಲೆಯ ಮೇಲೆ ಬಿಳಿ, ವಸ್ತ್ರವನ್ನು ಹೂಯ್ದುಕೊಂಡಿದ್ದಾಳೆ ನೀಲಿವರ್ಣದಿಂದ ಮುಖ, ಕೈಗಳ ಸಹ ನೀಲಿವರ್ಣದಿಂದ ರಚಿಸಿದ್ದಾರೆ. ಕಲಾಕೃತಿಯ ಹಿನ್ನಾಲೆಯಾಗಿ ಚವ್ಹಾಣರವರ ಅರ್ಧಚಂದ್ರಕಾಂತದ ಹಳದಿ ಮತ್ತು ಕೆಂಪುವರ್ಣದಲ್ಲಿ ಪೂರ್ಣ ಗೊಳಿಸಿದ್ದಾರೆ. ಕಲಾಕೃತಿಯ ಹಿನ್ನಲೆಯಾಗಿ ಕತ್ತರಿನಿಂದ ಬೆಳಕಿನ ಕಡೆಯಂತೆ ಕತ್ತಲಿನಲ್ಲಿ ಬಾಗಿಲು ರಚಿತವಾಗಿದ್ದು ಅದರ ಮುಂದೆ ಬೆಳಕನ್ನು ತೊರಿಸುತ್ತ ನೆರಳು ಬೆಳಕನ್ನು ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

ಚಿತ್ರ ೧. ರೈತ : ಈ ಕಲಾಕೃತಿಯನ್ನು ಶ್ರೀ ಶ್ರೀಕಾಂತ ಪಾಟೀಲರು ಅಕ್ರಾಲಿಕ್ ಮಾಧ್ಯಮದಿಂದ ೨'X೨' ಅಳತೆಯಲ್ಲಿ ರೈತ ಎಂಬ ಶಿರ್ಷಿಕೆಯಲ್ಲಿ ಪಾಟೀಲರು ವಿಷಯಕ್ಕೆ ತಕ್ಕಂತೆ ಕಲಾಕೃತಿಯನ್ನು ರಚಿಸಿದ್ದಾರೆ. ಬಿಳಿ ರೂಮಾಲು ಬಿಳಿ ಅಂಗಿಯನ್ನು ಧರಿಸಿರುವ ರೈತ ಒಂದು ಕಡೆ ಇದ್ದರೆ ಇನ್ನೊಂದು ಕಡೆ ಟೆಂಗಿನಕಾಯಿಯನ್ನು ಸ್ಥಳಾವಕಾಶಕ್ಕೆ ತಕ್ಕಂತೆ ರಚಿಸಿದ್ದಾರೆ ಕೇಸರಿ, ಬಿಳಿ, ಹಳದಿ, ಹಸಿರು ವರ್ಣಗಳಿಂದ ಈ ಕಲಾಕೃತಿಯು ಪೂರ್ಣಗೊಂಡಿದೆ.

ಸರಳ ರೇಖಾ ಚಿತ್ರವನ್ನು ಈ ಕಲಾಕೃತಿಯಲ್ಲಿ ಕರಡು ಬರುತ್ತವೆ. ಪಾಟೀಲರ ಬಣ್ಣದ ಬಳಕೆಯ ಉತ್ತಮ ಆಗಿದ್ದು ಕಲಾಕೃತಿಯ ಸುಂದರವಾಗಿದೆ.

ಚಿತ್ರ ೩. ತಾಯಿ ಮಗು : ಈ ಕಲಾಕೃತಿಯನ್ನು ವಿಜಾಪೂರದ ಕಲಾವಿದ ಶ್ರೀ ಎಂ.ಎಂ. ಕುನ್ನುರವರು ೨'X೨೧/೨' ಅಳತೆಯ ಕ್ಯಾನವಾಸಮೇಲೆ ತೈಲವರ್ಣದಿಂದ ತಾಯಿ ಮತ್ತು ಮಗುವಿನ ಚಿತ್ರ ಬಹಳ ಸುಂದರವಾಗಿ ರಚಿಸಿದ್ದಾರೆ. ತಾಯಿ ಮಗುವನ್ನು ಚಂದಾಮಾಮಾನನ್ನು ತೋರಿಸುತ್ತ ಊಟ ಮಾಡಿಸುತ್ತಿರುವ ದೃಶ್ಯ ಕತ್ತಲಲ್ಲಿ ಚಂದ್ರನ ಬಂಬವನ್ನು ಮತ್ತು ಹಿನ್ನಲೆಯಾಗಿ ಸೃಜನಾತ್ಮಕವಾಗಿ ಹಳದಿ ಕೆಸರೀ ನೀಲಿವರ್ಣದಿಂದ ಒಂದು ಭಾಗ ಇನ್ನೊಂದು ಕಡೆ ಬಾಳೆಯ ಗಿಡವನ್ನು ಸುಂದರವಾಗಿ ರಚಿಸಿದ್ದಾರೆ ಮತ್ತು ಬಾಳೆಗೀಡ ನಾಶವಾಗಬಾರದು ಎಂದು ಕಟ್ಟಿಗೆಯ ಗೇಟನ್ನು ರಚಿಸಿದ್ದಾರೆ.

ತಾಯಿ ಮತ್ತು ಮಗುವಿನ ಚಿತ್ರವನ್ನು ನೋಡಿದಾಗ ತಾಯಿ ತನ್ನ ಮಗುವನ್ನು ಅತಿ ಪ್ರೀತಿಯಿಂದ ಕಾಣುತ್ತಿರುವುದು ಮಗು ಚಂದಪ್ಪನನ್ನು ನೊಡುತ್ತಿರುವ ದೃಶ್ಯವು ಬಹಳಷ್ಟು ಸುಂದರವಾಗಿದೆ ಮಗುವಿನ

ಮೈಬಣ್ಣವು ನಿಲಿವರ್ಣದಾಗಿದೆ. ತಾಯಿ ವಣ್ಣವು ಕೆಂಪು ವರ್ಣದಾಗಿದೆ. ಮತ್ತು ತಾಯಿ ಧರಿಸಿರುವ ಬಟ್ಟೆನೈಜ ಹಳದಿ ವರ್ಣದಾಗಿದ್ದು ಸೃಜನಾತ್ಮಕತೆಯನ್ನು ಕಲಾಕೃತಿಯಲ್ಲಿ ಕಂಡು ಬರುತ್ತದೆ. ನೊಡಲಿಕ್ಕೆ ಕಲಾಕೃತಿಯ ಪ್ರಮಾಣತೆ ಮತ್ತು ಸ್ಥಳಾವಕಾಶವನ್ನು ಬಳಸಿಕೊಂಡು ರಚಿಸಿದ ಉತ್ತಮ ಕಲಾ ಕೃತಿ ಇದಾಗಿದೆ.

ಚಿತ್ರ ೪. ಗೆಳತಿಯವರು : ಈ ಕಲಾಕೃತಿಯನ್ನು ಧಾರವಾಡದ ಕಲಾವಿದ ಶ್ರೀ ಸಿ.ಜಿ. ಕೊಟುರವರು ೨'X೨೧/೨' ಅಳತೆಯ ಕ್ಯಾನವಾಸಮೇಲೆ ಅಕ್ರಾಲಿಕ್ ವರ್ಣದಿಂದ ಕಲಾಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಇಬ್ಬರು ಗೆಳತಿಯರು ಧರಿಸಿರುವ ಉಡುಪುಗಳು ಒಂದೇ ರೀತಿಯದಾಗಿದೆ. ಕೇಂಪು, ನೀಲಿ, ವರ್ಣಗಳನ್ನು ಬಳಿಸಿಕೊಂಡು ಸೃಜನಾತ್ಮಕವಾದ ಕಲಾಕೃತಿ ರಚಿಸಿದ್ದಾರೆ. ಹಿನ್ನಲೆಯಾಗಿ ಕೆಂಪುವರ್ಣವನ್ನು ಬಳಸಿ ಅದರಲ್ಲಿ ವರ್ಣಗಳ ಸಮತೋಲ ಕಾಪಾಡಿಕೊಂಡು ಒಂದುಕಡೆ ಹೂ. ಬಳ್ಳಿಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಇನ್ನೊಂದು ಕಡೆ ಗಿಡದ ಕಾಡ ಇರುವ ಚಿತ್ರವನ್ನು ಕಲಾವಿದ ಸಿ.ಜಿ. ಕೋಟೂರರವರನ್ನು ಉತ್ತಮವಾಗಿ ರಚಿಸಿದ್ದಾರೆ. ಬಳಸಿದ ಬಣ್ಣಗಳು ಸಮತೋಲವನ್ನು ಹೊಂದಿದೆ ಇಬ್ಬರು ಗೇತಿಯರು ಯಾವುದೇ ಒಂದು ವಿಚಾರಗಳನ್ನು ಚರ್ಚಿಸುತ್ತಿರುವಂತೆ ಸುಂದರವಾಗಿ ರಚಿಸಿದ್ದಾರೆ. ನೋಡುಗರಿಗೆ ಅತ್ಯಾಕರ್ಷಣೆಯಾಗಿದೆ.

ಚಿತ್ರ ೫. ಅನ್‌ಟೈಟಲ್ : ಈ ಚಿತ್ರವು $2\times2\frac{1}{2}$ ಅಳತೆಯ ಕ್ಯಾನವಾಸ ಮೇಲೆ ತೈಲವರ್ಣದಿಂದ ಧಾರವಾಡದ ಕಲಾ ವಿದ ಶ್ರೀ ಡಿ.ಎಂ. ಬಡಿಗೇರರವರು ರಚಿಸಿದ ಕಲಾ ಕೃತಿಯಾಗಿದೆ. ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಪ್ರಾತ್ಯಕ್ಷತೆಯನ್ನು ನೀಡಿದ ಕಲಾಕೃತಿಯಾಗಿದೆ. ಕಲಾವಿದ ಬಡಿಗೇರರವರು ಬಳಸಿದ ಬಣ್ಣಗಳು ಸೌಮ್ಯತದ್ದಾಗಿವೆ. ಹಸಿರು, ಜಾಂಬಳಿ, ಹಳದಿ ವರ್ಣದಿಂದ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಕಲಾಕೃತಿಯು ಅರೆನಗ್ನಗಳಾಗಿದ್ದು ಕೈಯಲ್ಲಿ ಬಿಂದಿಗೆ ಹಿಡಿದುಕೊಂಡು ಕುಳಿತಿರುವಂತೆ ಕಲಾವಿದ ತಮ್ಮ ಬಣ್ಣದ ಬಳಕೆಯಿಂದ ಬಿಳಿವರ್ಣದಲ್ಲಿ ಕಾಣುವಂತೆ ರಚಿಸಿದ್ದಾರೆ. ಬಣ್ಣಗಳ ಬಳಕೆ ರೇಖೆಗಳನ್ನು ಸಮತೊಲತೆಯನ್ನು ಮಡಿಕೊಂಡು ರಚಿಸಿದ ಉತ್ತಮ ಕಲಾಕೃತಿ ಇದಾಗಿದೆ.

ಚಿತ್ರ ೬. ಹುಟ್ಟು : ಈ ಕಲಾಕೃತಿಯು ತೈಲವರ್ಣದಿಂದ ರಚನೆಯಾಗಿದೆ 2'X2"ಅಳತೆಯ ಈ ಕಲಾಕೃತಿಯನ್ನು ಶ್ರೀ ಪಿ. ಬಿ. ಬಂಡಿಯವರು ರಚಿಸಿದ್ದಾರೆ. ಯಾವುದು ವಸ್ತುಗಳು ಭೂಮಿಯಿಂದಲೆ ಹುಟ್ಟುತ್ತವೆ ನಂತರ ಅವು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬೆಳೆಯುತ್ತವೆ ಅದಕ್ಕೆ ಅನೇಕ ಅಡತಡೆಗಳು ಬರುತ್ತವೆ. ಎಂಬುದಾಗಿ ಕಪ್ಪು ಮತ್ತು ಕೆಂಪುಬಣ್ಣಗಳನ್ನು ಬಳಸಿ ಕಲಾವಿದ ವಿಷಯವನ್ನು ಹೇಳುವ ಪ್ರಯತ್ನಮಾಡಿದ್ದಾನೆ. ಹೆಚ್ಚಾಗಿ ತಿಳಿ ಹಸಿರು ವರ್ಣ ಮತ್ತು ನೀಲಿವರ್ಣವನ್ನು ಬಳಸಿ ಕಲಾಕೃತಿಯನ್ನು ರಚಿಸಿದ್ದಾರೆ. ಕಂದು ಬಣ್ಣವನ್ನು ಭೂಮಿಯ ಸಂಕೇತವಾಗಿ ಬಳಸಿಕೊಂಡಿದ್ದಾರೆ. ಸುಂದರವಾದ ಫಾರ್ವಗಳನ್ನು ಬಳಸಿ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ.

ಚಿತ್ರ ೭. ಮಿನು ಮಾರುವವಳು : ಈ ಕಲಾಕೃತಿಯನ್ನು ಅಕ್ರಾಲಿಕ ಮಾಧ್ಯಮದಿಂದ ಕಲಾವಿದ ಎನ್.ಟಿ. ಮಾಳವದಕರರವರು ಅಳತೆಯಲ್ಲಿ ಕ್ಯಾನವಾಸ ಮೇಲೆ ರಚನೆ ಮಾಡಿದ ಕಲಾಕೃತಿ

ಇದಾಗಿದೆ. ಕಲಾವಿದ ತಮ್ಮದೇ ಆದ ಬಣ್ಣ ರೇಖೆಗಳನ್ನು ಬಳಸಿ ಕಲಾಕೃತಿಯನ್ನು ಮಾಡಿದ್ದಾರೆ. ಬಣ್ಣದ ಸಮತೋಲತೆ ಕಾಯ್ದುಕೊಳ್ಳಲು ಮಿನು ಮಾರುವ ಮಹಿಳೆಯ ಹಿಂದೆ ಜಾಂಬಳಿ ವರ್ಣದಿಂದ ಮಿನಿನ ಆಕಾರದ ಫಾರ್ಮಿಳಗಳನ್ನು ಹಾಕಿದ್ದಾರೆ. ಹಳದಿ, ಹಸಿರು, ಕೆಂಪು, ಮತ್ತು ಕಪ್ಪುವರ್ಣದಿಂದ ಕಲಾಕೃತಿಯನ್ನು ರಚಿಸಿದ್ದಾರೆ. ಬುಟ್ಟಿಯಲ್ಲಿ ಮಿನುಗಳು ಹಾಕಿಕೊಂಡಿರುವ ಮಹಿಳೆಯ ಚಿತ್ರವಾದಾಗಿದೆ. ಕ್ಯಾನವಾಸಕ್ಕೆ ತಕ್ಕಂತೆ ವಿಷಯದ ಅನುಸಾರ ಕಲಾಕೃತಿ ರಚಿಸಿ ಪೂರ್ಣಗೊಳಿಸಿದ್ದಾರೆ.

ಚಿತ್ರ ೮. ನಾಟ್ಯ ಶಿವ : ಈ ಕಲಾಕೃತಿಯನ್ನು ಅಕ್ರಾಲಿಕ್ ಮಾಧ್ಯಮದಿಂದ ಕಲಾವಿದ ವ್ಹಿ.ವಾಯ್. ಸೋಮನಕಟ್ಟಿಯವರು ಅಳತೆಯಲ್ಲಿ ಕ್ಯಾನವಾಸ ಮೇಲೆ ನಾಟ್ಯ ಮಾಡುತ್ತಿರುವ ಶಿವನ ಚಿತ್ರವನ್ನು ರಚಿಸಿದ್ದಾರೆ. ಈ ಕಲಾ ಕೃತಿಯ ಸಾಂಪ್ರದಾಯಕ ಶಿಲ್ಪಕಲೆಯನ್ನು ಬಿಂಬಿಸುವಂತೆ ಶಿಲ್ಪಗಳು. ಆನೆ, ಆಕಳು ಮತ್ತು ಚಾಲುಕ್ಯರ ಲಾಂಚನವನ್ನು ಶಿಲ್ಪದ ರೂಪದಲ್ಲಿ ಸುಂದರವಾಗಿ ಕಲಾವಿದ ರಚಿಸಿದ್ದಾರೆ. ಈ ಕಲಾಕೃತಿಯಲ್ಲಿ ಹೆಚ್ಚಾಗಿ ಕೆಂಪುವರ್ಣ ಬಳಕೆಯಾಗಿದೆ. ಸಮತೋಲತೆ ಕಾಪಾಡಿಕೊಳ್ಳಲು ನೀಲಿ ಬಿಳಿ ಹಳದಿ ವರ್ಣವನ್ನು ಬಳಸಿಕೊಂಡು ಉತ್ತಮವಾದ ನಾಟ್ಯ ಮಾಡುತ್ತಿರುವ ಶಿಲ್ಪ ಕಲಾಕೃತಿಯನ್ನು ಸೊಮನಕಟ್ಟಿಯವರು ಕ್ಯಾನವಾಸ ಮೇಲೆ ಚಿತ್ರಿಸಿದ್ದಾರೆ. ಕಲಾಕೃತಿಯ ಮೈವಳಿಕೆ ಮೂರು ಆಯಾಮದಿಂದ ಕಲಾಕೃತಿಯನ್ನು ಪೂರ್ಣಗೊಳಸಿದ್ದಾರೆ.

ಚಿತ್ರ ೯. ವೀಣಾವಾದಿನಿ : ಈ ಕಲಾಕೃತಿಯು ಅಕ್ರಾಲಿಕ್ ಮಾಧ್ಯಮದಿಂದ 18'X24" ದಲ್ಲಿ ಧಾರವಾಡದ ಕಲಾವಿದ ಶ್ರೀ ಡಿ.ಕೆ. ಕಾಮಕರರವರು 2 2 $\frac{1}{2}$ ಪ್ರತ್ಯಕ್ಷತೆಯನ್ನು ಮಾಡಿದ ಕಲಾ ಕೃತಿಯಾಗಿದೆ. ವೀಣೆಯನ್ನು ನುಡಿಸುತ್ತಿರುವ ಮಹಿಳೆಯ ಕಲಾಕೃತಿ ಇದಾಗಿದೆ. ಬಿಳಿಸಿರೇಯನ್ನು ತಲೆಯ ಮೇಲೆ ಹಾಕಿಕೊಂಡಿದ್ದಾಳೆ ನಯವಾದ ಕಣ್ಣು ಮೂಗು ಬಾಯಿಯನ್ನು ಸುಂದರವಾಗಿ ರಚಿಸಿದ್ದಾರೆ. ಹಿನ್ನಲೆಯಲ್ಲಿ ಕೆಂಪು ವರ್ಣದಿಂದ ಬಾಗಿಲ ರಚಿಸಿದ್ದಾರೆ. ಸಮತೋಲತೆಯನ್ನು ಕಾಪಾಡಲು ನೀಲಿ ಹಳದಿ ಕೆಂಪು ವರ್ಣಗಳಿಂದ ರಚಿಸಿದ್ದಾರೆ. ಮುಖ ಬಣ್ಣವನ್ನು ನೀಲಿ ಹಣೆಗೆ ಬಿಳಿ ವರ್ಣ ಲೇಪಿಸಿ ಆಕರ್ಷಕವಾದ ಕಲಾಕೃತಿಯನ್ನು ಕಲಾವಿದ ದಯಾನಂದ ಕಾಮಕರರವರು ತಮ್ಮದೆಯಾದ ಶೈಲಿಯಲ್ಲಿ ಕಲಾಕೃತಿಯನ್ನು ಪೂರ್ಣ ಗೊಳಿಸಿದ್ದಾರೆ.

ಚಿತ್ರ ೧೦. ಬುದ್ಧ : ಈ ಕಲಾಕೃತಿಯನ್ನು ಶ್ರೀ ಬಿ.ಎನ್. ಪರ್ವತಗೌಡರ ಇವರು ಅಕ್ರಾಲಿಕ್ ಮಾಧ್ಯಮದಿಂದ ರಚಿಸಿದ್ದಾರೆ. ಅಳತೆಯ ಈ ಕಲಾಕೃತಿಯು ಕೆಂಪು ಹಳದಿ ವರ್ಣಗಳು ಹೆಚ್ಚಾಗಿ ಕಂಡು ಬರುತ್ತದೆ. ಬುದ್ಧನು ರಾಜ್ಯಭಾರವನ್ನು ತ್ಯಾಗಮಾಡಿ ಶಾಂತಿಯ ಸಂದೇಶವನ್ನು ಹೇಳುವುದು ಈ ಕಲಾ ಕೃತಿಯಲ್ಲಿ ಕಂಡುಬರುತ್ತದೆ. ಸೃಜನಾತ್ಮಕ ಸಂಯೋಜನೆಯನ್ನು ಹೊಂದಿದೆ. ಕಲಾಕೃತಿಯ ಕೆಳಭಾಗವು ಕೆಂಪುಬಣ್ಣ ವಿದ್ದು ಅಂದಕಾರದ ಸಂದೇಶವನ್ನು ಹೇಳುತ್ತದೆ. ಕಲಾಕೃತಿಯ ಮೇಲ್ಬಭಾಗದಲ್ಲಿ ಹುಟ್ಟು ಎಂಬ ವಿಷಯ ತಿಳಿಸಲು ಜನನೇಂದ್ರಿಯವನ್ನು ರಚಿಸಿದಾರೆ. ಕಲಾಕೃತಿಯ ಸಮತೋಲತೆಯನ್ನು ಕಾಪಾಡಲು ಬಣ್ಣ ಮತ್ತು ರೇಖೆಗಳ ಮೂಲ ಅಭಿವ್ಯಕ್ತ ಗೊಳಿಸಿದ್ದಾರೆ. ಬುದ್ದಿನ ಮುಂದೆ ಅಣಬೆಯ ಚಿತ್ರವನ್ನು ಸುಂದರವಾಗಿ ರಚಿಸಿದ್ದಾರೆ.

ಚಿತ್ರ ೧೧. ಬಗರಿ : ಈ ಕಲಾಕೃತಿಯು ಅಳತೆಯದಾಗಿದ್ದು ಅಕ್ರಾಲಿಕ್ ಮಾಧ್ಯಮದಿಂದ ಕಲಾಕೃತಿಯನ್ನು ಕಲಾವಿದ ಮಹೇಶ ಸಂದಿಗೌಡರರವರು ರಚಿಸಿದ್ದಾರೆ. ಈ ಕಲಾಕೃತಿಯಲ್ಲಿ ಹಳ್ಳಿಯ ಬಾಲಕ ಬಗರಿ ಆಟವಾಡುತ್ತಿದ್ದು ಬಣ್ಣಗಳ ಮೂಲಕ ಅಮೂರ್ತವಾಗಿ ಹಳ್ಳಿಯ ದೃಶ್ಯವನ್ನು ಕಲಾವಿದ ರಚಿಸಿದ್ದಾರೆ. ಹೆಚ್ಚಾಗಿ ಕೆಂಪು ಮತ್ತು ಹಳದಿ ವರ್ಣಗಳು ಕಂಡುಬರುತ್ತದೆ. ಕಲಾಕೃತಿಯನ್ನು ಬಗರಿಗಳನ್ನು ರಚಿಸುವುದರ ಮೂಲಕ ಸಮತೋಲತೆಯನ್ನು ಮಾಡಿದ್ದಾರೆ. ಬಗರಿಯ ಚಲನೆಯನ್ನು ಕಲಾವಿದ ಉತ್ತಮರೀತಿಯಿಂದ ರಚಿಸಿದ್ದಾರೆ. ಈ ಕಲಾಕೃತಿಯ ನೈಜತೆಯ ಸೃಜನಾತ್ಮಕತೆಯಿಂದ ಕೂಡಿದೆ. ಬಣ್ಣಗಳ ಸಮತೋಲತೆಯು ಇದರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಬಗರಿ ಆಟವಾಡುತ್ತಿರುವ ಮಗುವಿನ ಚಿತ್ರವು ನೈಜಶೈಲಿಯಂತೆ ರಚಿಸಿದ್ದಾರೆ.

ಚಿತ್ರ ೧೨. ಗಣೇಶ : ಈ ಕಲಾಕೃತಿಯನ್ನು ಅಕ್ರಾಲಿಕ ಮಾಧ್ಯಮದಿಂದ ಶ್ರೀಮತಿ ಮುಂಡೆವಾಡಿಯವರು ರಚಿಸಿದ್ದಾರೆ. ಇದರಲ್ಲಿ ಗಣೇಶನ ಚಿತ್ರವು ಪ್ರಮುಖವಾಗಿದೆ ಕಪ್ಪುವರ್ಣದಿಂದ ರಚಿಸಿದ್ದಾರೆ. ಶ್ರೀ ಗಣೇಶನ ಮೇಲಭಾಗದಲ್ಲಿ ಶ್ರೀಕಾರದ ಚಿತ್ರವನ್ನು ತಿಳಿಕಂದು ಬಣ್ಣದಿಂದ ರಚಿಸಿದ್ದಾರೆ ಕಲಾಕೃತಿಯಲ್ಲಿ ಮೈವಳಿಕೆ ಮಾಡಿಕೊಂಡು ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಶ್ರೀ ಗಣೇಶನ ವಿಭೂತಿ, ನಯವಾದ ಕಣ್ಣುಗಳನ್ನು ಆಕರ್ಷಣೆಯಾಗಿದೆ. ಈ ಕಲಾಕೃತಿಯಲ್ಲಿ ಹಳದಿ, ಹಸಿರು ಕಪು, ಕೆಂಪು, ಜಾಂಬಳಿ, ನೀಲಿವರ್ಣವನ್ನು ಬಳಸಿ, ಬಣ್ಣಗಳ ಸಮತೋಲತೆಯನ್ನು ಮಾಡಿಕೊಳ್ಳಲು ಉತ್ತಮರೀತಿಯಿಂದ ಬಳಸಿಕೊಂಡು ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ.

$2 \times 2\frac{}{2}$

n n n

ಕಲಾಕೃತಿಗಳ ಸಂಗ್ರಹಾಲಯದ ನೆಲೆಗಳು



ಪ್ರಾಚ್ಯ ವಸ್ತು ಸಂಗ್ರಹಾಲಯ,ಗದಗ



ಜ. ಶ್ರೀತೋಂಟದಾರ್ಯ ಮಠ, ಗದಗ





ವಿಜಯಕಲಾಮಂದಿರದ ನೂತನ ಕಟ್ಟಡ



ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದ ನೂತನ ಕಟ್ಟಡ


ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡ ಕಲಾಕೃತಿಗಳು



ಚಿತ್ರ ೧.ಕಿಟಕಿ



ಚಿತ್ರ ೨. ನೆನಪು



ಚಿತ್ರ ೩.ಜೀವನ



ಚಿತ್ರ ೪. ಚರ್ಚೆ

ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಗೊಂಡ ಕಲಾಕೃತಿಗಳು



ಚಿತ್ರ ೫. ಬಾತಿಂಗ



ಚಿತ್ರ ೬.ಹೋರಿಗಳು



ಚಿತ್ರ ೭.ಫಿಲಿಂಗ



ಚಿತ್ರ ೮.ಶ್ರೀಗುರಾಘವಂದ್ರ



ಚಿತ್ರ ೯. ವುಯಿಟು



ಚಿತ್ರ ೧೦. ಅನ್‌ಟೈಟಲ್



ಚಿತ್ರ ೧೧.ನಿಸರ್ಗ



ಚಿತ್ರ ೧೨.ಪಕ್ಷಿನೋಟ

ತೋಂಟದಾರ್ಯ ಮಟದಲ್ಲಿರುವ ಸಾಂಪ್ರದಾಯಕ ಕಲಾಕೃತಿಗಳು



ಚಿತ್ರ ೧.



ಚಿತ್ರ ೨.



ಚಿತ್ರ ೩.



ಚಿತ್ರ ೪.



ಚಿತ್ರ ೫.

ತೋಂಟದಾರ್ಯ ಮಠದಲ್ಲಿ ಸಂಗ್ರಹ ಗೊಂಡ ಸತ್ಪುರುಷರ ಕಲಾಕೃತಿಗಳು



ಚಿತ್ರ: ೧.ಹಾನಗಲ ಕುಮಾರ ಸ್ವಾಮಿಗಳು



ಚಿತ್ರ: ೨. ಚಿತ್ತರಗಿಯ ಮಹಾಂತ ಸ್ವಾಮಿಗಳು



ಚಿತ್ರ: ೩. ಮಹಾ ಮಾನವತಾವಾದಿಗಳು



ಚಿತ್ರ: ೪. ಕ್ರಾಂತಿಯೋಗಿ ಬಸವಣ್ಣನವರು

ತೋಂಟದಾರ್ಯ ಮಠದಲ್ಲಿ ಸಂಗ್ರಹ ಗೊಂಡಪವಾಡ ಪುರುಶರು ಕಲಾಕೃತಿಗಳು



ಚಿತ್ರ: ೧ ಶ್ರೀ ಎಡೇಯೂರ ಸಿದ್ದಲಿಂಗ ಸ್ವಾಮಿಗಳು



ಚಿತ್ರ: ಅಥಣಿಯ ಶ್ರೀಮುರಗರಾಜೇಂದ್ರ ಸ್ವಾಮಿಗಳು

೨.



ಚಿತ್ರ: ೨ ಪೂಜೆಯಲ್ಲಿಮಗ್ನರಾದ ಎಡೆಯೂರ ಸಿದ್ದಲಿಂಗೇಶ್ವರ



ಚಿತ್ರ: ೫.ಶ್ರೀ ಸಿದ್ದಲಿಂಗೇಶ್ವರರ ದೀಕ್ಷಾ ಸಮಾರಂಭ

ಬಳಗಾನೂರ ಚಿಕ್ಕೆನಕೊಪ್ಪ ಶರಣರ ಮಠದಲ್ಲಿ ಸಂಗ್ರಹವಾದ ಕಲಾಕೃತಿಗಳು



ಚಿತ್ರ ೧. ಶ್ರೀ ಮ.ನಿ.ಪ್ರ. ಮಹಾಂತ ಶಿವಯೋಗಿಗಳು



ಚಿತ್ರ ೨. ಶ್ರೀ ಶರಣ ಬಸವೇಶ್ವರರು



ಚಿತ್ರ ೩. ಶ್ರೀ ಅಥಣಿ ಮುರುಘೇಂದ್ರ ಶಿವಯೋಗಿಗಳು



ಚಿತ್ರ ೪. ಸಜ್ಜಲಗುಡ್ಡ ಶರಣಮ್ಮನವರು

ಬಳಗಾನೂರ ಚಿಕ್ಕೆನಕೊಪ್ಪ ಶರಣರ ಮಠದಲ್ಲಿ ಸಂಗ್ರಹವಾದ ಕಲಾಕೃತಿಗಳು



ಚಿತ್ರ ೫. ಶ್ರೀ ಮ.ನಿ.ನಿಜಗುಣ ಶಿವಯೋಗಿಗಳು




ಚಿತ್ರ ೬. ಶ್ರೀ ನಲ್ವತ್ತವಾಡ ವೀರೇಶ್ವರ ಶರಣರು




ಚಿತ್ರ ೭. ಚಿತ್ತರಗಿ ಶ್ರೀ ವಿಜಯಮಹಾಂತ ಶಿವಯೋಗಿಗಳು



ಚಿತ್ರ ೮. ಶ್ರೀ ಕಾಶಿಪತಿ ಗಂಗಾಧರ ಶಣರು



ಚಿತ್ರ ೯. ಶ್ರೀ ಜಗಜ್ಯೋತಿ ಬಸವೇಶ್ವರ



ಚಿತ್ರ ೧೦. ಶ್ರೀ ಬೂದೀಶ್ವರ ಸ್ವಾಮಿಗಳು ಹೊಸಳ್ಳಿ



ಚಿತ್ರ ೧೧ . ಶ್ರೀ ಮ.ನಿ.ಪ್ರ ಮರಿಶಾಂತ ಮಹಾಸ್ವಾಮಿಗಳು




ಚಿತ್ರ ೧೨. ಶಿವಶರಣೆ ಇಟಗಿ ಭಿಮಾಂಬಿಕಾ

ವಿಜಯ ಕಲಾಮಂದಿರದಲ್ಲಿ ಸಂಗ್ರಹಗೊಂಡ ಸೃಜನಾತ್ಮಕ ಸಂಯೋಜನಾ ಕಲಾಕೃತಿಗಳು



ಚಿತ್ರ: ೧. ಕ್ರೀಯೇಶನ್



ಚಿತ್ರ: ೨.ನಿಸರ್ಗ



ಚಿತ್ರ: ೩.ಜೋಕಾಲಿಯಾಡುವ ಮಹಿಳೆ

ವಿಜಯ ಕಲಾಮಂದಿರದಲ್ಲಿ ಸಂಗ್ರಹಗೋಂಡ ಸಂಯೋಜನೆ ಕಲಾಕೃತಿಗಳು



ಚಿತ್ರ: ೪.ಪ್ರಕೃತಿ ವಿಕೋಪ



ಚಿತ್ರ: ೫. ಗೂಳಿ



ಚಿತ್ರ: ೬. ಮ್ಯೂಜಿಸಿಯನ್



ಚಿತ್ರ: ೭. ಲಂಬಾಣಿ ಮಹಿಳೆಯರು

ವಿಜಯ ಕಲಾಮಂದಿರದಲ್ಲಿ ಸಂಗ್ರಹಗೋಂಡ ಸಂಯೋನೆ ಕಲಾಕೃತಿಗಳು



ಚಿತ್ರ: ೧೨.ಅನ್ ಟೈಟಲ್



ಚಿತ್ರ: ೧೩.ಅನ್ ಟೈಟಲ್




ಚಿತ್ರ: ೧೪. ಚರ್ಚೆ

ವಿಜಯ ಕಲಾಮಂದಿರದಲ್ಲಿ ಸಂಗ್ರಹಗೋಂಡ ಸಂಯೋನೆ ಕಲಾಕೃತಿಗಳು




ಚಿತ್ರ:೮. ವೇಟಿಂಗ್



ಚಿತ್ರ: ೯.ಮಹಿಳೆ



ಚಿತ್ರ ೧೦. ಅನ್‌ಟೈಟಲ



ಚಿತ್ರ: ೧೧ ಅನ್ ಟೈಟಲ್

ವಿಜಯ ಕಲಾಮಂದಿರದಲ್ಲಿ ಸಂಗ್ರಹಗೋಂಡ ಸಂಯೋನೆ ಕಲಾಕೃತಿಗಳು



ಚಿತ್ರ: ೧.ರೂಪದರ್ಶಿಯಾಗಿ ಕುಳಿತ ವ್ಯಕ್ತಿ



ಚಿತ್ರ: ೨. ರೂಪದರ್ಶಿಯಾಗಿ ಕುಳಿತ ವಿದ್ಯಾರ್ಥಿನಿ




ಚಿತ್ರ: ೩..ರೂಪದರ್ಶಿ ಯಾಗಿ ಕುಳಿತ ವ್ಯಕ್ತಿ



ಚಿತ್ರ: ೪. ರೂಪದರ್ಶಿಯಾಗಿ ಕುಳಿಯವ್ಯಕ್ತಿ

ವಿಜಯ ಕಲಾಮಂದಿರದಲ್ಲಿ ಸಂಗ್ರಹಗೋಂಡ ಭಾವಚಿತ್ರಗಳು



ಚಿತ್ರ: ೧.ವಿದ್ಯಾರ್ಥಿನಿ



ಚಿತ್ರ: ೨. ವಿದ್ಯಾರ್ಥಿ



ಚಿತ್ರ: ಕಲಾಗುರು ಟಿ.ಪಿ.ಅಕ್ಕಿ



ಚಿತ್ರ: ೪.ರೂಪದರ್ಶಿಯ ಭಾವಚಿತ್ರ

ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಸಂಗ್ರಹಗೋಂಡ ಭಾವಚಿತ್ರಗಳು



ಚಿತ್ರ: ೧. ಕಲಾವಿದ ಎಂ.ಎ.ಚೆಟ್ಟಿ



ಚಿತ್ರ: ೨.ಮದರಥೇರಿಸಾ



ಚಿತ್ರ: ೩.ವಿದ್ಯಾರ್ಥಿ

ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಸಂಗ್ರಹಗೋಂಡ ನಿಸರ್ಗ ಚಿತ್ರಗಳು



ಚಿತ್ರ: ೧.ಭೂಮಿ ಮತ್ತು ಆಕಾಶ



ಚಿತ್ರ-೨.ಹಳ್ಳಿಯ ದೃಶ್ಯ



ಚಿತ್ರ: ೩.ಸಮುದ್ರದಲ್ಲಿ ಹಡುಗು

ಜೆ.ಎನ್ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಸಂಗ್ರಹಗೊಂಡ ಸಂಯೋಜನೆ ಚಿತ್ರಗಳು



ಚಿತ್ರ: ೧.ಡೊಳ್ಳು ಕಣಿತ



ಚಿತ್ರ: ೨ .ಜೊಕಾಲಿ



ಚಿತ್ರ.೩.ಚರ್ಚೆ



ಚಿತ್ರ ೪.ಗೆಳತಿಯರು

ಜೆ.ಎಸ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಸಂಗ್ರಹಗೋಂಡ ಸೃಜನಾತ್ಮಕ ಕಲಾಕೃತಿಗಳು



ಚಿತ್ರ: ೧.ಕಾಯುವಿಕೆ




ಚಿತ್ರ: ೨. ರೈತ



ಚಿತ್ರ: ೩.ತಾಯಿ ಮತ್ತು ಮಗು



ಚಿತ್ರ ೪.ಗೆಳತಿಯರು



ಚಿತ್ರ: ೫ ಅನ್‌ಟೈಟಲ್



ಚಿತ್ರ: ೬.ಹುಟ್ಟು



ಚಿತ್ರ: ೭.ಮಿನು ಮಾರುವವಳು



ಚಿತ್ರ: ೮.ನಾಟ್ಯಶಿವ

ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಸಂಗ್ರಹಗೋಂಡ ಸಂಯೋಜನೆಚಿತ್ರಗಳು



ಚಿತ್ರ: ೯. ವೀಣಾವಾದಿನಿ



ಚಿತ್ರ: ೧೦.ಬುದ್ಧ




ಚಿತ್ರ: ೧೧.ಬಗರಿ



ಚಿತ್ರ: ೧೨.ಗಣೇಶ

ಅಧ್ಯಾಯ – ಎಂಟು

ಗದಗ ಜಿಲ್ಲೆಯ ಚಿತ್ರಕಲಾ ಸಾಹಿತ್ಯ



ಇತಿಹಾಸ ಪೂರ್ವಕಾಲದಿಂದ ಚಿತ್ರಕಲೆಯು ಬೆಳೆದು ಬಂದಿದೆ. ಪ್ರಾಚೀನ ಇತಿಹಾಸವನ್ನು ನೋಡಿದಾಗ ನಮಗೆ ಚಿತ್ರಗಳು ಇರುವ ಉಲ್ಲೇಖಗಳು ಸಿಗುತ್ತವೆ. ಪ್ರಗೈತಿಹಾಸಿಕ ಕಾಲದ ನೆಲೆಗಳನ್ನು ನೋಡಿದಾಗ ಚಿತ್ರಗಳ ಇತಿಹಾಸ ತಿಳಿಯುತ್ತವೆ. ಆದರೆ ಚಿತ್ರಕಲೆಗಳ ಕುರಿತು ಸಾಹಿತ್ಯಗಳು ಸಿಗುವುದು ತುಂಬ ವಿರಳವಾಗಿತ್ತು.

ರಾಜಾಶ್ರಯದಿಂದ ಹೊರಬಂದ ನಮ್ಮ ಕಲಾವಿದರು ತಮ್ಮ ತಮ್ಮ ಅಸ್ಥಿತ್ವವನ್ನು ಕಂಡುಕೊಳ್ಳಲು ಕಲಾಕೃತಿ ರಚನೆ ಮಾಡಿ ಅವುಗಳನ್ನು ಪ್ರದರ್ಶಿಸುವ ಪರಿಪಾಠ ಬೆಳೆಸಿಕೊಳ್ಳುವುದು ಅನಿವಾರ್ಯವಾಯಿತು ಪ್ರದರ್ಶಿಸಿದ ಕಲೆಯನ್ನು ಕುರಿತು ಮಾಧ್ಯಮಗಳಲ್ಲಿ ಬರೆಯುವವರು ಅತ್ಯಂತ ಕಡಿಮೆ ಬರೆಯುತ್ತಿದ್ದವರಾದರೂ ಸಹ ಸಾಹಿತ್ಯ ವಲಯದಿಂದ ಬಂದವರಾಗಿದ್ದರೆಂಬುದಕ್ಕೆ ಅ.ನ.ಕೃ ಕಾಯರು, ವ್ಹಿ. ಸಿಂತಾರಾಮಯ್ಯ ಶಿವರಾಮ ಕಾರಂತ ರಂತವರು ಚಿತ್ರಕಲಾ ಇತಿಹಾಸ ಕುರಿತು ಸಾಹಿತ್ಯಗಳು ಬಾರದೇ ಇರುವುದರಿಂದ ಚಿತ್ರಕಲಾ ಪ್ರಚಾರ ಆಗದೇ ಇರುವುದು ಕಾರಣ ಎನ್ನಬಹುದು. ಚಿತ್ರಗಳನ್ನು ಕಲಾವಿದರು ರಚನೆ ಮಾಡುತ್ತಾರೆ. ಆದರೆ ಆ ಚಿತ್ರಗಳ ಕುರಿತು ಚಿತ್ರಕಲಾ ವಿದರ ಕುರಿತು ಸಮಗ್ರವಾದ ಪುಸ್ತಕಗಳ ಗ್ರಂಥಗಳರೂಪದಲ್ಲಿ ಬಾರದೆ ಇರುವುದು ಚಿತ್ರಸಾಹಿತಿಗಳ ಕೊರತೆ ಎಂದು ಹೆಳಬಹುದು."[೧]

ಚಿತ್ರಕಲೆಯನ್ನು ಅಭ್ಯಾಸಮಾಡಿ ಬಂದಂತಹ ಬಿ.ವಿ.ಕೆ. ಶಾಸ್ತ್ರಿಗಳು ಪತ್ರಿಕೋಧ್ಯಮವನ್ನು ಹೊಕ್ಕು ಆರಂಬಿಸಿದ ಕಲಾಬರಹಗಳು ಹಿರಿಯ ಮತ್ತು ಕಿರಿಯ ಕಲಾವಿದರಿರ್ವರಿಗೂ ಒಂದು ಬಗೆಯ ಪ್ರೋತ್ಸಾಹಕ್ಕೆ ಕಾರಣವಾಯಿತು. ಯಾವುದೇ ಪ್ರದರ್ಶನವಾಗಲೀ ಅದರ ಕೊನೆ ಸಾಲುಗಳಲ್ಲಿ ಆ ಪ್ರದರ್ಶನದಲ್ಲಿ ಕಂಡ ಲೋಪದೋಷಗಳ ಬಗ್ಗೆಯಾಗಲೀ ಕಲಾಕೃತಿಯ ಗುಣಮಟ್ಟದ ಬಗ್ಗೆಯಾಗಲೀ ಒಂದೆರಡು ವಾಕ್ಯಗಳಲ್ಲಿ ಬರೆಯುವ ಪರಿಪಾಠ ಬೆಳೆಯಿತು. ತತ್ಪರಿಣಾಮ ಪ್ರಚಾರವಾಗಿ ಡೆಕ್ಕನ್ ಹೆರಾಲ್ಡ್, ಸುಧಾದಂತಹ ಪತ್ರಿಕೆಗಳಲ್ಲಿ ಕಲೆಯ ಕುರಿತಾದ ಲೇಖನಗಳು ಬರಲು ಶಕ್ಯವಾಯಿತು. ಅದೇ ಪತ್ರಿಕಾ ಸಮೂಹಕ್ಕೆ ಸೇರಿದ ನೃತ್ಯದ ಹಿನ್ನೆಲೆಯಲ್ಲಿ ಬಂದ ಶ್ರೀ ಎಸ್.ಎನ್. ಚಂದ್ರಶೇಖರರವರು ಸಹ ಬರೆಯುತ್ತಿದ್ದರು. ಸುಮಾರೂ ಎರಡು ದಶಕಗಳ ಕಾಲ ಈ ಈರ್ವರು ಚಿತ್ರಕಲೆಯ ಬಗ್ಗೆ ಸಾರ್ವತ್ರಿಕ ತಿಳುವಳಿಕೆ ಮೂಡಲು ಬಹಳಷ್ಟು ಶ್ರಮಿಸಿದರು."[೨]

---

೧. ಎಲ್. ಶಿವಲಿಂಗಪ್ಪ (ಸಂ) ಕಲಾದರ್ಶನ ದಶಮುಖಗಳು–೨೦೧೧

೨. ಎಲ್. ಶಿವಲಿಂಗಪ್ಪ (ಸಂ) ಕಲಾದರ್ಶನ ದಶಮುಖಗಳು–೨೦೧೧

ಇವರ ಸಮಕಾಲೀನವರೇ ಆದ ಶ್ರೀ ಪಿ.ಆರ್. ತಿಪ್ಪೆಸ್ವಾಮಿಯವರು ಸ್ವತಃ ಕಲಾವಿದರಾಗಿ ಜಾನಪದ ತಜ್ಞರಾಗಿ ಕಲೆಯನ್ನು ಕುರಿತು ಆಗಾಗ್ಗೆ ಲೇಖನ ಬರೆಯುತ್ತಿದ್ದುದರಿಂದ ಒಣಗಿದ ಭೂಮಿಗೆ ನೀರುಣಿಸಿದಂತೆ ಚೇತೋಹಾರಿಯಾಗಿತ್ತು. ತದನಂತರದಲ್ಲಿ ಕಲಾಶಿಕ್ಷಣ ಪೂರೈಸಿದ ಕೆಲವೇ ಕಲಾವಿದರಲ್ಲಿ ಕಲಾ ಸಾಹಿತ್ಯದ ಬಗ್ಗೆ ಜ್ಞಾನೋದಯವಾಗಿ ವರದಿಯೋಪಾದಿಯ ಲೇಖನಕಿಂತ ಪ್ರದರ್ಶಿತ ಕಲೆಗಳಲ್ಲಿನ ಗುಣಮಟ್ಟ, ಶೈಲಿ, ಸಮಕಾಲಿನ ಕಲೆಗೆ ಆ ಪ್ರದರ್ಶನ ಪೂರಕವಾಗಿದೆಯೇ ಇಲ್ಲವೇ ಕಲಾವಿದನ ಅನುಭವ, ತಂತ್ರಜ್ಞಾನ, ಬಳಸಿದ ಬಣ್ಣ ಶೈಲಿ ಕುರಿತು ವಿಮರ್ಶಾತ್ಮಕ ಬರಹ ಬರಲು ಆರಂಭಿಸಿದವು."[೩] ಹಿರಿಯ ಕಲಾವಿದ ಬರಹಗಾರರಾದ ಎಚ್.ಎನ್.ಸುರೇಶ ಜಿ.ಸು. ಕೃಷ್ಣಶೆಟ್ಟಿ ಕೆ.ವ್ಹಿ. ಸುಬ್ರಮಣ್ಯಂ, ಎಚ್.ಎನ್. ಕುಲಕರ್ಣಿ ಎಲ್. ಶಿವಲಿಂಗಪ್ಪ ಅವರೆ ಆಪ್ತರಾದ ಒಂದೊಂದು ಪತ್ರಿಕೆ ಮೂಲಕ ಕಲಾ ಬರಹ ಬರೆಯಲಾರಂಭಿಸಿದರು. ಹಾಗೆಯೇ ನಾಡೋಜ ವ್ಹಿ.ಟಿ. ಕಾಳೆ ಡಾ॥ ಬಿ.ಕೆ. ಹಿರೇಮಠ, ಡಾ॥ ಅ.ಲ. ನರಸಿಂಹನ್, ಸುರೇಶ ಜಯರಾಮ, ಡಾ॥ ಎಸ್.ಸಿ. ಪಾಟೀಲ, ಡಾ॥ ಎಂ.ಎಸ್. ಮೂರ್ತಿ, ಸಂತೋಷಕುಮಾರ ಗುಲ್ವಾಡಿ, ಕೃಷ್ಣನಂದ ಕಾಮತದಂಪತಿಗಳು, ಮೂಡನಳ್ಳಿ ಉಪಾಧ್ಯ, ಬಿ.ಪಿ. ಬಾಯರಿ, ಡಾ॥ ಡಿ.ಎ. ಉಪಾಧ್ಯ, ಚಂದ್ರಕಾಂತ ಕುಸನೂರ, ಎನ್.ಸಿ. ದೇಸಾಯಿ, ಡಿ.ಎಸ್. ಚೌಗಲೇ, ಜಿ.ಎಸ್. ಭೂಸಗೊಂಡ, ಡಾ॥ ಹೆಚ್.ಎನ್. ಚಿತ್ರಗಾರ, ಆರ್.ಜಿ. ರಾಯ್ಕರ ಎಸ್.ಎಂ. ಶಿರಹಟ್ಟಿ, ಅಶೋಕ ಅಕ್ಕಿ ಇವರುಗಳ ಸುರಯೋಚಿತ ಬರಹಗಳು ಚಿತ್ರಕಲಾ ಕ್ಷೇತ್ರಕ್ಕೆ ಪೂರ್ಣ ಸಹಕಾರಿಯಾಗಿವೆ."[೪]

ಚಿತ್ರಕಲಾ ಇತಿಹಾಸ ಕುರಿತು ಸಾಹಿತ್ಯಗಳು ಬರೆಯದೆ ಇರುವುದರಿಂದ ಚಿತ್ರಕಲಾ ಪ್ರಚಾರ ಅಗದೇ ಇರುವುದು ಕಾರಣ ಎನ್ನಬಹುದು ಚಿತ್ರಗಳನ್ನು ಕಲಾವಿದ ರಚನೆ ಮಾಡುತ್ತಾನೆ ಆದರೆ ಆ ಚಿತ್ರಗಳ ಕುರಿತು ಚಿತ್ರಕಲಾವಿದರ ಕುರಿತು ಸಮಗ್ರವಾದ ಪುಸ್ತಕಗ್ರಂಥಗಳ ರೂಪದಲ್ಲಿ ಬಾರದೆ ಇರುವುದು ಚಿತ್ರಸಾಹಿತಿಗಳಕೊರತೆಯಿಂದ ಆದರು ಈ ಕುರಿತು ೬೦ರ ದಶಕಗಳಿಂದ ಚಿತ್ರಕಲೆಯ ಕುರಿತು ಕೆಲವು ಪುಸ್ತಕಗಳು ನಮ್ಮ ಕಲಾವಿದರು ಕಲಾಪ್ರೋತ್ಸಾಹಿಗಳು ಹೊರ ತಂದಿರುವುದು ಸಂತೋಷದಾಯಕವಾಗಿದೆ.

ಈ ಹಿನ್ನಲೆಯನ್ನು ಅವಲೊಕಿಸಿದಾಗ ಗದಗ ಜಿಲ್ಲೆಯ ಚಿತ್ರ ಕಲೆಯ ಜೋತೆಗೆ ಚಿತ್ರಕಲಾ ಸಾಹಿತ್ಯ ಕುರಿತು ತಮ್ಮದೇ ಆದ ಅಪಾರ ಕೊಡುಗೆ ನೀಡಿದೆ ಅನೇಕ ಕಲಾಸಾಹಿತಿಗಳು ಕಲಾವಿದರು ಚಿತ್ರಕಲಾಸಾಹಿತ್ಯ ಕುರಿತು ಅನೇಕ ಪುಸ್ತಕಗಳು ಗ್ರಂಥಗಳು ಹೊರಬಂದಿವೆ. ದಾರ್ಮಿಕ, ಶೈಕ್ಷಣಿಕ, ಸಾಹಿತ್ಯ, ಕಲೆ ಸೌಹಾರ್ಧತೆಯಲ್ಲಿ ಹೆಸರು ಪಡೆದ ಗದುಗಿನ ತೊಂಟದಾರ್ಯಮಠವು ಅನೇಕ ಕಲಾವಿದರ ಕಲಾಕೃತಿಗಳನ್ನು ಸಂಗ್ರಹಿಸುವುದರ ಜೊತೆಗೆ ಅನೇಕ ಗ್ರಂಥಗಳು ವೀರಶೈವನ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗದಿಂದ ಹೊರಬಂದಿವೆ. ಚಿತ್ರಕಲಾ ಸಾಹಿತ್ಯ ಕುರಿತು ಅನೇಕ ಪುಸ್ತಕಗಳು ಪ್ರಕಟಣೆಗೊಂಡಿವೆ. ಅಂಥವರಲ್ಲಿ ಡಾ॥ ಎಸ್.ಸಿ. ಪಾಟೀಲರವರ ಕರ್ನಾಟಕದ ಜನಪದ ಚಿತ್ರಕಲೆ ಪಿಹೆಚ್.ಡಿ ಮಹಾಪ್ರಬಂಧ ಡಾ॥ ಸಿದ್ಧಲಿಂಗಸ್ವಾಮಿ ಹಿರೇಮಠ

೩. ಎಲ್. ಶಿವಲಿಂಗಪ್ಪ (ಸಂ) ಕಲಾದರ್ಶನ ದಶಮುಖಗಳು-೨೦೧೧

೪. ಎಲ್. ಶಿವಲಿಂಗಪ್ಪ (ಸಂ) ಕಲಾದರ್ಶನ ದಶಮುಖಗಳು-೨೦೧೧

ಇವರು ಬರೆದ ಕಲಾವಿದ ಆರ್. ಎಂ. ಹಡಪದರವರ ಕಲಾ ಮತ್ತು ಬದುಕು ಡಾ॥ ಲಕ್ಷ್ಮೀದೇವಿ ಗವಾಯಿವರ ಎಂ.ಎ. ಚೆಟ್ಟಿಯವರ ಕುರಿತು ಕಿರುಪುಸ್ತಕ ಶ್ರೀ ಶಾ.ಎಂ. ಕೃಷ್ಣರಾಂವರವರ ಕುಂಚಬ್ರಹ್ಮ ಮಡಿವಾಳಪ್ಪ ಮಿಣಜಗಿಯವರ ಕಿರು ಪುಸ್ತಕ ಮುಂತಾದ ಅನೇಕ ಚಿತ್ರಕಲಾ ಸಾಹಿತ್ಯ ಕುರಿತು ಪುಸ್ತಕಗಳು ಪ್ರಕಟಗೊಳಿಸಿ ಚಿತ್ರಕಲಾ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದೆ.

ಖ್ಯಾತ ಕಲಾವಿದರು ಕಲಾ ಸಾಹಿತಿಗಳಾದ ಶ್ರೀ ವ್ಹಿ.ಟಿ. ಕಾಳೆಯವರು, ಚಿತ್ರಕಲಾ ಪ್ರವೇಶ, ಚಿತ್ರಕಲಾ ದರ್ಪಣ, ಶ್ರೀ ಎಸ್.ಎಮ್. ಶಿರಹಟ್ಟಿಯವರ ಭಾರತೀಯ ಚಿತ್ರಕಲೆ, ಚಿತ್ರಕಲಾ ಕೈದೀಪ ಶ್ರೀ ಅಶೋಕ ಅಕ್ಕಿಯವರು ಬರೆದ ಕಲಾ ಚರಿತ್ರೆ, ಡಾ॥ ಲಕ್ಷ್ಮೀದೇವಿ ಗವಾಯಿವರ ಪಿ.ಎಚ್.ಡಿ. ಮಹಾಪ್ರಬಂಧ ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು ಡಾ॥ ಶಶಿಕಲಾ ಹೂಗಾರರವರ ಕರ್ನಾಟಕದ ತೋಗು ಗೊಂಬೆಗಳು ಹಾಗೂ ಎಂ.ಎ. ಚಟ್ಟಿಯವರ ಅಭಿನಂದನಾ ಗ್ರಂಥ, ಕಲಾವಿದ ಟಿ.ಪಿ.ಅಕ್ಕಿ ಅಭಿನಂದನಾ ಗ್ರಂಥ, ವಜ್ರವಿಜಯ ಮುಂತಾದ ಅನೇಕ ಚಿತ್ರಕಲಾ ಸಾಹಿತ್ಯ ಕುರಿತು ಪುಸ್ತಕಗಳು ಹೊರಬಂದಿವೆ. ಅಲ್ಲದೆ ಎಂ.ವ್ಹಿ.ಎ ಸ್ನಾತಕೋತ್ತರ ಪದವಿಗಳಾಗಿ ಸಾದರಪಡಿಸಿದ ಅನೇಕ ಲಘು ಸಂಶೋಧ ಪ್ರಬಂಧಗಳು ರಚಿತಗೊಂಡು ಚಿತ್ರಕಲಾ ಸಾಹಿತ್ಯಕ್ಕೆ ಅಪಾರವಾದ ಕೊಡುಗೆನೀಡಿದೆ. ಅವುಗಳ ಕುರಿತು ಈ ಕೆಳಗಿನಂತೆ ವಿಂಗಡಿಸಲಾಗಿದೆ.

೧. ಪ್ರಕಟಿತ ಚಿತ್ರಕಲಾ ಸಾಹಿತ್ಯ ಗ್ರಂಥಗಳು

೨. ಅಪ್ರಕಟಿತ ಚಿತ್ರಕಲಾ ಸಾಹಿತ್ಯ ಗ್ರಂಥಗಳು

೧. ಪ್ರಕಟಿತ ಚಿತ್ರಕಲಾ ಸಾಹಿತ್ಯ ಗ್ರಂಥಗಳು :

೧. ಕಲಾತಪಸ್ವಿ ಶ್ರೀ ಟಿ.ಪಿ. ಅಕ್ಕಿ ಅವರ ಸಂಭಾವನಾ ಗ್ರಂಥ[೫೫] : ಸಿ.ಎನ್. ಪಾಟೀಲರವರು ಈ ಸಂಭಾವನಾ ಗ್ರಂಥವನ್ನು ಕಲಾತಪಸ್ವಿ ಶ್ರೀ ಟಿ.ಪಿ. ಅಕ್ಕಿಯವರ ಷಷ್ಠಬ್ದಿ ಪೂರ್ತಿ ಸಮಾರಂಭದ ಸವಿನೆನಪಿಗಾಗಿ ರಚಿತಗೊಂಡಿದೆ. ಗ್ರಂಥವನ್ನು ನೊಡಿದಾಗ ಮೂರ ಭಾಗಗಳಾಗಿ ಇರುವುದು ಕಂಡುಬರುತ್ತದೆ. ಭಾಗ ಒಂದರಲ್ಲಿ ಟಿ.ಪಿ.ಅಕ್ಕಿಯವರ ಕುರಿತು ಅನೇಕ ಗಣ್ಯ ಮಾನ್ಯರು ಅಕ್ಕಿಯವರ ಕಲಾ ಬದುಕಿನ ಕುರಿತು ಅವರ ಜೀವನಸಾಧನೆಯ ಕುರಿತು ಕಲಾ ಅಭಿವೃದ್ಧಿಯ ಕುರಿತು ಕಲಾಸೇವೆಯನ್ನು ಮೇಚ್ಚಿ ಶ್ರೀ ಟಿ.ಪಿ. ಅಕ್ಕಿಯವರ ಷಷ್ಠಬ್ಧಿ ಪೂರ್ತಿ ಸಮಾರಂಭದ ಸಂಭಾವನಾ ಗ್ರಂಥ ಹೊರ ತರುತ್ತಿರುವುದು ಅರ್ಥಪೂರ್ಣವಾಗಿದೆ ಎಂದು ಅಂದಿನ ರಾಜ್ಯಪಾಲರಾದ ಶ್ರೀ ಬಿ.ಡಿ. ಜತ್ತಿ, ಮಾನ್ಯ ಸಚಿವರಾದ ಶ್ರೀ ಎರ್ಸ್.ವ್ಹಿ. ಕೌಜಲಗಿ, ಸನ್ಮಾನ್ಯ ಶ್ರೀ ಕೆ.ವ್ಹಿ. ಶಂಕರಗೌಡ, ಡಾ, ಸರೋಜಿನಿ ಮಂಷಿ, ಸನ್ಮಾನ್ಯ ಶ್ರೀ ಅಂದಾನಪ್ಪ ದೊಡ್ಡಮೇಟಿ ಸನ್ಮಾನ್ಯ ಶ್ರೀ ಬಸವರಾಜ ಮಾಗಲಿ ಶ್ರೀ ಎನ್.ಎಮ್. ಕೊಟ್ರಬಸವಯ್ಯ ಸೋಗಿ, ನಾಟಕ ಅಕಾಡೆಮಿ ರಜಿಸ್ಟ್ರಾರ, ಅಧ್ಯಕ್ಷರು, ಲಲಿತಕಲಾ ಅಕಾಡೇಮಿ ರಜಿಸ್ಟ್ರಾರ, ಅಧ್ಯಕ್ಷರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳು ಮುಂತಾದ ಅನೇಕ ಗಣ್ಯ ಮಾನ್ಯರ ಸಂದೇಶಗಳು ಒಂದನೇ ಭಾಗದಲ್ಲಿ ನೋಡಬಹುದಾಗಿದೆ.

ಎರಡನೆಯ ಭಾಗವಾಗಿ ನೋಡಿದಾಗ ಟಿ.ಪಿ. ಅಕ್ಕಿಯವರ ಕುರಿತು ಕವನಗಳು, ಲೇಖನಗಳು ಇರುವುದುಕಂಡು ಬರುತ್ತದೆ ಶ್ರೀ ಈಶ್ವರ ಶಂ ಕಾಪ್ಸೆ (ಲೋಣಿ) ಇವರು ಅಕ್ಕಿಯವರ ಕುರಿತು ಹೀಗೆ ಹೇಳಿದ್ದಾರೆ.

---

೫೫. ಸಿ.ಎನ್. ಪಾಟೀಲ ತಪಸ್ವಿ ಟಿ.ಪಿ. ಅಕ್ಕಿಯರ ಸಂಭನಾ ಗ್ರಂಥ-೧೯೬೯

"ಲೀಲಾವತಿಯ ಪತಿಗೆ ಲಲಿತಕಲೆಗಳ ಪ್ರೀತಿ
ಬಾಲಕಲಾವಿದರ ಸಲುವ್ಯಾರ। ನಾಡೋಜ
ಶಾಂತಿ ನಕೇತನ। ತೆರದಾರ॥"

ಕಲಾವಿದರು ಕಲಾಸಾಹಿತಿಗಳಾದ ಶ್ರೀ ಆರ್.ಜಿ. ರಾಯಕರರ ಹೆಳಿದಂತೆ ಸ್ವಪ್ರಯತ್ನದಿಂದ ಸಿದ್ದಪಡೆದ ಆಚಾರ್ಯ ಟಿ.ಪಿ. ಅಕ್ಕಿ 'ಜೀವನವೇ ಶ್ರೇಷ್ಠಗುರು ತನ್ನನ್ನು ತಾನೆ ಉದ್ದಾರಿಸಿಕೊಳ್ಳದೇ ಬೇರೊಬ್ಬರು ಅದನ್ನು ಮಾಡಲು ಸಾಧ್ಯವಿಲ್ಲ'[೬] ಎಂದು ರಾಯಕರ ರವರು ಅಕ್ಕಿಯವ ಕಲಾ ಸಾಧನೆಯ ಶಿಕ್ಷಣ ಸಂಸ್ಥೆಯ ಕುರಿತು ಉತ್ತಮವಾದ ಲೇಖನ ಬರೆದಿದ್ದಾರೆ. ಕಲಾವಿದ ಅಕ್ಕಿ ಅವರ ಅದ್ಭುತ ಜೀವನ ಎಂಬ ವಿಷಯದಲ್ಲಿ ಬೆಳಗಾಂವಿಯ ಕಲಾವಿದ ಶ್ರೀ ವ್ಹಿ.ಸಿ. ಮಾಲಗತ್ತಿ ಇವರು ಟಿ.ಪಿ. ಅಕ್ಕಿಯವರ ಬಾಲ್ಯ ಜೀವನ ಆದರ್ಶ ಶಿಕ್ಷಕ ಕಲಾಚಟುವಟಿಕೆ ಕಲಾಮಂದಿರ ಸ್ಥಾಪಿಸಿದ ಕುರಿತು. ಕಲೆಗಾಗಿ ತಮ್ಮ ಜೀವನವನ್ನೇ ಮೂಡುಪಾಗಿಟ್ಟು ಕಲಾ ಶಿಕ್ಷಣಕ್ಕಾಗಿ ಸೇವೆಸಲ್ಲಿಸಿ ವಿಜಯ ಕಲಾ ಮಂದಿರವನ್ನು ಕರ್ನಾಟಕದ ಶಾಂತಿನಿಕೇತನ ಮಾಡಲು ಶ್ರಮಿಸಿದ ರೀತಿ ನೀತಿಯ ಕುರಿತು ಬರೆದ ಉತ್ತಮವಾದ ಲೇಖನವು ಮೂಡಿ ಬಂದಿದೆ."[೭] ಶ್ರೀ ಸಿ.ಟಿ. ರಾಯಕರ, ಶ್ರೀ ಆರ್. ಎಫ್. ಮಿಸ್ಕಿನ್, ಶ್ರೀ ರಾಜೀವ ಪುರಂದರೆ, ಶ್ರೀ ಎಸ್.ಡಿ. ಹಿರೇಮಠ, ಶ್ರೀ ಸಿ.ಎನ್. ಪಾಟೀಲ ಮುಂತಾದ ಅನೇಕ ಕಲಾವಿದರು ಸಂಭಾವನಾ ಗ್ರಂಥಕ್ಕೆ ಟಿ.ಪಿ. ಅಕ್ಕಿಯವರ ಕುರಿತು ಉತ್ತಮವಾದ ಲೇಖನಗಳು ಕವನಗಳು ಈ ಗ್ರಂಥದಲ್ಲಿ ಕಂಡುಬಂದಿದೆ.

ಈ ಗ್ರಂಥದ ಮೂರನೇ ಭಾಗವನ್ನು ಗಮನಿಸಿದ್ದಾಗ ಇಂಗ್ಲೀಷದಲ್ಲಿ ಕೆಲವು ಲೇಖನಗಳು ಇವೆ. ಮತ್ತು ಶ್ರೀ ಟಿ.ಪಿ. ಅಕ್ಕಿ, ಶ್ರೀ ಶಿವಾನಂದರ ಅಕ್ಕಿ ವಸಂತ ಅಕ್ಕಿ ಅರವಿಂದ ಅಕ್ಕಿಯವರ ಕಲಾಕೃತಿಗಳು ಮುಂದ್ರಣಗೊಂಡಿದೆ. ಸಂಭಾವನಾ ಗ್ರಂಥವು ಕಲಾಸಾಹಿತ್ಯ ಕುರಿತು ಉತ್ತಮವಾದ ಗ್ರಂಥವಾಗಿದೆ ಟಿ.ಪಿ.ಅಕ್ಕಿಯವರ ಜೀವನ ಸಾಧನೆ ವಿಜಯ ಕಲಾ ಮಂದಿರ ಬೆಳೆಸಿದ ರೀತಿ ಮುಂತಾದ ಅನೇಕ ಲೇಖನಗಳು ಕವನಗಳು ಗ್ರಂಥಗಳಲ್ಲಿ ಕಂಡು ಬರುತ್ತದೆ.

೨. ಕಲಾ ಚರಿತ್ರೆ :[೮]

ಈ ಕಲಾ ಚರಿತ್ರೆ ಪುಸ್ತಕವು ಚಿತ್ರಕಲಾ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಬಹಳಷ್ಟು ಉಪಯುಕ್ತವಾದ ಪುಸ್ತಕವಾಗಿದೆ. ಇದನ್ನು ನಾಲ್ಕು ಭಾಗವಾಗಿ ವಿಂಗಡಣೆಯನ್ನು ಮಾಡಲಾಗಿದೆ. ಭಾಗ ಒಂದರಲ್ಲಿ ಪಾಶ್ಚಿಮಾತ್ಯ ಕಲೆಯ ಇತಿಹಾಸ ಹೇಗೆ ಬೆಳೆದು ಬಂದಿತು. ಭಿತ್ತಿ ಚಿತ್ರ ಹಾಗೂ ಪಿರ್‍ಯಾಮಿಡ್‌ಗಳ ಕುರಿತು ಮೂರ್ತಿ ಶಿಲ್ಪ ಗ್ರೀಕ್ ಕಲೆ ಇತಿಹಾಸ ಗ್ರೀಕ ವರ್ಣ ಚಿತ್ರಗಳು ವಾಸ್ತುಶಿಲ್ಪಗಳು ಗ್ರೀಕ ರಾಜಮಂಶದವರ ಮೂರ್ತಿ ಶಿಲ್ಪಕೊಡುಗೆ ಹಾಗೂ ಮೆಸ್‌ಪೊಟೀಮಿಯಾ ಕಲೆ ಮತ್ತು ಪರ್ಶಿಯಾ ರಾಷ್ಟ್ರದ ರಾಜವಂಶದವರ ವಾಸ್ತು ಶಿಲ್ಪಗಳು ಚಿತ್ರಕಲೆ ಕೊಡುಗೆ ಹೆಲೆನಿಸ್ಕಿರ್ ಕಲೆ–ಗೋಥಿಕ್ ಕಲೆ

---

೬. ಶ್ರೀ ಸಿ.ಎನ್. ಪಾಟೀಲ (ಸಂ) ಕಲಾ ತಪಸ್ವಿ ಶ್ರೀ ಟಿ.ಪಿ. ಅಕ್ಕಿ ಸಂಭಾವನಾ ಗ್ರಂಥ ಪು.ಸಂ. ೭

೭ ಶ್ರೀ ಸಿ.ಎನ್. ಪಾಟೀಲ (ಸಂ) ಕಲಾ ತಪಸ್ವಿ ಶ್ರೀ ಟಿ.ಪಿ. ಅಕ್ಕಿ ಸಂಭಾವನಾ ಗ್ರಂಥ ಪು.ಸಂ. ೩೪

೮. ಅಶೋಕ ಅಕ್ಕಿ ಕಲಾಚರಿತ್ರೆ–೧೯೮೭

ಗದಗ ಜಿಲ್ಲೆಯ ಚಿತ್ರಕಲಾ ಸಾಹಿತ್ಯ

ಹಾಗೂ ಕಲಾಕೃತಿಗಳ ಶೈಲಿ ಪುನರುಜೀವನಕಲೆ ಕಲಾವಿದರ ಕಲಾಕೃತಿಗಳು ಹಾಗೂ ಬಾರೋಕ್ ಕಲಾಶೈಲಿ ಬೆರ್ನಿನಿ ಕಲಾವಿದನು ಶೈಲಿ ಆಧಾರದ ಮೇಲೆ ಕಲಾಕೃತಿಗಳು ರೆಂಬ್ರಾಂಟ್ ಕಲಾವಿದನು ಬಾರೋಕ ಶೈಲಿಯ ಕಲಾಕೃತಿಗಳು ಮತ್ತು ನಿಜಾತೀತ ಪಂಥ ಕಲಾವಿದರ ಕಲಾಕೃತಿಗಳ ಬದಲಾವಣೆಯು ಚಿತ್ರಗಳ ಕುರಿತು ಉತ್ತಮ ರೀತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಭಾಗ ಎರಡರಲ್ಲಿ – ಭಾರತೀಯ ಕಲೆಯ ಇತಿಹಾಸ ಇದರಲ್ಲಿ ಇತಿಹಾಸ ಪೂರ್ವಕಾಲದ ಸಂಸ್ಕೃತಿಗಳು ಸಿಂಧೂನಾಗರಿಕತೆ ಮೇಹಂಜೋದಾರೂ ಮತ್ತು ಹರಪ್ಪಾ ಸಂಸ್ಕೃತಿ ವೇದ ಕಾಲದ ಸಂಸ್ಕೃತಿ – ಭೌಧ ಚಿತ್ರಕಲೆ – ಶುಂಗಾರ ಚಿತ್ರಕಲೆ ಕುಶಾನರ ಚಿತ್ರಕಲೆ ಶಾತವಾನರ ಆಂಧ್ರದ ಕಾಲ– ಗುಪ್ತರ ಕಾಲ ಮತ್ತು ಐತಿಹಾಸಿಕ ಸ್ಥಳಗಳು ಕರ್ನಾಟಕದಲ್ಲಿ ವಾಸ್ತು ಸಂಗ್ರಾಹಾಲಯಗಳ ಕುರಿತು ಈ ಭಾಗದಲ್ಲಿ ತಿಳಿದುಕೊಳ್ಳುವದಾಗಿದೆ." ಭಾಗ ಮೂರು : ಈ ಭಾಗದಲ್ಲಿ ಕಲಾಶಿಕ್ಷಣ ಕುರಿತು ವಿಷೇಶ ಇದೆ. ಚಿಕ್ಕ ಮಕ್ಕಳ ಚಿತ್ರಕಲೆ ಪ್ರಮುಖ ಶಿಕ್ಷಣ ತಜ್ಞನರು, ಶಿಕ್ಷಣ ಮತ್ತು ಮನಶಾಸ್ತ್ರ ಶಿಕ್ಷಕ ಗುಣಾಂಕ ಕೊಡುವದು ಕಲಿಸುವ ಪದ್ಧತಿ ಬಣ್ಣ ನಕ್ಷಾಚಿತ್ರ ಲೇಖನ ಮುಂತಾದ ಉತ್ತಮವಾದ ವಿಷಯು ಭಾಗ ಮೂರರಲ್ಲಿ ಇರುವುದು ಕಂಡುಬರುತ್ತದೆ." ಭಾಗ ನಾಲ್ಕು ಕಲಾವಿದರ ಕುರಿತು ಸಂಕ್ಷಿಪ್ತವಾದ ಪರಿಚಯವನ್ನು ಅನೇಕ ಕಲಾವಿದರ ಪರಿಚಯ ಕುರಿತು ವಿವರಿಸಿದ್ದಾರೆ ಈ ಪುಸ್ತಕವು ಯುವ ಕಲಾವಿದರಿಗೆ ಉಪಯುಕ್ತವಾದ ಪುಸ್ತಕವಾಗಿದೆ ಮತ್ತು ಚಿತ್ರಕಲಾ ಇತಿಹಾಸ ಕುರಿತು ಮಾರ್ಗದರ್ಶನ ನೀಡುವುದರಿಂದ ಸಂಕ್ಷಿಪ್ತ ವಿಷಯಗಳನ್ನು ಕಲಾ ಚರಿತ್ರೆ ಪುಸ್ತಕದಲ್ಲಿ ಪ್ರಾ. ಅಶೋಕ ಅಕ್ಕಿಯವರು ಅಭಿವ್ಯಕ್ತಗೊಳಿಸಿ.

೩. ಚಿತ್ರಕಲಾ ಕೈದೀಪ್

ಕಲಾವಿದ ಸಾಹಿತಿಗಳು ರಾಷ್ಟ್ರಪ್ರಶಸ್ತಿ ವಿಜೇತರು ಆದ ಶ್ರೀ ಎಸ್.ಎಂ. ಶಿರಹಟ್ಟಿಯವರು ಸರಳ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಸಂಕ್ಷಿಪ್ತವಾದ ವಿಷಯಗಳನ್ನು ಬರೆದಿದ್ದಾರೆ. ರೇಖೆ, ಬಣ್ಣಗಳ ಕುರಿತು ಇಂಪ್ರೇನ್ಸಿಸ್, ಎಕ್ಸ್‌ಪ್ರೆಸ್‌ನಿಸ್, ಸರ್‌ರಿಯಾಲಿಜಮ ಕ್ಯೂಬಿಝುಮ್ ಅಬ್‌ಸ್ಟ್ರಕ್ಷ್, ನಿಂಯೋ ಕಾಸಿಸಂ ಮುಂತಾದ ಅನೇಕ ಆಧುನಿಕ ಶೈಲಿಯು ಕುರಿತು ಸಂಕ್ಷಿಪ್ತವಾದ ವಿಷಯಗಳನೊಂಳಗೊಂಡಿದೆ. ಹರಪ್ಪಾ ನಗರ ಕುರಿತು, ಬಾದಾಮಿ, ಐಹೊಳೆ, ಎಲಿಫೆಂಟಾ ಗುಹೆಗಳು, ಅಜಂತಾ ಗುಹೆ ಭಿತ್ತಿಚಿತ್ರ ರಜಪೂತ ಶೈಲಿಯ ಕುರಿತು, ಜೈಪೂರ ಶೈಲಿಯವರು ಕಾಂಗ್ರಾಶೈಲಿ ಪಹಾಡಿಶೈಲಿ, ಬಾಸೋಹಲಿ ಶೈಲಿ ಮುಂತಾದ ಕಲಾ ಶೈಲಿಯಕುರಿತು ಸಂಕ್ಷಿಪ್ತವಾಗಿ ಬರೆದಿದ್ದಾರೆ.

ವಿಶ್ವವಿಖ್ಯಾತಕಲಾ ವಿದರಾದ ಶ್ರೀ ಲಿಯೋನಾರ್ಡಡಾ ವಿಂಚಿ, ಮೈಕೆಲೆಂಜಿಲೋ, ವ್ಯಾನಗೋರ್ಲಾಡ್ ಮೊನೆ ಪಾಲ್‌ಗಾಗಿನ್, ರೆಂಬ್ರಾಂಟ್, ಫ್ರಾನ್ಸಿಸ್‌ಗೋಯಾ, ಜಿಯತೋ, ಪಾಬ್ಲೊಪಿಕಾಸೋ ಮುಂತಾದ ವಿಶ್ವ ವಿಖ್ಯಾತ ಕಲಾವಿದರ ಕುರಿತು ಸಂಕ್ಷಿಪ್ತವಾದ ವಿವರಣೆಯನ್ನು ನೀಡಿದ್ದಾರೆ. ಅಲ್ಲದೆ ಭಾರತೀಯ ಕಲಾವಿದರಾದ ರಾಜಾರವಿವರ್ಮ, ಅವನೇಂದ್ರನಾಥ ಠಾಕೂರ್, ಕವಿ ಕಲಾವಿದರಾದ ಶ್ರೀ ರವೀಂದ್ರನಾಥ ಠಾಕೂರ, ಕೆ. ವೆಂಕಟಪ್ಪ, ನಂದಲಾಲಬಸು, ಅಮ್ರುತಾ ಶೇರ್‌ಗಿಲ್, ಎನ್.ಎಸ್. ಬೇಂದ್ರೆ,

೯. ಶ್ರೀ ಎಸ್.ಎಂ. ಶಿರಹಟ್ಟಿ ಚಿತ್ರಕಲಾ ಕೈದೀಪ

ಕೆ.ಕೆ. ಹೆಬ್ಬಾರ ಎಂ.ಎಫ್. ಹುಸೇನ್ ಮುಂತಾದ ಖ್ಯಾತ ಭಾರತೀಯ ಕಲಾವಿದರ ಕುರಿತು ಅವರ ಬಾಲ್ಯ ಜೀವನದ ಕುರಿತು, ಸಂಕ್ಷಿಪ್ತವಾದ ವಿಷಯವನ್ನು ಕಲಾವಿದ ಶ್ರೀ ಎಸ್.ಎಂ.ಶಿರಹಟ್ಟಿಯವರು ಸಂಕ್ಷಿಪ್ತವಾದ ಸರಳ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಉಪಯೋಗಗುವಂತೆ ಬರೆದಿದ್ದಾರೆ.

ಶ್ರೀ ಎಸ್.ಎಂ.ಶಿರಹಟ್ಟಿಯವರು ಕೈದೀಪ ಕೀರು ಪುಸ್ತಕದಲ್ಲಿ ಕರ್ನಾಟಕದ ಕಲಾವಿದರಾದ ಡಾ॥ ಎಂ.ವ್ಹಿ. ಮಿಣಜಗಿ, ಡೀವರ್ ಎ. ತೂಯಿಸ್, ಕೆ.ಎಸ್. ರಾವ್, ಎಸ್.ಎಸ್. ವನೋಲಿ, ಎನ್.ಸಿ. ಶೆಟ್ಟಿ, ಭಾಸ್ಕರ ರಾವ್, ಶ್ರೀ ಡಿ.ವ್ಹಿ. ಹಾಲಭಾವಿ, ಡಾ. ಜೆ.ಎಸ್. ಬಂಡೇರಾವ್, ಕಲಾಗುರು ಜೆ.ಎಸ್. ಡಂಡಾವತಿಮಠ, ಶ್ರೀ ಪಿ.ಆರ್. ತಿಪ್ಪೇಸ್ವಾಮಿ, ನಾಡೋಜ ಆರ್. ಎಂ. ಹಡಪದ ಕಲಾ ತಪಸ್ವಿ, ಶ್ರೀ ಟಿ.ಪಿ. ಅಕ್ಕಿ, ಎಂ.ಎ. ಚೆಟ್ಟಿ, ಸಿ.ಎನ್. ಪಾಟೀಲ, ಶ್ರೀ ಅ.ನ. ನರಸಿಂಹ, ಎಸ್.ಎನ್. ಸ್ವಾಮಿ, ವ್ಹಿ.ಟಿ. ಕಾಳೆ, ಶ್ರೀ ವ್ಹಿ.ಬಿ. ಹಿರೇಗೌಡರ ಮುಂತಾದ ಅನೇಕ ಹಿರಿಯ ಕಲಾವಿದರ ಕುರಿತು ಸಂಕ್ಷಿಪ್ತ ಪರಿಚಯವನ್ನು ಈ ಕಿರು ಕಲಾ ಪುಸ್ತಕವನ್ನು ಹೊರತಂದಿದ್ದು ಚಿತ್ರಕಲಾವಿದರಿಗೆ ವಿದ್ಯಾರ್ಥಿಗಳಿಗೆ ಕೈ ದೀಪವು ದಾರಿದೀಪವಾಗಿದೆ ಎಂದು ಹೇಳಬಹುದು.

ಈ ಕೈದೀಪ ಪುಸ್ತಕವು ಚಿಕ್ಕವಾಗಿಗಿದ್ದರು ಅದರಲ್ಲಿರುವ ಕಲಾ ವಿಷಯಗಳು ದೊಡ್ಡಗಿದೆ.

ಕೈದೀಪ ಪುಸ್ತಕದ ಕುರಿತು ಬೆಂಗಳೂರಿನ ಕಲಾವಿದರಾದ ಶ್ರೀ ಸ್ವಾಮಿ ಇವರು ಹೀಗೆ ಹೇಳಿದ್ದಾರೆ. ಚಿತ್ರಕಲಾ ವಿಷಯವನ್ನು ಸರಿಯಾಗಿ ಸಮರ್ಪಕವಾಗಿ ಸುಂದರವಾಗಿ, ಸಾಹಿತ್ಯದೊಂದಿಗೆ ನಿರುಪಿಸುವ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ಶಿರಹಟ್ಟಿಯವರೂ ಒಬ್ಬರು ಗೆಳೆಯ ಶಿರಹಟ್ಟಿಯವರ ಈ ಚಿಕ್ಕ ಹೊತ್ತಿಗೆ ಚಿತ್ರಕಲಾ ಅಭ್ಯಾಸಿಗಳಿಗೆ ನಿಜವಾಗಿಯೂ ಕೈದೀಪವಾಗಿದೆ" ಎಂದು ಬಣ್ಣನೆ ಮಡಿದ್ದಾರೆ.

೪. ಭಾರತೀಯ ಚಿತ್ರಕಲೆ – ಸಂಕ್ಷಿಪ್ತ ಪರಿಚಯ (ಉಚ್ಚಕಲಾ ಅಭ್ಯಾಸಿಗಳಿಗೆ ಮಾರ್ಗದರ್ಶನಪರ) ಎಸ್.ಎಮ್. ಶಿರಹಟ್ಟಿಯವರು[೧೦]

ಈ ಕಿರು ಪುಸ್ತಕವು ೧೯೭೭ರಲ್ಲಿ ವಿಜಯಕಲಾಮಂದಿರ ಗದಗದಿಂದ ಪ್ರಕಟಗೊಂಡಿದ್ದು ಅಧ್ಯಾಯ-೧ರಲ್ಲಿ ಐತಿಹಾಸಿಕ ಕಾಲಮಾನ ಅಧ್ಯಯನದಲ್ಲಿ ಸಿಂಧೂ, ಸಂಸ್ಕೃತಿಯ ಪ್ರಾಚೀನ ರಾಜವಂಶದಿಂದ ಕಲೆಯ ಸಂರಕ್ಷಣೆ ಭಿತ್ತಿ ಚಿತ್ರಗಳ ನಿರ್ಮಾಣ ದಕ್ಷಿಣದ ಚಿತ್ರಶೈಲಿಗಳು ಹಾಗೂ ರಾಜಪೂತ ಶೈಲಿ ಮೊಗಲ ಶೈಲಿ ಪಹಾಡಿ ಶೈಲಿ ಆಧುನಿಕ ಶೈಲಿ ಕಲಾಕೃತಿಗಳ ಕುರಿತು ಈ ಅಧ್ಯಯದಲ್ಲಿ ವಿವರಣೆ ನಿಡಿದ್ದಾರೆ.

ಅಧ್ಯಾಯ -೨ರಲ್ಲಿ ಪ್ರಾಗೈತಿಹಾಸಿಕ ಯುಗ ಇದರಲ್ಲಿ ವೈದಿಕ ಯುಗ ಸಿಂಧೂ ನಾಗರಿಕತೆಯ ಸಂಸ್ಕೃತಿಯ ಚಿತ್ರಗಳು ವೇದ ಕಾಲದ ಚಿತ್ರಕಲೆ ಪೌರಾಣಿಕ ಕಾಲದ ಚಿತ್ರಕಲೆಯ ಆರು ಅಂಶಗಳು ಕಲೆಯ ಉತ್ಪತ್ತಿ ಹಾಗೂ ಧಾರ್ಮಿಕ ವಿಷಯಗಳ ಪ್ರೇರಣೆಯ ಕುರಿತು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಅಧ್ಯಾಯ-೩ರಲ್ಲಿ ಬೌದ್ಧ ಧರ್ಮಪ್ರಸಾರ ಭಿತ್ತಿಚಿತ್ರಕಲೆಯ ಕುರಿತು ಸಂಕ್ಷಿಪ್ತ ವಿವರಣೆಯನ್ನು ನೀಡಲಾಗಿದೆ. ಅಧ್ಯಾಯ ೪ರಲ್ಲಿ ಜೈನ ಧರ್ಮದಕುರಿತು ಜೈನಧರ್ಮಕ್ಕೆ ಸಂಬಂಧಿಸಿದ ಚಿತ್ರಗಳಕುರಿತು ಚಿತ್ರಗಳ ವಿಧಾನ ಧರ್ಮದ ಕಲಾ ಶೈಲಿಯ ವಿಕಾಶ ಕುರಿತು ಇದರಲ್ಲಿ ವಿವರಿಸಿದ್ದಾರೆ.

೧೦. ಶ್ರೀ ಎಸ್.ಎಂ. ಶಿರಹಟ್ಟಿ ಭಾರತೀಯ ಚಿತ್ರಕಲೆ-೧೯೭೭

ಭಾರತೀಯ ಚಿತ್ರಕಲೆಯ ತಂತ್ರಗಾರಿಕೆಗಳನೊಳಗೊಂಡ ಆದಿಮಾನವರ ಜೀವನ ಶೈಲಿ ಹೇಗೆ ಇತ್ತು ಎಂಬುಂದರ ಕುರಿತು ಬಣ್ಣಗಳ ತಯಾರಿಕೆಯ ಪರಿಕಲ್ಪನೆಯನ್ನು ಹಾಗೂ ರಾಜಮನೆತನದವರ ಕಲಾವಿದರನ್ನು ತಯಾರಿಸುವ ಕಲಾಕೃತಿಗಳ ರಾಜಮನೆತನಗಳ ಆಗುಹೊಗುವ ಕುರಿತು ಕಿರು ಪುಸ್ತಕದಲ್ಲಿ ಸಂಕ್ಷಿಪ್ತವಾದ ವಿಷಯಗಳನ್ನು ಒಳಗೊಂಡಿದೆ ಇದು ಚಿತ್ರಕಲಾ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಹಾಗೂ ಚಿತ್ರಕಲಾ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉತ್ತಮ ಕೊಡುಗೆ ನೀಡಿದ ಪುಸ್ತಕವಾಗಿದೆ.

೫. "ಕಲಾತಪಸ್ವಿ"

ರಾಜ್ಯಪ್ರಶಸ್ತಿ ವಿಜೇತ ಕುಂಚ ಬ್ರಹ್ಮ ಶ್ರೀ ಮುರಿಗೆಪ್ಪ ಚೆಟಿ ಅಭಿನಂದನಾ ಗ್ರಂಥ ಶ್ರೀ ಮಹಾಲಿಂಗ ಯಾಳಗಿಯವರು[೧೧]

ಈ ಅಭಿನಂಧನಾ ಗ್ರಂಥವು ಚೆಟ್ಟಿಯವರ ಕುರಿತು ಅವರ ವ್ಯಕ್ತಿ ಕುರಿತು. ಲೇಖನಗಳ ಮೂಲಕ, ಕಾವ್ಯಗಳ ಮೂಲಕ ಚೆಟ್ಟಿಯವರ ಜೀವನ ಸಾಧನೆಯ ಕುರಿತು. ಅನೇಕ ಕಲಾವಿದರು ಕಲಾಸಾಹಿತಿಗಳು ಕಲಾಪ್ರೇಮಿಗಳು ತಮ್ಮ ಮನದಾಳದ ಮಾತುಗಳನ್ನು ಅಭಿವ್ಯಕ್ತಗೋಳಿಸಿದ್ದಾರೆ.

ಈ ಗ್ರಂಥದಲ್ಲಿ ಆರು ಭಾಗಗಳನ್ನಾಗಿ ಮಾಡಲಾಗಿದೆ. ವ್ಯಕ್ತಿತ್ವ ಕಲೆ, ಕಾವ್ಯಕಲೆ, ಜೀವನ ಕಲೆ, ಪ್ರಶಸ್ತಿ ಕಲೆ, ಸಂಕೀರ್ಣನ ಕಲೆ, ಚಿತ್ರಕಲೆ ಹೀಗೆ ಆರು ಭಾಗಗಳಾಗಿ ಮಾಡಿ ಚೆಟ್ಟಿಯವರ ಕಲಾ ಜೀವನ ಕುರಿತು ಉತ್ತಮವಾದ ವಿಷಯಗಳು ಇದರಲ್ಲಿ ಮೂಡಿಬಂದಿವೆ.

ಚೆಟ್ಟಿಯವರ ಅಭಿನಂದನಾ ಗ್ರಂಥಕ್ಕೆ ನಾಡಿನ ಅನೇಕ ಮಠಾದಿಶರು, ಗಣ್ಯ ಮಾನ್ಯರು, ಶುಂಭ ಸಂದೇಶಗಳನ್ನು ಕಳಿಸಿದ್ದಾರೆ. ಮನ್ನಿರಂಜನ ಜಗದ್ಗುರು ಶ್ರೀ ತೊಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು ಸಂಸಾನಮಠ ಡಂಬಳ, ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳವರು, ಮುಂಡರಗಿ, ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಮೂರು ಸಾವಿರ ಮಠ ಹುಬ್ಬಳ್ಳಿ ಜಗದ್ಗುರು. ದರದುಂಡೀಶ್ವರ ಸಿದ್ಧ ಸಂಸ್ಥಾನಮಠ ನಿಡಸೊಸಿ, ಶ್ರೀ ಮ.ನಿ.ಪ್ರ. ಹಾನಗಲ್ಲ ಕುಮಾರ ಮಹಾಸ್ವಾಮಿಗಳವರು ವಿರಕ್ತಮಠ, ಹಾನಗಲ್ಲ, ಜಗದ್ಗುರು ಶ್ರೀ ಫಕೀರ ಮಲ್ಲಿಕಾರ್ಜುನ ಮಹಾಸ್ವಾಮಿಗಳರವರು ಶಿರಹಟ್ಟಿ ಮುಂತಾದ ಅನೇಕ ಮಠಾಧೀಶರು ಆಶೀರ್ವಚನಗಳನ್ನು ಕಳಿಸಿದ್ದಾಗೆ.

ಡಾ. ಬಿ.ಡಿ. ಜತ್ತಿ ಮಾಜಿ ಉಪರಾಷ್ಟ್ರಪತಿಗಳು ಅಧ್ಯಕ್ಷರು, ಬಸವ ಸಮಿತಿ, ಬೆಂಗಳೂರು ಡಾ॥ ಎಚ್.ತಿಪ್ಪೇರುದ್ರಾಸ್ವಾಮಿ ನಿವೃತ್ತ ಕನ್ನಡ ಪ್ರಾಧ್ಯಪಕರು, ಡಾ॥ ಎಸ್.ಎಮ್. ವೃಶಬೇಂದ್ರ ಸ್ವಾಮಿ ನಿವೃತ್ತ ಪ್ರಧ್ಯಾಪಕರು, ಸುಮಂತ ಅರ್ಕಸಾಲಿ, ಹಾಸನ ಶ್ರೀ ಆರ್.ಹೆ.ಬಿಡಪ ವಕಿಲರು, ಬಿದರ ಶ್ರೀಮತಿ ವಿಜಯ ಹಿರೇಮಠ ಬಾಂಬೆ ಮುಂತಾದ ಅನೇಕ ಗಣ್ಯ ಮಾನ್ಯರು ಎಂ.ಎ. ಚೆಟ್ಟಿಯವರ ಈ ಅಭಿನಂಧನಾ ಗ್ರಂಥವು ಉತ್ತಮ ರೀತಿಯಲ್ಲಿ ಹೊರಬರಲಿ ಎಂದು ಶುಭ ಸಂದೇಶಗಳನ್ನು ಕಳಿಸಿದ್ದಾರೆ. ಅವುಗಳನ್ನು ಉತ್ತಮ ರೀತಿಯಲ್ಲಿ ಮುದ್ರಣ ಮಾಡಿದ್ದಾರೆ. ಚೆಟ್ಟಿಯವರ ಗುರುಗಳಾದ ಶ್ರೀ ಎಂ.ವ್ಹಿ. ಧುರಂಧರ, ಕ್ಯಾಪ್ಟನ್‌ಡಬ್ಲೂ ಈ ಗ್ಲಾಡ್ವನ್ ಸೊಲೋವನ ಶ್ರೀ ಕೆ.ಬಿ. ಚುಡೆಕರ್‌ರವರ ಛಾಯಾಚಿತ್ರಗಳು ಪ್ರಶಸ್ತಿ ಪಡೆದ ಛಾಯಾಚಿತ್ರಗಳನ್ನೊಳಗೊಂಡಿದೆ.

೧೧. ಶ್ರೀ ಮಹಾಲಿಂಗ ಯಾಳಗಿ (ಸಂ) ಕಲಾತಪಸ್ವಿ ರಾಜ್ಯ ಪ್ರಶಸ್ತಿ ವಿಜೇತ ಕುಂಚಬ್ರಹ್ಮ ಶ್ರೀ ಮೆರಗುಪ್ಪ ಚಟ್ಟಿ ಅಭಿನಂದನಾ ಗ್ರಂಥ-೧೯೯೧

ಇನ್ನೊಂದು ಭಾಗವನ್ನು ಗಮನಿಸಿದಾಗ ಚೆಟ್ಟಿಯವರ ಕುರಿತು ಇರುವ ಅನೇಕ ಲೇಖನಗಳು ಅನೇಕ ಕಾವ್ಯಗಳು ಉತ್ತಮರೀತಿಯಲ್ಲಿವೇ ಅವುಗಳಲ್ಲಿ ಕಲಾ ಪ್ರಪಂಚದ ಧ್ರುವತಾರೆ, ಶ್ರೀ ಎಂ.ಎ. ಚೆಟ್ಟಿಯವರು ಎಂಬ ಲೇಖನ ಚೆಟ್ಟಿಯವರ ಜನನ-ಬಾಲ್ಯ ಜೀವನ, ವಿದ್ಯಾಭ್ಯಾಸ ಸಪ್ತವರ್ಣದ ಕನ್ನಡ ಗುಂಪಿನ ಸದಸ್ಯ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಪ್ರತಿಭಾವಂತ ಕಲಾವಿದನೆಂಬ ಅಗ್ಗಳಿಕೆ, ತಾಯ್ನಾಡಿಗೆ ಮರುಪ್ರಯಾಣ, ಗದುಗಿನಲ್ಲಿ ನೆಲೆ, ಕಲಾ ಶಿಕ್ಷಕ ಚೆಟ್ಟಿಯವರ ಕಲಾಕೃತಿಗಳು, ಚೆಟ್ಟಿಯವರ ಸನ್ಮಾನ ಹಾಗೂ ಪ್ರಶಸ್ತಿಗಳು, ನೆಮ್ಮದಿಯ ಜೀವನ ಮುಂತಾದ ಅನೇಕ ವಿಷಯಗಳನ್ನು ಡಾ॥ ಎಸ್.ಸಿ. ಪಾಟೀಲರವರು ಚೆಟ್ಟಿಯವರ ಕುರಿತು ಬರೆದ ಉತ್ತಮವಾದ ಲೇಖನವಾಗಿದೆ. ಇನ್ನು ಅನೇಕ ಲೇಖನಗಳು ಚೆಟ್ಟಿಯವರ ಕುರಿತಾಗಿದೆ. ಈ ಅಭಿನಂಧನಾ ಗ್ರಂಥವು ಚಿತ್ರಕಲಾ ಇತಿಹಾಸಕ್ಕೆ ಸಂಬಂಧಿಸಿದ ಉತ್ತಮವಾದ ಗ್ರಂಥವಾಗಿದೆ.

೬. ಕಲೋಪಾಸಕ ಎಂ.ಜೆ. ವಾಚೇದಮಠ[೧೨]

ಈ ಕಿರುಪುಸ್ತಕವನ್ನು ಗದಗ ಜಿಲ್ಲೆಯ ಕಲಾವಿದರು ಧಾರವಾಡ ಕರ್ನಾಟಕ ಹೈಸ್ಕೂಲಿನ ಚಿತ್ರಕಲಾ ಶಿಕ್ಷರಾಗಿ ಅನೂಪಮ ಸೇವೆ ಸಲ್ಲಿಸಿದ ಶ್ರೀ ಸುರೇಶ ಕುಲಕರ್ಣಿಯವರು. ಕಲೋಪಾಸಕ ಎಂ.ಜೆ. ವಾಚೇದಮಠ ಎಂಬ ಕಿರು ಪುಸ್ತಕವನ್ನು ಉತ್ತಮ ಬರುವಣಿಗೆಯ ಮೂಲಕ ಖ್ಯಾತ ರೇಖಾಚಿತ್ರ ಕಲಾವಿದರಾದ ಶ್ರೀ ಎಂ.ಜೆ. ವಾಚೇದಮಠ ರವರ ಜೀವನ ಮತ್ತು ಕಲಾಬದುಕಿನ ಕುರಿತು ಬರೆದಿದ್ದಾರೆ.

ಸುರೇಶ ಕುಲಕರ್ಣಿಯವರು ಕಲಾ ವಿಮರ್ಶಕರಾಗಿ, ಕೆಲಸ ಮಾಡಿದ್ದಾರೆ. ವಿಜ್ಞಾನ ಪದವಿಧರರಾಗಿ ಇವರು ಚಿತ್ರಕಲಾ ಸಾಹಿತ್ಯ ಲೇಖಕರು ಹೌದು ಎಂಬುದಕ್ಕೆ ಇವರು ಬರೆದ ಈ ಪುಸ್ತಕವೇ ಸಾಕ್ಷಿ ಚಿತ್ರಕಲೆಯ ಜೊತೆಗೆ ಉತ್ತಮ ಬರಹಗಾರರಾಗಿ ಶ್ರೀ ಎಂ.ಜೆ. ವಾಚೇದಮಠರು ೫೦ನೇಯ ವಿಜಯೋತ್ಸವದ ಸಂದರ್ಭದಲ್ಲಿ ಈ ಪುಸ್ತಕವನ್ನು ಬರೆದಿದ್ದಾರೆ.

ಶ್ರೀ ಮುರಗಯ್ಯಾ ಗುರುಪಾದಯ್ಯಾ ವಾಚೇದಮಠರವರ ಬಾಲ್ಯ ಪರಿಸರ, ಶಿರಹಟ್ಟಿಯಲ್ಲಿ ಯಾವ ರೀತಿಯಲ್ಲಿ ಚಿತ್ರಗಳನ್ನು ಬಿಡಿಸುತ್ತಿದ್ದರು. ಕುಟುಂಬದ ಪರಿಚಯ, ವಾಚೇದಮಠರವರ ಜನನ, ಇವರು ಬಿಜ್ಜೂರಿನಿಂದ ಎರಡು ಮೆಲು ದೂರದಲ್ಲಿರೂವ ತಾಯಿಯ ತವರೂರಾದ ಕೋಗನೂರ ಹಿರೇಮಠ ಅವರ ದನದ ಹಕ್ಕಿಯಲ್ಲಿ ೪ನೇ ಜನೇವರಿ ೧೯೩೪ರಲ್ಲಿ ಜನಿಸಿದರು." ಎಂದು ಇದರಲ್ಲಿ ಉಲ್ಲೇಖಸಿದ್ದಾರೆ : ಶ್ರೀವಾಚೇದಮಠರವರು ಬಾಲ್ಯದಲ್ಲಿಯೇ ಚಿತ್ರಕಲೆಯ ಕಡೆಗೆ ಒಲವು ಮೂಡಿಸಿದ್ದು ಅವರ ತಂದೆಯವರು ಹೆಳಿದ ಮಾತು. ನೀತಗದ ಚಿತ್ರ ಸುಡತೇನಿ. ಒಕ್ಕುಲುತನ ಮಾಡಿ ಏನಾರ ಬೆಳದರ ಬದಕತಿ ಇಲಾದ್ರ ತಿನ್ನಾಕ ಕೂಳಿಲ್ಲದ ಬಳಲತಿ ಮಗನ"[೧೩] ಎಂದು ಹೆದರಿಸಿದ ಬಿಡದ ಮುರಗಯ್ಯ ಬಾಲ್ಯದಲ್ಲಿಯೇ ಚಿತ್ರಕಲೆ ಗೀಳಿಗೆ ಅಂಟಿಕೊಂಡು ಚಿತ್ರಕಲಾ ಅಭ್ಯಾಸ ಮಾಡಿದ ರೀತಿ ಶ್ರಮಿಸಿದ ಕುರಿತು ಉತ್ತಮ ರೀತಿಯಲ್ಲಿ ತಿಳಿಸಿದ್ದಾರೆ.

---

೧೨. ಶ್ರೀ ಸುರೇಶ ಕುಲಕರ್ಣಿ ಕಲೋಪಾಸಕ. ಎಂ.ಜೆ. ವಾಚೇದವರ ೧೯೮೫

೧೩. ಶ್ರೀ ಸುರೇಶ ಕುಲಕರ್ಣಿ ಕಲೋಪಾಸಕ ಎಂ.ಜೆ. ವಾಚೇದವರ ಪು.ಸಂ. ೭

ಚಿತ್ರಕಲಾ ಉನ್ನತ ವ್ಯಾಸಂಗಕ್ಕಾಗಿ ಮುಂಬೈಗೆ ಹೋಗಿ ಯಾವರೀತಿಯಲ್ಲಿ ತಮ್ಮ ಕಲಾ ಜೀವನ ಸಾಗಿಸಿದರು. ಅಲ್ಲಿಯ ಪರಿಸರ ಚಿತ್ರಕಲೆಯನ್ನು ಕಲಿತ ರೀತಿಯ ಕುರಿತು ಎಲ್ಲಗುರುಗಳಿಗೆ ಪ್ರೀತಿಯ ಶಿಷ್ಯರಾಗಿ ನೂತನ ಕಲಾಮಂದಿರದಲ್ಲಿ ಪ್ರವೇಶ ಪಡೆದು ಕಲಾಗುರು ಶ್ರಿ ಜಿ.ಎಸ್. ದಂಡಾಮತಿಮಠ ಅವರ ಮಾಗದರ್ಶನದಲ್ಲಿ ಡಿಪ್ಲೋಮಾ ಪರೀಕ್ಷೆಯಲ್ಲಿ ದ್ವಿತೀಯ ರ‍್ಯಾಂಕ ಪಡೆದರು." ಈ ಕುರಿತು ಸುರೇಶ ಕುಲಕರ್ಣಿಯವರು ವಿಸ್ತಾರವಾಗಿ ಬರೆದಿದ್ದಾರೆ. ಶ್ರೀ ವಾಜೇದಮಠರು ಮುಂಬೈಯಲ್ಲಿ ಚಿತ್ರಕಲಾ ವಿದ್ಯಾಭ್ಯಾಸವನ್ನು ಪೂರೈಸಿ ಮರಳಿ ಕರ್ನಾಟಕಕ್ಕೆ ಬಂದು ಕೆ.ಎಲ್.ಇ ಸೋಸೈಟಿಯ ಸೌವದತ್ತಿ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ಉತ್ತಮ ಸೇವೆ ಸಲ್ಲಿಸಿದ ಕುರಿತು ಉತ್ತಮವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಶ್ರೀ ವಾಜೇದಮಠರವರ ವೃತ್ತಿ ಜೀವನ ಮತ್ತು ಕಲಾ ಜೀವನಕುರಿತು ಉತ್ತಮ ರೇಖಾ ಚಿತ್ರ ರಚಿಸುವ ಕಲಾವಿದರಾಗಿ ಧಾರವಾಡದ ಆರ್.ಎಲ್.ಎಸ್. ಹೈಸ್ಕೂಲಿನಲ್ಲಿ ಅನೇಕ ವಿದ್ಯಾರ್ಥಿಗಳ ಮಾರ್ಗದರ್ಶನನೀಡಿ ೫೦ವರ್ಷಗಳ ಕಲಾ ಬದುಕಿನ ಸುಧಿರ್ಘ ಅನುಭವ ಕುರಿತು ಸುರೇಶ ಕುಲಕರ್ಣಿಯವರು ವಾಜೇದಮಠರ ಬದುಕನ್ನು ಮಾರ್ಮಿಕವಾಗಿ ಬಿತ್ತರಿಸಿದ್ದಾರೆ. ಶ್ರೀ ಎಂ.ಜೆ. ಬಾಚೇದವಠ ಅವರ ಕಲೋಪಾಸನೆಯು ನಿರ್ಮಿಘ್ನವಾಗಿ ಅವಿರತವಾಗಿ ಸಾಗಲಿ"[೧೪] ಎಂದು ಸುರೇಶಕಲುಕರ್ಣಿಯವರು ಶುಭಹಾರೈಸಿದ್ದಾರೆ.

ಈ ಕಿರು ಪುಸ್ತಕವು ಕಲಾವಿದ ವಾಚೇದಮಠರವರ ಬಾಲ್ಯ ಜೀವನದಿಂದ ಕಲಾಜೀವನದ ಎಲ್ಲ ಅನುಭವಗಳನ್ನು ತಿಳಿಸುತ್ತದೆ. ವಾಜೇಮಠರವರು ರಚಿಸಿದ ಅನೇಕ ರೇಖಾ ಚಿತ್ರಗಳು ಸಂತೆಗೆ ಬಂದ ಲಿಂಬಾಣಿಯವರು, ಶಿರಹಟ್ಟಿ ಬಸ್‌ಸ್ಟ್ಯಾಂಡ್‌ನಲ್ಲಿ ಬಸ್ ಕಾಯುತ್ತಕುಳಿತ ಪ್ರಯಾಣಿಕರು, ಬಿಜ್ಜೂರಿನಲ್ಲಿ ದನ ಕಾಯುವ ಹುಡುಗುರು ಮುಂತಾದ ಅನೇಕ ರೇಖಾ ಚಿತ್ರಗಳನ್ನು ಮತ್ತು ವಾಚೇದಮಠರವರ ತಂದೆ ತಾಯಿಯವರು, ಛಾಯಾಚಿತ್ರ ನೂತನ ಕಲಾಮಂದಿರದ ಗುರುಗಳ ಛಾಯಾಚಿತ್ರ ಚಿತ್ರಪ್ರದರ್ಶನ ಉದ್ಘಾನೆ ಮಾಡುತ್ತಿರುವ ಡಾ|| ಡಿ.ಎಸ್.ಕರ್ಕಿಯವರ ಛಾಯಾಚಿತ್ರ ಶ್ರೀ ವಾಚೇದಮಠ ಮತ್ತು ಅವರ ಧರ್ಮಪತ್ನಿ ಶಾರದಾರವರ ಛಾಯಾಚಿತ್ರಗಳನ್ನೊಳಗೊಂಡ ಉತ್ತಮ ಕಿರುಪುಸ್ತಕ ಇದಾಗಿದೆ.

೭. ಚಿತ್ರಕಲಾ ಲೋಚನ[೧೫]

ಈ ಪುಸಕ್ತವನ್ನು ಗದಗಿನವರಾದ ಶ್ರೀ ಹೆಚ್.ಎನ್. ಹರಿಬಲ್‌ರವರು ಚಿತ್ರಕಲಾ ಸಾಹಿತ್ಯಕ್ಕೆ ಸಂಬಂಧಿಸಿದ ಉತ್ತಮವಾದ ಪುಸ್ತಕವನ್ನು ವಿಷಯವನ್ನು ಇದರಲ್ಲಿ ಭಾಗ ಒಂದರಲ್ಲಿ ಚಿತ್ರ ಕಲೆಗೂ ಭಾಷೆಗಳು ಇರುವ ಸಂಬಂಧ ಪ್ರಾಚೀನ ಚಿತ್ರಕಲೆ, ಲಿಪಿ ಸಂಶೋಧನೆಯ ಕುರಿತು, ಪೂರ್ವಭಾವಿಕಲೆಯ ಕುರಿತು ಲಿಪಿ ಕೇತಗಳು ಮತ್ತು ಭಾಷೆಯ ಕುರಿತು ತಿಳಿಸಿದ್ದಾರೆ.

ಎರಡನೆಯ ಭಾಗದಲ್ಲಿ ಕಲೆ ಮತ್ತು ಕರಕುಶಲತೆಯ ವ್ಯಾಖ್ಯೆಕಲೆಯನ್ನು ಕರಕುಶಲಕಲೆಯಿಂದ ಬೇರ್ಪಡಿಸುವುದು ಮತ್ತು ಕಲೆಯ ವಾಖ್ಯ ವಿಭಾಗಗಳು ಚಿತ್ರಕಲೆಯನ್ನು ಹೇಗೆ ಅಭ್ಯಾಸ ಮಾಡಬೇಕು ಕಪ್ಪ ಹಲಗೆಯ ಬಳಕೆ ಪಕ್ಷಿನೋಟ ಮತ್ತು ಲಂಬ ನೋಟದ ಕುರಿತು ಪಾಠೋಪಕರಣ, ಚಿತ್ರಪಟ,

೧೪. ಶ್ರೀ ಸುರೇಶ ಕುಲಕರ್ಣಿ ಕಲೋಪಾಸರ ಎಂ.ಜೆ. ವಾಚೇದಮಠ ಪು.ಸಂ. ೨೦

೧೫. ಹೆಚ್.ಎಸ್. ಹರಿಬಲ್, ಚಿತ್ರಕಲಾ ಲೋಚನ ೨೦೦೪

ಹಾಗೂ ಕಥಾ ಚಿತ್ರಪಟ ಚಿತ್ರಗಳನ್ನು ಚಿಕ್ಕದು ಮತ್ತು ದೊಡ್ಡದಾಗಿ ಬಿಡಿಸುವಕ್ರಮಗಳ ಬಗ್ಗೆ ಸ್ಥಳದಲ್ಲಿಯೇ ಚಿತ್ರಬಿಡಿಸುವ ಕುರಿತು ಮಕ್ಕಳು ಚಿತ್ರಕಲೆಯನ್ನು ಯಾಕೆ ಕಲಿಯ ಬೇಕು ಆದರ ಉಪಯೋಗಗಳ ಪರೀಹಾರ ಹೇಳಿದ್ದಾರೆ. ಹರಬಲರವರು ಚಿತ್ರಕಲೆ ಮತ್ತು ಕರಕುಶಲಕಲೆಯ ಕುರಿತು ಇರುವ ಸಾಮ್ಯತೆಯನ್ನು ಬಣ್ಣಬಳಸುವ ರೀತಿ ಪ್ರದರ್ಶನ ಮತ್ತು ಪ್ರಾವಾಸದ ಉಪಯೋಗಳು ಸಾಹಿತ್ಯ ಸಂಗೀತ ಅಭಿನಯದ ಶಿಲ್ಪವಾಸ್ತುಶಿಲ್ಪ ಚಿತ್ರ ಬಿಡಿಸುವುದು ಲಲಿತಕಲೆಗಳಾಗಿವೆ. ಅವುಗಳ ಕುರಿತು ಮಕ್ಕಳಿಗೆ ಪಾಠ ಹೇಳಬೇಕಾದರೆ ಯಾವರೀತಿಯಿಂದ ಹೇಳಬೇಕು ರೂಡಿಪಾಠಗಳನ್ನು ಮಕ್ಕಳಿಗೆಯಾವರೀತಿಯಿಂದ ಹೇಳಬೇಕು ಎಂದು ಕುರಿತು ಚಿತ್ರಕಲೆಗೆ ಚಿತ್ರಕಲಾ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಈ ಪುಸ್ತಕದಲ್ಲಿ ಹೇಳುವುದರ ಮೂಲಕ ಹರಿಬಲ್‌ರವರು ಚಿತ್ರಕಲಾ ಸಾಹಿತ್ಯಕ್ಕೆ ಉತ್ತಮಕೊಡುಗೆನೀಡಿದ್ದಾರೆ.

ಈ ಪುಸ್ತಕವು ಚಿತ್ರಕಲಾವಿದ್ಯಾರ್ಥಿಗಳಿಗೆ ಚಿತ್ರಕಲಾ ಶಿಕ್ಷರಿಗೆ ಉಪಯುಕ್ತವಾದ ಪುಸ್ತಕವಾಗಿದೆ. ಹರಿಬಲ್‌ರವರು ಚಿತ್ರಕಲೆಗೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂಥ ಅನೇಕ ವಿಚಾರಗಳನ್ನು ಈ ಪುಸ್ತಕದಲ್ಲಿ ಹೇಳುವುದರಮೂಲಕ ಯಶಸ್ವಿಯಾಗಿದ್ದಾರೆ.

೮. ಕರ್ನಾಟಕದ ಜನಪದ ಚಿತ್ರಕಲೆ[೧೬]

ಡಾ. ಎಸ್.ಸಿ. ಪಾಟೀಲ ಡಿನ್ ಮತ್ತು ಮುಖ್ಯಸ್ಥರು ಕನ್ನಡ ವಿಶ್ವವಿದ್ಯಾಲಯ ಹಂಪಿ, ಇವರು ಮಹಾಪ್ರಬಂಧವನ್ನು ಪಂಶೋಧಕರು ಕಲಾವಿದ ಡಾ.ಬಿ.ಆರ್. ಹಿರೇಮಠರವರ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಹೆಚ್.ಡಿ ಮಹಾಪ್ರಬಂಧ ಇದಾಗಿದೆ.

ಕರ್ನಾಟಕ ಜನಪದ ಚಿತ್ರಕಲೆಯ ಕುರಿತು ಸಮಗ್ರವಾದ ಅಧ್ಯಯನ ಒಳಗೊಂಡಿದೆ. ಒಟ್ಟು ಏಳು ಅಧ್ಯಾಯಗಳಲ್ಲಿ ವಿಂಗಡಿಸಿದ್ದಾರೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಸ್ವರೂಪ ಮತ್ತು ವಿಧಾನಗಳ ಕುರಿತು ಸವಿಸ್ತಾರವಾಗಿ ವಿವರಣೆಯಾಗಿದೆ. ಅಧ್ಯಾಯ ಎರಡರಲ್ಲಿ ಜನಪದ ಚಿತ್ರಕಲೆ ಮತ್ತು ಶಿಷ್ಟಪದ ಚಿತ್ರಕಲೆಯ ಕುರಿತು ವಿವರಿಸಿದ್ದಾರೆ. ಕಲೆಯ ಅರ್ಥ ಮತ್ತಸ್ವೂರೂಪ, ಕಲೆ ಮತ್ತು ವಿದ್ಯೆ, ಕಲೆಯ ಉಗಮ ಮತ್ತು ವಿಕಾಶ ಕಲೆಯ ಪ್ರಕಾರಗಳು, ಚಿತ್ರಕಲೆಯ ಶ್ರೇಷ್ಠತೆ, ಚಿತ್ರಕಲೆಯ ವಿಂಗಡಣೆ, ಶಿಷ್ಟಪದ ಚಿತ್ರಕಲೆ ಹಾಗೂ ಜನಪದ ಚಿತ್ರಕಲೆಯ ಕುರಿತು ವಿಸ್ತಾರವಾಗಿ ವಿವರಣೆ ಮಾಡಿದ್ದಾರೆ. ಅಧ್ಯಾಯ ಮೂರರಲ್ಲಿ ಜನಪದ ಚಿತ್ರಕಲೆಯ ಇತಿಹಾಸ ಕರ್ನಾಟಕದ ಪ್ರಾಚೀನ ಚಿತ್ರಕಲೆ, ಉತ್ತರ ಕರ್ನಾಟಕ ಪ್ರಾಚೀನ ಚಿತ್ರಕಲೆಯ ನೆಲೆಗಳು, ಕಲ್ಲುಬಂಡೆ ಆಸರೆಯಿಂದ ವರ್ಣ ಚಿತ್ರಕಲೆಯ ಕುರಿತು ಅವುಗಳ ನೆಲೆಗಳ ಕುರಿತು ಭಿತ್ತಿಚಿತ್ರಕಲೆಯ ಕುರಿತು ಮನೆ, ಅರಮನೆ, ಮಠದೇವಾಲಯಗಳಲ್ಲಿಯ ಜನಪದ ಮೂಲದ ಕಲೆಯ ಕುರಿತು ಶಿಷ್ಟಪದ ಚಿತ್ರಕಲೆ ಹಸ್ತಪ್ರತಿಯ ಚಿತ್ರಕಲೆ ವರ್ಗಿಕರಣವನ್ನು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ.[೧೭]

ಅಧ್ಯಾಯ ನಾಲ್ಕರಲ್ಲಿ ಸೌಂದರ್ಯ ಮೂಲ ಜನಪದ ಚಿತ್ರಕಲೆ ಪ್ರಯೋಜನ ಮೂಲಜನಪದ ಚಿತ್ರಕಲೆ ಗೃಹಲಂಕಾರ ವಿನ್ಯಾಸ; ಹಚ್ಚೆಯ ಪ್ರಾಚೀನತೆ ಭಾರತ ಕರ್ನಾಟಕದಲ್ಲಿ ಹಚ್ಚೆಯ ಕುರಿತು

---

೧೬. ಡಾ. ಎಸ್.ಸಿ. ಪಾಟೀಲ ಕರ್ನಾಟಕದ ಜಾನಪದ ಚಿತ್ರಕಲೆ

೧೭. ಡಾ. ಎಸ್.ಸಿ. ಪಾಟೀಲ ಕರ್ನಾಟಕದ ಜಾನಪದ ಚಿತ್ರಕಲೆ

ಇರುವ ಐತಿಹ್ಯಗಳು, ಹಚ್ಚೆ ಹೂಯ್ಯುವ ವಿದ್ಯಾ ಹಚ್ಚೆಯ ಪರಿಕರಗಳು, ಹಚ್ಚೆ ಹಾಕಿಸಿಕೊಳ್ಳುವುದರಿಂದ ಆಗೂವ ಉಪಯೋಗಗಳು, ಮದರಂಗಿ ಕಲೆ, ಕೌದಿಕಲೆ, ಕಸೂತಿಕಲೆ, ಗಂಜಿಪಾ ಕಲೆ, ತೊಗಲುಗೊಂಬೆಕಲೆ ಸೂತ್ರಗೊಂಬೆಕಲೆ, ಯಕ್ಷಗಾನ ದೊಡಾಟಗಳಲ್ಲಿಯ ಚಿತ್ರಕಲೆ, ಮುಖವರ್ಣಿಕೆಯ ಕುರಿತು ಈ ಅಧ್ಯಾಯದಲ್ಲಿ ವಿವರಣೆಗೊಂಡಿದ್ದಾರೆ. ಅಧ್ಯಾಯ ಐದರಲ್ಲಿ ಧರ್ಮದಮೂಲ ಜನಪದ ಚಿತ್ರಕಲೆಯ ಕುರಿತು ಧಾರ್ಮಿಕ ಹಿನ್ನೆಲೆಯಲ್ಲಿ ಜನಪದ ಚಿತ್ರಕಲೆ ನೆಲಗೊಡೆಯ ಹೊರಬದಿಯ ಅಲಂಕಾರದ ಚಿತ್ರವಿನ್ಯಾಸಗಳು ಬಾಗಿಲು ಕಿಡಕಿಯ ಸೂತ್ತಲು ಅಲಂಕಾರಿಕ ರೇಖಾ ವಿನ್ಯಾಸಗಳನ್ನು ರಚಿಸುವ ರೀತಿ ನೀತಿಗಳ ಕುರಿತು ರಂಗೋಲಿಯ ವಿನ್ಯಾಸಗಳಕುರಿತು ಚುಕ್ಕೆ ರಂಗೋಲಿ ಚುಕ್ಕೆ ರಹಿತಿ ರಂಗೋಲಿಯ ಮಹತ್ವ, ರಂಗೋಲಿಯ ವಿಧಿವಿಧಾನಗಳು, ಧಾರ್ಮಿಕ ನವಗ್ರಹ ಶಾಂತಿಯ ರಂಗೋಲಿ ದೇವ್ವ ಭೂತ ಬಿಡಿಸುವಾಗ ಬರೆಯುವ ರಂಗೊಲಿಗಳ ಕುರಿತು ಸಮಗ್ರವಾದ ಅಧ್ಯಾಯನವನ್ನು ಈ ಅಧ್ಯಯಾಯದಲ್ಲಿ ವಿವರಿಸಲಾಗಿದೆ.[೧೮]

ಅಧ್ಯಾಯ ಆರು ಇದರಲ್ಲಿ ವೃತ್ತಿ ಮೂಲ ಜನಪದ ಚಿತ್ರಕಲೆ ಕೃಷಿಪ್ರಧಾನ ವಸ್ತುವಿನಲ್ಲಿಯ ಕಲಾಮಾನಸ, ಕೃಷಿಯೇತರ ಗ್ರಹೋಪಕರಣಗಳಲ್ಲಿರುವ ಕಲಾವಿನ್ಯಾಸ, ಕಲಘಟಗಿಯ ತೊಟ್ಟಿಲು ಚಿತ್ರಕಾರರು ಹುಬ್ಬಳ್ಳಿಯ ಸೀರೆ, ಮತ್ತಗಿಯ ದೊಡ್ಡಾಟದ ವಸ್ತ್ರಾಲಂಕಾರ ತೊನಶ್ಯಾಳ ದೇವರ ಮೂರ್ತಿಗಳಿಗೆ ಬಣ್ಣಮಾಡುವ ವೃತ್ತಿಯವರು ತಾಳಿಕೋಟೆಯ ಪರಗಿಮೂರಾಣಿ ಮತ್ತು ಗಿಳಿಶಕುನದ ಚಿತ್ರಬರೆಯುವ ವೃತ್ತಿಯವರು ಕಿನ್ನಾಳಕಟ್ಟಿಗೆಯ ಮಣ್ಣಿನ ಗೊಂಚ್ಚಿಗಳ ಚಿತ್ರಕಾರರು, ಬುಡಬುಡಕಿಯವರ ಬುದುಕು ಚಿತ್ರಕಲಾ ವಿನ್ಯಾಸಗಳ ಪರಿದ ಈ ಅಧ್ಯಯನದಲ್ಲಿ ಸವಿಸ್ತಾರವಾಗಿ ವಿವರಣೆ ಮಾಡಿದ್ದಾರೆ. ಅಧ್ಯಾಯ ಏಳು ಈ ಅಧ್ಯಾಯದಲ್ಲಿ ಸಮಾರೋಪವಿದ್ದಲ್ಲಿ ಅಧ್ಯಯನದಿಂದ ಬಂದ ಫಲಿತಗಳು, ಸಂಕ್ಷೇಪ ಗ್ರಂಥ ಋಣಗಳನ್ನು ಒಳಗೊಂಡಿದೆ.[೧೯]

ಡಾ ಎಸ್.ಸಿ.ಪಾಟೀಲರ ಈ ಮಹಾಪ್ರಬಂಧಕ್ಕೆ ಬಹಳ ವಿಷಯ ವ್ಯಾಪ್ತಿಯನ್ನು ಪಡೆದದ್ದು ಜನಪದ ಚಿತ್ರಕಲೆಯ ಸಮಗ್ರವಾದ ಅಧ್ಯಯನವನ್ನಾಗಿ ಒಳಗೊಂಡಿದೆ. ಚಿತ್ರಕಲಾ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯಾಗಿದೆ. ಈ ಮಹಾ ಪ್ರಬಂಧವನ್ನು ಸಮಾಜಕ್ಕೆ ಕಲಾಕ್ಷೇತ್ರಕ್ಕೆ ಬಹುದೊಡ್ಡ ಆದಾರ ಗ್ರಂಥವಾಗಿದೆ. ವೀರಶೈವ ಅಧ್ಯನ ಸಂಸ್ಥೆ ಜಗದ್ಗುರು ತೊಂಟದಾರ್ಯ ಸಂಸ್ಥಾನಮಠ ಗದಗದಿಂದ ಪ್ರಕಟಗೊಂಡಿದೆ.

೯. ಕಲಾವಿದ ಎಂ.ಎ. ಚಿಟ್ಟಿಯವರ ಜೀವನ ಕಲಾಕೃತಿಗಳು ಒಂದು ಅಧ್ಯಯನ[೨೦]

ಡಾ. ಲಕ್ಷ್ಮೀದೇವಿ ಗವಾಯಿ ಉಪನ್ಯಾಸಕಿ ವಿದ್ಯಾದಾನಸಮಿತಿಯ ಬಾಲಕಿಯರ ಪದವಿ ಪೂರ್ವ ಕಾಲೇಜ, ಗದಗ ಇವರು ಡಾ. ಎಸ್.ಸಿ. ಪಾಟೀಲರವರ ಮಾರ್ಗದಲ್ಲಿ ಪಿಹೆಚ್.ಡಿ ಸ್ನಾತಕೋತ್ತರ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧವು ೨೦೦೭ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಿದ್ದಾರೆ. ಗದುಗಿನ ಖ್ಯಾತ ಕಲಾ ವಿದರಾದ ಕುಂಚಬ್ರಹ್ಮ ಎಂ.ಎ. ಚೆಟ್ಟಿಯವರ ಕುರಿತು

---

೧೮. ಡಾ. ಎಸ್.ಸಿ. ಪಾಟೀಲ ಕರ್ನಾಟಕದ ಜಾನಪದ ಚಿತ್ರಕಲೆ

೧೯. ಡಾ. ಎಸ್.ಸಿ. ಪಾಟೀಲ ಕರ್ನಾಟಕದ ಜಾನಪದ ಚಿತ್ರಕಲೆ

೨೦. ಡಾ. ಲಕ್ಷ್ಮೀದೇವಿ ಗವಾಯಿ ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು–೨೦೦೩

ಅವರ ಬದುಕಿನ ಕುರಿತು ಇರುವ ಸಮಗ್ರವಾದ ಅಧ್ಯಯನವಾಗಿದೆ ಡಾ. ಲಕ್ಷ್ಮೀದೇವಿ ಗವಾಯಿಯವರು ಈ ಮಹಾಪ್ರಬಂಧದಲ್ಲಿ ಎಂಟು ಅಧ್ಯಾಯಗಳನ್ನು ಮಾಡಿದ್ದಾರೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಸ್ವರೂಪ ವಿಧಾನಗಳು ಮತ್ತು ಆಕಾರ ಸಾಮಗ್ರಿಗಳ ಕುರಿತು ವಿವರಿಸಿದ್ದಾರೆ. ಅಧ್ಯಾಯ ಎರಡರಲ್ಲಿ ಚಿತ್ರಕಲಾ ಪ್ರಪಂಚಕ್ಕೆ ತಮ್ಮ ಜೀವನವನ್ನು ಧಾರೆಯರೆದ ಕಲಾವಿದ ಶ್ರೀ ಎಂ.ಎ. ಚೆಟ್ಟಿಯವರ ಬಾಲ್ಯ ಪರಿಸರ ಶೈಕ್ಷಣಿಕ ಹಾಗೂ ಕೌಟುಂಬಿಕ ಜೀವನ ಕುರಿತಾದ ವಿವರಣೆಯಿದೆ. ಅಧ್ಯಾಯ ಮೂರರಲ್ಲಿ ಎಂ.ಎ. ಚೆಟ್ಟಿಯವರ ಉನ್ನತ ಅಭ್ಯಾಸಕ್ಕಾಗಿ ಮುಂಬಯಿಯ ಜೆ.ಜೆ.ಸೂಲ್ಕ್ ಆಫ್ ಆರ್ಟ್‌ದಲ್ಲಿಕಲಿತ ವಿದ್ಯಾಬ್ಯಾಸಗಳು ಸಪ್ತವರ್ಣ ಕನ್ನಡ ಕಲಾವಿದರು ಚೆಟ್ಟಿಂದಾಸೆ ಅಧ್ಯಾಪಕವರ್ಗ ಕಲಾ ವಾತಾವರಣ ಹಾಗೂ ಸಮಕಾಲಿನ ಕಲಾವಿದ ಕುರಿತಾಗಿ ಈ ಅಧ್ಯಯನದಲ್ಲಿ ವಿವರಿಸಿದ್ದಾರೆ.[೨೧] ಅಧ್ಯಾಯ ನಾಲ್ಕರಲ್ಲಿ ಎಂ.ಎ. ಚೆಟ್ಟಿಯವರು ಚಿತ್ರಕಲಾ ಶಿಕ್ಷಣ ಮುಗಿಸಿದ ನಂತರ ವೃತ್ತಿ ಜೀವನ ಕುರಿತು ಟಿ.ಪಿ. ಅಕ್ಕಿಯವರು ಸ್ಥಾಪಿಸಿದ ವಿಜಯ ಕಲಾಮಂದಿರದಲ್ಲಿ ಶಿಕ್ಷಕರಾಗಿ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದಾರೆ ಈ ಕುರಿತು ವಿವರಣೆ ಇದೆ. ಅಧ್ಯಾಯ ಐದರಲ್ಲಿ ಚೆಟ್ಟಿಯವರು ರಚಿಸಿದ ಅನೇಕ ರೇಖಾಚಿತ್ರಗಳಿದ್ದು ಈ ಕುರಿತು ವಿವರಿಸಿದ್ದಾರೆ. ಆರನೆಯ ಅಧ್ಯಾಯದಲ್ಲಿ ಕಲಾವಿದ ಎಂ.ಎ. ಚೆಟ್ಟಿಯವರ ಚಿತ್ರಗಳಲ್ಲಿಯ ರೇಖಾವಿನ್ಯಾಸ ಬಣ್ಣಗಳ ಬಳಕೆಯ ಪ್ರಭಾವ ಚಿತ್ರಗಳ ವಿಷಯವನ್ನು ಕಣ್ಣಿಗೆ ಕಟ್ಟಿ ನಿಲ್ಲಿಸುವ ಕಲಾತಂತ್ರ ಶೈಲಿಯ ವಿಶೀಷ್ಠ ಕೊಡುಗೆಯ ಕುರಿತು ವಿವರಿಸಿದ್ದಾರೆ. ಏಳನೆಯ ಅಧ್ಯಾಯದಲ್ಲಿ ಕಲಾವಿದ ಎಂ.ಎ. ಚೆಟ್ಟಿಯವರ ಚಿತ್ರಗಳ ರೇಖಾವಿನ್ಯಾಸ, ಬಣ್ಣಗಳ ಬಳಕೆ ಕಲಾತಂತ್ರ, ಶೈಲಿಯ ವಿಶಿಷ್ಟ ಕೊಡುಗೆಗಳನ್ನು ವಿವರಿಸಿದ್ದಾರೆ. ಎಂಟನೆಯ ಅಧ್ಯಾಯದಲ್ಲಿ ಸಮಾರೂಪ ಫಲಿತಗಳ ಕುರಿತು, ಅನುಬಂಧ-೧ ಅನುಬಂಧ-೨ ಅನುಬಂಧ-೩ ಸಂಕ್ಷೇಪ್ತಗಳ ಕುರಿತು ವಿವರಣೆಯನ್ನು ಈ ಅಧ್ಯಾಯದಲ್ಲಿದೆ. ಈ ಮಹಾ ಪ್ರಂಬದವನ್ನು ಡಾ. ಲಕ್ಷ್ಮೀದೇವಿ ಗವಾಯಿವರು ಕುಂಚ ಬ್ರಹ್ಮ ಎಂ.ಎ.ಚೆಟ್ಟಿಯವರ ಕಲಾವಿದರು ವೃತ್ತಿ ಜೀವನ ಕಲಾಕೃತಿಗಳ ಕುರಿತು ಸಮಗ್ರವಾದ ಅಧ್ಯಯನ ಮಾಡಿದ್ದಾರೆ ಈ ಗ್ರಂಥವು ಚಿತ್ರಕಲಾ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆನಿಡಿದೆ.

೧೦. ಕುಂಚಬ್ರಹ್ಮ ಮಡಿವಾಳಪ್ಪ ಮಿಣಜಗಿ[೨೨]

ಈ ಪುಸ್ತಕವನ್ನು ಶಾ.ಮ.ಕೃಷ್ಣರಾಯ, ಬೆಂಗಳೂರು ಇವರು ಡಾ ಎಂ.ವ್ಹಿ.ಮಿಣಜಗಿಯವರ ಕಲಾ ಬದುಕು ಕುರಿತು ಸಮಗ್ರವಾದ ವಿಷಯಗಳನೊಳಗೂಂಡ ಕಿರುಪುಸ್ತಕ ಇದಾಗಿದೆ ಡಾ. ಎಂ.ವ್ಹಿ. ಮಿಣಜಗಿಯವರ ಬಾಲ್ಯ ಜೀವನ ಕಲಾಬದುಕು ಕುರಿತು ಉನ್ನತ ಚಿತ್ರಕಲಾ ಅಧ್ಯಾಯವನ್ನಾಗಿ ಮುಂಬಯಿಯ ಸರ್. ಜೆ.ಜೆ. ಕಲಾ ಶಾಲೆಗೆ ಪ್ರವೇಶಪಡೆದು ಅಲ್ಲಿಯ ವಿದ್ಯಾಭ್ಯಾಸ ಕಲಾಗುರುಗಳ ಕುರಿತು ಉತ್ತಮವಾದ ವಿವರಣೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ.

ಮಿಣಜಗಿಯವರ ಕಲಾಪ್ರತಿಭೆಯನ್ನು ಗುರುತಿಸಿ ಪ್ರಿನ್ಸಪಾಲ ಸೊಲೊಮನ್‌ರವರು ಉನ್ನತ ವ್ಯಾಸಂಗಕ್ಕಾಗಿ ಲಂಡನಿನ ರಾಯಲ್ ಸ್ಕೂಲ್ ಆಫ್ ಆರ್ಟ ಕಾಲೇಜಿನಲ್ಲಿ ಉನ್ನತ ಅಧ್ಯಾಯನಕ್ಕಾಗಿ

---

೨೧. ಡಾ. ಲಕ್ಷ್ಮೀದೇವಿ ಗವಾಯಿ ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಕಲಾಕೃತಿಗಳು-೨೦೦೩

೨೨. ಶಾ. ಎಂ. ಕೃಷ್ಣರಾಯ ಕುಂಚ ಬ್ರಹ್ಮ ಮಡಿವಾಳಪ್ಪ ಮಿಣಿಜಗಿ - ೨೦೦೭

ತೆರಳಿ ಅಲ್ಲಿಂದ ಭಾರತೀಯ ಚಿತ್ರಕಲೆಯ ಬಗ್ಗೆ ಅಷ್ಟೊಂದು ಆಸಕ್ತಿ ಇಲ್ಲದ ಸಂದರ್ಭದಲ್ಲಿ ಮಡಿವಾಳಪ್ಪನವರು ಯಾವರೀತಿಯಲ್ಲಿ ಭಾರತೀಯ ಚಿತ್ರಕಲೆಯ ಕುರಿತು ಆಸಕ್ತಿ ಮೂಡಿಸಿದ್ದಾರೆ. ಸರ್. ದೊಥೆನಷ್ಟನ್‌ರವರ ಪ್ರೋತ್ಸಾಹದ ಕುರಿತು ವಿವರವಾದ ವಿಷಯವನ್ನು ತಿಳಿಸಿದ್ದಾರೆ. ಲಂಡನಿನ ರಾಯಲ್ ಸ್ಕೂಲ್ ಆಫ್ ಆರ್ಟ್ ಕಾಲೇಜಿನಿಂದ ವಿದ್ಯಾಭ್ಯಾಸ ಮುಗಿಸಿ ತಾಯ್ನಾಡಿಗೆ ಮರಳಿಬಂದ ಬಗ್ಗೆ ವಿವರಣೆ ಇದೆ. ಡಾ ಎಂ.ವ್ಹಿ. ಮಿಣಜಿಗಿಯವರು ಮುಂಬಯಿ, ಲಂಡನದಲ್ಲಿ ವಿದ್ಯಾಭ್ಯಾಸ ಮುಗಿಸಿ ಹುಬ್ಬಳ್ಳಿಗೆ ಬಂದು ಚಿತ್ರಕಲಾ ಮಹಾವಿದ್ಯಾಲಯ ಪ್ರಾರಂಭಿಸಿ ಶ್ರೀಮಠದ ಜಗದ್ಗುರುಗಳು ಇಪತ್ತೈದು ಸಾವಿರ ರೂಪಾಯಿ ದೇಣಿಗೆ ಕೊಟ್ಟು ಆರ್ಶಿವದಿಸಿ ನಂತರ ಶ್ರೀ ವಿಜಯ ಮಹಾಂತೇಶ ಕಲಾ ಮಹಾವಿದ್ಯಾಲಯ ಎಂದು ನಾಮಕರಣಗೊಂಡಿತು ಈ ಕುರಿತು ಹಂತಹಂತವಾಗಿ ಲಲಿತಕಲಾ ಮಹಾ ವಿದ್ಯಾಲಯ ಬೆಳಸಿ ಅದಕ್ಕೆ ತನ್ನದೆಯಾದ ಒಂದು ಹೊಸಕಟ್ಟಡ ನಿರ್ಮಾಣಮಾಡಿದ ಕುರಿತು. ಮಿಣಜಗಿಯವರಿಗೆ ಭಾವಚಿತ್ರಗಳು ನಿಸರ್ಗಚಿತ್ರಗಳು ಭಿತ್ತಿಚಿತ್ರ ಶೈಲಿ ತಂತ್ರಗಾರಿಕೆಯ ಕುರಿತು ವಿವರಿಸಿದ್ದಾರೆ.

ಮಡಿವಾಳಪ್ಪ ಮಿಣಜಗಿಯುವರು ವಿವಿಧಮುಖವಾಗಿ ಕಲಾಸೇವೆಸಲ್ಲಿಸಿದ ಕುರಿತು ಮಿಣಜಗಿಯವರಿಗೆ ಸಿಕ್ಕ ಪ್ರಶಸ್ತಿ ಪುರಸ್ಕಾರಗಳ ಕುರಿತು ಸಮಗ್ರವಾದ ವಿಷಯಗಳನ್ನು ಶಾ. ಎಂ. ಕೃಷ್ಣರಾಯವರು ತಮ್ಮ ಸಾಹಿತ್ಯದ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಈ ಪುಸ್ತಕವು ಚಿಕ್ಕದಾದರು ದೊಡ್ಡ ಕಲಾವಿದರ ಸಮಗ್ರವಾದ ವಿಷಯವನ್ನು ತಿಳಿಸುವಂಥದಾಗಿದೆ. ಚಿತ್ರಕಲಾ ಸಾಹಿತ್ಯಕ್ಕೆ ಉತ್ತಮವಾದ ಕೊಡುಗೆನಿಡಿದ ಪುಸ್ತಕವಾಗಿದೆ.

೧೧. ವಜ್ರವಿಜಯ (ನೆನಪಿನ ಸಂಚಿಕೆ)[೨೩]

ವಜ್ರವಿಜಯ ನೆನಪಿನ ಸಂಚಿಕೆಯ ವಿಜಯಕಲಾ ಮಂದಿರಕ್ಕೆ ೬೦ ವರ್ಷದ ಸಂದರ್ಭದಲ್ಲಿ ವಿಜಯಕಲಾಮಂದಿರ ಬೆಳೆದುಬಂದ ದಾರಿಯ ಕುರಿತು ಪ್ರಾರಂಭದಿಂದ ಇಲ್ಲಿಯವರೆಗೆ ನಡೆದು ಬಂದ ರೀತಿ ಹಾಗೂ ಅನೇಕ ಚಿತ್ರಕಲೆ ಲಲಿತಕಲೆಗಳಿಗೆ ಸಂಬಂಧಿಸಿದ ಲೇಖನಗಳನ್ನೊಳಗೊಂಡ ಪುಸ್ತಕ ಇದಾಗಿದೆ. ಪ್ರಾಚಾರ್ಯ ಅಶೋಕ ಅಕ್ಕಿಯವರ ಸಂಪಾದಕರಾಗಿದ್ದಾರೆ. ಇದರಲ್ಲಿ ಒಟ್ಟು ೨೪ ಲೇಖನಗಳು ಪ್ರಕಟಗೊಂಡಿವೆ. ಲೇಖನ ಒಂದರಲ್ಲಿ ವಜ್ರ ಮಹೋತ್ಸವ ವಿಜಯ ಕಲಾಮಂದಿರ ಸಂಸ್ಥೆ ಗದಗ, ಎಂಬ ಶಿರ್ಶಿಕೆಯಲ್ಲಿ ವಿಜಯಕಲಾಮಂದಿರ ೧೯೪೭ರಲ್ಲಿ ಪ್ರಾರಂಭಗೊಂಡು ಕಲಾಪರಂಪರೆ ಬೆಳೆಸಲು ಶ್ರಮಿಸಿದ ಬಗ್ಗೆ ಹಂತಹಂತವಾಗಿ ಬೆಳೆದುಬಂದ ರೀತಿ ವಿಜಯಕಲಾಮಂದಿರದ ಶಿಕ್ಷಕರ ಕುರಿತು ಇಲ್ಲಿಯ ಪ್ರಮುಖ ಕಲಾವಿದ್ಯಾರ್ಥಿಗಳು ವಿಜಯಕಲಾಮಂದಿರದ ಕಲಾ ಚಟುವಟಿಕೆಗಳಕುರಿತು ಹಳೆವಿದ್ಯಾರ್ಥಿಗಳ ಸಾಧನೆ ಕಲಾಪ್ರದರ್ಶನಗಳು ಕಲಾ ಪ್ರತ್ಯಕ್ಷತೆಗಳು ಪ್ರಮುಖ ಗಣ್ಯಮಾನ್ಯರ ಸಂದರ್ಶನ ಕುರಿತು, ವಿಜಯಕಲಾ ಮಂದಿರಕ್ಕೆ ಮಾರ್ಗದರ್ಶನಿಡಿದವರು. ವಜ್ರ ಮಹೋತ್ಸವದಲ್ಲಿ ಸನ್ಮಾನಿತರು. ವಿಜಯಕಲಾ ಮಂದಿರದಲ್ಲಿ ನಡೆಯುತ್ತಿರುವ ವಿವಿಧ ಕೋರ್ಸಗಳ ಕುರಿತು ಸಮಗ್ರವಾದ ಮಾಹಿತಿಯನ್ನು ಈ ಲೇಖನದಲ್ಲಿ ಮೂಡಿಬಂದಿದೆ. ೨ ಲೇಖನವನ್ನು ಡಾ. ಬಿ.ಕೆ. ಹಿರೇಮಠರು ಕಲಾ ಗುರು ದೇವ ಶ್ರಿ ಟಿ.ಪಿ. ಅಕ್ಕಿಯವರ ಕುರಿತು ಬರೆದಿರುವ

---

೨೩. ಅಶೋಕ ಅಕ್ಕಿ(ಸಂ) ವಜ್ರ ವಿಜಯ ನೆನಪಿನ ಸಂಚಿಕೆ ೨೦೦೮

ಉತ್ತಮವಾದ ಲೇಖನವಾಗಿದೆ. ಡಾ. ಎಸ್.ಸಿ. ಪಾಟೀಲರವರು ಮಾನಸಿಕ ದೂರ ಕುರಿತು ಬರೆದಿದ್ದಾರೆ. ೪ ವಿಜಯ ಕಲಾಸಂಸ್ಥೆಯ ಪ್ರಾರಂಭದ ದಿನಗಳ ಕುರಿತು ನಾಡೋಜ ವ್ಹಿ.ಪಿ.ಕಾಳೆ ಅವರು ಬರೆದಿದ್ದಾರೆ. ೫ ದೈತ್ಯ ಶಕ್ತಿ ಆದಮ್ಯ ಚೇತನದ ಆರ್. ಕೆ. ಲಕ್ಷ್ಮಣ, ಕುರಿತು ಶ್ರೀ ಆರ್. ಜಿ. ರಾಯಕರ್, ೬ ಪೊ. ರವಿಂದ್ರ ಕೊಪ್ಪರರವರ ಮನೋಪಿಡನೆಗಳುಹಾಗೂ 'ಕಾಗ್ನಿಟಿವ್ ಥರಪಿ' ೭ ಶ್ರೀ ಸುರೇಶ ಕುಲಕರ್ಣಿಯವರ ಗದುಗಿನ ಕಲಾಮಂದಿರದ ವಿಜಯ ೮ ಬಹಾದೇವ ಕವಿಶೆಟ್ಟಿಯವರು-ಭಾರತೀಯ ಚಿತ್ರಕಲೆ-ಒಂದು ಜಿಜ್ಞಾಸೆ ೯ ಡಾ. ಯಾದಪ್ಪ ಪರದೇಶಿಯವರ - ಸಾಂಪ್ರದಾಯಿಕ ಭಿತ್ತಿಚಿತ್ರಕಲೆ ೧೦ ಡಾ. ಶಿವಾನಂದ ಬಂಚನೂರ - ಸಮಕಾಲಿನ ದೃಶ್ಯಕಲೆ - ಮೈವಳಿಕೆ ೧೧ ಡಾ. ಲಕ್ಷ್ಮೀದೇವಿ ಗವಾಯಿಯುವರ-ಸಮಕಾಲಿನಕಲೆ ೧೨ ಡಾ. ಶಶಿಕಲಾ ಹೂಗಾರರವರ-ಕರ್ನಾಟಕದ ತೊಗಲುಗೊಂಬೆಯ ಚಿತ್ರಕಲೆ ೧೩ ಡಾ. ಆನಂದ ಪೂಜಾರರವರು ಕರಾವಳಿಕರ್ನಾಟಕದ ಸೋಗು (ವೇಷ)ಗಳು ೧೪ ಡಾ. ಮೋನಹರಾವ ಬಿ. ಪಂಚಾಳ - ರೇಖಾಚಿತ್ರಕಲೆ ೧೫ ಶ್ರೀಮತಿ ಬನಶಂಕರಿ ಹೆಗಡೆ ಬಣ್ಣಗಳು ೧೬ ಪ್ರಾ ಲತಾರಾಣಿ ಮಲ್ಹಾರ - ನೃತ್ಯಕಲೆ ೧೭ ಶ್ರೀ ಬಿ.ಎಂ. ಪಾಟೀಲ-ಆಧುನಿಕ ಕಲಾಕೃತಿಗಳ ಕಿರುರೂಪ ಚಿತ್ರಕಲೆಯ ಪ್ರಭಾವ ೧೮ ಪ್ರೊ ಸಿ.ಕೆ. ಶ್ರೀನಿವಾಸ -ಅನ್ವರ ಕಲೆಯಲ್ಲಿನ ಮನೋವಿಜ್ಞಾನ ಹಾಗೂ ಪ್ರಚಾರ ಮಾಧ್ಯಮದಲ್ಲಿ ಇದರ ಮಹತ್ವ ೧೯ ಶ್ರೀ ಎನ್. ಎಸ್. ಪತ್ತಾರ ಕಲಿಕೆಯಲ್ಲಿ ಕಲಾ ವಸ್ತೂ ೨೦ ಶ್ರೀ ಪಿ.ಬಿ. ಬಂಡಿ-ಗದಗ ಜಿಲ್ಲೆಗೆ ಚಿತ್ರಕಲಾ ಕ್ಷೇತ್ರದ ಕೊಡುಗೆ ೨೧ ಶ್ರಿಮತಿ ಪ್ರೇಮಾ ಹಂದಿಗೊಳ - ಕಲಾ ಶಿಕ್ಷಣ ೨೨ ಶ್ರೀ ವ್ಹಿ.ಬಿ. ಪರ್ವತಗೌಡ್ರ - ಅನ್ವಯಕಲೆ (Applied Art) ೨೩ ಶ್ರೀ ರಾಜು ತೋರದಾಳ-ಚಿತ್ರಕಲೆಯ ಗುರಿ ಉದ್ದೇಶ (ಮನೋವೈಜ್ಞಾನಿಕ ದೃಷ್ಟಿ) ೨೪ ಶ್ರೀ ಬಸವರಾಜ ನೆಲಜೇರಿ-ಚಿತ್ರಕಲೆ ಸಾಹಿತ್ಯ, ಸಂಗೀತ ಒಂದುಕ್ಕೊಂದು ಪೂರಕ[೨೪]

ವಜ್ರವಿಜಯ ನೆನಪಿನ ಸಂಚಿಕೆಯಲ್ಲಿ ಉತ್ತಮವಾದ ಚಿತ್ರಕಲೆಯ ಕುರತು ಲೇಖನಗಳು ಇವೆ. ಈ ಪುಸ್ತಕವು ಕಲಾ ಸಾಹಿತ್ಯಕ್ಕೆ ಅಮೂಲ್ಯವಾದಕೊಡುಗೆಯಾಗಿದೆ. ಉತ್ತಮ ಮುಖಪುಟವುಳ್ಳ ಪುಸ್ತಕವಾಗಿದೆ.

೧೨. ಎಂ.ಎ. ಚೆಟ್ಟಿ[೨೫]

ಈ ಪುಸ್ತಕವನ್ನು ಡಾ। ಲಕ್ಷ್ಮೀದೇವಿ ಗವಾಯಿಯವರು ಬರೆದಿದ್ದು ಕಲಾವಿದ ಎಂ.ಎ.ಚಟ್ಟಿಯವರ ಕಲಾಬದುಕು ಕುರಿತು ಇದೆ. ಲಿಂಗಾಯತ ಪೂಣ್ಯಪುರುಷ ಸಾಹಿತ್ಯರತ್ನ ಮಾಲೆಯಲ್ಲಿ ಪ್ರಕಟಣೆಗೊಂಡಿದೆ ಪುಸ್ತಕ ಚಿಕ್ಕದಾದರೂ ಅದರಲ್ಲಿರುವ ವಿಷಯದೊಡ್ಡದಾಗಿದೆ. ಚೆಟ್ಟಿಯವರ ಬಾಲ್ಯ ಜೀವನ, ಕಲಾಶಿಕ್ಷಣ ಉನ್ನತಶಿಕ್ಷಣ, ವೃತ್ತಿ ಜೀವನದ ಕಲಾಶ್ಶಿಕ್ಷಕರಾಗಿ ಸೇವೆಸಲ್ಲಿಸಿದರು ಅನೇಕ ಶಿಷ್ಯಬಳ ಅವರಿಗೆ ಮಾರ್ಗದರ್ಶನ ನೀಡಿದ ಕುರಿತು.

ಎಂ.ಎ. ಚೆಟ್ಟಿಯವರು ಉತ್ತಮಕಲಾವಿದರಾಗಿ ಬೆಳೆದು ಬಂದ ಕುರಿತು ಕಲಾಕೃತಿಗಳ ಯಾವ ಶೈಲಿಯಲ್ಲಿ ತಂತ್ರಗಾರಿಕೆಯಲ್ಲಿ ರಚಿಸಿದ್ದಾರೆ. ಬಣ್ಣಗಳ ಬಳಕೆ ಅನೇಕ ಸಂಘ ಸಂಸ್ಥೆಗಳಿಂದ ಪಡೆದ ಪ್ರಶಸ್ತಿ ಪುರಸ್ಕಾರಗಳ ಕುರಿತು ಚೆಟ್ಟಿಯವರ ಕಲಾ ಸಾಧನೆಯ ಕುರಿತು ಈ ಪುಸ್ತಕದಲ್ಲಿ

---

೨೪. ಅಶೋಕ ಅಕ್ಕಿ(ಸಂ) ವಜ್ರ ವಿಜಯ ನೆನಪಿನ ಸಂಚಿಕೆ ೨೦೦೮

೨೫. ಡಾ. ಲಕ್ಷ್ಮೀದೇವಿ ಗವಾಯಿ (ಲೇ) ಎಂ.ಎ. ಚಟ್ಟಿ ೨೦೦೮

ಡಾ. ಲಕ್ಷ್ಮೀದೇವಿ ಗವಾಯಿಯವರು. ಅಭಿವ್ಯಕ್ತಗೊಳಿಸಿದ್ದಾರೆ. ಈ ಕಿರು ಪುಸ್ತಕವು ಚಿತ್ರಕಲಾ ವಿದರಿಗೆ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ. ಚೆಟ್ಟಿಯವರ ಕಲಾ ಬದುಕು ಕುರಿತು ತಿಳಿದುಕೊಳ್ಳುವ ಉತ್ತಮ ಪುಸ್ತಕವಾಗಿದೆ.

೧೩. ಕೃತಪೂರ ಕಲಾ ವೈಭವ ಚಿತ್ರಕಲಾ ಹಾಗೂ ಶಿಲ್ಪಕಲಾ ವಿದರ ಕೈಪಿಡಿ[೨೬]

ಈ ಪುಸ್ತಕವು ಲಕ್ಕುಂಡಿ ಉತ್ಸವ –೨೦೦೯ ರಲ್ಲಿ ಜಿಲ್ಲಾಧಿಕಾರಿಯವರ ಆದೇಶದಂತೆ ಗದಗ ಜಿಲ್ಲೆಯ ಚಿತ್ರಕಲಾವಿದರ ಮತ್ತು ಶಿಲ್ಪಕಲಾವಿದರ ಪರಿಚಾವಳಿ ಮತ್ತು ಕೆಲವು ಕಲೆಗೆಸಂಬಂಧಿಸಿದ ಲೇಖನಗಳನೊಳಗೊಂಡಿದೆ ಪ್ರಾ. ಅಶೋಕ ಅಕ್ಕಿಯವರು ಸಂಪಾದಕರಾಗಿದ್ದಾರೆ.

ಇದರಲ್ಲಿ ೪ ಭಾಗಗಳಾಗಿ ವಿಂಗಡಿಸಲಾಗಿದೆ. ಭಾಗೊಂದರಲ್ಲಿ ಒಟ್ಟು ೬ ಲೇಖನಗಳಿವೆ. ಲೇಖನ ಒಂದು ಭಾರತೀಯ ಕಲೆ, ಮತ್ತು ಸೌಂದರ್ಯಶಾಸ್ತ್ರ ಕುರಿತು ಧಾರವಾಡ ಕಲಾ ಇತಿಹಾಸ ಕಲಾವಿದ ಶ್ರಿ ಬಿ.ಎಂ. ಪಾಟೀಲರವರು ಉತ್ತಮವಾಗಿ ವಿಷಯಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ೨. ಕರ್ನಾಟಕ ಭಿತ್ತಿಚಿತ್ರಕಲೆಯ ಕುರಿತು ಗದಗುಗಿನ ಕಲಾವಿದ ಶ್ರೀ ಪಿ.ಬಿ. ಬಂಡಿಯವರು ೩. ಕಿರುರೂಪ ಚಿತ್ರಗಳು ಕುರಿತು ಶ್ರೀಮತಿ ಬನಶಂಕರಿ ಹೆಗಡೆ ೪. ಸಮಕಾಲಿನ ಕಲೆ–ಡಾ. ಲಕ್ಷ್ಮೀದೇವಿ ಗವಾಯಿ ೫. ಕರ್ನಾಟಕದ ಆಧುನಿಕ ಶಿಲ್ಪಕಲೆ – ಡಾ ಶಿವಾನಂದ ಬಂಟನೂರ ೬. ಕರ್ನಾಟಕದಲ್ಲಿ ದೃಶ್ಯಕಲಾ ಸಂಶೋಧನಾ ಅಧ್ಯಯನ – ಒಂದು ಕಿರುನೋಟ – ಡಾ. ಎಸ್.ಸಿ ಪಾಟೀಲರವರು ಉತ್ತಮವಾದ ಕಲಾ ಲೇಖನವನ್ನು ಬರೆದಿದ್ದಾರೆ.

ಭಾಗ–ಎರಡರಲ್ಲಿ ಗದಗ ಜಿಲ್ಲೆಯ ಹಿರಿಯ ಕಲಾವಿದರ ಕುರಿತು ಸಂಕ್ಷಿಪ್ತ ವಿಷಯ ವಿವರಣೆಯನ್ನು ಡಾ. ಲಕ್ಷ್ಮೀದೇವಿ ಗವಾಯಿಯವರು ಬರೆದಿದ್ದಾರೆ. ಇದರಲ್ಲಿ ಶ್ರೀ ಶಿವಾನಂದ ಅಕ್ಕಿ, ಟಿ.ಪಿ. ಅಕ್ಕಿ, ಎಂ. ಎ. ಚೆಟ್ಟಿ, ಅಮಿನ ಸಾಹೇಬ, ಕಮಡೊಳ್ಳಿ, ಶ್ರೀ ಸಿ.ಎನ್. ಪಾಟೀಲ, ಶ್ರೀ ಎಂ.ಆರ್. ಭಾಗವಾನ, ಶ್ರೀ ಸೋಮಣ್ಣ ಇವರು ಕುರಿತು ಸಂಕ್ಷಿಪ್ತವಾದ ವಿಷಯಗಳನ್ನು ಹೊಂದಿದೆ.

ಭಾಗ – ಮೂರು ಗದಗ ಜಿಲ್ಲೆಯ ಚಿತ್ರಕಲಾ ಹಾಗೂ ಶಿಲ್ಪಕಲಾ ವಿದರ ಒಂದು ಕಲಾಕೃತಿಗಳು ಮತ್ತು ಸಂಕ್ಷಿಪ್ತ ಪರಿಚಯವಿದೆ.

ಭಾಗ – ನಾಲ್ಕುರಲ್ಲಿ ಕಲಾವಿದರ ಕಲಾಪ್ರದರ್ಶನದಲ್ಲಿ ಪ್ರಶಸ್ತಿ ಪಡೆದ ಯುವ ಕಲಾವಿದರ ಕಲಾಕೃತಿಗಳ ಛಾಯಾಚಿತ್ರವನ್ನು ಹಾಕಲಾಗಿದೆ ಲಕ್ಕುಂಡಿ ಉತ್ಸವದ ಅಂಗವಾಗಿ ಈ ಪುಸ್ತಕವನ್ನು ಉತ್ತಮ ಲೇಖನಗಳು ಮುದ್ರಣಗೊಂಡಿದು ಇದು ಚಿತ್ರಕಲಾ ಇತಿಹಾಸ ಕುರಿತು ಯುವಕಲಾವಿದರಿಗೆ ಉಪಯುಕ್ತವಾದ ಉತ್ತಮ ಪುಸ್ತಕ ಇದಾಗಿದೆ.

---

೨೬. ಅಶೋಕ ಅಕ್ಕಿ (ಸಂ) ಕೃತಪುರ ಕಲಾ ವೈಭವ ಚಿತ್ರಕಲಾ ಹಾಗೂ ಶಿಲ್ಪ ಕಲಾವಿದರ ಕೈಪಿಡಿ. ೨೦೦೯

೧೪. ಕಲಾ ಅನ್ವೇಷಕ[೨೭]

ಈ ಗ್ರಂಥವು ಡಾ. ಸಿದ್ಧಲಿಂಗಸ್ವಾಮಿ ಹಿರೇಮಠರವರು ಪಿ.ಎಚ್.ಡಿ ಪದವಿಗಾಗಿ ಖ್ಯಾತ ಕಲಾವಿದ ನಾಡೋಜ ಆರ್. ಎಂ. ಹಡಪದರವರ ಕುರಿತು ಕಲಾವಿದ ಆರ್. ಎಂ.ಹಡಪದ ಒಂದು ಅಧ್ಯಯನ ಕನ್ನಡ ವಿಶ್ವವಿದ್ಯಾಲಯ ಹಂಪೆಗೆ ಸಾದರಪಡಿಸಿದ ಮಹಾ ಪ್ರಬಂಧದ (ಪರಿಷ್ಕೃತ ರೂಪ್)ದ ಗ್ರಂಥ ಇದಾಗಿದೆ ಬದಾಮಿಯ ಶಾಸಕರಾದ ಶ್ರೀ ಎಂ.ಕೆ. ಪಟ್ಟಣಶೆಟ್ಟಿಯವರು ಗ್ರಂಥದಾಸೋಹ ಮೂಡಿದ್ದಾರೆ.

ಈ ಗ್ರಂಥವನ್ನು ಗಮನಿಸಿದಾಗ ಸಿದ್ಧಲಿಂಗಸ್ವಾಮಿಯವರು ವಿನೂತನ ರೀತಿಯಲ್ಲಿ ಅಕ್ಷರ ಜೋಡನೆ ಲೇಜೌಟ್‌ನ್ನು ಮಾಡಿದ್ದಾರೆ. ಅನ್ವೇಷಣೆಯ ಅಂಗಳದಲ್ಲಿ ಹಡಪದರವರ ಕುರಿತು ಅಧ್ಯಯನ ಮಾಡುವ ಉದ್ದೇಶ, ಅನೇಕ ಕಲಾ ಕೃತಿಗಳು ಹಡಪದರವರ ಗ್ರಾಫೀಕ್ ಕಲಾ ಕೃತಿಯಲ್ಲಿ ಅನೇಕ ಪ್ರಾಯೋಗಳ ಮಾಡಿದ್ದು ಅವುಗಳ ಕುರಿತು ಮುಂದಿನ ಯುವ ಪಿಳಿಗೆಗಳಿಗೆ ಉಪಯುಕ್ತವಾದ ದೃಷ್ಟಿಯಿಂದ ಮತ್ತು ವಿಷಯವ್ಯಾಪ್ತಿಯ ಕುರಿತು ಅಧ್ಯಾಯದಲ್ಲಿ ವಿವರಿಸಿದಿದ್ದಾರೆ.

೨. ಬಾಲ್ಯ ಪರಿಸರ ಮತ್ತು ಶಿಕ್ಷಣ ಕುರಿತು ಶ್ರೀ ಆರ್. ಎಂ. ಹಡಪದರವರು ಬಾದಾಮಿ ಪರಿಸರದಲ್ಲಿ ಹೇಗೆ ಬೆಳೆದರು ಐತಿಹಾಸಿಕ ಸ್ಥಳವಾದ ಬಾದಾಮಿ ಪಟ್ಟದಕಲ್ಲು ಐಹೂಳೆ ಸೌಂದರ್ಯ ಮತ್ತು ಸಂಸ್ಕೃತಿಯನ್ನು ಸೇರಿಹಿಡಿರುವ. ಪರಿಸರದಲ್ಲಿ ಬೆಳೆದಿರುವ ಕುರಿತು ಪ್ರಾಥಮಿಕ ಪ್ರೌಢ ಶಿಕ್ಷಣ ಮತ್ತು ಉನ್ನತ ಚಿತ್ರಕಲಾ ಶಿಕ್ಷಣ ಕುರಿತು ಸುಮಗ್ರಾವಾದ ವಿಷಯಗಳನ್ನು ಈ ಅಧ್ಯಾಯದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

೩. ನಾವು ನಾಲ್ವರು ಈ ಅಧ್ಯಾಯದಲ್ಲಿ ಗುಜರಾತದ ಕಲಾವಿದ ಶ್ರೀ ರಾಕೊರ ಕೆ. ಪಾಟೀಲ ಬಾಂಬೆಯ ವಾಗಪ್ರಯ ಕಲಾವಿದ ಶ್ರೀ ಶಿವರುದ್ರಪ್ಪ ಎಸ್. ಮನೋಳಿ, ಹುಬ್ಬಯ ಖ್ಯಾತ ಕಲಾವಿದರಾದ ಶ್ರೀ ಜಿ.ವಾಯ್. ಹುಬ್ಳಕರ ಮತ್ತು ಬಾದಾಮಿಯ ಶ್ರೀ ಆರ್. ಎಂ. ಹಡಪದ[೨೮] ರವರು ಸೇರಿ. ಇವರೆಲ್ಲರು ಸೇರಿ "ನಾವು ನಾಲ್ವರು" ಎಂಬ ಶಿರ್ಶಿಕೆಯಡಿಯಲ್ಲಿ ಕಲಾಪ್ರದರ್ಶನ ಮಾಡುವುದರ ಮೂಲಕ ಕೆಲಡಗೆ ಪ್ರಾಚಾರ ನೀಡಿದರು ಈ ಪ್ರದರ್ಶನ ಕುರಿತು ಅನೇಕ ಕಲಾವಿದರ ಕಲಾ ಅಭಿಮಾನಗಳು ವಿಮರ್ಶೆಮಾಡಿದ್ದಾರೆ. ಈ ಗ್ರಂಥಗಳ ಕುರಿತು ಬರೆದಿದ್ದಾರೆ. ೧೯೬೬ರಲ್ಲಿ ಪ್ರಾರಂಬಮಾಡಿ ಮುಂದೆ ೧೯೬೭ ರಲ್ಲಿ ೧೯೬೮ರಲ್ಲಿ ೧೯೬೯ರಲ್ಲಿ (went) ಎಂಬ ಶಿರ್ಶೆಕೆಯಡಿಯಲ್ಲಿ ಕಲಾ ಪ್ರದಶನದಲ್ಲಿ ನಾಲ್ಕು ಕಲಾವಿದರಲ್ಲದೆ ನಾಲ್ಕಕಿಂತ ಹೆಚ್ಚು ಕಲಾವಿದರನ್ನು ಒಳಗೊಂಡ ಕಲಾ ಪ್ರದರ್ಶನ ಮಾಡಿದ ಕುರಿತು ನಾವು ನಾಲ್ವರ ಜೋತೆ ಹೆಚ್ಚಿನ ಜನ ಸೇರಿ ಕಲಾ ಪ್ರದರ್ಶನ ಮಾಡಿದ ಕುರಿತು (went) ಶಿರ್ಶಿಕೆಯಡಿಯಲ್ಲಿ ಅನೇಕ ಕಾರ್ಯಕ್ರಮ ಮಾಡಿದ್ದು ಆಧುನಿಕ ಕಲೆಯ ಗಾಳವನ್ನು ಬಿಸಿದ್ದು ಆ ಕುರಿತು ಸಮಗ್ರವಾದ ವಿಷಯವನ್ನು ಈ (went)ರ ಮೂಲಕ ಜನರಿಗೆ ತಿಳಿಯುವಂತೆ ಮಾಡಿದ್ದಾರೆ.

---

೨೭. ಡಾ. ಸಿದ್ದಲಿಂಗಸ್ವಾಮಿ ಹಿರೇಮಠ ಕಲಾ ಅನ್ವುಷಕ ಆರ್.ಎಂ. ಹಡಪದ-೨೦೧೦

೨೮. ಡಾ. ಸಿದ್ದಲಿಂಗಸ್ವಾಮಿ ಹಿರೇಮಠ ಕಲಾ ಅನ್ವುಷಕ ಆರ್.ಎಂ. ಹಡಪದ-೨೦೧೦ ಪು.ಸಂ. ೪೫

೪. ಈ ಅಧ್ಯಾಯದಲ್ಲಿ ಕೆನ್ ಶಾಲೆಯ ಪ್ರಾರರಂಭ ಕಲಾಶಾಲೆಯ ನಡೆದುಬಂದದಾರಿ ಕೆನ್ ಶಬ್ದದ ಅರ್ಥ ಕೆನ್‌ಕಲಾಶಾಲೆ ಪ್ರಾರಂಭಿಸಲಿಕ್ಕೆ ಕಾರಣಿಕರ್ತರು ವಿದ್ಯಾರ್ಥಿಗಳಕೊಡುಗೆ ಹಂತಹಂತವಾಗಿ ಕಲಾಶಾಲೆಯ ಪ್ರಚಾರ, ಮುಂತಾದ ವಿಷಯಗಳಕುರಿತು ಈ ಅಧ್ಯಾಯದಲ್ಲಿ ವಿವರಣೆ ನೀಡಿದ್ದಾರೆ. ಅಧ್ಯಾಯದಲ್ಲಿ ಶ್ರೀ ಆರ್. ಎಂ. ಹಡಪದರವರ ರೇಖಾಚಿತ್ರಗಳು ಕುರಿತು ಭಾವಚಿತ್ರಗಳ ಕುರಿತು ಕೃತಿ ಚಿತ್ರ ಮತ್ತು ಆಧುನಿಕ ರೇಖಾ ಚಿತ್ರಗಳ ಕುರಿತು ಅದರಲ್ಲಿ ವಿಭಾಗಗಳನ್ನು ಮಾಡಿ ಅವುಗಳ ಕುರಿತು ಚರ್ಚೆಮಾಡಿದ್ದಾರೆ. ವರ್ಣಚಿತ್ರಗಳು ಇದರಲ್ಲಿ ೧ ಭಾವಚಿತ್ರಗಳು, ೨ ಪೂರ್ಣಭಾವಚಿತ್ರಗಳು, ೩ ಪ್ರಾಕೃತಿ ಚಿತ್ರಗಳು, ೪ ಆಧುನಿಕ ಚಿತ್ರಗಳು ಎಂದು ನಾಲ್ಕು ಉಪಭಾಗಗಳನ್ನು ಮಾಡಿಕೊಂಡ ವಿಂಗಡನೆ ಮಾಡಿದ್ದಾರೆ. ಮತ್ತು ವರ್ಣಕಲಾಕೃತಿಗಳ ಛಾಯಾಚಿತ್ರವನ್ನು ಅಳವಡಿಸಿಕೊಂಡಿದ್ದಾರೆ. ಆರ್. ಎಂ. ಹಡಪದರವರ ಒಬ್ಬ ಶ್ರೇಷ್ಠಕಲಾವಿದಎಂಬುದಕ್ಕೆ ಅವರ ಕಲಾಕೃತಿಗಳನ್ನು ನೋಡಿದ ತಕ್ಷಣ ತಿಳಿದುಕೊಳ್ಳುವಷ್ಟು ಸರಳವಾದ ಮತ್ತು ಸುಂದರವಾಗಿ ಬರೆದಿದ್ದಾರೆ. ಇದರಲ್ಲಿ ಜಲವರ್ಣ, ಪೊಸ್ಟರ ಮಾಧ್ಯಮ, ಅಕ್ರಿಲಿಕ್ ಮಾಧ್ಯಮ, ಶಾಯಿ, ಮಾಧ್ಯಮದ ಕಲಾಕೃತಿಗಳು ಉತ್ತಮವಾಗಿವೆ ಮತ್ತು ಅವುಗಳ ಕುರಿತು ಚರ್ಚಿಸಿದ್ದಾರೆ. ೭. ಗ್ರಾಫಿಕ್ ಚಿತ್ರಿಗಳು ಇದರಲ್ಲಿ ಭಿತ್ತಿಚಿತ್ರಗಳ ಲಿಥೋಗ್ರಾಫಿಕ್ ಕಲಾಕೃತಿಗಳ ಎಚಿಂಗ್ ಮೊನೋ ಪ್ರಿಂಟ್‌ಗಳಲ್ಲಿ ಉತ್ತಮವಾದ ಕಲಾಕೃತಿಗಳಿದ್ದು ಅವುಗಳನ್ನು ಒಂದೊಂದಾಗಿ ವಿಮರ್ಶೆಮಾಡಿದ್ದಾರೆ. ೮. ಶಿಲ್ಪಗಳು ಈ ಅಧ್ಯಾಯದಲ್ಲಿ ಹಲವು ಮಾಧ್ಯಮಗಳಲ್ಲಿ ಶಿಲ್ಪಗಳನ್ನು ರಚಿಸಿದ್ದಾರೆ ಅವುಗಳ ಕುರಿತು ಚರ್ಚಿಸಿದ್ದಾರೆ. ಪಾಸ್ಟ ಆಫ್ ಪ್ಯಾರಿಸ್, ಪ್ಲಾಸ್ಟಿಕ್, ಮಾಧ್ಯಮ ಲೋಹ ಮಾಧ್ಯಮಗಳಲ್ಲಿ ಉತ್ತಮವಾದ ಶಿಲ್ಪಗಳನ್ನು ಮಾಡಿದ್ದು ಅವುಗಳ ಕುರಿತು ಮತ್ತು ಛಾಯಾಚಿತ್ರಗಳನ್ನು ಈ ಅಧ್ಯಯದಲ್ಲಿ ಬಳಸಲಾಗಿದೆ. ೯. ಪ್ರೇರಣೆ ಪ್ರಭಾವ ತಂತ್ರ, ಶೈಲಿ ಹಾಗೂ ಸಾಮಾಜಿಕ ಪ್ರಜ್ಞೆ ಈ ಅಧ್ಯಾಯದಲ್ಲಿ ಶ್ರೀ ಆರ್. ಎಂ. ಹಡಪದರವರ ಉತ್ತಮವಾದ ಕಲಾಕೃತಿ ರಚಿಸುತ್ತಿದ್ದು ಯಾರ ಪ್ರೇರಣೆಯಿಂದ ಸಾಮಾಜಿಕ ಬದುಕಿನಲ್ಲಿ ದೊಡ್ಡ ಕಲಾವಿದರಾದರು ಯಾರ ಪ್ರಭಾವದಿಂದ ಎಂಬುದರ ಕುರಿತು ಹಿರೇಮಠರು ಅಧ್ಯಯನಕೊಳಪಡಿಸಿದ್ದಾರೆ. ರೇಖಾ ಚಿತ್ರಗಳನ್ನು ಗಮನಿಸಿದಾಗ ಕೆಕೆ ಹೆಬ್ಬಾರ ಪ್ರಭಾವಕ್ಕೆ ಆರ್. ಎಂ. ಹಡಪದ ಒಳಗಾಗಿದ್ದಾರೆ. ಶಿಲ್ಪಗಳನ್ನು ಗಮನಿಸಿದಾಗ ಪ್ರಾಶಾತ್ಯರ ಶಿಲ್ಪ ಕಲಾವಿದರ ಪ್ರಭಾವಕ್ಕೆ ಒಳಗಾಗಿದ್ದಾರೆ ಎಂದು ಡಾ. ಸಿದ್ದಲಿಂಗ್ ಸ್ವಾಮಿ ಹಿರೇಮಠರು[೨೯] ಕಲಾಕೃತಿಗಳ ತಂತ್ರಗಾರಿಕೆ ಶೈಲಿ ಸಾಮಾಜಿಕ ಪ್ರಜ್ಞೆಯ ಕುರಿತು ಉತ್ತಮವಾದ ವಿಷಯಗಳನ್ನು ಚರ್ಚಿಸಿದ್ದಾರೆ. ಈ ಮಹಾಗ್ರಾಂಥವು ನಾಡೋಜ ಆರ್. ಎಂ. ಹಡಪದರವರ ಸಮಗ್ರವಾದ ಕಲಾಬದುಕು ಕುರಿತು ಕಲಾಕೃತಿಯನ್ನು ಒಳಗೊಂಡ ಗ್ರಂಥವಾಗಿದೆ ಮತ್ತು ಎಲ್ಲ ಗ್ರಂಥಕಿಂತ ವಿಭಿನ್ನವಾಗಿದೆ.

ಅಪ್ರಕಟಿತ ಚಿತ್ರಕಲಾ ಸಾಹಿತ್ಯ ಗ್ರಂಥಗಳು :

ಚಿತ್ರಕಲಾ ಸಾಹಿತ್ಯಕ್ಕೆ ಸಂಬಂಧಿಸಿದ ಉತ್ತಮವಾದ ಗ್ರಂಥಗಳಿದ್ದು ಅವು ಪ್ರಕಟಣೆಯಾಗಿಲ್ಲ. ಡಾ. ಶಶಿಕಲಾ ಹೂಗಾರವರ ಪಿ.ಹೆಚ್.ಡಿ ಮಹಾಪ್ರಂಬಂಧ ಕರ್ನಾಟಕ ತೊಗಲುಗೊಂಬೆ ಕಲೆ ಶ್ರೀ ಸಿ.ಡಿ. ಜೆಟ್ಟೆಣ್ಣವರ ರವರು ಎಂ.ಫಿಲ್. ಪದವಿಗಾಗಿ ಸಾದರ ಪಡಿಸಿದ ಡಾ. ಎಂ.ವ್ಹಿ. ವಿಣಜಿಗಿಯವರ

೨೯. ಡಾ. ಸಿದ್ದಲಿಂಗಸ್ವಾಮಿ ಹಿರೇಮಠ ಕಲಾ ಅನ್ವಷಕ ಆರ್.ಎಂ. ಹಡಪದ–ಪು.ಸಂ. ೩೨೩

ಜೀವನ ಮತ್ತು ಕಲಾಕೃತಿಗಳು ನವಾಜಿ ಜಮಾದಾರ ರವರು ಎಂಫಿಲ್ ಪದವಿಗಾಗಿ ಸಾದರಪಡಿಸಿದ ಕಲಾವಿದ ಸಿ.ಎನ್. ಪಾಟೀಲರವರ ಕಲಾಬದುಕು ಮತ್ತು ಕಲಾಕೃತಿಗಳು ಶಶಿಕಾಂತ ಬಸರಿಕಟ್ಟಿಯವರ "ಕಲಘಟಗಿ ಕಲೆ" ಎಂಫಿಲ್ ಪ್ರಬಂಧ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದ ಪ್ರಬಂಧವಾಗಿದೆ. ಇವುಗಳು ಗದಗ ಜಿಲ್ಲೆಯ ಕಲಾವಿದರ ಕಲಾಸಾಹಿತ್ಯ ಗ್ರಂಥವಾಗಿದ್ದು ಇನ್ನುವರೆಗೆ ಪ್ರಕಟಗೊಂಡಿಲ್ಲ.

ಬಿ.ಎಲ್. ಲಮಾಣಿ ರವರ ಲಂಬಾಣಿ ಜನಾಂಗದ ಕಲಾತ್ಮಕ ಉಡುಗೆ ತೊಡುಗೆಗಳು ಸ್ನಾಥಕೋತ್ತರ ಪದವಿಗಾಗಿ ಸಾದರಪಡಿಸಿದ ಲಘು ಸಂಶೋಧನಾ ಪ್ರಂಬಂಧ ಪಿ.ಬಿ. ಬಂಡಿಯವರ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾ ಮಂದಿರದ ಕೊಡುಗೆ ಸ್ನಾತಕೋತ್ತರ ಪದವಿಗಾಗಿ ಸಾದರಪಡಿಸಿದ ಲಘು ಸಂಶೋಧನಾ ಪ್ರಬಂಧ ಎನ್.ಟಿ. ಮಾಳವದಕರ ರವರ ಕಲಾವಿದ ಸುರೇಶ ಮ. ಕುಲಕರ್ಣಿಯವರ ಕಲಾ ಬದುಕು ಮತ್ತು ಕಲಾಕೃತಿಗಳು ಸಂಗಮೇಶ ಎನ್ ಹರ್ಲಾಪೂರರವರ ಕಲಾವಿದ ಕಲಾವಿದ ಸಿ.ಎನ್.ಪಾಟೀಲರವರ ಬದುಕು ಮತ್ತು ಕಲಾಕೃತಿಗಳು ಮುಂತಾದ ಅನೇಕ ಗ್ರಂಥಗಳು ಸ್ನಾತಕೋತ್ತರ ಪದವಿಗಾಗಿ ಕನ್ನಡವಿಶ್ವವಿದ್ಯಾಲಯ ಹಂಪಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಾದರಪಡಿಸಿದ್ದು ಅವುಗಳಲ್ಲಿ ಅಧ್ಯಯನದ ವ್ಯಾಪ್ತಿ ಬಹಳ ದೊಡ್ಡದಾಗಿರುವುದರಿಂದ ಕೆಲವು ಗ್ರಂಥಗಳ ಕುರಿತು ಈ ಕೆಳಗಿನಂತೆ ಚರ್ಚಿಸಲಾಗಿದೆ.

೧. ಕರ್ನಾಟಕದ ತೊಗಲುಗೊಂಬೆ ಚಿತ್ರಕಲೆ ಸಂಶೋಧಕರು : ಡಾ॥ ಶಶಿಕಲಾ ಹೂಗಾರರವರು[೩೦]

ಈ ಪ್ರಬಂಧವನ್ನು ಡಾ. ಎಸ್.ಸಿ. ಪಾಟೀಲರವರ ಮಾರ್ಗದರ್ಶನದಲ್ಲಿ ಡಾ. ಶಶಿಕಲಾ ಹೂಗಾರರವರ ಸಂಶೋಧನೆಯನ್ನು ಮಾಡಿದ್ದು ಇದರಲ್ಲಿ ಒಟ್ಟು ಎಂಟು ಅಧ್ಯಾಯಗಳನ್ನು ಮಾಡಿ ವಿಂಗಡಿಸಿದ್ದಾರೆ. ಅಧ್ಯಾಯ ಒಂದರಲ್ಲಿ ಅಧ್ಯಾಯನದ ಉದ್ದೇಶ, ಸ್ವರೂಪ ಮತ್ತು ವೈಧಾನಿಕತೆಯ ಕುರಿತು ವಿವರಿಸಿದ್ದಾರೆ. ಅಧ್ಯಾಯ : ಎರಡರಲ್ಲಿ ತೊಗಲುಗೊಂಬೆ ಚಿತ್ರಕಲೆಯ ಚರಿತ್ರೆ ನೆಲೆ ಹಿನ್ನೆಲೆಯ ಕುರಿತು ಸವಿಸ್ತಾರವಾಗಿ ವಿವರಿಸಿದ್ದಾರೆ. ಮೂರನೆಯ ಅಧ್ಯಾಯದಲ್ಲಿ ತೊಗಲುಗೊಂಬೆ ಚಿತ್ರ-ರಚನೆ ಕುರಿತು ಪರಿಕರಗಳು ಮತ್ತು ವಿಧಿ-ವಿಧಾನಗಳ ಕುರಿತು ಚರ್ಚಿಸಿದ್ದಾರೆ ಅಧ್ಯಾಯ ನಾಲ್ಕರಲ್ಲಿ ತೊಗಲುಗೊಂಬೆ ಚಿತ್ರಗಳ ಅಂತರ್ಯ, ವಿನ್ಯಾಸ ಮತ್ತು ಸಂಯೋಜನೆಯ ಕುರಿತು ವರ್ಗಿಕರಣ ಮಾಡಿ, ಧಾರ್ಮಿಕ ಚಿತ್ರಗಳು ಧಾರ್ಮಿಕೇತರ ಚಿತ್ರಗಳು ಎಂದು ವಿವರಿಸಿದ್ದಾರೆ. ಐದನೆಯ ಅಧ್ಯಾಯದಲ್ಲಿ ತೊಗಲುಗೊಂಬೆ ಚಿತ್ರಕಲೆಯ ಪ್ರಾಂತಿಯ ಭೇದ ಪ್ರಭಾವ ಮತ್ತು ಶೈಲಿಯ ಕುರಿತು ಚರ್ಚಿಸಿದ್ದಾರೆ ಅಧ್ಯಾಯ ಆರು ಇದರಲ್ಲಿ ತೊಗಲುಗೊಂಬೆ ಚಿತ್ರಕಲೆಯ ಪ್ರದರ್ಶನದ ಹಿನ್ನೆಲೆ ಮತ್ತು ಕೌಶಲ್ಲಗಳ ಕುರಿತು ತೊಗಲುಗೊಂಬೆ ಕಲಾಪ್ರದರ್ಶನ ಕಲಾವಿದ ತನ್ನ ಹಿನ್ನೆಲೆ ಸಂಗೀತ ಸಂಭಾಷಣೆಯ ಮೂಲಕ ಮತ್ತು ತನ್ನ ಕೈಚಳಕದಿಂದ ತೊಗಲು ಗೊಂಬೆ ಆಟ ಆಡಿಸುವ ಕುರಿತು ವಿವರಿಸಿದ್ದಾರೆ. ಅಧ್ಯಯ ಏಳರಲ್ಲಿ ತೊಗಲುಗೊಂಬೆ ಚಿತ್ರಕಲೆಯ ಕಲಾ ವಿದರ ಮತ್ತು ಪ್ರಸ್ತುತ ಸ್ಥಿತಿ-ಗಿತಿಯ ಕುರಿತು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಿ ಚರ್ಚಿಸಿದ್ದಾರೆ ಅಧ್ಯಾಯನಂತರದಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಮಹಾಪ್ರಬಂಧದ ಎಲ್ಲ ಅಧ್ಯಾಯಗಳ ಸಮೀಕ್ಷೆಯಗಳು ಮಾಡಿ ಅವುಗಳ ಫಲಿತಗಳನ್ನು ಚರ್ಚಿಸಿ ವಿವರಿಸಲಾಗಿದೆ.

೩೦. ಡಾ. ಶಶಿಕಲಾ ಹೊಗಾರ ಕರ್ನಾಟಕದ ತೊಗಲುಗೊಂಬೆ ಕಲೆ

ಒಟ್ಟಾರೆ ಈ ಮಹಾಪ್ರಬಂಧವು ಕರ್ನಾಟಕದ ತೊಗಲು ಗೊಂಬೆಗಳ ಕುರಿತು ಅವುಗಳ ಹಿನ್ನೆಲೆಯ ಕುರಿತು ಪರಿಕರಗಳ ಕಲಾವಿದರ ಕುರಿತು ಸಮಗ್ರವಾದ ವಿಷಯವನ್ನು ಡಾ॥ ಶಶಿಕಲಾ ಹೂಗಾರರವರು ಉತ್ತಮವಾದ ಸಂಶೋಧನಾ ಪ್ರಬಂಧನವನ್ನು ಸಮಗ್ರವಾಗಿ ಚರ್ಚಿಸಿದ್ದಾರೆ.

೨. ಕಲಾವಿದ ಡಾ. ಎಂ.ವ್ಹಿ. ಮಣಜಗಿಯವರ ಜೀವನ ಮತ್ತು ಕಲಾಕೃತಿಗಳು[೩೧]

ಈ ಸಂಶೋಧನಾ ಗ್ರಂಥವನ್ನು ಶ್ರೀ ಸಿ.ಡಿ. ಜೆಟ್ಟೆಣ್ಣವರವರು ಎಂ.ಫಿ.ಎಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ೨೦೦೫ ರಂದು ಸಾದರಪಡಿಸಿದ್ದಾರೆ. ಮಿಣಜಗಿಯವರ ಜೀವನ ಕುರಿತು ಬಾಲ್ಯ ಪರಿಸರ, ವಿಧ್ಯಾಭ್ಯಾಸಗಳ ಕುರಿತು, ಸಮಗ್ರವಾಗಿ ಬರೆದಿದ್ದಾರೆ. ಮಿಣಜಗಿಯರು ಜೆ.ಜೆ. ಕಲಾ ಶಾಲೆಯಲ್ಲಿ ಕಲಿತ ಕುರಿತು ಅವರು ರಚಿಸಿದ ಅನೇಕ ಕಲಾಕೃತಿಗಳ ಕುರಿತು ಚರ್ಚಿಸಿದ್ದಾರೆ. ಮಿಣಜಿಗಿಯವರ ಕಲಾಕೃತಿಗಳ ಮೇಲೆ ಬಿದ್ದ ಪ್ರಭಾವ ಪ್ರೇರಣೆಯ ಕುರಿತು ಚರ್ಚಿಸಿದ್ದಾರೆ. ಚೆಟ್ಟೆಣ್ಣವರರವರು ಮಿಣಜಿಯವರ ಉತ್ತಮವಾದ ಕಲಾಕೃತಿಗಳ ಛಾಯಾಚಿತ್ರಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಂಡಿದ್ದಾರೆ. ಡಾ ಮಡಿವಾಳಪ್ಪ ಮಿಣಜಿಯವರ ವೃತ್ತಿ ಜೀವನ ಕುರಿತು ವಿಜಯ ಕಲಾ ಲಲಿತ ಕಲಾ ಮಹಾವಿದ್ಯಾಲಯ ಹುಬ್ಬಳ್ಳಿ ಇದನ್ನು ಯಾವ ರೀತಿಯಲ್ಲಿ ಪರಿಶ್ರಮ ಪಟ್ಟು ಕಟ್ಟಿ ಬೆಳಿಸಿದರು ಎಂಬುದರ ಕುರಿತು ಸವಿಸ್ತಾರವಾಗಿ ವಿಸ್ತರಿಸಿದ್ದಾರೆ.

ಸಿ.ಡಿ. ಜೆಟ್ಟಣ್ಣವರರವರು ಡಾ. ಎಂ.ವ್ಹಿ. ಮಿಣಜಗಿಯವರ ಸಮಗ್ರವಾದ ವಿಷಯನ್ನೊಳಗೊಂಡು ಉತ್ತಮವಾದ ಜೀವನ ಚರಿತ್ರೆಯನ್ನು ಚರ್ಚಿಸಿ ಅಭಿವ್ಯಕ್ತ ಗೊಳಿಸಿದ್ದಾರೆ ಮತ್ತು ಪ್ರತಿಯೊಂದು ಅಧ್ಯಯಕ್ಕೆ ಸಂಬಂಧಿಸಿದ ವಿಷಯಗಳ ಅಣುಗುಣವಾಗಿ ಛಾಯಾ ಚಿತ್ರವನ್ನು ಅಧ್ಯಯದಲ್ಲಿ ಅಳವಡಿಸಿ ದಾಖಲಿಕರಣಮಾಡಿದ್ದಾರೆ. ಡಾ. ಎಸ್.ಸಿ. ಪಾಟೀಲ ಮಾರ್ಗದರ್ಶದಲ್ಲಿ ಮಾಡಿದ ಉತ್ತಮವಾದ ಎಂ.ಫಿಲ್ ಪದವಿಯ ಗ್ರಂಥ ಇದಾಗಿದೆ.

೩. ಲಂಬಾಣಿ ಜನಾಂಗದ ಕಲಾತ್ಮಕ ಉಡಿಗೆ ತೊಡಿಗೆಗಳು[೩೨]

ಈ ಪ್ರಬಂದವನ್ನು ಒಟ್ಟು ಏಳು ಅಧ್ಯಾಯಗಳನ್ನು ಮಾಡಿ ವಿವರಿಸಿದ್ದಾರೆ. ಅಧ್ಯಾಯ ಒಂದರಲ್ಲಿ ಅಧ್ಯಯದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯ ಕುರಿತು ವಿವರಿಸಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಲಂಬಾಣಿಗರ ಹಿನ್ನಲೆ ಮತ್ತು ಒಳಬೇದ ಪಂಗಡ, ಲಂಬಾಣಿ ಪದದ ಅರ್ಥ ಧಾರ್ಮಿಕತೆಯ ಕುರಿತು ವಿವರಿಸಿದ್ದಾರೆ ಅಧ್ಯಾಯ ಮೂರರಲ್ಲಿ ಲಂಬಾಣಿಗರ ಕಲಾತ್ಮಕ ಉಡುಗೆ ಬಗ್ಗೆ ಉಪಯೋಗಿಸುವ, ಉಡುಪುಗಳನ್ನು ಧರಿಸುವ ಹಿನ್ನಲೆಯ ಕುರಿತು ಚರ್ಚಿಸಿದ್ದಾರೆ ನಾಲ್ಕನೆಯ ಅಧ್ಯಾಯದಲ್ಲಿ ಲಂಭಾಣಿ ಜನಾಂಗ ಧರಿಸುವ ಆಭರಣಗಳ ಹಿನ್ನೆಲೆ, ಕೈ ಆಭರಣ ಕೊರಳ ಆಭರಣ, ತೊಳ ಆಭರಣ ಕೇಶಾಲಂಕಾರ ಆಭರಣಗಳ ಕುರಿತು ಮತ್ತು ವರ್ತಮಾನ ಆಭರಣಕ್ಕೆ ಏನು ಹೇಳುತ್ತಾರೆ ಎಂಬುದರ ಕುರಿತು ಈ ಅಧ್ಯಯದಲ್ಲಿ ವಿವರಿಸಿದ್ದಾರೆ. ಅಧ್ಯಾಯ ಐದರಲ್ಲಿ ಲಂಬಾಣಿಗರು ಯಾವ ಸಂದರ್ಭದಲ್ಲಿ

---

೩೧. ಶ್ರೀ ಸಿ.ಡಿ. ಜೆಟ್ಟಣ್ಣವರ ಡಾ. ಎಂ.ವ್ಹಿ. ಮಿಣಜಗಿ ಜೀವನ ಮತ್ತು ಕಲಾ ಬದುಕು

೩೨. ಬಿ.ಎಲ್. ಲಮಾಣಿ ಲಂಬಾಣಿ ಜನಾಂಗದ ಕಲಾತ್ಮಕ ಉಡುಗೆ ತೊಡುಗೆಗಾಗಿ ೨೦೦೬

ಈ ಕಿರು ಶೋಧ ಪ್ರಬಂಧವನ್ನು ಪ್ರಕಾಶ ಬಿ ಬಂಡಿಯವರು ಗದುಗಿನ ವಿಜಯ ಕಲಾಮಂದಿರ ಬೆಳವಣಿಗೆ ಚಿತ್ರಕಲಾ ಕ್ಷೇತ್ರಕ್ಕೆ ವಿಜಯ ಕಲಾ ಮಂದಿರ ನೀಡಿದ ಕೊಡುಗೆ ಅಪಾರವಾದರು ಖ್ಯಾತ ಕಲಾ ಶಿಕ್ಷಕರು ಕಲಾವಿದರು ಇಲ್ಲಿ ಸೇವೆ ಮಾಡಿದ್ದಾರೆ. ಇಲ್ಲಿ ಕಲಿತ ವಿದ್ಯಾರ್ಥಿಗಳ ಸಾಧನೆಯನ್ನು ಉತ್ತಮರೀತಿಯಲ್ಲಿ ಚರ್ಚಿಸಿದ್ದಾರೆ. ಗದಗ ಜಿಲ್ಲೆಯ ವಿಜಯಕಲಾಮಂದಿರ ಕಲಾಕ್ಷೇತ್ರಕ್ಕೆ ತನ್ನದೆ ಆದ ಕೊಡುಗೆ ನೀಡಿದ ಕುರಿತು ಉತ್ತಮವಾದ ವಿಷಯಗಳನ್ನು ಬಂಡಿಯವರು ಅಭಿವ್ಯಕ್ತಿಗೊಳಸಿದ್ದಾರೆ.

೫. ಕಲಾವಿದ ಡಾ. ಎಸ್.ಸಿ. ಪಾಟೀಲ್ ಮತ್ತು ದೃಶ್ಯಕಲಾ ಕ್ಷೇತ್ರ ಒಂದು ಸಂಕಥನ [೩೪]

ಈ ಪ್ರಬಂಧದಲ್ಲಿ ಎಂಟು ಅಧ್ಯಾಯಗಳನ್ನು ಮಾಡಿ ವಿಶ್ಲೇಶಿಸಲಾಗಿದೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಕುರಿತು ವಿವರಿಸಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಡಾ. ಎಸ್.ಸಿ. ಪಾಟೀಲರ ಬಾಲ್ಯ ಜೀವನ, ಪರಿಸರ ಮತ್ತು ಶಿಕ್ಷಣ ಕುರಿತು ಸವಿಸ್ತಾರವಾಗಿ ಈ ಅಧ್ಯಾಯದಲ್ಲಿ ಡಾ. ಎಸ್.ಸಿ.ಪಾಟೀಲರು ವಿಜಯಕಲಾಮಂದಿರದಲ್ಲಿ ಚಿತ್ರಕಲಾ ಅಭ್ಯಾಸ ಮಾಡಿದ ಕುರಿತು ಬಾಲ್ಯಜೀವನದಲ್ಲಿರುವ ರೀತಿ ವಿವಿಧ ಘಟ್ಟಗಳನ್ನು ಕುರಿತು ಅಧ್ಯಯನ ನಡೆಸಲಾಗಿದೆ. ಅಧ್ಯಾಯ ಮೂರರಲ್ಲಿ ಪಾಟೀಲರು ಅಧ್ಯಾಪಕ ವೃತ್ತಿಗೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸೇರುವ ಪೂರ್ವದಲ್ಲಿ ಮತ್ತು ನಂತರದ ಅಧ್ಯಾಪಕ ವೃತ್ತಿ ಮತ್ತು ವಿವಿಧ ರೀತಿಯ ಆಡಳಿತ ನಿರ್ವಹಣೆಯ ಕುರಿತು. ಆಡಳಿತಗಾರರಾಗಿ ಬದಲಾವಣೆಗಳ ಕುರಿತು ಈ ಅಧ್ಯಯನದಲ್ಲಿ ಅಧ್ಯಯನ ಮಾಡಿದ್ದಾರೆ. ಅಧ್ಯಯ ನಾಲ್ಕರಲ್ಲಿ ಡಾ. ಎಸ್.ಸಿ. ಪಾಟೀಲರು ಕೈಗೊಂಡ ಸಂಶೋಧನೆ ಮತ್ತು ಅವರು ರಚಿಸಿದ ಸಾಹಿತ್ಯ ಕೃತಿಗಳ ಕುರಿತು, ಕನ್ನಡ ವಿಶ್ವವಿದ್ಯಾಲಯಕ್ಕೆ ಸೇರಿದ ಮೇಲೆ ಸಂಶೋಧನಾಕಾರ್ಯ ವಿವರಸಿದ ಕುರಿತು ಎಂ.ಫಿಲ್. ಮತ್ತು ಪಿಹೆಚ್.ಡಿ. ಮಾರ್ಗದರ್ಶನ ಮಾಡಿರುವುದು ಈ ಅಧ್ಯಾಯದಲ್ಲಿ ಅಧ್ಯಯನಮಾಡಿದ್ದಾರೆ. ಅಧ್ಯಾಯ ಐದರಲ್ಲಿ ಡಾ. ಎಸ್.ಸಿ. ಪಾಟೀಲರು ರಚಿಸಿದ ಕಲಾಕೃತಿಗಳ ಕುರಿತು ಮಾಧ್ಯಮ ವಸ್ತು ವಿಷಯಗಳ ಕುರಿತು ಶಿಲ್ಪಕಲಾಕೃತಿಗಳ ಕುರಿತು ಸ್ಥೂಲವಾಗಿ ವಿವರಿಸಿದ್ದಾರೆ. ಅಧ್ಯಾಯ ಆರರಲ್ಲಿ ಡಾ. ಎಸ್.ಸಿ. ಪಾಟೀಲರ ಸಾಹಿತ್ಯ ಮತ್ತು ದೃಶ್ಯಕಲೆಗಳ ಮೇಲಾದ ಪ್ರಭಾವ ಪ್ರೇರಣೆಗಳ ಕುರಿತು ಅಧ್ಯಯನ ಮಾಡಿದ್ದಾರೆ. ಏಳನೆಯ ಅಧ್ಯಾಯದಲ್ಲಿ ದೃಶ್ಯಕಲಾ ಕ್ಷೇತ್ರದಲ್ಲಿ ಕೈಗೊಂಡ ವಿವಿಧ ರೀತಿಯ ಕಲಾ ಚಟುವಟಿಕೆಗಳ ಕುರಿತು ಕಲಾ ಪ್ರದರ್ಶನ ಕಲಾ ಶಿಬಿರ ವಿಚಾರ ಸಂಕೀರಣ ಕಮ್ಮಟ, ಪ್ರಾತ್ಯಕ್ಷಿಕೆ ಸಮ್ಮೇಳನಗಳ ಸಂಘಟನೆಗಳ ಕುರಿತು ಚರ್ಚಿಸಿದ್ದಾರೆ. ಅಧ್ಯಾಯ ಎಂಟರಲ್ಲಿ ಸಮಾರೋಪ ಮತ್ತು ಎಂಟು ಅಧ್ಯಾಯಗಳ ಫಲಿತಗಳ ಕುರಿತಾದ ಸಮೀಕ್ಷೆಯನ್ನು ಒಳಗೊಂಡಿದೆ.

ಒಟ್ಟಾರೆ ಈ ಕಿರುಸಂಶೋಧನಾ ಪ್ರಬಂಧವು ಡಾ. ಎಸ್.ಸಿ.ಪಾಟೀಲರವರ ಪರಿಚಯಾತ್ಮಕವಾದ ಸಂಕಥನವಾಗಿದೆ.

---

೩೪. ಡಾ. ಮೋಹನರಾವ. ಬಿ. ಪಂಚಾಳ ಡಾ. ಎಸ್.ಸಿ. ಪಾಟೀಲ ಮತ್ತು ದೃಶ್ಯ ಕಲಾಕ್ಷೇತ್ರ ಒಂದು ಸಂಕಥನ ೨೦೦೮

೬. ಕರ್ನಾಟಕದ ಸೃಜನ ಶೀಲ ಕಲಾವಿದರು[೩೫]

ಈ ಲಘು ಸಂಶೋಧನಾ ಪ್ರಬಂಧದ ಈ ನಾಡಿನ ಹಿರಿಯ ಕಲಾವಿದರಾದ ಡಾ. ಜೆ.ಎಸ್. ಖಂಡೆರಾವ್, ಅಶೋಕ ಅಕ್ಕಿ ಜಿ.ಎಸ್. ಶೈಣ್ಯೆ ಎಂ.ಎಸ್.ಏಣಿ ಶ್ರೀ ಆರ್. ವ್ಹಿ.ಹೆಗಡೆ ಇವರ ಕಲಾಬದುಕು ಕುರಿತು ಕಲಾಕೃತಿ ಶೈಲಿಯ ಕುರಿತು ಶರಣಪ್ಪ ವಿ.ಎಚ್. ಅಭಿವ್ಯಕ್ತಗೊಳಿಸಿದ್ದಾರೆ.

೧. ಡಾ. ಜೆ.ಎಸ್. ಬಂಡೆರಾವ್ : ಅವರ ಬಾಲ್ಯ ಜೀವನ ಮತ್ತು ಕಲಾಶೈಲಿ ತಂತ್ರಗಾರಿಕೆ ಖಂಡೆರಾವ್‌ರವರ ಕಲಾಕೃತಿಯು ಕಿಟಕಿ ವಿಷಯದ ಮೇಲೆ ಹೆಚ್ಚಾಗಿ ಮಾಡಿರುವುದು ಕಂಡು ಬರುತ್ತದೆ. ಈ ನಾಡಿನ ಹಿರಿಯ ಕಲಾ ವಿದರಾಗಿ ರಾಜ್ಯ ರಾಷ್ಟ್ರಮಟ್ಟದ ಕಲಾವಿದರಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ಉತ್ತಮವಾದ ಕೆಲಸ ಮಾಡಿದ್ದಾರೆ. ಇವರೊಬ್ಬ ಉತ್ತಮ ಅಧ್ಯಾಪಕರು ಸೃಜನಶೀಲ ಕಲಾವಿದರಾಗಿದ್ದಾರೆ ಎಂದು ವಿವರಿಸಿದ್ದಾರೆ.

೨. ಕಲಾವಿದರ ಶ್ರೀ ಜೆ.ಎಂ. ಎಸ್. ಮಣಿ : ಇವರ ಉತ್ತಮ ಕಲಾವಿದರಾಗಿ ಕಲಾ ಅದ್ಯಪಕರಾಗಿ ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದರ ಮೂಲ ಉತ್ತಮ ಶಿಕ್ಷಕರಾಗಿದ್ದಾರೆ. ಈ ಕುರಿತು ಅವರ ಕಲಾ ಕೃತಿಗಳು ತೈಲವರ್ಣದಿಂದ ಬಾದಾಮಿ ಉಮೆನ್ ಎಂಬ ಶಿರ್ಷಿಕೆಯಲ್ಲಿ ಹಲವಾರು ಕಲಾ ಕೃತಿಗಳನ್ನು ರಚಿಸಿದ್ದರ ಕುರಿತು ಕಲಾವಿದರಾಗಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಅನೇಕ ಕೆಲಸ ಮಾಡಿದರ ಕುರಿತು ಮಣಿಯವರ ಕಲಾಬದುಕಿನ ಕುರಿತು ಉತ್ತಮವಾಗಿ ವಿವರಸಿದ್ದಾರೆ.

೩. ಅಶೋಕ ಟಿ. ಅಕ್ಕಿ : ಅವರ ಬಾಲ್ಯ ಜೀವನ ಮತ್ತು ಕಲಾಶಿಕ್ಷಣವನ್ನು ಮತ್ತು ಕಲಾಕೃತಿಗಳು ಕಲಾಶೈಲಿಯ ಕುರಿತು ತಿಳಿಸಿದ್ದಾರೆ. ಅಶೋಕ ಅಕ್ಕಿಯವರು. ಒಬ್ಬ ಸೃಜನಾತ್ಮಕ ಕಲಾ ವಿದರಾಗಿ ಅನೇಕ ಶೈಲಿಗಳಲ್ಲಿ ಕಲಾ ಪ್ರದರ್ಶನ ಶಿಬಿರಗಳಲ್ಲಿ ಭಾಗವಹಿಸಿದರು ಕುರಿತು ಅಕ್ಕಿಯವರ ಕಲಾಕೃತಿಯ ಶೈಲಿ ತಂತ್ರಗಾರಿಕೆಯ ಬಳಸಿದ ಬಣ್ಣಗಳು ಶರಣಪ್ಪನವರು ಉತ್ತಮರೀತಿಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

೪. ಕಲಾವಿದ ಶ್ರೀ ಜಿ.ಎಸ್. ಶೈಣ್ಯೆ : ಕಲಾವಿದ ಜೆ.ಎಸ್. ಶೈಣ್ಯೆರವರ ಬಾಲ್ಯ ಜೀವನ ಶಿಕ್ಷಣ, ಅವರು ರಚಿಸಿದ ಕಲಾಕೃತಿಗಳು ಕಲಾಕೃತಿಯಲ್ಲಿ ಕಂಡುಬರುವ ತಂತ್ರ ಶೈಲಿಗಳು ಕುರಿತಾಗಿದೆ. ಜೆ.ಎಸ್. ಶೈಣ್ಯೆಯವರು ಅನೇಕ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸುತ್ತಿದ್ದು ಜಲವರ್ಣ, ತೈಲವರ್ಣ ಕೋಲಾಜ್ ಮಾಧ್ಯಮ, ಒಟ್ಟು ಚಿತ್ರಗಳು ಶಿಲ್ಪಗಳನ್ನು ರಚನೆಯಮಾಡಿದ್ದು ಅವುಗಳ ಕುರಿತು ಚರ್ಚಿಸಿದ್ದಾರೆ. ಶ್ರೀ ಜೆ.ಎಸ್. ಶೃಶ್ಯೆಯವರು ಅನೇಕ ಕಲಾಪ್ರದರ್ಶನಗಳನ್ನು ಮಾಡಿದ್ದು ಹಲವಾರು ಕಲಾ ಶಿಬಿರಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕಾರಗಳು ಪಡೆದುಕೊಂಡು ಉತ್ತಮ ಸೃಜನಶೀಲ ಕಲಾವಿದರಾಗಿ ಸೇವೆಸಲ್ಲಿಸಿದ್ದಾರೆ. ಈ ಕುರಿತು ಈ ಸಂಶೋಧನಾ ಲಘು ಪ್ರಂಬಂಧದಲ್ಲಿ ಚರ್ಚಿಸಿದ್ದಾರೆ.

೫. ಕಲಾವಿದ ಆರ್. ವ್ಹಿ. ಹೆಗಡೆ : ಹೆಗಡೆಯವರ ಬಾಲ್ಯ ಜೀವನ ಕಲಾ ಶಿಕ್ಷಣ ಮತ್ತು ಕಲಾ ಶಿಕ್ಷಕರಾಗಿ ಸೇವೆಸಲ್ಲಿಸಿದ ಕುರಿತು ಹೆಗಡೆಯವರು ಉತ್ತಮ ಕಲಾವಿದರಾಗಿ ಅನೇಕ ಕಲಾಕೃತಿಗಳು

೩೫. ಶರಣಪ್ಪ ಬಿ. ಎಚ್. ಕರ್ನಾಟಕದ ಸೃಜನಶೀಲ ಕಲಾವಿದರು–೨೦೦೮

ರಚಿಸಿದ್ದಾರೆ ಅದರಲ್ಲಿ ಹೆಚ್ಚಾಗಿ ಭಾವಚಿತ್ರಗಳು ನೈಸರ್ಗಿಕ ಚಿತ್ರಗಳು, ಸಂಯೋಜನಾ ಚಿತ್ರಗಳನ್ನು ವಿವಿಧ ತಂತ್ರಗಾರಿಕೆಯಿಂದ ರಚಿಸಿದ್ದಾರೆ. ರೇಖಾ ಚಿತ್ರಗಳನ್ನು ಹಗಡೆಯವರು ವಿಶಿಷ್ಠರೀತಿಯಲ್ಲಿ ರಚಿಸಿದ್ದಾರೆ. ವಿವಿಧ ಮಾಧ್ಯಮಗಳಲ್ಲಿ "ತೈಲ ಜಲ, ಪೆನ್‌ಹೂಡಿ ಕಲಾ ಕೃತಿಗಳನ್ನು ರಚಿಸಿದ್ದಾರೆ. ಅವುಗಳ ಕುರಿತು, ಹಲವಾರು ಸ್ಥಳಗಳಲ್ಲಿ ಇವರ ಕಲಾಕೃತಿಗಳು ಪ್ರದರ್ಶನ ಗೊಂಡಿವೆ ಅನೇಕ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ." ಶ್ರೀ ಆರ್. ವ್ಹಿ. ಹೆಗಡೆಯವರು ಒಬ್ಬ ಉತ್ತಮ ಶಿಕ್ಷಕರಾಗಿ ಕಲಾ ವಿದರಾಗಿ ತಮ್ಮದೆ ಆದ ಶೈಲಿಯಲ್ಲಿ ಕಲಾಕೃತಿಗಳನ್ನು ರಚನೆ ಮಾಡಿ ಸೃಜನ ಶೀಲಕಲಾವಿದರಾಗಿ ಉತ್ತಮ ಸೇವೆಸಲ್ಲಿಸುತ್ತಿದ್ದಾರೆ. ಎಂದು ಉತ್ತಮ ರೀತಿಯಲ್ಲಿ ಶರಣಪ್ಪನವರು ಇಲ್ಲಿ ಚರ್ಚಿಸಿದ್ದಾರೆ.

ಒಟ್ಟಾರೆ ಈ ಲಘು ಪ್ರಂಬಂಧವು ಕರ್ನಾಟಕದ ೫ ಪ್ರಮುಖ ಸೃಜನಶೀಲ ಕಲಾವಿದರ ಪರಿಚಾವಳಿಯನ್ನು ಹೊಂದಿದ್ದು ಉತ್ತಮ ಸೃಜನಶೀಲ ಪ್ರಬಂಧ ಇದಾಗಿದೆ.

೭. ಕಲಾವಿದ ಸಿ.ಎನ್. ಪಾಟೀಲರ ಕಲೆ ಮತ್ತು ಬದುಕು[೩೬]

ಈ ಪ್ರಬಂಧವು ಹಿರಿಯ ಕಲಾವಿದರಾದ ಸಿ.ಎನ್.ಪಾಟೀಲರರವರ ಕುರಿತು ಒಟ್ಟು ಆರು ಅಧ್ಯಾಯಗಳನ್ನು ಮಾಡಿ ವಿಂಗಡಿಸಿದ್ದಾರೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸವರೂಪ, ವ್ಯಾಪ್ತಿ, ವೈಧಾನಿಕತೆ ಮತ್ತು ಆಕರ ಸಾಮಗ್ರಿಗಳ ಕುರಿತು ವಿವರಿಸಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಸಿ.ಎನ್.ಪಾಟೀಲರ ಬಾಲ್ಯ ಜೀವನ ಸಂಸ್ಕೃತಿಕ ಪರಿಸರ ಮತ್ತು ಪ್ರಾಥಮಿಕ ಪ್ರೌಢ ಮತ್ತು ಕಲಾ ಶಿಕ್ಷಣದ ಕುರಿತು. ಕಲಾ ಬದುಕಿನ ಕುರಿತು ಚರ್ಚಿಸಿದ್ದಾರೆ. ಅಧ್ಯಾಯ ಮೂರರಲ್ಲಿ ಕಲಾವಿದ ಸಿ.ಎನ್. ಪಾಟೀಲರ ವೃತ್ತಿ ಜೀವನ ಹಾಗೂ ಸಿ.ಎನ್. ಪಾಟೀಲರ ಕಲಾ ಚಟುವಟಿಕೆಗಳು ಪ್ರದರ್ಶನ ಕಲಾ ಶಿಬಿರ ಮುಂತಾದವುಗಳ ಕುರಿತು ವಿವರಿಸಿದ್ದಾರೆ. ಅಧ್ಯಾಯ ನಾಲ್ಕರಲ್ಲಿ ಪಾಟೀಲರ ಕಲಾಕೃತಿಗಳು ವಸ್ತು ವಿಷಯ ಕಲಾಕೃತಿಗಳ ಕುರಿತು ವಿವರಣೆಯನ್ನು ಮಾಡಿದ್ದಾರೆ. ಕರ್ನಾಟಕ ಏಕಿಕರಣ ಸಂದರ್ಭದಲ್ಲಿ ಭೂವನೇಶ್ವರಿಯ ಕಲಾಕೃತಿಗಳನ್ನು ರಚಿಸಿ ಕರ್ನಾಟಕ ತುಂಬ ಮೆರವಣಿಗೆ ಮಾಡಿದ್ದಾರೆ. ಈ ಕಲಾಕೃತಿಯ ಕುರಿತು ವಿವರಿಸಲಾಗಿದೆ.

ಅಧ್ಯಾಯ ಐದರಲ್ಲಿ ಸಿ.ಎನ್.ಪಾಟೀಲರ ಕಲಾಕೃತಿಗಳ ಮೇಲಾದ ಪ್ರಭಾವ ಪ್ರೇರಣೆ, ತಂತ್ರಗಾರಿಕೆ, ಶೈಲಿಗಳ ಕುರಿತು ವಿವರಿಸಲಾಗಿದೆ ನೈಸರ್ಗಿಕ ಕಲಾಕೃತಿಯಲ್ಲಿ ವಿಶಿಷ್ಠವಾದ ಬಣ್ಣಗಳನ್ನು ಹಚ್ಚುವುದರ ಮೂಲಕ ತಮ್ಮದೇ ಆದ ರೀತಿಯಲ್ಲಿ ಕಲಾಕೃತಿಗಳನ್ನು ಮಾಡಿದ್ದು ಅವುಗಳ ಕುರಿತು ಇಲ್ಲಿ ಚರ್ಚಿಸಿದ್ದಾರೆ. ಆರನೆಯ ಅಧ್ಯಾಯವು ಸಮಾರೋಪವಾಗಿದ್ದು ಅಧ್ಯಾಯಗಳಿಂದ ಪ್ರಬಂಧ ಫಲಿತಗಳನ್ನು ಗ್ರಂಥಋಣ ಕುರಿತು ವಿವರಿಸಿದ್ದಾರೆ. ಶ್ರೀ ಸಂಗಮೇಶ ಹರ್ಲಾಪೂರರವರ ಸಿ.ಎನ್. ಪಾಟೀಲರ ಕಲಾ ಮತ್ತು ಬದುಕಿನ ಹಾಗೂ ಕಲಾಕೃತಿಗಳ ತಂತ್ರಗಳ ಕುರಿತು ಸಮಗ್ರವಾದ ವಿಷಯಗಳನ್ನು ಅಧ್ಯಯಮಾಡಿ ಈ ಕಿರು ಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ. ಈ ಪ್ರಬಂಧ ಸಿ.ಎನ್. ಪಾಟೀಲರ ಕುರಿತು ಮುಂದಿನ ಪಿಳಿಗೆಗಳಿಗೆ ಬಹಳಷ್ಟು ಉಪಯುಕ್ತವಾದ ಪ್ರಬಂಧವಾಗಿದೆ.

---

೩೬. ಶ್ರೀ ಸಂಗಮೇಶ ಎನ್. ಹರ್ಲಾಪೂರ ಕಲಾವಿದ ಸಿ.ಎನ್. ಪಾಟೀಲ ಕಲೆ ಮತ್ತು ಬದುಕು.

೮. ಕಲಾ ವಿದಸುರೇಶ ವೆಂ. ಕುಲಕರ್ಣಿಯವರ ಕಲಾಬದುಕು ಮತ್ತು ಕಲಾಕೃತಿಗಳ ಒಂದು ಅಧ್ಯಯನ[೩೭]

ಈ ಪ್ರಬಂಧವನ್ನು ಉಪನ್ಯಾಸಕರಾದ ಎನ್.ಟಿ. ಮಾಳವದಕರರವರು ಕಲಾವಿದ ಸಾಹಿತಿ ಸುರೇಶ ಕುಲಕರ್ಣಿಯವರ ಕಲಾಬದುಕಿನಕುರಿತು ಒಟ್ಟು ಏಳು ಅಧ್ಯಾಯಗಳನ್ನು ಮಾಡಿ ವಿವರಿಸಿದ್ದಾರೆ. ಅಧ್ಯಾಯ ಒಂದರಲ್ಲಿ ಅಧ್ಯಾಯನದ ಉದ್ದೇಶ, ಸ್ವರೂಪ, ಮತ್ತು ವಿಧಾನಗಳ ಕುರಿತು ವಿವರಣೆ ಇದೆ. ಎರಡನೆಯ ಅಧ್ಯಾಯದಲ್ಲಿ ಸುರೇಶ ಕುಲಕರ್ಣಿಯವರ ಬಾಲ್ಯಜೀವನ ಶಿರಹಟ್ಟಿ ತಾಲೂಕಿನ ಗದಗ ಜಿಲ್ಲೆಯ ಸಂಸ್ಕೃತಿಕ ಪರಿಸರ, ಕುರಿತು ಅಧ್ಯಯನಮಾಡಿ ಚರ್ಚಿಸಿದ್ದಾರೆ. ಅಧ್ಯಾಯ ಮೂರರಲ್ಲಿ ಕುಲಕರ್ಣಿಯವರ ಕಲಾ ಶಿಕ್ಷಣ ಮತ್ತು ವೃತ್ತಿ ಜೀವನ ಕುರಿತು ವಿವರಿಸಿದ್ದಾರೆ. ಅಧ್ಯಾಯ ನಾಲ್ಕರಲ್ಲಿ ಸುರೇಶ ಕುಲಕರ್ಣಿಯವರ ಕಲಾಕೃತಿಗಳ ಕುರಿತು ವಸ್ತು ವಿಷಯ ಮತ್ತು ಕಲಾಕೃತಿಗಳ ಮೇಲಾದ ಪ್ರಭಾವ ಪ್ರೇರಣೆ ಹಾಗೂ ತಂತ್ರಗಾರಿಕೆ ಕಲಾಕೃತಿಗಳ ಶೈಲಿಯ ಕುರಿತು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ ಸುರೇಶ ಕುಲಕರ್ಣಿಯವರು ದ.ರಾ.ಬೇಂದ್ರೆಯವರ ಅನೇಕ ಕವನಗಳಿಗೆ ರೇಖಾ ಚಿತ್ರಗಳನ್ನು ಮಾಡುವುದರ ಮೂಲಕ ಜೀವತುಂಬಿದ್ದಾರೆ ಅವುಗಳಕುರಿತು ಚರ್ಚಿಸಿದ್ದಾರೆ.

ಆರನೆಯ ಅಧ್ಯಾಯದಲ್ಲಿ ಸುರೇಶ ಕುಲಕರ್ಣಿಯವರು ಮಾಡಿದ ಕಲಾ ಪ್ರದರ್ಶನ, ಭಾಗವಹಿಸಿದ ಶಿಬಿರಗಳು, ಪ್ರಾತ್ಯಕ್ಷತೆ, ಉಪನ್ಯಾಸಗಳು ಮುಂತಾದ ಕಲಾಚಟುವಟಿಕೆಗಳ ಕುರಿತು ವಿವರಣೆಯನ್ನು ಒಳಗೊಂಡಿದೆ. ಅಧ್ಯಾಯ ಏಳು ಸಮಾರೋಪವಾಗಿದ್ದು ಅಧ್ಯಾಯಗಳಿಂದ ಬಂದ ಅಂಶಗಳನ್ನು ಗ್ರಂಥ ಋಣಗಳ ಕುರಿತು ಇದರಲ್ಲಿ ಚರ್ಚಿಸಲಾಗಿದೆ. ಸುರೇಶ ಕುಲಕರ್ಣಿಯವರು ಒಬ್ಬ ಉತ್ತಮ ಕಲಾವಿದರಾಗಿ ಕಲಾ ಸಾಹಿತಿಗಳಾಗಿ ಹಲವಾರು ಕಲಾ ಚಟುವಟಿಕೆಗಳಲ್ಲಿ ಭಾಗವಹಿಸಿದ ಕುರಿತು ಕಲಾ ಬದುಕಿನ ಕುರಿತು ಸಮಗ್ರವಾದ ವಿಷಯಗಳನ್ನು ಶ್ರೀ ಎನ್.ಟಿ. ಮಾಳದಕರರವರು ಈ ಕಿರೂ ಪ್ರಬಂಧದಲ್ಲಿ ವಿಷಯವನ್ನು ವಿಶ್ಲೇಷಣೆಮಾಡಿದ್ದಾರೆ ಕಲಾ ಇತಿಹಾಸ ಕುರಿತು ಕಲಾವಿದರ ಬದುಕಿನ ಕುರಿತು ಇರುವ ಉತ್ತಮ ಕಿರುಪ್ರಬಂಧ ಇದಾಗಿದೆ.

೯. ಅಂಚೆ ಚೀಟಿಯ ಕಲಾ ವೈಭವ[೩೮]

ಈ ಪ್ರಬಂಧದಲ್ಲಿ ವಿಲ್ಸನ್ ಎಸ್. ಸೋನಘರರವರು ಎಂಟು ಅಧ್ಯಾಯಗಳನ್ನು ಮಾಡಿ ವಿವರಿಸಿದ್ದಾರೆ ಅಧ್ಯಾಯ ಒಂದರಲ್ಲಿ ಪ್ರಬಂಧದ ಪರಿಚಯ ಅಂಚೆಪತ್ರಗಳನ್ನು ಹಂಚುವರ ಕುರಿತು ವಿವರಿಸಿದ್ದಾರೆ. ಅಧ್ಯಾಯ ಎರಡರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯ ಕುರಿತು ಬರೆಯಲಾಗಿದ್ದು ಅಂಚೆ ಚೀಟಿಯ ಹುಟ್ಟು ಮತ್ತು ಬೆಳವಣಿಗೆ ಸಮಾಜ ಸೇವೆಯಲ್ಲಿ ಅಂಚೆಯ ಪಾತ್ರ, ಭಾರತೀಯ ಮತ್ತು ಪಾಶ್ಚಾತ್ಯ ಅಂಚೆ ಚಿಟಿಗಳು. ಅಂಚೆ ಚೀಟಿಯ ಸಂಗ್ರಹ ಮತ್ತು ಪ್ರದರ್ಶನ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅಂಚೆ ಚೀಟಿಗಳ ಕುರಿತು ಅಧ್ಯಯನದ ಸ್ವರೂಪವಿದೆ. ಅಧ್ಯಾಯ ಮೂರರಲ್ಲಿ ಅಂಚೆ ಚೀಟಿಯ ಹುಟ್ಟು ಮತ್ತು ಬೆಳವಣಿಗೆಯ ಕುರಿತು ಅಂಚೆ ಇಲಾಖೆಯ ಪ್ರಾರಂಭದಿಂದ ಹಂತ ಹಂತವಾಗಿ ಹೇಗೆ ಬೆಳವಣಿಗೆಯಾಗುತ್ತ ಬಂತ್ತು

೩೭. ಎನ್.ಟಿ.ಮಾಳದಕರ, ಕಲಾವಿದ, ಸುರೇಶ ಕುಲಕರ್ಣಿಯವರ ಕಲಾ ಬದುಕು, ಮತ್ತು ಕಲಾಕೃತಿಗಳು ಒಂದು ಅಧ್ಯಾಯನ

೩೮. ವಿಲನ್ಸ್ ಎಸ್. ಸೋನಾಘರ–ಅಂಚೆ ಚೀಟಿಯ ಕಲಾ ವೈಭವ–೨೦೦೮

ಎಂಬುದರ ಕುರಿತು ಈ ಅಧ್ಯಾಯದಲ್ಲಿ ವಿವರಣೆ ಮಾಡಿದ್ದಾರೆ. ಅಧ್ಯಾಯ ನಾಲ್ಕರಲ್ಲಿ ಸಮಾಜ ಸೇವೆಯಲ್ಲಿ ಅಂಚೆಯ ಪಾತ್ರ ಅಂಚೆ ಸಂಸ್ಥೆಯು ಪ್ರತಿಯೊಂದು ಮನೆಮನೆಗೆ ಪತ್ರಗಳನ್ನು ತಲುಪಿಸುವ ಮೂಲಕ ಸಾಮಾಜಿಕ ಕೆಲಸಗಳನ್ನು ಮಾಡಿದ ಕುರಿತು ಪ್ರತಿಯೊಂದು ವಿಷಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಐದನೆಯ ಅಧ್ಯಾಯದಲ್ಲಿ ಭಾರತೀಯ ಮತ್ತು ಪಾಶ್ಚಾತ್ಯರ ಅಂಚೆ ಚೀಟಿಗಳ ಕುರಿತು ವಿವರಿಸಿದ್ದಾರೆ. ಅಧ್ಯಾಯ ಆರರಲ್ಲಿ ಅಂಚೆ ಚೀಟಿಯ ಸಂಗ್ರಹ ಮತ್ತು ಪ್ರದರ್ಶನ ಕುರಿತು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ ಅಧ್ಯಾಯ ಏಳರಲ್ಲಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅಂಚೆ ಚೀಟಿಗಳು ಅಮೇರಿಕಾ, ಇಂಗ್ಲೆಂಡ್, ಜಪಾನ, ರಷಿಯಾ, ಚೀನಾ ಮುಂತಾದ ರಾಷ್ಟ್ರಗಳಲ್ಲಿರುವ ಅಂಚೆ ಚೀಟಿಯ ಕುರಿತು ವಿವರಿಸಿದ್ದಾರೆ. ಎಂಟನೆಯ ಅಧ್ಯಾಯ ಉಪಸಂಹಾರವಾಗಿದ್ದು ಇದರಲ್ಲಿ ಎಲ್ಲ ಅಧ್ಯಾಯಗಳ ಫಲಿತಗಳನ್ನು ವಿವರಸಿದ್ದಾರೆ. ಈ ಕಿರು ಪ್ರಬಂಧದಲ್ಲಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಅಂಚೆ ಚೀಟಿಗಳ ಛಾಯಾ ಚಿತ್ರಗಳನ್ನು ಅಳವಡಿಸಿ ಅಂಚೆ ಚೀಟಿಯ ಕುರಿತು ಉತ್ತಮವಾಗಿ ವಿಷಯಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ.

೧೦. "ಚಿತ್ರಕಲಾ ಕ್ಷೇತ್ರಕ್ಕೆ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಕೊಡುಗೆ"[೩೯]

ಈ ಕಿರು ಸಂಶೋಧನಾ ಪ್ರಬಂಧವನ್ನು ಶ್ರೀ ಎಂ.ಆರ್. ಹೆಬ್ಬಳ್ಳಿಯವರು ಎಂ.ವ್ಹಿ.ಎ. ಸ್ನಾತಕೋತ್ತರ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾಧರಪಡಿಸಿದ ಪ್ರಬಂಧವಾಗಿದೆ. ಇದರಲ್ಲಿ ಒಟ್ಟು ಆರು ಅಧ್ಯಾಯಗಳನ್ನು ಮಾಡಿ ಚರ್ಚಿಸಿದ್ದಾರೆ. ಅಧ್ಯಾಯ ಒಂದರಲ್ಲಿ ಅಧ್ಯಾಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಶಿಷ್ಟ್ಯ ಕುರಿತು ಚರ್ಚಿಸಿದ್ದಾರೆ. ಅಧ್ಯಾಯ ಎರಡರಲ್ಲಿ ಚಿತ್ರಕಲಾ ಶಾಲೆಗಳು ಯಾವರೀತಿಯಲ್ಲಿ ಹಂತವಾಗಿ ಬೆಳೆದು ಬಂದವು ಎಂಬುದರ ಕುರಿತು ಮತ್ತು ಚಿತ್ರಕಲಾ ಶಾಲೆಯ ಹಿನ್ನೆಲೆಗಳ ಕುರಿತು ವಿವರಿಸಿದ್ದಾರೆ. ಅಧ್ಯಾಯ ಮೂರರಲ್ಲಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಹುಟ್ಟು ಮತ್ತು ಬೆಳವಣಿಗೆಯ ಕುರಿತು ವಿಸ್ತಾರವಾಗಿ ವಿವರಿಸಿದ್ದಾರೆ. ಬೆಳೆಯಲ್ಲಿಕ್ಕೆ ಯಾರು ಕಾರಣಿಭೂತರು ಎಂಬುದರ ಕುರಿತು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಅಧ್ಯಾಯ ನಾಲ್ಕರರಲ್ಲಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಅಧ್ಯಾಪಕರ ಕುರಿತು ಅವರ ಸಾಧನೆಯ ಕುರಿತು ಚರ್ಚಿಸಿದ್ದಾರೆ. ಹಾಗೂ ವಿದ್ಯಾರ್ಥಿಗಳ ಕೊಡುಗೆಯ ಕುರಿತು ಅವರ ಸಾಧನೆಯ ಕುರಿತು ಉತ್ತಮ ರೀತಿಯಲ್ಲಿ ವಿವರಿಸಿದ್ದಾರೆ. ಮತ್ತು ಶಿಕ್ಷಕರ ವಿದ್ಯಾರ್ಥಿಗಳ ಕಲಾಕೃತಿಗಳ ಛಾಯಾಚಿತ್ರವನ್ನು ಈ ಅಧ್ಯಾಯದಲ್ಲಿ ಧಾಖಲಿಸಿದ್ದಾರೆ.

ಅಧ್ಯಾಯ ಐದರಲ್ಲಿ ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಸಾಂಸ್ಕೃತಿಕ ಚಟುವಟಿಕೆಗಳ ಕುರಿತು ಚರ್ಚೆ ಮಾಡಿದ್ದಾರೆ. ವಿದ್ಯಾಲಯದಲ್ಲಿ ನಡೆದ ಉತ್ತಮಕಾರ್ಯಕ್ರಮಗಳ ಛಾಯಾಚಿತ್ರ ಪ್ರಾತ್ಯಕ್ಷತೆಯನ್ನು ನೀಡಿದವರ ಛಾಯಾಚಿತ್ರಗಳನ್ನು ವಿಷಯಕ್ಕೆ ತಕ್ಕ ಅನೇಕ ಕಲಾಚಟುವಟಿಕೆಗಳ ಈ ಅಧ್ಯಾಯದಲ್ಲಿ ಧಾಖಲಿಸುವ ಪ್ರಯತ್ನ ಮಾಡಿದ್ದಾರೆ. ಅನೇಕ ಗಣ್ಯ ಮಾನ್ಯರ ಸನ್ಮಾನ ಸಂದರ್ಶನ ನೀಡಿದವರ ಛಾಯಾಚಿತ್ರವನ್ನು ಉತ್ತಮ ರೀತಿಯಲ್ಲಿ ಅಳವಡಿಸಿಕೊಂಡಿದ್ದಾರೆ. ಅಧ್ಯಾಯ ಆರು

೩೯. ಶ್ರೀ ಎಸ್.ವ್ಹಿ.ಗುಂಜಾಳ ಜಾನಪದ ವಾದ್ಯಗಳು-೨೦೦೮

ಸಮಾರೋಪವಾಗಿದ್ದು ಈ ಅಧ್ಯಾಯದಲ್ಲಿ ಅನುಬಂಧ ಗ್ರಂಥಋಣ ಛಾಯಾಚಿತ್ರಗಳನ್ನು ಮತ್ತು ಪ್ರಸ್ತೂತ ಅಧ್ಯಾಯದಿಂದ ಹೊರಬಂದ ಫಲಿತಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ. ಒಟ್ಟಾರೆ. ಎಂ.ಆರ್. ಹೆಬ್ಬಳ್ಳಿಯವರು ಜೆ.ಎನ್. ಚಿತ್ರಕಲಾ ಮಹಾವಿದ್ಯಾಲಯದ ಕುರಿತು ಸಮಗ್ರವಾದ ವಿಷಯವನ್ನು ಹೇಳುವ ಪ್ರಯತ್ನ ಮಾಡಿದ್ದಾರೆ.

೧೧. ಭಾರತೀಯ ಕಲೆ ಅಂದು-ಇಂದು[೪೦]

ಈ ಪ್ರಬಂಧವನ್ನು ವಿರುಪಾಕ್ಷ ಎಫ್. ಕುಂದ್ರಳ್ಳಿಯವರು ೫ ಅಧ್ಯಾಯಗಳನ್ನು ಮಾಡಿ ವಿಂಗಡಿಸಿದ್ದಾರೆ. ಒಂದನೆಯ ಅಧ್ಯಾಯದಲ್ಲಿ ಭಾರತೀಯ ಕಲಾ ಪರಂಪರೆ ಯಾವ ರೀತಿಯಾಗಿ ಬೆಳೆಯುತ್ತಾ ಬಂತು ಕಲಾವಿದರ ಕಲಾಕೃತಿಗಳ ಕುರಿತು ವಿವರಿಸಿದ್ದಾರೆ. ಅಧ್ಯಾಯ ಎರಡರಲ್ಲಿ ಭಾರತೀಯ ಚಿತ್ರಕಲೆಯ ಕುರಿತು ಪ್ರಾಚೀನ ಕಾಲದ ಕಲೆಯಿಂದ ಅಜಂತಾದ ಗವಿವರ್ಣದ ಚಿತ್ರಗಳು ಭಾರತೀಯ ಚಿತ್ರಕಲೆಯ ಕುರಿತು ಬದಾಮಿಯ ಚಾಲುಕ್ಯರ ಕಲಾ ವಾಸ್ತು ಶಿಲ್ಪ, ಚಿತ್ರಕಲೆಯ ಪರಂಪರೆಯ ಕುರಿತು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಮೂರನೆಯ ಅಧ್ಯಾಯದಲ್ಲಿ ಭಾರತೀಯ ವಾಸ್ತು ಶಿಲ್ಪಕಲೆಯ ಕುರಿತು ವಿವರಿಸಿದ್ದಾರೆ. ಬೇಲೂರು ಹಳೆಬಿಡು, ಕಂಚಿ, ಮಧುರೆ, ಕೊನಾರ್ಕ ದೇವಾಲಯ, ಖಜೂರಾಹೊ ಮುಂತಾದ ವಾಸ್ತುಶಿಲ್ಪಕಲೆಯನ್ನು ಹೊಂದಿರುವ ದೇವಾಲಯಗಳ ಕುರಿತು ವಿವರಿಸಿದ್ದಾರೆ. ಅಧ್ಯಾಯ ನಾಲ್ಕರಲ್ಲಿ ಭಾರತೀಯ ಶಿಲ್ಪಕಲೆಯ ಕುರಿತು ಪ್ರಾರಂಭದಿಂದ ಹಂತಹಂತವಾಗಿ ಯಾವ ರೀತಿಯಲ್ಲಿ ಶಿಲ್ಪ ಕಲೆಯ ಬೆಳೆಯುತ್ತಾ ಬಂತು ಎಂಬುದರ ಕುರಿತು ಎಲ್ಲೋರಾ ಬಾದಾಮಿ, ಶಿಲ್ಪಗಳು ಭಾರತೀಯ ಶಿಲ್ಪ ಕಲೆಯಾಗಿವೆ. ಅವುಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಅಧ್ಯಾಯ ಐದರಲ್ಲಿ ಭಾರತೀಯ ಪ್ರಸಿದ್ಧ ಕಲಾವಿದರು ಹಾಗೂ ಕಲಾಕೃತಿಗಳು ಇದರಲ್ಲಿ ಖ್ಯಾತಕಲಾವಿದರಾದ ಕೆ.ಕೆ.ಹೆಬ್ಬಾರ್ ಬಾಲ್ಯ ಜೀವನ ಕಲಾ ಬದುಕಿನ ಕುರಿತು; ಕಲಾಕೃತಿಗಳ ಕುರಿತು ನಾಡಿನ ಹಿರಿಯ ಕಲಾವಿದರಾದ ಡಾ. ಜೆ.ಎಸ್. ಖಂಡೆರಾವ್‌ರವರ ಬಾಲ್ಯ ಜೀವನ ಕಲಾ ಶಿಕ್ಷಣ ಕಲಾಕೃತಿಗಳಕುರಿತು ಕಲಾ ಕ್ಷೇತ್ರಕ್ಕೆ ಖಂಡೆರಾವ್‌ರವರ ಕೊಡುಗೆಯ ಕುರಿತು ಇದರಲ್ಲಿ ವಿವರಿಸಿದ್ದಾರೆ. ಆರ್.ಎಂ. ಹಡಪದರವರ ಬಾಲ್ಯ ಜೀವನಕುರಿತು ಕಲಾ ಬದುಕಿನ ಶಿಕ್ಷಣಕ್ಕಾಗಿ ಸಲ್ಲಿಸಿದ ಸೇವೆ ಅವರ ಪ್ರಮುಖಕಲಾಕೃತಿಗಳ ಕುರಿತು ಚರ್ಚಿಸಿದ್ದಾರೆ ಮತ್ತು ಕಲಾವಿದರ ಉತ್ತಮವಾದ ಕಲಾಕೃತಿಗಳ ಛಾಯಾಚಿತ್ರಗಳನ್ನು ಹಾಕಿ ಪ್ರಬಂಧವನ್ನು ರಚಿಸಿದ್ದಾರೆ.

೧೨. ಕಲಾವಿದ ಎನ್.ಎ. ಹರ್ಲಾಪೂರ : ಕಲಾ ಬದುಕು ಮತ್ತು ಕಲಾಕೃತಿಗಳ ಒಂದು ಅಧ್ಯಯನ[೪೧]

ಈ ಪ್ರಬಂಧವನ್ನು ಗದುಗಿನ ಹಿರಿಯ ಕಲಾವಿದರಾದ ಶ್ರೀ ಎನ್. ಎ. ಹರ್ಲಾಪೂರರವರ ಕಲಾ ಜೀವನ ಕುರಿತು ಇದೇ ಇದರಲ್ಲಿ ಏಳು ಅಧ್ಯಾಯಗಳನ್ನು ಮಾಡಿ ವಿಂಗಡಿಸಿದ್ದಾರೆ. ಒಂದನೆಯ ಅಧ್ಯಾಯದಲ್ಲಿ ಉದ್ದೇಶ ಸ್ವರೂಪ ವ್ಯಾಪ್ತಿಯ ಕುರಿತು ಅಧ್ಯಯನ ಮಾಡಿದ್ದಾರೆ. ಅಧ್ಯಾಯ ಎರಡರಲ್ಲಿ ಎನ್. ಎ. ಹರ್ಲಾಪೂರರವರ ಬಾಲ್ಯ ಪ್ರಾಥಮಿಕ ಶಿಕ್ಷಣ ಸಂಸ್ಕೃತಿಕ ಹಿನ್ನೆಲೆಯ ಕುರಿತು ವಿಶ್ಲೇಷಣೆ

೪೦. ವಿರುಪಾಕ್ಷ, ಎಫ್.ಕುಂದ್ರಳ್ಳಿ – ಭಾರತೀಯ ಕಲೆ ಅಂದು ಇಂದು–೨೦೦೮

೪೧. ಪಿ.ಎಸ್. ಲಕ್ಕುಂಡಿ – ಕಲಾವಿದ ಎನ್.ಎ. ಹರ್ಲಾಪೂರ ಕಲಾ ಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಾಯನ–೨೦೦೮

ಮಾಡಿದ್ದಾರೆ. ಮೂರನೇಯ ಅಧ್ಯಾಯದಲ್ಲಿ ಕಲಾವಿದನ ಕಲಾ ಬದುಕು ಮತ್ತು ವೃತ್ತಿ ಜೀವನ ಕುರಿತು ಉತ್ತಮವಾಗಿ ಅಭಿವ್ಯಕ್ತಗೊಳಿಸಿದೆ. ನಾಲ್ಕನೆಯ ಅಧ್ಯಾಯದಲ್ಲಿ ಎನ್. ಎ. ಹರ್ಲಾಪೂರರವರ ರಚಿಸಿದ ಕಲಾಕೃತಿಗಳ ಕುರಿತು ರೇಖಾ ರೇಖಾಚಿತ್ರಗಳ ಕುರಿತು ಶಿಲ್ಪಗಳ ಮಾಧ್ಯಮಗಳ ಕುರಿತು ವಿವರಿಸಿದ್ದಾರೆ.

ಐದನೆಯ ಅಧ್ಯಾಯದಲ್ಲಿ ಕಲಾವಿದ ಎನ್.ಎ. ಹರ್ಲಾಪೂರವರ ಕಲಾಕೃತಿಗಳ ತಂತ್ರ ಶೈಲಿ ಪ್ರಭಾವ ಮತ್ತು ಪ್ರೇರಣೆ ವಸ್ತು ವಿಷಯಗಳ ಕುರಿತು ವಿಶ್ಲೇಷಣೆಯಮಾಡಿದ್ದಾರೆ. ಆರನೆಯ ಅಧ್ಯಾಯದಲ್ಲಿ ಹರ್ಲಾಪೂರರವರ ಹಲವಾರು ಕಡೆಗಳಲ್ಲಿ ಕಲಾಪ್ರದರ್ಶನ ಮಾಡಿದ್ದು ಅನೇಕ ಸಂಘಸಂಸ್ಥೆಗಳ ಸದಸ್ಯರಾಗಿ ಕಲಾ ಚಟುವಟಿಕೆ ಮಾಡಿದ ಕುರಿತು ವಿವರಣೆಯನ್ನು ಮಾಡಲಾಗಿದೆ. ಏಳನೆಯ ಅಧ್ಯಾಯ ಸಮಾರೋಪವಾಗಿದ್ದು ಇದರಲ್ಲಿ ಎಲ್ಲ ಅಧ್ಯಾಯಗಳಿಂದ ಬಂದ ಫಲಿತಗಳ ಕುರಿತು ಚರ್ಚಿಸಲಾಗಿದೆ.

ಕಲಾವಿದ ಎನ್.ಎ. ಹರ್ಲಾಪೂರರವರ ಕಲಾ ಬದುಕಿನ ಕುರಿತು ಕಲಾಕೃತಿಗಳ ಕುರಿತು ಸಮಗ್ರವಾದ ವಿಷಯಗಳನ್ನೊಳಗೊಂಡ ಪ್ರಬಂಧವಾಗಿದೆ.

೧೩. ಎಂ.ಜೆ. ಬಂಗ್ಲೇವಾಲೇಯವರ ಕಲೆ ಮತ್ತು ಬದುಕು : ಪ್ರೇಮಾವತಿ. ವಿ. ಹಿರೆಮಠರವರು[೪೨]

ಎಂ.ಎಫ್.ಎ ಸ್ನಾತಕೋತ್ತರ ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಲಘು ಸಂಶೋಧನ ಪ್ರಬಂಧವಾಗಿದೆ. ಕಲಾವಿದ ಎಂಜೆ ಬಂಗ್ಲೇವಾಲೆಯವರ ಕಲಾ ಬದುಕು ವೃತ್ತಿ ಜೀವನ ಕುರಿತು ಏಳು ಅಧ್ಯಾಯಗಳನ್ನು ಮಾಡಿ ವಿಂಗಡಿಸಿದ್ದಾರೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯ ಕುರಿತು ವಿವರಣೆ ಮಾಡಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಎಂ.ಜೆ. ಬಂಗ್ಲೇವಾಲೇಯವರ ಬಾಲ್ಯಜೀವನ ಮತ್ತು ಶಿಕ್ಷಣ ಕಲಾ ಶಿಕ್ಷಣ ಕುರಿತು ವಿವರಿಸಿದ್ದಾರೆ. ಅಧ್ಯಾಯ ಮೂರರಲ್ಲಿ ಬಂಗ್ಲೇವಾಲೇಯವರ ರೇಖಾ ಚಿತ್ರಗಳ ಕುರಿತು ಚರ್ಚಿಸಿ ಅವುಗಳ ಛಾಯಾಚಿತ್ರಗಳನ್ನು ಈ ಅಧ್ಯಾಯದಲ್ಲಿ ಅಳವಡಿಸಿ ಬರೆದಿದ್ದಾರೆ. ನಾಲ್ಕನೆಯ ಅಧ್ಯಾಯದಲ್ಲಿ ಎಂ.ಜೆ. ಬಂಗ್ಲೇಲಾಲೇಯವರ ವರ್ಣ ಚಿತ್ರಗಳು ಸಂಯೋಜನಾ ಚಿತ್ರಗಳು ಮತ್ತು ಸೃಜನಾತ್ಮಕ ಕಲಾ ಕೃತಿಗಳ ಕುರಿತು ವಿವೇಚಿಸಿದ್ದಾರೆ. ಅಧ್ಯಾಯ ಐದರಲ್ಲಿ ಬಂಗ್ಲೇವಾಲೇಯವರ ಕಲಾಕೃತಿಗಳ ಮೇಲಾದ ಪ್ರಭಾವ ಪ್ರೇರಣೆ ಹಾಗೂ ಶೈಲಿ ಮತ್ತು ತಂತ್ರಗಳ ಕುರಿತು ವಿವರಿಸಿದ್ದಾರೆ. ಆರನೆಯ ಅಧ್ಯಾಯದಲ್ಲಿ ಕಲಾ ಚಟುವಟಿಕೆಗಳು, ಪ್ರಶಸ್ತಿ, ಪುರಸ್ಕಾರಗಳು ಪಡೆದ ಕುರಿತು ವಿವರಿಸಿದ್ದಾರೆ. ಅಧ್ಯಾಯ ಏಳರಲ್ಲಿ ಸಮಾರೋಪ ಗ್ರಂಥಋಣವಿದೆ.

ಪ್ರೇಮಾವತಿ ಹಿರೇಮಠರವರು ಈ ಲಘುಪ್ರಬಂಧದಲ್ಲಿ ಕಲಾವಿದ ಎಂಜೆ ಬಂಗ್ಲೇವಾಲೆಯವರ ಕಲಾಬದುಕು ಕಲಾಕೃತಿಗಳು ಪ್ರಶಸ್ತಿ ಪುರಸ್ಕಾರಗಳ ಕುರಿತು ವೃತ್ತಿಜೀವನ ಕುರಿತು ಸಮಗ್ರವಾಗಿ ತಿಳಿಸಲು ಪ್ರಯತ್ನ ಪಟ್ಟಿದ್ದಾರೆ. ಬರವಣಿಗೆ ಛಾಯಾ ಚಿತ್ರಗಳನ್ನು ಉತ್ತಮವಾಗಿ ಬಳಸಿ ಈ ಪ್ರಬಂಧವನ್ನು ಪೂರ್ಣಗೊಳಿಸಿದ್ದಾರೆ.

---

೪೨. ಹಿರೇಮಠ ಎಂ. ಜೆ. ಬಂಗ್ಲೇವಾಲೇಯವರ ಕಲೆ ಮತ್ತು ಬದುಕು-೨೦೦೮

೧೪. ಕಲಾವಿದ ಎ.ಎ. ಶಿರಹಟ್ಟಿ ಅವರ ಬದುಕು ಮತ್ತು ಕಲಾ ಕೃತಿಗಳು[೪೩]

ಶ್ರೀ ವಿಜಯಕುಮಾರ. ಎಲ್. ಬೆಳಗಲಿ ಇವರು ಎಂ.ವ್ಹಿ.ಎ. ಸ್ನಾತಕೋತ್ತರ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸಿದ ಕಿರು ಸಂಶೋಧನಾ ಪ್ರಬಂಧವಾಗಿದೆ.

ಈ ಕಿರುಸಂಶೋಧನಾ ಪ್ರಬಂಧವನ್ನು ಉಪನ್ಯಾಸಕರಾದ ಬೆಳಗಲಿಯವರು ಶಿರಹಟ್ಟಿಯವರ ಕಲಾ ಬದುಕು ವೃತ್ತಿ ಜೀವನ ಕುರಿತು ಎಂಟು ಅಧ್ಯಾಯಗಳನ್ನು ಮಾಡಿಕೊಂಡು ವಿವೇಚಿಸಿದ್ದಾರೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಮತ್ತು ವಿಧಾನ ಕುರಿತು ವಿವರಿಸಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಶಿರಹಟ್ಟಿಯವರ ಬಾಲ್ಯ ಜೀವನ ಶಿಕ್ಷಣ ಪ್ರಾಥಮಿಕ, ಪ್ರೌಢ, ಮತ್ತು ಚಿತ್ರಕಲಾ ಶಿಕ್ಷಣದ ಕುರಿತು ವಿವರಿಸಿದ್ದಾರೆ. ಅಧ್ಯಾಯ ಮೂರರಲ್ಲಿ ಕಲಾ ಬದುಕು ಮತ್ತು ವೃತ್ತಿ ಜೀವನ ಕುರಿತಾಗಿದ್ದು ಶಿರಹಟ್ಟಿಯವರು ಉತ್ತಮಕಲಾವಿದರಾಗಿ ಸೇವೆಸಲ್ಲಿಸಿದ ಕುರಿತು ವಿವರಿಸಿದ್ದಾರೆ. ಅಧ್ಯಾಯ ನಾಲ್ಕರಲ್ಲಿ ಶಿರಹಟ್ಟಿಯವರು ಅನೇಕ ಉತ್ತಮವಾದ ಕಲಾಕೃತಿಗಳು, ರೇಖಾ ಚಿತ್ರಗಳು, ನಿಸರ್ಗ ಚಿತ್ರಗಳ ರಚಿಸಿದ್ದು ಅವುಗಳ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಐದನೆಯ ಅಧ್ಯಾಯದಲ್ಲಿ ಕಲಾಕೃತಿಗಳು ಮತ್ತು ವಸ್ತು ವಿಷಯ ಮಾಧ್ಯಮಗಳು, ತಂತ್ರಗಾರಿಕೆಯ ಕುರಿತು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಅಧ್ಯಾಯ ಆರರಲ್ಲಿ ಶಿರಹಟ್ಟಿಯವರು ಅನೇಕ ಪ್ರದರ್ಶನ ಹಲವಾರು ಕಲಾಚಟುವಟಿಕೆಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಅಧ್ಯಾಯ ಏಳರಲ್ಲಿ ಶಿರಹಟ್ಟಿಯವರು ಸಾಹಿತಿಗಳಾಗಿದ್ದು ಹಲವಾರು ವಿಷಯಗಳ ಕಿರು ಪುಸ್ತಕಗಳನ್ನು ಕೆಲವು ಇಂಗ್ಲೀಷ ಪುಸ್ತಕಗಳ ಬರೆದಿದ್ದು ಅವುಗಳ ಕುರಿತು ವಿಶ್ಲೇಷಿಸಿದ್ದಾರೆ. ಅಧ್ಯಾಯ ಎಂಟು ಸಮಾರೋಪ ಗ್ರಂಥ ಋಣಗಳನ್ನು ಮತ್ತು ಎಲ್ಲ ಅಧ್ಯಾಯಗಳಿಂದ ಬಂದ ಫಲಿತಗಳನ್ನು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ.

೧೫. ಕಲಾವಿದ ಸಿ.ಎನ್. ಪಾಟೀಲರವರ ಬದುಕು ಮತ್ತು ಕಲಾ ಕೃತಿಗಳು[೪೪]

ಶಾನವಾಜ. ತಾ. ಜಮಾದಾರ ಇವರು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಸಂಶೋಧನಾ ಪ್ರಬಂಧವಾಗಿದೆ.

ಈ ಸಂಶೋಧನಾ ಪ್ರಬಂಧವನ್ನು ಡಾ. ಎಸ್.ಸಿ. ಪಾಟೀಲ ಹಾಗೂ ಡಾ. ಎಮ್.ಸಿ. ಬಾಗೋಡಿಯವರ ಮಾರ್ಗದರ್ಶನದಲ್ಲಿ ಜಮಾದಾರರವರ ಸಂಶೋಧನೆ ಮಾಡಿದ್ದು. ಕಲಾವಿದ ಸಿ.ಎನ್. ಪಾಟೀಲರವರ ಬದುಕು ಮತ್ತು ಕಲಾಕೃತಿಗಳು. ಕುರಿತು ಏಳು ಅಧ್ಯಾಯಗಳನ್ನು ಮಾಡಿ ವಿಂಗಡಿಸಿದ್ದಾರೆ. ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಸ್ವರೂಪ, ವ್ಯಾಪ್ತಿ, ಮತ್ತು ವೈಧಾನಿಕತೆಗಳ ಕುರಿತು ಬರೆದಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಗದುಗಿನ ಸಾಂಸ್ಕೃತಿಕ ಪರಿಸರ ಮತ್ತು ಲಲಿತ ಕಲೆಗಳಾದ ಸಂಗೀತ, ನಾಟಕ, ನಾಟ್ಯ ಮತ್ತು ಚಿತ್ರಕಲೆಯ ಕುರಿತು ಅಧ್ಯಯನ ಮಾಡಿದ್ದಾರೆ. ಅಧ್ಯಾಯ ಮೂರರಲ್ಲಿ ಸಿ.ಎನ್. ಪಾಟೀಲರ ಬಾಲ್ಯ, ಪರಿಸರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಕುರಿತು ಚರ್ಚಿಸಿದ್ದಾರೆ. ನಾಲ್ಕನೆಯ ಅಧ್ಯಾಯದಲ್ಲಿ ಸಿ.ಎನ್. ಪಾಟೀಲರು ಚಿತ್ರಕಲಾ ಶಿಕ್ಷಣ ಮತ್ತು ಚಿತ್ರಕಲಾ ಚಟುವಟಿಕೆಗಳ ಕುರಿತು ವೃತ್ತಿ ಜೀವನ ಕುರಿತು

---

೪೩. ವಿಜಯಕುಮಾರ ಎಲ್. ಬೆಳಗಲಿ–ಕಲಾವಿದ ಎಂ.ಎ. ಶಿಹರಟ್ಟಿಯವರ ಬದುಕು ಮತ್ತು ಕಲಾಕೃತಿಗಳು

೪೪. ಶಾನವಾಜ ಪಿ. ಜಮಾದಾರ–ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು

ವಿವರಣೆಯನ್ನು ಈ ಅಧ್ಯಾಯದಲ್ಲಿ ಬಣ್ಣಿಸಿದ್ದಾರೆ. ಅಧ್ಯಾಯ ಐದರಲ್ಲಿ ಪಾಟೀಲರು ರಚಿಸಿದ ರೇಖಾಚಿತ್ರ ಹಾಗೂ ವರ್ಣ ಚಿತ್ರಗಳನ್ನು ಮಾಧ್ಯಮವಾರು ವಿಷಯವಾರು ವರ್ಗಿಕರಿಸಿಕೊಂಡು ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ. ಆರನೆಯ ಅಧ್ಯಾಯದಲ್ಲಿ ಸಿ.ಎನ್. ಪಾಟೀಲರು ರಚಿಸಿದ ಕಲಾಕೃತಿಗಳ ಮೇಲಾದ ಪ್ರಭಾವ ಪ್ರೇರಣೆಯ ಕುರಿತು ಮತ್ತು ರಚನಾ ಶೈಲಿ ತಂತ್ರಗಾರಿಕೆಗಳ ಕುರಿತು ಚರ್ಚಿಸಿದ್ದಾರೆ. ಅಧ್ಯಾಯ ಏಳರಲ್ಲಿ ಸಮಾರೋಪ ಮತ್ತು ಎಲ್ಲ ಅಧ್ಯಾಯಗಳಿಂದ ಬಂದ ಫಲಿತಗಳ ಕುರಿತು ಸಮಿಕ್ಷೆಯು ಮಾಡಿದ್ದಾರೆ. ಮತ್ತು ಗ್ರಂಥ ಋಣಗಳನ್ನು ಈ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಒಟ್ಟಾರೆ ಈ ಸಂಶೋಧನಾ ಪ್ರಬಂಧವು ಸಿ.ಎನ್. ಪಾಟೀಲರ ಕಲಾ ಬದುಕಿನ ಕುರಿತು ಸಮಗ್ರವಾದ ವಿಷಯನ್ನೊಳಗೊಂಡ ಉತ್ತಮ ಪ್ರಬಂಧವಾಗಿದೆ.

ಅಲ್ಲದೇ ಇನ್ನೂ ಸುಮಾರು ೧೫೦ ಅಪ್ರಕಟಿತ ಬಿ.ಬಿ.ಎ./ಎಂ.ಎಫ್.ಎ. ವಿದ್ಯಾರ್ಥಿಗಳ ಹೊರಬಂದ ಕಿರುಪ್ರಬಂಧಗಳು ಇವೆ.

nnn




ಚಿತ್ರ. ೧. ಪ್ರಕಟಿತ ಗ್ರಥಗಳು



ಚಿತ್ರ. ೨. ಅಪ್ರಕಟಿತ ಗ್ರಂಥಗಳು

ಅಧ್ಯಾಯ - ಒಂಭತ್ತು

ಸಮಾರೋಪ



ಕರ್ನಾಟಕದ ಸಂಸ್ಕೃತಿಯನ್ನು ಅಧ್ಯಯನ ಮಾಡುವಲ್ಲಿ ಸಂಸ್ಕೃತಿಯ ಬಹುಮುಖ್ಯ ಅಂಶವಾಗಿರುವ ಲಲಿತಕಲೆಗಳ ಪಾತ್ರ ತುಂಬಾ ಮೌಲಿಕವಾದದು. ಯಾವುದೇ ಒಂದು ಕಲಾ ಪರಂಪರೆಯ ಬೆಳವಣಿಗೆಯ ಹಿಂದೆ ಆ ಸಂಸ್ಕೃತಿಯ ತಾಯಿ ಬೇರುಗಳಿರುವುದನ್ನು ಪ್ರಮುಖವಾಗಿ ಗುರುತಿಸಲಾಗುತ್ತದೆ.[೧]

ನಮ್ಮ ದೇಶದ ಅಥವಾ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಇತಿಹಾಸವನ್ನು ನೋಡಿದಾಗ ಚಿತ್ರ, ಶಿಲ್ಪ, ಸಂಗೀತ, ನೃತ್ಯ, ನಾಟಕ, ತೊಗಲು ಬೊಂಬೆಯಾಟ, ದೊಡ್ಡಾಟ, ಮುಂತಾದ ಶಿಸ್ತುಬದ್ಧ ಕಲೆಗಳಲ್ಲದೆ ಪೂರ್ವಿಕರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಮನರಂಜನೆಗಳಿಗಾಗಿ ಹಲವಾರು ಜನಪದ ಕಲೆಗಳು ವ್ಯಾಪಕವಾಗಿ ಬೆಳೆದುಬಂದಿವೆ. ಇಂತಹ ಜನಪದ ಕಲೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಜನಪರು ತಮ್ಮ ನಿತ್ಯದ ಜೀವನದ ಜೊತೆಗೆ ಕಲೆಯನ್ನು ಪ್ರೋತ್ಸಾಹಿಸಿ ಪೋಷಿಸಿಕೊಂಡು ಬಂದುದರ ಬಗ್ಗೆ ವಿವರಣೆ ನೀಡಲಾಗಿದೆ. ಅದಲ್ಲದೆ ಕರ್ನಾಟಕದಲ್ಲಿ ಚಿತ್ರಕಲೆಯ ಬೆಳವಣಿಗೆಯ ಕುರಿತು ಇತಿಹಾಸವನ್ನು ನೋಡಿದಾಗ ಭಾರತದಲ್ಲಿ ಚಿತ್ರಕಲೆಯು ವಿವಿಧ ಆಯಾಮಗಳನ್ನು ಪಡೆದುಕೊಂಡು ಬಂದು ಇಂದು ಅತ್ಯಂತ ಮಹತ್ವದ ಕ್ಷೇತ್ರವಾಗಿದೆ ಎನ್ನಬಹುದು. ಬ್ರಿಟೀಷರು ಭಾರತದಲ್ಲಿ ಅಂದು ಪ್ರಾರಂಭಿಸಿದ ಕಲಾಶಾಲೆಗಳ ಪರಿಣಾಮವಾಗಿಯೇ ಇಂದು ಭಾರತದಲ್ಲಿ ವಿವಿಧ ಪ್ರಕಾರಗಳ ಚಿತ್ರಕಲಾ ಅಧ್ಯಯನ, ಶೈಲಿ, ಮಾಧ್ಯಮಗಳು ಬೆಳೆದು ಬಂದಿವೆ. ಅದರಲ್ಲೂ ಕಲ್ಕತ್ತಾ ಮತ್ತು ಮುಂಬಯಿ ಕಲಾಶಾಲೆಗಳ ಕಲಾ ವಾತಾವರಣದಿಂದಾಗಿ ಭಾರತದಲ್ಲಿ ಚಿತ್ರಕಲೆಯು ಅತ್ಯಂತ ಪರಿಣಾಮಕಾರಿಯಾಗಿ ಬೆಳೆದು ಬಂದಿರುವುದನ್ನು ಅರಿತುಕೊಳ್ಳಬಹುದಾಗಿದೆ. ಅಂತೆಯೇ ಕಲ್ಕತ್ತಾ ಮತ್ತು ಮುಂಬಯಿ ಕಲಾಶಾಲೆಗಳಲ್ಲಿ ಅಧ್ಯಯನ ಮಾಡಿದ ಕರ್ನಾಟಕದ ಹಿರಿಯ ಕಲಾವಿದರು ತಮ್ಮ ನಾಡಿನ ಕಲಾ ಸೇವೆಗೋಸ್ಕರ ತಮ್ಮ ಜೀವನದುದ್ದಕ್ಕೂ ಅನೇಕ ಕಲಾಕೃತಿಗಳನ್ನು ರಚನೆ ಮಾಡಿ ಸಮಾಜಕ್ಕೆ ಇಂದು ಬಿಟ್ಟುಹೋಗಿದ್ದಾರೆ. ಅದರ ಪ್ರತಿಫಲವೆಂಬಂತೆ ಇಂದು ಕರ್ನಾಟಕದಲ್ಲಿ ಚಿತ್ರಕಲೆಯು ಅತ್ಯಂತ ಶ್ರೀಮಂತವಾಗಿದೆ. ಎಂದು ಹೇಳಲು ಹೆಮ್ಮೆಯಾಗುತ್ತದೆ.

ಕರ್ನಾಟಕದ ದಕ್ಷಿಣ ಭಾಗದಲ್ಲಿ ಕೆಲವು ಜನ ಹಿರಿಯ ಕಲಾವಿದರು ಕಲ್ಕತ್ತಾ ಮತ್ತು ಮುಂಬಯಿ ಕಲಾಶಾಲೆಗಳಲ್ಲಿ ಕಲಿತು ನಾಡಿಗೆ ತಮ್ಮ ಕೊಡುಗೆ ನೀಡಿದ್ದಾರೆ. ಇನ್ನು ಉತ್ತರ ಕರ್ನಾಟಕದಲ್ಲಿ

---

೧. ಡಾ. ಎಸ್.ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ.

ಅತ್ಯಂತ ಗಣನೀಯ ಸಂಖ್ಯೆಯಲ್ಲಿ ಕಲ್ಕತ್ತಾ ಮತ್ತು ಮುಂಬಯಿ ಕಲಾಶಾಲೆಗಳಲ್ಲಿ ಚಿತ್ರಕಲಾ ಅಧ್ಯಯನ ಮಾಡಿ ನಾಡಿಗೆ ಉತ್ತಮ ಕೊಡುಗೆ ನೀಡಿದ್ದಾರೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಇಂದು ಹಿರಿಯ ಕಲಾವಿದರನ್ನು ನಾವು ಕಾಣಬಹುದು. ಕನ್ನಡ ನಾಡಿನ ಒಂದೊಂದು ಜಿಲ್ಲೆಯೂ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಮೈಸೂರು ರಾಜಮನೆತನಕ್ಕೆ ಹಾಗೂ ಕಲಾಕ್ಷೇತ್ರಕ್ಕೆ ಅತ್ಯಂತ ಮಹತ್ವವನ್ನು ಕೊಟ್ಟಂತಹ ಜಿಲ್ಲೆಯಾಗಿದೆ. ಬೆಂಗಳೂರು ನಮ್ಮ ಕರ್ನಾಟಕದ ರಾಜಧಾನಿಯೇ ಆಗಿದೆ. ಇಲ್ಲಿ ಎಲ್ಲ ಕಲೆಗಳ ಸಂಗಮವಾಗಿ ಬೆಂಗಳೂರು ಜಿಲ್ಲೆಯ ತನ್ನದೆ ಆದ ಹಿರಿಮೆಯನ್ನು ಹೊಂದಿದೆ. ಹಾಸನ ಜಿಲ್ಲೆಯು ಹೊಯ್ಸಳರ ಐತಿಹಾಸಕ ಸ್ಥಳ ಬೇಲೂರು ಮತ್ತು ಹಳೆಬೀಡುಗಳ ಸ್ಮಾರಕಗಳನ್ನು ಹೊಂದಿ ತನ್ನ ಐತಿಹಾಸಿಕ ಪರಂಪರೆಯನ್ನು ಮರೆದಿದೆ. ಉಡುಪಿ, ಮಂಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ಕೋಲಾರ, ಮಡಿಕೇರಿ, ಬಳ್ಳಾರಿ, ಉತ್ತರ ಕನ್ನಡ, ದಾವಣಗೆರೆ, ಬಿಜಾಪುರ, ಬಾಗಲಕೋಟೆ, ಬೀದರ, ಗುಲಬರ್ಗಾ. ಧಾರವಾಡ, ಕೊಪ್ಪಳ, ಬೆಳಗಾವಿ ಮುಂತಾದ ಜಿಲ್ಲೆಗಳು ಐತಿಹಾಸಿಕ ಪರಂಪರೆಯನ್ನು ಮೆರೆದಿವೆ. ಚಿತ್ರಕಲೆ, ಸಂಗೀತ, ಸಾಹಿತ್ಯ, ನೃತ್ಯ, ಕ್ರೀಡೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮದೆ ಆದ ಉನ್ನತ ಪರಂಪರೆಗಳನ್ನು ಹೊಂದಿ ಕರ್ನಾಟಕವನ್ನು ಶ್ರೀಮಂತವಾಗಿಸಿವೆ. ಅದರಂತೆ ಐತಿಹಾಸಿಕ ಪರಂಪರೆಯನ್ನು ಹೊಂದಿದ ಗದಗ ಜಿಲ್ಲೆಯೂ ಸಹ ವಿಶಿಷ್ಟ ಪರಂಪರೆಯನ್ನು ಹೊಂದಿ ಕರ್ನಾಟಕದ ಇತರ ಜಿಲ್ಲೆಗಳಿಗೆ ಸಮನಾಗಿ ಚಿತ್ರಕಲೆ, ಸಂಗೀತ, ಸಾಹಿತ್ಯ, ಉದ್ದಿಮೆ, ನೇಕಾರಿಕೆ, ಕ್ರೀಡೆಗಳಂತಹ ಮಹತ್ವದ ಸಾಂಸ್ಕೃತಿಕ ರಾಜಧಾನಿಯಾಗಿ ತನ್ನದೆ ಶ್ರೀಮಂತಿಕೆಯನ್ನು ಹೊಂದಿದೆ.[೨]

ಹೀಗೆ ಹಲವಾರು ಕ್ಷೇತ್ರದಲ್ಲಿ ಹೆಸರು ಮಾಡಿದ ಗದಗ ಜಿಲ್ಲೆಯು ಚಿತ್ರಕಲಾ ಕ್ಷೇತ್ರಕ್ಕೆ ಗದ್ದುಗೆಯಾಗಿದೆ ಎಂದರೆ ತಪ್ಪಾಗಲಾರದು. ಅನೇಕ ಹಿರಿಯ ಕಲಾವಿದರು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ಬೆಳಗಿಸಿಕೊಂಡಿದ್ದಾರೆ. ಅಂಥವರ ಕುರಿತು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಈ ದೃಶ್ಯಕಲಾ ಕ್ಷೇತ್ರಗಳಲ್ಲಿ ಗಣನೀಯವಾಗಿ ತಮ್ಮನ್ನು ಅರ್ಪಿಸಿಕೊಂಡು ಸೇವೆ ಸಲ್ಲಿಸಿದ ಅನೇಕ ಜನ ಹಿರಿಯ ಕಲಾವಿದರಿದ್ದಾರೆ. ಹಲವಾರು ಕಲಾವಿದರು ತಮ್ಮ ಅಮೂಲ್ಯವಾದ ಕಲಾಕೃತಿಗಳನ್ನು ಬಿಟ್ಟು ಹೋಗಿದ್ದಾರೆ.

ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿಯೂ ನಾವು ಈ ಕೊರತೆಯನ್ನು ನಿಭಾಯಿಸಿಕೊಳ್ಳಬೇಕಾಗಿದೆ. ಸಮಕಾಲೀನ ಕಲೆ, ಕಲಾವಿದರ ಕುರಿತಾದ ಅಮೂಲ್ಯವಾದ ಸಾಧನೆ ಮಾಹಿತಿಯನ್ನು ಅವರ ಚಿಂತನಶೀಲ ವಿಚಾರಗಳನ್ನು ಅವರ ಕುರಿತು ಪ್ರಕಟಿತ ಸಾಹಿತ್ಯ ವಿಮರ್ಶೆಗಳನ್ನು ಅರ್ಥೈಸುವ ಅದರ ಹಿಂದೆ ದುಡಿದ ಕಲಾವಿದನ ಮನಸ್ಸನ್ನು ಪರಿಭಾವಿಸುವ ಹಲವಾರು ಅಂಶಗಳನ್ನು ತುಂಬಾ ಗಂಭೀರವಾಗಿ ಇಂದು ಬಹುಮುಖ್ಯವಾಗಿ ಚರ್ಚಿಸಿ ದಾಖಲಿಸುವುದು ಅವಶ್ಯವಾಗಿದೆ.

ಒಂದನೆಯ ಅಧ್ಯಾಯದಲ್ಲಿ : ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ ಈ ಅಧ್ಯಾಯ ದೃಶ್ಯಕಲಾ ದೃಷ್ಟಿಯಿಂದ ಅಧ್ಯಯನವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ನಿರೂಪಿಸಲಾಗಿದೆ. ಕ್ಷೇತ್ರ ಕಾರ್ಯ ಮಾಡಿದ ಈ ಅಧ್ಯಯನದಲ್ಲಿ ಅನೇಕ ಅಂಶಗಳನ್ನು ವೈಜ್ಞಾನಿಕ ರೀತಿಯಲ್ಲಿ ದೃಶ್ಯಕಲೆಯ ಆಧಾರದಿಂದ

೨. ಡಾ. ಸಿ.ಎನ್. ಪಾಟೀಲ ಸಂದರ್ಶನ. ದಿ. ೬.೧೦.೨೦೦೬

ಸಮೀಕ್ಷಿಸಲಾಗಿದೆ. ಈ ಅಧ್ಯಯದಲ್ಲಿ ಮಾಡಿದ ಕ್ಷೇತ್ರಕಾರ್ಯದಿಂದ ಕಂಡುಗೊಂಡ ಅಂಶಗಳನ್ನು ಎಂಟು ಅಧ್ಯಾಯದಲ್ಲಿ ವಿಂಗಡಿಸಿಕೊಂಡು ಸೂಕ್ತ ರೀತಿಯಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಸ್ತುತ ಸಮಾರೋಪದಲ್ಲಿ ಹಿಂದಿನ ಎಂಟು ಅಧ್ಯಾಯಗಳ ಸಮೀಕ್ಷೆಯನ್ನು ನೀಡಲಾಗಿದೆ.

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿ ವೈಧಾನಿಕತೆಯನ್ನು ವಿವರಿಸಲಾಗಿದೆ. ಇದಲ್ಲದೆ ಅಧ್ಯಯನದ ಮಹತ್ವ ಹಾಗೂ ಇಲ್ಲಿಯವರೆಗೆ ಚಿತ್ರಕಲಾ ಕ್ಷೇತ್ರದ ಕುರಿತು ಸಂಶೋಧನಾ ಅಧ್ಯಯನಗಳನ್ನು ವಿವರಿಸಲಾಗಿದೆ. ಹಾಗೂ ಮೂಲ ಆಕರ ಸಾಮಗ್ರಿ ಆನುಷಂಗಿಕ ಆಕರ ಸಾಮಗ್ರಿ, ಸಂದರ್ಶನ, ಛಾಯಾ ಚಿತ್ರಗಳ, ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಮತ್ತು ಅನೇಕ ಗ್ರಂಥಗಳಲ್ಲಿಯ ಅನೇಕ ವಿಷಯಗಳನ್ನು ಕುರಿತಾದ ಸಮಗ್ರವಾದ ವಿವರಣೆಯನ್ನು ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ : ಗದಗ ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆಯ ಕುರಿತು ಲಲಿತ ಕಲೆಗಳಾದ ಚಿತ್ರಕಲೆ, ಸಂಗೀತ, ಸಾಹಿತ್ಯ ಮತ್ತು ದಾರ್ಮಿಕ ಪರಿಸರದ ಕುರಿತು ಪ್ರತಿಯೊಂದು ಘಟ್ಟಗಳ ಸ್ಥೂಲ ಅಧ್ಯಯನವನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಗದಗ ಜಿಲ್ಲೆಯ ಸಾಂಸ್ಕೃತಿ ಹಿನ್ನಲೆ, ಧಾರ್ಮಿಕ ಹಿನ್ನೆಲೆ, ನಡೆಸುತ್ತಿರುವ ಸಂಘ-ಸಂಸ್ಥೆಗಳ ಕುರಿತಾಗಿ ಚರ್ಚಿಸಾಗುವುದು ಮತ್ತು ಅಧ್ಯಾಯಕ್ಕೆ ಸಂಬಂಧಪಟ್ಟಂತ ಛಾಯಾ ಚಿತ್ರಗಳನ್ನು ಸೇರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ : ಗದಗ ಜಿಲ್ಲೆಯಲ್ಲಿ ಕಂಡುಬಂದ ಜನಪದ ಚಿತ್ರಕಲೆಗಳಾದ ತೊಗಲು ಗೊಂಬೆ, ಸೋತ್ರದ ಗೊಂಬೆ, ರಂಗೋಲಿ ಮೆಹಂದಿ ಕೌದಿ ಕಲೆ, ಕಸೂತಿ, ಚಿತ್ರಕಲೆ ಮತ್ತು ಜನಪದ ಕಲಾವಿದರ ಪರಿಚಯ ಹಾಗೂ ಅವರ ಕಲೆಗಳ ಕುರಿತು ಜನಪದ ಕಲಾವಿದರನ್ನು ಸಂದರ್ಶಿಸಿ ಅನೇಕ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ, ಮತ್ತು ಅವರ ಕಲೆಯ ಛಾಯಾಚಿತ್ರಗಳನ್ನು ಚಿತ್ರಿಸಿಕೊಂಡು ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ, ಮತ್ತು ಅವುಗಳನ್ನು ವಿಷಯವಾರು ವರ್ಗೀಕರಿಸಿಕೊಂಡು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ : ಗದಗ ಜಿಲ್ಲೆ ಭಿತ್ತಿಚಿತ್ರಕಲೆಯ ಕುರಿತು ಅಧ್ಯಯನ ಮಾಡಲಾಗಿದೆ. ಗದಗ ಜಿಲ್ಲೆಯಲ್ಲಿ ಕಂಡು ಬಂದಿರುವ ಭಿತ್ತಿಚಿತ್ರಕಲೆಗಳ ನೆಲೆಗಳನ್ನು ಮತ್ತು ಅಲ್ಲಿ ಕಂಡು ಬಂದ ಭಿತ್ತಿಚಿತ್ರಕಲೆಯ ಸಮಗ್ರವಾದ ಮಾಹಿತಿಗಳನ್ನು ಹಲವಾರು ಜನರನ್ನು ಸಂಪರ್ಕಿಸಿ ಅವರಿಂದ ಮಾಹಿತಿ ಸಂಗ್ರಹಿಸಿಕೊಂಡು ಸಂಗ್ರಹಿಸಿಕೊಂಡಿರುವ ಎಲ್ಲ ಮಾಹಿತಿಗಳನ್ನು ಪ್ರಸುತ್ತ ಅಧ್ಯಾಯದಲ್ಲಿ ವಿವರಿಸಲಾಗಿದೆ. ಭಿತ್ತಿಚಿತ್ರಗಳ ನೆಲಗಳು ಮತ್ತು ಅವುಗಳ ಛಾಯಾ ಚಿತ್ರಗಳನ್ನು ಪ್ರಸ್ತುತ ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಐದನೆಯ ಅಧ್ಯಾಯದಲ್ಲಿ : ಗದಗ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿರುವ ಕಲಾ ಶಿಕ್ಷಣ ನೀಡುವ ಸಂಸ್ಥೆಗಳ ಕುರಿತು ಹಾಗೂ ಅವುಗಳನ್ನು ಸ್ಥಾಪಿಸಿದ ಸಂಸ್ಥಾಪಕರು, ಶಿಕ್ಷಕರು, ವಿದ್ಯಾರ್ಥಿಗಳ ಮತ್ತು ಅವರು ರಚಿಸಿದ ಕಲಾಕೃತಿಗಳು ಅವರ ಕಲಾಚಟುವಟಿಕೆಗಳ ಕುರಿತು ಹಲವಾರು ಹಿರಿ-ಕಿರಿಯ ಕಲಾವಿದರವನ್ನು ಸಂದರ್ಶಿಸಿ ಅವರಿಂದ ಮಾಹಿತಿ ಸಂಗ್ರಹಿಸಿಕೊಳ್ಳಲಾಗಿದೆ. ಅದಲ್ಲದೆ ಗತಿಸಿಹೋಗಿರುವ ಕಲಾವಿದರ ಕುರಿತು ಹಲವಾರು ಹಿರಿಯ ಕಲಾವಿದರನ್ನು ಸಂದರ್ಶಿಸಿ ಇವರ ಕಲಾ ಬದುಕು ಮತ್ತು ಕಲಾಕೃತಿಗಳ ಮಾಹಿತಿ ಪಡೆಯಲಾಗಿದೆ. ಹಾಗೂ ಇಂದು ನಮ್ಮೊಂದಿಗಿರುವ ಹಿರಿ-ಕಿರಿಯ ಕಲಾವಿದರ

ಕಲಾಕೃತಿ ಹಾಗೂ ಅವರ ಕಲಾ ಜೀವನ ಮತ್ತು ಕಲಾಚಟುವಟಿಕೆಗಳ ಕುರಿತು ಪ್ರಸ್ತುತ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ ಹಾಗೂ ಅವರು ರಚಿಸಿದ ಕಲಾಕೃತಿಗಳ ಛಾಯಾ ಚಿತ್ರಗಳನ್ನು ಪಡೆದುಕೊಂಡು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಆರುನೆಯ ಅಧ್ಯಾಯದಲ್ಲಿ : ಗದಗ ಜಿಲ್ಲೆಯ ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆದಿರುವ ಕಲಾವಿದರ ಕಲಾಕೃತಿಗಳ ಕುರಿತು, ಗದಗ ಜಿಲ್ಲೆಯಲ್ಲಿ ಕಲಿತು ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟಲದಲ್ಲಿ ಬೆಳೆದಿರುವ ಕಲಾವಿದರ ಕುರಿತು ಮತ್ತು ಗದಗ ಜಿಲ್ಲೆಯ ಸಮಕಾಲೀನ ಕಲಾವಿದರ ಕುರಿತು ಅಧ್ಯಯನ ಮಾಡಲಾಗಿದೆ, ಹಾಗೂ ಸಂಬಂಧಿಸಿದ ಛಾಯಾ ಚಿತ್ರಗಳನ್ನು ಅಳವಡಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ : ಗದಗ ಜಿಲ್ಲೆಯ ಕಲಾವಿದರು ರಚಿಸಿದ ಕಲಾ ಸಾಹಿತ್ಯಗಳ ಕುರಿತು ವಿವರಿಸಲಾಗಿದೆ. ಗದಗ ಜಿಲ್ಲೆಯಲ್ಲಿ ಅನೇಕ ಹಿರಿಯ ಕಲಾವಿದರು ತಮ್ಮ ಕಲಾಜೀವನದಲ್ಲಿ ಕಲಾಕೃತಿಗಳೊಂದಿಗೆ ಕಲಾಸಾಹಿತ್ಯದ ಕಡೆಗೂ ಗಮನಿಸಿದ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಅಂತಹ ಕಲಾವಿದರು ರಚನೆ ಮಾಡಿದ ಕಲಾಸಾಹಿತ್ಯ ಕುರಿತು ಮತ್ತು ಅವರು ರಚಿಸಿದ ಕಲಾಸಾಹಿತ್ಯದ ವಸ್ತುವಿಷಯ, ಸಾರವನ್ನು ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ : ಗದಗ ಜಿಲ್ಲೆಯ ವಿವಿಧ ಕಡೆಗಳಲ್ಲಿನ ಮಠಮಾನ್ಯಗಳಲ್ಲಿ ಚಿತ್ರಕಲಾ ಮಹಾವಿದ್ಯಾಲಯಗಳಲ್ಲಿ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಸಂಗ್ರಹಗೊಂಡಿರುವ ಕಲಾಕೃತಿಗಳನ್ನು ಹಾಗೂ ಸರಕಾರಿ ಕಲಾಸಂಗ್ರಹಾಲಯದಲ್ಲಿ ಸಂಗ್ರಹಗೊಂಡ ಕಲಾಕೃತಿಗಳ ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಎಲ್ಲ ಅಂಶಗಳನ್ನು ಅಧ್ಯಯನಕ್ಕೊಳಪಡಿಸಿದೆ. ಮತ್ತು ಸಂಬಂಧಿಸಿದ ಛಾಯಾಚಿತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

ಒಂಭತ್ತನೆಯ ಅಧ್ಯಾಯದಲ್ಲಿ : ಸಮಾರೋಪವಾಗಿದ್ದು ಪ್ರಸ್ತುತ ಅಧ್ಯಯನದಿಂದ ಹೊರ ಬಂದಿರುವ ಒಟ್ಟು ಫಲಿತಗಳ ಕುರಿತಾದ ಸಮೀಕ್ಷೆಯ ವಿವರಗಳನ್ನು ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನದಿಂದ ಹೊರಬಂದ ಫಲಿತವನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ :

೧. ದೀರ್ಘಕಾಲ ಇತಿಹಾಸವನ್ನು ಹೊಂದಿರುವ ಗದಗ ಪರಿಸರದ ವಿಶೇಷ ಸಾಂಸ್ಕೃತಿ ನೆಲಗಟ್ಟುಗಳು ಅಧ್ಯಯನದಿಂದ ಕಂಡುಬಂದಿದೆ.

೨. ಗದಗ ಜಿಲ್ಲೆಯ ಚಿತ್ರಕಲೆಯ ಕುರಿತು ಇಲ್ಲಿಯವರೆಗೆ ಸಂಶೋಧನಾತ್ಮಕ ಮಹಾಪ್ರಬಂಧಗಳು ಆಗಿರುವುದಿಲ್ಲ ಇದು ಸಮಗ್ರ ಚಿತ್ರಣ ನೀಡುವ ಪ್ರಥಮ ಪ್ರಬಂಧವಾಗಿದೆ.

೩. ಪ್ರಾಚೀನ ಕಾಲದ ಇತಿಹಾಸವನ್ನು ನೋಡಿದಾಗ ಗದಗ ಪರಿಸರದಲ್ಲಿ ಚಿತ್ರಕಲೆಯ ಕುರಿತು ಬಹಳಷ್ಟು ಅಂಶಗಳು ಈ ಅಧ್ಯಯನದಿಂದ ಕಂಡು ಬಂದಿದೆ.

೪. ಗದಗ ಜಿಲ್ಲೆಯ ಸಾಂಸ್ಕೃತಿಕ ಹಿನ್ನೆಲೆಯ ಕುರಿತು ಅವಲೋಕಿಸಿದಾಗ ಲಲಿತಕಲೆಗಳಾದ ಚಿತ್ರಕಲೆ, ಶಿಲ್ಪ ಸಾಹಿತ್ಯ ಸಂಗೀತ ಮತ್ತು ಧಾರ್ಮಿಕ ಭಾವಕ್ಯತೆ, ಕ್ರೀಡೆ ಸಹಕಾರ ಕುರಿತು ಮೂಲ ಘಟ್ಟಗಳು ಅಧ್ಯಯನದಿಂದ ಕಂಡು ಬಂದಿವೆ.

೫. ಗದಗ ಜಿಲ್ಲೆಯ ತೊಗಲುಗೊಂಬೆ ಚಿತ್ರಗಳು ಆಚರಣೆ, ನಂಬಿಕೆಗಳ ಹಿನ್ನಲೆಯಲ್ಲಿ ಬದುಕುಳಿದಿದ್ದು ಅವುಗಳ ದೃಶ್ಯಾತ್ಮಕ ನೆಲೆಯಲ್ಲಿ ಸಂಯೋಜನೆ ರಚನಾ ತಂತ್ರ ವಿನ್ಯಾಸಗಳ ಕುರಿತಾಗಿ ಆಳವಾದ ಅಧ್ಯಾಯಮಾಡಿ ಜನಪದ ಕಲೆಯೊಂದನ್ನು ಅನಾವಣರಗೊಳಿಸುವ ಪ್ರಯತ್ನ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

೬. ಜನಪದವು ತಮ್ಮ ಹಲವಾರು ಅಭಿವ್ಯಕ್ತಿಗಳ ತುಡಿತಗಳಿಗೆ ಪ್ರಕೃತಿಯೇ ಮೂಲಪ್ರೇರಣೆ ಪ್ರಕೃತಿಯಿಂದ ಹಲವು ರೂಪಗಳನ್ನು ಪಡೆದಿದ್ದಾರೆ. ಪಡೆದು ತಮ್ಮಲ್ಲಿರುವ ಕಲಾಕೌಶಲ್ಯವನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಇಂದಿನ ಆಧುನಿಕ ಸಂವೇದನೆಯಲ್ಲಿ ಇಂತಹ ಅಭಿವ್ಯಕ್ತಿಗಳು ಆಧುನಿಕ ಅಭಿವ್ಯಕ್ತಿಗೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರೇರಣೆ ನೀಡಿದೆ.

೭. ಗದಗ ಜಿಲ್ಲೆಯ ಸೂತ್ರದ ಗೊಂಬೆಗಳು ಸುಮಾರು ೫೦ ರಿಂದ ೬೦ ವರ್ಷಗಳ ಹಿಂದೆ ಇರುವ ಈ ಗೊಂಬೆಗಳು ನಾಶವಾಗುವ ಅಂಚಿನಲ್ಲಿದ್ದು ಅವುಗಳ ಕುರಿತು ಅಧ್ಯಯನದಲ್ಲಿ ಚರ್ಚಿಸಿ ಧಾಖಲಿಸುವ ಪ್ರಯತ್ನ ಮಾಡಲಾಗಿದೆ.

೮. ಗದಗ ಜಿಲ್ಲೆಯ ಜನಪದ ಚಿತ್ರದ, ಹಚ್ಚೆ, ಕೌದಿ, ಕಸೂತಿ, ಕಲೆಗಳು ನಶಿಸಿ ಹೋಗುವ ಅಂಚಿನಲ್ಲಿವೆ. ಅವುಗಳನ್ನು ಪ್ರಸ್ತೂತ ಅಧ್ಯಯನದಲ್ಲಿ ದಾಖಲಿಸುವ ಪ್ರಯತ್ನಮಾಡಲಾಗಿದೆ.

೯. ಗದಗ ಜಿಲ್ಲೆ ಪ್ರಾಗೈತಿಹಾಸಿಕ ಚಿತ್ರಕಲೆಯ ಕುರಿತು ಅಧ್ಯಯನ ಮಾಡಿ ಅವುಗಳನ್ನು ದಾಖಲಿಸಲಾಗಿದೆ.

೧೦. ಗದಗ ಜಿಲ್ಲೆಯ ಭಿತ್ತಿಚಿತ್ರಗಳ ನೆಲೆಗಳನ್ನು ಅವುಗಳ ರೇಖಾ, ವಿನ್ಯಾಸ ತಂತ್ರಗಾರಿಕೆಯ ಕುರಿತು ಚರ್ಚೆ ಮಾಡಲಾಯಿತು.

೧೧. ಕಲೆ ಕಲಾಕಾರ ಕಲೆಯ ನೆಲೆ ನೀಡಿದ ಚಿತ್ರಕಲಾ ಸಂಸ್ಥೆಗಳ ಕುರಿತು ಅಧ್ಯಾಯ ಕೈಗೊಳ್ಳಲಾಗಿದೆ.

೧೨. ಗದಗ ಜಿಲ್ಲೆಯ ಭಿತ್ತಿ ಚಿತ್ರಕಲೆಯ ನೆಲೆ ಪರಿಕರ ಚಿತ್ರ ವಿನ್ಯಾಸ, ಬಣ್ಣಗಳ ರೇಖಾ ವಿನ್ಯಾಸಗಳ ಕುರಿತು ಚರ್ಚಿಸಿ ಅವುಗಳ ನೆಲೆಘಟ್ಟನ್ನು ಕಂಡುಕೊಳ್ಳಲಾಯಿತು.

೧೩. ಗದಗ ಜಿಲ್ಲೆಯು ಅನೇಕ ಕಲಾವಿದರನ್ನು ಕಲಾ ಶಿಕ್ಷಕರನ್ನು ಯವಕಾವಿದರನ್ನು ಕೊಡುಗೆಯಾಗಿ ನೀಡಿದ್ದು ಅವುಗಳ ಕುರಿತು ಈ ಅಧ್ಯಯನ ಪ್ರಸ್ತುತಪಡಿಸಲಾಗಿದೆ.

೧೪. ಗದಗ ಜಿಲ್ಲೆಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳು ಹಲವಾರು ಕಲಾಚಟುವಟಿಕೆಗಳು ನಡೆಸಿದ್ದು ಅವುಗಳ ಕುರಿತು ಚರ್ಚಿಸಲಾಗಿದೆ.

೧೫. ಗದಗ ಜಿಲ್ಲೆಯ ರಾಜ್ಯ ರಾಷ್ಟ್ರ ಮಟ್ಟದಲ್ಲಿ ಬೆಳೆದ ಹಿರಿಯ ಕಲಾವಿದರ, ಕಲಾಕೃತಿಗಳು ತಂತ್ರ ಶೈಲಿ, ರೇಖಾವಿನ್ಯಾಸಗಳು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಮಾಡಲಾಗಿದೆ.

೧೬. ಚಿತ್ರಕಲಾ ಸಾಹಿತ್ಯ ಕುರಿತು, ಜಿಲ್ಲೆಯ ಮಠಮಾನ್ಯಗಳು ಕಲಾ ಸಾಹಿತಿಗಳು ಅನೇಕ ಗ್ರಂಥ ಪುಸ್ತಕಗಳನ್ನು ಪ್ರಕಟಗೊಂಡಿವೆ. ಇನ್ನು ಅನೇಕ ಗ್ರಂಥಗಳು ಪುಸ್ತಕಗಳು ಪ್ರಕಟಗೊಂಡಿಲ್ಲ ಅವುಗಳ ಕುರಿತು ಚರ್ಚಿಸಿ ವಿವೇಚಿಸಲಾಗಿದೆ.

೧೭. ಜಿಲ್ಲೆಯ ಚಿತ್ರಕಲಾವಿದರು ಕಲಾಸಾಹಿತಿಗಳು ಮಠಮಾನ್ಯಗಳು ಚಿತ್ರಕಲಾ ಸಾಹಿತಿ ಕುರಿತು ಅನೇಕ ಗ್ರಂಥಗಳ ಪುಸ್ತಕಗಳು ಪ್ರಕಟಿಸಿರುವ ಅಂಶಗಳನ್ನು ಕಂಡು ಕೊಳ್ಳಲಾಯಿತು.

೧೮. ಗದಗ ಜಿಲ್ಲೆಯ ಮಠಮಾನ್ಯ ಪ್ರಾಚ್ಯವಸ್ತು ಸಂಗ್ರಾಹಾಲಯ ಚಿತ್ರಕಲಾ ಶಿಕ್ಷಣ ಸಂಸ್ಥೆಗಳಲ್ಲಿ ಅನೇಕ ಹೀರಿಯ ಕಿರಿಯ ಕಲಾವಿದರ ಕಲಾಕೃತಿಗಳು ಸಂಗ್ರಹಗೊಂಡಿದ್ದು ಅವುಗಳ ಕುರಿತು ವಿವೇಚಸಲಾಯಿತು. ಮತ್ತು ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

೧೯. ಒಟ್ಟಾರೆ ಗದಗ ಜಿಲ್ಲೆಯು ಚಿತ್ರಕಲಾ ಕ್ಷೇತ್ರಕ್ಕೆ ಬಹುದೊಡ್ಡ ಕೊಡುಗೆ ನೀಡಿದು ಅವುಗಳ ಕುರಿತು ನನಗೆ ಸಿಕ್ಕ ಮಾಹಿತಿಗಳು ಸಾಧ್ಯವಾದಷ್ಟು ಅಧ್ಯಯನದಲ್ಲಿ ದಾಖಲೀಕರಣ ಮಾಡುವ ಪ್ರಯತ್ನ ಮಾಡಲಾಗಿದೆ. ಮತ್ತು ಅಧ್ಯಯನದಿಂದ ಬಂದ ಗಮನಾರ್ಹ ಅಂಶಗಳನ್ನು ಕಂಡುಕೊಳ್ಳಲಾಗಿದೆ.

ಸಂರಕ್ಷಣೆ :

೧. ಮೂಲ ಜನಪದ ಕಲಾವಿದರಿಗೆ ದೊರಕಬೇಕಾದ ಪ್ರಶಸ್ತಿ ಪುರಸ್ಕಾರಗಳು ಸಿಗದೆ ಇರುವ ದುರಂಥ. ಮೂಲ ಜನಾಂಗದ ಕಲಾವಿದರಿಗೆ ನಿಜವಾದ ಪ್ರಶಸ್ತಿ ಸನ್ಮಾನಗಳು ದೊರೆಯವಂತಾಗಬೇಕು.

೨. ನಶಿಸುತ್ತಿರುವ ತೊಗಲುಗೊಂಬೆ, ಸೂತ್ರಗೊಂಬೆ ಚಿತ್ರಗಳನ್ನು ಸಂಗ್ರಹಿಸಿ ಒಂದು ಸಂಗ್ರಹಾಲಯವನ್ನು ಸ್ಥಾಪಿಸಿ ಅಲ್ಲಿ ಪ್ರದರ್ಶಿಸುವುದು.

೩. ಪ್ರತಿಕಲಾವಿದರು ತೊಗಲುಗೊಂಬೆ, ಸೂತ್ರಗೊಂಬೆಗಳನ್ನು ಸಂಗ್ರಹಿಸಿ ಅವುಗಳನ್ನು ಅಧ್ಯಯನ ರೂಪದಲ್ಲಿ ಪ್ರಕಟಿಸುವುದು.

೪. ನಶಿಸುತ್ತಿರುವ ಭಿತ್ತಿಚಿತ್ರಗಳನ್ನು ರಾಜ್ಯದ ಅನೇಕ ಹಿರಿಯಕಲಾವಿದರಿಂದ ಕರೆಸಿ ಪ್ರತಿಕೃತಿ ಮಾಡಿಸುವುದು.

೫. ಭಿತ್ತಿಚಿತ್ರಗಳ ಕುರಿತು ಪ್ರತೇಕ ಅಧ್ಯಯನ ನಡೆಸಿ ಅಧ್ಯಯನ ರೂಪದಲ್ಲಿ ಪ್ರಕಟಿಸುವುದು.

೬. ಜಿಲ್ಲೆಯ ಅನೇಕ ಹೀರಿಯ ಕೀರಿಯರ ಕಲಾವಿದ ಕಲಾಕೃತಿಗಳು ಪ್ರದರ್ಶಸಿಲು ಪ್ರತೇಕ ಆರ್ಟ್‌ಗ್ಯಾಲರಿ ಸ್ಥಾಪಿಸುವುದು.

೭. ನಶಿಸುತ್ತಿರುವ ಭಿತ್ತಿ ಚಿತ್ರಗಳನ್ನು ಪುನಃ ರೂಪಿಸುವುದು, ಪ್ರತಿಮಾಡುವುದು, ಛಾಯಾಚಿತ್ರಣ ಮಾಡುವುದು, ಸ್ಲೈಡ್ಸ ಮಾಡುವುದು, ವಿಡಿಯೋ ಚಿತ್ರಿಕರಣ ಮಾಡುವುದು.

೮. ಭಿತ್ತಿಚಿತ್ರಗಳನ್ನು ಪುಸ್ತಕಗಳಲ್ಲಿ ಮುದ್ರಿಸುವುದು, ಭಿತ್ತಿ ಚಿತ್ರಗಳ ಪ್ರತಿಕೃತಿಗಳನ್ನು ವಸ್ತು ಸಂಗ್ರಾಹಲಯಗಳಲ್ಲಿ ಪ್ರದರ್ಶಿಸುವುದು.

ಇಲ್ಲಿ ಚರ್ಚಿಸಲಾದ ಪ್ರತಿಯೊಂದು ಅಂಶವೂ ಸಮಿಕ್ಷೆಯ ರೂಪದಲ್ಲಿದ್ದು ಪ್ರತಿಯೊಂದು ಅಂಶದ ಕುರಿತು ಆಳವಾದ ಅಧ್ಯಯನ, ಸಂಶೋಧನೆ ನಡೆಸುವ ಅವಕಾಶವಿದೆ. ಕೇವಲ ಭಿತ್ತಿ ಚಿತ್ರಕಲೆಯ ಕುರಿತು ಸ್ವತಂತ್ರ್ಯ ಅಧ್ಯಯನವಾಗುವಷ್ಟು ಸಾಮಗ್ರಿ ಇದೆ. ಜೊತೆಗೆ ಇತರ ವಿಷಯಗಳ ಕುರಿತು ತುಲನಾತ್ಮಕ ಅಧ್ಯಯನವನ್ನು ಕೈಗೊಳ್ಳಬಹುದಾಗಿದೆ. ಗದಗ ಜಿಲ್ಲೆಯ ಪ್ರಾದೇಶಿಕ ವೈಶಿಷ್ಟ್ಯದ ಕುರಿತು ಪ್ರತ್ಯೇಕ ಅಧ್ಯಯನ ಮಾಡಬಹುದಾಗಿದೆ. ಅಲ್ಲದೇ ಇನ್ನಿತರ ಜಾನಪದ ಕಲೆಗಳ ಕುರಿತು ಇದೇ ಮಾದರಿಯಲ್ಲಿ ಹೆಚ್ಚಿನ, ಸಂಶೋಧನೆ ಆಗಬೇಕಾಗಿದೆ. ಗದಗ ಜಿಲ್ಲೆಯ ಚಿತ್ರಕಲೆ ಜಾನಪದ ಚಿತ್ರಕಲೆಯಾದ ತೊಗಲುಗೊಂಬೆ ಕಲೆ, ಸೂತ್ರಗೊಂಬೆ ಕಲೆಯನ್ನು ದೃಶ್ಯಾತ್ಮಕ ಪ್ರಕ್ರಿಯೆಗಳಾಗಿ ಗಮನಿಸಿ ಅಂತರ್ ಶಿಸ್ತಿಯ ಅಧ್ಯಯನ ನಡೆಸಲು ಅವಕಾಶವಿದೆ ಒಟ್ಟಾರೆ ಗದಗ ಜಿಲ್ಲೆಯ ಚಿತ್ರಕಲೆಯ ಕುರಿತಾದ ಸಮಗ್ರ ವಿಷಯಗಳನ್ನು ಒಳಗೊಂಡ ಅಧ್ಯಯನವಾಗಿರುವುದರಿಂದ ಅಧ್ಯಯನಕ್ಕೆ ಹೆಚ್ಚಿನ ವಿಷಯಗಳು ಇರುವುದರಿಂದ ಸಂಶೋಧನಾಸಕ್ತರು ಇದರತ್ತ ಗಮನಹರಿಸಬೇಕಾಗಿದೆ.

■■■

ಅನುಬಂಧ-೧

ಗದಗ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಭಿತ್ತಿ ಚಿತ್ರಕಲೆ, ತೊಗಲ ಗೊಂಬೆ ಕಲೆ, ಸೂತ್ರ ಗೊಂಬೆ ಕಲೆ ಮತ್ತು ಕಲಾಕೃತಿಗಳು ಸಂಗ್ರಹಗೊಂಡ ನೇಲೆಗಳು

೧. ಭಿತ್ತಿ ಚಿತ್ರಕಲೆ

೧. ಪ್ರಾಗೈತಿಹಾಸಿಕ ಚಿತ್ರಕಲೆ ನಿಲಗುಂದ, ಗದಗ ತಾಲೂಕ

೨. ನರಗುಂದ ಬಾಬಾಸಾಹೇಬರ ಅರಮನೆ

೩. ಗುಂಡಪ್ಪ ಹಸಬಿಯವರ ಮನೆ

೨. ತೊಗಲು ಗೊಂಬೆ ಕಲೆ

೧. ಬಿಂಕದಕಟ್ಟಿ ಗದಗ ತಾಲೂಕ

೩. ಸೂತ್ರದ ಗೊಂಬೆ

೧. ಕಲ್ಲೂರ – ಗದಗ ತಾಲೂಕ

೪. ಕಲಾಕೃತಿಗಳು ಸಂಗ್ರಹಗೊಂಡ ನೆಲೆಗಳು

೧. ಪ್ರಾಶ್ಚವಸ್ತು ಸಂಗ್ರಹಾಲಯ, ಗದಗ

೨. ಜಗದ್ಗುರು ತೋಂಟದ ಸಿದ್ಧಲಿಂಗ ಸ್ವಾಮಿಗಳವರ ಮಠ, ಗದಗ

೩. ಚಿಕ್ಕೆನಕೊಪ್ಪ ಶರಣರ ಮಠ ಬಳಗಾನೂರ

೪. ವಿಜಯಕಲಾಮಂದಿರ ಗದಗ

೫. ವಿದ್ಯಾದಾನ ಸಮಿತಿಯ ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ ಗದಗ

ಅನುಬಂಧ-೨

ನಕ್ಷೆ, ಗದಗ ಜಿಲ್ಲೆಯ ನಕಾಶೆ

ಅನುಬಂಧ-೩

ಸಂಕ್ಷೇಪಗಳು

ಗದಗ ಜಿಲ್ಲೆ ನಕ್ಷೆ


ನರಗುಂದ
ಬಾಬಾಸಾಹೇಬರ ಅರಮನೆ
ಗುಂಡಪ್ಪ ಹಸಬಿಯವರ ನಮನೆ
ಗಜೇಂದ್ರಗಡ
ರೋಣ
ಯರೇಬೆಲೆರಿ
ಬಿಂಕದಕಟ್ಟಿ
ಬೆಟಗೇರಿ
ಗಾವರವಾಡ
ಗದಗ
ಪಾಪನಾಸಿ
ನಿಲಗುಂದ
ನಾಗಾವಿ
ಬೆಳಧಡಿ
ಕಳಸಾಪೂರ
ಕಲ್ಲೂರ
ಮುರಡಿತಾಂಡೆ
ಮುಂಡರಗಿ
ಹರದಗಟ್ಟಿ ತಾಂಡೆ
ಶಿರಹಟ್ಟಿ
ಲಕ್ಷ್ಮೇಶ್ವರ
ಸೂರಣಗಿ

"ಸಂಕ್ಷೇಪಗಳು"

೧. ಕ.ವಿ.ವಿ.ಧಾ : ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

೨. ಕ.ವಿ.ಹಂ : ಕನ್ನಡ ವಿಶ್ವವಿದ್ಯಾಲಯ ಹಂಪಿ

೩. ಕ.ಲ.ಅ.ಬೆಂ : ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು

೪. ಕ.ಸಾ.ಪ. : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

೫. ಪ್ರ.ಕ.ವಿ.ವಿ. : ಪ್ರಸಾರರಂಗ ಕನ್ನಡ ವಿಶ್ವವಿದ್ಯಾಲಯ

೬. ಮೈ.ವಿ.ವಿ. : ಮೈಸೂರು ವಿಶ್ವವಿದ್ಯಾಲಯ

೭. ಗು.ವಿ.ವಿ. : ಗುಲಬುರ್ಗಾ ವಿಶ್ವವಿದ್ಯಾಲಯ

೮. ಚಿ.ಕ.ಪ.ಬೆಂ : ಚಿತ್ರಕಲಾ ಪರಿಷತ್ತು ಬೆಂಗಳೂರು

೯. ಪ್ರ.ಮೈ.ವಿ.ವಿ : ಪ್ರಸಾರರಂಗ, ಮೈಸೂರು ವಿಶ್ವವಿದ್ಯಾಲಯ

೧೦. ವಿ.ಧ. ಪುರಾಣ : ವಿಷ್ಣುಧರ್ಮೋತ್ತರ ಪುರಾಣ

೧೧. ಶಿ.ರ. : ಶಿಲ್ಪರತ್ನ

೧೨. ವೀ.ಲಿ.ಅ.ಸಂ.ಗ : ವೀರಶೈವ ಲಿಂಗಾಯತ ಅಧ್ಯಯನ ಸಂಸ್ಥೆ ಗದಗ

೧೩. ಪ್ರ.ಸಂ. : ಪ್ರಧಾನ ಸಂಪಾದಕರು

೧೪. ಸಂ : ಸಂಪಾದಕರು

೧೫. ಪು.ಸಂ. : ಪುಟ ಸಂಖ್ಯೆ

ಅನುಬಂಧ-೪

ವಕ್ತೃತಗಳು :

೧. ಶ್ರೀ ಎನ್.ಎ. ಹರ್ಲಾಪೂರ ಗದಗ
೨. ಶ್ರಿ ಕೆ.ವ್ಹಿ. ಕುಂದಗೋಳ ಗದಗ
೩. ಶ್ರೀ ಎಂ.ಆರ್. ಬಾಳಿಕಾಯಿ ಧಾರವಾಡ
೪. ಶ್ರೀ ವಸಂತ ಅಕ್ಕಿ ಗದಗ
೫. ಶ್ರೀ ಅಶೋಕ ಅಕ್ಕಿ ಗದಗ
೬. ಶ್ರೀ ಜಿ.ಎನ್. ಜಾಡಗೌಡರ ಗದಗ
೭. ಶ್ರೀ ರಘುನಾಥ ತುಕ್ಕಾ ಗದಗ
೮. ಶ್ರೀ ಎಂ.ಆರ್. ಹೆಬ್ಬಳ್ಳಿ
೯. ಶ್ರೀ ಬಿ.ಎಫ್. ಬಡಿಗೇರ
೧೦. ಶ್ರೀ ಎ.ಎ. ಶಿರಹಟ್ಟಿ
೧೧. ಶ್ರೀ ಸುರೇಶ ಕುಲಕರ್ಣಿ
೧೨. ಶ್ರೀ ಎಂ.ಜೆ. ವಾಚೇದಮಠ
೧೩. ಶ್ರೀಮತಿ ಪ್ರೇಮಾ ಹಿರೇಮಠ
೧೪. ಶ್ರೀ ಆರ್.ವಿ. ಹೆಗಡೆ
೧೫. ಶ್ರೀ ಪಿ.ಬಿ. ಬಂಡಿ
೧೬. ಶ್ರೀ ಸಿ.ಎನ್. ಪಾಟೀಲ
೧೭. ಶ್ರೀ ಸಿ.ಬಿ. ಕಾಚಾಪೂರ
೧೮. ಶ್ರೀ ವಿ.ಟಿ. ಕಾಳೆ
೧೯. ಶ್ರೀ ಅರ್.ಜಿ. ರಾಯಕರ
೨೦. ಶ್ರೀ ಎ.ಬಿ. ಉಪ್ಪಾರ
೨೧. ಶ್ರೀ ಡಿ.ಎಂ. ಬಡಿಗೇರ
೨೨. ಶ್ರೀ ಎನ್.ಎಂ. ದಾಟನಾಳ
೨೩. ಶ್ರೀ ಸಿ.ಡಿ. ಜಟ್ಟೆಣ್ಣವರ
೨೪. ಶ್ರೀ ಪಿ.ಎ. ಕುಲಕರ್ಣಿ
೨೫. ಶ್ರೀ ಎಸ್.ಎಫ್. ಬೆನಕಣ್ಣವರ
೨೬. ಡಾ. ಲಕ್ಷ್ಮಿದೇವಿ ಗವಾಯಿ
೨೭. ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ
೨೮. ಶ್ರೀ ಎನ್.ಎಂ. ಅಂಗಡಿ
೨೯. ಶ್ರೀ ಎನ್.ಎಂ. ನಿಂಬನಗೌಡ್ರ
೩೦. ಶ್ರೀ ಕಮಲ ಅಹ್ಮದ

ಅರ್ಥಕೋಶ

೧. ಕನ್ನಡ ಕಸ್ತೂರಿ ಕೋಶ

೨. ಕನ್ನಡ ನಿಘಂಟು

೩. ಕನ್ನಡ ಕರ್ನಾಟಕ

೪. ಕಿರಿಯ ಕರ್ನಾಟಕ

೫. ಕರ್ನಾಟಕದ ಕನ್ನಡ ವಿಷಯ ವಿಶ್ವಕೋಶ

೬. ಕರ್ನಾಟಕ ಜನಪದ ಕಲೆಗಳ ಕೋಶ

೭. ಜ್ಞಾನ ಗಂಗೋತ್ರಿ ಸಂಪುಟಗಳು

೮. ಕಲಾಕೋಶ

೯. ಕಲಾ ಪ್ರಪಂಚ


ಅನುಬಂಧ-೫

ಅಂತರ್ಜಾಲ


Gadag region tourism circuit







kasturi teggi



Born on 22nd March 1965, Kasturi an upcoming talented artist, hails from Gadag in Karnataka. Currently she is staying in Trivandrum. She had exhibited her natural talent in painting in her school and college days and won many prizes. Her husband Sri. G.J. Teggi (IFS) is working as chief conservator of forest in Kerala.She has two children Neetha and Nikhil. Smt. Kasturi has stayed at various places in Kerala since 1985 and visited many temples to learn from original mural arts on temple walls.

She perfected her skills under the able guidance of artists like Mr. Prince Thonnakakl. She likes doing mural and tanjore forms of arts though she is at case with other firms such as fabric painting, pottery panting etc Her works were once exhibited at Trivandrum Museum hall.

ಅನುಬಂಧ-೬

ಗ್ರಂಥ ಋಣ

೧. ಅಂಚೆ ಚೀಟಿಯ ಕಲಾವೈಭವ — ವಿಲ್ಸನ್ ಎಸ್. ಸೋನಘುರ
ಕೆ.ವಿ.ವಿ.ಧಾರವಾಡ
೨೦೦೮

೨. ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ — ಡಾ. ಯಾದಪ್ಪ ಪರದೇಶಿ
೨೦೧೧

೩. ಕಲಾತಪಸ್ವಿ
ರಾಜ್ಯ ಪ್ರಶಸ್ತಿ, ಕುಂಚ ಬ್ರಹ್ಮ ಮುರಿಗೆಪ್ಪ ಚೆಟ್ಟಿ — ಸಂ. ಮಾಹಾಲಿಂಗಯಾಳಗಿ
ಅಭಿನಂದನಾ ಗ್ರಂಥ
ಮು. ಶಿದ್ಲಿಂಗ ಪ್ರಿಂಟಿಂಗ್ ಪ್ರೆಸ್, ಗದಗ

೪. ಕಲಾ ಚರಿತ್ರೆ — ಅಶೋಕ ಅಕ್ಕಿ
ಪ್ರ. ಎಮ್.ಎಸ್. ಶಾಬಾದಿಮಠ ಬುಕ್ ಡಿಪೋ ಗದಗ
೧೯೮೨

೫. ಕಲಾತಪಸ್ವಿ – ಶ್ರೀ ಟಿ.ಪಿ.ಅಕ್ಕಿ ಅವರ — ಸಿ.ಎನ್. ಪಾಟೀಲ
ಷಷ್ಠದ್ಧಿ ಪೂರ್ತಿ ಸಮಾರಂಭದ ಸವಿನೆನಪಿನ
ಸಂಭಾನಾ ಗ್ರಂಥ -೧೯೬೯
ಪ್ರ. ಸಂಭಾನಾಗ್ರಂಥ ಪ್ರಕಾಶನ ಸಮಿತಿ -ಗದಗ

೬. ಕರ್ನಾಟಕ ಜನಪದ ಚಿತ್ರಕಲೆ — ಡಾ. ಎಸ್.ಸಿ. ಪಾಟೀಲ
ಪ್ರ. ವೀರಶೈವ ಸಂಸ್ಥೆ ಗದಗ

೭. ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು
ಪ್ರ. ವೀರಶೈವ ಅಧ್ಯಯನ ಗದಗ — ಡಾ. ಲಕ್ಷ್ಮೀದೇವಿ, ಗವಾಯಿ

೮. ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ — ಕೆ.ವಿ. ಕಾಳೆ
ಕ.ವಿ.ವಿ. ಹಂಪಿ

೯. ಕಲೆ ಮತ್ತು ರಸಸ್ವಾದನೆ — ಪ್ರೊ. ಎಂ.ಎಚ್.ಕೃಷ್ಣಯ್ಯ
ಕ.ಲ.ಕಅ. ಬೆಂಗಳೂರು
೨೦೦೮

೧೦. ಕರ್ನಾಟಕದ ಭಿತ್ತಿಚಿತ್ರಗಳು — ಬಿ.ವಿ.ಕೆ. ಶಾಸ್ತ್ರಿ
ಕ.ಲ.ಕ.ಅ. ಬೆಂಗಳೂರು
೧೯೮೨

೧೧. ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ — ಡಾ. ಶಶಿಕಲಾ ಹೂಗಾರ
ಕ.ವಿ.ವಿ. ಹಂಪಿ
೨೦೦೫

೧೨. ಕಲಾವಾರ್ತೆ (ಜನವರಿ-ಮಾರ್ಚ ೨೦೦೯) — ಜಿ.ಎಸ್. ಭೂಸಗೊಂಡ
ಕ.ಲ.ಕ.ಅ. ಬೆಂಗಳೂರು

೧೩. ಕಲಾವಾರ್ತೆ — ಮುಂಡಲೀಕ ಕಲ್ಲಿಗನೂರ
ಕ.ಲ.ಕ.ಅ. ಬೆಂಗಳೂರು
೨೦೦೬-೨೦೦೭

೧೪.	ಕಲೋಪಾಸಕ. ಎಂ.ಜೆ.ವಾಚೇದಮಠ ಪ್ರ. ಸೋಮಶೇಖರ ಆಕಳವಾಡಿ ಮನೋಹರ ಧಾರವಾಡ ೧೯೮೫	ಸುರೇಶ ಕುಲಕರ್ಣಿ
೧೫.	ಕಲಾಕೋಶ ಕ.ಲ.ಕ.ಅ.ಬೆಂಗಳೂರು, ೧೯೯೪	ಎನ್.ಮುರಿಚಾಶಾಚಾರ್
೧೬.	ಕಲಾವಾರ್ತೆ ಕ.ಲ.ಕ.ಅ. ಬೆಂಗಳೂರು ೨೦೦೮	ಪುಂಡಲಿಕ ಕಲ್ಲಿಗನೂರ
೧೭.	ಕಲಾವಿದ ಸುರೇಶ, ಮ. ಕುಲಕರ್ಣಿಯವರ ಕಲಾಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ ೨೦೦೮ –ಕ.ವಿ.ವಿ. ಹಂಪಿ	ನಂದಕುಮಾರ, ತು, ಮಾಳವದಕರ
೧೮.	ಕಲಾವಿದ "ಎ.ಎ. ಶಿರಹಟ್ಟಿ ಅವರ ಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ" ಕ.ವಿ.ವಿ. ಹಂಪಿ ೨೦೦೯	ವಿಜಯ ಕುಮಾರ ಎಲ್.ಬೆಳಗಲಿ
೧೯.	ಕಲಾವಿದ ಡಾ. ಎಸ್.ಸಿ.ಪಾಟೀಲ ಮತ್ತು ದೃಶ್ಯಕಲಾಕ್ಷೇತ್ರ ಒಂದು ಸಂಕಥನ ಕ.ವಿ.ವಿ. ಧಾರವಾಡ ೨೦೦೮	ಡಾ. ಮೋಹರಾವ. ಬಿ. ಪಾಂಚಾಳ
೨೦.	ಕರ್ನಾಟಕದ ಸೃಜನಶೀಲ ಕಲಾವಿದರು ಕ.ವಿ.ವಿ. ಧಾರವಾಡ ೨೦೦೯	ಶರಣಪ್ಪ.ಬಿ.ಎಚ್.
೨೧.	ಕರ್ನಾಟಕ ಭಿತ್ತಿಚಿತ್ರ ಪರಂಪರೆ ಕ.ಲ.ಕ.ಅ. ಬೆಂಗಳೂರು	ಡಾ. ಅ.ಲ. ನರಸಿಂಹನ
೨೨.	ಕಲಾವಾರ್ತೆ ಕರ್ನಾಟಕ ಸಂಚಿಕೆ ೯೨ ಜುಲೈ ೨೦೦೯ ಕ.ಲ.ಕ.ಅ. ಬೆಂಗಳೂರು	ಜೆ.ಎಸ್.ಬೊಸಗೊಂಡ
೨೩.	ಕರ್ನಾಟಕ ಕಲಾವಾರ್ತೆ ಸಂಚಿಕೆ ೯೨ ಏಪ್ರಿಲ್–ಜೂನ ೨೦೦೯ ಕ.ಲ.ಕೆ. ಬೆಂಗಳೂರು	ಜೆ.ಎಸ್. ಬೊಸಗೊಂಡ
೨೪.	ಕಲಾ ಸಾಧಕ ಸಿ.ಎಂ.ಎನ್.ಪ್ರಕಾಶನ ಬೆಂಗಳೂರು	ಎನ್. ಮರಿಶಾಮಾಚಾರಿ
೨೫.	ಕಲಾವಿದ ಎನ್.ಎ. ಹರ್ಲಾಪೂರ ಬದುಕು ಮತ್ತು ಕಲಾಕೃತಿಗಳು ಒಂದು ಅಧ್ಯಯನ	ಪಿ.ಎಸ್.ಲಕ್ಕುಂಡಿ
೨೬.	ಕಲಾವಿದ ಸಿ.ಎನ್.ಪಾಟೀಲರವರ ಬದುಕು. ಮತ್ತು ಕಲಾಕೃತಿಗಳು ಕ.ವಿ.ವಿ.ಹಂಪಿ ೨೦೦೯	ಶನವಾಜ. ತಾ. ಜಮಾದಾರ

೨೭. ಕಲಾನ್ವೇಷಕ ಆರ್.ಎಂ.ಹಡಪದ — ಡಾ. ಸಿದ್ಧಲಿಂಗಸ್ವಾಮಿ. ಹಿರೇಮಠ
ಪ್ರ. ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ಎಡೆಯೂರು, ತೋಂಟದಾರ್ಯ
ಸಂಸ್ಥಾನಮಠ ಡಂಬಳ-ಗದಗ

೨೮. ಕಲಾವಿದ ಎಂ.ಎ. ಚೆಟ್ಟಿಯವರ — ಡಾ. ಲಕ್ಷ್ಮೀದೇವಿ ಗವಾಯಿ
ಜೀವನ ಕಲಾಕೃತಿಗಳು ಒಂದು ಅಧ್ಯಯನ
ಪ್ರ. ವೀರಶೈವ, ಅಧ್ಯಯನ ಅಕಾಡೆಮಿ
ಶ್ರೀ ನಾಗನೂರು, ರುದ್ರಾಕ್ಷೀಮಠ ಬೆಳಗಾವಿ

೨೯. ಕರ್ನಾಟಕ ತೊಗಲುಗೊಂಬೆ — ಎಂ.ಎಸ್. ನಂಜುಂಡರಾವ್
ಕ.ಚಿತ್ರಕಲಾ ಪರಿಷತ್ತ ಬೆಂಗಳೂರು

೩೦. ಕಲಾವಿದ ಪಿ.ಎ. ಕುಲಕರ್ಣಿಯವರ ಕಲಾಕೃತಿಗಳು — ಶ್ರೀಕಾಂತ ಬಣ್ಣದಭಾವಿ
ಕ.ವಿ.ವಿ. ಹಂಪಿ

೩೧. ಕಲೆಗಾರರ ಕಥೆಗಳು — ಬಿ.ಪಿ.ಬಾಯಿರಿ
ಪ್ರ. ಸಮಾಜ ಪುಸ್ತಕಾಲಯ ಧಾರವಾಡ

೩೨. ಕಸೂತಿ ಚಿತ್ರಕಲೆ — ಮಹಾದೇವ. ಎಮ್.ಜಗತಾಪ
ಕ.ಲ.ಕ.ಅ.ಬೆಂಗಳೂರು

೩೩. ಕಲಾವಿದ ಹೆಬ್ಬಾರರ ರೇಖಾಲಾವಣ್ಯ — ವ್ಯಾಸರಾಯ ಬಲ್ಲಾಳ
ಪ್ರನ.ಕ. ಪ್ರಕಾಶನ

೩೪. ಕರ್ನಾಟಕ ಲಲಿತಕಲಾ ಅಕಾಡೆಮಿ ಏರ್ಪಡಿಸಿದ್ದ ಚಿತ್ರಕಲಾ — ಡಾ. ಜೆ.ಎಸ್.ಖಂಡೆರಾವ್
ಶಿಬಿರಗಳಲ್ಲಿ ಮೂಡಿಬಂದ ಕಲಾಕೃತಿಗಳ-ಪ್ರದರ್ಶನ ೨೦೦೯-೧೦

೩೫. ಕಲಾವಾರ್ತೆ — ಜೆ.ಎಸ್.ಭೂಸಗೊಂಡ
ಕ.ಲ.ಕ.ಅ.ಬೆಂಗಳೂರು
ಜೂನ್ ೨೦೦೯

೩೬. ಕಲಾವಾರ್ತೆ — ಪುಂಡಲೀಕ, ಕಲ್ಲಿಗನೂರು
ಕ.ಲ.ಕ.ಅ.ಬೆಂಗಳೂರು
ಮಾರ್ಚ ೨೦೦೮

೩೭. ಕಲಾವಾರ್ತೆ — ಜೆ.ಎಸ್.ಭೂಸಗೊಂಡ
ಕ.ಲ.ಕ.ಅ.ಬೆಂಗಳೂರು ೨೦೦೯

೩೮. ಕಲಾಸಾಧಕ — ಎನ್.ಮರಿಶಾಮಾಚಾರ್
ಕ.ಲ.ಕ.ಅ.ಬೆಂಗಳೂರು

೩೯. ಕಲಾವಾರ್ತೆ — ಜೆ.ಎಸ್.ಭೊಸಗೊಂಡ
ಕ.ಲ.ಕ.ಅ.ಬೆಂಗಳೂರು
ಮಾರ್ಚ ೨೦೧೦

೪೦. ಕರಾವಳಿ ಕರ್ನಾಟಕದ ಯಕ್ಷಗಾನ — ಸಂ. ವಿಶ್ವನಾಥ.ಎ.ಎಸ್.
ದೃಶ್ಯಕಲೆಯ ಮುಖವರ್ಣಿಕೆ
ಮತ್ತು ವೇಶಭೊಷಣ
ಪಿ.ಎಚ್.ಡಿ. ಮಹಾಪ್ರಬಂಧ. ಕ.ವಿ.ವಿ.ಹಂಪಿ ೨೦೦೭

೪೧. ಕಲಾ ಪ್ರಪಂಚ — ಶಿವರಾಮ ಕಾರಂತರ
ಕ.ವಿ.ವಿ. ಧಾರವಾಡ
೧೯೭೮

೪೨. ಕನ್ನಡ ಹಸ್ತಪತ್ರಿಗಳು — ಬಿ.ಕೆ.ಹಿರೇಮಠ
ವೀರಶೈವ ಅಧ್ಯಯನ ವೇದಿಕೆ ಕಸಭ ಜಂಭಗಿ,
೧೯೯೨

೪೩. ಕರ್ನಾಟಕ ಜಾನಪದ ಕಲೆಗಳ ಕೋಶ — ಸಂ.ಹಿ.ಚಿ. ಬೋರಲಿಂಗಯ್ಯ
ಪ್ರ. ಕ.ವಿ.ವಿ. ಹಂಪಿ
೧೯೯೬

೪೪. ಕರ್ನಾಟಕ ಸಂಸ್ಕೃತಿ ಸಮೀಕ್ಷೆ — ಎಚ್. ತಿಪ್ಪೇರುಂದ್ರೆ
ಪ್ರ. ಡಿ.ವಿ.ಕೆ. ಮೂರ್ತಿ ಕೃಷ್ಣ ಮೂರ್ತಿಪುರಂ ಮೈಸೂರು
೧೯೯೭

೪೫. ಕರಕುಶಲ ಕಲೆಗಳು — ಸಂ. ಕರಿಗೌಡ ಬೀಚನಹಳ್ಳಿ
ಕ.ವಿ.ವಿ. ಹಂಪಿ
೨೦೦೦

೪೬. ಕಲಾಕೋಶ — ಸಂ. ತಿಪ್ಪೇಸ್ವಾಮಿ
ಕ.ಲ.ಕ.ಅಂ. ಬೆಂಗಳೂರು
೧೯೯೪

೪೭. ಕರ್ನಾಟಕ ಭಿತ್ತಿಚಿತ್ರ ಪರಂಪರೆ — ಲೇ, ಡಾ. ಅ.ಲ. ನರಸಿಂಹನ್
ಕ.ಲ.ಕ.ಅ. ಬೆಂಗಳೂರು
೧೯೮೬

೪೮. ಕರ್ನಾಟಕದ ಕರಕುಶಲ ಕಲೆಗಳು — ಬೆನಕಹಳ್ಳಿ. ಜಿ. ನಾಯ್ಕರ
ಕ.ಸಾ.ಪ. ಬೆಂಗಳೂರು
೧೯೮೬

೪೯. ಕರ್ನಾಟಕದ ಜಾನಪದ ಕಲೆಗಳು — ಗೋ.ರೊ. ಚನ್ನಬಸಪ್ಪ
ಕ.ಸಾ.ಪ. ಬೆಂಗಳೂರು
೧೯೭೭

೫೦. ಗದಗ ಪರಿಸರದ ಕೌದಿಕಲೆಯ ಜನಪದಿಯ. — ಶಿದ್ಲಿಂಗಪ್ಪ. ಹ. ಭಜಂತ್ರಿ
ಒಂದು ಅಧ್ಯಯನ
ಕ.ವಿ.ವಿ. ಹಂಪಿ
೨೦೦೮

೫೧. ಚಿತ್ರಕಲಾಲೋಚನ — ಹೆಚ್.ಎನ್.ಹರಿಬಲ್
ಸಮನ್ವಯ ಪ್ರಕಾಶನ ಗದಗ
೨೦೦೪

೫೨. "ಚಿತ್ರಾಕ್ಷಿ"
ಶ್ರೀ. ಡಿ.ವ್ಹಿ.ಹಾಲಭಾವಿ ಸ್ಕೂಲ್ ಆರ್ಟ್‌ಧಾರವಾಡ — ಪಿ. ಸುರೇಶ ಹಾಲಭಾವಿ
ವಜ್ರಮೋಹತ್ಸವ ಸ್ಮರಣ ಸಂಚಿಕೆ–೧೯೯೫

೫೩. ಚಿತ್ರಕಲಾ ಪ್ರಪಂಚ — ವಿ.ಎನ್.ಮಲ್ಲಿಕಾರ್ಜುನಸ್ವಾಮಿ
ಕ.ಲ.ಕ.ಅ. ಬೆಂಗಳೂರು
೨೦೦೮

೫೪. ಚಿತ್ತಾರ-ಸ್ಮರಣ ಸಂಚಿಕೆ
ಕ.ರಾ.ಚಿ.ಶಿ. ೭ನೇ ಶೈಕ್ಷಣಿಕ ಮಹಾಸಮ್ಮೇಳನ
ರಾಯಚೂರು-೨೦೦೯

೫೫. ಚಿತ್ರಕಲಾ ಚಿಂಥನ — ಶಂಕರ ಪಾಟೀಲ
ಪ್ರಗತಿ ಪ್ರಕಾಶನ ಧಾವಣಗೇರಿ

೫೬. ಚಿತ್ರಕಲಾ ಪ್ರಪಂಚ — ಸಂ. ಪಿ.ಆರ್.ತಿಪ್ಪೇಸ್ವಾಮಿ
ಕ.ಲ.ಕ.ಅ. ಬೆಂಗಳೂರು
೧೯೯೩

೫೭. ಜಾಗತಿಕ ಚಿತ್ರಕಲೆ — ಬಿ.ಪಿ. ಬಾಯಿರಿ
ಶಿವಶಂಕರ ಪ್ರಿ. ಧಾರವಾಡ
೧೯೯೫

೫೮. ಜಾನಪದ ಕರ್ನಾಟಕ — ಡಾ. ಸಂ. ಚಿ. ರಮೇಶ
ತ್ವರಿತ ಮುದ್ರಣ ಪ್ರಿ. ಗದಗ

೫೯. ಚಿತ್ರಕಲಾ ಕ್ಷೇತ್ರಕ್ಕೆ ಗದುಗಿನ ವಿಜಯ ಮಂದಿರದ ಕೊಡುಗೆ — ಪ್ರಕಾಶ.ಬ. ಬಂಡಿ
ಕ.ವಿ.ವಿ. ಹಂಪಿ
೨೦೦೭

೬೦. ಜಾನಪದ ವಾದ್ಯಗಳು — ಎಸ್.ವಿ. ಗುಂಜಾಳ
ಕ.ವಿ.ವಿ. ಧಾರವಾಡ
೨೦೦೮

೬೧. ಜಾನಪದ ಕರ್ನಾಟಕ — (ಸಂ) ಡಾ. ಮಂಜುನಾಥ ಬೇವಿನಕಟ್ಟಿ
ಕ.ಲ.ಕ.ಅ. ಬೆಂಗಳೂರು

೬೨. ಜನಪದಕಲೆ — ಡಾ. ಎಸ್.ಸಿ.ಪಾಟೀಲ
ಕ.ಲ.ಕ.ಅ. ಬೆಂಗಳೂರು

೬೩. ಜೆ.ಎಸ್. ಖಂಡೆರಾವ್ — ಕುಷ್ಣಣ ಕಂದಗಲ್
ಕ.ಲ.ಕ.ಅ. ಬೆಂಗಳೂರು

೬೪. ಜೇ.ಸಿ. ಆಯ್. ಬೆಟಗೇರಿ — ಜೇ.ಸಿ.ಎಸ್.ಎನ್. ಆದಿ
(ಮು) ಸುನೀಲ ಆಫ್‌ಸೇಟ್ ಪ್ರಿಂಟ್‌ರ್ಸ್ ಬೆಟಗೇರಿ

೬೫. ಜೆ.ಎಸ್. ಖಂಡೇರಾವ್ — ಪ್ರೊ. ಅಂದಾನಿ ವಿ.ಜಿ.
ಕ.ಲ.ಕ.ಅ. ಬೆಂಗಳೂರು
೧೯೯೯

೬೬. ಜ್ಯೋತಿರ್ಗಮಯ — ಶ್ರೀ ಜಿ.ಎಲ್.ಮಿಟ್ಟಿ
ಸುವರ್ಣ ಮಹೋತ್ಸವ. ಸಂಚಿಕೆ
೧೯೪೬

೬೭. ಡಾ. ಬಿ.ಕೆ. ಹಿರೇಮಠ — ಡಾ. ಶಿದ್ಧಲಿಂಗಸ್ವಾಮಿ ಅ. ಹಿರೇಮಠ
ಕ.ಲ.ಕ.ಅ. ಬೆಂಗಳೂರು

೬೮. ಟಿ.ಪಿ. ಅಕ್ಕಿ — ವಿ.ಟಿ. ಕಾಳೆ
ಕ.ಲ.ಅ. ಬೆಂಗಳೂರು

೬೯. ಡಾ. ಬಿ.ಕೆ. ಹಿರೇಮಠ — ಡಾ. ಸಿದ್ಧಲಿಂಗಸ್ವಾಮಿ.ಅ. ಹಿರೇಮಠ
ಕ.ಲ.ಕ.ಅ. ಬೆಂಗಳೂರು

೭೦. ಬಿ.ಕೆ. ಹುಬಳಿ — ಸಂ. ಡಿ.ಎಸ್.ಚೌಗಲ್
ಅನುಭವ, ಪ್ರಿಂಟರ್ಸ್ ಬೆಂಗಳೂರು,೧೦.

೭೧. ದಖನಿ ಚಿತ್ರಕಲೆ — ಲೇ. ಎಸ್.ಕೆ. ಅರುಣಿ
ಕ.ಲ.ಕ.ಅ. ಬೆಂಗಳೂರು
ಮೇ. ೨೦೦೧

೭೨. ಧ್ರುವತಾರೆ — ಐ.ಕೆ. ಕಮ್ಮಾರ
ಪ್ರ. ಪ್ರಗತಿ ಪ್ರಕಾಶನ ಗದಗ

೭೩. ದೃಶ್ಯನುಭವ — ಡಾ. ಮೋಹನರಾವ್. ಬಿ. ಪಂಚಾಳ
ಪ್ರ. ಅನ್ನಪೂರ್ಣ ಪ್ರಕಾಶನ – ಬೀದರ್

೭೪. ದೃಷ್ಟಿ ಸೃಷ್ಟಿ — ಡಾ. ಶಿವಾನಂದ. ಎಚ್. ಬಂಟನೂರ
(ಮ) ತ್ವರಿತ ಮುದ್ರಾಣಾಲಯ ಗದಗ
೨೦೦೯

೭೫. ತೊಗಲುಗೊಂಬೆ ಕಲಾವಿದ ವಿರೋಪಾಕ್ಷಪ್ಪ ಕ್ಷತ್ರಿ — ಶಿದ್ಲಿಂಗಪ್ಪ.ಹ. ಭಜಂತ್ರಿ
ಕ.ವಿ.ವಿ. ಹಂಪಿ
೨೦೦೯

೭೬. ನಮ್ಮ ಗದಗ ಬೆಟಗೇರಿ — ಹ.ರಾ. ಕಿದಿಯೂರ
(ಮು)ಡೈರಕ್ಟರಿ ಪಬ್ಲಿಸ್.ಪಿ.ಬಿ. ನಂ. ೫೯ ಗದಗ
೧೯೭೫

೭೭. ನಯನ ವ್ಯಕ್ತಿಗಳ ಬದುಕಿನ ಚಿತ್ರಣ — ಅಂದಾನಪ್ಪ ವಿಭೂತಿ
ಕವಿತಾ ಪ್ರಕಾಶನ ರಾಜೀವಗಾಂಧಿ ನಗರ ಗದಗ
೨೦೦೯

೭೮. ನರಗುಂದ ಅರಮನೆಯ ಭಿತ್ತಿಚಿತ್ರಗಳು — ಶಿದ್ಲಿಂಗಪ್ಪ ಹ. ಭಜಂತ್ರಿ
ಕ.ವಿ.ವಿ. ಹಂಪಿ
೨೦೦೭

೭೯. ನವ್ವಲೆ ಹಾಗೂ ಕಲೆಗಾರರು — ಬಿ.ಪಿ. ಬಾಯಿರಿ
ಪ್ರ. ಪ್ರತಿಭಾ ಗ್ರಂಥಮಾಲೆ ಧಾರವಾಡ

೮೦. ನಯನ-ವ್ಯಕ್ತಿಗಳ ಬದುಕಿನ ಚಿತ್ರಣ — ಅಂದಾನಪ್ಪ ವಿಭೂತಿ
ಪ್ರ. ಸಮನ್ವಯ ಪ್ರಕಾಶನ ಗದಗ
೨೦೦೪

೮೧. ನೆನಪಿನ ಸಂಚಿಕೆ-ವಜ್ರವಿಜಯ — ಪ್ರೊ. ಅಶೋಕ ಟಿ.ಅಕ್ಕಿ
ಪ್ರಿ. ವಿಜಯಕಲಾಮಂದಿರ ವಜ್ರಮಹೋತ್ಸವ
ಸಮಿತಿ ಗದಗ ದಿನಾಂಕ ೦೮-೧೨-೨೦೦೮

೮೨. ನಿಜದ ನಲೆ — ಡಾ. ಬಿ.ಆರ್. ಹಿರೇಮಠ
ಡಾ. ಬಿ.ಕೆ. ಹಿರೇಮಠ ಅಭಿನಂದನ ಗ್ರಂಥ
(ಮು) ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ ಬಸವೇಶ್ವರ
ವಿದ್ಯಾವರ್ಧಕ ಸಂಘ ಬಾಗಲಕೋಟ

೮೩. ಪ್ರಶಸ್ತಿ ಪಡೆದ ಕಲಾವಿದರು — ಸಂ. ಪಿ.ಆರ್. ತಿಪ್ಪೇಸ್ವಾಮಿ
ಕ.ಲ.ಕ.ಅ. ಬೆಂಗಳೂರು
ವರ್ಷ ೧೯೬೫-೧೯೯೩ ವರೆಗೆ

೮೪. ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ — ಸುನಿತಾ ಪತ್ತಾರ
ಸಂಗ್ರಹಿಸಿದ ಕಲಾಕೃತಿಗಳ, ಒಂದು ಅಧ್ಯಯನ
ಕ.ವಿ.ವಿ. ಹಂಪಿ

೮೫. ಬಳಗಾನೂರ ಶರಣ ಮಠದಲ್ಲಿ ಕಲಾಕೃತಿಗಳ — ವಿರೇಶ ಹಿರೇಮಠ
ಅಧ್ಯಯನ,
ಕ.ವಿ.ವಿ. ಹಂಪಿ

೮೬. ಬಳ್ಳಾರಿ ಜಿಲ್ಲೆಯ ಚಿತ್ರಕಲೆ, — ಡಾ. ಎಸ್.ಈ. ಬಸವರಾಜಪ್ಪ
ಕ.ವಿ.ವಿ. ಹಂಪಿ

೮೭. ಬಸವರಾಜ ಹಳಿಜೋಳ — ಆರ್.ಜಿ. ರಾಯಕರ
ಕ.ಲ.ಕ.ಅ. ಬೆಂಗಳೂರು

೮೮. ಭಾರತೀಯ ಚಿತ್ರಕಲೆ — ಡಾ. ಶಿವರಾಮ ಕಾರಂತ
ಕನ್ನಡ ಪುಸ್ತಕ ಪ್ರಾದಿಕಾರ ಬೆಂಗಳೂರು
೧೯೮೮

೮೯. ಭಾರತೀಯ ಕಲೆ — ಎನ್. ಮರಿಶಾಮಚಾರ
ಸಿ.ಎಮ್. ಪ್ರಕಾಶನ ಬೆಂಗಳೂರು
೨೦೦೧

೯೦. ಬಾರೋಕ ಕಲೆ — ಡಾ. ಎಸ್.ಸಿ. ಪಾಟೀಲ
ಕ.ಲ.ಕ.ಅ. ಬೆಂಗಳೂರು
೨೦೦೯

೯೧. ಬಿ.ಕೆ. ಹುಬಳಿ — ಡಿ.ಎಸ್. ಚೌಗಲೆ
ಅನುಭವ ಪ್ರಿಂಟರ್ಸ್ ರಾಜಾಜಿನಗರ
ಬೆಂಗಳೂರು ೧೦

೯೨. ಭಾರತೀಯ ಚಿತ್ರಕಲೆ — ಎಸ್.ಎಮ್. ಶಿರಹಟ್ಟಿ
ಬಿ.ಎಚ್.ಹೊಂಬಾಳಿ ಪ್ರಿಂಟರಿ ಗದಗ
೦೧-೦೫-೧೯೭೨

೯೩. ಮಯೂರ, ಮೇ ೨೦೧೦ — ಕೆ.ಎನ್. ಶಾಂತಕುಮಾರ
ನಂ, ೭೫ ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು
೨೦೧೦

೯೪. ಮಹಾವೀರ ಆರ್. ಬಾಳಿಕಾಯಿ — ಎಸ್.ಎಸ್. ಗಡ್ಡಿ
ಕಲೆ ಮತ್ತು ಜೀವನ ಕ.ವಿ.ವಿ. ಹಂಪಿ

೯೫.	ಎಮ್.ಆರ್. ಬಾಳಿಕಾಯಿ ಕ.ಲ.ಕ.ಅ. ಬೆಂಗಳೂರು ೨೦೦೪	ಸುರೇಶ ಪಿ. ಹಾಲಭಾವಿ
೯೬.	ಮೂರ್ತಿ ಕಲಾವಿದ ಎಂ.ಆರ್.ಬಾಗವಾನ ಕಲಾ ಜೀವನ ಕ.ವಿ.ವಿ. ಹಂಪಿ ೨೦೦೮	ಪುರುಷೋತ್ತಮ ಚಲುವರಾಜ
೯೭.	ಎಂ.ಡಿ. ಕಡ್ಲಿಕೊಪ್ಪ ಅವರ ಷಷ್ಠ್ಯಬ್ಧಿ ಸಮಾರಂಭ ಸಮಿತಿ ಮನೋಹರ (ಮೂ) ಬಾಂಡಿಗೆ ಆಫ್‌ಸೆಟ್ ಪ್ರಿ. ಬ್ಯಾಂಕ ರೋಡ ಗದಗ	ಡಾ. ಕೆ.ಪಿ. ಈರಣ್ಣ
೯೮.	ಎಂ.ಪಿ. ಭೋಪಲೆ ಕ.ಲ.ಕ.ಅ. ಬೆಂಗಳೂರು	ಡಿ.ಎನ್. ಅಕ್ಕಿ
೯೯.	ಎಮ್.ಆರ್. ಬಾಳಿಕಾಯಿ ಕ.ಲ.ಕ.ಅ. ಬೆಂಗಳೂರು	ಸುರೇಶ ಪಿ. ಹಾಲಭಾವಿ
೧೦೦.	ಎಂ.ಜೆ. ಬಂಗ್ಲೇವಾಲೆಯವರ ಕಲೆ ಮತ್ತು ಬದುಕು, ಒಂದು ಅಧ್ಯಯನ ಕ.ಲ.ಕ.ಅ. ಬೆಂಗಳೂರು ೨೦೦೮	ಪ್ರೇಮಾವತಿ ವ್ಹಿ. ಹಿರೇಮಠ
೧೦೧.	ಯಾರು ನಾನು ? ಜೀವನ ಕಥನ ಮೊದಲ, ಮುದ್ರಣ ೨೦೦೮ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿ, ಗದಗ	ಫ.ಶಿ. ಬಾಂಡಗೆ
೧೦೨.	ಲಕ್ಕುಂಡಿ ಉತ್ಸವ ಸ್ಮರಣ ಸಂಚಿಕೆ ಮುದ್ರಣ ಬಾಂಡಗೆ ಗ್ರಾಫಿಕ್, ಪ್ರಿ, ಗದಗ	ಶ್ರೀ ಸುಭೋಧ ಯಾದವ ಜಿಲ್ಲಾಧಿಕಾರಿ
೧೦೩.	ಲಕ್ಕುಂಡಿ ಕಲೆಯ ಬಲೆ ಪ್ರಕಾಶಕರು ವಿಕ್ರಮ ಪ್ರಕಾಶನ-ಕಿತ್ತೂರ ಚನ್ನಮ್ಮ ರಸ್ತೆ ಗದಗ ೨೦೦೮	ಎಂ.ಎಚ್.ಹರಿದಾಸ,
೧೦೪.	ವಿಜಯ ಕಲಾ ಮಂದಿರದ ಶೈಕ್ಷಣಿಕ ಕಲಾ ಚಟುವಟಿಕೆಗಳು ಒಂದು ಅಧ್ಯಯನ ಕ.ಲ.ಕ.ಅ. ಬೆಂಗಳೂರು ೨೦೦೮	ಕೃಷ್ಣಾ.ಕೆ. ಎಮ್
೧೦೫.	ವರ್ಣ ಸಂಚಯ ಪ್ರ ಶ್ರೀ ವಿಜಯ ಚಿತ್ರಕಲಾ ಮಹಾವಿದ್ಯಾಲಯ ಇಲ್ಲಕಲ್ಲ	ಡಾ. ಎಸ್.ಸಿ. ಪಾಟೀಲ
೧೦೬.	ವಜ್ರ ವಿಜಯ (ನೆನಪಿನ ಸಂಚಿಕೆ) (ಮು) ಕಾಂಬಳೆ ಪ್ರಿ. ಕೆ.ಸಿ.ರಾಣಿ ರೋಡ ಗದಗ	ಪ್ರೊ. ಅಶೋಕ ಪಿ. ಅಕ್ಕಿ
೧೦೭.	ವ್ಹಿ.ಟಿ. ಕಾಳೆ ಕ.ಲ.ಕ.ಅ. ಬೆಂಗಳೂರು ೨೦೦೪	ಡಾ. ಎಸ್.ಸಿ. ಪಾಟೀಲ

೧೦೮. ಸಮೀಕ್ಷೆ ಸ್ಮರಣ ಸಂಪುಟ — ಡಾ. ಸಿದ್ದಣ್ಣ ಎಫ್. ಜಕಬಾಳ
ಪ್ರ. ಸ್ವಾಗತ-ಅಖಿಲ ಭಾರತ ೭೬ನೇಯ
ಕನ್ನಡ ಸಾಹಿತ್ಯ ಸಮ್ಮೇಳನ ಗದಗ
೨೦೦೯

೧೦೯. ಸಂಶೋಧನ ಮಾರ್ಗ — ಡಾ. ಮಹಾಬಲೇಶ್ವರರಾವ್
ಪ್ರ. ನ.ಕ.ಸ.ಪ್ರೂ.ಲಿ.ರಸ್ತೆ ಬೆಂಗಳೂರು
೨೦೦೦

೧೧೦. ಸುವರ್ಣ ವಿಜಯ ನೆನಪಿನ ಸಂಚಿಕೆ ೧೯೯೨ — ಅನ್ನದಾನಿ ಹಿರೇಮಠ
ಪ್ರಭು ಗ್ರಾಫಿಕ್ಸ, ಗದಗ

೧೧೧. ಎಸ್.ಎಂ. ಪಂಡಿತ — ವಿ.ಟಿ. ಕಾಳೆ
ಕ.ಲ.ಕ.ಅ. ಬೆಂಗಳೂರು

೧೧೨. ಶಿವಾನಂದ ಪಿ.ಅಕ್ಕಿ — ವಿ.ಟಿ. ಕಾಳೆ
ಕ.ಲ.ಕ.ಅ. ಬೆಂಗಳೂರು

೧೧೩. ಸಿ.ಎನ್. ಪಾಟೀಲ – ಕಲಾ ಬದುಕು ಒಂದು ಅಧ್ಯಯನ — ಸಂಗಮೇಶ್ ಹರ್ಲಾಪೂರ
ಕ.ವಿ.ವಿ. ಹಂಪಿ
೨೦೦೭

೧೧೨. ಸೌಂದರ್ಯಶಾಸ್ತ್ರ — (ಮೂ) ಡಾ. ಮುವಂಚಾ ಚತೋವೇರಿ
ಕ.ಲ.ಕ. ಅ. ಬೆಂಗಳೂರು — (ಅನು) ಡಾ. ಕಾಶಿನಾಥ ಅಬೊಲಿಗೆ
೧೯೮೭

೧೧೩. ಸೌಂದರ್ಯ ಮೀಮಂಸೆ — ಡಾ. ಜೀ. ಶ್ರೀನಿವಾಸನ್
ಡಿ.ವಿ.ಕೆ. ಮೂರ್ತಿ ಮೈಸೂರು
೨೦೦೧

೧೧೪. ಸಿ. ಚಂದ್ರಶೇಖರ — ರಾಜಪ್ಪ ದಳವಾಯಿ
ಕ.ಲ.ಕ.ಅ. ಬೆಂಗಳೂರು

ಸಹಯೋಗ – ಸಹಕಾರ

ಗದಗ ಜಿಲ್ಲೆಯ ಚಿತ್ರಕಲೆಯ ಕುರಿತು ಇದ್ದ ಅಲ್ಪ ಸ್ವಲ್ಪ ತಿಳಿವಳಿಕೆಯು ಪ್ರಸ್ತುತ ಮಹಾಪ್ರಬಂಧದ ಸ್ವರೂಪ ಪಡೆದುಕೊಳ್ಳಲು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಅನೇಕ ಮಹನೀಯರು ಸಹಕರಿಸಿದ್ದಾರೆ. ಆ ಪ್ರತಿಯೊಬ್ಬ ವ್ಯಕ್ತಿಯ ಋಣವನ್ನು ಇಲ್ಲಿ ಸ್ಮರಿಸುತ್ತಿದ್ದೇನೆ.

ಮುಖ್ಯವಾಗಿ ಸಂಶೋಧನಾ ಅಧ್ಯಯನಕ್ಕೆ ಪ್ರೋತ್ಸಾಹಿಸಿ ಸಹಕರಿಸಿದ ವಿದ್ಯಾದಾನ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಬಿ. ಹುಯಿಲಗೋಳ, ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸ ಬಿ. ಹುಯಿಲಗೋಳ, ಪ್ರಾ. ಎಸ್.ವ್ಹಿ. ಸಂಕನೂರ, ಶ್ರೀ ಭೀಮಸಿಂಗ ರಾಠೋಡ, ಶ್ರೀ ಬಿ.ಎಸ್. ರಾಠೋಡ, ಶ್ರೀ ಸಿ.ಎನ್. ಪಾಟೀಲ, ಶ್ರೀ ಎಮ್.ಆರ್. ಬಾಳಿಕಾಯಿ, ಶ್ರೀ ಎನ್.ಎಮ್. ದಾಟನಾಳ, ಶ್ರೀ ಎನ್.ಎ. ಹರ್ಲಾಪೂರ, ಶ್ರೀ ಕೆ.ವಿ. ಕುಂದಗೋಳ, ಪ್ರಾ. ವಂಸತ ಅಕ್ಕಿ, ಶ್ರೀ ಆಶೋಕ ಅಕ್ಕಿ, ಶ್ರೀ ಜಿ.ಎನ್.ಜಾಡಗೌಡ್ರ, ಶ್ರೀ ಬಿ.ಎಸ್. ಗೊರವರ, ಡಾ. ಲಕ್ಷ್ಮಿದೇವಿ ಗವಾಯಿ, ಡಾ. ಶಶಿಕಲಾ ಹೂಗಾರ, ಪ್ರಾ. ಅನೀಲ ಪ್ರಕಾಶ, ಪ್ರಾ. ಬಾಬುರಾವ, ಶ್ರೀ ಸಿ.ಡಿ. ಜಟ್ಟೆಣ್ಣವರ, ಶ್ರೀ ಬಿ.ಎಂ. ಪಾಟೀಲ, ಪ್ರಾ. ಬಸವರಾಜ ಗವಿಮಠ, ಶ್ರೀಮತಿ ರೇಣುಕಾ ಮಾರ್ಖಂಡೆಯ, ಶ್ರೀಮತಿ ಪ್ರೇಮಾ ಹಿರೇಮಠ, ಶ್ರೀಮತಿ ತುಳಸಿ ಚವ್ಹಾಣ, ಶ್ರೀಮತಿ ಎಸ್.ಎಸ್. ಕಮ್ಮಾರ, ಪ್ರಾ. ಎಂ.ಸಿ. ಕಟ್ಟಿಮನಿ, ಪ್ರಾ. ಎಚ್.ಸಿ. ಹೆದ್ದೂರಿ, ಶ್ರೀ ಬಿ.ಎಚ್. ಕುರಿಯವರ, ಶ್ರೀ ಬಿ.ಎಫ್. ಬಡಿಗೇರ, ಶ್ರೀ ಎಮ್.ಆರ್. ಹೆಬ್ಬಳ್ಳಿ, ಶ್ರೀ ಎಮ್.ಆರ್. ಹರ್ಲಾಪೂರ, ಶ್ರೀ ವ್ಹಿ.ವಾಯ್. ಸೋಮನಕಟ್ಟಿ, ಶ್ರೀ ಎಸ್.ಎನ್. ಹರ್ಲಾಪೂರ, ಶ್ರೀ ವಿ.ಎಲ್. ಬೆಳಗಲಿ, ಶ್ರೀ ಪಿ.ಬಿ. ಬಂಡಿ, ಶ್ರೀ ಪಿ.ಎಸ್. ಲಕ್ಕುಂಡಿ, ಶ್ರೀ ಎನ್.ಟಿ. ಮಾಳವದಕರ, ಶ್ರೀ ಆರ್.ಡಿ.ಕಡ್ಲಿಕೊಪ್ಪ, ಶ್ರೀ ಕೃಷ್ಣಾ ಕೆ.ಎಂ. ಶ್ರೀ ಆರ್.ವಿ. ಹೆಗಡೆ, ಶ್ರೀ ಶರಣಪ್ಪ ಬಿ.ಎಚ್., ಶ್ರೀ ಎನ್.ಎಮ್. ನಿಂಬನಗೌಡರ, ಶ್ರೀ ಬಿ. ಜಿ. ಚೌಧರಿ, ಗದಗ ಜಿಲ್ಲೆಯ ಕಲಾವಿದರ ಹಾಗೂ ಪ್ರಸ್ತುತ ಅಧ್ಯಯನಕ್ಕೆ ಸಹಕರಿಸಿದ ಎಲ್ಲಾ ಕಲಾವಿದರಿಗೆ ಋಣಿಯಾಗಿದ್ದೇನೆ.

ಸಂಶೋಧನೆಗೆ ಪ್ರೋತ್ಸಾಹಿಸಿ ಮಾಹಿತಿ ನೀಡಿ ಸಹಕರಿಸಿದ ಮಹನೀಯರಾದ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎ. ಮುರಿಗೆಪ್ಪ, ದೃಶ್ಯಕಲಾ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಸಿ. ಪಾಟೀಲ, ಗುಲಬುರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಪಿ.ಕೆ. ಖಂಡೋಬಾ, ಡಾ. ಯಾದಪ್ಪ ಪರದೇಶಿ, ಡಾ. ಶಿವಾನಂದ ಬಂಟನೂರ, ಡಾ. ಮೋಹನ ಪಾಂಚಾಳ, ಡಾ. ಎನ್.ಎಮ್. ಅಂಗಡಿ, ಶ್ರೀ ಶಂಕರ ಕುಂದಗೋಳ, ಜನಪದ ಕಲಾವಿದರು ತೊಗಲು ಗೊಂಬೆ, ಸೂತ್ರದ ಗೊಂಬೆ ಕಲೆ, ಕೌದಿ ಕಲೆ, ಹಚ್ಚೆ ಕಲೆ, ಕಸೂತಿ ಕಲೆಯ ಕಲಾವಿದರು ಇವರೆಲ್ಲರೂ ಅಧ್ಯಯನಕ್ಕೆ ಬೇಕಾದ ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡಿ ಸಹಕರಿಸಿದ್ದಾರೆ. ಅಲ್ಲದೇ ಇನ್ನೂ ಅನೇಕ ಮಹನೀಯರು ಅಧ್ಯಯನಕ್ಕೆ ಸಹಕರಿಸಿದ್ದಾರೆ. ಇವರೆಲ್ಲರಿಗೂ ಚಿರಋಣಿಯಾಗಿದ್ದೇನೆ.

ಅಧ್ಯಯನಕ್ಕೆ ಛಾಯಾ ಚಿತ್ರಕ್ಕೆ ಸಹಾಯ ಸಹಕಾರ ನೀಡಿದ ನಾಗರಾಜ ಸೂರಣಗಿ, ಶರಬೇಂದ್ರ ಜಟ್ಟೆಣ್ಣವರ, ಶಿದ್ಧಲಿಂಗ ಭಜಂತ್ರಿ, ಹಾಗೂ ಉತ್ತಮ ಬೆರಳಚ್ಚು ಮಾಡಿದ ಶ್ರೀ ಎಮ್.ಆರ್. ಹೆಬ್ಬಳ್ಳಿ, ಶ್ರೀ ಪ್ರಕಾಶ ಎಸ್. ಬೆಣಕಲ್, ಶ್ರೀ ಭವಾನಸಾ ಅ. ಕಬಾಡಿ ವಿನಾಯಕ ಕಂಪ್ಯೂಟರ್, ಬೆಟಗೇರಿ ಮತ್ತು ಉತ್ತಮ ಬೈಂಡಿಂಗ್ ಮಾಡಿಕೊಟ್ಟಂತಹ ಶ್ರೀ ಮಹಾಂತೇಶ ಬುಕ್ ಬೈಂಡಿಂಗ್ ಧಾರವಾಡ ಇವರಿಗೆ ಹಾಗೂ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಪ್ರಸ್ತುತ ಅಧ್ಯಯನಕ್ಕೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ.

– ಬಿ.ಎಲ್. ಲಮಾಣಿ

049368

AKSHARA GRANTHALAYA

ACC.NO. 049368

